# ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ

# ಆತ್ಮಚರಿತ್ರೆ

## ಮತ್ತು

# ಕಾರ್ಯಾಲಯದ ಇತಿಹಾಸ

## ಭಾಗ - 1





ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
08175-273820

2006

# ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ

## ಭಾಗ -1


*ಬರೆದವರು:*

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು



ಕ್ರಮಾಂಕ 230

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573 211

☎ : 08175-273820

2008

ಮೊದಲನೆಯ ಮುದ್ರಣ : 2006 - 1000 ಪ್ರತಿಗಳು
ಎರಡನೆಯ ಮುದ್ರಣ : 2008 - 1000 ಪ್ರತಿಗಳು

ಪುಟಗಳು : 20+483 (ಭಾಗ-1)

ಬೆಲೆ : ರೂ. 200/-


ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :


**ಶ್ರೀಮತಿ ಸುಧಾ**
ನಂ. 1, 11ನೇ ಅಡ್ಡರಸ್ತೆ
6ನೇ ಮುಖ್ಯರಸ್ತೆ, ನ.ರಾ. ಕಾಲೋನಿ
ಬೆಂಗಳೂರು - 560 019
☎ : 65990721

ಮುದ್ರಣಕಾರರು :


**ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
☎ : 26766342



ಪೂಜ್ಯ ಭಗವತ್ಪಾದ ಶಂಕರಾಚಾರ್ಯರು



ಶ್ರೀ ಶ್ರೀಗಳವರು ಪೂರ್ವಾಶ್ರಮದಲ್ಲಿ



ಶ್ರೀ ಶ್ರೀಗಳವರ (ವೈ. ಸುಬ್ಬರಾಯರ) ಪುತ್ರ ವೈ. ನರಸಪ್ಪನವರು
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು, ಶ್ರೀ ವಿಠ್ಠಲ ಶಾಸ್ತ್ರಿಗಳು



ಶಿವಮೊಗ್ಗದಲ್ಲಿ ಭಾಷ್ಯಶಾಂತಿ ಸಮಯದಲ್ಲಿ ಶಿಷ್ಯವೃಂದದೊಂದಿಗೆ

# ಪ್ರಕಾಶಕರ ಮುನ್ನುಡಿ

ಒಬ್ಬ ಸಾಮಾನ್ಯ ಮನುಷ್ಯನೂ ಸಹ ಅಸಾಮಾನ್ಯನಾಗಬಹುದೆಂಬುದಕ್ಕೆ ನಮ್ಮ ಶ್ರೀಶ್ರೀಗಳವರೇ ಪ್ರತ್ಯಕ್ಷೋದಾಹರಣೆ. ಯಲ್ಲಂಬಳಸೆ ಎಂಬ ಕುಗ್ರಾಮದಲ್ಲಿದ್ದ ಸಾಮಾನ್ಯ ಮನುಷ್ಯನ ಕೀರ್ತಿಯೂ ಸಹ ವಿಶ್ವವನ್ನೆಲ್ಲಾ ಬಳಸಿಕೊಂಡು ಬಂದು ಮಹಾಮಹಿಮರಾದ ಮಹಾತ್ಮರ ಪಟ್ಟಿಯಲ್ಲಿ ಒಬ್ಬರೆನಿಸಿಕೊಂಡ ಅದ್ವಿತೀಯ ತಪೋಮೂರ್ತಿಗಳು ನಮ್ಮ ಶ್ರೀಶ್ರೀಗಳವರು. ನಿಜವಾಗಿಯೂ ಅವರ ವ್ಯಕ್ತಿತ್ವದ ಬಗ್ಗೆ ಒಂದು ಮಹಾನ್ ಉದ್ಗ್ರಂಥವೇ ಹೊರಹೊಮ್ಮಿದರೂ ಅದು ಅತ್ಯಲ್ಪವೇ. ಆದರೆ ಆ ವಿಚಾರಗಳನ್ನೆಲ್ಲಾ ಪ್ರಸ್ತಾಪಿಸುವದಕ್ಕೆ ಅವಕಾಶವಿಲ್ಲ. ಈ ಗ್ರಂಥವನ್ನೇ ಓದುವ ವಾಚಕವೃಂದಕ್ಕೆ ಅದು ತಾನಾಗಿಯೇ ತಿಳಿದುಬರುವುದು.

ಶ್ರೀಶ್ರೀಗಳವರ ಚರಿತ್ರೆ ಹಾಗೂ ಕಾರ್ಯಾಲಯದ ಬೆಳವಣಿಗೆಯ ಕುರಿತು "ಕಾರ್ಯಾಲಯದ ಇತಿಹಾಸ" ಎಂಬ ಗ್ರಂಥವು ಶ್ರೀಶ್ರೀಗಳವರ ಜೀವಿತ ಕಾಲದಲ್ಲೇ (1973ರಲ್ಲಿ) ಪ್ರಕಟವಾಗಿತ್ತು. ಪುನಃ ಶ್ರೀಶ್ರೀಗಳವರ ಮಹಾಸಮಾಧಿಯವರೆಗಿನ (5-8-1975) ವಿಚಾರಗಳನ್ನು ಸೇರಿಸಿ 1997ರಲ್ಲಿ "ಶ್ರೀ ಗುರುಚರಿತಾಮೃತ" ಎಂಬ ಹೆಸರಿನ ಗ್ರಂಥವು ಪ್ರಕಟವಾಯಿತು. ಈ ಗುರುಚರಿತಾಮೃತವೆಂಬ ಗ್ರಂಥವು ಈಗಲೂ ಈ ಸಂಸ್ಥೆಯಲ್ಲಿ ದೊರಕುತ್ತದೆ.

ಆದರೆ ಈಗ ಶ್ರೀಶ್ರೀಗಳವರ ಸ್ವಹಸ್ತದಿಂದಲೇ ಬರೆದಿಟ್ಟಿದ್ದ ಇದುವರೆಗೂ ಪ್ರಕಟವಾಗದ ಅವರ ಸಂನ್ಯಾಸದವರೆಗಿನ (1947) ಹಸ್ತಪ್ರತಿಯು ದೊರಕಿದ್ದು ಅದನ್ನು ಅನೇಕ ಗುರುಭಕ್ತರು ಈ ಗ್ರಂಥವು ತುಂಬಾ ಚೆನ್ನಾಗಿದೆ ಮತ್ತು ಹೃದಯಂಗಮವಾಗಿದೆ ಎಂದು ತಿಳಿಸಿದ್ದರಿಂದ ಇದನ್ನು ಮುದ್ರಣ ಮಾಡುವ ಕೆಲಸಕ್ಕೆ ಕಮಿಟಿಯವರು ತೀರ್ಮಾನ ತೆಗೆದುಕೊಂಡರು. ಇದು ನಮ್ಮಗಳ ಸುಯೋಗದಿಂದ ಈಗ ಈ ಗ್ರಂಥವು ಪೂರ್ಣವಾಗಿ ಸಿದ್ಧವಾಗಿದೆ. ಈ ಗ್ರಂಥ ಶರೀರವು ಸುಮಾರು 500 ಪುಟದಷ್ಟಿದ್ದು ಕುತೂಹಲದಿಂದ ಓದುಗರಿಗೂ ಮತ್ತು ಸಾಧಕರಿಗೂ ಅನೇಕ ಸನ್ನಿವೇಶ ಘಟನೆಗಳೂ ಹಾಗೂ ಅಧ್ಯಾತ್ಮಮಾರ್ಗದ ಧ್ಯೇಯವೂ, ಸಾಧನದ ಪ್ರಗತಿಯೇ ಮುಂತಾದ ಅನೇಕ ವಿಚಾರಗಳಿಗೆ ಇದು ಕೈಪಿಡಿಯಾಗಿದೆ. ಹಾಗೆಯೇ ಶ್ರೀಶ್ರೀಗಳವರು ತಮ್ಮ ಬಾಲ್ಯದಲ್ಲಿ ಪರಸ್ಥಳಗಳಲ್ಲಿ ಮಾಡಿದ ವಿದ್ಯಾಭ್ಯಾಸದ ವಿಶೇಷಾನುಭವಗಳು, ಶ್ರೀ ಗೋಂದಾವಳಿ ಬ್ರಹ್ಮಚೈತನ್ಯ ಮಹಾರಾಜರ ಭೇಟಿ ಮತ್ತು ಅವರ ಅನುಗ್ರಹ, ಜಗದ್ಗುರು ಶ್ರೀ ಶೃಂಗೇರಿ ಅಭಿನವ ನೃಸಿಂಹಭಾರತೀ

ಮಹಾಸ್ವಾಮಿಗಳಿಂದ ಕಾಲಡಿಯಲ್ಲಿ ಭಾಷ್ಯಶಾಂತಿ, ಅನೇಕ ವಿದ್ವಾಂಸರೊಡನೆ ಚರ್ಚೆಗಳು ಕಾರ್ಯಾಲಯದ ಬೀಜಾವಾಪ ಮತ್ತು ಅನೇಕ ಗ್ರಂಥಗಳ ಪ್ರಕಟನೆಗೆ, ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರಒಡೆಯರ್ ಅವರ ಉದಾರವಾದ ಧನ ಸಹಾಯದಿಂದ ಚಾಮರಾಜೇಂದ್ರಗ್ರಂಥಮಾಲಾ ಎಂಬುದಾಗಿ-ರುವ ಅನೇಕ ಗ್ರಂಥಗಳು ಮತ್ತು ಇನ್ನೂ ಅನೇಕ ವಿಚಾರಗಳು ಇದರಲ್ಲಿ ಹೃದಯಂಗಮವಾಗಿ ಪ್ರತಿಪಾದಿತವಾಗಿವೆ. ಇದೊಂದು ಅಧ್ಯಾತ್ಮಸಾಧಕರಿಗೆ ಮಾರ್ಗದರ್ಶಕವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಈ ಗ್ರಂಥವನ್ನು ಎರಡು ಭಾಗಗಳಾಗಿ ಮುದ್ರಣ ಮಾಡಬೇಕೆಂದು ಯೋಚಿಸಲಾಗಿತ್ತು. ಆದರೆ ಕೆಲವು ಅನಿವಾರ್ಯ ಕಾರಣಗಳಿಂದ ಎರಡನೆ ಭಾಗವು ಪೂರಾ ಸಿದ್ಧವಾಗಿಲ್ಲದ ಕಾರಣದಿಂದ ಸದ್ಯಕ್ಕೆ ಒಂದನೇ ಭಾಗ ಗ್ರಂಥವನ್ನು ತಾ|| 14-12-2006 (ಶ್ರೀಶ್ರೀಗಳವರ ಜಯಂತಿ) ರಂದು ಬಿಡುಗಡೆ ಮಾಡಲಾಗಿದೆ.

"ಶ್ರೀಶ್ರೀಗಳವರೇ ಕಾರ್ಯಾಲಯ, ಕಾರ್ಯಾಲಯವೇ ಶ್ರೀಶ್ರೀಗಳವರ ಚರಿತ್ರೆ" ಎಂಬ ಅವಿಭಾಜ್ಯ ಸಂಬಂಧವಿರುವದರಿಂದ ಶ್ರೀಶ್ರೀಗಳವರ ಸಂನ್ಯಾಸದ ನಂತರ ಇಲ್ಲಿಯವರೆಗೂ ಕಾರ್ಯಾಲಯದ ಬೆಳವಣಿಗೆ ತಿಳಿಯುವದು ಅತ್ಯವಶ್ಯ. ಆದ್ದರಿಂದ ಎರಡನೆಯ ಭಾಗದಲ್ಲಿ ಸಂನ್ಯಾಸದ (10-6-1948) ನಂತರ ಮಹಾ ಸಮಾಧಿಯವರೆಗೆ (5-8-1975) ; 1975ರಿಂದ 2006ರ ವರೆಗೆ ಕಾರ್ಯಾಲಯದ ಪ್ರಗತಿ ; ಶ್ರೀಶ್ರೀಗಳವರ ಬಗ್ಗೆ ಅವರ ಶಿಷ್ಯರು, ನಿಕಟವರ್ತಿಗಳು ಮತ್ತು ವಿದ್ವಾಂಸರುಗಳ ಲೇಖನಗಳು ಮತ್ತು ಸುಮಾರು 10-12 ವರ್ಷಗಳಿಂದೀಚೆಗೆ ಹೊಳೆನರಸೀಪುರ ಮತ್ತು ಪರಸ್ಥಳಗಳಲ್ಲಿ ನಡೆದ ವೇದಾಂತ ಸಪ್ತಾಹ, ಶಿಬಿರಗಳು, ಕಾರ್ಯಾಲಯದಿಂದ ಪ್ರಕಾಶನಗೊಂಡ ಗ್ರಂಥಗಳು, ಅಂಕಿ ಅಂಶಗಳ ಸಮೇತವಾದ ಪರಿಶಿಷ್ಟಗಳನ್ನು ಅಳವಡಿಸಲಾಗಿದೆ. ಆದಷ್ಟು ಬೇಗ ಎರಡನೆಯ ಭಾಗವು ಪ್ರಕಾಶನಗೊಂಡು ವಾಚಕರ ಕೈಸೇರಲಿ ಎಂದು ಸದ್ಗುರುಗಳನ್ನು ಪ್ರಾರ್ಥಿಸುತ್ತೇವೆ. ಇದರ ಬಗ್ಗೆ ಸೂಕ್ತ ಸಮಯದಲ್ಲಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವದು.

ಸದ್ಯಕ್ಕೆ ಶ್ರೀಶ್ರೀಗಳವರ ಸಂನ್ಯಾಸದವರೆಗಿನ ಚರಿತ್ರೆ ಭಾಗವು ಪ್ರಕಾಶ-ಗೊಂಡಿರುವದನ್ನು ವಾಚಕ ವೃಂದಕ್ಕೆ ತಿಳಿಸುವದರ ಮೂಲಕ ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

ಈ ಒಂದು ಮಹಾನ್ ಗ್ರಂಥವು ಹೊರಕ್ಕೆ ಬರಲು ಸಹಕರಿಸಿದವರಾದ ಹಾಗೂ ಕರಡು ಪ್ರತಿಗಳನ್ನು (ಸ್ವಾಮಿಗಳ ಸ್ವಹಸ್ತ ಬರವಣಿಗೆ) ಓದಿ, ತಿದ್ದಿಕೊಟ್ಟು ಉಪಕರಿಸಿದ ಶ್ರೀಮಾನ್ ವೇ|| ಬ್ರ|| ಶ್ರೀ ಅಶ್ವತ್ಥನಾರಾಯಣಾವಧಾನಿಗಳಿಗೆ, ವೇ|| ಬ್ರ|| ಶ್ರೀ ಚಂದ್ರಮೌಳಿ ಅವಧಾನಿಗಳಿಗೆ ಹಾಗೂ ಶ್ರೀ ಕೇಶವಾವಧಾನಿಗಳಿಗೂ ಧನ್ಯವಾದವನ್ನು ಸಮರ್ಪಿಸುವೆವು. ಹಾಗೆಯೆ ಇದರ ಮೊದಲನೆಯ ಸಿ.ಡಿ. ಮಾಡಿಕೊಟ್ಟವರಾದ ಹೊಸಹಳ್ಳಿಯವರಾದ ಶ್ರೀ ಕೇಶವ, ಜಯರಾಮ ಮತ್ತು ಶ್ರೀನಿವಾಸ ಇವರಿಗೂ ನಮ್ಮ ಕೃತಜ್ಞತೆಗಳು.

ಹಾಗೆಯೇ ಗ್ರಂಥರೂಪದಲ್ಲಿ ಮುದ್ರಿಸುವಾಗ ಅಚ್ಚಿನ ಕರಡುಗಳನ್ನು ತಿದ್ದುವದು, ಅಕ್ಷರ ಸಂಯೋಜನೆ, ಅಂದವಾದ ಮುದ್ರಣ ಹಾಗೂ ಆಕರ್ಷಕ ರಕ್ಷಾಕವಚ ವಿನ್ಯಾಸಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯವನ್ನು ನೀಡಿರುವ ಎಲ್ಲಾ ಅಭಿಮಾನಿಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ನಮ್ಮ ಬಿನ್ನಹವನ್ನು ಮನ್ನಿಸಿ ಉದಾರವಾಗಿ ಗ್ರಂಥದ ಮುದ್ರಣಕ್ಕೆ ಸಹಾಯ ಮಾಡಿದ ಭಕ್ತಿಮಹಾಶಯರ ಹೆಸರುಗಳ ವಿವರವನ್ನು ಕೊಡಲಾಗಿದೆ. ಅವರೆಲ್ಲರಿಗೂ ಕೃತಜ್ಞತೆಗಳು.

ಇದಕ್ಕೊಂದು ಚಿನ್ನದ ಮೆರುಗನ್ನು ತಮ್ಮ ಸಹೃದಯ ಪ್ರಸ್ತಾವನೆಯಿಂದ ನೀಡಿರುವವರು ಘನವಿದ್ವಾಂಸರೂ, ಜ್ಞಾನವೃದ್ಧರೂ, ವಯೋವೃದ್ಧರೂ ಆದರಂತೆ ಎಲ್ಲಾ ವಿಷಯದಲ್ಲೂ ಹಿರಿಯರಾಗಿರುವ ಕಾರ್ಯಾಲಯದ ಹಿತೈಷಿಗಳೂ ಶ್ರೀಶ್ರೀಗಳವರ ಅಭಿಮಾನಿಗಳೂ ಆಗಿರುವ ಶ್ರೀ ಎನ್. ರಂಗನಾಥಶರ್ಮರವರಿಗೆ ಕಾರ್ಯಾಲಯದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಎಂದಿನಂತೆ ಈ ನಮ್ಮ ಅಲ್ಪ ಸೇವೆಯನ್ನು ವಾಚಕರು ಪ್ರೇಮಾದರಗಳಿಂದ ಸ್ವೀಕರಿಸಿ ಇಂಥ ಮಹನೀಯರ ದಿವ್ಯ ಚರಿತ್ರೆಯನ್ನು ಓದಿ ವಾಚಕರು ಧನ್ಯರಾಗಬೇಕೆಂದು ಪ್ರಾರ್ಥಿಸಲಾಗಿದೆ.

ಶ್ರೀ ವ್ಯಯ ನಾಮ ಸಂವತ್ಸರ ಪ್ರಕಾಶಕರು
ಮಾರ್ಗಶಿರ ಬಹುಳ ಅಷ್ಟಮಿ
ಗುರುವಾರ ; ತಾ|| 14.12.2006

# ಎರಡನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ

ಮಹಾಮಹಿಮರ ಜೀವನಚರಿತ್ರೆಯೆಂದರೆ ವಿಶೇಷ ಆಸಕ್ತಿ, ಅತೀವ ಕುತೂಹಲ ಮೂಡುವದು ಸಹಜ. ಅಲೌಕಿಕ ವಿಸ್ಮಯ ಘಟನೆಗಳು, ಶಾಪಾನುಗ್ರಹ ಶಕ್ತಿಗಳು, ಶರಣು ಬಂದ ಸಾಮಾನ್ಯ ಸಾಂಸಾರಿಕರ ನಾನಾ ವಿಧದ ಕೋಟಲೆಗಳ ಪರಿಹಾರ - ಬೋಧಪ್ರದವಾದ ಕಥೆಗಳು, ಮಾರ್ಗಸೂಚಿತತ್ತ್ವಗಳ ಸರಳ ನಿರೂಪಣೆಗಳು ಅಲ್ಲಿಯ ಜೀವಾಳವಾಗಿರುತ್ತವೆ. ಆದರೆ, ಇಲ್ಲಿಯ ವಿಶೇಷವೆಂದರೆ, ಜೀವನದಲ್ಲಿ ಅನೇಕ ಅಡ್ಡಿ ಆತಂಕಗಳನ್ನೆದುರಿಸಿಯೂ ಹತಾಶರಾಗದೆ, ತಮ್ಮ ಗುರಿಯತ್ತಲೇ ಹೆಜ್ಜೆಯನ್ನಿಡುತ್ತಾ, ಅವಕಾಶವಿದ್ದಲ್ಲಿ ದಾಪುಗಾಲು ಹಾಕುತ್ತಾ ಕೊನೆಗೂ ತಮ್ಮ ಗುರಿಯನ್ನು ಮುಟ್ಟಿದ ಸಾಹಸಿಯ ಕಥೆ ಇದು ; ಸಾಮಾನ್ಯವಲ್ಲದ ಅಸಾಧಾರಣ ವೇದಾಂತದ ಹಿರಿಮೆಯನ್ನು ಪಡೆದದ್ದಷ್ಟೇ ಅಲ್ಲ, ಅದನ್ನು ತನ್ನ ಸುತ್ತಮುತ್ತಲಿನ ಎಲ್ಲ ಜನತೆಗೆ ಧಾರಾಳವಾಗಿ ಹಂಚಿ ಲೋಕೋಪಕಾರ ಮಾಡಿದ ಮಹಾನುಭಾವರೊಬ್ಬರ ಗಾಥೆ. ಬರಿಯ ಕೈಲಾಸ ಪರಿಕ್ರಮವಲ್ಲದೆ, ಶಿಖರವನ್ನೇ ಮುಟ್ಟಿ ಹೃದಯ ವೈಶಾಲ್ಯದ ಲೋಕಹಿತ ಬಯಕೆಯನ್ನು ಬಿತ್ತಿ ಅತ್ಯುತ್ತಮ ಬೆಳೆಯನ್ನು ಹಂಚಿದ, ಮಾನವನನ್ನು ಅತ್ಯುಚ್ಚತೆಗೆ ಏರಿಸಿದ ಆನಂದ ಸೋಪಾನದ ದೃಶ್ಯವಿಲ್ಲಿದೆ.

ಸಾವಿರಾರು ಪ್ರವಚನಗಳು, 44-45 ಪತ್ರಿಕಾ (ಅಧ್ಯಾತ್ಮಪ್ರಕಾಶ - ಮಾಸಿಕ) ಸಂಪುಟಗಳು (550ಕ್ಕೂ ಹೆಚ್ಚಿನ ಸಂಚಿಕೆಗಳು, ಪ್ರತಿಯೊಂದರಲ್ಲೂ ಹತ್ತು ಹದಿನೈದು ಪುಟಗಳ ಲೇಖನಗಳು), ಅಲ್ಲಿಗೆ ಸುಮಾರು ಆರೆಂಟು ಸಾವಿರ ಪುಟಗಳ ನಾನಾ ಪ್ರಕಾರದ ಅಧ್ಯಾತ್ಮಲೇಖನಗಳು, 160ಕ್ಕೂ ಮೀರಿದ ಗ್ರಂಥಗಳು, ಅದೇ ಸಂಖ್ಯೆಯ ಗೀತಾವಳಿ, ಅನೇಕರಿಗೆ ವೇದಾಂತ ಪಾಠಗಳು, ಒಟ್ಟಿನಲ್ಲಿ ಕ್ಷಣವೂ ದಂಡವಾಗದಂತೆ ಅದರಲ್ಲೂ ಸಂನ್ಯಾಸ ಸ್ವೀಕರಿಸಿದಮೇಲಂತೂ ಕೇವಲ ಜ್ಞಾನ ತಪಸ್ಸಿಗೇ ತನ್ನನ್ನು ಮೀಸಲಾಗಿಟ್ಟು ಈ ಅಪಾರ ವೇದಾಂತ ಸಾಹಿತ್ಯದಮೂಲಕ ಜೀವನ ಸಾರ್ಥಕತೆಯನ್ನು ಪಡೆದವರು ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು.

ಇಂತಹ ಮಹಿಮಾವಂತರ ಜೀವನ ಚರಿತ್ರೆ ಮತ್ತು ಅವರ ಜೀವನದ ಭಾಗವಾಗಿಯೇ ಬೆಳೆದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಇತಿಹಾಸ ಪುಸ್ತಕಗಳು ಜನಪ್ರಿಯವಾಗಿ ನಿಂತಿವೆ. ಕರ್ನಾಟಕ ಸರ್ಕಾರದ ಕೇಂದ್ರ ಗ್ರಂಥಾಲಯಗಳ ಅಧಿಕಾರಿಗಳು ಇದನ್ನು ಕಂಡು, ಆಸಕ್ತಿವಹಿಸಿ ಸುಮಾರು 1000 ಪುಸ್ತಕಗಳನ್ನು ರಾಜ್ಯದ ಎಲ್ಲ ಗ್ರಂಥಾಲಯಗಳಿಗೂ ಕಳುಹಿಸಿ ಉಪಕಾರ ಮಾಡಿದ್ದಾರೆ. ಅವರಿಗೆ ಕಾರ್ಯಾಲಯದ ಕೃತಜ್ಞತೆಗಳು, ಈ ವಿಷಯದಲ್ಲಿ ಸಹಕರಿಸಿ ಅನುಕೂಲಮಾಡಿಕೊಟ್ಟ ಸ್ನೇಹಿತರಿಗೆ ವಂದನೆಗಳು. ಹೀಗೆ ಎಲ್ಲ ಪುಸ್ತಕಗಳೂ ವಿತರಣೆಯಾಗಿರುವದರಿಂದ, ಕೇವಲ ಒಂದು ವರ್ಷದೊಳಗೇ ಈಗಿನ ಎರಡನೆಯ ಮುದ್ರಣ ಹೊರ ಬರುತ್ತಿದೆ. ವೇದಾಂತಾಸಕ್ತರಿಗೆ, ಅಭಿಮಾನಿಗಳಿಗೆ ಇದರಿಂದ ಉಪಯೋಗವಾಗಲೆಂಬುದು ಕಾರ್ಯಾಲಯದ ಆಶಯ, ಹಾರೈಕೆ.

ಶ್ರೀ ಸರ್ವಧಾರಿ ಸಂವತ್ಸರ
ವೈಶಾಖ ಶುದ್ಧ ಪಂಚಮಿ, ಪ್ರಕಾಶಕರು
ಶನಿವಾರ : ತಾ|| 10.5.2008

# ಪ್ರಸ್ತಾವನೆ

ವಿದ್ವಾನ್ ಎನ್. ರಂಗನಾಥಶರ್ಮ ''ಸುಷ್ಮ'' 102, 7ನೇ ಮುಖ್ಯರಸ್ತೆ, ಆವಲಹಳ್ಳಿ,
ಬಿ.ಡಿ.ಎ., ಬೆಂಗಳೂರು-560 085, ದೂ. 26747171

ಪೂಜ್ಯಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಆತ್ಮಚರಿತೆ ಇದು. ಆತ್ಮ ಪ್ರಶಂಸೆಗಾಗಿ ಬರೆದದ್ದಲ್ಲ, ಪರಮಾತ್ಮ ಪ್ರಶಂಸೆಗಾಗಿ, ಜೀವಿತದಲ್ಲಿ ನಡೆದ ಘಟನೆಗಳನ್ನು ಚಿತ್ರಿಸಲು ಬರೆದದ್ದು ಇದು. ಈ ಗ್ರಂಥವು ಹೊತ್ತು ಕಳೆಯುವ ಸಾಧನವಲ್ಲ, ಅಧ್ಯಾತ್ಮ ವಿಚಾರದಲ್ಲಿ ಆಸಕ್ತಿಯುಳ್ಳವರ ಪ್ರವೃತ್ತಿಗೆ ಒತ್ತುಕೊಡುವ ಸಾಧನ. ವಿವೇಕಿಗಳಿಗೆ ಈಶ್ವರನಲ್ಲಿರುವ ಶ್ರದ್ಧಾಭಕ್ತಿಗಳನ್ನು ವೃದ್ಧಿಗೊಳಿಸಿ ಜೀವಿತದ ಗುರಿಯನ್ನು ಅರಿತು ಸೇರಲು ಮಾರ್ಗದರ್ಶನ ಇಲ್ಲಿದೆ. ಇನ್ನೊಂದು ವಿಶೇಷ-ವೇನೆಂದರೆ, ಈ ಗ್ರಂಥವು ಸಾಧಕರಿಗೆ ಮಾರ್ಗದರ್ಶಿಯಾದಂತೆ, ಸಹೃದಯರಿಗೆ ಮನೋರಂಜನೆಯನ್ನುಂಟುಮಾಡುವ ರಸವತ್ತಾದ ಕಾವ್ಯವಾಗಿದೆ. ಇದೊಂದು ಸುಂದರ ಕಾದಂಬರಿಯೆಂದು ತಿಳಿದು ಜನರು ಅವಶ್ಯವಾಗಿ ಓದಬೇಕಾದದ್ದು. ಕಾವ್ಯ ಪ್ರಯೋಜನಗಳಲ್ಲೊಂದಾದ ''ಸದ್ಯಃ ಪರನಿರ್ವೃತಿ'' - ಅಧಿಕವಾದ ಆನಂದವು - ಪರಮಾತ್ಮ ವಿಚಾರದಲ್ಲಿ ಆನಂದವು - ಒಟ್ಟಿಗೆ ಹುಟ್ಟುವುದರಲ್ಲಿ ಸಂದೇಹವಿಲ್ಲ.

ಪೂಜ್ಯಶ್ರೀಗಳವರ ಪೂರ್ವಾಶ್ರಮದಲ್ಲಿ- ಬಾಲ್ಯದಿಂದ ಸಂನ್ಯಾಸ ಸ್ವೀಕಾರದವರೆಗೆ ನಡೆದ ಘಟನೆಗಳ ಪ್ರಕೃತೋಪಯೋಗಿಯಾದ ಕಥನ ಈ ಪುಸ್ತಕದಲ್ಲಿದೆ. ಅವರ ಸಾಧನೆ ಎಷ್ಟು ಶ್ರಮದಿಂದ, ಎಷ್ಟು ಉತ್ಸಾಹದಿಂದ, ಎಷ್ಟು ಪ್ರಕಾರಗಳಿಂದ ಕೂಡಿತ್ತು ಎಂಬುದು ಬಹುಜನರಿಗೆ ತಿಳಿದಿಲ್ಲ. ಶ್ರೀಗಳವರು ರಚಿಸಿದ ಗ್ರಂಥಗಳ ಆಳ ಅಗಲಗಳೆಷ್ಟು ಎಂಬುದೂ ತಿಳಿದಿಲ್ಲ. ಅದೆಲ್ಲವೂ ಅರಿವಿಗೆ ಬಂದರೆ ಸಾಂಪ್ರದಾಯಿಕ ಪಂಡಿತ ಕುಲದಲ್ಲಿ ಶ್ರೀಗಳವರ ವಿಷಯವಾಗಿ ಇರಬಹುದಾದ ಉದ್ದಂಡ ಉಪೇಕ್ಷೆಯ ಖಂಡನೆಯಾದೀತೆಂದು ನನ್ನ ಅಭಿಪ್ರಾಯವಿದೆ.

ಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್. ಬಾಲ್ಯದ ವಾಸ ಸ್ಥಳ ಕಡೂರು ತಾಲ್ಲೂಕಿನ ಯಲ್ಲಂಬಳಸೆ. ಪ್ರಾಥಮಿಕ ವಿದ್ಯಾಭ್ಯಾಸ ಕಾಲದಲ್ಲಿಯೇ ತಂದೆತಾಯಿಗಳನ್ನಗಲಿ ಪರಸ್ಥಳದಲ್ಲಿ ವಾಸ, ವಾರಾನ್ನ -ಮುಂತಾದ ಕಷ್ಟಗಳು, ಓದುವಾಗಲೇ ಹದಿನಾಲ್ಕನೆಯ ವರ್ಷದಲ್ಲಿ ಮದುವೆ, ತರೀಕೆರೆ, ಚಿಕ್ಕಮಗಳೂರು, ಹಾಸನಗಳಲ್ಲಿ ಪರದಾಟ, ಬೆಂಗಳೂರಿಗೆ ಬಂದು ವಾರಾನ್ನವನ್ನು ಮಾಡಿಕೊಂಡು ಮುಂದಿನ ಓದು - ಮುಂತಾದ ಕ್ಲೇಶಗಳಿಂದ ಈ ಸುಬ್ಬರಾಯರ ದೇಹ-ಮನಸ್ಸು ನೊಂದು ಬೆಂದು ಮುಂದಿನ ಕಷ್ಟಜೀವನಕ್ಕೆ ಹೊಂದಿಕೊಂಡವೆಂದು ತೋರುತ್ತದೆ. ಇದನ್ನು ಬರವಣಿಗೆಯಲ್ಲಿ ಎಲ್ಲಿಯೂ ಅವರು ವ್ಯಕ್ತಪಡಿಸದೆ, ಇದ್ದುದನ್ನು ಇದ್ದಂತೆ ತಟಸ್ಥರಾಗಿ ನಿರೂಪಿಸುತ್ತಾ ಹೋಗಿದ್ದಾರೆ.

ಬಡತನದಿಂದಲೂ ಸಂಸಾರದ ಹೊರೆ ಚಿಕ್ಕ ವಯಸ್ಸಿನಲ್ಲಿಯೇ ಪ್ರಾಪ್ತವಾದ್ದರಿಂದಲೂ ವೈ. ಸುಬ್ಬರಾಯರಿಗೆ ಇಂಗ್ಲಿಷಿನಲ್ಲಿ ಪದವೀಧರರಾಗಲು ಸಾಧ್ಯವಾಗಲಿಲ್ಲವೆಂದು ನಾವು ಊಹಿಸಬಹುದು. ಬೆಂಗಳೂರಿನಲ್ಲಿದ್ದ ಸಂಸ್ಕೃತ ಕಾಲೇಜಿನಲ್ಲಿ ಕೆಲವು ವರ್ಷಗಳವರೆಗೆ ಇಂಗ್ಲಿಷ್ ಮತ್ತು ಸಂಸ್ಕೃತ ಕಾವ್ಯಗಳ ಅಧ್ಯಾಪಕರಾಗಿದ್ದರು. ಅನಂತರ ಮಿಡಲ್‌ಸ್ಕೂಲಿಗೆ ಕ್ರಿ.ಶ. 1929ರಲ್ಲಿ ವರ್ಗವಾಯಿತು. ಕ್ರಿ.ಶ. 1935ರಲ್ಲಿ ಅವರು ಸರ್ಕಾರಿ ಸರ್ವಿಸಿನಿಂದ ನಿವೃತ್ತರಾದರು. ನಾನು ಕ್ರಿ.ಶ. 1934ರಲ್ಲಿ ಬೆಂಗಳೂರಿನ ಸಂಸ್ಕೃತ ಕಾಲೇಜಿಗೆ ವಿದ್ಯಾರ್ಥಿಯಾಗಿ ಬಂದು ಸೇರಿದಾಗ ಶ್ರೀ ವೈ. ಸುಬ್ಬರಾಯರು ಅಲ್ಲಿ ಅಧ್ಯಾಪಕರಾಗಿರಲಿಲ್ಲ.

ಇದಿಷ್ಟು ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ ಘಟನೆಗಳು. ಆದರೆ ಈ ಘಟನೆಗಳ ನಡುವೆ ಶ್ರೀ ಸುಬ್ಬರಾಯರು ಸಾಧಿಸಿದ ಅಪೂರ್ವಸಿದ್ಧಿಗಳು ಎಷ್ಟು? ಯಾವ ಪ್ರಮಾಣದವು ? ಅವನ್ನು ಸ್ಥೂಲವಾಗಿ ವೀಕ್ಷಿಸಿದರೂ ಈ ಮಹಾಪುರುಷರ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳು, ಕೃಷ್ಣಸ್ವಾಮಿ ಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು, - ಮುಂತಾದವರ ಸಂದರ್ಶನ, ಸಹವಾಸ - ಮೊದಲಾದವು ಸುಬ್ಬರಾಯರಿಗೆ ದೇವದತ್ತವರಗಳಾಗಿ ಪರಿಣಮಿಸಿದವು. ಅಧ್ಯಾತ್ಮಮಾರ್ಗದಲ್ಲಿ ನಡೆಸಿಕೊಂಡು ಹೋದವು, ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯವನ್ನು ಗಳಿಸಲು ನೆರವಾದವು. ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳಿಂದ ಕಾಲಟೀ ಕ್ಷೇತ್ರದಲ್ಲಿ ಶ್ರೀ ಶಾಂಕರಭಾಷ್ಯ ಶಾಂತಿಪಾಠವೂ ಆಯಿತು. ಶ್ರೀ ವಿರೂಪಾಕ್ಷಶಾಸ್ತ್ರಿಗಳಿಂದ ವೇದಾಂತಾಧ್ಯಯನದಲ್ಲಿ ಮಾರ್ಗದರ್ಶನವೂ ದೊರೆಯಿತು. ಶ್ರೀ ಸುಬ್ಬರಾಯರು ಅವರ ಶಿಷ್ಯರಾಗಿ ಭಾಷ್ಯವನ್ನು ಅಧ್ಯಯನ ಮಾಡಿದರು. ಸರ್ಕಾರಿ ಕೆಲಸದಲ್ಲಿದ್ದಾಗಲೇ ಹಲವಾರು ಪುಸ್ತಕಗಳನ್ನು ರಚಿಸಿ ಗ್ರಂಥಕರ್ತರಾದರು. ಗ್ರಂಥರಚನೆ ಮಾಡುವಷ್ಟು ಸಾಮರ್ಥ್ಯವನ್ನು ಸಂಸ್ಕೃತದಲ್ಲಿ ಗಳಿಸಿದರು. ವೇದಾಂತದಲ್ಲಿ ಅವರ ಪಾಂಡಿತ್ಯವೂ ಸೂಕ್ಷ್ಮದರ್ಶಿತ್ವವೂ ವಿಚಾರಪ್ರವಣತೆಯೂ ಎಷ್ಟು ಬೆಳೆಯಿತೆಂದರೆ, "ಮೂಲಾವಿದ್ಯಾನಿರಾಸ"ವೆಂಬ ಒಂದು ಸ್ವತಂತ್ರ ಗ್ರಂಥವನ್ನೇ ಸುಬ್ಬರಾಯರು ರಚಿಸಿದರು.

ಅವರು ಮಿಡ್ಲ್‌ಸ್ಕೂಲ್ ಹೆಡ್‌ಮಾಸ್ಟರಾಗಿ ನಿವೃತ್ತರಾದರೇ ಹೊರತು ವಿಶ್ರಾಂತರಾಗಲಿಲ್ಲ. ಶ್ರೀ ಶಾಂಕರ ಸಿದ್ಧಾಂತವನ್ನು ಪ್ರಚಾರ ಮಾಡಬೇಕೆಂಬ ಘನೋದ್ದೇಶದಿಂದ 'ಅಧ್ಯಾತ್ಮಪ್ರಕಾಶ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. ಬೆಂಗಳೂರಿನಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ಸ್ಥಾಪಿಸಿ, ತಮ್ಮ ಪುಸ್ತಕಗಳ ಮುದ್ರಣಕ್ಕಾಗಿ ಒಂದು ಮುದ್ರಣಾಲಯವನ್ನೇ ತೆರೆದರು. ಈ ಅಮೃತ ಬೀಜವೇ

ಮುಂದೆ ಹೊಳೆನರಸೀಪುರದಲ್ಲಿ ವಿಸ್ತಾರವಾಗಿ ಬೆಳೆದು ಹೂಹಣ್ಣುಗಳನ್ನು ಸುರಿಸುತ್ತದೆಯಲ್ಲದೆ ಬೆಂಗಳೂರು ನಗರದ ತ್ಯಾಗರಾಜನಗರದಲ್ಲಿ ಆ ಮಹಾವೃಕ್ಷದ ಶಾಖೆಯೊಂದು ಬೆಳೆದು ಹೂಹಣ್ಣುಗಳನ್ನು ಈಗಲೂ ಕೊಡುತ್ತಿದೆ. ಹಾಗೆಯೇ, ಮೈಸೂರಿನಲ್ಲಿಯೂ ಇದೆ.

ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ ಕರ್ತೃತ್ವಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳೇ ನಿದರ್ಶನ. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ ಪ್ರೌಢಪಾಂಡಿತ್ಯವು ವಿಸ್ಮಯಕಾರಿಯಾದದ್ದು. ಶಾಲಾ ಕಾಲೇಜುಗಳಲ್ಲಿ ಅವರು ಕಲಿತ ಇಂಗ್ಲಿಷ್ ಪರಿಮಿತವಾದದ್ದು. ಆದರೆ ಅವರು ತಮ್ಮ ಇಂಗ್ಲಿಷ್ ಭಾಷೆಯ ಗ್ರಂಥಗಳಲ್ಲಿ ಬಳಸಿರುವ ಶಾಸ್ತ್ರೀಯವಾದ ಪ್ರೌಢಶಾಲೆಯ ಇಂಗ್ಲಿಷ್ ಮಾತ್ರ ಎಂ.ಎ. ಪದವೀಧರನಿಗೂ ದಕ್ಕತಕ್ಕದ್ದಲ್ಲ. ಇನ್ನು ಕನ್ನಡವು ಮಾತೃಭಾಷೆ ಎಂದುಕೊಳ್ಳಬಹುದು. ಆದರೆ ಸಂಸ್ಕೃತವು ಮಾತ್ರ ಸ್ವಯಂ ಬೋಧಿನಿಯ ನೆರವಿನಿಂದ ಸ್ವಯಂ ಕಲಿತ ಸ್ವಾರ್ಜಿತ ಭಾಷೆ. ಭಾಷ್ಯಾದಿ ಸಂಸ್ಕೃತ ಗ್ರಂಥಗಳನ್ನು ಓದಿ ಓದಿ ಭಾಷೆಯನ್ನು ವಶಪಡಿಸಿಕೊಂಡು ಶಾಸ್ತ್ರೀಯ ಭಾಷೆಯಲ್ಲಿ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾರೆ. 'ಮಾಂಡೂಕ್ಯರಹಸ್ಯ ವಿವೃತಿ'ಯಲ್ಲಿ ಅವರು ಬಳಸಿದ ಸಂಸ್ಕೃತ ಭಾಷಾಶೈಲಿಯನ್ನು ನೋಡಿ ನಾನು ಮುಗ್ಧನಾಗಿದ್ದೇನೆ. ಅವರು ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾಗ 'ವಾಕ್ಯರಚನಾ ಕ್ರಮ' ಎಂಬ ಒಂದು ಕನ್ನಡ ಪುಸ್ತಕವನ್ನು ಬರೆದರು. ಆಗಿನಿಂದ ಆರಂಭವಾದ ಗ್ರಂಥರಚನಾ ವ್ಯವಸಾಯವು ಜೀವನದುದ್ದಕ್ಕೂ ತೆರಪಿಲ್ಲದೆ ಸಾಗಿತು. ಸುಮಾರು 180 ಗ್ರಂಥಗಳು ಅವರ ಲೇಖನಿಯಿಂದ ಮೂಡಿದವು. ವೇದಾಂತದಲ್ಲಿ ಪ್ರವೇಶಮಾಡತಕ್ಕವರಿಗೆ, ಮಧ್ಯಮ ವರ್ಗದವರಿಗೆ, ಪ್ರೌಢರಿಗೆ ಬೇಕಾದುದೆಲ್ಲವೂ ರಚಿತವಾದವು. ಅಧ್ಯಾತ್ಮಗೀತಾವಳಿ, ವೇದಾಂತದ ಕಥೆಗಳು ಎಲ್ಲವೂ ಬಂದವು. ಶ್ರೀ ಶಂಕರಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳೂ ಪ್ರಕರಣ ಗ್ರಂಥಗಳೂ ಕನ್ನಡಕ್ಕೆ ಬಂದವು. ಇವುಗಳ ಒಂದು ವೈಶಿಷ್ಟ್ಯವೇನೆಂದರೆ, 'ಇತಿ ಶ್ರುತೇಃ, ಇತಿ ಸ್ಮೃತೇಃ' ಎಂದು ಭಾಷ್ಯಕಾರರು ಎಲ್ಲೆಲ್ಲಿ ಹೇಳಿರುತ್ತಾರೋ ಅದೆಲ್ಲವನ್ನೂ ಗೊತ್ತು ಮಾಡಿ ಆಯಾ ಉಪನಿಷತ್ತುಗಳ ಮತ್ತು ಸ್ಮೃತಿಗಳ ಹೆಸರನ್ನೂ ಸ್ಥಳ, ಸಂಖ್ಯೆಗಳನ್ನೂ ಗುರುತಿಸುವುದು. ಈ ನವೀನ ಪದ್ಧತಿಯು ಅಧ್ಯಯನ, ಅಧ್ಯಾಪನ ಕಾರ್ಯಗಳಿಗೆ ಅತ್ಯಂತ ಉಪಯುಕ್ತವಾದದ್ದು. ಅಲ್ಲದೇ ಆಯಾ ಪುಟಗಳ ಕೆಳಗೆ ಶ್ರೀ ಸ್ವಾಮಿಗಳು ಬರೆಯುವ ಅಡಿ ಟಿಪ್ಪಣಿಗಳು ಅತ್ಯಮೂಲ್ಯ-ವಾದವು. ಶ್ರೀಗಳವರ ಅಧ್ಯಯನದ ಆಳವೆಷ್ಟು, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಎಷ್ಟು ಎಂಬುದನ್ನು ನಾವು ಊಹಿಸಿಕೊಳ್ಳಬೇಕು.

ಹಾಗೆಯೇ ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಶ್ರೀಗಳವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು. ಮತ್ತೆ ಮತ್ತೆ ಓದಬೇಕಾದವು. ಇದುವರೆಗೆ ಅವರು ಬರೆದ ಲೇಖನಗಳನ್ನು ಸಂಗ್ರಹಿಸಿ ಒಂದೆರಡು ಸಂಪುಟಗಳಲ್ಲಿ ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ. ಈ ವಿಚಾರದಲ್ಲಿ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವರು ಆಸಕ್ತಿವಹಿಸುವುದು ಉತ್ತಮ.

ಶ್ರೀಗಳವರ ಅಮೃತ ಹಸ್ತದಿಂದ ಮೂಡಿಬಂದ ಸಂಸ್ಕೃತ ಕೃತಿಗಳಲ್ಲಿ 'ವೇದಾಂತಪ್ರಕ್ರಿಯಾ ಪ್ರತ್ಯಭಿಜ್ಞಾ', 'ಮಾಂಡೂಕ್ಯರಹಸ್ಯ ವಿವೃತಿಃ' ಎಂಬೆರಡು ಮೇರು ಕೃತಿಗಳು. ಅವರ ಪ್ರತಿಭೆಗೂ ಉತ್ತುಂಗ ವೈದುಷ್ಯ ಸಾಕ್ಷಿಗಳು. ಒಂದೊಂದೂ ಜ್ಞಾನಪೀಠ ಪ್ರಶಸ್ತಿಗೆ ಅರ್ಹವಾದವು. ಒಂದೊಂದೂ ವಿಶ್ವವಿದ್ಯಾಲಯಗಳ ಡಿ.ಲಿಟ್. ಪದವಿಯನ್ನು ಎಳೆದುಕೊಂಡು ಬರಲು ಸಮರ್ಥವಾದವುಗಳು.

ಶ್ರೀಗಳವರು ಸಂನ್ಯಾಸವನ್ನು ಸ್ವೀಕರಿಸಿ ಪರಿವ್ರಾಜಕರಾದದ್ದೂ ಒಂದು ಧೀರಕೃತ್ಯವೇ. ಒಂದು ಮಠ, ಸಾಕಷ್ಟು ಆಸ್ತಿ, ಶಿಷ್ಯ ಸಂಪತ್ತು - ಇವುಗಳಿದ್ದಾಗ ಸಂನ್ಯಾಸವನ್ನು ಸ್ವೀಕರಿಸಿ ಮಠಾಧಿಪತಿಯಾಗುವುದು ದೊಡ್ಡ ವಿಷಯವಲ್ಲ. ಏನೂ ಇಲ್ಲದೆ ಬರಿಯ ವೈರಾಗ್ಯಬಲದಿಂದಲೇ ಸಂನ್ಯಾಸಿಯಾಗಿ ಮಠವನ್ನು ಕಟ್ಟಿ ಶಿಷ್ಯ ಸಂಪತ್ತನ್ನು ಗಳಿಸುವುದು ದೊಡ್ಡ ವಿಷಯ ; ಧೀರ ಕೃತ್ಯ.

ನಾನು ರಚಿಸಿದ ಮಾಂಡೂಕ್ಯಪ್ರವಚನವೆಂಬ ಗ್ರಂಥದ[1] ಪ್ರಸ್ತಾವನೆಯಲ್ಲಿ ಹೀಗೆ ಬರೆದಿದ್ದೇನೆ : "ಹೊಳೆನರಸೀಪುರದ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಬೌದ್ಧ ಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದವರು. ಈ ಮಹನೀಯರು **ಮಾಂಡೂಕ್ಯರಹಸ್ಯ** ವಿವೃತಿಃ ಎಂಬ ಶ್ರೇಷ್ಠವಾದ ಒಂದು ಕೃತಿಯನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ಅದಕ್ಕೆ ಶ್ರೀಶ್ರೀಗಳವರೇ ಇಂಗ್ಲಿಷಿನಲ್ಲಿ ಒಂದು ಉಪೋದ್ಘಾತವನ್ನೂ, ಸಂಸ್ಕೃತದಲ್ಲಿ ವಿಸ್ತೃತವಾದ ಭೂಮಿಕೆಯನ್ನು ಬರೆದಿದ್ದಾರೆ. ಬೌದ್ಧಮತ ಪ್ರಭಾವವು ಗೌಡಪಾದಕಾರಿಕೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆಯೆಂಬ ಆಧುನಿಕರ ವಾದವನ್ನು ಶ್ರೀಶ್ರೀಗಳವರು ಅವೆರಡ-ರಲ್ಲಿಯೂ ಸಮರ್ಥವಾಗಿ ಖಂಡಿಸಿದ್ದಾರೆ. ಪೂಜ್ಯ ಶ್ರೀಸ್ವಾಮಿಗಳು ಕನ್ನಡದಲ್ಲಿಯೂ ಶ್ರೀ ಗೌಡಪಾದ ಹೃದಯವೆಂಬ ವಿಸ್ತೃತ ಗ್ರಂಥವನ್ನು ರಚಿಸಿ ಅದರಲ್ಲಿಯೂ ಶ್ರೀ ಗೌಡಪಾದಕಾರಿಕೆಗಳ ಮೇಲೆ ಬೌದ್ಧಮತ ಪ್ರಭಾವವಿದೆಯೆಂಬ ವಾದವನ್ನು

1. ಈ ಗ್ರಂಥದ ಪ್ರಕಾಶಕರು - ಸ್ವಯಂ ಪ್ರಕಾಶ ಗ್ರಂಥಮಾಲಾ, ಶ್ರೀಮಠ, ಹರಿಹರಪುರ - 577 120, ಚಿಕ್ಕಮಗಳೂರು ಜಿಲ್ಲೆ. ಬೆಲೆ ರೂ. 150-00

ಪುನಃ ತಲೆಯೆತ್ತದಂತೆ ದೂಷಿಸಿದ್ದಾರೆ. ಈ ಗ್ರಂಥಗಳನ್ನು ಕುತೂಹಲಿಗಳು ಅವಶ್ಯವಾಗಿ ಓದಬೇಕು. ಪೂಜ್ಯ ಸ್ವಾಮಿಗಳ ಸೂಕ್ಷ್ಮದೃಷ್ಟಿ, ಬೌದ್ಧ ಗ್ರಂಥಗಳ ಅಧ್ಯಯನ, ಅದ್ವೈತವೇದಾಂತ - ಬೌದ್ಧ ಸಿದ್ಧಾಂತಗಳಿಗಿರುವ ಭೇದವನ್ನು ಎತ್ತಿ ತೋರಿಸುವ ವಿಧಾನ - ಇವು ಪ್ರಶಂಸನೀಯವಾದವು. ಪೂಜ್ಯ ಶ್ರೀ ಸಚ್ಚಿದಾನಂದೇಂದ್ರ ಸ್ವಾಮಿಗಳು ಮಾಂಡೂಕ್ಯ ವಿವೃತಿಯಲ್ಲಿ ಬಳಸಿರುವ ಸಂಸ್ಕೃತ ಭಾಷಾ ಶೈಲಿಯನ್ನು ನೋಡಿ ನಾನು ಮುಗ್ಧನಾಗಿದ್ದೇನೆ. ಈ ಮಾಂಡೂಕ್ಯ ಪ್ರವಚನವನ್ನು ಬರೆಯುವಾಗ ನನಗೆ ಶ್ರೀಶ್ರೀಗಳವರ ಕೃತಿಗಳಿಂದ ತುಂಬ ಉಪಕಾರವಾಗಿದೆ. ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ವೇದಾಂತೇಷು ಮಹಾಪ್ರಾಜ್ಞಂ ಕೃತಭೂರಿಪರಿಶ್ರಮಮ್ ।
ಬಹುಗ್ರಂಥ ಪ್ರಣೇತಾರಂ ತಂ ವಂದೇ ಯತಿನಾಂ ವರಮ್ ॥

ಬೌದ್ಧಮತವೆಲ್ಲವನ್ನೂ ಕೂಲಂಕಷವಾಗಿ ಅಭ್ಯಾಸ ಮಾಡಿ, ಅದ್ವೈತ ಸಿದ್ಧಾಂತಕ್ಕೂ ಬೌದ್ಧಮತಕ್ಕೂ ಇರುವ ಭೇದಗಳೆಲ್ಲವನ್ನೂ ತೋರಿಸಿ, ಅದ್ವೈತಿಗಳು ಪ್ರಚ್ಛನ್ನ ಬೌದ್ಧರೆಂಬ ದುರ್ವಾದವನ್ನು ಖಂಡಿಸಿದವರು ಹೊಳೆನರಸೀಪುರದ ಶ್ರೀಗಳವರು. ಅವಶ್ಯಕರ್ತವ್ಯವಾದ ಈ ಖಂಡನೆಯನ್ನು ವಿಸ್ತಾರವಾಗಿ ಯಾವ ಸಾಂಪ್ರದಾಯಿಕ ವಿದ್ವಾಂಸರು ಮಾಡಿದ್ದಾರೆ ?

ಶ್ರೀಗಳವರು ಜ್ಞಾನನಿಷ್ಠೆಯಲ್ಲಿ ಸುಪ್ರತಿಷ್ಠಿತರಾಗಿದ್ದರೂ ಭಕ್ತಿ ಕರ್ಮಗಳನ್ನು ಉಪೇಕ್ಷಿಸಿದವರಲ್ಲ. ಸ್ವತಃ ತಾವೂ ಈಶ್ವರ ಭಜನೆಯನ್ನು ಮಾಡುತ್ತಿದ್ದರಲ್ಲದೆ ನಿತ್ಯವೂ ಸ್ವಲ್ಪ ಕಾಲ ಭಜನೆ ಮಾಡಬೇಕೆಂದು ಅನ್ಯರಿಗೂ ಉಪದೇಶಿಸುತ್ತಿದ್ದರು. ಹಾಗೆಯೇ ಸಂಧ್ಯಾವಂದನೆ ದೇವರ ಪೂಜೆ ಮುಂತಾದ ನಿತ್ಯ ಕರ್ಮಗಳನ್ನು ತಪ್ಪದೆ ಆಚರಿಸಬೇಕೆಂದು ಹೇಳುತ್ತಿದ್ದರು. ಅವರು ಗೃಹಸ್ಥಾಶ್ರಮದಲ್ಲಿದ್ದಾಗ ಕರ್ಮಾಚರಣೆ-ಗಳನ್ನು ಶ್ರದ್ಧೆಯಿಂದ ನಡೆಸುತ್ತ ಕರ್ಮಠರಾಗಿಯೇ ಬಾಳಿದರು.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಶಾಖೆಯು ಬೆಂಗಳೂರಿನ ತ್ಯಾಗರಾಜ-ನಗರದಲ್ಲಿ ಆರಂಭವಾದಾಗ ನಾನು ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣಶಾಸ್ತ್ರದ ಅಧ್ಯಾಪಕನಾಗಿದ್ದೆ. ಆಶ್ರಮಕ್ಕೆ ಸಮೀಪದಲ್ಲಿ ನೆಟ್ಟಕಲ್ಲಪ್ಪ ಸರ್ಕಲ್ಲಿನ ಬಳಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. ಆಮೇಲೆ ನರಸಿಂಹರಾಜಾಕಾಲೋನಿಯಲ್ಲಿಯೂ ಕೆಲವು ವರ್ಷ ವಾಸವಾಗಿದ್ದೆನು. ಉಭಯ ಸ್ಥಳವೂ ಆಶ್ರಮಕ್ಕೆ ಸಮೀಪವಾಗಿದ್ದುದರಿಂದ ಆಗಾಗ ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೆ ಹೋಗಿ ಶ್ರೀಗಳವರ ದರ್ಶನವನ್ನು ಮಾಡಿಕೊಂಡು

ಬರುತ್ತಿದ್ದೆನು. ಅವರು ಸಂನ್ಯಾಸಾಶ್ರಮವನ್ನು ಸ್ವೀಕರಿಸುವುದಕ್ಕೆ ಮೊದಲೇ ಅವರಿಗೆ ನಾನು ಪರಿಚಿತನಾದ್ದರಿಂದ ನಾನೇನೂ ಹೊಸಬನಾಗಿರಲಿಲ್ಲ. ನಾನು ಬಾಲ್ಯದಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ಶ್ರೀಗಳವರ ವಾಕ್ಯರಚನಾಕ್ರಮವು ಪಠ್ಯಪುಸ್ತಕವಾಗಿತ್ತು. ಅದು ಕನ್ನಡದ ಬರವಣಿಗೆಗೆ ತುಂಬಾ ಉಪಕಾರಿಯಾದ ಪುಸ್ತಕ. ನಾನು ದರ್ಶನಕ್ಕೆ ಹೋದಾಗ ಸಂಸ್ಕೃತ ಭಾಷೆ ಮತ್ತು ವ್ಯಾಕರಣದ ವಿಷಯವಾಗಿ ಸ್ವಲ್ಪ ವಿಚಾರ ನಡೆಯುತ್ತಿತ್ತು. ಯಾವ ಭಾಷೆಯಲ್ಲಾದರೂ ವ್ಯಾಕರಣ ಶುದ್ಧವಾಗಿ ಬರೆಯಬೇಕೆಂಬುದು ಸ್ವಾಮಿಗಳವರ ಉತ್ಕಟೇಚ್ಛೆಯಾಗಿತ್ತು. ಆದ್ದರಿಂದ ಕೆಲವು ಸಂಸ್ಕೃತ ಶಬ್ದಗಳ ರೂಪಸಿದ್ಧಿಯನ್ನೂ ಶಬ್ದಗಳ ಸಾಧುತ್ವವನ್ನೂ ಕುರಿತು ನನ್ನನ್ನು ಪ್ರಶ್ನಿಸುತ್ತಿದ್ದರು. ವೇದಾಂತ ವಿಷಯದಲ್ಲಿ ಏನನ್ನೂ ನಾನು ಕೇಳುತ್ತಿರಲಿಲ್ಲ. ಅವರ ಉಪನ್ಯಾಸಗಳಿಗೆ ತಪ್ಪದೇ ನಾನು ಹೋಗಿ ಶ್ರವಣ ಮಾಡುತ್ತಿದ್ದೆ. ಇತ್ಯಾದಿ ಕಾರಣಗಳಿಂದ ಶ್ರೀಗಳವರಿಗೆ ನನ್ನಲ್ಲಿ ತುಂಬ ಅಭಿಮಾನವೂ ವಾತ್ಸಲ್ಯವೂ ಉಂಟಾಗಿದ್ದವು.

ಆಮೇಲೆ ನಾನು ದೂರದ ಬಡಾವಣೆಯಾದ ವಿಜಯನಗರದಲ್ಲಿ ಮನೆಯನ್ನು ಕಟ್ಟಿದ್ದರಿಂದ ಅಲ್ಲಿಗೆ ನಿವಾಸವನ್ನು ಬದಲಾಯಿಸಿದೆನು. ಆಗ ಬಸ್ಸು ಮುಂತಾದ ವಾಹನ ಸೌಕರ್ಯಗಳು ವಿರಳವಾದ್ದರಿಂದ ಶ್ರೀಗಳವರ ದರ್ಶನ ಭಾಗ್ಯವು ವಿರಳವಾಯಿತೆಂಬ ವ್ಯಥೆ ತಲೆದೋರುತ್ತಿತ್ತು. ಆದರೂ ತಿಂಗಳಿಗೆ 2-3 ಸಲವಾದರೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯಕ್ಕೆ ಬಂದು ಹೋಗುತ್ತಿದ್ದೆನು.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ದೇಹಸ್ಥಿತಿಯು ವಯೋ-ಧರ್ಮಕ್ಕೆ ಅನುಸಾರವಾಗಿ ಕ್ರಮೇಣ ಕ್ಷೀಣಿಸುತ್ತಾ ಹೋಯಿತು. ದೇಹ ಶಕ್ತಿಯಂತೆ ವಾಕ್‌ಶಕ್ತಿಯೂ ದುರ್ಬಲವಾಯಿತು. ಎಷ್ಟಾದರೂ ಮರ್ತ್ಯ ಶರೀರವಲ್ಲವೇ ? ಆದರೂ ವಿಶೇಷ ಸಂದರ್ಭಗಳಲ್ಲಿ ಅವರ ಉಪನ್ಯಾಸವು ನಡೆಯುತ್ತಲೇ ಇತ್ತು. ಒಂದು ಸಲ ನಾನು ಶ್ರವಣಕ್ಕೆ ಹೋಗಿದ್ದಾಗ ಶ್ರೀಗಳವರು ನಡೆಯಲಾರದೆ ತೆವಳುತ್ತಲೇ ತಮ್ಮ ಕೋಣೆಯಿಂದ ಸಭಾ ಮಂಟಪಕ್ಕೆ ಬಂದು ಉಪನ್ಯಾಸವನ್ನಿತ್ತು, ಬಾಲಕನಂತೆ ತೆವಳುತ್ತಲೇ ಒಳಗೆ ಹೋದರು. ಆ ದೃಶ್ಯವು ಈಗಲೂ ನನ್ನ ಕಣ್ಣಮುಂದೆ ನಿಂತಿದೆ. ಗ್ರಂಥಗಳನ್ನು ಒಂದಾದಮೇಲೊಂದರಂತೆ ಬರೆದು ಬರೆದು ಉಪನ್ಯಾಸಗಳನ್ನು ನೀಡಿ ನೀಡಿ, ಶ್ರೀ ಶಂಕರಾಚಾರ್ಯರ ಸಿದ್ಧಾಂತವನ್ನು ಪ್ರಚುರಗೊಳಿಸುವುದಕ್ಕಾಗಿ ತಮ್ಮ ದೇಹವನ್ನು ಶ್ರೀ ಗಂಧದ ಕೊರಡಿನಂತೆ ತೆಯ್ದ ಮಹಾನುಭಾವರು ಶ್ರೀ ಸ್ವಾಮಿಗಳು.

ಶ್ರೀಗಳವರ ಆರೋಗ್ಯವು ತುಂಬ ಕ್ಷೀಣಿಸುತ್ತಿದೆಯೆಂಬ ಸುದ್ದಿಯನ್ನು ಕೇಳಿ ಅವರ ದರ್ಶನಕ್ಕಾಗಿ ವಿಜಯನಗರದಿಂದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯಕ್ಕೆ ನಾನು ಹೋದೆ. ಆಶ್ರಮದಲ್ಲಿ ಮೌನವು ನೆಲೆಸಿತ್ತು. ಶ್ರೀಗಳವರ ಶುಶ್ರೂಷೆಯಲ್ಲಿ ನಿರತರಾಗಿದ್ದ ಶ್ರೀಮತಿ ಲಕ್ಷ್ಮಮ್ಮನವರು ಶ್ರೀಗಳವರ ಸಮೀಪದಲ್ಲಿ ಕುಳಿತಿದ್ದರು. ಶ್ರೀಗಳವರು ಮುಸುಕು ಹಾಕಿ ಮಗ್ಗುಲಾಗಿ ಮಲಗಿದ್ದರು. ಲಕ್ಷ್ಮಮ್ಮನವರು ನನ್ನ ಹೆಸರನ್ನು ಎರಡು ಮೂರು ಸಲ ಗಟ್ಟಿಯಾಗಿ ಹೇಳಿ ಸ್ವಾಮಿಗಳನ್ನು ಎಬ್ಬಿಸಲು ಪ್ರಯತ್ನಿಸಿದರು. ಕಡೆಯಲ್ಲಿ ಸ್ವಾಮಿಗಳು ಮುಸುಕನ್ನು ತೆಗೆದು ನನ್ನನ್ನು ಸ್ವಲ್ಪ ಹೊತ್ತು ನೋಡಿ ತಮ್ಮ ಹಣೆಯನ್ನು ಮತ್ತೆ ಮತ್ತೆ ಮುಟ್ಟಿಕೊಳ್ಳುತ್ತ ಮತ್ತೆ ಮುಸುಕು ಹಾಕಿ ಹೊರಳಿ ಮಲಗಿದರು. ನಾನು ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತಿದ್ದು ನಮಸ್ಕರಿಸಿ ಹೊರಟು ಬಂದೆ.

ಅನಂತರ ಮೂರು ಅಥವಾ ನಾಲ್ಕು ದಿನ ಸಂದಿರಬಹುದು. ಪ್ರಾತಃಕಾಲದಲ್ಲಿ ನನ್ನ ಒಬ್ಬ ಆಪ್ತಮಿತ್ರರು ಬೈಸಿಕಲ್ ತುಳಿಯುತ್ತ ನನ್ನ ಮನೆಗೆ ಬಂದು ''ಶ್ರೀಗಳವರು ಇಹಲೋಕಯಾತ್ರೆಯನ್ನು ಮುಗಿಸಿದರು'' ಎಂಬ ಕಠೋರವಾರ್ತೆಯನ್ನರುಹಿ ಹೊರಟು ಹೋದರು. ನಾನು ಗಡಿಬಿಡಿಯಿಂದ ವಿಜಯನಗರದ ಬಸ್‌ಸ್ಟಾಪಿಗೆ ಹೋಗಿ ಕಾದೆ. ಬಸ್ ಬರಲಿಲ್ಲ, ಆಟೋ ಇರಲಿಲ್ಲ, ಹೇಗೋ ಶ್ರಮದಿಂದ ತಡವಾಗಿ ನೆಟ್ಟಕಲ್ಲಪ್ಪ ಸರ್ಕಲ್ಲನ್ನು ತಲುಪಿ, ತ್ಯಾಗರಾಜನರಕ್ಕೆ ಅಭಿಮುಖವಾಗಿ ಹೊರಟೆನು. ಎದುರಿಗೆ ಬರುತ್ತಿದ್ದ ಆಶ್ರಮ ಭಕ್ತರಲ್ಲೊಬ್ಬರು ''ಸ್ವಾಮಿಗಳ ದೇಹವನ್ನು ವಾಹನದಲ್ಲಿ ಹೊಳೆನರಸೀಪುರಕ್ಕೆ ಒಯ್ದರು'' ಎಂದು ಹೇಳಿದರು. ಶ್ರೀಗಳವರ ಚರಮದರ್ಶನವಾಗದೇ ಹೋಯಿತಲ್ಲ - ಎಂದು ನನ್ನ ಮನಸ್ಸಿಗೆ ಅತ್ಯಂತ ಖೇದವಾಯಿತು. ಇಷ್ಟು ದೂರ ಧಾವಿಸಿ ಬಂದದ್ದು ವ್ಯರ್ಥವಾಯಿತೆಂದು ಚಿಂತಿಸುತ್ತ, ಬಂದುದಕ್ಕೆ ಡಾ|| ಡಿ.ವಿ. ಗುಂಡಪ್ಪನವರನ್ನಾದರೂ ನೋಡಿ ಹೋಗೋಣವೆಂದು ಅವರ ಮನೆಯ ಕಡೆಗೆ ಹೊರಟೆ. ಪೂಜ್ಯರಾದ ಶ್ರೀಮಾನ್ ಡಿ.ವಿ.ಜಿ.ಯವರು ನನ್ನಲ್ಲಿ ವಿಶೇಷವಾದ ಪ್ರೀತ್ಯಾಭಿಮಾನಗಳನ್ನು ಇರಿಸಿ-ಕೊಂಡವರು. ಅವರೂ ವಯೋಮಾನದಿಂದ ದುರ್ಬಲರಾಗಿದ್ದರು. ನನ್ನನ್ನು ಕಂಡೊಡನೆ ಅವರ ತಮ್ಮಂದಿರಾದ ಶ್ರೀ ಡಿ.ವಿ. ರಾಮರಾಯರು ''ಇಷ್ಟು ಹೊತ್ತು ಯಜಮಾನರು ರಸ್ತೆಯ ಬದಿಯ ಮೆಟ್ಟಿಲ ಮೇಲೆ ಕುಳಿತು 'ಸ್ವಾಮಿಗಳ ಅಂತ್ಯದರ್ಶನಕ್ಕಾಗಿ ಕಾದಿದ್ದರು. ದರ್ಶನ ಮಾಡಿಕೊಂಡು ಈಗ ಒಳಗೆ ಹೋಗಿದ್ದಾರೆ.' ನೀವೂ ಒಳಗೆ ಹೋಗಿರಿ'' ಎಂದು ಕೈಮಾಡಿ ತೋರಿಸಿದರು. ನಾನು ಒಳಗೆ ಹೋಗಿ ಡಿ.ವಿ.ಜಿ.ಯವರು ಇರುತ್ತಿದ್ದ ಕೊಠಡಿಯ ಬಾಗಿಲಲ್ಲಿ ನಿಂತೆ. ಡಿ.ವಿ.ಜಿ.ಯವರು ಮಂಚದ ಮೇಲೆ ಕುಳಿತು ಏನನ್ನೋ ಧ್ಯಾನಿಸುತ್ತಿರುವಂತೆ

ತೋರಿತು. ಒಮ್ಮೆ ನನ್ನ ಕಡೆ ತಿರುಗಿದರೂ ಮೌನವಾಗಿದ್ದರು. ಸ್ವಲ್ಪ ಹೊತ್ತಿನ ಮೇಲೆ ಒಳಗೆ ಬಂದು ಕುಳಿತುಕೊಳ್ಳುವಂತೆ ಕುರ್ಚಿಯ ಕಡೆಗೆ ಕೈ ಮಾಡಿ ತೋರಿಸಿದರು. ನಾನು ಒಳಗೆ ಹೋಗಿ ಕುಳಿತೆ. ಅವರು ಏನನ್ನೂ ಹೇಳಲಿಲ್ಲ, ನಾನೂ ಮೌನವಾಗಿದ್ದೆ. ಡಿ.ವಿ.ಜಿ.ಯವರ ಕಣ್ಣಲ್ಲಿ ನೀರು ತುಂಬಿತ್ತು. ನನ್ನ ಕಡೆಗೆ ತಿರುಗಿ, "ಶರ್ಮಾ ಅವರೆ, ನನ್ನ ತಂದೆಯವರು ತೀರಿಕೊಂಡಾಗಲೂ ನಾನು ಇಷ್ಟು ಅಳಲಿಲ್ಲ. ಈ ದಿನ ಬಹಳ ಅತ್ತು ಬಿಟ್ಟೆ" ಎಂದರು. ಅನಂತರ ತಲೆದಿಂಬಿನ ಕೆಳಗೆ ಕೈಹಾಕಿ ಒಂದು ಕಾವಿ ಬಟ್ಟೆಯ ತುಂಡನ್ನು ಎಳೆದು ತೋರಿಸಿ - "ಇದು ಸ್ವಾಮಿಗಳು ಅನುಗ್ರಹಿಸಿದ ಶೇಷವಸ್ತ್ರ. ಇಷ್ಟೇ ನನಗೆ ಉಳಿದದ್ದು" ಎಂದು ಹೇಳಿ ಆ ಕಾವಿ ಬಟ್ಟೆಯ ತುಂಡನ್ನು ತಲೆಯ ಮೇಲಿಟ್ಟುಕೊಂಡರು. ಕಣ್ಣೀರು ಅವರ ಕೆನ್ನೆಯ ಮೇಲೆ ಹರಿಯಿತು. ನಾನು ಸ್ವಲ್ಪ ಹೊತ್ತು ಸ್ವಾಮಿಗಳ ವಿಷಯವಾಗಿ ಮಾತಾಡಿ ಹೊರಟು ಬಂದೆನು.

ನಿಪುಣನಾದ ಒಬ್ಬ ಶಿಲ್ಪಿಯು ಕಾಡಿನಲ್ಲಿ ಬಿದ್ದಿರುವ ಒಂದು ಶಿಲೆಯನ್ನು ತಂದು ಚಾಣದಿಂದ ಅದನ್ನು ಕೊರೆದು ತಿದ್ದಿ ತೀಡಿ ಭಕ್ತಜನ ಪೂಜ್ಯವಾದ ಒಂದು ದೇವತಾ ಮೂರ್ತಿಯನ್ನು ನಿರ್ಮಿಸುತ್ತಾನೆ. ಯಲ್ಲಂಬಳಸೆಯೆಂಬ ಹಳ್ಳಿಯಲ್ಲಿದ್ದ ಒಬ್ಬ ಬಡ ಹುಡುಗನು ತನ್ನ ಬುದ್ಧಿಬಲದಿಂದ, ಸದ್ಗುಣದ ನೆರವಿನಿಂದ, ತನ್ನನ್ನೇ ತಿದ್ದಿ ತೀಡಿ ಸಂಸ್ಕರಿಸಿ ಪರಿಷ್ಕರಿಸಿ ಮಹಾಜನ ಪೂಜ್ಯನಾದ ಗುರುಮೂರ್ತಿಯಾಗಿ ವಿರಾಜಿಸಿದನು.

ಹಿಂದೆ ಹೇಳಿದ ಹಾಗೆ ಈ ಗ್ರಂಥವು ಶಾಸ್ತ್ರದಂತೆ ಉದ್ಬೋಧಕವೂ ಕಥೆಯಂತೆ ಮನೋರಂಜಕವೂ ಆದ ಶಾಸ್ತ್ರಕಾವ್ಯ. ಶ್ರೇಯಸ್ಸನ್ನು ಬಯಸುವ ಸಮಸ್ತ ಸಜ್ಜನರೂ ಅವಶ್ಯವಾಗಿ ಓದಬೇಕಾದದ್ದು. ಈ ಕೃತಿಯ ಮುಂದಿನ ಭಾಗಗಳೂ ಶೀಘ್ರವಾಗಿ ಪ್ರಕಾಶಗೊಳ್ಳಲಿ ಎಂದು ಹಾರೈಸುತ್ತೇನೆ. ಈ ಕೃತಿಗೆ ಪ್ರಸ್ತಾವನೆಯನ್ನು ಬರೆಯುವ ಭಾಗ್ಯವನ್ನು ನನಗೆ ಒದಗಿಸಿಕೊಟ್ಟದಕ್ಕಾಗಿ ಪ್ರಕಾಶಕರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ.

ಶುಭಮಸ್ತು

**ಶಾಂತಾಯ ಸಂಯಮೀಂದ್ರಾಯ ಸಚ್ಚಿದಾನಂದ ರೂಪಿಣೇ ।**
**ಅಪೂರ್ವಕಾರ್ಯದಕ್ಷ ಶ್ರೀ ಗುರುರಾಜಾಯ ತೇ ನಮಃ ॥**

ಬೆಂಗಳೂರು
22-10-2006

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥಶರ್ಮಾ

# ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸ

## ಮುನ್ನುಡಿ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸವನ್ನು 1944ರಲ್ಲಿಯೇ ಸಂಸ್ಥಾಪಕರಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರೇ ಸ್ವತಃ ಬರೆದು ಸಿದ್ಧಗೊಳಿಸಿದ್ದರು. ಅನಂತರ ಶ್ರೀಗಳವರ ನೆಚ್ಚಿನ ಶಿಷ್ಯರಾಗಿದ್ದ ದಿ॥ ನಂಜಪ್ಪಭಾಗವತರು ಅದನ್ನು ಮತ್ತಷ್ಟು ವಿಸ್ತರಿಸಿ ಬರೆದು 1957ರ ವೇಳೆಗೆ ಸಿದ್ಧಗೊಳಿಸಿದರು. ಇವರ ಬರವಣಿಗೆಯು ತುಂಬ ವಿವರವಾಗಿದ್ದು ಎಂಟುನೂರು ಪುಟಗಳಷ್ಟು ವಿಸ್ತಾರವಾಗಿದ್ದು 1949ನೆಯ ವರ್ಷದವರೆಗಿನ ಇತಿಹಾಸವನ್ನು ಮಾತ್ರವೇ ಒಳಗೊಂಡಿತ್ತು. ಈಗಿನ ಓದುಗರ ದೃಷ್ಟಿಯಿಂದ ಹಾಗೂ ಪ್ರಕಟನೆಯ ವೆಚ್ಚದ ದೃಷ್ಟಿಯಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಇತಿಹಾಸವನ್ನು ಹೊರತರುವದು ಅನವಶ್ಯವೆಂದು ಕಂಡುಬಂದದ್ದರಿಂದ 1964ರಲ್ಲಿ ಶ್ರೀಶ್ರೀಗಳವರು ಈ ಇತಿಹಾಸಗ್ರಂಥವನ್ನು ಆದಷ್ಟೂ ಸಂಕ್ಷಿಪ್ತಗೊಳಿಸಿ ಅತ್ಯವಶ್ಯವಾದ ಘಟನೆಗಳನ್ನು ಮಾತ್ರ ಪ್ರಸ್ತಾಪಿಸಿ ಹೊಸದಾಗಿ ಬರೆಯುವಂತೆ ಕಾರ್ಯಾಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಗೆ ಅಪ್ಪಣೆ ಮಾಡಿದರು. ಅದರಂತೆ ಪಂಡಿತರು ಸಿದ್ಧಗೊಳಿಸಿ ಶ್ರೀಶ್ರೀಗಳವರೂ ಪರಾಂಬರಿಸಿ ಒಪ್ಪಿರುವ ಈ ಇತಿಹಾಸವನ್ನು ಈಗ ವಾಚಕರ ಮುಂದೆ ಇಡುತ್ತಿದ್ದೇವೆ.

ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯ ಭಾಗವು ಶ್ರೀಶ್ರೀಗಳವರ ಜೀವನಚರಿತ್ರೆಯನ್ನೂ ಎರಡನೆಯ ಭಾಗವು ಶ್ರೀಶ್ರೀಗಳವರ ಸೃಷ್ಟಿಯಾದ ಕಾರ್ಯಾಲಯದ ಪುರೋಭಿವೃದ್ಧಿಯನ್ನೂ ವರ್ಣಿಸುತ್ತದೆ. ಗುರುಭಕ್ತರೂ ಸಂಸ್ಥೆಯಲ್ಲಿ ಆದರವುಳ್ಳವರೂ ಆದ ವಾಚಕರು ಈ ಗ್ರಂಥವನ್ನು ಸ್ವಾಗತಿಸುವರೆಂದು ಆಶಿಸಲಾಗಿದೆ.

ಈ ಗ್ರಂಥದ ಎಲ್ಲ ಹಕ್ಕು ಭಾಧ್ಯತೆಗಳೂ ಎಂದಿನಂತೆ ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೇ ಸೇರಿರುತ್ತವೆ. ಲೇಖಕರಿಗೆ ಸಂಸ್ಥೆಯ ಪರವಾಗಿ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇವೆ.

ಇತಿ,

ತಾ॥ 1-1-1973 — ವೈ. ನರಸಪ್ಪ

ಹೊಳೆನರಸೀಪುರ — ಅಧ್ಯಕ್ಷರು, ಅಧ್ಯಾತ್ಮಪ್ರಕಾಶಕಾರ್ಯಾಲಯ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಬೆಂಗಳೂರು ಶಾಖೆ

ನಂ. 68, ತ್ಯಾಗರಾಜನಗರ
ಬೆಂಗಳೂರು-28

# ಶ್ರೀಶ್ರೀ ಪರಮಹಂಸ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಅನುಗ್ರಹಪತ್ರಿಕೆ

ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದವರು ಸಂಸ್ಥೆಯ 1972ನೆಯ ವರ್ಷದವರೆಗಿನ ಇತಿಹಾಸವನ್ನು ಪಂಡಿತರಿಂದ ಬರೆಯಿಸಿ ಪ್ರಕಟಿಸಿರುವದನ್ನು ನಾವು ಸಂತೋಷದಿಂದ ಸ್ವೀಕರಿಸಿದ್ದೇವೆ. ಇದನ್ನು ಬರೆದಿರುವ ಪಂಡಿತರು ನಮ್ಮಲ್ಲಿಯೇ ಶಿಷ್ಯರಾಗಿದ್ದು ವೇದಾಂತಾಭ್ಯಾಸವನ್ನು ಮಾಡಿ ಅನಂತರ ಸಂಸ್ಥೆಯಲ್ಲಿ ಇಪ್ಪತ್ತುವರ್ಷಗಳ ಕಾಲದಿಂದಲೂ ಪಂಡಿತರಾಗಿಯೂ, ಕಾರ್ಯದರ್ಶಿಗಳಿಗೆ ಸಹಾಯಕರಾಗಿಯೂ ಸೇವೆಯನ್ನು ಸಲ್ಲಿಸಿದವರಾಗಿದ್ದಾರೆ ; ಮತ್ತು ಸಂಸ್ಥೆಯ ಪರಿಚಯವನ್ನೂ ಸ್ಥಿತಿಗತಿಗಳನ್ನೂ ಚೆನ್ನಾಗಿ ಬಲ್ಲವರಾಗಿದ್ದಾರೆ. ಒಂದನೆಯ ಭಾಗದ ವಿಷಯಗಳನ್ನು ಮೂಲಪ್ರತಿಯಿಂದ ಸಂಗ್ರಹಿಸಿದ್ದಾರೆ. ಆದ್ದರಿಂದ ಈ ಇತಿಹಾಸವು ವಾಚಕರಿಗೆ ಸಂಸ್ಥೆಯ ಸ್ಥಾಪಕರ ಪರಿಚಯ ಹಾಗೂ ಸಂಸ್ಥೆಯ ವಿಚಾರಗಳನ್ನು ಚೆನ್ನಾಗಿ ತಿಳಿಸುವದರಲ್ಲಿ ಸಂದೇಹವಿಲ್ಲ. ಮಹಾಜನರು ಈ ಗ್ರಂಥವನ್ನೂ ಕಾರ್ಯಾಲಯದ ಉಳಿದ ಗ್ರಂಥಗಳಂತೆಯೇ ಗೌರವಿಸುವರೆಂದು ನಾವು ವಿಶ್ವಾಸವನ್ನು ಹೊಂದಿದ್ದೇವೆ.

ಈ ಲೇಖಕರು ಇನ್ನೂ ಹೆಚ್ಚಿನ ಗ್ರಂಥಗಳನ್ನು ರಚಿಸಿ ಚಿರಕಾಲ ಸಂಸ್ಥೆಯ ಸೇವೆಯನ್ನು ಮಾಡುತ್ತಿರಲೆಂದೂ ಭಗವಂತನು ಇವರಿಗೆ ಸಕಲಸನ್ಮಂಗಳಗಳನ್ನೂ ಉಂಟುಮಾಡಲೆಂದೂ ನಾವು ನಾರಾಯಣಸ್ಮರಣಪೂರ್ವಕವಾಗಿ ಹರಸುತ್ತೇವೆ.

ಬೆಂಗಳೂರು-28
ತಾ|| 24-12-72

ಶ್ರೀಶ್ರೀಗಳವರ ಅಪ್ಪಣೆಯಂತೆ
ಕಾರ್ಯದರ್ಶಿ
(ಅ.ಪ್ರ.ಕಾ.)

# ಬಿನ್ನಹ

ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ಈ ಇತಿಹಾಸಗ್ರಂಥರಚನೆಯ ಕಾರ್ಯದಲ್ಲಿ ಕೈಹಾಕಿದೆನು. ಗುರುಕೃಪೆಯಿಂದಲೇ ಇದು ಪೂರ್ಣಗೊಂಡು ಬೆಳಕನ್ನು ಕಂಡಿದೆ. ಇದರಲ್ಲಿರುವ ವಿಷಯಗಳೂ ಬರವಣಿಗೆಯೂ ಎಲ್ಲವೂ ಗುರುಪ್ರೇರಣೆಯಿಂದಲೇ ಹೊರಬಂದವುಗಳು. ನಾವು ನಿಮಿತ್ತಮಾತ್ರ. ಆದ್ದರಿಂದ ಈ ಕೃತಿಯನ್ನು ಗುರುಚರಣಾರವಿಂದಳಿಗೇ ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದೇನೆ.

''ಅಥವಾ ಕೃತವಾಗ್ದ್ವಾರೇ'' ಎಂದು ಮಹಾಕವಿ ಕಾಳಿದಾಸನು ಹೇಳಿರುವಂತೆ ಶ್ರೀಶ್ರೀಗಳವರು ಸಿದ್ಧಗೊಳಿಸಿಟ್ಟಿದ್ದ ಕೃತಿಯ ಪ್ರತಿರೂಪವನ್ನು ಮಾತ್ರ ನಾನು ವಾಚಕರ ಮುಂದಿಡುತ್ತಿದ್ದೇನೆ. ಇದರಲ್ಲಿರಬಹುದಾದ ಲೋಪದೋಷಗಳನ್ನು ತಿದ್ದಿ ಉಪಕಾರವನ್ನು ಮಾಡುವಂತೆ ಸುಜ್ಞರಾದ ವಾಚಕರಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

ಗುರುಚರಿತ್ರೆಯನ್ನು ಪೂರ್ಣವಾಗಿ ವರ್ಣಿಸುವಂಥ ಯೋಗ್ಯತೆ ನನಗೆ ಇಲ್ಲವಾದರೂ ಗುರುವಿನ ಆಜ್ಞೆಯು ಮೀರಲಸಾಧ್ಯವಾದುದೆಂಬ ಭಾವನೆಯಿಂದ ಅವರ ಅಪ್ಪಣೆಯಂತೆ ಈ ಪ್ರಬಂಧವನ್ನು ಬರೆದಿದ್ದೇನಾದ್ದರಿಂದ ವಾಚಕರು ಸಹಾನುಭೂತಿಯಿಂದ ಪರಿಶೀಲಿಸಿ ನನ್ನನ್ನು ಆಶೀರ್ವದಿಸಬೇಕೆಂದು ಬೇಡುತ್ತೇನೆ.

ಸಜ್ಜನವಿಧೇಯ

ಹೊಳೆಸೀಪುರ
ತಾ॥ 1-1-1973

ಲೇಖಕ
ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

# ಶ್ರೀಗುರುಚರಿತಾಮೃತ ಮುನ್ನುಡಿ

ಮೊದಲನೆಯ ಸಲ 1973ರಲ್ಲಿ ಪ್ರಕಟಿಸಿದ್ದ 'ಕಾರ್ಯಾಲಯದ ಇತಿಹಾಸ' ಗ್ರಂಥದ ಪತಿಗಳೆಲ್ಲವೂ ಮಾರಾಟವಾಗಿದ್ದು ಭಕ್ತರುಗಳು ಶ್ರೀಶ್ರೀಗಳವರ ಜೀವನಚರಿತ್ರೆಯ ಪುಸ್ತಕಗಳನ್ನು ಕೇಳುತ್ತಿದ್ದುದರಿಂದ ಈಗ ಗ್ರಂಥದ ಹೆಸರನ್ನು ಬದಲಾಯಿಸಿ ಹಾಗೂ ಶ್ರೀಶ್ರೀಗಳವರ ಮಹಾಸಮಾಧಿಯವರೆಗಿನ ವೃತ್ತಾಂತಗಳನ್ನೂ ಅಳವಡಿಸಿ 'ಶ್ರೀಗುರುಚರಿತಾಮೃತ'ವೆಂಬ ಹೆಸರಿನಿಂದಈಗ ಪ್ರಕಟಿಸಲಾಗಿದೆ. ಇದರೊಡನೆಯೇ ಕಾರ್ಯಾಲಯದ ಇತಿಹಾಸವೂ ಬೆರೆತುಕೊಂಡಿದೆ. ಹಿಂದಿನ ಮುದ್ರಣ ಗ್ರಂಥವನ್ನು ಮತ್ತೊಮ್ಮೆ ಶೋಧಿಸಿ ನ್ಯೂನಾತಿರೇಕಗಳನ್ನು ಸರಿಪಡಿಸಿ ಸಾಧ್ಯವಾದಮಟ್ಟಿಗೂ ಸಂಸ್ಕರಿಸಿ ಈ ಮುದ್ರಣವನ್ನು ಹೊರತರಲಾಗಿದೆ. ಮಹಾಜನರು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ಸವಿನಯಪ್ರಾರ್ಥನೆಗಳು.

ಶ್ರೀಶ್ರೀಗಳವರನ್ನು ಕುರಿತ ಈ ಗ್ರಂಥದಲ್ಲಿ ಯಾವದೇ ಮಹಿಮೆ- ಪವಾಡ- ಸಿದ್ಧಿಗಳ ಪ್ರಸ್ತಾಪವಿರುವದಿಲ್ಲ. ಅವರು ಎಲ್ಲರಂತೆಯೇ ಸಾಮಾನ್ಯ ಮನುಷ್ಯರಾಗಿ ಬಾಳಿದರೂ ಜೀವನದ ಬಹುಭಾಗವನ್ನು ಅಧ್ಯಾತ್ಮ ವಿಚಾರಕ್ಕಾಗಿಯೇ ವಿನಿಯೋಗಿಸಿ ಭಗವದನುಗ್ರಹದಿಂದ ಆಯಾ ಕಾಲಕ್ಕೆ ಒದಗಿದ ಘಟನೆಗಳನ್ನೆಲ್ಲ ಅಧ್ಯಾತ್ಮಸಾಧನೆಗೇ ಪರಿವರ್ತಿಸಿಕೊಂಡು ಕನ್ನಡ ನಾಡಿನ ಜನರ ಕಲ್ಯಾಣಕ್ಕಾಗಿ ಕನ್ನಡ ಭಾಷೆಯಲ್ಲಿಯೇ ಸುಮಾರು 160 ಅಧ್ಯಾತ್ಮಗ್ರಂಥಗಳನ್ನು ವಿರಚಿಸಿ ಪ್ರಕಟಿಸಿದರು. 'ಅಧ್ಯಾತ್ಮಪ್ರಕಾಶ' ವೆಂಬ ಮಾಸಪತ್ರಿಕೆಯನ್ನು 45 ವರ್ಷಗಳ ಕಾಲ ನಿರಂತರವಾಗಿ ನಡೆಯಿಸಿದರು. ಅವರ ಅನುಗ್ರಹಾಶೀರ್ವಾದಗಳಿಂದ ಪತ್ರಿಕೆಯು ಈಗಲೂ ಪ್ರಕಟವಾಗುತ್ತಿದ್ದು ಅಧ್ಯಾತ್ಮ ವಿಚಾರಪ್ರಿಯರ ಮೆಚ್ಚುಗೆಯನ್ನು ಗಳಿಸಿದೆ. ಕಾರ್ಯಾಲಯವು ಅವರ ಕೃತಿಗಳನ್ನು ಮತ್ತೆಮತ್ತೆ ಪ್ರಕಟಿಸುತ್ತಿದೆ. ಶ್ರೀಗಳವರು ಸಂಸ್ಕೃತ-ಇಂಗ್ಲಿಷ್ ಭಾಷೆಗಳಲ್ಲಿಯೂ ಬರೆದಿರುವ ಸುಮಾರು 40 ಗ್ರಂಥಗಳು ದೇಶ-ವಿದೇಶಗಳಲ್ಲೆಲ್ಲ ಪ್ರಚಾರವಾಗಿದ್ದು ಅಧ್ಯಾತ್ಮವಿಚಾರಕರ ಹಸಿವನ್ನು ಅಡಗಿಸಿವೆ. ಹೀಗೆ ಸರಸ್ವತೀ ಸೇವೆಯನ್ನೇ ಜೀವನದ ತಪಸ್ಸಾಗಿ ಸ್ವೀಕರಿಸಿ ಗ್ರಂಥರಚನೆ, ಪ್ರವಚನ, ಉಪನ್ಯಾಸಾದಿಗಳ ಮೂಲಕ ಮಾಡುತ್ತಾ 96 ವರ್ಷಗಳ ಪೂರ್ಣಜೀವನವನ್ನು ಸಾರ್ಥಕಗೊಳಿಸಿಕೊಂಡಿರುವ ಶ್ರೀಶ್ರೀಗಳವರ ಜೀವನಾದರ್ಶವನ್ನು ವಾಚಕರು ಈ ಗ್ರಂಥವನ್ನು ಓದಿಯೇ ತಿಳಿಯಬೇಕು. ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ದಿ|| ಡಿ.ವಿ. ಗುಂಡಪ್ಪನವರು ಶ್ರೀಶ್ರೀಗಳವರನ್ನು 'ಪುರುಷಸರಸ್ವತಿ' ಎಂದೇ ಕರೆದಿದ್ದಾರೆ. ಇಂಥ ಮಹನೀಯರ ದಿವ್ಯಚರಿತ್ರೆಯನ್ನು ಓದಿ ವಾಚಕರು ಧನ್ಯರಾಗಬೇಕೆಂದು ಪ್ರಾರ್ಥಿಸಲಾಗಿದೆ.

5-1-1997 ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

# ಶ್ರೀಶ್ರೀಗಳವರ (ಸ್ವಹಸ್ತ) ಆತ್ಮಚರಿತ್ರೆ
## ವಿಷಯಾನುಕ್ರಮಣಿಕೆ


| | ಪುಟಗಳು |
|---|---|
| ಪ್ರಕಾಶಕರ ಮುನ್ನುಡಿ | 3 |
| ಎರಡನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ | 6 |
| ಪ್ರಸ್ತಾವನೆ (ವಿದ್ವಾನ್ ಎನ್. ರಂಗನಾಥಶರ್ಮ) | 7 |
| ಮುನ್ನುಡಿ - ಕಾರ್ಯಾಲಯದ ಇತಿಹಾಸ | 15 |
| ಮುನ್ನುಡಿ - ಶ್ರೀಗುರುಚರಿತಾಮೃತ | 18 |

**ಭಾಗ-1**

| | | |
|---|---|---|
| 1. | ಗ್ರಂಥಕ್ಕೆ ಪ್ರವೇಶ | 1 |
| 2. | ಬಾಲ್ಯ-ಯಳ್ಳಂಬಳಸೆ | 6 |
| 3. | ವಿದ್ಯಾಭ್ಯಾಸ - ಯಳ್ಳಂಬಳಸೆ | 20 |
| 4. | ಯಳ್ಳಂಬಳಸೆಯ ಜನಜೀವನ | 32 |
| 5. | ವಿದ್ಯಾಭ್ಯಾಸ - ಮೂಡುಗೆರೆ | 42 |
| 6. | ವಿದ್ಯಾಭ್ಯಾಸ - ಚಿಕ್ಕಮಗಳೂರು | 46 |
| 7. | ವಿದ್ಯಾಭ್ಯಾಸ - ತರೀಕೆರೆ (1893-95) | 53 |
| 8. | ವಿದ್ಯಾಭ್ಯಾಸ - ಹಾಸನ (1896) | 72 |
| 9. | ವಿದ್ಯಾಭ್ಯಾಸ - ಚಿಕ್ಕಮಗಳೂರು (1897-1899) | 77 |
| 10. | ಚಿಕ್ಕಮಗಳೂರಿನಲ್ಲಿ ಹೊಸ ಅನುಭವಗಳು | 89 |
| 11. | ಚಿಕ್ಕಮಗಳೂರಿನ ವಿದ್ಯಾಭ್ಯಾಸ ಪರಿಸಮಾಪ್ತಿ | 104 |
| 12. | ಪುನಃ ಪರೀಕ್ಷೆ - ಬೆಂಗಳೂರು | 111 |
| 13. | ಬೆಂಗಳೂರಿನಲ್ಲಿ ವಿದ್ಯಾಭ್ಯಾಸ (1900-1901) | 119 |
| 14. | ಕಡೂರು ಓವರ್ಸಿಯರ್ | 132 |
| 15. | ಮತ್ತೆ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ (1903) | 136 |
| 16. | ಓವರ್ಸಿಯರಿಗೆ ವಿದ್ಯಾಭ್ಯಾಸ ಇಲಾಖೆಯ ಒಲವು | 151 |
| 17. | ವಿದ್ಯಾಭ್ಯಾಸದ ಇಲಾಖೆಯ ಪ್ರಥಮಾನುಭವಗಳು | 163 |
| 18. | ವಿದ್ಯಾಭ್ಯಾಸದ ಇಲಾಖೆಯಲ್ಲಿ ಖಾಯಂ ನೌಕರಿ | 170 |
| 19. | ಹೊಸದುರ್ಗದಲ್ಲಿ (1906) | 180 |

| | | |
|---|---|---|
| 20. | ಹೊಳಲ್ಕರೆ ಎರಡನೆಯ ಸಲಕ್ಕೆ (1906-1909) | 184 |
| 21. | ದಾವಣಗೆರೆ - ಭಾಷ್ಯಶಾಂತಿ (1909-1911) | 196 |
| 22. | ದಾವಣಗೆರೆ ಹರಿಹರ - ಭಾಷ್ಯಪಾಠ (1911) | 217 |
| 23. | ದಾವಣಗೆರೆ - ಗೋಂದಾವಳಿಯ ಮಹಾರಾಜರ ಅನುಗ್ರಹ | 226 |
| 24. | ದಾವಣಗೆರೆ - ಸತ್ಸಂಗದ ಔತ್ಸುಕ್ಯ | 241 |
| 25. | ಕಳೂರುಕಟ್ಟೆ(ಹೊಸನಗರ) ಅನಿಚ್ಛಾಪ್ರಾರಬ್ಧದಿಂದ ಕ್ಷೇತ್ರಯಾತ್ರೆ (1912-14) | 252 |
| 26. | ಕಳೂರು ಕಟ್ಟೆಯಿಂದ ದಾವಣಗೆರೆಗೆ, ದಾವಣಗೆರೆಯಿಂದ ಹೊಳಲ್ಕರೆಗೆ (1914) | 273 |
| 27. | ಮೂರನೆಯ ಸಲಕ್ಕೆ ಹೊಳಲ್ಕರೆಗೆ (1914-1915) | 280 |
| 28. | ಹರಿಹರ - ಎರಡನೆಯ ಸಲಕ್ಕೆ | 285 |
| 29. | ಹೊಸದುರ್ಗ-ಎರಡನೆಯ ಸಲಕ್ಕೆ-ನಿತ್ಯಸಂಚಾರ (1917) | 292 |
| 30. | ಬೆಂಗಳೂರಿನಲ್ಲಿ (1917-1920) | 295 |
| 31. | ಮದ್ದಗಿರಿ (1920-1921) | 337 |
| 32. | ಮತ್ತೆ ಬೆಂಗಳೂರು (1921-1922) | 347 |
| 33. | ಬೆಂಗಳೂರಿನಿಂದ ಹೊರಗೆ ಕೆಲಕಾಲ (1922) | 364 |
| 34. | ಬೆಂಗಳೂರು ಸಂಸ್ಕೃತ ಕಾಲೇಜ್ (1923-1927) | 370 |
| 35. | ಕಾರ್ಯಾಲಯದ ಕ್ರಮಬದ್ಧವಾದ ಚಟುವಟಿಕೆಗಳ ಆರಂಭ (1927-1932) | 383 |
| 36. | ಕಾರ್ಯಾಲಯದ ಮುನ್ನಡೆ (1933-1937) | 398 |
| 37. | ಹೊಳೆನರಸೀಪುರದಲ್ಲಿ ಸಂಪಾದಕರು (1937-1938) | 413 |
| 38. | ಕಾರ್ಯಾಲಯವು ಹೊಳೆನರಸೀಪುರಕ್ಕೆ ಬಂದ ಎರಡು ವರ್ಷ (1938-1939) | 418 |
| 39. | ಹೊಸಚಟುವಟಿಕೆಗಳು (1940-1944) | 426 |
| 40. | ವ್ಯಕ್ತಾವ್ಯಕ್ತ ಕಾರ್ಯಾಲಯ (1945-1946) | 450 |
| 41. | ಕಾರ್ಯಾಲಯದ ಹೂವು ಅರಳಿಕೊಂಡದ್ದು (1947-1948) | 467 |
| 42. | ರಾಯರ ತುರೀಯಾಶ್ರಮ ಸ್ವೀಕಾರ (1948) | 472 |
| 43. | ಶ್ರೀಶ್ರೀಗಳವರ (ಸ್ವಹಸ್ತ) ಬರವಣಿಗೆ | 477 |

# ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ

## ಭಾಗ - 1

॥ ಲಕ್ಷ್ಮೀನಾರಾಯಣಾಭ್ಯಾಂ ನಮಃ ॥
॥ ಶ್ರೀರಾಮಾಯ ನಮಃ ॥ ನಮೋ ಗುರುಭ್ಯಃ ॥

## 1. ಗ್ರಂಥಕ್ಕೆ ಪ್ರವೇಶ

### ಅ. ಗ್ರಂಥದ ಉದ್ದೇಶ :

ಈ ಪುಸ್ತಕವನ್ನು ಓದುವವರಿಗೆ ಕೆಲವು ಮೊದಲ ಮಾತುಗಳನ್ನು ಹೇಳಬೇಕಾಗಿರುತ್ತದೆ. ಇದೊಂದು ಬರಿಯ ವರದಿಯಲ್ಲ, ಕೆಲವೊಂದು ಜನರ ಜೀವಂತಘಟನೆಗಳು. ಇದರಲ್ಲಿ ನನ್ನ ಸ್ವಂತ ಜೀವನದ ಘಟನೆಗಳೂ ಉಲ್ಲೇಖಿತವಾಗಿರುತ್ತವೆ. ಇದು ಕೇವಲ ನನ್ನ ಆತ್ಮಕಥೆಯೂ ಅಲ್ಲ. ಒಂದು ಮನೆ ಎಂದರೆ ಇಟ್ಟಿಗೆ, ಗಾರೆ, ಮರಮಟ್ಟುಗಳು ಮಾತ್ರವೇ ಎಂದು ಎಣಿಸಿದರೆ ಎಷ್ಟು ತಪ್ಪಾಗುವುದೋ, ಹಾಗೆ ಈ ಗ್ರಂಥವು ಕೇವಲ ಆತ್ಮಚರಿತ್ರೆ ಅಥವಾ ಆತ್ಮಕಥೆ ಎಂದು ಯಾರಾದರೂ ಎಣಿಸಿದರೆ ಅಷ್ಟೇ ತಪ್ಪಾಗುವದು. ಇಟ್ಟಿಗೆ, ಗಾರೆ, ಮುಂತಾದವು ಮನೆಕಟ್ಟಲು ಅತ್ಯವಶ್ಯವಾಗಿರುವಂತೆ, ಈ ಗ್ರಂಥಕ್ಕೆ ತುಂಬಾ ಜನರ ಪಾತ್ರಗಳು ಅತ್ಯವಶ್ಯವಾಗಿರುತ್ತವೆ. ಆದರೆ ಇಟ್ಟಿಗೆ, ಗಾರೆ ಮುಂತಾದವುಗಳಿಗೆ ಮನೆಯ ವಿಶಾಲತೆ, ಮನೆಯಲ್ಲಿರುವವರಿಗೆ ಒದಗಿಸುವ ಸೌಕರ್ಯ ಮುಂತಾದವುಗಳನ್ನು ಉಂಟುಮಾಡುವದಾಗಿ ಮಾತ್ರ ಬೆಲೆ ಇರುವಂತೆ, ಇಲ್ಲಿ ವರದಿಯೇ ಮುಂತಾದವುಗಳಿಗೂ ಗ್ರಂಥದ ಮುಖ್ಯ ಉದ್ದೇಶಕ್ಕೆ ಅಂಗವಾಗಿ ಮಾತ್ರವೇ ಬೆಲೆಯಿರುತ್ತದೆ ಅಷ್ಟೇ.

ಈ ಗ್ರಂಥದಲ್ಲಿ ನಾನು ಸ್ಪಷ್ಟಗೊಳಿಸಬೇಕೆಂದಿರುವ ಮುಖ್ಯ ವಿಷಯಗಳಿಗೂ, ಪ್ರಪಂಚದಲ್ಲಿ ನಡೆಯುತ್ತಿರುವ ಅತ್ಯಲ್ಪವಾದ ಘಟನೆಗಳಿಗೂ ಭಗವಂತನು ಅನುಗ್ರಹಮಾಡಿ ಕೊಟ್ಟಿರಬೇಕೆಂಬುದು, ಹಲವು ಹನಿಗಳು ಕೂಡಿದರೆ ಹಳ್ಳವಾಗುವಂತೆ, ಇಲ್ಲಿಯೂ ಕೂಡ ಸಣ್ಣ ಸಣ್ಣ ಘಟನೆಗಳನ್ನು ಭಗವಂತನು ಕೂಡಿಸಿ ಜೋಡಿಸಿಕೊಂಡು ತನ್ನ ಲೀಲೆಗೆ ಉಪಕರಣವನ್ನು ಮಾಡಿಕೊಳ್ಳುವನು. ಆತನ ಲೀಲಾರೂಪವಾದ ನಾಟಕವು ಸ್ವತಂತ್ರವಾಗಿ

ನಡೆದಿರುತ್ತದೆ. ಅದಕ್ಕೆ ಆದಿಯಿಲ್ಲ, ಅಂತ್ಯವಿಲ್ಲ. ಅದಕ್ಕೆ ಎಷ್ಟು ಅಂಕಗಳಿಂದ ಕೂಡಿದೆಯೋ, ಒಂದೊಂದು ಅಂಕದಲ್ಲಿ ಎಷ್ಟೆಷ್ಟು ದೃಶ್ಯಗಳಿರುವವೋ, ಒಂದೊಂದು ದೃಶ್ಯದಲ್ಲಿ ಎಷ್ಟೆಷ್ಟು ಪಾತ್ರಗಳು ಅಭಿನಯಿಸುವವೋ ಅದನ್ನು ಯಾರೊಬ್ಬರೂ ನಿಶ್ಚಯಿಸಿ ಹೇಳಲಾಗುವದಿಲ್ಲ. ಏಕೆಂದರೆ, ಬ್ರಹ್ಮಾದಿ ಸ್ತಂಬಪರ್ಯಂತವಾದ ಪ್ರಾಣಿಗಳೆಲ್ಲವೂ ತಿಳಿದೋ ತಿಳಿಯದೆಯೋ ಈ ನಾಟಕದಲ್ಲಿ ಪಾತ್ರವನ್ನು ವಹಿಸಿರುವವು. ತಿಳಿವಳಿಕೆಯಿಂದ ವಹಿಸುವವರು ತಮ್ಮ ತಮ್ಮ ಪಾತ್ರಗಳನ್ನು ಅಭಿನಯಿಸುತ್ತಲೂ ಇರುವದಲ್ಲದೆ, ಈ ಅದ್ಭುತವಾದ ನಾಟಕವನ್ನು ನೋಡಿ ಆನಂದಿಸುತ್ತಲೂ ಇರುವರು. ಹೀಗೆ ಪಾತ್ರಗಳೇ ನಾಟಕದ ನೋಟಕರೂ ಆಗಿರುವದರಿಂದಲೂ, ನಾವು ನಾಟಕವನ್ನು ನೋಡುತ್ತಿರುವೆವೆಂದು ಭಾವಿಸುವಾಗಲೂ ತಮಗೆ ಅದರ ಅರಿವಿಲ್ಲದೆಯೇ ಬೇರೆಯ ಕೆಲವು ಪಾತ್ರಗಳನ್ನು ಅಭಿನಯಿಸುತ್ತಲೂ ಇರುವದರಿಂದಲೂ, ಈ ದೃಶ್ಯವು ಇಲ್ಲಿಗೆ ಮುಗಿಯಿತೋ ಇಲ್ಲವೋ ! ನನ್ನ ಪಾತ್ರದ ಅಭಿನಯವು ಮುಗಿದಿದೆಯೋ ಇಲ್ಲವೋ ! ಇಡೀ ಅಂಕವು ಎಂದಿಗೆ ಮುಗಿದು ಅಂಕಪರದೆಯು ಯಾವಾಗ ಬೀಳುವದೋ! ಎಂಬುದು ಯಾರೊಬ್ಬನಿಗೂ ಮನಸ್ಸಿಗೆ ಹೊಳೆಯದೆ ಇರುವದು ; ಮಾನವರಾದ ನಮ್ಮಗಳ ಪಾಡು ಹಾಗಿರಲಿ, ದೇವತೆಗಳು, ಋಷಿಗಳು ಆ ಭಗವಂತನ ಇಂಥ ಅತ್ಯದ್ಭುತವಾದ ಲೀಲಾನಾಟಕದ ಪರಿಪೂರ್ಣಾನುಭವವಿಲ್ಲದವರಾಗಿರುವರು. ಇಂಥ ಅತ್ಯದ್ಭುತವಾದ ಲೀಲಾನಾಟಕದಲ್ಲಿ ಒಂದು ದೃಶ್ಯಭಾಗವನ್ನು ಅಲ್ಪನಾದ ನಾನು ಕಂಡಿರುವಷ್ಟುಮಟ್ಟಿಗೆ, ನೆನಪಿರುವಮಟ್ಟಿಗೆ, ತಿಳಿಸಬಲ್ಲುವಷ್ಟರಮಟ್ಟಿಗೆ - ಈ ಗ್ರಂಥದಲ್ಲಿ ಇಡಬೇಕೆಂದು ಹವಣಿಸಿರುವೆನು. ಈ ಹವಣಿಕೆಯು ನಾಟಕ ಸೂತ್ರಧಾರಿಯಾದ ಆ ಮಹಾಮಾಯಾವಿಯಾದ ಭಗವಂತನ ಸಂಕಲ್ಪದಿಂದಲೇ ಆಗಿರುವದರಿಂದ ಇದರ ಗುಣದೋಷಗಳಲ್ಲಿ ನನಗೆ ಎಳ್ಳಷ್ಟೂ ಹೊಣೆಗಾರಿಕೆ ಇರುವದಿಲ್ಲ. ಅಥವಾ ಭಗವಂತನ ಶುಭದೃಷ್ಟಿಯಲ್ಲಿ ಇಲ್ಲಿಯೂ ಗುಣಗಳೇ ಇರುವದರಿಂದ ದೋಷಗಳು ಕಥೆಯನ್ನು ಹೇಳುವ ನೋಟಕನಾದ ನನ್ನ ಮಡಿಲಿಗೆ ಬಿದ್ದಿದೆ. ಅದು ಯುಕ್ತವೇ ಆಗಿರುವದು. ಭಾವುಕರಾದ ಪಾಠಕ ಮಹಾಶಯರು ಭಗವಂತನ ಗುಣಧರ್ಮಗಳ ಲೀಲಾನಾಟಕದ ಒಂದು ದೃಶ್ಯದ ಭಾಗವಿದೆಂಬ ದೃಷ್ಟಿಯಿಂದಲೇ ಈ ಗ್ರಂಥವನ್ನು ಓದಿ, ಇದ್ದ ಸವಿಯನ್ನನುಭವಿಸಿ ನನ್ನನ್ನು ಕೃತಕೃತ್ಯನಾಗಿ ಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ.

## ಆ. ಕಥೆಯ ಸಂವಿಧಾನಕ್ರಮ :

ಇದು ನಾನು ನೋಡಿದ ನಾಟಕದ ದೃಶ್ಯ ಭಾಗವೊಂದರ ವಿವರಣೆ ಯಾಗಿದ್ದರೂ, ನಾನು ಮತ್ತೊಬ್ಬರಿಗೆ ಹೇಳುವಾಗ ಇದೊಂದು ಆಖ್ಯಾನಕವೇ ಆಗುವದು ಸಹಜವಾಗಿದೆ. ಕನ್ನಡದಲ್ಲಿ ಈ ಬಗೆಯ ಆಖ್ಯಾನಗಳನ್ನು ಕಥೆ ಎಂದು ಕರೆಯುವ ವಾಡಿಕೆಯಿದೆ. ಆದರೆ ಇದನ್ನು ಕಟ್ಟುಕಥೆ ಎಂದು ಮಾತ್ರ ಯಾರೂ ಬಗೆಯಬಾರದು. ಏಕೆಂದರೆ ಇದರಲ್ಲಿ ಅಲ್ಲಾವುದ್ದೀನನ ಅದ್ಭುತದೀಪಸ್ತಂಭದ ಕಥೆಯಂತೆ ಯಾವ ಅಸಂಭಾವಿತಘಟನೆಗಳೂ ಇರುವದಿಲ್ಲ. ನಾನೆಂದೂ ಕಾದಂಬರಿಯನ್ನು ಬರೆದು ಒಳ್ಳೆಯ ಕಥೆಗಾರನೆಂದೆನಿಸಿಕೊಳ್ಳಬೇಕೆಂಬ ಹಂಬಲವೂ ನನಗೆ ಇರುವದಿಲ್ಲ. ಹೀಗಿದ್ದರೂ ನಿಜವಾದ ಕಥೆಯಲ್ಲಿ ಕಟ್ಟುಕಥೆಗಿಂತಲೂ ಹೆಚ್ಚು ಅಚ್ಚರಿಯನ್ನು ತಂದುಕೊಡುವ ಘಟನೆಗಳಿರಬಹುದು. ಆದ್ದರಿಂದ ಈ ಕಥೆಯಲ್ಲಿಯೂ ಅಂಥ ಘಟನೆಗಳು ಕೆಲವು ಕಂಡುಬರುವವು. ಅವುಗಳನ್ನು ಅಲ್ಲಲ್ಲಿ ಮುಚ್ಚುಮರೆಯಿಲ್ಲದೆ ನಾನು ಓದುಗರ ಮುಂದೆ ಇಡುವೆನು. ಶ್ರದ್ಧೆಯಿಂದ ಓದುವ ಆಸ್ತಿಕರಿಗೆ ಮಾತ್ರ ಅವುಗಳ ಅರ್ಥವು ಹೃದಯಕ್ಕೆ ತಾಕುವದು. ಮಿಕ್ಕವರಿಗೆ ಅವುಗಳಲ್ಲಿ ಯಾವ ಹೆಚ್ಚುಗಾರಿಕೆಯೂ ತೋರದಿದ್ದರೆ ಅದು ಸ್ವಾಭಾವಿಕವೇ ತಾನೆ ?.

ಈ ಕಥೆಯಲ್ಲಿ ಬರುವ ಪಾತ್ರಗಳ ವರ್ಣನೆಯು ಪಾತ್ರಗಳಲ್ಲೊಬ್ಬನಾದ ನನ್ನ ದೃಷ್ಟಿಯಿಂದ ಬರೆದದ್ದು. ಇಲ್ಲಿ ಕಾಣಬರುವ ಪಾತ್ರಗಳನ್ನು ವಹಿಸಿರುವ ಮಹನೀಯರು ಇನ್ನೂ ಹಲವರು ಜೀವಂತರಾಗಿರುತ್ತಾರೆ; ಅವರಿಗೆ ಈ ನನ್ನ ದೃಷ್ಟಿಕೋನದಿಂದ ಅಳೆದುಕೊಂಡು ಬರೆದಿರುವ ಕಥಾಸಂದರ್ಭವು ಹೀಗೆಯೇ ಕಾಣದಿರಬಹುದು. ಒಂದು ಮನೆಯನ್ನು ಬೇರೆಬೇರೆಯ ಕಡೆಗಳಿಂದ ನೋಡಿ ತೆಗೆದ ಭಾವಚಿತ್ರಗಳು ಯಾವುವೂ ಒಂದರಂತೆ ಇನ್ನೊಂದು ಇರಲಾರವು ; ಆದ ಮಾತ್ರಕ್ಕೆ ಅವು ಅದೇ ಮನೆಯ ಚಿತ್ರಗಳಲ್ಲವೆಂದು ಹೇಳುವದಕ್ಕೆ ಆಗಲಾರವಷ್ಟೆ ; ಅದರಂತೆ ಇಲ್ಲಿಯೂ ತಿಳಿಯಬೇಕು. ಯಾರಾದರೂ ಸ್ನೇಹಿತರ ಅಥವಾ ಮತ್ತೆ ಬೇರೆಯ ಮಹಾಶಯರ ಗುಣಕಥನವನ್ನಾಗಲಿ ನಾನು ಈ ಗ್ರಂಥದಲ್ಲಿ ಸೇರಿಸಿದ್ದರೆ ಅದು ಅಪೂರ್ಣವಾಗಿರುವದೆಂಬುದು ನಿರೀಕ್ಷಣೀಯವೇ ಆಗಿರುತ್ತದೆ. ಏಕೆಂದರೆ ನಾನು ತಿಳಿದಮಟ್ಟಿಗೆ, ಅದರಲ್ಲಿಯೂ ಈ ಕಥೆಗೆ ಸಂಬಂಧವೆಂದು ತೋರುವ ಮಟ್ಟಿಗೆ, ಆಯಾ ವರ್ಣನೆಯನ್ನು ಇಲ್ಲಿ ಸೇರಿಸಿರುತ್ತೇನೆ. ಜೀವಂತರಾಗಿರುವವರ ವಿಷಯವಾಗಿ ನಾನು ಬರೆದಿರುವ ವಿಷಯಗಳು ಸರಿಯಲ್ಲವೆಂದು ಅವರಿಗೆ ತೋರಿದರೆ ಅದು ನನ್ನ ಮಬ್ಬುಗಣ್ಣಿನಿಂದ ನೋಡಿ ತೆಗೆದ ಚಿತ್ರವೆಂದು ಬಗೆದು ಅವರು ನನ್ನನ್ನು ಕ್ಷಮಿಸುವರೆಂದು ನನ್ನ ನಂಬಿಕೆ. ಕೆಲವು ಪಾತ್ರಗಳ ವರ್ಣನೆಯನ್ನು ಮಾಡುವಾಗ

ನಾನು ತಿಳಿಯದೆ ಕಹಿಯಾದ ಮಾತುಗಳನ್ನು ಬರೆಯಬಹುದು. ಅವುಗಳನ್ನೆಲ್ಲಾ ಅವರು ಉದಾರಮನಸ್ಸಿನಿಂದ ಕ್ಷಮಿಸಬೇಕೆಂದು ಬೇಡುತ್ತೇನೆ. ನಾನು ಮನಃಪೂರ್ವಕವಾಗಿ ಯಾರ ವಿಷಯಕ್ಕೂ ಯಾವುದೊಂದು ಬಿಡಿ ಮಾತನ್ನೂ ಹೇಳಬಾರದೆಂದು ಸಂಕಲ್ಪಿಸಿಕೊಂಡಿರುತ್ತೇನೆ. ಭಗವಂತನು ಆ ಸಂಕಲ್ಪವನ್ನು ಈಡೇರಿಸಿಕೊಡಲಿ ! ಇಲ್ಲಿ ಉಪಯೋಗಿಸಿರುವ ಸಂಕೇತಾಕ್ಷರಗಳು, ಅರ್ಥಗಳು ನನ್ನ ಮಿತ್ರಮಂಡಲಿಯಲ್ಲಿ ಕೆಲವರಿಗೆ ತಿಳಿದಿರಬಹುದು. ಅವರು ಯಾರೂ ಬಹಿರಂಗವಾಗಿ ಈ ಸಂಕೇತಗಳ ವಿವರವನ್ನು ಕೊಡಬಾರದೆಂದು ನಾನು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಆ ಹೆಸರುಗಳನ್ನು ನಾನು ಮನಃಪೂರ್ವಕವಾಗಿಯೇ ಪೂರ್ಣವಾಗಿ ಬರೆಯದೆ ಬಿಟ್ಟಿರುತ್ತೇನೆ. ಕಥೆಯ ಪರಿಪೂರ್ಣತೆಗೆ ಇಲ್ಲಿ ಬರೆದಿರುವವರೆಲ್ಲರ ಪರಾಮರ್ಶವು ಅವಶ್ಯವೆಂದು ನನ್ನ ಭಾವನೆ ; ಕಾರ್ಯಾಲಯವು ಉತ್ಪನ್ನವಾಗಿ ಈವರೆಗಿನ ರೂಪವನ್ನು ತಳೆದು ಬೆಳೆಯುವವರೆಗೆ ಈ ಮಹಾಶಯರುಗಳೆಲ್ಲ ಒಂದಲ್ಲದಿದ್ದರೆ ಒಂದು ವಿಧದಿಂದ ಕಾರಣರಾಗಿರುತ್ತಾರೆ. ಭಗವಂತನು ಅವರೆಲ್ಲರನ್ನೂ ಸೇರಿಸಿ ಮುತ್ತು, ಹವಳ, ಚಿನ್ನದಗುಂಡು, ಸ್ಫಟಿಕಶಿಲೆ, ತುಳಸಿಯಮಣಿ – ಮುಂತಾದವುಗಳನ್ನು ಪೋಣಿಸಿದ ಒಂದು ವಿಚಿತ್ರವಾದ ಜಪಮಾಲಿಕೆಯನ್ನು ನನ್ನ ಕೈಯಿಂದ ಮಾಡಿಸಿರುತ್ತಾನೆ. ನಾನು ಈ ಮಣಿಗಳನ್ನು ಒಂದೊಂದಾಗಿ ಮುಟ್ಟುತ್ತಾ ವೈಖರಿಯಿಂದ ಜಪಮಾಡುವ ವ್ಯಕ್ತಿಮಾತ್ರವೆಂದು ಓದುಗರು ತಿಳಿಯಬೇಕು.

ಕಥೆಯ ಘಟನೆಗಳು, ಪಾತ್ರಗಳು ಇವನ್ನೂ ನನ್ನ ಆತ್ಮಕಥೆಗೆ ಸಂಬಂಧಿಸಿರುವಂತೆ ಆಯಾ ದೇಶಕಾಲಗಳಿಗೆ ಹೊಂದಿಸಿಕೊಂಡೇ ಬರೆದಿರುತ್ತೇನೆ. ಆದ್ದರಿಂದ ಇದು ನನ್ನ ಆತ್ಮಕಥೆ ಎಂಬ ಭಾವನೆಯು ಬರುವದು ಸಹಜವಾಗಿರುತ್ತದೆ. ಆದರೆ ಜಪಮಾಲಿಕೆಯಲ್ಲಿ ಕಾಣಬರುವ ಮಣಿಗಳಿಗೇ ಹೆಚ್ಚು ಬೆಲೆ ಅಲ್ಲದೆ ಅದನ್ನು ಒಂದುಗೂಡಿಸುವ ದಾರಕ್ಕೆ ಅಥವಾ ತಂತಿಗೆ ಜಪಮಾಡುವವರ ಕಣ್ಣಿನಲ್ಲಿ ಹೆಚ್ಚಿನ ಬೆಲೆಯೇನು ಇಲ್ಲವಷ್ಟೆ? ಇದರಂತೆ ನನ್ನ ಹೆಸರು ಅಲ್ಲಲ್ಲಿಗೆ ಬರುತ್ತಿದ್ದರೂ ಮುಂದಿನ ಘಟನೆಗಳನ್ನೂ, ಪಾತ್ರಗಳನ್ನೂ ಸೇರಿಸಿಕೊಳ್ಳುವದಕ್ಕೆ ಅದೊಂದು ಬರಿಯ ನೆಪ ಎಂದು ತಾವೆಲ್ಲರೂ ಭಾವಿಸಬೇಕು. ನನಗೆ ಯಾವದಾದರೊಂದು ವೈಯಕ್ತಿಕವಾದ ಸ್ಥಾನವನ್ನು ಕೊಡಬೇಕೆಂಬ ಇಚ್ಛೆಯು ತಮಗೆ ಬಂದರೂ, ಅದನ್ನು ತಡೆದುಕೊಂಡು ನಾನು ಹೇಳುವ ಕಥೆಗೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು. ಇಷ್ಟೇ ಅಲ್ಲದೆ, ಕಥೆಯೇ ಮುಖ್ಯವಲ್ಲದೆ ಯಾವದೊಂದು ಪಾತ್ರಕ್ಕೂ ಹೆಚ್ಚಿನ ಸ್ಥಾನವಿರುವದಿಲ್ಲ. ಈ ದೃಷ್ಟಿಯಿಂದ ಓದಿದಾಗ ಮಾತ್ರ ವಾಚಕರಿಗೆ ಗ್ರಂಥದ ಮುಖ್ಯಪ್ರಯೋಜನವು ಲಭಿಸೀತೆಂಬುದು ನನ್ನ ನಂಬಿಕೆ.

ಕಾರ್ಯಾಲಯವೆಂಬ ದೃಶ್ಯಭಾಗವು ಜಗನ್ನಾಟಕಕ್ಕೆ ಸಂಬಂಧಪಟ್ಟಿದ್ದೆಂಬುದನ್ನು ನೆನಪಿಗೆ ತಂದುಕೊಳ್ಳುವವರಿಗೆ ಈ ದೃಶ್ಯವು ಇನ್ನೂ ಪೂರೈಸಿಲ್ಲ ಎಂಬುದು ತಾನೇ ಹೊಳೆಯುತ್ತದೆ. ಇನ್ನು ಮುಂದೆ ಕಾರ್ಯಾಲಯದ ಕೆಲಸದಲ್ಲಿ ಭಾಗವನ್ನುವಹಿಸುವ ತರುಣರು ಈ ದೃಶ್ಯವನ್ನು ನಾಟಕದ ಅಂಕಕ್ಕೆ ಸರಿಯಾಗಿ ಹೊಂದಿಸುವ ಕೆಲಸವನ್ನು ಮಾಡುವರು. ಈ ಕಥೆಯನ್ನು ಅವರಲ್ಲಿ ಯಾರಾದರೊಬ್ಬರು ಇನ್ನೂ ಚೆನ್ನಾಗಿ ಬರೆದು ಮುಂದುವರಿಸಬಹುದು. ಅಂಥವರಿಗೆ ವಿಷಯವನ್ನು ಒದಗಿಸುವದು ಮಾತ್ರ ನನ್ನ ಕೆಲಸವಾಗಿದೆ. ಈ ಕೆಲಸವು ಆದಷ್ಟು ಮಟ್ಟಿಗೂ ತೃಪ್ತಿಕರವಾಗಲಿ ಎಂದು ತಾವೆಲ್ಲರೂ ಹರಸಬೇಕು.

### ಇ. ಉಪಸಂಹಾರ :

ಗ್ರಂಥವು ಮುಖ್ಯವಾಗಿ ನನ್ನ ಪರಿಚಯದ ಗೆಳೆಯರಿಗೆ, ನನ್ನಲ್ಲಿ ವಿಶ್ವಾಸವುಳ್ಳ ಸ್ನೇಹಿತರಿಗೆ, ಹಿಂದಿನ ಘಟನೆಗಳನ್ನು ನೆನಪಿಗೆ ತರುವದಕ್ಕೆ ಒಂದು ಸಾಧನವಾಗಿರುವದು. ಕಾರ್ಯಾಲಯದಲ್ಲಿ ಮುಂದೆ ಕೆಲಸಮಾಡುವವರಿಗೆ ಉತ್ಸಾಹಜನಕವಾದ ಒಂದು ಸಾಧನವಾಗಿರುವದು. ಕಾರ್ಯಾಲಯದ ಕ್ರಮದಲ್ಲಿ ದೋಷವನ್ನು ಕಂಡುಹಿಡಿದು ಇನ್ನೂ ಉತ್ತಮವಾದ ರೀತಿಯಲ್ಲಿ ಇಂಥ ಕಾರ್ಯವನ್ನು ಮಾಡಬಹುದೆಂದು ಬಗೆಯುವವರಿಗೆ ಸ್ಫೂರ್ತಿದಾಯಕವಾಗಿರುವದು ; ಅಧ್ಯಾತ್ಮವಿದ್ಯೆಯಲ್ಲಿ ಸಾಧಕರಾಗಿರುವವರಿಗೆ ಉಪಯೋಗವಾಗುವ ಹಲವು ಸೂಚನೆಗಳನ್ನೂ ಒಳಗೊಂಡ ಒಂದು ಕೈಪಿಡಿಯಾಗಿರುವದು ಎಂಬ ಆಶೆಯೂ ನನಗೆ ಇದೆ. ಇದರಿಂದ ಯಾವ ಉಪಯೋಗವೂ ಇಲ್ಲವೆಂದು ಎಣಿಸುವವರೂ ಹಲವರು ಇರಬಹುದು. ಅಂಥವರಿಗೆ ಇದೆಲ್ಲವೂ ಒಬ್ಬ ಸೋಮಾರಿಯ ಹಗಲುಗನವರಿಕೆಯಾಗಿ ತೋರುವದು. ಅಂಥವರು ಇದರಲ್ಲಿರುವ ದೋಷಗಳನ್ನು ಬಯಲಿಗೆ ತಂದು ಜನರನ್ನು ಸನ್ಮಾರ್ಗಕ್ಕೆ ಕರೆತರುವದಕ್ಕೆ ಅವಕಾಶವನ್ನು ಕಲ್ಪಿಸಿದ ಕೀರ್ತಿಯಾದರೂ, ನನ್ನ ಪಾಲಿಗೆ ಬರುವದೆಂದು ನಂಬಬಹುದಷ್ಟೆ ?

# 2. ಬಾಲ್ಯ - ಯಳ್ಳಂಬಳಸೆ

## ಕಾಲಮಾನದ ವಿಚಾರ :

ಇನ್ನು ಕಥೆಗೆ ಪ್ರಾರಂಭ. ಕಥೆಯ ಪಾತ್ರಗಳನ್ನು ನನ್ನ ದೃಷ್ಟಿಯಿಂದ ವರ್ಣಿಸುತ್ತಿರುವದರಿಂದ ನಾನೇ ಮೊದಲು ಬರಬೇಕಾದದ್ದು ಅನಿವಾರ್ಯವಷ್ಟೆ ? ಇಲ್ಲಿ ಒಂದು ಕಷ್ಟವಿದೆ. ನನಗೆ ಸ್ವಾಭಾವಿಕವಾಗಿಯೇ ಕಾಲದ ನೆನಪು ಬಹಳವಾಗಿರುವದಿಲ್ಲ. ಅದರಲ್ಲಿಯೂ ಬಾಲ್ಯದ ನೆನಪು ಯಾರಿಗಾದರೂ ಅಷ್ಟಕ್ಕಷ್ಟೆ ಇರುತ್ತದೆ. ಹೀಗಿರುವದರಿಂದ ಇಲ್ಲಿ ಹೇಳಿರುವ ಕಥಾಭಾಗವನ್ನು ಕರಾರುವಾಕ್ಕು ಆಯಾ ಕಾಲದಲ್ಲಿಯೇ ನಡೆದಂತೆ ಭಾವಿಸಲಾಗದು. ಅದು ನನ್ನ ನೆನಪಿನಲ್ಲಿ ನಿಂತಿರುವ ವಾಸನೆಯ ಹೊರರೂಪಮಾತ್ರವೆಂತ ನಂಬಬಹುದು.

ನನ್ನ ಹುಟ್ಟಿದ ಹಬ್ಬ ಮಾರ್ಗಶೀರ್ಷ ಬಹುಳ, ಅಷ್ಟಮೀ ಪ್ರಮಾಥಿ ಸಂವತ್ಸರವೆಂತ ಜಾತಕದಲ್ಲಿದ್ದಿತು. ಈಗ ಜಾತಕ ಕಳೆದುಹೋಗಿದೆ [1]. ಚಿಕ್ಕಮಗಳೂರಿನಲ್ಲಿ ಕೋಟೆಯ ಸಮೀಪದಲ್ಲಿದ್ದ (?) 'ಹೊಸಮನೆ' [2] ಎಂಬಲ್ಲಿ ನಾನು ಹುಟ್ಟಿದೆನೆಂದು ನನಗೆ ಹೇಳಿದ್ದರು. ಈಗ ಅಲ್ಲಿ ಹೊಸಮನೆಯಾಗಲೀ ಹಳೆಮನೆಯಾಗಲೀ ಇದ್ದಂತೆ ತೋರಲಿಲ್ಲ. ಹೇಗೇ ಆಗಲಿ ಮಕ್ಕಳು ಹುಟ್ಟುವ ಮನೆಯು ಅವರಿಗೆ ಯಾವಾಗಲೂ ಹೊಸಮನೆಯೇ ಆಗಿರಬೇಕಷ್ಟೆ ! ಕಳಸದಲ್ಲಿ ನಮ್ಮ ತಂದೆಯವರು ಶೇಕದಾರರಾಗಿದ್ದು ಕೆಲಸದಿಂದ ವಿಶ್ರಾಂತಿಯನ್ನು ಹೊಂದಿ ಯಳ್ಳಂಬಳಸೆಗೆ ಬಂದರಂತೆ. ಎರಡು ಮೂರು ಬಂಡಿಗಳ ಮೇಲೆ ಸಾಮಾನುಸಾಗಿಸಿಕೊಂಡು ತಾಯಿತಂದೆಗಳು ಕುಟುಂಬಸಮೇತ ಬಂದಂತೆಯೂ, ಆ ಬಂಡಿಗಳಲ್ಲೊಂದರಲ್ಲಿ ನಾನು ಕುಳಿತುಕೊಂಡು ಆಗಾಗ್ಗೆ ಪ್ರಯಾಣದ ಕ್ಲೇಶದಲ್ಲಿ ಅಳುತ್ತಾ ತಂದೆತಾಯಿಗಳನ್ನು ಕರೆಕರೆಗೊಳಿಸುತ್ತಿದ್ದಂತೆಯೂ ನೆನಪು ಇದೆ.

---

1. ವೇದಬ್ರಹ್ಮ ಶ್ರೀ ಮತ್ತೂರು ಸುಬ್ಬರಾಯಾವಧಾನಿಗಳು ಬಲಗಡೆ ಪುಟದಲ್ಲಿರುವ ಕುಂಡಲಿಯನ್ನು ಪಂಚಾಂಗವನ್ನು ನೋಡಿ ಗೊತ್ತುಪಡಿಸಿಕೊಟ್ಟಿದ್ದಾರೆ. ನನಗೆ ಹಸ್ತ ೪ನೆಯ ಪಾದವೆಂಬ ನೆನಪಿದೆ. ಆದರೆ ಇಲ್ಲಿ ಶಾಸ್ತ್ರಿಗಳು ಬೇರೆಯಾಗಿಯೇ ಲಗ್ನವನ್ನು ಹಾಕಿರುತ್ತಾರೆ. ಇದಕ್ಕೇನು ಕಾರಣವೋ ತಿಳಿಯದು. (ಹಸ್ತ ೪ನೇ ಪಾದವಾಗುವುದಕ್ಕೂ ಲಗ್ನವು ಬೇರೆಯಾಗುವುದಕ್ಕೂ ವಿರೋಧವಿಲ್ಲ. ಈಗಲೂ ಹಸ್ತ ೪ನೇ ಪಾದವೇ ಆಗಿದೆ).
2. ಕೋಟೆ, ಹೊಸಮನೆ ಊರಿನ ಎರಡು ಸಣ್ಣ ವಿಭಾಗಗಳು.

| | | | |
|---|---|---|---|
| ಶನಿ ೮ | ಋಜ್ವೀ<br>ಕುಜ ೮ | — | ಕೇತು ೨ |
| ಗುರು ೧೨ | ಶ್ರೀ<br>ಶ್ರೀಸಚ್ಚಿದಾನಂದೇಂದ್ರ<br>ಸರಸ್ವತೀ ಸ್ವಾಮಿನಾಂ<br>ಜನ್ಮಪತ್ರಿಕಾ | | — |
| — | | | — |
| ರಾಹು ೮<br>ರವಿ ೭<br>ಲಗ್ನ ೯ | ಬುಧ ೧೨<br>ಶುಕ್ರ ೫ | — | ಚಂದ್ರ ೪ |

## ಊರಿನ ವರ್ಣನೆ :

ಯಳ್ಳಂಬಳಸೆ ಎಂಬುದು ಕಡೂರು ತಾಲ್ಲೂಕಿಗೆ ಸೇರಿರುವ ಒಂದು ಹಳ್ಳಿ. ಆಗ್ಗೆ ಹಳ್ಳಿಗಳು ಈಗಿನ ಕಾಲಕ್ಕಿಂತ ಹೆಚ್ಚಿನ ಕಳೆಯೇರಿದ್ದವು. ಕಡೂರಿಗೆ ಎಂಟು-ಹತ್ತು ಮೈಲಿಗಳ ದೂರದಲ್ಲಿ ಯಾವ ರಸ್ತೆಯ ಸಂಬಂಧವೂ ಇಲ್ಲದ ಆ ಊರು ಆಗ್ಗೆ ಒಂದು ಮಾದರಿಯ ಹಳ್ಳಿಯಾಗಿತ್ತೆಂದರೆ ತಪ್ಪಾಗದು. ಊರ ಹೆಬ್ಬಾಗಿಲಿನಾಚೆಗೆ ಎಡಕ್ಕೆ ದೊಡ್ಡಿ, ಬಲಕ್ಕೆ ಒಂದು ಮಸೀದಿ, ಊರ ಮುಂದೆ ಒಂದು ನೀರಿನ ಕಟ್ಟೆ, ಒಂದು ನೀರಿನ ಬಾವಿ, ಎರಡು ಮೂರು ಅರಳಿಯ ಮರಗಳು, ಅವುಗಳಿಂದಾಚೆಗೆ ಹನುಮರಾಯನ ಗುಡಿ, ಅದಕ್ಕೆ ಆಚೆಗೆ ಒಂದು ಕೆರೆ, ಕೆರೆಯ ಹಿಂದೆ ತೋಟಗಳು, ಗದ್ದೆಗಳು – ಇದು ಊರ ಹೊರಗಿನ ಬಾಹ್ಯಚಿತ್ರ. ಆ ಊರಿಗೂ ಹಿಂದಕ್ಕೆ ಒಂದು ಕೋಟೆ ಇತ್ತೆಂದು ಕಾಣುತ್ತದೆ. ನಾವು ಬಂದಾಗ ಸುತ್ತಲೂ ಅಗಳು, ಅದನ್ನಾವರಿಸಿಕೊಂಡು ಕಳ್ಳಿಯ ಬೇಲಿಯೂ ಇದ್ದವು. ಊರ ಒಳಕ್ಕೆ ಬಂದರೆ ಎಡಕ್ಕೆ ಚಾವಡಿ, ಬಲಕ್ಕೆ ನಾಡಿಗರ ಮನೆ, ಕೆಲವು ಬ್ರಾಹ್ಮಣರ ಮನೆಗಳು, ಒಂದು ಬಸವನ ಗುಡಿ - ಇಷ್ಟು ಕಾಣಿಸುತ್ತೆ. ಒಂದು ಚಿಕ್ಕ ಬೀದಿ; ಅದಕ್ಕೆ ಸಮಾನಾಂತರವಾಗಿ ಅಕ್ಕಸಾಲಿಗರು, ಲಿಂಗಾಯಿತರು ಮುಂತಾದವರಿರುವ ಇನ್ನೊಂದು ಬೀದಿ ಹೀಗಿತ್ತು. ಇವೆರಡರ ಮುಂದಕ್ಕೆ ಸೋಮೇಶ್ವರನ ಗುಡಿ, ಅದರ ಹಿಂದಕ್ಕೆ ಪಶ್ಚಿಮಕ್ಕೆ ಹೊನ್ನಾಲದಮ್ಮನ ಗುಡಿ, ಬೀರದೇವರ ಗುಡಿ, ನೈರ್ಋತ್ಯಕ್ಕೆ ಚನ್ನಕೇಶವನ

ದೇವಾಲಯ, ಅದರ ಪಕ್ಕದಲ್ಲಿ ಒಂದು ಒಣಗಿದ ಕಲ್ಯಾಣಿ ಹೀಗಿತ್ತು - ಊರ ಒಳ ಚಿತ್ರ. ಸೋಮೇಶ್ವರನ ಗುಡಿಯ ಹಿಂಗಡೆಯಲ್ಲಿ ಬ್ರಾಹ್ಮಣೇತರರ ಮನೆಗಳೇ ಕಾಣಬರುವವು. ಊರಿನಲ್ಲಿ ಕುರುಬರು, ಕುಂಬಾರರು, ಅಗಸರು, ಬೇಡರು, ಬೆಸ್ತರು-ಮುಂತಾದ ಹಿಂದುಗಳಲ್ಲದೇ ಕೆಲವರು ಮುಸಲ್ಮಾನರೂ ಇದ್ದರು. ಊರಿಗೆ ಯಳ್ಳಂಬಳಸೆ ಎಂಬ ಹೆಸರು ಏತಕ್ಕೆ ಬಂದೀತೋ ತಿಳಿಯದು. 'ಎಳ್ಳು ಹುಣಸೆ ?' ಎಂಬ ಒಬ್ಬ ಸೂಳೆಯು ಕಟ್ಟಿಸಿದ ಊರೆಂದು ಯಾರೋ ಹೇಳಿದ್ದು ನೆನಪಿದೆ. ಆದರೆ ಬಾಲ್ಯದಲ್ಲಿ ನನಗಂತೂ ನಮ್ಮ ತಂದೆತಾಯಿಯವರು ಎಲ್ಲಾ ಊರನ್ನೂ ಬಳಸಿದ ಮೇಲೆ ವಿಶ್ರಾಂತಿಗೆಂದು ಆರಿಸಿಕೊಂಡ ಊರೆಂಬ ಕಾರಣದಿಂದಲೇ ಅದು ಯಳ್ಳಂಬಳಸೆಯಾಗಿ ತೋರುತ್ತಿತ್ತು.

ಊರಲ್ಲಿದ್ದ ಕೆಲವು ಗುಡಿಗಳನ್ನು ಆಗಲೇ ಹೆಸರಿಸಿರುತ್ತೇನೆ. ಒಂದು ಬೀರಭದ್ರದೇವರ ಗುಡಿಯು ಶಿಥಿಲವಾಗಿ ನಮ್ಮ ಮನೆಯ ಹಿಂಭಾಗದಲ್ಲಿದ್ದಿತು. ಊರ ಹೊರಗೆ 'ಕೆಂಡದಮ್ಮನ ಕೆಂಡದ ಅಂಗಳ' ವಿದ್ದಿತು. ಸುಮಾರು ಮುಕ್ಕಾಲು ಮೈಲಿಯ ದೂರದಲ್ಲಿ 'ವೇದಾವತಿ'ಯೆಂದು ಊರಿನವರು ಕರೆಯುತ್ತಿದ್ದ ತೊರೆಯ ದಂಡೆಯ ಮೇಲೆ ಹಳ್ಳದಮ್ಮನ ಗುಡಿಯಿದ್ದಿತು ; ಹಳ್ಳದಮ್ಮನಿಗೆ 'ಹೊಸಕೂಟದಮ್ಮ' ಎಂಬ ನಾಮಾಂತರವೂ ಇದ್ದಿತು. ಈ ಗುಡಿಗಳೆಲ್ಲವೂ ಬಾಲ್ಯದಲ್ಲಿ ನನಗೆ ಓಡಾಟದ ಸ್ಥಾನಗಳಾಗಿದ್ದವು. ಹನುಮರಾಯನಗುಡಿಯ ಮುಂದೆ ಇದ್ದ ದೊಡ್ಡ ಅರಳಿಯಮರವನ್ನು ನಮ್ಮ ಅಜ್ಜಂದಿರು ನೆಟ್ಟಿದ್ದರಂತೆ. ಆಕಡೆ ಕೆರೆಯ ಅಂಗಳದಲ್ಲಿ 'ಕೊಳ್ಳಿದೆವ್ವಗಳು ಕುಣಿದಾಡುತ್ತವೆ' ಎಂಬ ಒಂದು ನಂಬಿಕೆ ಹಾದುಗರಿಗೆಲ್ಲರಿಗೂ ಇದ್ದದ್ದರಿಂದ ನಾವು ಯಾರೂ ಸಂಜೆಯಾದಬಳಿಕ ಆಕಡೆಗೆ ಸುಳಿಯುತ್ತಿರಲಿಲ್ಲ. ಆದರೆ ಊರಕಟ್ಟೆಯ ಮೇಲುಗಡೆ ಇದ್ದ 'ಈಶ್ವರನ ಗುಡಿ'ಯಲ್ಲಿ ದೇವರದರ್ಶನ ಮಾಡಿಕೊಂಡು ಬರುವದು ರೂಢಿಯಲ್ಲಿತ್ತು. ಹೊನ್ನಾಲದಮ್ಮನ ಗುಡಿಯಲ್ಲಿ ಅಮ್ಮನ ಪೂಜೆಯಾದಾಗ ಅಥವಾ ಪೂಜಾರಿಯು ಮೈತುಂಬುವಾಗ 'ಅಮ್ಮನಗುಡಿ ಸುತ್ತಾ ನಿಂಬೆಗಿಡ ಹುಟ್ಟಿ। ಕಳ್ಳರು ಕುಯ್ದ್ವಾಗ ಕಸುಗಾಯಿ ॥ ಕಳ್ಳರು ಕುಯ್ದ್ವಾಗ ಕಸುಗಾಯಿ ನಮ್ಮಮ್ಮ, ನಾನೆ ಕುಯ್ದ್ವಾಗ ಗಜನಿಂಬೆ ॥' ಎಂಬುದೇ ಮುಂತಾದಪದವನ್ನು ಹೇಳಿಕೊಂಡು ಡೋಲನ್ನು ಬಾರಿಸುವದನ್ನು ಕೇಳುವದಕ್ಕೂ, ಬೀರದೇವರಗುಡಿಯಲ್ಲಿ ಬಾಳೆಯ ಪಟ್ಟೆಯ ಮಂಟಪವನ್ನು ಕಟ್ಟುವ ಸಂಭ್ರಮವನ್ನು ಕಂಡು ಕಣ್ಣುಗಳಿಗೆ ಹಬ್ಬವನ್ನು ಮಾಡಿಕೊಳ್ಳುವದಕ್ಕೂ, ಕೆಂಡದಮ್ಮ ಕೆಂಡವನ್ನು ತುಳಿಯುವ ಉತ್ಸವಕ್ಕೆ ನೆರೆಯುವ ಜನಜಂಗುಳಿಯಲ್ಲಿ ನುಸಿವದಕ್ಕೂ , ಹೊಸಕೂಟದಮ್ಮನನ್ನು ಕಣಿಗಲ ಹೂಗಳಿಂದ ಅಲಂಕರಿಸಿ ಜನರು ಪ್ರಸಾದವನ್ನು ಕೇಳಿ ಬಲವಾಗಿ ಉಸಿರುಕೂಡಬಿಡದೆ

ಗವಿಯಂತಿದ್ದ ಗುಡಿಯೊಳಗೆ ಕುಳಿತಿರುವ ಭಕ್ತರನ್ನು ನೋಡುವದಕ್ಕೂ, ಚನ್ನಕೇಶವ ದೇವಸ್ಥಾನದಲ್ಲಿ ಕಾರ್ತಿಕದ ಮಂಗಲಾರತಿಗಳಾಗುವಾಗ ಪನಿವಾರದ ಸವಿಯನ್ನು ನೋಡುವದಕ್ಕೂ, ಊರದೇವಸ್ಥಾನಗಳಿಗೆ ನಾವು ತಪ್ಪದೇ ಹೋಗಿಬರುತ್ತಿದ್ದೆವು. ಊರ ಓಲಗ, ತಮಟೆ, ಡೋಲು (ಕವಡೆಯ ವಾದ್ಯ ?) ಗಳಿಂದಲೂ, ಗೊಗ್ಗಯ್ಯ[1]ಗಳ ಡಮರುಗ , ಬೀರದೇವರ ದೊಡ್ಡ ಡೋಲು, ಮುಂತಾದ ಪರಿಕರ ಸಮೇತರಾಗಿ ಅಮ್ಮನ ಉತ್ಸವವು ಬೀದಿಯ ಮೇಲೆ ಬಂದಾಗ, ಚೋಮನ ಕುಣಿತ, ಕೆಂಚುರಾಯನ ಮಾಗೇವು (?) ಮುಂತಾದವುಗಳನ್ನು ನೋಡುವದಕ್ಕೆ ಊರಿಗೆಊರೇ ನಿಂತಿರುವಾಗ ಪಂಜಿನ ಸಾಲಿನ ಬೆಳಕಿನಲ್ಲಿ ಅಲ್ಲಿ ಇಲ್ಲಿ ನುಸುಳಿಕೊಂಡು ಜನಸಂದಣಿಯನ್ನು ಸೇರಿಸಿಕೊಳ್ಳುವದೆಂದರೆ, ಹುಡುಗರಾದ ನಮ್ಮಗಳಿಗೆ ಸ್ವರ್ಗದ ಆನಂದವಾಗಿರುತ್ತಿತ್ತು. ಇದರ ಜೊತೆಗೆ ಮಿಕ್ಕ ದೊಡ್ಡ ದೊಡ್ಡ ಊರುಗಳಲ್ಲಿದ್ದಂತೆ ನಮ್ಮ ಊರಿನಲ್ಲಿಯೂ 'ಅಲಾಬಿ' ಹಬ್ಬವೂ ಉಂಟು. ಆಗ 'ಕ್ಯಾಹುಸೇನ್', 'ಬ್ಯಾಹುಸೇನ್', ಎಂದು ಕೂಗುತ್ತಾ ಅಳ್ಳಿ[2]ಯ ಚಿಕ್ಕರು (?) ಮೈಗೆ ಗಂಧವನ್ನು ಪೂಸಿಕೊಂಡು ಕುಣಿಯುವದನ್ನು ನೋಡುವದೆಂದರೆ ಅದೇ ಒಂದು ಹಬ್ಬ !. ನನ್ನ ಬಾಲ್ಯದ ಕಣ್ಣಿಗೆ ಹೊನ್ನಾಲದಮ್ಮ, ಬೀರದೇವರು, ಈಶ್ವರ, ಹನುಮರಾಯ – ಮುಂತಾದವುಗಳೆಲ್ಲವೂ, ನಮ್ಮ ಊರನ್ನು ಕಾಪಾಡುವ ದೇವರುಗಳೆಂದು ಭಾಸವಾಗುತ್ತಿತ್ತು. ಆ ದೇವರುಗಳಿಂದಲೇ ನಮ್ಮ ಊರಿಗೆ ಯಾವ ತೊಂದರೆಯೂ ಬಾರದೆ ಇದೆ ಎಂಬ ಭಾವನೆಯು ಹುಡುಗರೆಲ್ಲರಿಗೂ ಇದ್ದಿತು. ಊರಿಗೆ ಯಾವದಾದರೊಂದು ರೋಗರುಜಿನವು ಬಂದರೆ ಕೂಡಲೇ ಊರಿನವರು 'ರಾಮಧ್ಯಾನ'ಕ್ಕೆ ಮೊದಲು ಮಾಡುತ್ತಿದ್ದರು. ತಾಳ, ದಮ್ಮಡಿ, ಪಿಟೀಲು - ಮುಂತಾದವುಗಳನ್ನು ಉಪಯೋಗಿಸಿಕೊಂಡು ಕೀರ್ತನೆಗಳನ್ನು ಹೇಳುತ್ತಾ ಊರಲ್ಲೆಲ್ಲಾ ಸುತ್ತಾಡಿ ದೇವರಿಗೆ ವಿಶೇಷವಾಗಿ ಮಂಗಲಾರತಿಯನ್ನು ಮಾಡಿಸುತ್ತಿದ್ದರು. ಜನರು ಊರನ್ನೆಲ್ಲಾ ಚೊಕ್ಕಟವಾಗಿ ಗುಡಿಸಿ, ನೆಲಕ್ಕೆ ನೀರು ಚಿಮುಕಿಸಿ, ರಂಗೋಲಿಗಳನ್ನು ಹಾಕಿಸಿ ದೇವರ ಅಥವಾ ರಾಮಭಜನೆಯವರ ಪಟದ ಉತ್ಸವವು ತಮ್ಮತಮ್ಮ ಮನೆಯ ಮುಂದಕ್ಕೆ ಬಂದಾಗ ಹಣ್ಣುಕಾಯಿಕರ್ಪೂರಗಳನ್ನು ಸಮರ್ಪಿಸಿ ಮಂಗಲಾರತಿಯನ್ನು ಮಾಡಿಸಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಇಂಥಾ ಸಂದರ್ಭಗಳಲ್ಲಿ ಹೊಸಕೂಟದಮ್ಮನಿಗೆ ಎಡೆಯ ಬೋನ(ಅನ್ನ)ವೂ ಸಲ್ಲುತ್ತಿತ್ತು.

---

1. ಗೊಗ್ಗಯ್ಯ, ಹೆಗ್ಗಯ್ಯ, ಹೊಗ್ಗಯ್ಯ - ಮೈಲಾರ ದೇವರ ಭಕ್ತ
2. ಅಳ್ಳಿ-'ಹಳ್ಳಿ'ಯ ಗ್ರಾಮ್ಯ ;

## ನಮ್ಮ ಮನೆ :

ಊರಹೆಬ್ಬಾಗಿಲ ಒಳಕ್ಕೆ ಪ್ರವೇಶಿಸಿದರೆ ಎದುರಿಗಿದ್ದ ಬೀದಿಯಲ್ಲಿ ಎಡಗಡೆಗೆ ಇದ್ದ ಎರಡನೆಯ ಮನೆಯೇ ನಮ್ಮದು. ನಾವು ಬಂದಾಗ ಮನೆ ಹಳೆಯದಾಗಿತ್ತು. ಅದು ಬಿದ್ದಮೇಲೆ ನಮ್ಮ ತಂದೆಯವರು ಹೊಸದಾಗಿ ಅದನ್ನು ಕಟ್ಟಿಸಿದರು. ಹಿಂದುಗಡೆ ಒಂದು ನಡುಮನೆ ! ಎಡಗಡೆಗೆ ಅಡಿಗೆಮನೆ ಮತ್ತು ದೇವರಕೋಣೆ, ಬಲಗಡೆಗೆ ಎರಡು ಚಿಕ್ಕ ಕೋಣೆಗಳು - ಹೀಗಿದ್ದ ಒಂದು ತಕ್ಕಮಟ್ಟಿಗೆ ವಿಶಾಲವಾದ ಮನೆಯಿತ್ತು. ಅದಕ್ಕೆ ಹಲಗೆಸೇವೆ ಮಾಡಿದ ಒಂದು ಅಟ್ಟವೂ ಇತ್ತು. ಅದರ ಮುಂದೆ ಒಂದು ಅಂಗಳವಿದ್ದು ಅದರ ಮುಂಗಡೆ ಇನ್ನೊಂದು ಸಣ್ಣಮನೆಯಿತ್ತು. ಆ ಮನೆಯಲ್ಲಿ ಎಡಕ್ಕೆ ಬೇರೆ ಬಾಗಿಲುಳ್ಳ ಸ್ನಾನದ ಮನೆ, ಬಲಕ್ಕೆ ಬೀಸಾದ ಒಂದು ಹಜಾರ ಇಷ್ಟಿತ್ತು. ಮನೆಯು ದಕ್ಷಿಣ ಮುಖವಾಗಿತ್ತು. ಅಂಗಳದಲ್ಲಿ ಪಶ್ಚಿಮಕ್ಕೆ ಒಂದು ತಲೆಬಾಗಿಲು ಇತ್ತು. ಊರೊಳಗೆ ಇಷ್ಟು ವಿಶಾಲವಾದ ಮನೆಗಳು ಬಹಳ ಇರಲಿಲ್ಲ. ಎಡಬಲದಲ್ಲಿದ್ದ ಮನೆಗಳು ಮಾತ್ರ ದೊಡ್ಡದಾಗಿದ್ದವು. ಈಚೆಗೆ ನಾನು ನೋಡಿದಾಗ ಮನೆಯೇನೋ ಅಷ್ಟು ದೊಡ್ಡದಲ್ಲವೆಂದು ಗೊತ್ತಾಯಿತು. ಆದರೆ ಹುಡುಗನಾಗಿದ್ದಾಗ ಅದೊಂದು ಬಹಳ ವಿಶಾಲವಾದ ಮನೆಯಾಗಿ ನನಗೆ ತೋರುತ್ತಿತ್ತು.

## ಕುಟುಂಬ :

ಯಳ್ಳಂಬಳಸೆಯು ದೇವರಲ್ಲಿ ಭಕ್ತಿಯಿಡುವದಕ್ಕೆ ನಮ್ಮಂಥ ಹುಡುಗರಿಗೆ ಪ್ರೋತ್ಸಾಹಕವಾಗಿತ್ತೆಂದು ತಿಳಿಸಿರುತ್ತೇನಷ್ಟೆ. ಈಶ್ವರನ ಕೃಪೆಯಿಂದ ನಮ್ಮ ಮನೆಯು ಇದಕ್ಕೆ ಪರಿಪೋಷಕವಾಗಿಯೇ ಇರುತ್ತಿತ್ತು. ತಂದೆತಾಯಿಗಳನ್ನು ಬಿಟ್ಟರೆ ಬಾಲ್ಯದಲ್ಲಿ ಅಣ್ಣಂದಿರಾದ ಶಿವರಾಮಯ್ಯನವರು ಒಬ್ಬರು, ಅಕ್ಕ ತಂಗಮ್ಮ(ರಂಗಮ್ಮ)ನವರು ಮತ್ತೊಬ್ಬರು - ಇವರಿಬ್ಬರನ್ನು ಮಾತ್ರವೇ ನಾನು ಮನೆಯಲ್ಲಿ ಕಾಣುತ್ತಿದ್ದದ್ದು. ತಂದೆಯವರನ್ನು ಕಂಡರೆ ನನಗೆ ಬಹಳ ಅಂಜಿಕೆ; ಅಣ್ಣನವರು ನನ್ನ ಜೊತೆಯಲ್ಲಿಯೇ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದದ್ದರಿಂದಲೂ ಅವರ ಬುದ್ಧಿ ಅಷ್ಟು ಚುರುಕಲ್ಲವೆಂದು ಹಿರಿಯರು ಎಣಿಸುತ್ತಿದ್ದರೆಂದು ನನಗೆ ತೋರಿದ್ದರಿಂದಲೂ ಅವರನ್ನೇನೂ ನಾನು ಆಗ್ಗೆ ಲೆಕ್ಕಕ್ಕಿಟ್ಟುಕೊಂಡಿರಲಿಲ್ಲ. ಹದಿನಾರು ಜನ ಮಕ್ಕಳೊಳಗೆ ಆ ಕಾಲಕ್ಕೆ ಏಳುಮಂದಿ ಮಾತ್ರ ಉಳಿದಿರುವರೆಂದು ನಮ್ಮ ತಾಯಿತಂದೆಗಳು ಅಂದುಕೊಳ್ಳುತ್ತಿದ್ದದ್ದನ್ನು ಕೇಳಿದ್ದೆನು. ಆದರೆ ನಾವು ಮೂವರನ್ನು ಬಿಟ್ಟು ಮಿಕ್ಕ ನಾಲ್ಕು ಜನ ಯಾರೆಂಬುದನ್ನು

ತಿಳಿದುಕೊಳ್ಳುವದಕ್ಕೆ ನನಗೆ ಕೆಲವು ವರ್ಷಗಳೇ ಬೇಕಾದವು. ಒಂದಾನೊಂದು ಉತ್ಥಾನ ದ್ವಾದಶಿಯ ದಿನ ಕೃಷ್ಣಸ್ವಾಮಿ ಎಂಬ ತಮ್ಮನು ಹುಟ್ಟಿ ನನ್ನೊಡನೆ ಬೆಳೆಯುತ್ತಿದ್ದನು. ಅವನನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಇನ್ನುಳಿದ ಮೂವರು ಯಾರೆಂಬುದು ನನಗೆ ಬೇಗ ತಿಳಿಯಲೇ ಇಲ್ಲ. ಆ ಮೂವರನ್ನು ನಾನು ಯಳ್ಳಂಬಳಸೆಯಲ್ಲಿ ಒಟ್ಟಿಗೆ ಕಂಡದ್ದೇ ಇಲ್ಲ. ಮುಖ್ಯವಾಗಿ ಮನೆಯಲ್ಲಿ ನಮ್ಮ ತಾಯಿ, ತಂಗಕ್ಕ ಇವರಿಬ್ಬರ ಪ್ರಭಾವವೇ ನನ್ನ ಮೇಲೆ ಹೆಚ್ಚಾಗಿ ಬಿದ್ದಿತೆಂದು ಹೇಳಬಹುದು. ನಮ್ಮ ತಂದೆತಾಯಿಗಳು ಯಳ್ಳಂಬಳಸೆಗೆ ಯಾವ ಕಡೆಯಿಂದ ಬಂದರು, ಅವರ ಹಿರಿಯರು ಎಲ್ಲಿದ್ದರು - ಮುಂತಾದ ವಿವರಗಳನ್ನು ನಾನು ಕೊನೆಯವರೆಗೂ ವಿಚಾರಿಸಿಕೊಳ್ಳಲೇ ಇಲ್ಲ. ಅವರಿಬ್ಬರು ವೃದ್ಧರಾಗಿ ಕಣ್ಣೆದುರಿಗೆ ಇದ್ದಾಗ, ಅವರ ಭಾವಚಿತ್ರಗಳನ್ನಾದರೂ ತೆಗೆದಿಟ್ಟುಕೊಳ್ಳಲಿಲ್ಲವಲ್ಲ ! ಎಂಬ ಪಶ್ಚಾತ್ತಾಪವು ಬಹುದಿನಗಳಾದ ಮೇಲೆ ನನ್ನನ್ನು ಬಾಧಿಸಹತ್ತಿತು. ಆದರೆ ಆಗ ಮಾಡುವದೇನು ? ಚಿಕ್ಕಂದಿನಲ್ಲಿ ತಾಯಿಯ ತವರೂರಾದ ಅಣತಿಗೆ ಒಂದೆರಡು ಸಲ ಹೋಗಿದ್ದೆನು. ಆದರೆ ತಂದೆಯವರ ಊರು ಮತ್ತೊಂದಿರಬಹುದೆಂಬ ಶಂಕೆಯೇ ನನಗೆ ಬಹುಕಾಲದವರೆಗೆ ಹೊಳೆಯಲಿಲ್ಲ. ಕಳೆದ ಚಿತ್ರಭಾನು ಸಂವತ್ಸರದಲ್ಲಿ (1943ನೆಯ ಮಾರ್ಚಿಯಲ್ಲಿ) ಅಣತಿಗೆ ಹೋಗಿ ವಿಚಾರಿಸಲಾಗಿ ಅಷ್ಟುಹೊತ್ತಿಗೆ ಹಿರಿಯವರಾದ ನನ್ನ ಸೋದರ ಮಾವಂದಿರಿಬ್ಬರೂ ಪರಲೋಕಕ್ಕೆ ತೆರಳಿದ್ದರು. ನಮ್ಮ ತಂದೆಯವರು ಬಾಲ್ಯದಲ್ಲಿಯೇ ಎರಗನಾಳು(ಎರಗನ ಹಾಳು) ಎಂಬ ಗ್ರಾಮದಲ್ಲಿದ್ದ ತಮ್ಮ ಸೋದರಮಾವನ ಮನೆಗೆ ಬಂದಿದ್ದರೆಂದೂ, ಅವರ ಮಗಳನ್ನು ಕೊಟ್ಟು ಅವರಿಗೆ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಯಿತೆಂದು ತಿಳಿಯಿತು. ನಮ್ಮ ಚಿಕ್ಕಮ್ಮಂದಿರಲ್ಲಿ ಒಬ್ಬಾಕೆಯನ್ನು ಮಾಯಸಂದ್ರಕ್ಕೆ ಕೊಟ್ಟಿತ್ತೆಂದು ಕೇಳಿದಾಗ ನಮ್ಮ ಹಿರಿಯರೂ ಮಾಯಸಂದ್ರದಲ್ಲಿದ್ದರೆಂದು ನಮ್ಮ ತಾಯಿ ಹೇಳಿದ್ದು ನೆನಪಿಗೆ ಬಂದಿತು. ಆದರೆ ಮಾಯಸಂದ್ರದಲ್ಲಿ ಎಷ್ಟುದಿನವಿದ್ದರು ? ಏಕೆ ? ಯಾವಾಗ ಅಲ್ಲಿಂದ ಕಡೂರತ್ತ ಸಾಗಿದರು ? ಎಂಬುದು ಇನ್ನೂ ತಿಳಿದಿಲ್ಲ. ನಮ್ಮ ಅಜ್ಜಂದಿರು ನರಸಯ್ಯನವರು, ಅವರ ತಂದೆಯವರು ತಿಮ್ಮರಸಯ್ಯನವರು ಎಂಬಿಷ್ಟು ಶ್ರಾದ್ಧಾನುಷ್ಠಾನದ ಬಲದಿಂದ ನೆನಪಿನಲ್ಲಿದೆ. ಆದರೆ ಈ ಹೆಸರಿನವರು ಮಾಯಸಂದ್ರದಲ್ಲಿ ಹಲವರು ಇದ್ದರೆಂದು ಕೇಳಿರುತ್ತೇನೆ. ಈ ವಿಷಯದಲ್ಲಿ ಹೆಚ್ಚಿಗೆ ಏನೂ ತಿಳಿಯದ್ದರಿಂದಲೂ ಕಾರ್ಯಾಲಯದ ಇತಿಹಾಸದ ಸಂಬಂಧವು ನನ್ನ ದೃಷ್ಟಿಯಿಂದ ನನ್ನ ತಂದೆತಾಯಿಗಳಿಗೆ ಮಾತ್ರವೇ ಇರುವುದರಿಂದಲೂ ಅವರ ವಿಷಯವನ್ನು ಮಾತ್ರ ಇಲ್ಲಿ ಸ್ವಲ್ಪ ಬರೆಯುವೆನು.

## ತಂದೆಯವರು :

ತಂದೆಯವರಿಗೆ ಸರಕಾರದ ರಿಕಾರ್ಡುಗಳಲ್ಲಿ ನಂಜುಂಡಪ್ಪನವರೆಂದು ಹೆಸರಿತ್ತು. ಅವರು ಕೊನೆಗೆ ಶೇಕದಾರಿಯ ಕೆಲಸದಿಂದ ನಿವೃತ್ತರಾದರೂ ಅವರನ್ನು ರಿಕಾರ್ಡುಕೀಪರು ನಂಜುಂಡಪ್ಪನವರೆಂದೇ ಕರೆಯುತ್ತಿದ್ದರು. ನಮ್ಮೂರಿನಲ್ಲಿ ಮಾತ್ರ ನಮ್ಮ ಅಜ್ಜಂದಿರೇ ಬಹಳ ದಿನಗಳಿಂದ ಇರುತ್ತಿದ್ದದ್ದರಿಂದ ನಮ್ಮ ಮನೆಯನ್ನು ಸುಂಕದ ನರಸಪ್ಪನವರ ಮನೆಯೆಂದೇ ಹಳ್ಳಿಯವರು ಕರೆಯುತ್ತಿದ್ದರು. ಆಗಲೇ ಹೇಳಿದಂತೆ ನಮ್ಮ ತಂದೆಯವರು ಮನೆಯನ್ನು ಹೊಸದಾಗಿ ಕಟ್ಟಿಸಿದ ಬಳಿಕವೂ ಅದು ಅಲ್ಲಿಯ ಜನರಿಗೆ ನರಸಪ್ಪನವರಮನೆಯೇ ಆಗಿತ್ತು. ನನಗೆ ಅಜ್ಜನವರ ದರ್ಶನವೇ ಇರಲಿಲ್ಲ. ನನ್ನ ತಿಳಿವಳಿಕೆಯು ತಕ್ಕಮಟ್ಟಿಗೆ ರೂಪಿಸಿಕೊಳ್ಳುವಹೊತ್ತಿಗೆ ತಂದೆಯವರು ಆಗಲೇ ಮುದುಕರಾಗಿದ್ದರು. ಅವರನ್ನು ನೇರಾಗಿ ಮಾತನಾಡಿಸುವಷ್ಟು ಧೈರ್ಯವು ನಮ್ಮಗಳಿಗೆ ಯಾರಿಗೂ ಇರಲಿಲ್ಲವಾದರೂ ಅವರು ಅಂಥಾ ಉಗ್ರರೂಪದವರೇನೂ ಅಲ್ಲ. ನಡತೆಯಲ್ಲಿ ಆದರ್ಶಕುಟುಂಬಿಗಳಾಗಿದ್ದರು. ತಾವು ಕಟ್ಟಿಸಿಕೊಂಡಿದ್ದ ಹೊಸಮನೆಯಲ್ಲಿ ಒಂದುಕೋಣೆಯಲ್ಲಿ ಮಲಗಿದ್ದು ಬೆಳಗಿನ ಝಾವ ಏಳುತ್ತಿದ್ದರು. ರಾತ್ರಿಯಲ್ಲಿಯೇ ಅಣಿಮಾಡಿಟ್ಟುಕೊಂಡಿದ್ದ ಗೋಣಿಯ ಚೀಲ ಕುಡುಗೋಲು ಮುಂತಾದವುಗಳನ್ನು ತೆಗೆದುಕೊಂಡು ತಮ್ಮ ಜೊತೆಯಲ್ಲಿ ಹುಡುಗರಾದ ನಾನು ನಮ್ಮಣ್ಣ ಇಬ್ಬರನ್ನು ಕರೆದುಕೊಂಡು ಹೊರಡುತ್ತಿದ್ದರು. ದಾರಿಯಲ್ಲಿ ಕೆರೆಯಲ್ಲಿ ಅಥವಾ ಕಟ್ಟೆ(ಯಲ್ಲಿ) ಮುಖವನ್ನು ತೊಳೆದುಕೊಳ್ಳುವದು, ಉದಯರಾಗವನ್ನು ಪಾಂಡವಗೀತೆಯನ್ನು ಇನ್ನೂ ಕೆಲವು ಪದಗಳನ್ನು ನನಗೆ ಹೇಳಿಕೊಡುವದು, ಕಾಡುಬೆರಣೆಯನ್ನು ಆಯ್ದು ಗೋಣಿಚೀಲಕ್ಕೆ ತುಂಬಿಕೊಳ್ಳುವದು, ತೋಟಕ್ಕೆ ಹೋಗಿ ಹೊಸದಾಗಿ ಹಾಕಿಸಿದ್ದ ತೆಂಗಿನಸಸಿಗಳಿಗೆ ಬೆರಣಿಯ ಗೊಬ್ಬರವನ್ನು ಹಾಕಿ ಹುಳುನೋಡುವದು, ಅಲ್ಲಿ ಬಿದ್ದಿದ್ದ ತೆಂಗಿನಕಾಯಿ, ಸೋಗೆ ಮುಂತಾದವುಗಳನ್ನು ಕೂಡಿಹಾಕಿಕೊಂಡು, ಹೂ, ತುಳಸಿ, ಕರಿಬೇವು, ಸೊಪ್ಪು, ತರಕಾರಿ - ಮುಂತಾದವನ್ನು ಮನೆಗೆ ತರುವದು ಇದು ಬೆಳಗಿನ ಕಾಲದ ಅವರ ನಿತ್ಯಗಟ್ಟಲೆಯ ಕೆಲಸ. ನನಗೆ ಸ್ವಲ್ಪ ವಯಸ್ಸಾಗಿ ಬೇರೆಯ ಕಡೆಯಲ್ಲಿ ಓದುತ್ತಿದ್ದು ರಜಾಕಾಲದಲ್ಲಿ ಊರಿಗೆ ಬಂದಾಗಲೂ ಅವರು ತೋಟಕ್ಕೆ ನಮ್ಮನ್ನು ತಪ್ಪದೇ ಕರೆದು ಕೊಂಡು ಹೋಗುತ್ತಿದ್ದರು. ಆಗಲೂ ಅವರು ನಮ್ಮನ್ನು ಇನ್ನೂ ಎಳೆಯ ಹುಡುಗನೆಂದೇ ಭಾವಿಸಿ ನನಗೆ ಹೊರುವದಕ್ಕೆ ಸಣ್ಣದೊಂದು ಸೋಗೆ ಹೊರೆಯನ್ನು ಕಟ್ಟಿಕೊಟ್ಟು, ತಾವು ಮಾತ್ರ ದೊಡ್ಡಹೊರೆಯನ್ನೇ ಹೊತ್ತುಕೊಂಡು ತರುತ್ತಿದ್ದರು.

ಬೆಳಿಗ್ಗೆ ಸುಮಾರು ಹತ್ತುಗಂಟೆಯ ಹೊತ್ತಿಗೆ ಸ್ನಾನವನ್ನು ಮಾಡಿ ಆಹ್ನಿಕವನ್ನೂ ದೇವರ ಪೂಜೆಯನ್ನು ಮುಗಿಸಿಕೊಂಡು ವಿಷ್ಣುಸಹಸ್ರನಾಮವೇ ಮುಂತಾದವುಗಳನ್ನು ನಮಗೆ ಹೇಳಿಕೊಡುತ್ತಾ ಊಟದ ಎಲೆ ಹಚ್ಚುವದೇ ಮುಂತಾದ ಚಿಲ್ಲರೆಕೆಲಸಗಳನ್ನು ಮಾಡುತ್ತಿದ್ದು ಹನ್ನೊಂದು ಹನ್ನೊಂದುವರೆ ಗಂಟೆಯೊಳಗೆ ಎಲ್ಲರಿಗೂ ಎಲೆಯನ್ನು ಹಾಕಿ ನಮ್ಮೆಲ್ಲರೊಡನೆ ಭೋಜನ ಮಾಡುತ್ತಿದ್ದರು. ಮನೆಯಲ್ಲಿ ದನಕರುಗಳು ತಕ್ಕಮಟ್ಟಿಗೆ ಯಾವಾಗಲೂ ಇರುತ್ತಿದ್ದದ್ದರಿಂದ ಹಾಲು ಮೊಸರಿಗೆ ಯಾವ ತೊಂದರೆಯೂ ಇರುತ್ತಿರಲಿಲ್ಲ. ತಾವು ತಂದಿದ್ದ ಮತ್ತು ಹಳ್ಳಿಯವರಿಂದ ದೊರಕಿದ್ದ ತರಕಾರಿಗಳನ್ನು ಉಪಯೋಗಿಸುತ್ತಿದ್ದರು. ಊಟವಾದ ಬಳಿಕ ಸ್ವಲ್ಪಹೊತ್ತು ಕೋಣೆಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು. ಆಮೇಲೆ ಒಂದೆರಡು ಗಂಟೆಯ ಮೇಲೆ ಕೋಣೆಯಿಂದ ಫಲವತ್ತಾದ ಹಣ್ಣು, ಬೆಲ್ಲ ಮುಂತಾದವುಗಳನ್ನು ತಂದು ಕಲೆಯಿಸಿ ನಮಗೆಲ್ಲಾ ಹಂಚಿಕೊಟ್ಟು ಬಿಸಿಲು ಮಾಗುತ್ತಲೇ ಇನ್ನೊಂದು ಸಲ ತೋಟಕ್ಕೆ ಹೋಗಿಬರುತ್ತಿದ್ದರು. ಅವರು ತಮ್ಮ ಬಟ್ಟೆಗಳನ್ನು ಯಾವಾಗಲೂ ತಾವೇ ಒಗೆದುಕೊಳ್ಳುತ್ತಿದ್ದರು. ಸಾಯಂಕಾಲ ಮನೆಗೆ ಬಂದು ಊರ ಬಸವಣ್ಣನ ಗುಡಿಯಲ್ಲಿ ಅಥವಾ ನಾಡಿಗರ ಮನೆಯ ಹಜಾರದಲ್ಲಿ ಸ್ವಲ್ಪ ಹೊತ್ತು ಮಾತು ಕಥೆ ಆಡುತ್ತಾ ಕುಳಿತುಕೊಳ್ಳುತ್ತಿದ್ದರು. ಒಂದೊಂದು ಸಲ ಇಸ್ಪೀಟು, ಚದುರಂಗ ಅಥವಾ ಗಂಜೀಪು (ಒಂದು ಬಗೆಯ ಆಟ) ಆಡುತ್ತಿದ್ದುದ್ದೂ ಉಂಟು. ಆದರೆ ದುಡ್ಡು ಇಟ್ಟು ಆಡಿದ ಆಟಗಳು ಯಾವುದೂ ಕಾಣೆ. ಸಾಯಂಕಾಲ ಮುಂಚಿತವಾಗಿ ಮನೆಯನ್ನು ಸೇರಿ ಹುಡುಗರಿಗೆ ಬಾಯಿಪಾಠ ಹೇಳಿಕೊಡುತ್ತಿದ್ದು, ಸಂಧ್ಯಾವಂದನಾದಿಗಳನ್ನು ಮಾಡಿ, ದೇವರಿಗೆ ಮಂಗಳಾರತಿಯಾದ ಬಳಿಕ ಊಟವನ್ನು ಮಾಡಿಕೊಂಡು ಸುಮಾರು ಒಂಭತ್ತು ಘಂಟೆಯ ಹೊತ್ತಿಗೆ ಮಲಗಿಕೊಳ್ಳುತ್ತಿದ್ದರು.

ನಮ್ಮೂರಿನವರಿಗೆ ತಂದೆಯವರಲ್ಲಿ ಬಹಳ ಗೌರವ. ಅವರು ತಮ್ಮ ಕೆಲಸಗಳನ್ನೆಲ್ಲ ಕ್ರಮವರಿತು ಕಾಲಕ್ಕೆ ಸರಿಯಾಗಿ ಮಾಡುತ್ತಿದ್ದರು. ಅವರು ಇಂಥಾ ಹೊತ್ತಿನಲ್ಲಿ ಏನುಮಾಡುತ್ತಿದ್ದರೆಂಬುದನ್ನು ಯಾರು ಬೇಕಾದರೂ ಖಚಿತವಾಗಿ ಹೇಳಬಹುದಾಗಿತ್ತು. ಅವರಿಗೆ ರಹಸ್ಯವೆಂಬುದೇ ತಿಳಿಯದು. ಮನೆಯ ವಿಚಾರವನ್ನು ಯಾರಲ್ಲಿಯಾದರೂ ಮುಚ್ಚುಮರೆಯಿಲ್ಲದೇ ಹೇಳಿಬಿಡುತ್ತಿದ್ದರು. ತೋಟದ ಕೆಲಸವೇ ಅಲ್ಲದೆ ಸ್ವಲ್ಪ ಲೇವಾದೇವಿಯ ವ್ಯವಹಾರವನ್ನೂ ಇಟ್ಟುಕೊಂಡಿದ್ದರು. ಯಾರಲ್ಲಿಯೂ ಸಾಲವನ್ನು ತರುತ್ತಿರಲಿಲ್ಲ. ಸಾಲವನ್ನು ಕೊಡುವಾಗಲೂ ಅವರವರ ಯೋಗ್ಯತೆಗೆ ತಕ್ಕಂತೆ ಕೊಟ್ಟು ಗೊತ್ತುಮಾಡಿದ್ದ ಮಿತವಾದ ಬಡ್ಡಿಯಲ್ಲೂ ಸೋತರೆ ಎಲ್ಲವನ್ನೂ ಬಿಟ್ಟು ಲೆಕ್ಕ ಫೈಸಲು ಮಾಡಿಕೊಳ್ಳುತ್ತಿದ್ದರು. ಅವರ ವ್ಯವಹಾರವೆಲ್ಲಾ ಸ್ಟಾಂಪಿಲ್ಲದ ಬರಿಯ ಕಾಗದದ ಮೇಲೆಯೇ ಸಾಗುತ್ತಿತ್ತು. ಅವರು ಎಂದಿಗೂ

ಕೋರ್ಟಿಗೆ ಹೋದವರಲ್ಲ, ಯಾವದೊಂದು ವ್ಯಾಜ್ಯದಲ್ಲೂ ಸಾಕ್ಷಿಯನ್ನು ಹೇಳಿದವರಲ್ಲ, ವೈಮನಸ್ಯ ಬರಬಹುದಾದ ವ್ಯವಹಾರಗಳಿಗೆ ಅವರು ಅತ್ಯಂತದೂರವಾಗಿರುತ್ತಿದ್ದರು. ಊರಿನಲ್ಲಿ ಯಾವದಾದರೊಂದು ಕಾರಣದಿಂದ ಎರಡುಪಂಗಡಗಳಾದಾಗ ಯಾವದೊಂದು ಪಂಗಡದವರಲ್ಲಿಯೂ ಅಭಿಮಾನವನ್ನು ತೋರಿಸದೆ ತೋರಿದ ಮಟ್ಟಿಗೂ ಮಧ್ಯಸ್ಥಿಕೆಯಿಂದ ಇರುತ್ತಿದ್ದರು.

ಧರ್ಮವಿಚಾರವನ್ನು ಅವರು ಮಿತಿಮೀರಿದ ಶ್ರದ್ಧೆಯಿಂದ ಮಾಡುತ್ತಿದ್ದ-ರೆಂದು ಹೇಳುವದಕ್ಕಾಗುವದಿಲ್ಲ. ಆದರೆ ಗೃಹಸ್ಥಧರ್ಮವನ್ನು ಅವರು ಎಲ್ಲಾ ಬಗೆಯಿಂದಲೂ ಪಾಲಿಸಿಕೊಂಡು ಬಂದರೆಂದು ಧಾರಾಳವಾಗಿ ಹೇಳಬಹುದು. ಹಬ್ಬಹರಿದಿನಗಳಲ್ಲಿ ದೇವರಿಗೆ ವಿಶೇಷಪೂಜೆಮಾಡುವದು, ಬ್ರಾಹ್ಮಣರನ್ನು ಭೋಜನಕ್ಕೆ ಕರೆದು ಸತ್ಕರಿಸುವದು, ಮಾತಾಪಿತೃಗಳ ಶ್ರಾದ್ಧವನ್ನು ಎಚ್ಚರಿಕೆ-ಯಿಂದಲೂ ಪೂಜ್ಯಬುದ್ಧಿಯಿಂದಲೂ ನಡೆಯಿಸುವದು, ಪರಸ್ಥಳಗಳಿಂದ ಬಂದ ವೈದಿಕಬ್ರಾಹ್ಮಣರಿಗೆ ಮನ್ನಣೆಯನ್ನು ತೋರಿಸಿ ಕೊಡುಗೈಯಿಂದ ದಕ್ಷಿಣೆಯನ್ನು ಕೊಡುವದು, ಅತಿಥಿಸತ್ಕಾರವನ್ನು ಮಾಡುವದು, ಇವೆಲ್ಲದರಲ್ಲಿಯೂ ಅವರಿಗೆ ಅಕ್ಕರೆಯಿತ್ತು. ಗದುಗಿನ ನಾರಣಪ್ಪನ ಭಾರತವನ್ನು ಓದಿ ಅರ್ಥಹೇಳುವದು ಅವರಿಗೆ ಮೆಚ್ಚಿನ ಕೆಲಸ. ಅದನ್ನು ಧರ್ಮದ ದೃಷ್ಟಿಯಿಂದ ಕಾಣುತ್ತಿದ್ದರೋ, ಸಾಹಿತ್ಯ ದೃಷ್ಟಿಯಿಂದ ಕಾಣುತ್ತಿದ್ದರೋ ಹೇಳಲಾರೆ. ಯಕ್ಷಗಾನದಲ್ಲಿ ಅವರಿಗೆ ಬಹಳ ಪ್ರೀತಿಯಿತ್ತು. ಅವರು ಸರಕಾರಿಯ ನೌಕರಿಯಲ್ಲಿದ್ದಾಗ ಬಯಲಾಟದಲ್ಲಿ ವೇಷವನ್ನೂ ಹಾಕಿದ್ದರೆಂದು ಕೇಳಿದ್ದೇನೆ. ಸಣ್ಣಪುಟ್ಟ ಪದ್ಯಗಳನ್ನು ಅವರು ರಚಿಸಿದ್ದದ್ದು ನನ್ನ ಕಣ್ಣಿಗೆ ಬಿದ್ದಿದೆ. ಸೆನ್ಸಸ್ಸುಪದ, ಸುಬ್ಬಣ್ಣನಪ್ರಸಂಗ ಮುಂತಾದ ಹಾಸ್ಯರಸಪ್ರಧಾನವಾದ ಅವರ ಕವಿತೆಗಳು ಒಬ್ಬರ ಬಾಯಿಂದ ಒಬ್ಬರ ಬಾಯಿಗೆ ಹರಿದು ಬೇರೆಬೇರೆಯ ಕಡೆಗಳಲ್ಲಿ ಜನರು ಹಾಡಿಕೊಂಡದ್ದನ್ನು ಕೇಳಿದ್ದೇನೆ.

ಬಟ್ಟೆಬರೆಗಳಲ್ಲಿ ಅವರಿಗೆ ಹೆಚ್ಚಿನ ಆಡಂಬರವಿರಲಿಲ್ಲ. ಒಂದು ಉಡುವಪಂಚೆ, ಒಂದುಧೋತ್ರ, ಒಂದು ಸಣ್ಣಪಂಚೆ, ಹೆಗಲಮೇಲೆ ಕೆಂಪು ಜೋಡಿವಸ್ತ್ರ - ಇಷ್ಟು ಅವರ ನಿತ್ಯದ ಉಡುಪು. ಪೆನ್ಶನ್‌ಗೆ ಮೂರು ತಿಂಗಳಿಗೊಂದು ಸಲ ಕಡೂರಿಗೆ ಹೋಗುವಾಗ ಒಂದು ಅಂಗಿಯನ್ನು ತೊಟ್ಟು ಹೆಗಲಮೇಲೆ ವಸ್ತ್ರವನ್ನು ಹಾಕಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ರುಮ್ಮಾಲಿಗೆ ಬಹಳ ಗೌರವವಿತ್ತು. ವಿಶೇಷಸಂದರ್ಭಗಳಲ್ಲಿ ಅವರು ಧರಿಸುತ್ತಿದ್ದ 'ಗದ್ದೆಯ ಮಡಿ' (ದಪ್ಪವಾದ ಬಟ್ಟೆ) ರುಮ್ಮಾಲು ಕೊನೆಯವರೆಗೂ ಅಚ್ಚಳಿಯದೇ ಇತ್ತು. ಮದುವೆ ಮುಂಜಿಗಳ ಕಾಲದಲ್ಲಿ ಒಂದೆರಡು ಬೆಳ್ಳಿಯ ಪಂಚಪಾತ್ರೆಗಳೂ ಹೊರಕ್ಕೆ ಬಂದದ್ದುಂಟು. ಆದರೆ

ಸಾಮಾನ್ಯವಾಗಿ ಒಂದು ತಾಮ್ರದ ಪಂಚಪಾತ್ರೆ ಒಂದು ಹಿತ್ತಾಳೆಯ ತಂಬಿಗೆ ಇವು ತಂದೆಯವರ ಜೊತೆಯಲ್ಲಿಯೇ ಇರುತ್ತಿದ್ದವು. ನಮ್ಮದು ತಕ್ಕಮಟ್ಟಿಗೆ ದೊಡ್ಡ ಕುಟುಂಬವೇ. ಹೆಣ್ಣು ಮಕ್ಕಳ ಅಥವಾ ಸೊಸೆಯರ ಬಾಣಂತಿತನವಾಗಲಿ ಮಕ್ಕಳ ಮದುವೆ, ಮುಂಜಿ, ಜುಟ್ಟು -ಮುಂತಾದವುಗಳಾಗಲಿ ನಡೆಯದ ವರ್ಷವೇ ಇರಲಿಲ್ಲ. ತುಂಬಿದ ಮನೆಗೆ ತಕ್ಕಷ್ಟು ಆಹಾರಾದಿಗಳನ್ನು ತಂದು ನಗುತ್ತಲೇ ಕುಟುಂಬಭರಣವನ್ನು ಮಾಡುವ, ಮನೆಯಲ್ಲಿರುವವರ ಯೋಗಕ್ಷೇಮವೆಲ್ಲವನ್ನೂ ತಪ್ಪದೇ ವಿಚಾರಿಸಿಕೊಳ್ಳುವ ಯಜಮಾನನ ಮನಸ್ಸಿನ ಮಟ್ಟವು ಸ್ವಲ್ಪ ಮೇಲ್ತರದ್ದೇ ಆಗಿರಬೇಕೆಂದು ನನಗೆ ಈಚೆಗೆ ಮನವರಿಕೆಯಾಯಿತು. ನೋಡುವದಕ್ಕೆ ಶೀಘ್ರಕೋಪಿಗಳೆಂದು ಕಾಣುತ್ತಿದ್ದರೂ ಒಟ್ಟಿನಲ್ಲಿ ನಮ್ಮ ತಂದೆಯವರು ಮನೆಯವರಲ್ಲೆಲ್ಲಾ ಸಮಾನವಾದ ಪ್ರೀತಿವಿಶ್ವಾಸವನ್ನು ತೋರಿಸುತ್ತಿದ್ದರೆಂದು ಮನೆಯವರೆಲ್ಲರ ಪ್ರೀತಿವಿಶ್ವಾಸಗಳಿಗೂ ಗೌರವಕ್ಕೂ ಪಾತ್ರರಾಗಿದ್ದು ಉತ್ತಮ ತರಗತಿಯ ಗೃಹಸ್ಥರಾಗಿದ್ದರೆಂದು ಹೇಳಿದರೆ ಹೆಚ್ಚಾಗುವದಿಲ್ಲ.

## ತಾಯಿಯವರು :

ನಮ್ಮ ತಾಯಿಯವರು ಚನ್ನರಾಯಪಟ್ಟಣದ ತಾಲ್ಲೂಕು ಅಣತಿಯಿಂದ ಬಂದರೆಂದು ಆಗಲೆ ಹೇಳಿರುತ್ತೇನೆ. ಅವರ ಹೆಸರು ಲಕ್ಷ್ಮೀದೇವಿ. ಆದರೂ ಅವರನ್ನು ಅಚ್ಚಣ್ಣಮ್ಮ ಎಂದು ಮೋಡಿಯಾಗಿ ಜನರು ಕರೆಯುತ್ತಿದ್ದರು. ಮಕ್ಕಳಾದ ನಾವೆಲ್ಲರೂ 'ಅಕ್ಕಯ್ಯಾ' ಎನ್ನುತ್ತಿದ್ದೆವು. ತಂದೆಯನ್ನು 'ಅಣ್ಣಯ್ಯ' ಎಂದು ಕರೆಯುತ್ತಿದ್ದೆವು. ಯಾರೋ ಅವರಿಬ್ಬರನ್ನು ಹಾಗೆಂದು ಕರೆದದ್ದನ್ನು ಕೇಳಿ ಮಕ್ಕಳೆಲ್ಲರೂ ಒಬ್ಬರನ್ನನುಸರಿಸಿಒಬ್ಬರು ಹೀಗೆ ಸಂಬೋಧಿಸಿರಬೇಕು. ತಾಯಿಯವರನ್ನು ನಮ್ಮ ಮನೆಯ 'ಗೃಹಲಕ್ಷ್ಮಿ' ಎಂದು ಕರೆದರೆ ತಪ್ಪಾಗದು. ನನಗೆ ತಿಳಿವಳಿಕೆ ಬರುವ ಹೊತ್ತಿಗೆ ಅವರು ಆಗಲೇ ಮುದುಕಿಯಾಗಿದ್ದರು. ಆದರೆ ಆಗಲೂ ಅವರ ಮುಖಕಾಂತಿ ಕುಂದಿರಲಿಲ್ಲ. ಅರಿಶಿನಕುಂಕುಮವು ಅವರ ಮೈಬಣ್ಣಕ್ಕೆ ಶೋಭೆಯನ್ನೇ ತಂದುಕೊಟ್ಟಿತ್ತು. ಅವರ ಪ್ರೇಮದ ತಂಬೆಳಕು ನಮ್ಮೆಲ್ಲರ ಮೇಲೂ ಬೀಳುತ್ತಿತ್ತು. ನಾನು ಕಂಡಂತೆ ಅವರು ಬೆಳಗಿನಿಂದ ಸಂಜೆಯವರೆಗೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇದ್ದರು. ಬೆಳಗ್ಗೆ ಎದ್ದಕೂಡಲೆ ಅವರ ಉದಯರಾಗವು ನಮಗೆ ಕೇಳಿಬರುತ್ತಿತ್ತು. ಸ್ನಾನದ ಒಲೆಗೆ ಉರಿಹಾಕುವದು, ದನದಕೊಟ್ಟಿಗೆಯಲ್ಲಿ ಕಸತೆಗೆಯುವದು, ದನಕರುಗಳಿಗೆ ಮೇವುಹಾಕುವದು, ಮನೆಯನ್ನು ಗುಡಿಸುವದು, ಸಾರಿಸುವದು, ವೃಂದಾವನದ ಕಟ್ಟೆಗೆ ನೀರನ್ನು ಹಾಕಿ ತುಳಸಿದೇವಿಗೆ ವಂದಿಸುವದು, ನೀರುಸೇದುವದು, ಅಡಿಗೆಗೆ ಸಿದ್ಧಪಡಿಸುವದು - ಇವುಗಳನ್ನು ಕ್ರಮವಾಗಿ

ಮಾಡಿಕೊಂಡು ಬರುತ್ತಿದ್ದರು. ಸಾಮಾನ್ಯವಾದ ಅಡಿಗೆಯ ಕೆಲಸವೇ ಅಲ್ಲದೆ ಸಮಯ ಬಿದ್ದಾಗ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿಕೊಳ್ಳುವದು ; ಹರಳೆಣ್ಣೆಅಡಲಿ ಕಾಯಿಸುವದು ; ಕೊಬ್ಬರಿಎಣ್ಣೆ ತೆಗೆಯುವದು ; ಸೀಗೆಕಾಯನ್ನು ಹುಡಿಮಾಡಿಕೊಳ್ಳುವದು ; ಹಪ್ಪಳ, ಸಂಡಿಗೆ, ಅರಳು, ಅವಲಕ್ಕಿ, ಹುರಿಗಡಲೆ ಮುಂತಾದ ಸಾಮಾನುಗಳನ್ನು ಸಿದ್ಧಪಡಿಸಿ ಕೊಳ್ಳುವದು - ಈ ಬಗೆಯ ಕೆಲಸಗಳನ್ನು ಕೂಡ ಅವರೇ ಮಾಡಿಕೊಳ್ಳುತ್ತಿದ್ದರು. ಕಷ್ಟಕೆಲಸಗಳನ್ನು ಮಾಡುವದಕ್ಕೆ ಅವರಿಗೆ ಸಹಾಯಕರಾದ ಆಳುಕಾಳುಗಳು ಯಾರೂ ನಮ್ಮ ಮನೆಯಲ್ಲಿ ಇರಲಿಲ್ಲ. ನೆರೆಹೊರೆಯವರು ಒಬ್ಬರಿಗೊಬ್ಬರು ಸಹಾಯಮಾಡುವ ಪದ್ಧತಿಯಿದ್ದ ಆ ಕಾಲದಲ್ಲಿ ನಮ್ಮಂಥವರ ಮನೆಗೆ ಆಳುಕಾಳುಗಳು ಬೇಕೇ ಇರಲಿಲ್ಲ.

ನಮ್ಮ ತಾಯಿಯವರು ಮನೆಯ ಕೆಲಸದ ಬಳಿಕ ಗಂಡಸರು ಮನೆಯಲ್ಲಿಲ್ಲದ ವೇಳೆಯಲ್ಲಿ ಅಕ್ಕಪಕ್ಕದ ಮನೆಯ ಹೆಂಗಸರನ್ನು ಸೇರಿಸಿಕೊಂಡು ತಂಗಮ್ಮನವರಿಂದ ಯಕ್ಷಗಾನದ ಹಾಡುಗಳನ್ನು ಹೇಳಿಸಿ ನಡುನಡುವೆ ಅರ್ಥವನ್ನು ಹೇಳುತ್ತಿದ್ದರು. ಅಂಥ ವೇಳೆಗಳಲ್ಲಿ ನಮ್ಮ ಮನೆಯು ನಿಜವಾಗಿಯೂ ಒಂದು ಮಹಿಳಾಸೇವಾ ಸಮಾಜವಾಗಿರುತ್ತಿತ್ತು. ನನಗೆ ತಂದೆಯವರಿಗಿಂತಲೂ ತಾಯಿಯವರಲ್ಲಿ ಸಲುಗೆ ಸಹಜವಾಗಿಯೇ ಹೆಚ್ಚಾಗಿತ್ತು. ಅವರಿಂದ ನಾನು ದೇವರಲ್ಲಿ ಭಕ್ತಿಯಿಡ ಬೇಕೆಂಬುದನ್ನು ಕಲಿತುಕೊಂಡೆನು. ಆದಕ್ಕಿಂತ ಮುಂಚೆ ನಿಜವಾಗಿಯೂ ನನಗೆ ತಾಯಿತಂದೆಗಳೇ ದೇವರಾಗಿದ್ದರು. ಮಾತಾಪಿತೃಭಕ್ತಿಯು ಬಹುಕಾಲ ನನ್ನ ಮನಸ್ಸಿನಲ್ಲಿ ಮೂಡಿದ್ದಿತು. ತಂದೆತಾಯಿಗಳಿಗೆ ನಿತ್ಯವೂ ನಮಸ್ಕರಿಸಬೇಕೆಂಬುದನ್ನು ನನಗೆ ಯಾರೂ ಹೇಳಿಕೊಡಲಿಲ್ಲ ; ವಿಶೇಷಕಾಲಗಳಲ್ಲಿ ಹೊರತು ನಾನು ತಾಯಿಯವರಿಗೆ ನಮಸ್ಕಾರಮಾಡಿದ ನೆನಪೂ ಇಲ್ಲ. ಆದರೆ ನನಗೆ ತಾಯಿತಂದೆಗಳು ಮಾಡಿದ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಯೋಗವು ಒಂದೇಸಮನೆ ಈವರೆಗೂ ನನ್ನಲ್ಲಿ ನಾಟೇ ಇರುತ್ತದೆ. ದೊಡ್ಡವನಾದಮೇಲೆ ನಾನು ಯಾವದಾದರೂ ಒಂದು ಬರವಣಿಗೆಯನ್ನು ಪ್ರಾರಂಭಿಸುವಾಗ 'ಲಕ್ಷ್ಮೀನಾರಾಯಣಾಭ್ಯಾಂ ನಮಃ' ಎಂದು ಮೊದಲು ಬರೆಯುವ ವಾಡಿಕೆ ಬಂತು. ತಂದೆಯವರಿಗೆ ವ್ಯವಹಾರದಲ್ಲಿ ನಂಜುಂಡಯ್ಯ ಎಂದು ಹೆಸರಿದ್ದರೂ ನಾರಾಯಣ ಎಂಬುದೇ ಅವರ ನಿಜವಾದ ಹೆಸರು. ಇದರಂತೆ ನನ್ನ ತಾಯಿಯವರ ನಿಜವಾದ ಹೆಸರು ಲಕ್ಷ್ಮೀದೇವಿ. ಈ ಹೆಸರುಗಳಿಂದಲೇ ಅವರಿಬ್ಬರನ್ನೂ ನಾನು ತರ್ಪಣಾದಿ ಕಾಲದಲ್ಲಿ ಸ್ಮರಿಸಿಕೊಳ್ಳುವದು. ನನ್ನ ಪಾಲಿಗೆ ತಾಯಿತಂದೆಗಳು ನಿಜವಾಗಿಯೂ ಲಕ್ಷ್ಮೀನಾರಾಯಣರುಗಳೇ ಆಗಿದ್ದರು. ಒಂದು ಪದ್ಯದ ಪುಸ್ತಕದಲ್ಲಿ ನಾನು

'ಲಕ್ಷ್ಮೀನಾರಾಯಣಾಭ್ಯಾಂ ನಮಃ' ಎಂಬ ಮಂಗಳವಾಕ್ಯದಿಂದ ಪ್ರಾರಂಭ ಮಾಡಿದ್ದಿದ್ದನ್ನು ಕಂಡು ನನ್ನ ಗೆಳೆಯನೊಬ್ಬನು 'ನಿನಗೆ ಮಾತಾಪಿತೃಗಳಲ್ಲಿ ಇಂಥ ಅಚಲಭಕ್ತಿಯುಂಟಾಗಿರುವದು ಸಹಜವಾಗಿದೆ ; ಅವರು ನಿನ್ನನ್ನು ಸಾಕಿ ಸಲಹಿ ನಿನಗಾಗಿ ತೋಟತುಡಿಕೆ ಮುಂತಾದವುಗಳನ್ನು ಮಾಡಿಟ್ಟಿದ್ದಾರೆ. ನಮ್ಮ ತಂದೆತಾಯಿಗಳನ್ನು ನೋಡು ನನ್ನನ್ನು ಹೀಗೆ ಬರಿಗೈಯಲ್ಲಿ ಬಿಟ್ಟಿರುತ್ತಾರೆ. ನನಗೆ ಅವರಲ್ಲಿ ಹೇಗೆ ಭಕ್ತಿಯುಂಟಾಗಬೇಕು ?' ಎಂದು ಪೇಚಾಡಿಕೊಂಡನು. ಮಾತಾಪಿತೃಗಳು ನನಗೆ ಮಾಡಿಕೊಟ್ಟಿರುವ ಆಸ್ತಿ ಎಂದರೆ ತೋಟತುಡಿಕೆಗಳೆಂದು ನಾನು ಎಂದಿಗೂ ಎಣಿಸಿರಲಿಲ್ಲ. ಆ ತೋಟತುಡಿಕೆಗಳನ್ನೇ ನನ್ನ ಜೀವನೋಪಾಯಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಸಂದರ್ಭವೂ ನನಗೆ ಈವರೆಗೆ ಬಂದೊದಗಿಲ್ಲ. ಅವರು ನನ್ನನ್ನು ಸುಖವಾಗಿಯೇ ಸಾಕಿಸಲಹಿದರೆಂಬುದು ನಿಜ ; ನಿತ್ಯರೋಗಿಯೆಂಬಂತೆ ಇದ್ದ ನನ್ನ ದೇಹಕ್ಕೆ ಅವರ ಪ್ರೇಮದ ಪೋಷಣೆ ಇಲ್ಲದಿದ್ದರೆ ನಾನು ಅರೆ ಆಯಸ್ಸಿನಲ್ಲಿಯೇ ಈ ದೇಹವನ್ನು ಬಿಟ್ಟುತೆರಳಬೇಕಾಗಿರುತ್ತಿತ್ತೆಂಬುದು ನಿಜ. ಆದರೆ ಅದಕ್ಕಿಂತಲೂ ಮೇಲಾಗಿ ಕರ್ತವ್ಯದಲ್ಲಿ ತತ್ಪರತೆ, ವಿದ್ಯಾರ್ಜನೆಯಲ್ಲಿ ಆದರ, ಓದುಬರಹದಲ್ಲಿ ಹೆಸರುವಾಸಿಯಾಗಬೇಕೆಂಬ ಹಿರಿಯಾಸೆ, ಧರ್ಮದಲ್ಲಿ ಪ್ರೀತಿ - ಇವುಗಳೆಲ್ಲ ಅವರಿಂದಲೇ ನನಗೆ ದೊರೆತ ದೊಡ್ಡ ಆಸ್ತಿ ಎಂದರೆ ಅತ್ಯುಕ್ತಿಯಾಗುವದಿಲ್ಲ. ಅವರು ನನ್ನ ಚಿಕ್ಕವಯಸ್ಸಿನಲ್ಲಿಯೇ ಇವುಗಳ ಬೀಜಾವಾಪವನ್ನು ಮಾಡದೇ ಇದ್ದಿದ್ದರೆ ಎಂದಿಗೂ ಜೀವನದಲ್ಲಿ ನನಗೆ ಸಿಕ್ಕಿರುವ ಸುಖಲೇಶವು ನನ್ನದಾಗುತ್ತಿರಲಿಲ್ಲ ; ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಬೆಳವಣಿಗೆಯ ಇತಿಹಾಸದಲ್ಲಿ ನನಗೆ ಪಾಲೂ ಸಿಕ್ಕುತ್ತಿರಲಿಲ್ಲ. ಅದರಲ್ಲಿಯೂ ನನಗೆ ತಂದೆಗಿಂತ ತಾಯಿಯವರಿಂದಲೇ ಈ ವಿಷಯದಲ್ಲಿ ಹೆಚ್ಚಿನ ಸಹಾಯವಾಯಿತು. ಅವರು ನನಗೆ ಮಾತ್ರವೇ ಅಲ್ಲದೆ ಸುತ್ತಮುತ್ತಲಿನ ಅನೇಕರಿಗೆ ತಾಯಿಯಾಗಿದ್ದರು. ಮನೆಯಲ್ಲಿ ಕಾಳುಕಡ್ಡಿ, ಹುಲ್ಲುಸೊಪ್ಪು, ಸೋಗೆಮಟ್ಟೆ, ಹಾಲುಮೊಸರು, ತರಕಾರಿ - ಮುಂತಾದವುಗಳೆಲ್ಲವೂ ಈಶ್ವರನ ಕೃಪೆಯಿಂದ ತುಂಬಿರುತ್ತಿದ್ದವು. ಇವುಗಳನ್ನು ಮನೆಯ ಉಪಯೋಗಕ್ಕೇ ಅಲ್ಲದೆ ಬಡಬಗ್ಗರಿಗೆ ವಿನಿಯೋಗಿಸುವದರಲ್ಲಿ ನಮ್ಮ ತಾಯಿ ನಿಜವಾಗಿ ಲಕ್ಷ್ಮೀದೇವಿಯೇ ಆಗಿರುತ್ತಿದ್ದರು. ಹಿಂದಿನಕಾಲದ ಮನೆಯ ಯಜಮಾನಿತಿಯಾದರನೇಕರಲ್ಲಿ ದಯಾದಾಕ್ಷಿಣ್ಯಗಳು ಸಹಜವಾಗಿರುತ್ತಿದ್ದವಷ್ಟೆ ? ಅದರಂತೆ ನಮ್ಮ ತಾಯಿಯವರಲ್ಲಿಯೂ ಆ ಗುಣಗಳು ಹೆಚ್ಚಿನ ಪ್ರಮಾಣದಲ್ಲಿದ್ದವು. ಅವರು ಮನೆಗೆ ಬಂದ ನೆರೆಯವರನ್ನಾಗಲಿ ರೈತರುಗಳನ್ನಾಗಲೀ ಬರಿಗೈಯಿಂದ ಎಂದೂ ಕಳುಹಿಸಿದವರಲ್ಲ. ಇದರ ಜೊತೆಗೆ

ಅನುಭವವೈದ್ಯದ ಹಲವು ವಿಷಯಗಳು ಅವರಿಗೆ ಪರಿಚಿತವಾಗಿರುತ್ತಿದ್ದವು. ಬಸರಿಯರಿಗೆ ಔಷಧೋಪಚಾರ, ಬಾಣಂತಿಯರಿಗೆ ಬೇಕಾದ ಲೇಹ್ಯಾದಿಗಳು, ರೋಗದಿಂದ ನರಳುವವರಿಗೆ ಸಣ್ಣಪುಟ್ಟ ಔಷಧಿಗಳು, ಸಪ್ಪೆಯ ಔಷಧಿಗಳ ಕ್ರಮ - ಇವೆಲ್ಲವೂ ಅವರ ಅನುಭವದ ಕರಾಟದಲ್ಲಿರುತ್ತಿದ್ದವು. ನನ್ನ ಶರೀರವು ಚಿಕ್ಕಂದಿನಿಂದಲೂ ಆಗಾಗ್ಗೆ ಯಾವದಾದರೊಂದು ರೋಗಕ್ಕೆ ಬಲಿಯಾಗುತ್ತಲೇ ಇತ್ತು ; ಅಂಥ ಸಂದರ್ಭದಲ್ಲಿ ತಾಯಿಯವರೇ ನನಗೆ ಔಷಧೋಪಚಾರ, ಪಥ್ಯ, ಇವುಗಳನ್ನು ಕ್ರಮವಾಗಿ ನಡೆಯಿಸಿ ಗುಣಪಡಿಸುತ್ತಿದ್ದರು. ತಂದೆಯವರು ತೋಟದ ಕೆಲಸಕ್ಕೆ ಬೇಕಾಗುವ ಸಾಮಾನುಗಳೇ ಅಲ್ಲದೆ ಅಕ್ಕಸಾಲಿಗರು, ಬಡಗಿಯವರು, ಒಡ್ಡರು - ಮೊದಲಾದವರಿಗೆ ಬೇಕಾಗುವ ಶ್ರವಣ, ತಕ್ಕಡಿ, ತೂಕದ ಗುಲಗಂಜಿ, ಹಣ, ಬಾಚಿ, ಉಳಿ, ಅರ, ಹಾರೆ, ಗುದ್ದಲಿ, ಪಿಕಾಶಿ - ಇಂಥಸಾಮಾನುಗಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದರು. ಆ ಆಯುಧಗಳನ್ನು ತಾವೇ ಉಪಯೋಗಿಸ-ಬಲ್ಲವರೂ ಆಗಿದ್ದರು ; ತಾಯಿಯವರಿಗೂ ಅಲ್ಪಪ್ರಮಾಣದಲ್ಲಿ ಅವುಗಳ ಅನುಭವವೆಲ್ಲ ಇರುತ್ತಿತ್ತು. ಈ ಅನುಭವವು ನಮ್ಮ ಮನೆಯ ಉಪಯೋಗಕ್ಕೇ ಅಲ್ಲದೆ ನಮ್ಮ ಪರಿಚಿತರ ಉಪಯೋಗಕ್ಕೂ ಬರುತ್ತಿತ್ತು. ತಾಯಿಯವರ ವರ್ಣನೆ ಇಲ್ಲಿಗೆ ಸಾಕು. ಅವರ ಮುಖದಲ್ಲಿ ಸೂಸುತ್ತಿದ್ದ ಶಾಂತಿಯ ಕಳೆ, ಹೃದಯದ ಆರ್ದ್ರತೆ, ಪರೋಪಕಾರದಲ್ಲಿ ತತ್ಪರತೆ, ನನ್ನಲ್ಲಿತ್ತೆಂದು ನಾನು ಭಾವಿಸಿಕೊಂಡಿದ್ದ ಮಿಗಿಲಿಲ್ಲದ ಪ್ರೇಮ - ಇವುಗಳ ಚಿತ್ರವು ಇನ್ನೂ ನನ್ನ ಅಂತಃಕರಣವನ್ನು ಬಿಟ್ಟು ಕದಲಿರುವದಿಲ್ಲ.

### ತಂಗಕ್ಕನವರು :

ಇವರು ನನಗೆ ಗೊತ್ತಿರುವಂತೆ ಮನೆಯ ಹೆಣ್ಣುಮಕ್ಕಳಲ್ಲಿ ಎರಡನೆಯವರು. ಬಹುಕಾಲದವರೆಗೆ ಅವರೊಬ್ಬರೇ ನನಗೆ ಅಕ್ಕನೆನ್ನುವಷ್ಟು ಮಟ್ಟಿಗೆ ಅವರ ಪ್ರಭಾವವು ನನ್ನ ಮೇಲೆ ಬಿದ್ದಿತ್ತು. ಅವರ ಗಂಡ ನಮ್ಮ ಗುಂಡಪ್ಪ ಭಾವ, ಆಗಾಗ ಮನೆಗೆ ಬರುತ್ತಿದ್ದರು. ಒಂದೊಂದು ಸಲ ಗಂಡನ ಮನೆಗೂ ಹೋಗುವದುಂಟಾದರೂ ತಂಗಕ್ಕನವರಿಗೆ ನಮ್ಮ ಮನೆಯಲ್ಲಿಯೇ ವಾಸ ಹೆಚ್ಚು. ಭಾವ ಬಂದಾಗಲೆಲ್ಲ ನನಗೆ ಕಲ್ಲುಸಕ್ಕರೆ, ಹಲಸಿನಹಣ್ಣು ಮಿಠಾಯಿ ಅಥವಾ ಮತ್ತೆ ಯಾವದಾದರೂ ತಿಂಡಿಯನ್ನು ತಂದು ಕೊಡುತ್ತಿದ್ದರು. ಆದ್ದರಿಂದ ಅವರಲ್ಲಿ ನನಗೆ ಬಹಳ ಪ್ರೀತಿ. ಒಟ್ಟಿನಲ್ಲಿ ನನಗೆ ತಂಗಕ್ಕನೆಂದರೆ ಹೆಜ್ಜೇನು ಸವಿದಂತೆ ; ಅವರ ತರುವಾಯ ತಾಯಿತಂದೆಗಳು. ಆಗ ಹೆಣ್ಣುಹುಡುಗರ 'ಸ್ಕೂಲುಗಳು' ಇರಲಿಲ್ಲವಾದರೂ ಅವರು ಹೇಗೆ ಓದುಬರಹ ಕಲಿತರೋ ನಾನರಿಯೆ. ಅವರು ಯಕ್ಷಗಾನದ ಹಾಡುಗಳನ್ನು ರಾಗವಾಗಿ ಹೇಳುವದು ನನ್ನ ಕಿವಿಗೆ ಬಹಳ ಇಂಪಾಗಿ ತೋರುತ್ತಿತ್ತು. ಸಂಗೀತದ ರುಚಿ ಅವರಿಂದಲೇ

ಆಯಿತೆಂದು ಹೇಳಬಹುದು ; ಮುಂದೆ ನನಗೆ ಭಜನೆಯಲ್ಲಿ ಆದರವುಂಟಾಗಲು ಇದೊಂದು ಕಾರಣವಾಯಿತು. ಯಕ್ಷಗಾನದ ಪದಗಳನ್ನು ಅವರು ಹಾಡುತ್ತಿದ್ದಾಗ ನಡುನಡುವೆ ನಮ್ಮ ತಾಯಿ ಅರ್ಥವನ್ನು ಹೇಳುವದಕ್ಕೆ ಹೊರಟಾಗ ಅಕ್ಕನವರನ್ನು ಪದಹಾಡಿರೆಂದು ನಾನು ಪೀಡಿಸಿದ್ದೂ ಉಂಟು.

## ಮಿಕ್ಕ ಅಕ್ಕಂದಿರು, ಅಣ್ಣತಮ್ಮಂದಿರು :

ಇನ್ನೊಬ್ಬ ಅಕ್ಕನೆಂದರೆ ಲಕ್ಷ್ಮಕ್ಕ. ಅವರ ಗಂಡ ವೈದಿಕರು. ಅವರ ಕರ್ಮಠತನದಿಂದಲೂ ಅವರು ಅಪರೂಪವಾಗಿ ಊರಿಗೆ ಬರುತ್ತಿದ್ದ ಕಾರಣದಿಂದಲೂ ಅವರಲ್ಲಿಯೂ ನನಗೆ ತುಂಬ ಗೌರವವಿತ್ತಾದರೂ ಹೆಚ್ಚಿನ ಸಲುಗೆಯಿಂದ ಅವರನ್ನು ಮಾತನಾಡಿಸುವದಕ್ಕೆ ಹೋಗುತ್ತಿರಲಿಲ್ಲ. ಈ ಅಕ್ಕನವರು ನನ್ನ ಬಾಲ್ಯದಲ್ಲಿ ಅಷ್ಟು ಜೊತೆಯಲ್ಲಿರಲಿಲ್ಲ ; ಆದರೆ ಈಚೆಗೆ ಅವರ ಸಂಬಂಧವು ನನಗೆ ಅತ್ಯಂತ ನಿಕಟವಾಗಿರುತ್ತದೆಯೆಂಬುದು ಮುಂದೆ ಗೊತ್ತಾಗುವದು. ಹಿರಿಯಕ್ಕ ನಂಜಮ್ಮನವರು, ಹಿರಿಯಣ್ಣ ಶ್ರೀಕಂಠಯ್ಯನವರು, ತಮ್ಮ ಕೃಷ್ಣಸ್ವಾಮಯ್ಯ - ಇವರ ವಿಷಯವನ್ನು ಮುಂದೆ ಅಲ್ಲಲ್ಲಿ ತಿಳಿಸುವೆ. ಕೃಷ್ಣಸ್ವಾಮಯ್ಯ-ಕೃಷ್ಣದೇವರೆಂತಲೂ ಅವನನ್ನು ಕರೆಯುತ್ತಿದ್ದೆವು - ಅವನು ಯಳ್ಳಂಬಳಸೆಯಲ್ಲಿಯೇ ಇದ್ದನು. ಅವನ ಜೊತೆಯಲ್ಲಿ ನಾನು ಓಡಾಡುತ್ತಿದ್ದೆ. ಈ ಕಥೆಗೆ ಮುಂದೆ ಹೇಳುವಷ್ಟು ಸಂದರ್ಭಗಳಲ್ಲಿ ಮಾತ್ರ ಅವನ ವಿಷಯವು ಬೇಕಾಗುತ್ತದೆ.

# 3. ವಿದ್ಯಾಭ್ಯಾಸ - ಯಳ್ಳಂಬಳಸೆ

## ನನ್ನ ಕಣ್ಣಿಗೆ ಕಾಣುತ್ತಿದ್ದ ಯಳ್ಳಂಬಳಸೆ :

ನನಗೆ ಯಳ್ಳಂಬಳಸೆಯಲ್ಲದೆ ಶೈಶವ(ಬಾಲ್ಯ)ದಲ್ಲಿ ಮತ್ತೆ ಯಾವ ಊರಿಗೂ ಹೋಗಿಬಂದ ನೆನಪಿಲ್ಲ. ತಂಗಕ್ಕನವರ ಮನೆಯ ಯಾವದೋ ಶುಭಕಾರ್ಯಕ್ಕಾಗಿ ಒಂದು ಸಲ ಮಾವಿನಕೆರೆ ಬೆಟ್ಟದ ಮೇಲೆ ಇದ್ದಂತೆ ಒಮ್ಮೊಮ್ಮೆ ಭಾಸವಾಗುತ್ತದೆ. ರಾಮನಾಥಪುರದಲ್ಲಿ ನದಿಯಲ್ಲಿ ಕಲ್ಲಿನ ಗೋವಿನ ಹೊಟ್ಟೆಯಲ್ಲಿ ಪುರೋಹಿತರು ನುಸುಳಿಸಿ ಈಚೆಗೆ ಕರೆದುಕೊಂಡು ಬಂದಾಗ ನಗುತ್ತಿದ್ದದ್ದು, ಅಲ್ಲಿ ಯಾರೋ ಒಬ್ಬರ ಮನೆಯಲ್ಲಿ ಸಂಬಾರದ ದಿನಸುಗಳಿಟ್ಟಿದ್ದ ಒಂದು ತಗಡಿನ ಪೆಟ್ಟಿಗೆಯನ್ನು ಬಡಿಯುತ್ತಾ ಪದ ಹೇಳುತ್ತಿದ್ದದ್ದು; ಮನೆಯವರು 'ಹುಡುಗ ಸೂಟಿಯಾಗಿದ್ದಾನೆ' ಎಂದು ಹೊಗಳಿದ್ದು ಇದರ ಒಂದು ಚಿತ್ರವು ಯಾವದೋ ಒಂದು ಕನಸಿನಲ್ಲಿ ಕಂಡಂತೆ ಭಾಸವಾಗುತ್ತದೆ. ಅಂತೂ ಆಗಿನ ಕಾಲಕ್ಕೆ ನನಗೆ ಯಳ್ಳಂಬಳಸೆಯೇ ಮುಖ್ಯವಾದ ಊರು ಎಂದರೆ ತಪ್ಪಾಗದು. ನನ್ನ ಯಳ್ಳಂಬಳಸೆಯಲ್ಲಿ ನಾನು ಆಗಲೇ ವರ್ಣಿಸಿರುವ ಮನೆಯವರು, ಆ ಮನೆಗೆ ಆಗಾಗ್ಗೆ ಬರುತ್ತಿದ್ದ 'ಗಂಡಸರು' ಹೆಂಗಸರು - ಮುಖ್ಯವಾಗಿ ಹೆಂಗಸರು - ಇವರು ಮಾತ್ರ ಇದ್ದರು. ಆಟಕ್ಕೆ ಜೊತೆಗೆ ಬರುತ್ತಿದ್ದ ಕೆಲವು ಹುಡುಗರಂತೂ ಇದ್ದೇ ಇದ್ದರು.

ಆಗ್ಗೆ ನಾನು ಬಲುಮಟ್ಟಿಗೆ 'ಅಕ್ಕಯ್ಯನ' ಪಕ್ಕದಲ್ಲಿ ಅಥವಾ 'ತಂಗಕ್ಕನ' ಬಳಿಯಲ್ಲಿ ಇರುತ್ತಿದ್ದೆನು. ನನಗೆ ಆರುವರ್ಷಗಳು ತುಂಬುವವರೆಗೂ ಜುಟ್ಟು ಬಿಡಿಸಲೇ ಇಲ್ಲ. ತಲೆಯ ಕೂದಲು ತುಂಬಾ ಇತ್ತು ; ಜಡೆಹೆಣೆದು ಹೂಮುಡಿಸುತ್ತಿದ್ದರು. ಆಗಾಗ್ಗೆ ಹೆಣ್ಣುಮಕ್ಕಳಂತೆ ಉಡಿಗೆತೊಡಿಗೆಗಳನ್ನು ಹಾಕುತ್ತಿದ್ದರು. ಒಂಟಿ, ಬಾವಲಿ, ಹುಲಿಯುಗುರು ಅಥವಾ ಜೋಮಾಲೆಸರ - ಮುಂತಾದ ಒಡವೆಗಳನ್ನು ತೊಡಿಸುತ್ತಿದ್ದರು. ಹೆಣ್ಣುಮಕ್ಕಳಂತೆ ಒಡವೆಗಳನ್ನು ಹಾಕಿಕೊಳ್ಳುವದು ಅಪಮಾನವೆಂದೇನೂ ನನಗೆ ಆಗ್ಗೆ ತೋರುತ್ತಿರಲಿಲ್ಲ. ಹೊರಕ್ಕೆ ಹೆಚ್ಚಾಗಿ ಹೋಗದೆ ಹೆಂಗಸರ ಪಕ್ಕದಲ್ಲಿಯೇ ಕೂತುಕೊಂಡು ನಮ್ಮಕ್ಕನವರು ಹೇಳುತ್ತಿದ್ದ ಹಾಡುಗಳನ್ನು ಕೇಳುತ್ತಿದ್ದೆನು. ನಾನು ಬಣ್ಣದಲ್ಲಿ ಕಪ್ಪು ಎಂದು ಯಾರಾದರೂ ನುಡಿದರೆ ಸ್ವಲ್ಪ ಸಿಟ್ಟು ; ಕೆಲವರು 'ತೊಳೆದಕೆಂಡ' ಎಂದು ಹೊಗಳಿದಂತೆ ಮಾಡುತ್ತಿದ್ದ ಹಾಸ್ಯವು ನನಗೆ ಆಗ ಅರ್ಥವಾಗುತ್ತಿರಲಿಲ್ಲ.

## ಚರಂತರ ಕೂಲಿಮಠ :

ಜುಟ್ಟು ಬಿಡಿಸಿದ ಮೇಲೆ ನನ್ನನ್ನು 'ಚರಂತರ ಕೂಲಿಮಠ'ಕ್ಕೆ ಓದುವದಕ್ಕೆ ಕಳುಹಿಸಿದರು. ಓನಾಮ ಪೂಜೆಯಿಂದ ಒಂದು ದೊಡ್ಡ ಹಲಗೆಯ ಮೇಲೆ 'ಓಂ ನಮಃ ಶಿವಾಯ ಸಿದ್ಧಂ ನಮಃ'ಎಂಬ ಮಾತನ್ನು ಬರೆದು ತಂದೆಯವರು ನನ್ನ ಕೈಯಿಂದ ತಿದ್ದಿಸಿದ್ದು ಸ್ವಲ್ಪ ನೆನಪಿದೆ. ಆದರೆ ಚರಂತರಮಠ ನನಗೆ ಮೊದಮೊದಲು ಅಷ್ಟು ರುಚಿಸಲಿಲ್ಲ. ಏಕೆಂದರೆ ಅಲ್ಲಿ ನನ್ನ ಶೈಶವದ ಮಹಿಳೆಯರ ಪ್ರಪಂಚವು ಇರಲಿಲ್ಲ; ನನ್ನಂಥ ಹಲವರು ಮಕ್ಕಳು ಓದುತ್ತಿದ್ದರು, ಅಷ್ಟೇ. ನನ್ನನ್ನು ಮನೆಯವರಂತೆ ಯಾರು ಮುದ್ದಿಸುತ್ತಿರಲಿಲ್ಲ ; ಸಾಲದೆ ಕಡಿಮೆಗೆ ಚರಂತರು ಸಿಡುಮೋರೆಯಿಂದ ಬೆತ್ತವನ್ನು ಆಗಾಗ್ಗೆ ಎತ್ತುತ್ತಾ 'ಓದಿರೆಲೆ !' ಎಂದು ಗಟ್ಟಿಯಾಗಿ ರುದ್ರನಂತೆ ಗರ್ಜಿಸುತ್ತಿದ್ದರು.

ಮಠವು ನಾನು ಆಗಲೇ ಹೇಳಿರುವ ವೀರಭದ್ರದೇವರ ಗುಡಿಯ ಹಿಂದುಗಡೆಯಲ್ಲಿತ್ತು. ಮಠವೆಂದರೆ ಚರಂತರ ಮನೆಯ ಎರಡು ದೊಡ್ಡ ಜಗಲಿಗಳೇ ಹೊರತು ಮತ್ತೇನೂ ಅಲ್ಲ, ಒಂದು ಜಗಲಿ ಇದನ್ನು 'ಜಗತಿ' ಎನ್ನುತ್ತಿದ್ದರು. ಇದರ ಮೇಲೆ ಮಳಲುತರಗತಿಯವರು ಸೇರುತ್ತಿದ್ದರು; ಇನ್ನೊಂದರ ಮೇಲೆ ಓದುವವರು, ಬರೆಯುವವರು, ಚರಂತರ ಬಳಿಯಲ್ಲಿರುತ್ತಿದ್ದರು. ಆಗ ಈಗಿನಂತೆ ಬ್ರಾಹ್ಮಣ, ಬ್ರಾಹ್ಮಣೇತರ ಭಾವನೆಗಳು ಯಾವವೂ ಇರಲಿಲ್ಲ. ಆದ್ದರಿಂದ ಲಿಂಗಾಯಿತಮೇಷ್ಟರು, ಎಂಬ ತಿರಸ್ಕಾರ ಭಾವನೆಯೂ ಯಾರಲ್ಲಿಯೂ ಇರಲಿಲ್ಲ. ಒಬ್ಬರೇ ಉಪಾಧ್ಯಾಯರು, ಹಲವಾರು ವಿದ್ಯಾರ್ಥಿಗಳು. ಹುಡುಗರು ರಾಗವಾಗಿ ಓದುವದು, ಗಟ್ಟಿಯಾಗಿ ಹೇಳಿಕೊಂಡು ಬರೆಯುವದು, ಬಾಯಿಪಾಠ ಒಪ್ಪಿಸುವದು, ಮಗ್ಗಿ ಗಟ್ಟಿಮಾಡುವದು - ಮುಂತಾದವುಗಳ ಗದ್ದಲವು ನಮ್ಮ ಮನೆಯವರೆಗೂ ಸ್ವಲ್ಪ ಸ್ವಲ್ಪ ಕೇಳಿಬರುತ್ತಿತ್ತು.

ಆಗ ಉಪಾಧ್ಯಾಯರಿಗೆ 'ಮೇಷ್ಟರು' ಎಂಬ ಸಂಕೇತನಾಮವಿರಲಿಲ್ಲ. ಅವರನ್ನು 'ಅಯ್ಯನವರು' ಎನ್ನುತ್ತಿದ್ದೆವು. ಅಯ್ಯನವರ ಮಠದಲ್ಲಿ ಬೆಳಗಿನಿಂದ ಸಂಜೆಯವರೆಗೂ ನಾವು ಓದುತ್ತಲೇ ಇರುತ್ತಿದ್ದೆವು. ಇಂತಿಷ್ಟು ಗಂಟೆಗಳ ಕಾಲ ಓದಬೇಕೆಂಬನಿಯಮವಾಗಲಿ ವೇಳಾಪತ್ರಿಕೆಗಳಾಗಲಿ ಇರುತ್ತಿರಲಿಲ್ಲ. ಅಯ್ಯನವರು ಯಾವಾಗ ಯಾರನ್ನು ಕರೆದುಬೇಕಾದರೂ ಪಾಠ ಮಾಡಿಸುತ್ತಿದ್ದರು. ನಡು ನಡುವೆ ಅವರವರ ಮನೆಯವರು ತಮ್ಮ ತಮ್ಮ ಹುಡುಗರನ್ನು ಊಟಕ್ಕೆ, ಎಣ್ಣೆಯಿಟ್ಟು ಎರೆಯುವದಕ್ಕೆ ಅಥವಾ ಮತ್ತೆ ಯಾವದಾದರೊಂದು ಕೆಲಸಕ್ಕೆ ಕರೆದುಕೊಂಡು ಹೋಗಿ ಮತ್ತೆ ಕಳುಹಿಸಿಕೊಡುತ್ತಿದ್ದರು. ಅಯ್ಯನವರು ಯಾವಾಗಲೂ ಮಠದಲ್ಲಿ

ಇರಬೇಕೆಂಬ ನಿಯಮವೇನೂ ಇಲ್ಲ; ಅವರು ತಮ್ಮ ಮನೆಯ ಕೆಲಸಕ್ಕೆ ಬೇಕಾದಾಗ ಹೋಗಿ ಮತ್ತೆ ಬರುತ್ತಿದ್ದರು. ಹುಡುಗರು ಅವರಿಲ್ಲದಾಗ ಮೆಲ್ಲಮೆಲ್ಲನೆ ಮಾತಿಗೆ ಮೊದಲು ಮಾಡಿ ಕೊನೆಗೆ ಜಗಳಕ್ಕೆ ನಿಲ್ಲುವದೂ ಉಂಟು ; ಆದರೆ ಅಂಥ ಸಮಯಕ್ಕೆ ಸರಿಯಾಗಿ ಅಯ್ಯನವರು ಬಂದರೆಂದರೆ ಕುರಿಯ ಮಂದೆಯೊಳಗೆ ತೋಳ ನುಗ್ಗಿದಂತೆ ಆಗುತ್ತಿತ್ತು. ಆಗ ಮುಖ ಮೋರೆಯನ್ನು ನೋಡದೆ ಅಯ್ಯನವರು ಬೆತ್ತದಿಂದ ಹುಡುಗರನ್ನು ಬಾರಿಸುತ್ತಿದ್ದರು. ಅದುವರೆಗಿನ ವಿನೋದವು ಕ್ಷಣದೊಳಗೆ ಮಾಯವಾಗಿ ಲಂಕಾದಹನಕಾಲದಲ್ಲಿ ಎದ್ದ ರಾಕ್ಷಸರ ಗೋಳನ್ನು ನೆನಪಿಗೆ ತರುವಂಥ ಕೋಲಾಹಲವೇ ಎದ್ದುಕೊಳ್ಳುತ್ತಿತ್ತು. ಮಠದಿಂದ ಸಾಯಂಕಾಲವಾದ ಮೇಲೆ ಹೋಗಬೇಕು; ಬೆಳಗ್ಗೆ ಅಯ್ಯನವರು ಏಳುವದರೊಳಗೆ ಮಠಕ್ಕೆ ಬಂದು ಉದಯರಾಗವನ್ನು ಪ್ರಾರಂಭಿಸಬೇಕು. ಸಾಯಂಕಾಲ ಮನೆಗೆ ಹೋಗುವ ಮುಂಚೆ ಬಾಯಿಪಾಠವನ್ನು ಹೇಳಿದ ಮೇಲೆ 'ಹೇಳಿದುದೆಲ್ಲಾ ಬಾರದಿದ್ದರೆ ಕೋದಂಡರಸ !' ಎಂಬ ವಾಕ್ಯವನ್ನು ಹೇಳಿಸಿ ಮನೆಗೆ ಕಳುಹಿಸುತ್ತಿದ್ದರು. ಬೆಳಗ್ಗೆ ಬಂದ ಕೂಡಲೇ ಅಯ್ಯನವರು ಮುಂಚಿತವಾಗಿ ಬಂದವರ ಕ್ರಮತಾರತಮ್ಯಕ್ಕೆ ತಕ್ಕಂತೆ ಮೊದಲನೆಯ ಮಾನ್ಯ (ಬೆತ್ತದಿಂದ ಕೈ ಮೇಲೆ ಶ್ರೀಕಾರ ಬರೆಯುವದು), ಎರಡನೆಯವನಿಗೆ ಸೊನ್ನೆ (ಬೆತ್ತದಿಂದ ಕೈಮೇಲೆ ಸೊನ್ನೆಯನ್ನು ಬರೆಯುವದು)ಆಮೇಲೆ ಒಂದು, ಎರಡು, ಹೀಗೆ ಕೊನೆಯವರೆಗೂ ಒಂದೊಂದು ಹೆಚ್ಚಾಗಿ ಏಟುಗಳು(ಬಲವಾಗಿಯಲ್ಲ ಮೆತ್ತಗೆ) ಬೀಳುತ್ತಿದ್ದವು. ಆದರೂ ಸಹಜವಾಗಿ ಹೊತ್ತಾಗಿ ಬರುವವರಿಗೆ ಹಿರೇಮಣಿ (ಹಿರಿಯ ಮಾಣಿ)ಯ ವಚನದಂತೆ ಬಲವಾಗಿ ಏಟು ಬೀಳುತ್ತಿತ್ತು. ಹೀಗೆ ಉದಯರಾಗವಾದ ಬಳಿಕ ಬೆತ್ತದ ನೀಲಾಂಬರಿ ರಾಗದಿಂದ 'ಹಾಜರಿ ರಿಜಿಸ್ಟರು' ಆಗುತ್ತಿತ್ತು!. ಒಟ್ಟಿನಲ್ಲಿ ಹುಡುಗರಿಗೆ ಮೊದಮೊದಲು ಅಯ್ಯನವರ ಭೀತಿಯೇ ! ಪ್ರೀತಿಕಡಿಮೆ. ತುಂಟ ಹುಡುಗರು, ಅಕ್ರಮವಾಗಿ ಬರುವ ಹುಡುಗರು, ಪಾಠವನ್ನು ಸರಿಯಾಗಿ ಒಪ್ಪಿಸದ ಹುಡುಗರು, ಇವರಿಗೆಲ್ಲ ಅಯ್ಯನವರೆಂದರೆ ನಡುಕ. ರಜಾದಿನಗಳಲ್ಲಿ ಕೂಡ ಅಯ್ಯನವರನ್ನು ಕಂಡರೆ ಅವರು ಎಲ್ಲಿದ್ದರೆ ಅಲ್ಲಿಯೇ ಅವಿತುಕೊಳ್ಳುತ್ತಿದ್ದರು. ಬೆತ್ತದ ಪೆಟ್ಟೇ ಅಲ್ಲದೆ, ಪಾದಬಾಗಿ ಪೀಠ ಕುಳ್ಳಿರಿಸುವದು, ಬಗ್ಗಿ ಕಿವಿಹಿಡಿಸುವದು, ಕೂರೇಳಿಸುವದು, ಕೋದಂಡ ಮುಂತಾದ ಒಂದಕ್ಕಿಂತ ಒಂದು ಉಗ್ರವಾಗಿದ್ದ ಚಿತ್ರಹಿಂಸೆಯ ದಂಡನೆಗಳು ಏರ್ಪಟ್ಟಿದ್ದವು. ಕೆಟ್ಟಹುಡುಗರಿಗೆ ಶಿಕ್ಷೆಯಾಗುವದೇ ಮದ್ದು ಎಂತ ಆಗಿನವರ ಭಾವನೆಯಿತ್ತೆಂದು ತೋರುತ್ತದೆ. ದೈವಗತಿಯಿಂದ ಚಿಕ್ಕ ವಯಸ್ಸಿನ ಹುಡುಗರು ಮಠಕ್ಕೆ ಬರುತ್ತಿರಲಿಲ್ಲ; ಒಟ್ಟಿನ ಮೇಲೆ ಆಗಿನ ಹುಡುಗರಿಗೆ ಶರೀರದಾರ್ಢ್ಯವು ಈಗಿನವರಿಗಿಂತ ಉತ್ತಮವಾಗಿತ್ತೆಂದು ಕಾಣುತ್ತದೆ. ಹೇಗೆ ಆಗಲಿ, ಅಯ್ಯನವರ ಅಂಜಿಕೆಯಿಂದ ಮಠಕ್ಕೆ ತಪ್ಪಿಸಿಕೊಳ್ಳುವ ಚಿಕ್ಕ

ವಯಸ್ಸಿನ ವಿದ್ಯಾರ್ಥಿಗಳೂ, ಅವರನ್ನು ದರದರನೆ ಎಳೆತಂದು ಅಯ್ಯನವರಿಂದ ಪ್ರಾಯಶ್ಚಿತ್ತ ಮಾಡಿಸುವ ದೊಡ್ಡ ವಯಸ್ಸಿನ ಹುಡುಗರು ಕಣ್ಣಿಗೆ ಬೀಳದ ದಿನವೇ ಇರಲಿಲ್ಲ.

ನನಗೆ ಮಠವು ಏತಕ್ಕೆ ಮೊದಮೊದಲು ರುಚಿಸಲಿಲ್ಲವೆನ್ನುವದಕ್ಕೆ ಸಾಕಾದಷ್ಟು ಕಾರಣಗಳನ್ನು ಆಗಲೇ ಹೇಳಿರುತ್ತೇನೆ. ಮಠಕ್ಕೆ ಹೋಗುವ ಹೊತ್ತಿಗೆ ಮನೆಯವರು ಅಂಗಿ ತೊಡಿಸಿ, ಸ್ವಲ್ಪ ತಿಂಡಿಯನ್ನು ಕೊಟ್ಟು ನನ್ನನ್ನು ಕಳುಹಿಸುತ್ತಿದ್ದರು; ಆದರೆ ಆಗಲೂ ಹೇಗೋ ತಪ್ಪಿಸಿಕೊಂಡು ಅಟ್ಟದಮೇಲೆ ಏರಿ ಅಲ್ಲಿಟ್ಟಿದ್ದ ಬೆಲ್ಲ, ತುಪ್ಪ, ಅರಳು -ಮುಂತಾದವುಗಳನ್ನು ಸವಿನೋಡುವದೇ ನನಗೆ ಸರಿಯಾಗಿ ಕಾಣಿಸುತ್ತಿತ್ತು. ಕೆಲವು ವೇಳೆ ವೀರಭದ್ರದೇವರಗುಡಿಯ ಶಿಥಿಲಭಾಗದಲ್ಲಿ ಬಚ್ಚಿಟ್ಟುಕೊಂಡದ್ದೂ ಉಂಟು. ಆದರೆ ಮಠದ ಪೋಲೀಸು (ಮಾನಿಟರ್ಸ್) ಹುಡುಗರು ನನಗಿಂತ ಜಾಣರೆಂದೂ, ಕಾಲಕ್ಕೆ ಸರಿಯಾಗಿ ಮಠದಲ್ಲಿ ಕಾಣಿಸಿಕೊಳ್ಳದಿದ್ದರೆ ಚರಂತರ ಕೈಯಿಂದ ಛಡಿ ಏಟು ತಪ್ಪಿದ್ದಲ್ಲವೆಂತಲೂ ಮನದಟ್ಟಾದ ಬಳಿಕ ಈ ಕಳ್ಳಾಟವನ್ನು ಬಿಟ್ಟುಬಿಟ್ಟೆನು. ಆಮೇಲೆ ಮಠದಲ್ಲಿಯೂ ಆಟವಿದೆ, ವಿನೋದವಿದೆ - ಎಂಬುದು ನನಗೆ ಮನದಲ್ಲಿ ಮಿಂಚುವದಕ್ಕೆ ಮೊದಲಾಯಿತು.

## ಮಠದಲ್ಲಿ ವಿದ್ಯಾಭ್ಯಾಸಕ್ರಮ :

ಮೊದಲನೆಯದಾಗಿ ನನಗೆ ಅನೇಕ ಬಾಲಕರ ಪರಿಚಯವಾಯಿತು. ಅಲ್ಲಿ ಈಗಿನಂತೆ ಹುಡುಗರು ಬೆಂಚುಗಳ ಮೇಲೆ ಕುಳಿತುಕೊಂಡು ಓದುತ್ತಿರಲಿಲ್ಲ. ಮಳಲ ಮೇಲೆ ಬರೆಯುವವರೆಲ್ಲ ಒಂದುಕಡೆ ಸೇರಿರುತ್ತಿದ್ದರು. ಇಂಥವರು ಇಲ್ಲಿಯೇ ಕೂರಬೇಕೆಂಬ ನಿಯಮವೇನೂ ಇರಲಿಲ್ಲ. ಬೇಸರವಾದಾಗ ಮಳಲನ್ನು ಅತ್ತಿತ್ತ ಎರಚುವದಕ್ಕೂ, ಚೇಷ್ಟೆಮಾಡುವದಕ್ಕೂ ತಕ್ಕಷ್ಟು ಅವಕಾಶವಿರುತ್ತಿತ್ತು. ಇದೂ ಅಲ್ಲದೆ ಸಾಯಂಕಾಲಕ್ಕೆ ಮಳಲನ್ನು ಗುಡಿಸಿ ಗುಡ್ಡೆ ಮಾಡುವದು, ಆಗಾಗ್ಗೆ ಹೊಸಮಳಲನ್ನು ತರುವದು, ನೆಲಗುಡಿಸುವದು, ಸಾರಿಸುವದು - ಮುಂತಾದ ಕೆಲಸಗಳಲ್ಲಿಯೂ ನಾನು ಭಾಗವನ್ನು ವಹಿಸಬಹುದಾಗಿತ್ತು. ತೊಂಡೆಸೊಪ್ಪು ಅಥವಾ ಮುಂಚಗಳ್ಳಿಯನ್ನು ಇದ್ದಲಿನ ಜೊತೆಯಲ್ಲಿ ಅರೆದು ಹಲಗೆಗೆ ತಿಕ್ಕುವದು; ಬಳಪದ ಕಣಿಗಳನ್ನು ತಂದು ಬೇಕಾದ ಪ್ರಮಾಣದಲ್ಲಿ ಬರೆಯುವ ಬಳಪಗಳನ್ನು ಕೊಯ್ಯುವದು, ಬಳಪದ ಪುಡಿಯನ್ನು ತೆಂಗಿನ ಕರಟದಲ್ಲಿಟ್ಟುಕೊಂಡು ಹಲಗೆಯ ಮೇಲೆ 'ಪೀಟುವದು' (ರೂಲು ಹಾಕುವದು), ಮಗ್ಗಿಯನ್ನು ಬರೆಯುವದಕ್ಕೆ ಎಕ್ಕದೆಲೆಗಳನ್ನು ತರುವದು; ರಾಕ್ಷಸನ ಪಟ್ಟೆ(ಕತ್ತಾಳಿ)ಗಳನ್ನು ಮುಳ್ಳು ತೆಗೆದು ಬರೆಯುವದಕ್ಕೆ ಉಪಯೋಗಿಸುವದು, ಬಗಿನೆಯ ಕಡ್ಡಿ, ಲಾಳದ ಕಡ್ಡಿ ಇವುಗಳನ್ನು

ಚಾಕುಗಳಿಂದ ಒರೆದು ಚೂಪು ಮಾಡಿಕೊಂಡು ಬರೆಯುವದಕ್ಕೆ ಅಣಿಮಾಡುವದು ; ಕಾಡಿಗೆಮಷಿ, ರಾಗಿಮಷಿ, ಅಳಲೆಕಾಯಿಮಷಿ ಮುಂತಾದವುಗಳನ್ನು ಮಾಡುವದು ಇವೇ ಮುಂತಾದ ಕೆಲಸಗಳನ್ನು ಹುಡುಗರೇ ಮಾಡಿಕೊಳ್ಳ ಬೇಕಾಗಿತ್ತಾದ್ದರಿಂದ ಗುಂಪು ಕಟ್ಟಿಕೊಂಡು ಈ ಕೆಲಸಗಳಿಗೆ ಹೋಗಿಬರುವ ಹುಡುಗರ ಜೊತೆ ನನಗೆ ಸಿಕ್ಕುತ್ತಿತ್ತು.

ಅಕ್ಷರಗಳನ್ನು ಬರೆಯುವಾಗ ಗಟ್ಟಿಯಾಗಿ ಓದಿಕೊಂಡು ಬರೆಯಬೇಕೆಂಬ ನಿಯಮವಿತ್ತು. ಸಂಜೆಯ ಹೊತ್ತಿನಲ್ಲಿ ಕೆಳಗಿನ ತರಗತಿಯ ಹುಡುಗರೆಲ್ಲರೂ ಒಟ್ಟಾಗಿ 'ಕಕ್ಕೆ ಇಳಿಕೊಟ್ಟರೆ ಕಾ !' 'ಇಳಿಯಂ ತೊಡೆದು ಗುಣಿಸು ಕೊಟ್ಟರೆ ಕಿ !' 'ಗುಣಿಸಿನ ದೀರ್ಘಹಾಕಿದರೆ ಕೀ !' ಎಂದು ಮುಂತಾಗಿ ರಾಗದಿಂದ ಹೇಳಿ ಕೊಳ್ಳುವದು ನನಗೆ ಒಂದು ಬಗೆಯ ಉತ್ಸಾಹಜನಕವಾದ ಕೆಲಸವಾಗಿತ್ತು. ಆ ಕಾಲದಲ್ಲಿ ಒಟ್ಟು ಸ್ವರದಲ್ಲಿ ನನ್ನ ಸ್ವರಸೇರಿಸಿದರಾಯಿತೆಂದು 'ಆ !' 'ಈ !' ಎಂದು ಮುಂತಾದ ಸ್ವರಗಳನ್ನಷ್ಟೆ ಶ್ರುತಿಗೆ ಸರಿಯಾಗಿ ಜೋಡಿಸಿದ ತಮಾಷೆಯೂ ಸಿಕ್ಕುತ್ತಿತ್ತು. ಮೇಲಿನ ತರಗತಿಗಳಲ್ಲಿ ಏನು ಓದಿದೆನೆಂಬುದು ಸರಿಯಾಗಿ ನೆನಪಿಲ್ಲ. ಆಗ ಸಾಮಾನ್ಯವಾಗಿ 'ಗೋವುಕಥೆ,' 'ವಿಭೀಷಣಬುದ್ಧಿ' 'ದೀಪದಕಲಿ,' 'ಕಪೋತನ ಭಕ್ತಿ' ಇವುಗಳನ್ನೇ ಹೆಚ್ಚಾಗಿ ಓದುತ್ತಿದ್ದೆವು. ಅದಕ್ಕೂ ಮೇಲಿನ ಅಂತಸ್ತಿನವರು ಜೈಮಿನಿಭಾರತಗಳನ್ನು ಓದುವದು. ವಚನಕಾವ್ಯವನ್ನು ಯಾವದನ್ನೂ ಅಲ್ಲಿ ವಿದ್ಯಾರ್ಥಿಗಳು ಓದಿದಂತೆ ಕಾಣಲಿಲ್ಲ. ಪದ್ಯಗಳನ್ನು ರಾಗದಿಂದ ಓದುವ ಗಮಕಿ ವಿದ್ಯಾರ್ಥಿಗಳನ್ನು ತಯಾರಿಸುವದೇ ಮಠದ ಮುಖ್ಯೋದ್ದೇಶವೆಂಬಂತೆ ತೋರುತ್ತಿತ್ತು. ಅರ್ಥವನ್ನು ಅಯ್ಯನವರೇ ಹೇಳುತ್ತಿದ್ದರು. ಅವರು ಮುಖ್ಯವಾಗಿ ಕಥೆಯ ಸ್ವಾರಸ್ಯವು ತಿಳಿಯುವಂತೆ ಒಟ್ಟರ್ಥವನ್ನು ಹೇಳುತ್ತಿದ್ದರೇ ಹೊರತು 'ಪ್ರತಿಪದಾರ್ಥ'ದ ಗೋಜು ಇರಲಿಲ್ಲ. ಯಾರಾದರೂ ಮಠವನ್ನು ನೋಡುವದಕ್ಕೆ ಬಂದರೆ ಸರಾಗವಾಗಿ ಓದುವ ಹುಡುಗನೊಬ್ಬನಿಂದ ಜೈಮಿನಿಯನ್ನು ಓದಿಸುವದು ಅಯ್ಯನವರಿಗೆ ಒಂದು ಹೆಮ್ಮೆ. ಅಂಥ ಹುಡುಗನು ಬಹುಮಟ್ಟಿಗೆ ಹಿರೇಮಣಿಯಾಗಿರುತ್ತಿದ್ದನು.

ಓದುವದಕ್ಕೆ ಹೆಚ್ಚಾಗಿ ಅಚ್ಚಿನ ಪುಸ್ತಕಗಳಿರಲಿಲ್ಲ. ಓದುವ ಕಾಗದಗಳು, ಸರಕಾರಿ ಸರ್ಕ್ಯುಲರ್‌ಗಳು, ಹುಕುಮ್ನಾಗಳು, (ನಮ್ಮ ತಂದೆಯವರು ನನಗೆ ಇಂಥ ಕೆಲವನ್ನು ಒದಗಿಸಿಕೊಟ್ಟಿದ್ದರು) ಇಂಥವನ್ನೇ ಓದುತ್ತಿದ್ದೆವು. ಇದರಿಂದ ಮೋಡಿಯ ಅಕ್ಷರವನ್ನು ಓದುವದು ಹುಡುಗರಿಗೆ ಬೇಗನೆ ಬರುತ್ತಿತ್ತು. ಓದುವ ಪಾಠವನ್ನು ಮೊದಲು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಬೇಕಾಗುತ್ತಿತ್ತು. ಕಡಾರು (ನಸುಗೆಂಪು ಬಣ್ಣ)ದ ಕಾಗದ ಒರಟುಕಾಗದ ಎಂಬ ಹೆಸರಿನ ಕೈಯಲ್ಲಿ ಮಾಡಿದ

ಕಾಗದ, ಲಾಳದ ಕಡ್ಡಿಯ ಅಥವಾ ಬಗಿನೆ ಕಡ್ಡಿಯ ಲೇಖನಿ ಇವೇ ಮುಖ್ಯ ಸಾಧನಗಳಾಗಿದ್ದದ್ದರಿಂದ ಬರವಣಿಗೆಯು ಬಲು ನಿಧಾನವಾಗಿ ಸಾಗುತ್ತಿತ್ತು ; ಆದರೆ ಬರವಣಿಗೆಯ ಅಂದವು ಬೇಗನೆ ಕೂರುತ್ತಿತ್ತು. ಲಕ್ಷ್ಯವಿಟ್ಟು ಬರೆದುಕೊಳ್ಳುವ ಪದ್ಧತಿ ಏರ್ಪಡುತ್ತಿತ್ತು. ಬರೆದ ಪಾಠವು ಎಷ್ಟು ಸಾಗಿದೆ ಎಂಬುದು ಬರೆದ ಪುಸ್ತಕದಿಂದಲೇ ತಿಳಿದುಬರುತ್ತಿತ್ತು. ಕಾಗದದ ಮೇಲೆ ಬರೆಯುವದಲ್ಲದೆ ಎಕ್ಕದ ಎಲೆಯ ಮೇಲೆ ಮಗ್ಗಿಯನ್ನು ಬರೆಯುವದೂ, ರಾಕ್ಷಸನ ಪಟ್ಟೆಯಮೇಲೆ ಬರೆಯುವದೂ ಆಚರಣೆಯಲ್ಲಿತ್ತೆಂದು ಆಗಲೇ ಹೇಳಿರುತ್ತೇನೆ. ಅಂಥ ಸಂದರ್ಭಗಳಲ್ಲಿ ಲೇಖನಿಯ ಚೂಪಾದತುದಿ ಎಲೆಯಲ್ಲಿ ನಾಟಿಕೊಳ್ಳದಂತೆ ತೇಲಿಸಿ ಬರೆಯುವದು ರೂಢಿಯಾಗುವದಕ್ಕೆ ಸ್ವಲ್ಪ ಶ್ರಮವೇ ಆಗುತ್ತಿತ್ತು. ಹಲಗೆಯ ಮೇಲೂ ಕಾಗದಗಳ ಮೇಲೂ ಬರೆಯುವವರಿಗೆ ಅಯ್ಯನವರು ದಪ್ಪಕ್ಷರದಲ್ಲಿ 'ಕೋಲುಬರವಣಿಗೆ'ಯ ಮೇಲು ಪಂಕ್ತಿಹಾಕಿಕೊಡುತ್ತಿದ್ದರು. ತೀರ ಚಿಕ್ಕವರು ರಟ್ಟಿನ ಮೇಲೆ ಬರೆದ ದೊಡ್ಡ ಅಕ್ಷರಗಳನ್ನು ಮತ್ತೆ ತೀಡು(ತಿದ್ದು)ತ್ತಿದ್ದರು. ದೊಡ್ಡವರಾದ ಬಳಿಕ ಯಾರದ್ದಾದರೂ ಬರವಣಿಗೆಯನ್ನು ನೋಡಿದರೆ ಇಂಥ ಅಯ್ಯನವರ ಹತ್ತಿರ ಓದಿರಬೇಕೆಂದು ಊಹಿಸುವಷ್ಟುಮಟ್ಟಿಗೆ ಅಯ್ಯನವರ ಅಕ್ಷರಗಳು ಒಂದೇ ಸಮನಾಗಿರುತ್ತಿದ್ದವು. ಎಲ್ಲವನ್ನೂ ಬರೆದುಕೊಂಡೇ ಕಲಿಯಬೇಕಾಗಿದ್ದ ಆಗಿನ ಕಾಲಕ್ಕೆ ಬರವಣಿಗೆಗೆ ಹೆಚ್ಚಿನ ಸ್ಥಾನವಿದ್ದದು ಯುಕ್ತವೂ ಆಗಿತ್ತು.

## ಆಟಗಳು :

ಹುಡುಗರಿಗೆ ಮಠದ ಸಾಮಾನುಗಳನ್ನು ಒದಗಿಸುವ ಮೂಲಕವಾಗಿ ಸ್ವಲ್ಪ ಆಟವೂ ಸಿಕ್ಕುತ್ತಿತ್ತೆಂದು ಮೇಲೆ ಹೇಳಿರುತ್ತೇನಷ್ಟೆ. ಇದರ ಜೊತೆಗೆ ಚೆಂಡು, ಬುಗರಿ, ಚಿಣ್ಣಿ, ಗಜ್ಜುಗ - ಮುಂತಾದ ಆಟಗಳು ಇದ್ದವು. ದೊಡ್ಡ ಹುಡುಗರು ಲಗ್ಗೆಚೆಂಡು, ಸಾಲುಚೆಂಡು - ಮುಂತಾದವುಗಳನ್ನು ಆಡುತ್ತಿದ್ದರು. ಚೆಂಡುಗಳನ್ನು ಆಡುವದರ-ಲ್ಲಿಯೂ ಒಂದು ಜಾಣತನವಿತ್ತು. ಈಚಲು ಚಾಪೆಯನ್ನು ಅಡಿಕೆಯ ದಬ್ಬೆಗಳನ್ನು ಉಪಯೋಗಿಸಿ ಮಾಡಿದ 'ರೋಮ್' ಪಠವನ್ನು ದೊಡ್ಡ ಹುರಿಯನ್ನು ಕಟ್ಟಿ ಬಿಟ್ಟಾಗ ಊರಿನವರೆಲ್ಲಾ ಬಂದು ನೋಡುತ್ತಿದ್ದರು. ಪಠದ ಸೆಳತವನ್ನು ತಡೆಯುವವರು ಯಾರೂ ಇಲ್ಲದಾಗ ಪಠದ ಹುರಿಯನ್ನು ಒಂದು ಅರಳಿ ಮರಕ್ಕೆ ಕಟ್ಟುತ್ತಿದ್ದರು. ಗೌರಿಹಬ್ಬದಲ್ಲಿ ಪೆಟ್ಟಲುಗಳು ಕಾಣಬರುತ್ತಿದ್ದವು. ನಮ್ಮೂರಿನಲ್ಲಿ ಚಟಾಕಿ, ಪಟಾಕಿ, ದಢಾಕಿ, ಬಾಣ, ಬಿರುಸು - ಇವುಗಳನ್ನು ನಾನು ಕಂಡದ್ದು ಅಲ್ಪಪ್ರಮಾಣದಲ್ಲಿ. ಹುಡುಗರೊಳಗೆ ಯಾವ ಆಟವೇ ಆಗಲಿ ಅಯ್ಯನವರಾಗಲಿ, ದೊಡ್ಡವರಾಗಲಿ ಅವರೊಡನೆ ಸೇರುತ್ತಿರಲಿಲ್ಲ. ದೊಡ್ಡವರು ಯಾರಾದರೂ 'ಎಲೇ !' ಎಂದು ಕೂಗು ಹಾಕಿದರೆ ಹುಡುಗರ ಆಟ ಅಲ್ಲಿಗೇ ನಿಲ್ಲುತ್ತಿತ್ತು, ಗುಂಪು ಚೆಲ್ಲಾಪಿಲ್ಲಿಯಾಗುತ್ತಿತ್ತು.

ದೊಡ್ಡ ದೊಡ್ಡ ಹುಡುಗರು ಊರ ಅಗಳ ಬೇಲಿಯನ್ನು ದಾಟಿಕೊಂಡು ಹೋಗಿ ಕಟ್ಟೆಯಲ್ಲಿ ಈಜುವದು, ದೂರದಲ್ಲಿ ಮರಗಳನ್ನು ಹತ್ತುವದು, ತೆಂಗಿನಕಾಯಿಗಳನ್ನು ಕದ್ದು ತಿನ್ನುವದು ಮುಂತಾದ ಸಾಹಸ ಕಾರ್ಯಗಳಿಗೂ ಹೋಗುತ್ತಿದ್ದರು. ಆದರೆ ನನ್ನ ವಯಸ್ಸಿನವರು ಅಷ್ಟು ದೂರ ಹೋಗುವದಕ್ಕೆ ಅಂಜುತ್ತಿದ್ದರು. ದೊಡ್ಡವರು ಮೆಚ್ಚುತ್ತಿದ್ದ ವಿನೋದಗಳು ಹುಡುಗರಿಗೆ ಇರಲೇ ಇಲ್ಲವೆಂದು ಭಾವಿಸಬಾರದು. ಮಠದಲ್ಲಿ ಚರಂತಯ್ಯನವರು (ಇವರ ಹೆಸರೇನೋ ಇತ್ತು ಮರೆತು ಹೋಗಿದೆ) ವೀರಭದ್ರದೇವರ ಲೀಲೆಗಳನ್ನು ಅನುಕರಿಸುವ ಕೆಲವು ಅಭಿನಯಗಳನ್ನು ಶಿವಾಚಾರದ ಹುಡುಗರಿಂದ ಮಾಡಿಸುತ್ತಿದ್ದರು. ಮಹಾನವಮಿಯಲ್ಲಿ 'ಕರ್ಣಾರ್ಜುನರ ಕಾಳಗ'ವೇ ಮುಂತಾದ ಯಕ್ಷಗಾನದ ಭಾಗಗಳನ್ನು ಆರಿಸಿ ಹುಡುಗರಿಗೆ ಹೊಸ ಬಟ್ಟೆಗಳನ್ನು ಉಡಿಸಿಕೊಂಡು ಮನೆಮನೆಗೂ ಹೋಗಿ ಆಡಿ ತೋರಿಸುತ್ತಿದ್ದರು ; ಆಗ ಮಹಾನವಮಿಯ ಪದಗಳನ್ನು ಕೇಳಿ ಮನೆಯವರು ತಮತಮಗೆ ಯುಕ್ತವೆಂದು ತೋರಿದ ಸಂಭಾವನೆಯನ್ನು ಅಯ್ಯನವರಿಗೂ ಹುರಿಗಡಲೆ ಬೆಲ್ಲ ಮುಂತಾದವನ್ನು ಬಾಲಕರಿಗೂ ಕೊಡುತ್ತಿದ್ದರು. ಈ ಬಗೆಯ ವಿನೋದವು ಸ್ವಂತವಾಗಿ ಆಡುವಾಗಲೂ ನಮ್ಮ ನಡೆ ನುಡಿಗಳ ಮೇಲೆ ಪರಿಣಾಮ- ವನ್ನುಂಟು ಮಾಡುತ್ತಿತ್ತು. ಉದಾಹರಣೆಗೆ ಸ್ವಲ್ಪ ಬಲವಾಗಿದ್ದ ಹುಡುಗನನ್ನು ಕಂಡರೆ 'ಭಲರೇ ಭೀಮ!' ಎಂದು ಕೂಗುತ್ತಿದ್ದೆವು. ಯಾವನನ್ನಾದರೂ ಹಾಸ್ಯಮಾಡಬೇಕೆಂದು ತೋರಿದಾಗ 'ಭಾಪುರೇ ಕಲಿಕರ್ಣ !' ಎನ್ನುತ್ತಿದ್ದೆವು. ಇತ್ಯಾದಿ.

## ಸ್ಕೂಲು :

ನನಗೆ ಬಹುಕಾಲ ಚರಂತರ ಮಠದ ಯೋಗವು ಇರಲಿಲ್ಲ, ಅಲ್ಲಿ ಹೆಚ್ಚೆಂದರೆ ಒಂದು ವರ್ಷದಷ್ಟು ಕಾಲ ಓದಿರಬಹುದು. ಅಷ್ಟರೊಳಗೆ ನಮ್ಮೂರಿಗೆ 'ಸರ್ಕಾರಿಯ ಸ್ಕೂಲು' ಬಂದುಬಿಟ್ಟಿತು. ಹಿಂದೊಂದು ಸಲ ಸ್ಕೂಲು ಬಂದು ಗ್ರಾಮಸ್ಥರ ಪ್ರೋತ್ಸಾಹವಿಲ್ಲದೆ ಮುಚ್ಚಿಹೋಗಿತ್ತೆಂದು ಕೇಳಿದ್ದೇನೆ. ಈ ಸಲ ಬಂದ ಮೇಷ್ಟರು ಮಾದಾಪುರದ ಚೆನ್ನಯ್ಯನವರು. ಸ್ಕೂಲನ್ನು ಕೆಲವರು 'ಇಸ್ಕೂಲು' ಎಂದು ಕರೆಯುತ್ತಿದ್ದರು. ನಾವು ಈ ಸ್ಕೂಲನ್ನು ಕಂಡೆವೋ ಇಲ್ಲವೊ ಹಳೆಯ ಮಠದ ಪದ್ಧತಿಗಳೆಲ್ಲ ಮಾಯವಾದವು. ಈಗ ಉಪಾಧ್ಯಾಯರಿಗೆ 'ಮೇಷ್ಟರು' ಎಂದು ಹೆಸರು ; ಅವರನ್ನು 'ಸಾರ್' ! ಎಂದು ಕರೆಯಬೇಕು. ಬೆಳಗ್ಗೆ 7 ರಿಂದ 10 ಗಂಟೆಯವರೆಗೆ ಮಧ್ಯಾಹ್ನ 3 ರಿಂದ 5 ಗಂಟೆಯವರೆಗೆ ಪಾಠ, ಆಗಾಗ್ಗೆ ರಜ ದಿನಗಳು ; ಭಾನುವಾರದ ದಿನ ಪೂರ ರಜ - ಇವೆಲ್ಲಾ ವಾಡಿಕೆಗೆ ಬಂದವು. ಅಚ್ಚಿನ ಪುಸ್ತಕಗಳು ನಮ್ಮ ಕಣ್ಣಮುಂದೆ ಹರಡಿದವು. ಬರೆಯುವದಕ್ಕೆ ಹಲಗೆ ಬಳಪಗಳಿಲ್ಲ ; ಸ್ಲೇಟು, ಸ್ಲೇಟಿನ ಬಳಪ ; ಸ್ಲೇಟಿನ ಬಳಪವನ್ನು ಸ್ಲೇಟಿನ ಪೆನ್ಸಿಲ್ಲು ಎಂದು ಕರೆಯಬೇಕು. ಈಗ ಕಡಾರು

(ನಸುಗೆಂಪು ಬಣ್ಣ)ದ ಕಾಗದವಿಲ್ಲ. ಆನೆಯ ಮಾರ್ಕಿನ ಬಿಳಿಯ ಮಿರುಗುವ ಬೆಣ್ಣೆಯಕಾಗದ ! ನಮ್ಮನ್ನೆಲ್ಲಾ ಬೇರೆಬೇರೆಯ ತರಗತಿಗಳಾಗಿ ವಿಂಗಡಿಸಿದರು. 'ವೇಳಾಪತ್ರಿಕೆಯನ್ನು' ಬರೆದು ಒಂದು ಗೂಟಕ್ಕೆ ತಗಲು ಹಾಕಿದರು. ಮಠದಂತೆಯೇ ಇಲ್ಲಿಯೂ ಒಬ್ಬರೇ ಮೇಷ್ಟರು; ಆದರೂ ನಮಗೆಲ್ಲರಿಗೂ ದಿನಕ್ಕೆ ಇಂತಿಂಥ ಪಾಠಗಳು ಆಗಲೇಬೇಕೆಂದು ನಿಯಮವಾಯಿತು. ಆದರೆ ಒಬ್ಬರೇ ಮೇಷ್ಟರಿಂದ ಅಷ್ಟೊಂದು ಪಾಠಗಳನ್ನು ಎಲ್ಲಾ ಹುಡುಗರಿಗೂ ಮಾಡಿಸುವದು ಆಗಲಿಲ್ಲ. ಮೇಷ್ಟರು ಚೆನ್ನಯ್ಯನವರ ತಮ್ಮ ಬಸಪ್ಪ ವಿದ್ಯಾರ್ಥಿಗಳಲ್ಲೆಲ್ಲಾ ಹೆಚ್ಚು ವಯಸ್ಸಿನವನು. ಅವನು ಹಿಂದಿನ ಕಾಲದ ಹಿರೇಮಣಿಯಾದದ್ದಲ್ಲದೆ ಒಬ್ಬ ಸಣ್ಣ ಮೇಷ್ಟರು ಆಗಿ ತೀರಾ ಕೆಳಗಿನ ತರಗತಿಯ ಹುಡುಗರಿಗೆ ಪಾಠವನ್ನು ಹೇಳಿಕೊಡುವವನೂ ಆದನು. ವೇಳಾಪತ್ರಿಕೆಯಲ್ಲಿಯೂ, ಹುಡುಗರ ಪುಸ್ತಕಗಳಲ್ಲಿಯೂ, 'ತರಗತಿ' ಎಂಬ ಶಬ್ದವು ಕಂಡುಬರುತ್ತಿತ್ತಾದರೂ ಅದನ್ನು 'ಕ್ಲಾಸು' ಎಂದು ಕರೆಯುವುದೇ ರೂಢಿಯಾಗಿತ್ತು.

ಹೊಸಪದ್ಧತಿಯ ಸ್ಕೂಲಿನ ವಾತಾವರಣವು ನನಗೆ ಸರಿಯಾಗಿ ಕಂಡಿತೋ ಇಲ್ಲವೋ ಹೇಳಲಾರೆ. ಈಗ ಬೆಳಗಿನಿಂದ ಸಂಜೆಯವರೆಗೆ ಸ್ಕೂಲಿನಲ್ಲಿಯೇ ಇದ್ದೇ ತೀರಬೇಕೆಂಬ ಕಡ್ಡಾಯವಿಲ್ಲದ್ದೊಂದು ಬದಲಾವಣೆ ಒಂದು ವಿಧದಿಂದ ಇಷ್ಟವಾಗಿದ್ದರೂ ಇನ್ನೊಂದು ಬಗೆಯಲ್ಲಿ ಇಷ್ಟವಾಗಿರಲಿಲ್ಲ. ಮನೆಯಲ್ಲಿ ಹೆಚ್ಚು ಕಾಲಹಾಕಬಹುದೆಂದು ಸ್ವಲ್ಪ ಮನಸ್ಸಿಗೆ ಹಿಗ್ಗು ; ಆದರೆ ಮನೆಯವರು 'ಏನಾದರೂ ಓದಿಕೊಳ್ಳೋ, ಬರೆಯೋ !' ಎಂದು ಹೇಳುತ್ತಿದ್ದದ್ದರಿಂದ ಈ ವಿರಾಮವೇನೂ ಅಷ್ಟು ಪ್ರಯೋಜನಕರವಾಗಿ ತೋರಲಿಲ್ಲ. ಇನ್ನೂ ಅನೇಕ ಹುಡುಗರೊಡನೆ ಒಟ್ಟಿಗೆಯಾಗಿ ಆಡುವ ಸುಯೋಗವು ಸ್ವಲ್ಪ ಕಡಿಮೆಯೇ ಆಯಿತೆನ್ನಬಹುದು. ಸ್ಕೂಲಿನಲ್ಲಿಯೂ ಮೊದಲಿನಂತೆ ಹುಡುಗರು ಕಂಡಾಬಟ್ಟೆಯಾಗಿ ಚೆಲ್ಲಾಪಿಲ್ಲಿಯಾಗಿರಲಿಲ್ಲ. ಕ್ಲಾಸುಗಳ ಬಿಗಿ ಬೇರೆ. ಇದು ನನಗೆ ಮೊದಮೊದಲು ಅಷ್ಟು ಹಿತಕರವಾಗಿ ತೋರಲಿಲ್ಲ. ಊರಿನ ಹಳಬರಿಗಂತೂ ಸ್ಕೂಲಿನ ಪದ್ಧತಿ ಕೆಲವು ದಿನಗಳವರೆಗೆ ಒಗ್ಗಲೇ ಇಲ್ಲ. 'ಉದಯರಾಗವನ್ನು ಹೇಳಿಸುವದೇ ಇಲ್ಲವಲ್ಲ !' ಇನ್ನು ಹೊತ್ತು ಮುಳುಗುವಮುಂಚೆಯೇ ಹುಡುಗರನ್ನ ಯಾಕೆ ಬಿಡುತ್ತಾರೆ ; ಇಷ್ಟೊಂದು ಪುಸ್ತಕಗಳನ್ನು ಹುಡುಗರು ಹೇಗಪ್ಪಾ ಓದುತ್ತಾರೆ ? ಇವುಗಳನ್ನೆಲ್ಲಾ ಕೊಂಡು ಕೊಡಬೇಕೆ ? ಎಂದು ಮುಂತಾಗಿ ಅವರು ಹೇಳುತ್ತಿದ್ದರು.

## ಸ್ಕೂಲಿನ ಪಾಠಕ್ರಮ :

ಆಗ ಕಥಾಸಪ್ತತಿ, ಕಥಾಮಂಜರಿ ಎಂಬ ಗದ್ಯ ಪುಸ್ತಕಗಳು, ಪದ್ಯಪಾದವೆಂಬ ಪದ್ಯದಪುಸ್ತಕ, ಪ್ರಶ್ನೋತ್ತರರೂಪವಾಗಿದ್ದ ವಾಗ್ವಿಧಾಯಿನಿ, ಭೂವಿವರಣೆ -

ಮುಂತಾದ ಪುಸ್ತಕಗಳು ನಮ್ಮ ಕೈಯಲ್ಲಿ ಓಡಾಡುತ್ತಿದ್ದವು. ಆಗಾಗ್ಗೆ ಅಮರದ ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು ; ಆಗಲೇ ನನಗೆ ರೈಸು ಸಾಹೇಬರ ಟೀಕಾಮರಕೋಶ ಕಣ್ಣಿಗೆ ಗೋಚರವಾದದ್ದು. ಸಾಮಾನ್ಯವಾಗಿ ಎಲ್ಲವನ್ನೂ ನಾವು ಈಗಲೂ ರಾಗವಾಗಿಯೇ ಓದುತ್ತಿದ್ದೆವು. ಎಲ್ಲವನ್ನೂ ಬಾಯಿಗೆ ಕಲಿಯಬೇಕಾಗಿತ್ತು. ನನಗೆ ಎಲ್ಲವನ್ನು ಕಂಠಪಾಠ ಮಾಡುವದು ಸ್ವಲ್ಪ ಕಷ್ಟವಾಗಿಯೇ ಇರುತ್ತಿತ್ತು. ಆದರೆ ಪಾಠವನ್ನು ಒಪ್ಪಿಸುವಾಗ 'ಭೂವಿವರಣೆ ಎಂದರೇನು' ? 'ಕನ್ನಡ ಭಾಷೆಯು ಎಷ್ಟು ವಿಧವಾಗಿದೆ ?' 'ಸಂಜ್ಞಾಪ್ರಕರಣದಲ್ಲಿ ಏನು ಹೇಳಲ್ಪಟ್ಟಿರುತ್ತದೆ ?' ಎಂಬ ಪ್ರಶ್ನೆಗಳು ಮೇಷ್ಟರ ಬಾಯಿಯಿಂದ ಹೊರಡುವದೇ ತಡ, ಎರಡು ಮೂರು ಹುಡುಗರು ಎದ್ದು ಪುಸ್ತಕದಲ್ಲಿರುವ ಉತ್ತರವನ್ನು ಒಪ್ಪಿಸುವದಕ್ಕೆ ಮುಂದುವರೆಯುತ್ತಿದ್ದರು. 'ಗದ್ದಲ ಮಾಡಬೇಡಿರಿ, ಮ್ಯಾಪ್ ತೋರಿಸುತ್ತೇವೆ!' ಎಂದು ಮೇಷ್ಟರು ಸ್ಕೂಲಿನಲ್ಲಿದ್ದ ಒಂದೇ ಒಂದು ಭೂಗೋಳದ ನಕ್ಷೆಯನ್ನು ಆಗಾಗ್ಗೆ ಬಿಚ್ಚಿ ಮತ್ತೆ ಮಾಸದಂತೆ ಸುತ್ತಿಡುತ್ತಿದ್ದರು. ಆ ಮ್ಯಾಪಿನಲ್ಲಿ ಪೂರ್ವಾರ್ಧಗೋಳ, ಪಶ್ಚಿಮಾರ್ಧಗೋಳ- ಎರಡಿವೆ ಎಂಬುದು ನಮಗೆಲ್ಲರಿಗೂ ಗೊತ್ತು, ಆದರೆ 'ಗೋಳ'ವೆಂದರೇನೆಂಬುದು ನನಗೆ ಬಹುಕಾಲ ಬಗೆಹರಿಯಲಿಲ್ಲ. ಹೆಚ್ಚು ಪ್ರಶ್ನೆ ಹಾಕುವದಕ್ಕೆ ಮಠದಂತೆಯೇ ಇಲ್ಲಿಯೂ ಅವಕಾಶವಿರಲಿಲ್ಲ ; ಮೇಷ್ಟರ ಬೆತ್ತವು ಉದ್ದವಾಗಿಯೂ ಇತ್ತು. ಪದ್ಯಪಾಠದಲ್ಲಿ 'ದುರ್ಜನರ ಸಂಗವನು ತ್ಯಜಿಸು ಮನವೇ ಸಾಧುಸಜ್ಜನರ ಸಂಗವನು ಭಜಿಸು...' - ಎಂಬುದೇ ಮುಂತಾದ ಪದ್ಯಗಳನ್ನು ಬಾಯಿಗೆ ಕಲಿತುಕೊಳ್ಳುವದೇನೋ ನಮಗೆ ಸುಲಭವಾಗಿತ್ತು. ಆದರೆ 'ದುರ್ಜನರ ಕೆಟ್ಟಮನುಷ್ಯರ, ಸಂಗವನು-ಸಹವಾಸವನ್ನು, ತ್ಯಜಿಸು-ಬಿಡು, ಮನವೆ-ಮನಸ್ಸೆ ' ಎಂದು ಪದಕ್ಕೊಂದು ಅರ್ಥವನ್ನು ಹೇಳುವ ಕ್ರಮವು ನಮಗೆ ಹೊಸದು. ನನಗಂತು ಪದ್ಯದ ಒಂದೊಂದು ಮಾತನ್ನು ಓದುತ್ತಲೂ ಅದರಲ್ಲಿಲ್ಲದ ಇನ್ನೊಂದು ಮಾತನ್ನು ಏತಕ್ಕೆ ಹೇಳಬೇಕೆಂಬುದರ ಗುಟ್ಟು ಎಷ್ಟೋ ತಿಂಗಳುಗಳವರೆಗೆ ಬಯಲಾಗಲೇ ಇಲ್ಲ.

ಹಿಂದೆ ಮರದ ಹಲಗೆಯ ಮೇಲೆ ಬರೆಯುತ್ತಿದ್ದಂತೆ ಈಗ ಸ್ಲೇಟಿನ ಮೇಲೆ ಬರೆಯುತ್ತಿದ್ದೆವು. ಈಗಲೂ ಮೇಷ್ಟರು ಮೇಲು ಪಂಕ್ತಿಗಳನ್ನು ಹಾಕಿ ಕೊಡುತ್ತಿದ್ದರು. 'ಸುಳ್ಳು ಹೇಳಬಾರದು' 'ಯಾವಾಗಲೂ ಆಡುತ್ತಿರಬಾರದು' ಮುಂತಾದ ನೀತಿವಾಕ್ಯಗಳನ್ನು ಮೇಲು ಪಂಕ್ತಿಗೆ ಅವರು ಆರಿಸಿಕೊಳ್ಳುತ್ತಿದ್ದರು. ಒಂದೊಂದು ಸಲ ಬಸಪ್ಪನು 'ರಾಯ ಬಂದನಾ ಕುರಬಕೇರಿಗೆ ಕಾಯಕದ್ದನು' ಎಂಬ ಪಂಕ್ತಿಯನ್ನು ಬರೆದು ಕೊಡುತ್ತಿದ್ದನು, ಆದರೆ ಮೇಷ್ಟರು ಆಗಾಗ್ಗೆ ಬರೆದುಕೊಡುತ್ತಿದ್ದ 'ಯಾಮಿಯಾಂತಂಬರದಂತೆ' ಎಂಬ ಮೇಲು ಪಂಕ್ತಿಯು ನನ್ನ ಮನಸ್ಸಿಗೆ ಬಹಳ ಕರೆಕರೆಯನ್ನುಂಟುಮಾಡುತ್ತಿತ್ತು. ಆ ಪಂಕ್ತಿಯು ಪದ್ಯಸಾರದಲ್ಲಿ ಕೊನೆಗೆ ಒಂದು

ಕಡೆಯಲ್ಲಿದೆ ಎಂಬುದು ನನಗೆ ಗೊತ್ತು. ಆದರೆ, 'ಯಾಮಿಯಾಂತಂ' ಎಂದರೇನು ? ಎಂದು ಮನಸ್ಸಿನಲ್ಲಿ ಬಹಳವಾಗಿ ಯೋಚನೆ ಮಾಡುತ್ತಿದ್ದೆನು. ಆ ಪದ್ಯವನ್ನು ಓದಿಕೊಂಡು ಅದರ ಅರ್ಥವೇನೆಂದು ಯಾರನ್ನು ತಾನೇ ಧೈರ್ಯದಿಂದ ಕೇಳಲಿ ? 'ಪದ್ಯಸಾರವು ಏಳನೆಯ ಛಾಪೆಯಾದ್ದರಿಂದ, ಇದಕ್ಕೆ ಏಳಾಣೆ ಕೊಡಬೇಕು !' ಎಂದು ಮೇಷ್ಟರು ಹೇಳಿಕಳುಹಿಸುತ್ತಿದ್ದರು. 'ಪುಸ್ತಕದ ಮೇಲೆ ಐದಾಣೆ ಎಂದೇ ಬರೆದಿದೆ ! ಅದರ ಮೇಲೆ ಒಂದು ಚಿಕ್ಕಾಸನ್ನೂ ಕೊಡುವದಿಲ್ಲ' ಎಂದು ಅಣ್ಣಯ್ಯ ಹೇಳಿದ್ದರು. ಕೊನೆಗೆ ಮೇಷ್ಟರೇ ಒಪ್ಪಿ ಐದಾಣೆ ತೆಗೆದುಕೊಳ್ಳಬೇಕಾಯಿತೆಂದು ತೋರುತ್ತದೆ. ಹೀಗಾಗಿ ಪದ್ಯಸಾರವನ್ನು ಮೇಷ್ಟರ ಮುಂದಾಗಲಿ ಅಣ್ಣಯ್ಯನ ಮುಂದಾಗಲಿ ಬಿಚ್ಚುವದಕ್ಕೆ ಅಂಜಿಕೆಯಾಗುತ್ತಿತ್ತು. ಇದಂತಿರಲಿ. ಸ್ಲೇಟಿನ ಮೇಲೆ 'ಕಾಪಿ' ಬರೆಯುವದಲ್ಲದೆ 'ಉಕ್ತಲೇಖನ'ವನ್ನು ಬೇರೆ ನಾವು ಈಗ ಬರೆಯುತ್ತಿದ್ದೆವು. ಆಗ ಮೇಷ್ಟರು ತಮಗೆ ತೋರಿದ ವಾಕ್ಯಗಳನ್ನೆಲ್ಲಾ ಹೇಳಿ ಬರೆಯಿಸುತ್ತಿದ್ದರು. ವಾಯುವೇಗದಿಂದ ಹೊರಡುತ್ತಿದ್ದ ಅವರ ಮಾತುಗಳನ್ನು ಬೆವರಾದ ಬೆರಳುಗಳಿಂದ ಬರೆಯುವದು ನನಗೆ ಕಷ್ಟವಾಗುತ್ತಿತ್ತು. ಸ್ಲೇಟುಗಳ ತುಂಬ ಬರವಣಿಗೆಯಾಗಿರಬಹುದೆಂದು ತಮಗೆ ತೋರಿದ ಕೂಡಲೇ 'ಕೆಳಗಿಡಿ !' ಎಂದು ಮೇಷ್ಟರು ಅಪ್ಪಣೆ ಮಾಡುತ್ತಿದ್ದರು. ನಾವು ಒಬ್ಬಬ್ಬರಾಗಿ ಹೋಗಿ ಸ್ಲೇಟನ್ನು ತೋರಿಸುತ್ತಿದ್ದೆವು. ಕಾಪಿಯನ್ನು ನೋಡುವಾಗ 'ತಲೆಕಟ್ಟು ಹಾಗೇಕಿದೆಯೋ ?, ಸೊನ್ನೆಗೆ ಸೊನ್ನೆಸುತ್ತಿದೆಯೋ ?' ಎಂದು ಮುಂತಾಗಿ ನಡು ನಡುವೆ ಟೀಕಿಸುತ್ತಾ ಅವರು ತಿದ್ದುತ್ತಿದ್ದರು. ಆದರೆ ಉಕ್ತಲೇಖನದಲ್ಲಿ ಎಷ್ಟು ತಪ್ಪಾಗಿದ್ದರೆ ಅಷ್ಟು ಏಟು ತಿನ್ನಬೇಕಾಗಿದ್ದದ್ದರಿಂದ ನಾವು ಬಲದ ಅಂಗೈಯನ್ನು ಎಡದ ಕೈಯಿಂದ ಒರೆಸಿಕೊಳ್ಳುತ್ತಲೂ ಮುಖವನ್ನು ಸುರುಳಿಸಿಕೊಳ್ಳುತ್ತಲೂ ಬಗೆಬಗೆಯ ಅಭಿನಯಗಳನ್ನು ಮಾಡಬೇಕಾಗುತ್ತಿತ್ತು. ಇದು ಮಠದ ಕಾಲದ 'ವಾಕ್ಯಸೊನ್ನೆ' ಹೊಡೆತಕ್ಕಿಂತ ಸ್ವಲ್ಪ ಬಲವಾಗಿಯೇ ಇತ್ತೆಂದು ನನ್ನ ಭಾವನೆ. ಓದು ಬರಹಗಳಿಗಿಂತ ಲೆಕ್ಕದಲ್ಲಿ ನನಗೆ ಹೆಚ್ಚು ಪೀಕಲಾಟವಾಗುತ್ತಿತ್ತು. ಅಂಕಗಣಿತವೆಂಬ ಹೆಸರಿನ ಒಂದೇ ಒಂದು ಪುಸ್ತಕವು ಬಸಪ್ಪನಲ್ಲಿತ್ತು. ಅದರಲ್ಲಿ 'ಇಲ್ಲಿಂದ ಚೆನ್ನಪಟ್ಟಣಕ್ಕೆ 60 ಮೈಲುಗಳ ದೂರ ಹೋಗಿ ಪುನಃ ಹಿಂದಿರುಗಿ ಬಂದು ಅಲ್ಲಿಂದ ಮತ್ತೊಂದು ಮಾರ್ಗವಾಗಿ ಹೊರಟು ಈವರೆಗೂ ನಡೆದಷ್ಟು ದೂರದಲ್ಲಿರುವ ಗ್ರಾಮಕ್ಕೆ ಸೇರಿ ಅಲ್ಲಿಂದ ತಾನು ಮೊದಲು ಹೊರಟ ಸ್ಥಳಕ್ಕೆ ಬಂದರೆ...' ಎಂಬ ಒಂದು ಲೆಕ್ಕವಿದೆ. ಆ ಮನುಷ್ಯನು ಎಷ್ಟುದೂರ ನಡೆದಿರುವನು ?' ಎಂಬಿದೇ ಅದರಲ್ಲಿ ಮುಖ್ಯವಾದ ಪ್ರಶ್ನೆ. ಬಸಪ್ಪನ ಹತ್ತಿರ ಪುಸ್ತಕವಿತ್ತು ; ಕೊನೆಯಲ್ಲಿ ಇಂತಿಂಥ ಅಭ್ಯಾಸದ ಈ ಪ್ರಶ್ನೆಗೆ ಇಷ್ಟು ಉತ್ತರವೆಂಬುದನ್ನು ಬರೆದಿತ್ತು. ಬಸಪ್ಪನಿಗೆ ಇದನ್ನು ತಿಳಿದುಕೊಳ್ಳುವ ಯೋಗ್ಯತೆಯೂ ಇದ್ದದ್ದರಿಂದ ಅವನು ಬೇಗನೆ ಲೆಕ್ಕವನ್ನು ಮಾಡಿತೋರಿಸಿ ರೈಟ್

ಗುರುತು ಹಾಕಿಸಿಕೊಳ್ಳುತ್ತಿದ್ದನು. ಸ್ಕೂಲಿನಲ್ಲಿ ನಂಬರು ಬುಕ್ಕು ಇಲ್ಲದಿದ್ದರೂ 'ಇಷ್ಟು ಸರಿ' ಎಂದು ಸ್ಲೇಟಿನಮೇಲೆ ಗುರುತು ಮಾಡುವ ವಾಡಿಕೆ ಇತ್ತು. ಆದರೆ ಪ್ರಶ್ನೆಯನ್ನು ಓದುತ್ತಲೂ ನನಗೆ ಲೆಕ್ಕವನ್ನು ಮಾಡುವದಕ್ಕೆ ಬರುತ್ತಿದ್ದ ಅಡ್ಡಿ ಏನೆಂದರೆ 'ಅರವತ್ತು ಮೈಲಿ ನಡೆದದ್ದು ಸರಿ, ಆದರೆ ಅವನು ಅರ್ಧಮಾರ್ಗ ಹಿಂದಕ್ಕೆ ಬಂದದ್ದೇಕೆ ? ಅಲ್ಲಿಂದ ಮತ್ತೊಂದು ಮಾರ್ಗವಾಗಿ ಹೊರಟದ್ದೇಕೆ ?' ಎಂಬ ಯೋಚನೆಯೊಂದು ತಲೆಯೊಳಗೆ ಬಂದು ಬಿಡುತ್ತಿತ್ತು. ಇದರಂತೆಯೇ ಪ್ರತಿಯೊಂದು ಅಭ್ಯಾಸದ ಉದಾಹರಣೆಯಲ್ಲಿಯೂ ಲೆಕ್ಕವನ್ನು ಮಾಡುವದಕ್ಕೆ ಬದಲು ಪ್ರಶ್ನೆಯ ಮೇಲಿನ ಆಕ್ಷೇಪವೇ ನನ್ನ ಮನಸ್ಸಿನಲ್ಲಿ ಮೊಳೆದುಕೊಳ್ಳುತ್ತಿತ್ತು. 'ಒಬ್ಬ ಹುಡುಗನು ಅಕ್ಕನಿಗೆ 4ಹಣ್ಣು, ತಂಗಿಗೆ 3ಹಣ್ಣು ಕೊಟ್ಟನು' ಎಂದಿದ್ದರೆ 'ಅದೇಕೆ ? ಇಬ್ಬರಿಗೂ ಸಮನಾಗಿ ಕೊಡಬಾರದೆ ?' ಎನ್ನಿಸುತ್ತಿತ್ತು. ಮೇಷ್ಟರು ಒಬ್ಬರೇ ಆಗಿದ್ದದ್ದರಿಂದ ಅವರು ಬೇರೊಂದು ತರಗತಿಯ ಹುಡುಗರಿಗೆ ಪಾಠವನ್ನು ಹೇಳಬೇಕಾಗಿ ಬಂದಾಗ ನಮಗೆ ಕೋಟಿಯ ಸ್ಥಾನದವರೆಗಿನ ಅಂಕೆಗಳುಳ್ಳ ದೊಡ್ಡದೊಡ್ಡಸಂಖ್ಯೆಗಳ ಗುಣಾಕಾರದ ಲೆಕ್ಕವನ್ನು ಕೊಟ್ಟುಕೂರಿಸುತ್ತಿದ್ದರು. ಗುಣಲಬ್ಧವು ಸರಿಯಾಗಿ ಬಂತೋ ಇಲ್ಲವೋ ? ಎಂಬುದನ್ನು ನೋಡುವ 'ನವೋನವಿಧಿ' ಕ್ರಮವು ಗೊತ್ತಿದ್ದದ್ದರಿಂದ ಬಸಪ್ಪನು ತನ್ನ ಉತ್ತರವು ಸರಿ ಎಂಬುದನ್ನು ಆ ಕ್ರಮದಿಂದ ತಿಳಿದುಕೊಂಡುಬಿಡುತ್ತಿದ್ದನು. ಒಂದು ದಿನ ಅವನಿಗೆ ಕೊಬರಿಬೆಲ್ಲವನ್ನು ಕೊಟ್ಟು ನಾನು ಆ ಕ್ರಮವನ್ನು ಅವನಿಂದ ತಿಳಿದುಕೊಂಡೆನು. ಸರಿ ಅಲ್ಲಿಂದ ಮುಂದಕ್ಕೆ ನನಗೆ ಒಂದು ಉಪಾಯ ಹೊಳೆಯಿತು. ಉತ್ತರವು ಸರಿಯಾಗದೆ ಇದ್ದರೆ ಕೊನೆಯ ಅಂಕೆಗಳು ಮಾತ್ರ ಸರಿಯಾಗಿದ್ದರೆ ಸಾಕು. ಆ ಮಿಕ್ಕ ಅಂಕೆಗಳ ಒಟ್ಟು 9ರಿಂದ ಭಾಗಿಸಿದರೆ ಶೇಷವು ಸರಿಯಾಗಿ ಬರುವಂತೆ ಕಲ್ಪಿತವಾದ ಅಂಕೆಗಳನ್ನು ಜೋಡಿಸಿದರೂ ಸರಿಯಾಗಿ ಕೂಡುವದೆಂಬುದನ್ನು ಕಂಡುಕೊಂಡೆನು. ಉತ್ತರವು ಸುಮಾರಾಗಿ ಇಷ್ಟಕ್ಕಿಂತ ಕಡಿಮೆಯಾಗಿರುವದಿಲ್ಲವೆಂಬ ಅಂದಾಜನ್ನು ಮಾಡಿಕೊಂಡು ಅಂಕೆಗಳನ್ನು ಜೋಡಿಸಿ ಈ ಉಪಾಯದಿಂದ ಲೆಕ್ಕವನ್ನು ಬೇಗನೆ ಮಾಡಿದಂತೆ ನಟಿಸಿ ಮೇಷ್ಟರ ಕಣ್ಣಿಗೆ ಮಣ್ಣು ತೂರಿದ ಸಂದರ್ಭಗಳೂ ಉಂಟು ! ಕೋಟಿಗಟ್ಟಲೆಯ ಸಂಖ್ಯೆಯ ಲೆಕ್ಕಗಳನ್ನು ಅವರು ತಾನೆ ಗುಣಿಸಿನೋಡುವದಕ್ಕಾಗುತ್ತದೆಯೇ ? ನವೋನವಿಧಿಯೇ ಅವರಿಗೂ ಶರಣು ಎಂಬಿದು ನನ್ನ ಮನಸ್ಸಿಗೆ ಹೊಳೆದದ್ದೇ ಈ ವಕ್ರಮಾರ್ಗಾನುಸರಣೆಗೆ ಕಾರಣ. ಒಟ್ಟಿನಲ್ಲಿ ಹೊಸಸ್ಕೂಲಿಗೂ ಹಳೆಯ ಪಾಠಕ್ಕೂ ಒಂದು ಪ್ರಧಾನ ಭೇದವು ಎದ್ದು ಕಾಣಿಸುತ್ತಿತ್ತೆನ್ನಬಹುದು. ಸ್ಕೂಲಿನ ಕೆಲಸಗಳೆಲ್ಲವೂ ಒಂದಾನೊಂದು ವ್ಯವಸ್ಥೆಯಿಂದ ನಡೆಯುತ್ತಿದ್ದವು. ಲೌಕಿಕವ್ಯವಹಾರದ ತಿಳಿವಳಿಕೆಯು ಹೆಚ್ಚುವದಕ್ಕೆ ಅವಕಾಶವು ಚೆನ್ನಾಗಿತ್ತು. ಆದರೆ ಮಠದಲ್ಲಿ ಆಗಾಗ್ಗೆ ಕಿವಿಗೆ ಬೀಳುತ್ತಲೇ ಇದ್ದ ದೇವರ ಸುದ್ದಿಯೇ ಇಲ್ಲಿರಲಿಲ್ಲ.

## ಸ್ಕೂಲಿನ ಸ್ನೇಹಿತರು :

ಇಷ್ಟುಹೊತ್ತಿಗೆ ನನಗೆ ಹತ್ತುವರ್ಷಗಳಾದವು. ನನ್ನ ಸ್ನೇಹಿತರೊಳಗೆ ಕೆಲವರು ಮುಖ್ಯರಾದರು. ಯಳ್ಳಂಬಳಸೆಯ ನೆನಪು ಉಂಟಾದಾಗ ಅವರ ನೆನಪೂ ಬರುತ್ತವೆ. ಅವರಲ್ಲಿ ಒಬ್ಬನನ್ನು ನಾ.ಶಾ. ಎಂದು ಕರೆಯುವೆನು. ಅವನಿಗೆ ಓದಿನ ಮೇಲೆ ಅಷ್ಟೇನೂ ಅಕ್ಕರೆಯಿಲ್ಲ. ಆದರೆ ಊರೊಳಗೆ ಕುರುಬರಕೇರಿ ಮುಂತಾದವುಗಳಲ್ಲೆಲ್ಲ ನನ್ನೊಡನೆ ಅವನು ಅಡ್ಡಾಡುತ್ತಿದ್ದನು. ನಾವಿಬ್ಬರೂ ಅಮ್ಮನ ಗುಡಿಗೆ ಹೋಗಿ ಬರುತ್ತಿದ್ದದ್ದರಿಂದ ಮನೆಯಲ್ಲಿಯೂ ದೇವರಾಟವನ್ನು ಆಡುತ್ತಿದ್ದೆವು. ಒಬ್ಬರು ಡೋಲು ಬಡಿದರೆ, ಇನ್ನೊಬ್ಬರು ಮೇಲೆ ದೇವರಗಣಬಂದಂತೆ ನಟಿಸುವದು, ಕೆಂಡ ತುಳಿಯುವದು, ಹಳ್ಳದಮ್ಮನ ಪ್ರಸಾದ ಕೇಳುವದು, ದೇವರೆಂದು ಯಾವದಾದರೊಂದು ಮರದ ತುಂಡನ್ನು ಹೊತ್ತುಕೊಂಡು ಕುರು(ಕುರುಹು, ಕುರಿತವಸ್ತು) ಕೇಳುವದು ಈ ಬಗೆಯ ಆಟಗಳಲ್ಲಿ ನಾವಿಬ್ಬರೂ ಅವಶ್ಯವಾಗಿ ಸೇರುತ್ತಿದ್ದೆವು. ಅ॥ಮೈ॥ ಮತ್ತು ಅ॥ಚುಂ॥ ಎಂಬಿಬ್ಬರು ಬ್ರಾಹ್ಮಣೇತರ ಸ್ನೇಹಿತರು ; ಅವರಿಂದ ಕೆಟ್ಟಬೈಗಳ, ಕೆಲವು ಕೆಟ್ಟಚಾಳಿ - ಇವುಗಳ ಅಭ್ಯಾಸವಾಗಿತ್ತು. 'ದಾ' ಎಂಬಾತನೊಬ್ಬ ಬ್ರಾಹ್ಮಣರ ಹುಡುಗ ; ತೋಟದಲ್ಲಿ ಎಳನೀರು ಕದಿಯುವದು, ಬೀಜಕ್ಕೆಂದು ಒಟ್ಟಲುಹಾಕಿದ್ದ ತೆಂಗಿನಕಾಯಿಕಿತ್ತು ತೆಗೆದು ಅದರೊಳಗಿನ ಗೀಬನ್ನು ತಿನ್ನುವದು, ಈ ಬಗೆಯ ಕೆಲಸಗಳಲ್ಲಿ ನಿಸ್ಸೀಮ. ಅವನ ಜೊತೆಯಲ್ಲಿಯೂ ಕೆಲವು ದಿನ ಓಡಾಡಿದ್ದಾಯಿತು. ಮಾವಿನಹಣ್ಣು, ನೇರಿಲಹಣ್ಣು ಮುಂತಾದವನ್ನು ಹುಡುಕಿಕೊಂಡು ನಾವಿಬ್ಬರೂ ತೋಟಗಳಲ್ಲಿಯೂ, ಹೊಲಗದ್ದೆಗಳಲ್ಲಿಯೂ ಅಲೆದಾಡುತ್ತಿದ್ದೆವು. ಆದರೆ ಅವನು ನನಗಿಂತ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನಾದ್ದರಿಂದ ಅವನ ಜೊತೆ ನನಗೆ ಅಷ್ಟಾಗಿ ಸಿಕ್ಕುತ್ತಿರಲಿಲ್ಲ. ನನ್ನ ಸ್ನೇಹಿತರುಗಳು ಕೆಲವರು ನನಗೆ ಕಟ್ಟೆಯಲ್ಲಿ ಈಜುವದನ್ನು ಕಲಿಸಲು ಪ್ರಯತ್ನಪಟ್ಟರು. ತಮ್ಮ(ಕೃಷ್ಣದೇವರು) ಅದನ್ನು ಬೇಗನೆ ಕಲಿತುಕೊಂಡರೂ ನನಗೆ ಮಾತ್ರ ಅದು ಬರಲೇಇಲ್ಲ. ನೆಲದಿಂದ ಕಾಲು ಎತ್ತಬೇಕೆಂದು ಅವರೆಲ್ಲ ಎಷ್ಟು ಹೇಳಿಕೊಟ್ಟರೂ, ಭೂಲೋಕದ ವ್ಯವಹಾರಕ್ಕೆ ಭೂಮಿಯನ್ನು ಬಿಟ್ಟು ಧಾರ್ಮಿಕ ವಿಚಾರಕ್ಕೆ ಏರುವ ಧೈರ್ಯವು ಕೆಲವರಿಗೆ ಕೊನೆಗೂ ಬರುವದಿಲ್ಲವಷ್ಟೆ ? ಹಾಗೆ - ನನಗೆ ನೆಲವನ್ನು ಬಿಟ್ಟು ಕಾಲುಕೀಳುವ ಧೈರ್ಯವು ಬರಲೇಇಲ್ಲ.

# 4. ಯಳ್ಳಂಬಳಸೆಯ ಜನಜೀವನ

## ಉಪನಯನ:

ನನಗೆ ಹತ್ತನೆಯ ವರ್ಷವು ತುಂಬುತ್ತಲೂ ಉಪನಯನವಾಯಿತು. ಹಿಂದಿನ ವರ್ಷಕ್ಕೇ ಉಪನಯನದ ಪ್ರಯತ್ನವಾಗಿ ಇನ್ನೇನು ಎಳೆಹಾಕಬೇಕು ಎನ್ನುವದರಲ್ಲಿ ಮೈಮೇಲೆ ಹತ್ತುಹನ್ನೆರಡು ಸಿಡುಬು ಕಾಣಿಸಿಕೊಂಡದ್ದರಿಂದ, ಆ ಕಾರ್ಯವು ನಿಂತುಹೋಗಿತ್ತು. ಉಪನಯನದ ಕಾಲಕ್ಕೆ ನಮ್ಮ ನೆಂಟರಿಷ್ಟರು ಅನೇಕರು ಬಂದು ಸೇರಿಕೊಂಡರು. ಆಗ ನನಗೆ ನಮ್ಮವರನೇಕರ ಪರಿಚಯವಾಯಿತು. ನಮ್ಮೂರಿನ ಜನರು ಎಷ್ಟರಮಟ್ಟಿಗೆ ಒಬ್ಬರಿಗೊಬ್ಬರು ನೆರವಾಗುತ್ತಾರೆ ಎಂಬುದೂ ಆಗಲೇ ನನಗೆ ಗೊತ್ತಾದದ್ದು. ಉಪನಯನವೆಂಬುದು ನನಗೆ ಮಾತ್ರ ಆದ ಒಂದು ಸಂಸ್ಕಾರವಾಗಿರಲಿಲ್ಲ; ಅದು ಒಂದು ಉತ್ಸವದಂತೆಯೇ ಕಾಣಿಸುತ್ತಿತ್ತು. ಓಲಗವಾದ್ಯಗಳ ಸಂಭ್ರಮದಿಂದ ನಡೆಮಡಿಯ ಮೇಲೆ ನನ್ನನ್ನು ಎಲ್ಲರೂ ಸಂಭ್ರಮದಿಂದ ಕರೆದುಕೊಂಡು ಹೋದದ್ದು ನನಗೆ ಯಾವುದೋ ಒಂದು ವೈಭವಪ್ರಾಪ್ತಿಯಂತೆ ಕಂಡಿತು. ಆ ಸಂದರ್ಭಕ್ಕೆಂದೇ ಮಾಡಿದ್ದ ಉಂಡೆ, ಚಕ್ಕುಲಿ ಮುಂತಾದ ತಿಂಡಿಗಳು, ಬಂದವರಿಗೆ ಕೊಡುವದಕ್ಕೆ ಏರ್ಪಡಿಸಿದ್ದ ಹಣ್ಣುಕಾಯಿ ವಿಳ್ಳೆದೆಲೆ ಮುಂತಾದವುಗಳ ಸಡಗರ, ಸಭಾಪೂಜೆ, ಮುಂತಾದದ್ದೆಲ್ಲ ನನಗೆ ಯಾವುದೋ ಒಂದು ಬೇರೊಂದು ಲೋಕಕ್ಕೆ ಹೋದ ದೃಶ್ಯವಾಗಿತ್ತು.

ವಿಶೇಷವಾಗಿ ಪುರೋಹಿತರಿಗೆ ಇದ್ದ ಗೌರವ ಸ್ಥಾನವು ನನ್ನ ಕಣ್ಣಿಗೆ ಬಿದ್ದದ್ದು ಅದೇ ಮೊದಲು. ಇನ್ನು ಮೇಲೆ ಅವರ ವಶಕ್ಕೇ ನನ್ನನ್ನು ಒಪ್ಪಿಸಿಬಿಡುತ್ತಾರೇನೋ, ಅವರು ಹೇಳಿದಂತೆಯೇ ನಾನು ಕೇಳಿಕೊಂಡು ಇರಬೇಕಾಗುತ್ತದೆಯೇನೋ- ಎಂದು ನನಗೆ ಆಗ್ಗೆ ಭಾಸವಾಗುತ್ತಿತ್ತು. ಉಪನಯನಕ್ಕಾಗಿ ನನಗೆ ಉಡಿಸಿದ್ದ ಹಳದಿಯ ವೇಷ್ಟಿ, ಹೊದಿಕೆ, ಕೊರಳಿಗೆ ಬಿದ್ದ ಜನಿವಾರ, ಅದಕ್ಕೆ ಪೋಣಿಸಿದ್ದ ಕೃಷ್ಣಾಜಿನದ ತುಂಡು, ಸೊಂಟಕ್ಕೆ ಕಟ್ಟಿದ್ದ ಮೌಂಜೀಬಂಧ - ಇವೆಲ್ಲ ನನಗೆ ಹೊಸದೊಂದು ವೇಷವನ್ನೇ ಕೊಟ್ಟಿದ್ದವು. ಪುರೋಹಿತರು ಸಂಧ್ಯಾವಂದನೆ ಮಾಡಿಸಿದ್ದು ಈಗಲೂ ನೆನಪಿದೆ. ಓಲಗದ ಸಂಭ್ರಮದಲ್ಲಿ ಆದ ಗಾಯತ್ರಿಯ ಉಪದೇಶಕ್ಕಿಂತಲೂ ಅವರು ಉಪದೇಶಿಸುತ್ತಿದ್ದ ಆಚಮನಕ್ಕೆ ಸಹಕಾರಕರಣಗಳು, ಗಾಯತ್ರೀಜಪಕ್ಕೆ ಅಂಗವಾಗಿ ಹೇಳಿಕೊಟ್ಟ ತಾಂತ್ರಿಕ ಅಂಗನ್ಯಾಸಕರನ್ಯಾಸಗಳು ನನಗೆ ಬಹಳ ತೊಡಕಾಗಿ ಕಂಡವು. ಅವರು ನನ್ನ ಎದುರಿಗೆ ಕುಳಿತುಕೊಂಡು ಕಣ್ಣು, ಕಿವಿ ಮುಂತಾದ ಅಂಗಗಳನ್ನು ಮುಟ್ಟಿಕೊಳ್ಳುವ ಬಗೆಯನ್ನು ಹೇಳಿಕೊಟ್ಟರೆ ಅವರು ಎಡಗಡೆಗೆ ಕೈ ಹಾಕಿದಾಗ ನಾನು ಬಲಗಡೆಗೆ ಹಾಕುತ್ತಿದ್ದದ್ದನ್ನು ನೋಡಿ ಎಲ್ಲರೂ ಗೊಳ್ಳೆಂದು ನಗುತ್ತಿದ್ದರು. ಆ ಕಾಲಕ್ಕೆ

ನೆರೆದಿದ್ದ ಬೇರೆಯ ವೈದಿಕಬ್ರಾಹ್ಮಣರು, ಮಂತ್ರಗಳ ಮತ್ತು 'ಮುದ್ರೆಗಳ' ವಿಷಯಕ್ಕೆ ಬೇರೆಬೇರೆಯ ಸೂಚನೆಗಳನ್ನು ಕೊಡುತ್ತಿದ್ದರು ; ಆದರ ವಿಷಯಕ್ಕೆ ಆಗುತ್ತಿದ್ದ ಚರ್ಚೆಗಳೇನೂ ನನಗೆ ಅರ್ಥವಾಗದೇ ಇದ್ದರೂ ಇನ್ನು ಮೇಲೆ 'ಶಾಸ್ತ್ರದ' ವಿಷಯವಾಗಿ ಕಲಿತುಕೊಳ್ಳ ತಕ್ಕದ್ದು ಏನೋ ಬರಲಿದೆ ಎಂದು ನನಗೆ ತೋರುತ್ತಿತ್ತು. ಪುರೋಹಿತರನ್ನೂ ಬಂದ ನೆಂಟರನ್ನೂ ಸತ್ಕರಿಸಿ ನಮ್ಮ ತಂದೆತಾಯಿಗಳು ಬೀಳ್ಕೊಟ್ಟ ಕ್ರಮವು ನನ್ನ ಮೇಲೆ ಯಾವುದೋ ಒಂದು ಬಗೆಯ ಹೊಸ ಪರಿಣಾಮವನ್ನುಂಟುಮಾಡಿತು.

## ಊರಿನ ಸಾಮಾನ್ಯ ಸ್ಥಿತಿ :

ನಮ್ಮೂರಿನಲ್ಲಿ ಆಗ್ಗೆ ದುಡ್ಡಿನ ಚಲಾವಣೆ ಅಷ್ಟಾಗಿರಲಿಲ್ಲ. ದಿನಸುಗಳನ್ನು ಬೆಳೆದು ತರಕಾರಿ ಮುಂತಾದವುಗಳನ್ನು ಒಬ್ಬರಿಗೊಬ್ಬರು ಕೊಡುತ್ತಿದ್ದರು. ಬಡವರಿಗೆ ಐಶ್ವರ್ಯವಂತರು ಸಹಾಯಮಾಡುವದು ಸ್ವಾಭಾವಿಕವಾಗಿತ್ತು. ತಮತಮಗೆ ಬೇಕಾದ ವಸ್ತುಗಳನ್ನು ಊರಿನವರು ಬಲುಮಟ್ಟಿಗೆ ವಿನಿಮಯದಿಂದಲೇ ಪಡೆದುಕೊಳ್ಳುತ್ತಿದ್ದರು. ಹೊರಗಿನ ಸಂತೆಗಳಿಂದ ಬರುವ ಸಾಮಾನುಗಳನ್ನು ಕೊಳ್ಳುವದಕ್ಕೆ ಮತ್ತು ಕಂದಾಯವನ್ನು ಕೊಡುವದಕ್ಕೆ - ಇಷ್ಟರಮಟ್ಟಿಗೇ ಹಣವು ಓಡಾಡುತ್ತಿತ್ತೆನ್ನಬಹುದು. ಕ್ಷೌರಿಕರಿಗೆ, ಕುಂಬಾರರಿಗೆ, ಅಗಸರಿಗೆ, ಓಲಗದವರಿಗೆ - ಇವರಿಗೆಲ್ಲ ಆಗ ಇನ್ನು ಪದ್ಧತಿಯಿಂದ (?) (ವಿನಿಮಯ) - ಇದು *ಬಹುಶಃ ಕೆಲಸಕ್ಕೆ ಪ್ರತಿಫಲವಾಗಿ ನಗದಿಗೆ ಬದಲು ಕೃಷಿ ಉತ್ಪನ್ನದಲ್ಲಿ ಕೊಡುವದು ಎಂದಿರಬಹುದು.* ಬಾರಬಲೂಶಯ ಪದ್ಧತಿಯಿಂದ (?) ಮಿರಾಸು (ವಿನಿಮಯ - ರೈತರಿಂದ ಧಾನ್ಯವನ್ನು ಪಡೆಯುವ ಆನುವಂಶಿಕ ಹಕ್ಕು) ಸಲ್ಲುತ್ತಿದ್ದಂತೆ ಕಾಣುತ್ತಿತ್ತು. ಕಣದಲ್ಲಿ ನಾನು ನಮ್ಮ ತಂದೆಯವರೊಡನೆ ಹೋಗಿದ್ದಾಗ, ನಮ್ಮ ಪಾಲಿನ ದವಸವನ್ನು ರೈತರಿಂದ ಅಳೆಯಿಸಿಕೊಳ್ಳುವಾಗ ಬೇರೆಬೇರೆಯ ಕಸಬುದಾರರಲ್ಲದೆ ಜಂಗಮರು, ದಾಸಯ್ಯಗಳು ಮೊದಲಾದವರೂ ಬಂದು ದಾನಧರ್ಮವನ್ನು ಪಡೆಯುತ್ತಿದ್ದದ್ದನ್ನು ಕಂಡಿದ್ದೇನೆ. ಮದುವೆ, ಮುಂಜಿ - ಮುಂತಾದ ಕಾಲಗಳಲ್ಲಿ ನೆರೆಹೊರೆಯ ಹೆಣ್ಣುಮಕ್ಕಳು ಹಪ್ಪಳ ಸಂಡಿಗೆ ಮಾಡುವದು, ಮೆಣಸಿನಪುಡಿ ಮಾಡುವದು ಮುಂತಾದ ಕೆಲಸಗಳಲ್ಲಿ ಸಹಾಯವಾಗುವದಲ್ಲದೆ ತಮ್ಮಲ್ಲಿದ್ದ ಪಾತ್ರೆಪಡಗಗಳನ್ನೂ ಒಡವೆವಸ್ತುಗಳನ್ನೂ ಒಬ್ಬರಿಗೊಬ್ಬರು ಎರವಲಾಗಿ ಕೊಡುವದು, ಅಡಿಗೆಯನ್ನು ಮಾಡುವದಕ್ಕೆ ಅಥವಾ ಬಡಿಸುವದಕ್ಕೆ ಬಂದು ಸೇರುವದು - ಹೀಗೆಲ್ಲ ನೆರವಾಗುತ್ತಿದ್ದರು. ಬೇರೆಬೇರೆಯ ಜಾತಿಯವರೂ ಇಂಥ ಸಮಯಗಳಲ್ಲಿ ಒಬ್ಬರಿಗೊಬ್ಬರು ತಮ್ಮ ತಮ್ಮ ಕೈಯಲ್ಲಾದ ಸಹಾಯವನ್ನು

ಮಾಡುತ್ತಿದ್ದರು. ಹಾಲು, ಮೊಸರು, ತರಕಾರಿ, ಹೂಹಣ್ಣುಗಳು ಇವಗಳನ್ನು ಬೆಳೆದರೆ ಪ್ರಥಮಫಲವನ್ನು ದಾನಮಾಡುವದು, ಸಮಯಕ್ಕೆ ಬೇಕಾಗುವವರಿಗೆ ಕೊಡುವದು, ಉಳಿದಿದ್ದನ್ನು ತಾವು ಉಪಯೋಗಿಸಿಕೊಳ್ಳುವದು - ಇಷ್ಟು ಪ್ರಕಾರಗಳಿಂದ ವಿನಿಯೋಗಿಸುವದು ಮಾತ್ರ ಜನರಿಗೆ ತಿಳಿದಿತ್ತು. ಇಂಥ ಪದಾರ್ಥಗಳನ್ನು ಮಾರುವದು ನಾಚಿಕೆಗೇಡಿನ ಕೆಲಸವೆಂದು ಆಗಿನ ಜನರ ಭಾವನೆ. ತಾವು ತಿಂದು ನೆರೆಹೊರೆಯವರಿಗೂ ಕೊಟ್ಟು ಹೆಚ್ಚಿನ ಪ್ರಮಾಣದಲ್ಲಿ ಉಳಿಯುವಂಥ ಪದಾರ್ಥ-ಗಳನ್ನು ಮಟ್ಟಿಗೆ ಸಂತೆಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದರು. ಕೆರೆಯ ಕಾಲುವೆ-ಯನ್ನು ಊರಿನವರು ಒಟ್ಟಾಗಿ ಸೇರಿ ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿದ್ದದ್ದರಿಂದ ಕೆರೆಯ ಹಿಂದೆ ಬತ್ತ, ಕಬ್ಬು, ಬಾಳೆ, ಅಡಿಕೆ, ತೆಂಗು, ಸ್ವಲ್ಪ ವಿಳ್ಳೆದೆಲೆಯ-ಹಂಬು - ಇವೆಲ್ಲವೂ ಬೆಳೆಯುತ್ತಿದ್ದವು. ಹೊಲಗಳಲ್ಲಿ ಅವರೆ, ಹುರುಳಿ, ಕಡಲೆ - ಮುಂತಾದವುಗಳನ್ನು ಬೆಳೆಯುತ್ತಿದ್ದರು.

## ಊರಿನವರ ವಿನೋದಗಳು :

ಊರಿನ ಜನರ ಮುಖದ ಮೇಲೆ ಕಳೆ ಇತ್ತು. ಜನರು ಚಟುವಟಿಕೆಯಾಗಿದ್ದರು. ಅವರ ಆಶೋತ್ತರಗಳು ಬಹಳವಾಗಿರಲಿಲ್ಲ, ತೃಪ್ತಿಯು ಎಲ್ಲೆಲ್ಲಿಯೂ ಕಾಣಬರುತ್ತಿತ್ತು. ಊರಿಗೆ ಬಯಲಾಟದವರು, ಬೊಂಬೆಯಾಟದವರು, ದೊಂಬಿಯದಾಸರು, ಕರಪಲ್ಲವದವರು, ಪೈಲುವಾನರು, ಹಾವಾಡಿಗರು, ಮೋಡಿ-ಹಾಕುವವರು, ಯಕ್ಷಿಣಿವಿದ್ಯೆಯವರು, ಲಾವಣಿಹೇಳುವವರು ಮೊದಲಾದವರು ಆಗಿಂದಾಗ್ಗೆ ಬಂದು ಒಂದೆರಡು ಆಟಗಳನ್ನು ಆಡಿ ಸಂಭಾವನೆಯನ್ನು ಪಡೆದುಕೊಂಡು ಹೋಗುತ್ತಿದ್ದರು. ಆಗ್ಗೆ ಊರಿಗೆ ಊರೇ ಸಂತೋಷದಿಂದ ಆಯಾ ಆಟಗಳನ್ನು ನೋಡಿ ನಲಿಯುತ್ತಿತ್ತು. ಹುಡುಗರಾದ ನಾವು ಆಯಾ ಆಟವಾದ ಬಳಿಕ ಕೆಲವು ದಿನಗಳವರೆಗೆ ಆಯಾ ಆಟಗಳನ್ನು ಅನುಕರಿಸುತ್ತಿದ್ದೆವು. ನನಗೆ ಇಂಥ ಆಟಗಳಲ್ಲಿ ಬಹಳ ಲಾಲಸೆ. ಊರಿನ ಗರಡಿಯ ಮನೆಗೆ ಹೋಗಿ ಅವರು ಮಾಡುವ 'ಸಾಮು' ನೋಡಿ ನೋಡಿ ಹಿಗ್ಗುತ್ತಿದ್ದೆನು; ಮನೆಗೆ ಬಂದು ಹಿಂಗಾಣಿ, ಮುಂಗಾಣಿ, ಹರ್ದಮ್ - ಎಂದು ಹೆಂಗಸರ ಮುಂದೆ ನನ್ನ ಸಾಹಸವನ್ನು ತೋರಿಸಿ ನನ್ನ ಹೊಸವಿದ್ಯಾಪ್ರೌಢಿಮೆಯನ್ನು ಕೊಚ್ಚಿಕೊಳ್ಳುತ್ತಿದ್ದೆನು.

## ಕೆಲವರು ನಿವಾಸಿಗಳು :

ಆಗಿದ್ದ ಕೆಲವರು ಗಣ್ಯಜನರನ್ನೂ ಓದುಗರಿಗೆ ಇಲ್ಲಿ ಸ್ವಲ್ಪ ಪರಿಚಯಮಾಡಿ ಕೊಡುವೆನು. ಮೊದಲನೆಯದಾಗಿ ನಾಡಿಗ ಅಶ್ವತ್ಥನಾರಾಯಣಯ್ಯನವರನ್ನುಸ್ವಲ್ಪ

ತಿಳಿದಿರಬೇಕು. ಆಗ್ಗೆ ನಾಡಿಗರ ಮನೆಯೆಂದರೂ ಒಂದೇ, ನಮ್ಮೂರಿನ ಕಚೇರಿಯೆಂದರೂ ಒಂದೇ. ನಾಡಿಗರಿಗೆ ಹೆಚ್ಚಿನ ಮರ್ಯಾದೆ. ಹೋಗಿಬರುವ ಗಣ್ಯರೆಲ್ಲ ಅವರ ಮನೆಯ ಜಗುಲಿಯ ಮೇಲೆ ಸ್ವಲ್ಪಹೊತ್ತು ಕೂತುಕೊಂಡಿದ್ದೇ ಹೋಗುವರು. ಊರಿನ ಜನರ ಯೋಗಕ್ಷೇಮಗಳ ಪಂಚಾಯಿತಿಯವರು, ಹೊರಗಿನಿಂದ ಬಂದವರು ಮೊದಲು ಅಲ್ಲಿ ಕಾಣಿಸಿಕೊಳ್ಳುವರು. ಕಂದಾಯದ ವಸೂಲಿಯ ದಿನಗಳಲ್ಲಿ ಜನರು ಆಯಾ ಶಿಸ್ತಿನ ಕಂದಾಯವನ್ನು ತಂದು ಕೊಡುವರು. ಮಿಕ್ಕ ದಿನಗಳಲ್ಲಿ ಪಗಡೆ, ಇಸಪೀಟು, ಗಂಜೀಪು, ಚದುರಂಗ - ಮುಂತಾದವುಗಳ ಆಟವು ಅಲ್ಲಿ ಸಾಗುತ್ತಿರುವದು. ಹಗಲು ಹೊತ್ತಿನಲ್ಲಿ ಆ ಮನೆಯ ಜಗುಲಿ ಜನರಿಲ್ಲದೆ ಖಾಲಿಯಾದುದ್ದೇ ಕಾಣೆ. ನಾಡಿಗರನ್ನು ಕಂಡರೆ ಹುಡುಗರಾದ ನಮ್ಮಗಳಿಗೆ ಯಾರಿಗೂ ಹೆದರಿಕೆಯಿಲ್ಲ. ಊರಲ್ಲಿ ವಿನಾಯಕನ ಅಥವಾ ತುಳಸೀಕಟ್ಟೆಯ ಮಂಗಳಾರತಿಯಾದರೆ ಅವರ ಮನೆಯಿಂದಲೇ ಮಂಗಳಾರತಿ ಮೊದಲಾಗುವದು. ಅವರನ್ನು ಎಲ್ಲರೂ ಗೌರವಿಸುತ್ತಿದ್ದರು.

ಎರಡನೆಯದಾಗಿ ಅವರ ಬೀಗರಾದ ಲಕ್ಷ್ಮಯ್ಯನವರನ್ನು ಹೇಳಬೇಕು. ಅವರ ಮನೆಯನ್ನು ಚಿಕ್ಕಯ್ಯನವರ ಮನೆಯೆಂದು ಕೆಲವರು ಕರೆಯುತ್ತಿದ್ದರು ; ಚಿಕ್ಕಯ್ಯನವರು ಬಹಳ ಗೌರವಸ್ಥರಾಗಿ ಬಾಳಿದ ದೊಡ್ಡ ಮನುಷ್ಯರಂತೆ. ಲಕ್ಷ್ಮಯ್ಯನವರು ನಾಡಿಗರಂತೆಯೇ ದೊಡ್ಡಮನುಷ್ಯರು. ಇದರ ಜೊತೆಗೆ ಅವರಿಗೆ ಊರಹೊರಗೆ ಬೆಂಗಳೂರುವರೆಗೂ ದೊಡ್ಡವರ ಪರಿಚಯವೂ ನೆಂಟತನವೂ ಇತ್ತು. ಮನೆಯಲ್ಲಿ ಆಳುಕಾಳುಗಳೂ ತಕ್ಕಮಟ್ಟಿಗೆ ಇದ್ದರು. ಊರಿಗೆ ಯಾರಾದರೂ ಅಧಿ ಕಾರಿಗಳು ಬಂದರೆ - ಅದು ಆಗ್ಗೆ ಬಹಳ ಅಪರೂಪ - ಅವರ ಮನೆಯಲ್ಲಿಯೇ ತಂಗುತ್ತಿದ್ದರು. ಹೊಸ ನಾಗರಿಕತೆಯ ಗುರುತುಗಳು ಯಾವಾಗಲೂ ಊರಲ್ಲಿ ಮೊದಲು ಅವರ ಮನೆಯಲ್ಲಿಯೇ ಇಣುಕುತ್ತಿತ್ತು. ಮನೆಗೆ ಮೊದಲು ಕಿಟಕಿ ಇಡಿಸಿದವರೇ ಅವರು ; ಕಾಫಿ ಕುಡಿಯುವ ಪದ್ಧತಿಬಂದದ್ದೇ ಮೊದಲು ಅವರ ಮನೆಗೆ ; ಪಿಟೀಲು ಮುಂತಾದ ಸಂಗೀತವಿದ್ಯೆ ಅವರ ಮನೆಯಲ್ಲಿ ; ಪೆಟ್ಟಿಗೆಗಾಡಿ ಬಂದಿದೆ ಅವರ ಮನೆಗೆ ; ಮಕ್ಕಳು ಇಂಗ್ಲೀಷು ಓದುವದಕ್ಕೆ ಹೋಗಿರುತ್ತಾರೆ ಮೊದಲು ಅವರ ಮನೆಯಲ್ಲಿ. ಊರಿನ ಜನರಲ್ಲಿ ಅವರ ಮನೆಯವರು ಒಂದು ಬಗೆಯ ಹೆಚ್ಚಿನದರ್ಜೆಯವರಂತೆ ನಟಿಸುತ್ತಾರೆಂಬ ಭಾವನೆಯಿತ್ತು. ಅವರ ಮನೆಯವರೆಲ್ಲರೂ ಗಂಭೀರವಾಗಿ ನಡೆಯುತ್ತಿದ್ದರು. ಅವರ ತೋಟದಲ್ಲಿ ಬಾಳೆಯಗಿಡ, ಕಸಿಮಾವಿನಹಣ್ಣಿನಗಿಡ, ಸೇವಂತಿಗೆ ಅಂಟು, ಪಚ್ಚೆ, ಮರುಗ, ಮಲ್ಲಿಗೆಬಳ್ಳಿ - ಮುಂತಾದವು ಇರುತ್ತಿದ್ದವು. ಅಲ್ಲಿ ವರ್ಷಕ್ಕೊಂದು ಸಲ ಧಾತ್ರೀಹವನ ಸಮಾರಾಧನೆ ನಡೆಯುತ್ತಿತ್ತು. ಆಗ್ಗೆ ಕೆರೆಯ ಏರಿಯಮೇಲೆ ನಿಂತು

ಜಗನ್ನಾಥದ ಜಾಗಟೆ ಹೊಡೆದರೆ ಊರಿನವರೆಗೂ ಕೇಳಿಸುತ್ತಿತ್ತು. ನಮ್ಮೂರಿಗೇ ಅವರೊಂದು ಆಶ್ಚರ್ಯವಸ್ತು. ಅವರ ಮನೆಯ ದಿವಾನಖಾನೆಯಲ್ಲಿ ಹರಿಕಥೆ, ಸಂಗೀತಕಛೇರಿ - ಮುಂತಾದವುಗಳು ಆಗುತ್ತಿದ್ದವು. ನಮ್ಮ ತಾಯಿಯವರಿಗೆ ಅವರ ಮನೆಯವರಿಗೆ ಸರಿಸಮಾನವಾಗಿ ಬಾಳಬೇಕೆಂಬ ಅಭಿಲಾಷೆ ಬಹಳ. ನಾವೂ ಒಂದು ಜಗನ್ನಾಥದ ಜಾಗಟೆತರಿಸಿದ್ದೆವು ; ನಾವೂ ಅಂಗಳಕ್ಕೆ ಕಲ್ಲುಹಾಕಿಸಿದ್ದೆವು ; ನಮಗೂ ಅವರಿಗಿದ್ದಂತೆ ಹಲಗೆಸೇವೆಮಾಡಿದ ಮನೆ, ಮುಂದೆ ಒಂದು ಸಣ್ಣ ಮನೆ, ನಡುವೆ ಕಲ್ಲುಹಾಸಿದ ಅಂಗಳ ಇದ್ದವು; ನಮ್ಮ ಅಂಗಳದಲ್ಲಿ ಎತ್ತರವಾದದ್ದೊಂದು ತುಳಸಿಯಗಿಡವನ್ನು ಬೆಳೆಯಿಸುವವರೆಗೂ ಅವರ ಅನುಕೃತಿಯು ಬೆಳೆದಿತ್ತು. ಅವರ ಮಗ(ವೆಂ॥)ನಂತೆ ನಾನೂ ಇಂಗ್ಲೀಷು ಕಲಿತು ದೊಡ್ಡ ಸರಕಾರಿಯ ಹುದ್ದೆಯನ್ನು ಸಂಪಾದಿಸಬೇಕು ಎಂದು ನಮ್ಮ ತಾಯಿ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ತಂದೆಯವರು ಅವರ ಮನೆಗೆ ಅಷ್ಟೊಂದಾಗಿ ಹೋಗುತ್ತಿರಲಿಲ್ಲ ; ಅಲ್ಲಿ ಕೋರ್ಟು ಕಛೇರಿಯ ಪ್ರಸಂಗಗಳು ಬಹಳವೆಂಬುದೇ ಅವರ ಅಂಜಿಕೆಗೆ ಕಾರಣವಾಗಿತ್ತು.

ಇನ್ನೊಬ್ಬರು ನಾರಣಭಟ್ಟರು. ಅವರು ಹುಟ್ಟಿನಿಂದ ವೈದಿಕರಾದರೂ ಲೌಕಿಕರ ನಡತೆಯೇ ಅವರಲ್ಲಿ ಬಹಳ. ಅವರ ತಮ್ಮಂದಿರಾದ ಪುರಾಣಿಕ ನರಸಿಂಹಭಟ್ಟರು ಮಾತ್ರ ವೈದಿಕವೃತ್ತಿಯಲ್ಲಿರುತ್ತಿದ್ದರು. ನಾರಣಭಟ್ಟರಿಗೂ ಲಕ್ಷ್ಮಯ್ಯನವರಿಗೂ ಅದೇಕೋ, ಆಗಾಗ್ಗೆ ಜಗಳವಾಗುತ್ತಲೇ ಇತ್ತು. ಅವರುಗಳ ಜಗಳವು ಊರಿಗೇ ಒಂದು ಕಲಂಕವನ್ನು ತಂದಿತ್ತೆಂದು ಹೇಳಬಹುದು. ಅವರಿಬ್ಬರೂ ತಮ್ಮ ಮನೆಗಳ ನಡುವೆ ಇದ್ದ ಒಂದು ಸಣ್ಣ ಓಣಿಗಾಗಿ ಒಬ್ಬೊಬ್ಬರೂ ಏಳುನೂರು ರೂಪಾಯಿಗಳ ಮೇಲೆ ಖರ್ಚುಮಾಡಿದರೆಂದು ಹೇಳುತ್ತಾರೆ. ನಾರಣಭಟ್ಟರು ಬಹಳ ಗಟ್ಟಿಯಾಗಿ ಮಾತನಾಡುವವರು ; ಕೋರ್ಟುಕಚೇರಿಗಳಿಗೆ ಪೂಟು ಲಾಯರಾಗಿ ಓಡಾಡುತ್ತಿದ್ದರು. ಅವರ ಈ ಸ್ವಭಾವಗಳೆಲ್ಲ ಎಳೆಯವಯಸ್ಸಿನ ಹುಡುಗನಾದ ನನಗೆ ಆಗ ತಿಳಿದಿರಲಿಲ್ಲ. ಅವರ ಮನೆಯ ಹೆಂಗಸರು ನನ್ನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು ; ಆದ್ದರಿಂದ ಆಗಾಗ್ಗೆ ಅವರ ಮನೆಗೆ ಹೋಗಿಬರುತ್ತಿದ್ದೆನು.

ನಾರಣಭಟ್ಟರ ಮನೆಯ ಪಕ್ಕದಲ್ಲಿ ಅಯ್ಯನವರ ಕೃಷ್ಣಭಟ್ಟರ ಮತ್ತು ವೆಂಕಟಸುಬ್ಬಯ್ಯನವರ ಮನೆ ಇತ್ತು. ಇವರಿಬ್ಬರೂ ಒಂದೇ ಮನೆಯವರಾಗಿದ್ದು ಆಗ್ಗೆ ವಿಭಕ್ತರಾಗಿದ್ದರೆಂದು ನನಗೆ ಈಚೆಗೆ ತಿಳಿದುಬಂತು. ವೆಂಕಟಸುಬ್ಬಯ್ಯನವರು ಮಿತಭಾಷಿಗಳು, ಯುಕ್ತಿವಂತರು, ಯಾರಗೊಡವೆಗೂ ಹೋಗುತ್ತಿರಲಿಲ್ಲ; ಅವರ ತಮ್ಮ ವೆಂಕಟದಾಸಪ್ಪನೆಂಬಾತನು ನಮ್ಮಗಳಿಗಿಂತ ವಯಸ್ಸಿನಲ್ಲಿ ದೊಡ್ಡವನು; ಆದರೂ ಅವನ ಜೊತೆಯು ಆಗಾಗ ನಮಗೆ ದೊರಕುತ್ತಿತ್ತು. ಅವನಿಂದ ನನಗಾದ

ಉಪಕಾರವನ್ನು ಮುಂದೆ ಯಥಾವಕಾಶವಾಗಿ ತಿಳಿಸುವೆನು; ವೆಂಕಟಸುಬ್ಬಯ್ಯನವರು ರಾಮಾಯಣಪಾರಾಯಣವನ್ನು ಮಾಡುತ್ತಿದ್ದರು. ನಮ್ಮೂರಿನಲ್ಲಿ ಎಲ್ಲರ ಮನೆಯಲ್ಲಿಯೂ ಹಬ್ಬದಕಾಲಕ್ಕೆ ಗಣಪತಿಯನ್ನು ಅವರವರೇ ಮಾಡಿಕೊಳ್ಳುತ್ತಿದ್ದರು; ಯಗಟಿಯಿಂದ ಕುದುರೆಯೇರಿರುವ ಗಣಪತಿಯನ್ನು ಮರ್ಯಾದೆಗಾಗಿ ತರಿಸಿಕೊಳ್ಳುತ್ತಿದ್ದ ನಾಡಿಗರೊಬ್ಬರನ್ನು ಬಿಟ್ಟರೆ ಮಿಕ್ಕವರೆಲ್ಲರೂ ತಮ್ಮತಮ್ಮ ಗಣಪತಿಯನ್ನು ತಾವು ತಾವೇ ಮಾಡಿಕೊಳ್ಳುವದರಲ್ಲಿ ಬಹಳ ಉತ್ಸಾಹವನ್ನು ತೋರಿಸುತ್ತಿದ್ದರು. ನಮ್ಮ ಮನೆಯಲ್ಲಿ ತಂದೆಯವರೂ, ಇಲ್ಲದಿದ್ದರೆ ಅಣ್ಣ ಶಿವರಾಮಯ್ಯನವರೋ ಗಣಪತಿಯನ್ನು ಮಾಡುತ್ತಿದ್ದರು. ಹೀಗೆಯೇ ಲಕ್ಷ್ಮಯ್ಯನವರ ಮನೆಯಲ್ಲಿ ಅವರ ಮಗ ಸೀತಾರಾಮಯ್ಯನವರು, ನಾರಣಭಟ್ಟರ ಮನೆಯಲ್ಲಿ ಅವರೇ ಅಥವಾ ಅವರ ತಮ್ಮಂದಿರು, ಅಯ್ಯನವರ ಕೃಷ್ಣಭಟ್ಟರ ಮನೆಯಲ್ಲಿ ಅವರ ಮಗ ನರಸಪ್ಪಯ್ಯನವರು - ಹೀಗೆ ಒಬ್ಬೊಬ್ಬರ ಮನೆಯಲ್ಲಿ ಒಬ್ಬೊಬ್ಬರ ಕೈವಾಡದಿಂದಾದ ಗಣಪತಿಯು ಬೇರೆಬೇರೆಯ ಮಾಟದ್ದಾಗಿರುತ್ತಿತ್ತು. ಗಣಪತಿಯ ದರ್ಶನಕ್ಕೆ ಹೋಗಿ ಮಂತ್ರಾಕ್ಷತೆಯನ್ನು ತಳಿದು ನಮಸ್ಕರಿಸುವಾಗ ನನಗೆ ಮುಖ್ಯವಾಗಿ ವೆಂಕಟಸುಬ್ಬಯ್ಯನವರ ಗಣಪತಿಯು ಮಿಕ್ಕ ಎಲ್ಲದಕ್ಕಿಂತಲೂ ಹೆಚ್ಚು ಕಳೆಯೇರಿದಂತೆ ತೋರುತ್ತಿತ್ತು; ಆದರೆ ಕೃಷ್ಣಭಟ್ಟರ ಮನೆಯ ಕಾಗದದ ಮಹಲಿನ ಅಲಂಕಾರಕ್ಕೆ ಮಿಗಿಲಿಲ್ಲವೆಂದೇ ನನ್ನ ಭಾವನೆ.

ಅಯ್ಯನವರ ಕೃಷ್ಣಭಟ್ಟರ ಮನೆಯನ್ನು ಒಂದು ವೇದಾಗಾರವೆಂದು ಕರೆಯಬಹುದು. ಅವರ ಮನೆಗೆ ನಾನು ಹೋದಾಗಲೆಲ್ಲ ಕೃಷ್ಣಭಟ್ಟರು ಬೆಟ್ಟದಪುರದ ಸೊಪ್ಪನ್ನು ಬಿಡಿಸುತ್ತಾ ಋಗ್ವೇದವನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದ ದೃಶ್ಯದ ಚಿತ್ರವು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಮಂತ್ರವನ್ನು ಹೇಳುತ್ತಾ ಬಿಡಿಸಿದರೆ ಸೊಪ್ಪು ಚೆನ್ನಾಗಿ ಬಿಡುತ್ತದೆ ಎಂಬ ಭಾವನೆಯು ನನ್ನ ಎಳೆಯ ಮನಸ್ಸಿಗೆ ತಾಕುತ್ತಿತ್ತು. ಭಟ್ಟರು ಪರಮಸಾತ್ತ್ವಿಕರು. ಅವರು ಕೃಷ್ಣಯೋಗೇಶ್ವರರ ಮನೆತನದವರೆಂದೂ, ಅರಸೀಕೆರೆಯ ಬಳಿಯಿರುವ ಮಾಲೆಕಲ್ಲು ತಿರುಪತಿಯ ವೆಂಕಟರಮಣನ ಸೇವೆಯನ್ನು ಮಾಡಿದ್ದಕ್ಕಾಗಿ ಅವರ ಮನೆತನದವರಿಗೆ ಅಗ್ರತೀರ್ಥಮರ್ಯಾದೆ ಈವರೆಗೆ ನಡೆದುಕೊಂಡುಬಂದಿದೆಯೆಂದೂ ಈ ಮರ್ಯಾದೆಗೆ ನಡುವೆ ಯಾವದೋ ಅಡ್ಡಬಂದಾಗ ಭಟ್ಟರು ದೊರೆಗಳತನಕ ದೂರು ತೆಗೆದುಕೊಂಡು ಹೋಗಿ ಅದನ್ನು ಉಳಿಸಿಕೊಂಡುಬಂದರೆಂದೂ ಈಚೆಗೆ ನನಗೆ ತಿಳಿಯಬಂತು. ನವರಾತ್ರೆಯಲ್ಲಿ ನಮ್ಮೂರಿನಲ್ಲಿ ಮೂರು ನಾಲ್ಕು ಮನೆಗಳಲ್ಲಿ ರಾಮಾಯಣ ಪಾರಾಯಣವೂ ರಾಮಪಟ್ಟಾಭಿಷೇಕವೂ ನಡೆಯುತ್ತಿತ್ತು. ಆದರೆ ಕೃಷ್ಣಭಟ್ಟರ

ಮನೆಯ ಪಟ್ಟಾಭಿಷೇಕವು ನನ್ನ ಮನಸ್ಸಿನ ಮೇಲೆ ಹೆಚ್ಚಿನ ಮುದ್ರೆಯನ್ನು ಒತ್ತಿರುತ್ತದೆ. ಒಂದು ಸಲ ಅವರ ಮನೆಯ ಪಟ್ಟಾಭಿಷೇಕದ ಕಾಲಕ್ಕೆ ಬಾಣಾವರದ ಲಕ್ಷ್ಮೀನಾರಾಯಣಶಾಸ್ತ್ರಿಗಳೆಂಬವರು ಪೂರ್ವಕಥೆಯನ್ನು ಹೇಳಿದ್ದೂ, ಯಗಟಿಯಿಂದ ಚನ್ನಭಟ್ಟರು, ಸೂರಭಟ್ಟರು ಮುಂತಾದ ವೈದಿಕರು ಬಂದು ನನಗೆ ತಿಳಿಯದ ಯಾವದೋ ಒಂದು ಶಾಸ್ತ್ರಾರ್ಥವಿಚಾರವನ್ನು ಮಾಡಿದ್ದೂ ಕೃಷ್ಣಭಟ್ಟರ ವಿಷಯದಲ್ಲಿ ನನಗೆ ಹೆಚ್ಚಿನ ಗೌರವವನ್ನುಂಟುಮಾಡಿತ್ತು. ಈಚೀಚೆಗೆ ಭಟ್ಟರು ಜಗಲಿಯ ಮೇಲೆ ಬೆಳಗಿನ ಹೊತ್ತು ಪೂರ್ವಕ್ಕೆ, ಮಧ್ಯಾಹ್ನದ ಮೇಲೆ ಪಶ್ಚಿಮಕ್ಕೆ ಬೆನ್ನುಮಾಡಿಕೊಂಡು ಕುಳಿತುಕೊಳ್ಳುತ್ತಿದ್ದರು ; ಈ ಸೂರ್ಯೋಪಾಸನೆಯಿಂದ ಅವರ ಬೆನ್ನು ಸ್ವಲ್ಪ ಹೆಚ್ಚಾಗಿಯೇ ಕಪ್ಪಾಗಿತ್ತು. ಅವರ ಮಕ್ಕಳು ಅಸಹಾಯಶೂರರು. ಕೆರೆಯ ಹಿಂದೆ ವೇದವನ್ನು ಹೇಳಿಕೊಳ್ಳುತ್ತಾ ನೆಲವನ್ನು ಅಗೆದು ಅಡಕೆ, ಬಾಳೆ, ಸೇವಂತಿಗೆಹೂ - ಮುಂತಾದವುಗಳನ್ನು ಬೆಳೆದು ಒಂದು ನಂದನವನವನ್ನೇ ಎಬ್ಬಿಸಿದ್ದರು. ಯಾವ ದುರ್ದೈವದಿಂದಲೋ ಈಗ ಅಂಥ ತೋಟಗಳು ನಮ್ಮೂರಿನಲ್ಲಿರುವದಿಲ್ಲ.

ಪುರಾಣಿಕ ಸುಬ್ಬಾಭಟ್ಟರು ಅವರ ತಮ್ಮ ರಂಗಾಭಟ್ಟರು ನಮ್ಮ ಮನೆಗೆ ಬಹಳವಾಗಿ ಬಂದು ಹೋಗುತ್ತಿದ್ದರು. ಇವರುಗಳು ನನ್ನನ್ನು ಎತ್ತಿಳಿಸಿದವರು. ಇಬ್ಬರೂ ನಮ್ಮ ಮನೆಯವರೆಂದೇ ನಾನು ಚಿಕ್ಕಂದಿನಲ್ಲಿ ಬಹುದಿನಗಳವರೆಗೆ ಭಾವಿಸಿಕೊಂಡಿದ್ದೆನು. ಸುಬ್ಬಾಭಟ್ಟರು ಶೀಘ್ರಕೋಪಿಗಳು. ಅವರು ಒಂದು ಸಲ ಬಾವಿಗೆ ಬೀಳುತ್ತೇನೆಂದು ಹೆದರಿಸಿದ ತಮ್ಮ ಹೆಂಡತಿಯ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಬಾವಿಗೆ ಇಳಿಬಿಟ್ಟಿದ್ದಂತೆ ನೆನಪು ಇದೆ. ಅವರನ್ನು ಕಡ್ಡಿಪುಡಿಸುಬ್ಬಾಭಟ್ಟರು ಎಂದು ಜನರು ಹಾಸ್ಯಮಾಡುತ್ತಿದ್ದರು. ಒಂದು ದಿನ ಸ್ನಾನಮಾಡುತ್ತಿರುವಾಗ ಮಧ್ಯೆ ಹೊಗೆಸೊಪ್ಪಿನ, ಕಡ್ಡಿಪುಡಿಯ ನೆನಪಾಗಿ ಅರ್ಧಒದ್ದೆಯಾಗಿದ್ದ ಸಣ್ಣಪಂಚೆ-ಯಲ್ಲಿಯೇ ಯಾರನ್ನೋ ಕಡ್ಡಿಪುಡಿಯನ್ನು ಕೇಳುವದಕ್ಕೆ ಹೋಗಿದ್ದರಂತೆ. ! ಸುಬ್ಬಾಭಟ್ಟರು ಸ್ವಲ್ಪ ಕುಚೇಷ್ಟೆಯವರು. ಏನೂ ತಿಳಿಯದ ನಮ್ಮ ತಂದೆಯವರು ಊಟಮಾಡುವಾಗ 'ಅಗೊ, ಮಗು ಗಿಣಿ ಪಂಜರದ ಗುಳಾಫನ್ನು ಎಳೆಯಿತು !', 'ಕರು ಕಣ್ಣಿಬಿಚ್ಚಿಕೊಂಡು ಹೋಗಿ ಹಸುವಿನ ಹಾಲು ಕುಡಿಯುತ್ತಿದೆ', 'ಕೆಂಚಪ್ಪ ನಿಮಗೆ ಬಡ್ಡಿ ಕೊಡುವದಿಲ್ಲಂತೆ !' ಎಂದು ಮುಂತಾಗಿ ಕಲ್ಪಿತಕಥೆಗಳನ್ನು ಹೇಳಿ ರೇಗಿಸುತ್ತಿದ್ದದ್ದುಂಟು. ಅವರ ಹೆಂಡತಿಯೂ ಸ್ವಲ್ಪ ಈ ಗುಂಪಿಗೇ ಸೇರಿದವರು. 'ಅಚ್ಚಣ್ಣತ್ತೇ, ಸಕ್ಕರೆಯ ಪಟ್ಟಣಕ್ಕೆ ನೊಣವಿನ ಕೆರೆಯವರು ಮುತ್ತಿಗೆ ಹಾಕಿದಾರಂತೆ !' ಎಂದು ನಮ್ಮ ತಾಯಿಯವರಿಗೆ ಒಮ್ಮೆ ಹೇಳಲು ಅವರು 'ಅಯ್ಯೋ ಇನ್ನೇನು ಗತಿಯೆ,

ಸಕ್ಕರೆಯ ಪಟ್ಟಣವು ನಮ್ಮೂರಿಗೆ ಬಹಳ ಹತ್ತಿರವಲ್ಲವೆ?' ಎಂದು ಗಾಬರಿಪಟ್ಟಿದ್ದರಂತೆ. ಪಾಪ! ಪಾಳೆಯಗಾರರ ಪಡೆಗಳನ್ನು ಅವರು ಜ್ಞಾಪಿಸಿಕೊಂಡರೊ, ಏನೋ! ಪುರಾಣಿಕ ರಂಗಾಭಟ್ಟರು ಕಾಶಿಗೆ ಹೋಗಿ ಬಂದಿದ್ದರು. ಆಗ್ಗೆ ಅವರು ಕಾವಡಿಯನ್ನು ತಂದು ಊರ ಮುಂದಿನ ಹನುಮಂತರಾಯನ ಗುಡಿಯ ಮುಂದೆ ಇಳಿದುಕೊಂಡಿದ್ದು ಊರಿನವರು ಅವರನ್ನು ಆದರದಿಂದ ಬರಮಾಡಿಕೊಂಡು ಮಂತ್ರ ಹೇಳುತ್ತಾ ಊರೊಳಕ್ಕೆ ಕರೆತಂದದ್ದು ರಂಗಾಭಟ್ಟರು ಮನೆಗೆ ಬಂದ ಮೇಲೆ ಒಂದು ಸಣ್ಣ ಭಾಷಣಮಾಡಿದ್ದು ನಡು ನಡುವೆ ಹಿಂದಿ, ಮರಾಠಿ (ಆಗ ನನಗೆ ಯಾವದು ಯಾವ ಭಾಷೆಯೆಂಬುದು ತಿಳಿದಿರಲಿಲ್ಲ.) ಇವೇ ಮುಂತಾದ ಭಾಷೆಗಳ ಒಂದೊಂದು ವಾಕ್ಯವನ್ನು ಆಡಿದ್ದು ಹುಡುಗರಾದ ನಮಗೆ ಮಾತ್ರವೇ ಅಲ್ಲ, ಊರಿನವರಿಗೂ ಅತ್ಯಾಶ್ಚರ್ಯವನ್ನುಂಟುಮಾಡುವಂತೆ ಕಂಡಿತು. ರಂಗಾಭಟ್ಟರು ಇದುವರೆಗೂ ನನ್ನಲ್ಲಿ ಬಹಳ ಪ್ರೇಮವಿಶ್ವಾಸಗಳನ್ನು ತೋರಿಸಿರುತ್ತಾರೆ.

ಜೋಯಿಸ ಸುಬ್ಬಾಭಟ್ಟರು ಒಂದರ್ಥದಲ್ಲಿ ನಮ್ಮೂರಿಗೇ ಶಿಖರಪ್ರಾಯ-ರಾಗಿದ್ದರು. ತುಂಬಿದ ಕೊಡದಂತೆ ಸ್ವಲ್ಪವೂ ಗದ್ದಲವಿಲ್ಲದೆ ಎಲ್ಲರಲ್ಲಿಯೂ ವಿನಯದಿಂದ ವರ್ತಿಸುತ್ತಿದ್ದರು. ಅವರ ಮಾತಿಗೆ ಎಲ್ಲರೂ ಕಟ್ಟುಬೀಳುತ್ತಿದ್ದರು. ಅವರು ಯಾರೊಬ್ಬರ ಪಕ್ಷವನ್ನೂ ವಹಿಸುತ್ತಿರಲಿಲ್ಲ. ಯಾವ ತಂಡಕ್ಕೂ ಸೇರುತ್ತಿರಲಿಲ್ಲ. ಅವರು ನಮ್ಮೂರಿನ ಜೋಯಿಸರಾದರೂ ಆವೂರಿಗೆ ಅಜ್ಜಂಪುರ-ದಿಂದ ಬಂದು ನೆಲಸಿದವರೆಂದು ಈಚೆಗೆ ತಿಳಿಯಬಂತು. ಅವರ ಮನೆಯಲ್ಲಿ ಗೌರಿಯನ್ನು ಊರಿನವರೆಲ್ಲರೂ ಪೂಜಿಸಿ ಬಾಗಿನವನ್ನು ಕೊಡುತ್ತಿದ್ದರು. ಗೌರಿಯನ್ನು ತರುವಾಗ ತೆಂಗಿನಕಾಯಿಚೂರು, ಶ್ರೀಗಂಧದಕಾಯಿ - ಮುಂತಾದವುಗಳನ್ನು ಪೆಟ್ಟಲುಗಳಲ್ಲಿ ಹಾಕಿ ಜಡಿದು ಜೋಯಿಸರಿಗೆ ಗುರಿಕಟ್ಟಿ ಹೊಡೆಯುವದೂ, ಅವರಿಂದ ಬಯ್ಯಿಸಿಕೊಳ್ಳುವದೂ, ಅವರು ಹೊಡೆಯುವದಕ್ಕೆ ಬಂದಾಗ ತಪ್ಪಿಸಿಕೊಂಡು ಓಡುವದು - ಇವೆಲ್ಲ ಹುಡುಗರಾದ ನಮ್ಮಗಳಿಗೆ ಒಂದು ವಿನೋದವಾಗಿತ್ತು. ಜೋಯಿಸರು ಒಮ್ಮೆ ಸಂಸ್ಕೃತ ಭಾರತದಲ್ಲಿ ಯಾವದೊ ಭಾಗವನ್ನು ಪುರಾಣಹೇಳಿದ್ದು, ನಮ್ಮ ತಂದೆಯವರೇ ಮೊದಲಾಗಿ ಊರಿನ ಬ್ರಾಹ್ಮಣರನೇಕರು ಹೋಗಿ ಕೇಳುತ್ತಿದ್ದದ್ದು ನನಗೊಂದು ಆಶ್ಚರ್ಯಕರವಾದ ದೃಶ್ಯವಾಗಿತ್ತು. ಅವರು ಓದುತ್ತಿದ್ದದ್ದು ಸಂಸ್ಕೃತವೆಂಬ ಜ್ಞಾನವು ಆಗ್ಗೆ ನನಗಿರಲಿಲ್ಲ. ಭಾರತದ ಕಥೆಯು ಬಲುಚೆನ್ನಾಗಿದೆ - ಎಂಬ ಭಾವವೇನೋ ಮನದಲ್ಲಿ ಮೂಡಿತು. ನಮ್ಮ ತಂದೆಯವರು ಕನ್ನಡಭಾರತವನ್ನು ನನ್ನಿಂದ ಓದಿಸಿ ಅರ್ಥವನ್ನು ಹೇಳುವಾಗಲೂ ನನಗೆ ಭಾರತದಲ್ಲಿ ಹೆಚ್ಚಿನ ಕುತೂಹಲವುಂಟಾಗುತ್ತಿತ್ತು. ಒಂದು ಸಲ

ಅವರು ಸ್ತ್ರೀಪರ್ವವನ್ನು ಓದಿ ಗಾಂಧಾರಿಯ ಶೋಕವನ್ನು ವರ್ಣಿಸಿದಾಗ ನಾನು ಅಳುತ್ತಲೇ ಓದುತ್ತಿದ್ದೆನು.

ಮೈಲಾರಯ್ಯನವರ ರಾಮಣ್ಣನೆಂಬವರು ಇನ್ನೊಬ್ಬರು ವೃದ್ಧರು. ಅವರ ಮನೆ ಚನ್ನಕೇಶವದೇವಸ್ಥಾನಕ್ಕೆ ಬಹಳ ಹತ್ತಿರ. ಅವರ ಮನೆಗೆ ನಾನು ಆಗಾಗ್ಗೆ ಹೋಗಿ ಬರುತ್ತಿದ್ದೆನು. ಅವರಿಗೆ 'ನಾಡಿಗರ ತಾಂಬೂಲ'ವೆಂಬ ಹೆಸರಿನಿಂದ ಸಭಾಪೂಜೆಯಲ್ಲಿ ತಾಂಬೂಲವು ಸಲ್ಲುತ್ತಿತ್ತು ; ಆದರೆ ಅವರು ನಾಡಿಗರ ಕೆಲಸವನ್ನು ಮಾಡಿದ್ದನ್ನೇನೂ ನಾನು ಕಾಣಲಿಲ್ಲ. ಮುಖ್ಯವಾಗಿ ಅವರು ನನ್ನಿಂದ ಕಾಲುತುಳಿಸಿ ಕೊಳ್ಳುವದು, ಎಣ್ಣೆಒತ್ತಿಸಿಕೊಳ್ಳುವದು, ಕಾಲಿನ ಮುಳ್ಳು ತೆಗೆಯಿಸಿಕೊಳ್ಳುವದು - ಇಂಥ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಎಣ್ಣೆಒತ್ತುವಾಗ ಅವರಿಗೆ ಎಷ್ಟುಹೊತ್ತು ಒತ್ತಿದರೂ ತೃಪ್ತಿಯಾಗದು ; ನನಗೆ ಬೇಜಾರಾಗದಂತೆ ಲಕ್ಷ್ಯವನ್ನು ಬೇರೊಂದು ಕಡೆ ಎಳೆಯುವದಕ್ಕೆಂದು ಬೇರೆಬೇರೆಯ ತಾಳದ ವರಸೆ ಹಾಕಿ ತೋರಿಸಿಕೊಟ್ಟು ಎಣ್ಣೆ ಒತ್ತಿಸಿಕೊಳ್ಳುತ್ತಿದ್ದರು. ಇದರಿಂದ ತಾಳದ ಗತಿ ಒಂದಿಷ್ಟು ನನಗೂ ಗೊತ್ತಾಗುವದಕ್ಕೆ ಕಾರಣವಾಯಿತು.

ದೊಡ್ಡಹಂಪೆಯ ಲಿಂಗಣ್ಣ, ಸಣ್ಣಹಂಪೆಯ ಲಿಂಗಣ್ಣ- ಎಂಬ ಎರಡು ಲಿಂಗಾಯತ ವ್ಯಕ್ತಿಗಳನ್ನು ತಿಳಿಸಿ ನಮ್ಮೂರವರ ಪರಿಚಯವನ್ನು ಸದ್ಯಕ್ಕೆ ಸಮಾಪ್ತಿಮಾಡುವೆನು. ಹಂಪೆಲಿಂಗಣ್ಣನವರಿಬ್ಬರೂ ಅಣ್ಣತಮ್ಮಂದಿರು ; ಅವರು ಆಗಾಗ್ಗೆ ನನಗೆ ಬರುತ್ತಿದ್ದ ಪದಗಳನ್ನು ಹಾಡಿಸುವದು, ಲಾಗಹಾಕಿಸುವದು, ಬೆಲ್ಲಕೊಡುವದು - ಹೀಗೆ ಪ್ರೋತ್ಸಾಹಿಸುತ್ತಿದ್ದರು. ಅವರನ್ನು ಜನರು ಸಾಹುಕಾರರೆಂದು ಕರೆಯುತ್ತಿದ್ದರು. ದೊಡ್ಡಸಾಹುಕಾರರಿಗೆ ಬಾಯಲ್ಲಿ ಹಲ್ಲು ಇರಲಿಲ್ಲ ; ಅವರು ಕುಟ್ಟಣಿ ಮಾಡಿಕೊಂಡು ಎಲೆಅಡಿಕೆಯನ್ನು ಬೋಡುಬಾಯಿ ಒಸಡಿನಿಂದ ಜಗಿಯುತ್ತಿದ್ದದ್ದು ನನಗೆ ವಿಚಿತ್ರವಾಗಿ ಕಾಣಿಸುತ್ತಿತ್ತು. ನಮ್ಮ ಮನೆಯ ಜಗುಲಿಯ ಮೇಲೆ ಕುಳಿತಿರುವಾಗ ಅವರು ಮನೆಯ ಮುಂದೆ ಹಾದು ಹೋದರೆ ಯಾರೋ ಹೇಳಿಕೊಟ್ಟಿದ್ದ 'ಹರಿವ ಹಳ್ಳದ ನೀರು ತೆಳ್ಳಗೆ, ಬರುವ ಮುದುಕನ ಗಡ್ಡ ಬೆಳ್ಳಗೆ, ಇರುವ ಮುದುಕಿಯ ಕಾಲುಕುಳ್ಳಗೆ, ದೊಡ್ಡಹಂಪೆ ಲಿಂಗಣ್ಣ ಕೇಳೆಂದ !' ಎಂಬೀ ಪದ್ಯ !(?)ವನ್ನು ಗಟ್ಟಿಯಾಗಿ ಹೇಳುವದಕ್ಕೆ ನಾನು ಮೊದಲು ಮಾಡುವದು, ಅವರು ''ಎಲೇ ! ಸುಬ್ರಾಯ.....'' ಎಂದು ಗರ್ಜನೆ ಮಾಡುತ್ತಿದ್ದರು. ನಾನು ಒಳಕ್ಕೆ ಓಡಿಬಂದು ಅವಿತುಕೊಳ್ಳುತ್ತಿದ್ದೆನು ! ಸಣ್ಣಹಂಪೆ ಲಿಂಗಣ್ಣನು ಸತ್ಯವಾದಿ, ಉದಾರಿ, ಜನರಿಗೆ ಸಾಲ-ಸೋಲ ಕೊಡುತ್ತಿದ್ದನು. ಮೋಸವಿಲ್ಲ. 'ಸಣ್ಣಸಾಹುಕಾರರು' ಎಂದೇ ಆತನನ್ನು ಕರೆಯುತ್ತಿದ್ದರು. ಅವರೊಡನೆ ನಮ್ಮ ತಂದೆಯವರು ಇಸಪೀಟು

ಆಡಿದ್ದುಂಟು. ಅವರ ಅಂಗಡಿಯಿಂದಲೇ ನಾವು ಬೇಕಾದ ಸಾಮಾನುಗಳನ್ನು ಕೊಂಡು ತರುತ್ತಿದ್ದೆವು. ಈಚೆಗೆ ನಮ್ಮ ತಂದೆಯವರು ಅವರೊಡನೆ ಸ್ವಲ್ಪ ಲೇವಾದೇವಿಯನ್ನೂ ಇಟ್ಟುಕೊಂಡಿದ್ದರು. ಹಲವು ಕಾರಣಗಳಿಂದ ಇತ್ತೀಚೆಗೆ ಅವರು ಲೌಕಿಕದೃಷ್ಟಿಯಿಂದ ಬಹಳ ಕಷ್ಟಕ್ಕೆ ಒಳಗಾದರೂ ತಮ್ಮ ಉದಾತ್ತಭಾವವನ್ನು ಮಾತ್ರ ಎಂದಿಗೂ ಬಿಡಲಿಲ್ಲ. ಬಡಬಗ್ಗರು ಬಹಳ ಕೃತಜ್ಞತೆಯಿಂದ ಅವರನ್ನು ಕೊಂಡಾಡುತ್ತಿದ್ದರು.

ಈವರೆಗಿನ ಯಳ್ಳಂಬಳಸೆಯ ಸಂಕ್ಷೇಪ ವರ್ಣನೆಯಿಂದ ನನ್ನ ಅರಿವಿಲ್ಲದೆಯೇ ಅಧ್ಯಾತ್ಮವಿಚಾರಗಳ ಬೀಜಾವಾಪವು ನನ್ನ ಚಿತ್ತದಲ್ಲಿ ಆಗುವದಕ್ಕೆ ಬೇಕಾದ ಸಲಕರಣೆಯೆಲ್ಲ ಆವೂರಲ್ಲಿತ್ತೆಂಬುದು ಓದುಗರಿಗೆ ಹೊಳೆದಿರಬೇಕು. ಈ ವಿಷಯವನ್ನು ಸಮಯವು ಬಂದಾಗ ಮತ್ತೆ ಪ್ರಸ್ತಾಪಿಸುವೆನು.

# 5. ವಿದ್ಯಾಭ್ಯಾಸ : ಮೂಡುಗೆರೆ

## ಮಂತ್ರ ತಂತ್ರಗಳು, ತೆಲುಗುಲಿಪಿ :

ಉಪನಯನವಾದ ಮೇಲೆ ನನಗೆ ಸಂಧ್ಯಾವಂದನೆಯ ಮಂತ್ರಗಳಲ್ಲದೆ ಕೆಲವು ಸ್ತೋತ್ರಗಳನ್ನೂ ನಮ್ಮ ತಂದೆಯವರು ಹೇಳಿಕೊಟ್ಟರು. ಕೃಷ್ಣಾಷ್ಟೋತ್ತರ, ಶಿವಾಷ್ಟೋತ್ತರ, ಇಂದ್ರಾಕ್ಷಿ, ಶಿವಕವಚ, ಕೃಷ್ಣಾಷ್ಟಕ, ಕಾಲಭೈರವಸ್ತೋತ್ರ, ಅಚ್ಯುತಾಷ್ಟಕ, ಶ್ರೀಕೃಷ್ಣದ್ವಾದಶನಾಮಸ್ತೋತ್ರ - ಇವುಗಳ ಪರಿಚಯವಾಯಿತು. ಊಟದ ಕಾಲಕ್ಕೆ ವಿಷ್ಣುಸಹಸ್ರನಾಮದ ಭಾಗ, ಹರೇರಾಮಮಂತ್ರ - ಮುಂತಾದವು ಗಳನ್ನು ಹೇಳಿಕೊಡುತ್ತಿದ್ದರು. ದೇವರ ಪೂಜೆಯ ಮಂತ್ರವನ್ನು ಆಗಲೆ ಕಲಿತೆನೊ, ಇನ್ನೊಂದು ವರ್ಷವಾದ ಮೇಲೆ ಕಲಿತುಕೊಂಡೆನೊ ಸರಿಯಾಗಿ ನೆನಪಿಲ್ಲ. ಹೂ ತುಳಸಿಯನ್ನು ತಂದು ದೇವರಪೂಜೆಯನ್ನು ನಿಧಾನವಾಗಿ ಮಾಡುವದರಲ್ಲಿ ನನಗೆ ಬಹಳ ಆಸಕ್ತಿಯಿತ್ತು. ಅದಕ್ಕೆ ನಮ್ಮ ತಾಯಿಯವರ ಪ್ರೋತ್ಸಾಹವೂ ಇತ್ತು; ಆದರೆ ತಂದೆಯವರಿಗೆ ಮಾತ್ರ ಹೊತ್ತು ಮೀರಿದರೆ ಸಿಟ್ಟುಬರುತ್ತಿತ್ತು. ಶಿವರಾತ್ರಿಯೇ ಮುಂತಾದ ವಿಶೇಷದಿನಗಳಲ್ಲಿ ತಂದೆಯವರೇ ಪೂಜೆಮಾಡಿದರೂ ನನ್ನಿಂದ ಸಹಸ್ರನಾಮಾವಳಿಯನ್ನು ಓದಿಸುತ್ತಿದ್ದರು. ಆಗ ನಾನು ಓದುತ್ತಿದ್ದಪುಸ್ತಕದಲ್ಲಿ ತೆಲುಗಿನ ಅಕ್ಷರಗಳಿರುವವೆಂಬುದು ತಿಳಿಯದೆ ಇದ್ದದ್ದರಿಂದ ಅದನ್ನು ಓದುವಾಗ ಏತಕ್ಕೆ ಅಡಚಣೆಯಾಗುವದು ಎಂದು ಪೇಚಾಡುತ್ತಿದ್ದೆನು. ತೆಲುಗುಲಿಪಿಯ ಪರಿಚಯವು ಹೀಗೆ ಬೇಗ ಆದದ್ದು ನನಗೆ ಮುಂದೆ ಸಂಸ್ಕೃತಪುಸ್ತಕಗಳನ್ನು ಓದುವದಕ್ಕೆ ಸಹಾಯಕವಾಯಿತು.

## ಇಂಗ್ಲೀಷು ಪಾಠಪ್ರಾರಂಭ :

ನಾನು ಯಳ್ಳಂಬಳಸೆಯನ್ನು ಬಿಡುವ ಸಮಯವು ಬಂತು. ನಮ್ಮ ದೊಡ್ಡಣ್ಣನವರು ನನ್ನನ್ನು ಮೂಡುಗೆರೆಗೆ ಕರೆದುಕೊಂಡು ಹೋಗಿ ಮನೆಯಲ್ಲಿ ಇಟ್ಟುಕೊಂಡರು. ಅಲ್ಲಿ ನಾನು ಸ್ಕೂಲಿಗೆ ಸೇರಿದ ನೆನಪಿಲ್ಲ; ಆದರೆ ಮನೆಯಲ್ಲಿ 'ಮಾಡರನ್‌ಫಸ್ಟ್‌ಬುಕ್' ಎಂಬ ಒಂದು ಇಂಗ್ಲಿಷು ಪುಸ್ತಕವನ್ನು ಹೇಳಿಕೊಡುವುದಕ್ಕೆ ಮೊದಲು ಮಾಡಿದರು. ಮೊದಲು ನನಗೆ ಅದು ಇಂಗ್ಲಿಷ್ ಎಂಬ ಭಾವನೆಯೇ ಇರಲಿಲ್ಲ. ಇಂಗ್ಲಿಷ್ ಅಕ್ಷರಗಳನ್ನು ಸ್ವಲ್ಪಸ್ವಲ್ಪವಾಗಿ ಕಲಿಸುತ್ತಾ ಅವುಗಳಿಂದಾದ ಮಾತುಗಳು, ವಾಕ್ಯಗಳು ಇವುಗಳನ್ನು ಕೊಟ್ಟು ಕೆಳಗೆ ತರ್ಜುಮೆ ಮಾಡುವದಕ್ಕೆಂದು ಕೆಲವು ಕನ್ನಡ ವಾಕ್ಯಗಳನ್ನು ಕೊಟ್ಟಿತ್ತು. ಪಾಠವು ಮೊದಮೊದಲು ಕಷ್ಟವಾದರೂ ಕೆಲವು ದಿನಗಳೊಳಗಾಗಿ ಹಲವು ಪಾಠಗಳು ನನ್ನ ವಶವಾದವು.

## ಊರಲ್ಲಿ ಸುತ್ತಾಟ :

ನನ್ನ ಅಣ್ಣಂದಿರು ಆಗ ತಾಲ್ಲೂಕಿನಲ್ಲಿ ರಿಜಿಸ್ಟ್ರೇಷನ್ ಗುಮಾಸ್ತರಾಗಿದ್ದರು. ಆದ್ದರಿಂದ ಅವರು ಮನೆಯಲ್ಲಿ ಬೆಳಗ್ಗೆ ಅಥವಾ ರಾತ್ರಿ ಸ್ವಲ್ಪ ಹೊತ್ತು ಮಾತ್ರ ಪಾಠವನ್ನು ಹೇಳಿಕೊಟ್ಟು ಕಚೇರಿಗೆ ಹೋದಾಗ ನನಗೆ ಊರಲ್ಲಿ ಹರಿದಾಡುವದಕ್ಕೆ ವಿರಾಮಕಾಲವು ಧಾರಾಳವಾಗಿ ಸಿಕ್ಕುತ್ತಿತ್ತು. ಆದ್ದರಿಂದ ನಾನು ಊರನೋಟಗಳನ್ನು ಪರೀಕ್ಷಿಸುವದಕ್ಕೆ ಬೇಕಾದಷ್ಟು ಕಾಲವಿರುತ್ತಿತ್ತು. ಮೂಡುಗೆರೆಯಲ್ಲಿ ನಾವಿದ್ದದ್ದು ನೌಕರರ ಮನೆಗಳ ಭಾಗ (ಅಫಿಷಿಯಲ್ ಕ್ವಾರ್ಟರ್ಸ್) ; ಅಲ್ಲಿ 10, 12 ಮಂಗಳೂರು ಹೆಂಚಿನ ಮನೆಗಳು. ಮುಂದುಗಡೆಯ ಬಯಲಿನಲ್ಲಿ ಒಂದು ಬಾವಿ ; ಅದರ ಎಡಕ್ಕೆ ಅಮಲ್ದಾರರ ಮನೆ, ಹೀಗಿತ್ತು ಊರಭಾಗದ ರಚನೆ, ನಿಜವಾದ ಊರು ಬೇರೆ ಇದೆ ಎಂಬುದೇ ಕೆಲವು ದಿನಗಳವರೆಗೂ ನನಗೆ ತಿಳಿಯಲೇ ಇಲ್ಲ. ಎಲ್ಲಿ ನೋಡಿದರೂ ತಗ್ಗುತಿಟ್ಟಾದ ನೆಲವು ಮಾತ್ರ ಕಾಣಿಸುತ್ತಿತ್ತು. ಮರಗಳು ಹೇರಳವಾಗಿದ್ದವು. ನೌಕರರ ಮನೆಗಳೆಲ್ಲವೂ ಒಂದೇಸಮವಾಗಿದ್ದದ್ದರಿಂದ ನನಗೆ ನಮ್ಮ ಮನೆಯ ಗುರುತು ಸಿಕ್ಕುವುದು ಕಷ್ಟವಾಗುತ್ತಿತ್ತು. ಯಳ್ಳಂಬಳಸೆಯಲ್ಲಿ ಕಿಟಕಿಯಿಂದ ಗಾರೆಯ ಮನೆಯನ್ನು ಕನಸಿನಲ್ಲಿಯೂ ಕಾಣದೆ ಇದ್ದ ನನಗೆ ಸಾಲಾಗಿ ಎಡಕ್ಕೂ ಬಲಕ್ಕೂ ಕಿಟಕಿಗಳನ್ನಿಟ್ಟು ಹಿಂದಕ್ಕೆ ಮುಂದಕ್ಕೆ ಎದುರುಬದುರಾಗಿ ಬಾಗಿಲಿಟ್ಟಿರುವ ಮನೆಗಳು, ಏನೋ ಹೊಸದಾಗಿ ಕಂಡರೂ ಬಲುಬೇಗನೆ ನನ್ನೆದುರಿಗಿದ್ದ ಬಯಲಿನಲ್ಲಿ ಅಲೆದಾಡುವ ಕುತೂಹಲವೇ ಹೆಚ್ಚುತ್ತಾ ಬಂತು. ಮಣ್ಣುಬೋರೆಗಳ ಮೇಲೆ ಹತ್ತಿಕೊಂಡುಹೋಗಿ ತಗ್ಗಾಗಿರುವ ಮರಗಳ ಕೊಂಬೆಗಳನ್ನು ಹಿಡಿದುಕೊಂಡು ಮರದ ಮೇಲಕ್ಕೇರುವ-ದೊಂದು ನನಗೆ ಹೊಸ ಅನುಭವವಾಯಿತು. ಮೂಡಗೆರೆ ಎಂದರೆ 'ಕಾಡೆಲ್ಲ ಸಂಪಿಗೆ, ಮರವೆಲ್ಲ ದೈವ'-ಎಂಬ ಲೌಕಿಕೋಕ್ತಿಯನ್ನು ಓದುಗರಲ್ಲಿ ಕೆಲವರಾದರೂ ಕೇಳಿರಬಹುದು. ಆದರೆ ನನಗೆ ಆಗ್ಗೆ ದೆವ್ವಗಳ ವಿಷಯವನ್ನು ಹೇಳಿದವರು ಯಾರೂ ಇಲ್ಲ. ಮರಗಳ ಕೆಳಗೆ ಕೇಸಕ್ಕಿ ಬೋನ (ಅನ್ನ)ವನ್ನು ಕೆಂಪು ಹಳದಿ ಬಣ್ಣಗಳಾಗಿ ಮಾಡಿ ಅಲ್ಲಿ ಕೂಳು ಇಳುಕಿರುತ್ತಿದ್ದರಾದರೂ ನನಗೆ ಅದೇನೋ ಒಂದು ಹೊಸದೃಶ್ಯವೆನಿಸಿತೇ ಹೊರತು ಅಂಜಿಕೆಗೆ ಕಾರಣವಾಗಿರಲಿಲ್ಲ. ಕೆಂಡಸಂಪಿಗೆ ಹೂಗಳನ್ನು ತಂದು ದೇವರಪೂಜೆ ಮಾಡುತ್ತಿದ್ದೆನು. ಅಣ್ಣನವರು ನನ್ನನ್ನು ಆಗಾಗ್ಗೆ ಪೇಟೆಯ ಸಾಲುಮನೆಗಳಿಗೆ ಕರೆದುಕೊಂಡು ಹೋಗಿ, ನಮ್ಮ ಮನೆಗೆ ಸಾಲವಾಗಿ ಸಾಮಾನುಗಳನ್ನು ಮಾರುತ್ತಿದ್ದ 'ಲಬ್ಬೆ'ಯವರು ?. ಸಾಹುಕಾರರ ಅಂಗಡಿಯಲ್ಲಿ ಆಗಾಗ್ಗೆ ಸ್ವಲ್ಪ ದ್ರಾಕ್ಷಿ, ಕಲ್ಲುಸಕ್ಕರೆ ಅಥವಾ ಬಾದಾಮಿ - ಇವುಗಳನ್ನು ಕೊಡಿಸುತ್ತಿದ್ದರು. ಆದರೂ ನನಗೆ ಹಳ್ಳಕೊಳ್ಳ , ಮರಗಿಡ, ಗುಡ್ಡಬೆಟ್ಟ - ಇಂಥ ಪ್ರದೇಶಗಳಲ್ಲಿ ಅಲೆದಾಡುವುದೇ ಹೆಚ್ಚುಮೆಚ್ಚಿಗೆಯಾಗಿತ್ತು.

## ತಾಲ್ಲೂಕು ಕಚೇರಿ :

ಕೆಲವು ತಿಂಗಳಾದ ಮೇಲೆ ಅಣ್ಣನವರು ನನ್ನನ್ನು ಒಂದೆರಡು ದಿನ ಕಚೇರಿಗೆ ಕರೆದುಕೊಂಡು ಹೋದರು. ಆಗ ಶಿರಸ್ತೆದಾರರು, ಹೆಡ್ ಗುಮಾಸ್ತರು, ಹೆಡ್‌ಮುನಷಿ, ಸರಾಫರು, ನಗದಿಗುಮಾಸ್ತರು - ಎಂಬ ಹೆಸರುಗಳು ಕಿವಿಗೆ ಬೀಳುವದಕ್ಕೆ ಮೊದಲಾದವು. ಕಚೇರಿಯ ನೆಲಕ್ಕೆ ಬಿದಿರಿನ ದೆಬ್ಬೆಯಲ್ಲಿ ಹೆಣೆದ ಚಾಪೆಯನ್ನು ಹಾಸಿರುತ್ತಿತ್ತು. ಬಿಳಿಯ ಕಾಗದದ ರಿಜಿಸ್ಟರುಗಳು, ರೂಲುದೊಣ್ಣೆ ಕೂತುಕೊಂಡು ಬರೆಯುವ ಇಳಿಜಾರು ಮೇಜು, ಲೇಖನಿಗಳು, ಲೇಖನಿ-ಮುಳ್ಳುಗಳು, ಹಿತ್ತಾಳೆಯ ರೊಟ್ಟು ಮಸಿಕುಡಿಕೆಗಳು, ಗೋಂದಿನ ಪಾತ್ರೆ, ಜವಾನರು, ಅರ್ಜಿದಾರರು - ಈ ದೃಶ್ಯಗಳುಳ್ಳ ಹೊಸಪ್ರಪಂಚವೊಂದು ಕಣ್ಣಿಗೆ ಬಿತ್ತು. ಅದು ಸರಕಾರದ ಕಾರ್ಯಸ್ಥಾನ ಎಂಬ ಭಾವನೆ ನನಗಿರಲಿಲ್ಲವಾದ್ದರಿಂದ ಒಬ್ಬರಿಂದೊಬ್ಬರ ಬಳಿಗೆ ಧಾರಾಳವಾಗಿ ಹರಿದಾಡುತ್ತಿದ್ದೆನು; ಯಾರೂ ನನ್ನನ್ನು ಗದರಿಸಿಕೊಂಡಂತೆ ನೆನಪಿಲ್ಲ. ಸ್ವಲ್ಪ ಕಾಗದವನ್ನು ಕೊಟ್ಟು ಅದರಲ್ಲಿ ಕಾಪಿ ಬರೆಯುವಂತೆ ಅಣ್ಣನವರು ಹೇಳುವರು. ಇಂಗ್ಲಿಷು ಕಾಪಿ ಬರೆಯುವಾಗ ಅಕ್ಷರಗಳು ರೂಲಮೇಲಕ್ಕೂ ಕೆಳಕ್ಕೂ ತಲೆ ಎತ್ತುವದು, ಕಾಲು ಚಾಚುವದು - ಇವುಗಳನ್ನು ಕಂಡು ನನಗೆ ಅದೊಂದು ವಿನೋದವಾಗಿತ್ತು.

## ಹಳೆ ಊರು :

ಮೂಡುಗೆರೆಯ ಹಳೆಯೂರಿನಲ್ಲಿ ಮುಸಲ್ಮಾನ ಸಾಹುಕಾರರು ಇದ್ದರು. ಅವರು ಯಾರೆಂಬುದು ನನಗೆ ನೆನಪಿನಲ್ಲಿ ಉಳಿದಿಲ್ಲ. ಅವರ ಮನೆಯ ಹಜಾರದ ಮೇಲೆ ಬಿದಿರು ಚಾಪೆಯಮೇಲೆ ಜಮಖಾನೆ ಹಾಕಿ ಅಲ್ಲಲ್ಲಿಗೆ ಲೋಟಾಗಳನ್ನಿಟ್ಟಿದ್ದದ್ದು, ನಮ್ಮಣ್ಣನವರು ಹೋದಾಗಲೆಲ್ಲ ಮರ್ಯಾದೆಯಿಂದ ಬರಮಾಡಿ ಕೊಂಡು ಬಿದಿರಿನ ಸಣ್ಣಸಿಗುರಿನಿಂದ ನಾಜೋಕಾಗಿ ಹೆಣೆದ ತಟ್ಟೆಯಲ್ಲಿ ದ್ರಾಕ್ಷಿ, ಕಲ್ಲುಸಕ್ಕರೆ, ಬಾದಾಮಿ - ಮುಂತಾದವುಗಳನ್ನು ಕಾಗದದ ಪೊಟ್ಟಣಗಳಲ್ಲಿಸುತ್ತಿಟ್ಟು ಮೇಲೆ ಶುಭ್ರವಾದ ಕರವಸ್ತ್ರವನ್ನು ಮುಚ್ಚಿಕೊಡುತ್ತಿದ್ದದ್ದು - ಇಷ್ಟುಮಾತ್ರ ಚೆನ್ನಾಗಿ ನೆನಪಿದೆ. ಒಮ್ಮೆ ಅವರ ಅಂಗಳದಲ್ಲಿ ಒಂದು ಸೊಗಸಾದ ಪೈಲುವಾನರ ಆಟವಾಯಿತು. ಸಾಹುಕಾರರೂ ನಾವೂ ಮೇಲುಗಡೆ ಕುಳಿತಿದ್ದೆವು. ಪೈಲುವಾನರು ಹಿಂಗಾಣೆ ಮುಂಗಾಣೆ ನೆಗೆಯುವದು, ಒಬ್ಬರನ್ನೊಬ್ಬರು ನಿಲ್ಲಿಸುವದು, ಜನರು ಎತ್ತಿ ಹಿಡಿದಿರುವ ಎರಡು ಮೂರು ಬಟ್ಟೆಗಳ ಸಾಲನ್ನು ಕಾಲುಸೋಂಕಿಸದೆ ಹಾರುವದು, ಉರಿಯ ಪಂಜುಕಟ್ಟಿದ ಕತ್ತಿಯ ಚೌಕಟ್ಟಿನೊಳಗೆ ದೂರದಿಂದ ಓಡಿಬಂದು ಮೇಲಕ್ಕೆ ಹಾರಿ ನುಸಿಯುವದು ಮುಂತಾದ ಸಾಹಸವನ್ನು ಮಾಡಿತೋರಿಸಿದ್ದನ್ನು ನಾನು ಎಂದಿಗೂ ಮರೆಯಲಾರೆ. ಅಂಥ ಸಾಹಸಿಗರಾದ

ಪೈಲುವಾನರ ತಂಡಗಳು ಈಗ ಏಕೆ ಮಾಯವಾದವೋ, ದೇವರೇ ಬಲ್ಲ ! ಮೂಡಗೆರೆಯಲ್ಲಿ ಹಾಲು ಸಿಕ್ಕುವದು ಬಹಳ ಕಷ್ಟ ಮನೆಯಲ್ಲಿ ಹಸು ಗಂಡಸರಿಗೆ ಮಾತ್ರ ಹಾಲು ಕೊಡುತ್ತಿತ್ತು; ನನ್ನ ಅತ್ತಿಗೆಯವರು ಬಿಳಿಯ ಕಿತ್ತನಾರಿನ ಮಗುಟವನ್ನುಟ್ಟುಕೊಂಡು ಅದನ್ನು ಕರೆದರೆ ಗಂಡಸರೆಂಬ ಭಾವನೆಯಿಂದಲೋ ಏನೋ ಸ್ವಲ್ಪ ಕೊಡುವದೂ ಉಂಟು. ಹಳೆಯೂರಿನಿಂದ ಹಾಲು ತರುವದಕ್ಕೆ ನನ್ನನ್ನು ಗೊತ್ತು ಮಾಡಿದ್ದರು. ಸಾಯಂಕಾಲ ಹೊರಗೆ ಹೋಗುವದಕ್ಕೆ ಆಗಲೆ ನನಗೆ ಅಂಜಿಕೆ ಬಂದಿತ್ತು. ಈ ಊರಿನಲ್ಲಿ ದೆವ್ವಗಳು ಬಹಳ. ರಾತ್ರವೇಳೆ ಹೊರಗೆ ಎಲ್ಲಿಯೂ ಹೋಗಬಾರದು ಎಂದು ಅತ್ತಿಗೆಯವರೇ ನನ್ನ ಅಂಜಿಕೆಯನ್ನು ಬಲಪಡಿಸಿದ್ದರು. ಒಂದು ದಿನ ರಾತ್ರೆ ಧೈರ್ಯಕ್ಕಾಗಿ ಯಾವದೋ ಒಂದು ಪದ್ಯವನ್ನು ಮೆಲ್ಲನೆ ಹೇಳಿಕೊಂಡು ಬರುತ್ತಿದ್ದಾಗ ನಾಯಿ ಬಗುಳಿದ್ದು ಕೇಳಿ ಹೆದರಿಕೆಯಿಂದ ಕೈಯಿಂದ ಹಾಲುಪಾತ್ರೆ ಕೆಳಕ್ಕೆ ಬಿತ್ತು; ಮುಕ್ಕಾಲುಭಾಗ ಹಾಲೆಲ್ಲ ಚೆಲ್ಲಿಹೋಯಿತು. ಉಳಿದಿದ್ದ ಸ್ವಲ್ಪ ಹಾಲನ್ನು ಕುಡಿದು ಬರಿಯಪಾತ್ರೆಯನ್ನು ಮನೆಗೆ ತಂದೆನು. ಮನೆಯಲ್ಲಿ ಹಾಲೆಲ್ಲೋ ಎಂದು ಕೇಳುತ್ತಲೂ ಅಳುವದಕ್ಕೆ ಪ್ರಾರಂಭಿಸಿದೆ; ಆಗ ಅಲ್ಲಿಯೂ ಕೆಲವು ಏಟುಗಳನ್ನು ತಿನ್ನಬೇಕಾಯಿತು. ಮಾರನೆಯ ದಿನ ಸ್ವಲ್ಪ ಚಳಿಜ್ವರವೂ ಬಂತೆಂದು ಕಾಣುತ್ತದೆ.

## ಊರ ಹೊರಗೆ :

ಇಷ್ಟೆಲ್ಲ ಆದರೂ ಊರ ಹೊರಗೆ ಏನೇನಿದೆಯೋ ನೋಡಬೇಕೆಂಬ ನನ್ನ ಕುತೂಹಲವು ಆರಲಿಲ್ಲ. ರಸ್ತೆಯನ್ನು ಹಿಡಿದು ದೂರಕ್ಕೆ ಹೋಗುವದು, ಅಲ್ಲಿ ಚಂದ್ರಶೀಬೆ, ಪನ್ನೇರಿಲೆ, ನೇರಳೆ-ಮುಂತಾದ ಹಣ್ಣುಗಳಿಗಾಗಿ ಕೊಂಬೆಯಿಂದ ಕೊಂಬೆಗೆ ಮರದಿಂದ ಮರಕ್ಕೆ ಹಾರುವ ಆಟವು ಆಗ ನನಗೆ ಸೊಗಸೆನಿಸಿತು. ನೇರಳೆಹಣ್ಣಿನ ಕಾಲದಲ್ಲಿ ನಾಲಗೆ ಸಾಲಗ್ರಾಮದಂತೆ ಕಪ್ಪಾಗುವವರೆಗೂ ತಿಂದು ಉಳಿದಿದ್ದನ್ನು ಅತ್ತಿಗೆಯವರಿಗೂ ತಂದುಕೊಡುತ್ತಿದ್ದೆನು. ಮೂಡಗೆರೆಯಲ್ಲಿ ಮುಖ್ಯವಾಗಿ ನನಗೆ ಇಂಗ್ಲೀಷು ವಿದ್ಯಾಭ್ಯಾಸಕ್ಕಿಂತಲೂ ಕಾಡುಮರಗಳ ಹಣ್ಣುತಿನ್ನುವ ಅಭ್ಯಾಸವೇ ಹೆಚ್ಚಾಗಿ ಆಯಿತೆನ್ನಬಹುದು. ಆವೂರಲ್ಲಿರುವಷ್ಟು ಕಾಲವೂ ಪ್ರಕೃತಿ ಸೌಂದರ್ಯವು ನನ್ನನ್ನು ಸೆರೆಹಿಡಿದಿತ್ತೆನ್ನಬಹುದು. ನಾನು ಒಬ್ಬ ಪ್ರಕೃತಿಮಾತೆಯ ಮಗುವಾಗಿ ಕಂಡಕಡೆಗೆ ಅಲೆಯುತ್ತಾ ಆನಂದವನ್ನನುಭವಿಸುತ್ತಿದ್ದೆನು. ಹುಡುಗನಿಗೆ ಓದುಬರಹ ಹತ್ತುವದಿಲ್ಲವೆಂಬ ಬೇಸರದಿಂದಲೊ ಏನೊ, ನನ್ನನ್ನು ಅಣ್ಣನವರು ಊರಿಗೆ ಕಳುಹಿಸಿಬಿಟ್ಟರು.

# 6. ವಿದ್ಯಾಭ್ಯಾಸ - ಚಿಕ್ಕಮಗಳೂರು

## ಚಿಕ್ಕಮಗಳೂರಿಗೆ ಪಯಣ :

ಯಳ್ಳಂಬಳಸೆಯಲ್ಲಿ ಕೆಲವು ತಿಂಗಳುಗಳಿದ್ದಮೇಲೆ 1891ನೆಯ ಕೊನೆಯ ಭಾಗದಲ್ಲಿರಬೇಕು, ನನಗೆ ಚಿಕ್ಕಮಗಳೂರಿನ ಪ್ರಯಾಣವು ಬಂದಿತು. ಹಿಂದೆ ಮೂಡಗೆರೆಗೆ ಹೋಗುವಾಗ ಚಿಕ್ಕಮಗಳೂರಮೇಲೆಯೇ ಪ್ರಯಾಣವಾಗಿರಬೇಕಾದರೂ ಈಗಲೇ ನನಗೆ ನಿಜವಾಗಿ ಚಿಕ್ಕಮಗಳೂರಿನ ಮೊದಲನೆಯ ಪರಿಚಯವಾಯಿತು. ನಾನು ಫೋರ್ಟರ ಪೇಟೆಯಲ್ಲಿದ್ದ ನಮ್ಮ ಮಲ್ಲಣ್ಣಭಾವನ (ನಂಜಕ್ಕನವರ ಗಂಡನ) ಮನೆಗೆ ಬಂದಿಳಿದೆನು.

## ಫೋರ್ಟರಪೇಟೆಯ ಮನೆ :

ನಾವಿದ್ದ ಮನೆಯು ಫೋರ್ಟರ ಪೇಟೆಯಲ್ಲಿ ಒಂದು ಮನೆಯ ಭಾಗವು ಮಾತ್ರ. ಆ ಭಾಗದಲ್ಲಿ ಎರಡು ಕೋಣೆಗಳು ಮಾತ್ರ ಇದ್ದವು. ಒಂದು ಕೋಣೆಯು ಅಡಿಗೆಮನೆ, ದೇವರಮನೆ - ಈ ಎರಡು ಮನೆಗಳ ಕೆಲಸವನ್ನು ನಿರ್ವಹಿಸುತ್ತಿತ್ತು. ಯಳ್ಳಂಬಳಸೆಯ ವಿಶಾಲವಾದ ಮನೆಯನ್ನು ನೋಡಿದ್ದ ನನಗೆ ಮೂಡಗೆರೆಯ ಅಣ್ಣನವರ ಮನೆಗಿಂತಲೂ ಸಣ್ಣದಾದ ಮನೆಯಲ್ಲಿ ಭಾವನವರು ಇದಾರಲ್ಲ ! ಎನಿಸುತ್ತಿತ್ತು. ಇನ್ನೊಂದು ಭಾಗವು ನಮಗೆ ಮಲಗುವ ಮನೆ, ಕೂಡುವ ಮನೆ - ಮುಂತಾದವುಗಳಿಗೆಲ್ಲ ಆಗುತ್ತಿತ್ತು. ನಡುಮನೆಯನ್ನು ನಾವೂ ಮನೆಯ ಯಜಮಾನರೂ ಸಮಾನವಾಗಿ ಉಪಯೋಗಿಸುತ್ತಿದ್ದೆವು. ಇದರಂತೆ ಸ್ನಾನದ ಮನೆಯೂ ಇಬ್ಬರಿಗೂ ಸಮಾನವಾಗಿತ್ತು. ನಮ್ಮ ಮನೆಯ ಕಿಟಕಿಯ ಗಾಜು ಒಡೆದಿತ್ತು ; ನಾನು ಅದನ್ನು ಸ್ವಲ್ಪ ಸ್ವಲ್ಪವಾಗಿ ಕಿತ್ತು ಈಚೆಗೆ ಎಳೆಯುವದಕ್ಕೆ. ಪ್ರಯತ್ನಿಸುತ್ತಿದ್ದೆನು. ಮನೆಯವರು ಪೋಲೀಸು ಕೆಲಸದಲ್ಲಿದ್ದರು. ತಂದೆ ಜಮೇದಾರರೋ, ಇನಸ್ಪೆಕ್ಟರರೋ ಆಗಿದ್ದರು ; ಮಗನು ದಫೇದಾರನು. ಪೋಲೀಸಿನವರಾಗಿದ್ದರಿಂದಲೊ ಏನೋ, ಅವರ ಮನೆಯಲ್ಲಿ ಬಹಳ ಗದ್ದಲ. ನಮ್ಮ ಭಾವನವರ ಗಂಟಲು ಬಲು ಸಣ್ಣ ; ಅವರಿಗೆ ಆಗಲೆ ತಕ್ಕ ಮಟ್ಟಿಗೆ ವಯಸ್ಸು ಆಗಿತ್ತು ಅಥವಾ ಕೂದಲು ನೆರೆತಿತ್ತು. ಅವರಿಗೆ ಮೌನ ಹೆಚ್ಚು. ಆಚೆ ಮನೆಯವರು ಕೂಗಿಕೊಂಡರೆ 'ಏನು ರಾಕ್ಷಸರಿವರು' ಎನ್ನುತ್ತಿದ್ದರು. ಆ ಮನೆಯವರು ನಮ್ಮ ಭಾವನವರಿಗೆ ಮೂಕರು ಎಂಬ ಬಿರುದನ್ನು ಸಲ್ಲಿಸುತ್ತಿದ್ದರು. ದಫೇದಾರ ತಮ್ಮಯ್ಯನಿಗೆ ಬಡವರ ಮನೆಯ ಹೆಣ್ಣು ತಂದಿತ್ತು. ಹುಡುಗಿ ಸ್ವಲ್ಪ ಹೆಬಗಿ (ದಡ್ಡಿ) ಎಂತ

ಕಾಣುತ್ತದೆ. ಅವಳಿಗೆ ಅತ್ತೆಯೂ ಗಂಡನೂ ಹೊಡೆದು ಬಡಿದು ಗೋಳಾಡಿಸುತ್ತಿದ್ದರು. ಒಂದು ದಿನ ನಾನು ತಡೆಯಲಾರದೆ ಅವಳನ್ನೇಕೆ ಹೊಡೆಯುತ್ತೀರಿ ಎಂದು ಕೇಳಿದ್ದೂ 'ಬಾ, ನಿನಗೂ ಎರಡು ಕೊಡುತ್ತೇನೆ' ಎಂದು ಅವರು ಗದರಿದ್ದು ನೆನಪಿದೆ. ತಮ್ಮಯ್ಯನಲ್ಲಿ ಒಂದು ವಿಲಕ್ಷಣಪದ್ಧತಿಯಿತ್ತು. ಅವನು ಆಗಾಗ್ಗೆ ತನಗೆ ತಾನೆ ಏನು ಬೇಕೆಂದೇನು ಮಾಬಣ್ಣ ! ಪೋಲೀಸು ! ಕೆಲಸ ಎಂಬ ಪೋಲೀಸರ ಹೊಗಳಿಕೆಯ ಪದವನ್ನು ಹಾಡಿಕೊಳ್ಳುತ್ತಿದ್ದನು. ಆ ಪದದ ಒಂದೆರಡು ನುಡಿಗಳನ್ನು ಯಾರೊ ಯಳ್ಳಂಬಳಸೆಯಲ್ಲಿ ನನಗೂ ಹೇಳಿಕೊಟ್ಟಿದ್ದ ನೆನಪಿದೆ. ಸಂಜೆಯ ಹೊತ್ತಿನಲ್ಲಿ ಒಂದು ಕಡೆ ಕುಳಿತುಕೊಂಡು ತನ್ನನ್ನು ತಾನೇ ಸಂಬೋಧಿಸುತ್ತಾ 'ಎಲೊ ತಮ್ಮಯ್ಯ, ಬಾರೊ ಇಲ್ಲಿ! ಬೆಳಿಗ್ಗೆ ಎಲ್ಲಿಗೆ ಹೋಗಿದ್ದೆ? ಹೀಗೇಕೆ ಮಾಡಿದೆ ? ಛೀ ಹುಚ್ಚ! ಸರಿ, ಅವರಿಗೇನು ಹೇಳಿದೆ ? ಭಲೆ ತಮ್ಮಯ್ಯ !' ಎಂದು ತನ್ನನ್ನು ತಾನೇ ಗದರಿಸಿ ಬಯ್ಯುವದು, ಹೊಗಳುವದು - ಹೀಗೆಲ್ಲ ಮಾಡಿಕೊಳ್ಳುತ್ತಿದ್ದನು. ನಾನು ಒಂದು ದಿನ ಗೋಡೆಯಿಂದ ಇಣಿಕಿ ನೋಡಿ ಈ ವಿಲಕ್ಷಣಚರ್ಯೆ- ಯನ್ನು ತಿಳಿದುಕೊಂಡೆನು. ತಮ್ಮಯ್ಯ ಏಕೆ ಹೀಗೆ ಮಾಡುತ್ತಿದ್ದಾನೋ ತಿಳಿಯದು ; ನನಗಂತೂ ಈಚೆಗೆ ಕೆಲವು ದಿನಗಳವರೆಗೆ ಸಾಯಂಕಾಲವಾಗುತ್ತಲೂ 'ನಾನು ಬೆಳಗ್ಗೆ ಏನುಮಾಡಿದೆನು ? ಅದು ಸರಿಯೆ ?' ಎಂದು ಮುಂತಾಗಿ ಆತ್ಮಪರೀಕ್ಷೆ ಮಾಡಿಕೊಳ್ಳುವ ಪದ್ಧತಿಯುಂಟಾಗಿತ್ತು. ಇದು ತಮ್ಮಯ್ಯನ ಏಕಾಂತಭಾಷಣದ ಫಲವಾಗಿರಬೇಕೆಂದು ತೋರುತ್ತದೆ.

## ಸ್ಕೂಲಿನಲ್ಲಿ ವಿದ್ಯಾಭ್ಯಾಸ:

ಆಗ್ಗೆ ಚಿಕ್ಕಮಗಳೂರಿನಲ್ಲಿ ಒಂದನೆಯ ಕ್ಲಾಸಿನಿಂದ ಮೆಟ್ರಿಕ್ಯುಲೇಷನ್‌ವರೆಗೂ ಇತ್ತು. ನಾನು ಒಂದನೆಯ ಕ್ಲಾಸಿಗೆ ಸೇರಿಕೊಂಡೆನು. ಅಲ್ಲಿಯ ಸ್ಕೂಲು ಒಂದು ಆಶ್ಚರ್ಯಕರವಾದ ಸ್ಥಳವಾಗಿತ್ತು. ಸುತ್ತಲೂ ಲ್ಯಾಂಟಾನ ಗಿಡಗಳ ಬೇಲಿಯದೊಂದು ದೊಡ್ಡ ಆಟದ ಬಯಲು ; ನಡುವೆ ಒಂದು ನಾಡು ಹೆಂಚು ಹೊದಿಸಿದ್ದ ಹಲವು ಕೋಣೆಗಳ ಕಟ್ಟಡ. ಸ್ಕೂಲು ಬೇಲಿಗೆ ಗೇಟು (ಹೆಬ್ಬಾಗಿಲು) ಇತ್ತು ; ನಾವೇನೋ ಅಲ್ಲಲ್ಲಿ ಬೇಲಿಯ ಸಂದುಗಳಿಂದಲೇ ನುಸಿದುಕೊಂಡು ಸ್ಕೂಲಿಗೆ ಬರುತ್ತಿದ್ದೆವು. ನನಗೆ ಎಲ್ಲಾ ತರಗತಿಗಳ ಪರಿಚಯವಿರಲಿಲ್ಲ ; ಎಲ್ಲಾ ಮೇಷ್ಟರುಗಳ ಪರಿಚಯವೂ ಇರಲಿಲ್ಲ. ನನಗೆ ನೆನಪಿರುವ ಇಬ್ಬರ ವಿಷಯವಾಗಿ ಮಾತ್ರ ಸ್ವಲ್ಪ ಬರೆಯುತ್ತೇನೆ.

ಇಂಗ್ಲೀಷು ಒಂದನೆಯ ತರಗತಿಯಲ್ಲಿ ಮೂಡಗೆರೆಯಲ್ಲಿ ನಾನು ಕಂಡಿದ್ದ ಮದರಾಸು ಒಂದನೆಯ ಪುಸ್ತಕವಲ್ಲದೆ 'ರಾಯಲ್ ಪ್ರಿಮರ್' ಎಂಬುದೊಂದು

ಪುಸ್ತಕವೂ ಇತ್ತು. ಮದರಾಸು ಪುಸ್ತಕಗಳಲ್ಲಿದ್ದ ಪ್ರಶ್ನೆಗಳಿಗೆ ಹುಡುಗರಿಂದ ಉತ್ತರವನ್ನು ಹೇಳಿಸುವದೂ ಪಾಠಕ್ರಮದಲ್ಲಿ ಸೇರಿತ್ತು. ನಮ್ಮ ಮೇಷ್ಟರು ಕಾಂತಯ್ಯನವರು (?) ನಮ್ಮನ್ನು ಒಬ್ಬೊಬ್ಬರಾಗಿ ಪ್ರಶ್ನೆಗಳನ್ನು ಕೇಳುತ್ತಾ ಉತ್ತರವನ್ನು ಹೇಳದೆ ಮೇಲಿನ ಸ್ಥಾನಕ್ಕೆ ಉತ್ತರಕೊಟ್ಟವರನ್ನು ಕಳುಹಿಸುತ್ತಿದ್ದರು. ಆಮೇಲೆ ತರಗತಿಯ ಹುಡುಗರ ಸಂಖ್ಯೆಯಿಂದ ಪ್ರಾರಂಭಿಸಿ 40, 39, 38 - ಎಂದು ಕೂಗಿ ತಮ್ಮತಮ್ಮ ನಂಬರನ್ನು (ಸಂಖ್ಯೆಯನ್ನು) ಹೇಳುತ್ತಿದ್ದರು. ಮಾರ್ಕ್ಸ್ ರಿಜಿಸ್ಟರಿನಲ್ಲಿ ಈ ನಂಬರುಗಳನ್ನು ಮೇಷ್ಟರು ಬರೆದುಕೊಳ್ಳುತ್ತಿದ್ದರು. ಈ ರೀತಿಯಲ್ಲಿ ಅಗ್ರಸ್ಥಾನವನ್ನು ಪಡೆದ ಹುಡುಗನಿಗೆ 40 ಬಂದರೆ ಕೊನೆಯ ಹುಡುಗನಿಗೆ 1 ನಂಬರು ಬರುತ್ತಿತ್ತು. ಕೊನೆಯ ಹುಡುಗನು ಆದಿನ ಪಾಠವನ್ನೆಲ್ಲ ಓದಿಕೊಂಡು ಬಂದಿದ್ದರೂ ಅವನಿಗೆ 1 ನಂಬರು, ಓದದೇ ಬಂದರೂ 1 ನಂಬರು ! ಒಂದೊಂದು ವೇಳೆ ಹುಡುಗರು ಒಬ್ಬರನ್ನೊಬ್ಬರು ಪ್ರಶ್ನೆಕೇಳಿ ಉತ್ತರ ಹೇಳುತ್ತಿದ್ದರು. ಅಂಥ ಸಂದರ್ಭದಲ್ಲಿ ಕ್ರಮದಲ್ಲಿ 20ನೆಯನವನಾಗಿದ್ದ ಹುಡುಗನು 4ನೆಯವನನ್ನು ಒಂದು ಪ್ರಶ್ನೆಯನ್ನು ಕೇಳಿ ಆದಕ್ಕೆ ಸರಿಯಾದ ಉತ್ತರವು ಬಾರದೇ ಇದ್ದರೆ ತಾನೇ ಆದರ ಉತ್ತರವನ್ನು ಹೇಳುವನು; 4ನೆಯವನು ಅವನನ್ನು ತಾನೂ ಒಂದು ಪ್ರಶ್ನೆ ಹಾಕಿದ್ದಕ್ಕೆ ಈ 20ನೆಯವನು ಸರಿಯಾಗಿ ಉತ್ತರ ಕೊಟ್ಟರೆ ಸಾಕು, 4ನೆಯ ಸ್ಥಾನದವನು 20ನೆಯ ಸ್ಥಾನಕ್ಕೆ ಇಳಿಯುತ್ತಿದ್ದನು. 20ನೆಯವನು 4ನೆಯವನ ಸ್ಥಾನಕ್ಕೆ ಏರುತ್ತಿದ್ದನು ! ಮೇಲಿರುವ 4ನೆಯಸ್ಥಾನದವನು ಯಾವದೋ ಒಂದು ಪ್ರಶ್ನೆಗೆ ಉತ್ತರವನ್ನು ಕೊಡದೆ ಇದ್ದಮಾತ್ರದಿಂದ 20ನೆಯ ಸ್ಥಾನಕ್ಕೆ ಇಳಿಯಬೇಕೇ ? - ಎಂದು ಮೇಲಿನವರು ಗೊಣಗುಟ್ಟಿಕೊಳ್ಳುತ್ತಿದ್ದರು. ನಡುವೆ ಇದ್ದವರನ್ನು ಯಾವ ಪ್ರಶ್ನೆಯನ್ನು ಯಾರೂ ಕೇಳದೆ ಇದ್ದರೂ 20ನೆಯ ಸ್ಥಾನದವನಾಗಿದ್ದ ಹುಡುಗನು ತಮ್ಮ ಮೇಲೆ ಹೋಗಿ 4ನೆಯವನಾಗಬೇಕಲ್ಲ ! ಇದು ಯಾವ ನ್ಯಾಯ ? ಎಂದು 5ನೆಯವನಿಂದ ಹಿಡಿದು 19ನೆಯ ಹುಡುಗನವರೆಗೂ ಎಲ್ಲರಿಗೂ ಅಸಂತೋಷ. ಅನ್ಯಾಯದಿಂದ ನಡೆದ ಈ ಸ್ಥಾನವಿನಿಮಯದಿಂದ ತಮ್ಮ ಸ್ಥಾನಮಾನಗಳನ್ನು ಅಳೆಯುವದು, ಮಾರ್ಕ್ಸ್ ರಿಜಿಸ್ಟರಿ ನಲ್ಲಿ ಈ ನಂಬರುಗಳಲ್ಲಿ ಹಾಕಿ ಈ ತಿಂಗಳಲ್ಲಿ ಇವನು ತರಗತಿಯಲ್ಲಿ 8ನೆಯವನು, ಅವನು 20ನೆಯವನು ಎಂದು ತಾರತಮ್ಯವನ್ನು ಗೊತ್ತುಮಾಡಿದ್ದ ಪದ್ಧತಿ ಕೆಲವು ಹುಡುಗರಿಗಂತೂ ಒಪ್ಪುತ್ತಲೇ ಇರಲಿಲ್ಲ. ಆದರೇನು ? ಆ ಕ್ಲಾಸಿನ ರಾಜ್ಯದಲ್ಲಿ ಮೇಷ್ಟರದೇ ಕಾನೂನು ! ಕಾಂತಯ್ಯಮೇಷ್ಟರು ಹುಡುಗರಿಗೆ ಸಂಖ್ಯೆಗಳನ್ನು ಬರೆಯುವಾಗ ಏಕ, ದಶಕ, ಶತಕ - ಮುಂತಾದ ಸ್ಥಾನಗಳ ಬೆಲೆ ಗೊತ್ತಾಗಲೆಂದು ದೊಡ್ಡ 'ಸ್ಟ್ಯಾಂಡ್‌ಬೋರ್ಡ್'ನ ಕಂಬಗಳಿಗೆ ಸ್ಕ್ರೂಮೊಳೆಗಳ ಮೂಲಕ ಜೋಡಿಸಿ ನಿಲ್ಲಿಸಿದ್ದ ಕಪ್ಪು ಹಲಗೆಯ ಮೇಲೆ ಚದುರಂಗದಾಟದ ಮನೆಗಳ ಹಾಗೆ ಗೀಟುಗಳಿಂದ ಮನೆಗಳನ್ನು ಮಾಡಿ ಅಂಕೆಗಳನ್ನು ಬರೆದು ಲೆಕ್ಕ ಮಾಡಿಸುತ್ತಿದ್ದರು. ನಾನು 'ಸ್ಟ್ಯಾಂಡ್

ಬೋರ್ಡು' ಕಂಡದ್ದು ಅದೇ ಮೊದಲು. ಕಪ್ಪುಹಲಗೆಯನ್ನು ಅತ್ತಿತ್ತ ತಿರುಗಿಸುವದಕ್ಕೆ ಬರುತ್ತದೆ ಎಂಬುದೇ ನನಗೆ ಹೊಸ ನೋಟ. ಈ ಸಂದರ್ಭದಲ್ಲಿ ನನಗೆ ಅಂಕೆಗಳ ಸ್ಥಾನದ ಬೆಲೆಯ ತಿಳುವಳಿಕೆಗಳಿಗಿಂತಲೂ ಉದ್ದಗೀಟು, ಅಡ್ಡಗೀಟು - ಇವನ್ನು ಹಾಕಿ ಬರೆದ ಚಿತ್ರದ ತಿಳುವಳಿಕೆಯೇ ಹೆಚ್ಚಾಗಿ ಆಯಿತೆನ್ನಬಹುದು. ಏಕೆಂದರೆ ಸ್ಲೇಟಿನ ಮೇಲೆ ಹಾಗೆ ಗೀಟುಗಳನ್ನು ಹಾಕಿ ಚೌಕವಾದ ಮನೆಗಳನ್ನು ಆಗಾಗ್ಗೆ ವಿನಾ ಕಾರಣವಾಗಿಯೇ ಬರೆಯುವದು ನನಗೊಂದು ಆಟವಾಯಿತು. ಕೆಲವು ಪಾಠಗಳಲ್ಲಿ ಮೇಷ್ಟರಿಗೆ ಬೋಧನ ಪದ್ಧತಿಯಲ್ಲಿ ತಿಳುವಳಿಕೆ ಕೊಡುವದಕ್ಕಾಗಿ ಹೆಡ್‌ಮಾಸ್ತರು (ಸಿ. ಕೃಷ್ಣರಾಯರು ?) ಬಂದು ತಾವೇ ನಮಗೆ ಪಾಠವನ್ನು ಹೇಳಿಕೊಡುತ್ತಿದ್ದರು. ನನಗೆ ಅವರು ಹೆಡ್ ಮೇಷ್ಟ್ರರೆಂಬುದು ತಿಳಿಯದ ಕಾಲವಾದ್ದರಿಂದ ಒಂದು ತರಗತಿಗೆ ಇಬ್ಬರು ಮೇಷ್ಟರು ಏಕೆ ? ಎಂಬದರ ಅರಿವು ಆಗುತ್ತಿರಲಿಲ್ಲ. ಇದೂ ಅಲ್ಲದೆ, ಹೆಡ್‌ಮಾಸ್ತರು ಹೋದ ಬಳಿಕ ನಮ್ಮ ಮೇಷ್ಟ್ರರು ಕುರ್ಚಿಯಮೇಲೆ ಕೂತುಕೊಂಡು ತಮ್ಮ ದಪ್ಪವಾದ ಮೀಸೆಯನ್ನು ಬಲಗೈಯಿಂದ ತಿರುಹುತ್ತಿರುವಾಗ ಹೇಳಿಕೊಟ್ಟವರು ಅವರು, ಇವರೇಕೆ ಮೀಸೆ ತಿರುಹುವದು ? ಎಂಬ ಪ್ರಶ್ನೆಯೊಂದು ಆಗಾಗ್ಗೆ ಮನಸ್ಸಿನಲ್ಲಿ ಮೂಡುತ್ತಿತ್ತು.

ನನಗೆ ಒಂದನೆಯ ತರಗತಿಯಿಂದ ಎರಡನೆಯ ತರಗತಿಗೆ ಪ್ರಮೋಷನ್ (ಬಡತಿ)ಆದಾಗ 'ಮಲ್ಲಪ್ಪ' ಮೇಷ್ಟರ ಪರಿಚಯವಾಯಿತು. ಮಲ್ಲಪ್ಪ ಮೇಷ್ಟ್ರರ ತರಗತಿಯಲ್ಲಿ ಗದ್ದಲವಿಲ್ಲ, ಅವರಲ್ಲಿ ಮಾತು ಬಹಳವಿಲ್ಲ. ಪಾಠವನ್ನು ಮೆಲ್ಲನೆಯ ಧ್ವನಿಯಲ್ಲಿ ಚೆನ್ನಾಗಿ ಹೇಳಿಕೊಡುತ್ತಿದ್ದರು. ಆದರೆ ತಮ್ಮ ತಗ್ಗಿದ ದನಿಯ ಕಾರಣದಿಂದ ಹಿಂದಿನ ಬೆಂಚುಗಳಲ್ಲಿದ್ದ ಹುಡುಗರಿಗೆ ಪಾಠವು ಸರಿಯಾಗಿ ತಿಳಿಯುತ್ತಿಲ್ಲವೆಂಬುದು ಅವರಿಗೆ ಗೊತ್ತಾಗಿರಲಿಲ್ಲವೆಂದು ಕಾಣಿಸುತ್ತದೆ. ಕನ್ನಡ 'ಕಾಂಪೊಸಿಷನ್' (ವಾಕ್ಯರಚನೆ)ಗೆ ಅವರು ಒಂದು ಸಣ್ಣ ಕಥೆಯನ್ನು ಹೇಳಿ ಅದನ್ನು ನಿಮ್ಮ ಮಾತಿನಲ್ಲಿ ಬರೆಯಿರಿ ಎಂದರೆ ಆ ಮೆಲ್ದನಿಯ ಮಾತುಗಳು ಕೇಳಿಸದೆ ಅನೇಕ ಹುಡುಗರು ಬರಿಯ ಸ್ಲೇಟುಗಳನ್ನೇ ಇಟ್ಟುಕೊಂಡಿರುತ್ತಿದ್ದರು. ಹೇಗೇ ಆಗಲಿ, ತರಗತಿಯು ಬಹಳ ಹಿಡಿತದಲ್ಲಿತ್ತು. ಬರವಣಿಗೆಗೆಂದು ನಾವುಗಳು ಕಾಪೀ ಬುಕ್ಕುಗಳನ್ನು ಡೆಸ್ಕು (ಇಳಿಜಾರುಮೇಜು) ಮೇಲೆ ಇಟ್ಟುಕೊಂಡ ಕೂಡಲೆ ಮೇಷ್ಟರು ಅವರವರ ಬಳಿಗೆ ಬಂದು ಹೀಗೆ ಲೇಖನಿ ಹಿಡಿಯಬೇಕು, ಇಂಥ ಅಕ್ಷರವನ್ನು ಹೀಗೆ ಬರೆಯಬೇಕು ಎಂದು ತಿಳಿವಳಿಕೆ ಕೊಡುತ್ತಾ ತರಗತಿಯಲ್ಲಿ ಅಡ್ಡಾಡುತ್ತಿದ್ದರು; ನಾವು ಬರೆದ ಅಕ್ಷರಗಳು ಸರಿಯಾಗಿಲ್ಲದಿದ್ದಾಗ 'ಕಾಪೀಸ್ಲೇಟ್' (ಬರೆವಣಿಗೆಯ ಅಕ್ಷರಗಳನ್ನು ಅಚ್ಚುಮಾಡಿಸಿದ್ದ ಪುಸ್ತಕದ) ಅಕ್ಷರಗಳನ್ನು ತೆಗೆದು ತೋರಿಸಿ ತಾವೇ ಒಂದೆರಡು ಅಕ್ಷರಗಳನ್ನು ಬರೆಯುತ್ತಿದ್ದರು. ವೇಗವಾಗಿ ಬರೆದರೂ ಅವರ ಅಕ್ಷರಗಳು

ಮುದ್ದಾಗಿದ್ದದ್ದನ್ನು ಕಂಡ ಕೂಡಲೇ ಅವರಲ್ಲಿ ಪೂಜ್ಯಬುದ್ಧಿಯೂ ಒಳ್ಳೆಯ ಅಕ್ಷರವನ್ನು ಬರೆಯುವದನ್ನು ಕಲಿತುಕೊಳ್ಳಬೇಕೆಂಬ ಇಚ್ಛೆಯೂ ಉಂಟಾಗುತ್ತಿದ್ದವು. ಮಲ್ಲಪ್ಪ ಮೇಷ್ಟರು ಬಹಳ ಗಂಭೀರ. ಅವರು ಆಗಾಗ್ಗೆ ಹಾಸ್ಯದ ಮಾತುಗಳನ್ನು ಆಡಿ ನಮ್ಮನ್ನು ನಗಿಸಿದರೂ ತರಗತಿಯವರಿಗೆ ಯಾರಿಗೂ ಗಟ್ಟಿಯಾಗಿ ನಗುವದಕ್ಕೆ ಧೈರ್ಯ ಬರುತ್ತಿರಲಿಲ್ಲ. ಮಲ್ಲಪ್ಪನವರು ಅಕ್ಕಸಾಲಿಗರಂತೆ. ಅವರು ಚಿಕ್ಕಮಗಳೂರಿನಲ್ಲಿ ವಿದ್ಯಾಭ್ಯಾಸಮಾಡಿ ಅಲ್ಲಿಯೇ ಮೇಷ್ಟರಾಗಿದ್ದರು. ಅವರು ರೈಲನ್ನೇ ನೋಡಿಲ್ಲ ಎಂದು ಜನರು ಆಡಿಕೊಂಡದ್ದನ್ನು ಈಚೆಗೂ ನಾನು ಕೇಳಿದ್ದೇನೆ. ಅವರ ವಿದ್ಯಾರ್ಥಿಗಳು ದೊಡ್ಡವರಾದಮೇಲೂ ಅವರನ್ನು ಹೆಚ್ಚಿನ ಗೌರವದಿಂದಲೇ ಕಾಣುತ್ತಿದ್ದರು. ಆ ಊರಿನಲ್ಲಿ ಅಸಿಸ್ಟೆಂಟು ಕಮಿಷನರಾಗಿದ್ದ ಒಬ್ಬ ದೊಡ್ಡಮನುಷ್ಯರು ನೆಶ್ಯ ಹಾಕುವಾಗ 'ಮಲ್ಲಪ್ಪಮೇಷ್ಟರು ಬರುತ್ತಿದ್ದಾರೆ' - ಎಂದು ಮರೆಯಲ್ಲಿ ಹಾಕಿಕೊಳ್ಳುತ್ತಿದ್ದರಂತೆ.

## ಚಿಕ್ಕಮಗಳೂರನ್ನು ಬಿಡಬೇಕಾಗಿ ಬಂದದ್ದು :

ಮನೆಯಲ್ಲಿ ನನಗೆ ಕೆಲವು ಸಣ್ಣ ಪುಟ್ಟ ಕೆಲಸಗಳನ್ನು ಹೇಳುತ್ತಿದ್ದರು. ಅಂಗಡಿಯಿಂದ ಚಿಲ್ಲರೆ ಸಾಮಾನುಗಳನ್ನು ತರುವದು, ಸಂತೆಯಿಂದ ತರಕಾರಿ ತರುವದು, ದಿನದಿನವೂ ಹೂ ತುಳಸಿ ತರುವದು, ದೇವರ ಪೂಜೆ ಮಾಡುವದು, ಇಂಥ ಕೆಲಸಗಳನ್ನು ಮನೆಯವರು ಹುಡುಗರಿಗೆ ಹೇಳುವದು ಸ್ವಾಭಾವಿಕವೇ. ಆದರೆ ವ್ಯಾಪಾರವು ತಿಳಿಯದೆ ಒಂದೆರಡು ಕಾಸು ಹೆಚ್ಚಾಗಿ ಕೊಟ್ಟಿದ್ದರೆ, ಹೂಗಳನ್ನು ತರುವದಕ್ಕೆ ತಡವಾಗಿದ್ದರೆ, ಗಂಧವನ್ನು ತೇಯ್ದು ಸರಿಯಾದ ಬೆರಳಿನಿಂದ ಅದನ್ನು ತಟ್ಟೆಗೆ ಎತ್ತದೆ ಇದ್ದರೆ, ಭಾವನವರು ಅಥವಾ ಅಕ್ಕನವರು ಎಚ್ಚರಿಕೆ ಕೊಡುವದಕ್ಕಾಗಿ ಆಡುತ್ತಿದ್ದ ಬಿಡಿಮಾತುಗಳು ನನಗೆ ಗದರಿಕೆ ಮಾತುಗಳಂತೆ ಆಗ್ಗೆ ಅನಿಸುತ್ತಿತ್ತು. ಇದೂ ಅಲ್ಲದೆ ಆಗಾಗ್ಗೆ ಮನೆಯಲ್ಲಿ ತಂಗಳನ್ನವನ್ನು ತಿನ್ನುವ ಪ್ರಸಂಗವೂ ಬರುತ್ತಿತ್ತು; ಅದರ ಅಭ್ಯಾಸವಿಲ್ಲದ ನನಗೆ ಅದರದೂ ಸ್ವಲ್ಪ ತೊಂದರೆಯಾಗುತ್ತಿತ್ತು. ಈಚೆಗೆ ನಮ್ಮ ಭಾವನವರ ಸೋದರಳಿಯನೊಬ್ಬನು (?) ಓದುವದಕ್ಕೆಂದು ಬಂದಿದ್ದನು. ಅವನು ವಯಸ್ಸಿನಲ್ಲಿ ದೊಡ್ಡವನಾದ್ದರಿಂದ ತಂಗಳನ್ನವನ್ನು ತಿನ್ನುತ್ತಿರಲಿಲ್ಲ; ನನ್ನ ಪಾಲಿಗೆ ಅನ್ನವೇ ಅಲ್ಲದೆ ಬೈಗುಳ ಹೆಚ್ಚಾಗಿ ಬರುತ್ತಿತ್ತು ; ಭಾವನವರು ಕಾಫಿಕುಡಿಯುವ ಪದ್ಧತಿಯವರು ; ಅವರು ಮೂಡಗೆರೆಯಲ್ಲಿ ಹೆಡ್‌ಗುಮಾಸ್ತೆಯಾಗಿದ್ದಾಗ ಒಂದೆರಡು ದಿನ ಅವರ ಮನೆಯಲ್ಲಿ ಕಾಫಿಕುಡಿದ ನೆನಪಿದೆ ; ಆದರೆ ಅವರು ನಮ್ಮ ಭಾವನವರೆಂಬ ಭಾವನೆ ಅಲ್ಲಿ ನನಗೆ ಇರಲಿಲ್ಲ. ಚಿಕ್ಕಮಗಳೂರಿನಲ್ಲಿ ನನಗೆ ಕೊಡುತ್ತಿದ್ದ ಕಾಫಿ ಬಹುಸ್ವಲ್ಪವಾಗಿ ಕಾಣಿಸುತ್ತಿತ್ತು. ನನಗೆ ಸಿಹಿಯನ್ನು ಕಂಡರೆ

ಮೊದಲಿನಿಂದಲೂ ಅಕ್ಕರೆ, ಯಳ್ಳಂಬಳಸೆಯಲ್ಲಿ ಒಂದು ಸಲ ನಮ್ಮ ತಂದೆಯವರು ಆಲೆಮನೆಗೆ ಕರೆದುಕೊಂಡುಹೋಗಿ, ಕಬ್ಬಿನಹಾಲನ್ನು ಕುಡಿದು ಕಬ್ಬನ್ನು ತಿಂದಿದ್ದ ನನಗೆ ಸ್ವಲ್ಪ ಬೆಲ್ಲವನ್ನು ಕೊಟ್ಟಿದ್ದರು. ಬೆಲ್ಲವನ್ನು ಉಂಡೆಮಾಡುತ್ತಿದ್ದ ಕೊಪ್ಪರಿಗೆಯ ಬಳಿಯಲ್ಲಿ ಕುಳಿತು ನಾನು ಬೆಲ್ಲವನ್ನು ತಿನ್ನುತ್ತಲೇ ಇದ್ದದ್ದು ಇನ್ನೂ ಮರೆತಿಲ್ಲ; ಇಂಥ ನನಗೆ ಭಾವನವರು ಕೊಡುತ್ತಿದ್ದ ಕಾಫಿಯ ತೀರ್ಥ ಹೇಗೆ ತಾನೇ ಸಾಕಾದೀತು ?

ಇದೆಲ್ಲ ಇರಲಿ, ಭಾವನವರು ನನಗೆ ಒಂದು ಸಂಸ್ಕೃತಶಬ್ದದ ಪುಸ್ತಕವನ್ನು ಕೊಟ್ಟು ದಿನಕ್ಕೊಂದು ಶಬ್ದವನ್ನು ಗಟ್ಟಿಮಾಡುವಂತೆ ಕಟ್ಟುಮಾಡಿದ್ದರು. ಅದು ಸಂಸ್ಕೃತಭಾಷೆಯ 'ಶಬ್ದರೂಪಾವಳಿ' ಎಂದು ಕೂಡ ಅವರು ನನಗೆ ಹೇಳಿರಲಿಲ್ಲವಾದ್ದರಿಂದ 'ರಾಮಃ ರಾಮೌ ರಾಮಾಃ' ಎಂದು ಮುಂತಾಗಿ ಸುಮ್ಮನೆ ಏತಕ್ಕೆ ಕಂಠಪಾಠಮಾಡಬೇಕೆಂಬುದು ತಿಳಿಯದೆ ಅದನ್ನು ಅಲಕ್ಷ್ಯಮಾಡಿದ್ದೆನು. ಪುಸ್ತಕದಲ್ಲಿ ರಾಮೌ-ಇಬ್ಬರು ರಾಮರುಗಳು, ರಾಮಾಃ ಬಹುರಾಮರುಗಳು ಎಂದು ಬರೆದಿದ್ದ ಅರ್ಥವೂ ನನಗೆ ಒಂದು ಒಗಟಾಗಿ ತೋರುತ್ತಿತ್ತು. ಇದೇನಿರಬಹುದು ? ರಾಮರು ಇಬ್ಬರು ಹೇಗಾದರು ? ಎಂಬ ಪ್ರಶ್ನೆ ಆಗಾಗ್ಗೆ ನನ್ನ ಮನಸ್ಸಿನಲ್ಲಿ ಎದ್ದುಕೊಳ್ಳುತ್ತಿತ್ತು. ಪಾಪ ! ನಮ್ಮ ಭಾವನವರಿಗೆ ಆ ಬಾಲಭಾವದ ಯೋಚನೆ ಹೇಗೆ ಹೊಳೆಯಬೇಕು ? ತಮ್ಮ ಅಪ್ಪಣೆಯಂತೆ ಶಬ್ದವನ್ನು ಗಟ್ಟಿಮಾಡುವದಿಲ್ಲವಲ್ಲ ! - ಎಂಬ ಸಿಟ್ಟಿನಿಂದ ಒಂದೆರಡು ಪೆಟ್ಟುಗಳನ್ನು ಹಾಕುವರು. ಇದರಿಂದಲೂ ಅವರ ವಿಷಯಕ್ಕೆ ನನಗೆ ಒಳ್ಳೆಯ ಭಾವನೆ ಬರುವದಕ್ಕೆ ಅಡ್ಡಿಯಾಯಿತು.

ನಮ್ಮ ಮನೆಗೆ ಹತ್ತಿರದಲ್ಲಿ ಗೌರಶೆಟ್ಟಿಯೆಂಬ ಒಬ್ಬ ಗಾಣಿಗನಿರುತ್ತಿದ್ದನು. ಅವನು ಅಂಗಡಿಯಲ್ಲಿ ಚಿಲ್ಲರೆ ಸಾಮಾನುಗಳನ್ನು ಮಾರುವದು, ಮನೆಯೊಳಗೆ ಗಾಣಮಾಡಿಸಿ ಹುಚ್ಚೆಳ್ಳೆಣ್ಣೆಯನ್ನು ತೆಗೆದುಮಾರುವದು - ಈ ಎರಡು ಕೆಲಸಗಳನ್ನು ಮಾಡುತ್ತಿದ್ದನು. ಶೆಟ್ಟಿಯು 'ನಗದವರನ್ನು ನಗಿಸುವ ಕಥೆ', 'ಅಳದವರನ್ನು ಅಳಿಸುವ ಕಥೆ', 'ಹುಚ್ಚುಮುಂಡೆಯರ ಕಥೆ', 'ಶುಕಸಪ್ತತಿಯ ಕಥೆ', 'ಅರೇಬಿಯನ್ ನೈಟ್ಸ್' ಮುಂತಾದ ಕಥೆಯ ಪುಸ್ತಕಗಳನ್ನು ಮಾರುತ್ತಿದ್ದನು. ಅವನೂ ಒಳ್ಳೊಳ್ಳೆಯ ಕಥೆಗಳನ್ನು ಹೇಳುವದರಲ್ಲಿ ನಿಪುಣನಾಗಿದ್ದನು. ನನ್ನ ಕಲ್ಪನಾಶಕ್ತಿಯು ಬೆಳೆಯುವದಕ್ಕೆ ಅವನು ಓದುವದಕ್ಕೆ ಕೊಡುತ್ತಿದ್ದ ಕಥೆಯ ಪುಸ್ತಕಗಳೂ, ಹೇಳುತ್ತಿದ್ದ ಅದ್ಭುತಕಥಾಮಾಲಿಕೆಯೂ ಬಹಳ ಸಹಾಯ ಮಾಡಿದವು. ಇದರ ಜೊತೆಗೆ ಅವನು ಗಾಣದ ಮೇಲೆ ಭಾರಕ್ಕೆಂದು ನನ್ನನ್ನು ಕೂರಿಸಿ ಎತ್ತು ನಿಂತರೆ ಹೊಡೆಯಬೇಕೆಂದೂ ಹೇಳಿದ್ದನು. ನಮ್ಮೂರಿನಲ್ಲಿ ಸಂತೆಯವರು ತಮ್ಮ ಬಂಡಿಯ ಎತ್ತುಗಳ ಕೊರಳಿಗೆ ಘಂಟೆಕಟ್ಟಿ ಊರಿಗೆ ಬರುವಾಗ ಗದ್ದಲದಿಂದ ಹೊಡೆದುಕೊಂಡು ಬರುತ್ತಿದ್ದ

ಸೊಗಸನ್ನು ಕಂಡದ್ದು ನನಗೆ ಇದೊಂದು ಅಪೂರ್ವ ಸಂದರ್ಭವು ಸಿಕ್ಕಂತೆ ಆಗಿತ್ತು. ಒಂದೊದು ಗಾಣದ ಕೊಟ್ಟಣ (ಒರಳು) ಮುಗಿಯುತ್ತಲೂ ತಿನ್ನುವದಕ್ಕೆ ಬಿಸಿಹಿಂಡಿಯನ್ನೂ, ಮನೆಗೆ ಹೋಗುವಾಗ ಪೆಂಟೆಖರ್ಜೂರದ ಕುಳಿಯೊಂದನ್ನೂ (?) ಕೊಟ್ಟು ಮನೆಗೆ ಕಳುಹಿಸುತ್ತಿದ್ದ ಗೌರಶೆಟ್ಟಿಯು ನನಗೆ ನಿಜವಾಗಿಯೂ ಗೌರವದ ಶೆಟ್ಟಿಯಾಗಿ ಕಾಣಿಸುತ್ತಿದ್ದನು. ಸಂತೆಯ ದಿವಸಗಳಲ್ಲಿ ಒಂದೊಂದು ಸಲ ನಾನೇ ಅವನ ಅಂಗಡಿಯ ಡಬ್ಬದಿಂದ ಚಿಮಣಿಯೆಣ್ಣೆಯನ್ನು (ಸೀಮೇಯೆಣ್ಣೆ) ಹಳ್ಳಿಯ ಜನರ ಸೀಸೆಗಳಿಗೆ ಡಬ್ಬದ ನಲ್ಲಿಯನ್ನು ತಿರುಗಿಸಿ ಹಾಕಿಕೊಡುತ್ತಿದ್ದೆನು. ಇಂಥ ಅನುಭವವಿಶೇಷಗಳನ್ನು ಪಡೆಯುತ್ತಾ ನಾನು ಗೌರಶೆಟ್ಟಿಯ ಅಂಗಡಿಯಲ್ಲಿ ಸ್ವಲ್ಪಹೊತ್ತಾಗಿ ನಿಂತರೆ ಭಾವನವರು ಬಂದು ಸಿಡುಮೋರೆಯಿಂದ ನನ್ನನ್ನು ಎಳೆದುಕೊಂಡು ಹೋಗುವದು, ಬಯ್ಯುವದು, ಹೊಡೆಯುವದು-ಇವೆಲ್ಲವೂ ಚಿಕ್ಕಮಗಳೂರಿನಲ್ಲಿ ಸಾಧಾರಣವಾಗಿ ಕಾಣಿಸುತ್ತಿದ್ದ ಮೋಡಗಳು, ಮಿಂಚುಗಳು, ಗುಡುಗುಗಳು ಇವುಗಳನ್ನು ನೆನಪಿಗೆ ತರುತ್ತಿದ್ದವು.

ಹೀಗಿರುವಲ್ಲಿ ದೈವಗತಿಯಿಂದ ಭಾವನವರ ಮೇಲುವಿಚಾರಣೆ ನನಗೆ ಬಲು ಬೇಗನೆ ತಪ್ಪಿಹೋಯಿತು. ಒಂದು ಸಲ ನಾನು ಪಾರ್ಕಿನಲ್ಲಿ ಅಲೆದಾಡುತ್ತಿದ್ದ ಮಿಕ್ಕ ಹುಡುಗರ ಅನುಕರಣೆಯಿಂದ ಬಿಳಿಗುಲಾಬಿಯ ಎಸಳುಗಳನ್ನು ಸ್ವಲ್ಪ ಹೆಚ್ಚಾಗಿಯೇ ತಿಂದೆನು. ಮಾರನೆಯ ದಿನ ನನಗೆ ಜೋರಾಗಿ ಭೇದಿಯಾಯಿತು. ಆ ಸುಮಾರಿಗೆ ಸರಿಯಾಗಿ ಚಿಕ್ಕಮಗಳೂರಿಗೆ ಏನೋ ಕಾರಣದಿಂದ ಬಂದಿದ್ದ ತಾಯಿಯವರು ನನ್ನ ಅಸ್ವಸ್ಥತೆಯನ್ನು ಕಂಡು 'ಹುಡುಗ ಬಹಳ ಬಡವಾಗಿದ್ದಾನೆ; ಅವನನ್ನು ಇಲ್ಲಿ ಯಾರೂ ಸರಿಯಾಗಿ ನೋಡುವವರಿಲ್ಲ' ಎಂದು ಕರೆದುಕೊಂಡು ಹೋಗಿಬಿಟ್ಟರು. ಚಿಕ್ಕಮಗಳೂರಿನ ದೊಡ್ಡಪೇಟೆಯಸಾಲು, ಬಸವನಹಳ್ಳಿಯ ಹುಡುಗರೊಡನೆ ಮೆರೆದಾಡುವ ಸಂಭ್ರಮ, ಗೌರಶೆಟ್ಟಿಯ ಅಂಗಡಿಯ ಸವಿನೆನಪು, ಮಲ್ಲಪ್ಪಮೇಷ್ಟರ ಮತ್ತು ಸ್ಕೂಲು ಹುಡುಗರ ಸಹವಾಸ - ಇವೆಲ್ಲ ತಟ್ಟನೆ ಆ ದಿನ ಮಾಯವಾಗಿ ಬಿಟ್ಟವು !

# 7. ವಿದ್ಯಾಭ್ಯಾಸ - ತರೀಕೆರೆ (1893 - 95)

## ತರೀಕೆರೆಯಲ್ಲಿ ಅಣ್ಣನವರು:

ತರೀಕೆರೆಯಲ್ಲಿ ಮತ್ತೆ ನಮ್ಮ ದೊಡ್ಡಣ್ಣ ಶ್ರೀಕಂಠಯ್ಯನವರ ಮತ್ತು ಅತ್ತಿಗೆ ಗೌರಮ್ಮನವರ ದರ್ಶನವಾಯಿತು. ಅಷ್ಟರೊಳಗೆ ಅಣ್ಣನವರಿಗೆ ಮೂಡಗೆರೆಯಿಂದ ಅಲ್ಲಿಗೆ ವರ್ಗವಾಗಿತ್ತು. ಆಗ ನಮ್ಮ ಅಣ್ಣನವರಿಗೆ ಮೊದಲು ಡೆಪ್ಯುಟಿಮುನಷಿಯ ಕೆಲಸವಾಗಿದ್ದು ಆಮೇಲೆ ರೆವಿನ್ಯೂ ಗುಮಾಸ್ತೆಯ ಕೆಲಸವಾಯಿತೆಂದು ಕಾಣುತ್ತದೆ. ತಾಲ್ಲೂಕು ಹೆಡ್‌ಗುಮಾಸ್ತರು ಸುಬ್ಬಣ್ಣನವರು. ಅವರು ನಮ್ಮ ಗುಂಡಭಾವನ ಅಣ್ಣಂದಿರೆಂದು ಈಚೆಗೆ ತಿಳಿಯಿತು. ಅವರ ಮಗ ಲಚ್ಚಿ, (ಅವರು ಲಕ್ಷ್ಮೀನಾರಾಯಣನೆಂಬ ಹೆಸರಿನಿಂದ ಪೋಲೀಸ್ ಇನಸ್ಪೆಕ್ಟರ ಕೆಲಸವನ್ನು ಮಾಡಿ ರಿಟೈರಾಗಿ ಈಗ ಮೈಸೂರಿನಲ್ಲಿರುತ್ತಾರೆ) ನನ್ನ ಅಚ್ಚುಮೆಚ್ಚಿನ ಗೆಳೆಯ. ನಾವಿಬ್ಬರೂ ಕಚೇರಿಯಲ್ಲಿ, ಸ್ಕೂಲಿನಲ್ಲಿ, ಊರಹೊರಗೆ, ಆಟದ ಬಯಲಿನಲ್ಲಿ - ಎಲ್ಲೆಲ್ಲಿಯೂ ಬಲುಮಟ್ಟಿಗೆ ಜೊತೆಯಲ್ಲಿರುತ್ತಿದ್ದೆವು. ತರೀಕೆರೆಯಲ್ಲಿ ಇನ್ನು ಕೆಲವರು ನನ್ನ ಸ್ನೇಹಿತರಾದರು.

## ಸ್ಕೂಲು:

ನಾನು ಸೇರಿದ ಸ್ಕೂಲಿನಲ್ಲಿ ಎರಡು ಭಾಗಗಳಿದ್ದವು. ಒಂದು ಕನ್ನಡ ಸ್ಕೂಲು, ಇನ್ನೊಂದು ಇಂಗ್ಲೀಷು ಸ್ಕೂಲು. ಕನ್ನಡ ಸ್ಕೂಲಿನಲ್ಲಿ ರಾಮಸ್ವಾಮಿ ಅಯ್ಯಂಗಾರ್ಯರು ಹೆಡ್‌ಮಾಸ್ತರು, ಇಂಗ್ಲೀಷು ಸ್ಕೂಲಿನಲ್ಲಿ ವೆಂಕಟರಾಮಯ್ಯ-ನವರು ಹೆಡ್‌ಮಾಸ್ತರು. ನಾನು ಇಂಗ್ಲೀಷು ಮೂರನೆಯ ಕ್ಲಾಸಿಗೆ ಸೇರಿದೆನು. ಇಂಗ್ಲೀಷಿಗೆ ಮೂರು ಜನ ಮೇಷ್ಟರಿದ್ದರು, ಕನ್ನಡ ಪಾಠಗಳನ್ನು ಕನ್ನಡ ಸ್ಕೂಲಿನ ಟೀಚರೇ (ಉಪಾಧ್ಯಾಯರೇ) ಹೇಳಿಕೊಡುತ್ತಿದ್ದರು. ಈ ಎರಡು ಸ್ಕೂಲುಗಳನ್ನು ಸೇರಿಸಿದ ಇಡಿಯ ಕಟ್ಟಡವು ನನ್ನ ಚಿಕ್ಕಮಗಳೂರಿನ ಸ್ಕೂಲಿನ ಮೂರು ತರಗತಿಗಳಿಗಿಂತ ಹೆಚ್ಚಾಗಿರಲಾರದೆಂದು ನನಗೆ ತೋರುತ್ತಿತ್ತು. ಇದಲ್ಲದೆ ಇಂಗ್ಲೀಷು ಸ್ಕೂಲೆಂಬುದು ಕಟ್ಟಡದ ಎಡಗಡೆ ರೆಕ್ಕೆಯಾಗಿದ್ದ ಒಂದು ದೊಡ್ಡ ಕೊಠಡಿಯೇ ಹೊರತು ಮತ್ತೇನೂ ಅಲ್ಲ. ಅದರಲ್ಲಿ ಬಿದಿರುಚಾಪೆಯು ಹಾಸಿತ್ತೆಂಬ ನೆನಪಿದೆ; ಮೊದಲು ಅದು ತಾಲ್ಲೂಕು ಕಚೇರಿಯಾಗಿದ್ದು ಸ್ಕೂಲಿಗೆ ಬಿಟ್ಟುಕೊಟ್ಟಿದ್ದರೋ ಏನೋ. ಇದ್ದ ಆ ಒಂದು ಕೊಠಡಿಯನ್ನೇ ಬೆಂಚುಗಳು, ಡೆಸ್ಕುಗಳು, ಕುರ್ಚಿ, ಮೇಜು, ಗೋಡೆಗೆ ತಗಲು ಹಾಕಿದ್ದ ಬೋರ್ಡುಗಳು - ಇವುಗಳ ಜೋಡಣೆಯಿಂದ ಮೂರು ಭಾಗಗಳಾಗಿ ವಿಂಗಡಿಸಿದ್ದರು. ಹೆಡ್‌ಮಾಸ್ತರು ನಾಲ್ಕು ಐದನೆಯ ಕ್ಲಾಸುಗಳ

ಹುಡುಗರಿಗೆ ಪಾಠವನ್ನು ಹೇಳಿಕೊಡುತ್ತಿದ್ದರು. ಒಂದನೆಯ ತರಗತಿಗೆ ಸುಬ್ಬರಾಯರೆಂಬವರು ಇಂಗ್ಲೀಷು ಪಾಠ,ಎರಡು ಮೂರನೆಯ ತರಗತಿಗಳಿಗೆ ವೆಂಕಟಾಚಾರ್ರು ಎಂಬವರ ಪಾಠ. ಲೆಕ್ಕವೇ ಮುಂತಾದವುಗಳಿಗೆ ಅವರಿಬ್ಬರೂ ತರಗತಿಗಳನ್ನು ಬದಲಾಯಿಸಿ ಕೊಳ್ಳುತ್ತಿದ್ದರು.

## ಸ್ಕೂಲಿನ ಮೇಷ್ಟರುಗಳು :

ವೆಂಕಟಾಚಾರರು ಒಳ್ಳೆಯಬಿಗಿ, ಅವರ ಬೆತ್ತದ ಏಟು ಯಾವಾಗ ಯಾರಿಗೆ ಬೀಳುವದೊ, ಎಂಬ ದಿಗಿಲು ನಮಗೆಲ್ಲ ಇತ್ತು. ತರಗತಿಯನ್ನು ಅವರು ಕಟ್ಟಿನಲ್ಲಿಟ್ಟುಕೊಂಡಿದ್ದರು. ಅವರು 'ಮೆಟ್ರಿಕ್ಯುಲೇಷನ್' ಪರೀಕ್ಷೆಗೆ ಹಲವುಬಾರಿ ಕೂತು ಪರೀಕ್ಷೆಯಲ್ಲಿ ಫೇಲಾಗಿದ್ದರೆಂದು ಹುಡುಗರು ಹೇಳಿಕೊಳ್ಳುತ್ತಿದ್ದರು. ನನಗೆ ಪ್ಯಾಸ್ ಫೇಲ್‌ಗಳ ವಿವೇಕವಿಲ್ಲದ್ದರಿಂದ ಅವರು ಹೆಚ್ಚು ಓದಿದವರೆಂದೇ ಭಾವಿಸಿಕೊಂಡಿದ್ದೆನು.ಅವರು 'ಬರ್ನಾರ್ಡ್‌ಸ್ಮಿತ್ಸ್ ಅರಿತ್‌ಮೆಟಿಕ್' (**Bernard Smith's Arithmetic**) ಎಂಬ ಇಂಗ್ಲೀಷು ಲೆಕ್ಕದ ಪುಸ್ತಕದಲ್ಲಿ ನಮಗೆ ಭಿನ್ನರಾಶಿಗಳನ್ನು ಸುಲಭರೂಪಕ್ಕೆ ತರುವ ಕ್ರಮವನ್ನು ಹೇಳಿಕೊಡುತ್ತಿದ್ದರು. ಆಗಿನ ಕಾಲದಲ್ಲಿ ಲೆಕ್ಕವನ್ನು ಇಂಗ್ಲೀಷಿನಲ್ಲಿಯೇ ಮಾಡಬೇಕಾಗಿತ್ತು. ನನಗೆ ಕೆಲವು ತೊಡಕಿನ ಪ್ರಶ್ನೆ (**Problems**) ಮಾಡುವದಕ್ಕೆ ಬರುತ್ತಿರಲಿಲ್ಲ ; ಇಂಗ್ಲೀಷು ವಾಕ್ಯಗಳ ಅರ್ಥವಾಗದ್ದೇ ಅದಕ್ಕೆ ಕಾರಣ. ಆದರೆ ಸುಲಭರೂಪಕ್ಕೆ (**simplification**) ತರುವದೇನೂ ಕಷ್ಟವಾಗುತ್ತಿರಲಿಲ್ಲ, ಕುರುಡನು ನೆರವಿಯನ್ನು ಹೊಸೆದರೆ ಹೇಗೋ ಆ ಬಗೆಯ ಲೆಕ್ಕಗಳನ್ನು ಮಾಡುತ್ತಿದ್ದೆನು. ಹಿಂದೆ ನಾನು ಒಂದನೆಯ ತರಗತಿಯಲ್ಲಿದ್ದಾಗ ಭಿನ್ನರಾಶಿಗಳ ಗುಣಾಕಾರ, ಭಾಗಾಹಾರಗಳಲ್ಲಿ ಮೇಲ್ತರಗತಿಯ ಹುಡುಗರು ಸಮರೂಪವರ್ತ (ಕಾಮನ್ ಫ್ಯಾಕ್ಟರ್, **Common factor**)ಗಳಿಂದ ಭಾಗಿಸಿ ಅಂಕೆಗಳನ್ನು ಹೊಡೆದುಹಾಕುತ್ತಿರುವದನ್ನು ಕಂಡು 'ಇವರಿಗೆ ಲೆಕ್ಕ ಮಾಡುವದೇ ಬರುವಹಾಗಿಲ್ಲ ; ಅಂಕಿಗಳನ್ನು ಎಷ್ಟೊಂದು ಸಲ ಹೊಡೆಯುತ್ತಾರೆ !' ಎಂದುಕೊಳ್ಳುತ್ತಿದ್ದೆನು. ಆದರೆ ಈಗ ನನಗೆ ಭಿನ್ನರಾಶಿಗಳೆಂದರೆ ನೀರುಕುಡಿದಂತೆ. ಲೆಕ್ಕದ ಉಪಪತ್ತಿಯೇನೂ ತಿಳಿಯದೆ ಇದ್ದರೂ ಎಂಥ ಸಂಕರ ಭಿನ್ನರಾಶಿ ಯನ್ನಾದರೂ (**Complex fraction**) ಸುಲಭರೂಪಕ್ಕೆ ಇಳಿಸಿಬಿಡುತ್ತಿದ್ದೆನು. ನನ್ನ ಸ್ನೇಹಿತ ಲಚ್ಚಿ ಲೆಕ್ಕವನ್ನು ಅಷ್ಟು ಬೇಗನೆ ಮಾಡದೆ ಇದ್ದರೂ ಮೇಷ್ಟರನ್ನು ಕುಚೇಷ್ಟೆಮಾಡುವದರಲ್ಲಿ ನಿಸ್ಸೀಮನಾಗಿದ್ದನು. ಎಲ್ಲರೂ ಲೆಕ್ಕವನ್ನು ಮಾಡಿ ಸ್ಲೇಟನ್ನು ಕೆಳಗೆ ಇಟ್ಟ ಬಳಿಕ ವೆಂಕಟಾಚಾರ್ಯರು ಬೋರ್ಡಿನ ಮೇಲೆ ಲೆಕ್ಕವನ್ನು ಮಾಡಿ ಉತ್ತರ $1\frac{3}{4}$ ಎಂದು ಗುರುತು ಮಾಡುವ ಹೊತ್ತಿಗೆ "ಸರ್ ಉತ್ತರ 2 ಎಂತ

ಬುಕ್ಕಿನಲ್ಲಿದೆ'' ಎನ್ನುತ್ತಿದ್ದನು. ಬರ್ನಾರ್ಡ್‌ಸ್ಮಿತ್ ಪುಸ್ತಕದಲ್ಲಿ ಉತ್ತರಗಳು ತಪ್ಪಾಗಿ ಅಚ್ಚಾಗಿರುವದಿಲ್ಲ ಎಂಬ ಪ್ರತೀತಿ ನಮ್ಮೆಲ್ಲರಲ್ಲಿ ಇದ್ದದ್ದರಿಂದ ಮೇಷ್ಟರು ತಾವು ಮಾಡಿದ್ದನ್ನು ಒಂದು ಸಲ ಪರೀಕ್ಷೆಮಾಡಿ ''ಇಗೋ ಮೇಲುಗಡೆ ¼ ಬಿಟ್ಟಿದ್ದೆವು, ಆದ್ದರಿಂದ ತಪ್ಪು ಬಂತು'' ಎಂದು ಉತ್ತರಕ್ಕೆ ¼ ಹೆಚ್ಚಾಗಿ ಸೇರಿಸಿ 2 ಮಾಡಿಬಿಡುತ್ತಿದ್ದರು. ಆದರೆ ಒಂದೊಂದು ಸಲ ಲಚ್ಚಿ ''ಸರ್, ಸರ್ ನಾನು ಆನ್ಸರ್ (ಉತ್ತರ) ನೋಡಿದ್ದು ತಪ್ಪು ; ನಿಜವಾಗಿ $1\frac{1}{2}$ ಉತ್ತರ'' ಎನ್ನುವದೂ ಉಂಟು. ಆಗ ಮೇಷ್ಟರು ಮತ್ತೂ ಒಂದು ಸಲ ಲೆಕ್ಕವನ್ನು ಪರೀಕ್ಷೆಮಾಡಿ ''ಹೇ ಹೇ ¼ ಹೆಚ್ಚಾಗಿ ಸೇರಿಸಿ ಬಿಟ್ಟಿದ್ದೆವು'' ಎಂದು $1\frac{3}{4}-\frac{1}{4}=1\frac{1}{2}$ ಎಂದು ಸರಿಪಡಿಸಿ ಬಿಡುತ್ತಿದ್ದರು. ಇಂಥ ಸಂದರ್ಭಗಳಲ್ಲಿ ಅಷ್ಟು ಹೊತ್ತಿಗೆ ಸರಿಯಾಗಿ ಪಾಠದ ಬೆಲ್ (ಘಂಟೆ) ಆಗಿಬಿಡುತ್ತಿತ್ತು ; ಆದ್ದರಿಂದ ಲೆಕ್ಕವನ್ನು ತಪ್ಪುಮಾಡಿದ್ದವರಿಗೆ ಏಟು ತಪ್ಪಿಸಿದ ಕೀರ್ತಿಯೂ ಲಚ್ಚಿಗೆ ಬರುತ್ತಿತ್ತು.

ಹೆಡ್‌ಮಾಸ್ಟರು ವೆಂಕಟರಾಮಯ್ಯನವರು ಸಾತಾನಿಜಾತಿಯವರೆಂದು ತೋರುತ್ತದೆ. ಅವರು ಮನೆಯಲ್ಲಿ ಮೇಕೆಗಳನ್ನು ಸಾಕಿದ್ದರು ; ಆದ್ದರಿಂದ ಅವರಿಗೆ 'ಮೇಕೆ ಮೇಷ್ಟರು' ಎಂಬ ಅಡ್ಡ ಹೆಸರನ್ನು ಹುಡುಗರು ಇಟ್ಟುಕೊಂಡಿದ್ದರು. ತಲೆಗೆ ಒಂದು ಮಧುರೆಯ ಕೆಂಪು ರುಮಾಲು, ಮೈಗೆ ಒಂದು ಫ್ಲಾನಲ್‌ಅಂಗಿ, ಉಟ್ಟುಕೊಳ್ಳುವದಕ್ಕೆ ಒಂದು ಶಾಯಿ ಹಂಜಿಯ ಪಂಚೆ, ಜೇಬಿನಲ್ಲಿ ಒಂದು ಗಡಿಯಾರ - ಇಷ್ಟು ಅವರ ಪೋಷಾಕು. ಅವರು ಇಂಗ್ಲೀಷು ಪಾಠ ಹೇಳುವದರಲ್ಲಿ ಬಲುಗಟ್ಟಿಗರು. ಹುಡುಗರಿಂದ ಪಾಠವನ್ನು ಓದಿಸಿ, ಉಚ್ಚಾರಣೆಯನ್ನು ತಿದ್ದಿ, ವಾಕ್ಯಗಳಿಗೆ ಅಚ್ಚಗನ್ನಡದಿಂದ ಆಡುವಮಾತಿನಲ್ಲಿ ಅರ್ಥವನ್ನು ಹೇಳಿಕೊಡುತ್ತಿದ್ದರು. ಹುಡುಗರು ಓದುತ್ತಿರುವಾಗ ಕೈಗಡಿಯಾರವನ್ನು ಯಾವದೋ ಒಂದು ಚರ್ಮದಿಂದ ಉಜ್ಜಿ ಮೆರಗು ಮಾಡಿಕೊಳ್ಳುತ್ತಾ, ತಪ್ಪು ತಿದ್ದುತ್ತಿದ್ದರು. ಆದರಿಂದ ನನಗೆ ಒಮ್ಮೆ ಪಾಠದಕಡೆ, ಒಮ್ಮೆ ಮೇಷ್ಟರ ಕೈಯಕಡೆ - ಹೀಗೆ ಪರ್ಯಾಯದಿಂದ ಚಿತ್ತದ ಗಮನವಾಗುತ್ತಿತ್ತು. ಕಥೆಗಳು ಬಂದಾಗ ಅದರ ಅಭಿನಯವನ್ನು ಹುಡುಗರಿಂದ ಮಾಡಿಸುತ್ತಿದ್ದರು. **(Wise goats, Foolish goats)** (ಜಾಣ ಮೇಕೆಗಳು, ಅವಿವೇಕಿ ಮೇಕೆಗಳು) ಎಂಬ ಎರಡನೆಯ ರೀಡರಿನ ಪಾಠದಲ್ಲಿ ವಿವೇಕಿಗಳಾದ ಮೇಕೆಗಳು ನದಿಯನ್ನು ದಾಟಿದ ಬಗೆ, ಅವಿವೇಕಿಗಳಾದ ಮೇಕೆಗಳು ಏಕಕಾಲಕ್ಕೆ ದಾಟಬೇಕೆಂದು ಜಗಳವಾಡಿದ ರೀತಿ - ಇವನ್ನು ಇಬ್ಬರು ಹುಡುಗರಿಂದ ಆಡಿಸಿ ತೋರಿಸಿದ್ದೂ ಇನ್ನೂ ನೆನಪಿದೆ. ಅವರು ಪಾಠವನ್ನು ಮಾಡುವಾಗ ಹುಡುಗರಿಗೆಲ್ಲ ಬಹಳ ಆನಂದ ; ಅಭಿನಯವನ್ನು ತೋರಿಸುವಾಗ ಬೇರೆಯ

ತರಗತಿಯ ಹುಡುಗರು ಕೂಡ ಅವರ ಕಡೆಗೇ ನೋಡುವ ಹಾಗೆ ಆಗುತ್ತಿತ್ತು. ಆದರೆ ಮಾರನೆಯ ದಿನ ಹುಡುಗರು ಪಾಠವನ್ನು ಒಪ್ಪಿಸುವಾಗ ಸ್ವಲ್ಪ ತಪ್ಪಿದರೂ ಒಂದು ಸಣ್ಣ ಬಿದಿರುಕಡ್ಡಿಯಿಂದ ಛಳೀರ್ ! ಎಂದು ಕೈಯ ಮೇಲೆ ಹೊಡೆಯುತ್ತಿದ್ದರು. ಸುಖವಾದ ಮೇಲೆ ದುಃಖವೂ ದುಃಖವಾದ ಮೇಲೆ ಸುಖವೂ ತಪ್ಪದೆ ಬರುವವೆಂಬ ನೀತಿವಾಕ್ಯದ ಅರ್ಥದ ಅನುಭವವು ನಮಗೆ ಅವರ ತರಗತಿಯಲ್ಲಿ ಸಹಜವಾಗಿ ತಿಳಿದುಬರುತ್ತಿತ್ತು. ನನಗೆ ಏಟುಗಳು ಬಿದ್ದಾಗ ನಾನು ಹಾರಾಡುತ್ತಿದ್ದದ್ದನ್ನು ಕಂಡು ಲಚ್ಚಿ ತಗ್ಗಿಸಿದ ದನಿಯಿಂದ **"Hop ! Hop ! Hop !"** ಕುಣಿಯೊ, ಕುಣಿಯೊ, ಕುಣಿಯೊ ! ನೆಗೆಯೊ, ನೆಗೆಯೊ, ನೆಗೆಯೊ ! ಹಾರೊ, ಹಾರೊ, ಹಾರೊ ! ಎಂದು ಚೇಷ್ಟೆಮಾಡಿದ್ದು ಮರೆಯುವ ಹಾಗೇ ಇಲ್ಲ. ಎರಡನೆಯ ರೀಡರಿನಲ್ಲಿ **(Echo)** ಪ್ರತಿಧ್ವನಿ ಎಂಬ ಪಾಠದಲ್ಲಿ ಮೇಷ್ಟರು ಹೇಳಿಕೊಟ್ಟಿದ್ದ ಕನ್ನಡ ತರ್ಜುಮೆಯ ಅನುಕರಣವನ್ನು ಅವನು ಆ ಸಂದರ್ಭಕ್ಕೆ ಉಪಯೋಗಿಸಿಕೊಂಡಿದ್ದನು. ಹೀಗೆ ವೆಂಕಟರಾಮಯ್ಯನವರ ಇಂಗ್ಲೀಷು ತರಗತಿಯಲ್ಲಿ ನಮಗೆ ಶೋಕರಸಹಾಸ್ಯಗಳ ಮಿಲನವು ಆಗಾಗ್ಗೆ ಅನುಭವಕ್ಕೆ ಬರುತ್ತಿತ್ತು.

ರಾಮಸ್ವಾಮಿಅಯ್ಯಂಗಾರ್ಯರು ಒಳ್ಳೆಯ ಶಿಸ್ತಿನ ಉಪಾಧ್ಯಾಯರು. ಅವರು ಕನ್ನಡ ಸ್ಕೂಲನ್ನು ಕ್ರಮಕ್ಕೆ ತಂದು ಹುಡುಗರಿಗೂ ಉಪಾಧ್ಯಾಯರುಗಳಿಗೂ ಪರಸ್ಪರವಾಗಿ ಪ್ರೇಮಾದರಗಳು ಉಂಟಾಗುವಂತೆ ಮಾಡುತ್ತಿದ್ದರು. ಹಳೆಗನ್ನಡ ಪದ್ಯಗಳನ್ನು ಅರ್ಥಬಿಡಿಸಿ ಹೇಳಿಕೊಡುವದು, ವ್ಯಾಕರಣದಲ್ಲಿ ಸವಿಹತ್ತಿಸುವದು, ವಚನವನ್ನು ಓದುವ ರೀತಿಯನ್ನು ಹೇಳಿಕೊಟ್ಟು ತಾತ್ಪರ್ಯವನ್ನು ಚರ್ಚಿಸುವದು ಮುಂತಾದ ಪಾಠಕ್ರಮವನ್ನು ಅವರು ಆಚರಣೆಗೆ ತಂದರು. ಸ್ಕೂಲಿಗೇ ಅವರಿಂದ ಒಂದು ಬಗೆಯ ಕಳೆ ಬಂದಿತ್ತು. ಅವರನ್ನು ನೋಡಿದರೆ ನನಗೆ ಓದಿನಲ್ಲಿ ಒಂದು ತೆರನಾದ ಹೊಸಹುರುಪು ಉಂಟಾಗುತ್ತಿತ್ತು. ಒಂದು ಶುಭ್ರವಾದ ಪಂಚೆಯನ್ನೇ ಅವರು ರುಮಾಲು ಮಾಡಿಕೊಂಡು ಸುತ್ತಿಕೊಳ್ಳುತ್ತಿದ್ದರು. ಒಂದು ಸಣ್ಣ ಅಂಗಿ, ಅದರಮೇಲೆ ಪಂಚೆಯ ಕೊರಳುಪಟ್ಟಿ - ಆಡಂಬರವಿಲ್ಲದ ಆ ಉಡುಪಿನಲ್ಲಿಯೇ ಅವರು ದೊಡ್ಡಮನುಷ್ಯರಾಗಿ ಕಾಣಿಸುತ್ತಿದ್ದರು. ವಿಶಾಲವಾದ ಅವರ ಹಣೆಯಲ್ಲಿದ್ದ ನಾಮವು ಕೂಡ ಅವರ ವಿದ್ವತ್ತನ್ನು ಹೊರಸೂಸುವಂತೆ ತೋರುತ್ತಿತ್ತು.

ಇನ್ನೊಬ್ಬ ಮೇಷ್ಟರೆಂದರೆ ಸಂಸ್ಕೃತವನ್ನು ಹೇಳಿಕೊಡುತ್ತಿದ್ದ ದೊಡ್ಡ ಪಂಡಿತರು. ಅವರ ಹೆಸರು ಅಪ್ಪಣ್ಣಪಂಡಿತರೆಂದಿರಬಹುದು. ಅವರು ವೈದ್ಯಮಾಡುತ್ತಿದ್ದದ್ದರಿಂದ ಪಂಡಿತರು ಎಂಬ ಹೆಸರೇ ಅವರಿಗೆ ಹೆಚ್ಚಾಗಿ ರೂಢಿಗೆ ಬಂದಿತ್ತು. ನಮ್ಮ ದೊಡ್ಡಣ್ಣನವರಿಗೂ ನನಗೆ ಸಂಸ್ಕೃತವು ಬರಲೆಂಬ ಆಶೆಯಿತ್ತು. ''ಹುಡುಗ ಜಾಣ,

ಆದರೆ ಯಾವಾಗಲೂ ಆಡುತ್ತಾನೆ!'' ಎಂದು ಅವರು ಸಾಯಂಕಾಲವಾಗುತ್ತಲೂ ಊಟವನ್ನು ಮಾಡಿಸಿ ಪಂಡಿತರ ಮನೆಗೆ ಸಂಸ್ಕೃತವನ್ನು ಓದುವದಕ್ಕೆಂದು ಕಳುಹಿಸಿಕೊಡುತ್ತಿದ್ದರು. ಪಂಡಿತರ ಮನೆಯಲ್ಲಿ ಕೆಲವರು ರಘುವಂಶದ ನಾಲ್ಕನೆಯ ಸರ್ಗವನ್ನೋ, ಐದನೆಯ ಸರ್ಗವನ್ನೋ ಓದುತ್ತಿದ್ದರು. ನನಗೆ ಇನ್ನೂ ಏನೂ ಬರದೆ ಇದ್ದದ್ದರಿಂದ ಒಂದೆರಡು ಶಬ್ದಗಳನ್ನು ಹೇಳಿ ಸುಮ್ಮನೆ ಕೂರಿಸುತ್ತಿದ್ದರು. ಹುಡುಗರಿಗೆ ಶ್ಲೋಕ, ಪದಚ್ಛೇದ, ವಿಗ್ರಹ ಎಂದು ಹೇಳಿಕೊಡುತ್ತಿದ್ದದ್ದರಲ್ಲಿ ನನಗೆ ಯಾವ ರುಚಿಯೂ ಕಾಣಿಸುತ್ತಿರಲಿಲ್ಲವಾಗಿ ಬೇಗನೆ ನಿದ್ರೆ ಹತ್ತಿಬಿಡುತ್ತಿತ್ತು. ''ಏಳೋ ತಿಪ್ಪ, ಪಾಠವಾಯಿತು ಮನೆಗೆ ಹೋಗು!'' ಎಂದು ಪಂಡಿತರು ಎಬ್ಬಿಸಿ ಕಳುಹಿಸುತ್ತಿದ್ದರು. ಮುಂದಿನ ವರ್ಷದ ಹೊತ್ತಿಗೆ ಸಂಸ್ಕೃತದ ಅಕ್ಷರಗಳೂ ಶಬ್ದಗಳೂ ಸ್ವಲ್ಪಮಟ್ಟಿಗೆ ಬಂದಿದ್ದವು. ಆದ್ದರಿಂದ ನನ್ನನ್ನು ಸ್ಕೂಲಿನಲ್ಲಿ ಸಂಸ್ಕೃತದ ತರಗತಿಗೆ ಸೇರಿಸಿಕೊಂಡರು. ಅಲ್ಲಿ ಹಿತೋಪದೇಶ, ಭಂಡಾರಕರ ಮೊದಲನೆಯ ಪುಸ್ತಕ - ಇವುಗಳನ್ನು ಪಾಠಕ್ಕೆ ಇಟ್ಟಿದ್ದರು. ''ಸಿದ್ಧಿಃ ಸಾಧ್ಯೇ ಸತಾಮಸ್ತು ಪ್ರಸಾದಾತ್ತಸ್ಯ ಧೂರ್ಜಟೇಃ, ಜಾಹ್ನವೀ ಫೇನಲೇಖೇವ ಯನ್ಮೂರ್ಧ್ನಿ ಶಶಿನಃ ಕಲಾ'' ಎಂಬ ಶ್ಲೋಕವನ್ನು ಬಾಯಿಗೆ ಗಟ್ಟಿಮಾಡಿಕೊಂಡು ಮರೆತೆನು. ಆದರ ಅರ್ಥವು ನನಗೆ ಸರಿಯಾಗಿ ಹಿಡಿಯಲಿಲ್ಲ. ''ಶ್ರುತೋ ಹಿತೋಪದೇಶೋಽಯಂ ಪಾಟವಂ ಸಂಸ್ಕೃತೋಕ್ತಿಷು। ವಾಚಂ ಸರ್ವತ್ರ ವೈಚಿತ್ರ್ಯ ನೀತಿವಿದ್ಯಾಂ ದದಾತಿ ಚ ॥'' ಎಂಬ ಶ್ಲೋಕದಲ್ಲಿ ''ಶ್ರುತಃ - ಕೇಳಲ್ಪಟ್ಟಂಥ, ಅಯಂ - ಈ ಹಿತೋಪದೇಶಃ - ಹಿತೋಪದೇಶವು'' ಎಂದು ಮುಂತಾಗಿ ಪದಗಳಿಗೆ ಅರ್ಥಗಳನ್ನು ಪಂಡಿತರು ಹೇಳಿಕೊಡುತ್ತಿದ್ದರು. 'ಅಲ್ಪಟ್ಟಂಥ' ಎಂಬ ಮಾತು ನನ್ನ ಕಿವಿಗೆ ಈಗ ಮೊದಲನೆಯ ಸಲಕ್ಕೆ ಬಿತ್ತು. ಸಂಸ್ಕೃತವು ಓದುವದಕ್ಕೆ ಬಹಳ ಕಷ್ಟವೆಂದು ನನಗೆ ತೋರುವದಕ್ಕೆ ಮೊದಲಾಯಿತು. ಭಂಡಾರಕರ ಪುಸ್ತಕದಲ್ಲಿ 'ಭೂ' ಧಾತುವಿಗೆ 'ಅ' ವಿಕರಣ ಪ್ರತ್ಯಯವು ಸೇರುವಾಗ 'ಊ' ಕಾರಕ್ಕೆ ಗುಣವು ಬಂದು 'ಭೋ' ಆಗುವದು ; ಅದರ ಮುಂದೆ ಸ್ವರವಿರುವದರಿಂದ ಓಕಾರಕ್ಕೆ ಅವ್ ಆದೇಶವು ಬಂದು ಮುಂದಿನ ಅಕಾರವು ಸೇರಲು 'ಭವ' ಆಗುವದು' ಎಂದು ಮುಂತಾಗಿ ಟಿಪ್ಪಣಿಯಲ್ಲಿ ಬರೆದಿದ್ದನ್ನು ಕಂಡು ನನಗೆ ಶಬ್ದಗಳು ಒಂದಾನೊಂದು ನಿಯಮಕ್ಕೆ ಒಳಪಟ್ಟು ರೂಪದಲ್ಲಿ ಮಾರ್ಪಡುತ್ತಿರುವವು ಎಂಬುದು ಸ್ವಲ್ಪಮಟ್ಟಿಗೆ ಹೊಳೆಯಿತಾದರೂ ಭೂ ಧಾತುವಿಗೆ ಬೇರೆ ಬೇರೆಯ ರೂಪಗಳಾಗುತ್ತಿರುವಲ್ಲಿ ಮುಂದಿನ ಅಕಾರವು ಮಾತ್ರ ಏತಕ್ಕೆ ಸುಮ್ಮನೆ ಹಾಗೆಯೇ ಇರುವದು-ಎಂಬ ಕುತೂಹಲದ ಪ್ರಶ್ನೆಯೊಂದು ಎದ್ದುಕೊಳ್ಳುತ್ತಿತ್ತು. ಪಂಡಿತರು ಆಗಾಗ್ಗೆ ನಶ್ಯವನ್ನು ಹಾಕಿಕೊಂಡು ವಸ್ತ್ರದಿಂದ ಮೂಗನ್ನು ಒರಸಿಕೊಳ್ಳುತ್ತಲೂ ಸಿಂಬಳವನ್ನು ತೆಗೆದು ಹಾಕುತ್ತಲೂ ಒಂದೇ ಧ್ವನಿಯಿಂದ ಪಾಠವನ್ನು ಹೇಳಿಕೊಡುತ್ತಿದ್ದರು; ಅವರ

ಮುಖದಲ್ಲಿ ಯಾವ ನಗೆಯನ್ನೂ ನಾನು ಕಾಣಲಿಲ್ಲವಾದ್ದರಿಂದ ಅವರನ್ನು ಯಾವ ಪ್ರಶ್ನೆಯನ್ನೂ ಕೇಳುವ ಗೋಜಿಗೆ ಹೋಗುತ್ತಿರಲಿಲ್ಲ.

## ಆಂಗ್ಲೋ ವರ್ನಾಕ್ಯುಲರ್ ಸ್ಕೂಲು :

1892(?)ರಲ್ಲಿ ಬಂದ ಸರಕಾರದ ಸರ್ಕ್ಯುಲರ್ ಪ್ರಕಾರ ಮೈಸೂರು ಸಂಸ್ಥಾನದಲ್ಲಿದ್ದ ಕನ್ನಡ ಇಂಗ್ಲೀಷು ಸ್ಕೂಲುಗಳು ಕಲೆತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಾದವು. ಈ ಸರ್ಕಾರಿ ಆರ್ಡರು ಏತಕ್ಕೆ ಆಯಿತೆಂಬುದು ನಮಗೆ ಆಗ ಗೊತ್ತಾಗಲಿಲ್ಲ. ಆ ಬದಲಾವಣೆಯಿಂದ ಮೊದಲು ಸ್ವತಂತ್ರವಾಗಿದ್ದ ಕನ್ನಡ ಸ್ಕೂಲುಗಳು ಮರೆಯಾದವೆಂಬುದಾಗಲಿ, ಕನ್ನಡನಾಡಿನಲ್ಲಿಯೇ ಕನ್ನಡಕ್ಕೆ ಕೊಡಲಿಯಪೆಟ್ಟು ಬಿದ್ದಿತೆಂಬುದಾಗಲಿ ನಮಗೆ ತಿಳಿಯಲಿಲ್ಲ. ಇದಂತಿರಲಿ, ಆಂಗ್ಲೋ ವರ್ನಾಕ್ಯುಲರ್ ಸ್ಕೂಲಾದದ್ದರ ಫಲವಾಗಿ ನಮ್ಮ ರಾಮಸ್ವಾಮಯ್ಯಂಗಾರ್ಯರು ಅಸಿಸ್ಟೆಂಟುಮಾಸ್ತರಾದರು, ಮೇಕೆ ಮೇಷ್ಟರು ಒಟ್ಟು ಸ್ಕೂಲಿಗೇ ಹೆಡ್‌ಮಾಸ್ತರಾದರು, ರಾಮಸ್ವಾಮಯ್ಯಂಗಾರ್ಯರಿಗೆ ಅಪಮಾನವಾಯಿತೆಂದು ಅನೇಕರಿಗೆ ಅನಿಸಿತು. ಹುಡುಗರೆಲ್ಲರಿಗೂ ಅವರನ್ನು ಕಂಡರೆ ಸಹಾನುಭೂತಿಯಿತ್ತು. ಈ ಕಾರಣದಿಂದ ಇಂಗ್ಲೀಷು ಹೆಡ್‌ಮೇಸ್ಟರ ಮೇಲೆ ಸ್ವಲ್ಪ ದ್ವೇಷವುಂಟಾಯಿತು. ಹೊಗೆಯಾಡುತ್ತಿದ್ದ ಈ ದ್ವೇಷವನ್ನು ಭುಗಿಲೆಬ್ಬಿಸುವದಕ್ಕೆ ಅಯ್ಯಂಗಾರ್ಯರೂ ಸ್ವಲ್ಪ ಪ್ರೋತ್ಸಾಹವಿತ್ತರೆಂದು ತೋರುತ್ತದೆ. ನಾವೆಲ್ಲರೂ ರುಜುಹಾಕಿ ಅಯ್ಯಂಗಾರರನ್ನೇ ನಮಗೆ ಹೆಡ್‌ಮಾಸ್ತರಾಗಿ ಇಟ್ಟುಕೊಡಬೇಕೆಂದು ಇನಸ್ಪೆಕ್ಟರ್ ಜನರಲ್ ಸಾಹೇಬರಿಗೆ ಒಂದು ಅರ್ಜಿಯನ್ನು ಬರೆದುಕೊಂಡೆವು. ನನಗೆ ಅರ್ಜಿಯೆಂದರೆ ಏನೆಂಬುದೇ ಸರಿಯಾಗಿ ತಿಳಿಯದು ; ಮತ್ತೊಬ್ಬರು ಯಾರೋ ನನ್ನ ಕೈಯಿಂದ ರುಜುಹಾಕಿಸಿರಬೇಕು. ಆದರೆ ನನಗೊಂದು ವಿದ್ಯೆ ಬರುತ್ತಿತ್ತು, ಅಕ್ಷರವನ್ನು ತಲೆಕೆಳಗು ಮಾಡಿ ಬರೆದು ಕನ್ನಡಿಯಲ್ಲಿ ನೋಡಿದರೆ ಸರಿಯಾದ ಆಕಾರದ ಪ್ರತಿಬಿಂಬವು ಬೀಳುವಂತೆ ಮಾಡುವ ಜಾಣತನವನ್ನು ನಾನು ಯಳ್ಳಂಬಳಸೆಯಲ್ಲಿ ಬಸಪ್ಪನಿಂದ ಕಲಿತುಕೊಂಡಿದ್ದೆನು. ಈ ರೂಪದಲ್ಲಿ ಒಂದು ಗೋಡೆಯ ಮೇಲೆ ಅಕ್ಷರಗಳನ್ನು ಕೆತ್ತಿದೆನು. ಸ್ವಲ್ಪ ಶ್ರಮಪಟ್ಟರೆ ಕನ್ನಡಿಯನ್ನು ಉಪಯೋಗಿಸದೆಯೇ "ಮೇಕೆ ಮೇಷ್ಟರು" ಎಂದು ಅದನ್ನು ಓದಬಹುದು ಎಂಬುದು ನನಗೆ ಆಗ ಹೊಳೆಯಲಿಲ್ಲ. ಹೆಡ್‌ಮೇಷ್ಟರಿಗೆ ಸಮಾಚಾರವು ತಿಳಿಯುತ್ತಲೂ ನಮ್ಮೆಲ್ಲರನ್ನು ವಿಚಾರಿಸಿದರು. ಎಲ್ಲರಂತೆ ನಾನೂ 'ಬರೆದಿಲ್ಲ' ಎಂದು ಸುಳ್ಳುಹೇಳಿದೆನು. ಆದರೆ 'ಇದರಂತೆ ಬರೆಯಿರಿ ನೋಡೋಣ !' ಎಂದಾಗ ಮಾತ್ರ ಮಿಕ್ಕವರು ಯಾರೂ ಬರೆಯಲಾರದೆ ಹೋದರು ; ನಾನು ಸಲೀಸಾಗಿ ಬರೆದು ಸಿಕ್ಕಿಬಿದ್ದೆನು ! ಹೆಡ್‌ಮಾಸ್ತರು ನನ್ನಿಂದ ನಿಜವನ್ನು ತಿಳಿದುಕೊಂಡು ನನ್ನ ತಪ್ಪನ್ನು ಕ್ಷಮಿಸಿ ಬಿಟ್ಟರು. ನನಗೆ ಬಹಳ ಪಶ್ಚಾತ್ತಾಪವಾಯಿತು.

## ಕನ್ನಡ ಲೋಅರ್ ಸೆಕೆಂಡರಿ ಪರೀಕ್ಷೆ:

1894ನೆಯ ವರ್ಷದಲ್ಲಿ ರಾಮಸ್ವಾಮಯ್ಯಂಗಾರ್ಯರು ನನ್ನನ್ನು ಲೋಅರ್ ಸೆಕೆಂಡರಿ ಪರೀಕ್ಷೆಗೆ ಓದುವಂತೆ ಪ್ರೋತ್ಸಾಹಿಸಿದರು. ಮೊದಲು ನಾನು ಸಂಸ್ಕೃತವನ್ನೇ ಐಚ್ಛಿಕವಾಗಿ ತೆಗೆದುಕೊಂಡಿದ್ದರೂ 'ಸಂಸ್ಕೃತದಲ್ಲಿ ಫೇಲಾದರೆ ಇಡಿಯ ಪರೀಕ್ಷೆಯಲ್ಲಿಯೇ ಫೇಲಾಗುತ್ತೀಯೆ' ಎಂದು ಅವರು ಹೆದರಿಸಿದ್ದರಿಂದ ಅವರ ಸೂಚನೆಯಂತೆ ನಾನು ಆರೋಗ್ಯವ್ಯವಸಾಯಶಾಸ್ತ್ರಗಳನ್ನೇ ಐಚ್ಛಿಕವಾಗಿ ತೆಗೆದುಕೊಂಡೆನು. ಪರೀಕ್ಷೆಗೆ ಕಟ್ಟಿದಮೇಲೆ ಇವುಗಳನ್ನು ಓದುವದುಶ್ರಮ ಸಾಧ್ಯವಾಗಿತ್ತು. ಇದಲ್ಲದೆ ಆಗ ಪ್ರಚಾರಕ್ಕೆ ಬಂದಿದ್ದ ರಘುನಾಥರಾಯರ ಎರಡು ಸಂಪುಟದ 'ದೊಡ್ಡ ಭೂವಿವರಣೆ'ಯನ್ನು ಮ್ಯಾಪಿನ ಸಹಾಯವಿಲ್ಲದೆ ಓದಿಕೊಳ್ಳು-ವದು ರುಚಿಸುತ್ತಿರಲಿಲ್ಲ. ಈ ಎರಡು ಬಗೆಯ ಕಷ್ಟದಿಂದ ನನ್ನನ್ನು ಪಾರುಮಾಡಲು ಮೇಷ್ಟರು 'ವ್ಯವಸಾಯಚಂದ್ರಿಕೆ', 'ಆರೋಗ್ಯದ ಪ್ರಶ್ನೋತ್ತರಗಳು', 'ಭೂಗೋಳ ಮಾಲಿಕೆ' ಎಂಬ ಮೂರು ಹೊಸ ಹಂಚಿಕೆಯ ಪುಸ್ತಕಗಳನ್ನು ಕೊಟ್ಟರು. ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳಿಗೆ ಉತ್ತರಗಳನ್ನು ಹೇಳಿಕೊಟ್ಟು ಗಟ್ಟಿಮಾಡಿಸಿದರು. ಭೂಗೋಳಮಾಲಿಕೆಯಲ್ಲಿ ದೇಶಗಳು, ರಾಜಧಾನಿಗಳು, ಭೂಕಂಠ, ಭೂಸಂಧಿ ಎಂದು ವರ್ಗೀಕರಣ ಮಾಡಿದ್ದ ಅಕಾರಾದಿಶಬ್ದಗಳ ಪಟ್ಟಿಗಳಿದ್ದವು. 'ಬಂಗಾಳಕೊಲ್ಲಿ'ಯಾದಮೇಲೆ 'ಬಿಸ್ಕೆ' ಬಂದರೆ ಅಕ್ಷರಸಂಬಂಧವಲ್ಲದೆ ಮತ್ತೆ ಯಾವ ಸಂಬಂಧವೂ ಇರಲಾರದಷ್ಟೆ ? ಮ್ಯಾಪ್ ಇಲ್ಲದೆ ಈ ಶಬ್ದಮಾಲಿಕೆಯನ್ನು ಗಟ್ಟಿಮಾಡುತ್ತಿದ್ದ ನನಗೆ ಭೂವಿವರಣೆ ಎಂಬುದು ನೀರಸವಾದ ವಿಷಯವೆಂದು ಅಂದಿನಿಂದ ಮಾಡಿಕೊಂಡುಬಿಟ್ಟದ್ದರಲ್ಲಿ ಆಶ್ಚರ್ಯವೇನು ?

ಹಾಗೂ ಹೀಗೂ ಮಾಡಿ ಪರೀಕ್ಷೆಗೆ ಸಿದ್ಧನಾದೆನು. ಮೂರುನಾಲ್ಕುಜನ ವಿದ್ಯಾರ್ಥಿಗಳೊಡನೆ ಚಿಕ್ಕಮಗಳೂರಿಗೆ ಪರೀಕ್ಷೆಗೆ ಹೋದೆನು. ಉಪಾಧ್ಯಾಯರು 'ಪರೀಕ್ಷೆಯಲ್ಲಿ ಹಾಗೆ ಮಾಡಬೇಕು, ಹೀಗೆ ಮಾಡಬೇಕು' ಎಂದು ಎಚ್ಚರಿಕೆ ಕೊಟ್ಟಿದ್ದರು. 'ಬರೆಯುವದಕ್ಕೆ ಒಳ್ಳೆಯ ನಿಬ್ಬು' (ಲೇಖಣಿಯ ಮುಳ್ಳು) ತೆಗೆದುಕೊಂಡು ಹೋಗಿರಬೇಕು, ಬಾಯಾರಿಕೆಯಾದರೆ ನೀರು ಕುಡಿಯುವದಕ್ಕೆ ಹೊರಗೆ ಬಿಡುವದಿಲ್ಲ. ಬೇಕಾದರೆ ಕಲ್ಲುಸಕ್ಕರೆಯನ್ನೋ ಪೆಪ್ಪರಮೆಂಟನ್ನೋ ತೆಗೆದುಕೊಂಡು ಹೋಗಿರಿ ಎಂಬ ಬುದ್ಧಿವಾದಗಳು ನನ್ನ ಮನಸ್ಸಿನಲ್ಲಿ ಮುಖ್ಯವಾಗಿ ನಾಟಿದ್ದವು. ಹೊಸ ಅಂಗಿಯನ್ನು ತೊಟ್ಟುಕೊಂಡು ಪರೀಕ್ಷೆಗೆ ಹೋಗಿದ್ದೆನು. ಹೊಸ ಸ್ಥಳ, ಮಾತನಾಡದೆ ಸುಮ್ಮನೆ ಓದಿಕೊಂಡು ಉತ್ತರವನ್ನು ಬರೆಯುತ್ತಿರಬೇಕು. ಉತ್ತರವು ತಪ್ಪಾದರೆ ಫೇಲಾದೇನು, ಅಂಜಿಕೆ ಈ ಎಲ್ಲಾ ಕಾರಣಗಳಿಂದ ನನಗೆ ಆಗಾಗ್ಗೆ

ಮೈಬೆವರುತ್ತಿತ್ತು. ಗಂಟಲು ಒಣಗುತ್ತಿತ್ತು. ಅವಶ್ಯಕತೆಯಿಲ್ಲದಿದ್ದರೂ ನಿಬ್ಬುಗಳನ್ನು ಬದಲಾಯಿಸಿಕೊಳ್ಳುತ್ತಾ ನಡುನಡುವೆ ಪೆಪ್ಪರಮೆಂಟುಗಳನ್ನು ನುಂಗುತ್ತಾ ಉತ್ತರಗಳನ್ನು ಬರೆಯುತ್ತಿದ್ದೆನು. ಆ ವರ್ಷ ನಾನು ತರಗತಿಯಲ್ಲೆಲ್ಲ ಮೇಲಾಗಿದ್ದೆನೆಂದು ಎಲ್ಲರೂ ಹೇಳುತ್ತಿದ್ದರು. ಪರೀಕ್ಷೆಗೆ ಲೆಕ್ಕವು ಬಹಳ ಸುಲಭವಾಗಿ ಬಂದಿದೆ ಎಂದು ನನಗೆ ತೋರಿತು. ಇನ್ನು ಸ್ವಲ್ಪಹೊತ್ತಿರುವಾಗಲೆ ಉತ್ತರದ ಪತ್ರಿಕೆಯನ್ನು ಪರೀಕ್ಷಕರಿಗೆ ಕೊಟ್ಟು ಬಿಟ್ಟು ಹೊರಗೆ ಬಂದುಬಿಟ್ಟೆನು. ಆದರೆ ಅಲ್ಲಿ ನಮ್ಮನ್ನು ಪರೀಕ್ಷೆಗೆ ಕರೆದುಕೊಂಡು ಬಂದಿದ್ದ ರಾಮಣ್ಣಮೇಷ್ಟರು ಇತರ ಹುಡುಗರ ಮತ್ತು ನನ್ನ ಉತ್ತರಗಳನ್ನು ಹೋಲಿಸಿ ನೋಡಿದ್ದರಲ್ಲಿ ನನ್ನದಾಗಿ ಉತ್ತರ ಸರಿಯಾದ ಲೆಕ್ಕವೇ ಕಾಣಿಸಲಿಲ್ಲ. ಆ ವರ್ಷ ಇಂಗ್ಲೀಷು ಪ್ರಶ್ನ ಪತ್ರಿಕೆಯನ್ನು ಕನ್ನಡಿಸಿದ್ದರು ; ಸ್ವಲ್ಪ ಕಿರುಕುಳದ ಆತಂಕವನ್ನು ಮಾಡಿಟ್ಟಿದ್ದರು. 11,100 ; 11,102 ; 11,103 - ಈ ಸಂಖ್ಯೆಗಳ ಗುಣಲಬ್ಧವನ್ನು ಇವುಗಳ ಒಟ್ಟಿನಿಂದ ಭಾಗಿಸಿರಿ ಎಂಬ ಪ್ರಶ್ನೆಯನ್ನು 11, 100, 11, 101, 11, 102 - ಹೀಗೆ ಅಚ್ಚುಮಾಡಿಸಿದ್ದದ್ದರಿಂದ ನಮ್ಮಲ್ಲನೇಕರಿಗೆ ಮೂರು ಸಂಖ್ಯೆಯಬದಲು ಆರು ಸಂಖ್ಯೆಗಳೆಂತ ತೋರಿತು. ಒಂದಂಗುಲ ಕಡಿಮೆಯಿರುವ ಗಜಪಟ್ಟಿಯಿಂದ ಅಳೆದರೆ ಇಷ್ಟಾಗುತ್ತದೆ ಎಂಬುದೊಂದು ಪ್ರಶ್ನೆ. ಜವಳಿ ಅಂಗಡಿಯವರು ಮೊಳದುದ್ದ ಇರುವ ಅಳತೆಕಡ್ಡಿಯನ್ನು ಗಜಪಟ್ಟಿ ಎನ್ನುವದನ್ನು ತಿಳಿದಿದ್ದ ಕೆಲವರು ಹುಡುಗರು ಉದ್ದವನ್ನು 18 ಅಂಗುಲವೆಂತ ಇಟ್ಟುಕೊಳ್ಳುವದಕ್ಕೆ ಅವಕಾಶವಾಯಿತು. 40 ಕುದುರೆಗಳು ಒಂದು ಹೊಲವನ್ನು ಕೆಲವು ದಿನಗಳಲ್ಲಿ ಉಳುತ್ತವೆ ; 36 ಕುದುರೆಗಳಿಗೆ ಅದೇ ಹೊಲವನ್ನು ಉಳುವದಕ್ಕೆ ಒಂದು ದಿನ ಹೆಚ್ಚಾಗಿ ಬೇಕಾಗುವದಾದರೆ.... ಎಂದು ಮುಂತಾಗಿದ್ದು ಪ್ರಶ್ನೆಯು ನನಗೆ ಅರ್ಥವಾಗಲೇ ಇಲ್ಲ. ಕೆಲವು ದಿನಗಳಿಗಿಂತ ಒಂದು ದಿನ ಹೆಚ್ಚು ಎಂದರೇನು ? ಎಂಬುದನ್ನು ಯೋಚಿಸುತ್ತಾ ಕುಳಿತುಬಿಟ್ಟೆನು. ಒಂದು ಬಡ್ಡಿಯ ಲೆಕ್ಕದಲ್ಲಿ 'ಉಭಯದಿನಗಳೂ' ಸೇರಿ ಎಂಬ ಮಾತುಗಳಿದ್ದವು. ಸಾಲವನ್ನು ತೆಗೆದುಕೊಂಡ ದಿನ, ಹಿಂತಿರುಗಿ ಕೊಟ್ಟದಿನ - ಈ ಎರಡುದಿನಗಳೂ ಸೇರಿ ಎಂಬ ಅರ್ಥವು ನನಗೆ ತಿಳಿಯದೆ ಇದ್ದದ್ದರಿಂದ ಒಟ್ಟುದಿನಗಳ ಸಂಖ್ಯೆಗೆ 2 ದಿನಗಳನ್ನು ಹೆಚ್ಚಾಗಿ ಸೇರಿಸಿಬಿಟ್ಟಿದ್ದೆನು. ಹೀಗೆಲ್ಲ ತಪ್ಪಾಗಿಬಿಟ್ಟಿದ್ದವು. ರಾಮಣ್ಣಮೇಷ್ಟರು ಬಹಳ ಒಳ್ಳೆಯವರು. ಅವರು ಹುಡುಗರ ಜೊತೆಯಲ್ಲಿ ಪ್ರತಿವರ್ಷವೂ ಲೋಅರ್ ಸೆಕೆಂಡರಿಗೆ ಬಂದು ಎಷ್ಟೋ ಸಲ ಫೇಲಾಗುತ್ತಿದ್ದರಂತೆ ! ನನ್ನ ಉತ್ತರಗಳು ತಪ್ಪಾಗಿರುವವೆಂಬುದನ್ನು ನನಗೆ ತಿಳಿಯಗೊಡದೆ 'ಭಲೆ ! ಭೇಷಾಗಿದೆ. ಮುಂದಿನ ಪ್ರಶ್ನಪತ್ರಿಕೆಗಳಿಗೆ ಉತ್ತರಕೊಟ್ಟರೆ ಪ್ಯಾಸ್ ಆಗುವದರಲ್ಲಿ ಸಂಶಯವಿಲ್ಲ !' ಎಂದು ನನ್ನನ್ನು ಪ್ರೋತ್ಸಾಹಿಸಿದರು. ಅವರು ಆಡಿದ ಭವಿಷ್ಯವು ಮುಂದೆ ನಿಜವೂ ಆಯಿತು.

ನನ್ನ ಜೊತೆಯಲ್ಲಿ ಶ್ರೀಕಂಠಯ್ಯನೆಂಬ ದೊಡ್ಡ ವಯಸ್ಸಿನ ಆಂಧ್ರಬಾಲಕನೊಬ್ಬನು ಪರೀಕ್ಷೆಗೆ ಬಂದಿದ್ದನು. ಅವನು ತೆಲುಗಿನ ಕವಿತೆ ಮಾಡುತ್ತಿದ್ದನು. ಅವನ ಮೇಲಿನ ಸ್ಪರ್ಧೆಯಿಂದ ನಾನು ಕನ್ನಡದಲ್ಲಿ ಕವಿತೆಯನ್ನು ಮಾಡುತ್ತಿದ್ದದ್ದೂ ಉಂಟು. ತೆಲುಗಿನಲ್ಲಿ ಮಾಧುರ್ಯ ಹೆಚ್ಚು ; 'ತೆಲುಗು ತೇಟ' (?) ತೇಟ ಎಂದು ಅವನೆಂದರೆ 'ಕನ್ನಡ ಕಸ್ತೂರಿ', ಅದು ಬಲ್ಲೆಯಾ ಎಂದು ನಾನು ಉತ್ತರ ಕೊಡುತ್ತಿದ್ದೆನು. ಅವನೂ ನಾನೂ ಚಿಕ್ಕಮಗಳೂರಿನಿಂದ ಬರುವಾಗ ದಾರಿಯಲ್ಲಿ ಕಡೂರಿನಲ್ಲಿ ನಮ್ಮ ಲಕ್ಷ್ಮಕ್ಕನವರ ಮಾವನವರ ಮನೆಯಲ್ಲಿ ಒಂದು ದಿನ ಊಟಕ್ಕೆ ಇಳಿದುಕೊಂಡಿದ್ದೆವು. ಅವರನ್ನು 'ಶ್ಯಾಮಭಟ್ಟರು' ಎಂದು ಕರೆಯುತ್ತಿದ್ದರು. ಶ್ರೀಕಂಠಯ್ಯನು ಅವರನ್ನು ಪರೀಕ್ಷೆಯ ಫಲಿತಾಂಶದ ವಿಷಯವಾಗಿ ಪ್ರಶ್ನೆ ಕೇಳಿದನು. ಜ್ಯೋತಿಷ್ಯದ ಪ್ರಶ್ನೆ ಕೇಳುವ ಪದ್ಧತಿಯು ನಮ್ಮ ಜನಗಳಲ್ಲಿ ರೂಢಮೂಲವಾಗಿದೆ ಎಂಬುದು ನನಗೆ ಈ ಮೊದಲೇ ಗೊತ್ತಿತ್ತು. ನಮ್ಮೂರ ಕೃಷ್ಣಭಟ್ಟರ ಮನೆಗೆ ಹಳ್ಳಿಯವರು ಬಂದು ಕವಡೆಯ ಪ್ರಶ್ನೆ ಕೇಳಿಕೊಂಡು ಹೋಗುತ್ತಿದ್ದರು. 'ನಿನಗೆ ಪ್ಯಾಸಾಗುತ್ತದೆ ; ಆದರೆ ನಮ್ಮ ಸುಬ್ಬರಾಯನಿಗೆ ಈ ವರ್ಷ ಆಗಲಾರದು' ಎಂದು ಅವರು ಹೇಳಿದರು. ಲೆಕ್ಕದಲ್ಲಿ ಸರಿಯಾಗಿ ಉತ್ತರ ಕೊಟ್ಟಿಲ್ಲವೆಂಬ ಶಂಕೆ ಇದ್ದೇ ಇದ್ದದ್ದರಿಂದ ನನಗೆ ಫೇಲಾಗುವೆನೆಂದೇ ಮನಸ್ಸಿನಲ್ಲಿ ನಿಶ್ಚಯವಾಯಿತು. ತರೀಕೆರೆಗೆ ಬಂದು ಸೇರಿದೆನು.

## ತರೀಕೆರೆಯಲ್ಲಿ ನನ್ನ ಹೊರಗಿನ ವ್ಯವಹಾರ :

ತರೀಕೆರೆಯಲ್ಲಿ ಸುಬ್ಬಣ್ಣನ ಮಗ ಲಚ್ಚಿಯ ಜೊತೆ ಆಗಾಗ್ಗೆ ಸೇರುತ್ತಲೇ ಇದ್ದೆನೆಂದು ಆಗಲೆ ತಿಳಿಸಿರುತ್ತೇನಷ್ಟೆ ? ಇದರಿಂದ ನನಗೆ ಒಂದು ಬಗೆಯ ಪ್ರಯೋಜನವಾಯಿತು. ಲಚ್ಚಿಯ ತಂದೆಯವರು ಹಲವು ಸ್ತೋತ್ರಗಳನ್ನು ಪದಗಳನ್ನು ಬರೆದುಕೊಂಡಿದ್ದ ಒಂದು ಪುಸ್ತಕವಿತ್ತು. ಒಂದು ಹಸುರು ಕಾಗದದ ಕೈ ಪುಸ್ತಕದಲ್ಲಿ ಅದು ಉದ್ದುದ್ದನೆಯ ಹಾಳೆಯದು. ನಮ್ಮಣ್ಣನವರು ನನಗೆ ಕೊಟ್ಟಿದ್ದರು. ಅದರಲ್ಲಿ ಸ್ತೋತ್ರಗಳನ್ನು ಬರೆದುಕೊಂಡೆನು. ಇನ್ನೊಂದರಲ್ಲಿ ಪದಗಳನ್ನು ಬರೆದುಕೊಂಡೆನು. ಪ್ರತಿದಿನವೂ ಸಾಯಂಕಾಲ ಸ್ತೋತ್ರಗಳನ್ನು ಹೇಳಿಕೊಳ್ಳುವ ವಾಡಿಕೆಯನ್ನು ಇಟ್ಟುಕೊಂಡಿದ್ದೆನು.

ಸಂಜೆ ಐದುಘಂಟೆಯ ಮೇಲೆ ನಾವು 'ರೌಂಡರ್‍ಸ್' 'ಫುಟ್‌ಬಾಲ್' ಆಟಗಳನ್ನು ಆಡುತ್ತಿದ್ದೆವು. ಚಿಕ್ಕಕೆರೆಯ ಕೋಟೆಯ ಹಿಂದುಗಡೆ ಇರುವ ಬಯಲಿನಲ್ಲಿ 'ಹೈಜಂಪ್' 'ಲಾಂಗ್‌ಜಂಪ್' - ಮುಂತಾದ ಕೆಲವು ಆಟಗಳನ್ನು ಆಡುವ

ಪದ್ಧತಿಯೂ ಇತ್ತು. 'ತರಿಕೆರೆ ಕಿರಿಗೆರೆ ಏರಿ ಮೇಲೆ ಕರಿಕುರಿ ಮರಿ ಮರಿಕಂಡೆ' ಎಂದು ಬೇಗನೆ ಹೇಳು ನೋಡೋಣ ! ಎಂದು ಹುಡುಗರು ಒಬ್ಬರನ್ನೊಬ್ಬರು ಕೇಳುವದೊಂದು ತಮಾಷೆ. ಬೇಗನೆ ಹೇಳುವವರಲ್ಲಿ ಯಾವುದಾದರೊಂದು ಮಾತು ನುಸಿದುಕೊಂಡು ಹೋಗಿಬಿಡುತ್ತಿತ್ತು. ದೊಡ್ಡಕೆರೆಗೆ ಅಥವಾ ಶಿವಗಂಗೆಯ ಛತ್ರದ ಬಳಿಗೆ ಹೋಗಿ ಬಟ್ಟೆಗಳನ್ನು ಒಗೆದುಕೊಂಡು ಬರುವದು, 'ಪರಮಾಂಗಟ್ಟಿ' ಹನುಮಂತರಾಯನಗುಡಿಗೆ ಹೋಗಿ ಹರಕೆಗಳನ್ನು ಒಪ್ಪಿಸಿಕೊಂಡು ತುಪ್ಪಬಾಳೆಹಣ್ಣುತಿನ್ನುವದು-ಇವೆಲ್ಲ ವಿನೋದಗಳು ಇದ್ದವು. ಇವುಗಳ ಜೊತೆಗೆ 'ಇಸಪೀಟು ಆಡುವದು', 'ಪಗಡೆಯ ಆಟ' ಇವೂ ಇದ್ದವು. ನಮ್ಮ ಆಟ ಸ್ವಲ್ಪ ಹೆಚ್ಚಾಗಿಯೇ ಇತ್ತು. ನಾನು ಯಾವಾಗಲೂ ಶರೀರದಲ್ಲಿ ಸ್ವಲ್ಪ ದುರ್ಬಲನೇ ಆಗಿರುತ್ತಿದ್ದೆನಾದರೂ ಜೊತೆಗಾರರೊಡನೆ 'ಊಟ್‌ಬೈಸ್' ಮುಂತಾದ ಸಾಮುಗಳನ್ನು ಮಾಡುವದಕ್ಕೆ ಹೋಗುತ್ತಿದ್ದೆನು.

ತರೀಕೆರೆಯಲ್ಲಿ ಯಕ್ಷಗಾನಪ್ರಸಂಗಗಳು ಬಹಳ. ಏಕಾದಶಿಯ ದಿನ ನಮ್ಮ ಅಣ್ಣನವರು ಉಪವಾಸಮಾಡುತ್ತಿದ್ದರು. ರಾತ್ರೆ ಜಾಗರಣೆ ಪ್ರಸಂಗ. ನಮ್ಮ ಮನೆಯಲ್ಲಿ ಇಂಥ ಪ್ರಸಂಗಗಳು ಏಕಾದಶಿಯ ರಾತ್ರೆಯೇ ಬಲುಮಟ್ಟಿಗೆ ಆಗುತ್ತಿದ್ದವು. ಯಕ್ಷಗಾನದ ಆಟಗಳಿಗೆ ಭುಜಕೀರ್ತಿ, ಕಿರೀಟ-ಮುಂತಾದವುಗಳನ್ನು ಹಗುರವಾದ ಮರಗಳಲ್ಲಿ ಮಾಡಿ ಜೀರುಂಡೆಯ ರೆಕ್ಕೆ, ಸುನೇರಿತಗಡು, ಕಾಗೆಬಂಗಾರ ಮುಂತಾದವುಗಳಿಂದ ಅಲಂಕರಿಸಿ ಮಾಡುವವರೊಬ್ಬರು ನಮ್ಮ ಮನೆಯ ಹತ್ತಿರದಲ್ಲಿಯೇ ಇದ್ದರು. ಅವರು ಈ ಪ್ರಸಂಗಗಳಿಗೆ ಬರುವದು ಉಂಟು. ಪ್ರಸಂಗಗಳಲ್ಲಿ ಒಬ್ಬರು ಯಕ್ಷಗಾನದ ಪುಸ್ತಕವನ್ನು ಓದುತ್ತಿದ್ದರು; ಅವರು ಕಂಚಿನ ಜಾಗಟೆಯನ್ನು ತಾಳಕ್ಕೆ ಅನುಗುಣವಾಗಿ ಬಾರಿಸಿಕೊಂಡು ಆಯಾಮಟ್ಟುಗಳ ಪದವನ್ನು ಹಾಡುತ್ತಿದ್ದರು. ಅವರಿಗೆ ಭಾಗವತರೆಂದು ಹೆಸರು. ಭಾಗವತರಿಗೆ ಶ್ರುತಿಗೋಸ್ಕರ ಪುಂಗಿ ಊದುವದು ನನ್ನಂಥ ಹುಡುಗರ ಕೆಲಸವಾಗಿತ್ತು. ಹಾವಾಡಿಗರು ಪುಂಗಿ ಊದುವಾಗ ಉಸಿರುತಿರುಗಿಸಿ ಬಹಳ ಹೊತ್ತು ಊದುತ್ತಿದ್ದದ್ದನ್ನು ಕಂಡಿದ್ದ ನನಗೆ ಆ ವಿದ್ಯೆಯನ್ನು ಕುರಿತು ಕಲಿತುಕೊಳ್ಳಬೇಕೆಂಬ ಆಶೆಯಿತ್ತು; ಆದರೆ ಅದು ಆಶೆಯಾಗಿಯೇ ಉಳಿದುಕೊಂಡಿತು. ನಮ್ಮಣ್ಣನವರು ಮೃದಂಗವನ್ನು ಬಾರಿಸುವದರಲ್ಲಿ ಕುಶಲರು. ಪ್ರಸಂಗಗಳಲ್ಲಿ ಒಬ್ಬಿಬ್ಬರು ತಾಳವನ್ನು ಹಾಕುತ್ತಿದ್ದರು. ಮಿಕ್ಕವರು ಕೂತುಕೊಂಡು ಕೇಳುತ್ತಿದ್ದು ಒಂದೊಂದು ಪಾತ್ರದ ಪದವನ್ನು ಹೇಳುತ್ತಲೂ ಕರ್ಣ, ಅರ್ಜುನ-ಮುಂತಾದವರ ಮಾತನ್ನು ಪದದ ಅರ್ಥಕ್ಕೆ ಅನುಗುಣವಾಗಿ ಆಡುತ್ತಿದ್ದರು. ಪದದ ಮಾತೇ ಅಲ್ಲದೆ ಬೇರೆಯ ಮಾತುಗಳನ್ನೂ ಬೆರೆಯಿಸಿಕೊಂಡು ಆಡುವದೂ ಉಂಟು. ಸೀತೆ, ದ್ರೌಪದಿ

ಮುಂತಾದವರ ಪಾತ್ರದಲ್ಲಿ ಶೋಕರಸವನ್ನು ತೋರಿಸುವಂತೆ ಮಾತನಾಡುವವರು ವಿರಳ; ನನ್ನ ಸ್ನೇಹಿತ 'ಅಬ್ಬಾಯಿ' (ಲಿಂಗಪ್ಪಯ್ಯನೆಂಬುವನ ಅಡ್ಡ ಹೆಸರು)ಯ ತಂದೆಯವರು ಈ ಶೋಕರಸ ಪ್ರಕಟಣೆಯ ಮಾತುಗಾರಿಕೆಯಲ್ಲಿ ಬಹಳ ಗಟ್ಟಿಗರೆನಿಸಿಕೊಂಡಿದ್ದರು. ಅವರು ಕರುಣಾರಸವನ್ನು ಸೂಸುವ ಮಾತುಗಳನ್ನು ಉತ್ತಮ ರೀತಿಯಿಂದ ಆಡುತ್ತಿರುವಾಗ ನನಗೆ ಎಷ್ಟೋ ಸಲ ಕಣ್ಣೀರು ಬಂದು ಗಂಟಲು ಕಟ್ಟಿಕೊಳ್ಳುತ್ತಿತ್ತು. ಈ ಸಂದರ್ಭದಲ್ಲಿ 'ಅಯ್ಯೋ ! ಈ ಗೋಳನ್ನು ಪರಿಹರಿಸಿಕೊಳ್ಳುವದಕ್ಕೆ ನೀರಿಲ್ಲದ ಹಾಳುಬಾವಿಗಾದರೂ ಬೀಳಬಾರದೇ ?' ಎಂದು ಕೆಲವರು ಅಸ್ಥಾನದ ಹಾಸ್ಯವನ್ನು ಮಾಡುತ್ತಿದ್ದದ್ದೂ ಉಂಟು.ಈ ಪ್ರಸಂಗದ ಮಾತುಗಾರಿಕೆಯನ್ನು ನೋಡಿದ ನನಗೆ ಪದ್ಯಗಳ ಅಭಿಪ್ರಾಯವನ್ನು ಗ್ರಹಿಸುವ ರೀತಿಯು ಸ್ಕೂಲಿನ ಪದ್ಯಪಾಠದಿಂದ ಗೊತ್ತಾಗುತ್ತಿದ್ದದ್ದಕ್ಕಿಂತಲೂ ಚೆನ್ನಾಗಿ ಮನಸ್ಸಿಗೆ ಹಿಡಿಯಿತೆನ್ನಬಹುದು. ಹೀಗೆ ಬೆಳ್ಳಂಬೆಳಗಾಗುವವರೆಗೂ ಜಾಗರಣೆಯಾಗಿ ನಾವು ಎದ್ದು ಸ್ನಾನಮಾಡಿ ದೇವರಪೂಜೆಯಾದ ಬಳಿಕ ಪಾರಣೆಯನ್ನು ಮಾಡುತ್ತಿದ್ದೆವು.

ತರೀಕೆರೆಯಲ್ಲಿ ಯಕ್ಷಗಾನದ ಆಟಗಳೂ ಕೆಲವು ಆಗುತ್ತಿದ್ದವು. ಆಟದ ಸಾಮಾನುಗಳನ್ನು ಕೊಳ್ಳುವದಕ್ಕೆ ಬರುವವರು ಸಾಮಾನುಗಳನ್ನು ತಯಾರಿಸಿ-ಕೊಟ್ಟವರ ಸಂಭಾವನೆಗೆಂದು ಯಾವ ಖರ್ಚನ್ನೂ ತೆಗೆದುಕೊಳ್ಳದೆ ನಮ್ಮ ಮನೆಯ ಹತ್ತಿರ ಮೊದಲನೆಯ ಆಟವನ್ನು ಆಡಿ ಹೋಗುತ್ತಿದ್ದರು. ಇದರ ಜೊತೆಗೆ ಊರಿನವರೇ ಕೆಲವರು ಸೇರಿ ಒಂದೊಂದು ಆಟವನ್ನು ಆಡುತ್ತಿದ್ದದ್ದೂ ಉಂಟು. ಒಂದು ಸಲ ಪೂರ್ಣಯ್ಯನವರ ಛತ್ರದಲ್ಲಿ ಆಟವಾದಾಗ ನನಗೂ ಚಿತ್ರಾಂಗದೆಯ ವೇಷವನ್ನು ಹಾಕಿಸಿದ್ದರು. ಆ ಊರಲ್ಲಿದ್ದ ರಿಕಾರ್ಡುಕೀಪರು ರಾಮಣ್ಣನವರು 'ಭೀಮ, ರಾವಣ' ಮುಂತಾದ ರೌದ್ರವೇಷಗಳನ್ನೇ ಆರಿಸಿಕೊಳ್ಳುತ್ತಿದ್ದರು. ಆಜಾನುಬಾಹುವಾಗಿದ್ದ ಅವರಿಗೆ ಆ ವೇಷಗಳು ಒಪ್ಪುತ್ತಲೂ ಇದ್ದವು. ಕಣ್ಣುಗಳಿಗೆ 'ಚಿಟ್ಟಿ' (ಕಣ್ಣಿನ ಎಲ್ಲೆಕಟ್ಟಿನ ಸುತ್ತಲೂ ಬಿಳಿಯ ಚುಕ್ಕಿಗಳನ್ನು ಹಾಕಿಕೊಂಡು) ಮುಖಕ್ಕೆ ಕೆಂಪುಬಣ್ಣವನ್ನು ಬಳಿದುಕೊಂಡು, ಪರದೆಯನ್ನು ತೆಗೆದಕೂಡಲೆ ಆಕಡೆ ಈಕಡೆ ಇಟ್ಟಿದ್ದ ಪಂಜುಗಳಿಗೆ ರಾಳದ ಪುಡಿಯನ್ನು ಹಾಕಿ ಹಾಕಿ 'ಹ್ಹಾ' ಎಂದು ಗರ್ಜಿಸಿದರೆ ಎಂಥವರಿಗೂ ಎದೆ ತಲ್ಲಣಿಸುತ್ತಿತ್ತು. ರಾಕ್ಷಸನ ಪಾತ್ರವು ಬರುವ ಮುಂಚೆ ಮೃದಂಗದವರು ರಿಂಗಣವನ್ನು ಬಡಿಯುವದು ಹಿಂದುಗಡೆ ಇಬ್ಬರು ಮೂವರು ಜನರು ಒಬ್ಬೊಬ್ಬರಾಗಿ ಹೋ ! ಎಂದು ದೀರ್ಘವಾಗಿ ಸಹಾಯಕರಾಗಿ ಕೂಗುವದು-ಇವೇ ಮುನ್ನುಡಿಗಳು ! ರಾಮಣ್ಣನವರಿಗೆ ಅವರ ಜೊತೆಯ ಜನರು ರಾವಣನೆಂದು ಹಾಸ್ಯದ ಹೆಸರನ್ನು ಇಟ್ಟುಕೊಂಡಿದ್ದರು. ಅವರು ಒಂದು ಸಲ ಭೀಮನು ದುಃಶಾಸನನ ಕರುಳನ್ನು ಬಗೆದ ಕೃತಿಯನ್ನು ಅಭಿನಯಿಸುತ್ತಿದ್ದಾಗ, ದ್ರೌಪದಿಯ ವೇಷದಲ್ಲಿದ್ದ ಅವರ

ಅಳಿಯನು ಭಯದಿಂದ ನಡುಗುತ್ತಿರಲು ನೋಟಕರು 'ಭೇಷ್ ! ಭೇಷ್ !' ಎಂದು ಅಭಿನಯವನ್ನು ಹೊಗಳಿದ್ದರಂತೆ. ಆದರೆ ಅಂದು ದ್ರೌಪದಿಯ ಅಭಿನಯವೇನೂ ಇರಲಿಲ್ಲ, ಆ ವೇಷದವನಿಗೆ ನಿಜವಾಗಿ ಅಂಜಿಕೆಗೆ ಛಳಿ ಬಂದು ನಡುಗಿ ಆಟವಾದಮೇಲೂ ಎಂಟುದಿನಗಳವರೆಗೂ ನರಳಿದನಂತೆ !

ರಾಯಸದ ವೆಂಕಟಕೃಷ್ಣಯ್ಯನೆಂಬವರು ಕಾರ್ತವೀರ್ಯಾರ್ಜುನನ ನಾಟಕವೆಂಬ ಒಂದು ನಾಟಕವನ್ನು ಹುಡುಗರಿಗಾಗಿ ಬರೆದು ಕೊಟ್ಟಿದ್ದರು. ಅದನ್ನು ಹುಡುಗರೆಲ್ಲರೂ ಸೇರಿ ಆಡಿದ್ದೂ ಅವರುಗಳೊಳಗೆ ಪಾತ್ರವನ್ನು ವಹಿಸಿದ್ದೂ ನೆನಪಿದೆ. ಆಗ ನಾನು ಬರೆದುಕೊಟ್ಟ ಮಾತುಗಳನ್ನು ಆಡದೆ, ನನಗೆ ತಿಳಿದಂತೆ ಆಡಿದೆನೆಂದು ಸ್ನೇಹಿತರೆಲ್ಲರೂ ನನ್ನನ್ನು ದೂರಿದ್ದರು. ಗುಬ್ಬಿನಾಟಕದ ಕಂಪನಿಯವರು ಆವೂರಿಗೆ ಒಂದು ಸಲ ಬಂದು ಹೋಗಿದ್ದರು. ಆ ನಾಟಕವನ್ನು ಎಷ್ಟು ನೋಡಿದರೂ ನನಗೆ ಸಾಕೆನಿಸುತ್ತಿರಲಿಲ್ಲ. ನಾಟಕದ ವೇಷ, ಘಂಟೆಗಳು, ಸಂಗೀತ - ಇವೆಲ್ಲ ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟವು. ಯಕ್ಷಗಾನಕ್ಕಿಂತಲೂ ಆ ಸಂಗೀತವು ಬಹಳ ನಯವೆಂತಲೂ ಬಯಲಾಟದ ವೇಷಕ್ಕಿಂತಲೂ ಆ ನಾಟಕದ ವೇಷಗಳು ಮೇಲ್ತರವೆಂತಲೂ ನನಗೆ ತೋರುತ್ತಿತ್ತು. ಕನಸಿನಲ್ಲಿ ಆ ನಾಟಕದ ವೇಷಗಳೇ ನನಗೆ ಕಾಣುತ್ತಿದ್ದವು. ಸುಮ್ಮನೆ ಓಡಾಡುವಾಗಲೂ ಕಿವಿಯಲ್ಲಿ ಅದೇ ಸಂಗೀತವು ಕೆಲವು ದಿನಗಳವರೆಗೆ ಕೇಳಿ ಬರುತ್ತಿತ್ತು.

ಹೀಗೆ ಪ್ರಸಂಗಗಳು, ಬಯಲಾಟ, ನಾಟಕ - ಇವುಗಳಿಂದ ನನಗೂ ಅರಿವಿಲ್ಲದೆಯೇ ನನಗೆ ಸಂಗೀತದಲ್ಲಿ ಅಭಿರುಚಿಯು ಅಂಕುರಿಸಿತು. ಇವೆಲ್ಲದರ ಜೊತೆಗೆ ಹರಿಕಥೆಯೂ ಸಹಾಯಕವಾಗಿ ಸೇರಿಕೊಂಡಿತು. ಹಾವೇರಿ ಪೀತಾಂಬರ ಭಟ್ಟರೆನ್ನುವವರೂ ಆಗಾಗ್ಗೆ ತರೀಕೆರೆಗೆ ಬಂದು ಕಥಾಶ್ರವಣ ಮಾಡಿಸುತ್ತಿದ್ದರು. ಅವರು ಯಾವದಾದರೊಂದು ಬಾಡಿಗೆ ಮನೆಯಲ್ಲಿಯೋ, ಛತ್ರದಲ್ಲಿಯೋ ಉಳಿದುಕೊಳ್ಳುತ್ತಿದ್ದರು. ಬೆಳಿಗ್ಗೆ ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಊರಿನವರ ಮನೆಗಳಿಗೆ ತಂಬೂರಿ, ಪಿಟೀಲು, ತಾಳ, ದಮ್ಮಡಿ - ಇವುಗಳೊಡನೆ ದೇವರ-ನಾಮವನ್ನು ಹಾಡುತ್ತಾ ಬಂದು 'ಉಪಾದಾನವನ್ನು' ತೆಗೆದುಕೊಂಡು ಹೋಗಿ ಅಡಿಗೆ ಮಾಡಿಕೊಂಡು ಊಟಮಾಡುತ್ತಿದ್ದರು. ಸಾಯಂಕಾಲ ಜನರ ಇಷ್ಟದಂತೆ ಬೇರೆಬೇರೆಯ ಕಡೆಗಳಲ್ಲಿ ಹರಿಕಥೆಗಳನ್ನು ಮಾಡುತ್ತಿದ್ದರು. ಆಗ ಜನರೂ ಕಿಕ್ಕಿರಿದಿರುತ್ತಿದ್ದರು.ಅವರ ಹಿಂದೆ ಮಾರ್ತಾಂಡಭಟ್ಟರು, ಬಾಳಂಭಟ್ಟರು ಇವರು ಹಾಡುತ್ತಿದ್ದರು; ಕೃಷ್ಣಪ್ಪನವರು ಪಿಟೀಲು ಬಾರಿಸುತ್ತಿದ್ದರು. ಹರಪ್ಪನೆಂಬಾತನು

ತಬಲವನ್ನು ಬಾರಿಸುತ್ತಿದ್ದನು. ಅವರ ಹರಿಕಥೆಗೆ ಹೋಗುವದೆಂದರೆ ನನಗೆ ಸ್ವರ್ಗಸುಖ. ಪೀತಾಂಬರಭಟ್ಟರು 'ಸಾಃ', 'ದಿಂಡೀ' - ಮುಂತಾದ ಮೆಟ್ಟಿನ ಮರಾಠಿಪದಗಳನ್ನು ಹೇಳಿ ಅರ್ಥವನ್ನು ಹೇಳುವ ಚಮತ್ಕಾರದಿಂದಲೂ ಹೊಟ್ಟೆ ಬಿರಿಯುವಂತೆ ಜನರನ್ನು ನಗಿಸುವ ಉಪಕಥೆಗಳಿಂದಲೂ ಭಕ್ತಿರಸಪ್ರಧಾನವಾದ ಕಥೆಗಳಿಂದಲೂ ಶ್ರೋತೃಜನರನ್ನು ವಶಗೊಳಿಸಿಕೊಂಡಿದ್ದರು. ಅವರಿಗೆ ಆಗ್ಗೆ ಕಥೆ ಮಾಡಿದ್ದಕ್ಕೆ ಏನು ಸಂಭಾವನೆ ಕೊಡುತ್ತಿದ್ದರೋ ನಾನರಿಯೆ.ಆದರೆ ಅವರನ್ನು ವ್ಯಾಸರನ್ನು ಕಂಡಂತೆ ಜನರು ಗೌರವಿಸುತ್ತಿದ್ದರೆಂಬುದಂತೂ ನಿಶ್ಚಯ.ಅವರು ಬಂದಾಗ ನಾನು ಬಲುಮಟ್ಟಿಗೆ ಅವರ ಜೊತೆಯಲ್ಲಿಯೇ ಇರುತ್ತಿದ್ದೆನು. ಒಂದೊಂದು ಸಲ ಅವರ ಮನೆಯಲ್ಲಿಯೇ ಊಟಮಾಡುತ್ತಿದ್ದೆನು. 'ಚಿತ್ರಕಥಾಲಹರಿ' ಎಂಬ ಕಥೆಗಳ ಪುಸ್ತಕವನ್ನು ನನ್ನಿಂದ ಅವರು ಓದಿಸಿ ಕೇಳುತ್ತಿದ್ದರು.

ಮೇಲೆ ವಿವರಿಸಿರುವ ವಿನೋದಗಳಿಂದ ನನಗೆ ರಾಮಾಯಣ, ಭಾರತ ಮುಂತಾದ ಪುರಾಣಗಳಲ್ಲಿ ಬಹಳವಾಗಿ ಆದರ ಹೆಚ್ಚಿತು. ನಾನೂ ಲಚ್ಚಿಯೂ ಒಂದು ಕಡೆ ಸೇರಿದಾಗ ಕರ್ಣ ಗಟ್ಟಿಗನೆಂದು ಒಬ್ಬ, ಅರ್ಜುನ ಗಟ್ಟಿಗನೆಂದು ಇನ್ನೊಬ್ಬ- ಹೀಗೆ ಚರ್ಚೆ ಮಾಡುತ್ತಿದ್ದೆವು. ಕೆಲವು ವೇಳೆ ಆ ಚರ್ಚೆಯು ಎರಡು ಮೂರು ದಿನಗಳವರೆಗೂ ನಡೆಯುತ್ತಿದ್ದವು. ನನಗೆ ಕೀರ್ತನ ಪದ್ಧತಿಯಲ್ಲಿಯೂ ಹೆಚ್ಚಿನ ಪ್ರೀತಿಯುಂಟಾಯಿತು. ನನಗೆ ಏನೂ ತಿಳಿಯದೆ ಇದ್ದರೂ - ಒಂದು ದಿನ ಹರಿಕಥೆಮಾಡುತ್ತೇನೆಂದು ಜನರನ್ನೆಲ್ಲಾ ಸೇರಿಸಿಬಿಟ್ಟೆನು. ಆದರೆ 'ಇನ್ನು ಪ್ರಾರಂಭಿಸು' ಎಂದು ಸ್ನೇಹಿತರು ಎಷ್ಟು ಹೇಳಿದರೂ ಸಭಾಕಂಪದಿಂದ ಸುಮ್ಮನೆ ಇದ್ದೆನು. ಜನರೆಲ್ಲರೂ ಎದ್ದುಹೋದರು. ಇನ್ನೊಂದು ಸಲ ಪೀತಾಂಬರದಾಸರು ಹೇಳಿದ ಮಾತುಗಳೂ, ಅವರು ಹೇಳಿದ್ದರಲ್ಲಿ ನೆನೆಪಿದ್ದ ಸಾಃ ದಿಂಡಿಗಳ ಮುರುಕುಗಳು ಮುಂತಾದವುಗಳನ್ನು ಹೇಳಿಕೊಂಡು ಹರಿಕಥೆ ಮಾಡಿದೆನು. ಅವರ ಮಾತಿನ ಸರಣಿಯನ್ನು ಅನುಕರಣೆಮಾಡುತ್ತಾ ಹೇ ನರ ಹೇ, ಈ ಸಂಸಾರ ಸಾಗರ ಅಂಬೋದು ದಾಟಬೇಕಂತ ಬರೀ ಮನಸ್ಸಿದ್ದದ್ದೇ ಆದರೆ...., ಎಂತ ಏನೇನೋ ಹೇಳಿ ಕಥೆಯನ್ನು ಸಾಗಿಸುತ್ತಿದ್ದೆನು. ಸ್ನೇಹಿತರೆಲ್ಲರೂ ನನ್ನನ್ನು ಹೊಗಳಿ ಗಂಧಕೊಡುವದು, ಹೂಕೊಡುವದು, ತಿಂಡಿಕೊಡುವದು, ಗುದ್ದುವದು- ಹೀಗೆಲ್ಲ ತಮ್ಮ ಮೆಚ್ಚಿಗೆಯನ್ನು ತೋರಿಸಿದರು. ಗುಬ್ಬಿನಾಟಕದ ಮಟ್ಟುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಕೇಳಿದ್ದ ಕೌಸಲ್ಯಾ ಪರಿಣಯವೆಂಬ ಆಖ್ಯಾನವನ್ನು ನಾಟಕವಾಗಿ ಬರೆಯುವದಕ್ಕೆ ಆರಂಭಮಾಡಿದ್ದೆನು. ಹರಿಶ್ಚಂದ್ರನಾಟಕದ ಪುಸ್ತಕವೊಂದು ಮನೆಯಲ್ಲಿತ್ತು, ಅದರಲ್ಲಿರುವಂತೆ ಕಂಠಗಳನ್ನು ಪದಗಳನ್ನು ಮಾಡಿಕೊಂಡು ಹಾಡುತ್ತಿದ್ದೆನು. ನಾನು

ಬರೆದ ಕೆಲವು ಪದಗಳನ್ನು ನೋಡಿದ ನಮ್ಮ ಅಣ್ಣಂದಿರಿಗೆ ನಾನೊಬ್ಬ ಕವಿಯಾಗಬಹುದೆಂಬ ನಿರೀಕ್ಷಣೆಯಿತ್ತೆಂದು ತೋರುತ್ತದೆ. ಅವರು ತಮ್ಮ ಸ್ನೇಹಿತರಿಗೆ ನನ್ನ 'ಬಾಲಕೃತಿಗಳನ್ನು' ತೋರಿಸಿ ಸಂತೋಷ ಪಡುತ್ತಿದ್ದರು.

ತರೀಕೆರೆಯಲ್ಲಿ ನನ್ನ ಬಾಲ್ಯವಿನೋದಗಳಿಗೆ ಸಂಬಂಧಪಟ್ಟ ಇನ್ನೊಂದು ವಿಷಯವನ್ನು ತಿಳಿಸಿ ಮುಂದಕ್ಕೆ ತೆರಳುವೆನು. ಆವೂರಲ್ಲಿ ದೊಡ್ಡವರು ರಾಮಧ್ಯಾನವನ್ನು ಮಾಡುತ್ತಿದ್ದರಂತೆ. ಹುಡುಗರೂ 'ರಾಮಧ್ಯಾನವನ್ನು' ಮಾಡುತ್ತಿದ್ದರು. ಅದನ್ನು ದೊಡ್ಡವರು ಪ್ರೋತ್ಸಾಹಿಸುತ್ತಿದ್ದರು. ಶನಿವಾರದ ದಿನಗಳಲ್ಲಿ ಮನೆಮನೆಗೂ ಹೋಗಿ ಅಕ್ಕಿ, ಬೇಳೆ ಮುಂತಾದವುಗಳನ್ನು ಕೂಡಿಹಾಕಿ ಕೊನೆಗೆ ರಾಮಧ್ಯಾನದ ಸಮಾಪ್ತಿಯ ಸೂಚಕವಾಗಿ ಸಮಾರಾಧನೆಯನ್ನು ಮಾಡಿಸುತ್ತಿದ್ದೆವು. ಈ ಸಮಾರಾಧನೆಗಳು ತಕ್ಕಮಟ್ಟಿಗೆ ದೊಡ್ಡಪ್ರಮಾಣದಲ್ಲಿರುತ್ತಿದ್ದವು. ಒಮ್ಮೆ ನಡೆದ ಸಮಾರಾಧನೆಯಲ್ಲಿ ಬಡಿಸಿದ ಹುಡುಗರು ಎರಡನೆಯ ಪಂಕ್ತಿಯ ಊಟಕ್ಕೆ ಕುಳಿತುಕೊಳ್ಳಬೇಕಾಗಿದ್ದದ್ದರಿಂದ ಅವರಿಗೆಲ್ಲ ಮೊಸರವಲಕ್ಕಿ ಫಲಾರವನ್ನು ಮಾಡಿಸಿದರು. ನಾನು ಫಲಾರವನ್ನೇನೋ ಮಾಡಿದೆನಾದರೂ ಬಡಿಸುವದಕ್ಕೆ ನನಗೆ ಬರುವದಿಲ್ಲವೆಂದು ತೋರಿದ್ದರಿಂದಲೋ ಏನೋ ನನ್ನನ್ನು ಮೊದಲನೆಯ ಪಂಕ್ತಿಯ ಊಟಕ್ಕೇ ಕುಳಿತುಕೊಳ್ಳುವಂತೆ ಎಲ್ಲರೂ ಒತ್ತಾಯಪಡಿಸಿದರು. ಆವೂಟವಾದ ಮೇಲೆ ಬಡಿಸಿದ ಹುಡುಗರ ಜೊತೆಯಲ್ಲಿ ನಾನೂ ಸ್ವಲ್ಪ ಹುಳಿಯನ್ನ, ಆಂಬೊಡೆ, ಪಾಯಸ-ಇವುಗಳನ್ನು ತಿಂದು, ರಾತ್ರೆ ಮಂಗಳಾರತಿಯಾದ ಬಳಿಕ ಎಲ್ಲರೊಡನೆ ಹುಳಿಯನ್ನವನ್ನು ಉಂಡು ಮನೆಗೆ ಬಂದು ಮಲಗಿದೆನು. ಆದರೆ ರಾತ್ರೆ ಸುಮಾರು 11 ಘಂಟೆಯ ಹೊತ್ತಿಗೆ ಸ್ನೇಹಿತರಲ್ಲಿ ಒಬ್ಬಿಬ್ಬರು ಬಂದು ಕದತಟ್ಟಿದರು. ಕದವನ್ನು ತೆರೆದು ನೋಡುವಲ್ಲಿ ಉಳಿದಿದ್ದ ಹುಳಿಯನ್ನವನ್ನೂ ಆಂಬೊಡೆಯನ್ನೂ ಕಟ್ಟಿಕೊಂಡು 'ಅರಸರ ತೋಟಕ್ಕೆ' ಹೋಗಿ ಅಲ್ಲಿ ವನಭೋಜನ ಮಾಡುವದಕ್ಕೆ ಹೊರಟಿದಾರೆಂದು ತಿಳಿಯ ಬಂತು. ಅಣ್ಣನವರಿಗಾಗಲಿ, ಅತ್ತಿಗೆಯವರಿಗಾಗಲಿ ವಿಷಯವನ್ನು ತಿಳಿಸದೆ ಬಾಗಿಲು ಹಾಕಿಕೊಂಡು ಎಲ್ಲರೊಡನೆಯೂ ನಾನೂ ಹೊರಟೆನು. ರಾತ್ರೆ ಸುಮಾರು ಎರಡು ಘಂಟೆಯವರೆಗೂ ಅಲ್ಲಿ ಎಳನೀರು, ಮಜ್ಜಿಗೆ, ಸಾರು-ಮುಂತಾದವುಗಳಿಗೆ ಬೆರೆಸಿಕೊಂಡು ಹುಳಿಯನ್ನವನ್ನು ತಿಂದ ಬಳಿಕ ಬಗೆಬಗೆಯ ಹಾಡುಗಳನ್ನು ಹಾಡುತ್ತಾ ಮನೆಯ ಕಡೆಗೆ ತಿರುಗಿದೆವು. ನಾನು ಮನೆಗೆ ಬಂದು ಎಂದಿನಂತೆ ಏನೂ ತಿಳಿಯದವನ ಹಾಗೆ ಹಾಸಿಗೆಯಲ್ಲಿ ಮಲಗಿಕೊಂಡು ಬೆಳಗ್ಗೆ ಸ್ವಲ್ಪ ಹೊತ್ತಾಗಿ ಎದ್ದಿದ್ದೆನು. ಚಿಕ್ಕಹುಡುಗರಿಗೆ ವಿನೋದಗಳಲ್ಲಿರುವ ಆಸಕ್ತಿ, ಅವರ ಜೀರ್ಣಶಕ್ತಿ, ತಾವು ಮಾಡುವದು ತಪ್ಪೆ, ಸರಿಯೆ ಎಂಬುದರ ಜ್ಞಾನವಿಲ್ಲದಿರುವದು-ಇವಕ್ಕೆಲ್ಲ ಈ ಘಟನೆಯು ಒಂದು ಉತ್ತಮ ಉದಾಹರಣೆಯಾಗಿತ್ತೆಂದು ಹೇಳಬಹುದು.

## ಎರಡನೆಯ ತರಗತಿಯಲ್ಲಿ ಅಭ್ಯಾಸ :

ಚಿಕ್ಕಮಗಳೂರಿಂದ ಬಂದ ಮೇಲೆ ನನಗೆ ಪ್ಯಾಸ್ ಆಗುವದೋ ಫೇಲಾಗುವದೋ ಎಂಬ ಯೋಚನೆ ಬಹಳವಾಗಿ ಪೀಡಿಸುತ್ತಿತ್ತು. ಹಗಲುಹೊತ್ತು ಹುಡುಗರ ಜೊತೆಯಲ್ಲಿ ಆಟವಾಡುವದರಲ್ಲಿ ಅದನ್ನು ಮರೆಯುತ್ತಿದ್ದೆನು. ಮೇಷ್ಟರು ರಾಮಸ್ವಾಮಯ್ಯಂಗಾರರು ಹೇಗೆಹೇಗೋ ಲೆಕ್ಕಹಾಕಿ ವರ್ಕಿಂಗ್ (ಲೆಕ್ಕಮಾಡುವಕ್ರಮಕ್ಕೆ) ನಂಬರುಕೊಟ್ಟರೆ ಖಂಡಿತ ಪ್ಯಾಸಾಗುತ್ತೀಯೆ ಎಂದು ಹೇಳಿದ್ದರು. ಅಣ್ಣನವರು ನನಗೆ ಮುಂದಿನ ತರಗತಿಯ ವಿಚಾರವನ್ನು ತಲೆಗೆ ಹತ್ತಿಸಿ ಇಂಗ್ಲೀಷ್ ಪುಸ್ತಕಗಳನ್ನು ಓದಿಸುವದು, ಲೆಕ್ಕಮಾಡಿಸುವದು-ಮುಂತಾದ ಉಪಾಯಗಳಿಂದ ತಮಗೆ ವಿರಾಮ ಸಿಕ್ಕಿದಾಗಲೆಲ್ಲ ನನ್ನನ್ನು ಒಳ್ಳೆಯ ದಾರಿಗೆ ಹತ್ತಿಸುತ್ತಿದ್ದರು. ಆಗ ನಾಲ್ಕನೆಯ ತರಗತಿಯಿಂದ ಯೂಕ್ಲಿಡ್(ಆ ಹೆಸರಿನವನು ಬರೆದ ರೇಖಾಗಣಿತ), ಆಲ್ಜೀಬ್ರಾ(ಬೀಜಗಣಿತ) ಇವೂ ಸ್ವಲ್ಪಮಟ್ಟಿಗೆ ಹುಡುಗರಿಗೆ ಬರಬೇಕೆಂಬ ನಿಯಮವಿತ್ತು. ದೊಡ್ಡಣ್ಣನವರು ಮನೆಯಲ್ಲಿ ತಾವು ಹಿಂದೆ ಮಾಡಿದ್ದ ಲೆಕ್ಕಪುಸ್ತಕವನ್ನು ನನಗೆ ಕೊಟ್ಟು ಅದರಲ್ಲಿರುವಂತೆ ಲೆಕ್ಕವನ್ನು ಮಾಡುವಂತೆ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. 'ಟಾಡ್‌ಹಂಟರ್ಸ್ಆಲ್‌ಜೀಬ್ರಾ' ಎಂಬ ಪುಸ್ತಕದಲ್ಲಿ ನನಗೆ ತಿಳಿಯದೆ ಇದ್ದ ಮುಂದಿನ ತರಗತಿಯ ಅಂತಸ್ತಿಗೂ ಹೆಚ್ಚಾಗಿದ್ದ ಕೆಲವು ಭಾಗಗಳನ್ನೂ ಮಾಡಿಸಿದರು. ಅವರ ಜ್ಯೇಷ್ಠಪುತ್ರನಿಗೆ ಸಂಸ್ಕೃತ ಶಬ್ದವನ್ನು ಹೇಳಿಕೊಡುವಂತೆ ನನಗೆ ಕಟ್ಟು ಮಾಡಿದರು. ಆ ಹುಡುಗ ಕಂಡಕಂಡ ಕನ್ನಡಶಬ್ದಗಳಿಗೆಲ್ಲ ಸಂಸ್ಕೃತವಿಭಕ್ತಿಪ್ರತ್ಯಯಗಳನ್ನು ಹತ್ತಿಸಿ ಮಗುಃ ಮಗೂ ಮಗವಃ, ತೊಟ್ಲು ತೊಟ್ಲುನೀ ತೊಟ್ಲೂನೀ ಎಂದು ಹೇಳಿಕೊಳ್ಳುತ್ತಿದದ್ದು ನಮಗೆಲ್ಲ ಒಂದು ಬಗೆಯ ವಿನೋದವಾಗಿತ್ತು. ಹೀಗೆ ಬಗೆಬಗೆಯ ರೀತಿಗಳಿಂದ ನಾನು ಪರೀಕ್ಷೆಯ ಫಲಿತಾಂಶ ವಿಚಾರವನ್ನು ಮರೆಯುತ್ತಿದ್ದರೂ ನನಗೆ ಕನಸಿನಲ್ಲಿ ಎರಡು ಮೂರುಸಲ ಫೇಲಾಯಿತು, ಪ್ಯಾಸಾಯಿತು, ಎಂದು ಬಗೆಬಗೆಯ ಫಲಿತಾಂಶಗಳು, ಸುದ್ದಿಗಳು ಬರುತ್ತಿದ್ದವು. ರಾಮಸ್ವಾಮಯ್ಯಂಗಾರರು ಪ್ಯಾಸಾಗುತ್ತೀಯೆ ಎಂದು ಭರವಸೆಕೊಟ್ಟಿದ್ದರಷ್ಟೆ. ಕೊನೆಗೂ ಅವರ ಮಾತೇ ನಿಜವಾಯಿತು ; ಕಡೂರ ದ್ಯಾವರಭಟ್ಟರ ಪ್ರಶ್ನೆ ಸುಳ್ಳಾಯಿತು. ನನಗೆ ಫಲ ಜ್ಯೋತಿಷದಲ್ಲಿ ನಂಬಿಕೆಯೂ ಸಡಿಲಿತು; ಅಂತೂ ನನಗೆ ಕನ್ನಡ ಲೋಅರ್ ಸೆಕೆಂಡರಿ ಪರೀಕ್ಷೆ ಜಯಪ್ರದವಾಗಿ ಮುಂದಿನ ತರಗತಿಗೆ ಪ್ರಮೋಷನ್ ಆಯಿತು. ಸಂತೋಷದಿಂದ ಪರಮಾಂಗಟ್ಟೆಯ ಹನುಮಂತರಾಯನಿಗೆ ತುಪ್ಪಬಾಳೆಹಣ್ಣನ್ನು ಸಮರ್ಪಣೆ ಮಾಡಿದೆನು.

## ಮದುವೆ :

ಈಗ ನನಗೆ ಹದಿನಾಲ್ಕನೆಯ ವರ್ಷ. ಊರಿಗೆ ಹೋಗಿ ಯಾರೋ ಹೆಣ್ಣುಕೊಡುವದಾಗಿ ನಮ್ಮ ತಂದೆಯವರನ್ನು ಒಪ್ಪಿಸಿದ್ದರು. ಅದರಂತೆ ನನಗೆ ಕಡೂರಿನಲ್ಲಿ ಮದುವೆಯಾಯಿತು. ಅರಸೀಕೆರೆಯ ಮೈಲಾರಜೋಯಿಸರ ಮಗಳನ್ನು ತಂದು ಮದುವೆಯಾಗಿದೆ ಎಂಬುದೇನೂ ನನಗೆ ಆಗ ತಿಳಿಯಲಿಲ್ಲ. ಯಳ್ಳಂಬಳಸೆಗೆ ಹೋದದ್ದು ಹೊಸ ಅಂಗಿ ಹೊಲೆಯಿಸಿಕೊಂಡು ಬಂಡಿಯಮೇಲೆ ಮನೆಯವರೆಲ್ಲರೊಡನೆ ಕಡೂರಿಗೆ ಬಂದದ್ದು, ಅಲ್ಲಿ ಬಾಣಬಿರುಸುಗಳೊಡನೆ ಕುದುರೆಯ ಮೇಲೆ ಮೆರವಣಿಗೆಯಿಂದ ದೇವಸ್ಥಾನಕ್ಕೆ ಹೋಗಿ ವರಪೂಜೆ ಊರೊಳಗೆ ಮಾಡಿಸಿಕೊಂಡದ್ದು, ಮಾರನೆಯ ದಿನ ಧಾರೆಯಾದದ್ದು ಇವೆಲ್ಲ ನೆನಪಿದೆ. ಆದರೆ ಆಗ ಆ ನಡವಳಿಕೆಗಳ ಅರ್ಥವೇನೆಂಬುದು ನನಗೆ ಒಂದಿಷ್ಟೂ ತಿಳಿಯಲಿಲ್ಲ. ನಮ್ಮ ನೆಂಟರೆಲ್ಲರೂ ಸೇರಿದ್ದರು. ಮದುವೆ ಬಹಳ ವಿಜೃಂಭಣೆ-ಯಿಂದ ಆಯಿತು. ಸಭಾಪೂಜೆಯಲ್ಲಿ ನಮ್ಮ ತಂದೆಯವರು ಗದ್ದೆಮಡಿ (ದಪ್ಪವಾದ ಬಟ್ಟೆ) ರುಮಾಲನ್ನು ಧರಿಸಿಕೊಂಡು ಫಲತಾಂಬೂಲಗಳನ್ನು ಕೊಡಿಸುತ್ತಾ ನಾಲ್ಕುನಾಲ್ಕಾಣೆಯ ಬೆಳ್ಳಿಯ ನಾಣ್ಯಗಳನ್ನು ದಕ್ಷಿಣೆಗೆ ಹಾಕುತ್ತಿದ್ದದ್ದು ನೆನಪಿದೆ. ನಾನು ಇನ್ನು ಆಗಲೂ ಬಿಡುವಿನಲ್ಲಿ ಗೋಲಿ ಆಡುವದಕ್ಕೆ ಹವಣಿಸುತ್ತಿದ್ದೆನು. ಎಣ್ಣರಸಿ, ಚೆನ್ನರಸಿ - ಎಂದು ಅರಿಶಿನೆಣ್ಣೆ ಮಾಡಿಸುವದು ಮುಂತಾದದ್ದು ಏನೋ ಒಂದು ಆಟವೇ ಆಗಿತ್ತು. ಅದೆಲ್ಲ ಸಂಸಾರವನ್ನು ಹೆಗಲಿಗೇರಿಸುವ ಕಾರ್ಯ ಎಂಬುದು ನನ್ನ ಮನಸ್ಸಿನಲ್ಲಿ ಹೇಗೆ ಮಿಂಚಬೇಕು ?

## ಇಂಗ್ಲಿಷಿನ ಅಭಿರುಚಿಯ ಶ್ರೀಗಣೇಶ :

ಈಗ ನಾನು ಇಂಗ್ಲಿಷು ಐದನೆಯ ತರಗತಿಯಲ್ಲಿದ್ದೇನೆ. ಇಂಗ್ಲಿಷು, ಮ್ಯಾಥಮ್ಯಾಟಿಕ್ಸ್ (ಬೀಜಗಣಿತ/ರೇಖಾಗಣಿತ) ಇಷ್ಟುಮಾತ್ರ ಓದತಕ್ಕ ಭಾಗಗಳು. ಉಪಾಧ್ಯಾಯರು ಇಲ್ಲದಾಗ ಕನ್ನಡ ಒಂದನೆಯ ತರಗತಿಯವರೆಗೆ ಪಾಠ ಹೇಳುವದಕ್ಕೂ ನನ್ನನ್ನು ಕಳುಹಿಸಿಕೊಡುತ್ತಿದ್ದರು. ನನಗೂ ಮೇಷ್ಟರಾಗಬೇಕೆಂಬ ಆಸೆಯು ಮೊಳಕೆಯಾಯಿತು. ಹುಡುಗರನ್ನು ಆಗಾಗ್ಗೆ ಹೊಡೆಯುವದಕ್ಕೆ ಹೋದದ್ದು, ತರಗತಿಯಲ್ಲಿ ಗದ್ದಲ ಕೇಳುತ್ತಿದ್ದದ್ದು, ಪಕ್ಕದ ತರಗತಿಯ ಮೇಷ್ಟರು-ಗಳು ಬಂದು ನನಗೆ ಸಹಾಯ ಮಾಡುತ್ತಿದ್ದದ್ದು - ಹೊಸದಾಗಿ ಮೇಷ್ಟರಾಗುವವರಿಗೆ ಬಂದೊದಗಬಹುದಾದ ಇಂಥ ಕಷ್ಟಗಳ ಅನುಭವವು ನನಗೆ ಆಗಲೆ ಆಯಿತು.

ಇಂಗ್ಲಿಷು ಪಾಠದಲ್ಲಿ ಈಗ ನನಗೆ ಅಭಿರುಚಿಯಾಗುವದಕ್ಕೆ ಮೊದಲಾಯಿತು. ಮೇಕೆಮೇಷ್ಟರು ನಮಗೆ 'ಮ್ಯಾನ್ಯುಅಯೆಲ್ ಆಫ್ ಗ್ರಾಮರ್', 'ಮೆಕ್ ಮರ್ಡಿಸ್ ಸ್ಟಡೀಸ್ ಇನ್ ಇಂಗ್ಲಿಷ್', 'ವೆಂಕಟಸುಬ್ಬರಾವ್ಸ್ ಮೇಡ್ ಈಸಿ', 'ಷಫರ್ಡ್ಸ್ ಮಿಡಲ್‌ಸ್ಕೂಲ್‌ಮ್ಯಾನ್ಯುಅಲ್' - ಮುಂತಾದವುಗಳನ್ನು ಹೇಳಿಕೊಡುತ್ತಿದ್ದರು. ಇಂಗ್ಲಿಷು ಶಬ್ದಗಳಿಗೆ ಪರ್ಯಾಯಶಬ್ದಗಳು, ಕನ್ನಡದ ಅರ್ಥ, ಶಬ್ದಗಳ ಅವಯವಾರ್ಥ, ರೀಡರ್‌ನಲ್ಲಿದ್ದ ಪ್ರಶ್ನೆಗಳಿಗೆ ಉತ್ತರಗಳು-ಇವುಗಳನ್ನೆಲ್ಲ ಬರೆಯಿಸುತ್ತಿದ್ದರು. ಈಗ ನಾನು ನೋಡಿದರೆ ಆ ಅಭ್ಯಾಸಗಳಲ್ಲಿ ಕೆಲವು ಹೈಸ್ಕೂಲಿನ ಅಂತಸ್ತಿಗೂ ಹೆಚ್ಚೆಂದು ತೋರುತ್ತದೆ. ಆದರೂ ನಾನು ಕುತೂಹಲದಿಂದ ಎಲ್ಲವನ್ನು ಗಟ್ಟಿಮಾಡುತ್ತಿದ್ದೆನು. ಇಂಗ್ಲಿಷು ಪದ್ಯಗಳು ಮಾತ್ರ ನನಗೆ ಬಹಳ ತೊಂದರೆ ಕೊಡುತ್ತಿದ್ದವು. ಹತ್ತಿಪ್ಪತ್ತು ಪದ್ಯಗಳನ್ನು ಒಟ್ಟಿಗೆ ಬಾಯಿಗೆ ಗಟ್ಟಿಮಾಡುವದು ನನ್ನಿಂದ ಆಗುತ್ತಿರಲಿಲ್ಲ. ಜೊತೆಯಲ್ಲಿದ್ದ ರಾಯಸದ ವೆಂಕಟರಮಣಯ್ಯ ಮುಂತಾದವರು ಹಳಬರಾದ್ದರಿಂದ ನಿರಾಯಾಸವಾಗಿ ಒಪ್ಪಿಸಿಬಿಡುತ್ತಿದ್ದರು. ನನಗೆ ಅರ್ಥವು ತಿಳಿಯದ ಪದ್ಯಗಳನ್ನು ಮೊದಲೆ ಗಟ್ಟಿಮಾಡುವದೆಂದರೆ ಬೇಸರಿಕೆ. 'ವಿಲಿಯಮ್ ಬೆಲ್ ಜಾನ್ ಗಿಲ್ಪಿನ್' ಎಂಬ ಖಂಡಕಾವ್ಯಗಳನ್ನು ಒಪ್ಪಿಸುವಾಗ ನಾನು ಏಟುಗಳನ್ನು ತಡೆಯಲಾರದೆ ಸ್ಕೂಲಿಗೆ ತಪ್ಪಿಸಿಕೊಳ್ಳಬೇಕಾಯಿತು. ಮನೆಗೂ ಹೋಗದೆ ಅಲ್ಲಿ ಇಲ್ಲಿ ಅಡ್ಡಾಡಲಾರಂಭಿಸಿದೆ. ಆಗ ನಮ್ಮ ಅಣ್ಣಂದಿರು ಮೇಷ್ಟರಿಗೆ ಸ್ವಲ್ಪ ತಿಳಿವಳಿಕೆ ಹೇಳಿ ನನ್ನನ್ನು ಸಮಾಧಾನಪಡಿಸಬೇಕಾಗಿ ಬಂತು.

ಮ್ಯಾಥಮ್ಯಾಟಿಕ್ಸ್ (ಗಣಿತವಿದ್ಯೆ)ಯಲ್ಲಿ ನನಗೆ ಬಹಳ ಆದರ. ಯೂಕ್ಲಿಡ್ ಒಂದನೆಯ ಅಧ್ಯಾಯ (ನಲವತ್ತೆಂಟು ಪ್ರತಿಜ್ಞೆಗಳನ್ನು) ಪೂರ್ತಿಯಾಗಿ ಪರೀಕ್ಷೆಗೆ ಇಟ್ಟಿದ್ದರು. ಆಕೃತಿಗಳಿಗೆ ABC ಎಂಬ ಅಕ್ಷರಗಳನ್ನುಪಯೋಗಿಸುವ ಬದಲು XYZ ಎಂಬ ಅಕ್ಷರಗಳನ್ನು ಉಪಯೋಗಿಸಿ ಹೇಳುವ ಹುಡುಗರು ಸರಿಯೆಂಬ ವೆಂಕಟಾಚಾರರ ಕಾಲವು ಹೋಗಿತ್ತು. ಈಗ ಆಕೃತಿಗಳನ್ನು ಸರಿಯಾಗಿ ಚಿತ್ರಿಸಿ ಬರೆಯುವದು, ಪ್ರತಿಜ್ಞೆಗಳ ಕೆಳಗಿದ್ದ ಒಂದೆರಡು ಅಭ್ಯಾಸದ ಪ್ರಶ್ನೆಗಳನ್ನು ಬಿಡಿಸುವದು ಇವುಗಳನ್ನು ಹೊಸಮೇಷ್ಟರಾದ ಗುಂಡೇರಾಯರು ಕಲಿಸಿ ಕೊಟ್ಟಿದ್ದರು. ಆಲ್ಜೀಬ್ರಾ (ಬೀಜಗಣಿತ)ದಲ್ಲಿ ಅಪವರ್ತಗಳನ್ನು ಕಂಡುಹಿಡಿಯುವದೆಂದರೆ ನನಗೆ ಬಹಳ ಅಕ್ಕರೆ. ಪಕ್ಕದ ಹುಡುಗರು ಒಂದು ಲೆಕ್ಕವನ್ನು ಮಾಡುವ ಹೊತ್ತಿಗೆ ನಾನು ಎರಡುಮೂರು ಲೆಕ್ಕಗಳನ್ನು ಮಾಡಿರುತ್ತಿದ್ದೆನು. ಜೊತೆಯವರಲ್ಲಿ ಕೆಲವರು ನನ್ನ ಗಣಿತ ಪಾಂಡಿತ್ಯವನ್ನು ಕಂಡು ಬೆರಗಾಗುತ್ತಿದ್ದರು.

ಅಂತೂ ಇಂತೂ 1895ನೆಯ ವರ್ಷದ ಪರೀಕ್ಷೆಗೆ ಸಿದ್ಧನಾದೆನು. ಜೊತೆಯವರೊಡನೆ ಶಿವಮೊಗ್ಗಕ್ಕೆ ಹೋದೆನು. ನನ್ನ ಜೀವಮಾನದಲ್ಲಿ ಹೋಟಲಿನ ಮುಖವನ್ನು ಕಂಡದ್ದು ಅದೇ ಮೊದಲು. ಅದನ್ನು ಕೆಲವರು 'ಮಾವನ ಮನೆ' ಎಂದು ಕರೆಯುತ್ತಿದ್ದದ್ದು ಏಕೆಂಬುದು ನನಗೆ ಆಗ ತಿಳಿಯುತ್ತಿರಲಿಲ್ಲ. ಮಾತಿನ ಅರ್ಥವು ತಿಳಿಯುವ ವಯಸ್ಸು ಬರುವ ಹೊತ್ತಿಗೆ ಆಗಲೆ ಹೋಟಲುಗಳ ಸ್ಥಿತಿಯು ಸ್ವಲ್ಪ ಬದಲಾಯಿಸಿತ್ತಾದರೂ ಈಗಿನ ಸಾಮಾನ್ಯ ಹೋಟಲುಗಳಿಗೆ (ಹೋಲಿಸಿದರೆ) ಆಗ್ಗೆ ಹೋಟಲುಗಳು ಹೊಲಸಿನ ಬೀಡುಗಳಾಗಿರಲಿಲ್ಲ. ನಾವು ಇಳಿದುಕೊಂಡಿದ್ದ ಹೋಟೆಲು ಬಹಳ ಚೊಕ್ಕಟವಾಗಿತ್ತು. ಬೆಳಗ್ಗೆ ನಮಗೆಲ್ಲರಿಗೂ ಒಂದು ಅಥವಾ ಎರಡು ದೋಸೆಗಳನ್ನು ಮಾಡಿಕೊಡುತ್ತಿದ್ದರು.ಆಗ ದೋಸೆಗಳು ಬಲು ಅಗ್ಗ. ಮೂರು ಕಾಸಿಗೆ ಒಂದು ದೊಡ್ಡ ದೋಸೆ ; ಅದರ ಮೇಲೆ ಹಾಕುವ ಬೆಣ್ಣೆಯ ತುಣುಕಿಗೂ ಚಟ್ಣಿಗೂ ಕಾಸುಕೊಡಬೇಕಾದದ್ದೇ ಇಲ್ಲ. ನಾವುಗಳು ಲಾಯರ್ ಪರೀಕ್ಷೆಗೆ ಓದುತ್ತಿದ್ದ ಭಟ್ಟರ ಮನೆಯಲ್ಲಿ ಇಳಿದುಕೊಂಡಿದ್ದೆವು.ಎಲ್ಲರೂ ಹುರುಪಿನಿಂದ ಓದುತ್ತಿದ್ದೆವು. ಶಿವಮೊಗ್ಗದ ಕಾಲೇಜಿನಲ್ಲಿ ಆಗ ಎಫ್.ಎ. ಪರೀಕ್ಷೆಗೆ ಹುಡುಗರನ್ನು ತಯಾರು ಮಾಡುತ್ತಿದ್ದ ನವಸೇನಾ ಕಾಲೇಜೆಂಬ ಶಬ್ದಕ್ಕೆ ಅರ್ಥವು ತಿಳಿಯದು. ಪರೀಕ್ಷೆಯ ಕಾಲಕ್ಕೆ ಟ್ರಂಕ್ ಫೋನ್ ಎಂದು ಹಾರಾಡುತ್ತಾ ವೇಗವಾಗಿ ಇಂಗ್ಲಿಷು ಮಾತನಾಡುತ್ತಿದ್ದ ಕಿಂಗ್ ಸಾಹೇಬನು ನನಗೆ ಒಬ್ಬ ಗಂಧರ್ವನಾಗಿ ತೋರುತ್ತಿದ್ದನು. ಪರೀಕ್ಷೆಯಲ್ಲಿ ತಕ್ಕಮಟ್ಟಿಗೆ ಸರಿಯಾಗಿಯೇ ಉತ್ತರಗಳನ್ನು ಬರೆದೆನೆಂದು ತೋರುತ್ತದೆ. ಅದು ಮುಗಿದಮೇಲೆ ಸಹಪಾಠಿಗಳೊಡನೆ ಹೋಟಲಿನಲ್ಲಿ ನೀರುಳ್ಳಿಯ ಹುಳಿಮಾಡಿಸಿಕೊಂಡು ಬಲು ಸಂಭ್ರಮದಿಂದ ಉಂಡೆವು. ಆಗ ಶಿವಮೊಗ್ಗದ ತುಂಗಾದರ್ಶನವು ನನಗೆ ಆದಂತೆ ನೆನಪಿಲ್ಲ ; ಊರು ಬಹುದೊಡ್ಡದೆಂಬ ಭಾವನೆ ಇತ್ತು. ಪರೀಕ್ಷೆಯನ್ನು ಮುಗಿಸಿಕೊಂಡು ತರೀಕೆರೆಗೆ ಬಂದು ಸೇರಿದೆವು. ಆಗ ಇನ್ನೂ ತರೀಕೆರೆಗೆ ರೈಲು ಬಂದಿರಲಿಲ್ಲ. ನಾವು ಗಾಡಿಯ ಮೇಲೆಯೇ ಬಂದೆವೆಂದು ತೋರುತ್ತದೆ.

ಪರೀಕ್ಷೆಯಲ್ಲಿ ಪ್ಯಾಸ್ ಆಯಿತು. ಸ್ಕೂಲಿನಲ್ಲಿ ಎಲ್ಲರಿಗೂ ಸಂತೋಷ. ನಮ್ಮ ಮನೆಯವರ ಆನಂದಕ್ಕೆ ಪಾರವೇ ಇರಲಿಲ್ಲ. ಈ ವರ್ಷ ನಮ್ಮ ಸ್ಕೂಲಿನಲ್ಲಿ ಒಂದು ಪ್ರೈಸ್ ಡಿಸ್ಟ್ರಿಬ್ಯೂಷನ್ (ಪಾರಿತೋಷಿಕ ದಾನ) ಸಮಾರಂಭವಾಯಿತು. ನನಗೆ ಇಂಗ್ಲೀಷು ನಾಲ್ಕನೆಯ ತರಗತಿಯಲ್ಲಿ ಮೊದಲನೆಯವನಾಗಿ ಪ್ಯಾಸ್ ಆದದ್ದಕ್ಕೆ ಒಂದು ಇಂಗ್ಲೀಷಿನ 'ಎಲಿಮೆಂಟರಿ ಲೆಸನ್ ಇನ್ ಹೆಲ್ತ್' ಎಂಬ ಆರೋಗ್ಯಶಾಸ್ತ್ರದ ಪುಸ್ತಕವನ್ನು ಬಹುಮಾನವಾಗಿ ಕೊಟ್ಟರು. ಸಂಸ್ಕೃತ ಕಲಿಯುವದನ್ನು ಬಿಟ್ಟಿದ್ದರೂ ರಾಮಸ್ವಾಮಯ್ಯಂಗಾರರು ನನ್ನಿಂದ ಪಾರಿತೋಷಿಕೋತ್ಸವ ಕಾಲಕ್ಕೆ 'ಅಥ

ಕದಾಚಿದಖಿಲಹರಿರನ್ತರನಿರಂತರವಲನೇನಮಲಯಪವಮಾನಕಂಪಿತ-ಚಂಪಕಸಂಕುಚಿತಸೌರಭಸಂಪದನುಕಂಪಿತನಿಲಿಂಪಪಥಾಃ' ಎಂದು ಮುಂತಾಗಿ ಉದ್ದುದ್ದನೆಯ ಸಮಾಸಪದಗಳು ಕಿಕ್ಕಿರಿದಿದ್ದ ಒಂದು ಗದ್ಯವನ್ನು ಗಟ್ಟಿಮಾಡಿಸಿ ಹೇಳಿಸಿದರು. ಗದ್ಯದ ಅರ್ಥವು ಒಂದಿಷ್ಟೂ ತಿಳಿಯದಿದ್ದರೂ ರಾಗವಾಗಿ ಅದನ್ನು ಹೇಳಿ "ಕಿಂ ಶುಕಸ್ಯ ವದನೇ ರುಚಿರತ್ವಂ ಕಿಂ ಶುಕಸ್ಯ ಹೃದಯೇಽಪಿ ವಶಿತ್ವಮ್ । 'ಕಿಂ ಶುಕಸ್ಯ ಕುಸುಮೇಷು ನದನ್ತೀ ಶಂಸತಿ ಸ್ಮ ಮಧುಪಾಳಿರತೀವ !" ಎಂಬ ಪದ್ಯವನ್ನು ಮುಗಿಸುತ್ತಲೂ ಎಲ್ಲರೂ ಕೈ ಚಪ್ಪಾಳೆಯನ್ನು ಹೊಡೆದರು. ನಾನೂ ಕಟ್ಟು ಬೆವರಿನ ಮೈಯಿಂದ ಕುಳಿತುಕೊಂಡೆನು. ಆಗ ಈ ಮಹಾಕಾರ್ಯಕ್ಕೆ ತೆಲುಗು ಕನ್ನಡ ಚಂಪೂಭಾಗವತದ ಪುಸ್ತಕವೊಂದು ಪಾರಿತೋಷಿಕವಾಗಿ ಬಂತು. ಆ ಪುಸ್ತಕದಲ್ಲಿ ಏನಿದೆ ಎಂಬುದು ನನಗೆ ಆಗ ತಿಳಿಯದೆ ಇದ್ದರೂ ಅದರಿಂದ ನನಗೆ ಬಹಳ ಪ್ರಯೋಜನವಾಯಿತೆಂಬುದು ವಾಚಕರಿಗೆ ಮುಂದೆ ಮನವರಿಕೆಯಾಗುವದು.

---

# 8. ವಿದ್ಯಾಭ್ಯಾಸ-ಹಾಸನ (1896)

## ಯಳ್ಳಂಬಳಸೆಯಿಂದ ಇಂಗ್ಲೀಷು ಪುಸ್ತಕಗಳನ್ನು ತಂದದ್ದು:

ಈಗ ದೊಡ್ಡಣ್ಣನವರು ಬಹಳ ಸಂತೋಷದಿಂದ ನನ್ನನ್ನು ಯಳ್ಳಂಬಳಸೆಗೆ ಕಳುಹಿಸಿಕೊಟ್ಟರು. ಮುಂದೆ ಹೈಸ್ಕೂಲಿನಲ್ಲಿ ಓದಬೇಕಾಗುತ್ತದೆಯೆಂದು ತಾವು ಓದಿದ ಕೆಲವು ಪುಸ್ತಕಗಳನ್ನು ಯಳ್ಳಂಬಳಸೆಯಲ್ಲಿ ಮನೆಯ ಅಟ್ಟದ ಮೇಲೆ ಇಟ್ಟಿದೆಯೆಂದೂ, ಅವುಗಳನ್ನು ತೆಗೆದುಕೊಂಡು ಬಂದರೆ ತಾವೇ ಹೆಚ್ಚಿನ ಪಾಠವನ್ನು ಹೇಳಿಕೊಡುವದಾಗಿಯೂ ಹೇಳಿದರು. ಬಹಳ ಹಿಗ್ಗಿನಿಂದ ಊರಿಗೆ ಹೋದೆನು. ಅಲ್ಲಿ ಕಂಡಕಂಡವರಿಗೆಲ್ಲ ನನ್ನ ಕವಿತಾ ಸಾಮರ್ಥ್ಯವನ್ನು ಕಥೆ ಹೇಳುವ ಚಾತುರಿಯನ್ನು ಪ್ರದರ್ಶಿಸುವದು ನನಗೆ ನಿತ್ಯಾಹ್ನಿಕವಾಯಿತು. ಮಗನು ಇಂಗ್ಲೀಷ್ ಪ್ಯಾಸ್ ಮಾಡಿಕೊಂಡು ಬಂದಿದಾನೆಂದು ಅಕ್ಕಯ್ಯ (ನಮ್ಮ ತಾಯಿಯವರು) ಬಹಳ ಸಂತೋಷಪಟ್ಟರು. ಮೊದಲಿನಿಂದಲೂ ಅವರು ನನ್ನನ್ನು ಹೆಚ್ಚು ಪ್ರೀತಿಯಿಂದಲೇ ಸಾಕುತ್ತಿದ್ದರು; ಈಗಲಂತೂ ಬಹಳ ಉಪಚಾರಗಳಿಂದ ಆದರಿಸಿದರು. ನಾನು ಊರನ್ನೆಲ್ಲ ಅಲೆದು ಹಳೆಯ ಸ್ನೇಹಿತರುಗಳ ಪರಿಚಯವನ್ನು ಉಜ್ಜೀವನಗೊಳಿಸಿ-ಕೊಳ್ಳುವದು, ಕುಂಬಾರನ ಮನೆಯಲ್ಲಿ ತಿಗರಿಯ ಮೇಲೆ ಮೆಲ್ಲಮೆಲ್ಲಗೆ ತಲೆದೋರುವ ಗಡಿಗೆಗಳನ್ನು ನೋಡುವದು,ಕಮ್ಮಾರರ ಮನೆಯಲ್ಲಿ ಕಾದ ಕಬ್ಬಿಣವನ್ನು ಬಡಿಯುವಾಗ ಕಿಟ್ಟವು ಹಾರುವದನ್ನು ನೋಡುವದು, ಬೆಸ್ತರ ಮನೆಯ ಮುಂದೆ ಮೀನು ಬುಟ್ಟಿಗಳಿಂದ ಮೀನು ತೆಗೆಯುವದನ್ನು ಪರೀಕ್ಷಿಸುವದು, ಅಗಸರು ಕತ್ತೆಗಳ ಮೇಲೆ ದೊಡ್ಡ ದೊಡ್ಡ ಬಟ್ಟೆಯ ಮೂಟೆಗಳನ್ನು ಹೇರುವದನ್ನು ನೋಡುವದು, ಪರಮಾಂಗಟ್ಟಿಯ ಹನುಮಂತರಾಯನ ಅಂಕಿತವುಳ್ಳ ಪದಗಳನ್ನು ಬರೆಯುವದು - ಹೀಗೆ ಕೆಲವು ದಿನ ಕಾಲವನ್ನು ಕಳೆದೆನು. ಕೊನೆಗೆ ಅಣ್ಣನವರು ಹೇಳಿದ್ದ ಪುಸ್ತಕಗಳಲ್ಲಿ ಕೆಲವನ್ನು ತೆಗೆದುಕೊಂಡು ಗಂಟುಕಟ್ಟಿಕೊಂಡೆನು. ಒಂದು ದಿನ ತಾಯಿಯವರು ಮಾಡಿಕೊಟ್ಟ ತಿಂಡಿಯ ಪದಾರ್ಥಗಳೊಡನೆ ಸಂತೆಯ ಗಾಡಿಯಮೇಲೆ ತರೀಕೆರೆಗೆ ಹೊರಟೆನು. ಗಂಟಿನಲ್ಲಿದ್ದ ಪುಸ್ತಕಗಳನ್ನು ಅಣ್ಣನವರಿಂದ ಹೇಳಿಸಿಕೊಳ್ಳುವೆನೆಂದು ಮನಸ್ಸಿನಲ್ಲಿಯೇ ಮಂಡಿಗೆ ಮಾಡಿಕೊಳ್ಳುತ್ತಾ ಗಾಡಿಯಲ್ಲಿ ನಿದ್ರಿಸಿದೆನು. ಬೀರೂರು ದಾಟುವ ಹೊತ್ತಿಗೆ ಎಚ್ಚರವಾಗಿ ನೋಡುತ್ತೇನಿ, ಪುಸ್ತಕದ ಗಂಟು ಎಲ್ಲಿಯೊ ಬಿದ್ದು ಹೋಗಿದೆ ! ಆಗ ನನಗಾದ ದುಃಖವನ್ನು ವರ್ಣಿಸಲಾರೆ. ಅಣ್ಣನವರು ನನ್ನ ಅಜಾಗರೂಕತೆಗೆ ಏನೆನ್ನುವರೋ ಎಂಬ ಅಂಜಿಕೆಯಿಂದ ಮಿಕ್ಕ ದಾರಿಯಲ್ಲೆಲ್ಲ ಅದೇ ಯೋಚನೆಯಲ್ಲಿದ್ದೆನು. ತರೀಕೆರೆಗೆ ಬಂದಾಗ ನನ್ನ ಪೆಚ್ಚು ಮುಖವನ್ನು ಕಂಡು ನಡೆದ ಸಂಗತಿಯನ್ನು ತಿಳಿದುಕೊಂಡ ಅಣ್ಣನವರು ನನಗೆ

ಸಮಾಧಾನ ಹೇಳಿ ಪುಸ್ತಕಗಳ ವಿವರವನ್ನು ಬರೆದು ಅದನ್ನು ಪತ್ತೆಮಾಡಿಕೊಟ್ಟವರಿಗೆ ಇನಾಮು ಕೊಡುವದಾಗಿ ಯಾವದೋ ಪತ್ರಿಕೆಗೆ ಒಂದು ಪ್ರಕಟಣೆಯನ್ನು ಕಳುಹಿಸಿದರು. ಪುಸ್ತಕವೇನೂ ಪತ್ತೆಯಾಗಲಿಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

## ಹಾಸನಕ್ಕೆ ಪ್ರಯಾಣ:

ಇಷ್ಟರಲ್ಲಿ ನಮ್ಮ ಗುಂಡಪ್ಪಭಾವನವರು ಹಾಸನದಲ್ಲಿ ಹೈಸ್ಕೂಲಿಗೆ ಸೇರಿಸುವದಾಗಿಯೂ ಕೂಡಲೇ ಬರಬೇಕಾಗಿಯೂ ಹೇಳಿಕಳುಹಿಸಿದರು. ಅಕ್ಕಯ್ಯ ನನಗೆ ತಿಳಿವಳಿಕೆ ಹೇಳಿ ಅರಸೀಕೆರೆಯ ಮಾರ್ಗವಾಗಿ ಹೋಗುವಂತೆ ಕಳುಹಿಸಿಕೊಟ್ಟರು. ನಾನು ತರೀಕೆರೆಯಿಂದ ಯಳ್ಳಂಬಳಸೆಗೆ ಮತ್ತೆ ಹೋಗಿ ಸಂತೆಯ ಗಾಡಿಯ ಮೇಲೆಯೇ ಅರಸೀಕೆರೆಗೆ ಹೋಗಿರಬೇಕೆಂದು ತೋರುತ್ತದೆ. ಏಕೆಂದರೆ ಆಗ ನಾನು ರೈಲಿನಲ್ಲಿ ಕುಳಿತುಕೊಂಡ ನೆನಪಿಲ್ಲ. ಮಾವನವರ ಮನೆಯನ್ನು ಸೇರಿದ ಮೇಲೆ ಅಲ್ಲಿ ಎಂಟು ಹತ್ತುದಿನಗಳವರೆಗೆ ಇದ್ದೆನು. ಮಾವನವರು ಊರಿನ ಜೋಯಿಸರು. ಅವರಿಗೆ ಇಂಗ್ಲೀಷು ವಿದ್ಯಾಭ್ಯಾಸದ ವಿವರವು ನಮ್ಮ ತಂದೆಯವರಿಗೆ ತಿಳಿದಷ್ಟೇ ತಿಳಿದಿತ್ತು; ಎಂದರೆ ಏನೂ ತಿಳಿದಿರಲಿಲ್ಲ. ತಮ್ಮ ಮನೆಯಲ್ಲಿ ವಾಸವಾಗಿದ್ದ ಒಬ್ಬ ಅಯ್ಯಂಗಾರ ಯೋಗೀಶ್ವರರ ಬಳಿಯಲ್ಲಿ ಇಂಗ್ಲೀಷು ಓದಬಹುದೆಂದು ಸಲಹೆಯನ್ನು ಕೊಟ್ಟರು. ಯೋಗೀಶ್ವರರೇನೋ ಒಳ್ಳೆಯವರು. ಹಿಮಾಲಯದ ತಪ್ಪಲಲ್ಲಿರುವ ಮಹಾತ್ಮರ ಚರಿತ್ರೆಗಳನ್ನೂ, ಯೋಗಾಭ್ಯಾಸದ ಮಹತ್ವನ್ನೂ ಕುರಿತು ಆಗಾಗ್ಗೆ ಅವರು ಪ್ರಸ್ತಾಪಿಸುತ್ತಿದ್ದರು. ಅವರು ಬೇವಿನ ಸೊಪ್ಪಿನ ಕಲ್ಪ (ನಿಯಮ)ವನ್ನು ಇಟ್ಟುಕೊಂಡಿದಾರೆಂದೂ ಬಹಳ ಮಹತ್ತುಳ್ಳವರೆಂದೂ ಜನರು ಅಂದು ಕೊಳ್ಳುತ್ತಿದ್ದರು. ಯೋಗವೆಂಬ ರಹಸ್ಯ ಸಾಧನದ ವಿಚಾರವು ನನ್ನರಿವಿಗೆ ಬಿದ್ದದ್ದು ಇದೇ ಮೊದಲು. ಆದ್ದರಿಂದ ಅದರಲ್ಲಿ ಸ್ವಲ್ಪ ಕುತೂಹಲವೇನೋ ಉಂಟಾಯಿತು. ಆದರೆ ನನಗೆ ಮಾವನವರ ಮನೆ ಇನ್ನೂ ಹೊಸದೇ ಆಗಿದ್ದದ್ದರಿಂದಲೂ ಗುಂಡಪ್ಪ ಭಾವನವರ ಸವಿನೆನಪು ಚೆನ್ನಾಗಿದ್ದದ್ದರಿಂದಲೂ ಹಾಸನಕ್ಕೇ ಹೋಗುತ್ತೇನೆಂದು ಹೇಳಿದೆನು. ಹಾಸನದಲ್ಲಿ ಖರ್ಚಿಗೆ ದುಡ್ಡು ಬೇಕಾದರೆ ಬರೆಯಬೇಕೆಂದು ಮಾವನವರು ಹೇಳಿದರು. ಆದರೆ ಬೀಗರಿಂದ ಯಾವದಾದರೂ ಸಹಾಯವನ್ನು ಪಡೆದುಕೊಳ್ಳುವುದು ಹೇಯವೆಂದು ಭಾವಿಸಿದ್ದ ನಮ್ಮ ತಂದೆಯವರು ಮಾವನವರಿಂದ ಯಾವ ಹಣವನ್ನೂ ತೆಗೆದುಕೊಳ್ಳದಂತೆ ಮೊದಲೇ ಕಟ್ಟಪ್ಪಣೆ ಮಾಡಿದ್ದರಾದ್ದರಿಂದ ನಾನು 'ಸಮಯ ಬಂದರೆ ಬರೆಯುತ್ತೇನೆ' ಎಂದು ಇಷ್ಟೇ ಹೇಳಿ ಸಂತೆಯ ಗಾಡಿಯ ಮೇಲೆ ಹಾಸನಕ್ಕೆ ಹೊರಟೆನು. ಆಗ ಹಾಸನಕ್ಕೆ ರೈಲು ಬಂದಿರಲಿಲ್ಲ. ನನಗೆ ಸಂತೆಯ ಗಾಡಿಯ ಮೇಲೆ ಪ್ರಯಾಣಮಾಡುವದೇನೂ ಬಹಳ

ರೂಢಿ. ಗಾಡಿಯೊಳಗೆ ಮೂಟೆಗಳ ಮೇಲೆ ಹುಲ್ಲುಹಾಕಿ ಮಲಗಿಕೊಳ್ಳುವಂತೆ ಗಾಡಿಯವರು ಹೇಳಿದರೆ ತೊಟ್ಟಿಲಲ್ಲಿ ಮಲಗಿಕೊಂಡ ಮಗುವಿನಂತೆ ಬಂಡಿಯ ಚಕ್ರದ ಕೀರಲು ಧ್ವನಿಯ ಜೋಗುಳಿಗೆ ನಿದ್ರೆಹೋಗುತ್ತಿದ್ದೆನು. ಈ ಸಲ ಗಾಡಿಯವನು ನಮ್ಮ ಮಾವನವರ ಚರಿತ್ರೆಯನ್ನು ನನಗೆ ಸ್ವಲ್ಪ ಪರಿಚಯಮಾಡಿಕೊಟ್ಟನು. ಮಾವನವರಿಗೆ ಈಗ ಇದ್ದವರು ಎರಡನೆಯ ಹೆಂಡತಿಯೆಂದೂ, ಮೊದಲನೆಯ ಹೆಂಡತಿಯ ಮಗಳು ಮೂಡಗೆರೆಯಲ್ಲಿರುವಳೆಂದೂ ಅವರು ವರ್ಷಕ್ಕೊಮ್ಮೆ ತಾವೇ ಬರೆದ ಪಂಚಾಂಗವನ್ನು ಜನರಿಗೆ ಪ್ರವಚನಮಾಡಿಸುವದಕ್ಕಾಗಿ ಆವೂರಿಗೆ ಹೋಗಿ ಬರುತ್ತಿರುವರೆಂದೂ ಕೇಳಿ ನನಗೆ ಆಶ್ಚರ್ಯವಾಯಿತು.

## ಹಾಸನದಲ್ಲಿ ವಿದ್ಯಾಭ್ಯಾಸ :

ಗುಂಡಪ್ಪ ಭಾವನವರು ಊರದೇವಸ್ಥಾನದ ಅಂಗಳದಲ್ಲಿದ್ದ ಒಂದು ಖಾಸಗಿ ಮನೆಯಲ್ಲಿ ನನಗೆ ಊಟಕ್ಕೆ ಏರ್ಪಾಡುಮಾಡಿಕೊಟ್ಟರು. ಕೈಯಲ್ಲಿ ಒಂದೆರಡು ರೂಪಾಯಿಗಳನ್ನು ಕೊಟ್ಟರು. ಆದರೆ ಹೊಸ ಸ್ಕೂಲಿಗೆ ಸೇರಿದ ಬಳಿಕ ಬೇಕಾದ ಪಠ್ಯ ಪುಸ್ತಕಗಳಿಗಾಗಲಿ ಊಟದ ವೆಚ್ಚಕ್ಕಾಗಲಿ ನನ್ನ ಬಳಿಯಲ್ಲಿ ಹಣವಿರಲಿಲ್ಲ. ಮಾವನವರಿಗೆ ಕಾಗದ ಬರೆಯೋಣವೆ ? ಎಂದು ಯೋಚಿಸಿ ಯೋಚಿಸಿ ಒಂದು ಕಾಗದವನ್ನು ಬರೆದೆ; ಅವರ ಉತ್ತರವೇ ಇಲ್ಲ, ಊಟದ ಮನೆಯಲ್ಲಿ ನನಗೆ ಅನಾದರ ಹೆಚ್ಚಿತು. ಹೀಗಾಗಿ ವಿದ್ಯಾಭ್ಯಾಸವು ಸರಿಯಾಗಿ ಸಾಗಲಿಲ್ಲ.

ಹೈಸ್ಕೂಲಿನಲ್ಲಿ ಬರಿಗೈನಲ್ಲಿ ನನಗೆ ಎಲ್ಲಾ ಉಪಾಧ್ಯಾಯರ ಛೀ ಪೆಟ್ಟೇ ಬೀಳುತ್ತಿತ್ತು. ಕ್ಸೆನ್ (ಕ್ಲೆಸ್) ಸಾಹೇಬರು ಇಂಗ್ಲೀಷು ವಾಕ್ಯರಚನೆ ಹೇಳಿಕೊಡುತ್ತಿದ್ದರು. ನಾನು ಬರೆದ್ದದ್ದನ್ನು ಅವರು ತಿದ್ದುವಾಗಲೆಲ್ಲ ಜೇಬಿನೊಳಗೆ ಕೈಯಿಟ್ಟುಕೊಳ್ಳುತ್ತಿದ್ದೆನು ; ಅವರು ಹಾಗೆ ಇಟ್ಟುಕೊಳ್ಳಬಾರದೆಂಬುದನ್ನು ಎಚ್ಚರಿಕೆ ಕೊಟ್ಟು ಮತ್ತೆ ಮತ್ತೆ ತಿಳಿಸುತ್ತಿದ್ದರು. ವೆಂಕಟಾಚಾರರೆಂಬ ಉಪಾಧ್ಯಾಯರು ಇಂಗ್ಲೀಷು ಹಿಸ್ಟರಿ, ಇಂಡಿಯನ್ ಹಿಸ್ಟರಿ - ಮುಂತಾದ ಪಾಠಗಳನ್ನು ಒಂದೇ ಒಂದು ಕನ್ನಡ ಮಾತನ್ನು ಕೂಡ ಆಡದೆ ಹೇಳುತ್ತಿದ್ದದ್ದರಿಂದ ಪುಸ್ತಕವಿಲ್ಲದೆ ಶ್ರವಣಪರಾಯಣನಾಗಿದ್ದ ನನಗೆ ಅವರ ಪಾಠದಲ್ಲಿ ಸವಿಯೇ ಕಾಣಿಸುತ್ತಿರಲಿಲ್ಲ. ಗಣಿತವನ್ನೂ ಭಾಷಾಂತರವನ್ನೂ ತಿರುಮಲಾಚಾರ್ ಎಂಬುವರು ಹೇಳಿಕೊಡುತ್ತಿದ್ದರು ; ಅವರ ಪಾಠದಲ್ಲಿ ನನಗೆ ಸ್ವಲ್ಪ ಮನ್ನಣೆ ಇತ್ತು, ಅಲ್ಲಿದ್ದ ಮಿಕ್ಕ ಉಪಾಧ್ಯಾಯರುಗಳ ನೆನಪು ನನಗೆ ಉಳಿಯಲಿಲ್ಲ.

ಒಟ್ಟಿನಲ್ಲಿ ಊಟಕ್ಕಾಗಲಿ ಪಾಠಕ್ಕಾಗಲಿ ಹಾಸನವು ನನಗೆ ಅನುಕೂಲಿಸಲಿಲ್ಲ. ಆವೂರಿನಲ್ಲಿ ಕೆರೆಯಲ್ಲಿ ಸ್ನಾನಮಾಡಿಕೊಂಡು ಬರುತ್ತಿದ್ದ ಹಾಗೆ ಸ್ವಲ್ಪ ಮಸಕು ಮಸಕು ನೆನಪಿದೆ. ಒಂದು ದಿನ ಶಿವರಾತ್ರೆ ಉಪವಾಸವೇ ಇದ್ದು ಸಾಯಂಕಾಲಕ್ಕೆ ದೇವರಿಗೆ

ಮಂಗಳಾರತಿ ಮಾಡಿಸಿ ತೆಂಗಿನಕಾಯಿಯನ್ನು ಮಾತ್ರ ತಿಂದು ಏನೂ ಊಟವಿಲ್ಲದೆ ಇದ್ದುಬಿಟ್ಟೆನು. ಆದರಿಂದ ಸ್ವಲ್ಪ ಪಿತ್ತವು ಉದ್ರೇಕವಾಗಿರಬಹುದು. ಅಂತೂ ಸುಖಾಸನವು ಅಳವಡದೆ ನಾನು ಚಳಿ ಜ್ವರದಿಂದ ನಡುಗುತ್ತಿದ್ದು ಕೊನೆಗೆ ಒಂದು ದಿನ ಹೇಳದೆ ಕೇಳದೆ ಅರಸೀಕೆರೆಗೆ ಬಂದು ಬಿಟ್ಟೆನು. ಮಾವನವರು ಒಂದು ಹುಂಡಿಯನ್ನು ಯಾರೋ ವರ್ತಕರಿಗೆ ಕಳುಹಿಸಿ ಕೊಟ್ಟಿದ್ದೇನೆಂದು ನನಗೆ ಕಾಗದ ಬರೆದಿದ್ದರಂತೆ; ಅದು ನನಗೆ ತಲುಪದೆ ನನ್ನ ಜೊತೆಯಲ್ಲಿಯೇ ವಾಪಸು ಬಂತು !

## ಅರಸೀಕೆರೆ, ತರೀಕೆರೆ, ಯಳ್ಳಂಬಳಸೆ:

ಮುಂದೆ ನನಗೆ ಮಾವನವರ ಮನೆಯಲ್ಲಿ ಗಂಜಿಯ ಔತಣವೂ ಕಟುಕರೋಹಿಣಿ, ಕಾಳುಜೀರಿಗೆ ಮುಂತಾದವುಗಳ ಕಷಾಯದ ಕಾಫಿಯೂ ನಿತ್ಯಗಟ್ಟಲೆಯ ಉಪಚಾರಗಳಾದವು. ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದ ಪಂಡಿತರು ಈ ಔಷಧಿ ಪಥ್ಯಗಳಿಂದಲೇ ನನಗೆ ಒಳ್ಳೆಯದಾಗುವದೆಂದು ಹೇಳಿದ್ದರಿಂದ ಅತ್ತೆಯವರು ಈ ಬಗೆಯ ಆಹಾರಾದಿಗಳನ್ನೇ ನಿತ್ಯಸೇವನೆಗೆ ಸಿದ್ಧಗೊಳಿಸುತ್ತಿದ್ದರು. ನನ್ನ ಶರೀರದಲ್ಲಿ ಆಗಾಗ್ಗೆ ರೋಗರುಜಿನಗಳು ತೋರಿಕೊಳ್ಳುತ್ತಲೆ ಇದ್ದವೆಂದು ಹಿಂದೊಂದು ಸಲ ಹೇಳಿರುತ್ತೇನೆ. ಈ ಸಲ ಬದುಕಿದ್ದೇ ಕಷ್ಟವೆಂದು ತೋರುವಷ್ಟು ಬಿರುಸಾಗಿ ಕಾಯಿಲೆಯಾಯಿತು. ಬಿಸಿನೀರು, ಗಂಜಿ - ಇವುಗಳನ್ನು ಬಲಪಡಿಸಿದಷ್ಟೂ ನನಗೆ ಬೇನೆ ಹೆಚ್ಚಾಗುತ್ತಿತ್ತು. ಕೆಲವು ತಿಂಗಳುಗಳು ಹೀಗೆ ಕಳೆದಮೇಲೆ ರೋಗವು ಒಂದೆರಡು ದಿನ ವಿಶ್ರಾಂತಿಯನ್ನು ತೆಗೆದುಕೊಂಡಿತು. ಮನೆಯೊಳಗೆ ಇನ್ನೂ ಒಬ್ಬಿಬ್ಬರು ಕಾಯಿಲೆಯಿದ್ದಿದ್ದ ಹಾಗೆ ತೋರುತ್ತದೆ. ಆದ್ದರಿಂದ ಮಾವನವರು ಒಂದು ಶುಭಮುಹೂರ್ತದಲ್ಲಿ ನನ್ನನ್ನು ರೈಲುಮೇಲೆ ಕುಳ್ಳಿರಿಸಿ ಬೀರೂರಿನಿಂದ ಜಟಕದಮೇಲೆ ಹೋಗುವದಕ್ಕೆ ದುಡ್ಡುಕೊಟ್ಟು ಕಳುಹಿಸಿದರು. ನಾನು ಬೀರೂರಿಗೆ ಬರುವ ಹೊತ್ತಿಗೆ ಮಳೆ ಬಂದು ಛಳಿಜ್ವರವು ಮರುಕಳಿಸಿತು. ಊರೊಳಗೆ ಒಂದು ಹೋಟಲಿನಲ್ಲಿ ಹಾಲನ್ನವನ್ನುಂಡು ಜಟಕಾದವರು ತೋರಿಸಿದ ಒಂದು ಮನೆಯಲ್ಲಿ ಮಲಗಿಕೊಂಡೆನು. ರಾತ್ರೆ ಸರಿಹೊತ್ತಿನಲ್ಲಿ 'ಏಳಿ, ಸಾರ್ !' ಎಂದು ಗಾಡಿಯವನು ಕೂಗಿದನು. ನಾನು ಕತ್ತಲೆಯಲ್ಲಿ ಎದ್ದು ಅಂಗಿಯನ್ನು ತೊಟ್ಟುಕೊಳ್ಳುತ್ತಿರುವಲ್ಲಿ ಜೇಬಿನ ನಾಣ್ಯಗಳು ಒಂದೊಂದಾಗಿ ಉದುರಿದವು. ಅಲ್ಲಿ ದೀಪವಿಲ್ಲದ್ದರಿಂದಲೂ ಮತ್ತೊಬ್ಬರ ಪರಿಚಯವಿಲ್ಲದ್ದರಿಂದಲೂ ಕೈಗೆ ಸಿಕ್ಕಿದ್ದಷ್ಟು ದುಡ್ಡನ್ನು ಎತ್ತಿಕೊಂಡು ಗಾಡಿಯಲ್ಲಿ ಕುಳಿತೆನು. ಬೆಳಿಗ್ಗೆ ತರೀಕೆರೆಗೆ ಸ್ವಲ್ಪ ದೂರವಿರುವಾಗಲೆ ಜಟಕಾದವನು ನನ್ನನ್ನು ಇಳಿಸಿ ಬಾಡಿಗೆ ತೆಗೆದುಕೊಂಡುಹೋದನು. ನಾನು ಕಾಲೆಳೆದುಕೊಂಡು ಮನೆಗೆ ಬಂದು ಸೇರಿದೆನು.

ನನ್ನ ಪುಣ್ಯಕ್ಕೆ ಆಗ್ಗೆ ನಮ್ಮ ತಾಯಿಯವರು ತರೀಕೆರೆಗೆ ಬಂದಿದ್ದರು. ಒಂದೆರಡು ದಿನಗಳಲ್ಲಿಯೇ ಊರಿಗೆ ಕರೆದುಕೊಂಡು ಹೋದರು. ಅಲ್ಲಿ ಬಿಲ್ವಪತ್ರೆಯ ಕಷಾಯವನ್ನು ಮಾಡಿಕೊಟ್ಟು ಹುಷಾರು ಮಾಡಿದರು. ಮನೆಯ ಆದರದಿಂದಲೇ ನನಗೆ ಸ್ವಸ್ಥತೆಯುಂಟಾಯಿತು. ತಂಗಕ್ಕನವರು ಹೇಳುತ್ತಿದ್ದ ಹನುಮದ್ವಿಲಾಸದ ಪದಗಳ ಧಾಟಿಯನ್ನು ಕಲಿತುಕೊಂಡು ಆ ಮಟ್ಟಿನಲ್ಲಿ ಕೆಲವು ಪದಗಳನ್ನು ಮಾಡುತ್ತಿದ್ದೆನು. ಮನೆಯಲ್ಲಿದ್ದ ಸ್ತೋತ್ರಪುಸ್ತಕದಲ್ಲಿ ಒಂದೆರಡು ಸ್ತೋತ್ರಗಳನ್ನು ಬಾಯಿಪಾಠಮಾಡಿ ಕಲಿತುಕೊಂಡೆನು. ಇಷ್ಟನ್ನು ಬಿಟ್ಟರೆ ಮತ್ತೇನೂ ಕೆಲಸವಿಲ್ಲ. ಹೀಗೆ 1896 ನೆಯ ವರ್ಷವು ಕಳೆದುಹೋಯಿತು.

# 9. ವಿದ್ಯಾಭ್ಯಾಸ ಚಿಕ್ಕಮಗಳೂರು (1897 ರಿಂದ 1899)

## ಸಣ್ಣಣ್ಣನವರ ಮನೆ :

ಶ್ರೀಕಂಠಯ್ಯನವರನ್ನು ದೊಡ್ಡಣ್ಣನೆಂತಲೂ, ಶಿವರಾಮಯ್ಯನವರನ್ನು ಸಣ್ಣಣ್ಣನೆಂತಲೂ ಕರೆಯುವದು ಮನೆಯಲ್ಲಿ ನಮ್ಮ ವಾಡಿಕೆ. ಸಣ್ಣಣ್ಣನವರು ಬಹಳ ಓದಿದವರಲ್ಲ. ಬಾಲ್ಯದಲ್ಲಿ ಅವರನ್ನು ಸ್ಕೂಲಿಗೆ ಕಳುಹಿಸಿದರೆ ಎಲ್ಲಿಯೋ ಅಡ್ಡಾಡಿಕೊಂಡು ಸ್ಕೂಲಿನಿಂದ ಬಂದೆನೆಂದು ಮನೆಗೆ ಹಿಂತಿರುಗಿ ಬರುತ್ತಿದ್ದರೆಂದು ಕೇಳಿದ್ದೆನು. ಅವರು ಯಳ್ಳಂಬಳಸೆಯಲ್ಲಿ ನನ್ನ ಜೊತೆಯಲ್ಲಿಯೇ ಮಗ್ಗಿ ಮುಂತಾದವುಗಳನ್ನು ಕಲಿಯುತ್ತಿದ್ದರು. ನನಗಿಂತ ಹಿರಿಯರಾದ್ದರಿಂದ ಸ್ವಲ್ಪಹೆಚ್ಚು ಬರುತ್ತಿತ್ತು. ಆದರೆ ಆಣೆಗೆ ಎಂಟು ಬಾಳೆ ಹಣ್ಣಾದರೆ ಮೂರು ಕಾಸಿಗೆ ಎಷ್ಟು ? ಪಂಚೇರಿಗೆ ಹತ್ತಾಣೆಯಾದರೆ ಸೇರಿಗೆಷ್ಟು ? ಎಂದು ಮುಂತಾಗಿ ನಮ್ಮ ತಂದೆಯವರೂ, ಪುರಾಣಿಕ ಸುಬ್ಬಾಭಟ್ಟರು ಕೇಳುವ ಬಾಯಿಲೆಕ್ಕದಲ್ಲಿ ನಾನು ತಿಳಿಯಲಿ, ತಿಳಿಯದಿರಲಿ, ಮುಂಚಿತವಾಗಿ ಉತ್ತರ ಹೇಳುತ್ತಿದ್ದದ್ದನ್ನು ಕಂಡು ಭಲೆ ಎಂದು ನನ್ನನ್ನು ಹೊಗಳುವದಲ್ಲದೆ ಅಣ್ಣನವರನ್ನು ಮೂದಲಿಸುತ್ತಿದ್ದರು. ಅಣ್ಣನು ಬುದ್ಧಿಯಲ್ಲಿ ಅಷ್ಟು ಚುರುಕಲ್ಲದಿದ್ದರೂ ಮನೆಗೆಲಸದಲ್ಲಿ ತಂದೆಯವರಿಗೆ ಬಹಳ ನೆರವಾಗಿದ್ದರು. ಕಬ್ಬಿನ ಗದ್ದೆಯಲ್ಲಿ ತೆಂಗಿನ ಸಸಿಯನ್ನು ಹಾಕಿ ತಂದೆಯವರು ಬಹುಸುಲಭವಾಗಿ ಎಬ್ಬಿಸಿದ್ದರು; ಆಗ ಸಣ್ಣಣ್ಣನವರ ಸಹಾಯವು ಬಹಳವಾಗಿ ಆಯಿತು. ತೆಂಗಿನಗಿಡಗಳಿಗೆ ನಡುಹಾಕುವದು, ದನಕರುಗಳಿಗೆ ಮೇವು ಇಡುವದು - ಮುಂತಾದ ಕೆಲಸಗಳಲ್ಲಿ ಅಣ್ಣನವರು ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿದ್ದರು. ಅವರಿಗೆ ಎಷ್ಟೋ ಕೈಕೆಲಸಗಳು ಬರುತ್ತಿದ್ದವು. ನಾನು ಓದುವದಕ್ಕೆ ಹೊರಕ್ಕೆ ಬಂದಮೇಲೂ ಅವರು ಮನೆಯಲ್ಲಿಯೇ ನಿಂತು ತಂದೆತಾಯಿಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡುತ್ತಿದ್ದರು. ಹೀಗಿದ್ದರೂ ಒಮ್ಮೆ ಶೀಘ್ರಕೋಪಿಗಳಾದ ತಂದೆಯವರ ಬಿರುನುಡಿಗಳಿಂದ ಮನನೊಂದು ಅವರು ಯಳ್ಳಂಬಳಸೆಯನ್ನು ಬಿಟ್ಟು ಮೂಡಗೆರೆಗೆ ಹೋಗಿದ್ದರು. ಈಚೆಗೆ ಚಿಕ್ಕಮಗಳೂರಿನಲ್ಲಿ ಪ್ಲೀಡರ್ ಹರಿಯಪ್ಪನವರ ಮನೆಯಲ್ಲಿ ಒಂದು ಕೋಣೆಯಲ್ಲಿ ವಾಸವಾಗಿದ್ದು ಕೊಂಡು ತಾಲ್ಲೂಕು ಕಚೇರಿಯಲ್ಲಿ ಷರಾಫರ ಹತ್ತಿರ 'ಗೊಲ್ಲಿಕೆಯ'[1] ಕೆಲಸವನ್ನು ಮಾಡಿಕೊಂಡಿದ್ದರು. ನನ್ನನ್ನು ಅವರ ಮನೆಯಲ್ಲಿದ್ದುಕೊಂಡು ಹೈಸ್ಕೂಲಿನಲ್ಲಿ ಓದುವಂತೆ ನಮ್ಮ ತಂದೆತಾಯಿಗಳಿಬ್ಬರೂ ಪ್ರೋತ್ಸಾಹಿಸಿ ಕಳುಹಿಸಿಕೊಟ್ಟರು.

---

1. ನಗದೀ ಗುಮಾಸ್ತನ ಹತ್ತಿರ ನಾಣ್ಯಪರೀಕ್ಷೆ ಸಹಾಯಕ.

## ಹರಿಯಪ್ಪನವರ ಕುಟುಂಬ :

ನಾನು ಪ್ಲೀಡರ್ ಹರಿಯಪ್ಪನವರ ಮನೆಯನ್ನು ಸೇರಿದೆನು. ಅವರದು ದೊಡ್ಡಮನೆ. ಹಿಂಭಾಗದಲ್ಲಿ ಹಿತ್ತಲು, ಬಾವಿ, ಬಚ್ಚಲುಮನೆ - ಇದ್ದವು. ನಾನು ನಡುಮನೆಯಲ್ಲಿದ್ದುಕೊಂಡು ಓದುತ್ತಿದ್ದೆನು. ಹರಿಯಪ್ಪನವರು ತಮ್ಮ ದಿವಾನ ಖಾನೆಯಲ್ಲಿ ಕುಳಿತು ಕಕ್ಷಿದಾರರನ್ನು ಬರಮಾಡಿಕೊಳ್ಳುತ್ತಿದ್ದರು. ಮನೆಯಲ್ಲಿ ಹಲವು ದೇವರಪಟಗಳನ್ನು ಗೋಡೆಗೆ ತಗಲುಹಾಕಿದ್ದರು. ಅವರು ಮಾತಾಡುವಾಗ ನಡುನಡುವೆ 'ಕೃಷ್ಣ, ವಾಸುದೇವ' ಎಂದು ಹೇಳಿಕೊಳ್ಳುವ ಪದ್ಧತಿ. ಹುಡುಗರನ್ನು ಕೂಡ ಬಹುವಚನದಲ್ಲಿಯೇ ಮಾತನಾಡಿಸುತ್ತಿದ್ದರು. ಬೆಳಗಿನ ಜಾವದಲ್ಲಿ ಎದ್ದು 'ವಾಸುದೇವಾಯ ನಮೋ !' ಎಂದು ಗಟ್ಟಿಯಾಗಿ ಉದಯರಾಗವನ್ನು ಹೇಳಿಕೊಳ್ಳುತ್ತಿದ್ದ ಗದ್ದಲವು ಪಕ್ಕದ ಒಂದೆರಡು ಮನೆಯವರನ್ನು ಎಚ್ಚರಗೊಳಿಸುತ್ತಿತ್ತು. ಇದರ ಜೊತೆಗೆ ಹರಿಯಪ್ಪನವರು ಹಿತ್ತಲು, ಮತ್ತು ಮುಂದಿನ ಎರಡು ಬಾಗಿಲನ್ನು ಹಾರು ಹೊಡೆದಿರುತ್ತಿದ್ದದ್ದರಿಂದ ಬಾಬಾಬುಡನ್‌ಬೆಟ್ಟದ ತಂಗಾಳಿ ಬೀಸಿದ ಕೂಡಲೆ ಮನೆಯಲ್ಲಿ ಮಲಗಿದವರು ಎಂಥ ನಿದ್ರೆಯವರಾದರೂ ಎದ್ದೇತೀರಬೇಕಾಗುತ್ತಿತ್ತು. ಅವರ ಮನೆಗೆ ಬರುತ್ತಿದ್ದ ಬ್ರಾಹ್ಮಣ ಕಕ್ಷಿದಾರರನ್ನು ತಪ್ಪದೆ ಊಟಕ್ಕೆ ಎಬ್ಬಿಸುತ್ತಿದ್ದರು. ಪ್ರತಿದಿನವೂ ಎಂಟು ಹತ್ತು ಜನಗಳಿಗೆ ಕಡಿಮೆಯಿಲ್ಲದೆ ಹೊಸಬರು ಇದ್ದೇ ಇರುತ್ತಿದ್ದರು. ಹರಿಯಪ್ಪನವರ ಹೆಂಡತಿಯವರು ನಮ್ಮ ಸೋದರಮಾವನ ಕಡೆಯವರು ; ಆದ್ದರಿಂದ ನನ್ನನ್ನು ಅವರು ಪ್ರೀತಿಯಿಂದಲೇ ಕಾಣುತ್ತಿದ್ದರು. ಅವರ ಮನೆಯಲ್ಲಿ ಸ್ನಾನ, ಊಟ - ಮುಂತಾದವುಗಳ ಅನುಕೂಲ್ಯವು ನನಗೆ ದೊರಕುತ್ತಿತ್ತು. ಎಲ್ಲರನ್ನು ಗೌರವದಿಂದ ಮಾತನಾಡಿಸುವ ವಾಡಿಕೆಯು ನನಗೆ ಅವರಿಂದಲೇ ಬಂದದ್ದು. ಯಾರೋ ಕಕ್ಷಿದಾರರು - ನಮ್ಮೂರಿನ ಲಕ್ಷ್ಮಯ್ಯನವರೇ ಇರಬಹುದು ಅವರು ಹೇಳಿದ - 'ನನಗೆ ಉಪದೇಶಿಸಿದ ಗುರು ಮನುಜನಲ್ಲ' ಎಂಬ ಭಾನಂಭಟ್ಟರ ಹಾಡನ್ನು ನಾನು ಕೇಳಿ ಕಲಿತುಕೊಂಡು ಹೇಳುತ್ತಿದ್ದೆನು. ಹರಿಯಪ್ಪನವರು ನನ್ನಿಂದ ಅದನ್ನು ಆಗಾಗ್ಗೆ ಹೇಳಿಸುತ್ತಲೇ ಇದ್ದರು. ಅವರ ಕೃಷ್ಣ-ವಾಸುದೇವ ಎಂಬ ನಾಮಕೀರ್ತನೆಯ ಪರಿಣಾಮವು ನನ್ನ ಮೇಲೆ ಬಹಳವಾಗಿ ಆಯಿತು. ಒಂದು ದಿನ ಸ್ಕೂಲಿನ ಎಕ್ಸರ್‌ಸೈಸ್ (ಮನೆಯಲ್ಲಿ ಚಿಂತನೆಗಾಗಿ ಬರೆಯಬೇಕಾದ ಅಭ್ಯಾಸದ ಪುಸ್ತಕ) ದಲ್ಲಿಯೂ ಕೃಷ್ಣ ವಾಸುದೇವ ! ಎಂದು ಬರೆದು ಬಿಟ್ಟಿದ್ದೆನು. ತರೀಕೆರೆಯಲ್ಲಿ ಕೆಲವು ಹುಡುಗರ ದುಃಸಹವಾಸದಿಂದ ಕಲಿತುಕೊಂಡಿದ್ದ ಕೆಟ್ಟಮಾತುಗಳ ಸೆಲೆಯೇ ಅಡಗಿಹೋಯಿತು. ನನ್ನ ನಡತೆಯನ್ನು ತಿದ್ದಿಕೊಳ್ಳುವದಕ್ಕೆ ಹರಿಯಪ್ಪನವರಿಂದ ಬಹಳ ಸಹಾಯವಾಯಿತು.

ಹರಿಯಪ್ಪನವರ ಅಕ್ಕಂದಿರು ಒಬ್ಬರಿದ್ದರು. ಅವರಿಗೆ ನನ್ನ ಮೇಲೆ ಬಹಳ ಪ್ರೀತಿ. ಅವರು ರಹಸ್ಯವಾಗಿ ಜ್ಞಾನಸಿಂಧು, ರಾಮಕೃಷ್ಣಸೂರಿವ್ಯಾಖ್ಯಾನ ಸಹಿತವಾದ ಭಗವದ್ಗೀತೆ - ಇವುಗಳನ್ನು ಓದುತ್ತಿದ್ದರು. ನನ್ನಿಂದಲೂ ಅವನ್ನು ಆಗಾಗ್ಗೆ ಓದಿಸುತ್ತಿದ್ದರು. ಆದರೆ ಆಗ ಅವು ವೇದಾಂತಗ್ರಂಥಗಳೆಂಬ ಅರಿವು ಇರಲಿಲ್ಲ. ಮೂಡಗೆರೆಯಲ್ಲಿದ್ದಾಗ ಮಲ್ಲಣ್ಣಭಾವನವರ ತಂದೆಯು ದೇವರಕೋಣೆಯಲ್ಲಿ ರಹಸ್ಯವಾಗಿ ಓದುತ್ತಿದ್ದದ್ದು ಇದೇ ಭಗವದ್ಗೀತೆಯಿರಬಹುದು. ಅವರು ನನ್ನನ್ನು ಆ ಪುಸ್ತಕವನ್ನು ಮುಟ್ಟುವದಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲ; ಈಗ ಅದನ್ನು ನಾನೇ ಓದುವ ಸೌಭಾಗ್ಯ ದೊರೆಕಿತ್ತು. ಹರಿಯಪ್ಪನವರು ಅಂಥ ಕೆಲವು ತತ್ತ್ವದ ಹಾಡುಗಳನ್ನು ಹೇಳುತ್ತಿದ್ದದ್ದು ನನ್ನ ಕಿವಿಗೆ ಬೀಳುತ್ತಿತ್ತು.

ಹರಿಯಪ್ಪನವರ ಹೆಂಡತಿಯ ಅಣ್ಣನಿರಬಹುದು, ಅವರೂ ಒಬ್ಬರು, ಆ ಕುಟುಂಬದಲ್ಲಿದ್ದರು. ಅವರು ಕುಂಭಕರ್ಣನ ಹಾಗೆ ಗೊರಕೆ ಹೊಡೆಯುತ್ತಾ ನಿದ್ರೆಮಾಡುತ್ತಿದ್ದರು; ಆದರಿಂದ ಹತ್ತಿರವಿದ್ದವರಿಗೆ ಬೇಗನೆ ನಿದ್ರೆಹತ್ತುವದು ಕಷ್ಟವಾಗುತ್ತಿತ್ತು. ಆದರೆ ನನಗೆ ಮಾತ್ರ ಒಂದು ಸಲ ನಿದ್ರೆ ಹತ್ತಿದರೆ ಮತ್ತೆ ಯಾರ ತಂಟೆಯೂ ಇರುತ್ತಿರಲಿಲ್ಲ. ಆ ಮನೆಗೆ ಜವರಾಯನೆಂಬ ಒಬ್ಬ ಹುಡುಗನು ಆಗಾಗ್ಗೆ ಬರುತ್ತಿದ್ದನು. ಅವನು ಮನೆಯವರಿಗೆ ಹೇಗೆ ಸಂಬಂಧಿಸಿದ್ದನೋ ತಿಳಿಯದು. ಒಂದು ದಿನ ಅವನು ತನ್ನ ಕಣ್ಣಿಗೆ ಮೆಣಸಿನಕಾಯಿಯ ಕಾರವು ತಟ್ಟುವದಿಲ್ಲವೆಂದು ತೋರಿಸುವದಕ್ಕಾಗಿ ಅರೆದ ಚಟ್ಣಿಯನ್ನೇ ಕಣ್ಣರಳಿಸಿ ಇಟ್ಟುಕೊಂಡನು ! ಬಳಿಕ ಎಲ್ಲರೂ ನಿರೀಕ್ಷಿಸಿದ್ದಂತೆ ಗೋಳೋ ! ಎಂದು ಅತ್ತನು. 'ಜನರು ತಮ್ಮ ಹೆಮ್ಮೆಯನ್ನು ಕೊಚ್ಚಿಕ್ಕೊಳ್ಳುವದಕ್ಕಾಗಿ ತೊಂದರೆಯನ್ನಾದರೂ ಅನುಭವಿಸುವದಕ್ಕೆ ಸಿದ್ಧರಾಗಿರುತ್ತಾರೆಂಬ ಈ ಉದಾಹರಣೆಯು ನನ್ನ ಮನಸ್ಸಿನ ಮುಂದೆ ಆಗಾಗ್ಗೆ ಬಂದು ನಿಲ್ಲುತ್ತಿರುತ್ತದೆ. ಹರಿಯಪ್ಪನವರ ಮೊದಲನೆಯ ಹೆಂಡತಿಯ ಮಗಳೊಬ್ಬಳು ಇರುತ್ತಿದ್ದಳು. ಆಕೆಯನ್ನು ಗಂಡುಹುಡುಗ ಎಂದು ಹರಿಯಪ್ಪನವರು ಕರೆಯುತ್ತಿದ್ದರು. ಆಕೆಯ ಗಂಡನ ಸಂಬಂಧವಾಗಿ ಮನೆಯಲ್ಲಿ ಏನೇನೋ ತಂಟೆ ತಗಾದೆಗಳು ಏಳುತ್ತಿದ್ದವು ; ಅಳಿಯಂದಿರಿಗೆ ಮಾವನವರು ಬಹಳ ಹೆದರುತ್ತಾರೆಂಬುದು ನನಗೆ ಆಗ ಸ್ವಲ್ಪ ಮನಸ್ಸಿಗೆ ಕಾಣುತ್ತಿತ್ತು.

## ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ :

ಚಿಕ್ಕಮಗಳೂರಿನ ಹೈಸ್ಕೂಲನ್ನು ಸೇರುತ್ತಿದ್ದ ಹಾಗೆಯೇ ನನಗೆ ಪುಸ್ತಕಗಳ ಹೊಸ ಪ್ರಪಂಚವೊಂದರಲ್ಲಿ ಪ್ರವೇಶವಾಯಿತು. **Stomouth's Dictionary**

(ನಿಘಂಟು), **Mc Mordees Idioms** (ಭಾಷೆಯ ಬೆಡಗುಗಳು), **Nesfield's Grammar** (ವ್ಯಾಕರಣ), **Gokhale's Airthmetic** (ಅಂಕಗಣಿತ), **Walter's Algebra** (ಬೀಜಗಣಿತ), **Hall & Steven's Euclid** (ರೇಖಾಗಣಿತ), **Sinclair's Indian History** (ಹಿಂದೂಸ್ಥಾನದ ಚರಿತ್ರೆ), **Buckle's History of England for Beginners** (ಇಂಗ್ಲೆಂಡ್ ಚರಿತ್ರೆ)- ಇವುಗಳನ್ನೆಲ್ಲ ಒಂದೊಂದಾಗಿ ಕೊಂಡುಕೊಂಡೆನು. ಪುಸ್ತಕಗಳ ಗಂಟೇ ದೊಡ್ಡದಾಯಿತು. ಒಂದೊಂದು ವಿಷಯಕ್ಕೂ ಮನೆಯಲ್ಲಿ ಬರೆಯುವ ಅಭ್ಯಾಸದ ಪುಸ್ತಕಗಳು ಹತ್ತು ಹನ್ನೆರಡು ಏರ್ಪಟ್ಟವು. ಪುಸ್ತಕಗಳ ಬೆಲೆಯೇ ಇಪ್ಪತ್ತು ಇಪ್ಪತ್ತೈದು ರೂಪಾಯಿಗಳಾಗಿರಬಹುದು !. ಇಂಗ್ಲೀಷಿನಲ್ಲಿ ಒಂದು ದಿನ ಹೆಡ್‌ಮಾಸ್ತರು ವೆಂಕಟಸ್ವಾಮಯ್ಯನವರು ಡಿಕ್ಷನರಿ (ನಿಘಂಟು)ವಿನಲ್ಲಿ ಕೆಲವು ಮಾತುಗಳನ್ನು ಹೇಳಿ ಬರೆಯಿಸಿ ಅವುಗಳನ್ನು ವಿವರಿಸುವದು, ಶಬ್ದಗಳ ಸ್ವರಾಘಾತ **(accent)**, ಅಕ್ಷರವಿಭಾಗ **(syllabification)**, ವ್ಯುತ್ಪತ್ತಿ **(derivation)** - ಮುಂತಾದವು-ಗಳನ್ನು ತಿಳಿದುಕೊಳ್ಳುವದರಿಂದ ಯಾವ ಪ್ರಯೋಜನವಿದೆ ಎಂಬುದು ನನ್ನ ಮನದಲ್ಲಿ ತಟ್ಟನೆ ಮಿಂಚಿದಂತಾಯಿತು. ತರೀಕೆರೆಯಲ್ಲಿ ಮೇಕೆಮೇಷ್ಟರು ಹೇಳಿಕೊಡುತ್ತಿದ್ದ ಪಾಠಗಳ ಬೆಲೆಯು ಈಗ ನನಗೆ ಗೊತ್ತಾಯಿತು. ಅಂದಿನಿಂದ ನಾನು ಇಂಗ್ಲಿಷಿನಲ್ಲಿ ಯಾವ ಪುಸ್ತಕವನ್ನು ಓದಿದರೂ ಹೀಗೆಯೇ ವಿವರವಾಗಿ ಶಬ್ದಗಳ ರಚನಾಕ್ರಮವನ್ನು ಚಿಂತನೆಮಾಡುವ ಹವ್ಯಾಸವು ನನಗೆ ಉಂಟಾಗಿಬಿಟ್ಟಿತು. ಅಭ್ಯಾಸವು ಮುಂದುವರಿದು ಎಫ್.ಎ. ತರಗತಿಗೆ ಹೋದಮೇಲೂ ಇಂಗ್ಲಿಷು ಪಠ್ಯ ಗ್ರಂಥಗಳಿಗೆ ನೋಟ್ಸ್ (ಟಿಪ್ಪಣಿ) ಪುಸ್ತಕಗಳನ್ನು ಕೊಳ್ಳದೆ ಹೀಗೆಯೇ ಶಬ್ದ-ವಿವರಣೆಯನ್ನು ಸ್ವಂತವಾಗಿ ನಿಘಂಟುವಿನಿಂದ ಕಂಡುಕೊಳ್ಳುವುದಕ್ಕೆ ಯತ್ನಿಸುತ್ತಿದ್ದೆನು. ಮೆಕ್‌ಮರ್ಡಿಯವರ ಇಡಿಯಮ್ಸ್ (ಭಾಷೆಯ ಬೆಡಗುಗಳು) ಎಂಬ ಪುಸ್ತಕವನ್ನು ತರಗತಿಗೆ ಇಟ್ಟಿದ್ದ ಪುಸ್ತಕವೆಂಬಂತೆಯೇ ಅಭ್ಯಾಸ ಮಾಡುತ್ತಿದ್ದೆನು. ಆ ಪುಸ್ತಕದಲ್ಲಿ ಹೆಸರಿಸಿದ್ದ ಗ್ರಂಥಕರ್ತರುಗಳ ಒಂದೊಂದು ಪುಸ್ತಕವನ್ನಾದರೂ ಸ್ಕೂಲಿನ ಲೈಬ್ರರಿಯಿಂದ (ಪುಸ್ತಕ ಭಂಡಾರದಿಂದ) ಓದುವ ಪದ್ಧತಿಯು ನನಗೆ ಉಂಟಾಯಿತು.

ಗಣಿತದಲ್ಲಿ ನನ್ನ ಪುಣ್ಯದಿಂದ ಟಿ.ವಿ. ಕೃಷ್ಣರಾಯರೆಂಬ ಒಬ್ಬ ಚಟುವಟಿಕೆಯ ಉಪಾಧ್ಯಾಯರು ದೊರೆತಿದ್ದರು. ಅವರು ಒಂದೊಂದು ಸಲ ಇಂಗ್ಲಿಷಿನ ಯಾವದಾದರೊಂದು ಪಾಠಕ್ಕೆ ಬರುತ್ತಿದ್ದರು. ಅವರು ಅಕ್ಷರಗಳನ್ನು ಬಲು ಸಣ್ಣದಾಗಿ ಬರೆಯುತ್ತಿದ್ದದ್ದು ನನಗೆ ಅಂದವಾಗಿರುವಂತೆ ಕಂಡದ್ದರಿಂದ ನಾನು ಅವರ ಬರವಣಿಗೆಯನ್ನು ಅನುಕರಿಸುವದಕ್ಕೆ ಮೊದಲು ಮಾಡಿದೆನು. ತರೀಕೆರೆಯಿಂದ

ರಾಯಸದ ವೆಂಕಟರಮಣಯ್ಯ, ಲಚ್ಚಿ - ಇವರೂ ಈ ಸ್ಕೂಲಿಗೆ ಬಂದಿದ್ದರು. ಲಚ್ಚಿಗೆ ಕನ್ನಂಬಾಡಿ ಲಕ್ಷ್ಮೀನಾರಾಯಣ್ ಎಂದು ಪೂರ ಹೆಸರು. ಹಾಜರಿ ಹಾಕುವಾಗ ಕೃಷ್ಣರಾಯರು **Why not K. Lakshmi Narayan Rao ? or rather, why not K.L.N. Rao** ? ಕೆ. ಲಕ್ಷ್ಮೀನಾರಾಯಣ್ ರಾವ್ ಎಂದೇಕೆ ಇರಬಾರದು ? ಅಥವಾ ಕೆ.ಎಲ್.ಎನ್. ರಾವ್ ಎಂದಿಷ್ಟೇ ಏಕೆ ಇರಬಾರದು ? ಇಷ್ಟುದ್ದ ಹೆಸರೇಕೆ ? ಎನ್ನುತ್ತಿದ್ದರು. ಲಚ್ಚಿಯು ಮೇಲ್ದನಿಯಲ್ಲಿ **'Why not T.V.K. Rao'** ? ನಿಮ್ಮ ಹೆಸರನ್ನು ಟಿ.ವಿ.ಕೆ. ರಾವ್ ಎಂದೇಕೆ ಮಾಡಬಾರದು ? ಎನ್ನುತ್ತಾ ನನ್ನನ್ನು ನಗಿಸುತ್ತಿದ್ದನು. ಆಲ್ಜೀಬ್ರಾ (ಬೀಜಗಣಿತ) ಪಾಠವು ಬಂದರೆ 'ಸುಬ್ಬರಾವ್ ; ನಿನ್ನ ಹಬ್ಬ ಬಂತು' ಎನ್ನುತ್ತಿದ್ದನು. ಕೃಷ್ಣರಾಯರು ಲೆಕ್ಕವನ್ನು ಬೋರ್ಡ್‌ಮೇಲೆ ಹಾಕುತ್ತಿದ್ದ ಹಾಗೆಯೇ ನಾನು ಮಾಡಿತೋರಿಸುತ್ತಿದ್ದೆನು. ಅವರಿಗೆ ಬಹಳ ಸಂತೋಷ **'Where did you learn all this ?** ಇದನ್ನೆಲ್ಲ ಎಲ್ಲಿ ಕಲಿತೆ ?' ಎಂದು ಕೇಳುತ್ತಿದ್ದರು. ಸರಿ. ಅಲ್ಲಿಂದ ಮುಂದಕ್ಕೆ ಅವರಿಗೆ ಬೇಕಾದ ವಿದ್ಯಾರ್ಥಿ ಎನಿಸಿದೆನು.

ಚರಿತ್ರೆ ಮುಂತಾದ ಮಿಕ್ಕ ವಿಷಯಗಳಲ್ಲಿಯೂ ಹೀಗೆಯೇ. ನಾನು ಬಲು-ಮಟ್ಟಿಗೆ ಪ್ರತಿಯೊಂದು ವಿಷಯದಲ್ಲಿಯೂ ಮೊದಲನೆಯವನೇ ಆಗಿರುತ್ತಿದ್ದೆ. ಆದರೆ ಭೂಗೋಳವೆಂದರೆ ಮಾತ್ರ ನನಗೆ ತಲೆನೋವು. 'ಲಾಂಗಮ್ಯಾನ್ಸ್ ಜಾಗ್ರಫಿ'ಯಲ್ಲಿ ಹೇರಳವಾಗಿ ಮ್ಯಾಪುಗಳಿದ್ದರೂ ಅದೇಕೋ ನನಗೆ ಆ ವಿಷಯವು ಮನಸ್ಸಿಗೆ ರುಚಿಸಲೇ ಇಲ್ಲ.

ಸಂಸ್ಕೃತದಲ್ಲಿ ನನಗೆ ತಕ್ಕಮಟ್ಟಿಗೆ ಆದರವೇನೋ ಇತ್ತು. ರಾಮಸ್ವಾಮಯ್ಯನವರು ಪರೀಕ್ಷೆಯ ನಿಮಿತ್ತದಿಂದ ಸಂಸ್ಕೃತ ಬಿಡಿಸಿದ ಮೇಲೂ 'ನಾನು ಸಂಸ್ಕೃತವನ್ನು ಓದಬೇಕಾಗಿತ್ತು' ಎಂಬುದೇ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಹಿತೋಪದೇಶದ ಶ್ಲೋಕಗಳಲ್ಲಿ ಒಂದೊಂದು ಇನ್ನೂ ನನಗೆ ಸ್ವಲ್ಪ ಸ್ವಲ್ಪ ನೆನಪಿನಲ್ಲಿದ್ದವು. 'ಅಜಾತಮೃತಮೂರ್ಖಾಣಾಂ ವರಮಾದ್ಯೌ ನ ಚಾಂತಿಮಃ' (ಹುಟ್ಟದೆ ಇರುವ, ಸತ್ತು ಹೋಗಿರುವ, ಮೂರ್ಖನಾಗಿರುವ ಈ ಮೂವರು ಮಕ್ಕಳಲ್ಲಿ ಮೊದಲನೆಯವರಿಬ್ಬರೇ ಮೇಲು, ಕೊನೆಯವನಲ್ಲ) ಎಂಬ ಶ್ಲೋಕಾರ್ಥವನ್ನು ಹೇಳಿಕೊಂಡು, ಮೊದಲನೆಯವರಿಬ್ಬರು ಎಲ್ಲಿದ್ದಾರೆ ? ಹುಟ್ಟದವನನ್ನು ಎಣಿಸಿ ಲೆಕ್ಕಕ್ಕೆ ತೆಗೆದುಕೊಳ್ಳುವದು ಹೇಗೆ ? ಎಂದು ತರ್ಕಿಸುತ್ತಿದ್ದೆನು. 'ಲಿಖಿತಮಪಿ ಲಲಾಟೇ ಪ್ರೋಜ್ಝಿತುಂ ಕಃ ಸಮರ್ಥಃ' (ಹಣೆಯಲ್ಲಿ ಬರೆದದ್ದನ್ನು ಅಳಿಸುವದಕ್ಕೆ ಯಾವನು ಶಕ್ತನು) 'ವಿಧಿರಹೋ ಬಲವಾನಿತಿ ಮೇ ಮತಿಃ' (ವಿಧಿಯೇ ಬಲವಂತನು ಎಂದು ನನ್ನ ಮತವು), 'ಅಸಂಭವಂ ಹೇಮ- ಮೃಗಸ್ಯ ಜನ್ಮ ತಥಾಪಿ

ರಾಮೋ ಲುಲುಭೇ ಮೃಗಾಯ' (ಚಿನ್ನದ ಜಿಂಕೆಯು ಹುಟ್ಟುವದು ಅಸಂಭವ, ಆದರೂ ರಾಮನು ಜಿಂಕೆಯ ಆಸೆಗೆ ಬಿದ್ದನು) – ಮುಂತಾದ ವಾಕ್ಯಗಳನ್ನು ನೆನಪಿದ್ದಷ್ಟನ್ನು ಉದಾಹರಿಸಿಕೊಂಡು ಸಂಭಾಷಣೆಯಲ್ಲಿ ಬಳಸುತ್ತಿದ್ದೆನು. ಹೀಗೆ ಸಂಸ್ಕೃತದಲ್ಲಿ ಆಸ್ಥೆಯೇನೋ ಸಂಸ್ಕಾರರೂಪದಲ್ಲಿ ಉಳಿದುಕೊಂಡಿತ್ತು. ಈಗ ಭಂಡಾರಕರರ ಮೊದಲನೆಯ ಪುಸ್ತಕದ ಇಂಗ್ಲಿಷು ಛಾಪೆ(ಮುದ್ರಣ)ಯೊಂದು ಹೇಗೋ ನನ್ನ ಕೈಗೆ ಬಂದಿದ್ದರಿಂದ ಸಂಸ್ಕೃತವನ್ನು ನೇರಾಗಿ ಕಲಿಯುವದಕ್ಕೆ ಅನುಕೂಲವೂ ಆಗಿತ್ತು; ಕನ್ನಡ ಭಾಷಾಂತರದ ಪುಸ್ತಕವು ಇಂಗ್ಲಿಷು ಮೂಲಕ್ಕೆ ಅಷ್ಟು ಉತ್ತಮವಾದ ಪ್ರತಿಚ್ಛಾಯೆಯಲ್ಲವೆಂದು ನನಗೆ ತೋರುತ್ತಿತ್ತು. ಆದರೇನು ? ಈಗಲೇ ನಾನು ಸಂಸ್ಕೃತವನ್ನು ಸ್ಕೂಲಿನಲ್ಲಿ ಓದುವದಕ್ಕೆ ಪ್ರಾರಂಭಿಸಬಾರದೆಂದು ನನ್ನ ಜಾತಕದಲ್ಲಿತ್ತೆಂದು ಕಾಣುತ್ತದೆ. ನಾಲ್ಕನೆಯ ಫಾರಮ್ಮಿನಲ್ಲಿ ಸಂಸ್ಕೃತತರಗತಿಗೆ ಹೋದಾಗ ಪಂಡಿತರು, 'ನೆಶ್ಯವಿದೆಯೇನಯ್ಯ ?' ಎಂದರು. ಅದು ನನಗೆ ಅಸಹ್ಯವಾಯಿತು. ಸಂಸ್ಕೃತದವರಿಗೆ ಸರಿಯಾದ ನಡತೆ ಇಲ್ಲವೆಂಬ ಒಂದು ತಪ್ಪು ಅಭಿಪ್ರಾಯವು ನನ್ನ ಮನದಲ್ಲಿ ಮೊಳೆಯಿತು. ಪಂಡಿತರು ಗಡ್ಡವನ್ನು ಬಿಟ್ಟಿದ್ದರು. ಅದೂ ನನಗೆ ಒಗ್ಗಲಿಲ್ಲ. ಸಂಸ್ಕೃತವನ್ನು ಬಿಟ್ಟು ಬಿಟ್ಟೆ; ಕನ್ನಡಕ್ಕೆ ಸೇರಿಕೊಂಡೆ.

ಕನ್ನಡದ ಪಂಡಿತರು ಕೃಷ್ಣಾಚಾರ್ಯರು ಒಳ್ಳೆಯ ವಿದ್ವಾಂಸರು. ಅವರು 'ಕರ್ನಾಟಕ ವ್ಯಾಕರಣ' ಎಂಬ ಒಂದು ಪುಸ್ತಕವನ್ನು ಸ್ವಂತವಾಗಿ ರಚಿಸಿದ್ದರು. 'ಶಬ್ದಾನುಶಾಸನ', 'ಶಬ್ದಮಣಿದರ್ಪಣ', 'ಭಾಷಾಭೂಷಣ' ; ಎಂಬ ಮೂರು ವ್ಯಾಕರಣಗಳನ್ನು ನೋಡಿ ಅದನ್ನು ಬರೆದಿದ್ದರು. ತಾವು ಬರೆದಿದ್ದ ಪ್ರತಿಯೊಂದು ನಿಯಮಕ್ಕೂ ಹಳಗನ್ನಡದ ಕವಿಗಳಿಂದ ಉದಾಹರಣೆಯನ್ನು ಕೊಟ್ಟಿದ್ದರು. ಇನ್ನೂ ಪುಸ್ತಕವನ್ನು ಅಚ್ಚುಮಾಡಿಸುತ್ತಿರುವ ಹಾಗೆಯೇ ನಮಗೆ ಅದರ 'ಫಾರಂ'ಗಳನ್ನು ತರಿಸಿಕೊಟ್ಟು ವಿವರಿಸುತ್ತಿದ್ದರು. ನನಗೆ ಅದರಲ್ಲಿ ಬಹಳ ಸರಿಕಂಡಿತು. ತರೀಕೆರೆಯಲ್ಲಿ ರಾಮಸ್ವಾಮಿಅಯ್ಯಂಗಾರ್ಯರು ಬಸವಪ್ಪಶಾಸ್ತ್ರಿಗಳ ನೀತಿಶತಕವನ್ನು ಹೇಳಿಕೊಟ್ಟು ಆಗಲೆ ಹಳಗನ್ನಡದಲ್ಲಿ ಅಭಿರುಚಿಯನ್ನು ಹುಟ್ಟಿಸಿದ್ದರು. ಒಂದು ದೃಷ್ಟಿಯಿಂದ ಹೇಳುವದಾದರೆ ನನಗೆ ಕನ್ನಡದಲ್ಲಿ ಸಂಸ್ಕೃತಕ್ಕಿಂತಲೂ ಹೆಚ್ಚಿನ ಪ್ರೀತಿಯು ಸ್ವಭಾವದಿಂದಲೆ ಉಂಟಾಗಿತ್ತೆನ್ನಬಹುದು. ಮನೆಯ ಮಾತು, ಊರ ಮಾತು, ಓದುಬರಹದಲ್ಲಿ ಉಪಯೋಗಿಸುವ ಮಾತು - ಎಲ್ಲವೂ ಕನ್ನಡವೇ. ಚಿಕ್ಕಂದಿನಲ್ಲಿ ನನಗೆ ಉತ್ತೇಜನವನ್ನು ಕೊಟ್ಟಿದ್ದು ಗೋವುಕಥೆ, ವಿಭೀಷಣ ಬುದ್ಧಿ, ಕಪೋತನಸಾಂಗತ್ಯ - ಮುಂತಾದವೂ, ಯಕ್ಷಗಾನದ ಪದಗಳೂ ಗದುಗಿನ ಭಾರತದ ಪದ್ಯಗಳೂ ಹೃದಯದಲ್ಲಿ ಮನೆಮಾಡಿಕೊಂಡುಬಿಟ್ಟಿದ್ದವು. ಕನ್ನಡ

ಲೋಅರ್ ಸೆಕೆಂಡರಿ ಪರೀಕ್ಷೆಗೆ ಓದಿದ ಪುಸ್ತಕಗಳಲ್ಲಿ ಮುಖ್ಯವಾಗಿ ನೀತಿಶತಕವು ನನ್ನ ಶಬ್ದಭಂಡಾರಕ್ಕೆ ಎಷ್ಟೋ ಹೊಸ ಶಬ್ದಗಳನ್ನು ಸೇರಿಸಿಕೊಟ್ಟಿತ್ತು. ಹಳಗನ್ನಡದಲ್ಲಿ ಪ್ರಕೃತಿಪ್ರತ್ಯಯಗಳು ವಿಲಕ್ಷಣವಾಗಿರುವಂತೆ ಮೊದಮೊದಲು ನನಗೆ ತೋರಿದರೂ ರಾಮಸ್ವಾಮಯ್ಯಂಗಾರ್ಯರ ಅನುಗ್ರಹದಿಂದ ಅವು ಬೇಗನೆ ಬಳಕೆಯ ಪದಾರ್ಥಗಳಾದವು. ನಮ್ಮೂರಿನಲ್ಲಿಯೂ ತರೀಕೆರೆಯಲ್ಲಿಯೂ 'ಬ್ರಾಹ್ಮಣ ಸಮಾರಾಧನೆ'ಯ ಕಾಲಕ್ಕೆ ಊಟಕ್ಕೆ ಕೂತಾಗ 'ಚಿದಾನಂದ ಕೋರಡೆ' ಎಂಬ ಹೆಸರಿನ ಕನ್ನಡಸವಾಯಿಗಳನ್ನು ಹೇಳುವದು ಬ್ರಾಹ್ಮಣರಲ್ಲಿ ವಾಡಿಕೆ. ಆಗ ಹೇಳುತ್ತಿದ್ದ ಭೋಜನ ಶ್ಲೋಕಗಳಲ್ಲಿ 'ಶ್ರೀರಾಮ ಜಯರಾಮ ಜಯಜಯ ರಾಮ', 'ಶ್ರೀ ತುಳಸೀ ಜಯ ತುಳಸೀ' ಮುಂತಾದ ಸಂಸ್ಕೃತದ ಮತ್ತು ಮರಾಠಿಯ ಆರ್ಯಗಳು, ಒಂದೆರಡು ಅಷ್ಟಪದಿಗಳು - ಇವನ್ನು ಬಿಟ್ಟರೆ ಚಿದಾನಂದರ ಕೋರಡೆಗೆ ಬಹಳ ಗಿರಾಕಿ ಇತ್ತು. ಕೋರಡೆಯ ಕೆಲವು ಪದ್ಯಗಳನ್ನು ನಮ್ಮ ಅಜ್ಜಂದಿರು ಕಡಾರು ಕಾಗದದಲ್ಲಿ ಬರೆದಿಟ್ಟಿದ್ದರು. ಬ್ರಹ್ಮನು ಮಾಡಿದ ಪ್ರತಿಮೆಗಳೆಲ್ಲ ದೇವರು ತಾ ಹ್ಯಾಗಲ್ಲ ? ''ಸುಮ್ಮನೆ ಪೂಜಿಸುತಿಹರೇ ಪಾಂಚಾಲಮಾಡಿದ ಪ್ರತಿಮೆಯವೆಲ್ಲ ॥ ಬ್ರಹ್ಮನು ನೀಚನು ಪಾಂಚಾಲುತ್ತಮ ತಿಳಿಯಿತು ನಿಮ್ಮಯ ಜ್ಞಾನ । ಬ್ರಹ್ಮಚಿದಾನಂದ ಸದ್ಗುರುವಾತ್ಮನ ಕಾಣುವಿರೀ ನೀವೇನ ॥'' ಎಂಬ ಸವಾಯಿಯನ್ನು ಹಿರಿಯವರು ಎಷ್ಟೋ ಸಲ ನನ್ನಿಂದ ಹೇಳಿಸಿ ಹೇಳಿಸಿ ಸಂತೋಷಪಡುತ್ತಿದ್ದರು. ಆದರೆ ಈಚೆಗೆ ನೀತಿಶತಕದ ಪದ್ಯಗಳನ್ನು ಗಟ್ಟಿಮಾಡಿದ ಮೇಲೆ ಅವುಗಳನ್ನು ಭೋಜನಶ್ಲೋಕವಾಗಿ ಉಪಯೋಗಿಸಿದಾಗ ದೊಡ್ಡವರೆಲ್ಲರೂ ಬೆರಗಾಗಿ ಕೇಳುತ್ತಿದ್ದರು. ''ಶ್ರೀಮದಲಾಧರೇಂದ್ರತನಯ ವದನಾಂಬುಜ ಚಂಚರೀಕನು । ದ್ಧಾಮ ಗುಣಾಭಿರಾಮ ನಿಜ ವಿಷ್ಣುಮುಖಾಮರ ನಮ್ರ ಮೌಳಿಮಾ । ಲ ಮಕರಂದ ಸಿಕ್ತಪಾದ ತಾಮರಸಂ ನತ ಕಲ್ಪ ಭೂರುಹಂ । ಪ್ರೇಮದೆ ಭಾಮಭೂಮಿ ಪತಿಯಂ ಪರಿಪಾಲಿತೆ ಸೋಮಶೇಖರಂ ॥ ಎಂಬ ಬಸಪ್ಪಶಾಸ್ತ್ರಿಗಳಿಂದ ಮೊದಲು ಮಾಡಿಕೊಂಡು ''ಬಾನಮುಂ ಪಟ್ಟಣಮಪ್ಪುದು । ಆನರೆಲ್ಲರ್ ಸ್ವಜನರಪ್ಪದೀ ನೆಲವೆಲ್ಲಂ ॥ ಧನಕನಕವಸ್ತು ಪೂರಿತ । ಮಾನಿಪೂರಣಂ ಪೂರ್ವಪುಣ್ಯವುಳ್ಳಂಗನಿಶಂ ॥'' ಎಂಬ ಕೊನೆಯ ಪದ್ಯದವರೆಗೂ ಆಗ ಬಾಯಿಗೆ ಬರುತ್ತಿತ್ತು. ಕೃಷ್ಣಾಚಾರ್ಯರು ವ್ಯಾಕರಣವನ್ನು ಹೇಳಿಕೊಟ್ಟದ್ದಲ್ಲದೆ, ಪದ್ಯಗಳ ಭಾಷೆಗೆ ಹಳಗನ್ನಡದ ಪರಿಚಯವು ಅತ್ಯವಶ್ಯವೆಂಬುದನ್ನು ಮನಗಾಣಿಸಿಕೊಟ್ಟರು. ಅವರ ವ್ಯಾಕರಣದಲ್ಲಿ 'ಪ್ರಯೋಗಂ' ಎಂದು ಬರೆದಿರುವ ಕಡೆಯಲ್ಲಿ 'ಯಾವ ಗ್ರಂಥದಲ್ಲಿ ಈ ಪ್ರಯೋಗವಿದೆ ?' ಎಂಬುದನ್ನು ಕೇಳುವ ಕುತೂಹಲವು ನನಗೆ ಹೆಚ್ಚಾಗಿತ್ತು. ಕನ್ನಡದಲ್ಲಿ ಬಹಳ ಕಾವ್ಯಗಳಿವೆ ಎಂಬ ವಿಶ್ವಾಸವನ್ನು ನನಗೆ ಮಾಡಿಕೊಟ್ಟವರು ಈ ಪಂಡಿತರು. ಈ

ಸಮಯಕ್ಕೆ ಸರಿಯಾಗಿ 'ಕರ್ಣಾಟಕ ಕಾವ್ಯಕಲಾನಿಧಿ' ಎಂಬ ಮಾಸಿಕಪತ್ರಿಕೆಯೊಂದು ಸ್ಕೂಲಿಗೆ ಬರಲಾರಂಭಿಸಿತು. ನಾನು ಆ ಪತ್ರಿಕೆಗೆ ಉತ್ಸಾಹಪೂರ್ವಕವಾಗಿ ಚಂದಾದಾರನಾದೆನು. 'ಗಿರಿಜಾಕಲ್ಯಾಣ', 'ರಾಮಾಶ್ವಮೇಧ', 'ಲೀಲಾವತಿ', 'ಚಂದ್ರಪ್ರಭಪುರಾಣ' - ಮುಂತಾದ ಕಾವ್ಯಗಳು ನನ್ನ ಕಣ್ಣಿಗೆ ಹಬ್ಬವನ್ನು ಮಾಡಿದವು. ಕನ್ನಡಭಾಷೆಯಲ್ಲಿ ಪಂಡಿತನೆನ್ನಿಸಿಕೊಳ್ಳಬೇಕೆಂಬ ಹಂಬಲಿಕೆಯೊಂದು ನನ್ನಲ್ಲಿ ಒಡೆದುಮೂಡಿತು. ಕೃಷ್ಣಾಚಾರ್ಯರು, ವ್ಯಾಕರಣವಿದ್ವಾಂಸರಾದ ತಮ್ಮ ತಾತಂದಿರಿಗೋ ಅಥವಾ ಮುತ್ತಾತಂದಿರಿಗೋ ತಮ್ಮ ಗ್ರಂಥವನ್ನು ಸಮರ್ಪಣೆ ಮಾಡಿದ್ದರು. ಭಾಷೆಯ ತಿಳಿವಳಿಕೆಗೆ ವ್ಯಾಕರಣದ ಬೆಂಬಲವಿರಬೇಕು ಎಂಬ ಸದಿಚ್ಛೆಯನ್ನು ಅವರು ನನ್ನ ಚಿತ್ತದಲ್ಲಿ ಬಿತ್ತಿದರೆನ್ನಬಹುದು.

## ಸುಬ್ರಹ್ಮಣ್ಯ ಶಾಸ್ತ್ರಿಗಳು

ನಾನು ನಾಲ್ಕನೆಯ ಫಾರಂನಲ್ಲಿ ಓದುತ್ತಿದ್ದ ಹಾಗೆಯೇ - ಆ ವರ್ಷದ ಕೊನೆಯಲ್ಲಿರಬಹುದು, ಹೆಡ್‌ಮೇಷ್ಟರು ವೆಂಕಟಸ್ವಾಮಯ್ಯರವರಿಗೆ ವರ್ಗವಾಗಿ, ಅವರ ಸ್ಥಾನಕ್ಕೆ ಶಿವಮೊಗ್ಗ ಕಾಲೇಜಿನಿಂದ ಹೆಡ್‌ಮಾಸ್ಟರಾಗಿ ವಿ. ಸುಬ್ರಹ್ಮಣ್ಯ ಅಯ್ಯರು ಬಂದರು. ನಡುವೆ ಹೆಡ್‌ಮಾಸ್ಟರ ಛಾರ್ಜಿನಲ್ಲಿದ್ದ ಸುಬ್ರಹ್ಮಣ್ಯಶಾಸ್ತ್ರಿಗಳು ತುಮಕೂರಿಗೆ ವರ್ಗವಾಗಿ ಹೊರಟರು. ನಮಗೆಲ್ಲ ಸ್ಕೂಲಿನಲ್ಲಿ ಬಹಳ ಕದಲಾಟವಾದಂತೆ ಕಂಡಿತು. ಶಾಸ್ತ್ರಿಗಳವರು ಬಲುಬಿಗಿಯಾಗಿ ದರ್ಪದಿಂದ ಹುಡುಗರನ್ನು ಆಳುತ್ತಿದ್ದರು ; ಅವರು ಮುಖ್ಯವಾಗಿ ತೆಗೆದುಕೊಳ್ಳುತ್ತಿದ್ದ ಚರಿತ್ರೆ, ಭೂಗೋಳಗಳಲ್ಲಿ ನನಗೆ ಹೆದರಿಕೆಯೇ ಮುಖ್ಯವಾದ ಭಾವನೆಯಾಗಿತ್ತೆನ್ನಬಹುದು. ಕೆಲವು ಪ್ರಶ್ನೆಗಳನ್ನು ಕೊಟ್ಟು ಉತ್ತರವನ್ನು ಬರೆಯಿಸುವದು ಅವರ ವಾಡಿಕೆ. ಉತ್ತರಗಳು ಎಷ್ಟು ಸರಿಯಾಗಿವೆ ಎಂಬುದನ್ನು ತಿಳಿದುಕೊಂಡು ಸ್ವಲ್ಪ ಹೆಚ್ಚು ಕಡಿಮೆಯಾಗಿ ಎಲ್ಲರಿಗೂ ಒಂದಲ್ಲದಿದ್ದರೆ ಒಂದು ಬಿರುನುಡಿಯ ಉಡುಗೊರೆಯನ್ನು ಕೊಡುತ್ತಿದ್ದರು. ಅವರ ಪಾಠದ ವೇಳೆಯ ತರಗತಿಯಲ್ಲಿ ಒಬ್ಬಿಬ್ಬರು ಹುಡುಗರು ನೆಲದಮೇಲೆ, ಕೆಲವು ವೇಳೆ ಬೆಂಚಿನಮೇಲೆ, ನಿಂತೇ ಇರುತ್ತಿದ್ದರು. ಶಾಸ್ತ್ರಿಗಳಿಗೆ ಕ್ರಿಕೆಟ್ ಆಟದಲ್ಲಿ ಹೆಚ್ಚಿನ ಪ್ರೇಮ ; ಆದ್ದರಿಂದ ಆ ಆಟದಲ್ಲಿ ಗಟ್ಟಿಗರಾದ ಹುಡುಗರನ್ನು ಸ್ವಲ್ಪ ಕೃಪಾಕಟಾಕ್ಷದಿಂದ ನೋಡುತ್ತಿದ್ದರು. ನನಗೆ ಕ್ರಿಕೆಟ್ ಆಟದ ರುಚಿ ಸ್ವಲ್ಪ ಹಾಗೆಹಾಗೆಯೇ ; ಹಿಂದೆ ಕೃಷ್ಣರಾಯರು ಹೆಡ್‌ಮಾಸ್ಟರಾಗಿದ್ದಾಗ ನಾನು ಎರಡನೆಯ ಕ್ಲಾಸಿನ ವಿದ್ಯಾರ್ಥಿಗಳೊಡನೆ ಆಡುತ್ತಿರುವಲ್ಲಿ ಬಿರುಸಾಗಿ 'ಬೌಲ್' ಮಾಡಿದೆನೆಂಬ ಕಾರಣದಿಂದ ದೂರುಹೋಗಿ ಬೆತ್ತದ ಏಟು ಬಿದ್ದಿತ್ತು.

ಆಮೇಲೆ 'ಸೀನಿಯರ್ ಟೀಮಿನ' ಹುಡುಗರೊಡನೆ ಆಡುವದಕ್ಕೆ ಒತ್ತಾಯವೂ ಆಗಿ, ಆ ದೊಡ್ಡ ಹುಡುಗರೊಡನೆ ಆಡುವದಕ್ಕೆ ಕೈಯಲ್ಲಿ ಸಾಗದೆ ನಾನು ಆಗಿನಿಂದ ಆಟವನ್ನೇ ಕೈಬಿಟ್ಟಿದ್ದೆನು. ತರೀಕೆರೆಯಲ್ಲಿ ನನಗೆ 'ರೌಂಡರ್ಸ್' 'ಅಂಗಸಾಧನೆ' ಮುಂತಾದವುಗಳು ಮಾತ್ರ ಮೆಚ್ಚಾಗಿದ್ದವು. ಹೀಗಾಗಿ ನನಗೆ ಶಾಸ್ತ್ರಿಗಳ ವಿಶೇಷಾಭಿಮಾನದ ಲಾಭವಾಗುವದು ಕಷ್ಟವಾಗಿತ್ತು. ಆದರೆ ಸುದೈವದಿಂದ ನಾನು ಮಿಕ್ಕ ಎಲ್ಲಾ ಪಾಠ ವಿಷಯಗಳಲ್ಲಿಯೂ ಮೊದಲನೆಯವನೇ ಆಗಿರುತ್ತಿದ್ದೆನಾದ್ದರಿಂದಲೂ, ಚರಿತ್ರೆಯಲ್ಲಿ ಚೆನ್ನಾಗಿಯೇ ನಂಬರನ್ನು ತೆಗೆಯುತ್ತಿದ್ದದ್ದರಿಂದಲೂ ಪರಸ್ಪರ ವಿಮರ್ಶೆಗೆ ನಮ್ಮ ಉತ್ತರಗಳನ್ನು ಹುಡುಗರೊಳಗೆ ಶಾಸ್ತ್ರಿಗಳು ಹಂಚಿದಾಗ ನನಗೆ ಮೇಲಿನ ಸ್ಥಾನವನ್ನೇ ಸಹಪಾಠಿಗಳು ಕೊಡುತ್ತಿದ್ದರು. ವಿದ್ಯಾರ್ಥಿಗಳ ಸಾಮಾನ್ಯಯೋಗ್ಯತಾ ತಾರತಮ್ಯಕ್ಕನುಗುಣವಾಗಿ ಸರಿಯಾದ ಉತ್ತರಗಳ ಸಂಖ್ಯೆಯನ್ನು ಹೆಚ್ಚುಕಡಿಮೆಯಾಗಿ ಗುರುತುಮಾಡಿ ಮೇಷ್ಟರ ಕಣ್ಣಿಗೆ ಮಣ್ಣೆರಚಿ ಸುಳ್ಳುಹೇಳುವದರಿಂದಲೇ ಕಾಲಹಾಕುವದು ಶಾಸ್ತ್ರಿಗಳ ತರಗತಿಯಲ್ಲಿ ನಮಗೆಲ್ಲ ರೂಢಿಯಾಗಿತ್ತು. ಒಟ್ಟಿನಲ್ಲಿ ಶಾಸ್ತ್ರಿಗಳು ವರ್ಗವಾಗಿದ್ದೇನೂ ನಮ್ಮಗಳಿಗೆ ಅಷ್ಟೇನೂ ದುಃಖಕರವಾಗಿರಲಿಲ್ಲವೆನ್ನಬಹುದು.

## ಭೌತಿಕ ವಿಜ್ಞಾನ :

ಚಿಕ್ಕಮಗಳೂರಿನಲ್ಲಿ ದೊರಕಿದ ಹೊಸಪಾಠವಿಷಯಗಳೊಳಗೆ ನನಗೆ 'ಪದಾರ್ಥಸ್ವಭಾವವಿಜ್ಞಾನ' **(Physics)** ಮತ್ತು 'ವಸ್ತುರಚನಾವಿಜ್ಞಾನ' **(Chemistry)** ಎಂಬೆರಡೂ ತೀರ ಹೊಸವಿಷಯಗಳು. ವಸ್ತು ಪರೀಕ್ಷಣ ಕಾರ್ಯಕ್ಕಾಗಿ ಏರ್ಪಾಡಾಗಿದ್ದ ಲ್ಯಾಬರೇಟರಿ ಎಂಬ ಸಾಮಗ್ರಿಗಳ ಉಗ್ರಾಣದ ಕೋಣೆಯು ನನ್ನ ಮನಸ್ಸನ್ನು ಬಹಳವಾಗಿ ಸೆಳೆಯುತ್ತಿತ್ತು. ಅಲ್ಲಿ ಒಂದು ಬೀರುವಿನಲ್ಲಿ ಗಾಜಿನಗ್ಲಾಸುಗಳು, ದುಂಡುಸೀಸೆಗಳು, ಕೊಳವೆಗಳು - ಇವೇ ಅಲ್ಲದೆ ದ್ರಾವಕಗಳು, ಲವಣಗಳು ಮುಂತಾದ ಅನೇಕ ದ್ರವ್ಯವಿಶೇಷಗಳಿದ್ದವು. ಅದನ್ನು ವಿಧವಿಧವಾಗಿ ಪ್ರಯೋಗಗಳಿಂದ ಪರೀಕ್ಷಿಸಬೇಕಾಗಿದೆ ಎಂಬುದನ್ನು ವೆಂಕಟರಾಮಯ್ಯನೆಂಬ ಉಪಾಧ್ಯಾಯರು ದಿಗ್ದರ್ಶನ ಮಾಡಿದ್ದರು ; ಆದರೆ ನಮ್ಮ ದುರ್ದೈವದಿಂದ ಅವರಿಗೆ ಸ್ಥಲಾಂತರಕ್ಕೆ ವರ್ಗವಾಗಿ ಭೀಮರಾಯರೆಂಬ ಹೊಸ ಮೇಷ್ಟರೊಬ್ಬರು ದಯಮಾಡಿಸಿದರು. ಅವರಿಗೆ ಪ್ರಯೋಗ ವಿಚಾರವೆಂದರೆ ಬಹಳ ಅಂಜಿಕೆ. ಅವರು ಬಹಳಮಟ್ಟಿಗೆ ಭೌತಿಕ ವಿಜ್ಞಾನದ ಪ್ರಯೋಗಗಳನ್ನು ಕಪ್ಪುಹಲಗೆಯ ಮೇಲೆ ಬರೆದ ಚಿತ್ರಗಳ ಮೂಲಕವಾಗಿಯೇ ಪ್ರದರ್ಶಿಸುತ್ತಿದ್ದರು. ತಮ್ಮಲ್ಲಿದ್ದ ಯಾವದೋ ಒಂದು ಹಳೆಯ ನೋಟ್ಸ್ (ಟಿಪ್ಪಣಿಗಳ) ಪುಸ್ತಕದಿಂದ ಓದಿ ನಮಗೆ ಉಕ್ತಲೇಖನದ

ಅಭ್ಯಾಸವನ್ನು ಮಾಡಿಸುತ್ತಿದ್ದರು. ಒಂದು ದಿನ ಯಾವದೋ ಒಂದು ಪ್ರಯೋಗವನ್ನು ಪ್ರಾರಂಭಿಸಿ ದ್ರಾವಕವನ್ನೂ ನೀರನ್ನೂ ವ್ಯತ್ಕ್ರಮವಾಗಿ ಬೆರೆಯಿಸಿದ್ದರಿಂದ ದೊಡ್ಡಸದ್ದಾಯಿತು. ಹುಡುಗರೆಲ್ಲ 'ಹೋ ಹೋ' ಎಂದು ಕೂಗಿಕೊಂಡರು. ಗದ್ದಲವನ್ನು ನಿಲ್ಲಿಸುವದಕ್ಕೆ ಹೆಡ್‌ಮಾಸ್ಟರೇ ಬರಬೇಕಾಯಿತು. ಅಂತೂ ಬಹಳ ಔತ್ಸುಕ್ಯದಿಂದ ಅಭ್ಯಾಸಮಾಡಬೇಕೆಂದಿದ್ದ ಈ ಪಾಠವು ನನಗೆ ಹೇಗೋ ಕೆಲವು ಪ್ರಶ್ನೋತ್ತರ ಪುಸ್ತಕಗಳ ಸಹಾಯದಿಂದ ಸಾಗಬೇಕಾಯಿತು. ಎಲ್ಲಾ ವಿಷಯಗಳಂತೆ ಅದರಲ್ಲಿಯೂ ನಾನು ಮೊದಲನೆಯವನೇ ಆಗಿರುತ್ತಿದ್ದೆನಾದರೂ ಭೌತಿಕವಿಜ್ಞಾನದಲ್ಲಿ ನನಗೆ ಬರುಬರುತ್ತಾ ಆದರವು ಕಡಿಮೆಯಾಯಿತು.

## ವಿ. ಸುಬ್ರಹ್ಮಣ್ಯ ಅಯ್ಯರವರು

ಹೆಡ್‌ಮಾಸ್ಟರಾದ ಸುಬ್ರಹ್ಮಣ್ಯಅಯ್ಯರವರು ಬಂದದ್ದು ಸ್ಕೂಲಿಗೆ ಒಂದು ವರಪ್ರಸಾದವೇ ಎಂಬುದು ನಮಗೆಲ್ಲ ಬೇಗನೆ ಮನವರಿಕೆಯಾಯಿತು. ಅವರ ಜೊತೆಯಲ್ಲಿಯೇ ಹೊಸದಾಗಿ ಕೆಲಸಕ್ಕೆ ಸೇರಿದ ತಿರುಮಲಾಚಾರ್ ಎಂಬ ಉಪಾಧ್ಯಾಯರು ಚರಿತ್ರೆಯನ್ನೂ ಭೂಗೋಳವನ್ನೂ ಉತ್ತಮರೀತಿಯಿಂದ ಹೇಳಿಕೊಡುತ್ತಿದ್ದರು. ಇಂಗ್ಲಿಷು ಪರಿಚಯವು ಸಾಲದೆ ಇದ್ದ ನಮ್ಮಗಳಿಗೆ ವಿಷಯವನ್ನು ಕನ್ನಡದಲ್ಲಿ ತಿಳಿಸುವದಲ್ಲದೆ ಬಹು ಸುಲಭವಾದ, ನಮ್ಮಂತಸ್ತಿನವರಿಗೆ ಬೇಗನೆ ಅರ್ಥವಾಗುವ ಇಂಗ್ಲಿಷು ಭಾಷೆಯನ್ನು ಅವರು ಪ್ರಯತ್ನಪೂರ್ವಕವಾಗಿ ಉಪಯೋಗಿಸುತ್ತಿದ್ದದ್ದರಿಂದ ನಮಗೆಲ್ಲರಿಗೂ ಅವರ ಪಾಠದಲ್ಲಿ ಹೆಚ್ಚು ಹೆಚ್ಚಾಗಿ ಸ್ವಾರಸ್ಯವು ಕಾಣಹತ್ತಿತು. ನನಗೆ ಇಂಗ್ಲೆಂಡ್ ದೇಶದ ಚರಿತ್ರೆಯಲ್ಲಿ ಪರಮಾದರವುಂಟಾಗುವದಕ್ಕೆ ತಿರುಮಲಾಚಾರರೇ ಕಾರಣರಾದರು. ಅವರು ಲೋಅರ್ ಸೆಕೆಂಡರಿ ತರಗತಿಯ ಹುಡುಗರಿಗೆ ಇಂಗ್ಲಿಷು ಪಾಠವನ್ನು ಮಾಡುವದಕ್ಕೂ ನಮಗೆ ಚರಿತ್ರೆಯ ಪಾಠವನ್ನು ಮಾಡುವದಕ್ಕೂ ಮೊದಲೇ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದದ್ದನ್ನು ಕಂಡು ಅವರಿಗೆ ಬೋಧನಕಾರ್ಯದಲ್ಲಿ ಗೌರವವಿದೆ ಎಂಬ ಭಾವವು ನನಗೆ ಬಂದಿತು ; ಆದರಿಂದ ಅವರಲ್ಲಿ ಮತ್ತಷ್ಟು ಪೂಜ್ಯಬುದ್ಧಿಯುಂಟಾಗಿತ್ತು.

## ಟಿ. ವಿ. ಕೃಷ್ಣರಾಯರು

ಟಿ.ವಿ. ಕೃಷ್ಣರಾಯರು ಬೀಜಗಣಿತ, ರೇಖಾಗಣಿತ, ಅಂಕಗಣಿತಗಳಲ್ಲಿ ನಮಗೆ ದಿನದಿನವೂ ಹೊಸಹೊಸ ಭಕ್ಷ್ಯಗಳ ಸಮಾರಾಧನೆಯನ್ನು ಏರ್ಪಡಿಸುತ್ತಿದ್ದರು. ಸುಬ್ರಹ್ಮಣ್ಯ ಅಯ್ಯರು ಸ್ಕೂಲನ್ನು ಶ್ರುತಿ ಮಾಡಿದ ವೀಣೆಯಂತೆ ಎಲ್ಲಾ

ಬಗೆಯಿಂದಲೂ ವಿದ್ಯಾರ್ಥಿಗಳಿಗೂ ಮಹಾಜನಕ್ಕೂ ಮೆಚ್ಚೆನಿಸಿದರು. ನನ್ನ ಮೇಲೆ ವಿಶೇಷವಾದ ಮಮತೆಯುಂಟಾಗುವದಕ್ಕೆ ಇಂಗ್ಲಿಷು ಪಾಠದಲ್ಲಿ ನಾನು ತೋರಿಸುತ್ತಿದ್ದ ಆದರವೇ ಕಾರಣವಾಯಿತೆಂದು ಕಾಣುತ್ತದೆ. ನೆಸ್‌ಫೀಲ್ಡ್ ಗ್ರಾಮರ್ ಎಂಬ ವ್ಯಾಕರಣದ ವಿಷಯಗಳು ನನಗೆ ನೀರು ಕುಡಿದಷ್ಟು ಸಲೀಸಾಗಿ ಮನದಟ್ಟಾಗಿ ಹೃದ್ಗತವಾಗಿದ್ದವು. ಇಂಥಿಂಥ ವಿಷಯಗಳು ಇಂಥಿಂಥ ಪುಟದಲ್ಲಿಯೇ ಇದೆ ಎಂಬುದನ್ನು ನಾನು ತಟ್ಟನೆ ತೋರಿಸಿಬಿಡುತ್ತಿದ್ದೆನು. ಅಯ್ಯರು ಆಗಾಗ್ಗೆ ನನ್ನನ್ನು ಕರೆದು ಇಂಥ ವಿಷಯವು ಎಲ್ಲಿದೆ ? ಎಂದು ಕೇಳಿದ್ದೂ ಉಂಟು. ಇಂಗ್ಲಿಷ್ ವಾಕ್ಯದ ರಚನೆಯಲ್ಲಿಯೂ ಭಾಷಾಂತರ ಮಾಡುವದರಲ್ಲಿಯೂ ನನಗೆ ಹೆಚ್ಚಿನ ಕೌಶಲವಿದೆಯೆಂದು ಜೊತೆಯ ಹುಡುಗರೂ ಉಪಾಧ್ಯಾಯರುಗಳೂ ಭಾವಿಸಿದ್ದರು. ಇದೂ ಅಯ್ಯರವರ ಪ್ರೀತಿಯು ನನ್ನಲ್ಲಿ ಊರುವದಕ್ಕೆ ಕಾರಣವಾಯಿತು.

## ಸುಬ್ರಹ್ಮಣ್ಯ ಅಯ್ಯರವರ ಪೋಷಣೆ

ಇಷ್ಟರಲ್ಲಿ ನನಗೆ ಪ್ಲೀಡರ್ ಹರಿಯಪ್ಪನವರ ಮನೆಯಿಂದ ಸ್ಥಳಾಂತರವಾಗ ಬೇಕಾಗಿ ಬಂದಿತು. ನಮ್ಮ ದೊಡ್ಡಣ್ಣನವರು ತರೀಕೆರೆಯಿಂದ ಡಿಸ್ಟ್ರಿಕ್ಟ್ ಕಛೇರಿಗೆ ವರ್ಗವಾಗಿ ಚಿಕ್ಕಮಗಳೂರಿಗೆ ಬಂದರು. ಅಲ್ಪವಾದ ಸಂಬಳ ಬರುತ್ತಿದ್ದ ಸಣ್ಣಣ್ಣನವರ ಮನೆಯಲ್ಲಿರುವದಕ್ಕಿಂತ ತಮ್ಮ ಮನೆಯಲ್ಲಿರುವದೇ ಲೇಸೆಂದು ಅವರು ಸೂಚಿಸಿದರು. ನಾನೂ ಅದಕ್ಕೆ ಒಪ್ಪಿದೆನು. ಆದರೆ ಈಗ ನನಗೆ ದೊಡ್ಡಣ್ಣನವರ ಮನೆಯಲ್ಲಿ ವಿದ್ಯಾಭ್ಯಾಸಕ್ಕೆ ಅಷ್ಟು ಅನುಕೂಲ್ಯವಿರಲಿಲ್ಲ. ತರೀಕೆರೆಯಲ್ಲಿದ್ದಾಗ ನಾನು ಸಂತೆಯಿಂದಲೂ ಅಂಗಡಿಯಿಂದಲೂ ಸಾಮಾನು ತರುವದು, ಬಟ್ಟೆಗಳನ್ನು ಒಗೆದು ತರುವದು, ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವದು - ಮುಂತಾದ ಪುಡಿಗೆಲಸಗಳನ್ನು ನನ್ನ ಪಾಠಕ್ಕೆ ಅಡ್ಡಿಯಿಲ್ಲದಂತೆ ಮಾಡಬಹುದಾಗಿತ್ತು. ಚಿಕ್ಕಮಗಳೂರಿನಂಥ ದೊಡ್ಡ ಊರಿನಲ್ಲಿ ಮೇಲಿನ ಕ್ಲಾಸಿನಲ್ಲಿ ಓದುತ್ತಿರುವಾಗ ಅಷ್ಟೇ ಕೆಲಸವನ್ನು ಮಾಡಿಕೊಡುವದು ಸಾಧ್ಯವಾಗಲಿಲ್ಲ. ಅಣ್ಣನವರಿಗೂ ಸಂಸಾರವನ್ನು ಸಾಗಿಸುವದು ಸ್ವಲ್ಪ ಕಷ್ಟವೇ ಆಗಿದ್ದಿತೇನೋ ಅಂತೂ ನನಗೆ ಮನೆಯಲ್ಲಿ ಸ್ವಲ್ಪ ಕಿರಿಕಿರಿಯೇ ಉಂಟಾಯಿತು. ಈಗ ಏನು ಮಾಡಬೇಕೆಂಬುದು ನನಗೆ ತಿಳಿಯಲಿಲ್ಲ. ದೂರವಾದ ಭಾಗದಲ್ಲಿರುವ ಚಿಕ್ಕಮಗಳೂರಿನ ಮನೆಗಳಲ್ಲಿ ವಾರವನ್ನು ಮಾಡಿಕೊಳ್ಳಬಹುದೆಂದು ನನ್ನ ಸ್ನೇಹಿತರು ಕೆಲವರು ಸೂಚಿಸಿದರು. ಆದರೆ ನನಗೆ ಆ ಅಭ್ಯಾಸವೂ ಇಲ್ಲ. ಕೋಟೆಯಲ್ಲಿ ಒಬ್ಬರ ಮನೆಯಲ್ಲಿ ವಾರವನ್ನು ಕೇಳುವದಕ್ಕೆ ಹೋದರೆ ಮನೆಯ ಯಜಮಾನರು ನನ್ನ ಪೂರ್ವೋತ್ತರವನ್ನು ತಿಳಿದುಕೊಂಡು 'ನೀನು ಇಂಥವರ ತಮ್ಮನಲ್ಲವೆ ? ನಿನಗೆ ವಾರವೇಕಪ್ಪ ?' ಎಂದುಬಿಟ್ಟರು. ಈ

ಸುಮಾರಿಗೆ ಚಿಕ್ಕಮಗಳೂರಿಗೆ ಪ್ಲೇಗು ಬಂತು. ಆಗ್ಗೆ ಪ್ಲೇಗೆಂದರೆ ಜನರು ಬಹಳ ಅಂಜುತ್ತಿದ್ದರು. ಹುಡುಗರು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂದು ಅಂಜಿ ಎಷ್ಟೋ ಜನ ಚಲ್ಲಾಪಿಲ್ಲಿಯಾದರು. 'ನೀನು ಇಲ್ಲಿಯೇ ಇರುತ್ತೀಯೋ, ಊರಿಗೆ ಹೋಗುತ್ತೀಯೋ ?' ಎಂದು ಕನ್ನಡ ಪಂಡಿತರು ನನ್ನನ್ನು ಕೇಳಲು ನಾನು 'ಊರಿಗೆ ಹೋಗುತ್ತೇನೆ ಆದರೆ ಮತ್ತೆ ಬರುವ ಸಂಭವ ಕಡಿಮೆ' ಎಂದೆನು. ಕೃಷ್ಣಾಚಾರ್ಯರು ನನ್ನ ವಿಷಯವನ್ನೆಲ್ಲ ವಿಚಾರಿಸಿ ಮುಖ್ಯವಾಗಿ ನನಗೆ ಊಟವಸತಿಗಳಿಗೆ ಅನನುಕೂಲವೆಂಬುದನ್ನು ತಿಳಿದುಕೊಂಡು ಹೆಡ್‌ಮಾಸ್ಟರಿಗೆ ನನ್ನ ವಿಷಯವನ್ನು ಶಿಫಾರಸು ಮಾಡಿದರು. ತರಗತಿಯಲ್ಲಿ ಚೆನ್ನಾಗಿ ಓದುತ್ತಿರುವ ಹುಡುಗನು ಸ್ಕೂಲು ಬಿಡುತ್ತಾನೆಂಬುದನ್ನು ಕೇಳಿದ ಅಯ್ಯರವರು ಕೂಡಲೆ ದಯಾರ್ದ್ರಭಾವದಿಂದ ತಮ್ಮ ಮನೆಯಲ್ಲಿಯೇ ನನಗೆ ಊಟಕ್ಕೆ ಏರ್ಪಡಿಸಿ ವಿದ್ಯಾರ್ಥಿಗಳ 'ಹಾಸ್ಟಲ್' (ಭೋಜನ ವಸತಿ ಗೃಹ)ದಲ್ಲಿ ಒಂದು ಕೊಟ್ಟಡಿಯನ್ನು ವಾಸಕ್ಕೆ ಬಿಡಿಸಿಕೊಟ್ಟರು. ಹಾಸ್ಟಲ್ ಕಟ್ಟಡವು ಸ್ಕೂಲಿಗೆ ಹತ್ತಿರವೂ ಹೆಡ್‌ಮಾಸ್ಟರ್ ಮನೆಗೆ ಅತಿಸಮೀಪವೂ ಆಗಿರುತ್ತಿದ್ದದ್ದರಿಂದ ನನಗೆ ಈ ಏರ್ಪಾಡಿನಿಂದಾದ ಆನಂದಕ್ಕೆ ಪಾರವೇ ಇರಲಿಲ್ಲ.

# ೧೦. ಚಿಕ್ಕಮಗಳೂರಿನಲ್ಲಿ ಹೊಸ ಅನುಭವಗಳು

## ವೇದಾಂತದ ಸುಳಿಗಾಳಿ :

ಸುಬ್ರಹ್ಮಣ್ಯ ಅಯ್ಯರವರ ಮನೆಯಲ್ಲಿ ನನಗೆ ಸ್ಥೂಲದೇಹಕ್ಕೆ ಮಾತ್ರ ಅನ್ನವು ದೊರೆಯಲಿಲ್ಲ. ಅವರ ನಡೆನುಡಿಗಳಿಂದ ನನ್ನ ತಿಳಿವಳಿಕೆಯೂ ಹಿಗ್ಗಿತು. ನಡವಳಿಕೆಯೂ ತಿದ್ದಿತು. ಅಯ್ಯರವರು ಮುಂಚಿತವಾಗಿ ಎದ್ದು ಚಟುವಟಿಕೆಯಿಂದ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದದ್ದನ್ನೂ ಸ್ಕೂಲಿನಲ್ಲಿ ಇಟ್ಟುಕೊಂಡಿದ್ದ ಪರಮಾಸಕ್ತಿಯನ್ನೂ, ಬಡಹುಡುಗರಲ್ಲಿ ತೋರಿಸುತ್ತಿದ್ದ ಕರುಣೆಯನ್ನೂ ಕಂಡು ನನಗೆ ಅವರು ಸಾಧಾರಣ ಪುರುಷರಲ್ಲ ಎನಿಸಿತು. ಅವರು ಆರೋಗ್ಯಕ್ಕಾಗಿ 'ಡಂಬೆಲ್ಸ್' ಎಂಬ ಕಬ್ಬಿಣದ ದಪ್ಪ ಗುಂಡುಗಳನ್ನು ಹಿಡಿದು ವ್ಯಾಯಾಮವನ್ನು ಮಾಡುತ್ತಿದ್ದರು ; ಜಲಚಿಕಿತ್ಸೆಯಿಂದ ಶರೀರಕ್ಕೆ ಆರೋಗ್ಯವನ್ನು ಉಂಟುಮಾಡಿಕೊಳ್ಳುತ್ತಿದ್ದರು. ಆಹಾರವಿಹಾರಗಳಲ್ಲಿ ಹಿತಮಿತವಾಗಿ ಇರುತ್ತಿದ್ದರು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ನನಗೆ ಅನಿರೀಕ್ಷಿತ ರೀತಿಯಿಂದ ಅಯ್ಯರವರ ಮನೆಯಲ್ಲಿಯೇ ವೇದಾಂತದಲ್ಲಿ ಮೊಟ್ಟಮೊದಲನೆಯ ಪ್ರವೇಶವುಂಟಾಯಿತು. ಅದೇನು ಜನ್ಮಾಂತರದ ಕಾರಣವೊ, ಪರಮೇಶ್ವರನ ಅನುಗ್ರಹದ ಗುರುತೋ, ನನ್ನ ಸ್ವಪ್ರಯತ್ನವು ಅಷ್ಟಾಗಿ ಇಲ್ಲದಿದ್ದರೂ, ನನಗೆ ಸಂಸ್ಕೃತಭಾಷೆಯ ಮತ್ತು ಈಶ್ವರಭಕ್ತಿಯ ಪರಿಚಯವು ಆಗಾಗ್ಗೆ ಆಗುತ್ತಲೇ ಇದ್ದಿತು. ತರೀಕೆರೆಯಲ್ಲಿ ಸಂಸ್ಕೃತದ ಒಂದೆರಡು ಪುಸ್ತಕಗಳನ್ನು ಸ್ವಲ್ಪ ನೋಡಿಬಿಟ್ಟದ್ದನ್ನು, ಸ್ತೋತ್ರಪುಸ್ತಕಗಳ ಮತ್ತು ದೇವರನಾಮದ ಪದಗಳ ಸಂಗ್ರಹವು ದೊರಕಿದ ಬಗೆಯನ್ನು ಹಿಂದೆಯೇ ಹೇಳಿರುತ್ತೇನೆ. ಈಗ ನಾನು ಅಯ್ಯರವರ ಮನೆಯಲ್ಲಿರುತ್ತಿರುವ ಹಾಗೆಯೇ ತಿಮ್ಮಪ್ಪಯ್ಯನೆಂಬವನ ಸ್ನೇಹವಾಗಿ ಮತ್ತೊಮ್ಮೆ ಸಂಸ್ಕೃತದ ಅಭಿರುಚಿ ಹೆಚ್ಚುವದಕ್ಕೆ ಅವಕಾಶವಾಯಿತು. ಅಯ್ಯರವರ ಮನೆಯಲ್ಲಿ ಆಗಾಗ್ಗೆ ಕೆಲವು ದೊಡ್ಡ ಮನುಷ್ಯರುಗಳು ಸೇರುತ್ತಿದ್ದರು. ಆಗ 'ಸಾಂಖ್ಯ' 'ವೇದಾಂತ' ಎಂಬ ಮಾತುಗಳನ್ನು ಬೆರೆಯಿಸಿಕೊಂಡು ಅವರುಗಳು ಇಂಗ್ಲಿಷಿನಲ್ಲಿ ಚರ್ಚೆ ಮಾಡುತ್ತಿದ್ದರು. ಅಯ್ಯರವರಿಗೆ ಅರ್ಥಶಾಸ್ತ್ರ (**Economics**) ಮತ್ತು ತತ್ತ್ವಶಾಸ್ತ್ರ (**Philosophy**) ಇವುಗಳಲ್ಲಿ ಬಹಳ ಅಕ್ಕರೆ. ನನಗೆ ಅವರುಗಳ ಚರ್ಚೆಯು ಆಗಾಗ್ಗೆ ಕುತೂಹಲವನ್ನು ಕೆರಳಿಸುತ್ತಿತ್ತು. ಒಂದು ದಿನ ಅವರು ಬಸವನಹಳ್ಳಿಯಲ್ಲಿದ್ದ ಒಬ್ಬ ಅಸಿಸ್ಟೆಂಟ್ ಮಾಸ್ಟರವರ ಮನೆಗೆ ನನ್ನನ್ನು ಏತಕ್ಕೋ ಕಳುಹಿಸಿಕೊಟ್ಟರು. ಅಲ್ಲಿ ಒಂದು ಪುಸ್ತಕವು ನನ್ನ ಕಣ್ಣಿಗೆ ಬಿದ್ದಿತು. ಅದನ್ನು ಬಿಚ್ಚಿನೋಡಲು ಅದರಲ್ಲಿ ಒಂದು ಕಡೆ ಈ ವಾಕ್ಯವು ಕಣ್ಣಿಗೆ ಬಿತ್ತು. ***"Heat, cold etc., and the causes thereof which are (no doubt)***

***perceived through the organs of perception, are not absolutely real (vastu sat), for they are effects or changes (vikara), and every change is temporary".*** ಆ ಪುಸ್ತಕದ ಹೆಸರು ಭಗವದ್ಗೀತೆ ಎಂದು ಇಂಗ್ಲಿಷಿನಲ್ಲಿ ಪುಸ್ತಕದ ಮೇಲೆ ಅಚ್ಚಾಗಿತ್ತು. ಮೇಷ್ಟರು ಪುಸ್ತಕವನ್ನು ಮುಟ್ಟಿದ್ದಕ್ಕೆ ಸಿಟ್ಟುಮಾಡಿಯಾರೆಂದು ಬೇಗನೆ ಮೇಜಿನ ಮೇಲೆ ಇಟ್ಟುಬಿಟ್ಟೆನು. ಆದರೆ ನನಗೆ ಭಗವದ್ಗೀತೆಯೆಂದರೆ ಯಾವ ಪುಸ್ತಕವೋ ! ಅದರಲ್ಲಿ ಶೀತ, ಉಷ್ಣ - ಇವುಗಳೆಲ್ಲ ಬರಿಯ ವಿಕಾರಗಳೆಂದು ಬರೆದಿದೆಯಲ್ಲ ! ಇಂಥ ಸೈನ್ಸು (ವಿಜ್ಞಾನಶಾಸ್ತ್ರದ) ವಿಚಾರ ನಮ್ಮ ಪೂರ್ವಜರಿಗೆ ತಿಳಿದಿರಲಿಲ್ಲವೆಂದು ನಮ್ಮ ಇಂಗ್ಲಿಷು ಸೈನ್ಸು ಪುಸ್ತಕದಲ್ಲಿದೆ. ಆದರೆ ಶೀತೋಷ್ಣಗಳು ವಿಕಾರವೆಂಬುದನ್ನು ಇಲ್ಲಿ ಸ್ಪಷ್ಟವಾಗಿ ಬರೆದಿದೆಯಲ್ಲ ! - ಎಂಬಿವೇ ಮುಂತಾದ ಯೋಚನೆಗಳ ತರಂಗಮಾಲೆಯು ಮನಸ್ಸಿನಲ್ಲಿ ಎದ್ದುಕೊಂಡಿತು. ಈ ಯೋಚನೆ ನನ್ನನ್ನು ಬಹುಕಾಲದವರೆಗೆ ಬಿಡಲೇ ಇಲ್ಲ. ಆಗ ನಾನು ನೋಡಿದ್ದು ಶಾಂಕರಭಾಷ್ಯ ಸಹಿತವಾದ ಭಗವದ್ಗೀತೆಯ ಇಂಗ್ಲಿಷು ತರ್ಜುಮೆ ಎಂಬುದು ನನಗೆ ಮುಂದೆ ಮೂರುವರ್ಷಗಳ ತರುವಾಯ ತಿಳಿಯಿತು. ಆ ಸಂದರ್ಭವನ್ನು ವಾಚಕರಿಗೆ ಮುಂದಕ್ಕೆ ಅರಿಕೆಮಾಡುವೆನು.

ಇದಂತಿರಲಿ, ಸದ್ಯಕ್ಕೆ ನನಗೆ ವೇದಾಂತದ ಅಭಿರುಚಿಯು ಬೆಳೆದುಕೊಳ್ಳುವದಕ್ಕೆ ಅಯ್ಯರವರ ಸಹವಾಸವು ಮತ್ತೂ ಒಂದು ಬಗೆಯಿಂದ ಕಾರಣವಾಯಿತು. ಹೇಗೆಂದರೆ ಅಯ್ಯರ ತಮ್ಮ ಗಣೇಶನ್ ಎಂಬ ವಿದ್ಯಾರ್ಥಿಯೊಬ್ಬನು ಈ ಸುಮಾರಿನ ಕಾಲದಲ್ಲಿ ಸ್ಕೂಲಿಗೆ ಬಂದು ಸೇರಿಕೊಂಡಿದ್ದನು. ಅವನಿಗೆ ಗಣಿತಶಾಸ್ತ್ರದಲ್ಲಿ ನಂಬರು ತಕ್ಕಷ್ಟು ಬರಲಿಲ್ಲವೆಂಬ ಕಾರಣದಿಂದ ಮೇಲಿನ ತರಗತಿಗೆ ಪ್ರಮೋಷನ್ ಮಾಡದೆ ಇದ್ದರು. ಅವನಿಗೂ ನನಗೂ ಸ್ವಾಭಾವಿಕವಾಗಿ ಪರಸ್ಪರ ಪರಿಚಯವಾಯಿತು. ನಾವಿಬ್ಬರೂ ವಿರಾಮವಿದ್ದಾಗ ಒಟ್ಟಿಗೆ ಮಾತನಾಡುವದು, ಸಾಯಂಕಾಲ ಒಟ್ಟಿಗೆ ಸಂಚಾರಕ್ಕೆ ಹೋಗುವದು - ಹೀಗೆಲ್ಲ ಮಾಡುತ್ತಿದ್ದೆವು. ಅವನು ಒಂದು ದಿನ ಸಂಚಾರಕಾಲದಲ್ಲಿ ತನಗೆ ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿದ್ದ ಒಂದು ಲೆಕ್ಕವನ್ನು ತೋರಿಸಿ ಇಂಥ ಲೆಕ್ಕವನ್ನು ಮಾಡುವದು ಕಷ್ಟವಲ್ಲವೆ ? ಎಂದು ಕೇಳಿದನು. $(a-b)^3+(b-c)^3+(c-a)^3-3(a-b)(b-c)(c-a)$ ಎಂಬ ಒಂದು ರಾಶಿಯನ್ನು ಸಂಕ್ಷೇಪರೂಪಕ್ಕೆ ತರಬೇಕೆಂಬುದೇ ಆ ಪ್ರಶ್ನೆ. ನಾನು ಅದನ್ನು ನೋಡಿದ ಕೂಡಲೆ ಇದಕ್ಕೆ ಉತ್ತರ ಸೊನ್ನೆ ಎಂದು ಹೇಳಿದ್ದು ಕೇಳಿ ಅವನು ಚಮಕಿತನಾದನು. ಅಷ್ಟುಹೊತ್ತಿಗೆ ನಾನು ರೂಡಿಮೆಂಟ್ಸ್ ಆಫ್ ಆಲ್ಜಿಬ್ರಾ **(Rudiments of Algebra)** ಎಂಬ ಪುಸ್ತಕದಲ್ಲಿ ಎಷ್ಟೋ ಕಷ್ಟವಾದ ಲೆಕ್ಕಗಳನ್ನು ಮಾಡುವ ಪ್ರಕ್ರಿಯೆಗಳನ್ನು ತಿಳಿದುಕೊಂಡಿದ್ದೆನು. ಬೀಜಗಣಿತದ ಕೆಲವು ಪ್ರತೀಕಸೂತ್ರ **(formula)**ಗಳನ್ನು

ತಿಳಿದುಕೊಂಡುಬಿಟ್ಟರೆ ಈ ಜಾತಿಯ ಲೆಕ್ಕಗಳು ಬಹು ಸುಲಭವಾಗಿ ಗಂಟುಬಿಚ್ಚಿಕೊಳ್ಳುವವೆಂಬುದನ್ನು ನಾನು ತಿಳಿಸಲು ಗಣೇಶನಿಗೆ ಆ ರಹಸ್ಯವನ್ನು ಭೇದಿಸಬೇಕೆಂಬ ಕುತೂಹಲವು ಉಂಟಾಯಿತು. ಮುಂದೆ ನಾನು ಆಗಾಗ್ಗೆ ಅವನಿಗೆ ಬೀಜಗಣಿತದಲ್ಲಿ ಕೆಲವು ಭಾಗದಲ್ಲಿ ಕಠಿಣವಾದ ಪ್ರಶ್ನೆಗಳನ್ನು ಬಿಡಿಸುವ ಸುಲಭೋಪಾಯಗಳನ್ನು ತಿಳಿಸಿಕೊಟ್ಟೆನು. ಆತನು ನನ್ನನ್ನು ಅರ್ಧ ಹಾಸ್ಯಕ್ಕಾಗಿಯೂ, ಅರ್ಧ ನಿಜವಾಗಿಯೂ ಬೀಜಗಣಿತ ಬೋಧಕ **(Algebra Teacher)** ಎಂತ ಕೆಲವು ಕಾಲದವರೆಗೂ ಕರೆಯುತ್ತಲಿದ್ದನು. ಹೀಗೆ ನಮ್ಮಿಬ್ಬರಿಗೂ ತಕ್ಕಮಟ್ಟಿನ ಪರಿಚಯವುಂಟಾಗುವ ಕಾಲಕ್ಕೆ ಗಣೇಶನಿಂದ ನನಗೊಂದು ದೊಡ್ಡ ಉಪಕಾರವಾಯಿತು. ಅವನು ಬ್ರಹ್ಮಚಾರಿ ; ಸ್ನಾನ ಮಾಡಿದ ಮೇಲೆ ಶ್ರದ್ಧೆಯಿಂದ ಸಂಧ್ಯಾವಂದನೆಯನ್ನು ಮಾಡುತ್ತಿದ್ದನು. ನಾನು ಸಂಧ್ಯಾವಂದನದ ಕೆಲವು ಮಂತ್ರ ಗಳನ್ನು ಹೇಳಲು ನಮ್ಮಿಬ್ಬರಿಗೂ ಆ ವಿಷಯದಲ್ಲಿ ಪರಸ್ಪರ ಸಂಭಾಷಣೆಯಾಗು ವದಕ್ಕೆ ಮೊದಲಾಯಿತು. ಇದೇ ಸುಮಾರಿನಲ್ಲಿ ನಾನು ಬಸವನಹಳ್ಳಿಯಲ್ಲಿದ್ದ ನಮ್ಮ ಮಲ್ಲಣ್ಣಭಾವನವರ ಮನೆಗೆ ಆಗಿಂದಾಗ್ಗೆ ಹೋಗಿಬರುತ್ತಿದ್ದದ್ದರಿಂದ ಅವರ ಮನೆಯಲ್ಲಿ ಒಂದು ಉಪನಿಷತ್ತಿನ ಪುಸ್ತಕದಲ್ಲಿ (ಅದು ತೈತ್ತಿರೀಯವೆಂದು ಈಚೆಗೆ ತಿಳಿಯಬಂದಿದೆ) ಮಂತ್ರಗಳಿಗೆ ಸ್ವರವನ್ನು ಹಾಕಿರುವ ಪದ್ಧತಿಯನ್ನೂ, ಅದನ್ನು ಭಾವನವರು ಹೇಳಿಸಿಕೊಳ್ಳುತ್ತಿದ್ದ ಪರಿಯನ್ನೂ ಗಣೇಶನಿಗೆ ತಿಳಿಸಿದೆನು. ಅವನಿಗೂ ಆ ಮಂತ್ರಗಳಲ್ಲಿ ಸ್ವಲ್ಪ ಅಭಿರುಚಿಯಿದ್ದಿತು. ಅವನು "ಇದೆಲ್ಲ ಸರಿಯೆ ; ನೀವೇಕೆ ಹೀಗೆ ಒಗೆಯದೆ ಇರುವ ಪಂಚೆಯನ್ನೇ ಉಟ್ಟುಕೊಳ್ಳುತ್ತಿರುವಿರಿ ?" ಎಂದು ಮೂದಲಿಸಿದನು. ನನ್ನಲ್ಲಿ ಹಿಂದೆ ಸಹಜವಾಗಿದ್ದು ಕಾರಣಾಂತರದಿಂದ ಸುಪ್ತವಾಗಿದ್ದ ಮಡಿಮೈಲಿಗೆಗಳ ವಿವೇಕದ ಭಾವನೆಯು ಸ್ವಲ್ಪ ಎಚ್ಚೆತ್ತುಕೊಂಡಿತು. ಅಂದಿನಿಂದ ನಾನು ರೇಷ್ಮೆಯ ಮಗುಟವನ್ನುಟ್ಟುಕೊಂಡು ಸಂಧ್ಯಾವಂದನೆ ಮಾಡುವದನ್ನು ಬಲಪಡಿಸಿಕೊಂಡೆನು. ಹಾಸ್ಟಲಿನಲ್ಲಿದ್ದ ವಿದ್ಯಾರ್ಥಿಗಳು ನನ್ನನ್ನು "ಸುಬ್ರಹ್ಮಣ್ಯ ಋಷಿ" ಎಂದು ಮೊದಮೊದಲು ಹಾಸ್ಯಮಾಡಿದರೂ ಕೊನೆಗೆ ಎಲ್ಲರೂ ನನ್ನನ್ನೇ ಅನುಕರಣಮಾಡಲಾರಂಭಿಸಿದರು. ಅವರಲ್ಲಿ ಕೆಲವರಿಗೆ ಹೋಮ್‌ವರ್ಕ್ (ಮನೆಯಲ್ಲಿ ಬರೆದು ಸಿದ್ಧಪಡಿಸಬೇಕಾಗಿದ್ದ ಅಭ್ಯಾಸಗಳನ್ನು) ನನ್ನ ಪುಸ್ತಕವನ್ನು ನೋಡಿಕೊಂಡೇ ಬರೆಯಬೇಕಾಗಿತ್ತಾದ್ದರಿಂದಲೂ ನನ್ನನ್ನು ಅವರು ಹಾಸ್ಯ ಮಾಡುವದು ಬಹುಕಾಲನಿಲ್ಲಲಿಲ್ಲ.

ಮಲ್ಲಣ್ಣಭಾವನವರು ಚಿಕ್ಕಮಗಳೂರಿನ ಭಾಗವಾದ ಬಸವನ ಹಳ್ಳಿಯ- ಲ್ಲಿಯೇ ಈಗ ವಾಸವಾಗಿರುತ್ತಿದ್ದರು. ಅವರು ಡಿಸ್ಟ್ರಿಕ್ಟ್ ಕಚೇರಿಯಲ್ಲಿ ಅಕೌಂಟೆಂಟ್

ಕೆಲಸವನ್ನು ಮಾಡುತ್ತಿದ್ದರು. ಮನೆಯಲ್ಲಿ ಯಾವಾಗಲೂ ಮಡಿಯಲ್ಲಿರುತ್ತಾ ದಬ್ಬೆ ಸುಬ್ಬಾಶಾಸ್ತ್ರಿಗಳೆಂಬವರಲ್ಲಿ 'ಸೂತಸಂಹಿತೆ' 'ತೈತ್ತಿರಿಯೋಪನಿಷತ್ತು', 'ದೇವೀ-ಪುರಾಣ' ಇವುಗಳನ್ನು ಶ್ರವಣಮಾಡುತ್ತಿದ್ದರು. ಒಂದೊಂದು ಗ್ರಂಥವು ಸಮಾಪ್ತಿಯಾಗುತ್ತಲೂ ಅವರು ಮಂಗಳವನ್ನು ಮಾಡಿ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸುತ್ತಿದ್ದರು. ಒಂದು ದಿನ ಅವರ ಮನೆಗೆ ನಾನು ಹೋದಾಗ ಸುಬ್ಬಾಭಟ್ಟರು 'ಯತೋ ವಾಚೋ ನಿವರ್ತನ್ತೇ' ಎಂಬ ಮಂತ್ರದ ಅರ್ಥವನ್ನು ವಿವರಿಸುತ್ತಾ 'ಬ್ರಹ್ಮವನ್ನು ಅರಿಯೋಣವೆಂದು ಇಂದ್ರಿಯಗಳು ಅದರ ಬಳಿಗೆ ಹೋಗುತ್ತವೆ ; ಆದರೆ ಅದನ್ನು ಅರಿತುಕೊಳ್ಳಲಾರವು. ಕೈಯುಮುಟ್ಟುವದಕ್ಕೆ ಹೋಗುತ್ತದೆ ; ಆದರೆ ಬ್ರಹ್ಮಕ್ಕೆ ಸ್ಪರ್ಶವೇ ಇಲ್ಲದ್ದರಿಂದ ಅದು ಕೈಗೆ ಸಿಕ್ಕುವದಿಲ್ಲ. ಮೂಗು ಮೂಸಿ ನೋಡುತ್ತದೆ ; ಆದರೆ ಅದಕ್ಕೆ ವಾಸನೆಯೇ ಇಲ್ಲದ್ದರಿಂದ ಅದು ಮೂಗಿಗೆ ನಿಲುಕುವದಿಲ್ಲ. ಕಣ್ಣು ಅದನ್ನು ನೋಡಿ ಅರಿತುಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತದೆ ; ಆದರೆ ಅದಕ್ಕೆ ರೂಪವಿಲ್ಲದ್ದರಿಂದ ಅದು ಕಣ್ಣಿಗೂ ಗೋಚರವಾಗುವದಿಲ್ಲ. ಅದಕ್ಕೆ ಶಬ್ದವಿಲ್ಲದ್ದರಿಂದ ಕಿವಿಗೆ ಸಿಕ್ಕುವಹಾಗಿಲ್ಲ. ರುಚಿಯಿಲ್ಲದ್ದರಿಂದ ನಾಲಗೆಗೂ ತಿಳಿಯುವದಿಲ್ಲ....., ಆದ್ದರಿಂದ ಕಣ್ಣು ಕಿವಿ, ಮೂಗು, ನಾಲಗೆ, ಚರ್ಮ - ಎಂಬೀ ಇಂದ್ರಿಯಗಳು ಬ್ರಹ್ಮವನ್ನು ಪರೀಕ್ಷೆಮಾಡಿ ಅದರ ಸ್ವರೂಪವನ್ನು ಒಂದಿಷ್ಟೂ ತಿಳಿಯದೆ ಹಿಂದಕ್ಕೆ ಬರುತ್ತವೆ. "ನಮ್ಮಿಂದ ಅದನ್ನು ಅರಿತುಕೊಳ್ಳುವುದು ಆಗಲಿಲ್ಲ ಎನ್ನುತ್ತವೆ" ಎಂದು ಇಂದ್ರಿಯಗಳು ಬ್ರಹ್ಮದ ಬಳಿಗೆ ಹೋಗುವದು, ಅದಕ್ಕೆ ಯಾವ ಗುಣವಿದೆ ಎಂಬುದನ್ನು ಒಂದೊಂದಾಗಿ ಪರೀಕ್ಷಿಸುವದು, ಏನೇನೂ ಗೊತ್ತಾಗದೆ ಹಿಂತಿರುಗುವದು - ಇದನ್ನೆಲ್ಲಾ ಅಭಿನಯಪೂರ್ವಕವಾಗಿ ವಿವರಿಸುತ್ತಿದ್ದರು. ತರೀಕೆರೆಯ ಮೇಕೆ ಮೇಷ್ಟರು ಎರಡು ಮೇಕೆಗಳ ಕಥೆಯನ್ನು ಹುಡುಗರಿಂದ ಅಭಿನಯಿಸಿದ್ದದ್ದು ನನಗೆ ನೆನಪಿಗೆ ಬಂತು. ಆದರೆ ವೇದಾಂತವೆಂದರೇನೆಂಬುದೇ ಸರಿಯಾಗಿ ಗೊತ್ತಿಲ್ಲದ ನನಗೆ ಬ್ರಹ್ಮವೆಂದರೆ ಯಾವ ಪದಾರ್ಥವೋ ! ಅದರ ಬಳಿಗೆ ಇಂದ್ರಿಯಗಳು ಹೋಗುವದೆಂದರೆ ಹೇಗೆ ? ಅವು ಅದನ್ನು ಹಿಡಿಯಲಾರದೆ ಹಿಂದಕ್ಕೆ ಬಂದವೆಂದರೇನು ? - ಇದು ಯಾವದೂ ತಿಳಿಯಲಿಲ್ಲ, ಆದರೂ ಮಲ್ಲಣ್ಣಭಾವನವರು ಯಾವದೋ ಒಂದು ರಹಸ್ಯವಿರುವ ಪುಸ್ತಕಗಳ ಅಭಿಪ್ರಾಯವನ್ನು ಶಾಸ್ತ್ರಿಗಳಿಂದ ತಿಳಿದುಕೊಳ್ಳುತ್ತಿದ್ದಾ-ರೆಂದು ನನಗೆ ಭಾಸವಾಯಿತು. ಈ ರಹಸ್ಯವನ್ನು ಭೇದಿಸಬೇಕು ; ಪುಸ್ತಕವು ಯಾವದೆಂಬುದು ತಿಳಿದುಕೊಳ್ಳಬೇಕು ಎಂಬ ಕುತೂಹಲವು ನನ್ನ ಮನಸ್ಸನ್ನು ಹಿಡಿದುಕೊಂಡಿತು. ಭಾವನವರು ವಿಶೇಷವಾಗಿ ಮಾತನಾಡುವವರಲ್ಲ ; ಇದರ ಮೇಲೆ ಅವರ ಮನೆಯಲ್ಲಿ ಇದ್ದ ನೆನಪೂ, ಅವರು ಸಿಟ್ಟಿನ ಸ್ವಭಾವದವರೆಂಬ ನೆನಪೂ,

ವಾಸನಾಂತರಂಗದಲ್ಲಿ ಇಳಿದುಕೊಂಡು ಬಿಟ್ಟಿದ್ದವು. ಆದ್ದರಿಂದ ಅವರನ್ನು ಈ ವಿಷಯದಲ್ಲಿ ಕೇಳುವ ಎದೆ ನನಗೆ ಬರಲಿಲ್ಲ. ಅವರು ಇಲ್ಲದ ವೇಳೆಯನ್ನು ಸಾಧಿಸಿ ದೇವರಮುಂದೆ ಅವರು ಇಟ್ಟಿದ್ದ ಪುಸ್ತಕವನ್ನು ಬಿಚ್ಚಿ ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ನೋಡಿದೆನು. ಒಂದು ದೇವನಾಗರಿಯ ಪುಸ್ತಕ. ಅದು ತೈತ್ತಿರೀಯೋಪನಿಷತ್ತೆಂದು ಆಗಲೇ ಹೇಳಿರುತ್ತೇನೆ. ಇನ್ನೊಂದು ವಾಸಿಷ್ಠರಾಮಾಯಣ. ವಾಲ್ಮೀಕರು ರಾಮಾಯಣವನ್ನು ಬರೆದಿದ್ದಾರೆಂಬುದನ್ನು ಚರಿತ್ರೆಯ ಪುಸ್ತಕದಲ್ಲಿ ಓದಿದ್ದೆನು ; ಆದರೆ ವಸಿಷ್ಠರಿಗೂ ರಾಮಾಯಣಕ್ಕೂ ಏನು ಸಂಬಂಧವೆಂಬುದು ನನಗೆ ಬಗೆಹರಿಯಲಿಲ್ಲ. ಅಂತೂ ಇಂತೂ ಮಲ್ಲಣ್ಣಭಾವನವರ ಮನೆಯಲ್ಲಿ ನನಗೆ ಎಲ್ಲಿಯೋ ಕನಸಿನೊಳಗೆ ಸ್ವಲ್ಪ ವೇದಾಂತದ ಗಾಳಿ ಬೀಸಿದಂತೆ ಆಯಿತು ಎನ್ನಬಹುದು.

## ಕೆಲವರು ಸ್ನೇಹಿತರು

ಹೈಸ್ಕೂಲಿನಲ್ಲಿ ನನಗೆ ದೊರೆತ ಸ್ನೇಹಿತರುಗಳಲ್ಲಿ ಆಯ್ಯರ ತಮ್ಮ ಗಣೇಶನ್ನಿನ ವಿಷಯವನ್ನು ಆಗಲೇ ಹೇಳಿದ್ದೇನೆ. ಸಂಸ್ಕೃತದ ಸಂಬಂಧದಿಂದ ತಿಮ್ಮಪ್ಪಯ್ಯನ ಹೆಸರನ್ನು ಒಂದು ಸಲ ಪರಾಮರ್ಶಿಸಿದ್ದೇನೆ. ಈಗ ಅವನ ಪರಿಚಯವನ್ನು ವಾಚಕರಿಗೆ ಮಾಡಿಕೊಡುವದಕ್ಕೆ ಕಾಲವಾಗಿದೆ. ನನಗೆ ಅವನ ಪರಿಚಯವಾದಾಗ ಅವನು ಆಗಲೇ ಮೇಲಿನ ತರಗತಿಯಲ್ಲಿ ಓದುತ್ತಿದ್ದನು. ಅವನ ಅಣ್ಣಂದಿರು ತರೀಕೆರೆಯಲ್ಲಿ ತಾಲ್ಲೂಕು ಕಚೇರಿಯಲ್ಲಿ ಯಾವದೋ ಗುಮಾಸ್ತೆ ಕೆಲಸದಲ್ಲಿದ್ದರು. ಅವರು ಔಪಾಸನಾಗ್ನಿ ಇಟ್ಟುಕೊಂಡದ್ದರಿಂದ ಜನರ ಗೌರವಕ್ಕೆ ಪಾತ್ರರಾಗಿದ್ದರು ; ಆದರೆ ಯಾವಾಗಲೂ ಮನೆಯಲ್ಲಿಯೇ ಮರೆಯಾಗಿರುತ್ತಾರೆ, ಎಲ್ಲಿಗೂ ಹೊರಕ್ಕೆ ಬರುವದಿಲ್ಲ ಎಂದು ಕೆಲವರು ಅವರನ್ನು ದೂರುತ್ತಿದ್ದರು. ಅಗ್ನಿಯ ಆರಾಧನೆ, ಬ್ರಹ್ಮಯಜ್ಞ, ವೈಶ್ವದೇವ, ಬಲಿಹರಣ - ಮುಂತಾದ ಕರ್ಮಗಳನ್ನು ಮಾಡುತ್ತಿದ್ದ ಅವರು ಒಳ್ಳೆಯ ತೇಜಸ್ವಿಗಳಾಗಿ ಕಾಣಿಸುತ್ತಿದ್ದರು. ತಿಮ್ಮಪ್ಪಯ್ಯನೂ ಅವರ ತಮ್ಮನಾಗಿರುವದಕ್ಕೆ ತಕ್ಕವನೇ. ಅವನು ಕಾಲಕಾಲಕ್ಕೆ ಸ್ನಾನಸಂಧ್ಯಾದಿಗಳನ್ನು ಮಾಡುತ್ತಿದ್ದದ್ದರಿಂದ ನನಗೆ ಅವನಲ್ಲಿ ಗೌರವವೇ ಇತ್ತು. ಆದರೆ ಅವನಲ್ಲಿ ಕೆಲವು ವಿಲಕ್ಷಣವಾದ ಸ್ವಭಾವಗಳಿದ್ದವು. ಬರೆಯುವ ಅಕ್ಷರವು ಸುಂದರವಾಗಲೆಂದು ಅವನು ಕನ್ನಡದಲ್ಲಿ ಗಾಯತ್ರೀಮಂತ್ರವನ್ನು ಲಿಖಿತ ಜಪರೂಪವಾಗಿ ಬರೆಯುತ್ತಿದ್ದನು. ಪವಿತ್ರವಾದ ಮಂತ್ರವನ್ನು ಹೀಗೆಲ್ಲ ಬಹಿರಂಗವಾಗಿ ಕಾಪಿಬುಕ್ಕಿನಲ್ಲಿ ಬರೆಯಬಾರದು ಎಂದು ನನ್ನ ಭಾವನೆ. ಇದಲ್ಲದೆ ಅವನು ರೇಖಾಗಣಿತದ ಪ್ರತಿಜ್ಞೆಗಳನ್ನು ಓದಿದ್ದರ ಫಲವಾಗಿ ತನ್ನ ಅಭಿಪ್ರಾಯಗಳನ್ನು ಒಂದು ಪುಸ್ತಕದಲ್ಲಿ ರೇಖಾಗಣಿತದ ಪ್ರತಿಜ್ಞೆಗಳ

ರೂಪದಲ್ಲಿ ಬರೆದಿಟ್ಟುಕೊಂಡಿದ್ದನು. ಅವುಗಳಲ್ಲಿ ಮೊದಲನೆಯ ಪ್ರತಿಜ್ಞೆ (Preposition) ಇಂಗ್ಲಿಷು ಭಾಷೆಯಲ್ಲಿ ಬರೆದಿದ್ದನ್ನು ಇಲ್ಲಿ ಕನ್ನಡದ ಅನುವಾದ ಸಹಿತ ಕೊಡುತ್ತೇನೆ. Enunciation. There is no God. Demonstration. If possible let us suppose that there is God. Then according to Theologists, he must be omnipotent, omniscient etc. In the first place, if he be omnipotent, he must be able to prove that there is God ! for otherwise, he will not be omnipotent, and hence no God. If on the otherhand, he will be able to prove it, then there is certainly no God, because that has been proved. Hence there is no God. Q.E.D.

"ಪ್ರತಿಜ್ಞಾ ವಿಷಯವಾಕ್ಯ ! ದೇವರಿಲ್ಲ. ಉಪಪಾದನೆ : ಸಾಧ್ಯವಾದರೆ, ದೇವರಿದ್ದಾನೆಂದು ಇಟ್ಟುಕೊಳ್ಳೋಣ. ಆಗ ಈಶ್ವರವಾದಿಗಳ ಮತದಂತೆ, ಅವನು ಸರ್ವಶಕ್ತನು, ಸರ್ವಜ್ಞನು ಮುಂತಾದ ಗುಣಗಳುಳ್ಳವನಾಗಿರಬೇಕು. ಮೊದಲನೆಯದಾಗಿ ಅವನು ಸರ್ವಶಕ್ತನಾಗಿದ್ದರೆ ಅವನಿಗೆ ಎಲ್ಲವನ್ನೂ ಉಪಪಾದನೆ ಮಾಡುವದಕ್ಕೆ ಶಕ್ತಿಯೂ ಇರಬೇಕು. ಹಾಗೆ ಮಾಡುವದಕ್ಕೆ ಅವನಿಂದಾಗದೆ ಇದ್ದರೆ ಅವನು ಸರ್ವಶಕ್ತನಲ್ಲವೆಂದೂ, ಆದ್ದರಿಂದ ದೇವರೇ ಅಲ್ಲವೆಂದೂ ಆಗುತ್ತದೆ; ಆದರೆ ಅವನು ಉಪಪಾದನೆ ಮಾಡುವದಕ್ಕೆ ಬಲ್ಲವನಾಗಿದ್ದರೆ, ದೇವರೇ ಇಲ್ಲವೇ ಇಲ್ಲ; ಏಕೆಂದರೆ ಹಾಗೆಂದು ರುಜುವಾತಾಗಿಬಿಟ್ಟಿರುತ್ತದೆ. ಆದ್ದರಿಂದ ದೇವರಿಲ್ಲ. ಇದನ್ನೇ ನಾವು ಉಪಪಾದನೆ ಮಾಡಬೇಕಾಗಿದ್ದದ್ದು." ಇದನ್ನು ಓದಿ ನನಗೆ ಆಶ್ಚರ್ಯವೂ ಖೇದವೂ ಆಯಿತು. ಏಕೆಂದರೆ ಆಗ ತಾನೆ ನನಗೆ ರೇಖಾಗಣಿತದ ಪರಿಚಯವಾಗಿತ್ತು, ಆ ಗಣಿತದ ವಾದ ಸರಣಿಯನ್ನೇ ಅನುಸರಿಸಿ ಬರೆದ ಪ್ರತಿಜ್ಞೆ ಇದಾದ್ದರಿಂದ ದೇವರೇ ಇಲ್ಲವೆಂದಾಯಿತಲ್ಲ ! - ಎಂದು ಆಶ್ಚರ್ಯ. ಆದರೆ ಬ್ರಾಹ್ಮಣನಾಗಿ ಹುಟ್ಟಿರುವ ಈ ಸ್ನೇಹಿತನು ನಾಸ್ತಿಕನಾಗಿರುವನಲ್ಲ ! - ಎಂದು ಖೇದ. ಅಂತೂ ಅವನ ವಾದವನ್ನು ಖಂಡಿಸಲೂ ಆಗದೆ, ಒಪ್ಪಿಕೊಳ್ಳಲೂ ಆಗದೆ ಪೇಚಾಡುತ್ತಿದ್ದೆನು. "ಹಾಗಾದರೆ ನಿನ್ನ ಬಳಿ ಈ ಸಾಲಗ್ರಾಮವೇಕೆ ಇದೆ ?" ಎಂದು ಅವನನ್ನು ಕೇಳಿದೆನು. ಸಾಲಗ್ರಾಮವನ್ನು ಪೂಜೆಮಾಡುವವರೇ ಇಟ್ಟುಕೊಂಡಿರುತ್ತಾರೆಂದು ನನ್ನ ನಂಬಿಕೆ. ಆದರೆ ತಿಮ್ಮಪ್ಪಯ್ಯನು ಬಲುದಿಟ್ಟ "ಇದು ನುಣ್ಣಗಿದೆ, ಒಂದು ತೊಲ ಸರಿಯಾಗಿ ತೂಗುತ್ತದೆ. ಒಂದೊಂದು ತೊಲ ನೆಶ್ಯವನ್ನು ತೂಗಿಕೊಡುವದಕ್ಕೆ ನನಗೆ ಬಹಳ ಅನುಕೂಲವಾಗಿದೆ" ಎಂದುಬಿಟ್ಟನು ! ನಾನು ಏನೂ ತೋಚದೆ ದಿಗ್ಭ್ರಾಂತನಾದೆನು. ಇನ್ನೂ ನಾನು ಸ್ಕೂಲಿನಲ್ಲಿ ಓದುತ್ತಿದ್ದ ಹಾಗೆಯೇ ತಿಮ್ಮಪ್ಪಯ್ಯನಿಗೆ ಪ್ಯಾಸ್ ಆಯಿತು. ಅವನನ್ನು ಸ್ಕೂಲಿನಲ್ಲಿ ಒಂದನೆಯ ಕ್ಲಾಸಿಗೆ ಬದಲಿ ಮೇಷ್ಟರನ್ನಾಗಿ ಕೆಲವು

ದಿನಗಳವರೆಗೆ ನೇಮಿಸಿಕೊಂಡಿದ್ದರು. ಅಷ್ಟುಹೊತ್ತಿಗೆ ಅವನಿಗೆ ಮುಸಲ್ಮಾನರ ಮತದ ಮೇಲೆ ಅಭಿಮಾನವು ಬಂದಿತ್ತು. ಆ ಮತದಲ್ಲಿ ದೇವರಿಗೆ ಆಕಾರವಿಲ್ಲ, ಬೇಕಾದ ಕಡೆಯಲ್ಲಿ ಪ್ರಾರ್ಥನೆ ಮಾಡಬಹುದು. ಇದೊಂದು ವಿಶೇಷ ಸೌಲಭ್ಯ. ಅವರಲ್ಲಿ ಆಹಾರದ ನಿಯಮವು ನಮ್ಮಷ್ಟಿರುವದಿಲ್ಲ. ಉಡುಪು ಬಹಳ ಸರಳವಾಗಿರುತ್ತದೆ. ಅಂಗಿ, ಪಾಯಿಜಾಮ, ತೋಪಿ - ಇವುಗಳೆಲ್ಲ ಅಳ್ಳಕವಾಗಿರುವದರಿಂದ ವಾಯು ಸಂಚಾರಕ್ಕೆ ಹೆಚ್ಚು ಅನುಕೂಲ - ಎಂದು ಮುಂತಾಗಿ ವಾದಿಸುವದಕ್ಕೆ ಪ್ರಾರಂಭಿಸಿದನು. ಅವನಿಗೆ ಯಾವದೋ ಒಂದು ಯಕ್ಷಿಣಿ ವಿದ್ಯೆಯ ಪುಸ್ತಕ ಸಿಕ್ಕಿತು. ಇಸಪೀಟಿನ ಕೈಚಳಕ, ಶುದ್ಧವಾದ ನೀರನ್ನು ತಟ್ಟನೆ ಬಣ್ಣಮಾಡುವದು - ಮುಂತಾದ ಚಾತುರಿಗಳನ್ನು ಅವನು ಕಲಿತುಕೊಂಡಿದ್ದನು. ಮಂಗಗಳನ್ನು ಮೆಸ್ಮರಿಸಂ ಎಂಬ ವಶೀಕರಣವಿದ್ಯೆಯಿಂದ ಒಂದೇ ಮರದ ಕೊಂಬೆಯ ಮೇಲೆ ಇದ್ದುಕೊಂಡಿರುವಂತೆ ಮಾಡುತ್ತೇನೆ, ಕೆಲವು ದಿನಗಳಲ್ಲಿ ಅದು ನಾನು ಹೇಳಿದಂತೆ ಕೇಳುವದು ಎಂದು ಮುಂತಾಗಿ ಕೊಚ್ಚಿಕೊಳ್ಳುತ್ತಿದ್ದನು.

ತಿಮ್ಮಪ್ಪಯ್ಯನಿಂದ ನನಗೆ ಯಳ್ಳಂಬಳಸೆಯಲ್ಲಿ ಬಾಲ್ಯದಲ್ಲಿ ಬೀಜಾವಾಪ-ವಾಗಿದ್ದ ಹಾವಾಡಿಗರ ಗಾರುಡಿ ವಿದ್ಯೆ, ಮೋಡಿ ಮುಂತಾದವುಗಳ ಅಭಿರುಚಿಯು ಈಗ ರೂಪಾಂತರವನ್ನು ಹೊಂದಿ ಇಸಪೀಟಿನ ತಂತ್ರಗಳು **(Card tricks)** 'ಮೋಹನ, ವಶೀರಣವಿದ್ಯೆ' **(Mesmerism, hypnotism)** ಮುಂತಾದ ರೂಪಗಳಲ್ಲಿ ಕೌತುಕರೂಪವಾಗಿ ಪರಿಣಮಿಸಿತು. ತರೀಕೆರೆಯಲ್ಲಿ ಒಮ್ಮೆ ನೋಡಿದ್ದ 'ಶತಾವಧಾನ' ಮತ್ತು 'ಯಕ್ಷಿಣಿ ವಿದ್ಯೆ' ಇವುಗಳ ನೆನಪು ಉಜ್ಜೀವಿತವಾಯಿತು. ನಾನೂ ಅವನಂತೆ ಸ್ವತಂತ್ರವಾಗಿ ತರ್ಕ ಮಾಡುವದನ್ನು ಕಲಿತುಕೊಳ್ಳಬೇಕೆಂಬ ಇಚ್ಛೆಯು ಮೊಳೆತುಕೊಂಡಿತು. ಅವನು ಹೇಗೆ ಜೊತೆಯ ಹುಡುಗರ ಮೇಲೆ ಪ್ರಭಾವವನ್ನು ಬೀರುತ್ತಿದ್ದನೋ ಹಾಗೆ ನಾನೂ ನನ್ನ ಸಂನಿವೇಶದಲ್ಲಿ ಏತಕ್ಕೆ ಮಾಡಿ ಪ್ರಭಾವಶಾಲಿ ಎನ್ನಿಸಿಕೊಳ್ಳಬಾರದು ? - ಎಂಬ ಯೋಚನೆಯೂ ಹುಟ್ಟಿ ಕೊಂಡಿತು. ಈರಣ್ಣನ ಕಣಿವೆಯ ಕಡೆಗೆ ಅಥವಾ ಬಾಬಾಬುಡನ್ ಬೆಟ್ಟದ ಕಡೆಗೆ ದೂರವಾಗಿ ಸಂಚಾರ **Long walk** ಹೋಗಿಬರುವದು, ಅಲ್ಲಲ್ಲಿ 'ಊಟ್ ಬೈಸ್' ಮಾಡುವದು, ಮನೆಯಲ್ಲಿ 'ಡಮ್‌ಬೆಲ್ಸ್' ಸಾಧನವನ್ನು ಮಾಡುವದು ಇವುಗಳೆಲ್ಲ ಅವನ ಸಾಹಚರ್ಯದಿಂದ ಬಂದ ಕೆಲವು ಹವ್ಯಾಸಗಳು.

ಇವೆಲ್ಲದರ ಜೊತೆಗೆ ತಿಮ್ಮಪ್ಪಯ್ಯನಿಂದ ನನಗೆ ಮತ್ತೊಂದು ಪರಮೋಪಕಾರವಾಯಿತು. ಅವನಲ್ಲಿ ಇಂಗ್ಲಿಷುಭಾಷಾಂತರ, ಟಿಪ್ಪಣಿ - ಮುಂತಾದವುಗಳಿದ್ದ ಒಂದು ರಘುವಂಶವಿತ್ತು. ಅದರಲ್ಲಿ ಮೊಟ್ಟಮೊದಲನೆಯ

ಶ್ಲೋಕದಲ್ಲಿದ್ದ ''ಪಾರ್ವತೀಪರಮೇಶ್ವರೌ'' ಎಂಬ ಸಮಾಸಕ್ಕೆ 'ಪಾರ್ವತೀಪ-ರಮೇಶ್ವರೌ' ಎಂದು ವಿಗ್ರಹವಾಕ್ಯವನ್ನು ಕೆಲವರು ಹೇಳಿರುತ್ತಾರೆಂದು ಟಿಪ್ಪಣಿಯಲ್ಲಿ ಬರೆದಿತ್ತು. ಒಂದೇ ಪದಕ್ಕೆ ಹೇಗೆ ಬಗೆಬಗೆಯ ಅರ್ಥವನ್ನು ತೋರಿಸುವದಕ್ಕೆ ಸಂಸ್ಕೃತದಲ್ಲಿ ಅನುಕೂಲ್ಯವಿದೆ ಎಂದು ನನ್ನ ಮನಸ್ಸಿಗೆ ಹೊಳೆಯಿತಲ್ಲದೆ ಸಂಸ್ಕೃತವನ್ನು ಇಂಗ್ಲಿಷು ಭಾಷೆಯ ಸಹಾಯದಿಂದ ಸುಲಭವಾಗಿ ಕಲಿಯಬಹುದೆಂಬುದಕ್ಕೆ ಇದೊಂದು ಪ್ರೋತ್ಸಾಹಕ ನಿದರ್ಶನವಾಯಿತು. ಆ ಪುಸ್ತಕವನ್ನು ತಂದು ಮನೆಯಲ್ಲಿ ವಿರಾಮ ಕಾಲದಲ್ಲಿ ಸ್ವಂತವಾಗಿ ಓದಿಕೊಳ್ಳುವದಕ್ಕೆ ಮೊದಲು ಮಾಡಿದೆನು. ದೈವಗತಿಯಿಂದ ಈ ಕಾಲಕ್ಕೆ ಸರಿಯಾಗಿ ಮಳಗಾಂವ್‌ಕರ್ ಕಂಪನಿಯಿಂದ ಒಂದು ಪ್ರಕಟನೆ ಬಂದಿತ್ತು. ಅದರಲ್ಲಿ ಕೆಲಕೆಲವು ಪುಸ್ತಕಗಳನ್ನು ಬೇರೆ ಬೇರೆಯಾಗಿ ಕೊಂಡರೆ ಇಂತಿಷ್ಟು ರೂಪಾಯಿಗಳಾಗುತ್ತವೆ, ಆದರೆ ಒಂದು ತಂಡವನ್ನು ಒಟ್ಟಿಗೇ ಕೊಂಡರೆ ಇಂತಿಷ್ಟು ರಿಯಾಯಿತಿ ಬೆಲೆಗೆ ಕೊಟ್ಟುಬಿಡುತ್ತೇವೆ - ಎಂದು ಕರಪತ್ರದಲ್ಲಿ ಪ್ರಕಟಿಸಿತ್ತು. ನನಗೆ ಅದನ್ನು ಓದಿದ ಕೂಡಲೆ ಬಾಯಿನೀರು ಕರೆಯಿತು. ಕೆಲವು ಇಂಗ್ಲಿಷು ಪುಸ್ತಕಗಳ ಜೊತೆಗೆ 'ಮೆಕ್ಡಾನಲ್ಡ್ ಡಿಕ್ಷನರಿ' ಎಂಬ ಸಂಸ್ಕೃತ-ಇಂಗ್ಲಿಷು ನಿಘಂಟುವೊಂದು ಸೇರಿದ್ದಿದ್ದನ್ನು ಕಂಡು ಅದನ್ನು ಕಳುಹಿಸಿಕೊಡುವಂತೆ ಕೂಡಲೆ ಬರೆದುಕೊಂಡೆನು. ಆ ತಂಡಕ್ಕೆಲ್ಲ ಒಟ್ಟು ನಾನು ಆರೇಳು ರೂಪಾಯಿಗಳಿಗಿಂತ ಹೆಚ್ಚಾಗಿ ಕೊಟ್ಟಿರಲಾರೆ. ಆ ಕಾಲಕ್ಕೆ ಬೆಲೆಯುಳ್ಳವೆಂದು ನನಗೆ ತೋರಿದ ಆ ಪುಸ್ತಕಗಳಲ್ಲಿ ಯಾವದೊಂದೂ ಈಗ ನನ್ನಲ್ಲಿಲ್ಲ ; ಆದರೆ ಆ ನಿಘಂಟು ಮಾತ್ರ ನನಗೆ ಒಂದು ನಿಧಿಯಾಗಿ ಪರಿಣಮಿಸಿತು. ಮುಂದೆ ಸಂಸ್ಕೃತಾಭ್ಯಾಸಕ್ಕೆ ಇದರಿಂದ ಅಮೋಘ ಸಹಾಯವು ದೊರಕಿತು.

ನನ್ನ ಜೊತೆಗಾರರಲ್ಲಿ ಲಚ್ಚಿಯ ಹೆಸರನ್ನು ಆಗಲೆ ಹೇಳಿರುತ್ತೇನೆ. ಅವನು ಕೊನೆಯವರೆಗೂ ಚಿಕ್ಕಮಗಳೂರಿನಲ್ಲಿದ್ದುಕೊಂಡು ಓದಿದನೊ ಇಲ್ಲವೊ, ಮರೆತು ಹೋಗಿದೆ. ಮಿಕ್ಕವರಲ್ಲಿ ವೆಂಕಟಸ್ವಾಮಿಅಯ್ಯರ್, ಶ್ರೀನಿವಾಸಾಚಾರ್, ನರಸಿಂಹಯ್ಯಂಗಾರ್, ಪುಟ್ಟಣ್ಣಶಾಸ್ತ್ರಿ, ರಂಗಾಚಾರ್ ಇವರು ಮುಖ್ಯರು. ವೆಂಕಟಸ್ವಾಮಿಅಯ್ಯರ್ ತಂದೆ ಆವೂರಲ್ಲಿ ಹೋಟಲಿಟ್ಟುಕೊಂಡಿದ್ದರು. ಅವನ ಸ್ನೇಹದಿಂದ ನನಗೆ ಓದುವದರಲ್ಲಿ ಹುರುಪು ಉಂಟಾಯಿತಲ್ಲದೆ ಆಗಾಗ್ಗೆ ಅವರ ಮನೆಯಲ್ಲಿ ಸ್ವಲ್ಪ ಫಳಾರವೂ ಸಿಕ್ಕುತ್ತಿತ್ತು. ವೆಂಕಟಸ್ವಾಮಿ ಒಳ್ಳೆಯ ಚುರುಕು ಬುದ್ಧಿಯವನು. ತರಗತಿಯಲ್ಲಿ ಸಾಮಾನ್ಯವಾಗಿ ನಾನು ಮೊದಲನೆಯವನು. ಅವನು ಎರಡನೆಯವನು. ನರಸಿಂಹಯ್ಯಂಗಾರ್ ಎಂಬುವನು ಚಿಕ್ಕಮಗಳೂರಿನವ. ಅವನು ಕ್ರಿಕೆಟ್ಟಿನಲ್ಲಿ ಬಲುಗಟ್ಟಿಗ ; ಹಿಸ್ಟರಿ ಟೀಚರ್ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ

ಅಚ್ಚುಮೆಚ್ಚು. ಪಾಠದಲ್ಲಿ ಅಷ್ಟೇನೂ ಹೇಳಿಸಿಕೊಂಡವನಲ್ಲ. ಆದರೂ ಅವನ ಸ್ನೇಹದಿಂದ ಹಿರೆಮಗಳೂರಿಗೆ ಹೋಗಿಬರುವದು, ತೇರಿನಲ್ಲಿ ಪಾನಕ ಸ್ವೀಕಾರಾದಿಗಳಲ್ಲಿ ಭಾಗವನ್ನು ವಹಿಸುವದು, ಕೆಲವು ಆಟಪಾಠಗಳಲ್ಲಿ ಸೇರುವದು - ಇಷ್ಟಕ್ಕೆ ನನಗೆ ಅವಕಾಶವು ದೊರೆತಿತ್ತು. ಶ್ರೀನಿವಾಸಾಚಾರ್ ಒಬ್ಬ ಇಂಜಿನಿಯರರ ಮಗನು. ಚಿಕ್ಕಮಗಳೂರಿನಲ್ಲಿದ್ದಾಗ ಅವನ ಬುದ್ಧಿಯು ಅಷ್ಟೇನೂ ಅರಳಿಕೊಂಡಿರಲಿಲ್ಲ ; ಬೆಂಗಳೂರಿನಲ್ಲಿ ಅವನಿಗೂ ನನಗೂ ಮತ್ತೆ ಸಂಬಂಧ-ವಾದಾಗಿನ ಸ್ಥಿತಿಯನ್ನು ಮುಂದೆ ತಿಳಿಸುವೆನು. ರಂಗಾಚಾರ್ ಒಬ್ಬ ಕಾಫಿಪ್ಲಾಂಟರ ಮಗ. ಅವನು ಶಿವಮೊಗ್ಗದಲ್ಲಿ ಓದುತ್ತಿದ್ದ. ಒಂದು ಸಲ ಫೇಲಾಗಿ ಚಿಕ್ಕಮಗಳೂರಿಗೆ 1899ರಲ್ಲಿಯೇ ಬಂದ ಹಾಗೆ ಕಾಣುತ್ತದೆ. ನೋಡುವದಕ್ಕೆ ಸ್ಫುರದ್ರೂಪಿಯೂ ಮಾತಿನಲ್ಲಿ ಚತುರನೂ ಆಗಿದ್ದದ್ದಲ್ಲದೆ, ಅವನು ಶ್ರೀಮಂತರ ಮಗನಾದ್ದರಿಂದಲೂ ಹೆಡ್‌ಮಾಸ್ಟರು ಅವನಿಗೆ ಸ್ವಲ್ಪ ಹೆಚ್ಚಿನ ಗೌರವಸ್ಥಾನವನ್ನು ಕೊಡುತ್ತಿದ್ದದ್ದರಿಂದಲೂ ನಾನು ಅವನಿಗಿಂತ ಸ್ವಲ್ಪ ಕಡಿಮೆಯ ಅಂತಸ್ತಿನವನು ಎಂಬ ನೈಚ್ಯಾನುಸಂಧಾನವು ನನಗೆ ಇತ್ತು. ಇಂಗ್ಲಿಷು ವಾಕ್ಯರಚನೆ, ರೇಖಾಗಣಿತದಲ್ಲಿ ಕೆಲವು ಸಮಸ್ಯೆಗಳನ್ನು ಬಿಡಿಸುವದು - ಇವುಗಳಲ್ಲಿ ಅವನ ಹಿರಿಮೆಯು ಎದ್ದುತೋರುತ್ತಿತ್ತು. ಅವನು ಹೆಚ್ಚು ಕಡಿಮೆಯಾಗಿ ನಮ್ಮ ಕ್ಲಾಸಿನ ಹಿರೇಮಣಿಯಾಗಿದ್ದನು ಎನ್ನಬಹುದು.

ಪುಟ್ಟಣ್ಣಶಾಸ್ತ್ರಿ ಮೈಸೂರಿನಲ್ಲಿ ಒಂದು ಸಲವೊ, ಎರಡು ಸಲವೊ ಮೆಟ್ರಿಕ್ ಫೇಲಾಗಿ ಬಂದ ಮತ್ತೊಬ್ಬ ಹಿರಿಯ ವಿದ್ಯಾರ್ಥಿ. ಅವನ ಕಂಠವು ಬಹು ಮಧುರವಾಗಿತ್ತು. ಕುಚೇಷ್ಟೆಯಲ್ಲಿಯೂ ಸ್ವಲ್ಪ ಕುಶಲನೆನ್ನಬಹುದು. ಒಮ್ಮೆ ಹೆಡ್‌ಮಾಸ್ಟರ್ ಏನೋ ಕಾರಣದಿಂದ ಹುಡುಗರ ಮೇಲೆ ಸಿಟ್ಟುಮಾಡಿದ್ದರು. ಮಾರನೆಯ ದಿನ ಅವರು ಕ್ಲಾಸಿಗೆ ಬಂದ ಹೊತ್ತಿಗೆ ಬೋರ್ಡಿನ ಮೇಲೆ **'A wiseman turneth away from the wrath'** (ವಿವೇಕಿಯು ಕ್ರೋಧದಿಂದ ನಿವೃತ್ತನಾಗುತ್ತಾನೆ) ಎಂಬ ಇಂಗ್ಲಿಷು ವಾಕ್ಯವನ್ನು ಬರೆದಿದ್ದನು. ಮಾಸ್ಟರು ತರಗತಿಗೆ ಬರುತ್ತಲೂ ಅದನ್ನು ನೋಡಿದರು. ಪ್ರಶಾಂತಮುಖದಿಂದ ಕುಳಿತುಕೊಂಡು ನಗು ಮುಖದಿಂದ ಎಲ್ಲರ ಕಡೆಗೂ ನೋಡಿ ''ಇಲ್ಲಿ ಬರೆದಿರುವ ಸೂಕ್ತಿಯ ಅರ್ಥವೇನು ಬಲ್ಲಿರಾ ?' ಎಂದು ಪೀಠಿಕೆಯನ್ನು ನೋಡಿ **wrath** (ಅಸ್ಥಾನೇ ಕೋಪ), **anger** (ಸ್ಥಾನೇ ಕೋಪ) ಎಂಬ ಎರಡು ಬಗೆಯ ಸಿಟ್ಟು ಇರುವದೆಂತಲೂ ಅಸ್ಥಾನದಲ್ಲಿ ಮಾಡುವ ಸಿಟ್ಟನ್ನು ಬಿಟ್ಟುಬಿಡಬೇಕೆಂತಲೂ ಜನರನ್ನು ಸರಿಯಾದ ಮಾರ್ಗಕ್ಕೆ ತರುವ ಸಿಟ್ಟು ಒಳ್ಳೆಯದಾದ್ದರಿಂದ ಅದನ್ನು ಪರಿಗ್ರಹಿಸಬೇಕೆಂತಲೂ ಉಪನ್ಯಾಸವನ್ನು ಮಾಡಿದರು. ಆಗ ಹುಡುಗರೆಲ್ಲರೂ ಮುಗುಳುನಗೆಯಿಂದ ಶಾಸ್ತ್ರಿಯ ಮುಖವನ್ನು

ನೋಡಿದರು. ಶಾಸ್ತ್ರಿಯು ಆ ವರ್ಷ ಪ್ರೈಸ್ ಡಿಸ್ಟ್ರಿಬ್ಯೂಷನ್ - ಪಾರಿತೋಷಿಕ ಪ್ರದಾನ ಮಹೋತ್ಸವದಲ್ಲಿ ಮಹಾರಾಜರ ಮುಂದೆ ಮಧ್ಯಮಾವತಿ ರಾಗದಲ್ಲಿ ಕೆಲವು ಪದ್ಯಗಳನ್ನು ಗಂಭೀರವಾಗಿ ಹಾಡಿದ್ದನು; ನನ್ನ ಹತ್ತಿರವಿದ್ದ ಒಬ್ಬಿಬ್ಬರು ಹುಡುಗರು ಈಗ ಇವನು ಹಾಡುತ್ತಿರುವದು ಯಾವ ಆಹುತಿಯ ರಾಗ ? - ಎಂದು ಪಿಸುಮಾತಿನಲ್ಲಿ ಅಂದುಕೊಂಡರು. ಮತ್ತೊಂದು ದಿನ ಟಿ.ವಿ. ಕೃಷ್ಣರಾಯರ ಮೇಲುವಿಚಾರಣೆಯಲ್ಲಿ ನಮಗೆಲ್ಲ ಡ್ರಿಲ್ (ಕವಾಯತು) ಆಗುತ್ತಿತ್ತು. ಆಗ ಡ್ರಿಲ್ ಎಂಬುದು ಯಾವ ಹುಡುಗರಿಗೂ ರುಚಿಸುತ್ತಿರಲಿಲ್ಲ; ಡ್ರಿಲ್‌ಮಾಸ್ಟರು ಅಕ್ಷರ ವಿದ್ಯೆಯಲ್ಲಿ ಸರಿಯಾದ ಯೋಗ್ಯತೆಯಿಲ್ಲದವರೆಂಬುದು ಇದಕ್ಕೆ ಕಾರಣವಿರಬಹುದು. ಹುಡುಗರು ಡ್ರಿಲ್, ಪ್ಯಾರಲೆಲ್ ಬಾರ್ಸ್ ಮುಂತಾದ ಸಾಧನಗಳನ್ನು ಮಾಡುತ್ತಿರುವಾಗ ಒಬ್ಬೊಬ್ಬ ಸಹೋಪಾಧ್ಯಾಯರು ಅಲ್ಲಿ ಇದ್ದುಕೊಂಡು ಮೇಲು ವಿಚಾರಣೆ ಮಾಡಬೇಕಾಗಿತ್ತು. **Both hands up** ! (ಎರಡೂ ಕೈಗಳು ಮೇಲಕ್ಕೆ !) ಎಂಬ ಸೂಚನೆಯನ್ನು ಡ್ರಿಲ್ ಮಾಸ್ಟರು ಕೊಟ್ಟರೊ ಇಲ್ಲವೊ, ಶಾಸ್ತ್ರಿಯು ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿದನು ! ಒಂದೊಂದು ಕೈಯಲ್ಲಿ ಒಂದೊಂದು ಬೋಂಡವಿತ್ತು ! ಆಗ ಹುಡುಗರ ನಗುವಿಗೂ ಕೃಷ್ಣರಾಯರ ಕೋಪಕ್ಕೂ ಒಮ್ಮೆಗೇ ಅವಕಾಶವು ದೊರೆಯಿತೆಂಬುದನ್ನು ಹೇಳಬೇಕಾದದ್ದೇ ಇಲ್ಲವಷ್ಟೆ ?

ಲಕ್ಷ್ಮಣಶಾಸ್ತ್ರಿ, ರಾಮರಾವ್ - ಇವರು ಇನ್ನಿಬ್ಬರು ತರಗತಿಯ ಜೊತೆಗಾರರು. ಲಕ್ಷ್ಮಣರಾಯನು ಯಾವ ಅಭ್ಯಾಸವನ್ನು ಬರೆದುಕೊಂಡು ಬಂದಿದ್ದರೂ ಅದು ಬಹು ಸುಂದರವಾದ ಅಕ್ಷರಗಳಲ್ಲಿರುತ್ತಿತ್ತು. ಹೆಡ್‌ಮಾಸ್ಟರು ಅದನ್ನು **Heaven** (ಸ್ವರ್ಗ !) ಎಂದು ಕೊಂಡಾಡುತ್ತಿದ್ದರು. ರಾಮರಾವ್ ಪ್ರಾಯಶಃ ಎಲ್ಲಾ ಪಾಠದಲ್ಲಿಯೂ ಹಿಂದೆಯೇ ಇದ್ದನೆಂದು ನನ್ನ ನೆನಪು. ಹೆಡ್‌ಮಾಸ್ಟರು ಅವನಿಗೆ ಪ್ರಶ್ನೆಹಾಕಿ ಅವನು ಒಂದು ಉತ್ತರವನ್ನು ಹೇಳುವವರೆಗೂ ಬಿಡದೆ ಮತ್ತೆ ಮತ್ತೆ ಪ್ರಶ್ನೆಗಳಿಂದ ಅವನಿಗೆ ಉತ್ತೇಜನವನ್ನು ಕೊಡುತ್ತಲೇ ಇದ್ದರು. ಹೀಗಾಗಿ ಅವನು ಉತ್ತರವನ್ನು ಹೇಳುವದಕ್ಕೆಂದು ಮತ್ತೆ ಮತ್ತೆ ನಿಂತುಕೊಳ್ಳಬೇಕಾಗುತ್ತಿತ್ತು. ಅವನನ್ನು ಹಾಗೇಕೆ ಗೋಳುಗುಟ್ಟಿಸುವರೊ ! ಎಂದು ನಮ್ಮಲ್ಲಿ ಕೆಲವರು ಗೊಣಗುಟ್ಟಿಕೊಳ್ಳುತ್ತಿದ್ದರು.

ತರಗತಿಯಲ್ಲಿ ನಾನು ಬಲುಮಟ್ಟಿಗೆ ಎಲ್ಲಾ ಪಾಠಗಳಲ್ಲಿಯೂ ಮೇಲುಗೈ-ಯಾಗಿಯೇ ಇರುತ್ತಿದ್ದೆನೆಂದು ಹೇಳಿರುತ್ತೇನಷ್ಟೆ. ಹುಡುಗರೆಲ್ಲರೂ ಒಳಗೊಳಗೇ ಮಾತನಾಡಿಕೊಂಡು ನಾವೆಲ್ಲರೂ ಒಂದೊಂದು ವಿಷಯದಲ್ಲಾದರೂ ಮೊದಲನೆ-ಯವರಾಗುವದಕ್ಕೆ ಪ್ರಯತ್ನಿಸೋಣ ಎಂದು ಪೈಪೋಟಿಯಿಂದ ಅಭ್ಯಾಸ

ಮಾಡುತ್ತಿದ್ದಾರೆಂದು ನನಗೆ ತೀರ ಕೊನೆಯಲ್ಲಿ ಗೊತ್ತಾಯಿತು. ಅದರಲ್ಲಿ ಒಬ್ಬೊಬ್ಬನು ಒಂದೊಂದು ದಿನ ಹರಿಯಪ್ಪನವರ ಮನೆಯಲ್ಲಿ ನಾನು ಇದ್ದಾಗಲೆ ಅಲ್ಲಿಗೆ ಬಂದು ನನ್ನನ್ನು ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕೇಳುವದು, ಯಾವದಾದರೊಂದು ವಿಷಯವನ್ನು ಚರ್ಚೆಗೆ ಹಾಕುವದು - ಹೀಗೆಲ್ಲ ಕಾಲಹರಣ ಮಾಡುತ್ತಿದ್ದರು. **ಆದರೂ ಅದೇನು ಕಾರಣದಿಂದಲೋ ನಾನು ಒಂದೊಂದು ವಿಷಯದಲ್ಲಿ - ಒಂದೊಂದು ವಿಷಯದ ಒಂದೊಂದು ವಿಭಾಗದಲ್ಲಿ ಕೂಡ ಮೊದಲನೆಯವನೇ ಆಗುತ್ತಿದ್ದೆನು.**

## ವಿದ್ಯಾರ್ಥಿಗಳ ಚರ್ಚಾಕೂಟ :

ಸ್ಕೂಲಿನಲ್ಲಿ ಒಂದು ಡಿಬೇಟಿಂಗ್ ಸೊಸೈಟಿ (ವಿದ್ಯಾರ್ಥಿಗಳ ಚರ್ಚಾಸಂಘ) ಇತ್ತು. ಅದರಲ್ಲಿ ಅನೇಕ ವಿಷಯಗಳ ಚರ್ಚೆಯಾಗುತ್ತಿದ್ದವು ; ಆದರೆ ನಾನು ಅವುಗಳಲ್ಲಿ ಭಾಗವನ್ನು ವಹಿಸಿದ್ದು ಬಹಳ ಕಡಿಮೆ ! ಕೆ. ವೆಂಕಟಸ್ವಾಮಿ ಅಯ್ಯರವರು ಹೆಡ್‌ಮಾಸ್ತರಾಗಿದ್ದಾಗಲೆ ಅದು ಸ್ಥಾಪಿತವಾಗಿತ್ತು. ಅದು ಪ್ರಾರಂಭವಾಗುವ ದಿನ ಅಯ್ಯರವರು ನಮ್ಮಗಳಿಗೆಲ್ಲ ಒಂದೊಂದು ಚೀಟಿಯನ್ನು ಕೊಟ್ಟು ಅದರಲ್ಲಿ ಬರೆದಿದ್ದ ವಿಷಯವಾಗಿ ಹತ್ತಿಪ್ಪತ್ತು ವಾಕ್ಯಗಳ ಒಂದು ಭಾಷಣವನ್ನು ಮಾಡಬೇಕೆಂದು ಹೇಳಿದರು. ವಿಷಯಗಳು ಕಪ್ಪೆ, ಕಾಗದ, ಹನಿ, ಮಡಿ, ವೇಳೆ, ಬೀದಿ, ಸಂತೆ - ಮುಂತಾದ ದಿನದಿನವೂ ನಮಗೆ ಕಣ್ಣಿಗೆ ಬೀಳುವದೇ ಆಗಿದ್ದರೂ ನಮಗೆ ಅವುಗಳನ್ನು ಕುರಿತು ಏನು ಹೇಳುವದಕ್ಕೂ ತೋಚಲಿಲ್ಲ. ಅಯ್ಯರವರು 'ನೋಡಿದಿರಾ ? ಯಾವದಾದರೊಂದು ವಿಷಯವನ್ನು ಕುರಿತು ಮಾತಾಡುವದು ಎಷ್ಟು ಕಷ್ಟ ? ಹೀಗಿರುವಲ್ಲಿ ನಮಗೆ ಪರಕೀಯವಾಗಿರುವ ಇಂಗ್ಲಿಷು ಭಾಷೆಯಲ್ಲಿ ವಾಕ್ಯರಚನೆ ಮಾಡಬೇಕಾದರೆ ಎಷ್ಟು ಕಷ್ಟವಾದೀತು ! ನೀವೆಲ್ಲರೂ ಈ ಚರ್ಚಾಕೂಟದಲ್ಲಿ ಮೊದಲೇ ಗೊತ್ತುಮಾಡಿಟ್ಟಿರುವ ವಿಷಯದಲ್ಲಿ ಆಲೋಚನೆ ಮಾಡಿ ನಾವು ಏನು ಹೇಳಬೇಕೆಂಬುದನ್ನು ಗೊತ್ತುಮಾಡಿಕೊಂಡು ಬನ್ನಿರಿ. ಇಲ್ಲಿ ಧಾರಾಳವಾಗಿ ಮಾತನಾಡುವದು, ನಿಮ್ಮ ಅಭಿಪ್ರಾಯವನ್ನು ತಿಳಿಸುವದು. ಮತ್ತೊಬ್ಬರು ಹೇಳಿದ್ದರಲ್ಲಿ ದೋಷವನ್ನು ಕಂಡುಹಿಡಿಯುವದು - ಇದನ್ನೆಲ್ಲ ಅಭ್ಯಾಸ ಮಾಡಿಕೊಳ್ಳಿ ಎಂದು ಬುದ್ಧಿವಾದವನ್ನು ಹೇಳಿದರು. ಚರ್ಚಾಕೂಟದ ಪ್ರಯೋಜನವು ಹೆಚ್ಚೆಂದು ನನಗೆ ತೋರಿದರೂ ಅದರಿಂದ ನಾನು ಅಷ್ಟಾಗಿ ಲಾಭವನ್ನು ಪಡೆಯುವದಕ್ಕೆ ಪ್ರಯತ್ನಿಸಲಿಲ್ಲ. ಏಕೆಂದರೆ ಅಲ್ಲಿಗೆ ಬರುತ್ತಿದ್ದ ಅನುಭವಶಾಲಿಗಳಾದ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಪುಸ್ತಕಗಳಿಂದ ವಿಷಯಗಳನ್ನು ಕೂಡಿಹಾಕಿಕೊಂಡು ಬಂದು

ಉತ್ತಮವಾದ ಇಂಗ್ಲಿಷಿನಲ್ಲಿ ಭಾಷಣವನ್ನು ಮಾಡುತ್ತಿದ್ದರು. ಇನ್ನು ಕೆಲವರು ಉತ್ತಮರೀತಿಯಿಂದ ಚರ್ಚೆಯನ್ನು ಪ್ರಾರಂಭಿಸುತ್ತಿದ್ದರು. ನನಗಾದರೋ ವಿಷಯ ಸಂಗ್ರಹವೂ ಇಲ್ಲ, ಶಬ್ದ ಭಂಡಾರವೂ ಸಾಲದು ; ಆದ್ದರಿಂದ ಯಾವದಕ್ಕೂ ಹಿಂಜರಿಯುತ್ತಲೇ ಇದ್ದೆನು. ಒಂದೆರಡು ಸಂದರ್ಭಗಳಲ್ಲಿ ಮಾತ್ರವೇ ಮಾತಾಡಿರಬಹುದು. ಕೂಟದಲ್ಲಿ ನಡೆದ ಎರಡು ಘಟನೆಗಳು ಮಾತ್ರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಒಂದು ಭಾನುವಾರ ಸಾಯಂಕಾಲ ನಮ್ಮಲ್ಲಿ ಒಬ್ಬರು ಬಹಳ ಮಟ್ಟಿಗೆ ರಂಗರಾವ್ ಇರಬಹುದು. ವಾರನ್ ಹೇಸ್ಟಿಂಗ್ಸ್‌ನ ಅಪರಾಧಗಳನ್ನು ಒಂದೊಂದಾಗಿ ಹೇಳಿದನು. ಆ ಭಾಷಣವನ್ನು ಪುಷ್ಟೀಕರಿಸಿ ಒಬ್ಬಿಬ್ಬರು ಮಾತನಾಡಿದರು. ವಿರೋಧವಾಗಿ ಯಾರಾದರೂ ಮಾತಾಡಿದರೊ, ಇಲ್ಲವೊ ಹೇಳಲಾರೆ. ಆದರೆ ಆ ದಿನ ಅಧ್ಯಕ್ಷರಾಗಿ ಬಂದ ಪಾದ್ರಿ ರೆಡ್‌ಫರ್ನ್ ಎಂಬುವರು ವಿಷಯವನ್ನು ಹೇಗೋ ತಿರುಗಿಸಿಕೊಂಡು ಇಂಗ್ಲಿಷಿನವರಿಂದ ಈ ದೇಶಕ್ಕೆ ಆಗಿದ್ದ ಉಪಕಾರವನ್ನು ವಿವರಿಸಿದ್ದಲ್ಲದೆ ಅವರ ಮೂಲಕ ಈ ದೇಶಕ್ಕೆ ಬಂದ ಕ್ರಿಸ್ತಿಯನ್ ಮತದ ಪ್ರಾಶಸ್ತ್ಯವನ್ನು ಕೊಂಡಾಡಿದರು. ಕ್ರಿಸ್ತರ ಮತವೆಂಬುದೊಂದು ಬೇರೆ ಇದೆ ಎಂಬುದು ನನಗೆ ಯಳ್ಳಂಬಳಸೆಯಲ್ಲಿ ಕನಸಿನಲ್ಲಿ ತೋರುವಂತೆ ಒಂದು ಸಲ ನನ್ನ ಮನಸ್ಸಿಗೆ ಹೊಳೆದಿತ್ತು. ಒಬ್ಬ ಉಪದೇಶಿಯು 'ಜೋಹಾನನ ಸುವಾರ್ತೆ' ಮುಂತಾದ ಕೆಲವು ಸಣ್ಣ ಸಣ್ಣ ಪುಸ್ತಕಗಳನ್ನು ತಂದು ಸ್ಕೂಲಿನ ಹುಡುಗರಿಗೆ ಹಂಚಿದ್ದನು. ಅದನ್ನು ಓದುವದಕ್ಕೆ ಮೊದಲು ಮಾಡಿದಾಗ ಮನೆಯವರು 'ಥೂ! ಇದನ್ನೇಕೆ ಮನೆಗೆ ತಂದಿರೊ ?' ಎಂದು ಅಸಹ್ಯದಿಂದ ಅದನ್ನು ಕಸಿದುಕೊಂಡು ಹೊರಕ್ಕೆ ಎಸೆದಿದ್ದರು. ತರೀಕೆರೆಯಲ್ಲಿ ನಮ್ಮ ಪರಿಚಿತರಲ್ಲೊಬ್ಬರು ಗರ್ಲ್‌ಸ್ಕೂಲು ಮೇಷ್ಟರಾಗಿದ್ದರು. ಅದು ಕ್ರಿಸ್ತಿಮಿಷನ್ ಸ್ಕೂಲೆಂಬುದು ನನಗೆ ಆಗ ಗೊತ್ತೇ ಇರಲಿಲ್ಲ. ಒಂದು ದಿನ ಆ ಸ್ಕೂಲಿಗೆ ಸಂಬಂಧಪಟ್ಟ ಉಪದೇಶಿಗಳೊಬ್ಬರು ಉಪನ್ಯಾಸ ಮಾಡುತ್ತಾರೆಂದು ಮೇಷ್ಟರು ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ಹತ್ತು ಹದಿನೈದು ಹುಡುಗರು ಮತ್ತು ಒಬ್ಬಿಬ್ಬರು ದೊಡ್ಡವಯಸ್ಸಿನವರೂ ಇದ್ದರು. ಉಪದೇಶಿಗಳು ಏನೇನೋ ಹೇಳಿದರು ; ನನಗೆ ಒಂದೂ ಅರ್ಥವಾಗಲಿಲ್ಲ. 'ಅದ್ವೈತವೆಂದರೆ ಕಲ್ಲು, ಮಣ್ಣು, ಬೆಂಚು, ಅಸಹ್ಯವಾದ ಪದಾರ್ಥಗಳು ಎಲ್ಲರೂ ದೇವರು ಎಂಬ ಮತ. ಆ ಮತದ ಪ್ರಕಾರ ನೀವೆಲ್ಲರೂ ಬೆಂಚಿನ ರೂಪದಲ್ಲಿರುವ ದೇವರ ಮೇಲೆ ಕೂತಿದ್ದೀರಿ' ಎಂದು ಮುಂತಾಗಿ ಹೇಳಿದರು. ಅವರು ಹೇಳುವ ಮತವು ಹಿಂದುಗಳಾದ ನಮಗೆ ಸಂಬಂಧಪಟ್ಟಿದೆ ಎಂದು ಕೂಡ ನನಗೆ ಅರಿವಾಗಲಿಲ್ಲ. ದಾರಿಯಲ್ಲಿ ಜನರು ಆ ಉಪದೇಶಿಗಳ ವಿಷಯಕ್ಕೆ ಏನೊ ಗೊಣಗುಟ್ಟುತ್ತ ಮನೆಗೆ ಬಂದರು! ಅದರ ಕಾರಣವೂ ಗೊತ್ತಾಗಲಿಲ್ಲ. ನಾನು ಹಾಸನದಲ್ಲಿ ಓದುತ್ತಿದ್ದಾಗ ಜೊತೆಯ

ಹುಡುಗನೊಬ್ಬನು ನಾನು 'ಯಹೂದಿಯವನು' ಎಂದು ಹೇಳಿದ್ದನು. ಆಗಲೂ ನನಗೆ ಯಹೂದಿ ಅಥವಾ ಕ್ರಿಸ್ತಮತದ ವಿಷಯವಾಗಿ ಏನೂ ತಿಳಿಯದೆ ಇತ್ತು. ನಮ್ಮ ತಂದೆಯವರು ಹರಾಜಿನಲ್ಲಿ ಅಗ್ಗವಾಗಿ ಕೊಂಡುಕೊಂಡಿದ್ದ ದಪ್ಪಕ್ಷರದ ಇಂಗ್ಲಿಷು ಬೈಬಲ್ ಪುಸ್ತಕವೊಂದು ನಮ್ಮ ಮನೆಯಲ್ಲಿತ್ತು. ಅದನ್ನು ತಲೆದಿಂಬಿಗೆ ಇಟ್ಟುಕೊಳ್ಳುವದು, ಎಳೆ ವಯಸ್ಸಿನ ಹುಡುಗರ ಕೈಯಲ್ಲಿ ಅದನ್ನು ಎತ್ತಿಸಿದಾಗ ಅವರು ಅದನ್ನು ಎತ್ತಲಾರದಿದ್ದರೆ ನಗುವದು - ಇದೇ ಮುಂತಾದ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಅದೂ ಒಂದು ಧರ್ಮಗ್ರಂಥವೆಂಬುದು ನನಗೆ ಬಹಳ ಈಚೆಗೆ ಮನದಟ್ಟಾಯಿತು. ಹಿಂದುಸ್ಥಾನದ ಚರಿತ್ರೆ, ಭೂವಿವರಣೆ - ಇವುಗಳನ್ನು ಅಷ್ಟು ಸವಿವರವಾಗಿ ಓದದೆ ಇದ್ದ ನನಗೆ ಕ್ರಿಸ್ತಮತದ ವಿಚಾರವನ್ನು ಅಷ್ಟಾಗಿ ತಿಳಿದುಕೊಳ್ಳುವದಕ್ಕೆ ಅವಕಾಶವಿರಲಿಲ್ಲ. ಚಿಕ್ಕಮಗಳೂರಿನಲ್ಲಿ ಚರ್ಚಾಕೂಟದಲ್ಲಿ ಪಾದ್ರಿಸಾಹೇಬರು ಮಾಡಿದ ಉಪದೇಶವು ಹುಡುಗರ ಮನಸ್ಸನ್ನು ಕ್ರಿಸ್ತಿಯನ್ ಮತದ ಕಡೆಗೆ ಎಳೆಯುವದಕ್ಕೆ ಎಂಬುದು ರಂಗರಾವ್ ಸ್ನೇಹಿತರಿಂದ ಚರ್ಚಾಕೂಟದಲ್ಲಿ ನನಗೆ ತಿಳಿಯಿತು.

ಇನ್ನೊಂದು ದಿನ ಶಿವಾಜಿಯ ವಿಷಯದಲ್ಲಿ ಚರ್ಚೆಯು ನಡೆಯಬೇಕಾಗಿತ್ತು. ಎಲ್ಲರೂ ಶಿವಾಜಿಯು ಗೋಬ್ರಾಹ್ಮಣರಕ್ಷಕನು ಎಂದು ಮುಂತಾಗಿ ಹೊಗಳಿ ಔರಂಗಜೇಬನು ಹಿಂದುಗಳಿಗೆ ತಂದಿಟ್ಟಿದ್ದ ಕಷ್ಟಪರಂಪರೆಗಳನ್ನು ವರ್ಣಿಸಿದರು. ಅದಕ್ಕೆ ತಕ್ಕ ಐತಿಹಾಸಿಕ ಘಟನೆಗಳನ್ನು ಉದಾಹರಿಸಿದರು. ಆ ದಿನ ನನಗೆ ವಾದದಲ್ಲಿ ಏನಾದರೂ ಪ್ರತಿಯಾಗಿ ಹೇಳಬೇಕೆನಿಸಿತು. ಶಿವಾಜಿಯು ಹಿಂದೂಮತದವರಿಗೆ ಸಹಾಯವನ್ನು ಮಾಡಿದ್ದರೆ, ಔರಂಗಜೇಬನು ಮುಸಲ್ಮಾನರಿಗೆ ಸಹಾಯ ಮಾಡಿರುತ್ತಾನೆ ; ಔರಂಗಜೇಬನು ಶಿವಾಜಿಗೂ ಅವನ ಕಡೆಯವರಿಗೂ ಕಿರುಕುಳ ತೊಂದರೆಗಳನ್ನು ಕೊಟ್ಟಿದ್ದರೆ, ಶಿವಾಜಿಯು ಔರಂಗಜೇಬನಿಗೂ ಅವನ ಕಡೆಯವರಿಗೂ ತೊಂದರೆ ಕೊಟ್ಟಿದ್ದಾನೆ. ಯಾವರಾಜ್ಯದ ಹಕ್ಕೂ ಇಲ್ಲದಿದ್ದ ಮೊಗಲರಂತೆಯೇ ಯಾವ ಹಕ್ಕೂ ಇಲ್ಲದ ಶಿವಾಜಿಯೂ ಸೇನೆ ಕಟ್ಟಿ ರಾಜನೆನಿಸಿಕೊಂಡಿರುತ್ತಾನೆ ; ಇದರಲ್ಲಿ ಶಿವಾಜಿಯ ಹೆಚ್ಚೇನು ? ಔರಂಗಜೇಬನ ಕಡಿಮೆಯೇನು ? - ಎಂದು ವಾದಿಸಿದೆನು. ನಾನು ತೆಗೆದ ಯುಕ್ತಿಗಳು ಚರಿತ್ರೆಯ ಪುಸ್ತಕಗಳಲ್ಲಿರಲಿಲ್ಲವಾದ್ದರಿಂದ ನನ್ನ ಸ್ನೇಹಿತರುಗಳಿಗೆ ಪ್ರತ್ಯುತ್ತರಗಳನ್ನು ಹೇಳುವದು ಆಗಲಿಲ್ಲ. ನನ್ನ ವಾದಕ್ಕೆ ಆ ದಿನ ಹೇಗೋ ಶಬ್ದಗಳು ತಮಗೆ ತಾವೇ ಸರಿಯಾಗಿ ಒದಗಿಬಂದಿದ್ದವು. ನನ್ನ ಮಾತುಗಾರಿಕೆಯು ಅಂದು ಅಲ್ಲಿದ್ದ ಉಪಾಧ್ಯಾಯರುಗಳಿಗೆಲ್ಲ ಮೆಚ್ಚಾಯಿತು. ಮಾರನೆಯ ದಿನ ಹೆಡ್‌ಮಾಸ್ಟರ್ ನನ್ನನ್ನು ಸ್ವತಂತ್ರ ಯುಕ್ತಿಗಳಿಂದ ವಾದಿಸಿದ್ದಕ್ಕಾಗಿ ಬಹುವಾಗಿ ಹೊಗಳಿದರು.

## ಸ್ಕೂಲು ಜವಾನನ ಮಹತ್ವ:

ನಮ್ಮ ಸ್ಕೂಲಿನಲ್ಲಿ ವಂದೆಹಳ್ಳಿ ಎಂಬ ಜವಾನನಿದ್ದನು. ಅವನು ನಮ್ಮ ದೊಡ್ಡಣ್ಣನವರು ಓದುತ್ತಿದ್ದ ಕಾಲದಿಂದಲೂ ಆ ಸ್ಕೂಲಿನಲ್ಲಿ ನೌಕರಿ ಮಾಡಿಕೊಂಡಿದ್ದಾನೆಂದು ನನಗೆ ಅಣ್ಣನವರು ಹೇಳಿದ್ದರು. ಸ್ಕೂಲು ಈಚೆಗೆ ದೊಡ್ಡದಾದ್ದರಿಂದ ಈಗ ಅವನು ದಫೇದಾರನಾಗಿದ್ದನು. ಅವನ ಸಹಾಯಕ್ಕೆ ಮತ್ತೊಬ್ಬ ಜವಾನನು ನಿಯಮಿತನಾಗಿದ್ದನು, ಸ್ಕೂಲುಜವಾನರಿಗೆ ಹಾಜರಿ ರಿಜಿಸ್ಟರ್‌ಗಳನ್ನು ಕ್ಲಾಸಿಗೆ ತಂದಿಟ್ಟು ತೆಗೆದುಕೊಂಡು ಹೋಗುವದು, ಘಂಟೆ ಹೊಡೆಯುವದು ಮುಂತಾದ ಕರ್ತವ್ಯಗಳು ಇರುವವಷ್ಟೆ. ವಂದೆಹಳ್ಳಿಯು ಮಾತ್ರ ಸ್ಕೂಲುಕಟ್ಟಡವನ್ನೂ ಸಣ್ಣ ಪುಟ್ಟ ಹುಡಗರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದ ಒಬ್ಬ ಯಜಮಾನನ ಹಾಗೆ ನನಗೆ ಕಾಣಿಸುತ್ತಿದ್ದನು. ಅವನು ಸಾಮಾನ್ಯವಾಗಿ ಹೆಡ್‌ಮಾಸ್ತರು ಮನೆಯಿಂದ ಕ್ಯಾಷ್‌ಬಾಕ್ಸ್ (ನಗದು ಹಣವಿರುವ ಪೆಟ್ಟಿಗೆ)ಯನ್ನು ತರುವದರಿಂದ ಹಿಡಿದು ಸಾಯಂಕಾಲ ಹುಡುಗರ ಆಟವು ಮುಗಿದು ಬಾಗಿಲು ಹಾಕಿಕೊಂಡು ಹೋಗುವವರೆಗೂ ಎಲ್ಲವನ್ನೂ ತನ್ನ ಆಸ್ತಿಯೋ ಎಂಬಂತೆ ನೋಡಿಕೊಳ್ಳುತ್ತಿದ್ದನು. ಅವನು ಆಕಾರದಲ್ಲಿಯೂ ಮೈಕಟ್ಟಿನಲ್ಲಿಯೂ ಭವ್ಯವಾದ ಮೂರ್ತಿ. ಹೊತ್ತಾಗಿ ಬರುವ ಹುಡುಗರು ಬೇಲಿಯಲ್ಲಿ ನುಸುಳಿಕೊಂಡು ಬರುವದು, ಜಲಮಲಬಾಧೆಗಳ ನೆಪದಿಂದ ಸ್ಕೂಲು ಹತ್ತಿರವಿದ್ದ ಪಾರ್ಕಿಗೆ (ಉದ್ಯಾನಕ್ಕೆ) ತಪ್ಪಿಸಿಕೊಂಡು ಹೋಗುವ ಹುಡುಗರು, ಹೋಟಲ್‌ನಿಂದ ತಿಂಡಿ ತಂದು ಪಾಠದ ಹೊತ್ತಿನಲ್ಲಿಯೂ ಎಲ್ಲಿಯೋ ಕುಳಿತು ತಿನ್ನುವ ಹುಡುಗರು ಅಥವಾ ವ್ಯರ್ಥಕಾಲಕ್ಷೇಪ ಮಾಡುತ್ತಾ ಅಲ್ಲಲ್ಲಿ ಅಲೆದಾಡುತ್ತಿರುವ ಹುಡುಗರು ಯಾರಾದರೂ ಅವನ ಗಲ್ಲಿಮೀಸೆಯ ಮುಖವನ್ನು ಕಂಡರೆ ಗಡಗಡನೆ ನಡುಗುತ್ತಿದ್ದರು. ಕ್ರಿಕೆಟ್, ಫುಟ್‌ಬಾಲ್ ಮುಂತಾದ ಆಟಗಳ ಸಾಮಾನನ್ನು ನೋಡಿಕೊಳ್ಳುವದು, ಅವರವರಿಗೆ ತಕ್ಕಂತೆ ಬೇರೆ ಬೇರೆಯ ತಂಡದ ಹುಡುಗರಿಗೆ ಆಟಕ್ಕೆ ಏರ್ಪಡಿಸುವುದು, ಸ್ಕೂಲಿನ ಬೆಂಚು, ಕುರ್ಚಿ - ಮುಂತಾದ ಸಾಮಾನುಗಳನ್ನು ಅಚ್ಚುಕಟ್ಟಾಗಿ ಇರಿಸಿಕೊಳ್ಳುವದು, ರಿಜಿಸ್ಟರುಗಳು ಹರಿಯದಂತೆ ನಾಜೋಕಾಗಿ ಬೈಂಡುಮಾಡಿ ಇಡುವದು ಮುಂತಾದ ಕೆಲಸಗಳನ್ನು ತನ್ನ ಮನೆಯ ಕೆಲಸಕ್ಕಿಂತಲೂ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದನು. ಆ ದಫೇದಾರನಲ್ಲಿ ಇನ್ನೊಂದು ವಿಶೇಷ ಗುಣವಿತ್ತು. ಅವನು ಒಂದು ಸಲ ಘಂಟೆ ಹೊಡೆದು ಮತ್ತೊಂದು ಘಂಟೆಯಾಗುವವರೆಗೂ ಹೆಡ್‌ಮಾಸ್ತರಿದ್ದ ಕೊಠಡಿಯ ಬಾಗಿಲಲ್ಲಿ ದವಾಲಿ ಹಾಕಿಕೊಂಡು ಕೂತಿರುತ್ತಿದ್ದನು. ಆಗ ಶ್ರೀಕೃಷ್ಣರಾಜವಾಣೀವಿಲಾಸ

ವಚನಭಾರತವನ್ನು ಓದುತ್ತಲೇ ಇರುತ್ತಿದ್ದನು. ಅವನು ಹೀಗೆ ಎಷ್ಟೋ ಸಲ ಭಾರತ ರಾಮಾಯಣಗಳನ್ನು ಓದಿದ್ದನೆಂದು ಚಿಕ್ಕಮಗಳೂರಿನ ಜನರು ಆಡಿಕೊಳ್ಳುತ್ತಿದ್ದರು. ಅವನ ವಿಷಯದಲ್ಲಿ ನಮ್ಮ ಅಣ್ಣಂದಿರು ಒಂದು ಕಥೆಯನ್ನು ಹೇಳುತ್ತಿದ್ದರು ; ಒಂದು ಸಲ ವಂದೆಹಳ್ಳಿಗೆ ಬೇನೆಬಿದ್ದು ಮೈಮೇಲೆ ಎಚ್ಚರವಿಲ್ಲದಂತಾಗಿತ್ತು. ಅವನು ಸತ್ತನೆಂದೇ ಊಹಿಸಿ ಮನೆಯವರು ಶರೀರವನ್ನು ಹಟ್ಟಿಗೆ ಹಿಡಿದರು. ಬೆಳಗಾಗುವ ಹೊತ್ತಿಗೆ ಅವನಿಗೆ ಎಚ್ಚರವಾಯಿತು. ಅಂದಿನಿಂದ ರೋಗವು ಬರುಬರುತ್ತಾ ಹಿಮ್ಮೆಟ್ಟುತ್ತಾ ಬಂತು. ಚೆನ್ನಾಗಿ ಹುಷಾರಾದ ಬಳಿಕ ಅವನು ಈ ಕಥೆಯನ್ನು ಎಲ್ಲರಿಗೂ ಹೇಳಿದನಂತೆ ; 'ತನ್ನನ್ನು ಯಮದೂತರು ಯಮನ ಬಳಿಗೆ ಕರೆದೊಯ್ದರು, ಯಮನು ಇವನನ್ನೇಕೆ ಕರೆತಂದಿರಿ ? ಇವನಿಗೆ ಇನ್ನೂ ಎಷ್ಟೋ ವರ್ಷಗಳ ಆಯಸ್ಸು ಇದೆಯಲ್ಲ ! ಎಂದನು. ಬಳಿಕ ನನ್ನನ್ನು ಯಮದೂತರು ಮರ್ಯಾದೆಯಿಂದ ಕರೆದುಕೊಂಡು ಬಂದು ಇಲ್ಲಿಬಿಟ್ಟರು'. ಈ ವೃತ್ತಾಂತವು ಎಷ್ಟರ ಮಟ್ಟಿಗೆ ನಿಜವಾಗಿರಲಿ, ವಂದೆಹಳ್ಳಿ ಮಾತ್ರ ಬಹುಕಾಲಬದುಕಿದ್ದನು. ಇವನು ಯಮನ ಚೀಟಿಯನ್ನು ಹಿಂದಕ್ಕೆ ಹಾಕಿದವನು ಎಂದು ಅನೇಕರು ಅಂದು ಕೊಳ್ಳುತ್ತಿದ್ದರು.

# 11. ಚಿಕ್ಕಮಗಳೂರಿನ ವಿದ್ಯಾಭ್ಯಾಸ ಪರಿಸಮಾಪ್ತಿ (1899)

## ಅಯ್ಯರ್‌ರವರ ಆದರ್ಶಬೋಧಕತ್ವ:

ಹೆಡ್‌ಮಾಸ್ಟರು ಸುಬ್ರಹ್ಮಣ್ಯ ಅಯ್ಯರ್‌ರವರಿಂದ ನನಗೆ ಆದ ಉಪಕಾರವನ್ನು ಆಗಲೆ ಸ್ವಲ್ಪ ಮಟ್ಟಿಗೆ ತಿಳಿಸಿರುತ್ತೇನೆ. ಸ್ಕೂಲಿಗೆ ಮಿಕ್ಕ ಮಾಸ್ಟರುಗಳು ಪ್ರಾಣಗಳಾಗಿದ್ದರೆ ಅಯ್ಯರ್‌ರು ಮುಖ್ಯಪ್ರಾಣದಂತಿದ್ದರೆಂದು ಹೇಳಬಹುದು. ಅವರು ಬೇರೆ ಬೇರೆಯ ಹೊತ್ತಿನಲ್ಲಿ ಸ್ಕೂಲಿಗೆ ಬರುತ್ತಿದ್ದರು. ಅವರು ವರ್ಗವಾಗಿ ಬಂದ ಬಳಿಕ ಸ್ಕೂಲು ಬದಲಾವಣೆಯಾಗಿ ನಮ್ಮನ್ನಾಳುತ್ತಿದ್ದ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರಿಂದಲೇ ಪ್ರಾರಂಭಮಹೋತ್ಸವವನ್ನು ಮಾಡಿಸಿ ಪುಸ್ತಕ- ಪಾರಿತೋಷಿಕ ಪ್ರದಾನ ಮಾಡಿಸಿದ್ದನ್ನು ಹಿಂದೆ ಒಂದು ಸಲ (ಪು. 70) ಪರಾಮರ್ಶಿಸಿರುತ್ತೇನೆ. ಸ್ಕೂಲಿನಲ್ಲಿ ಹುಡುಗರ ಸಂಖ್ಯೆ ಹೆಚ್ಚುತ್ತಾ ಬಂದದ್ದರಿಂದ ಕೆಲವು ತರಗತಿಗಳನ್ನು ಬೆಳಗಿನ ಹೊತ್ತು ಮಾಡುತ್ತಿದ್ದರೆಂಬ ನೆನಪು ಇದೆ. ಹೆಡ್‌ಮಾಸ್ಟರು ಬೆಳಗಿನ ಹೊತ್ತು ಬರುವುದು ಮತ್ತೆ ಊಟಮಾಡಿಕೊಂಡು ಸ್ಕೂಲಿಗೆ ಬಂದು ಪಾಠಪ್ರವಚನಗಳು, ಲೆಕ್ಕಪುಸ್ತಕಗಳು ಮುಂತಾದವುಗಳನ್ನು ನೋಡಿ ಸಾಯಂಕಾಲ ಹುಡುಗರು ಡ್ರಿಲ್ ಮಾಡುವಾಗ, ಕ್ರಿಕೆಟ್ ಮುಂತಾದ ಆಟಗಳನ್ನು ಆಡುತ್ತಿರುವಾಗ, ಸಾಮು ಮಾಡುತ್ತಿರುವಾಗ, ಎಲ್ಲೆಲ್ಲಿಯೂ ಕಾಣಿಸಿಕೊಳ್ಳುತ್ತಿದ್ದರು. ಅವರು ಸ್ಕೂಲಿನಲ್ಲಿ ನಡೆಯಿಸದೆ ಇದ್ದ ಪಾಠವಿಲ್ಲ, ಭಾಗವನ್ನು ತೆಗೆದುಕೊಳ್ಳದೆ ಇದ್ದ ಆಟವಿಲ್ಲ. ಇಂಗ್ಲೆಂಡ್ ದೇಶದ ಇತಿಹಾಸವನ್ನು ಹೇಳಿದರೆ ಆಯಾ ಕಾಲದ ದೇಶದ ಸ್ಥಿತಿಯನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತಿದ್ದರು. ರೇಖಾಗಣಿತದ ಸಮಸ್ಯೆಗಳನ್ನು ಬಿಡಿಸಿದರೆ ತಮ್ಮದೇ ಆದ ಹೊಸದೊಂದು ರೀತಿಯಿಂದ ಉಪಪಾದನೆ ಮಾಡುತ್ತಿದ್ದರು ; ಭೌತಿಕವಿಜ್ಞಾನವನ್ನು ತೆಗೆದುಕೊಂಡಾಗ ಆಯಾ ಪ್ರಯೋಗವನ್ನು ಮಾಡಿತೋರಿಸಿ ವಿಜ್ಞಾನವೆಂಬುದೊಂದು ಯಕ್ಷಿಣೀವಿದ್ಯೆಯೋ ಎಂಬ ಭಾವನೆಯನ್ನು ತಂದು-ಕೊಡುತ್ತಿದ್ದರು. ಇಂಗ್ಲಿಷು ಪಾಠಗಳಲ್ಲಿ ವಿಷಯವ್ಯಾಖ್ಯಾನವನ್ನು ಮನಮೋಹಕವಾಗಿ ಮಾಡುತ್ತಿದ್ದರು. ಆಟದಲ್ಲಿ ಎರಡು ಕೈಗಳಿಂದಲೂ ಬೌಲಿಂಗ್ ಮಾಡುವುದು, ಹೈಜಂಪ್, ಲಾಂಗ್‌ಜಂಪ್ ಮುಂತಾದವುಗಳನ್ನು ತಾವು ಮಾಡಿ ತೋರಿಸುವದು - ಇವೇ ಮುಂತಾದ ರೀತಿಗಳಿಂದ ನಮಗೆ ಆಗಾಗ್ಗೆ ಆಶ್ಚರ್ಯ-ವನ್ನುಂಟುಮಾಡುತ್ತಿದ್ದರು. ಸ್ವಲ್ಪದರಲ್ಲಿ ಹೇಳಿದರೆ ನನ್ನ ಭಾಗಕ್ಕೆ ಅವರೊಬ್ಬರು ಸರ್ವಜ್ಞರಾಗಿ ತೋರುತ್ತಿದ್ದರು.

## ಇಂಗ್ಲಿಷು ಭಾಷೆಯನ್ನು ಒಳಹೊಕ್ಕು ನೋಡುವದಕ್ಕೆ ಪ್ರಾರಂಭ :

ಇಂಗ್ಲಿಷು ತರಗತಿಗಳಲ್ಲಂತೂ ನಮಗೆ ಒಂದು ದೊಡ್ಡ ಹಬ್ಬವೇ ಆಗಿರುತ್ತಿತ್ತು. ವಾಕ್ಯರಚನೆಗಾಗಿ ಕೊಟ್ಟ ಅಭ್ಯಾಸಗಳನ್ನು ತರಗತಿಯಲ್ಲಿ ಓದಿಸಿ ಹುಡುಗರಿಂದಲೇ ತಿದ್ದಿಸುವದು ಅವರದೊಂದು ಪದ್ಧತಿ. ಆಗ ಹುಡುಗರು ತಪ್ಪುಗಳನ್ನು ಕಂಡುಹಿಡಿದು ಅವು ತಪ್ಪೆಂಬುದಕ್ಕೆ ಕಾರಣವನ್ನು ಕೊಡಬೇಕಾಗುತ್ತಿತ್ತು. **Hudson's Errors in English'** ಎಂಬುದೊಂದು ಪುಸ್ತಕ. ಅದರಲ್ಲಿ ಇಂಥಿಂಥ ತಪ್ಪುಗಳನ್ನು ಘನತೆಯ ಲೇಖಕರು ಕೂಡ ಮಾಡಿರುತ್ತಾರೆ ಎಂದು ಎಚ್ಚರಿಕೆ ಕೊಡುವ ಕೆಲವು ಪಾಠಗಳಿರುತ್ತಿದ್ದವು. ಮೊದಲು 'ಇಂಥ ಸಂದರ್ಭದಲ್ಲಿ ಹೀಗೆ ಬರೆಯಬಾರದು, ಏಕೆಂದರೆ' ಎಂದು ಕಾರಣವನ್ನು ಕೊಟ್ಟು ಆಮೇಲೆ ದೊಡ್ಡ ದೊಡ್ಡ ಗ್ರಂಥಕರ್ತೃಗಳ ವಾಕ್ಯಗಳಲ್ಲಿ ಆ ತಪ್ಪುಗಳು ಆಗಿರುವುದನ್ನು ಕೊಟ್ಟಿತ್ತು. ಮೊದಲು ವಾಕ್ಯಗಳನ್ನು ಓದುವುದು, ತಪ್ಪೇನೂ ನಮಗೆ ಕಾಣಿಸಲಿಲ್ಲವೆಂದಾದ ಮೇಲೆ ತಪ್ಪನ್ನು ತಿಳಿಯ ಹೇಳಿ ಕಾರಣವನ್ನು ಕೊಡುವುದು ಹೀಗೆ ಮಾಡುತ್ತಿದ್ದರು, **Murison** ಎಂಬಾತನು ಬರೆದಿರುವ **(Synthesis ?)** ವಾಕ್ಯಚಿಂತನೆಯ ವಿಚಾರದ ಪುಸ್ತಕವೊಂದು ; ಅದರಲ್ಲಿ ಒಂದು ವಾಕ್ಯವನ್ನು ಮತ್ತೊಂದು ರೂಪಕ್ಕೆ ತಿರುಗಿಸುವ ಅಭ್ಯಾಸಗಳು ಹೆಚ್ಚಾಗಿದ್ದವು, **Graham's Synonyms** ಎಂಬ ಇಂಗ್ಲಿಷು ಪರ್ಯಾಯ ಶಬ್ದಗಳ ವಿವೇಚನೆ ಮಾಡಿರುವ ಪುಸ್ತಕವು ಇನ್ನೊಂದು ; ಇಂಥ ಸಂದರ್ಭದಲ್ಲಿ ಒಂದೇ ಅರ್ಥವಿರುವಂತೆ ಕಾಣುವ ಎರಡು ಅಥವಾ ಮೂರು ಶಬ್ದಗಳಲ್ಲಿ ಯಾವ ಶಬ್ದಗಳನ್ನು ಉಪಯೋಗಿಸಬೇಕು ? ಎಂಬ ಯೋಚನೆಯನ್ನು ಹುಟ್ಟಿಸುವ ವಿಷಯಕ್ಕೆ ಆ ಗ್ರಂಥದಲ್ಲಿ ಬಹಳ ನೈಪುಣ್ಯವನ್ನು ತೋರಿಸಿದೆ. ಭಾಷಾ ಪರಿಶೀಲನೆಯ ಪ್ರಕಾರವನ್ನು ತಿಳಿಯಬೇಕೆಂಬ ಕುತೂಹಲವು ನನಗೆ ಆ ಗ್ರಂಥಗಳಿಂದಲೇ ಬಂದಿತು. ಅಯ್ಯರು ಪಾಠಗಳನ್ನು ತಾವೇ ಬೋಧಿಸುವುದರ ಬದಲಾಗಿ ತರಗತಿಯನ್ನು ಒಂದು ಚರ್ಚಾಕೂಟವಾಗಿ ಮಾರ್ಪಡಿಸಿ ಹುಡುಗರು ಒಬ್ಬರಮೇಲೊಬ್ಬರು ಸ್ಪರ್ಧೆಯಿಂದ ಖಂಡನ ಮಂಡನಗಳನ್ನು ಮಾಡುವಂತೆ ಪ್ರೋತ್ಸಾಹಕೊಡುತ್ತಿದ್ದದ್ದೂ ನಮ್ಮಗಳ ಮನನ ಶಕ್ತಿಯು ಬೆಳೆದುಕೊಳ್ಳುವುದಕ್ಕೆ ಬಹಳ ಉತ್ತೇಜಕವಾಗಿರುತ್ತಿತ್ತು.

## ದೇಶಭಕ್ತಿಯ ಅಂಕುರ :

ಆಗ್ಗೆ ಲೀ ವಾರ್ನರ್ ಎಂಬಾತನು ಬರೆದಿದ್ದ 'ಸಿಟಿಜ಼ನ್ ಆಫ್ ಇಂಡಿಯಾ' **(Citizen of india)** ಎಂಬ ಪುಸ್ತಕವೊಂದನ್ನು ಓದಿಸಬಹುದೆಂಬ ಅವಕಾಶವನ್ನು ಸರ್ಕಾರದವರು ಕಲ್ಪಿಸಿದ್ದರು, ಆ ಪುಸ್ತಕವು ಇಂಗ್ಲಿಷ್‌ನವರು ನಮ್ಮ ದೇಶಕ್ಕೆ ಬಂದ

ಮೇಲೆ ಅವರಿಂದ ನಮಗೆ ಆಗಿರುವ ಆರ್ಥಿಕ ಮತ್ತು ರಾಜಕೀಯ ಲಾಭಗಳನ್ನು ತಿಳಿಸುವ ಉದ್ದೇಶದಿಂದ ಬರೆದಿದ್ದದ್ದು. ದೇಶದಲ್ಲಿ ಆಗ ಎಲ್ಲೆಲ್ಲಿಯೂ ತಲೆದೋರಿಕೊಂಡಿದ್ದ ದೇಶಾಭಿಮಾನವನ್ನು ಹದ್ದಿನಲ್ಲಿಡುವದಕ್ಕೆಂದು ಸರ್ಕಾರದವರೇ ಅದನ್ನು ಬರೆಯಿಸಿರಬೇಕೆಂದು ನನ್ನ ಸಹಪಾಠಿಗಳು, ಕೆಲವರು ಹಿರಿಯರೂ ಹೇಳಿಕೊಳ್ಳುತ್ತಿದ್ದರು. ಆ ಪುಸ್ತಕದ ಪಾಠವನ್ನು ಅಯ್ಯರು ಮಾಡಿಸುವಾಗ ನಮ್ಮ ದೇಶಭಕ್ತಿಯನ್ನು ಪುಟವೆಬ್ಬಿಸಿ ನಮ್ಮನ್ನೆಲ್ಲ ಹುರಿದುಂಬಿಸುತ್ತಿದ್ದ ಕ್ರಮವನ್ನು ನಾನು ಮರೆಯುವಂತಿಲ್ಲ. ನಮ್ಮ ದೇಶದವರು ಮುಂದಕ್ಕೆ ಬರಬಹುದಾದ ಅನೇಕ ಕ್ಷೇತ್ರಗಳಲ್ಲಿ ಅವರಿಗೆ ಹಲವು ಆತಂಕಗಳು ಇವೆ ಎಂಬುದು ನನಗೆ ಅದರಿಂದ ಮನದಟ್ಟಾಯಿತು. ರಮೇಶಚಂದ್ರದತ್ತರ **England and India** (ಇಂಗ್ಲೆಂಡ್ ಮತ್ತು ಇಂಡಿಯಾ) ಎಂಬ ಪುಸ್ತಕದಲ್ಲಿ ಇಂಗ್ಲೆಂಡ್ ದೇಶವು ಉಚ್ಛ್ರಾಯ ಸ್ಥಿತಿಗೆ ಬಂದಂತೆಲ್ಲ ಇಂಡಿಯವು ಕುಸಿಯುತ್ತಿದೆ ಎಂಬ ಭಾವವು ಬರುವಂತೆ ಬರೆದಿದ್ದ ವಾಕ್ಯಗಳು ಹೇರಳವಾಗಿದ್ದವು. ಉಪಾಧ್ಯಾಯರ ಪ್ರಚೋದನೆಯಿಲ್ಲದೆಯೇ ಆ ಪುಸ್ತಕವನ್ನು ಲೈಬ್ರರಿಯಿಂದ (ಪುಸ್ತಕ ಭಂಡಾರದಿಂದ) ಎರವಲಾಗಿ ತೆಗೆದುಕೊಂಡು ಓದುವ ತವಕವು ನಮ್ಮಲ್ಲಿ ಉಂಟಾಯಿತು, ನೀವು ನಿಮ್ಮ ದೇಶದ ಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಹೋದರೆ ಬರಿಯ ಇಂಗ್ಲೀಷ್ ವ್ಯಾಕರಣದ ನಾಮಗಳನ್ನು ನಾಮ ವಿಶೇಷಣಗಳನ್ನು ತಿಂದುಕೊಂಡಿರ ಬಹುದಾಗಿದೆ, **(You may live upon English nouns and adjectives)** ಎಂದು ಕೇವಲ ಪರಕೀಯ ಭಾಷಾಭಿಮಾನಕ್ಕಿಂತಲೂ ದೇಶಾಭಿಮಾನವು ಹೆಚ್ಚಿನದೆಂಬುದನ್ನು ಮನಗಾಣಿಸಿ-ಕೊಡುತ್ತಿದ್ದರು. ಅಗ್ನಿಯೇ ಮುಂತಾದ ಅಭಿಮಾನಿ ದೇವತೆಗಳು ಇಂದ್ರಿಯಗಳೇ ಮುಂತಾದವುಗಳ ವ್ಯಾಪಾರಕ್ಕೆ ಅಧಿಷ್ಠಾತೃಗಳಾಗಿರುತ್ತಾರೆಂದು ವೇದಾನುಯಾಯಿ-ಗಳು ನಂಬುತ್ತಾರಲ್ಲವೇ ? ನನ್ನ ಪಾಲಿಗೆ ಅಯ್ಯರವರು ಇಡಿಯ ಹೈಸ್ಕೂಲಿನ, ಅದರಲ್ಲಿಯೂ ವಿಶೇಷವಾಗಿ ನಮ್ಮ ತರಗತಿಯ ಅಧಿದೇವತೆಯಾಗಿದ್ದು ನಮ್ಮನ್ನು ವಿದ್ಯಾಭ್ಯಾಸದಲ್ಲಿಯೂ ಆಟಪಾಠಗಳಲ್ಲಿಯೂ ಮನಸ್ಸಿನ ವಿಕಾಸಕ್ಕಾಗಿ ಮಾಡಬೇಕಾದ ವಿಚಾರ ಕ್ರಮದಲ್ಲಿಯೂ ನಮ್ಮನ್ನೆಲ್ಲಾ ಓರೆಕೋರೆಯಿಲ್ಲದಂತೆ ತಿದ್ದಿ ಮುನ್ನಡೆಯಿಸುತ್ತಿದ್ದಾರೆ ಎಂದು ನನಗೆ ತೋರುತ್ತಿತ್ತು.

## ಕ್ರಿಸ್ತಿಯನ್ ಮತದ ಅರಿವು :

ಆರನೆಯ ಫಾರಮ್ಮಿನಲ್ಲಿ ಓದುತ್ತಿದ್ದಾಗ ನಮಗೆ ಎಪಿಫೆನಿ ಎಂಬ ಕ್ರಿಸ್ತಿಯನ್ ವಾರಪತ್ರಿಕೆಯನ್ನು ಧರ್ಮಾರ್ಥವಾಗಿ ಯಾವುದೋ ಕ್ರಿಸ್ತಿಯನ್ ಪಂಥದವರು ಕಳುಹಿಸಿಕೊಡುತ್ತಿದ್ದರು. ಆ ಸರಿಸುಮಾರಿಗೆ ನಮ್ಮಗಳಿಗೆ ಇನಾಮಾಗಿ **Gospels**

(ಸುವಾರ್ತೆಗಳು) ಎಂಬ ಪುಸ್ತಕವನ್ನು ಓದಿ ಆ ವಿಷಯಕ್ಕೆ ನಮಗೆ ತಿಳಿದಂತೆ ಆಕ್ಷೇಪಗಳನ್ನು ಅಥವಾ ಪ್ರಶ್ನೆಗಳನ್ನು ಬರೆದು ಆ ಪತ್ರಿಕೆಗೆ ಕಳುಹಿಸುತ್ತಿದ್ದೆವು. ಸಂಪಾದಕರು ಅದಕ್ಕೆ ಪರಿಹಾರಗಳನ್ನು ಅಥವಾ ಉತ್ತರಗಳನ್ನು ಸಂಕ್ಷೇಪವಾಗಿ ಬರೆಯುತ್ತಿದ್ದರು. ರೀಡಿಂಗ್‌ರೂಮಿಗೆ (ವಾಚನಾಲಯಕ್ಕೆ) ಬರುತ್ತಿದ್ದ ಇಂಗ್ಲಿಷು ಪತ್ರಿಕೆಗಳನ್ನು ಓದುವದು, ಲೈಬ್ರರಿಯಿಂದ ಪುಸ್ತಕಗಳನ್ನು ಎರವಲಾಗಿ ತೆಗೆದುಕೊಂಡು ಓದುವದು, ಅವುಗಳಲ್ಲಿ ನಮಗೆ ತಿಳಿದ ವಿಷಯಗಳ ವಿಷಯಕ್ಕೆ ವಾಕ್ಯ-ರಚನೆಯನ್ನು ಬರೆಯುವದು - ಇವೆಲ್ಲವೂ ನನಗೆ ಹೊಸ ಅನುಭವಗಳಾಗಿದ್ದವು.

## ನಿತ್ಯಪರೀಕ್ಷೆ:

ಅಯ್ಯರ ಕಾಲಕ್ಕೆ ಟರ್ಮಿನಲ್ ಎಗ್ಜಾಮಿನೇಷನ್ (ನಿಯತ ಕಾಲದ ಪರೀಕ್ಷೆಗಳು) ಕ್ರಮವು ಏರ್ಪಟ್ಟಿತು. ನಾವು ಆಕಸ್ಮಿಕವಾದ ಪರೀಕ್ಷೆಗಳಿಗೆ ಸಿದ್ಧರಾಗಿರಬೇಕಾಗಿ ಬಂತು. ನಾವು ಪಾಠಕ್ಕೆಂದು ಬಂದರೆ ಜವಾನರು ನಮ್ಮ ಬರೆಯುವ ಮೇಜುಗಳ ಮೇಲೆ ಬರೆಯುವುದಕ್ಕೆ ಕಾಗದ, ಮಷಿದೌತಿ, ಲೇಖನಿ ಮುಂತಾದವುಗಳನ್ನು ತಂದು ಮುಂದಿಡುತ್ತಿದ್ದರು. ನಾವು ಪುಸ್ತಕಗಳನ್ನು ಆಚೆಗೆ ಇಟ್ಟು ಸೈಕ್ಲೋಸ್ಟೈಲ್‌ನ (ಕಲ್ಲಚ್ಚಿನ ಬರವಣಿಗೆಯ) ಪ್ರಶ್ನೆಪತ್ರಿಕೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತಿತ್ತು. ಯೂನಿವರ್ಸಿಟಿ (ವಿಶ್ವವಿದ್ಯಾನಿಲಯದ) ಪರೀಕ್ಷೆಗೆ ಗೊತ್ತು ಮಾಡಿದ್ದ ವಿಷಯಗಳಲ್ಲದೆ ಲೀ ವಾರ್ನರ್‌ನ ಸಿಟಿಜ಼ನ್ ಆಫ್ ಇಂಡಿಯ ಮುಂತಾದ ಓದಿದ ಪುಸ್ತಕಗಳ ವಿಷಯದ ಮೇಲೆಯೂ ಪ್ರಶ್ನೆಗಳು ಇರುತ್ತಿದ್ದವು. ಜೀವನದಲ್ಲಿ ಯಾವಾಗಲೆಂದರೆ ಆಗ ಪರೀಕ್ಷೆಯಾಗಬಹುದೆಂಬುದೂ ಅದಕ್ಕೆ ಆಗಾಗಲೇ ಸಿದ್ಧರಾಗಿರಬೇಕೆಂಬುದೂ ಓದುವ ಗ್ರಂಥಗಳಲ್ಲಿರುವ ವಿಷಯಗಳನ್ನೆಲ್ಲ ಸಮಪ್ರಧಾನವಾಗಿ ಕಾಣಬೇಕೇ ಹೊರತು ಇವು ನಮಗೆ ಸಂಬಂಧಪಟ್ಟವು, ಇವು ಅಲ್ಲ ಎಂಬ ತಾರತಮ್ಯಬುದ್ಧಿಯಿರಬಾರದೆಂಬುದೂ ನಮಗೆ ಮನಸ್ಸಿನಲ್ಲಿ ಮೂಡಿಕೊಂಡಿತು. ಇದೊಂದು ಅಯ್ಯರವರ ಅನುಗ್ರಹವು.

ನಾನು, ಪುಟ್ಟಣ್ಣಶಾಸ್ತ್ರಿ ಮುಂತಾದ ಕೆಲವರು ವಿದ್ಯಾರ್ಥಿಗಳು ರಾತ್ರೆ ಸ್ಕೂಲಿನಲ್ಲಿಯೇ ಮಲಗುತ್ತಿದ್ದೆವು. ಅಲ್ಲಿ ಪಾಠಗಳನ್ನು ಸರಿಯಾಗಿ ಓದಿಕೊಳ್ಳುವದು, ಕಾಲಕ್ಕೆ ಸರಿಯಾಗಿ ಮಲಗುವದು, ಬೆಳಗಿನ ಜಾವದಲ್ಲಿಯೇ ಏಳುವದು- ಮುಂತಾದ ಅಭ್ಯಾಸಗಳನ್ನು ನಾವು ಇಟ್ಟುಕೊಳ್ಳುವಂತೆ ಅಯ್ಯರವರು ಆಗಾಗ್ಗೆ ಬಂದು ಮೇಲುವಿಚಾರಣೆ ಮಾಡಿ ನೋಡಿಕೊಳ್ಳುತ್ತಿದ್ದರು; ನಾವು ಯಾರೂ ಹರಟೆ, ಹಾಡು - ಮುಂತಾದವುಗಳಿಗೆ ಒಲಿದು ತಪ್ಪುಹಾದಿಯನ್ನು ತುಳಿಯದಂತೆ ಅವರು ನೋಡಿಕೊಳ್ಳುತ್ತಿದ್ದರು.

## ಯೂನಿವರ್ಸಿಟಿಯ ಪರೀಕ್ಷೆಗೆ ಪ್ರಯಾಣ :

ಕೊನೆಯ ಪರೀಕ್ಷೆಗೆ ಸಿದ್ಧವಾಗುವ ಕಾಲವು ಬಂತು. ಆಗ ಸ್ಪೋರ್ಟ್ಸ್ ಸೆಕ್ರೆಟರಿಗಳು (ಆಟಗಳ ಕಾರ್ಯದರ್ಶಿಗಳು) ತರಗತಿಗಳಿಗೆ ಬಂದು ನೋಟೀಸು ಕಳುಹಿಸಿ, ಸ್ಪೋರ್ಟ್ಸ್ ಫೀಜನ್ನು ಕೊಡದೆ ಬಾಕಿಯಿಟ್ಟುಕೊಂಡಿರುವ ವಿದ್ಯಾರ್ಥಿಗಳಿಗೆ ಹಾಲ್‌ಟಿಕೆಟ್ (ಪರೀಕ್ಷೆಗೆ ಅನುಜ್ಞಾಪತ್ರ) ಕೊಡುವದಕ್ಕಾಗುವ ದಿಲ್ಲವೆಂದೂ ಅದರಲ್ಲಿ ಬರೆದಿತ್ತು. ನನ್ನ ಸುದೈವದಿಂದ ಹೆಡ್‌ಮಾಸ್ಟರೇ ನಮ್ಮ ತರಗತಿಯಲ್ಲಿದ್ದರು, ನೋಟೀಸನ್ನು ಓದಿ ಬಾಕಿಯಿದ್ದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ನನ್ನ ಮತ್ತು ರಾಮಕೃಷ್ಣಯ್ಯಂಗಾರ್ ಎಂಬಾತನ ಹೆಸರು ಇದ್ದದ್ದನ್ನು ಕಂಡು **How can this be ? Ramakrishna Iyengar and Subba Rao have been free ever since they were born** ! ಇದು ಹೇಗಾದೀತು ! ರಾಮಕೃಷ್ಣಯ್ಯಂಗಾರ್ ಮತ್ತು ಸುಬ್ಬರಾವ್ - ಇವರಿಬ್ಬರೂ ಹುಟ್ಟಿದಂದಿನಿಂದ ಫ್ರೀಯಾಗಿರುತ್ತಾ-ರಲ್ಲ! -ಎಂದು ನಮ್ಮ ಹೆಸರುಗಳನ್ನು ಹೊಡೆದು ರುಜುಮಾಡಿಬಿಟ್ಟರು ! ಅಯ್ಯರಿಗೆ ಬಡವರ ಮೇಲೆ ಯಾವಾಗಲೂ ಕರುಣೆ. ಚೆನ್ನಾಗಿ ಓದುತ್ತಿರುವವರನ್ನು ಕಂಡರಂತೂ ತಮ್ಮ ಪ್ರಾಣವೆಂದೇ ಭಾವಿಸಿದ್ದರು.

ಆಗ್ಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮದ್ರಾಸ್ ಯೂನಿವರ್ಸಿಟಿಯವರೇ ನಡೆಯಿಸುತ್ತಿದ್ದರು; ಮೈಸೂರು ದೇಶಕ್ಕೆ ಇನ್ನೂ ಸ್ವಂತ ಯೂನಿವರ್ಸಿಟಿ ಬಂದಿರಲಿಲ್ಲ. ಪರೀಕ್ಷಾಕೇಂದ್ರಗಳು ಹಾಸನ, ಶಿವಮೊಗ್ಗ, ಮೈಸೂರು, ಬೆಂಗಳೂರು - ಇಷ್ಟು ಮಾತ್ರ ಇದ್ದವೆಂದು ಕಾಣುತ್ತದೆ. ವಿಕಾರಿ ಸಂವತ್ಸರದಲ್ಲಿ ಎಲ್ಲೆಲ್ಲಿಯೂ ಪ್ಲೇಗಿನ ಹಾವಳಿ. ಪಂಚಾಂಗದಲ್ಲಿ ಈ ವರ್ಷ ದೇಶಕ್ಕೆ ಬಹಳ ಕೇಡು ಎಂದು ಬರೆದಿತ್ತಂತೆ ! ಆ ವರ್ಷದಲ್ಲಿಯೆ ಎಂತ ಕಾಣುತ್ತದೆ, 'ಕೂಗುವ ಮಾರಿ ಬರುತ್ತದೆ ; ಅದು ಕೂಗಿ ಕದವನ್ನು ತಟ್ಟುತ್ತದೆ, ಬಾಗಿಲು ತೆಗೆದವರನ್ನು ಬಲಿತೆಗೆದುಕೊಂಡು ಬಿಡುತ್ತದೆ, ಆದರೆ ಬಾಗಿಲಿಗೆ ನಾಮವನ್ನು ಬರೆದಿದ್ದರೆ ಆ ಮನೆಗೆ ಅದು ಬರುವುದಿಲ್ಲ !' ಎಂಬ ಒಡುಕು ಸುದ್ದಿ ನಮ್ಮ ಕಡೆ ಎಲ್ಲೆಲ್ಲಿಯೂ ಹರಡಿಕೊಂಡಿತ್ತು ಜನರೆಲ್ಲಾ ಅಂಜಿ ಚೆಲ್ಲಾಪಿಲ್ಲಿಯಾಗಿದ್ದರು. ರೈಲುಮೇಲೆ ಹೋದರೆ ಇನ್ನ್ಯಾಕ್ಯುಲೇಷನ್ ಇಲ್ಲದವರನ್ನು ಬಿಡುವುದಿಲ್ಲ ಎಂಬ ಅಂಜಿಕೆ ಬೇರೆ ಇತ್ತು. ಇನ್ನ್ಯಾಕ್ಯುಲೇಷನ್ ಎಂಬ ಹೆಸರೇ ನಮಗೆ ಹೊಸದು ಆ ವರ್ಷ ಚಿಕ್ಕಮಗಳೂರಿನಲ್ಲಿ ಇನ್ನ್ಯಾಕ್ಯುಲೇಷನ್ ಮಾಡಿಸಿಕೊಂಡವರು ಬಹುದಿನಗಳ ವರೆಗೂ ನರಳುವರೆಂದು ವಾರ್ತೆ. ಆ ಚಿಕಿತ್ಸೆಯನ್ನು ನೀಡುವ ಡಾಕ್ಟರುಗಳಿಗೆ ಅನುಭವಸಾಲದ್ದರಿಂದಲೂ ಇನ್ನ್ಯಾಕ್ಯುಲೇಷನ್ ರಸದ ವೇಗವು ಉಗ್ರವಾಗಿದ್ದದ್ದ-ರಿಂದಲೂ ಹೀಗೆ ಆಗುತ್ತದೆ ಎಂದು ಜನರು ಆಡಿಕೊಳ್ಳುತ್ತಿದ್ದರು. ನಿಜವು ಏನೇ ಇರಲಿ,

ಪರೀಕ್ಷೆಗೆ ಹೋಗುವ ನಾವುಗಳು ಇನ್ಸ್ಯಾಕ್ಯುಲೇಷನ್ ಮಾಡಿಸಿಕೊಂಡು ನರಳುವುದು ಸರಿಯಲ್ಲವೆಂದು ತೀರ್ಮಾನಿಸಿಕೊಂಡಿದ್ದವಾದ್ದರಿಂದ ರಂಗರಾವ್ ತಮ್ಮ ಪೆಟ್ಟಿಗೆಯ ಗಾಡಿಯ ಮೇಲೆ ನಮ್ಮಗಳನ್ನು ಕರೆದುಕೊಂಡು ಹೋಗುವುದಕ್ಕೆ ಒಪ್ಪಿದರು. ಅದರಲ್ಲಿ ಪುಟ್ಟಣ್ಣಶಾಸ್ತ್ರಿ, ರಂಗರಾವ್, ಟಿ. ರಾಮರಾವ್(?) ನಾನು ಹೀಗೆ ನಾಲ್ಕು ಜನರು ಹೊರಡಬೇಕೆಂದು ಗೊತ್ತಾಯಿತು. ಅಯ್ಯರವರು ನನ್ನ ಕೈಯಲ್ಲಿ ಎರಡು ರೂಪಾಯಿಗಳನ್ನು ಕೊಟ್ಟು 'ಎಚ್ಚರಿಕೆ ! ಚೆನ್ನಾಗಿ ಓದಿಕೊಂಡು ಪ್ಯಾಸಾಗಬೇಕು, ತಿಳಿಯಿತೆ ? ಹಾಸನದಲ್ಲಿ ವ್ಯರ್ಥಕಾಲಕ್ಷೇಪ ಮಾಡಬಾರದು' ಎಂದು ಮುಂತಾಗಿ ಬುದ್ಧಿಹೇಳಿ ಕಳುಹಿಸಿಕೊಟ್ಟರು. ಅವರು ರಂಗರಾವ್‌ಗೆ ಮೊದಲೇ ತಿಳಿಸಿದ್ದರೆಂದು ಕಾಣುತ್ತದೆ. (ಅಯ್ಯರು, ಅವನನ್ನು ರಂಗಣ್ಣ ಎಂದು ಕರೆಯುತ್ತಿದ್ದಂತೆ ತೋರುತ್ತದೆ !) ನನಗೆ ಯಾವ ಖರ್ಚೂ ಬೀಳದಂತೆ ಎಲ್ಲವನ್ನೂ ಅವನೇ ನೋಡಿಕೊಂಡನು. ಪುಟ್ಟಣ್ಣಶಾಸ್ತ್ರಿಯೂ ರಂಗರಾವಿನ ಪ್ರೇಮದಗೆಳೆಯ ; ಅವನಿಗೂ ಯಾವ ಖರ್ಚೂ ತಾಗಲಿಲ್ಲ. ತರಗತಿಯ ಮಿಕ್ಕ ಹುಡುಗರು ಯಾರು ಯಾರು ಯಾವ ಮಾರ್ಗವಾಗಿ ಹೊರಟರೆಂಬುದು ಈಗ ನೆನಪಿನಲ್ಲಿ ಉಳಿದಿಲ್ಲ.

## ಬೇಲೂರು ಹಳೇಬೀಡು ಶಿಲ್ಪಕಲಾದರ್ಶನ :

ದಾರಿಯಲ್ಲಿ ಬೇಲೂರು, ಹಳೇಬೀಡು -ಇವುಗಳ ಮಾರ್ಗವಾಗಿ ಹೋದದ್ದು ಮರೆತಿಲ್ಲ. ಹಳೇಬೀಡಿನಲ್ಲಿ ಒಂದು ಸಣ್ಣ ಘಟನೆ ನಡೆಯಿತು. ನಾವು ಅಲ್ಲಿ ಟಿ.ಬಿ. (ಪ್ರಯಾಣಿಕರ ಬಂಗಲೆ) ಯಲ್ಲಿ ಉಳಿದುಕೊಂಡಿದ್ದೆವು; ಅಲ್ಲಿ ನಮಗೆ ಹೇಗೆ ಸ್ಥಳ ಸಿಕ್ಕಿತೋ ತಿಳಿಯದು. ಊರಿನಲ್ಲಿ ಒಂದು ದೇವಾಲಯದಲ್ಲಿ ಒಂದು ಬಳಪದ ಬಸವಣ್ಣ ಇದೆ ; ಅದರ ಮೈಮೇಲೆ ಯಾರೋ ಕೆಲವರು ಅಕ್ಷರಗಳನ್ನು ಕೆತ್ತಿದ್ದು ನಮಗೂ ನಮ್ಮ ನಮ್ಮ ಹಸ್ತಾಕ್ಷರ ಅಲ್ಲಿರಬೇಕೆಂಬ ತವಕವನ್ನುಂಟುಮಾಡಿತು. ಹಿಂದೆ ಕನ್ನಡ ಲೋಅರ್ ಸೆಕೆಂಡರಿಗೆ ಹೋದಾಗ ಕಡೂರಿನ ಒಂದು ಕಡೆ ಸೇತುವೆಯ ಕಮಾನಿನ ಒಳಗೆ ಇದ್ದಲಿನಿಂದ ಏನೇನೋ ಬರೆದದ್ದು ನನಗೆ ನೆನಪಿಗೆ ಬಂತು, ಈಗ ನಾವುಗಳು ನಮ್ಮ ನಮ್ಮ ಹೆಸರಿನ ಸಂಕೇತಾಕ್ಷರಗಳನ್ನು ಇಂಗ್ಲಿಷಿನಲ್ಲಿ ಗೀಚಿದೆವು. ಇತ್ತ ಟಿ.ಬಿ.ಗೆ ನಾವು ಬಂದ ಹೊತ್ತಿಗೆ ದೇವಸ್ಥಾನದ ಕಾವಲುಗಾರನು ನಮ್ಮಗಳನ್ನು ಕರೆಯುವದಕ್ಕೆ ಬಂದನು. 'ಇಲ್ಲಿ ನೀವು ನೋಡತಕ್ಕದ್ದನ್ನೆಲ್ಲ ನೋಡಿದಿರಾ ?' ಎಂದು ಕೇಳಿದನು. ನಮಗೆ ಅರ್ಥವಾಗಲಿಲ್ಲ. ಬಸ್ತಿಯಲ್ಲಿ -ಬಸದಿ ಎಂಬುದು ಜೈನರ ದೇವಾಲಯ ಎಂಬುದು ಆಗ ನನಗೆ ತಿಳಿದಿರಲಿಲ್ಲ- ಕಂಬಗಳ ಮೇಲೆ ನೀರು ಎರಚಿದರೆ ನೋಡುವವರ ಶರೀರವು ಎರಡು ಪಾಲಾದಂತೆ ಪ್ರತಿಬಿಂಬವು ಕಾಣಿಸುವದು, ಶರೀರವು ತಲೆಕೆಳಕಾಗಿ ಕಾಣುವದು - ಮುಂತಾದ ವಿಚಿತ್ರಗಳು ಇವೆ, ನೋಡ ಬನ್ನಿ ಎಂದು ಅವುಗಳನ್ನೆಲ್ಲ ನಮಗೆ ತೋರಿಸಿದನು. ನಾವು ಅವನಿಗೆ

ಒಂದೊಂದು ಆಣೆಯಂತೆ ಇನಾಮು ಕೊಟ್ಟೆವು. ಆಮೇಲೆ ಅವನು 'ಈ ಬಸವಣ್ಣನ ಮೇಲೆ ಹೀಗೆ ಅಕ್ಷರಗಳನ್ನು ಗೀಚಿರುವವರು ಯಾರು ?' ಎಂದು ಅಕ್ಷರಗಳನ್ನು ತೋರಿಸಿ ಕೇಳಿದನು. ನಮ್ಮಗಳ ಮುಖವು ಪೆಚ್ಚಾಯಿತು. 'ಇದನ್ನು ಅಳಿಸಿಹಾಕಿರಿ. ಈ ಸಲಕ್ಕೆ ನಿಮ್ಮನ್ನು ಹಾಗೆಯೇ ಬಿಟ್ಟಿದ್ದೇನೆ. ಇನ್ನು ಯಾರಾದರೂ ಆಗಿದ್ದರೆ ಪೋಲೀಸಿಗೆ ಕೊಡುತ್ತಿದ್ದೆ' ಎಂದು -ಗದರಿ ಕಳುಹಿಸಿದನು. ಮಿಕ್ಕವರ ಮನಸ್ಸಿನಲ್ಲಿ ಅದಾವ ಪರಿಣಾಮವಾಯಿತೋ ಕಾಣೆ, ನನಗಂತೂ ನಾವು ಮಾಡಿದ್ದು ಮಹಾಪರಾಧವು ಎಂದು ಪಶ್ಚಾತ್ತಾಪವಾಯಿತು, ಅದಕ್ಕಾಗಿ ನಾಚಿಕೆಯೂ ಉಂಟಾಯಿತು.

## ಹಾಸನಪರೀಕ್ಷೆಯ ಸಮಾಪ್ತಿ :

ದಾರಿಯಲ್ಲಿಯೂ ಹಾಸನದಲ್ಲಿಯೂ ನನ್ನ ಸ್ನೇಹಿತರುಗಳು ಇಸಪೀಟಿನ ಆಟವನ್ನು ಆಡುತ್ತಾ ವಿನೋದಕ್ಕಾಗಿ ಕಾಲವನ್ನು ಕಳೆಯುತ್ತಿದ್ದರು. ನನಗೆ ಆ ಆಟವೇನೋ ಬರುತ್ತಿತ್ತಾದರೂ ಅದರಲ್ಲಿ ಈಗ ಅಭಿರುಚಿ ತಪ್ಪಿತ್ತಾದ್ದರಿಂದ ನಾನು ಅದರಲ್ಲಿ ಭಾಗಿಯಾಗುತ್ತಿರಲಿಲ್ಲ. ನನಗೆ ಯಾವಾಗಲೂ ನಿದ್ರೆ ಸ್ವಲ್ಪ ಜಾಸ್ತಿ. ನಾನು ಮಲಗಿಕೊಂಡಾಗ ಅವರುಗಳು ರೇಖಾಗಣಿತವೇ ಮುಂತಾದದ್ದನ್ನು ಗಟ್ಟಿಮಾಡಿ ಕೊಳ್ಳುತ್ತಿದ್ದರೆಂಬುದು ನನಗೆ ಪರೀಕ್ಷೆಯಾದ ಮೇಲೆ ತಿಳಿಯಿತು. ಅಂತೂ ಇಂತೂ ಪರೀಕ್ಷೆಯಾಯಿತು. ಮೊದಲನೆಯ ತರಗತಿಯಲ್ಲಿ ಪ್ಯಾಸಾಗಬಹುದೆಂಬ ನಿರೀಕ್ಷೆಯಿತ್ತು. ಸ್ನೇಹಿತರು ನನ್ನನ್ನು ಮನೆಗೆ ಕರೆದುಕೊಂಡು ಬಂದುಬಿಟ್ಟರು. ನನ್ನಲ್ಲಿದ್ದ ಎರಡು ರೂಪಾಯಿಗಳನ್ನು ವಾಪಸುಕೊಡುವದಕ್ಕೆ ಹೋದಾಗ ಹೆಡ್‌ಮಾಸ್ಟರು ನನಗೇ ಅದನ್ನು ಕೊಟ್ಟುಬಿಟ್ಟರು.

# 12. ಪುನಃ ಪರೀಕ್ಷೆ : ಬೆಂಗಳೂರು

## ಕಾಫಿತೋಟದ ಪರಿಚಯ :

ಈಗ ನನಗೆ ಪ್ಯಾಸ್ ಆಗಿಯೇ ತೀರುವದೆಂಬ ಭರವಸೆ ಬಲವಾಗಿತ್ತು. ನನ್ನಲ್ಲಿದ್ದ ಪುಸ್ತಕಗಳನ್ನು ಕೆಳಗಿನ ತರಗತಿಯ ಹುಡುಗರಿಗೆ ಮಾರಿಬಿಟ್ಟೆನು. ಮುಂದಕ್ಕೆ ಓದುವದಕ್ಕೆ ದುಡ್ಡು ಬೇಕಾಗುವದಲ್ಲ, ಏನು ಮಾಡುವದು ? ಓದುವುದಕ್ಕೆ ಎಲ್ಲಿಗೆ ಹೋಗಬೇಕು ? ಯಾರು ಸಹಾಯ ಮಾಡುವವರು ? - ಎಂಬ ಯೋಚನೆ ಹತ್ತಿಕೊಂಡಿತು.

ಇಷ್ಟರಲ್ಲಿ ರಂಗರಾವ್ ತಮ್ಮ ತಂದೆ ರಾಮಚಂದ್ರರಾಯರ 'ಹಿರೇ ಕೊಳಲೆ ಎಸ್ಟೇಟ್' ಎಂಬ ಕಾಫಿತೋಟಕ್ಕೆ ನನ್ನನ್ನು ಕರೆದುಕೊಂಡು ಹೋದರು. ಇದುವರೆಗೂ ಸ್ನೇಹಿತರ ಹೆಸರುಗಳನ್ನೂ ಏಕವಚನದಲ್ಲಿಯೇ ಬರೆಯುತ್ತಾ ಬಂದಿದೇನಾದರೂ ಇನ್ನು ಮೇಲೆ ಎಲ್ಲಾ ಹೆಸರನ್ನೂ ಬಹುವಚನದಲ್ಲಿಯೇ ಬರೆಯುವೆನು. ಪ್ಲೀಡರ್ ಹರಿಯಪ್ಪನವರ ಮನೆಯಲ್ಲಿಯೇ ನನಗೆ ಎಲ್ಲರನ್ನೂ ಬಹುವಚನದಿಂದಲೇ ಹೇಳುವ ಪದ್ಧತಿ ರೂಢವಾಯಿತೆಂದು ಹೇಳಿರುತ್ತೇನೆ. ಲಚ್ಚಿ ಒಬ್ಬನನ್ನು ಬಿಟ್ಟರೆ ನಾನು ಮತ್ತೆ ಯಾರೊಬ್ಬರನ್ನೂ ಈವರೆಗೆ ಏಕವಚನದಿಂದ ಕರೆದಿಲ್ಲ. ಮನೆಯಲ್ಲಿ ಕೆಲವರನ್ನು ಮಾತ್ರ ಪ್ರೇಮದಿಂದ ಅಕ್ಕಯ್ಯ, ಅಕ್ಕ, ಅಣ್ಣ - ಎಂದು ಏಕವಚನ ಪ್ರಯೋಗದಿಂದ ಕರೆದದ್ದು ಹಾಗೆಯೇ ನಿಂತುಬಿಟ್ಟಿದೆ. ಆದ್ದರಿಂದ ಇನ್ನು ಮೇಲೆ ನನಗೆ ರೂಢಿಯಾಗಿರುವ ಭಾಷೆಯನ್ನೇ ಬರೆವಣಿಗೆಯಲ್ಲಿಯೂ ಅನುಕರಿಸುವದು ಯುಕ್ತವೆಂದು ತೋರಿರುತ್ತದೆ. ರಂಗರಾಯರಿಗೆ ತಮ್ಮ ತಮ್ಮಂದಿರಿಬ್ಬರಿಗೆ ಇಂಗ್ಲೀಷು ಮತ್ತು ಬೀಜಗಣಿತ ಹೇಳಿಕೊಡಲಿ - ಎಂಬ ಉದ್ದೇಶವಿತ್ತು ನನಗೂ ಕಾಫಿ ತೋಟದ ಪರಿಚಯವನ್ನು ಮಾಡಿಕೊಳ್ಳೋಣ ಎಂಬ ಕುತೂಹಲವು ಅಂಕುರಿಸಿತ್ತು.

ಈವರೆಗೆ ನನಗೆ ತೋಟವೆಂಬ ಶಬ್ದಕ್ಕೆ ನಮ್ಮೂರಿನ ತೆಂಗಿನ ತೋಟದಂತೆ ಸಣ್ಣಸಣ್ಣ ತಾಕು(ಭಾಗ)ಗಳಾಗಿ ವಿಂಗಡಿಸಿದ್ದ ಭೂಭಾಗವೆಂದೇ ಭಾವನೆಯಾಗಿತ್ತು. ಗುಡ್ಡವೆಲ್ಲ ತೋಟವಾಗಿರುವದನ್ನು ಈಗ ಕಂಡೆನು. ಕಾಫಿಗಿಡಗಳು ಹೇಗಿರುವವೆಂಬುದರ ಕಲ್ಪನೆಯೂ ಆಗ ನನ್ನ ಮನಸ್ಸಿನಲ್ಲಿ ಮೊದಲನೆಯ ಸಾರಿಗೆ ಉಂಟಾಯಿತು. ಕಾಫಿಗಿಡದ ಹೂಗಳು ಬೆಳ್ಳಗೆ ಇರುತ್ತವೆ ಎಂಬುದು ಕೂಡ ಈ ಮೊದಲು ನನಗೆ ತಿಳಿದಿರಲಿಲ್ಲ. ತೋಟದೊಳಕ್ಕೆ ಹೋದರೆ ನಾವು ಯಾವ ಭಾಗದಲ್ಲಿದ್ದೇವೆ, ಯಾವಕಡೆಯಿಂದ ಹೊರಕ್ಕೆ ಬರಬೇಕು - ಒಂದೂ ಗೊತ್ತಾಗುವಂತಿರಲಿಲ್ಲ. ತೋಟದಲ್ಲಿ ನಿರ್ಭಯವಾಗಿ ತಿರುಗಾಡುವುದಕ್ಕೆ

ಬಂದೂಕು ಏಕೆ ಬೇಕೆಂಬುದೂ ಕಾಫಿಯ ತೋಟದ ಕೂಲಿಗಳು ಎಷ್ಟು ಚದರಿರುತ್ತಾರೆಂಬುದೂ ಈಗ ಮನಸ್ಸಿಗೆ ಬಂತು. ಕಾಫಿಯ ಬೀಜವನ್ನು 'ಬುಷಲ್' ಎಂಬ ಬಳ್ಳದಲ್ಲಿ ಅಳೆಯುತ್ತಿದ್ದದ್ದು ಕಂಡುಬಂತು. ಅಲ್ಲಿ ರಾಮಚಂದ್ರರಾಯರ ಸಣ್ಣ ಬಂಗಲೆಯೊಂದಿತ್ತು. ಅದರಲ್ಲಿ ಅವರು ಸಂಸಾರ ಸಮೇತವಾಗಿ ವಾಸ ಮಾಡಿಕೊಂಡಿದ್ದರು. ಮನೆಯಲ್ಲಿ ಒಬ್ಬ ಪರಿಚಾರಕನಿದ್ದನು ; ಇಬ್ಬರು ಮೂವರು ಕೆಲಸ ಮಾಡುವ ಆಳುಗಳು ಇದ್ದರೆಂದು ಕಾಣುತ್ತದೆ. ಮನೆಗೆ ಬಂದವರಿಗೆ ಕಾಫಿ ಕೊಡುವದೆಂಬುದೊಂದು ಮರ್ಯಾದೆ ; ಯಾವಾಗಲೂ ಒಲೆಯ ಮೇಲೆ ಕಾಫಿ ಡಿಕಾಕ್ಷನ್‌ಗಾಗಿ ನೀರು ಸಿದ್ಧವಾಗಿಯೇ ಇರುತ್ತಿತ್ತು. ಕಾಫಿತೋಟದಹವೆ ಪಿತ್ತ ಪ್ರದಾನವೆಂದು ತೋರುತ್ತದೆ. ನನಗೆ ಆಗಿಂದಾಗ್ಗೆ ತಲೆ ತಿರುಗುತ್ತಲೇ ಇರುತ್ತಿತ್ತು. ಬೇಕಾದಾಗ ಅಭ್ಯಂಜನ ಮಾಡಿಕೊಳ್ಳಬಹುದೆಂದು ಹೇಳಿದ್ದರು, ಅಲ್ಲಿ ಎಣ್ಣೆ, ಶೀಗೆಕಾಯಿ, ನೀರು - ಯಾವದಕ್ಕೂ ಅಭಾವವಿರಲಿಲ್ಲ. ಸುಖವಾಗಿ ಎರಡು ಹೊತ್ತು ಬೇಕಾದಾಗ ಕಾಫಿ ಇವೆಲ್ಲ ದೊರೆಯುತ್ತಿದ್ದವು.

## ಇಂಗ್ಲಿಷು ಕಾದಂಬರಿಗಳಲ್ಲಿ ಅಭಿರುಚಿ :

ರಂಗರಾಯರ ಮನೆಯಲ್ಲಿ ಒಂದೆರಡು ಇಂಗ್ಲಿಷು ಪುಸ್ತಕಗಳು ಸಿಕ್ಕಿದ್ದವು. ಅವುಗಳಲ್ಲಿ **Soldier's Wife** (ಸಿಪಾಯಿಯ ಪತ್ನಿ) ಎಂಬ ಇಂಗ್ಲಿಷು ಕಾದಂಬರಿಯು ಮುಖ್ಯವಾದದ್ದು. ಅದು ರೈನಲ್ಡ್ ಎಂಬಾತನು ಬರೆದಿದ್ದಿರ ಬಹುದು. ಅದರ ಕಥಾ ಸಂದರ್ಭವು ಅತ್ಯಂತ ಕುತೂಹಲಜನಕವಾಗಿತ್ತು, ಒಂದು ರಾತ್ರಿ ನಾನು ಅದನ್ನು ಹರಳೆಣ್ಣೆಯ ದೀಪದ ಬೆಳಕಿನಲ್ಲಿ ಓದುತ್ತ ಕುಳಿತುಕೊಂಡೆನು, ಎಲ್ಲರೂ ಮಲಗಿದ್ದರು ; ನಾನು ಹಾಸಿಗೆಯ ಮೇಲೆಯೇ ಕುಳಿತುಕೊಂಡಿದ್ದೆನು. ಪರಿಚಾರಕನು ಮನೆಯ ಕೆಲಸಗಳನ್ನು ಪೂರೈಸಿಕೊಂಡು ಮಲಗಿಕೊಳ್ಳೋಣ-ವೆಂದು ತನ್ನ ಕೆಲಸಗಳಲ್ಲಿ ವ್ಯಾಪೃತನಾಗಿದ್ದನು. ನಾನು ಪುಸ್ತಕದ ಕಥೆಯ ಪ್ರಪಂಚದಲ್ಲಿ ವಿಹರಿಸುತ್ತಿದ್ದೆನು. ಕಥೆಯು ಶೋಕರಸಪ್ರಧಾನವಾಗುತ್ತಾ ಬಂದಿತ್ತು. ಅರ್ಧದಲ್ಲಿ ನಿಲ್ಲಿಸುವುದಕ್ಕೆ ಮನಸ್ಸು ಬರಲೇ ಇಲ್ಲ. ಮುಂದು ಮುಂದಕ್ಕೆ ಓದುತ್ತಾ ಹೋದೆ. ಬಲು ಸಣ್ಣಕ್ಷರದಲ್ಲಿ ಅಚ್ಚಾಗಿದ್ದ ಆ ಪುಸ್ತಕವನ್ನು ಕೊನೆಯವರೆಗೂ ಓದಿಮುಗಿಸಿ, ಕೈಕಾಲು ತೊಳೆದುಕೊಂಡು ಮಲಗಿಕೊಳ್ಳೋಣವೆಂದು ಸಂವರಿಸಿ ಕೊಳ್ಳುತ್ತಿರುವಷ್ಟರಲ್ಲಿ ಪರಿಚಾರಕನು 'ಸ್ವಾಮಿ, ತಮ್ಮದು ಮೊದಲು ಸ್ನಾನವಾಗಿ ಬಿಡಲಿ ! ರಾಯರಿಗೆ ಅಭ್ಯಂಗವಾಗಬೇಕು' ! ಎಂದನು. ಆಗ ನನಗೆ ಆಶ್ಚರ್ಯ ವಾಯಿತು. ಬೆಳ್ಳಂಬೆಳಗು ಕಥೆಯನ್ನೇ ಓದುತ್ತಾ ಜಾಗರಣೆ ಮಾಡಿದೇನೆಂಬ ಅರಿವು ಆಗ ತಟ್ಟನೆ ಆಯಿತು !

## ಮೊದಲನೆಯ ಪ್ರೈವೆಟ್ ಟ್ಯೂಷನ್ :

ರಂಗರಾಯರ ತಮ್ಮ (ಅವನ ಹೆಸರು ಹುಚ್ಚುರಾವ್ ಎಂದಿರಬಹುದೆಂದು ಕಾಣುತ್ತದೆ) ನನ್ನಿಂದ ಬೀಜಗಣಿತವನ್ನು ಹೇಳಿಸಿಕೊಳ್ಳುತ್ತಿದ್ದನಷ್ಟೆ. ಅವನು ನನ್ನೊಡನೆ ಆಗಾಗ್ಗೆ ಚರ್ಚೆಗೆ ಪ್ರಾರಂಭಿಸುತ್ತಿದ್ದನು. ನಾನು ಒಬ್ಬ ವಿದ್ಯಾರ್ಥಿಯೇ ಎಂಬ ಭಾವನೆ ಇದ್ದದ್ದರಿಂದ ನನ್ನ ವಿಷಯದಲ್ಲಿ ಅವನು ಗೌರವವನ್ನೇನೂ ತೋರಿಸುತ್ತಿರಲಿಲ್ಲ. ಆದರೂ ನಾನು ಚರ್ಚೆಯಲ್ಲಿ ಅವನಿಗೆ ನಿಜವನ್ನು ಮನಗಾಣಿಸಿಕೊಡಲೇಬೇಕೆಂದು ವ್ಯರ್ಥಪ್ರಯತ್ನವನ್ನು ಮಾಡುತ್ತಿದ್ದೆನು. ಅವನಿಗೆ ಕರ್ಮದಲ್ಲಿ ಅಷ್ಟು ವಿಶ್ವಾಸವಿರಲಿಲ್ಲ. ಊಟಕ್ಕೆ ಕುಳಿತುಕೊಂಡು ಬ್ರಾಹ್ಮಣರ ಪದ್ಧತಿಯಂತೆ ಪರಿಷೇಚನೆ ಮಾಡಿ ಚಿತ್ರಾಹುತಿ ಇಡುವುದಕ್ಕೆ **One, Two, Three** (ಒಂದು, ಎರಡು, ಮೂರು !) ಎಂದು ಎಣಿಸಿಕೊಂಡು ಇಡುತ್ತಿದ್ದದ್ದು ನನಗೊಂದು ಬಗೆಯ ವಿನೋದವಾಗಿತ್ತು.

## ಪುನಃ ಪರೀಕ್ಷೆಯ ಗಡಿಬಿಡಿ :

ಹೀಗೆ ಸುಮಾರು ಒಂದುವರೆ ತಿಂಗಳು ಕಾಫಿ ಎಸ್ಟೇಟಿನಲ್ಲಿ ಕಾಲಕಳೆಯಿತು. ಹೆಡ್‌ಮಾಸ್ಟರು ತಮ್ಮಲ್ಲಿಗೆ ಬರುವಂತೆ ನಮಗೆ ಹೇಳಿ ಕಳುಹಿಸಿದರು. ಕೂಡಲೇ ನಾವು ಚಿಕ್ಕಮಗಳೂರಿಗೆ ಬಂದೆವು. ಅವರು ಮನಸ್ಸಿನಲ್ಲಿ ಕಳವಳಪಟ್ಟವರಂತೆ ''ನೀವು ತೋಟದಲ್ಲಿ ನಾವೆಲ್ (ಕಾದಂಬರಿ) ಓದುತ್ತಾ ಕಾಲಹಾಕುತ್ತಿದ್ದೀರಂತೆ ! ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನಿಮಗೆ ಹೊರಗೆ ಏನಾಗುತ್ತಿದೆ ಎಂಬುದರ ಅರಿವೇ ಇಲ್ಲ. ಹಾಸನದ ಸೆಂಟರಿನಲ್ಲಿಯೂ ಇನ್ನೂ ಕೆಲವು ಕಡೆಗಳಲ್ಲಿಯೂ ಪೇಪರ್ ಔಟ್ (ಪ್ರಶ್ನೆ ಪತ್ರಿಕೆಯು ಪರೀಕ್ಷೆಗೆ ಮುಂಚೆಯೇ ಬಹಿರಂಗ) ಆಗಿದೆಯಂತೆ. ಕನ್ನಡ ಒಂದನ್ನು ಬಿಟ್ಟು ಮಿಕ್ಕ ಎಲ್ಲಾ ವಿಷಯ ಗಳಲ್ಲಿಯೂ ಪುನಃ ಪರೀಕ್ಷೆಯಾಗುತ್ತದೆಯಂತೆ. ಕೂಡಲೇ ಸಿದ್ಧರಾಗಿ ! ಆದರೆ ಇನ್ನೊಂದು ಸಮಾಚಾರ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕುಕ್ ಸಾಹೇಬರು ನೋಟೀಸ್‌ಬೋರ್ಡಿನಲ್ಲಿ 'ರಿಸಲ್ಟ್ (ಫಲಿತಾಂಶ) ಪ್ರಕಟಣೆಯಾದ ಹನ್ನೊಂದನೆಯ ತಾರೀಖಿನ (?) ಒಳಗಾಗಿ ಪ್ಯಾಸಾದವರು ಎಫ್.ಎ. ಕ್ಲಾಸಿಗೆ ಸೇರಿಬಿಡಬೇಕು; ಇಲ್ಲದಿದ್ದರೆ ಟರ್ಮ್ (ಪರೀಕ್ಷಾ ಕಾಲದ ಅವಧಿ ಯ ಅನುಮತಿ) ಸಿಕ್ಕಲಾರದು'. ಎಂದು ಪ್ರಕಟಿಸಿರುತ್ತಾರಂತೆ, ಆದ್ದರಿಂದ ಕೂಡಲೆ ಹೋಗಿ ಕಾಲೇಜಿಗೆ ಸೇರಬೇಕು. ಪುನಃ ಪರೀಕ್ಷೆಗೆ ಸಿದ್ಧರಾಗಲೂ ಬೇಕು, ಏನು ಮಾಡುತ್ತಿ ? ಸುಬ್ಬರಾವ್'' ಎಂದರು. ಆಗ ನಾನು 'ನನಗೆ ಮುಂದಕ್ಕೆ ಓದುವುದಕ್ಕೆ ಅನುಕೂಲವಿಲ್ಲವಲ್ಲ ! ' ಎಂದೆನು. ಆದರೆ ಅಯ್ಯರಿಗೆ ಆ ಮಾತು ಕಿವಿಗೆ ಬೀಳಲೆ ಇಲ್ಲ'. ''ಅದೆಲ್ಲ ಇರಲಿ, ಇಗೊ ನಿನಗೆ ಟ್ರೈನ್ ಗೋಜಿಗೆ ಹಣಕೊಡುತ್ತೇನೆ. ನೀನು

ಹೇಗಾದರೂ ಮಾಡಿ ಓದಲೇಬೇಕು, ರಂಗಣ್ಣ, ನೀನು ಇವನನ್ನು ಪರೀಕ್ಷೆಯಾಗುವವರೆಗೆ ನಿಮ್ಮ ಮನೆಯಲ್ಲಿ ಇಟ್ಟುಕೊಂಡಿರು, ಮುಂದೆ ವಾರವೋ ಅಥವಾ ಮತ್ತೆಯಾವುದಾದರೂ ಏರ್ಪಾಡು ಮಾಡಿಕೊಳ್ಳಲಿ ! ಅಂತೂ ಓದುವುದು ಬಿಡಬಾರದು, ತಿಳಿಯಿತೆ ಸುಬ್ಬರಾವ್'', ಎಂದು ಪ್ರೋತ್ಸಾಹದ ಮಾತನ್ನಾಡಿದರು. ನನಗೂ ಓದುವ ಉತ್ಸಾಹವಿದ್ದೇ ಇತ್ತು. ಇಷ್ಟು ಅವಕಾಶವು ದೊರೆಯಿತಲ್ಲ ! ಎಂದು ಹಿಗ್ಗಿದೆನು. ಹೊರಡುವುದಕ್ಕೆ ಅನುವಾದೆನು.

## ತಮಿಳು ಲಿಪಿಯ ಪರಿಚಯ :

ಪರೀಕ್ಷೆಗೆ ಇನ್ನೂ ಕಾಲಾವಧಿಯಿತ್ತು. ಹೆಡ್‌ಮಾಸ್ತರು ಈ ವೇಳೆಯಲ್ಲಿ ಶೃಂಗೇರಿಯ ಕಡೆಗೆ ಹೋಗಿ ಬರುತ್ತೇನೆಂದು ಹೇಳಿ ನನ್ನನ್ನೂ ಗಣೇಶನ್‌ನನ್ನೂ ಮನೆಯಕಡೆ ನೋಡಿಕೊಳ್ಳುವಂತೆ ಅಪ್ಪಣೆ ಮಾಡಿದರು. ನಾನು ಮನೆಯಲ್ಲಿ ಊಟಮಾಡಿಕೊಂಡು ಅಭ್ಯಾಸಕ್ಕೆ ಪಠ್ಯಪುಸ್ತಕಗಳನ್ನು ಅವರಿವರಿಂದ ತಂದು ಚಿಂತನೆ ಮಾಡುವುದಕ್ಕೆ ಪ್ರಾರಂಭಿಸಿದೆನು. ಈ ಒಳಗೆ ನಾನು ಗಣೇಶನ್ ಸಹಾಯದಿಂದ ತಮಿಳು ಅಕ್ಷರಗಳ ಪರಿಚಯ ಮಾಡಿಕೊಂಡಿದ್ದೆನು. ಯಾವುದೋ ಒಂದು ಪುಸ್ತಕವನ್ನು ಅವರಿಂದ ಹೇಳಿಸಿಕೊಂಡಿದ್ದೆನು. ಈಗ 'ಕಮಲಾಂಬಾಳ್' ? ಎಂಬ ಒಂದು ಕಥೆಯ ಪುಸ್ತಕವನ್ನು ಓದುವದಕ್ಕೆ ಪ್ರಾರಂಭಿಸಿದೆ. ನಾನು ಮಕ್ಕಳಂತೆ ತಬ್ಬಿಬ್ಬಾಗಿ ಓದುವದು, ಗಣೇಶನ್ ಮತ್ತು ಅವರ ಅತ್ತಿಗೆ (ಅಯ್ಯರವರ ಹಿರಿಯ ಹೆಂಡತಿ) ನಕ್ಕು ತಿದ್ದುವದು - ಹೀಗೆ ಸಾಗುತ್ತಿತ್ತು ತಮಿಳುಪಾಠ ! ತಮಿಳು ನನಗೆ ಬಂದದ್ದು ಇಷ್ಟೆ ಆದರೂ ತಮಿಳಿನಲ್ಲಿಯೇ ವೇದಾಂತಪುಸ್ತಕವೊಂದನ್ನು ಓದುವ ಸೌಭಾಗ್ಯವು ಒಂದು ಕಾಲಕ್ಕೆ ಹೇಗೆ ದೊರೆಯಿತೆಂಬುದು ವಾಚಕರಿಗೆ ಮುಂದೆ ತಿಳಿಯುವದು.

## ಬೆಂಗಳೂರಿಗೆ ಪುನಃ ಪರೀಕ್ಷೆಗೆ ಪ್ರಯಾಣ :

ಇಷ್ಟರಲ್ಲಿ ಅಯ್ಯರವರು ಶೃಂಗೇರಿಯಿಂದ ಹಿಂತಿರುಗಿ ಬಂದರು. ನಾನು ಕೈಯಲ್ಲಿ ಪುಸ್ತಕವಿಲ್ಲದೆ ವ್ಯರ್ಥ ಕಾಲಕ್ಷೇಪವನ್ನು ಮಾಡುತ್ತಿದ್ದದ್ದನ್ನು ಕಂಡು ಗದರಿಸಿದರು, ಅಲ್ಲಿಂದ ಮುಂದಕ್ಕೆ ನಾನು ಕೆಲವು ದಿನಗಳವರೆಗೆ ಬಹಳ ಎಚ್ಚರಿಕೆಯಿಂದ ಅವರಿವರ ಪುಸ್ತಕಗಳನ್ನು ತಂದು ಅಭ್ಯಾಸ ಮಾಡುತ್ತಿದ್ದೆನು. ಸಕಾಲಕ್ಕೆ ಪರೀಕ್ಷೆಗೆಂದು ರಂಗರಾವ್ ಜೊತೆಯಲ್ಲಿ ಬೆಂಗಳೂರಿಗೆಂದು ರೈಲು ಮೇಲೆ ಪ್ರಯಾಣ ಮಾಡಿದೆನು. ರೈಲುಗಾಡಿಯಲ್ಲಿ ಇಷ್ಟು ದೀರ್ಘಕಾಲ ಪ್ರಯಾಣ ಮಾಡಿದ್ದು ಇದೇ ಮೊದಲು. ಈ ಮುಂಚೆ ರಜಾಕಾಲದಲ್ಲಿ ಯಾವಾಗಲೋ ಒಮ್ಮೆ

ಅರಸೀಕೆರೆಗೆ ಅಳಿಯನ ಹಬ್ಬಕ್ಕೋಸ್ಕರ ಹೋಗಿರಬೇಕು. ಆದರೆ ಸ್ಟೇಷನ್ ಆದ ಮೇಲೆ ಸ್ಟೇಷನ್ನು ಬರುವದು, ಕೆಲವು ಜನರು ನೂಕುನುಗ್ಗಲಿನಲ್ಲಿ ಇಳಿಯುವದು, ಬೇರೆಯ ಕೆಲವರು ಹತ್ತುವದು, ಫಲಾಹಾರಕ್ಕೆಂದು ಜನರು ಆಗಾಗ್ಗೆ ರಿಫ್ರೆಷ್‌ಮೆಂಟು ರೂಮುಗಳಿಗೆ ಹೋಗಿ ಬರುವದು, ಬಗೆಬಗೆಯ ಆಹಾರ ಪದಾರ್ಥಗಳು, ಹಣ್ಣು ಹಂಪಲುಗಳು, ವೀಳ್ಯದೆಲೆ, ಬೀಡಿ - ಮುಂತಾದದ್ದು, ಮಕ್ಕಳ ಆಟದ ಸಾಮಾನುಗಳು - ಇವುಗಳನ್ನು ಮಾರುವ ಜನರು ಬೇರೆಬೇರೆಯ ರಾಗಗಳಿಂದ ಕೂಗಿಕೊಂಡು ರೈಲುಗಾಡಿಯ ಮಗ್ಗುಲಲ್ಲಿ ತಿರುಗಾಡುವದು - ಇವೆಲ್ಲ ನನಗೆ ಹೊಚ್ಚ ಹೊಸದೃಶ್ಯವು. ರೈಲು ಭರ‍್ರನೆ ಹೋಗುವಾಗ ಕಂಬಗಳೂ ಮರಗಳೂ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಓಡುವಂತೆ ಕಾಣಿಸುತ್ತಿದ್ದದ್ದು, ಹೊಲಗಳು, ಗದ್ದೆಗಳು - ಮುಂತಾದ ದೃಶ್ಯಗಳು ಹಾದಿಯ ಇಕ್ಕೆಲದಲ್ಲಿಯೂ ಕಂಗೊಳಿಸುವದೇ ಮುಂತಾದ ಕಾರಣಗಳಿಂದ ಹೊತ್ತು ಹೋಗುವದೇನೂ ಕಷ್ಟವಾಗಲಿಲ್ಲವಾದರೂ ಬೆಂಗಳೂರು ಇನ್ನು ಎಷ್ಟು ಹೊತ್ತಿಗೆ ಸಿಕ್ಕುವದೋ ಎಂದು ಕುತೂಹಲಾವಿಷ್ಟನಾಗಿ ನೋಡುತ್ತಿದ್ದೆನು. ಕೊನೆಗೆ ಯಶವಂತಪುರವನ್ನು ಮುಟ್ಟುತ್ತಲೂ ಜನರು ತಮ್ಮ ತಮ್ಮ ಗಂಟುಮೂಟೆಗಳನ್ನು ನೋಡಿಕೊಳ್ಳುತ್ತಾ ಮುಂದಿನ ಸ್ಟೇಷನ್ ಬೆಂಗಳೂರೆಂಬುದನ್ನು ನನ್ನ ನೆನಪಿಗೆ ತಂದುಕೊಟ್ಟರು. ಸ್ವಲ್ಪ ಹೊತ್ತಿನಲ್ಲಿ ಬೆಂಗಳೂರು ಸ್ಟೇಷನ್ ಬಂದು ಸ್ಟೇಷನ್ ಮನೆಯು ನನ್ನ ಕಣ್ಣಿಗೆ ಬಲು ದೊಡ್ಡದಾಗಿ ಕಂಡಿತು. ಪ್ರಯಾಣಿಕರು ಇಳಿಯುವ ಪ್ಲಾಟುಫಾರಮ್ಮಿನ ಅಂಗಳವು ದೊಡ್ಡ ಸಂತೆಯಂತೆ ಕಾಣುತ್ತಿತ್ತು. ರೈಲಿನಲ್ಲಿ ಇಳಿಯುವವರನ್ನು ಬರಮಾಡಿಕೊಳ್ಳುವದಕ್ಕೆ ಬಂದವರು, ಕೂಲಿಗಳು, ಜಟಕ ಗಾಡಿಯವರು - ಎಲ್ಲರೂ ಗುಂಪುಗುಂಪಾಗಿ ಗದ್ದಲ ಮಾಡುತ್ತಾ ಅತ್ತಿತ್ತ ತಿರುಗಾಡುತ್ತಿದ್ದರು. ನನಗೆ ದಿಗ್ಭ್ರಮೆಯಾಗುವಂತಿತ್ತು. ರಂಗರಾಯರು ಗಂಟುಮೂಟೆಗಳನ್ನು ನೋಡಿಕೊಳ್ಳುವಂತೆ ನನಗೆ ಎಚ್ಚರಿಕೆಯನ್ನು ಕೊಡುತ್ತಲೇ ಇದ್ದರು. ಗಾಡಿಗಳ ಬಾಗಿಲಿಗೆ ಮೊದಲೇ ಬೀಗಹಾಕಿದ್ದು ಟಿಕೆಟ್ಟು ತೆಗೆದುಕೊಳ್ಳುವವರು ಬಂದು ಬಾಗಿಲು ತೆಗೆದು ಜನರನ್ನು ಆಚೆಗೆ ಬಿಡುತ್ತಿದ್ದರು. ಇಷ್ಟರಲ್ಲಿ ಅವರ ಅಣ್ಣಂದಿರು ನಾರಾಯಣರಾಯರು ಬಂದು ನಮ್ಮನ್ನು ಬರಮಾಡಿಕೊಂಡರು. ಒಂದು ಜಟಕಗಾಡಿಯನ್ನು ಗೊತ್ತುಮಾಡಿಕೊಂಡೆವು. ಹೇ ! ಬಾಜು ! ಎಂಬ ಜಟಕ, ಜನರ ಘೋಷವನ್ನು ಕೇಳುತ್ತಾ ಅರಳೆಪೇಟೆಯಲ್ಲಿ ಗುಂಪುಗುಂಪಾಗಿ ತಿರುಗಾಡುತ್ತಿದ್ದ ಜನರನ್ನು ಹಾದಿಯ ಎರಡು ಪಕ್ಕಗಳಲ್ಲಿಯೂ ಇದ್ದ ಮನೆಗಳನ್ನೂ, ಅಂಗಡಿಗಳನ್ನೂ ನೋಡುತ್ತಾ ನಾನು ಎತ್ತಹೋಗುವೆನೆಂಬುದನ್ನು ತಿಳಿಯದೆ ಜಟಕದೊಳಗೆ ಬೆಪ್ಪಾಗಿ ಕೂತಿದ್ದೆನು. ಕೊನೆಗೆ ನಾರಾಯಣರಾಯರ ಮನೆ ಸಿಕ್ಕಿತು. ಅದು ಚಾಮರಾಜಪೇಟೆಯ ಐದನೆಯ ಬೀದಿಯಲ್ಲಿತ್ತೆಂದು ಆ ಮೇಲೆ ನನಗೆ ತಿಳಿಯಿತು.

## ಬೆಂಗಳೂರು ನಗರದ ಪ್ರಥಮ ದರ್ಶನ:

ಬೆಂಗಳೂರೆಂಬ ಹೆಸರು ನನ್ನ ಭೂವಿವರಣೆಯ ಅಲ್ಪ ಪರಿಚಯದಿಂದ ಗೊತ್ತಿತ್ತು. ಆದರೆ ಬೆಂಗಳೂರು ಎಲ್ಲಿದೆ, ಹೇಗಿದೆ - ಎಂಬುದು ನನಗೆ ಕ್ರಮಕ್ರಮವಾಗಿ ಮನವರಿಕೆಯಾಯಿತು. ನಾವು ಕೂಡಲೇ ಸೆಂಟ್ರಲ್ ಕಾಲೇಜಿಗೆ ಸೇರಬೇಕಾಗಿತ್ತಾದ್ದರಿಂದ ಕೋಟೆಯೊಳಗೆ ಹಾದು ದೊಡ್ಡಪೇಟೆಯ ಮೂಲಕ ಕಾಲೇಜಿಗೆ ನಡೆದುಕೊಂಡು ಹೋಗಬೇಕಾಗಿತ್ತು. ಬೆಂಗಳೂರು ನಗರವು ನಾವಿರುವದಕ್ಕೆ ಪೂರ್ವದಿಕ್ಕಿಗೆ ಇತ್ತು, ಆ ನಗರವನ್ನು ನಾನು ಈವರೆಗೆ ನೋಡಿದ್ದ ಯಾವದೊಂದು ಊರಿಗೂ ಹೋಲಿಸುವಂತಿಲ್ಲವೆಂಬುದು ನನಗೆ ಸ್ವಲ್ಪ ಮಟ್ಟಿಗೆ ಹೊಳೆಯಿತು. ನಾವಿದ್ದ ಊರಿನ ಭಾಗವನ್ನು ಎಕ್ಸ್ಟೆನ್‌ಷನ್(ಬಡಾವಣೆ) ಎಂದು ಕರೆಯುತ್ತಿದ್ದರು. ನಮ್ಮ ಬೀದಿಯಲ್ಲಿ ಅಲ್ಲೊಂದು, ಇಲ್ಲೊಂದು - ಹೀಗೆ ದೂರದೂರಕ್ಕೆ ಸುಮಾರು ಏಳೆಂಟು ಮನೆಗಳು ಮಾತ್ರ ನನ್ನ ಕಣ್ಣಿಗೆ ಗೋಚರವಾಗಿದ್ದವು. ದೊಡ್ಡಪೇಟೆಯು ಅನ್ವರ್ಥವಾಗಿಯೂ ದೊಡ್ಡಪೇಟೆ ಯಾಗಿತ್ತು, ಬೀದಿಯಲ್ಲಿ ಓಡಾಡುವ ಜನರಿಗೂ ಗಾಡಿಗಳಿಗೂ ಸೈಕಲುಗಳಿಗೂ ಸ್ಥಲವು ಮಾತ್ರ ಸಾಕಾಗಿರುವಂತೆ ಕಾಣಲಿಲ್ಲ, ನಾವು ಕೊನೆಗೆ ಕಾಲೇಜು ಮುಟ್ಟುವ ಹೊತ್ತಿಗೆ ಲಂಡನ್‌ಮಿಷನ್‌ಹೈಸ್ಕೂಲನ್ನು ಬಲಕ್ಕೆ ಬಿಟ್ಟುಕೊಂಡು ಮುಂದಕ್ಕೆ ಸಾಗಿದ್ದೆವು. ಕಾಲೇಜಿನ ಆವರಣವು ಚಿಕ್ಕಮಗಳೂರಿನ ಹೈಸ್ಕೂಲಿನ ಆವರಣಕ್ಕಿಂತ ಬಹಳ ದೊಡ್ಡದು. ಕಾಲೇಜು ಕಟ್ಟಡವೂ ಬಹಳ ದೊಡ್ಡದೇ ಆಗಿತ್ತು.

## ಮೆಟ್ರಿಕ್ಯುಲೇಷನ್ ಪ್ಯಾಸಾಗದೆ ಎಫ್.ಎ.ಕ್ಲಾಸು:

ಈಗ ನಾವು ಅಡ್ಮಿಷನ್ ಫೀ ಕೊಟ್ಟು ಕಾಲೇಜಿಗೆ ಸೇರಿದೆವು. ಇತ್ತಲಾಗಿ ಪರೀಕ್ಷೆಗೆ ಓದಬೇಕು; ಈ ನಡುವೆ ಕಾಲೇಜಿಗೆ ಹೋಗಿ ಯಾವಯಾವದೋ ಪಾಠಗಳನ್ನು ಶ್ರವಣಮಾಡಬೇಕು. ಪ್ಯಾಸಾಗುವದರೊಳಗೆ ಮೇಲಿನ ಕ್ಲಾಸಿನ ಪಾಠಗಳನ್ನು ಕೇಳುವದೊಂದು ಹೊಸ-ಅನುಭವ, ಕಾಲೇಜಿನಲ್ಲಿ ಕುಕ್ ಸಾಹೇಬರು, ಟೇಟ್ ಸಾಹೇಬರು, ವಿಜಯರಾಘವಾಚಾರ್ರು, ವೆಂಕಟನಾರಣಪ್ಪನವರು, ಜಯರಾಮವೆಂಕಟಾಚಾರ್ರು, ವೆಂಕಟರಾಮಯ್ಯ, ರಘುನಾಥರಾಯರು - ಇವರುಗಳಲ್ಲಿ ಒಬ್ಬೊಬ್ಬರು ಒಂದೊಂದು ದಿನ ನಮ್ಮಗಳಿಗೆ ನಾಟಕರಂಗದಲ್ಲಿ ಕಾಣಿಸಿಕೊಂಡಂತೆ ಮುಖ ತೋರಿಸಿ ಹೋಗುತ್ತಿದ್ದರು. ಕುಕ್‌ಸಾಹೇಬರು ಯೂಕ್ಲಿಡ್‌ನಲ್ಲಿಯೂ ಟ್ರಿಗುನಾಮೆಟ್ರಿಯಲ್ಲಿಯೂ ಹೊಸಪಾಠಗಳನ್ನು ಒಂದಿಷ್ಟು ಹೇಳುತ್ತಿದ್ದರು ; ಇನ್ನು ಯಾರು ಯಾರು ಏನೇನು ಹೇಳುತ್ತಿದ್ದರೋ ಮರೆತು ಹೋಗಿದೆ. ಆದರೆ 'ಮುಂದೆ ಇದೆ ಮುದುಕಿ ಹಬ್ಬ' ಎಂಬಂತೆ ಪುನಃ ಪರೀಕ್ಷೆಗೆ

ಸಿದ್ಧರಾಗುವ ಸಡಗರದಲ್ಲಿ ಈ ಹೊಸಪಾಠಗಳು ಯಾರಿಗೆ ರುಚಿಸಬೇಕು ? ನನಗಂತೂ ಕೈಯಲ್ಲಿ ಪುಸ್ತಕವಿಲ್ಲ, ಮುಂದೆ ಓದುವದಕ್ಕೆ ಏನುಮಾಡುವೆನೆಂಬ ಅರಿವಿನ ಸುಳಿವಿಲ್ಲ. ಊರಿನ ಹೊಸ ನೋಟಗಳ ಸೆಳೆತಕ್ಕೆ ಗತಿಮಿತಿ- ಯಿಲ್ಲ - ಹೀಗಾಗಿತ್ತು

## ಪುನಃ ಪರೀಕ್ಷೆಯ ಅಗ್ನಿ ಪರೀಕ್ಷೆ :

ಕೊನೆಗೆ ಪರೀಕ್ಷೆಗಳು ಬಂದವು, ಈ ಸಲ ಪೇಪರುಗಳು ಬಹಳ ಕಷ್ಟವಾಗಿದ್ದವು. ಇಂಗ್ಲೀಷು ಪೇಪರಿನಲ್ಲಿ ಸರಳಾನುವಾದಕ್ಕೆ **(Para phrase)** ಯಾವದೋ ಒಂದು ಪದ್ಯಬರುತ್ತದೆ ಎಂತ ನನ್ನ ಸ್ನೇಹಿತರೊಬ್ಬರು ಮದರಾಸಿನಿಂದ ಕಾಗದ ಬರೆದಿದ್ದರು. ಅವರು ಚಿಕ್ಕಮಗಳೂರಿನಲ್ಲಿ ನನಗಿಂತ ಕೆಳಗಿನ ತರಗತಿಯಲ್ಲಿ ಓದುತ್ತಿದ್ದವರು ಮದರಾಸಿಗೆ ಹೇಗೆ ಯಾವಾಗ ಹೊರಟರೊ ನನ್ನ ಅರಿವಿನಲ್ಲಿರಲಿಲ್ಲ. ಚಿಕ್ಕಮಗಳೂರಿನಲ್ಲಿ ಅವರ ಮೇಲೆ ಏನೋ ಒಂದು ಆಪಾದನೆ ಬಂದು ಸ್ಕೂಲು ಹುಡುಗರೆಲ್ಲರೂ ಅವರನ್ನು ಸ್ವಲ್ಪ ದೂರ ಮಾಡಿದ್ದರೂ, ಅವರ ತಿಳಿವಳಿಕೆ ಹೆಚ್ಚಿನದು ಎಂಬ ಕಾರಣದಿಂದ ನಾನು ಆ ಗುಣಕ್ಕೆ ಅವರನ್ನು ಮೆಚ್ಚಿಕೊಂಡಿದ್ದೆ. ಆದರೆ ಪ್ರಶ್ನೆ ಪತ್ರಿಕೆಯಲ್ಲಿ ಇಂಥದ್ದೊಂದು ಪ್ರಶ್ನೆಬರುತ್ತದೆ ಎಂಬ ಒಡುಕು ಸುದ್ದಿಗಳನ್ನು ಹುಟ್ಟಿಸುವದು ಆಗಿನ ಕಾಲಕ್ಕೆ ವಿದ್ಯಾರ್ಥಿಗಳಲ್ಲಿ ಬಹಳ ಪ್ರಚಾರದಲ್ಲಿದ್ದದ್ದರಿಂದ ನಾನು ಆ ಪದ್ಯದ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳಲಿಲ್ಲ, ಬೆಂಗಳೂರಿನಲ್ಲಿ ಕೆಲವರು ಪಾಪ ! ಆ ಕಾಗದದಲ್ಲಿ ಭರವಸೆಯಿಟ್ಟು ಪದ್ಯದ ಸರಳಾನುವಾದವನ್ನು ಬಲ್ಲವರಿಂದ ಬರೆಯಿಸಿಕೊಂಡು ಗಟ್ಟಿ ಮಾಡಿಕೊಂಡಿದ್ದರು. ನಾನು ಓದದೆ ಇದ್ದ ಗೋಲ್ಡ್‌ಸ್ಮಿತ್ ಕವಿಯ ಒಂದು ಕವಿತೆಯು ಸರಳಾನುವಾದಕ್ಕೆ ಬಂದಿತ್ತು. ಏನೋ ತಿಳಿದಂತೆ ಬರೆದೆ, ಇಂಗ್ಲಿಷ್ ಪೇಪರಿಗೆ ಬರೆದ ಉತ್ತರಗಳು ನನಗೆ ಸಮರ್ಪಕವಾಗಿರಲಿಲ್ಲ, ಇಂಗ್ಲೆಂಡ್ ಚರಿತ್ರೆಯಲ್ಲಿ ಕೇಳಿದ್ದ ಎಷ್ಟೋ ವಿಷಯಗಳನ್ನು ತಪ್ಪಾಗಿ ತಿಳಿದುಕೊಂಡು ಉತ್ತರ ಬರೆದೆ. ಹೊರಕ್ಕೆ ಬಂದು ನಿಜವು ತಿಳಿದ ಮೇಲೆ ನಗೆಯೂ ಬಂತು, ನಾಚಿಕೆಯೂ ಆಯಿತು. ಭೂಗೋಳದಲ್ಲಿ ನಾಲ್ಕೇ ನಾಲ್ಕು ಪ್ರಶ್ನೆಗಳು; ಅವುಗಳಲ್ಲಿ ಒಂದೂ ನನಗೆ ತಿಳಿಯಲಿಲ್ಲ, ನಕ್ಷೆ ಬರೆಯುವದಕ್ಕೆ ಮೆಡಿಟರೇನಿಯನ್ ಸಮುದ್ರವನ್ನು ಕೊಟ್ಟಿದ್ದರು. ಪುಟದ ಮೇಲುಭಾಗವನ್ನು ಪೂರ್ವದಿಕ್ಕಾಗಿ ಮಾಡಿಕೊಳ್ಳಿ ಎಂದು ಬರೆದಿತ್ತು. ಅದೇಕೋ ಅದುಕೂಡ ನನಗೆ ಕಷ್ಟವಾಗಿ ತೋರಿತು. ಮೇಲುಭಾಗಕ್ಕೆ ಯಾವಾಗಲೂ ಉತ್ತರವಿರಬೇಕು ಎಂತ ನನ್ನ ಭಾವನೆ ! ಅಂತೂ ಇಂತೂ ಪರೀಕ್ಷೆ ಮುಗಿಯಿತು ; ಫಲಿತಾಂಶವೂ ಬಂದಿತು. ಕುಕ್‌ಸಾಹೇಬರು ಫಲಿತಾಂಶದ ಪಟ್ಟಿಯನ್ನು ತಂದು ಓದಿದರು. ನನ್ನ ಗತಿ ಏನೋ ಎಂದು ಯೋಚಿಸುತ್ತಿರುವಂತೆ ನನ್ನ

ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಒಬ್ಬೊಬ್ಬರಾಗಿ ಹೆಸರು ಕರೆದು ಕುಕ್ ಸಾಹೇಬರು ಕೂಗುತ್ತಲೂ ಹುಡುಗರು ನಿಂತುಕೊಳ್ಳುತ್ತಿದ್ದರು. 'ಯಾವ ಸ್ಕೂಲಿನಿಂದ ಬಂದೆ ! ಎಂದು ಕೇಳುವದು, 'ಫಸ್ಟ್‌ಕ್ಲಾಸ್' ! ಎಂತ ಹೇಳುವದು - ಹೀಗೆ ನಡೆಯಿತು. ಆ ವರ್ಷ ಸೆಂಟ್ರಲ್ ಕಾಲೇಜಿನಲ್ಲಿ ಬಹಳ ಜನ ಫಸ್ಟ್‌ಕ್ಲಾಸ್ ಪ್ಯಾಸ್ ಆಗಿರಲಿಲ್ಲ ; ಒಬ್ಬಿಬ್ಬರು ಆಗಿರಬಹುದೇನೋ ! ಚಿಕ್ಕಮಗಳೂರಿನ ಹುಡುಗರು ಅಷ್ಟೊಂದು ಜನ ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸಾಗಿರುವುದನ್ನು ನೋಡಿ ಆಶ್ಚರ್ಯ ಪಡುತ್ತಿದ್ದರು. ನೀನು ಚಿಕ್ಕಮಗಳೂರಿನ ಹೈಸ್ಕೂಲಿನವನೋ ? ಎಂದು ಒಬ್ಬೊಬ್ಬರನ್ನೂ ಕೇಳುತ್ತಿದ್ದರು ! ಈ ನಡುವೆ ನನ್ನ ಸ್ನೇಹಿತರು ನನ್ನ ಹೆಸರೇಕೆ ಫಸ್ಟ್‌ಕ್ಲಾಸ್ ಪಟ್ಟಿಯಲ್ಲಿಲ್ಲವೆಂಬುದು ತಿಳಿಯದೆ ಪೇಚಾಡುತ್ತಿದ್ದರು. ಬಿ.ಜಿ. ಶ್ರೀನಿವಾಸಾಚಾರ್ ಪಿಸುಮಾತಿನಲ್ಲಿ 'ಹೆದರಬೇಡಿ ಸುಬ್ಬರಾವ್, ನನ್ನ ಡಿಸ್ಟ್ರಿಕ್ಸ್ಕಾಲರ್‌ಷಿಪ್ ನಿಮಗೆ ಕೊಡುತ್ತೇನೆ ಎನ್ನುತ್ತಿದ್ದರು. ನನಗೆ ಪ್ಯಾಸೋ, ಫೇಲೋ ಎಂಬುದೇ ಚಿಂತೆ. ಕೊನೆಗೆ ನನ್ನ ಹೆಸರು ಬಂತು ; ಅದು ಫಸ್ಟ್‌ಕ್ಲಾಸ್‌ನಲ್ಲಿಯೂ ಆಗಿತ್ತು. ಚಿಕ್ಕಮಗಳೂರಿಗೆ ನನ್ನಿಂದ ಕೆಟ್ಟ ಹೆಸರೇನೂ ಬರಲಿಲ್ಲವಲ್ಲ ! ಎಂಬಂತೆ ನನ್ನ ಸ್ನೇಹಿತರು ನನ್ನ ಮುಖವನ್ನು ನೋಡಿದರು. ನಾನು ಸದ್ಯಕ್ಕೆ ಪ್ಯಾಸಾಯಿತಲ್ಲ' ! ಎಂದು ಉಸ್ಸೆಂದು ಕುಳಿತುಕೊಂಡೆನು.

---

# 13 ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ( 1900-1901)

## ಎಫ್. ಎ. ಕ್ಲಾಸಿನ ಉಪಾಧ್ಯಾಯರುಗಳು :

ಇನ್ನು ಎಫ್.ಎ. ಕ್ಲಾಸಿನ ಗಡಿಬಿಡಿ. ಪುಸ್ತಕಗಳನ್ನು ಕೊಳ್ಳಬೇಕು, ಆಯಾ ದಿನದ ಪಾಠಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಮನೆಗೂ ಕಾಲೇಜಿಗೂ ಹೋಗಿಬರುವದೇ ಒಂದು ಕೆಲಸ, ಕಾಲೇಜಿನಲ್ಲಿ ದೊಡ್ಡ ತರಗತಿ ; ಹೊಸ ಮೇಷ್ಟರುಗಳು, ಹೊಸಪಾಠ. ನನಗೆ ಯಾವದೋ ಒಂದು ಅಪರಿಚಿತವಾದ ದೇಶಕ್ಕೆ ಬಂದಿರುವಂತೆ ಭಾಸವಾಗುತ್ತಿತ್ತು. ಇದರ ಜೊತೆಗೆ ವಿದ್ಯಾಭ್ಯಾಸದ ಅಂತಸ್ತಿನ ದೃಷ್ಟಿಯಿಂದ ಎಫ್.ಎ. ಕ್ಲಾಸಿಗೆ ಬಂದದ್ದು ನನಗೆ ಡಬಲ್ ಪ್ರಮೋಷನ್ (ಮೇಲಿನ ಒಂದು ತರಗತಿಯನ್ನು ಬಿಟ್ಟೇ ಮತ್ತೊಂದು ಮೇಲಿನ ತರಗತಿಗೆ ವರ್ಗ) ಆದಂತೆ ಕಾಣುತ್ತಿತ್ತು. ಇದುವರೆಗೂ ಪಾಠಗಳು ನನಗೆ ನೀರು ಕುಡಿದಂತೆ ಸುಗಮವಾಗಿದ್ದವು. ಈಗ ಎಲ್ಲವೂ ಕಷ್ಟವಾಗಿಯೇ ಕಾಣುತ್ತಿತ್ತು. ಇಂಗ್ಲೀಷ್‌ನಲ್ಲಿ ಪ್ರೋಸ್(ಗದ್ಯ)ಕ್ಕೆ ಲೆನರ್ಡ್ ಸಾಹೇಬರು ಬಂದು 'ನೇವರ್ಲಿ' ಎಂಬ ಕಾದಂಬರಿಯನ್ನು ಹಗುರವಾಗಿ ಓದಿ ಹಾಸ್ಯಮಾಡಿ ಹುಡುಗರನ್ನು ನಗಿಸಿ ಪಾಠಮಾಡಿ ಹೋಗುತ್ತಿದ್ದರು. ಪಾಠವು ನನಗೆ ಗೊತ್ತಿಲ್ಲದಂತೆಯೇ ಬಹಳ ಮುಂದೆ ಸಾಗಿಬಿಡುತ್ತಿತ್ತು. ಪೊಯಟ್ರಿ, ಡ್ರಾಮ (ಕಾವ್ಯ, ನಾಟಕ)ಗಳಿಗೆ ಟೇಟ್‌ಸಾಹೇಬರು ಬರುತ್ತಿದ್ದರು. ಅವರು ಗಂಭೀರವಾಗಿ ಮಾತುಗಳನ್ನು ಅಗಿದು ಅಗಿದು ಒತ್ತಿ ಒತ್ತಿ ಉಚ್ಚರಿಸುವದು, ಮಿಲಿಟರಿಡ್ರಿಲ್ ಮಾಡಿಸಿದಂತೆ ಶಿಸ್ತಿನಿಂದ ವಿದ್ಯಾರ್ಥಿಗಳನ್ನು ಅಲ್ಲೊಬ್ಬರು ಇಲ್ಲೊಬ್ಬರಾಗಿ ಪ್ರಶ್ನೆ ಕೇಳುವದು ಇದೆಲ್ಲ ನನಗೆ ಏನೋ ಬಹಳ ಬಿಕ್ಕಟ್ಟಿಗೆ ಸಿಕ್ಕಿದಂತೆ ಆಗುತ್ತಿತ್ತು. ಅವರು ಒಂದು ದಿನ ಪ್ರಶ್ನೆಗಳನ್ನು ಕೊಟ್ಟು ಉತ್ತರ ಬರೆಯಿಸಿ ಬೇರೊಂದು ದಿನ ನಮ್ಮ ಉತ್ತರಗಳನ್ನು ಓದಿ ಅವುಗಳನ್ನು ವಿಮರ್ಶೆ ಮಾಡುವದಾಗಿ ನಿಂತುಕೊಂಡು ಕೇಳುವುದು ಕೋರ್ಟಿನಲ್ಲಿ ಸಾಕ್ಷ್ಯ ಹೇಳುವವರು ನಿಂತುಕೊಂಡಂತೆ ನನಗೆ ಪ್ರಯಾಸಕರವಾಗಿತ್ತು. ಆಗಿನ ವಿದ್ಯಾರ್ಥಿಗಳು ಸ್ವಲ್ಪ ವಯಸ್ಕರೇ ಆಗಿದ್ದರೆನ್ನಬಹುದು ; ಇಕ್ಕಟ್ಟಿನ ಡೆಸ್ಕುಸೇರಿಸಿದ ಬೆಂಚುಗಳ ಮೇಲೆ ಕುಳಿತುಕೊಳ್ಳುವದೂ ಪ್ರೊಫೆಸರು ಕೇಳುವ ಪ್ರಶ್ನೆಗಳಿಗೆ ನಿಂತುಕೊಂಡು ಉತ್ತರ ಕೊಡುವದು ಕಷ್ಟವೇ ಆಗುತ್ತಿತ್ತು. ಇನ್ನು ಕುಕ್ ಸಾಹೇಬರು ಆಲ್ಜಿಬ್ರಾ ಟ್ರಿಗುನಾಮೆಟ್ರಿಗಳನ್ನು ಮಾಡಿಸುವ ಕ್ರಮಗಳು ನನಗೆ ವಿಲಕ್ಷಣವಾಗಿ ತೋರುತ್ತಿದ್ದವು. ಅವರು ಬೋರ್ಡಿನ ಮೇಲೆ ಲೆಕ್ಕಗಳನ್ನು ಮಾಡುವಾಗ **Look ! Look ! How I land at the result in five steps only.** ನೋಡಿ, ನೋಡಿ ! ಐದೇ ಹೆಜ್ಜೆಗಳ

ವಿನ್ಯಾಸದಲ್ಲಿ ಉತ್ತರಕ್ಕೆ ಬಂದು ಮುಟ್ಟಿಬಿಡುತ್ತೇನೆ ಎನ್ನುವದು, ಮೂಗಿನ ಮೇಲೆ ಸಿಕ್ಕಿಸಿಕೊಂಡಿದ್ದ ಕಪ್ಪುದಾರ ಹಾಕಿದ್ದ ಕನ್ನಡಕವನ್ನು ತೆಗೆದು ಎಡಗೈಯಲ್ಲಿಟ್ಟುಕೊಂಡು, ವಾರ್ಧಕ ನಿಮಿತ್ತದಿಂದ ಒಂದಿಷ್ಟು ತಲೆ ನಡುಗಿಸುತ್ತಾ ಮಾತನಾಡುವದು - ಇದೆಲ್ಲ ವಿನೋದವಾಗಿಯೇ ಇತ್ತು. ಆದರೆ ಆಲ್ಜಿಬ್ರಾದಲ್ಲಿ ಗಟ್ಟಿಗನೆಂದು ಕೊಚ್ಚಿಕೊಳ್ಳುತ್ತಿದ್ದ ನಾನು ಒಮ್ಮೆ ಅವರಿಗಿಂತಲೂ ಸಂಕ್ಷೇಪ ರೀತಿಯಿಂದ ಲೆಕ್ಕಮಾಡಿದ್ದೇನೆಂದು ಖಿಲ್ಲತ್ತು ಪಡೆಯುವದಕ್ಕೆ ನನ್ನ ವಿನ್ಯಾಸ ಕ್ರಮವನ್ನು ತೋರಿಸುವದಕ್ಕೆ ಹೋದಾಗ **"Look you chap, I Have been teaching Algebra from a very long time, I was teaching it even before Tod Hunter was born"** ಇಲ್ಲಿ ಕೇಳು, ಈ ಬೀಜಗಣಿತವನ್ನು ನಾನು ಎಷ್ಟೋ ವರ್ಷಗಳಿಂದ, ಟಾಡ್ ಹಂಟರ್ ಹುಟ್ಟುವದಕ್ಕಿಂತ ಮುಂಚಿನಿಂದಲೇ ಹೇಳಿಕೊಡುತ್ತಾ ಬಂದಿದ್ದೇನೆ ! ಎಂದು ಚಟ್ಟನೆ ಹೇಳಿದ್ದು ಕೇಳಿ ನನಗೆ ದಿಗಿಲೂ ವಿನೋದವೂ ಏಕಕಾಲಕ್ಕೆ ಆಯಿತು. ನನ್ನ ಪಾಂಡಿತ್ಯ ಪ್ರದರ್ಶನವು ಚಿಕ್ಕಮಗಳೂರಿನಲ್ಲೇ ಸರಿ ಎಂದು ಅಂದಿನಿಂದ ತೆಪ್ಪಗಾಗಿ ಬಿಟ್ಟೆನು. ಫಿಸಿಯಾಲಜೀ (ಶರೀರರಚನಾಶಾಸ್ತ್ರ)ವನ್ನು ವೆಂಕಟನಾರಣಪ್ಪನವರು ಹೇಳಿಕೊಡುತ್ತಿದ್ದರು ; ಒಂದೊಂದು ವೇಳೆ ವಿಜಯರಾಘವಾಚಾರರೂ ಹೇಳಿಕೊಡುತ್ತಿದ್ದರು. ವಿಜಯರಾಘವಾಚಾರರು ಎರಡೆರಡು ಮಾತುಗಳ ನಡುವೆ **"Don't You, See"** ಕಂಡಿರ, ತಿಳಿಯಲಿಲ್ಲವೆ ಎಂದು ಉದ್ಗಾರಗಳನ್ನು ತೆಗೆಯುತ್ತಿದ್ದರು. ಜವಾನನು ತಂದು ಗೋಡೆಯಗೂಟಕ್ಕೆ ತಗುಲಿ ಹಾಕಿದ್ದ ಮಾನವನ ಅಸ್ಥಿಪಂಜರವನ್ನು ದೂರದಿಂದ ಬೆತ್ತದಿಂದ ನಿರ್ದೇಶಿಸಿ, ಇದು ಇಂಥ ಮೂಳೆ, ಇದು ಇಂಥದ್ದು ಎಂದು ವೆಂಕಟನಾರಣಪ್ಪನವರು ಎಲ್ಲಿ ಅದನ್ನು ಮುಟ್ಟಿದರೆ ಮೈಲಿಗೆ ಯಾಗುವದೊ ಎಂಬ ಅಂಜಿಕೆಯಿಂದಲೋ ಎಂಬಂತೆ ತೋರಿಸುತ್ತಿದ್ದದ್ದು ಸ್ವಲ್ಪ ವಿನೋದವನ್ನು ಮಾಡುತ್ತಿತ್ತು. ಆದರೆ ದಿನಗಳು ಉರುಳಿದಂತೆ ಪಾಠಗಳು ನಾಗಾಲೋಟದಿಂದ ಸಾಗುತ್ತಿರುವಂತೆ ಕಾಣುತ್ತಿತ್ತು. ಮಿಕ್ಕ ಹುಡುಗರು ಪಾಠಗಳನ್ನು ನೋಟ್ಸ್‌ಗಳ ಮೂಲಕ ಅರಗಿಸಿಕೊಳ್ಳುತ್ತಿರುವಲ್ಲಿ ನನಗೆ ಕೆಲವು ಪುಸ್ತಕಗಳು ಕೈಯಲ್ಲಿ ಇಲ್ಲದ್ದರಿಂದಲೂ ನೋಟ್ಸುಗಳ ವಿಷಯಕ್ಕೆ ಮಾಡಿದ ಅನಾದರದಿಂದಲೂ ಬಹಳ ಕಷ್ಟಕರವಾಗಿಬಿಟ್ಟವು ಎಂಬುದು ನಿಶ್ಚಯ.

## ವಾರದ ಊಟಕ್ಕೆ ಪ್ರಯತ್ನ:

ಇತ್ತ ಮನೆಯಲ್ಲಿ ಊಟ ಉಪಚಾರಗಳಿಗೆ ಅನುಕೂಲ್ಯವಿಲ್ಲದ್ದು ಮತ್ತೊಂದು ಅಸೌಕರ್ಯವಾಗಿತ್ತು. ಮನೆಯ ಯಜಮಾನರು ಒಂದು ದಿನ ನನಗೆ 'ನಿಮಗೆ ಅಡಿಗೆ ಗಿಡಿಗೆ ಮಾಡುವದಕ್ಕೆ ಬರುತ್ತದೆಯೆ' ? ಎಂದು ಕೇಳಿದರು 'ಇಲ್ಲ !' ಎಂದು

ನಾನು ಮೆಲ್ಲಗೆ ಉತ್ತರವನ್ನು ಕೊಟ್ಟೆ. 'ಮೇಯೋಕೆ ಬರುತ್ತದೆಯೋ, ಕೊಂಡು ಕೊಂಡು ? ಎಂದು ಅವರು ಹಂಗಿಸಿ ನೈಸರ್ಗಿಕವಾದ ತಮ್ಮ ಉಗ್ಗಿನ ಮಾತಿನಲ್ಲಿ ಹಂಗಿಸಿದ್ದರು'. 'ಹೋಗಿ ವಾರ ಗೀರ ಮಾಡಿಕೊಳ್ಳಿ ' ಎಂದು ಬುದ್ಧಿ ಹೇಳಿದರು. ಅಲ್ಲಿಯವರೆಗೂ ನನಗೆ ಎಚ್ಚರವೇ ಆಗಿರಲಿಲ್ಲ. ನಾನು ಕಂಡವರ ಮನೆಯಲ್ಲಿದ್ದೇನೆ, ಬೆಂಗಳೂರು ಜೀವನದಲ್ಲಿ ಇವರಿಗೆ ನನ್ನಿಂದ ಕಷ್ಟವಾಗಿರಬೇಕು, ಎಂಬುದರ ಅರಿವೇ ಇಲ್ಲದೆ, ಪಾಠಗಳನ್ನು ನೋಡಿಕೊಳ್ಳುವದು, ಅವರ ಚಿಕ್ಕ ಲೈಬ್ರರಿಗೂಡಿನಲ್ಲಿಟ್ಟದ್ದ ಕೆಲವು ಪುಸ್ತಕಗಳನ್ನು ಓದುವದು - ಹೀಗೆ ಕಾಲವನ್ನು ಹಾಕುತ್ತಿದ್ದೆನು. ಇನ್ನು ಸುಮ್ಮನಿರಬಾರದೆಂದು ಕೂಡಲೆ ಹೊರಟು ಪಕ್ಕದ ಮನೆಯವರನ್ನು ವಾರ ಮಾಡಿಕೊಡಿ ಎಂದು ಕೇಳುವ ಧೈರ್ಯ ಮಾಡಿದೆನು. ನನ್ನ ದುರದೃಷ್ಟಕ್ಕೆ ಅವರು ನಮ್ಮೂರ್‍ರ ಲಕ್ಷ್ಮಯ್ಯನವರ ಬೀಗರು ಎಂದು ಆಮೇಲೆ ಗೊತ್ತಾಯಿತು. ನಮ್ಮ ಊರು ಯಾವದೆಂಬುದನ್ನು ಕೇಳಿ ತಿಳಿದುಕೊಂಡು 'ಇಲ್ಲ ವಾರ ಸಿಕ್ಕುವದಿಲ್ಲ, ಯಳ್ಳಂಬಳಸೆಯವರಿಗೆ, ಅವರೆಲ್ಲ ತುಂಟರು' ಎಂದು ಬಿಟ್ಟರು ! ಅಲ್ಲಿಂದ ಆಚೆಗೆ ಇದ್ದ ಒಂದೆರಡು ಮನೆಗಳನ್ನು ಯಾವದೆಂಬುದನ್ನು ಕೇಳಿ ತಿಳಿದುಕೊಂಡು 'ನನಗೆ ವಾರ ಕೇಳುವದಕ್ಕೆ ಉಸಿರೇ ಬರಲಿಲ್ಲ! ಮನೆಯ ಒಳಗಿನಿಂದ ಹೊರಕ್ಕೆ ಬರುತ್ತಿದ್ದವ-ರಾಗಲಿ, ಹೊರಗಿನಿಂದ ಒಳಕ್ಕೆ ಹೋಗುತ್ತಿದ್ದವರಾಗಲೀ ನೀನು ಯಾರು ?' ಎಂದು ಕೇಳಲೂ ಇಲ್ಲ. ಹೀಗಾಗಿ ನನಗೆ ಚಾಮರಾಜಪೇಟೆಯಲ್ಲಿ ವಾರಗಳು ಸಿಕ್ಕುವದು ಕೂಡ ಕಷ್ಟವಾಯಿತು. ಹೇಗೋ ಅಲ್ಲಿ ಒಂದು ವಾರ ದೊರೆಯಿತು. ಇನ್ನು ಸ್ವಲ್ಪ ದೂರಹೋಗಿ ಪ್ರಯತ್ನಿಸೋಣ ಎಂದುಕೊಂಡು ಆಗ್ಗೆ ಬಸವನಗುಡಿಯ ಎಕ್ಸ್ಟೆನ್‌ಷನ್ ಆಗ ತಾನೆ ಹೊಸದಾಗಿ ನಿರ್ಮಾಣವಾಗುತ್ತಿತ್ತು. ಚಿಕ್ಕಮಗಳೂರಿನಿಂದ ಬರುವಾಗ ಸುಬ್ರಹ್ಮಣ್ಯಅಯ್ಯರು ನನಗೆ ಕೊಟ್ಟಿದ್ದ ಒಂದು ಕಾಗದದ ನೆನಪು ಬಂತು. ಅದನ್ನು ತೆಗೆದುಕೊಂಡು ಬಸವನಗುಡಿಯಲ್ಲಿದ್ದ ಕೃಷ್ಣಸ್ವಾಮಿಅಯ್ಯರ್ ಎಂಬುವರನ್ನು ಕಾಣುವದಕ್ಕೆಂದು ಹೊರಟೆ. ನಾನು ಹೋದಾಗ ಅಯ್ಯರು ಪಿಟೀಲು ಬಾರಿಸುತ್ತಾ ಕೂತಿದ್ದರು. ಕಾಗದವನ್ನು ಓದಿ ನೋಡಿಕೊಂಡು "ನಮ್ಮ ಚಲ್ಲಪ್ಪ" (ಸುಬ್ರಹ್ಮಣ್ಯ ಅಯ್ಯರಿಗೆ ಇದು ಅಡ್ಡಹೆಸರೆಂಬುದು ಆಗತಾನೆ ನನಗೆ ಗೊತ್ತಾಯಿತು) 'ಮನೆಗೆ ಮಾರಿ ಹೆರರಿಗೆ ಉಪಕಾರಿ, ವಿದ್ಯಾರ್ಥಿಗಳಿಗೆ ಸಹಾಯ ಮಾಡುವದರಲ್ಲಿಯೇ ಆಯಿತು !' ಎಂದು ತಮಗೆ ತಾವೇ ಹೇಳಿಕೊಂಡಂತೆ ಅವರು ನನ್ನ ಕಡೆಗೆ ತಿರುಗಿ ನಮ್ಮ ಮನೆಗೂ ಒಂದು ವಾರ ಬರಬಹುದಪ್ಪ ! ಎಂದರು. ಚಾಮರಾಜಪೇಟೆಯಲ್ಲಿ ಒಂದು ವಾರ, ಬಸವನಗುಡಿಯಲ್ಲಿ ಒಂದು ವಾರ, ಹೀಗೆ ಎರಡುವಾರಗಳು ಮಾಡಿಕೊಂಡು ಮಿಕ್ಕ ವಾರಗಳು ಏನು ಮಾಡಬೇಕೆಂಬುದು ನನಗೆ ತಿಳಿಯಲಿಲ್ಲ. ಬಸವನಗುಡಿಗೆ ದಾರಿಯಲ್ಲೆಲ್ಲ ದೀಪದ ಕಂಬಗಳು ಇನ್ನೂ

ಏರ್ಪಾಡಾಗಿರಲಿಲ್ಲ. ರಾತ್ರಿಯಲ್ಲಿ ಅಷ್ಟು ದೂರ ಹೋಗಿ ಊಟ ಮಾಡಿಕೊಂಡು ಬರುವದೆಂದರೆ 'ಯಗಟಿಯ ವಾಸ, ಪುರದ ಭಿಕ್ಷ, ಯಳ್ಳಂಬಳಸೆಯ ಗಂಟೆ ಗೋಪಾಳ್' ಹೀಗೆ ಮಾಡುತ್ತಿದ್ದನೆಂದು ಪ್ರತೀತಿಯಿದ್ದ ದಾಸಯ್ಯನ ಕಥೆ ನೆನಪಿಗೆ ಬರುವಂತಿತ್ತು.

## ಹೋಟಲ್ ಊಟ, ಬಾಡಿಗೆಯ ಕೊಟ್ಟಡಿಯ ವಾಸ :

ಇಷ್ಟರಲ್ಲಿ ನನಗೆ ಎರಡು ರೂಪಾಯಿಗಳ ಡಿಸ್ಟ್ರಿಕ್ಟ್ ಸ್ಕಾಲರ್‌ಷಿಪ್ ಸಿಕ್ಕಿತು. ಚಿಕ್ಕಮಗಳೂರಿನಿಂದ ಸುಬ್ರಹ್ಮಣ್ಯಅಯ್ಯರು ಬರೆದು ಕೊಟ್ಟಿದ್ದ ಶಿಫಾರಸು ಪತ್ರದಲ್ಲಿ ನನ್ನನ್ನು ಬಹುವಾಗಿ ಕೊಂಡಾಡಿದ್ದು ಕೆಲವು ಪ್ರೊಫೆಸರುಗಳಿಗೆ ಸ್ವಲ್ಪ ಲಕ್ಷ್ಯಕೊಡುವಂತೆ ಆಗಿತ್ತು. ಅತ್ತ ಚಿಕ್ಕಮಗಳೂರಿನಲ್ಲಿ ಕೆಲವರು ಫೋರ್ಟ್ ಸೇಂಟ್ ಜಾರ್ಜ್ ಗೆಜೆಟ್ಟಿನಲ್ಲಿ ನನ್ನ ರಿಸಲ್ಟ್ ಉತ್ತಮ ರೀತಿಯಿಂದ ಬರುವದೆಂದು ನಿರೀಕ್ಷಿಸಿದ್ದ ಜನರು ಕೆಲವರು ಗೆಜೆಟ್ಟನ್ನು ಒಬ್ಬರ ಕೈಯಿಂದ ಒಬ್ಬರು ಕಸಿದುಕೊಂಡು ನೋಡುವದಕ್ಕೆ ಪ್ರಾರಂಭಿಸಿ ಕೊನೆಗೆ ನಾನು ಚಿಕ್ಕಮಗಳೂರು ಫಸ್ಟ್‌ಕ್ಲಾಸಿನಲ್ಲಿ ತೀರ ಕೊನೆಯವನೆಂಬುದನ್ನು ಕಂಡು ಆಶಾಭಂಗದಿಂದ ಮುಖಪೆಚ್ಚು ಮಾಡಿ ಕೊಂಡಿದ್ದರಂತೆ. ನಾನು ಪ್ರೆಸಿಡೆನ್ಸಿಗೆಲ್ಲ ಫಸ್ಟ್ ಬರಬಹುದು ಎಂದು ಅವರ ನಿರೀಕ್ಷಣೆ! ಆದರೆ ಅವರೇನು ಬಲ್ಲರು, ನನಗೆ ಆಗ್ಗೆ ಒದಗಿದ ದುರವಸ್ಥೆಯನ್ನು? ಅಯ್ಯರು ಮಾತ್ರ ನನ್ನಲ್ಲಿ ವಿಶ್ವಾಸವನ್ನಿಟ್ಟುಕೊಂಡೇ ಇದ್ದರು. ಬೆಂಗಳೂರಿನಲ್ಲಿ ಬಂದಾಗ್ಗೆ ಸೆಕ್ರೆಟೇರಿಯಟ್‌ನಲ್ಲಿ ಅವರು ನನ್ನನ್ನು ತುಂಬ ಕೊಂಡಾಡಿದ್ದರ ಫಲವಾಗಿ ಅಂಡರ್ ಸೆಕ್ರೆಟರಿಯವರೊಬ್ಬರ ಮನೆಯಲ್ಲಿ ನನಗೊಂದು 'ಪ್ರೈವೇಟು ಟ್ಯೂಷನ್' ಸಿಕ್ಕಿತು, ಲಂಡನ್ ಮಿಷನ್‌ಸ್ಕೂಲಿನಲ್ಲಿ ನಾಲ್ಕನೆಯ ಕ್ಲಾಸಿನಲ್ಲಿ ಓದುತ್ತಿದ್ದ ಒಬ್ಬ ಹುಡುಗನಿಗೆ ಇಂಗ್ಲೀಷು ಹೇಳಬೇಕೆಂದೂ, ತಿಂಗಳಿಗೆ ನಾಲ್ಕು ರೂಪಾಯಿ ಫೀ ಕೊಡುವದಾಗಿಯೂ ಅವರು ಗೊತ್ತು ಮಾಡಿದರು. ನನ್ನ ಆನಂದಕ್ಕೆ ಪಾರವೇ ಇಲ್ಲ! ಮಾಮೂಲುಪೇಟೆಯಲ್ಲಿ ನರಸಮ್ಮನ ಹೋಟಲಿನಲ್ಲಿ ತಿಂಗಳಿಗೆ ಐದು ರೂಪಾಯಿಕೊಟ್ಟು ಊಟಮಾಡುವದಕ್ಕೆ ಏರ್ಪಡಿಸಿಕೊಂಡೆ ; ಹೋಟಲಿಗೆ ಹತ್ತಿರದಲ್ಲಿಯೇ ಇದ್ದ ಒಂದು ಕೊಟ್ಟಡಿಯನ್ನು ತಿಂಗಳಿಗೆ ಒಂದು ರೂಪಾಯಿ ಬಾಡಿಗೆಗೆ ಗೊತ್ತುಮಾಡಿಕೊಂಡೆ. ವಾರದ ಯೋಚನೆ ಕೈಬಿಟ್ಟುಬಿಟ್ಟೆ.

## ಹೊಟ್ಟೆಪಾಡಿಗಾಗಿ ಸಂಸ್ಕೃತಾಭ್ಯಾಸ:

ಕೈಗೆ ಬಂದ ದುಡ್ಡೆಲ್ಲ ಊಟಕ್ಕೆ ವಸತಿಗೆ ಮುಗಿದುಹೋಗುವದಲ್ಲ ! ಬಾಕಿಯ ಹಣಕ್ಕೆ ಏನು ಮಾಡಲಿ ? ಎಂಬ ಯೋಚನೆ ಹುಟ್ಟಿತು. ಈ ಸಮಯಕ್ಕೆ ಸರಿಯಾಗಿ

ಒಬ್ಬ ಸ್ನೇಹಿತ ಅಯ್ಯಂಗಾರ್ (ಅವನ ಹೆಸರು ಮರೆತುಹೋಗಿದೆ) ನನಗೆ ಒಂದು ಸಲಹೆ ಕೊಟ್ಟ. 'ನಾನು ನಿನ್ನಂತೆ ಬಡವ ; ಆದ್ದರಿಂದ ಸಂಸ್ಕೃತಪಾಠಶಾಲೆಗೆ ಸೇರಿ ಬೆಳಗಿನ ಹೊತ್ತು ಕಲಿತುಕೊಳ್ಳುತ್ತೇನೆ. ಅದು ಮುಜರಾಯಿ ಇಲಾಖೆಗೆ ಸೇರಿದೆ. ಅಲ್ಲಿ ಓದಿದವರಲ್ಲಿ ಮೊದಲನೆಯವರಾದವರಿಗೆ ಸ್ಕಾಲರ್‌ಷಿಪ್ ಕೊಡುತ್ತಾರೆ. ನೀನು ಬೇಕಾದರೆ ಪ್ರಯತ್ನಮಾಡು' ! ಎಂದ. ಅದು ನನಗೆ ಯುಕ್ತವಾಗಿ ತೋರಿತು. ನನಗೆ ಆಗಲೆ ಇಪ್ಪತ್ತು ವರ್ಷ ವಯಸ್ಸು ; ಚಿಕ್ಕ ಹುಡುಗರ ಜೊತೆಯಲ್ಲಿ ಓದುವದಕ್ಕೆ ನಾಚಿಕೆ. ಇದರ ಮೇಲೆ ನನಗೆ ಸ್ಕಾಲರ್‌ಷಿಪ್ ಸಿಕ್ಕಬೇಕು, ಏನುಮಾಡಲಿ ! ಎಂದು ಯೋಚಿಸುತ್ತಿದ್ದೆ. ಆದರೆ ನನ್ನ ಪುಣ್ಯಕ್ಕೆ ಆಗ್ಗೆ ಪಾಠಶಾಲೆಯ ಮೇಲು ವಿಚಾರಣೆಯಲ್ಲಿದ್ದ ಮುಜರಾಯಿ ಹೆಡ್‌ಕ್ಲಾರ್ಕ್‌ರು ಯಾವ ತರಗತಿಗೆ ಸೇರುತ್ತೀಯೆ, ನೀನೇ ನೋಡಿ ಹೇಳು !' ಎಂದರು. ಯಾವ ಹುಡುಗರೂ ಇಲ್ಲದಿದ್ದ ಒಂದು ತರಗತಿ ಸಿಕ್ಕಿತು. ಅದರಲ್ಲಿ ಹೇಗೂ ನಾನೇ ಫಸ್ಟ್ ಆಗುತ್ತೇನಾದ್ದರಿಂದ ಸ್ಕಾಲರ್‌ಷಿಪ್ ಸಿಕ್ಕೇ ಸಿಕ್ಕಬೇಕಷ್ಟೆ ಎಂದುಕೊಂಡು ಅದಕ್ಕೆ ಸೇರಿದೆ. ಅದಕ್ಕೆ ಉಪಾಧ್ಯಾಯರು ಕರಿಗಿರಿಯಾಚಾರ್ಯರು. ಅವರು ವ್ಯಾಕರಣದಲ್ಲಿ ದೊಡ್ಡ ವಿದ್ವಾಂಸರಾದರೂ ಅವರಿಗೆ ಕಾವ್ಯವನ್ನು ಹೇಳುವದಕ್ಕೆ ಬರುವುದಿಲ್ಲ ಎಂಬ ಪ್ರತೀತಿ ಕೆಲವರು ವಿದ್ಯಾರ್ಥಿಗಳಲ್ಲಿತ್ತು. ಆದರೆ ಅದು ಸುಳ್ಳು ಎಂಬುದು ನನಗೆ ಬಲು ಬೇಗನೆ ಮನದಟ್ಟಾಯಿತು. ತರಗತಿಗೆ ಕಿರಾತಾರ್ಜುನೀಯ, ದಶಕುಮಾರಚರಿತೆ - ಎರಡನ್ನು ಇಟ್ಟಿದ್ದರು. ಆಚಾರ್ಯರು ಬಹಳ ಆದರದಿಂದ ಶ್ಲೋಕವನ್ನು ಓದಿಸಿ ಪದಚ್ಛೇದಗಳನ್ನು ಮಾಡಿಸಿ ಶಬ್ದವನ್ನು ಹೇಳಿಸುವದು, ಅರ್ಥವನ್ನು ವಿವರಿಸುವದು, ಅಭಿಪ್ರಾಯವನ್ನೂ ಭಾವಾರ್ಥವನ್ನೂ ತಿಳಿಸುವದು, ಇಷ್ಟೇ ಅಲ್ಲದೆ ಮಲ್ಲಿನಾಥನ ವ್ಯಾಖ್ಯಾನವನ್ನು ಓದಿಸಿ ಅದಕ್ಕೂ ಅರ್ಥವನ್ನು ಹೇಳುತ್ತಿದ್ದರು. ಇದರಿಂದ ನನಗೆ ಸಂಸ್ಕೃತ ಕಾವ್ಯಗಳನ್ನು ಹೇಗೆ ಅಭ್ಯಾಸ ಮಾಡಿದರೆ ವ್ಯುತ್ಪತ್ತಿಯು ಬೇಗನೆ ಆಗುತ್ತದೆ - ಎಂಬುದರ ಅರಿವು ಆಯಿತು. ಅವರು ವ್ಯಾಖ್ಯಾನದಲ್ಲಿ ಬಂದ ವ್ಯಾಕರಣಸೂತ್ರ, ಕೋಶವಾಕ್ಯಗಳು ಯಾವದೊಂದನ್ನೂ ಬಿಡದೆ ವಿವರಿಸಿ ಹೇಳುತ್ತಿದ್ದರು. ಸಂಸ್ಕೃತಕ್ಕೆ ಬೇಕಾದ ಯಾವ ಸಾಮಗ್ರಿಯೂ ಇಲ್ಲದ ನನಗೆ ಹೊಸದಾಗಿ ಕಣ್ಣು ತೆರೆದಂತೆ ಆಯಿತು. ಶಬ್ದಗಳ ಲಿಂಗವನ್ನು ತಿಳಿದುಕೊಳ್ಳುವದು ಬಹಳ ಕಷ್ಟವಾಗುತ್ತಿತ್ತು ; ಅವರು ಕೆಲವು ಸೂಚನೆಗಳನ್ನು ಕೊಟ್ಟು ಅದನ್ನು ತಿಳಿಸಿದಾಗ ಇಂಗ್ಲೀಷಿನಲ್ಲಿ ಎನ್ (ನಪುಂಸಕ), ಎಫ್ (ಸ್ತ್ರೀಲಿಂಗ), ಎಂದು ಗುರುತು ಮಾಡಿಕೊಂಡು ಅವರು ಕೇಳಿದಾಗ ಹೇಳಿ ಬಿಡುತ್ತಿದ್ದೆ. 'ಪಾದಂ ವ್ಯವಸಿತಿ ತ್ರಾಣಸ್ಥಾನಲಕ್ಷ್ಮಾಙ್ಘ್ರಿವಸ್ತುಷು' ಎಂದು ವ್ಯಾಖ್ಯಾನದಲ್ಲಿ ಬರೆದಿದ್ದಂತೆಯೆ ತುಂಡು ತುಂಡಾಗಿ ಅಮರ ಕೋಶದ ವಾಕ್ಯಗಳನ್ನು ಗಟ್ಟಿ ಮಾಡಿಕೊಂಡು ಒಪ್ಪಿಸುತ್ತಿದ್ದೆ. ಅದರಿಂದ ಆಚಾರ್ಯರಿಗೆ ಬಹಳ

ಸಂತೋಷವಾಗುತ್ತಿತ್ತು. ನನಗೆ ಸಂಸ್ಕೃತ ಸಮಾಸಗಳ ಪರಿಚಯವು ಇನ್ನೂ ಸಾಲದು. ಒಮ್ಮೆ ಒಬ್ಬ ಸ್ನೇಹಿತರು ತರಗತಿಗೆ ಬಂದು ಸಂಸ್ಕೃತದಲ್ಲಿ ಸಂಭಾಷಣೆ ಮಾಡುತ್ತಿದ್ದಾಗ ನನ್ನ ವಿಷಯಕ್ಕೆ 'ಇವನಿಗೆ ವಿಗ್ರಹವಾಕ್ಯವನ್ನು ಹೇಳುವದಕ್ಕೆ ಬರುತ್ತದೆಯೆ ?' ಎಂದು ಸಂಸ್ಕೃತದಲ್ಲಿ ಕೇಳಿದರು. 'ಅವನೇ ಇದ್ದಾನಲ್ಲ, ವಿಗ್ರಹ !' ಎಂದು ಆಚಾರ್ಯರು ಹೇಳಿದ್ದರು. ನನಗೆ ಅವರಿಬ್ಬರ ಸಂಭಾಷಣೆಯ ಅಭಿಪ್ರಾಯವು ತಿಳಿಯಿತು. 'ಇವರು ನನ್ನ ವಿಷಯಕ್ಕೆ ಮಾತನಾಡಿದ್ದು ವಸ್ತುಸ್ಥಿತಿಯೇ ಆಗಿದೆ. ನಾನು ಹೇಗಾದರೂ ಮಾಡಿ ವಿಗ್ರಹ ವಾಕ್ಯವನ್ನು ಹೇಳುವ ರೀತಿಯನ್ನು ಕಲಿತುಕೊಳ್ಳಲೇ ಬೇಕು' ಎಂದು ಸಂಕಲ್ಪಿಸಿ ಕೊಂಡೆನು. ಒಟ್ಟಿನಲ್ಲಿ ಕರಿಗಿರಿಯಾಚಾರ್ಯರೇ ಸಂಸ್ಕೃತಕ್ಕೆ ನನಗೆ ಮುಖ್ಯ ಗುರುಗಳು ಎಂದು ನಾನು ಈವರೆಗೂ ಭಾವಿಸಿರುತ್ತೇನೆ. ಅವರು ಹೇಳಿಕೊಟ್ಟ ಒಂದು ಸರ್ಗ ಕಿರಾತಾರ್ಜುನೀಯ ಮತ್ತು ಒಂದು ಪರಿಚ್ಛೇದ ದಶಕುಮಾರ ಚರಿತ್ರೆ - ಇವೆರಡರ ಬಂಡವಾಳದಿಂದಲೇ ಮುಂದೆ ನನ್ನ ಸಂಸ್ಕೃತ ಜ್ಞಾನವು ವಿಕಾಸವಾಗುವದಕ್ಕೆ ಕಾರಣವಾಯಿತು. ಅವರ ಉಪಕಾರವನ್ನು ನಾನು ಎಂದಿಗೂ ಮರೆಯುವಂತೆಯೇ ಇಲ್ಲ.

## ವಿದ್ಯಾಭ್ಯಾಸಕ್ಕೆ ಆತಂಕ, ಊರಿಗೆ ಪುನರಾವೃತ್ತಿ :

ಈಗ ಸೀನಿಯರ್ ಎಫ್.ಎ. ಕ್ಲಾಸಿಗೆ ಪ್ರಮೋಷನ್ ಆಯಿತು, ರೀಡರಿನ ಪರೀಕ್ಷೆಯಲ್ಲಿ ನಾನು ತೊಂಬತ್ತು ನಾಲ್ಕು ಜನ ವಿದ್ಯಾರ್ಥಿಗಳೊಳಗೆ ನಾಲ್ಕನೆಯವನಾಗಿ ಪ್ಯಾಸಾಗಿದ್ದೆ. ಈಗ ಪಾಠವನ್ನು ಮುಂದುವರಿಸಬೇಕೆಂಬ ಆಶೆ ಬಹಳವಾಗಿಯೇ ಇತ್ತಾದರೂ ಕೆಲವು ಅನಿರೀಕ್ಷಿತವಾದ ಅಡಚಣೆಗಳು ಬಂದೊದಗಿದವು. ಆಗ ಸೆನ್ಸಸ್ ಲೆಕ್ಕವನ್ನು ಪರಿಪೂರ್ಣಗೊಳಿಸಿ ವ್ಯವಸ್ಥೆ ಮಾಡುವದಕ್ಕೆಂದು ಬೇರೆ ಬೇರೆಯ ಕಡೆಯಿಂದ ನೌಕರರನ್ನು ತಾತ್ಕಾಲಿಕವಾಗಿ ಬೆಂಗಳೂರಿಗೆ ಕರೆಯಿಸಿಕೊಂಡಿದ್ದರು ; ಅಂಥ ನೌಕರರುಗಳಲ್ಲಿ ನಮ್ಮ ದೊಡ್ಡಣ್ಣ ಒಬ್ಬರು, ಅವರು ಬಂದ ಮೇಲೆ ಕೆಲವು ದಿನಗಳು ನನ್ನ ಜೊತೆಯಲ್ಲಿದ್ದರು, ಅವರ ಸಲಹೆಯಂತೆ ನಾನು ನರಸಮ್ಮನ ಹೋಟಲನ್ನು ಬಿಟ್ಟು ಬೇರೊಂದು ಹೋಟಲನ್ನು ಮಾಡಿಕೊಳ್ಳಬೇಕಾಯಿತು.ಈ ನಡುವೆ ನನಗೆ ಬೆಳಗಾಗುತ್ತಲೂ ಒಂದು ಫಲಾಹಾರದ ಅಂಗಡಿಯಲ್ಲಿ ಮಸಾಲೆದೋಸೆಯನ್ನು ತಿನ್ನುವ ಹವ್ಯಾಸವು ಬೆಳೆದುಕೊಂಡಿತ್ತು. ಹೊಸ ಹೋಟಲಿನಲ್ಲಿ ಊಟದ ವ್ಯವಸ್ಥೆ ನನ್ನ ಮನಸ್ಸಿಗೆ ಒಗ್ಗಲಿಲ್ಲ, ಫಲಾಹಾರದ ಫಲವೂ ಇರಬಹುದು,ನನಗೆ ಶರೀರಾರೋಗ್ಯವು ತಪ್ಪಿತು. ಅಂತೂ ಇನ್ನೇನು ಪರೀಕ್ಷೆಗೆ ಅಪ್ಲಿಕೇಷನ್ ಹಾಕಿಕೊಳ್ಳಬೇಕು, ಅಷ್ಟರಲ್ಲಿ ನನ್ನ ಶರೀರಾರೋಗ್ಯವು ಬಹಳ ಕೆಟ್ಟದ್ದರಿಂದ ಅಣ್ಣನವರು ನೀನು ಊರಿಗೆ ಹೋಗಿ

ಸುಧಾರಿಸಿಕೊಳ್ಳುವದು ಒಳ್ಳೆಯದು ಎಂದು ಸೂಚಿಸಿದರು. ಅದರಂತೆ ನಾನು ಹಿಂತಿರುಗಿ ಬಂದು ಬಿಟ್ಟೆ. ಈ ನಡುವೆ ನನಗೆ ನಿಷೇಕ (ಪ್ರಸ್ತವೂ) ಆಗಿ ಬಿಟ್ಟಿತ್ತು. ಅದು ಯಾವಾಗ ಆಯಿತೆಂಬುದು ಈಗ ಮರೆತು ಹೋಗಿದೆ. ದಾರಿಯಲ್ಲಿ ಹೆಂಡತಿಯ ಮುಖವನ್ನು ನೋಡಿಕೊಂಡು ಹೋಗೋಣವೆಂಬ ಕುತೂಹಲವೂ ಅಂಕುರಿಸಿತು. ಅರಸೀಕೆರೆಯಲ್ಲಿ ಒಂದೆರಡು ದಿನಗಳಿದ್ದು ಊರಿಗೆ ಬಂದೆ. ಹಾಗೂ ಹೀಗೂ ಕಾಲ ಹಾಕಿದೆ. **1901**ನೆಯ ಇಸವಿಯು ಹೀಗೆ ಕಳೆದು ಹೋಯಿತು.

## ರಾಮಭಕ್ತಿಗೆ ಪ್ರವೇಶ :

ಇಲ್ಲಿಂದ ಮುಂದಕ್ಕೆ ಒಂದು ವರ್ಷದ ಘಟನೆಗಳು ನನಗೆ ಸರಿಯಾಗಿ ನೆನಪಿಲ್ಲ ಆದರೆ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕಾದ್ದು ಅವಶ್ಯ. ನಮ್ಮೂರಿಗೆ ಕಣಕಟ್ಟೆಯ ರಾಮಣ್ಣನೆಂಬ ಒಬ್ಬ ಅದ್ಭುತಶಕ್ತಿಯ ರಾಮಭಕ್ತರು ಈ ಸರಿಸುಮಾರಿನ ಕಾಲಕ್ಕೆ ಬಂದರು. ಅವರು ಹನುಮಾನನ ಉಪಾಸನೆಯಿಂದ ಕೆಲವು ದಿವ್ಯ ಶಕ್ತಿಗಳನ್ನು ಸಂಪಾದಿಸಿಕೊಂಡಿದ್ದಾರೆಂದು ಜನರು ಆಡಿಕೊಳ್ಳುತ್ತಿದ್ದರು. ಶಾಸ್ತ್ರ ಪರಿಚಯವಿಲ್ಲ-ದಿದ್ದರೂ ಅವರು ಜಾತಕಗಳನ್ನು ಗುಣಿಸುವದು, ಭವಿಷ್ಯತ್ಫಲಗಳನ್ನು ಹೇಳುವದು - ಮುಂತಾದವುಗಳಲ್ಲಿ ಅಸಾಧಾರಣ ಪ್ರತಿಭಾವಂತರಾಗಿದ್ದರು. ನಮ್ಮ ಮನೆಯಲ್ಲಿ ಅವರು ಉಳಿದುಕೊಂಡಿದ್ದರಾದರೂ ಊರಲ್ಲೆಲ್ಲ ಅವರಿಗೆ ಆತಿಥ್ಯವು ದೊರೆಯುತ್ತಿತ್ತು. ಸೂರ್ಯನಮಸ್ಕಾರವನ್ನು ಮಾಡುವದು, ಸುಂದರ ಕಾಂಡವನ್ನು ನಿತ್ಯವೂ ಪುಸ್ತಕ ಸಹಾಯವಿಲ್ಲದೆಯೇ ಪಾರಾಯಣ ಮಾಡುವದು, ಅಖಂಡವಾಗಿ ರಾಮಮಂತ್ರವನ್ನು ಜಪಿಸುವದು - ಇವುಗಳು ಅವರ ನಿತ್ಯಾಹ್ನಿಕ ದೊಳಗೆ ಸೇರಿದ್ದವು. ಜನರಿಗೆ ಅವರು ಫಲಜ್ಯೋತಿಷ್ಯದಿಂದ ಆಚ್ಚರಿಯನ್ನುಂಟು ಮಾಡುತ್ತಿದ್ದ ಒಂದೆರಡು ಉದಾಹರಣೆಗಳನ್ನು ಇಲ್ಲಿಕೊಡುವೆನು. ಹಳ್ಳಿಯವನೊಬ್ಬನು ತನ್ನ ಎಮ್ಮೆಯು ಎಲ್ಲಿಯೋ ತಪ್ಪಿಸಿಕೊಂಡು ಹೋಗಿದ್ದರಿಂದ ಅದನ್ನು ಎತ್ತಕಡೆಯಲ್ಲಿ ಹುಡುಕಬೇಕೆಂಬುದನ್ನು ತಿಳಿದುಕೊಳ್ಳುವದಕ್ಕೆ ರಾಮಣ್ಣನವರ ಬಳಿಗೆ ಬಂದನು. ಅವರು ಆಗ ಲಕ್ಷ್ಮಯ್ಯನವರ ಮನೆಯ ಹಜಾರದಲ್ಲಿ ಕುಳಿತಿದ್ದರು. ಎದುರಿಗೆ ಎತ್ತರವಾಗಿ ಬೆಳೆದಿದ್ದ ತುಳಸೀ ಗಿಡಕ್ಕೆ ಪೂಜೆಮಾಡಿದ್ದ ಒಂದು ದಾಸವಾಳದ ಹೂವನ್ನು ತೋರಿಸಿ 'ಈ ದಿಕ್ಕಿನ ಹಳ್ಳಿಗೆ ಹೋಗಿದೆ' ಎಂದರು. ಅವನಿಗೆ ಆ ದಿಕ್ಕಿನಲ್ಲಿದ್ದ ಒಂದು ಹಳ್ಳಿಯ ಹತ್ತಿರವೇ ಎಮ್ಮೆ ಸಿಕ್ಕಿತಂತೆ. ಅದೇ ದಿನ ಅವರು ಒಂದು ಜಾತಕವನ್ನು ಗುಣಿಸಿ ಅದರ ಫಲಗಳನ್ನು ಹೇಳುತ್ತಿದ್ದರು ; ಆ ಸಮಯಕ್ಕೆ ಸರಿಯಾಗಿ ತಂಗಲಿಯಿಂದ (ಕಡೂರು ಹತ್ತಿರದ ಒಂದು ಹಳ್ಳಿ) ಒಬ್ಬನು ಒಂದು ಕಾಗದವನ್ನು ತಂದು ಅವರ ಮುಂದೆ ಇಟ್ಟನು. ಅವರು ಅದನ್ನು ಒಡೆದುಕೂಡ ನೋಡದೆ, ಅವರಿಗೆ

ಹಣ ನಷ್ಟವಾಗಿದ್ದರೆ ನಾನೇನು ಮಾಡಬೇಕು ? 'ಇನ್ನೆರಡು ತಿಂಗಳು ಅವರಿಗೆ ಗ್ರಹಗತಿ ಹೀಗೆಯೇ ಇದೆ ! ಎಂದು ಬಿಟ್ಟರು. ಅವರು ಹಣದ ವಿಷಯವನ್ನು ಕುರಿತು ಬರೆದಿದ್ದಾರೆಂಬುದು ತಮಗೆ ಹೇಗೆ ಗೊತ್ತಾಯಿತು ?' ಎಂದು ಲಕ್ಷ್ಮಯ್ಯನವರು ಕೇಳಿದ್ದಕ್ಕೆ ನಾವು ಈ ಜಾತಕದಲ್ಲಿ ಇಂತದ್ದೊಂದು ರಾಶಿಯ ವಿಚಾರ ಮಾತಾಡುತ್ತಿದ್ದೇವಷ್ಟೆ ? ಆದ್ದರಿಂದಲೇ ಅವರು ಹಣದ ವಿಚಾರ ಕೇಳಿರಬೇಕೆಂದು ಸ್ಪಷ್ಟವಾಗುತ್ತದೆ ! ಎಂದರು. ರಾಮಣ್ಣನವರು ಹೀಗೆ ಅಸಂಬದ್ಧವಾಗಿ ತೋರುವ ಮಾತುಗಳನ್ನು ಅವರು ಆಡಿದರೂ ಅದು ನಿಜವೇ ಆಯಿತು. ಆಮೇಲೆ ಹತ್ತಿರವಿದ್ದವರು ಕಾಗದವನ್ನು ಓದಿದ್ದರಲ್ಲಿ ಅದು ಹಣದ ವಿಚಾರವಾಗಿಯೇ ಬರೆದಿದ್ದ ಕಾಗದವೆಂಬುದು ಸ್ಪಷ್ಟವಾಯಿತು. ನಮ್ಮೂರ ಜೋಯಿಸ ಸುಬ್ಬಾಭಟ್ಟರು ಹಾಸ್ಯಕ್ಕಾಗಿ 'ಇದೆಲ್ಲ ಇರಲಿ, ನನಗೆ ಈಗ ರುಂಡಿಯ ಮೇಲೆ ಎದ್ದಿರುವ ಕುರು ಯಾವಾಗ ಒಡೆಯುತ್ತದೆ, ಹೇಳಿ ?' ಎಂದರು. ರಾಮಣ್ಣನವರು ಪ್ರಶಾಂತ ಮುಖಮುದ್ರೆಯಿಂದಲೇ 'ನಾಳೆ ಇಂಥ ಲಗ್ನಕ್ಕೆ ಸರಿಯಾಗಿ ಇಷ್ಟುಹೊತ್ತಿಗೆ ಒಡೆಯುತ್ತದೆ ! ಎಂದರು. ಹೀಗೆ ಅವರು ಆಡುವ ಮಾತುಗಳೆಲ್ಲ ಸಫಲವಾದದ್ದನ್ನು ಕಂಡು ಜ್ಯೋತಿಷ್ಯದಲ್ಲಿ ಅಷ್ಟೇನೂ ವಿಶ್ವಾಸವಿಲ್ಲದ ನನಗೂ ಅವರಲ್ಲಿ ಗೌರವವುಂಟಾಯಿತು. ಅವರಿಗೆ ಜ್ಯೋತಿಷ್ಯಕ್ಕಿಂತಲೂ ರಾಮಭಕ್ತಿಯಿಂದ ಹೆಚ್ಚಿನ ಸಿದ್ಧಿಗಳು ಉಂಟಾಗಿರಬೇಕೆಂಬ ಕಲ್ಪನೆಯೊಂದು ನನ್ನ ಮನಸ್ಸಿನಲ್ಲಿ ತತ್ಕಾಲಕ್ಕೆ ಮಿಂಚಿತು. ಅವರು ಬೀರೂರಿನಲ್ಲಿ ರಾಮೋತ್ಸವವನ್ನು ಮಾಡಬೇಕೆಂದು ಸಂಕಲ್ಪಸಿದ್ದರು ; ಅದಕ್ಕಾಗಿ ಜನರಿಂದ ಇಂತಿಷ್ಟು ಕಾಣಿಕೆಯನ್ನು ಕೊಡುತ್ತೇವೆಂಬ ವಾಗ್ದಾನವನ್ನು ಒಂದು ಪುಸ್ತಕದಲ್ಲಿ ಬರೆಯಿಸಿಕೊಳ್ಳುತ್ತಿದ್ದರು. ನೀನು ಇಂತಿಷ್ಟು ರೂಪಾಯಿ ಬರೆಯಬೇಕು' ಎಂದರೆ ಜನರು ಭಯಭಕ್ತಿಗಳಿಂದ ಕೂಡಿ ಅಷ್ಟನ್ನೇ ಬರೆದುಬಿಡುತ್ತಿದ್ದರು. ಅದೂ ನನಗೆ ಆಶ್ಚರ್ಯವನ್ನು ಉಂಟುಮಾಡಿತು. ಅವರು ದೊಡ್ಡವರೆಂಬ ಬುದ್ಧಿಯುಂಟಾಗುವುದಕ್ಕೆ ಕಾರಣವಾಯಿತು. ಇದೆಲ್ಲಕ್ಕಿಂತಲೂ ಅವರು ನನ್ನ ವಿಷಯಕ್ಕೆ ನಮ್ಮ ತಂದೆಯವರೊಡನೆ ಮಾತನಾಡುತ್ತಾ 'ಇವನಿಗೆ ಬುದ್ಧಿಚುರುಕಾಗಿದೆ, ಈಗ ಬುಧದಶೆ (?)ಎಂದು ಅವರು ಹೇಳಿರಬಹುದು. ಆದರೆ ಸರಿಯಾಗಿ ನೆನಪಿಲ್ಲ - ಮುಂದೆ ಒಳ್ಳೆ ವಿದ್ವಾಂಸನಾಗುವ ಯೋಗವಿದೆ. ಆದರೇನು ? ಇವನು ಹೆಂಡತಿಯ ಮುಖವನ್ನು ನೆನಸಿಕೊಂಡು ಓದುವದನ್ನು ಕೈಬಿಟ್ಟುಬಂದಿರುತ್ತಾನೆ !' ಎಂದರು. ನನಗೆ ಆಶ್ಚರ್ಯವೂ ನಾಚಿಕೆಯೂ ಏಕಕಾಲಕ್ಕೆ ಉಂಟಾಯಿತು. 'ನನಗೆ ಓದುವದಕ್ಕೆ ಧನಸಹಾಯವನ್ನು ಯಾರೂ ಮಾಡುವದಿಲ್ಲ, ನೀವು ಕೊಡುತ್ತೀರೋ, ಹೋಗಿ ಮತ್ತೆ ಓದುತ್ತೇನೆ' ಎಂದೆನು. 'ಒಳ್ಳೆಯದು ಹೋಗು ! ರಾಮ ಕೊಡಿಸುತ್ತಾನೆ' ! ಎಂದರು. ಆ ವರ್ಷದ ರಾಮೋತ್ಸವಕ್ಕೆ ನಾನು

ಬೀರೂರಿಗೆ ಹೋದೆ. ಅಲ್ಲಿ ನನಗೊಂದು ಅದ್ಭುತದೃಶ್ಯವು ಗೋಚರವಾಯಿತು. ನಾಲ್ಕು ಕಡೆಯಲ್ಲಿಯೂ ನಾಲ್ಕು ಭಜನಮಂದಿರಗಳನ್ನು ಬಿದಿರಿನ ಚಾಪೆಗಳಿಂದ (?) ನಿರ್ಮಿಸಿದ್ದರು. ನಡುವೆ ದೇವಸ್ಥಾನ, ಸುತ್ತಲೂ ಬಯಲಿನ ಅಂಗಳ ಇರುವಂತೆ ಏರ್ಪಡಿಸಿದ್ದ ಆ ಸ್ಥಳವು ಒಂದು ದೊಡ್ಡ ಚಪ್ಪರದ ಆವರಣದೊಳಗೆ ಇತ್ತು. ಎಲ್ಲಿ ನೋಡಿದರೂ ಜನರ ಗಿಜಿಗಿಜಿ ಓಡಾಟ; ರಾಮಣ್ಣನವರು ಯಾವಾಗಲೂ ಸಂಜೆಯ ಹೊತ್ತು ಊಟ ಮಾಡಿದವರೇ ಅಲ್ಲ; ಈಗ ಅವರು ನಿಯಮದಿಂದ ದೀಕ್ಷೆವಹಿಸಿ ನಿಯತಾಹಾರದಿಂದ ಮೌನವಾಗಿ ದೇವಸ್ಥಾನದಲ್ಲಿ ಕುಳಿತಿದ್ದರು. ಸಾಹುಕಾರರುಗಳು ರೇಶ್ಮೆ ಮಡಿಯನ್ನುಟ್ಟುಕೊಂಡು ಬೆಳ್ಳಿತಟ್ಟೆಯಲ್ಲಿ ತಾವು ಕೊಡುವ ಕಾಣಿಕೆಗಳನ್ನು ಇಟ್ಟುಕೊಂಡು ಓಲಗ ಭಜಂತ್ರಿಗಳೊಡನೆ ದೇವಸ್ಥಾನಕ್ಕೆ ಪ್ರದಕ್ಷಿಣೆ ಮಾಡಿಕೊಂಡು ಬಂದು ದೇವರ ಪಾದದಲ್ಲಿ ಸುರಿಯುತ್ತಿದ್ದರು, ಹಳ್ಳಿಗಳಿಂದ ಜನರು ತಮ್ಮ ತಮ್ಮ ವಾಗ್ದಾನದ ಹಣವನ್ನು ತಂದು ತಂದು ಒಪ್ಪಿಸುತ್ತಿದ್ದರು. ರಾಮಾಯಣಪಾರಾಯಣ, ಮಂತ್ರ-ಜಪ-ಹೋಮಗಳೇ ಮುಂತಾದ ಅನುಷ್ಠಾನ- ಗಳು ನಡೆಯುತ್ತಿದ್ದವು. ರೈಲು ಗೂಡ್ಸುಗಾಡಿಯ ಮೂಲಕವಾಗಿ ದೂರ ಪ್ರದೇಶಗಳಿಂದ ಅಲ್ಲಿ ನಡೆಯಬೇಕಾಗಿದ್ದ ಸಮಾರಾಧನೆಯ ಸಾಮಾನುಗಳು ಬರುತ್ತಿದ್ದವು. ಬೆಳಿಗ್ಗೆ ಬಂದವರಿಗೆ ಕಾಫಿ, ಉಪ್ಪಿಟ್ಟು - ಮುಂತಾದ ಫಲಾಹಾರಗಳು ಅವರವರ ಸೌಕರ್ಯಕ್ಕೆ ತಕ್ಕಂತೆ ಏರ್ಪಟ್ಟಿದ್ದವು. ಮಧ್ಯಾಹ್ನದ ಮಹಾಮಂಗಳಾರತಿಯಾಗುತ್ತಲೂ ಜಾಗಟೆಯನ್ನು ಬಾರಿಸಿದರೆ ಸಾವಿರಾರು ಜನರು ಸದ್ದಿಲ್ಲದೆ ಸಾಲು ಹಿಡಿದು ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ನೂರಾರು ಜನರು ನಾನು ಮುಂದು ತಾನು ಮುಂದು, ಎಂದು ಬಡಿಸುವುದಕ್ಕೆ ಸಿದ್ಧರಾಗುತ್ತಿದ್ದರು. ಸಾರು, ಹುಳಿ - ಮುಂತಾದವುಗಳನ್ನು ಕೂಡಿಡುತ್ತಿದ್ದ ಕೊಳದಪ್ಪಲೆಗಳು ನನ್ನ ಕಣ್ಣಿಗೆ ಸಣ್ಣ ಸಣ್ಣ ಭಾವಿಗಳಂತೆ ಕಾಣುತ್ತಿದ್ದವು. ಅವುಗಳಿಗೆ ರಾಟೆಯ ಮೂಲಕ ಕಡಾಯ ಪಾತ್ರೆಗಳನ್ನು ಬಿಟ್ಟು ಸಾರು ಹುಳಿ ಮುಂತಾದವುಗಳನ್ನು ತುಂಬಿ ಕೊಳ್ಳುತ್ತಿದ್ದರು. ಸರಕಾರಿಯ ಉದ್ಯೋಗಸ್ಥರು, ಅಸಿಸ್ಟೆಂಟು ಕಮಿಷನರು - ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳು ಕೂಡ ಸೊಂಟಕಟ್ಟಿಕೊಂಡು ಸೇವೆಗೆ ನಿಲ್ಲುತ್ತಿದ್ದರು. ಆಗಲೂ ಅಖಂಡವಾದ ರಾಮಭಜನೆಯು ನಡೆಯುತ್ತಲೇ ಇರುತ್ತಿತ್ತು. ಭೋಜನ- ಶ್ಲೋಕಗಳು ಕಿವಿಗೆ ಬೀಳುತ್ತಲೇ ಇದ್ದವು. ಮಧ್ಯಾಹ್ನದ ಮೇಲೆ ಅಲ್ಲಲ್ಲಿ ಹರಿಕಥೆಗಳು, ಪುರಾಣಶ್ರವಣ - ಮುಂತಾದವುಗಳು ನಡೆಯುತ್ತಿದ್ದವು. ಸಂಜೆಯಾದ ಬಳಿಕ ದೇವರಿಗೆ ಉತ್ಸವವೂ ಮಂಗಳಾರತಿಯೂ ಆಗುವುದನ್ನು ನೋಡುವದೇ ಒಂದು ಮಹದಾನಂದವಾಗಿತ್ತು. ಶೃಂಗೇರಿಯಿಂದ ಜಗದ್ಗುರುಗಳವರು ಈ ಮಹಾ ಕಾರ್ಯಕ್ಕೆ ಪ್ರೋತ್ಸಾಹಕವಾಗಿ ತಮ್ಮದೊಂದು ಆನೆಯನ್ನು ಕಳುಹಿಸಿಕೊಟ್ಟಿದ್ದರು. ಅದೂ ಉತ್ಸವದಲ್ಲಿ ಭಾಗಿಯಾಗುತ್ತಿತ್ತು, ರಾತ್ರೆಯ ಊಟವಾದ ಮೇಲೆ ಜನರು

ಅಂಗಳದಲ್ಲಿಯೇ ಅಲ್ಲಲ್ಲಿ ಮಲಗುತ್ತಿದ್ದರು. ನಾನು ಉಗ್ರಾಣದ ಕೋಣೆಯಲ್ಲಿ ಮಲಗಿದ್ದವನು ಸರಿಹೊತ್ತಿನಲ್ಲಿ ಎಚ್ಚೆತ್ತು ಕದವನ್ನು ತೆಗೆದರೆ ಎಲ್ಲೆಲ್ಲಿಯೂ ರಾಮಭಜನೆಯೇ ಕೇಳಿಬಂದಂತೆ ಆಗುತ್ತಿತ್ತು. ಬೀರೂರೆಂಬುದು ಆಗ ನನ್ನ ಭಾಗಕ್ಕೆ ಅಯೋಧ್ಯಾ ನಗರವೇ ಎಂದೂ ಅಲ್ಲಿಗೆ ವಸಿಷ್ಠ ವಿಶ್ವಾಮಿತ್ರಾದಿ ಋಷಿಗಳು ಬಂದು ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿಸುತ್ತಿದ್ದಾರೆಂದೂ ತೋರುತ್ತಿತ್ತು. ರಾಮಣ್ಣನವರು ಯಾವುದೋ ದೇವಲೋಕದಿಂದ ಇಳಿದುಬಂದಿರುವ ಸಿದ್ಧ ಪುರುಷರೆಂದೇ ನನ್ನ ಭಾವನೆ.

ಉಗ್ರಾಣದ ಮನೆಯಲ್ಲಿ ನನಗೆ ಅಚ್ಚಿನ 'ಭಕ್ತಿ ವಿಜಯ'ದ ಪುಸ್ತಕವೊಂದು ದೊರಕಿತು. ಯಾರೋ ಶೆಟ್ಟರು ಅದರ ಕೆಲವು ಪ್ರತಿಗಳನ್ನು ಜನರಲ್ಲಿ ಹಂಚುವದ-ಕ್ಕೆಂದು ಧರ್ಮಾರ್ಥವಾಗಿ ಕಳುಹಿಸಿಕೊಟ್ಟಿದ್ದರು. ಅಂತೂ ರಾಮಣ್ಣನವರ ಸಂಬಂಧದಿಂದ ನನಗೆ ಭಕ್ತಿಮಾರ್ಗದ ಒಂದು ಝಳುಕು ಮನಸ್ಸಿನಲ್ಲಿ ಮಿಂಚಿತೆಂದು ಹೇಳಬಹುದು. ರಾಮಾಯಣ, ರಾಮಭಜನೆ ಇವುಗಳಲ್ಲಿ ಯಾವುದೋ ಮಹತ್ತ್ವ-ವಿದೆ - ಎಂಬ ಭಾವವು ಮನಸ್ಸಿನಲ್ಲಿ ಮೂಡಿತು. ಭಜನಮಂದಿರಗಳಲ್ಲಿ ಹೇಳುತ್ತಿದ್ದ ಭಜನೆಗಳು ಆಗ್ಗೆ ಕಡೂರು, ಬೀರೂರು, ತರೀಕೆರೆ, ಶಿವಮೊಗ್ಗ, ಅರಸೀಕೆರೆ - ಈ ಸುತ್ತಮುತ್ತಲಿನ ಪ್ರಾಂತಗಳಲ್ಲೆಲ್ಲ ಹರಡಿಕೊಂಡು ಜನಾನುರಾಗಕ್ಕೆ ಪಾತ್ರವಾಗಿದ್ದವು. 'ದಶರಥನಂದನ ಮೇಘಶ್ಯಾಮ, ಕೌಸಲ್ಯಾಸುತ ರಾಜಾರಾಮ'. 'ರವಿವರಕುಲಜಾತಂ ವನ್ದೇ ಸುರಭೂಸುರ ಗೀತಮ್', 'ಭಜ ಸೀತಾರಾಮ್ ಮಾನಸ ಭಜ ರಾಜಾರಾಮಮ್', 'ಮಾಂ ಪಾಹ್ಯತಿದೀನಂ ರಾಘವ ತ್ವತ್ಪದಾಂಬುಜಸಲೀನಮ್' - ಇವೇ ಮುಂತಾದವುಗಳನ್ನು ಭಜನೆಗೆ ಉಪಯೋಗಿಸದೆ ಇದ್ದವರೇ ಆ ಭಾಗಗಳಲ್ಲಿರಲಿಲ್ಲವೆನ್ನಬಹುದು. ನನ್ನ ಮನಸ್ಸಿನ ಮೇಲೂ ಅವುಗಳ ಪರಿಣಾಮವಾಗದೆ ಇರಲಿಲ್ಲ. ಆದರೆ ಕಾರಣಾಂತರದಿಂದ ಇವುಗಳು ನನ್ನ ಮನಸ್ಸಿನಲ್ಲಿ ಕೆಲವು ವರ್ಷಗಳ ಕಾಲ ಅಜ್ಞಾತವಾಸಮಾಡಿಕೊಂಡು ಮುಂದೆ ಮತ್ತೊಂದುಸಲ ಹೇಗೆ ಎದ್ದು ಕೊಂಡವು, ರಾಮಭಕ್ತಿಯು ಮತ್ತೆ ಹೇಗೆ ಮತ್ತೊಬ್ಬ ಮಹರ್ಷಿಯ ಅನುಗ್ರಹದಿಂದ ನನ್ನಲ್ಲಿ ಹೊರತೋರಿಕೊಂಡಿತು ಎಂಬುದನ್ನು ಮುಂದೆ ಇನ್ನೊಂದು ಸಲ ಪ್ರಸ್ತಾಪಿಸಲಿರುವೆನು. ರಾಮಣ್ಣನವರು ನಮ್ಮ ಮಲ್ಲಣ್ಣ ಭಾವನವರ ತಮ್ಮ ಎಂಬುದು ನನಗೆ ಬೀರೂರಿನಲ್ಲಿಯೇ ತಿಳಿಯಿತಾದರೂ ನಾನು ಆ ನೆಂಟತನಕ್ಕೇನೂ ಬಹಳ ಬೆಲೆಯನ್ನು ಕಟ್ಟಲಿಲ್ಲ. ಅವರ ಉಪಾಸನಾಶಕ್ತಿ, ಅವರಲ್ಲಿ ಕಾಣಬರುತ್ತಿದ್ದ ಸಿದ್ಧಿಗಳು, ಜನರು ಅವರಲ್ಲಿಟ್ಟಿದ್ದ ಪೂಜ್ಯಬುದ್ಧಿ - ಇವುಗಳೇ ನನಗೆ ಮುಖ್ಯವಾಗಿದ್ದವು, ಆದ್ದರಿಂದ ನನಗೆ ದೊಡ್ಡ ಪ್ರಯೋಜನವೂ ಆಯಿತು - ಎಂಬುದರಲ್ಲಿ ಸಂಶಯವಿಲ್ಲ.

## ಮೇಷ್ಟರಾಗುವ ಕುತೂಹಲ :

ಯಳ್ಳಂಬಳಸೆಯಲ್ಲಿದ್ದಾಗ ನನಗೆ ಮುಂದಿನ ಜೀವನಕ್ರಮವು ಉಪಾಧ್ಯಾಯ ವೃತ್ತಿಯಿಂದ ಆಗಬೇಕೆಂಬುದು ದೈವೇಚ್ಛೆಯಿಂದ ನನಗೆ ಮನಸ್ಸಿನಲ್ಲಿ ನನಗೂ ಅರಿವಿಲ್ಲದಂತೆಯೇ ಅಂಕುರಿಸಿತು. ಆ ಊರಲ್ಲಿದ್ದ ಪುರಾಣಿಕ ಸುಬ್ಬಾಭಟ್ಟರ ವಿಷಯವನ್ನು ಹಿಂದೊಮ್ಮೆ ಪ್ರಸ್ತಾಪಿಸಿರುತ್ತೇನಷ್ಟೆ. ಅವರ ಮಗ ಪುರಾಣಿ (ಪುರಾಣಿಕ ನರಸಿಂಹಭಟ್ಟ ಎಂದು ಅವನ ಪೂರ್ಣವಾದ ಹೆಸರಿರಬಹುದು) ನನ್ನಲ್ಲಿಗೆ ಬಂದು ತನಗೆ ಅಮರಕೋಶವನ್ನು ಹೇಳಿಕೊಡಬೇಕೆಂದು ಕೇಳಿಕೊಂಡ. ನಾನು ವಿದ್ಯಾರ್ಥಿಯಾಗಿದ್ದರಿಂದ ಅವನು ಆಗ್ಗೆ ನನ್ನನ್ನು ಸಲುಗೆಯಿಂದ ಏಕವಚನದಿಂದಲೇ ಸಂಬೋಧಿಸುತ್ತಿದ್ದನಾದರೂ ಸಂಸ್ಕೃತ ತಿಳಿದವನೆಂಬದರ ಮೇಲೆ ನನ್ನಲ್ಲಿ ಅವನಿಗೆ ಗೌರವವೂ ಇತ್ತು. ಸವ್ಯಾಖ್ಯಾನವಾದ ಅಮರ ಕೋಶವನ್ನು ಅವನು ತರಿಸಿದ್ದನು. ನನಗೆ ಓದುವ ಅಭ್ಯಾಸವಿದ್ದದ್ದರಿಂದ ನಾನು ಅಮರವನ್ನು ಓದಿ ವ್ಯಾಖ್ಯಾನದ ಅಭಿಪ್ರಾಯವನ್ನು ಅವನಿಗೆ ಹೇಳಿಕೊಡುವದು, ಸಮಾಸಗಳಿಗೆ ವಿಗ್ರಹವಾಕ್ಯವನ್ನು ತಿಳಿಸಿಕೊಡುವದು, ಆಯಾ ಶಬ್ದಗಳಿಂದ ಸೂಚಿತವಾದ ಪುರಾಣದ ಕಥೆಗಳನ್ನು ಅವನಿಗೆ ಹೇಳುವದು - ಹೀಗೆ ಅವನಿಗೆ ಸಂಬಳವಿಲ್ಲದ ಸಂಸ್ಕೃತ ಉಪಾಧ್ಯಾಯನಾಗಿದ್ದೆನು. ನಮ್ಮ ತಂದೆಯವರಿಗೆ ನನಗೆ ಸಂಸ್ಕೃತವು ಬರುತ್ತದೆ ಎಂಬುದನ್ನು ಕಂಡು ಬಹಳ ಸಂತೋಷವಾಗಿತ್ತು. ನಾನು ಈ ಕಾಲದಲ್ಲಿ ಕಿರಾತಾರ್ಜುನೀಯದ ಕೆಲವು ಹೊಸ ಸಂಸ್ಕೃತ ಪದ್ಯಗಳನ್ನು ಪ್ರಯೋಗಿಸಿಕೊಂಡು ಪದಗಳನ್ನು ರಚನೆಮಾಡಿದ್ದೂ ಉಂಟು. ಒಂದು ಸ್ತೋತ್ರ ಪಾಠದ ಪದದಲ್ಲಿ 'ಈಶ್ವರ ಜಯಜಯ ನಶ್ವರ ಜಯಜಯ' ಎಂದು ಬರೆದು ಗಟ್ಟಿಯಾಗಿ ಓದುತ್ತಿದ್ದದ್ದನ್ನು ಕಂಡು ತಂದೆಯವರು 'ಛೇ' ಈಶ್ವರನು ನಶ್ವರನೆ ? ಹೀಗೆಲ್ಲ ಕಂಡಾಬಟ್ಟೆ (ಸಿಕ್ಕಾಪಟ್ಟೆ)ಯಾಗಿ ಪದಗಳನ್ನು ಅರ್ಥವನ್ನರಿಯದೆ ಪ್ರಯೋಗಿಸಿದರೆ ಅದರಿಂದ ಅಶ್ರೇಯಸ್ಸಾದೀತು. ನಶ್ವರ ಎಂಬುದನ್ನು ತೆಗೆದು 'ಭಾಸ್ಕರ' ಎಂದು ಬೇಕಾದರೆ ಬದಲಾಯಿಸಿಕೊ ; 'ಇನ್ನು ಮುಂದೆ ನೀನು ಪದಗಳನ್ನು ಮಾಡುವ ಗೋಜಿಗೆ ಹೋಗಬೇಡ' ಎಂದು ಎಚ್ಚರಿಸಿದ್ದರು.

ಇದೇ ಕಾಲಕ್ಕೆ ಊರಿನಲ್ಲಿದ್ದ ನನ್ನ ಬಾಲ್ಯಸ್ನೇಹಿತರೊಬ್ಬರಲ್ಲಿಗೆ ಆಗಾಗ್ಗೆ ಹೋಗಿಬರುವುದಕ್ಕೆ ಪ್ರಾರಂಭಿಸಿದ್ದೆ. ಅದರಿಂದ ನನಗೆ ಸ್ಕೂಲಿನಲ್ಲಿದ್ದ ಕೆಲವು ಬೋಧನಾ ಪದ್ಧತಿಯ ಗ್ರಂಥಗಳು, ವಿದ್ಯಾಭ್ಯಾಸದ ಇಲಾಖೆಯ ಟ್ರಾನ್ಸ್‌ಲೇಟ-ರೊಬ್ಬರು ಬರೆದಿದ್ದ ಗ್ರಂಥವೊಂದು, ಧಾರವಾಡದ ಕಡೆಯವರು ಪ್ರಕಟಿಸಿದ್ದ ಫೌಲರ್ ಎಂಬವರ ಪುಸ್ತಕವೊಂದು ನನ್ನ ಕಣ್ಣಿಗೆ ಬಿದ್ದವು. ಉಪಾಧ್ಯಾಯ-

ನಾಗುವುದಕ್ಕೆ ಕೌಶಲವು ಬೇಕು ಎಂಬ ಭಾವನೆಯು ನನಗೆ ಅವುಗಳಿಂದ ಉಂಟಾಯಿತು. ಸ್ನೇಹಿತರಾಗಿದ್ದ ಉಪಾಧ್ಯಾಯರು ಬಹಳ ಸೌಮ್ಯವಾದ ಗಂಭೀರಮುಖಮುದ್ರೆಯವರು ; ಸ್ಕೂಲನ್ನು ಬಹಳ ಬಿಗಿಯಿಂದ ಆಳುತ್ತಾ ತಮಗೆ ತಿಳಿದಷ್ಟನ್ನು ಕ್ರಮವರಿತು ಬೋಧಿಸುತ್ತಿದ್ದರು. ಬಹಳ ಗದ್ದಲದಿಂದ ಪುರಾಣಿಗೆ ಅಮರಕೋಶವನ್ನು ಹೇಳಿಕೊಡುತ್ತಿದ್ದ ನನ್ನ ಮೇಲೆ ಅವರ ಆದರ್ಶದಿಂದ ಹೆಚ್ಚಿನ ಪರಿಣಾಮವಾಯಿತು. ಆಗಿನ ಕಾಲಕ್ಕೆ ಸರ್ಕಾರದ ರಜವನ್ನು ಸಕಾಲಕ್ಕೆ ಪಡೆಯುವದು ಹಳ್ಳಿಯ ಮೇಷ್ಟರಿಗೆ ಬಹಳ ಕಷ್ಟವಾಗುತ್ತಿತ್ತು. ಈ ಮೇಷ್ಟರು ತಮ್ಮ ಮಗಳ ವರಾನ್ವೇಷಣೆ ಮಾಡುವದಕ್ಕೊ, ಮತ್ತೇತಕ್ಕೋ ಸ್ಥಳಾಂತರಕ್ಕೊ ಹೋಗಿ ಬರಬೇಕಾದದ್ದರಿಂದ, ತಮ್ಮ ಗೈರುಹಾಜರಿಯಲ್ಲಿ ಸ್ಕೂಲಿನ ಕೆಲಸವನ್ನು ಮಾಡುತ್ತಿದ್ದರೆ ಆ ಬಗ್ಗೆ ಏನಾದರೂ ಧನಸಹಾಯ ಮಾಡುವದಾಗಿ ಹೇಳಿದರು. ಸರಕಾರಿಯ ರಜವಿಲ್ಲದೆ ಸ್ಥಳಾಂತರಕ್ಕೆ ಹೋಗುವದು ತಪ್ಪೆಂಬುದು ನನಗೆ ಸ್ವಲ್ಪಮಟ್ಟಿಗೆ ತಿಳಿದಿತ್ತಾದರೂ ಸ್ಕೂಲಿನ ಕೆಲಸಕ್ಕೆ ತೊಂದರೆಯಿಲ್ಲದಂತೆ ಏರ್ಪಾಡುಮಾಡಿ ಹೋದ ಅವರ ಪ್ರಾಮಾಣಿಕತೆಯನ್ನು ನಾನು ಮೆಚ್ಚಿದೆನು. ಅವರಿಲ್ಲದಾಗ ನಾನು ಪ್ರೈಮರಿ ತರಗತಿಯ ಪಾಠ ಹೇಳುವದನ್ನು ಅಭ್ಯಾಸ ಮಾಡಿಕೊಂಡೆನು. ಮೇಷ್ಟರು ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲಿ ಫೇಲಾಗಿದ್ದರೂ ಪ್ರೈವೇಟಾಗಿ ಕೆಲಹುಡುಗರನ್ನು ಆ ಪರೀಕ್ಷೆಗೆ ಕಳುಹಿಸಿ ಪ್ಯಾಸ್ ಮಾಡಿಸಿದ್ದರು ; ನನಗೂ ಆ ತರಗತಿಯವರಿಗೆ ಪಾಠವನ್ನು ಹೇಳುವದಕ್ಕೊಂದು ಅವಕಾಶವು ದೊರೆತಂತೆ ಆಯಿತು. ಈ ಸಂದರ್ಭದಲ್ಲಿ ನನಗೆ ಮೇಷ್ಟರು ಕೊಡುತ್ತೇನೆಂದು ಮಾಡಿದ್ದ ವಾಗ್ದಾನಕ್ಕಾಗಿ 'ಪಂಚೀಕರಣ', 'ವೇದಾಂತಸಾರ' - ಎಂಬ ಎರಡು ಗ್ರಂಥಗಳನ್ನು - ಅವುಗಳೊಳಗೆ ಏನಿದೆ ಎಂಬ ಅರಿವಿಲ್ಲದೆಯೇ - ತರಿಸಿಕೊಂಡೆನು. ಇವುಗಳೊಳಗೆ ವೇದಾಂತಸಾರವು ನನಗೆ ಮುಂದೆ ಬಹಳ ಪ್ರಯೋಜನಕಾರಿ ಯಾಯಿತು. ಅದು ಹಾಗಿರಲಿ, ಯಳ್ಳಂಬಳಸೆಯ ಅಜ್ಞಾತವಾಸದಲ್ಲಿ ನನಗೆ ಉಪಾಧ್ಯಾಯವೃತ್ತಿಯ ಸ್ವಯಂ ಸೇವಕತ್ವವು ದೊರೆತದ್ದು ಒಂದು ದೈವಿಕ ಘಟನೆಯಾದರೂ ಮುಂದಕ್ಕೆ ನಾನು ಉಪಾಧ್ಯಾಯ ಪಾತ್ರವನ್ನು ವಹಿಸಿ ಜೀವನ ವ್ಯವಹಾರದ ನಾಟಕದಲ್ಲಿ ಅಭಿನಯಿಸುವುದಕ್ಕೆ ಪೂರ್ವರಂಗ-ವಾಯಿತೆನ್ನುವುದಕ್ಕೆ ಅಡ್ಡಿಯಿಲ್ಲ.

## ಸರಕಾರಿಯ ಉದ್ಯೋಗಕ್ಕೆ ಉಮೇದುವಾರ :

ಚಿಕ್ಕಮಗಳೂರಿಗೆ ಹೋಗಿ ಅಲ್ಲಿ ಭಾವನವರೂ ಅಣ್ಣನವರೂ ಹೇಳಿದಂತೆ ಸರಕಾರಿಯ ಕೆಲಸವನ್ನು ಮಾಡುವ ವಿಧಾನವನ್ನು ಕಲಿತುಕೊಳ್ಳುವುದರಲ್ಲಿ ಕಾಲವನ್ನು ಕಳೆದೆನು ಎಂಬುದು ನಿಶ್ಚಯ, ತಾಲ್ಲೂಕು ಕಛೇರಿಯಲ್ಲಿ ಒಂದೊ ಎರಡೊ ತಿಂಗಳು

ಡೆಪ್ಯುಟಿಮುನಷಿಯ ಬದಲಿಯ ಕೆಲಸವನ್ನು ಮಾಡಿದಂತೆ ನೆನಪಿದೆ. ಆದರೆ ಅಲ್ಲಿ ನನಗೆ ಜವಾಬುದಾರಿಯ ಕೆಲಸವು ಏನೂ ಇರಲಿಲ್ಲ. ಮುಖ್ಯವಾಗಿ ಇಂದ, ಗೆ, ರಿಜಿಸ್ಟರು ಬರೆಯುವುದು ; ಇಂದ, ಗೆಗಳಿಗೆ ಪರಸ್ಪರ ಪರಾಮರ್ಶಕ **(Cross Reference)** ಸಂಖ್ಯೆಗಳನ್ನು ಹಾಕುವುದು, ಬಂದ ಟಪ್ಪಾಲುಗಳಿಗೆ ಜನರಲ್ ನಂಬರು ಹಾಕುವದು, ಟಪ್ಪಾಲುಗಳನ್ನು ಬೇರೆ ಬೇರೆಯವರಿಗೆ ಹಂಚುವದು, ಕೊತವಾಲರಿಗೆ ನೋಟಿಸು, ಒಂದೆರಡು ಇಂಗ್ಲೀಷು ಲೆಟರುಗಳು ಬರೆಯುವದು - ಇವೇ ಸಾಮಾನ್ಯವಾಗಿ ನನ್ನ ಕೆಲಸ. ಕೊನೆಗೆ ಕಡೂರಿನಲ್ಲಿ ಒಂದು ಓವರ್‌ಸಿಯರ್ ಕೆಲಸವು ಖಾಲಿಯಿದೆ ಎಂಬುದು ತಿಳಿದು ಬಂದು (ನಮ್ಮ ಭಾವನವರ ಸೂಚನೆಯಿಂದ ಇರಬಹುದು) ಅದಕ್ಕೊಂದು ಅಪ್ಲಿಕೇಷನ್ ಹಾಕಿಕೊಂಡೆ. ಓವರ್ಸಿಯರ್ ಕೆಲಸವೆಂದರೇನೆಂಬುದು ನನಗೆ ಏನೇನೂ ತಿಳಿದಿರಲಿಲ್ಲ, ಅಷ್ಟೇಅಲ್ಲ, ಕೆಲಸದ ಆರ್ಡರಿಗೆ ಸಹಿಮಾಡಿದ ಡೆಪ್ಯುಟಿಕಮಿಷನರಿಗೂ ಅದು ಪೂರ್ಣವಾಗಿ ತಿಳಿದಿರಲಿಲ್ಲವೆಂದೇ ಹೇಳಬೇಕಾಗಿದೆ. ಏಕೆಂದರೆ ಅವರು ಅದೊಂದು ಬಗೆಯ ಎಂಜಿನಿಯರಿಂಗ್ ಡಿಪಾರ್ಟಮೆಂಟಿನ ಕೆಲಸವೆಂದು ತಿಳಿದುಕೊಂಡಿದ್ದರೊ ಏನೊ ; **"Do you know surveying and levelling ?"** ನಿನಗೆ ಸರ್ವೆಮಾಡುವದು ತಿಳಿಯುತ್ತದೆಯೆ ? ಎಂದು ಕೇಳಿದರು. ನಾನು ಉತ್ಸಾಹವನ್ನು ತೋರಿಸಬೇಕೆಂಬ ತವಕದಿಂದ **'I Shall learn it up, Sir !'** ಕಲಿತುಕೊಂಡು ಬರುತ್ತೇನೆ, ಸ್ವಾಮಿ ! ಎಂದುಬಿಟ್ಟೆ. ಅಂತು ನನಗೆ ದಪ್ಪನಾದ ಕನ್ನಡದ ಅಕ್ಷರದಲ್ಲಿ ಬರೆದ ಡೆಪ್ಯುಟಿಕಮಿಷನರ 'ನಿರೂಪ'ವೊಂದು ಲಭಿಸಿತು. ನಿಮ್ಮನ್ನು ಮಾಹೆಯಾನಾ 12 ರೂಪಾಯಿಗಳ ತಲುಬಿನ ಮೇಲೆ ಕಡೂರು ಓವರ್ಸಿಯರ್ ಕೆಲಸಕ್ಕೆ ಮೊಕರರ್ 'ಮಾಡಿದೆ' ಎಂದು ಅದರಲ್ಲಿ ಬರೆದಿತ್ತು. ಉಮೇದುವಾರ್ ಮೇಲೆ ಮೊಕರರ್ ಮುಂತಾದ ಶಬ್ದಗಳಿಗೆ ಆಗತಾನೆ ನನಗೆ ಅರ್ಥವು ಗೊತ್ತಿತ್ತು. ಇನ್ನು ಮುಂದೆ ನನಗೆ ಇಂಥ ಶಬ್ದಭಂಡಾರದ ಪರಿಚಯವು ಅತ್ಯವಶ್ಯವಾಗುವುದೆಂಬುದು ಈಗ ಮನದಟ್ಟಾಯಿತು.

---

# 14. ಕಡೂರು ಓವರ್ಸಿಯರ್ (1902)

ಚಿಕ್ಕಮಗಳೂರಿಂದ ಬಂದು ನಾನು ತಾಲ್ಲೂಕು ಅಮಲ್ದಾರರಲ್ಲಿ ಹಾಜರಿ ರಿಪೋರ್ಟುಕೊಟ್ಟೆನು, ವಿದ್ಯಾರ್ಥಿಯ ದೆಸೆಯಿಂದ, ತಲೆಗೆ ರುಮಾಲು ಹಾಕಿಕೊಳ್ಳುವ ನೌಕರನಾದದ್ದು ಚಿಕ್ಕಮಗಳೂರಿನಲ್ಲಿಯೇ ಅನುಭವಕ್ಕೆ ಬಂದಿತ್ತಾದರೂ, ಇನ್ನು ಮೇಲೆ ಖಾಯಮ್ಮಾಗಿ ಸರಕಾರಿಯ ನೌಕರಿಯಲ್ಲಿರಬೇಕು ಎಂಬ ರೀತಿಯ ಸಂಸ್ಕಾರವು ಮೊಟ್ಟಮೊದಲು ಆದದ್ದು ಕಡೂರಿನಲ್ಲಿಯೇ. ಅಮಲ್ದಾರ್ ಕೃಷ್ಣಶಾಸ್ತ್ರಿಗಳು ಬಹಳ ಸಾತ್ವಿಕರು, ಸಂಸ್ಕೃತವಿದ್ವಾಂಸರು, ಥಿಯಾಸೊಫಿಯಲ್ಲಿ ಅವರಿಗೆ ಭಕ್ತಿ ವಿಶ್ವಾಸಗಳು ಹೆಚ್ಚು. ಸ್ನಾನಸಂಧ್ಯಾದಿಗಳನ್ನು ಮಾಡುವದು, ಹಳೆಯ ವೈದಿಕ ಸಂಪ್ರದಾಯದಂತೆಯೇ ಪಂಚೆಗಚ್ಚೆ ಹಾಕಿ ಪಂಚೆಉಡುವದು, ಸರಳವಾದ ಪೋಷಾಕು ಹಾಕಿಕೊಳ್ಳುವದು ಇವುಗಳಿಂದೊಡಗೂಡಿದ್ದ ಅವರ ಸೌಮ್ಯವಾದ ಮುಖವನ್ನು ಕಂಡವರಿಗೆ ಅವರ ವಿಷಯಕ್ಕೆ ಯಾವ ಅಂಜಿಕೆಯೂ ಆಗುವಂತೆ ಇರಲಿಲ್ಲ. ನನ್ನನ್ನು ನೋಡಿ ಅವರು ಈ ವರೆಗೂ ವಿದ್ಯಾರ್ಥಿದೆಶೆಯಲ್ಲಿದ್ದಂತೆ ಅಲ್ಲ ; ಇನ್ನುಮೇಲೆ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡಬೇಕು. ರಿಕಾರ್ಡುಗಳನ್ನು ನೋಡಿ, ನಿನಗೆ ಯಾವ ವಿಷಯದಲ್ಲಾದರೂ ಸಂಶಯವುಂಟಾದರೆ ನನ್ನನ್ನು ಕೇಳಬೇಕು ಎಂದರು. ಆಗಿನ ಕಾಲಕ್ಕೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಮಾಡಿದವರು ತಾಲ್ಲೂಕು ಕಚೇರಿಗೆ ಅಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಂದಿರಲಿಲ್ಲ. ಅಮಲ್ದಾರರ ಎಣಿಕೆಯಲ್ಲಿ ಪ್ರತಿದಿನವೂ ನಾನು ಸ್ವಲ್ಪಕಾಲವಾದರೂ ಕಚೇರಿಯಲ್ಲಿದ್ದುಕೊಂಡು ಮುನಿಸಿಪಲ್ ಬಾಬ್ತಿಗೆ ಸೇರಿದ ಲೆಕ್ಕ ಪತ್ರಗಳು, ರಿಕಾರ್ಡುಗಳ ಫೈಸಲಾತಿ ಮುಂತಾದ ವಿಷಯಗಳ ಅನುಭವವನ್ನು ಮಾಡಿಕೊಳ್ಳಲಿ ಎಂದು ಇತ್ತೆಂದು ಕಾಣಿಸುತ್ತದೆ. ಆದರೆ ಕಚೇರಿಯಲ್ಲಿದ್ದ ಮುನಿಸಿಪಲ್ ಗುಮಾಸ್ತೆ ವ್ಯಾಪಾರದವನಲ್ಲವಾದ್ದರಿಂದ ನನ್ನ ವಿಷಯಕ್ಕೆ ಅವನಿಗೇನೂ ಅಷ್ಟು ಶುಭಾಶಯವಿರಲಿಲ್ಲ. ಅವನು ನನಗೆ ಯಾವ ಕಾಗದ ಪತ್ರಗಳನ್ನು ಅಥವಾ ರಿಜಿಸ್ಟರುಗಳನ್ನು ತೋರಿಸುವದಕ್ಕೆ ತವಕವುಳ್ಳವನಾಗಿರಲಿಲ್ಲ. ಕಚೇರಿಯಲ್ಲಿ ಕೆಲಸಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಅಮಲ್ದಾರರನ್ನು ಕೇಳಿಕೊಳ್ಳಲಿಲ್ಲ. ಹೀಗಾಗಿ ನನಗೆ ಓವರ್ಸಿಯರು ಕೆಲಸವೇ ಪ್ರಧಾನವಾಯಿತು.

### ಟೌನ್ ಓವರ್ಸಿಯರ್ :

ಓವರ್ಸಿಯರ್ ಕೆಲಸಕ್ಕೆ ಸರ್ವೆ, ಲೆವಲಿಂಗ್ ಬರಬೇಕೆಂಬ ಭಾವನೆಯು ಡೆಪ್ಯುಟಿ ಕಮಿಷನರ ಪ್ರಶ್ನೆಯಿಂದ ನನ್ನ ತಲೆಯಲ್ಲಿ ಎದ್ದು ಕೊಂಡಿದ್ದದ್ದು ಈಗ

ಹಾರಿಹೋಯಿತು, ಈಚೆಗೆ 'ಸ್ಯಾನಿಟರಿ ಇನ್‌ಸ್ಪೆಕ್ಟರ್' ಎಂಬ ಹೆಸರಿನ ಉದ್ಯೋಗದಲ್ಲಿ ಹೀನತರ ಸ್ಥಾನವೇ ಆ ಓವರ್ಸಿಯರ್ ಕೆಲಸವಾದರೂ, ನನಗೆ ನನ್ನ ಸ್ಥಾನದ ಸ್ವರೂಪದ ಅಥವಾ ನನ್ನ ಹೆಚ್ಚುಗಾರಿಕೆಯ ಅರಿವು ಆಗ ಇಲ್ಲವಾಗಿತ್ತು. ನನಗೆ ಸರಿಯಾಗಿ ತಿಳಿವಳಿಕೆ ಕೊಡುವವರೂ ಯಾರೂ ಇರಲಿಲ್ಲ. ಊರಿನ ಬೀದಿಗಳನ್ನು ಗುಡಿಸುವವರ ಮೇಲು ವಿಚಾರಣೆ ನೋಡುವುದು, ಚಿಮಣಿಎಣ್ಣೆ ಮುಂತಾದ ಕೆಲವು ಪದಾರ್ಥಗಳ ಮೇಲೆ ಸುಂಕವನ್ನು ವಸೂಲು ಮಾಡುವದು, ಕಂದಾಯವಸೂಲಿಗೆ ಸಹಾಯ ಮಾಡುವದು ಇಂಥ ಸಂಕೀರ್ಣವಾದ ಕೆಲಸಗಳು ನನ್ನ ಪಾಲಿಗೆ ಬಂದಿದ್ದವು. ನಾನು ದಿನ ದಿನವೂ ಏನು ಮಾಡಬೇಕೆಂಬದರ ಅರಿವು ಒಂದಿಷ್ಟು ನನಗೆ ಇರಲೇ ಇಲ್ಲ ; ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟಂತೆ ಆಗಿತ್ತು, ನನ್ನ ಪಾಡು !

## ಪ್ಲೇಗುಡ್ಯೂಟಿ :

ತಾಯಿಯವರು ಕಡೂರಿಗೆ ಬಂದು ಬಾಡಿಗೆಗೆ ಒಂದು ಮನೆಗೊತ್ತು ಮಾಡಿಕೊಟ್ಟು ಸಂಸಾರವನ್ನು ಹೂಡಿಸಿ ಒಂದು ತಿಂಗಳಿನ ಬಳಿಕ ಹೊರಟು ಹೋದರು, ಈಗ ನಾನು, ನನ್ನ ಹೆಂಡತಿ ಇಬ್ಬರೇ ಮನೆಯಲ್ಲಿ. ಇಷ್ಟರಲ್ಲಿ ಊರಿನಲ್ಲಿ ಪ್ಲೇಗ್ ಆವರಿಸಿಕೊಂಡಿತು. ನನಗೆ ನಿತ್ಯಗಟ್ಟಲೆಯ ಕೆಲಸದ ಜೊತೆಗೆ ಪ್ಲೇಗ್ ಡ್ಯೂಟಿಯೂ ಬಂದೊದಗಿತು, ಪ್ರತಿದಿನವೂ ಪ್ಲೇಗು ಬಂದು ನರಳುತ್ತಿರುವವರ ವಿಚಾರವನ್ನು ಡಾಕ್ಟರಿಗೆ ರಿಪೋರ್ಟು ಮಾಡಬೇಕಾಗಿತ್ತು, ಆದರೆ ಯಾರಿಗೆ ಪ್ಲೇಗ್ ಬಂದಿದೆ ಎಂಬುದನ್ನು ಹೇಗೆ ಕಂಡುಹಿಡಿಯುವುದು ? ಗೆಡ್ಡೆ ಎದ್ದವರಂತೂ ಪ್ಲೇಗ್ ಬಂದವರೇ ಸರಿ; ಆದರೆ ಅದು ಏಳುವದಕ್ಕೆ ಮುಂಚಿತವಾಗಿಯೇ ಡಾಕ್ಟರಿಗೆ ಸೂಚನೆ ಕೊಡುವದೂ ನನ್ನ ಪಾಲಿಗೆ ಸೇರಿತ್ತು, ಯಾರಿಗಾದರೂ ಎರಡು ಮೂರು ದಿನಗಳು ಜ್ವರ ಬಂದು ಕಣ್ಣು ಕೆಂಪಗಾಗುವದೇ ಮುಂತಾದ ಚಿಹ್ನೆಗಳು ಕಂಡುಬಂದರೆ ಸಂಶಯದಿಂದ ಅವರ ಹೆಸರನ್ನು ಡಾಕ್ಟರಿಗೆ ತಿಳಿಸುತ್ತಿದ್ದೆನು, ಜನರಿಗೆ ನನ್ನನ್ನು ಕಂಡರೆ ಆಗದಂತೆ ಆಯಿತು. 'ಆಗಲೆ ಅವರಿಗೆ ಪ್ಲೇಗ್ ಬರಿಸಿಬಿಟ್ಟಿರೊ ?' ಎಂದು ನನ್ನನ್ನು ಹಾಸ್ಯ ಮಾಡಿಕೊಳ್ಳುತ್ತಿದ್ದರು. ಊರೆಲ್ಲೆಲ್ಲ ತಿರುಗಾಡಬೇಕು ; ಚೊಕ್ಕಟವಾಗಿಲ್ಲದ ಭಾಗಗಳನ್ನು ಎಚ್ಚರಿಕೆಯಿಂದ ನೋಡಬೇಕು, ಪ್ಲೇಗ್ ಸೋಂಕಿನ ಸಂಶಯಕಂಡ ಭಾಗದ ಜನರನ್ನು ಮನೆಬಿಟ್ಟು ಊರಹೊರಗೆ ಪ್ಲೇಗ್‌ಷೆಡ್ಡುಗಳನ್ನು (ಗುಡಿಸಲು-ಗಳನ್ನು) ಹಾಕಿಕೊಂಡು ಪರಸ್ಥಾನವಾಸ ಮಾಡುವಂತೆ ಪ್ರೋತ್ಸಾಹಿಸಬೇಕು ಎಂದು ನನಗೆ ಅಪ್ಪಣೆಮಾಡಿದ್ದರು. ಆದರೆ ಜನರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳ ಬೇಕಲ್ಲ ! ಆವೂರ ಕುರುಬರ ಕೇರಿಯಲ್ಲಿ ಪ್ಲೇಗ್ ಬಂದರೂ ಜನರು ದೇವರ ಅಪ್ಪಣೆಯಿಲ್ಲದೆ ಮನೆಬಿಟ್ಟು ಹೊರಡುವುದಕ್ಕೆ ಒಪ್ಪುತ್ತಿರಲಿಲ್ಲ, ಪೂಜಾರಿ ಮೇಲೆ

ಗಣಬಂದು ; ಹೆದರಬೇಡಿ, ನನ್ನ ಹೊಟ್ಟೆಯಲ್ಲಿ ಹಾಕಿಕೊಳ್ಳುತ್ತೇನೆ ಎಂದು ದೇವರು ಹೇಳಿತ್ತಂತೆ. ನಾನು ಎಷ್ಟುವಿಧವಾಗಿ ಬೆದರಿಸಿದರೂ ಆ ಜನರು ನನ್ನ ಮಾತಿಗೆ ಸೊಪ್ಪು ಹಾಕದೆ ಇದ್ದರೂ ಕೊನೆಗೆ ಒಂದೆರಡು ಪ್ಲೇಗ್ ಗ್ರಂಥಿಗಳ ಘಟನೆಗಳು ಅಲ್ಲಿ ಆದವು. ಮತ್ತೆ ಅವರು ದೇವರ ಅಪ್ಪಣೆಯನ್ನು ಕೇಳಲು 'ಕೈ ಬಿಟ್ಟೆ ಮಕ್ಕಳಿರ !' ಎಂದಿತಂತೆ. ಸರಿ, ಅವರೆಲ್ಲ ಊರು ಬಿಡುವುದಕ್ಕೆ ಒಪ್ಪಿದರು, ಡಾಕ್ಟರು ಅದು ನನ್ನ ಪ್ರೋತ್ಸಾಹದ ಫಲವೇ ಎಂದು ಭಾವಿಸಿ ಬಹಳ ಸಂತೋಷಪಟ್ಟರು.

ಕೆಲಸ ಮಾಡುವದು ಸ್ವಲ್ಪವೂ ನನ್ನ ಮನಸ್ಸಿಗೆ ಒಗ್ಗಲಿಲ್ಲ, ನನಗೆ ಯಾವ ಕೆಲಸವನ್ನು ಮಾಡಬೇಕು ಯಾವದನ್ನು ಮಾಡಬಾರದು ಎಂಬುದು ತಿಳಿಯುತ್ತಲಿರಲಿಲ್ಲ, ನನಗೊಬ್ಬ ಜವಾನನನ್ನು ಸಹಾಯಕ್ಕೆ ಕೊಟ್ಟಿದ್ದರು. ಅವನೇ ನಿಜವಾಗಿ ಯಜಮಾನನೆನ್ನಬಹುದು, ಅವನು 'ಇಲ್ಲಿ ಕೆಲಸ ಮಾಡಬೇಕಾದದ್ದಿಲ್ಲ ಬುದ್ಧಿ ಅಲ್ಲಿ ಮಾಡಿಸೋಣ !' ಎಂದರೆ ಹಾಗೇ ಆಗಲಿ ! ಎಂದು ಬಿಡುತ್ತಿದ್ದೆನು, ರಿಜಿಸ್ಟರಿನಲ್ಲಿ ಆಳುಗಳ ಹಾಜರಿಯನ್ನು ನಾನು ಹಾಕುತ್ತಲೇ ಇರಲಿಲ್ಲ ; ಇವನು ಬಂದಿದಾನೆ, ಇವನು ಬಂದಿಲ್ಲ ಎಂಬುದನ್ನು ಕರಿಯ ಹೇಳಬೇಕು, ನಾನು ಬರೆದುಕೊಳ್ಳಬೇಕು, ಎಷ್ಟೋಜನ ಆಳುಗಳ ಹೆಸರು ಕೂಡ ನನಗೆ ತಿಳಿಯದೆ ಒಬ್ಬರ ಹೆಸರಿನಿಂದ ಇನ್ನೊಬ್ಬನನ್ನು ಕರೆದಾಗ ಅವರು ನಗುತ್ತಿದ್ದರು, ಜವಾನನ ಹೇಳಿಕೆಯ ಮೇರೆಗೆ ಹಾಜರಿಲ್ಲದವರಿಗೆ ಆಬ್ಸೆಂಟ್(ಗೈರುಹಾಜರು)ಗುರ್ತುಮಾಡಿ ಒಂದು ತಿಂಗಳು ಅಷ್ಟು ದಿನದ ಸಂಬಳ ಕಡಿಮೆಮಾಡಿ ಬಿಲ್ ಮಾಡಿಬಿಟ್ಟೆ. ಆಳುಗಳೆಲ್ಲರೂ ಕೂಗಾಡುತ್ತಾ ಕಚೇರಿಯ ಮುಂದೆ ಕೂತುಕೊಂಡುಬಿಟ್ಟರು. ಶಿರಸ್ತೆದಾರರು ಗದ್ದಲವೇನೆಂದು ವಿಚಾರಿಸಲಾಗಿ ವಿಷಯವೆಲ್ಲವೂ ಗೊತ್ತಾಯಿತು ಅವರು ನನಗೆ ಚೆನ್ನಾಗಿ ಛೀ ಪೆಟ್ಟು ಹಾಕಿ ಬಡವರನ್ನು ಹೀಗೆ ನಡೆಯಿಸಿ ಕೊಳ್ಳಬಾರದು, ಅವರಿಂದ ಚೆನ್ನಾಗಿ ಕೆಲಸ ತೆಗೆದುಕೊಳ್ಳಬೇಕು, ಒಂದೊಂದು ದಿನ ಬಾರದಿದ್ದರೇನೂ ಚಿಂತೆಯಿಲ್ಲ, ಸಂಬಳವನ್ನು ಮಾತ್ರ ನಿಲ್ಲಿಸಿಕೊಳ್ಳಬಾರದು ಎಂದು ಬುದ್ಧಿ ಹೇಳಿದರು.

ಪ್ಲೇಗಿನ ಡ್ಯೂಟಿ ಮಾಡುತ್ತಿರುವಂತೆಯೇ ನನಗೆ ಎಡಗಾಲಿನಲ್ಲಿ ಹಿಮ್ಮಡಿಚೆಂಡು ಎಂಬ ಹುಣ್ಣು ಎದ್ದುಕೊಂಡಿತು. ಅದು ಕಲ್ಲೊತ್ತು ಇರಬಹುದು ಎಂದು ಮೊದಲು ಭಾವಿಸಿದ್ದೆನು; ಆದರೆ ಅದು ಬರುಬರುತ್ತ ಬಲವಾಗುತ್ತಾ ಬಂದಿತು, ಅದಕ್ಕೆ ಆಬಿಳಿ ಬೇರನ್ನು ತುಪ್ಪದಲ್ಲಿ ಕರಿದು ಶಾಖಕೊಡಬೇಕೆಂದು ಯಾರೋ ಹೇಳಿದರು, ಅದರಂತೆ ಮಾಡಲಾಗಿ ಸಣ್ಣ ತೆಂಗಿನಕಾಯಿಯ ಗಾತ್ರಕ್ಕೆ ಅದು ಊದಿಕೊಂಡಿತು. ಹರಿವೆ ಸೊಪ್ಪನ್ನು ಅದಕ್ಕೆ ಒಂದು ರಾತ್ರಿ ಕಟ್ಟಿಬಿಟ್ಟೆವು. ಬೆಳಗ್ಗೆ ಅದು ಒಡೆದುಕೊಂಡಿತು. ಡಾಕ್ಟರಲ್ಲಿಗೆ ಹೋಗುತ್ತಲೂ ಅದನ್ನು ಕೊಯ್ದು ಆಪರೇಷನ್

ಮಾಡಿದರು. ಅದು ಮತ್ತೆ ಮತ್ತೆ ಬೇರೆಬೇರೆಯ ಭಾಗದಲ್ಲಿ ಕೆದರಿಕೊಂಡು ಏಳುತ್ತಿತ್ತು, ಡಾಕ್ಟರು ಆಪರೇಷನ್ ಮಾಡಿ ಬೇಸತ್ತರು ಅದಕ್ಕೆ ಒಳಗೆ ಗಂಧಕ ಮುಂತಾದ ಯಾವುದೋ ಪುಡಿಗಳನ್ನು ಹಾಕಿ ಕಟ್ಟುತ್ತಿದ್ದರು, ಆದರೂ ಅದು ಬಲವಾಗುತ್ತಲೇ ಇತ್ತು, ಬೆಂಗಳೂರಿಗೆ ಹೋಗಿ ದೊಡ್ಡ ಆಸ್ಪತ್ರೆಯಲ್ಲಿ ಇದಕ್ಕೆ ಶಸ್ತ್ರ ಚಿಕಿತ್ಸೆ ಮಾಡುವದು ಉತ್ತಮವೆಂದು ಡಾಕ್ಟರು ಅಭಿಪ್ರಾಯಪಟ್ಟರು. ಮೊದ ಮೊದಲು ಜನರು ಓವರ್ಸಿಗೆ ಪ್ಲೇಗು ಆಗಿದೆ ಎಂದರು ; ಆ ಬಳಿಕ ಓಡಾಡುತ್ತಾ ಇರುವದನ್ನು ಕಂಡು 'ಕುಂಟು ಓವರ್ಸಿ' ಎಂದು ಅಡ್ಡ ಹೆಸರಿತ್ತರು. ಈ ಸಂದರ್ಭದಲ್ಲಿ ನನಗೆ ಎಂಟು ಹತ್ತು ದಿನಗಳು ಹಾಸಿಗೆಯಿಂದ ಏಳುವದಕ್ಕೇ ಆಗಲಿಲ್ಲವಾದ್ದರಿಂದ ನಾನು ರಜಕ್ಕೆ ರಿಪೋರ್ಟು ಕೂಡ ಮಾಡಿಕೊಳ್ಳಲಿಲ್ಲ. ವಿಷಮ ಕಾಲವೆಂದು ಭಾವಿಸಿದ ದಯಾರ್ದ್ರಹೃದಯರಾದ ಅಮಲ್ದಾರರು ಯಾವುದೋ ರಜವನ್ನು ಮಂಜೂರು ಮಾಡಿ ನನಗೆ ಸಂಬಳವನ್ನು ಕೊಡಿಸಿಕೊಟ್ಟರು.

ಅಂತೂ ನನಗೆ ಕೆಲಸಮಾಡಿ ಬೇಜಾರಾಯಿತು. ಓದಬೇಕೆಂಬ ಆಶೆಯು ಹಿಂಗಿರಲಿಲ್ಲ. ತಾಯಿಯವರು ಪ್ರೋತ್ಸಾಹಿಸಿ ಸ್ವಲ್ಪ ದುಡ್ಡು ಕೊಟ್ಟು ಬೆಂಗಳೂರಿಗೆ ಹೋದಮೇಲೆ ತಂದೆಯವರಿಗೆ ಕಾಗದ ಬರೆದುಕೊ, "ನಾನು ಹೇಳಿ ಸ್ವಲ್ಪ ಸಹಾಯಕ್ಕೆ ಕಳುಹಿಸುತ್ತೇನೆ" ಎಂದರು. ರಜಕ್ಕೆ ಬರೆದು ಹಾಕಿ ಬೆಂಗಳೂರಿಗೆ ಮತ್ತೆ ಓದುವದಕ್ಕೆ ಹೊರಟೆ.

# 15. ಮತ್ತೆ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ (1903)

## ಹೊಸಪಾಠಗಳ ಸಿದ್ಧತೆ:

ನಾನು ಬೆಂಗಳೂರಿಗೆ ಬಂದಾಗ ಕಾಲೇಜು ಇನ್ನೂ ಬಾಗಿಲು ತೆಗೆದಿರಲಿಲ್ಲ ಮತ್ತೆ ಮಾಮೂಲುಪೇಟೆಯಲ್ಲಿದ್ದ ಅದೇ ರೂಮನ್ನು ಬಾಡಿಗೆಗೆ ಹಿಡಿದೆನು. ಮಾಮೂಲುಪೇಟೆ ಆಗ್ಗೆ ಸ್ವಲ್ಪ ಕೊಳಚೆಗೆ ಮೇಲಿನ ಸ್ಥಾನವಾಗಿತ್ತು. ಆದ್ದರಿಂದ ನನ್ನ ಕೊಟ್ಟಡಿ ಬಹಳ ಮಟ್ಟಿಗೆ ಖಾಲಿಯಾಗಿಯೇ ಇರುತ್ತಿತ್ತು. ಮನೆಯವರು ಬಹಳ ಒಳ್ಳೆಯವರು. ನನ್ನ ಹಳೆಯ ಪರಿಚಯವನ್ನು ಗುರುತಿಸಿಕೊಂಡು ಅದೇ ಒಂದುರೂಪಾಯಿ ಬಾಡಿಗೆಗೆ ಅದನ್ನು ಕೊಟ್ಟರು. ಆ ಕೊಟ್ಟಡಿಯಲ್ಲಿ ಒಂದು ವಿಶೇಷವಿತ್ತು, ಅದು ಇಲ್ಲಿ ತಿಳಿಸುವದು ಅವಶ್ಯ. ನಾನು ರಾತ್ರೆ ದೀಪವನ್ನು ಆರಿಸಿದರೆ ಚಟ್ಟೆಂದು ಶಬ್ದವಾಗುತ್ತಿತ್ತು. ಕೊಟ್ಟಡಿ ದೀಪವನ್ನು ಹತ್ತಿಸಿ ನೋಡಿದರೆ ಎಲ್ಲಾದರೊಂದು ಕಡೆಯಲ್ಲಿ ಚೇಳು ಬಿದ್ದಿರುತ್ತಿತ್ತು. ಅದನ್ನು ಹೊಡೆದು ಹಾಕಿ ನಾನು ಮಲಗಿಕೊಳ್ಳುತ್ತಿದ್ದೆ. ರಾತ್ರೆಯ ಹೊತ್ತು ರೇಖಾಗಣಿತ, ಬೀಜಗಣಿತ ಮುಂತಾದವುಗಳಲ್ಲಿ ಕಠಿನ ಪ್ರಶ್ನೆಯನ್ನು ಬಿಡಿಸುವ ಬಗೆಯನ್ನೇ ಚಿಂತಿಸುತ್ತಾ ಮಲಗಿರಲು ಕನಸಿನಲ್ಲಿಯೇ ಎಷ್ಟೋ ಸಲ ಉತ್ತರಗಳು ಹೊಳೆಯುತ್ತಿದ್ದವು. ನಾನು ಚೇಳಿನ ಅಂಜಿಕೆಯಿಂದ ಎಚ್ಚರವಾಗುತ್ತಲೂ ದೀಪವನ್ನು ಹೊತ್ತಿಸಿ ಸ್ಲೇಟಿನಲ್ಲಿ ಆ ಉತ್ತರಗಳನ್ನು ಬರೆದಿಟ್ಟು ಮಲಗಿಕೊಂಡದ್ದೂ ಉಂಟು. ಚೇಳುಗಳ ಸಹವಾಸದಲ್ಲಿ ನನಗೆ ಹೀಗೆ ಪಾಠಗಳ ಅಭ್ಯಾಸಕ್ಕೆ ಕೆಲವು ಸೌಕರ್ಯಗಳಿದ್ದದ್ದರಿಂದ ಬಡತನದಿಂದ ಪೀಡಿತನಾದ ನಾನು ಆ ರೂಮನ್ನೇ ಆರಿಸಿಕೊಂಡದ್ದು ಸ್ವಾಭಾವಿಕವಾಗಿತ್ತು, ಆದರೆ ಊಟಕ್ಕೆ ಏನು ಮಾಡಬೇಕೆಂಬುದು ತಿಳಿದಿರಲಿಲ್ಲ. ಆದರೆ ದೈವಲೀಲೆಯನ್ನು ಕಂಡವರಾರು ? ಅಕಸ್ಮಾತ್ತಾಗಿ ನನ್ನ ಹಳೆಯ ಸ್ನೇಹಿತ ಬಿ.ಜಿ. ಆಚಾರ್ಯ ಪೇಟೆಯಲ್ಲಿ ಸಿಕ್ಕಿದ. ಕಂಡಕೂಡಲೆ ನನ್ನನ್ನು ಸ್ನೇಹಭಾವದಿಂದ ಗುರುತಿಸಿದ. ನನ್ನ ಕಥೆಯನ್ನೆಲ್ಲ ಕೇಳಿ ತಿಳಿದುಕೊಂಡ. ವಾರಸಿಕ್ಕುವವರೆಗೂ ನಮ್ಮ ಮನಗೆ ಊಟಕ್ಕೆ ಬಾ, ಸಿಕ್ಕದಿದ್ದರೆ ನಮ್ಮ ಮನೆಯಲ್ಲಿ ಖಂಡಿತವಾಗಿಯೂ ಇರಬಹುದು ಎಂದು ಆದರದಿಂದ ಹೇಳಿದ. ನನಗೆ ಅರಸುವ ಬಳ್ಳಿ ಕಾಲ್ತೊಡರಿದಂತೆ ಆಯಿತು. ಆತನು ಆಗ್ಗೆ ಬಿ.ಎ. ಕ್ಲಾಸಿನಲ್ಲಿ ಓದುತ್ತಿದ್ದ ; ನನ್ನ ಸ್ಥಿತಿಯನ್ನು ನೆನಸಿಕೊಂಡು ನನಗೆ ಸ್ವಲ್ಪ ನಾಚಿಕೆಯೇ ಆಯಿತು. ಸದ್ಯಕ್ಕಾದರೂ ಇದೊಂದು ಸಹಾಯ ದೊರಕಿತಲ್ಲ ನೋಡೋಣ ಎಂದುಕೊಂಡೆ. ಅವರ ಮನೆಯಲ್ಲಿ ಊಟ, ಮಾಮೂಲುಪೇಟೆಯ ರೂಮಿನಲ್ಲಿ ಹಳೆಯ ಪಾಠಗಳ ಚಿಂತನೆ ಹೀಗೆ ಮುಂದುವರೆಯಿತು ನನ್ನ ದಿನಚರಿ.

ಸೀನಿಯರ್ ಎಫ್.ಎಗೆ ಸೇರಬೇಕಾಗಿದ್ದದ್ದರಿಂದ ಕೆಳಗಿನ ತರಗತಿಯಲ್ಲಿ ಆಗಿದ್ದ ಪಾಠಗಳನ್ನು ಒಂದೊಂದಾಗಿ ಬೇಗಬೇಗನೆ ಓದಿ ಮುಗಿಯಿಸಿಕೊಳ್ಳಬೇಕೆಂದು ಪ್ರಯತ್ನಿಸಿದೆ - ಆ ವರ್ಷ ಸಂಸ್ಕೃತದಲ್ಲಿ ಕುಮಾರಸಂಭವ, ರತ್ನಾವಳಿ ನಾಟಕ - ಇವನ್ನು ಇಟ್ಟಿದ್ದರು. ಆವರೆಗೆ ಆಗಿದ್ದ ನಾಲ್ಕು ಸರ್ಗಗಳನ್ನು ವ್ಯಾಖ್ಯಾನಸಹಿತವಾಗಿ ಬಾಯಿಪಾಠಮಾಡುವುದಕ್ಕೆ ಮೊದಲು ಮಾಡಿದೆ. ಈ ವರ್ಷವೊ ಅಥವಾ ಹಿಂದೆ ನಾನು ಇದ್ದ ಕಾಲದಲ್ಲಿಯೋ ತಿಳಿಯದು, ನಾನು ಸಂಸ್ಕೃತ ಪಾಠಪುಸ್ತಕವನ್ನು ವಿಚಾರಿಸುವದಕ್ಕೆ ಹೋಗಿದ್ದೆ. ಕಿರಾತಾರ್ಜುನೀಯ (ಅಥವಾ ಕುಮಾರಸಂಭವ) ಇದೆಯೊ ? ಎಂದು ಪುಸ್ತಕದ ಅಂಗಡಿಯವರನ್ನು ಕೇಳಿದ್ದಕ್ಕೆ 'ಭಗವದ್ಗೀತಾ ಭಾಷ್ಯ' ಇದೆ ಎಂದರು. ಅದನ್ನೇ ಕೊಡಿ ಎಂದು ಕೊಂಡುಕೊಂಡೆ. ಅದು ಶಂಕರಾಚಾರ್ಯರ ಕೃತಿ ಎಂಬುದು ಆಗ ತಿಳಿದಿರಲಿಲ್ಲ, ಆ ಪುಸ್ತಕವು ಈಗಲೂ ನನ್ನಲ್ಲಿ ಇದೆ. ಮುಂದೆ ಅದರ ವಿಷಯವನ್ನು ಇಷ್ಟರಲ್ಲಿಯೇ ಮತ್ತೆ ಪ್ರಸ್ತಾಪಿಸುವೆನು. ಇಂಗ್ಲೀಷು-ಪಾಠಗಳನ್ನು, ಗಣಿತಪಾಠಗಳನ್ನು ಮತ್ತೆ ಪುನರಾವೃತ್ತಿ ಮಾಡುವದಕ್ಕೆ ಮೊದಲು ಮಾಡಿದೆನು. ಆಗ ಯಾರು ಯಾರೋ ಹಳೆಯ ಹೊಸಗೆಳೆಯರು ಸಿಕ್ಕಿದರು ಪಾಠಗಳ ವಿಷಯವನ್ನು ವಿಚಾರ ವಿನಿಮಯ ಮಾಡಿ ಮನಸ್ಸಿಗೆ ಹತ್ತಿಸಿಕೊಳ್ಳುತ್ತಲಿದ್ದೆ.

## ಕೃಷ್ಣಸ್ವಾಮಿ ಅಯ್ಯರ ಪುನಃ ಸಂದರ್ಶನ :

ಬಿ.ಜಿ. ಆಚಾರ್ಯರ ಮನೆಯಲ್ಲಿ ನನಗೆ ಆದರವೇನೂ ಕಡಿಮೆ ಇರಲಿಲ್ಲವಾದರೂ ಅದೇಕೋ ನನಗೆ ಅವರ ಮನೆಯಲ್ಲಿ ಬಹುಕಾಲವಿರುವದು ಮನಸ್ಸಿಗೆ ಒಪ್ಪಲಿಲ್ಲ. ಅವರ ಮನೆಯ ಊಟ ನನಗೆ ಅಷ್ಟು ಹಿತಕರವಾಗಿರಲಿಲ್ಲ, ನನಗಿಂತ ಎಲ್ಲಾ ವಿಧದಿಂದಲೂ ತಿಳಿವಳಿಕೆಯಲ್ಲಿ ಕಡಿಮೆ ಎಂದು ನಾನು ಭಾವಿಸಿದ್ದ ಆ ಸ್ನೇಹಿತನು ಈಗ ಬಿ.ಎ. ಕ್ಲಾಸಿನಲ್ಲಿದ್ದಾನೆ, ನಾನು ಅವನ ಆಶ್ರಯದಲ್ಲಿದ್ದೇನೆ - ಎಂಬುದರ ಅನುಸಂಧಾನವು ಮನಸ್ಸಿಗೆ ಸ್ವಲ್ಪ ಕಸಿವಿಸಿಯನ್ನುಂಟುಮಾಡಿರಬೇಕು. ಅಂತೂ ಯತ್ನವಿಲ್ಲದೆ ಕಾಲ ಹಾಕುತ್ತಿದ್ದ ನನಗೆ ಒಂದುದಿನ ದೈವಗತಿಯಿಂದ ಕೃಷ್ಣಸ್ವಾಮಿ ಅಯ್ಯರವರ ದರ್ಶನವು ಅನಿರೀಕ್ಷಿತವಾಗಿ ದೊರಕಿತು. ಅವರು ಪೆಟ್ಟಿಗೆ ಗಾಡಿಯಿಂದ ಇಣಕಿ ನೋಡುವದಕ್ಕೆ ಸರಿಯಾಗಿ ನಾನು ಬಸವನಗುಡಿಯ ರಸ್ತೆ ಹಿಡಿದು ಹೋಗುತ್ತಿದ್ದೆನು, ಅವರು ಬಹುಕಾಲದಿಂದಲೂ ನನ್ನನ್ನು ಕಂಡೇ ಇದ್ದವರಂತೆ ನನ್ನ ಕೈ ಸಂಜ್ಞೆ ಮಾಡಿ ಕರೆದರು. 'ಈಗ ಎಲ್ಲಿದೀಯಪ್ಪ ?' ಎಂದು ಕೇಳಿದರು. ನಾನು ವಾರಮಾಡಿಕೊಂಡು ಓದುವದಕ್ಕೆ ಪ್ರಯತ್ನಿಸುತ್ತೇನೆಂಬುದನ್ನು ಅತಿ ಸಂಕ್ಷೇಪವಾಗಿ ತಿಳಿಸಿದೆನು. ಅವರು 'ಬಸವನಗುಡಿಗೆ ನಾಳೆ ಬಾ' ಎಂದರು. 'ಅಲ್ಲಿ ವಾರ ಸಿಕ್ಕುತ್ತದೆಯೇ ?' ಎಂದು ನಾನು ಕೇಳಿದೆನು. ನನಗೆ ಈವರೆಗೆ ಒಂದೊ,

ಎರಡೋ ವಾರಗಳು ಸಿಕ್ಕಿದ್ದವು. ಆದರೆ ಒಂದೇ ಕಡೆಯಲ್ಲಿ ಎಲ್ಲಾ ವಾರಗಳು ದೊರೆತರೆ ಒಳ್ಳೆಯದೆಂದು ನನ್ನ ಹಾರೈಕೆ. ಅವರು 'ನನಗೇನು ಗೊತ್ತು ? ಬಂದು ನೋಡು' ! ಎಂದು ಔದಾಸೀನ್ಯದಿಂದಲೊ ಎಂಬಂತೆ ನುಡಿದರು. ಅವರ ಮಾತಿನಲ್ಲಿ ನನಗೇನೋ ಪ್ರತ್ಯಾಶೆ ಸೂಚಿತವಾಯಿತು. ಬೆಳಿಗ್ಗೆ ಹೋದೆನು. ಅವರ ಸಹಾಯದಿಂದ ನನಗೆ ಎಲ್ಲಾ ವಾರಗಳು ಸಿಕ್ಕಿಬಿಟ್ಟವು.

## ಕೃಷ್ಣಸ್ವಾಮಿ ಅಯ್ಯರವರ ಔದಾರ್ಯ :

ಬೆಳಗ್ಗೆ ಅಯ್ಯರವರ ಮನೆಗೆ ಹೋದೆನು. ಅವರು ನನ್ನನ್ನು ನೋಡುತ್ತಲೂ ಒಂದು ಶಿಫಾರಸು ಕಾಗದವನ್ನು ಬರೆದುಕೊಟ್ಟರು. ಅದರಲ್ಲಿ 'ಈ ತರುಣನು ಒಳ್ಳೆಯ ನಡತೆಯವನು ; ಎಫ್.ಎ ನಲ್ಲಿ ಓದುತ್ತಿದ್ದಾನೆ. ಇವನಿಗೆ ವಾರಕೊಟ್ಟರೆ ಸತ್ಪಾತ್ರರಲ್ಲಿಯೇ ವಿನಿಯೋಗವಾದಂತೆ ಎಂದು ಬರೆದಿತ್ತು. ಅಯ್ಯರಿಗೆ ಪರಿಚಯವಿದ್ದ ಕೆಲವರ ಹೆಸರುಗಳನ್ನು ಬರೆದುಕೊಟ್ಟರು. ನಾನು ಹೋಗಿ ಕಾಗದವನ್ನು ತೋರಿಸಿದವರೆಲ್ಲರೂ ಆ ಕಾಗದವನ್ನು ನೋಡಿದ ಮಾತ್ರದಿಂದಲೇ ಒಂದೊಂದು ವಾರವನ್ನು ಕೊಡುವದಕ್ಕೆ ಒಪ್ಪಿದರು. ಹೆಸರುಗಳನ್ನು ಕೆಳಗಿನಿಂದ ಒಂದೊಂದಾಗಿ, ಒಂದರಮೇಲೊಂದನ್ನು ಬರೆದುಕೊಡುತ್ತಿದ್ದರು ; ಇದರಿಂದಾಗಿ ಪ್ರತಿಯೊಬ್ಬರಿಗೂ ತಮ್ಮ ಹೆಸರನ್ನು ಮೊದಲು ಬರೆದಿದೆ ಎಂಬ ಭಾವನೆಯೇ ಬಂದಂತೆ ಆಗಿತ್ತು. ಯಾರಾದರೂ 'ಕೃಷ್ಣಸ್ವಾಮಿ ಅಯ್ಯರು ನಿನಗೆ ಎಷ್ಟು ವಾರ ಕೊಟ್ಟಿದ್ದಾರೆ ? ಎಂದು ಕೇಳಿದರೆ 'ಅವರ ಮನೆಯಲ್ಲಿ ಒಂದು ರೂಮು ಕೊಟ್ಟಿದ್ದಾರೆ, ಸ್ನಾನಾದಿಗಳಿಗೆ ಅವಕಾಶವನ್ನು ಕೊಟ್ಟಿದ್ದಾರೆ, ಉಳಿದ ವಾರಗಳನ್ನೆಲ್ಲ ನಾನೇ ಕೊಡುತ್ತೇನೆ ಎಂದಿದ್ದಾರೆ' ಎಂದು ಹೇಳು, ಎಂದು ಹೇಳಿ ಕಳುಹಿಸಿದರು. ನನಗೆ ಎಲ್ಲಾ ವಾರಗಳು ಸಿಕ್ಕಿದವು. ವಾರವನ್ನು ಕೊಟ್ಟವರೆಲ್ಲರೂ ಅಯ್ಯರ ಮನೆಗೆ ಬಹಳ ಹತ್ತಿರ ; ಎಲ್ಲರೂ ಅನುಕೂಲಸ್ಥರು, ಎಲ್ಲರೂ ವಿದ್ಯಾವಂತರು. ಸರಿ, ಇನ್ನು ಮೇಲೆ ಅಯ್ಯರವರ ಗರ್ಭವಾಸಕ್ಕೆ ಸೇರಿಕೊಂಡಂತಾಯಿತು. ಮಗನಿಗೆ ಪಾಠ ಹೇಳಿಕೊಡುವದಕ್ಕೆ ಒಂದು ಗಂಟೆ ಗೊತ್ತುಮಾಡಿದರು. ಆದರಿಂದ ತಿಂಗಳಿಗೆ ಸ್ವಲ್ಪ ಕಾಸೂ ಕೈಗೆ ಸೇರುವಂತೆ ಆಯಿತು. ಮನೆಯಲ್ಲಿ ವಿಶೇಷ ಹಬ್ಬ, ಹುಣ್ಣಿಮೆಯ ದಿನ ಸಾಧ್ಯವಾದಾಗಲೆಲ್ಲ ಮನೆಯಲ್ಲಿಯೇ ಊಟಕ್ಕೆ ಏರ್ಪಡಿಸಿದರು. ಪ್ರತಿದಿನವೂ ಮನೆಯಲ್ಲಿ ಮಾಡಿದ ತಿಂಡಿಯಲ್ಲಿಯೂ ಕಡೆಗೆ ತರುವ ಹಣ್ಣು ಹಂಪಲುಗಳಲ್ಲಿಯು ನನಗೆ ಪಾಲು ಇದ್ದೇ ಇರುತ್ತಿತ್ತು. ಅಗಸರವನಿಗೆ ಮಡಿಮಾಡುವದಕ್ಕೆ ನನ್ನ ಬಟ್ಟೆಗಳನ್ನು ಕೊಡುವ ಆನುಕೂಲ್ಯವಾಯಿತು. ನಾನಿದ್ದ ರೂಮು ಗಾಳಿಬೆಳಕು ಮುಂತಾದ ಸೌಕರ್ಯಗಳಿಂದ ಕೂಡಿತ್ತು. ಪ್ರತಿದಿನವೂ ನಾನು ಊಟಮಾಡಿ

ಕೊಂಡು ಬರುವವರೆಗೂ ಪೆಟ್ಟಿಗೆ ಗಾಡಿಯನ್ನು ನಿಲ್ಲಿಸಿಕೊಂಡಿದ್ದು ಗಾಡಿಯ ಮೇಲೆ ನನ್ನನ್ನು ಕೂಡಿಸಿಕೊಂಡೇ ಕಾಲೇಜಿಗೆ ಹೋಗುತ್ತಿದ್ದರು. ಚಿಕ್ಕಮಗಳೂರಿನ ಸುಬ್ರಹ್ಮಣ್ಯಅಯ್ಯರವರ ವಾತ್ಸಲ್ಯವನ್ನು ಮತ್ತೆಮತ್ತೆ ನೆನಪಿಸಿಕೊಳ್ಳುವಂತೆ ಆಯಿತು. ಏಕೆಂದರೆ ಅದನ್ನೂ ಮೀರಿದ ವಾತ್ಸಲ್ಯವನ್ನೇ ಕೃಷ್ಣಸ್ವಾಮಿ ಅಯ್ಯರವರು ಈಗ ನನ್ನಲ್ಲಿ ಅತ್ಯಂತ ಸ್ವಾಭಾವಿಕ ರೀತಿಯಿಂದ ತೋರಿಸುವದಕ್ಕೆ ಮೊದಲು ಮಾಡಿದರು.

## ಕಾಲೇಜಿನಲ್ಲಿ ಸಂಸ್ಕೃತ ದ್ವಿತೀಯ ಭಾಷೆ :

ಈ ಸಲ ನಾನು ಬರುವ ಹೊತ್ತಿಗೆ ಕುಕ್ ಸಾಹೇಬರು ರಜ ತೆಗೆದುಕೊಂಡಿದ್ದರು. ಟೇಟ್ ಸಾಹೇಬರೇ ಅವರ ಸ್ಥಾನದಲ್ಲಿ ಪ್ರಿನ್ಸಿಪಾಲರಾಗಿ ಕೆಲಸಮಾಡುತ್ತಿದ್ದರು. ಅವರಿಗೆ ಸಂಸ್ಕೃತವನ್ನು ಕಲಿಯುವ ಆಶೆಯೂ ಆಗ ಅಂಕುರಿಸಿತ್ತು. ಪಂಡಿತರ ಸಹಾಯದಿಂದ ಅವರು ಬೇಗ ಬೇಗನೆ ಆ ಭಾಷೆಯನ್ನು ಅಳವಡಿಸಿಕೊಳ್ಳುತ್ತಿದ್ದರು. ಇಂಗ್ಲೀಷಿನಲ್ಲಿ ಸಂಸ್ಕೃತ ಶಬ್ದಗಳನ್ನು ತಪ್ಪು ಅಕ್ಷರ ಸಂಯೋಜನೆಯಿಂದ ಬರೆಯುವ ಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂಬುದು ಅವರ ಮನೋಗತವಾಗಿತ್ತೆಂದು ಕಾಣುತ್ತದೆ. ಯಾವನೋ ಒಬ್ಬ ಸಂಸ್ಕೃತ ವಿದ್ವಾಂಸನು ಬರೆದ ಕಾಗದದಲ್ಲಿ **'Budhism'** (ಬುಧಿಸಮ್) ಎಂತ ಬರೆದದ್ದು ನೋಡಿ 'ಈತನಿಗೆ ಸಂಸ್ಕೃತವು ಬರುವಂತೆ ಕಾಣಿಸುವದಿಲ್ಲ' ಎಂದದ್ದು ಕೇಳಿ ಕಾಲೇಜಿನ ಉಪಾಧ್ಯಾಯರು ಆಶ್ಚರ್ಯಚಕಿತರಾದರಂತೆ, **'Buddhism'** (ಬುದ್ಧಿಸಮ್) ಎಂದು ಬರೆಯ ಬೇಕಿತ್ತೆಂದು ಸಾಹೇಬರ ಅಭಿಪ್ರಾಯ. ಕಾಲೇಜಿಗೆ ಸೇರಿದ್ದ ಬ್ರಾಹ್ಮಣ ವಿದ್ಯಾರ್ಥಿಗಳನ್ನೆಲ್ಲ ನೀವು ಸಂಸ್ಕೃತವನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಕಾಲೇಜಿನಿಂದ ಹೊರಡಿ ! ಎಂದು ಹೇಳುವದಕ್ಕೆ ಆರಂಭಿಸಿದ್ದರು, ನನಗೆ ಇದು ಯಾವುದೂ ತಿಳಿಯದು. ಟೇಟ್ ಸಾಹೇಬರನ್ನು ಕಂಡು 'ನಾನು ಈ ಸಲಕ್ಕೆ ಸಂಸ್ಕೃತವನ್ನು ತೆಗೆದು ಕೊಳ್ಳುವದಕ್ಕೆ ಅನುಮತಿಯನ್ನು ಕೊಡಬೇಕು' ಎಂದು ಕೇಳಲು ಅವರು **I am very glad. I have not so far seen a brahmin student who has willingly offered to take Sanskrit** (ಬಹಳ ಸಂತೋಷ; ಇಲ್ಲಿಯವರೆಗೆ ಸಂಸ್ಕೃತವನ್ನು ತೆಗೆದುಕೊಳ್ಳುತ್ತೇನೆ ಎಂದು ಹೀಗೆ ತಾವಾಗಿಯೇ ಬಂದು ಕೇಳಿಕೊಂಡ ಬ್ರಾಹ್ಮಣ ವಿದ್ಯಾರ್ಥಿಯನ್ನೇ ನಾನು ಈವರೆಗೆ ಕಂಡೇ ಇಲ್ಲ) ಎಂದರು. 'ಆದರೂ ನೀನು ಯೋಚನೆಮಾಡಿ ಸಂಸ್ಕೃತವನ್ನು ತೆಗೆದುಕೊ; ಏಕೆಂದರೆ ನಿನಗೆ ಇದು ಎರಡನೆಯ ವರ್ಷವಾದ್ದರಿಂದ ಗ್ರಂಥಗಳನ್ನೆಲ್ಲ ಸಿದ್ಧಪಡಿಸಿಕೊಳ್ಳುವದು ಕಷ್ಟವಾದೀತು' ಎಂದರು. ನಾನು ಸಂಸ್ಕೃತವನ್ನು ತೆಗೆದುಕೊಂಡುಬಿಟ್ಟೆ ಮುಂದೆ ಮೊದಲನೆಯ ಕ್ವಾರ್ಟರ್ಲಿ ಪರೀಕ್ಷೆಯಾಯಿತು, ಸಂಸ್ಕೃತದಲ್ಲಿ ನಾನೇ ಮೊದಲನೆಯವನಾದೆ. ಟೇಟ್

ಸಾಹೇಬರು **'This is very creditable, you have stood first'** (ನಿನಗೆ ಇದು ಯಶಸ್ಕರವಾದದ್ದು. ಮೊದಲನೆಯವನಾಗಿದ್ದೀಯೆ !)' ಎಂದು ನಸುನಗೆಯಿಂದ ತಮ್ಮ ಸಂತೋಷವನ್ನು ಸೂಚಿಸಿದರು.

ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು ಆಗ್ಗೆ ಸಂಸ್ಕೃತ ಪಂಡಿತರು. ಅವರು ದೊಡ್ಡ ವಿದ್ವಾಂಸರು. ಸಾಹಿತ್ಯ ವಿಚಾರದಲ್ಲಿ ಅವರಿಗೂ ಕಾಶಿಯ ಕೆಲ ಘನವಿದ್ವಾಂಸರಿಗೂ ಪತ್ರ ವ್ಯವಹಾರವು ನಡೆಯುತ್ತಿತ್ತಂತೆ. ಅವರಿಗೆ ಹುಡುಗರಲ್ಲಿ ಬಹಳ ಪ್ರೀತಿ ; ಪಾಠವನ್ನು ಚೆನ್ನಾಗಿ ಹೇಳಿಕೊಡುತ್ತಿದ್ದರು. ಆದರೂ ಆಗಿನಕಾಲಕ್ಕೆ ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಇನ್ನೂ ವಿದ್ಯಾರ್ಥಿಗಳಿಗೆ ಆದರವು ಅಷ್ಟಾಗಿ ಹೆಚ್ಚಿರಲಿಲ್ಲವಾದ್ದರಿಂದ ಆ ಪಂಡಿತರನ್ನು ಅವರೇನೂ ಅಷ್ಟಾಗಿ ಲೆಕ್ಕಿಸುತ್ತಿರಲಿಲ್ಲ. ಕುಕ್ ಸಾಹೇಬರು ತರಗತಿಗೆ ಬಂದು **Why don't you use books in Devanagari ?** (ದೇವನಾಗರಿ ಅಕ್ಷರದ ಪುಸ್ತಕಗಳನ್ನೇಕೆ ಉಪಯೋಗಿಸುವದಿಲ್ಲ !) ಎಂದು ಕೇಳಿದರೆ ಶಾಸ್ತ್ರಿಗಳು ಅವರೇನೆನ್ನುತ್ತಾರೆ ? ಎಂದು ಹುಡುಗರನ್ನು ಕೇಳುವದು ! ದೇವನಾಗರಿಯ ಪುಸ್ತಕಗಳೇನೂ ಅವಶ್ಯವಿಲ್ಲ ಎನ್ನುತ್ತಾರೆ ?) ಎಂದು ಹುಡುಗರು ಹೇಳುವದು. 'ಹಾಗಾದರೆ' ಸರಿ ಎಂದು ಪಂಡಿತರೆನ್ನುವದು. **What does he say ?** (ಪಂಡಿತರೇನೆನ್ನುತ್ತಾರೆ ?) ಎಂದು ಕುಕ್ ಸಾಹೇಬರು ಕೇಳಿದರೆ **He says that Telugu books are more accurately printed** (ತೆಲುಗು ಪುಸ್ತಕಗಳು ದೇವನಾಗರಿ ಪುಸ್ತಕಗಳಿಗಿಂತಲೂ ತಪ್ಪಿಲ್ಲದೆ ಅಚ್ಚಾಗಿರುತ್ತವೆಯಂತೆ) ಎನ್ನುವದು, **Is that so ? All right, he knows better** (ಹಾಗೊ ? ಸರಿ, ಅವರೇ ಈ ವಿಷಯದಲ್ಲಿ ಬಲ್ಲವರು) ಎಂದು ಹೊರಟು ಹೋಗುವದು. ಹೀಗೆ ವಿನೋದವು ನಡೆಯುತ್ತಿತ್ತಂತೆ ! ಆದರೆ ಟೇಟ್ ಸಾಹೇಬರನ್ನು ಕಂಡರೆ ಎಲ್ಲರೂ ಹೆದರುತ್ತಿದ್ದರು. ಆಗಿನ ಕಾಲಕ್ಕೆ ನರಸಿಂಹಯ್ಯಂಗಾರ್ ಎಂಬ ಘನವಿದ್ವಾಂಸರು ನಮಗೆ ಲಘುಕೌಮುದಿ ಹೇಳಿಕೊಡುತ್ತಿದ್ದರು. ಅವರು ಇಂಗ್ಲೀಷಿನಲ್ಲಿ ಬಿ.ಎ. ಆಗಿದ್ದದ್ದಲ್ಲದೆ ಸಂಸ್ಕೃತದಲ್ಲಿಯೂ ದೊಡ್ಡ ವಿದ್ವಾಂಸರೇ ; ಈಚೆಗೆ ತಾವು 'ಕಲ್ಕಿ'ಯೆಂಬ ಭಾವನೆಯೊಂದು ಅವರನ್ನು ಹಿಡಿದುಕೊಂಡು ಒಂದು ಬಗೆಯ ವಿಶೇಷ ಭ್ರಮೆಯಾಗಿದ್ದಿತು. ಅವರು ಸಂಸ್ಕೃತದಲ್ಲಿ ಹಲವು ಗ್ರಂಥಗಳನ್ನು ಬರೆದಿರುವದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಇದಲ್ಲದೆ ಇಂಗ್ಲೀಷು ಕವಿತೆಗಳನ್ನು ಸಂಸ್ಕೃತದಲ್ಲಿ ಲಲಿತವಾದ ಶೈಲಿಯಿಂದ ಪದ್ಯರೂಪದಲ್ಲಿಯೇ ಅನುವಾದ ಮಾಡಿರುತ್ತಾರೆ, ಇಂಥವರು ತಮ್ಮ ಸಂಸ್ಕೃತಜ್ಞಾನವನ್ನು ಹೆಚ್ಚಿಸಿಕೊಳ್ಳುವದಕ್ಕೆಂದು ಟೇಟ್ ಸಾಹೇಬರು ನಮ್ಮ ತರಗತಿಗೆ ಬಂದು ಕುರ್ಚಿ ಹಾಕಿಸಿಕೊಂಡು ಕುಳಿತುಬಿಟ್ಟರೆಂದರೆ ಥರಥರನೆ ನಡುಗುತ್ತಾ ಪಾಠವನ್ನು ಹೇಳುತ್ತಿದ್ದರು. ಛಪ್ಪಲ್ಲಿ ಶಾಸ್ತ್ರಿಗಳ ಮಗನೊಬ್ಬ- ಕಾಶೀಪತಿ

ಶಾಸ್ತ್ರಿ ಎಂದು ಆತನ ಹೆಸರಿರಬಹುದು. ಸಂಸ್ಕೃತ ವಿದ್ಯಾರ್ಥಿಯಿದ್ದನು. ಅವನು ಪ್ರತಿ ಪರೀಕ್ಷೆಯಲ್ಲಿಯೂ ಸಂಸ್ಕೃತದಲ್ಲಿ ಮೊದಲನೆಯವನೇ ಆಗುತ್ತಿದ್ದದ್ದನ್ನು ಕಂಡು ಹುಡುಗರು ತಮ್ಮ ಮಗನಲ್ಲಿ ಪಕ್ಷಪಾತದಿಂದ ಹೆಚ್ಚಿಗೆ ನಂಬರು ಕೊಡುತ್ತಾರೆಂದು ದೂರು ಹುಟ್ಟಿಸಿದ್ದರು. ಈ ಸಲದ ಪರೀಕ್ಷೆಯಲ್ಲಿ ಇಂಗ್ಲೀಷು ಭಾಷೆಯಲ್ಲಿ ಪ್ರಶ್ನೆಪತ್ರಿಕೆಯಿತ್ತು ; ಇಂಗ್ಲೀಷಿನಲ್ಲಾದರೂ, ಸಂಸ್ಕೃತದಲ್ಲಾದರೂ ಉತ್ತರವನ್ನು ಕೊಡಬಹುದೆಂದು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವನ್ನು ಕೊಡಲಾಗಿತ್ತು. ನಾನು ಕುಮಾರಸಂಭವ ವ್ಯಾಖ್ಯಾನವನ್ನೆಲ್ಲ ಬಾಯಿಪಾಠ ಮಾಡಿದ್ದದ್ದರಿಂದ ಪ್ರಶ್ನೆಗಳಿಗೆಲ್ಲ ವ್ಯಾಖ್ಯಾನದ ಬಹುಭಾಗವನ್ನು ಇಳಿಸಿ ಉತ್ತರವನ್ನು ಕೊಟ್ಟಿದ್ದೆನು. ಶಾಸ್ತ್ರಿಗಳು ಸಂತುಷ್ಟರಾಗಿ ನನಗೇ ಮೊದಲನೆಯ ಸ್ಥಾನವನ್ನು ಕೊಟ್ಟು ತಮ್ಮ ಮಗನನ್ನು ಎರಡನೆಯವನನ್ನಾಗಿ ಪರಿಗಣಿಸಿದ್ದರು. ಇದರಿಂದ ವಿದ್ಯಾರ್ಥಿಗಳ ದೂರು ನಿರಾಧಾರವೆಂದು ಎಲ್ಲರಿಗೂ ಗೊತ್ತಾಯಿತು. ನನಗೂ ಸಂಸ್ಕೃತದಲ್ಲಿ ಫೇಲಾಗಲಾರೆನೆಂಬ ಭರವಸೆಯುಂಟಾಯಿತು.

## ವೇದಾಂತಕ್ಕೆ ಪ್ರೋತ್ಸಾಹ:

ಕೃಷ್ಣಸ್ವಾಮಿ ಅಯ್ಯರವರು ಸದಾ ಪ್ರಸನ್ನಚಿತ್ತರು. ಅವರು ಬೆಳಗಿನ ಜಾವದಲ್ಲಿ ಎದ್ದು ಪಿಟೀಲುಬಾರಿಸುವದರ ಮೂಲಕವಾಗಿಯೇ, ನನಗೆ ಮುಂಚಿತವಾಗಿ ಎದ್ದು ಅಭ್ಯಾಸಮಾಡುವ ಪದ್ಧತಿಗೆ ಉತ್ತೇಜಕರಾದರು. ಈ ಹೊತ್ತಿನಲ್ಲಿ ನನಗೆ ಕಾಳೆ ಎಂಬವರು ಇಂಗ್ಲೀಷಿನಲ್ಲಿ ಬರೆದಿದ್ದ ಸಂಸ್ಕೃತ ವ್ಯಾಕರಣವು ಕೈಗೆ ಸಿಕ್ಕಿತು ; ಅದರಲ್ಲಿ ಕೌಮುದಿಯ ಕೆಲವು ಸೂತ್ರಗಳನ್ನು ಅಲ್ಲಲ್ಲಿ ಉಲ್ಲೇಖಿಸಿದ್ದರಿಂದ ನನಗೆ ಪಾಣಿನಿಯ ವ್ಯಾಕರಣದ ವಿಷಯಕ್ಕೆ ಕುತೂಹಲ ವುಂಟಾಯಿತು. ಒಂದು ದಿನ ಅಯ್ಯರವರ ನಿಮಿತ್ತವಾಗಿ ಕಂಟೋನ್ಮೆಂಟಿನಲ್ಲಿದ್ದ ಒಂದು ಬ್ಯಾಂಕಿಗೆ ಹಣವನ್ನು ಕಟ್ಟುವದಕ್ಕೆಂದು ಹೊರಟು ದಾರಿಯಲ್ಲಿ ನಾನು ಸಂಸ್ಕೃತ ಕಾಲೇಜಿನಲ್ಲಿ ಚಿಂತನೆಮಾಡುತ್ತಿದ್ದ ವಿದ್ಯಾರ್ಥಿಗಳ ಧ್ವನಿಯನ್ನು ಕೇಳಿ ಆ ಕಡೆಗೆ ಸ್ವಲ್ಪ ಹೊತ್ತು ತಿರುಗಿದೆನು. ಅಲ್ಲಿ ಇಬ್ಬರು ವಿದ್ಯಾರ್ಥಿಗಳು 'ರಾಮಾಃ' ಎಂಬ ಶಬ್ದರೂಪವು ಹೇಗೆ ಸಿದ್ಧವಾಗುತ್ತದೆ ? ಎಂಬ ವಿಷಯಕ್ಕೆ ಚರ್ಚೆಯನ್ನು ನಡೆಸಿದ್ದರು. 'ರಾಮ-ಜಸ್' ಇತಿ ಸ್ಥಿತೇ ''ಚುಟೂ'' ಪ್ರತ್ಯಯಾದ್ಯೌ ಚುಟೂ ಇತೌ ಸ್ತಃ ಇತಿ ತಸ್ಯ ಇತ್ ಸಂಜ್ಞಾಯಾಂ ''ತಸ್ಯ ಲೋಪಃ'' ಇತಿ ಲೋಪಃ ''ನ ವಿಭಕ್ತೌ ತುಸ್ಮಾಃ'' ಇತಿ ಸಕಾರಸ್ಯ ನೇತ್ತ್ವಮ್ । ರಾಮ ಅಸ್ ಇತಿ ಜಾತಮ್ ''ಅತೋ ಗುಣೇ'' ಇತಿ ಪರರೂಪಪ್ರಾಪ್ತೇ ''ಪ್ರಥಮಯೋಃ ಪೂರ್ವಸವರ್ಣಃ'' ಇತ್ಯಸ್ಯ ಪರತ್ವಾತ್. ರಾಮಾಸ್ ಇತಿ ಜಾತಮ್ । ''ಸಸಜುಷೋರುಃ'' ಇತಿ ಸಸ್ಯ ರುತ್ವೇ ಉಕಾರ ಲೋಪೇ ''ಖರವಸಾನಯೋಃ''

ಇತಿ ರಸ್ಯ ವಿಸರ್ಗೇ 'ರಾಮಾಃ ಇತಿ ರೂಪಮ್'. ಅವರು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದ ಈ ಪಂಕ್ತಿಗಳು ಎಲ್ಲವೂ ಆಗ ನೆನಪಿನಲ್ಲಿ ಉಳಿಯಲಿಲ್ಲವಾದರೂ ಈಚೆಗೆ ಪುಸ್ತಕವನ್ನು ನೋಡಿದ ಮೇಲೆ ಇವೇ ಅವರು ಹೇಳಿಕೊಂಡ ಮಾತುಗಳಿರ-ಬೇಕೆಂದು ಕಲ್ಪಿಸಿಕೊಂಡಿರುತ್ತೇನೆ. ಇದು ಹೇಗಾದರೂ ಇರಲಿ ಕೌಮುದಿಯಲ್ಲಿ ನನಗೆ ಆಸಕ್ತಿ ಹೆಚ್ಚಿತು ; ಅದಕ್ಕೆ 'ತತ್ತ್ವಬೋಧಿನೀ' ಎಂಬ ವ್ಯಾಖ್ಯಾನವಿದೆ ಎಂದು ತಿಳಿದುಬಂದದ್ದರಿಂದ ಮಾರನೆಯ ದಿನವೇ ನಿರ್ಣಯಸಾಗರ ಮುದ್ರಣಾಲಯಕ್ಕೆ ಆ ಪುಸ್ತಕವನ್ನು ಕಳುಹಿಸುವಂತೆ ಪತ್ರವನ್ನು ಹಾಕಿದೆ. ವ್ಯಾಖ್ಯಾನದ ಹೆಸರಿನಿಂದ ವ್ಯಾಕರಣದ ತತ್ತ್ವವನ್ನೆಲ್ಲ ಅದರಲ್ಲಿ ಬೆಳದಿಂಗಳಿನಂತೆ ಪ್ರಕಾಶಪಡಿಸಿದೆ ಎಂದು ನನ್ನ ನಂಬಿಕೆ. ಮಲ್ಲಿನಾಥ ವ್ಯಾಖ್ಯಾನದಂತೆಯೆ ಅದೊಂದು ಸರಳ ಶೈಲಿಯಲ್ಲಿ ಬರೆದಿದ್ದ ವ್ಯಾಖ್ಯಾನವೆಂಬ ನನ್ನ ನಂಬಿಕೆಯು ಪುಸ್ತಕದ ಮುಖವನ್ನು ನೋಡಿದ ಕೂಡಲೆ ಭಗ್ನವಾಯಿತು. ಆ ವ್ಯಾಖ್ಯಾನದ ಪ್ರೌಢಶೈಲಿಯು ನನಗೆ ಸ್ವಲ್ಪವೂ ತಿಳಿಯಲೇ ಇಲ್ಲ. ಆದರೂ ವ್ಯಾಕರಣವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವೇನೋ ಮನಸ್ಸಿನಲ್ಲಿ ನಿಂತುಬಿಟ್ಟಿತು.

ತತ್ತ್ವಬೋಧಿನಿಯನ್ನು ಅಲ್ಲಲ್ಲಿ ಹೊರಳಾಡಿಸುತ್ತಿದ್ದ ನನಗೆ ಕೆಲವು ಕಡೆ ವೇದಾಂತದ ಶಬ್ದಗಳು ಹೇಗೋ ಗೋಚರಿಸುತ್ತಿದ್ದವು. ಭಗವದ್ಗೀತಾಭಾಷ್ಯವು ನನ್ನ ಕೈಗೆ ದೈವಿಕವಾಗಿ ಬಂದದ್ದನ್ನು ಹಿಂದೆ ಒಮ್ಮೆ ಆಗಲೇ ಪ್ರಸ್ತಾಪಿಸಿರುತ್ತೇನಷ್ಟೆ? ಈಗ ಮತ್ತೆ ಅದರ ನೆನಪು ಆಯಿತು. ಆ ಪುಸ್ತಕವನ್ನು ಓದುವದಕ್ಕೆ ತೆಗೆದಾಗ 'ನಾಸತೋ ವಿದ್ಯತೇ ಭಾವಃ' ಎಂಬ ಶ್ಲೋಕದ ಕೆಳಗೆ ಬರೆದಿದ್ದ ವ್ಯಾಖ್ಯಾನದಲ್ಲಿ 'ನ ಹಿ ಶೀತೋಷ್ಣಾದಿ ಸಕಾರಣಂ ಪ್ರಮಾಣೈರ್ನಿರೂಪ್ಯಮಾಣಂ ವಸ್ತುಸದ್ ಭವತಿ । ವಿಕಾರೋ ಹಿ ಸಃ । ವಿಕಾರಶ್ಚ ವ್ಯಭಿಚರತಿ।' ಎಂಬ ವಾಕ್ಯಗಳು ಕಣ್ಣಿಗೆ ಬಿದ್ದವು. ಕೂಡಲೆ ಹಿಂದೆ ಬಸವನಹಳ್ಳಿಯಲ್ಲಿ ನಾನು ಅಸಿಸ್ಟೆಂಟ್ ಮಾಸ್ಟರ್ ರಾಮಯ್ಯನವರ ಮನೆಯಲ್ಲಿ ಓದಿದ್ದ ಇಂಗ್ಲೀಷ್ ಟ್ರಾನ್ಸ್‌ಲೇಷನ್ನಿನ ನೆನಪು ಬಂತು. 'ಶೀತೋಷ್ಣಾದಿಗಳು ಬರಿಯ ವಿಕಾರಗಳು' ಎಂದು ಅದರಲ್ಲಿ ಬರೆದಿದ್ದು ನನಗೆ ಭೌತಿಕ ವಿಜ್ಞಾನಕ್ಕೆ ಸಂಬಂಧಪಟ್ಟ ವಿಚಾರವೆಂದು ಆಗ್ಗೆ ಹೊಳೆದಿತ್ತು. ಈಗ ಇದು ಯಾವುದೋ ಒಂದು ಹೊಸ ವಿಷಯವೆಂಬುದೂ ತಿಳಿಯಿತು. ವಾಕ್ಯಗಳು ಓದುವದಕ್ಕೆ ಸುಲಭವಾಗಿದ್ದರೂ ವಿಷಯಗಳು ಕುರುಡು ಕುರುಡಾಗಿ ತಿಳಿಯುತ್ತಿದ್ದವು. ಆದರೂ ಈ ಗ್ರಂಥವು ಓದತಕ್ಕದ್ದು ಎಂದು ನನ್ನ ಮನಸ್ಸಿನಲ್ಲಿ ಮೂಡಿತು. ಸರಿ, ಪುಸ್ತಕದ ಮೊದಲನೆಯ ಹಾಳೆಯ ಮೇಲೆ **Make it a point to read atleast three slokas a day** ದಿನಕ್ಕೆ ಮೂರು ಶ್ಲೋಕಗಳನ್ನಾದರೂ ನಿಯಮದಿಂದ ಓದಬೇಕು ಎಂಬ

ಸೂತ್ರವಾಕ್ಯವನ್ನು ಬರೆದುಕೊಂಡೆ. ಆ ನಿಯಮವನ್ನು ನಾನು ಪಾಲಿಸುವದೇನೋ ಆಗಲಿಲ್ಲ ; ಆದರೆ ಆಗಾಗ್ಗೆ ಭಗವದ್ಗೀತೆಯ ಶ್ಲೋಕಗಳನ್ನು ಓದುವದು, ಕುಮಾರಸಂಭವದ ಶ್ಲೋಕದ ವ್ಯಾಖ್ಯಾನಗಳನ್ನು ಓದುವ ರೀತಿಯಿಂದ ವ್ಯಾಖ್ಯಾನವನ್ನು ಒಂದಿಷ್ಟು ಓದುವದು ಇಷ್ಟು ಆಚರಣೆಗೆ ಬಂತು, ಹೀಗೆ ಅತ್ಯಂತವಾಗಿ ಅನಿರೀಕ್ಷಿತವಾದ ದೈವಿಕಘಟನೆಯಿಂದ ನನಗೂ ಅರಿವಿಲ್ಲದೆಯೇ ಶಂಕರಾಚಾರ್ಯರ ಭಗವದ್ಗೀತಾಭಾಷ್ಯದಲ್ಲಿ ನನಗೆ ಪ್ರವೇಶವು ದೊರಕಿತು.

ಒಂದು ದಿನ ಕೃಷ್ಣಸ್ವಾಮಿಅಯ್ಯರು ನಾನು ಭಗವದ್ಗೀತೆಯನ್ನು ಓದುತ್ತಿದ್ದದ್ದನ್ನು ಕಂಡು ಇದೇನು ಓದುತ್ತಿದ್ದೀಯಪ್ಪ ! ಪರೀಕ್ಷೆಗೆ ಬೇಕಾದ ಪಾಠಗಳನ್ನು ಗಟ್ಟಿಮಾಡಿಕೊಳ್ಳದೆ ಹೀಗೆ ಕಾಲಹಾಕಬಾರದು - ಎಂದು ಬುದ್ಧಿವಾದವನ್ನು ಹೇಳುತ್ತಾ ಪುಸ್ತಕದ ಕಡೆಗೆ ಇಣಕಿ ನೋಡಿದರು. 'ಎಲ ಎಲಾ ! ನಿನಗೆ ಇದು ಅರ್ಥವಾಗುತ್ತದೆಯೇ ?' ಎಂದು ಕೇಳಿದರು. 'ಏನೋ ಸ್ವಲ್ಪ ತಿಳಿಯುತ್ತದೆ' ಎಂದೆನು. ಆಗ ಮನಸ್ಸಿನಲ್ಲಿ ನನಗೂ ತಿಳಿಯುತ್ತದೆ ಎಂದು ಸ್ವಲ್ಪ ಜಂಭವೇ ಇದ್ದಿರಬೇಕು. ಈಗ ಇದೆಲ್ಲ ಓದುವದಕ್ಕೆ ಕಾಲವಲ್ಲ, ಷೇಕ್ಸ್‌ಪಿಯರು - ಮುಂತಾದವುಗಳನ್ನು ಚೆನ್ನಾಗಿ ಓದಬೇಕು ಎಂದು ತಿಳಿವಳಿಕೆ ಹೇಳಿದರು. ಆದರೂ ಇವನಿಗೆ ವೇದಾಂತದ ಕಡೆಗೆ ಮನಸ್ಸು ಒಲಿಯುತ್ತಿದೆಯಲ್ಲ! ಎಂದು ಸಂತೋಷವೇ ಆಗಿರಬೇಕು. ಏಕೆಂದರೆ 'ಬಾ ಇಲ್ಲಿ !' ಎಂದು ತಮ್ಮ ಕೊಠಡಿಗೆ ಕರೆದು 'ಎಲ್ಲಿ ಈ ಶ್ಲೋಕದ ಭಾಷ್ಯವನ್ನು ಓದು !' ಎಂದು 'ನಾಸತೋ ವಿದ್ಯತೇ ಭಾವಃ' ಎಂಬ ಶ್ಲೋಕವನ್ನೇ ಕೈಗೆ ತೆಗೆದುಕೊಟ್ಟರು. ನಾನು ಏನೇನೋ ಅರ್ಥವನ್ನು ಹೇಳಿದೆನು. ಅವರು ತಾವೇ ಅರ್ಥವನ್ನು ಹೇಳಿ ನಿನ್ನ ಪುಣ್ಯದಿಂದ ಈ ಪುಸ್ತಕ ನಿನ್ನ ಕೈಗೆ ಬಂದಿದೆ ; 'ದಿನವೂ ಸಾಯಂಕಾಲ ಕಾಲುಘಂಟೆ ಹೊತ್ತು ಇಲ್ಲಿ ಬಾ, ನಾನು ಹೇಳಿಕೊಡುತ್ತೇನೆ' ಎಂದರು. ಕೃಷ್ಣಸ್ವಾಮಿ ಅಯ್ಯರು ಬರಿಯ ಸ್ಕೂಲು ಮಾಸ್ಟರಲ್ಲ; ಬರಿಯ ಪಿಟೀಲು ಅಯ್ಯರಲ್ಲ ; ಅವರಿಗೆ ಇನ್ನು ಎಷ್ಟೋ ವಿಷಯಗಳು ತಿಳಿದಿವೆ ಎಂಬುದು ನನಗೆ ಮನವರಿಕೆಯಾಯಿತು.

ಕೃಷ್ಣಸ್ವಾಮಿ ಅಯ್ಯರವರು ಆಗಾಗ್ಗೆ ವೇದಾಂತವನ್ನು ಅಭ್ಯಾಸಮಾಡುತ್ತಲೇ ಇರುತ್ತಿದ್ದರು. ಅವರು ಆಗ್ಗೆ 'ವೇದಾಂತ ಪರಿಭಾಷಾ' 'ಸೂತಸಂಹಿತಾ' ಎಂಬ ಗ್ರಂಥಗಳನ್ನು ವಿಶೇಷವಾಗಿ ಓದುತ್ತಿದ್ದರು. ವೇದಾಂತ ಪರಿಭಾಷೆಯಲ್ಲಿ ತರ್ಕಶಾಸ್ತ್ರದ ಶೈಲಿಯ ವಾಕ್ಯಗಳೇ ಹೆಚ್ಚಾಗಿದ್ದದ್ದರಿಂದ ನನಗೇನೂ ಅವುಗಳ ಅರ್ಥವು ಅಷ್ಟಾಗಿ ಆಗುತ್ತಿರಲಿಲ್ಲ, ಒಂದು ದಿನ ಅಯ್ಯರವರು ಪರಿಭಾಷೆಯ ಯಾವುದೋ ಒಂದು ವಿಷಯವನ್ನು ನನಗೆ ವಿವರಿಸಿದರು ; ಆದರೆ ಅದರ ಅರ್ಥವೇನೂ ನನಗೆ

ತಿಳಿಯಲಿಲ್ಲ. 'ವೃತ್ತೇರ್ವೃತ್ಯನ್ತರಾವಿಷಯತ್ವೇಽಪಿ ಸ್ವವಿಷಯತ್ವಾಭ್ಯುಪಗಮೇನ .......' ಎಂಬ ಒಂದು ವಾಕ್ಯವನ್ನು ವಿವರಿಸುತ್ತಿದ್ದಾಗ ನಾನು ಅಂತಃಕರಣವೃತ್ತಿಯು ಸ್ವವಿಷಯವಾಗಿರುತ್ತದೆ, ತನ್ನನ್ನು ತಾನೇ ವಿಷಯೀಕರಿಸುತ್ತದೆ - ಎಂಬುದು ವಿರುದ್ಧವಲ್ಲವೆ ? ಯಾವುದು ತಾನೆ ತನ್ನನ್ನು ತಾನೇ ವಿಷಯೀಕರಿಸೀತು ? ಅಭ್ಯುಪಗಮೇನ (ಒಪ್ಪಿರುವುದರಿಂದ) ಎಂಬ ಮಾತನ್ನು ಉಪಯೋಗಿಸಿದ ಮಾತ್ರದಿಂದ ಎಲ್ಲರೂ ಅದನ್ನು ಒಪ್ಪುವುದಕ್ಕಾದೀತೆ ? ಎಂದೆನು. ಅಯ್ಯರು 'ಭಲೆ ! ಇದೀಗ ವಿಚಾರಸರಣಿ ! ಇರಲಿ ನಾಳೆ ಶಂಕರಶಾಸ್ತ್ರಿಗಳು ಬರುತ್ತಾರೆ ; ಅವರನ್ನು ಕೇಳೋಣ !' ಎಂದರು. ನನಗೆ ನಾನು ಹೇಳಿದ್ದೊಂದು ಯುಕ್ತಿಯುಕ್ತವಾದ ವಿಚಾರವೆಂದೇ ಆಯಿತಲ್ಲ ! ಎಂದು ಹಿಗ್ಗಿದೆನು. ಶಂಕರಶಾಸ್ತ್ರಿಗಳಲ್ಲಿ ಅಯ್ಯರವರಿಗೆ ಅಪರಿಮಿತ ಭಕ್ತಿಯಿತ್ತು. ಅವರು ಆಗಿಂದಾಗ್ಗೆ ನಮ್ಮ ಮನೆಗೆ ಬರುತ್ತಲೇ ಇದ್ದರು.ಈ ಸಲ ಅವರು ಬಂದಾಗ ಅಯ್ಯರು ಈ ವಿಷಯವನ್ನು ಪ್ರಸ್ತಾಪಿಸಿದರು. ವೃತ್ತಿಗೆ ಸ್ವವಿಷಯತ್ವವೂ ಉಂಟು - ಎಂಬುದಕ್ಕೆ ಅವರು ಕೆಲವು ಯುಕ್ತಿಗಳನ್ನೂ ಅನುಭವವನ್ನೂ ಹೇಳಿದರು ; ಆದರೂ ತನಗೆ ತಾನೇ ವಿಷಯವೆಂಬುದು ಹೇಗೆ ಸರಿ ? ಎಂಬ ಶಂಕೆ ಬಿಡಲಿಲ್ಲ. ನನಗೆ ವೇದಾಂತದ ವಿಷಯದಲ್ಲಿ ಸ್ವಲ್ಪ ಗೊತ್ತಿದೆ ಎಂದು ತೋರಿಸಿಕೊಳ್ಳುವ ಹವಣಿಕೆಯು ಇದರಿಂದಲೇ ನನಗೆ ಉಂಟಾಗಿರಬಹುದು. ಒಂದು ದಿನ ಅಯ್ಯರು ವೇದಾಂತ ವಿಷಯವಾಗಿ ಮಾತನಾಡುತ್ತಿದ್ದಾಗ ನಾನು ಯಾವುದೋ ಒಂದು ಶ್ಲೋಕವನ್ನು - ಅದು ಯಾವುದೋ ಎಲ್ಲಿಯೋ ಕೇಳಿದ್ದ ಶ್ಲೋಕ ಅದನ್ನು ಹೇಳಿಬಿಟ್ಟೆನು. ಅದು ಎಲ್ಲಿಯದೋ ? ಎಂದು ಅವರು ಕೇಳಿದ್ದಕ್ಕೆ ನಾನು ಲಿಂಗಪುರಾಣದ್ದು ಎಂದು ಬಿಟ್ಟೆನು. ನಿನ್ನಲ್ಲಿ ಆ ಪುರಾಣವಿದೆಯೆ ? ಎಂದು ಅವರು ಕೇಳಿದ್ದಕ್ಕೆ ಊರಲ್ಲಿದೆ ಎಂದು ಒಂದು ಸುಳ್ಳಿಗೆ ಇನ್ನೊಂದು ಸುಳ್ಳನ್ನು ಜೋಡಿಸಿದೆನು. ಅಯ್ಯರು ಕ್ಷಮಾಗುಣವಂತರು 'ಒಳ್ಳೆಯದು ಮತ್ತೆ ಬರುವಾಗ ಅದನ್ನು ತೆಗೆದುಕೊಂಡು ಬಾ' ಎಂದರು ! ಅದಿರಲಿ, ಅಯ್ಯರು ಬರಿಯ ವೇದಾಂತದ ಚರ್ಚೆಗೆ ಉಪಯೋಗಿಸದೆ ಸೂತಸಂಹಿತೆಯನ್ನು ಪುರಾಣರೂಪವಾಗಿ ಹೇಳುವದಕ್ಕೂ ಒಂದೆರಡು ದಿನ ರಾತ್ರಿಯ ಹೊತ್ತು ಪ್ರೋತ್ಸಾಹಿಸಿದರು. ನನಗೆ ವಿಷಯಗಳು ಗೊತ್ತಾಗದೆ ಇದ್ದಾಗ ತಾವೇ ಅರ್ಥವನ್ನು ಹೇಳುತ್ತಿದ್ದರು. ಸೂತಸಂಹಿತೆ ಎಂಬುದೊಂದು ಅವಶ್ಯವಾಗಿ ನೋಡಬೇಕಾದ ವೇದಾಂತ ಗ್ರಂಥವೆಂಬ ಭಾವವು ಇದರಿಂದ ನನ್ನ ಮನಸ್ಸಿನಲ್ಲಿ ಮೂಡಿಕೊಂಡಿತು.

ವೇದಾಂತವಿಚಾರವು ಬೆಳೆದುಕೊಳ್ಳುವುದಕ್ಕೆ ನನಗೆ ಇನ್ನೊಂದು ಬಗೆಯಲ್ಲಿಯೂ ಪ್ರೋತ್ಸಾಹವು ದೊರಕಿತು. ನನಗೆ ವಾರವನ್ನು ಕೊಟ್ಟಿದ್ದವರಲ್ಲಿ ಪ್ರೊಫೆಸರ್ (ಈಗ ರಾವ್ ಬಹದ್ದೂರ್) ವೆಂಕಟೇಶಾಚಾರ್ರ ತಂದೆ

ವಾಸುದೇವಾಚಾರ್‍ರು (?) ಒಬ್ಬರು. ಅವರು ಬಹಳ ಆಚಾರವಂತರು. ನಾನು ಸ್ಮಾರ್ತನಾದರೂ ಕೃಷ್ಣಸ್ವಾಮಿಅಯ್ಯರವರ ಮೇಲಿನ ಗೌರವದಿಂದ ನನಗೆ ಅವರು ವಾರವನ್ನು ಕೊಟ್ಟಿದ್ದರು. ಅವರು, ಊಟಕ್ಕೆ ನಾನು ಹೋದಾಗ ಅಯ್ಯರೊಡನೆ ನಾನು ಚರ್ಚಿಸುತ್ತಿದ್ದ ವೇದಾಂತವಿಷಯಗಳನ್ನು ಕುರಿತು ಆಗಾಗ್ಗೆ ಕೆಲವು ಒಗಟಿನ ಪ್ರಶ್ನೆಗಳನ್ನು ಹಾಕುತ್ತಿದ್ದರು. ನಾನು ನನಗೆ ತೋಚಿದ ಉತ್ತರಗಳನ್ನು ಕೊಡುತ್ತಿದ್ದೆ. ಒಂದು ದಿವಸ ಏಕಾದಶಿ, ಹುಡುಗರೊಡನೆ ನನಗೆ ಫಲಾಹಾರಕ್ಕೆ ಬಡಿಸಿದ್ದರು. 'ಅವರು ಜೀವನು ಬ್ರಹ್ಮಸ್ವರೂಪನೇ ಆದರೆ ಪಾಪಪುಣ್ಯ ಯಾರಿಗೆ ?' ಎಂದು ಕೇಳಿದರು. ನನಗೆ ಉತ್ತರವು ಹೊಳೆಯಲಿಲ್ಲ. 'ಒಂದು ಚಾಕುವಿನಿಂದ ಶರೀರವನ್ನು ಕೊಯ್ದರೆ ನೋವು ಯಾರಿಗೆ ಆಗುತ್ತದೆ ? ಬ್ರಹ್ಮಕ್ಕೋ, ಜೀವನಿಗೋ ?' ಎಂದು ಇನ್ನೊಂದು ಪ್ರಶ್ನೆಯನ್ನು ಹಾಕಿದರು. ನಾನು 'ಶರೀರಕ್ಕೆ' ಎಂದೆನು. 'ಶರೀರಕ್ಕೆ !' 'ಇದು ಹೇಗಾದೀತು ?' ಎಂದರು. 'ನೀವು ಚಾಕುವಿನಿಂದ ಕೊಯ್ದದ್ದು ಯಾರನ್ನು? ಆತ್ಮನನ್ನಲ್ಲವಷ್ಟೆ ?' ಎಂದೆನು. 'ಅವರು ಸರಿ, ಸರಿ ! ಕೊನೆಗೆ ಇದು ಚಾರ್ವಾಕವಾದಕ್ಕೇ ಇಳಿಯುತ್ತದೆ' ಎಂದರು. ಮಧ್ಯಾಹ್ನ ನಾನು ಬಂದಾಗ ಕೃಷ್ಣಸ್ವಾಮಿ ಅಯ್ಯರು, 'ಈ ದಿನ ಏನು ವಿಶೇಷ ?' ಎಂದು ಕೇಳಿದರು. ಅವರು ಪ್ರತಿದಿನವೂ ನನಗೆ ಬಡಿಸಿದ್ದ ಊಟದ ವಿಷಯವನ್ನು ಕೂಡ ವಿವರವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಅಷ್ಟು ಮಮತೆ, ಅವರಿಗೆ! ಆ ದಿನ ಏಕಾದಶಿಯ ಕಟ್ಟಲೆ ಏನೆಂದು ಅವರು ಪ್ರಶ್ನೆಹಾಕಿರಬಹುದು. ಆದರೆ ನಾನು ನನಗೂ ವಾಸುದೇವಾಚಾರ್ಯರಿಗೂ ಆದ ಸಂಭಾಷಣೆಯನ್ನು ಹೇಳಿದೆ. ಅಯ್ಯರು ಭೇಷ್ ನೀನು ಹೇಳಿದ್ದು ಎಲ್ಲವೂ ಸರಿಯಲ್ಲವಾದರೂ ಅಂಥ ಕುಚೋದ್ಯ ಪ್ರಶ್ನೆಗೆ ತಕ್ಕ ಉತ್ತರವೇ ಎಂದು ನನ್ನನ್ನು ಶ್ಲಾಘಿಸಿದರು. ವಾಸುದೇವಾಚಾರ್ಯರಿಗೂ ಅಯ್ಯರಿಗೂ ಆಗಾಗ್ಗೆ ದ್ವೈತಾದ್ವೈತ ವಿಷಯಗಳಲ್ಲಿ ಚರ್ಚೆಗಳು ಆಗುತ್ತಲೇ ಇದ್ದವು ; ಸಿದ್ಧಾಂತದ ಅಭಿಮಾನದಿಂದ ಒಬ್ಬೊಬ್ಬರಿಗೆ ಮತಭೇದವು ಹೇಗೆ ಉಂಟಾಗುತ್ತದೆ ಎಂಬುದರ ಅರಿವು ನನಗೆ ಆ ನಿಮಿತ್ತದಿಂದ ಉಂಟಾಯಿತು.

## ವಾರದ ಮನೆಗಳು :

ನನಗೆ ವಾರವನ್ನು ಕೊಟ್ಟಿದ್ದ ಇನ್ನು ಕೆಲವರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವೆನು. ಬಿ. ಶ್ರೀನಿವಾಸ ಅಯ್ಯರ್ (ಈಚೆಗೆ ಹೈಕೋರ್ಟು ಜಡ್ಜಿಗಳಾಗಿ ರಿಟೈರ್ ಆಗಿರುತ್ತಾರೆ) ಮನೆಯಲ್ಲಿ ನನಗೆ ಒಂದು ವಾರವಿತ್ತು. ಅವರ ಮನೆ (ಅದು ಅವರ ವಾಸದ ಮನೆ ಇರಬಹುದು) ಬಹಳ ದೊಡ್ಡದು, ನನಗೆ ಮನೆಯೊಳಕ್ಕೆ ಯಾವಕಡೆಯಿಂದ ಹೋಗಬೇಕೆಂಬುದೇ ಗೊತ್ತಾಗುತ್ತಿರಲಿಲ್ಲ. ಅಯ್ಯರು ಯಾವುದೋ ಪರೀಕ್ಷೆಗೆ ಓದುತ್ತಿದ್ದರೆಂದು ತೋರುತ್ತದೆ. ಅವರು ಆಗ ಧರ್ಮಶಾಸ್ತ್ರದ

ಸ್ಮೃತಿಗಳನ್ನು ವಿಮರ್ಶಿಸುತ್ತಿದ್ದರು. ಒಂದು ದಿನ ಅವರ ಮನೆಯಲ್ಲಿ ಅಪರೂಪವಾಗಿ ರಾಗಿಯ ಹಿಟ್ಟು ಮಾಡಿದ್ದರು. ಊಟ ಮಾಡುವಾಗ ಹಿಟ್ಟನ್ನು ಹೇಗೆ ತಿನ್ನಬೇಕೆಂಬ ವಿಷಯಕ್ಕೆ ಚರ್ಚೆ ಪ್ರಾರಂಭವಾಯಿತು. ಅಯ್ಯರು ಅದನ್ನು ಅಗಿದು ನುಂಗಬೇಕೇ ಹೊರತು ಹಾಗೇ ನುಂಗಬಾರದು ಎಂಬ ಮತವನ್ನು ಪ್ರದರ್ಶಿಸಿದರು. ಹಳ್ಳಿಯಲ್ಲಿ ರಾಗಿಯ ಮುದ್ದೆಯನ್ನು ಎಷ್ಟೋ ಸಲ ಉಂಡು ಅಭ್ಯಾಸವಾಗಿದ್ದ ನನಗೆ ಆ ವಿಷಯದಲ್ಲಿ ನನ್ನ ತಿಳುವಳಿಕೆಯ ಹೆಚ್ಚುಗಾರಿಕೆಯನ್ನು ಪ್ರದರ್ಶಿಸಲೇಬೇಕೆಂಬ ತವಕವುಂಟಾಯಿತು. ಕೂಡಲೇ ಹಿಟ್ಟನ್ನು ನುಂಗುವದೇ ಸರಿಯಾದ ಕ್ರಮ ; ಅದನ್ನು ಅಗಿಯ ಬೇಕಾದದ್ದಿಲ್ಲ ಎಂದು ಹೇಳಿದರೂ, ಅವರು ಹಿಟ್ಟನ್ನು ತಿಂದಾಗ ಅದಕ್ಕೆ ಹೊಟ್ಟೆಯಲ್ಲಿ ಆಗುವ ಪರಿಣಾಮವೇ ಮುಂತಾದದ್ದನ್ನು ಶರೀರಶಾಸ್ತ್ರದ ಆಧಾರದಿಂದ ವಿವರಿಸುವುದಕ್ಕೆ ಆರಂಭಿಸಿದರು. ನಾನು ಮತ್ತೇನೂ ತಿಳಿಯದೆ 'ಹಿಟ್ಟು ನುಂಗುವರಿನ್ನೆಷ್ಟು ಧನ್ಯರೊ ದೇವ !' ಎಂಬ ದಾಸರ ಪದವನ್ನು ಪ್ರಮಾಣವಾಗಿ ಉದಾಹರಿಸಿದೆನು. ಎಲ್ಲರೂ ನಕ್ಕರು. ಈ ಅಯ್ಯರ ಮನೆಯಲ್ಲಿ ನನಗೊಂದು ಪ್ರೈವೆಟ್ ಟ್ಯೂಷನ್ ಲಭಿಸಿತ್ತು. 'ನಿಮಗೆ ಎಷ್ಟು ಫೀ ಕೊಡಿಸಬೇಕು ? ಹತ್ತುರೂಪಾಯಿ ಸಾಕೆ ?' ಎಂದು ಅವರು ಕೇಳಿದ್ದಕ್ಕೆ ನನಗೆ ಅಷ್ಟೊಂದನ್ನು ತೆಗೆದುಕೊಳ್ಳುವುದು ಅನ್ಯಾಯವೆಂತ ತೋರಿತು. 'ಬೇಡಿ, ಬೇಡಿ ! ಅಷ್ಟೊಂದೇಕೆ ?' ಎಂದೆನು. ಅಯ್ಯರು ನನ್ನ ಅಲ್ಪ ತುಷ್ಟಿಯನ್ನು ಪ್ರಶಂಸೆ ಮಾಡಿ ಕೃಷ್ಣಸ್ವಾಮಿ ಅಯ್ಯರಿಗೆ ಹೇಳಿದರಂತೆ. ನನಗೆ ತಿಂಗಳಿಗೆ 10 ರೂ.ಗಳ ಮೇಷ್ಟರು ಕೆಲಸ ಸಿಕ್ಕಿದರೆ ಸಾಕು ಎಂಬ ಭಾವನೆಯೇ ಬಹುದಿನಗಳವರೆಗೆ ಇತ್ತು. ಸಂಬಳ ಮುಖ್ಯವಲ್ಲ, ಮೇಷ್ಟರಾಗಬೇಕು ಎಂಬ ಆಶೆ ಮಾತ್ರ ಬಹಳವಾಗಿ ಪೀಡಿಸುತ್ತಿತ್ತು. ಕೊನೆಗೆ ಸುಮಾರು ಐದಾರು ರೂಪಾಯಿಗಳು ಕೊಡುತ್ತಿದ್ದರೆಂದು ಕಾಣುತ್ತದೆ. ಅದರಿಂದ ಕೆಲವು ಸಂಸ್ಕೃತ ಪುಸ್ತಕಗಳನ್ನು ನಾನು ಕೊಂಡುಕೊಂಡೆನು.

ಇನ್ನೊಂದು ವಾರದ ಮನೆ ನಂಜುಂಡಯ್ಯನವರು. ಅವರಿಗೆ ಹೆಣ್ಣುಮಕ್ಕಳು ಹೆಚ್ಚು. ಅವರ ಮನೆಯಲ್ಲಿ ನನ್ನನ್ನು ಬಹಳ ಆದರದಿಂದ ನೋಡುತ್ತಿದ್ದರು. ಮನೆಗೆ ಹೋದಾಗ ಏನಾದರೂ ತಿಂಡಿ ತೀರ್ಥ ಕೊಡುತ್ತಿದ್ದರು. ಅವರಿಗೆ ನನ್ನ ವಿದ್ಯಾಭ್ಯಾಸಕ್ರಮ, ವಿನಯ ಇವುಗಳೆಲ್ಲ ಬಹಳವಾಗಿ ಮನಸ್ಸಿಗೆ ಬಂತೆಂದು ಕಾಣುತ್ತದೆ. ಒಂದು ದಿನ ಅಯ್ಯರವರಲ್ಲಿ ತಮ್ಮ ಮಗಳನ್ನು ನನಗೆ ಕೊಟ್ಟು ವಿವಾಹ ಮಾಡಿಸುವ ವಿಷಯವನ್ನು ಅವರು ಪ್ರಸ್ತಾಪಿಸಿದರು. ಆದರೆ ನನಗೆ ಈ ಮೊದಲೇ ಮದುವೆಯಾಗಿದೆ ಎಂಬ ವಿಷಯವನ್ನು ತಿಳಿದು ಅವರಿಗೆ ಆಶ್ಚರ್ಯವೂ ಆಶಾಭಂಗವೂ ಆಯಿತು. ನನ್ನ ಗುಟ್ಟು ಹೀಗೆ ರಟ್ಟಾಯಿತಲ್ಲಾ ಎಂದು ನನಗೂ ಸ್ವಲ್ಪ ಮನಃ ಖೇದವುಂಟಾಯಿತು. ಅಲ್ಲಿಂದ ಮುಂದಕ್ಕೆ ಅವರ ಮನೆಯಲ್ಲಿ ನನಗಿದ್ದ

ವಿಶೇಷಾದರವು ಕಡಿಮೆಯಾದರೂ ಊಟದ ಆನುಕೂಲ್ಯವೇನೋ ಮೊದಲಿನಂತೆಯೇ ಇರುತ್ತಿತ್ತು.

ಪ್ರೊ. ವಿಜಯರಾಘವಾಚಾರ್ರವರ ಮನೆಯಲ್ಲಿ ಮತ್ತೊಂದು ವಾರವಿತ್ತು. ಅವರು ಬಹಳ ಆದರದಿಂದಲೇ ನನ್ನನ್ನು ಕಾಣುತ್ತಿದ್ದರಾದರೂ ಮನೆಯಲ್ಲಿದ್ದ ಹೆಂಗಸರು - ಅವರ ತಾಯಿಯಿರಬಹುದೇನೋ - ಮಡಿಯ ನಿಮಿತ್ತದಿಂದ ನನ್ನನ್ನು ಉಂಡಎಲೆಯನ್ನು ಎತ್ತಿಹಾಕುವಂತೆ ಹೇಳಿದ್ದರು. ಮನೆಯಲ್ಲಿ ನಮ್ಮ ತಾಯಿ ಮುಂತಾದವರು ಮಡಿಯಲ್ಲಿದ್ದರೆ ನಾನು ಮೈಲಿಗೆಯಿಂದಲೇ ಊಟ ಮಾಡಿದಾಗ ಎಂಜಲೆಲೆಯನ್ನು ಎತ್ತಿಹಾಕಿದ ಅಭ್ಯಾಸವೂ ನನಗೆ ಇತ್ತಾದ್ದರಿಂದ ಅದೇನೂ ನನಗೆ ಅಪಮಾನಕರವಾದದ್ದೆಂತ ನಾನು ಭಾವಿಸಲಿಲ್ಲ. ಆದರೆ ಈ ವಿಷಯಕ್ಕೆ ಅಯ್ಯರವರ ಅಭಿಪ್ರಾಯವು ಬೇರೆಯಾಗಿತ್ತು. ಒಂದು ದಿನ ಮಾತಿನ ಪ್ರಸಂಗವಶದಿಂದ ಈ ಆಚಾರದ ಸಮಾಚಾರವನ್ನು ತಿಳಿದುಕೊಂಡಕೂಡಲೇ ಅವರು 'ಇನ್ನು ಮೇಲೆ ಅವರ ಮನೆಗೆ ಊಟಕ್ಕೆ ಹೋಗಬೇಡ ; ಆ ದಿನ ನಮ್ಮ ಮನೆಯಲ್ಲಿಯೇ ಊಟಮಾಡು !' ಎಂದು ಕಟ್ಟುಮಾಡಿದರು. ಪೆಟ್ಟಿಗೆ ಗಾಡಿಯಲ್ಲಿ ನಾವಿಬ್ಬರೂ ಕಾಲೇಜಿಗೆ ಹೋಗುತ್ತಿದ್ದಾಗ ವಿಜಯರಾಘವಾಚಾರ್ಯರು ನಡೆದುಕೊಂಡು ಬರುತ್ತಿದ್ದದ್ದನ್ನು ಕಂಡು, ಅಯ್ಯರು ಅವರನ್ನು ಕರೆದು ಗಾಡಿಯಲ್ಲಿ ಕುಳ್ಳಿರಿಸಿ ಕೊಂಡರು. ದಾರಿಯಲ್ಲಿ ಅಯ್ಯರು ಸಾಮಾನ್ಯವಾಗಿ ವಿಷ್ಣುಸಹಸ್ರನಾಮವನ್ನು ಹೇಳುತ್ತಾ ಮೌನವಾಗಿಯೇ ಇರುತ್ತಿದ್ದರು. ಒಂದೊಂದು ಸಲ ವಿಶೇಷವೇನಾದರೂ ಇದ್ದರೆ ನನ್ನೊಡನೆ ಅವರು ಆ ವಿಷಯಕ್ಕೆ ಸಂಭಾಷಣೆ ಮಾಡುತ್ತಿದ್ದರು. ಇಂಥ ಸಂಭಾಷಣೆಯಿಂದಲೂ ನನಗೆ ಎಷ್ಟೋ ಉತ್ತಮ ವಿಚಾರಗಳು ಮನಸ್ಸಿಗೆ ನಾಟುತ್ತಿದ್ದವು. ಈ ದಿನ ಅವರು ಸಹಸ್ರನಾಮವನ್ನು ಹೇಳಿ ಮುಗಿಸುತ್ತಲೂ ಪ್ರೊಫೆಸರರೊಡನೆ ಮಾತಿಗೆ ಪ್ರಾರಂಭಿಸಿ 'ಇದೆಲ್ಲ ಸರಿಯೆ, ನೀವು ಈ ಸುಬ್ಬರಾಯನಿಂದ ಏತಕ್ಕೆ ಊಟದೆಲೆ ತೆಗೆಸುತ್ತಿದ್ದೀರಿ ?' ಎಂದು ಕೇಳಿಬಿಟ್ಟರು. ನನಗೆ ಎದೆ ಧಕ್ಕೆಂದಿತು. ಇವರ ವಿಷಯಕ್ಕೆ ನಾನು ದೂರು ಹೇಳಿದೆನೆಂದು ಎಲ್ಲಿ ತಿಳಿದುಕೊಳ್ಳುವರೊ ಎಂಬ ಚಿಂತೆ ನನಗೆ. ನಿಜವಾಗಿ ನಾನೇನೂ ದೂರು ಹೇಳಿರಲಿಲ್ಲ. ಅಯ್ಯರವರೇ ಈ ವಿಷಯವನ್ನು ಹೇಗೋ ಪ್ರಶ್ನೆ ಹಾಕಿ ನನ್ನಿಂದ ನಿಜವನ್ನು ತಿಳಿದುಕೊಂಡಿದ್ದರು. ವಿಜಯರಾಘವಾಚಾರ್ರು 'ನನಗೇನೂ ಇಂಥ ಆಚಾರಗಳಲ್ಲಿ ವಿಶೇಷವಾದ ಆದರವಿಲ್ಲ; ಆದರೆ ಮನೆಯಲ್ಲಿ ಹೆಂಗಸರ ಮಿತಿಮೀರಿದ ಮಡಿಯ ಭಾವನೆಯಿಂದ ಇದಕ್ಕೆ ಅವಕಾಶವನ್ನು ಕೊಡಬೇಕಾಯಿತು' ಎಂದು ಸಂಕೋಚದಿಂದ ಉತ್ತರವಿತ್ತರು. ಅಯ್ಯರು ಅಷ್ಟಕ್ಕೂ ಸುಮ್ಮನಿರಲಿಲ್ಲ. ಹೆಂಗಸರ ಭಾವನೆ ಅವರ ಬುದ್ಧಿಯ ಅಂತಸ್ತಿಗೆ ತಕ್ಕದೇ ಸರಿ ; ಆದರೆ ನೀವೇ ಇವನ ಎಲೆತೆಗೆದು ಹಾಕಬಾರದಿತ್ತೆ ? 'ಮನೆಗೆ ಬಂದ ಅತಿಥಿ ಅಭ್ಯಾಗತರ ಊಟದ ಎಲೆಯನ್ನು

ಎತ್ತಿಹಾಕುವದೇನು ಪಾಪದ ಕೆಲಸವೆ ?' ಎಂದರು. ಸಂಭಾಷಣೆಯು ಬೇರೊಂದು ಕಡೆಗೆ ತಿರುಗಿತು. ಈ ಘಟನೆಯಿಂದ ನನ್ನ ಮನಸ್ಸಿಗೇನೋ ಸ್ವಲ್ಪ ವ್ಯಾಕುಲವಾಯಿತು. ಆದರೆ ಅಯ್ಯರವರು ಸಾಮಾನ್ಯನಾದ ಒಬ್ಬ ವಿದ್ಯಾರ್ಥಿಯ ವಿಷಯಕ್ಕೆ ಸ್ಥಾನ ಮಾನಗಳನ್ನು ಗಣಿಸುವಂಥ ಉದಾರ ಮನಸ್ಸಿನವರೆಂಬುದು ನನಗೆ ಈಗ ವ್ಯಕ್ತವಾಯಿತು.

## ಅಯ್ಯರವರ ಸಹಾನುಭೂತಿ :

ಕೃಷ್ಣಸ್ವಾಮಿ ಅಯ್ಯರವರು ನನ್ನಲ್ಲಿ ಎಷ್ಟು ಸಹಾನುಭೂತಿಯಿಂದ ನೋಡುತ್ತಿದ್ದರೆಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಒಂದು ದಿನ ನನ್ನ ಹೆಸರಿಗೆ ಊರಿನಿಂದ ಒಂದು ಕಾಗದ ಬಂತು. ಅದು ಅಯ್ಯರವರ ಕೈಗೆ ಸಿಕ್ಕಿತು. ಅದರಲ್ಲಿ ನಮ್ಮ ದೊಡ್ಡಣ್ಣನವರು ಕಾಲವಾದರೆಂಬ ಸಂಗತಿಯಿತ್ತು. (ದೊಡ್ಡಣ್ಣನವರಲ್ಲಿ ತಂದೆಯವರಿಗೆ ಬಹಳ ಪ್ರೀತಿ, ಅವರು ಊರಿಗೆ ಬಂದಾಗ ಏಕಾಂತದಲ್ಲಿ ಕುಟುಂಬದ ಸ್ಥಿತಿಗತಿಗಳ ವಿಷಯವನ್ನು ಆಲೋಚನೆ ಮಾಡುತ್ತಿದ್ದರು. ಜೇಷ್ಠಪುತ್ರರಾದ್ದರಿಂದ ಇನ್ನು ಮುಂದೆ ಅವರು ತಮ್ಮ ಭಾರವನ್ನೆಲ್ಲ ಹೊತ್ತು ಕುಟುಂಬ ರಕ್ಷಣೆ ಮಾಡಬೇಕಾಗುವದೆಂಬ ಮುಂದಾಲೋಚನೆ ಅವರ ಮನಸ್ಸಿನಲ್ಲಿ ಆಗಲೆ ಮಿಂಚಿರಬೇಕು. ಆದರೆ ದೈವೇಚ್ಛೆ ಬೇರೆಯಾಗಿತ್ತು. ಅವರ ಕಣ್ಣು ಮುಂದೆಯೇ, ಅವರು ಕಟ್ಟಿದ ಮನೆಯಲ್ಲಿ ಅಣ್ಣನವರು ಸರ್ಕೀಟಿಗೆಂದು ಬೀರೂರಿಗೆ ಬಂದಿದ್ದವರು ಸ್ವಲ್ಪ ಕಾಲರಾ ತರಹದ ಅಜೀರ್ಣಕ್ಕೆ ವಶರಾಗಿ ಊರಿಗೆ ಬಂದು ದೇಹವನ್ನು ತ್ಯಜಿಸಿದರು. ಇದರಿಂದ ತಂದೆಯವರ ಉತ್ಸಾಹವು ಬಹಳ ಕುಗ್ಗಿಹೋಯಿತು. ಮುಂದೆ ನಾನು ಅವರನ್ನು ಕಂಡಾಗ ಅವರ ಮುಖದ ಮೇಲೆ ಮುಪ್ಪಿನ ಚಿಹ್ನೆಗಳು ಮೊದಲಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗೋಚರವಾದವು. ಈ ಪ್ರಾಸಂಗಿಕವಾದ ವಿಷಯವಂತಿರಲಿ) ಅಯ್ಯರು ನನ್ನನ್ನು ನಿಧಾನವಾಗಿ ಹತ್ತಿರಕ್ಕೆ ಕರೆದು ಬಟ್ಟೆಗಳನ್ನೆಲ್ಲ ಅಗಸನಿಗೆ ಹಾಕುವಂತೆ ಹೇಳಿದರು. 'ಇನ್ನು ಯಾವದಾದರೂ ಬಟ್ಟೆಯಿದ್ದರೆ ಹಾಕಿಬಿಡು !' ಎಂದು ಅವರು ಹೇಳಿದ್ದರಲ್ಲಿ ನನಗೆ ಏನೋ ಶಂಕೆಯುಂಟಾಗಿ ಸಮಾಚಾರವೇನೆಂದು ವಿಚಾರಿಸಿದ್ದಲ್ಲಿ 'ಕಳ್ಳಂಬಳ್ಳೆಯಲ್ಲಿ ನಿನಗೆ ಯಾರು ಸಮೀಪದ ಬಂಧುಗಳು ಇದ್ದಾರೆ ಎಂದು ಕೇಳಿದರು ? ಕಳ್ಳಂಬಳ್ಳೆಯಲ್ಲ ಯಳ್ಳಂಬಳಸೆ ; ಅಲ್ಲಿ ನಮ್ಮ ತಂದೆ, ತಾಯಿ, ಅಕ್ಕ ಇವರೆಲ್ಲ ಇದ್ದಾರೆ' ಎಂದೆನು. 'ಅಲ್ಲ, ಇವರಲ್ಲದೆ ಇನ್ನೂ ಯಾರು ಇದಾರೆ ?' ಎಂದರು ನನಗೆ ಏನೂ ತೋಚಲಿಲ್ಲ ಕೊನೆಗೆ ಕಾಗದವನ್ನು ಕೊಟ್ಟರು. ಸಂಗತಿಯೆಲ್ಲ ಗೊತ್ತಾಯಿತು. ನಮ್ಮ ಅಣ್ಣಂದಿರು ಹೋಗಿದ್ದಾರೆಂಬುದನ್ನು ತಿಳಿದು ಕೂಡಲೆ ಮೃತಾಶೌಚ ನಿಮಿತ್ತವಾಗಿ ಸ್ನಾನಮಾಡಿಸಿ 'ಮುಂದಿನ ಕ್ರಮಕ್ಕೆ ಏನು

ಏರ್ಪಾಡು ನಡೆದಿದೆ ? ವಿಚಾರಿಸು' ಎಂದರು ! ನಾನು ಪ್ರತಿಯೊಂದು ಸಣ್ಣ ವಿಷಯಕ್ಕೆ ಅವರ ಪಾಲಿಗೆ ಅವರ ಕುಟುಂಬದಲ್ಲಿಯೇ ಒಬ್ಬನಾಗಿದ್ದೆನು. ಇನ್ನೊಂದು ಸಲ ನನಗೆ ಕಡೂರಿನಿಂದ ತಾಲ್ಲೂಕು ಕಚೇರಿಯಿಂದ ಒಂದು ಹುಕುಂ ಬಂತು. 'ಇನ್ನು ಮುಂದಕ್ಕೆ ರಜ ಕೊಡುವುದು ಆಗುವುದಿಲ್ಲ; ಈ ಕೂಡಲೆ ಕೆಲಸಕ್ಕೆ ಹಾಜರಾಗಬೇಕು, ಇಲ್ಲದಿದ್ದರೆ ಕೆಲಸದಿಂದ ವಜಾಮಾಡಲಾಗುತ್ತದೆ, ತಿಳಿಯುವುದು' ಎಂದಿತ್ತು ಒಕ್ಕಣೆ ! ನಾನು 'ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೇನೆ' ಎಂದು ಬರೆದು ನಡೆದದ್ದನ್ನೆಲ್ಲ ಅಯ್ಯರಿಗೆ ತಿಳಿಸುವುದು ಯುಕ್ತವೆಂದುಕೊಂಡದ್ದರಿಂದ ರಾಜಿನಾಮೆ ಪತ್ರವನ್ನು ತೋರಿಸಿದೆ, ಇಷ್ಟರಲ್ಲಿ ಇನ್ನೊಂದು ವಿಚಿತ್ರ ಘಟನೆಯು ನಡೆದಿತ್ತು. ನಾನು ಆಗಾಗ್ಗೆ ಬೆಂಗಳೂರಿನಲ್ಲಿದ್ದ 'ಶ್ರೀನಿವಾಸ ಮಂದಿರಮ್' ಎಂಬ ಸಂಸ್ಥೆಯ ಲೈಬ್ರರಿಗೆ ಆಗಾಗ್ಗೆ ಸಾಯಂಕಾಲ ಹೋಗಿ ಅಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಓದುವುದು, ವರ್ತಮಾನ ಪೇಪರುಗಳನ್ನು ನೋಡುವುದು - ಹೀಗೆ ಮಾಡುತ್ತಿದ್ದೆನು. ಆ ಸಂದರ್ಭದಲ್ಲಿ ಹಿಂದೂ ಪತ್ರಿಕೆಯಲ್ಲಿ **Wanted** (ಬೇಕಾಗಿದ್ದಾರೆ), ಎಂಬ ಕಾಲಂನಲ್ಲಿ ಬರೆದಿದ್ದ ಜಾಹಿರಾತು ನೋಡಿ, ಕೆಲವು ಕೆಲಸಗಳಿಗೆ ಅರ್ಜಿಹಾಕಿದ್ದೆನು; ಅದಕ್ಕೆ ಉತ್ತರವಾಗಿ ಹೊಸಪೇಟೆಯಲ್ಲಿ ತಾಲ್ಲೂಕು ಕಚೇರಿಯಲ್ಲಿ ತಿಂಗಳಿಗೆ 30ರೂಗಳ ಮೇಲೆ ಏಳನೆ ಗುಮಾಸ್ತೆಯ ಕೆಲಸಕ್ಕೆ ಮೊಕರಾರು ಮಾಡಿದ ಒಂದು ಆರ್ಡರು ಬಂದಿತ್ತು. ಈಗ ಶರೀರದಲ್ಲಿ ಅಷ್ಟು ಸ್ವಾಸ್ಥ್ಯವೂ ಇರಲಿಲ್ಲ. ಕಡೂರಿನ ಕೆಲಸಕ್ಕೇನೋ ರಾಜಿನಾಮೆ ಕೊಡಬಹುದು ; ಆದರೆ ಶರೀರಾರೋಗ್ಯವಿಲ್ಲದಾಗ ಹೊಸಪೇಟೆಗೆ ಹೇಗೆ ಹೋಗಲಿ ? ಹೋಗದಿದ್ದರೆ ಕೈಗೆ ಬಂದ ಕೆಲಸವೇ ಹೋಗಿಬಿಡುವುದಲ್ಲ ! ಎಂದು ಪೀಕಲಾಟಕ್ಕೆ ಇಟ್ಟುಕೊಂಡಿತ್ತು. ಅಯ್ಯರು ನಾನು ಹೇಳಿದ್ದನ್ನೆಲ್ಲ ಸಾವಧಾನವಾಗಿ ಕೇಳಿ ಎರಡೂ ಕೆಲಸಗಳನ್ನು ಏಕಕಾಲಕ್ಕೆ ಮಾಡುವುದು ಸರಿಯಲ್ಲ, ಕೆಲಸದ ವಿಚಾರವನ್ನು ಮನಸ್ಸಿಗೆ ಹತ್ತಿಸಿಕೊಳ್ಳದೆ ಮುಂದಕ್ಕೆ ಓದು, ನಿನಗೆ ಒಳ್ಳೆಯದಾಗುತ್ತದೆ. ಹಾಗಿಲ್ಲದೆ ಕೆಲಸಕ್ಕೆ ಹೋಗಲೇಬೇಕೆಂದು ನಿನಗೆ ತೋಚಿದರೆ ಹೊಸಪೇಟೆಯೇ ಉತ್ತಮ, ಆದರೆ ಎಚ್ಚರಿಕೆ ! ಅಲ್ಲಿ ಮಾಧ್ವರು ಹೆಚ್ಚಾಗಿರುತ್ತಾರೆಂದು ಕೇಳಿದ್ದೇನೆ. ಹಣೆಗೆ ಬರಿಯ ಅಕ್ಷತೆಯನ್ನೇ ಇಟ್ಟುಕೊ ! ಯಾರಲ್ಲಿಯೂ ಹೆಚ್ಚಾಗಿ ಮಾತನಾಡಬೇಡ, ಯಾರಲ್ಲಿಯೂ ದ್ವೇಷವನ್ನು ಕಟ್ಟಿಕೊಳ್ಳಬೇಡ, ಕೆಲಸವನ್ನು ಚೆನ್ನಾಗಿ ಕಲಿತುಕೊ. ಆದರೆ ರಿಕಾರ್ಡು ತೆಲುಗಿನಲ್ಲಿದೆಯೊ, ಏನೋ ! ಸ್ವಲ್ಪ ಆ ಭಾಷೆಯನ್ನು ಕಲಿತುಕೊಳ್ಳುವುದು ಉತ್ತಮ ! 'ಮೊದಲು ನನಗೆ ಇಂಗ್ಲೀಷು ಬರವಣಿಗೆಯನ್ನು ಕೊಡಿರಿ, ತೆಲುಗು ಕಲಿತುಕೊಳ್ಳುತ್ತೇನೆ' ಎಂತ ಹೇಳಿಕೊ' ಎಂದು ಮುಂತಾಗಿ ತಂದೆಯು ಮಗನಿಗೆ ಬುದ್ಧಿಹೇಳುವಂತೆ ತಿಳಿವಳಿಕೆ ಕೊಟ್ಟರು. ಹೀಗಿತ್ತು, ಅವರ ಸಾದರ ಪ್ರೇಮ !

## ಕಡೂರಿಗೆ ಪುನರಾವೃತ್ತಿ :

ಅಂತೂ ಇಲ್ಲಿಗೆ ನನ್ನ ಓದು ಪರಿಸಮಾಪ್ತಿಯಾಯಿತು, ಪರಿಚಯವಿಲ್ಲದ ಹೊಸಪೇಟೆಗೆ ಹೋಗಿ ಅಲ್ಲಿ 30ರೂ ಕೆಲಸದ ಮೇಲೆ ಇದ್ದು ತೊಂದರೆಗಳನ್ನು ಅನುಭವಿಸುವುದಕ್ಕಿಂತ ಮೊದಲಿನಿಂದಲೂ ಪರಿಚಿತವಾಗಿರುವ ಕಡೂರಿಗೆ ಹೋಗುವುದೇ ಮೇಲು ಎಂದುಕೊಂಡು ಗಂಟುಮೂಟೆ ಕಟ್ಟಿದೆನು. ಅಯ್ಯರವರ ಅನುಮತಿ ಪಡೆದು ಪುಸ್ತಕಗಳ ಗಂಟನ್ನು ಹೊತ್ತುಕೊಂಡು ಚಿಕ್ಕಪೇಟೆಯ ಮಾರ್ಗವಾಗಿ ರೈಲಿಗೆ ಹೊರಟೆನು. ಅಲ್ಲಿ ಒಂದು ಪುಸ್ತಕದ ಅಂಗಡಿಯಲ್ಲಿ 'ಯಾವುದಾದರೊಂದು ಅಗ್ಗವಾದ ಸಣ್ಣಪುಸ್ತಕವನ್ನು ಓದುವುದಕ್ಕೆ ಕೊಡಿ ; ಎಂದು ಕೇಳಿದೆನು. ಪುಣ್ಯಕ್ಕೆ ವಿವೇಕಚೂಡಾಮಣಿಯ ಪುಸ್ತಕವನ್ನು ಕೊಟ್ಟರು. ಅದು ಶಂಕರಾಚಾರ್ಯರ ಕೃತಿ ಎಂದು ಪ್ರಸಿದ್ಧವಾಗಿದೆ ಎಂಬುದು ಕೂಡ ನನಗೆ ಆಗ ತಿಳಿಯದು ; ಅದನ್ನು ಜೇಬಿನಲ್ಲಿ ಹಾಕಿಕೊಂಡು ಟಿಕೆಟ್‌ಚಾರ್ಜು ತೀರಅಲ್ಪ (ರೂ. 1-5-3)ವಾಗಿದ್ದ ಮಿಕ್ಸೆಡ್ ಟ್ರೇನ್ (ಗೂಡ್ಸ್‌ಗಾಡಿ, ಪ್ರಯಾಣಿಕರ ಗಾಡಿ ಸೇರಿದ್ದ ರೈಲಿ)ನಲ್ಲಿ ಹೊರಟೆನು. ರೈಲು ಹೋಗುವುದು ಬಹಳ ನಿಧಾನ. ಒಂದೊಂದು ಸ್ಟೇಷನ್ನಿನಲ್ಲಿಯೂ ನಿಲ್ಲುತ್ತಿತ್ತು. ಆದರೆ ಆ ಹೊಸ ಪುಸ್ತಕವನ್ನು ಓದುವದರಲ್ಲಿ ಮುಳುಗಿಹೋಗಿದ್ದ ನನಗೆ ಬೇಸರವೆಂಬುದೇ ತಲೆದೋರಲಿಲ್ಲ. ಗ್ರಂಥದ ಲಲಿತವಾದ ಶೈಲಿ, ಅದರಲ್ಲಿದ್ದ ಹೊಸ ಹೊಸ ವಿಷಯಗಳಿಂದ ನನ್ನ ಮನಸ್ಸಿನ ಮೇಲೆ ಆದ ಪರಿಣಾಮ, ಇವುಗಳನ್ನು ವರ್ಣಿಸಲಾರೆ. ನಾನು ರಜಾಕಾಲದಲ್ಲಿ ಊರಿಗೆ ಹೋಗುವಾಗಲೆಲ್ಲ ಕಡೂರಿನ ಪೋಸ್ಟಾಫೀಸಿನ ಬಾಗಿಲ ಮುಂದೆ ಇದ್ದ ಕಲ್ಲಿನಜಗಲಿಯ ಮೇಲೆ ಮಲಗಿದ್ದು ಬೆಳಗಿನ ಜಾವದಲ್ಲಿ ಜನರು ಏಳುವ ಮುಂಚೆಯೇ ಎದ್ದು ಊರಕಡೆಗೆ ಹೋಗುವ ಪದ್ಧತಿ. ಈ ಸಲವೂ ಹಾಗೇ ಮಾಡಿದೆ. ದಾರಿಯಲ್ಲಿ ಹೋಗುವಾಗ ಶಂಖತೀರ್ಥದ ಹೊಳೆ ಜೋರಾಗಿ ಬಂದಿತ್ತು. ಆದರೆ ಊರಿಗೆ ಹೋಗಬೇಕೆಂಬ ಮನಸ್ಸಿನ ವೇಗದಲ್ಲಿ ಎದೆಯುದ್ದ ನೀರಿದ್ದರೂ ಈಜು ಬಾರದೆ ಇದ್ದ ನಾನು ದಿಟ್ಟತನದಿಂದ ಪುಸ್ತಕದ ಗಂಟನ್ನೂ ಹೊತ್ತುಕೊಂಡು ನದಿಯನ್ನು ದಾಟಿಬಿಟ್ಟೆನು. ಅವಿವೇಕದಿಂದ ನಾವು ಮಾಡುವ ಕೆಲಸದಲ್ಲಿಯೂ ಭಗವಂತನು ಹೇಗೋ ನಮ್ಮನ್ನು ಪಾರುಮಾಡುತ್ತ ಬಂದಿರುತ್ತಾನೆಂಬುದಕ್ಕೆ ಅದೊಂದು ಸಣ್ಣ ನಿದರ್ಶನವೆನ್ನಬಹುದು. ಸರಿ ! ಒಂದೆರಡು ದಿನ ಊರಿನಲ್ಲಿ ಸುಧಾರಿಸಿಕೊಂಡು ಮತ್ತೆ ಓವರ್ಸಿಯರ್ ಕೆಲಸಕ್ಕೆ ಸೇರಿಕೊಂಡೆನು.

## 16. ಓವರ್ಸಿಯರಿಗೆ ವಿದ್ಯಾಭ್ಯಾಸ ಇಲಾಖೆಯ ಒಲವು

### ಮುಸಾಫಿರುಖಾನೆಯಲ್ಲಿ ವಾಸ:

ಕಡೂರಿಗೆ ನಾನು ಹಿಂತಿರುಗುವ ಹೊತ್ತಿಗೆ ಅಮಲ್ದಾರರು ಕೃಷ್ಣಶಾಸ್ತ್ರಿಗಳವರಿಗೆ ವರ್ಗವಾಗಿತ್ತು. ಅವರ ಸ್ಥಾನಕ್ಕೆ ಬಂದಿದ್ದ ಲಕ್ಷ್ಮಣಶಾಸ್ತ್ರಿಗಳವರು ನನ್ನನ್ನು ಕಾಣದೆ ಇದ್ದರೂ ತಿಂಗಳಿಗೆ 15ರೂ ತಲುಬಿನ ಡೆಪ್ಯುಟಿಗುಮಾಸ್ತೆಯ ಕೆಲಸಕ್ಕೆ ಶಿಫಾರಸು ಮಾಡಿದ್ದರಂತೆ. ಆದರೆ ರಜದ ಮೇಲಿದ್ದ ನಾನು ಎಷ್ಟು ದಿನವಾದರೂ ಬಂದು ಕೆಲಸಕ್ಕೆ ಸೇರದೆ ಇದ್ದದ್ದರಿಂದ ಅದು ತಪ್ಪಿಹೋಗಿತ್ತು. ಈಗ್ಗೆ ಒಬ್ಬ ಅಬ್ರಾಹ್ಮಣರು ಹೊಸ ಅಮಲ್ದಾರರು ಬಂದು ಕೆಲಸಕ್ಕೆ ಸೇರಿದ್ದರು ಶಿರಸ್ತೆದಾರರೂ ಹೊಸಬರು, ಊರಿನಲ್ಲಿ ಪ್ಲೇಗು ಸೂಚನೆಗಳು ಕಾಣಿಸಿಕೊಂಡಿದ್ದವು. ನಾನು ಮನೆಯವರನ್ನು ಊರಲ್ಲೆ ಬಿಟ್ಟು ಮುಸಾಫಿರ್ ಖಾನೆಯಲ್ಲಿ ತತ್ಕಾಲಕ್ಕೆ ಇಳಿದುಕೊಂಡಿದ್ದೆನು. ನನ್ನಂತೆಯೇ ಅಲ್ಲಿ ಟ್ರಾಫಿಕ್ ಇನಸ್ಪೆಕ್ಟರೊಬ್ಬರು ; ಇನ್ನೂ ಒಬ್ಬಿಬ್ಬರು ಬೇರೆ ಇದ್ದರು. ಇನಸ್ಪೆಕ್ಟರು ಏನೋ ಕಾರಣದಿಂದ ತಮ್ಮಲ್ಲಿದ್ದ ಇಂಗ್ಲೀಷು ಪ್ರಬುದ್ಧಭಾರತದ ಕೆಲವು ಸಂಚಿಕೆಗಳನ್ನು ಹೊರಕ್ಕೆ ಬಿಸಾಡಿದರು. ಅವುಗಳನ್ನು ನಾನು ಆರಿಸಿಕೊಂಡು ಓದಿ, ಕೆಲವು ವಿಷಯಗಳನ್ನು ಗ್ರಹಿಸಿಕೊಳ್ಳುತ್ತಿದ್ದೆನು. ಅದು ಸ್ವಾಮಿವಿವೇಕಾನಂದರವರ ಪ್ರೇರಣೆಯಿಂದ ಮದರಾಸಿನಲ್ಲಿ ಸ್ಥಾಪಿತವಾದ ಪತ್ರಿಕೆ ಎಂಬುದು ಇತ್ತೀಚೆಗೆ ನನಗೆ ಗೊತ್ತಾಯಿತಾದರೂ, ವಿಷಯಗಳೇನೋ ನನ್ನ ಮನಸ್ಸಿಗೆ ಇಂಪಾಗಿಯೆ ಕಾಣುತ್ತಿದ್ದವು. ಈ ಕಾಲದಲ್ಲಿಯೇ ಒಬ್ಬರು ಮಾಧ್ವರ (ಅವರ ಹೆಸರು ಪ್ರಾಣೇಶಾಚಾರ್ ಎಂದಿರಬಹುದು) ಅವರ ಸಹವಾಸವೂ ದೊರೆಯಿತು. ಅವರು ಸಾಯಂಕಾಲದಲ್ಲಿ ಮುಸಾಫಿರ್‌ಖಾನೆಗೆ ಬಂದು ಗುರುವಾರ ಶನಿವಾರಗಳಲ್ಲಿ ದಾಸರ ಪದಗಳನ್ನು ಹಾಡುತ್ತಿದ್ದರು. ದಾಸರಪದಗಳಲ್ಲಿ ನನಗೆ ಮೊದಲೇ ಪ್ರವೇಶವಿತ್ತಾದರೂ ಅವುಗಳನ್ನು ಹೀಗೆ ಭಜನೆಗೆ ಉಪಯೋಗಿಸುವ ಪದ್ಧತಿಯು ಮೊದಲು ಈಗಲೇ ನನ್ನಲ್ಲಿ ಉಂಟಾಯಿತೆನ್ನಬಹುದು.

### ವೇದಾಂತವಿಚಾರಕ್ಕೆ ಪ್ರಚೋದನೆ :

ವೆಂಕಟರಾಮಭಟ್ಟರ ಪರಿಚಯವನ್ನು ವಾಚಕರಿಗೆ ಇಲ್ಲಿ ಸ್ವಲ್ಪ ಹೆಚ್ಚಾಗಿ ಮಾಡಿಕೊಡುವುದು ಅವಶ್ಯ. ಏಕೆಂದರೆ ಅವರಿಂದ ನನಗೆ ಅನಿರೀಕ್ಷಿತ ರೀತಿಯಿಂದ ವೇದಾಂತವಿಚಾರಕ್ಕೆ ಪ್ರಚೋದನೆ ದೊರಕಿತು. ಭಟ್ಟರು ವಿಧುರರಾಗಿದ್ದು ಗಂಡುಮಕ್ಕಳಿಲ್ಲದೆ ಕೇವಲ ಇಬ್ಬರು ಹೆಣ್ಣುಮಕ್ಕಳ ಸೇವೆಯಿಂದ ಜೀವನ ಯಾತ್ರೆಯನ್ನು ಸಾಗಿಸುತ್ತಿದ್ದರು. ಇಬ್ಬರು ಅಳಿಯಂದಿರಿಗೂ ತಮ್ಮ ಆಸ್ತಿಯನ್ನು

ವಾಗ್ದಾನದಿಂದ ಹಂಚಿಕೊಟ್ಟು ಅವರನ್ನು ಮನೆಯಲ್ಲಿಯೇ ಇಟ್ಟು ಕೊಂಡಿದ್ದರು. ಕಾಲಾನುಕಾಲಕ್ಕೆ ಹಿರಿಯ ಅಳಿಯನು ಇಹಲೋಕ ವ್ಯಾಪಾರವನ್ನು ಮುಗಿಸಿಬಿಟ್ಟದ್ದರಿಂದ ಈಗ್ಗೆ ಒಬ್ಬ ಅಳಿಯನೇ ಇದ್ದನು. ಹಿರಿಯ ಮಗಳು ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ವ್ಯವಹಾರಗಳಿಗೂ ಯಜಮಾನಿಯಾಗಿದ್ದಳೆನ್ನಬಹುದು. ಭಟ್ಟರು ಮಾತ್ರ ಅಳಿಯಂದಿರಿಗೆ ಸಾಮಾನ್ಯ ಲೌಕಿಕ ವ್ಯವಹಾರಗಳನ್ನು ಒಪ್ಪಿಸಿ ತಾವು ಬಲು ಮಟ್ಟಿಗೆ ಸ್ನಾನ, ಸಂಧ್ಯಾವಂದನ, ಜಪ, ವೇದಾಂತಗ್ರಂಥಗಳ ಪಾರಾಯಣ - ಇವುಗಳಲ್ಲಿಯೇ ಕಾಲಕ್ಷೇಪ ಮಾಡುತ್ತಿದ್ದರು, ಅವರು ಮಡಿಯಲ್ಲಿಲ್ಲದ ಮೌನವಿಲ್ಲದ ಇದ್ದಕಾಲಮಾತ್ರ ಬಹುಸ್ವಲ್ಪ. ಆದರೂ ಕೆಲವರು ಹಳ್ಳಿಯವರಲ್ಲಿ ಲೇವಾದೇವಿಯಿಟ್ಟುಕೊಂಡದ್ದರಿಂದ, ನಡುನಡುವೆ ಯಾರಾದರೂ ತಾವು ತೆಗೆದುಕೊಂಡಿದ್ದ ಸಾಲದಪತ್ರಗಳಿಗೆ ಬಡ್ಡಿ ವಸೂಲಾತಿ ಬರೆಯಿಸುವುದಕ್ಕೆ ಭಟ್ಟರ ಮನೆಗೆ ಏನಾದರೂ ತರಕಾರಿ, ಬಾಳೆಎಲೆ, ಹಾಲು ಮೊಸರು - ಮುಂತಾದ ಅಲ್ಪ ಕಾಣಿಕೆ ಒಪ್ಪಿಸುವುದಕ್ಕೆ ಬಂದಿದ್ದಾರೆ ಎಂದು ತಿಳಿದರೆ ಕೆಮ್ಮುವದರ ಮೂಲಕ ಅಥವಾ ಮಗಳನ್ನು ಹೆಸರಿಟ್ಟು ಕೂಗುವ ಮೂಲಕ ಮೌನಕ್ಕೆ ಸ್ವಲ್ಪ ವಿಚ್ಛಿತ್ತಿಯನ್ನು ಮಾಡಿಕೊಳ್ಳುತ್ತಿದ್ದರು. ಬಂದ ರೈತರಿಗೆ ಭಟ್ಟರು ಮಡಿಯಲ್ಲಿದ್ದಾಗ ಮಾತನಾಡುವುದಿಲ್ಲವೆಂದು, ಮಗಳೇ ಎಲ್ಲಾ ಕೆಲಸವನ್ನೂ ನಿರ್ವಹಿಸುವಳೆಂದೂ ಗೊತ್ತೇ ಇದ್ದದ್ದರಿಂದ ಕೈಯಲ್ಲಿ ಜಪಮಾಲಿಕೆಯನ್ನು ಕಂಡಮಾತ್ರದಿಂದ ಮಾತನಾಡದೆ ಮಗಳು ಬರುವವರೆಗೂ ಕಾದುಕೊಂಡಿದ್ದು ತಾವು ಯಾವ ಕೆಲಸದ ಮೇಲೆ ಬಂದಿದ್ದೆವೆಂಬುದನ್ನು ಆಕೆಯಲ್ಲಿಯೇ ವಿಜ್ಞಾಪಿಸಿಕೊಂಡು ಅಥವಾ ಇನ್ನೇನಾದರೂ ಕೆಲಸಕ್ಕೆ ಅನುಮತಿಯನ್ನು ಪಡೆದುಕೊಳ್ಳುವದು, ಹಣವನ್ನು ಕೊಡುವದು, ತೆಗೆದುಕೊಳ್ಳುವದು-ಮುಂತಾದದ್ದೆಲ್ಲವನ್ನೂ ಮಾಡುತ್ತಿದ್ದರು. ಆದರೆ ವೆಂಕಟರಾಮಭಟ್ಟರು ರಾತ್ರೆಯ ಬಹಳ ಹೊತ್ತಿನವರೆಗೂ ಮತ್ತು ಬೆಳಗಿನ ಜಾವದಲ್ಲಿ ಬಹಳ ಮುಂಚಿತವಾಗಿಯೇ ಎಚ್ಚತ್ತಿದ್ದು ಮನೆಯಲ್ಲಿಯೇ ಮಲಗಿಕೊಳ್ಳುತ್ತಿದ್ದ ಒಬ್ಬ ಸಾತಾನಿಮತದ ತಮ್ಮ ಶಿಷ್ಯನೊಡನೆ ವೇದಾಂತ ಕಥಾಲಾಪವನ್ನು ಮಾಡುತ್ತಿದ್ದರು. ನಾನು ಒಂದೆರಡು ದಿನಗಳು ಅವರ ಮನೆಯಲ್ಲಿ ಮಲಗಬೇಕಾಗಿ ಬಂದಾಗ್ಗೆ ಈ ಚರ್ಚೆಯನ್ನು ಕೇಳಿಕೊಂಡು ಅತ್ಯವಶ್ಯವಾದ ನಿದ್ರೆಯ ಪರಿಹಾರದ ಸುಖವನ್ನು ಅನುಭವಿಸಿದ ಯೋಗವು ನನಗೆ ದೊರಕಿತ್ತು. ಜಗತ್ತು ಪರಮೇಶ್ವರನಿಂದ ಏಕೆ ಸೃಷ್ಟಿಯಾಗಿದೆ ? ಮನುಷ್ಯನಲ್ಲಿ ಸುಖ ದುಃಖಾದಿಗಳ ತಾರತಮ್ಯವಿರುವುದೇಕೆ ? ಹಿಂಸೆ, ಪರಸ್ವಾಪಹರಣ, ಮೋಸ, ಕಳವು - ಮುಂತಾದ ಪಾಪಕೃತ್ಯಗಳಿಂದಾಗುವ ಫಲವೇನು ? ಸಾತ್ತ್ವಿಕರಾದ ಬ್ರಾಹ್ಮಣರ ಸೇವೆಯಿಂದಾಗುವ ಫಲವೇನು ? ವೇದಾಂತಜ್ಞಾನವು ಸದ್ಗುರುವಿನಿಂದ ದೊರಕುವ ಬಗೆ ಹೇಗೆ ? ಇವೇ ಮುಂತಾದ

ವಿಚಾರಗಳನ್ನು ಭಟ್ಟರು ನಿಧಾನವಾಗಿ ಮಾತನಾಡುತ್ತಾ ಶಿಷ್ಯನಿಗೆ ಅನುಗ್ರಹಿಸುವ ಪ್ರಕಾರವು ನನ್ನ ಮನಸ್ಸಿಗೆ ಒಂದು ಬಗೆಯ ವಿಲಕ್ಷಣ ಪರಿಣಾಮವನ್ನುಂಟು-ಮಾಡುತ್ತಿತ್ತು. ಶಿಷ್ಯನು ಕೆಲವು ವೇಳೆಗಳಲ್ಲಿ ಪ್ರಶ್ನೆಮಾಡುತ್ತಿದ್ದನು ; ಆದರೆ ಸಾಮಾನ್ಯವಾಗಿ 'ಅಲ್ಲವೆ ಮತ್ತೆ ?', 'ಹಾಗೇ ಸರಿ', 'ಹೋ !' ಎಂಬ ಮಾತುಗಳಿಂದಲೇ ತನ್ನ ಮಾತನ್ನು ಸಂಕ್ಷೇಪಿಸಿ ಮುಖ್ಯವಾಗಿ ಉಪದೇಶವನ್ನು ಶ್ರವಣ ಮಾತ್ರದಿಂದಲೇ ಗ್ರಹಿಸುವುದರಲ್ಲಿ ತತ್ಪರನಾಗಿರುತ್ತಿದ್ದನು.

## ಸಂಸ್ಕೃತ ವಿದ್ಯಾಭ್ಯಾಸವನ್ನು ಬಲಪಡಿಸಿದುದು :

ಈಗ ನನಗೆ ಅನೇಕ ಕಾರಣಗಳಿಂದ ಸಂಸ್ಕೃತದ ಕಡೆಗೆ ಒಲವು ಹೆಚ್ಚಿತು. ಮೊದಲನೆಯದಾಗಿ ಹೊಸದಾಗಿ ಸಂಸ್ಕೃತವನ್ನು ಕಾಲೇಜಿನಲ್ಲಿ ಅಭ್ಯಾಸಮಾಡಿ ಪರೀಕ್ಷೆಯಲ್ಲಿ ಒಂದನೆಯವನಾಗಿದ್ದೆನೆಂಬ ಹೆಮ್ಮೆಯ ನೆನಪು ಇತ್ತು. ಈಗ ವಿದ್ಯಾಭ್ಯಾಸವು ನಿಂತು ಹೋದ್ದರಿಂದ ಇನ್ನು ಮುಂದಕ್ಕೆ ಯಾವದಾದರೊಂದು ಕೆಲಸವು ಮನಸ್ಸಿಗೆ ಬೇಕಾಗಿದ್ದದ್ದು ಎರಡನೆಯ ಕಾರಣ, ತಾಲ್ಲೂಕು ಕಚೇರಿಯಲ್ಲಿ ನನಗೆ ಪ್ರೋತ್ಸಾಹವಿಲ್ಲದೆ ಇದ್ದದ್ದು ಮೂರನೆಯ ಕಾರಣ. ಈಚೆಗೆ ಮುನಿಸಿಪಲ್ ಗುಮಾಸ್ತೆ ಪ್ಲೇಗಿನಿಂದ ಸತ್ತು ಹೋದದ್ದರಿಂದ ನನಗೆ ಅವನ ಸ್ಥಾನದಲ್ಲಿ ಹಂಗಾಮಿಯಾಗಿ ಬೇಕರಾರು ಮಾಡಿ ಕೆಲಸವನ್ನು ನೋಡಿಕೊಳ್ಳುವಂತೆ ಹೇಳಿದ್ದರು. ನನಗೆ ಆ ಕೆಲಸವು ಅತ್ಯಂತ ಹೊಸದಾದ್ದರಿಂದ ಕಚೇರಿಯಲ್ಲಿದ್ದು ಏನುಮಾಡ ಬೇಕೆಂಬುದೇ ತಿಳಿಯದೆ ಹೋಯಿತು. ಎಲ್ಲರೂ ಹಾಸ್ಯಮಾಡುವವರೇ ಹೊರತು ಕೆಲಸ ತಿಳಿಸಿಕೊಡುವವರು ಯಾರೂ ಇಲ್ಲ. ಹಿಂದಿನ ಅಮಲ್ದಾರರು ಹೆಡ್‌ಗುಮಾಸ್ತರಲ್ಲಿ ಯಾವದಾದರೂ ಕೆಲಸವನ್ನು ಕಲಿತುಕೊಳ್ಳಬೇಕೆಂದು ಹೇಳಿದ್ದರೂ, ಅವರು ರೂಲುಮೇಸ್ತ್ರು ಬರವಣಿಗೆ ಹೊರತು ಯಾವ ಕೆಲಸವನ್ನೂ ನನಗೆ ಕೊಡುತ್ತಿರಲಿಲ್ಲ. ನಾನು ಮೆಟ್ರಿಕ್ಯುಲೇಷನ್ ಪ್ಯಾಸುಮಾಡಿದವನಾದ್ದರಿಂದ ಬೇಗನೆ ಯಾವದಾದರೊಂದು ಸ್ಥಾನವನ್ನು ಆಕ್ರಮಿಸಿಕೊಂಡು ಬಿಡುವೆನೆಂಬ ದಿಗಿಲು ಎಲ್ಲರಿಗೂ ಇತ್ತು. ಹೊಸದಾಗಿ ಬಂದಿದ್ದ ಜುಡಿಷಿಯಲ್ ಗುಮಾಸ್ತ ಬಹುಕುಶಲಮತಿಯಾದ್ದರಿಂದ ನನ್ನನ್ನು ಯಾವದಾದರೊಂದು ತಪ್ಪುದಾರಿಗೆ ಎಳೆಯುತ್ತಿದ್ದನು. ಮುನಿಸಿಪಲ್ ಮಾಹೇವಾರಿ ಲೆಕ್ಕವನ್ನು ಬರೆಯುವದನ್ನು ಹೇಳಿಕೊಡುವವನಂತೆ ನಟಿಸಿ, ನಕಲಿ ಗುಮಾಸ್ತರಲ್ಲಿರುವ ಲೆಕ್ಕದ ನಕಲನ್ನು ಬರೆದುಕೊಂಡರೆ ಆಯಿತೆಂದು ಹೇಳಿಬಿಟ್ಟಿದ್ದನು. ಇದರಿಂದ ಅವರ ಲೆಕ್ಕ ಯಾವದಾದರೂ ಕಾರಣದಿಂದ ತಪ್ಪಾದರೆ ನನ್ನದೂ ತಪ್ಪಾಗುವಂತಾಗಿತ್ತು. ಅಮಲ್ದಾರರು ನನ್ನನ್ನು ಗೌರವದಿಂದ ಕಾಣುತ್ತಿರಲಿಲ್ಲವೆಂಬುದರಿಂದ ನನ್ನ ಮನಸ್ಸಿಗೆ

ಬೇಜಾರು ಉಂಟಾಗಿತ್ತು. ಈಗ ಓವರ್ಸಿಯರು ಕೆಲಸವನ್ನು ಮಾಡಿಕೊಂಡು ಜೊತೆಗೆ ಸಕ್ಕರೆಪಟ್ಟಣ, ಬೀರೂರು, ಕಡೂರು ಈ ಮೂರು ಮುನಿಸಿಪಾಲಿಟಿಗಳ ಮೀಟಿಂಗು ಮುಂತಾದವುಗಳಿಗೂ ಲಕ್ಷ್ಯವನ್ನು ಕೊಡಬೇಕಾಗಿತ್ತು. ಆದರೆ ಆ ಕೆಲಸಗಳ ಅರ್ಥವು ಮಾತ್ರ ನನಗೆ ತಿಳಿದಿರಲಿಲ್ಲ. ಹೀಗಾಗಿ ನಾನು ಪೇಟೆಯಲ್ಲಿ ಕಂಡಕಂಡ ಕಡೆ ಅಲೆಯುವುದು, ಸುಂಕವನ್ನು ಕೊಡದೆ ತಪ್ಪಿಸಿಕೊಳ್ಳುವವರನ್ನು ಕಂಡು-ಹಿಡಿಯುವುದು, ಹೊಲದೊಡ್ಡಿ ಇವುಗಳ ಮೇಲುವಿಚಾರಣೆ ಮಾಡುವುದು - ಇಷ್ಟು ಮಾತ್ರ ಕೆಲಸವನ್ನು ನನ್ನದೆಂದು ಭಾವಿಸಿಕೊಂಡುಬಿಟ್ಟಿದ್ದೆನು. ಈ ಎಲ್ಲಾ ಕಾರಣಗಳಿಂದ ನಾನು ಕೋಟೆಯಲ್ಲಿ ನಮ್ಮ ಮಾವಂದಿರ ಷಡ್ಗರಾಗಿದ್ದ ವೆಂಕಟರಾಮ ಭಟ್ಟರ ಮನೆಗೆ ಆಗಾಗ್ಗೆ ಹೋಗಿ ಅವರ ಅಳಿಯ(ಸೂರಭಟ್ಟ ಇರಬಹುದು)ನ ಹತ್ತಿರವಿದ್ದ ಮೇಘಸಂದೇಶವನ್ನು ಮೆಕ್ಡಾನಲ್ ಡಿಕ್ಷನರಿಯ ಸಹಾಯದಿಂದ ಅಭ್ಯಾಸ ಮಾಡುವದಕ್ಕೆ ಮೊದಲು ಮಾಡಿದೆನು. ಕಿರಾತಾರ್ಜುನೀಯ ನನಗೆ ಒಂದೇ ಸರ್ಗದ ಪಾಠವಾಗಿತ್ತಾದರೂ ಅದರಲ್ಲಿಯೂ ಮುಂದಕ್ಕೆ ನಾಲ್ಕು ಸರ್ಗಗಳನ್ನು ವ್ಯಾಖ್ಯಾನಸಹಿತವಾಗಿ ಓದಿದೆನು.

## ಹೋಟೆಲ್ ಭೋಜನ:

ಈಗ ನಾನು ಒಂಟಿಗನಾದ್ದರಿಂದ ಹೋಟೆಲಿನಲ್ಲಿಯೇ ಊಟ ಮಾಡುತ್ತಿದ್ದೆನು, ಹೋಟೆಲ್ ಯಜಮಾನ ನಾಗಪ್ಪನು ಬಹಳ ಒಳ್ಳೆಯವ. ಬೆಳಗ್ಗೆ ನನಗೆ ಒಂದೆರಡು ದೋಸೆಗಳನ್ನು ಕೊಟ್ಟರೂ ಲೆಕ್ಕಕ್ಕೆ ಸೇರಿಸುತ್ತಿರಲಿಲ್ಲ ; ಊಟಕ್ಕೆ ಮೊದಲನೆಯ ಸಾಲಿನ ಅವಕಾಶವನ್ನು ಕಲ್ಪಿಸಿ ಕೊಡುತ್ತಿದ್ದನು. ಇದ್ದುದ್ದರಲ್ಲಿ ಹೋಟೆಲನ್ನು ಶುಚಿಯಾಗಿಯೂ ಇಟ್ಟುಕೊಂಡಿದ್ದನು. ಹೋಟೆಲ್ ಸಮೀಪದಲ್ಲಿ ಹೆಚ್ಚಿನ ಕೊಳಚೆ ಮುಂತಾದದ್ದು ಇಲ್ಲದಂತೆ ನೋಡಿಕೊಳ್ಳುವದು ನನ್ನ ಪಾಲಿನ ಕೆಲಸವಾಗಿತ್ತು. ಅಲ್ಲಿ ಊಟವು ತಡವಾದರೆ ನಾಗಪ್ಪ ಜನರೊಳಗೆ ಯಾವದಾದರೊಂದು ಚರ್ಚೆಯ ವಿಷಯವನ್ನು ನಿರ್ಣಯಕ್ಕೆ ತಂದು ಹಾಕುತ್ತಿದ್ದನು. ಒಂದು ದಿನ ದೇವರು ಇದಾನೆಯೇ ಇಲ್ಲವೆ ? ಎಂಬ ವಿಷಯಕ್ಕೆ ಚರ್ಚೆಯು ಪ್ರಾರಂಭವಾಯಿತು. ಮಡಿಕೆ ಕುಡಿಕೆಗಳನ್ನು ಮಾಡುವದಕ್ಕೆ ಕುಂಬಾರನು ಬೇಕಾಗಿರುವಂತೆ, ಜಗತ್ತನ್ನು ನಿರ್ಮಿಸುವದಕ್ಕೆ ಒಬ್ಬನು ಬೇಕಷ್ಟೆ ? ಎಂದು ಒಬ್ಬರೆಂದರು. ಮಡಿಕೆ ಕುಡಿಕೆಗಳನ್ನು ಮಾಡುವದಕ್ಕೆ ಒಬ್ಬ ಕುಂಬಾರನು ಸಾಕೆಂಬುದು ಅನುಭವದಲ್ಲಿದೆ. ಆದರೆ ಜಗತ್ತೆಲ್ಲವನ್ನು ಮಾಡುವದಕ್ಕೆ ಒಬ್ಬನು ಇರಲೇ ಬೇಕೆಂಬುದಾಗಲೀ, ಒಬ್ಬನೇ ಇದ್ದರೆ ಸಾಕೆಂದಾಗಲೀ ನಿರ್ಣಯಿಸುವದಕ್ಕೆ ನಮಗೆ ಏನು ಆಧಾರವಿದೆ ?' ಎಂದು ನಾನು ಆಕ್ಷೇಪಿಸಿದೆನು. ಆಗ ಬಹಳ ಗದ್ದಲವೆದ್ದುಕೊಂಡಿತು. ಇವರು ದೇವರೇ ಇಲ್ಲವೆನ್ನುವದಕ್ಕೆ ಹೊರಟಿದ್ದಾರೆ ; ನಾವು ತಾಯಿ ತಂದೆಗಳಿಂದ ಹುಟ್ಟಿದೆವೆಂಬುದಕ್ಕೆ ನೇರಾದ

ಅನುಭವವೆಲ್ಲಿದೆ ? ಎಂದು ಕೇಳುವದಕ್ಕೂ ಸಾಕು ಎಂದು ಒಬ್ಬಿಬ್ಬರು ಕೂಗುವದಕ್ಕೆ ಹೊರಟರು. ನಾನು ನನ್ನ ಅಭಿಪ್ರಾಯವನ್ನು ವಿವರಿಸುವದಕ್ಕೆ ಯಾರೂ ಅವಕಾಶವನ್ನು ಕೊಡದೇ ಹೋದರು. ಆದರೆ ನಮ್ಮ ಸುದೈವದಿಂದ ಅಡಿಗೆ ಅಷ್ಟು ಹೊತ್ತಿಗೆ ಸಿದ್ಧವಾಗಿತ್ತು. ಆದ್ದರಿಂದ ಚರ್ಚೆ ಅಷ್ಟಕ್ಕೇ ಉಳಿದುಬಿಟ್ಟಿತು. ಆ ದಿನ ನಾವು ಆಕಸ್ಮಾತ್ತಾಗಿ ಚರ್ಚೆಗೆ ಇಟ್ಟು ಕೊಂಡಿದ್ದ ವಿಷಯವು ವೇದಾಂತಕ್ಕೆ ಅತ್ಯವಶ್ಯವಾದ ಒಂದು ಪ್ರಶ್ನೆ ಎಂಬುದು ಆಗ ನನಗೆ ತಿಳಿದಿರಲಿಲ್ಲ. ಈಶ್ವರ ಲಕ್ಷಣವನ್ನು ಹೇಳುವದಕ್ಕೆ ಹೊರಟಿರುವ ಬಾದರಾಯಣಾಚಾರ್ಯರು ಜಗತ್, ಜನ್ಮ, ಸ್ಥಿತಿ, ಲಯಗಳಿಗೆ ಕಾರಣನಾದವನೇ ಪರಮೇಶ್ವರನೆಂದು ಹೇಳಿರುವದು ವಾದಿಗಳಲ್ಲಿ ಇಂಥ ವಿವಿಧವಾದ ಚರ್ಚೆಗಳಿಗೆ ಅವಕಾಶವನ್ನು ಕಲ್ಪಿಸಿರುತ್ತದೆ ಎಂಬುದು ನನಗೆ ಈಚೆಗೆ ಗೊತ್ತಾಗಿದೆ. ನಾವು ನಮಗೂ ಅರಿವಿಲ್ಲದೆ ಮಾತನಾಡುವಾಗಲೂ ಎಷ್ಟು ಶಾಸ್ತ್ರಾರ್ಥಗಳನ್ನು ತೆಗೆದು ಕೊಂಡಿರುವೆವೋ ಯಾರು ಬಲ್ಲರು ?

## ಚಿದಂಬರಯ್ಯನವರ ಪ್ರಥಮ ಸಮಾಗಮ :

ಸಂಸ್ಕೃತದ ಅಭ್ಯಾಸವು ಮುಂದುವರೆಯುವದು, ಶಾಸ್ತ್ರಾರ್ಥ ವಿಚಾರವು ಚಿಗುರಿಕೊಳ್ಳುವದಕ್ಕೂ ನನಗೆ ಈಗ ಒಬ್ಬ ಹೊಸವ್ಯಕ್ತಿಯ ಸಹವಾಸವು ಕೇವಲ ದೈವಿಕವಾಗಿ ದೊರಕಿದ್ದು ಕಾರಣವಾಯಿತು. ನಾನು ನನ್ನ ನಿತ್ಯಗಟ್ಟಲೆಯ ಸಂಚಾರಕ್ರಮದಲ್ಲಿ ಒಂದು ದಿನ ಆವೂರಿನಲ್ಲಿದ್ದ ಆಂಗ್ಲೋ ವರ್ನಾಕ್ಯುಲರನ್ನು ಹೊಕ್ಕೆನು. ಸ್ಕೂಲಿನ ವಾಸನೆ ನನಗೆ ಇನ್ನೂ ತಪ್ಪಿರಲಿಲ್ಲ. ಆ ಸ್ಕೂಲು ಇದ್ದ ಪ್ರದೇಶವು ಸುಂಕದವರನ್ನು ಕಂಡರೆ ತಪ್ಪಿಸಿಕೊಳ್ಳುವವರು ಅಡ್ಡಾಡುವ ಆಯಕಟ್ಟಿನ ಪ್ರದೇಶವೂ ಆಗಿತ್ತು. ಹೀಗೆ ನಾನು ಸ್ವಾಭಾವಿಕವಾಗಿಯೇ ಸ್ಕೂಲನ್ನು ಪ್ರವೇಶಿಸಿದೆನಾದರೂ ಅಲ್ಲಿ ಹೆಡ್ಮಾಸ್ಟರು ತಮ್ಮ ಕೋಣೆಯಲ್ಲಿ ಮೇಜಿನ ಮೇಲೆ ಒಂದು ದೊಡ್ಡ ಪುಸ್ತಕವನ್ನು ಇಟ್ಟು ಕೊಂಡಿದ್ದರು. ಅವರ ಉಡಿಗೆ ತೊಡಿಗೆಗಳಲ್ಲೇನೂ ಹೆಚ್ಚಿನ ಆಡಂಬರವಿರಲಿಲ್ಲ. ಆದರೂ ಕುತೂಹಲದಿಂದ ಇದೇನು ಪುಸ್ತಕ ಎಂದೆನು. ಇದು ಶಬ್ದಾನುಶಾಸನವಂತೆ. ಏನೂ ಅರ್ಥವಾಗುವದೇ ಇಲ್ಲ ಎಂದು ಸ್ವಲ್ಪ ಓದಿದರು. ಕೂತುಕೊಂಡು ಕೇಳಿದೆ. ನಾನೇ ಅದನ್ನು ಕೈಗೆ ತೆಗೆದುಕೊಂಡು ಓದಿದೆ. ಕೌಮುದಿಯ ಹಾಗಿತ್ತು. ಇದು ವ್ಯಾಕರಣದ ಹಾಗೆ ಕಾಣುತ್ತದೆ, 'ಲಘುಕೌಮುದಿ ಓದಿದರೆ ತಿಳಿಯಬಹುದು' ಎಂದೆ. ನಾನು ಅದನ್ನು ಅಷ್ಟು ಸರಸರನೆ ಓದಿದ್ದು ಅವರಿಗೆ ಸಂತೋಷವನ್ನುಂಟುಮಾಡಿತು. ನೀವು 'ಲಘುಕೌಮುದಿಯನ್ನು ಓದಿದ್ದೀರಾ ?' ಎಂದರು. 'ಇಲ್ಲ' ಎಂದೆ. ಆದರೂ ಅವರಿಗೆ ನನ್ನ ಮೇಲೆ ಏನೋ ವಿಶ್ವಾಸವುಂಟಾಯಿತು. ಅವರು ಪಂಡಿತ ಪರೀಕ್ಷೆಗೆ ಆರಂಭಿಸಿದ್ದರು. ಆ ಪರೀಕ್ಷೆಗೆ ಲಘುಕೌಮುದಿಯನ್ನು ಇಟ್ಟಿದ್ದರು. 'ಆಗಾಗ್ಗೆ ಬರುತ್ತಿರಿ' ಎಂದರು.

ಹೀಗೆ ಪ್ರಾರಂಭವಾದ ಪರಿಚಯವು ಸ್ವಲ್ಪ ಸ್ವಲ್ಪವಾಗಿ ಚಿಗುರಿಕೊಂಡು ಬೆಳೆಯುವದಕ್ಕೆ ಮೊದಲಿಟ್ಟಿತು. ಅವರು ನಾನು ವಾಸಕ್ಕೆ ಮನೆಯಿಲ್ಲದೆ ಒದ್ದಾಡುತ್ತಿದ್ದುದನ್ನು ತಿಳಿದುಕೊಂಡು ತಮ್ಮ ಮನೆಯ ಹತ್ತಿರದಲ್ಲಿಯೇ ಒಂದು ಚಿಕ್ಕಮನೆಯನ್ನು ಗೊತ್ತುಮಾಡಿಕೊಟ್ಟರು. 'ಖರಾರಿ ಲಿಂಗಪ್ಪಶೆಟ್ಟರು' ಎಂಬವರು ಕಟ್ಟಿಸಿದ ಛತ್ರವದು. ಬಡವರಿಗೆ ಬಾಡಿಗೆ ಇಲ್ಲದೆಯೇ ಕೊಡುತ್ತಿದ್ದರು. ನಾನು ಊರಿನಿಂದ ಮನೆಯವರನ್ನು ಕರೆಯಿಸಿಕೊಂಡೆ. ನಮ್ಮಿಬ್ಬರಿಗೂ ಸಾಮೀಪ್ಯದ ಮೈತ್ರಿಯು ಆರಂಭವಾಯಿತು. ಚಿದಂಬರಯ್ಯನವರು 'ಕುವಲಯಾನಂದ', 'ಪ್ರತಾಪರುದ್ರೀಯ' ಇವು ಬಹಳಕಷ್ಟವಾಗಿದೆ ಎಂದರು ; ಜೊತೆಯಲ್ಲಿಯೇ ಓದೋಣ ಎಂದೆ. ಶಬ್ದಾನುಶಾಸನವನ್ನೂ ಆಗಾಗ್ಗೆ ಓದುತ್ತಲೇ ಇದ್ದೆವು.

## ನಂಜುಡ ಶಾಸ್ತ್ರಿಗಳವರು (ಲಘುಕೌಮುದಿ) :

ಲಘುಕೌಮುದಿಯು ಆವೂರಿನ ನಂಜುಂಡಶಾಸ್ತ್ರಿಗಳಲ್ಲಿದೆ ಎಂದು ತಿಳಿಯಿತು. ಅವರು ಅಲ್ಲಿ ವಿದ್ವಾಂಸರಾಗಿದ್ದ ರಾಮಾಶಾಸ್ತ್ರಿಗಳ ಅಳಿಯಂದರಂತೆ, ಕೆಲವು ಕಾಲ ಮಾವಂದಿರ ಗೌರವದ ಮೇಲೆ ಏಡೆಡ್ (ಸರ್ಕಾರಿಸಹಾಯದ) ಸಂಸ್ಕೃತ ಪಾಠಶಾಲೆಯ ಉಪಾಧ್ಯಾಯರಾಗಿದ್ದರಂತೆ. ಆಗ್ಗೆ ಇನಸ್ಪೆಕ್ಟರುಜನರಲ್ ಆಗಿದ್ದ ಬಾಬಾ ಸಾಹೇಬರು ಬಂದಾಗ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ಹೆಡ್‌ಮಾಸ್ಟರನ್ನು ಕರೆದುಕೊಂಡು ಬಂದು ಹುಡುಗರನ್ನು ಏನಾದರೂ ಪ್ರಶ್ನೆ ಕೇಳಿ ಎಂದಾಗ ಅವರು 'ಗುಣವಾಚಕ ಎಂದರೇನು ?' 'ತದ್ಧಿತಾಂತ ಎಂದರೇನು ?' - ಇಂತಹ ವ್ಯಾಕರಣದ ಪ್ರಶ್ನೆಗಳನ್ನು ಕೇಳಲು ಹುಡುಗರು ಬೆಪ್ಪಾಗಿ ಯಾವ ಉತ್ತರವನ್ನೂ ಹೇಳಲಿಲ್ಲವಂತೆ ; ಸಂಸ್ಕೃತ ಪಾಠಶಾಲೆಗಳಲ್ಲಿ ಶ್ಲೋಕಗಳನ್ನು ಹೇಳಿಕೊಟ್ಟು ಪದಚ್ಛೇದ, ಶಬ್ದ-ರೂಪಾವಳೀ, ಕಥನ, ಅನ್ವಯ, ಆಕಾಂಕ್ಷೆ, ಪ್ರತಿಪದಾರ್ಥ - ಹೀಗೆ ಗಟ್ಟಿಮಾಡಿಸು-ವದೇ ಹೊರತು ವ್ಯಾಕರಣವನ್ನು ಜತೆಯಲ್ಲಿಯೇ ಹೇಳಿಕೊಡುವುದಿಲ್ಲವೆಂಬುದು ಬಾಬಾ ಸಾಹೇಬರಿಗೆ ಗೊತ್ತಿರಲಿಲ್ಲವೆಂದು ಕಾಣಿಸುತ್ತದೆ ; ಆದ್ದರಿಂದ ಅವರು 'ಈ ಪಾಠಶಾಲೆಯು ಸ್ವತಂತ್ರವಾಗಿರಬೇಕಾದದ್ದಿಲ್ಲ, ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿಗೆ ಇವರನ್ನು ಪಂಡಿತರನ್ನಾಗಿ ವರ್ಗಾಯಿಸಿದೆ' ಎಂದು ಹೊಸ ಏರ್ಪಾಡು ಮಾಡಿ ಹೊರಟು ಹೋಗಿಬಿಟ್ಟರಂತೆ. ಮುಂದೆ ಪಂಡಿತರಿಗೆ ಆ ಪಂಡಿತರಂತೆ ಸಂಸ್ಕೃತ ವಿದ್ಯಾರ್ಥಿಗಳೇ ಸಿಕ್ಕದೆ ಕನ್ನಡ ಪಾಠವನ್ನು ಹೇಳುವದಕ್ಕೆ ವಿನಿಯೋಗಿಸಿದರು. ಆ ಕೆಲಸವು ಅವರಿಗೆ ತೀರ ಹೊಸದಾದ್ದರಿಂದ ಬೋಧನ ಕೆಲಸಕ್ಕೆ ಅಯೋಗ್ಯರೆನಿಸಿ-ಕೊಂಡರು. ಚಿಕ್ಕಮಕ್ಕಳಿಗೆ ಕನ್ನಡ ಬಾಲಬೋಧೆಯನ್ನು ಹೇಳಿಕೊಡುವದಕ್ಕೆ ಹಾಕಿದರೆ ಅದರಲ್ಲಿದ್ದ 'ಎಲೆ ಬೆಕ್ಕೆ ರೂಪಿನಿಂದಲಿ। ಹುಲಿ ಜಾತಿಗೆ ಸೇರ್ದೆನೆಂದು ಗರ್ಜಿಸಬೇಡ। ಬಲುಮೆಯು ನಿನ್ನಲ್ಲಿಹುದೇನಿಲಿಗಳ ಹಿಡಿಯುವದರೊಳಾಯ್ತು

ನಿನ್ನಯ ಶೌರ್ಯಂ' ॥ ಎಂಬ ಪದ್ಯವನ್ನು ಪದಚ್ಛೇದಾದಿ ಕ್ರಮದಿಂದ ಹೇಳುತ್ತಾ 'ಬೆಕ್ಕೆ ಮಾರ್ಜಾಲವೆ', 'ಹುಲಿಜಾತಿಗೆ ವ್ಯಾಘ್ರಜಾತಿಗೆ', 'ಇಲಿಗಳನ್ನು ಮೂಷಕಗಳನ್ನು' ಎಂದು ಮುಂತಾಗಿ ವಿಚಿತ್ರ ರೀತಿಯಿಂದ ಅರ್ಥವನ್ನು ಹೇಳಿಕೊಡುವದಕ್ಕೆ ಪ್ರಾರಂಭಿಸಿದರಂತೆ. ಅವರ ಮೇಲೆ ಮೇಲಿನ ಅಧಿಕಾರಿಗಳಿಗೆ ದೂರು ಹೋಗಲು ಆಗ ಪ್ರಚಾರದಲ್ಲಿದ್ದ ನಾಲ್ಕನೆಯ ತರಗತಿಯ ಪರೀಕ್ಷೆಯಲ್ಲಿ 'ಪ್ಯಾಸಾದ ಹೊರತು ಕೆಲಸದಲ್ಲಿರಿಸಬಾರದು' ಎಂಬ ಹುಕುಂ ಬಂದಿತು. ಶಾಸ್ತ್ರಿಗಳು ಪರೀಕ್ಷೆಗೆ ಕುಳಿತು 'ರಾಗರಸಮಿಗಲು ಸಭೆ ತಲೆದೂಗಲು.....' ಎಂದು ಮುಂತಾಗಿ ಬರೆದಿದ್ದ ಪದ್ಯದ ಅಭಿಪ್ರಾಯವನ್ನು ವಿವರಿಸಿ ಎಂಬ ಪ್ರಶ್ನೆಗೆ ಅಲಂಕಾರ, ರಸ, ಮುಂತಾದ ವಿವರಗಳನ್ನು ನಾಲ್ಕು ಪುಟದಷ್ಟು ಬರೆದು ಬಂದರಂತೆ ! ಅವರಿಗೆ ಫೇಲಾಯಿತೆಂಬುದನ್ನು ಹೇಳಬೇಕಾದದ್ದೇ ಇಲ್ಲವಷ್ಟೆ ? ಮುಂದೆ ಅವರಿಗೆ ಸಂಸ್ಕೃತ ವಿದ್ಯಾರ್ಥಿಗಳಿರುವ ಕೋಲಾರು ಸ್ಕೂಲಿಗೆ ವರ್ಗವಾಯಿತು. ಅವರು ಹೋಗಲೇ ಇಲ್ಲ. ಇಷ್ಟು ಹೊತ್ತಿಗೆ ಚಿದಂಬರಯ್ಯನವರು ಸ್ಕೂಲಿಗೆ ಹೆಡ್‌ಮಾಸ್ಟರಾಗಿ ಬಂದರಂತೆ. 'ಶಾಸ್ತ್ರಿಗಳು ಹೊಸಕೆಲಸಕ್ಕೆ ರಿಪೋರ್ಟುಮಾಡಿಕೊಳ್ಳಲಿಲ್ಲವಾಗಿ ಅವರನ್ನು ಸರ್ವಿಸ್‌ನಿಂದ ವಜಾಮಾಡಿದೆ' ಎಂದು ಹುಕುಂ ಬಂದಿತ್ತು. ವಿಷಯವನ್ನೆಲ್ಲ ತಿಳಿದುಕೊಂಡಿದ್ದ ಚಿದಂಬರಯ್ಯನವರು ಕನಿಕರದಿಂದ 'ಶಾಸ್ತ್ರಿಗಳೇ, ನಿಮಗೆ ಹೀಗೆ ಒಂದು ಆರ್ಡರು ಬಂದಿದೆ; ನಾನು ಹೇಳುವಂತೆ ಇದಕ್ಕೊಂದು ಅರ್ಜಿಬರೆದುಕೊಡಿ, ಶಿಫಾರಸು ಮಾಡುತ್ತೇನೆ ಎಂದರಂತೆ' ಆದರೆ ಶಾಸ್ತ್ರಿಗಳು 'ಅವನೇ ಕೆಟ್ಟ, ನಮ್ಮಂಥ ಶಾಸ್ತ್ರಿಗಳು ಅವರಿಗೆ ಯಾರು ಸಿಕ್ಕುತ್ತಾರೆ ?' ಒಂದು ಸಲ ಬೇಡ ಎಂದ ಮೇಲೆ ತೀರಿತು ; ಮತ್ತೆ ಯಾರು ಇದಕ್ಕೆ ಅರ್ಜಿ ಕೊಡುತ್ತಾರೆ ಎಂದುಬಿಟ್ಟರಂತೆ. ಈ ಕಥೆಯು ನೇರಾಗಿ ಅಥವಾ ಪರಂಪರೆಯಿಂದ ಕೂಡ ನನ್ನ ಕಥೆಗಾಗಲಿ ಕಾರ್ಯಾಲಯಕ್ಕಾಗಲಿ ಸಂಬಂಧಿಸದೆ ಇದ್ದರೂ ಹಳೆಯ ಪಂಡಿತ ವರ್ಗಕ್ಕೂ ಈಗ ವಿದ್ಯಾಭ್ಯಾಸದ ಜನರಿಗೂ ಇರುವ ಸಂಬಂಧಕ್ಕೆ ದ್ಯೋತಕವಾಗಿದೆ ಎಂಬ ಕಾರಣದಿಂದ ಬರೆದಿರುತ್ತೇನೆ, ವಾಚಕರು ಕ್ಷಮಿಸಬೇಕು.

## ಲಘುಕೌಮುದ್ಯಾದಿಗಳ ಅಭ್ಯಾಸ :

ಈ ಪ್ರಾಸಂಗಿಕ ವಿಚಾರವನ್ನು ಬಿಟ್ಟು ಚಿದಂಬರಯ್ಯನವರ ಮತ್ತು ನನ್ನ ಸಂಸ್ಕೃತಾಭ್ಯಾಸ ವಿಚಾರವನ್ನು ಮುಂದುವರಿಸುವೆನು. ನಂಜುಂಡ ಶಾಸ್ತ್ರಿಗಳಲ್ಲಿಗೆ ಒಂದು ದಿನ ಸಾಯಂಕಾಲ ಹೋಗಿ 'ಶಾಸ್ತ್ರಿಗಳೆ, ಸ್ವಲ್ಪ ಲಘುಕೌಮುದಿ ಬೇಕಾಗಿತ್ತಲ್ಲ !' ಎಂದು ಚಿದಂಬರಯ್ಯನವರು ಪ್ರಸ್ತಾಪಿಸಿದರು. ಅವರು 'ಅದನ್ನು ತೆಗೆದುಕೊಂಡು ಏನು ಮಾಡುತ್ತೀರಿ ? ಅದರಲ್ಲಿ 'ಹಯವರಟ್' ಎಂದು ಬರುತ್ತದೆ' ಎಂದು ಬಿಟ್ಟರು. ನಾವೇನೂ ಅದಕ್ಕೆ ಅಂಜಲಿಲ್ಲ. ಲಘುಕೌಮುದಿ ಆಗ್ಗೆ ಬಹಳ

ಅಗ್ಗವಾಗಿಯೇ ಪ್ರತಿಯೊಂದಕ್ಕೆ ಮೂರೇ ಆಣೆಗೆ ಸಿಕ್ಕುತ್ತಿತ್ತು. ಬೇರೆ ಪುಸ್ತಕಗಳನ್ನು ತರಿಸಿ ಓದುವದಕ್ಕೆ ಪ್ರಾರಂಭಿಸಿದೆವು. ಕುವಲಯಾನಂದ, ಪ್ರತಾಪರುದ್ರೀಯ - ಇವನ್ನು ಓದುವದಕ್ಕೆ ಮೊದಲಾಯಿತು. ಒಂದು ದಿನ ಯಳ್ಳಂಬಳಸೆಯ ಪುರಾಣಿಕ ಸುಬ್ಬಾಭಟ್ಟರು ಬಂದರು ; ಅವರು ಇದೇನು ಓದುತ್ತಿದ್ದೀರಿ ? ಎಂದು ಕೇಳಿದರು. ನಾನು 'ಇದು ಕುವಲಯಾನಂದ, ಇದು ಪ್ರತಾಪರುದ್ರೀಯ, ಇದು ಲಘುಕೌಮುದಿ' ಎಂದೆನು. ಪುಸ್ತಕಗಳನ್ನು ತೋರಿಸಿದೆ. ಅವರು 'ಒಳ್ಳೆಯದಪ್ಪ ಸತ್ಕಾಲಕ್ಷೇಪ ಮಾಡುತ್ತೀರಿ !' ಎಂದು ಹೊಗಳಿದರು. ಸ್ವಲ್ಪ ಹೊತ್ತು ಕುಳಿತಿದ್ದಾಗ ನಾವು ತಿಜನ್ತಪ್ರಕರಣವನ್ನು ಪ್ರಾರಂಭಿಸಿದೆವು. ತತ್ರ ಪರಸ್ಮೈಪದಿನಃ ಲಟ್, ಲಿಟ್, ಲುಟ್, ಲೃಟ್, ಲೇಟ್, ಲೋಟ್, ಲಙ್, ಲಿಙ್, ಲುಙ್, ಲೃಙ್, ಏಷು ಪಞ್ಚಮೋ ಲಕಾರಶ್ಛನ್ದೋಮಾತ್ರಗೋಚರಃ ! ಎಂದು ಓದಿದ ಕೂಡಲೆ ಪುರಾಣಿಕರು ಲಟ್, ಲಿಟ್, ಲೀಟ್, ಲುಟ್, ಲೂಟ್ - ಮುಂತಾಗಿ ಗುಣಿತಾಕ್ಷರಗಳ ಅನುಕ್ರಮದಿಂದ ತಾವೂ ಹೇಳುವದಕ್ಕೆ ಮೊದಲು ಮಾಡಿದರು. ಚಿದಂಬರಯ್ಯನವರು ಹಾಸ್ಯದಲ್ಲಿ ಆಸಕ್ತಿಯುಳ್ಳವರಾದರೂ, ತಾವು ನಗುಮುಖವನ್ನು ತೋರಿಸಿಕೊಂಡದ್ದು ತೀರ ಅಪರೂಪ. 'ಆಮೇಲೆ ?' ಎಂದು ಕೇಳಿದರು. ಪುರಾಣಿಕರು ಹೊರಟು ಹೋದ ಮೇಲೆ ಶೃಂಗಾರರಸವು ಮಿತಿಮೀರಿರುವ ಈ ಪ್ರತಾಪರುದ್ರೀಯ ಮುಂತಾದವುಗಳು ಸಂಸ್ಕೃತದಲ್ಲಿರುವದರಿಂದ ನಾವು ಮಾಡುವದು ಸತ್ಕಾಲಕ್ಷೇಪವೆನಿಸಿಕೊಂಡಿದೆ. ಇದರ ಗುಟ್ಟು ತಿಳಿದರೆ ಎಂಥ ಕಾಲಕ್ಷೇಪವಾಗುವದೊ !' ಎಂದರು.

## ಷೆಡ್ಡಿನಲ್ಲಿ ಪಾಠ :

ಇಷ್ಟರಲ್ಲಿ ಊರಲ್ಲಿ ಪ್ಲೇಗು ಶುರುವಾಯಿತು. ಚಿದಂಬರಯ್ಯನವರ ಸೂಚನೆಯಂತೆ ನಾನೂ ಅವರ ಜೊತೆಯಲ್ಲಿ ಊರ ಹೊರಗೆ ದೂರವಾಗಿ ತಂಗಲಿ ಹಳ್ಳದ ದಾರಿಯಲ್ಲಿ, ಒಂದು ಹೊಲದಲ್ಲಿ ಷೆಡ್ ಹಾಕಿಕೊಂಡೆನು. ಆದರೆ ನನಗೆ ಸಂಪೂರ್ಣವಾಗಿ ಗುಡಿಸಲಿಗೆ ಬೇಕಾದ ಬಿದಿರು ಚಾಪೆಯಾಗಲಿ ಸೋಗೆಗಳಾಗಲಿ ಸಿಕ್ಕಲಿಲ್ಲವಾದ್ದರಿಂದ ಮೇಲುಛಾವಣಿಯಿಲ್ಲದ ಬಯಲು ಷೆಡ್ಡಿನಲ್ಲಿಯೇ ವಾಸವಾಯಿತು. ಅಲ್ಲಿ ಚಿಕ್ಕದೇವರಾಜ ವಂಶಾವಳಿಯೇ ಮುಂತಾದ ಕೆಲವು ಹಳಗನ್ನಡ ಕಾವ್ಯಗಳ ಅಭ್ಯಾಸವು ಮುಂದುವರಿಯಿತು. ನಮ್ಮಿಬ್ಬರಲ್ಲಿ ಎಷ್ಟು ಮಟ್ಟಿಗೆ ಯಾರಿಗೆ ತಿಳಿದಿರುತ್ತೋ, ಅಷ್ಟರ ಮಟ್ಟಿಗೆ ಅವರು ಗುರುಗಳಾಗುತ್ತಿದ್ದೆವು. ಆದರೆ ಆ ವರ್ಷದ ಪಂಡಿತ ಪರೀಕ್ಷೆಯ ಪಠ್ಯವಿಷಯಗಳು ಬದಲಾಗಿಬಿಟ್ಟದ್ದರಿಂದ ಚಿದಂಬರಯ್ಯನವರು ಪರೀಕ್ಷೆಗೆ ಹೋಗುವದಾಗಲಿಲ್ಲ. ಸಾಹಿತ್ಯದರ್ಪಣ, ಶಬ್ದಾನುಶಾಸನ - ಮುಂತಾದವುಗಳ ಅಭ್ಯಾಸವನ್ನು ಮುಂದುವರಿಸಿದೆವು. ಅವರ ಸ್ಥಿರ

ಪ್ರಯತ್ನವು ಅನ್ಯಾದೃಶವಾಗಿತ್ತು. ಆಗತಾನೆ ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳೊ ! ಎನ್ನುವಂತೆ ಓದಿದ ಗ್ರಂಥಗಳಿಗೆಲ್ಲ ಟಿಪ್ಪಣಿಯನ್ನು ಏರ್ಪಡಿಸಿ ಕೊಳ್ಳುತ್ತಿದ್ದರು. ಸಂಸ್ಕೃತದಲ್ಲಿ ನಾನು ಅವರಿಗಿಂತ ಸ್ವಲ್ಪ ಮುಂದುವರಿದಿದ್ದೆನೆನ್ನಬಹುದು. ನನ್ನ ಸಹಾಯದಿಂದ ಅವರು ದರ್ಪಣಾದಿಗಳನ್ನು ಓದುತ್ತಿದ್ದದ್ದಲ್ಲದೆ ನಾಯಿಕಾ ಪ್ರಭೇದಗಳೇ ಮುಂತಾದವುಗಳ ಪಟ್ಟಿಯನ್ನು ಏರ್ಪಡಿಸಿಕೊಳ್ಳುವದೂ ಶಬ್ದಾನು-ಶಾಸನದ ಸೂತ್ರಗಳಲ್ಲಿ ಶಬ್ದ ಅನುವೃತ್ತಿಯೇ ಮುಂತಾದವುಗಳನ್ನು ಗುರುತು ಹಾಕಿಕೊಂಡು ಪೂರ್ಣವಾಗಿ ವೃತ್ತಿಗಳನ್ನು ಏರ್ಪಡಿಸಿಕೊಳ್ಳುವುದೂ ಬೆಳಗಿನ ಜಾವದಲ್ಲಿ ಎದ್ದು ಯುವಕ ವಿದ್ಯಾರ್ಥಿಗಳಂತೆ ಸೂತ್ರಾದಿಗಳನ್ನು ಗಟ್ಟಿ ಮಾಡುವದೂ ನನ್ನನ್ನು ಬೆರಗು ಮಾಡಿದ್ದವು. ಬೆಳಗಿನ ಜಾವದಲ್ಲಿ ಎದ್ದು 'ಮೇಮಿ ಇತ್ಯಸ್ಯ ಭೋರ್ಲುಗ್ವತಿ ವ್ಯಂಜನಾತ್ ಉತ್ತರಪದೇ ಸ ದ್ವಂದ್ವಸಮಾಸೇ' ಮೆವರಿತು ನಿತ್ಯಂ ಎಂದು ಮುಂತಾಗಿ 'ಮೇವರಿತು ನಿತ್ಯಂ ಮನವರಿತು ನಿತ್ಯಮ್' ಎಂದು ಗಟ್ಟಿ ಮಾಡಿಕೊಳ್ಳುತ್ತಿರುವದು ನನಗೆ ಸ್ವಲ್ಪ ನಗೆಯನ್ನೂ ಉಂಟುಮಾಡು ತ್ತಿತ್ತು 'ಬೆವರಿತು ನಿತ್ಯಂ' ಎಂದು ಅವರನ್ನು ನಾನು ತಮಾಷೆ ಮಾಡಿದ್ದೂ ಉಂಟು !

## ಪಿತ್ತ ಭ್ರಮಣೆ ? ದೊಡ್ಡ ಗುಮಾಸ್ತೆ :

ಈ ನಡುವೆ ನನಗೆ ಮೇಲಿನ ಹುದ್ದೇದಾರರುಗಳ ಕಿರುಕುಳ ತೊಂದರೆಗಳು ಹೆಚ್ಚಿದವು. ಊರೊಳಗೆ ಕಂಡ ಕಡೆತಿರುಗುವದು, ಎಣ್ಣೆ ಪದಾರ್ಥಗಳನ್ನು ಹೆಚ್ಚಾಗಿ ತಿನ್ನುವದು, ಹಗಲೂ ರಾತ್ರೆ ಬಯಲು ಷೆಡ್ಡಿನಲ್ಲಿ ಮಲಗುವದು, ರಾತ್ರೆ ಅವೇಳೆಯಲ್ಲಿ ಕೂಡಾ ದೊಡ್ಡರಾಯರು ಅಮಲುದಾರರೂ ಶಿರಸ್ತದಾರರೂ ಹೇಳಿಕಳುಹಿಸುವದು, ನಾನು ಮಾಡಿದ ತಪ್ಪುಗಳಿಗೆ ಛೀ ಪೆಟ್ಟು ಹಾಕುವದು - ಇವೇ ಮುಂತಾದ ಕಾರಣಗಳಿಂದ ನನಗೆ ಸ್ವಲ್ಪ ಬುದ್ಧಿ ಭ್ರಮಣೆಯುಂಟಾಯಿತು. ಎರಡು ದಿನಗಳವರೆಗೆ ಮಾತನ್ನೇ ಆಡದೆ ಮಂಕಾಗಿ ಇದ್ದು ಬಿಟ್ಟೆನು. ಚಿದಂಬರಯ್ಯನವರು ಅವರ ಪಕ್ಕದಲ್ಲಿಯೇ ಷೆಡ್ ಕಟ್ಟಿಕೊಂಡಿದ್ದ ಇನ್ಸೂರೆನ್ಸ್ ಏಜೆಂಟು ಪಿ. ಎಸ್. ಸುಬ್ರಹ್ಮಣ್ಯ ಅಯ್ಯರೆಂಬುವರೂ ಡಾಕ್ಟರಿಗೆ ಹೇಳಿ ಔಷಧಿಗೆ ಏರ್ಪಾಡು ಮಾಡಿದರು. ನನ್ನ ಮಂಕಿನ ಕಾಲದಲ್ಲಿ ಸ್ವಪ್ನದಲ್ಲಿ 'ಸತ್ಯನಾರಾಯಣ ಪೂಜೆಯನ್ನು ಮಾಡು' ಎಂದು ಯಾರೋ ಹೇಳಿದಂತೆ ಆಯಿತು. ಅದನ್ನು ಕಾಗದದಲ್ಲಿ ಬರೆದು ಚಿದಂಬರಯ್ಯನವರಿಗೆ ತೋರಿಸಿದೆನು. ಇಷ್ಟರಲ್ಲಿ ಸುದ್ದಿಯನ್ನು ತಿಳಿದ ನಮ್ಮ ತಾಯಿಯವರೂ ಅಲ್ಲಿಗೆ ಬಂದರು. ಕೆಲವು ದಿನಗಳ ಮೇಲೆ ಸತ್ಯನಾರಾಯಣ ಪೂಜೆಯಾಯಿತೆಂದು ತೋರುತ್ತದೆ.

ನನ್ನ ಕೆಲಸವು ಅಮಲ್ದಾರರಿಗೆ ಸ್ವಲ್ಪವೂ ಮೆಚ್ಚಾಗಲಿಲ್ಲ. ಹಿಂದಿನ ಓವರ್ಸಿಯರಾಗಿದ್ದ ಮುಸಲ್ಮಾನರವನು ಅವರ ಮನೆಗೆ ಬೇಕಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡುತ್ತಿದ್ದದ್ದು ನನ್ನ ಕಾಲಕ್ಕೆ ನಿಂತು ಹೋದ್ದರಿಂದ ಅವರು ನನ್ನ ಮೇಲೆ ಬಹಳ ರೇಗುತ್ತಿದ್ದಾರೆಂದು ಅವರಿವರು ಹೇಳುತ್ತಿದ್ದರು. ನಾನು ಅದನ್ನು ನಂಬಲಿಲ್ಲ. ಶಿರಸ್ತೇದಾರರಿಗೂ ನಾನು ಬೇಕಾಗಿರಲಿಲ್ಲ. ಅವರು ಹೇಳುವ ಕೆಲಸವನ್ನು ಮಾಡಿಕೊಡುವದು ನನ್ನಿಂದ ಆಗುತ್ತಲೇ ಇರಲಿಲ್ಲ. ನಾನು ಆಗಾಗ್ಗೆ ಅಡ್ಡಾಡುವಾಗ ಅಲ್ಲಲ್ಲಿ ಕುಳಿತುಕೊಂಡು ಜೇಬಿನಲ್ಲಿದ್ದ ಭಗವದ್ಗೀತೆಯನ್ನೋ ಪಂಚೀಕರಣವನ್ನೋ ಓದುತ್ತಿದ್ದದ್ದರಿಂದ ಅವರು ಹಾಸ್ಯಕ್ಕೆ 'ಭಗವದ್ಗೀತೆ ಓವರ್ಸಿ' ಎಂಬ ಹೆಸರನ್ನು ನನಗೆ ಕೊಟ್ಟಿದ್ದರು. ಅಂತೂ ನನ್ನ ಕೆಲಸವು ಯಾರಿಗೂ ಮೆಚ್ಚಾಗಲಿಲ್ಲ. ಈಗ ಓವರ್ಸಿಯರ್ ಕೆಲಸವನ್ನು ಕೂಡ ತಪ್ಪಿಸಿ ಬರಿಯ ದೊಡ್ಡಿ ಚಾರ್ಜಿಗೆ ಹಾಕಿಬಿಟ್ಟರು, ನನಗೆ ಅದು ಮತ್ತೂ ಅನುಕೂಲವೇ ಆಯಿತೆಂದು ತೋರಿತು. ಚಿದಂಬರಯ್ಯನವರಲ್ಲಿದ್ದ ಚಂಪೂರಾಮಾಯಣವನ್ನು ತಂದು ವ್ಯಾಖ್ಯಾನ ಸಮೇತವಾಗಿ ಮೊದಲಿನಿಂದ ಒಂದು ಸಲ ಪೂರ್ತಿಯಾಗಿ ಓದಿಮುಗಿಸಿದೆನು. ದೊಡ್ಡಿಗಳಿಗೆ ಕೂಡಿದ ದನಗಳಿಗೆ ಬಾರಾ ಖರ್ಚು (ಮೇಲಿನ ಬಕ್ಷಿ ವೆಚ್ಚ) ಎಂದು ವಸೂಲು ಮಾಡಿ ರಶೀದಿಯಲ್ಲಿ ಬರೆದುಕೊಡುತ್ತಿತ್ತು. ಆದರೆ ಹುಲ್ಲನ್ನೇನೂ ಅಲ್ಲಿ ಅಷ್ಟಾಗಿ ಹಾಕಿಸಿದ್ದು ಕಾಣುತ್ತಿರಲಿಲ್ಲ. ನಾನು ಇದು ಗೋಗಳಿಗೆ ಅನ್ಯಾಯವಾಗುವದೆಂದು ಬಗೆದು, ಹುಲ್ಲನ್ನು ಕೊಂಡಿಟ್ಟು ಬಣವೆಕಟ್ಟಿಸಿ, ಬರುವ ದನಗಳಿಗೆ ಹಾಕಿಸುವದು, ಅವಕ್ಕೆ ಜವಾನನಿಂದ ಕಲ್ಲುದೋಣಿಯಲ್ಲಿ ನೀರುಹಾಕಿಸುವದು. ಇವುಗಳನ್ನೆಲ್ಲ ಅಕ್ಷರಶಃ ಆಚರಣೆಗೆ ತಂದೆನು. ಇದರಿಂದ ದನಗಳಿಗೆ ಅನುಕೂಲವಾಯಿತಾದರೂ ನನ್ನ ವಿಷಯಕ್ಕೆ ಅನೇಕರಿಗೆ ಅಸಮಾಧಾನವಾಯಿತು. ವಸೂಲಾದ ಹಣವನ್ನೆಲ್ಲ ದೊಡ್ಡಿಯ ಲೆಕ್ಕಕ್ಕೆ ಬರೆದು ತಾಲ್ಲೂಕು ಟ್ರೆಜರಿಗೆ ಜಮಾ ಮಾಡಿಸುವದು ತಪ್ಪೆಂದು ಕೆಲವರ ಭಾವನೆ, ದೊಡ್ಡಿಯ ಸಂಬಂಧದಿಂದ ಬಂದ ಹಣವನ್ನೆಲ್ಲ ಲೆಕ್ಕಕ್ಕೆ ಬರೆದುಕೊಳ್ಳದೆ ಕೆಲವರಿಗೆ ಆ ವಸೂಲಿ ಹಣದಲ್ಲಿ ಪಾಲುಕೊಡುವ ಮಾಮೂಲು ಇದ್ದದ್ದು ನಿಂತು ಹೋಯಿತು. ದೊಡ್ಡಿಯ ವಸೂಲಾತಿ ಆ ತಿಂಗಳುಗಳಲ್ಲಿ ಹೆಚ್ಚಾದದ್ದಕ್ಕೆ ಕಾರಣವೇನು? ಹಿಂದೇಕೆ ಕಡಿಮೆ ಆಯಿತು ? ಎಂಬುದಕ್ಕೆ ಡಿಸ್ಟ್ರಿಕ್ಟು ಕಚೇರಿಯವರು ಲೆಕ್ಕದವಿಷಯಕ್ಕೆ ವಿವರಣೆಯನ್ನು(**Explanation**) ಕೊಡಬೇಕೆಂದು ಕೇಳಿದರೆಂದೂ ಅದಕ್ಕೆ ತಾಲ್ಲೂಕಿನವರು ಯಾವದೋ ಸಮಾಧಾನವನ್ನು ಬರೆದು ಹಾಕಿದರೆಂದೂ ನನ್ನ ದಡ್ಡತನವನ್ನು ಕುರಿತು ಹಾಸ್ಯ ಮಾಡಿದರೆಂದೂ ಈಚೆಗೆ ತಿಳಿದು ಬಂತು.

## ಸಂಬಳವಿಲ್ಲದ ಸಂಸ್ಕೃತ ಮೇಷ್ಟರು :

ನನಗೆ ಈಗ ಅನೇಕ ಕಾರಣಗಳಿಂದ ಸಂಸ್ಕೃತ ಮೇಷ್ಟರಾಗುವ ಸಂದರ್ಭಗಳು ಒದಗಿಬಂದವು. ಸುಬ್ರಹ್ಮಣ್ಯ ಅಯ್ಯರವರು ಆಗಾಗ್ಗೆ ನನ್ನಲ್ಲಿಗೆ ಬಂದು ಭಂಡಾರಕರ್ ಪ್ರಥಮ ಪುಸ್ತಕವನ್ನು ಹೇಳಿಸಿಕೊಳ್ಳುತ್ತಿದ್ದರು. ಅವರು ಒಳ್ಳೆಯ ಹಾಸ್ಯಗಾರರು, ಲೈಫ್ ಇನ್ಷೂರೆನ್ಸಿನ ಏಜಂಟರು, ತಮಿಳು ಭಾಷೆಯೇ ಬಹಳ ರೂಢಿಯಲ್ಲಿದ್ದದ್ದರಿಂದ ಅವರು ಕನ್ನಡವನ್ನು ಆಡುವದು ಸ್ವಲ್ಪ ವಿಜಾತೀಯವಾಗಿದ್ದದ್ದರಿಂದ ನನಗೆ ಅವರನ್ನು ಕಂಡಾಗೆಲ್ಲ ನಗೆ ಬರುತ್ತಿತ್ತು. ಭಂಡಾರಕರಿನಲ್ಲಿದ್ದ 'ಅರ್ಥಮನರ್ಥಂ ಭಾವಯ ನಿತ್ಯಂ' ಎಂಬ ಪದ್ಯವೊಂದನ್ನು ಗಟ್ಟಿಮಾಡಿಕೊಂಡು 'ಇನ್ಷೂರೆನ್ಸ್' ಕೆಲಸಕ್ಕೆ ಹೋದಾಗ ಈ ಪದ್ಯವನ್ನು ನಾನು ಉದಾಹರಿಸಬಹುದಷ್ಟೆ ? ಎಂದು ಅವರು ಕೇಳಿದ್ದು, ನಾನು ಫಕಾರನೆ ನಕ್ಕದ್ದು ನೆನಪಿಸಿಕೊಂಡರೆ ಈಗಲೇ ದೃಶ್ಯವು ಕಣ್ಣಿಗೆ ಕಟ್ಟಿದಂತೆ ಮನಸ್ಸಿಗೆ ಭಾಸವಾಗುತ್ತದೆ. ಒಬ್ಬ ಮುಸಲ್ಮಾನ ಸಬ್‌ರಿಜಿಸ್ಟ್ರಾರರ ಪರಿಚಯವೂ ಈ ಕಾಲಕ್ಕೆ ನನಗೆ ಆಯಿತು. ಸಾಯಂಕಾಲ ಸಂಚಾರಕಾಲದಲ್ಲಿ ಅವರು ಸಂಸ್ಕೃತ ನೀತಿಶತಕವೇ ಮುಂತಾದ ಸಣ್ಣಗ್ರಂಥಗಳಿಂದ ಕೆಲವು ಪದ್ಯಗಳನ್ನು ಕಲಿತುಕೊಂಡು ಒಪ್ಪಿಸುತ್ತಾ ಅವುಗಳ ಅರ್ಥವನ್ನು ಕೇಳುತ್ತಿದ್ದರು. ನನಗೆ ಕಾಯಿಲೆ-ಯಾಗಿದ್ದಾಗ ಅದಕ್ಕೆ ಇಡಿಯೊಪತಿ **(Idiopathy)** ಎಂದು ನಾಮಕರಣವನ್ನು ಮಾಡಿ ಔಷಧಿಕೊಟ್ಟಿದ್ದ ಡಾಕ್ಟರು ಆ ನಿಮಿತ್ತದಿಂದಲೂ ಓವರ್ಸಿಯರಿಗೂ ಡಾಕ್ಟರಿಗೂ ಪ್ಲೇಗು ಕಾಲದಲ್ಲಿರುವ ನಿಕಟ ಸಂಬಂಧದ ಆಧಾರದಿಂದಲೂ ನಾನು ಆಸ್ಪತ್ರೆಗೆ ಹೋದಾಗಲೆಲ್ಲ ಸ್ವಲ್ಪ ಸಂಸ್ಕೃತವನ್ನು ಹೇಳಿಸಿಕೊಳ್ಳುತ್ತಿದ್ದರು. ನನ್ನನ್ನು 'ಮೇಷ್ಟರೆ' ಎಂದು ಸಂಬೋಧಿಸುತ್ತಿದ್ದರು. ಅಂತೂ ನಾನು ಈಗ ಚಿದಂಬರಯ್ಯನವರ ಸಹವಾಸದ ನಿಮಿತ್ತವಾಗಿ ಅನೇಕರಿಗೆ ಸಂಸ್ಕೃತ ಮೇಷ್ಟರಾಗಿ ಪರಿಣಮಿಸಿದ್ದೆನು.

## ವಿದ್ಯಾಭ್ಯಾಸ ಇಲಾಖೆಗೆ ಪ್ರವೇಶ :

ಈ ಹೊತ್ತಿಗೆ ಒಬ್ಬರು ಅಯ್ಯಂಗಾರರು ಆ ಊರಿಗೆ ಅಮಲ್ದಾರರಾಗಿ ಬಂದರು. ಅವರು ಹಳೆಯ ಪದ್ಧತಿಯವರು. ಅವರು ಬಹಳ ಮಟ್ಟಿಗೆ ಮನೆಯಲ್ಲಿಯೇ ರಿಕಾರ್ಡುಗಳ ಸುಧಾರಣೆ, ಆರ್ಡರು - ಮುಂತಾದ ಕೆಲಸವನ್ನು ಮಾಡುತ್ತಿದ್ದು, ಸಾಯಂಕಾಲವಾಗುತ್ತಲೂ ಕಚೇರಿಗೆ ಬಂದು ತಮ್ಮ ಅಧಿಕಾರದ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ನನ್ನನ್ನು ಈ ಸುಮಾರಿಗೆ ಕರೆಯಿಸಿ ಏನನ್ನು ಹೇಳದೆ ಸುಮ್ಮನೆ ನಿಲ್ಲಿಸಿ ತಮ್ಮ ನ್ಯಾಯವಿಚಾರಣೆಯ ಕೆಲಸದಲ್ಲಿ ನಿರತರಾಗುತ್ತಿದ್ದರು. ಸಾಯಂಕಾಲದಲ್ಲಿ ದೀಪದ ಬೆಳಕಿನಲ್ಲಿ ದೀರ್ಘಕಾಲ ನಿಲ್ಲುವ ಒಂದು ಬಗೆಯ ಕಾಷ್ಠತಪಸ್ಸಿನ ಅಭ್ಯಾಸವು ನನಗೆ ಆಗಬೇಕಾಗಿತ್ತು. ಕೆಳಗೆ ಕೂರಲೂ ಅವಕಾಶವಿಲ್ಲದೆ

ಹೊರಕ್ಕೆ ಹೋಗಲೂ ಆಗದೆ ಚಡಪಡಿಸುತ್ತಿದ್ದ ನನ್ನ ದುರವಸ್ಥೆಯು ಯಾರಿಗೂ ಬೇಕೆನ್ನುವ ಹಾಗಿರಲಿಲ್ಲ. ಚಿದಂಬರಯ್ಯನವರಿಗೆ ನನ್ನ ಮೇಲೆ ಕನಿಕರ ಹುಟ್ಟಿತು. ಅವರು ತಮಗೆ ಪರಿಚಯವಿದ್ದ ಮೂರು ಜನ ಡೆಪ್ಯುಟಿ ಇನಸ್ಪೆಕ್ಟರುಗಳಿಗೆ ನನ್ನನ್ನು ಶಿಫಾರಸು ಮಾಡಿ ಒಂದಾನೊಂದು ಪತ್ರವನ್ನು ಬರೆದರು. 'ಇವರು ಎಲ್ಲಾವಿಧದಿಂದಲೂ ನಮ್ಮ ಇಲಾಖೆಗೆ ತಕ್ಕವರು ಇವರಿಗೆ ತಾವು ದಯವಿಟ್ಟು ಯಾವದಾದರೂ ಕೆಲಸವನ್ನು ಮಾಡಿಸಿ ಕೊಟ್ಟರೆ ನನಗೆ ಮಾಡಿ ಕೊಟ್ಟಂತೆ ಭಾವಿಸುತ್ತೇನೆ' ಎಂದು ಬರೆದಿದ್ದರು. ಆ ಒಂದೆರೆಡು ದಿನಗಳಲ್ಲಿಯೇ ಮೂವರು ಉತ್ತರವನ್ನು ಕೊಟ್ಟರು. ಹಾಸನದವರು 'ಕೂಡಲೆ ಹೊರಟು ಬರಲಿ ; ಸದ್ಯಕ್ಕೆ ಅವರಿಗೆ ಯಾವದಾದರೂ ಪ್ರೈವೇಟ್ ಟ್ಯೂಷನ್ ಏರ್ಪಡಿಸಿ ಕೊಟ್ಟಿರುತ್ತೇನೆ ; ಬಳಿಕ ಕೆಲಸಕ್ಕೂ ಏರ್ಪಡಿಸಿಕೊಡುತ್ತೇನೆ' ಎಂದು ಬರೆದರು. ಆಗ್ಗೆ ಹಾಸನ, ಕಡೂರು - ಎರಡು ಡಿಸ್ಟ್ರಿಕ್ಟುಗಳಿಗೂ ಒಬ್ಬರೆ ಡೆಪ್ಯೂಟಿ ಇನ್‌ಸ್ಪೆಕ್ಟರ್ ಇದ್ದಂತೆ ನೆನಪು. ಚಿತ್ರದುರ್ಗದಿಂದ ವೀರಭದ್ರಯ್ಯನವರು ಒಂದು ತಿಂಗಳು ಬರಲಿ, ಹತ್ತು ರೂ. ತಲುಬಿನ ಮೇಲೆ ಜಗಳೂರಿಗೆ ಬರುವದಕ್ಕೆ ಇಷ್ಟಪಡುತ್ತಾರೆಯೆ ? ಬರುವದಾದರೆ ಸದ್ಯದಲ್ಲಿಯೇ ಏನಾದರೂ ಏರ್ಪಾಡು ಮಾಡಿಕೊಡುತ್ತೇನೆ, ಎಂದು ಬರೆದರು. ಶಿವಮೊಗ್ಗದಿಂದ ರಂಗಪ್ಪನವರೆಂಬ ಇನ್‌ಸ್ಪೆಕ್ಟರ್ 'ತಿಂಗಳಿಗೆ 15 ರೂ ಖಾಯಂ ಕೆಲಸ ಕೊಡಿಸುತ್ತೇನೆ ಬರುತ್ತಾರೆಯೇ ?' ಎಂದು ಬರೆದರು. ಚಿದಂಬರಯ್ಯನವರು ಬರಿಯ ಕನ್ನಡ ಮೇಷ್ಟರಾಗಿದ್ದರೂ ಅವರ ಯೋಗ್ಯತೆಯು ಆಗಿನ ಇನ್‌ಸ್ಪೆಕ್ಟರ್‌ಗಳಿಗೆಲ್ಲಾ ಎಷ್ಟರ ಮಟ್ಟಿಗೆ ಮನದಟ್ಟಾಗಿತೆಂಬುದು ಈ ಉತ್ತರಗಳಿಂದ ವ್ಯಕ್ತವಾಗಿತ್ತು. ಆ ಉತ್ತರಗಳು ಬಂದ ದಿನ ಬೆಳಿಗ್ಗೆ ನಾನು ಚಿದಂಬರಯ್ಯನವರನ್ನು ಕಂಡಕೂಡಲೇ 'ಬನ್ನಿ ಮೇಷ್ಟರೇ !' ಎಂದು ಸಂಬೋಧಿಸಿದ್ದರಿಂದಲೇ ಅವರ ಪ್ರಯತ್ನವು ಸಫಲವಾಗಿರಬೇಕೆಂದು ನಾನು ಊಹಿಸಿಕೊಂಡೆನು. ನಾವಿಬ್ಬರು ವಿಚಾರ ವಿನಿಮಯ ಮಾಡಿದ್ದರಲ್ಲಿ ಶಿವಮೊಗ್ಗ ಮಲೆನಾಡಾದ್ದರಿಂದ ಜಗಳೂರಿಗೇ ಹೋಗತಕ್ಕದೆಂದು ನಿರ್ಣಯಿಸಿದೆವು. ಕಡೂರಲ್ಲಿ ಕೃಷ್ಣಯ್ಯನೆಂಬ ಒಬ್ಬ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್‌ರ ಗುಮಾಸ್ತರಿದ್ದರು. ಅವರು ಚಿದಂಬರಯ್ಯನವರ ಸ್ನೇಹಿತರು. ನನಗೆ ಅಡಕವಾಗಿ ಸಂಸಾರವನ್ನು ಮಾಡುವ ರೀತಿಯನ್ನು ಆಗಾಗ್ಗೆ ಹೇಳಿಕೊಡುತ್ತಿದ್ದರು. ಅವರು ಈಗ ಚಿತ್ರದುರ್ಗಕ್ಕೆ ವರ್ಗವಾಗಿದ್ದು ಇನ್‌ಸ್ಪೆಕ್ಟರಲ್ಲಿ ನನಗಾಗಿ ಹೇಳಿಕೊಂಡು ಈ ಜಗಳೂರು ವರ್ಗಕ್ಕೂ, ಇಲಾಖೆಯಲ್ಲಿ ಮುಂದಿನ ನನ್ನ ಕೆಲವು ಅನುಕೂಲತೆಗಳಿಗೂ ಸಹಾಯಕರಾದರೆಂಬುದು ನನಗೆ ಹಿಂದಿನಿಂದ ತಿಳಿದು ಬಂದಿತು.

# 17. ವಿದ್ಯಾಭ್ಯಾಸದ ಇಲಾಖೆಯ ಪ್ರಥಮಾನುಭವಗಳು

## ಜಗಳೂರಿಗೆ ಪ್ರಯಾಣ :

ಜಗಳೂರಿನತ್ತ ಚಿತ್ತವನ್ನಿಟ್ಟುಕೊಂಡು ಆ ದಿನ ಮಧ್ಯಾಹ್ನದ ಮೇಲೆ ಅಮಲುದಾರರನ್ನು ಕಂಡೆನು. ಅವರು ಎಂದಿನಂತೆ ನನ್ನ ಕೆಲಸದ ವಿಷಯದಲ್ಲಿ ಜಿಗುಪ್ಸೆಯನ್ನು ಸೂಚಿಸುತ್ತಾ 'ಹೀಗೆ ಇಷ್ಟವಿಲ್ಲದ ಕೆಲಸವನ್ನು ಮಾಡುವದಕ್ಕಿಂತ ರಾಜಿನಾಮೆಕೊಟ್ಟು ಹೋಗಬಾರದೇನಯ್ಯ ?' ಎಂದು ಹಂಗಿಸಿದರು. ನಾನು ಆ ಕೆಲಸಕ್ಕೆ ಸಿದ್ಧನೇ ಆಗಿ ಕಾಗದದಲ್ಲಿ ರಾಜೀನಾಮೆಯನ್ನು ಬರೆದುಕೊಂಡೆ ಹೋಗಿದ್ದೆನಾದ್ದರಿಂದ ಕೂಡಲೇ ಅರ್ಜಿಯನ್ನು ಅವರ ಮೇಜಿನ ಮೇಲೆ ಇಟ್ಟೆನು. ಅಯ್ಯಂಗಾರ್ ಅಮಲುದಾರರು ಅವಾಕ್ಕಾದರೂ ಕೂಡಲೇ ಹೆಡ್‌ಗುಮಾಸ್ತರನ್ನು ಕರೆಯಿಸಿ ನನ್ನ ರಾಜೀನಾಮೆಯ ಪತ್ರವನ್ನು ತೋರಿಸಿದರು. ಅವರು 'ಯಾರಯ್ಯ ನಿಮಗೆ ಹೇಳಿ ಕೊಟ್ಟವರು ? ಶರೀರದಲ್ಲಾದರೂ ಮನಸ್ಸಿನಲ್ಲಾದರೂ ಸ್ವಾಸ್ಥ್ಯವಿಲ್ಲದಿದ್ದರೆ ಎರಡು ತಿಂಗಳು ರಜಕ್ಕೆ ಬರೆದುಕೊಳ್ಳಿ ; ಹೀಗೆಲ್ಲ ಮಾಡಬಾರದು' ಎಂದು ಬುದ್ಧಿ ಹೇಳಿ ಹೊಸದಾಗಿ ಒಂದು ರಜ ರಿಪೋರ್ಟು ಬರೆಯಿಸಿ ಮಂಜೂರಿಗೆ ಶಿಫಾರಸು ಮಾಡಿಸಿದರು. ನಾನು ಅದು ಯಾವದನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆಯೇ ಆ ದಿನವೇ ಊರಿಗೆ ಹೋಗಿ ಸ್ವಲ್ಪ ಮಟ್ಟಿಗೆ ವಿಷಯವನ್ನು ತಾಯಿಯವರಲ್ಲಿ ರಹಸ್ಯವಾಗಿ ತಿಳಿಸಿ ಅವರ ಅಪ್ಪಣೆಯನ್ನು ಪಡೆದುಕೊಂಡು ಜೋಯಿಸ ಸುಬ್ಬಾಭಟ್ಟರಲ್ಲಿ ಪ್ರಶ್ನೆ ಕೇಳಿದೆನು. ಅವರು 'ಹೊರಟಿರುವದು ರಾಜಕಾರ್ಯ, ಶುಭಮಸ್ತು' ಎನ್ನಲು ನಾನು ಆಶ್ಚರ್ಯದಿಂದ ಶಕುನಶಾಸ್ತ್ರಕ್ಕೂ ಬೆಲೆ ಇರುವಂತೆ ಕಾಣಿಸುತ್ತದೆ ಎಂದುಕೊಂಡು ಜಗಳೂರಿಗೆ ಹೊರಟೆನು.

## ಜಗಳೂರು ಅನುಭವ :

ಕಡೂರಿನಿಂದ ಹರಿಹರದ ಕಡೆಗೆ ಹೋಗುವ ರೈಲನ್ನು ಹತ್ತಿದ್ದೂ ಇದೇ ಮೊದಲು. ಕೊಡಗನೂರು ಸ್ಟೇಷನ್‌ನಲ್ಲಿ ಇಳಿದು ಅದೇ ರಾತ್ರಿ ಜಗಳೂರಿಗೆ ಬಂಡಿಯನ್ನು 3ರೂ. ಬಾಡಿಗೆಗೆ ಗೊತ್ತುಮಾಡಿಕೊಂಡು ಹೊರಟೆನು. ಆಗ ಜಗಳೂರಿನಲ್ಲಿ ಪ್ಲೇಗು ಇದ್ದದ್ದರಿಂದ ಬಾಡಿಗೆಗೆ ಬರುವದಕ್ಕೇ ಯಾರೂ ಒಪ್ಪಲಿಲ್ಲ. ನನಗೆ ಸಿಕ್ಕಿದವನು ಊರಹೊರಗೇ ಬಂಡಿ ಇಳಿಸಿಬಿಡುವದಕ್ಕೆ ನನ್ನ ಸಂಮತಿಯನ್ನು ಮೊದಲೇ ಪಡೆದುಕೊಂಡು ಹೊರಟಿದ್ದನು. ಬೆಳಿಗ್ಗೆ ಜಗಳೂರ ಸಮೀಪಕ್ಕೆ

ಹೋದೆವು. ಬಂಡಿ ನಿಂತಿತು. ರಘುನಾಥರಾಯರ ಭೂ ವಿವರಣೆಯಲ್ಲಿ ಜಗಳೂರಲ್ಲಿ ದೊಡ್ಡ ಕೆರೆಯಿದೆ ಎಂದೂ ಬರೆದದ್ದು ನೆನಪಿಗೆ ಬಂದು 'ಕೆರೆ ಎಲ್ಲಪ್ಪ ?' ಎಂದು ಗಾಡಿಯವನನ್ನು ಕೇಳಲು ಅವನು ನಕ್ಕು 'ಈಗ ನಾವು ನಿಂತಿರುವದೇ ಕೆರೆಯ ಅಂಗಳ. ಇನ್ನೂ ಬೇರೆ ಕೆರೆ ಎಲ್ಲಿಂದ ಬರಬೇಕು ?' ಎಂದನು. ನೀರಿನ ಸೆಲೆಯೇ ಇಲ್ಲದ ಆ ದೊಡ್ಡ ಕೆರೆಯಿಂದ ಗಂಟು ಹೊತ್ತುಕೊಂಡು ಊರೊಳಕ್ಕೆ ಹೋದೆನು. ಅಲ್ಲಿ ಯಾರೊಬ್ಬರೂ ಕಾಣಿಸಲೇ ಇಲ್ಲ. ಕೊನೆಗೆ ಸ್ಕೂಲನ್ನು ಹುಡಿಕಿಕೊಂಡು ಹೋದೆ. ಆ ದಿನ ಬೆಳಗಿನ ಹೊತ್ತು ಸ್ಕೂಲು ತೆರೆಯಬೇಕಾಗಿತ್ತಾದರೂ ಹುಡುಗರ ಓಡಾಟವೇನೂ ಅಲ್ಲಿ ಕಾಣಿಸಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಒಳಗಿನಿಂದ ಯಾರೋ ಬಂದು ನನ್ನನ್ನು ವಿಚಾರಿಸಿದರೂ ನಾನು ಹೆಡ್‌ಮಾಸ್ಟರ್ ಎಲ್ಲಿ ? ಎಂದು ಕೇಳಿದೆ. ಅವರೇ ಹೆಡ್‌ಮಾಸ್ಟರೆಂದು ತಿಳಿಯಿತು. ನಾನು ಕೆಲಸಕ್ಕೆ ಬಂದಿದ್ದೇನೆಂಬುದನ್ನು ತಿಳಿದುಕೊಂಡು 'ನಿಮಗೂ ಗ್ರಹಚಾರ ಕಾಡಿತ್ತೇ ? ಇಲ್ಲಿ ಹೇಗೆ ಬಂದಿರಿ ? ನಿಮಗೆ ಜೀವದ ಮೇಲೆ ಆಸೆ ಇದ್ದರೆ ಕೂಡಲೇ ಹೊರಟು ಹೋಗಿ !' ಎಂದರು. ಸ್ವಲ್ಪ ಹೊತ್ತಾದ ಬಳಿಕ - ನಂತರ ನೀವು ಕೆಲಸಕ್ಕೆ ರಿಪೋರ್ಟು ಮಾಡಿಕೊಳ್ಳದಂತೆ ಅಡ್ಡಿ ಮಾಡುತ್ತಿದ್ದೇನೆಂದು ತಿಳಿದು ಕೊಳ್ಳಬೇಡಿ, ನೀವು ಕೆಲಸಕ್ಕೆ ಸೇರಿದ ಮಾತ್ರದಿಂದ ನನಗೇನು ನಷ್ಟ? ಅವಶ್ಯವಾಗಿ ರಿಪೋರ್ಟು ಕೊಡಿ !' ಎಂದರು. ನಾನು ರಿಪೋರ್ಟುಕೊಟ್ಟು ಕೆಲಸಕ್ಕೆ ಸೇರಿದೆ.

ಸ್ಕೂಲಿನಲ್ಲಿ ಪಾಠದ ಸುದ್ದಿಯೇ ಇರಲಿಲ್ಲ. ಅಮಲುದಾರರ ಇಬ್ಬರು ಹುಡುಗರು ಮಾತ್ರ ಸ್ಕೂಲಿಗೆ ಬರುತ್ತಿದ್ದರು. ಅವರಿಗೆ ಒಂದೊಂದು ಗಂಟೆ ಪಾಠ ಹೇಳಿ ಕಳುಹಿಸುತ್ತಿದ್ದೆವು. ಬಾಕಿಯ ಹೊತ್ತು ನಾವೆಲ್ಲರೂ ಈ ಒಂದು ಷೆಡ್ಡಿನಲ್ಲಿ ಸೇರಿಕೊಂಡು ಅಡಿಗೆ ಮಾಡಿಕೊಳ್ಳಬೇಕಾಗಿತ್ತು. ನನ್ನನ್ನೂ ತಮ್ಮ ಗುಂಪಿಗೆ ಅವರು ಸೇರಿಸಿಕೊಂಡರು. ಗಂಡು ಬೀಡೇ ಇದ್ದ ಆ ಷೆಡ್ಡಿನಲ್ಲಿ ಒಬ್ಬರಿಗೆ ಒಂದೊಂದು ಕೆಲಸ ಹಂಚಿದ್ದರು ; ಅಡಿಗೆಗೆ ಒಬ್ಬರು, ಬಟ್ಟೆ ಒಗೆಯುವದಕ್ಕೆ ಒಬ್ಬರು, ನೀರು ಸೇದುವವರು ಒಬ್ಬರು, ಹೀಗೆ ಅರಿಸಿಕೊಂಡು ಮಾಡಬೇಕಾಗಿತ್ತು. ನೀರು ಸೇದುವ ಕೆಲಸ ನನ್ನ ಪಾಲಿಗೆ ಬಿದ್ದಿತ್ತು. ಬಾವಿಯ ಬಳಿ ಬಂದು ಅನೇಕರು ಸೇರುವದರಿಂದ ದಾರಿಯನ್ನು ಬಿಡಿಸಿಕೊಂಡು ಸೇದುವದಲ್ಲದೆ ನೆಲಬಾವಿಯಲ್ಲಿ ಸೇದುವ ಅಭ್ಯಾಸದ ಅವಶ್ಯಕತೆಯೂ ಇತ್ತು. ಬಿಂದಿಗೆಗೆ ಸರಿಯಾಗಿ ಹಗ್ಗವನ್ನು ಕಟ್ಟುವ ಎಚ್ಚರಿಕೆ ತೆಗೆದುಕೊಳ್ಳದೆ ಇದ್ದದ್ದರಿಂದ ಅದನ್ನು ಬಾವಿಗೆ ಕೆಡವಿದ್ದಕ್ಕೆ ಹಾಸ್ಯಕ್ಕೆ ಈಡಾಗ ಬೇಕಾಗುತ್ತಿತ್ತು. ಅಲ್ಲಿ ಕಸ ಗುಡಿಸುವದು ಕೂಡ ಒಂದು ಕಷ್ಟವೇ ಆಗಿತ್ತು ; ಮಡಿ ಮೈಲಿಗೆಗಳ ವಿಷಯಗಳಲ್ಲಿ ನಮ್ಮಗಳಲ್ಲಿ ಮತ ಬೇಧವಿದ್ದದ್ದರಿಂದ ಅದರಲ್ಲಿಯೂ ನನಗೆ ಯೋಗ್ಯತಾ ಪತ್ರ ಸಿಕ್ಕುವಂತಿರಲಿಲ್ಲ. ಅಲ್ಲಿ ಒಂದು ಸಮಾಧಾನವೇನೆಂದರೆ ಹೆಡ್‌ಮಾಸ್ಟರ್ ನಾರಾಯಣರವರು ಒಳ್ಳೆಯ

ರಸ ಹಾಸ್ಯದವರು. ಎಲ್ಲರನ್ನೂ ಸಲುಗೆಯಿಂದ ಮಾತನಾಡಿಸುತ್ತಿದ್ದರು. ಅವರು ಒಂದು ದಿನ ಹೇಳಿದ ಎಮ್ಮೆ ಸಂಪಾದನೆಯ ಕ್ರಮದ ವಿವರಣೆ ನನಗೆ ಇನ್ನೂ ನೆನಪಿದೆ. ಒಂದು ಎಮ್ಮೆಯನ್ನು 60 ರೂಗೆ ಖರೀದಿಗೆ ತೆಗೆದುಕೊಳ್ಳುವದು ; ಖರೀದಿ ಕೊಟ್ಟವನಲ್ಲಿಯೇ ಅದನ್ನು ಅಡವಿಡುವದು. 60ರೂಗಳ ಹಾಲು ಅವನು ಉಂಡ ಬಳಿಕ ನಮಗೆ ಎಮ್ಮೆಯನ್ನು ಬಿಡುವದು ಹೀಗಾದರೆ ಸುಲಭವಾಗಿ ಎಮ್ಮೆ ಸಿಕ್ಕುತ್ತದೆ ಎಂದಿದ್ದರು ಅವರು ! ಅಂತೂ ಹಾಗೂ ಹೀಗೂ ಹತ್ತು ದಿನಗಳು ಕಳೆದದ್ದಾಯಿತು. ಇಷ್ಟರಲ್ಲಿ ನಮ್ಮವರೊಬ್ಬರು ನೆಂಟತನ ವಿಚಾರಿಸಿಕೊಂಡು ಬಂದರು. ಹೆಡ್ ಮಾಸ್ತರ್ 'ಇಗೊ ಇವರು ಮತ್ತೊಂದು ಬಲಿಯಾಗಿ ಬಂದಿದ್ದಾರೆ' ಎಂದು ನನ್ನನ್ನು ತೋರಿಸಿದರು ; ಕೊನೆಗೆ ಹೆಡ್ ಮಾಸ್ತರ್ ಕರೆಯಿಸಿದರೆ ಕೂಡಲೇ ಕಳುಹಿಸಿ ಕೊಡುವದಾಗಿ ವಾಗ್ದಾನವಿತ್ತು, ಆ ನೆಂಟರು ನನ್ನನ್ನು ತಮ್ಮ ಷೆಡ್ಡಿಗೆ ಕರೆದುಕೊಂಡು ಹೋದರು. ಅವರ ಮನೆಯಲ್ಲಿದ್ದ ಮುದುಕಿ ನಮ್ಮ ತಾಯಿಯ ತವರೂರಾದ ಅಣತಿಯವರಂತೆ. ನನ್ನನ್ನು ಬಹಳ ಪ್ರೇಮದಿಂದ ಕಂಡು ಆದರಿಸುತ್ತಿದ್ದರು.

## ನೆಂಟರಮನೆ :

ಈಗ ನನಗೆ ಸ್ಕೂಲಿನ ಕೆಲಸವಿಲ್ಲ. ನಮ್ಮ ಷೆಡ್ಡಿನ ಬಳಿಯಲ್ಲಿ ಷೆಡ್ ಹಾಕಿಕೊಂಡಿದ್ದ ಸುಬ್ಬಾಶಾಸ್ತ್ರಿಗಳೆಂಬ ಕನ್ನಡ ಮೇಷ್ಟರ ಸಹವಾಸವು ದೊರೆಯಿತು. ಅವರು ತಮ್ಮ ಹಿರಿಯರು ಬರೆದಿದ್ದ ಮಲ್ಲಾರಿಮಹಾತ್ಮೆ ಎಂಬ ಷಟ್ಪದಿಕಾವ್ಯವನ್ನು ತೋರಿಸಿದರು ; ಅದು ಜೈಮಿನಿಗಿಂತಲೂ ಶ್ರೇಷ್ಠವಾದ ಕವಿತೆಯೆಂದು ನನಗೆ ತೋರಿತು. ಅದನ್ನು ನಾವು ಜೊತೆಯಲ್ಲಿ ಓದುತ್ತಿದ್ದಾಗ ಆ ಕಡೆಯಿದ್ದ ದಡ್ಡಜನರಿಗೆ ನನ್ನ ತಿಳುವಳಿಕೆಯ ವಿಷಯಕ್ಕೆ ಮೆಚ್ಚುಗೆವುಂಟಾಯಿತು. ಅವರುಗಳು ನಾನಿದ್ದ ರಾಮರಾಯರ (?) ಅನುಮತಿಯಿಂದ ನನ್ನಿಂದ ಕನ್ನಡ ಭಾರತವನ್ನು ಓದಿಸಿ ಕೇಳಬೇಕೆಂದು ಅದಕ್ಕಾಗಿ ಏರ್ಪಡಿಸಿದರು. ನನಗೆ ಆಗ ಯಾವ ಕೆಲಸವೂ ಇಲ್ಲದೆ ಬೇಸರವಾಗಿತ್ತು. ಚಿದಂಬರಯ್ಯನವರು ಸುಬ್ರಮಣ್ಯ ಅಯ್ಯರವರ ಲೈಫ್ ಇನ್ಷೂರೆನ್ಸ್ ಆಫೀಸಿನಲ್ಲಿ ಬಿಡುವಿದ್ದಾಗ ಲೆಕ್ಕಪತ್ರಗಳನ್ನು ನೋಡಿಕೊಳ್ಳುವದಕ್ಕೆ ಸಹಾಯವನ್ನು ಮಾಡುತ್ತಿದ್ದಾಗ ನಾನು ಅಲ್ಲಿಗೆ ಒಮ್ಮೆ ಹೋಗಿರುವಲ್ಲಿ ವೇಸ್ಟಪೇಪರ್‌ಬ್ಯಾಸ್ಕೇಟ್ (ನಿರುಪಯೋಗಿ ಕಾಗದಗಳ ಬುಟ್ಟಿಯಲ್ಲಿ) ಒಂದು ತಮಿಳು ಪುಸ್ತಕವನ್ನು ಕಂಡು ಅದನ್ನು ತೆಗೆದುಕೊಂಡು ಓದಲು ಅದು ವಿಚಾರಸಾಗರವೆಂಬ ವೇದಾಂತ ಗ್ರಂಥವಾಗಿತ್ತು. ವೇದಾಂತ ಸಾರ, ವಿವೇಕ ಚೂಡಾಮಣಿಗಳನ್ನು ಓದಿದ್ದ ವಾಸನೆಯಿಂದ ನನಗೆ ಅದರಲ್ಲಿ ಆದರ ಹುಟ್ಟಿ, ಆ ಪುಸ್ತಕವನ್ನು ಅಯ್ಯರವರ ಅನುಮತಿಯಿಂದ ತೆಗೆದುಕೊಂಡು ಬಂದಿದ್ದೆನು. ಬಹಳ

ಕಷ್ಟವಿರುವ ಆ ಗ್ರಂಥವನ್ನು ಓದಿ ಅರ್ಥವನ್ನು ಮಾಡಿಕೊಳ್ಳುತ್ತಿದ್ದದ್ದು ಹೊರತು ಬೇರೆ ಯಾವ ಕೆಲಸವೂ ನನಗಿರಲಿಲ್ಲ. ಆದ್ದರಿಂದ ನಿತ್ಯವೂ ಭಾರತವನ್ನು ಓದುವದು ನನಗೂ ಇಷ್ಟವೇ ಆಗಿತ್ತು.ಆದ್ದರಿಂದ ಸಂತೋಷದಿಂದಲೇ ಆ ಕೆಲಸಕ್ಕೆ ಒಪ್ಪಿಕೊಂಡೆ. ಹೀಗಿರಲು ನನ್ನ ಕೆಲಸದ ಖಾಯಂ ನೌಕರನಿಗೆ ಹೊಳಲುಕೆರೆಗೆ ವರ್ಗವಾದ್ದರಿಂದ ನಾನು ಅತ್ತಕಡೆಗೆ ಪ್ರಯಾಣ ಬೆಳೆಸಬೇಕಾಯಿತು.

## ಹೊಳಲ್ಕೆರೆ ಪ್ರಯಾಣ :

ನಾನು ಹೊರಡುತ್ತೇನೆಂಬುದನ್ನು ತಿಳಿದ ಮನೆಯವರಿಗೆ ಅದರಲ್ಲಿಯೂ ಮುದುಕಿಗೆ ಬಹಳ ದುಃಖವಾಯಿತು. ವಿಶ್ವಾಸದಿಂದ ನನಗೆ ಅಭ್ಯಂಗ ಮಾಡಿಸಿ ಊಟವನ್ನು ಮಾಡಿ ದಾರಿಗೆ ತಿಂಡಿಯನ್ನು ಕಟ್ಟಿಕೊಟ್ಟರು. ಈಸಲ ಕೊಡಗನೂರಿಗೆ ಬಂಡಿ ಸಿಗಲಿಲ್ಲ, ಕಾಲುನಡಿಗೆಯಲ್ಲಿಯೇ ಹೊರಟೆನು. ನನ್ನ ಆ ದಿನದ ಪ್ರಯಾಣವು ರಸ್ತೆಹಿಡಿದು ಸಾಗಲಿಲ್ಲ, ಕೊಡಗನೂರು ಯಾವಕಡೆಗೆ ಇದೆಯೆಂಬುದನ್ನು ತಿಳಿದುಕೊಂಡು ಆ ದಿಕ್ಕಿನಲ್ಲಿ ಹೋಗುತ್ತಿದ್ದೆನು. ಗುಡ್ಡ ಹತ್ತುವದು, ಇಳಿಯುವದು, ಇದು ಕೂಡ ನನಗೆ ಎದೆಗುಂದಿಸಲಿಲ್ಲ, ದಾರಿಯಲ್ಲಿ ಮಳೆಬಂದು ನೀರಿನಲ್ಲಿ ಅದ್ದಿಮುಳುಗಿಸಿದಂತೆ ಆಯಿತು. ಸಾಯಂಕಾಲ ಬಹಳ ಕತ್ತಲೆಯಾಗುವ ಹೊತ್ತಿಗೆ ದಾರಿಯಲ್ಲಿ ಒಂದು ಹಳ್ಳಿಯ ಹೊರಗಿದ್ದ ಬಯಲುಗುಡಿಯನ್ನು ಸೇರಿದೆನು. ಅಷ್ಟು ಹೊತ್ತಿಗೆ ತುಂಬಾ ಆಯಾಸವಾಗಿದ್ದದ್ದರಿಂದ ದೇವಸ್ಥಾನದ ಮುಂದುಗಡೆಯಲ್ಲಿ ಮಲಗಿಕೊಂಡುಬಿಟ್ಟೆನು. ಗಾಢನಿದ್ರೆ ಹತ್ತಿತ್ತು, ರಾತ್ರಿ ಸರಿಹೊತ್ತಿನಲ್ಲಿ ಮಳೆಜೋರಾಗಿ ಬಂದು ಮಿಂಚುಸಿಡಿಲುಗಳ ಆರ್ಭಟದಿಂದ ಎಚ್ಚೆತ್ತೆನು. ಗುಡಿಯ ಹಿಂಭಾಗದ ಗೋಡೆ ಧಡಧಡನೆ ಕುಸಿದುಕೊಂಡು ಬಿದ್ದ ಸದ್ದಾಯಿತು. ಇಷ್ಟುಹೊತ್ತಿಗೆ ನನ್ನ ಕೈಯಮೇಲೆ ಒಂದು ಕಪ್ಪೆ ಕೂತು ಹಾರಿಹೋಯಿತು. ಅದನ್ನು ಅರಿಯದೆ ಯಾರು ಎಂದು ಗಟ್ಟಿಯಾಗಿ ಕೂಗಿದೆನು. ಕೂಡಲೆ ಯಾರು ?ಎಂದು ಮತ್ತೊಬ್ಬರ ಧ್ವನಿಯು ಕೇಳಿಬಂದಿತು. ಯಾರಾದರೂ ಕಳ್ಳರು ಬಂದಿದ್ದಾರೊ ಅಥವಾ ದೆವ್ವಗಳ ಕಾಟವೇನಾದರೂ ಅಲ್ಲಿಯುಂಟೊ ? ಎಂದು ತರ್ಕಿಸುತ್ತಾ ಇದ್ದೆನು. ಮುಂದೆ ಕತ್ತಲೆಯಲ್ಲಿ ಯಾರ ಮುಖವೂ ಕಾಣಿಸದಿದ್ದ ಆ ಧ್ವನಿಯ ವ್ಯಕ್ತಿಯೊಡನೆ ನನಗೆ ನಡೆದ ಸಂಭಾಷಣೆಯಿಂದ ಯಾರೋ ಪಕ್ಕದ ಹಳ್ಳಿಯವರೆಂದು ತಿಳಿದು ಬಂದಿತು. ಅವರೂ ನನ್ನ ವೃತ್ತಾಂತವನ್ನು ತಿಳಿದುಕೊಂಡು 'ಪ್ರಶ್ನೆ ಹೇಳಿ ಸ್ವಾಮಿ !' ಎಂದರು. 'ನನಗೆ ಪ್ರಶ್ನೆ ಹೇಳುವದಕ್ಕೆ ಬರುವುದಿಲ್ಲ' ಎನ್ನಲು ಅವರು 'ಏನು ? ಸ್ಕೂಲು ಮೇಷ್ಟರಾಗಿ ಪ್ರಶ್ನೆ ಹೇಳುವದಕ್ಕೆ ಬರುವುದಿಲ್ಲವೆ ?' ಎಂದರು. ಆಗಿನ ಕಾಲದಲ್ಲಿ ಹಳ್ಳಿಯ ಮೇಷ್ಟರಿಗೆ ಅದರಲ್ಲಿಯೂ ಬ್ರಾಹ್ಮಣ ಮೇಷ್ಟರಿಗೆ ಅರ್ಜಿ ಬರೆದು

ಕೊಡುವದು, ಜ್ಯೋತಿಷ್ಯಪ್ರಶ್ನೆ, ಪೌರೋಹಿತ್ಯ - ಮುಂತಾದವುಗಳ ತಿಳಿವಳಿಕೆಯೂ ಇರಬೇಕೆಂಬ ನಂಬಿಕೆ ಜನರಲ್ಲಿತ್ತು, ಅವರ ಹಿಡಿತದಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕೆಂದು ನಾನು 'ನಿಮ್ಮ ಕಾರ್ಯ ಸಾವಕಾಶವಾಗಿ ಆಗುತ್ತದೆ' ಎಂದೆನು. ಆಮೇಲೆ ವಿಷಯವೇನೆಂಬುದನ್ನು ವಿಚಾರಿಸಿದ್ದಲ್ಲಿ ಅವರ ಎತ್ತು ಒಂದು ಹೋಗಿದೆಯೆಂದೂ ಅದನ್ನು ಈ ಊರಿನವರು ಯಾರಾದರೂ ತೆಗೆದುಕೊಂಡು ಬಂದಿದ್ದಾರೊ ನೋಡುವದಕ್ಕೆ ತಾವು ಬಂದಿದ್ದೇವೆಂದೂ ತಿಳಿಸಿದರು.

## ಹೊಳಲುಕೆರೆ ಎ.ವಿ.ಸ್ಕೂಲು :

ಬೆಳಗಿನ ಜಾವಕ್ಕೆ ಕೊಡಗನೂರು ಸ್ಟೇಷನ್ ಸೇರಿ ರೈಲಿನಲ್ಲಿ ಕುಳಿತುಕೊಂಡು ಹೊಳಲುಕೆರೆಗೆ ಇಳಿದೆನು.ಆ ಊರೊಳಗೂ ಪ್ಲೇಗಿನ ಅಂಜಿಕೆಯಿದ್ದದ್ದರಿಂದ ಪ್ಲೇಗಿನ ಸೋಂಕಿನವರನ್ನು ಊರೊಳಕ್ಕೆ ಬಿಡದಂತೆ ಕಾವಲು ಇಟ್ಟಿದ್ದರು. ಕಾವಲುಗಾರನು ನನ್ನನ್ನು ಸ್ವಲ್ಪ ಹೊತ್ತು ತಡೆ ಹಾಕಿದ್ದು ಸರಕಾರಿ ಕೆಲಸಕ್ಕೆ ಬಂದಿದ್ದಾರೆಂದು ತಿಳಿದ ಮೇಲೆ ಬಿಟ್ಟು ಬಿಟ್ಟ. ಅದೇ ದಿವಸ ಸ್ಕೂಲಿಗೆ ಹೋಗಿ ಕೆಲಸಕ್ಕೆ ಸೇರಿದೆ. ಅಲ್ಲಿಯ ಹೆಡ್‌ಮಾಸ್ಟರು ಬಹಳ ಶಿಸ್ತಿನಿಂದ ಸ್ಕೂಲನ್ನು ವ್ಯವಸ್ಥೆಯಲ್ಲಿಟ್ಟಿದ್ದವರು ನನ್ನನ್ನು ಆದರದಿಂದ ಬರಮಾಡಿಕೊಂಡರು.ತಮ್ಮ ಮನೆಗೇ ಊಟಕ್ಕೆ ಕರೆದುಕೊಂಡು ಹೋದರು. ತಮ್ಮ ಮನೆಯ ಸಮೀಪದಲ್ಲಿಯೇ ಒಂದು ಮನೆಯನ್ನು ಬಾಡಿಗೆಗೆ ಗೊತ್ತುಮಾಡಿಸಿಕೊಟ್ಟರು. 'ಸ್ಕೂಲಿನಲ್ಲಿ ಕೆಲಜನ ಆಸಿಸ್ಟೆಂಟು ಮಾಸ್ತರುಗಳು ಸಣ್ಣಮಾರ್ಗದಲ್ಲಿ ನಡೆಯುತ್ತಾರೆ, ನೀವು ಎಚ್ಚರಿಕೆಯಿಂದ ನಡೆದುಕೊಂಡರೆ ಒಳ್ಳೆಯದು' - ಎಂದು ಬುದ್ಧಿಮಾತು ಹೇಳಿದರು. ಈ ಸೂಚನೆಯಿಂದ ನಾನು ಮುಂಜಾಗ್ರತೆಯಿಟ್ಟುಕೊಳ್ಳುವದಕ್ಕೆ ಅವಕಾಶವಾಯಿತು. ಬೆಳಿಗ್ಗೆ ಏಳುವದು, ಸ್ನಾನವನ್ನು ಮಾಡಿಕೊಂಡು ಸ್ಕೂಲಿಗೆ ಮುಂಚಿತವಾಗಿಯೇ ಹೋಗಿ ಹೆಡ್‌ಮಾಸ್ತರರ ಕೊಟ್ಟಡಿಯಲ್ಲಿಯೇ ಕುಳಿತುಕೊಂಡಿದ್ದು, ಅವರು ತಿಳಿಸಿದ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವದಕ್ಕೆ ಸಹಾಯ ಮಾಡುವದು, ಬೆಳಿಗ್ಗೆ ಒಂದು ಘಂಟೆ ಪಾಠ ಹೇಳುವದು, ಮಧ್ಯಾಹ್ನ ಸುಮಾರು ಮೂರುಘಂಟೆ ಕಾಲ ಪಾಠ ಹೇಳುವದು, (ಸುಮಾರು 19 ಪಿರಿಯಡುಗಳ ಇಂಗ್ಲೀಷು ಪಾಠ ಮಾತ್ರ) ಇಷ್ಟು ನನ್ನ ನಿತ್ಯ ಕಾರ್ಯಕ್ರಮವಾಯಿತು. ಎರಡು ದಿನಗಳಾಗುತ್ತಲೂ ಹೆಡ್‌ಮಾಸ್ತರ್ ಅಪ್ಪಣೆಯನ್ನು ಪಡೆದು ಊರಿಗೆ ಹೋಗಿ ನಡೆದ ಸಂಗತಿಯನ್ನೆಲ್ಲಾ ತಂದೆ ತಾಯಿಗಳಿಗೆ ತಿಳುಹಿಸಿ ಮನೆಯ ಹೆಂಗಸರನ್ನು ಕರೆದುಕೊಂಡು ಬಂದೆನು. ಊರಿಂದ ಬಂದ ಮೇಲೆ ಅಥವಾ ಅದಕ್ಕೆ ಮುಂಚೆ (ಮರೆತಿದೆ) ನನಗೆ ಜಗಳೂರ ದಾರಿಯಲ್ಲಿ ಮಳೆಯಲ್ಲಿ ನೆನೆದಿದ್ದರ ಪ್ರತಿಫಲವಾಗಿ ಛಳಿಜ್ವರ ಬಂದಿತ್ತು. ಆದರೂ ತರಗತಿಯ ಕೊಟ್ಟಡಿಯ ಬಾಗಿಲನ್ನು

ಹಾಕಿಕೊಂಡು ಮಲಗಿಕೊಂಡೇ ಪಾಠವನ್ನು ನಡೆಯಿಸುತ್ತಿದ್ದೆನು. ಹೆಡ್‌ಮಾಸ್ತರ್ ಬಾಗಿಲು ಬೀಗದ ಸಂದಿನಿಂದಲೇ ನೋಡಿ, ನಾನು ಅನಾರೋಗ್ಯದ ಸ್ಥಿತಿಯಲ್ಲಿಯೂ ನಿಯಮದಿಂದ ಕೆಲಸ ಮಾಡುತ್ತಿದ್ದುದ್ದನ್ನು ಕಂಡು ಬಹಳ ಸಂತೋಷಪಟ್ಟರು. ಮಿಕ್ಕ ಉಪಾಧ್ಯಾಯರಲ್ಲಿ ವಿರೋಧವನ್ನೇನೂ ಕಟ್ಟಿಕೊಳ್ಳದೆ ನನ್ನ ಕೆಲಸವನ್ನು ನಾನು ಮಾಡುತ್ತಾ ಹೋದೆನು. ಸ್ಕೂಲಿನ ಮೇಷ್ಟರುಗಳಲ್ಲಿ ಎರಡು ಪಾರ್ಟಿಇತ್ತು. ಆದರೆ ನಾನು ಸ್ಕೂಲಿನ ಲೈಬ್ರರಿಯಲ್ಲಿದ್ದ ಶಬ್ದಾನುಶಾಸನದ ಸೂತ್ರಗಳು, ವೃತ್ತಿ, ವ್ಯಾಖ್ಯಾನದ ಸಾರ ಇವುಗಳನ್ನು ನಕಲು ಮಾಡಿ ಬರೆದುಕೊಳ್ಳುವದು ನನ್ನಲ್ಲಿದ್ದ ಲಘುಕೌಮುದಿಯ ಸೂತ್ರಗಳ ಅಭಿಪ್ರಾಯವನ್ನು ತಿಳಿದುಕೊಂಡು ಶಬ್ದರೂಪಗಳ ರೂಪನಿಷ್ಪತ್ತಿ ಹೇಗಾಗುವ ದೆಂಬುದನ್ನು ಗೊತ್ತು ಪಡೆಸಿಕೊಂಡು ಚಿದಂಬರಯ್ಯನವರ ಅನುಕರಣೆಯಿಂದ ಶಬ್ದಗಳನ್ನು ಕ್ರಿಯಾಪದದ ರೂಪಗಳನ್ನು ಬರೆದುಕೊಳ್ಳುವದು, ಈ ಕೆಲಸದಲ್ಲಿ ಮುಳುಗಿಬಿಟ್ಟದ್ದರಿಂದ ಸ್ಕೂಲು ಉಪಾಧ್ಯಾಯರುಗಳ ವ್ಯವಹಾರದಲ್ಲಿ ಹೆಚ್ಚು ತಲೆ ಹಾಕುವದಕ್ಕೆ ಅವಕಾಶವೇ ಉಳಿಯಲಿಲ್ಲ; ಹೆಡ್‌ಮಾಸ್ತರಂತೆ ಅಸಿಸ್ಟೆಂಟು ಮಾಸ್ಟರುಗಳೂ ನನಗೆ ಸ್ನೇಹಿತರೇ ಆಗಿದ್ದರು.

ಹೆಡ್‌ಮಾಸ್ಟರ್ ಶ್ಯಾಮರಾಯರು ಬಹಳ ನಿರತಾಗಿ ಕೆಲಸ ಮಾಡುವವರು. ಯಾವ ಇನ್‌ಸ್ಪೆಕ್ಟರಿಗೂ ಅಂಜಿ ನಡೆಯುತ್ತಿರಲಿಲ್ಲ. ಮಾಸ್ಟರುಗಳಿಂದ ಸರಕಾರಿಯ ನಿಯಮಕ್ಕೆ ಅನುಗುಣವಾಗಿ ಕೆಲಸವನ್ನು ತೆಗೆದುಕೊಳ್ಳುತ್ತಿದ್ದರು. ಇನ್‌ಸ್ಪೆಕ್ಟರ್ ಸ್ಕೂಲು ಪರೀಕ್ಷೆಗೆ ಬಂದರೆ ಯಾವ ತರಗತಿಯ ಹುಡುಗರಿಗೂ ಕರಿಕ್ಯುಲಮ್ (ಪಾಠಕ್ರಮದ ನಿಯಮದ ಪಟ್ಟಿ)ಮೀರಿ ಯಾವ ಪ್ರಶ್ನೆಯನ್ನೂ ಹಾಕಕೊಡುತ್ತಿರಲಿಲ್ಲ, ಎಲ್ಲಾ ಅಸಿಸ್ಟೆಂಟು ಮಾಸ್ಟರುಗಳ ಕೆಲಸದ ವಿಷಯದಲ್ಲಿಯೂ ತಾವೇ ಹೊಣೆಹೊತ್ತು ಇನ್‌ಸ್ಪೆಕ್ಟರಿಗೆ ಉತ್ತರವನ್ನು ಹೇಳುತ್ತಿದ್ದರು. ಅವರಿಗೆ ಬಹಳ ಹಠ. ಒಮ್ಮೆ ಇನ್‌ಸ್ಪೆಕ್ಟರ್ ಒಬ್ಬರು ಸ್ಕೂಲು ಪರೀಕ್ಷೆಗೆ ಬಂದಾಗ, ಸ್ಕೂಲು ಜವಾನನನ್ನು ತಮ್ಮ ಕೆಲಸಕ್ಕೆ ನಿಯಮಿಸಿಕೊಂಡಿದ್ದರಂತೆ. ಆಗ ತಮ್ಮ ಅಪ್ಪಣೆ ಇಲ್ಲದೆ ಗೈರುಹಾಜರಾದದ್ದಕ್ಕಾಗಿ ಹೆಡ್‌ಮಾಸ್ಟರ್ ಜವಾನನಿಗೆ ಅಷ್ಟು ದಿನದ ಸಂಬಳವನ್ನು ವಜಮಾಡಿಬಿಟ್ಟರು. ಜವಾನನು ಇನ್‌ಸ್ಪೆಕ್ಟರ್ ಮೂಲಕ ಮೇಲಕ್ಕೆ ದೂರು ಹೇಳಿಕೊಂಡರೂ ಮೇಲಿನವರು ವಿಚಾರಣೆ ಮಾಡಿ ಹೆಡ್‌ಮಾಸ್ಟರ್ ಮಾಡಿದ್ದು ಸರಿ ಎಂದು ತಿರ್ಮಾನವಾಗಿತ್ತಂತೆ ! ಶಾಮಣ್ಣನವರಿಗೆ ನನ್ನ ಕೆಲಸವು ಬಹಳ ಮೆಚ್ಚಿಗೆಯಾಗಿತ್ತು. ನಾನು ಪ್ರೈವೇಟ್ ಆಗಿ ಎಫ್.ಎ. ಪರೀಕ್ಷೆಗೆ ಓದುವದಕ್ಕೆಂದು ಮಾಡುತ್ತಿದ್ದ ಪ್ರಯತ್ನವು ಅವರಿಗೆ ಮೆಚ್ಚಾಗಿತ್ತು. ಇಷ್ಟರಲ್ಲಿ ಡೆಪ್ಯುಟಿ ಇನ್‌ಸ್ಪೆಕ್ಟರು ವೀರಭದ್ರಯ್ಯನವರು ನನ್ನ ಮೇಲಿನ ಕನಿಕರದಿಂದ ನನಗೆ ತಮ್ಮ ಆಫೀಸಿಗೆ ರೈಟರು ಕೆಲಸಕ್ಕೆ ಬರುತ್ತೀಯಾ?-ಎಂದು ಟೆಲಿಗ್ರಾಂ ಮೂಲಕ

ನನ್ನನ್ನು ಕೇಳಿದರು.ಅಸಿಸ್ಟೆಂಟು ಮಾಸ್ತರುಗಳೆಲ್ಲರೂ ನಿಮಗೆ ಅಭಿವೃದ್ಧಿಗೆ ಒಳ್ಳೆಯ ಸಂದರ್ಭವು ದೊರಕಿದೆ, ಹೋಗಿರಿ ಎಂದು ಬುದ್ಧಿವಾದ ಹೇಳಿದರು. ಹೆಡ್‌ಮಾಸ್ತರು ಮಾತ್ರ ಹುದ್ದೇದಾರರ ಮರ್ಜಿ ಅನುಸರಿಸಿಕೊಂಡಿರುವದರಲ್ಲಿಯೇ ನಿಮ್ಮ ಕಾಲವೆಲ್ಲ ಹೊಗುತ್ತದೆ.ನೀವು ಪರೀಕ್ಷೆಗೆ ಓದುವದೇ ಯುಕ್ತ ಎಂದು ನನಗೆ ಬುದ್ಧಿ ಹೇಳಿದರು. ಅದೇ ಯುಕ್ತವೆಂದು ನನಗೂ ತೋರಿದ್ದರಿಂದ 'ರೈಟರು ಕೆಲಸ ಬೇಡ, ದಯವಿಟ್ಟು ಕ್ಷಮಿಸಬೇಕು' ಎಂದು ಪ್ರತ್ಯುತ್ತರವನ್ನು ಕೊಟ್ಟೆನು. ಮುಂದೆ ನಾಲ್ಕೈದು ತಿಂಗಳಿಗೆ ನನಗೆ ಮೊಳಕಾಲ್ಮೂರು ಸ್ಕೂಲಿಗೆ ಖಾಯಂ ಅಸಿಸ್ಟೆಂಟು ಮಾಸ್ತರಾಗಿ ತಿಂಗಳು ಒಂದರ 12ರೂ ಸಂಬಳದ ಮೇಲೆ ವರ್ಗವಾಯಿತು.

## ಮೊಳಕಾಲ್ಮೂರಿನತ್ತ :

ಈಗ ಗರ್ಭಿಣಿಯಾಗಿದ್ದ ಹೆಂಡತಿಯೊಡನೆ ಮೊಳಕಾಲ್ಮೂರಿನಷ್ಟು ದೂರದ ಊರಿಗೆ ಪ್ರಯಾಣ ಮಾಡಬೇಕಾಯಿತು. ಗಾಡಿಯನ್ನು ಬಾಡಿಗೆ ಮಾಡಿಕೊಂಡು ಹೊರಟೆನು.ದಾರಿಯಲ್ಲಿ ಚಳ್ಳಕೆರೆಯಲ್ಲಿ ಇಳಿದುಕೊಳ್ಳಬೇಕಾಗಿತ್ತು. ಆ ಊರಲ್ಲಿ ನನಗೆ ಯಾರೊಬ್ಬರ ಪರಿಚಯವು ಇಲ್ಲದ್ದರಿಂದ ದಾರಿಯಲ್ಲಿ ಒಂದು ಕಾಲುವೆಯಲ್ಲಿ ಸಂಧ್ಯಾವಂದನೆ ಮುಗಿಸಿ ಬುತ್ತಿಕಟ್ಟಿಕೊಂಡು ತಂದಿದ್ದ ಹುಳಿಯನ್ನವನ್ನು ಇಬ್ಬರೂ ತಿಂದು ನೀರು ಕುಡಿದು ಊರೊಳಕ್ಕೆ ಗಾಡಿ ಹೊಡೆಯಿಸೆದೆವು. ಯಾರಾದರೂ ಒಬ್ಬರು ಸ್ಕೂಲು ಮೇಷ್ಟರನ್ನು ವಿಚಾರಿಸಿ ಅಲ್ಲಿಗೆ ಹೋಗೋಣವೆಂದು ಇರುವಲ್ಲಿ, ನಮ್ಮ ಸುದೈವದಿಂದ ಎಲ್.ಜೆ. ಕೃಷ್ಣರಾವ್ ಎಂಬ ತರುಣರಾದ ಉಪಾಧ್ಯಾಯರೊಬ್ಬರ ಮನೆ ಸಿಕ್ಕಿತು. ಅವರು ಬಹಳ ಬಲವಂತ ಮಾಡಿದರೂ ನಾವು ಊಟ ಮಾಡುವುದಿಲ್ಲ ಎಂದಿದ್ದರಿಂದ ಆ ಮೇಷ್ಟರ ತಾಯಿ ಮಗನನ್ನು ಕುರಿತು 'ನೋಡಿದೆಯಾ ? ಇವರು ಇನ್ನೂ ಚಿಕ್ಕ ವಯಸ್ಸಿನವರು. ಏಕಾದಶಿಯ ದಿನ ಊಟವೇ ಮಾಡುವಂತಿಲ್ಲ. ನೀನು ಮಾತ್ರ ಇನ್ನೂ ಇತ್ತಕಡೆಗೆ ತಿರುಗಲಿಲ್ಲ ಎಂದರು.' ನನಗೆ ಆ ದಿನವೇ ಹುಳಿಯನ್ನ ತಿಂದದ್ದರಿಂದ ಬಹಳ ನಾಚಿಕೆಯಾಯಿತು. ಅವತ್ತು ಏಕಾದಶಿಯೆಂಬುದನ್ನೂ ಕೂಡ ಮರೆತು ಊಟ ಮಾಡಿ ಪ್ರಯಾಣ ಮಾಡಿದ್ದೇವೆಂಬ ಕಾರಣದಿಂದ ಬಹಳ ಪಶ್ಚಾತ್ತಾಪವಾಯಿತು. ಇನ್ನು ಮುಂದೆ ಎಂದಿಗೂ ಏಕಾದಶಿಯ ದಿನ ಊಟಮಾಡುವದಿಲ್ಲ ಎಂಬ ಸಂಕಲ್ಪವನ್ನೂ ಅಂದೇ ಮನಸ್ಸಿನಲ್ಲಿ ಮಾಡಿಕೊಂಡೆನು. ಮಾರನೆಯ ದಿನ ದ್ವಾದಶಿಯ 'ಪಾರಣೆಯನ್ನು' ತೀರಿಸಿಕೊಂಡು ಮುಂದಕ್ಕೆ ಹೊರಟು ಹೋದೆವು. ಮೊಳಕಾಲ್ಮೂರು ಮುಟ್ಟಿದೆವು.

# 18 ವಿದ್ಯಾಭ್ಯಾಸದ ಇಲಾಖೆಯಲ್ಲಿ ಖಾಯಂ ನೌಕರಿ

## ಮೊಳಕಾಲ್ಮೂರಿನ ಪ್ರಥಮ ಪ್ರಯಾಣ :

ಮೊಳಕಾಲ್ಮೂರು ಚಿತ್ರದುರ್ಗದ ಡಿಸ್ಟ್ರಿಕ್ಟಿನ ತೀರ ಕೊನೆಯ ತಾಲ್ಲೂಕಿನ ಮುಖ್ಯ ಪಟ್ಟಣ. ಊರು ಪಟ್ಟಣವೆನ್ನುವದಕ್ಕೂ ಒಪ್ಪದಷ್ಟು ಚಿಕ್ಕದು - ಅದೊಂದು ಬೆಟ್ಟದ ಕೆಳಗೆ ಇರುತ್ತದೆ. ನಮ್ಮ ಗಾಡಿ ಊರೊಳಕ್ಕೆ ಹೋಗುತ್ತಲೂ ನಾನು ಇಳಿದು ಅತ್ತಿತ್ತ ಅಡ್ಡಾಡಿ, ತತ್ಕಾಲಕ್ಕೆ ಇಳಿದುಕೊಳ್ಳುವದಕ್ಕೆ ಯಾವುದಾದರೊಂದು ಸ್ಥಳವನ್ನು ಹುಡುಕೋಣವೆಂದು ನೋಡುತ್ತಿದ್ದೆನು. ಅಷ್ಟರಲ್ಲಿ ಒಂದು ಶುಭ್ರವಾದ ಪಂಚೆಯನ್ನು ಉಟ್ಟು ಬಿಳಿಯದೊಂದು ಸಣ್ಣ ಅರ್ಧತೋಳಿನ ಬನೀನು, ಜುಬ್ಬ ಹಾಕಿಕೊಂಡು ಒಂದು ರೇಷ್ಮೆಯ ಅಂಚಿನ ಪಂಚೆಯನ್ನು ಹೊದ್ದುಕೊಂಡಿದ್ದ ವ್ಯಕ್ತಿಯನ್ನು ಕಂಡೆನು. ಅವರೇ ವೆಂಕಟರಾಯರು. ಅವರು ಜನರ ಯೋಗಕ್ಷೇಮವನ್ನು ವಿಚಾರಿಸುತ್ತಾ ಅಡ್ಡಾಡುತ್ತಿದ್ದರು ; ಅವರನ್ನು ಜನರು ಬಹಳವಾಗಿ ಗೌರವಿಸುತ್ತಿದ್ದಂತೆ ಕಂಡು ಬಂತು, ಅವರು ನಮ್ಮ ಗಾಡಿಯನ್ನು ಕಂಡ ಕೂಡಲೇ ಯಾರೆಂಬುದನ್ನು ತಿಳಿದುಕೊಂಡು ಎಷ್ಟೋದಿನಗಳಿಂದ ಪರಿಚಿತ ವಾಗಿದ್ದವರಂತೆ ಬನ್ನಿ 'ಈ ಕಡೆ ಒಂದೆರಡು ಮನೆಗಳಿವೆ' ಎಂದು ತೋರಿಸುವದಕ್ಕೆ ಅಣಿಯಾದರು. ಕೂಡಲೇ ಮನೆಗಳು ಸಿಕ್ಕುವದು ಕಷ್ಟವಾದ್ದರಿಂದ ಆ ಕಾಲಕ್ಕೆ ಒಬ್ಬ ಶೆಟ್ಟರ ಮನೆಯನ್ನು ಈಗ್ಗೆ ಆಗಬಹುದು ಎಂದು ಒಪ್ಪಿಕೊಂಡೆನು. ಆ ದಿನವೇ ಸ್ಕೂಲಿಗೆ ಕೆಲಸಕ್ಕೆ ರಿಪೋರ್ಟು ಕೊಟ್ಟೆನು.

## ಥಿಯಾಸಫಿಕಲ್ ಸೊಸೈಟಿ :

ವೆಂಕಟರಾಯರು ಮೊಳಕಾಲ್ಮೂರು ಥಿಯಾಸಫಿಕಲ್ ಸೊಸೈಟಿಯ ಸೆಕ್ರೆಟರಿಗಳಾಗಿದ್ದರೆಂದು ಕಾಣುತ್ತದೆ. ಅವರು ಶ್ಯಾನುಭೋಗರ ಮನೆತನದವರು. ತಾಲ್ಲೂಕು ಕಚೇರಿಯಲ್ಲಿ ರೆವಿನ್ಯೂ ಗುಮಾಸ್ತರು, ಆದರೆ ಅವರು ಥಿಯಾಸಫಿಕಲ್ ಸೊಸೈಟಿಯ ಸೆಕ್ರೆಟರಿಗಳಾಗಿದ್ದರೆಂಬ ಕಾರಣದಿಂದ ಅವರಿಗೆ ಬಹಳ ಗೌರವವಿತ್ತು, ಆಗಿನ ಕಾಲಕ್ಕೆ ಥಿಯಾಸಫಿಕಲ್ ಸೊಸೈಟಿಗೆ (ದಿವ್ಯಜ್ಞಾನ ಸಮಾಜ, ಬ್ರಹ್ಮ ವಿದ್ಯಾಸಮಾಜ ಎಂದು ಮುಂತಾಗಿ ಈ ಶಬ್ದವನ್ನು ಜನರು ಕನವರಿಸುತ್ತಿದ್ದರು, ಅದಕ್ಕೆ) ಉಚ್ಛ್ರಾಯ ಸ್ಥಿತಿ. ಆನಿಬೆಸೆಂಟ್ ಎಂಬ ಸುಪ್ರಸಿದ್ಧ ಪಾಶ್ಚಾತ್ಯ ಮಹಿಳೆಯು ಆ ಸಮಾಜಕ್ಕೆ ಅಧ್ಯಕ್ಷಳಾಗಿದ್ದಳು, ಕರ್ನಲ್ ಆಲ್ಕಟ್ ಮತ್ತು ಮ್ಯಾಡಂ ಬ್ಲಾವಟ್ಸ್ಕಿ ಇವರ ಕೀರ್ತಿಯನ್ನು ಕೂಡ ಹಿಂದಕ್ಕೆ ಹಾಕುವಷ್ಟು ಪ್ರತಿಭೆಯು ಆಕೆಯದು. ಆಲ್ಕಟ್ ಬ್ಲಾವಟ್ಸ್ಕಿಯವರು ವಿಶೇಷವಾಗಿ ಬೌದ್ಧಮತದ ಪ್ರಭಾವಕ್ಕೆ ಒಲಿದವರು ; ಆದರೆ

ಆನಿಬೆಸೆಂಟ್ ಮಹಾಶಯಳಿಗೆ ಅದ್ವೈತದ ಕಡೆಗೆ ಒಲವು ಹೆಚ್ಚು. ಆದರೆ ಥಿಯಾಸಫಿಕಲ್ ಸೊಸೈಟಿಯವರು ಪರಸ್ಪರ ಅಣ್ಣತಮ್ಮಂದಿರಂತೆ ಕಾಣುವರೆಂದೂ ಆಗಿನ ಡೆಪ್ಯುಟಿಕಮಿಷನರೂ ಥಿಯಾಸಫಿಸ್ಟ್ (ಅದೇ ಸಮಾಜದವರು) ; ಆದ್ದರಿಂದ ಸಮಾಜಕ್ಕೆ ಸೇರಿದವರಿಗೆ ಬಹಳವಾಗಿ ಸಹಾಯ ಮಾಡುವರೆಂದೂ ವದಂತಿ ಇತ್ತು.

## ವೆಂಕಟರಾಯರ ಸ್ನೇಹ :

ವೆಂಕಟರಾಯರು ಸ್ವತಃ ಕೆಲಸದಲ್ಲಿ ಗಟ್ಟಿಗರು. ಬೆಳಿಗ್ಗೆ ಹನ್ನೆರಡು ಘಂಟೆಗೆ ಸರಿಯಾಗಿ ಕಚೇರಿಗೆ ಹೋಗಿ ಐದು ಘಂಟೆಯಾಗುತ್ತಲೂ ಮನೆಗೆ ಬಂದು ಬಿಡುತ್ತಿದ್ದರು. ಅವರಲ್ಲಿ ಯಾವ ರಿಕಾರ್ಡೂ ಬಾಕಿಯಿರುತ್ತಿರಲಿಲ್ಲ. ಅಮಲ್ದಾರರು ಕಾರ್ಯಾಗಾರದಲ್ಲಿ ವ್ಯಾಪೃತರಾಗಿದ್ದು ಯಾವುದಾದರೂ ಕಾಗದಕ್ಕೆ ಸೈನು ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೆ **Papers for kind signature** ಸಹಿಮಾಡುವ ಕಾಗದಗಳು - ಎಂದು ಬರೆದ ಕಾಗದ ಸುತ್ತುಪಟ್ಟಿಯನ್ನು ಹಾಕಿ ಒಂದು ಕಟ್ಟು ಮಾಡಿ, ಅದನ್ನು ಮೇಜಿನಲ್ಲಿಟ್ಟು ಬೀಗಹಾಕಿ ಬೀಗದಕೈಯನ್ನು ಬಳಿಯಲ್ಲಿರುವ ಗುಮಾಸ್ತರಿಗೇ ಕೊಟ್ಟು, ಮನೆಗೆ ಬಂದು ಬಿಡುತ್ತಿದ್ದರು. ಅಮಲುದಾರರು ಅವರನ್ನು ಕಾಲಾತಿಕ್ರಮಣವಾದ ಮೇಲೆ ಕರೆಯಿಸುವ ಸಂಭವವೂ ಇರಲಿಲ್ಲ. ರಾಯರ ದರ್ಪವು ಅಮಲುದಾರರಿಗಿಂತಲೂ ಹೆಚ್ಚು. ಅವರ ಕೆಲಸವೂ ಅಚ್ಚುಕಟ್ಟಾಗಿ ಯಾವ ಬಾಕಿಯೂ ಇಲ್ಲದೆ ಇರುತ್ತಿತ್ತಲ್ಲದೆ ಕಚೇರಿಯಲ್ಲಿದ್ದ ಮಿಕ್ಕವರ ಕೆಲಸಕ್ಕೆ ಅವರಿಂದ ಸಹಾಯವಾಗುತ್ತಿತ್ತು. ತಾಲ್ಲೂಕಿನ ಸ್ಥಿತಿಯು ಹೇಗಿದೆ ಎಂಬ ತಿಳಿವಳಿಕೆಯು ಅಮಲುದಾರರಿಗಿಂತಲೂ ಅವರಿಗೇ ಹೆಚ್ಚು ತಿಳಿದಿದೆ ಎಂದರೂ ಸಲ್ಲುವಂತಿತ್ತು. ಡೆಪ್ಯುಟಿ ಕಮಿಷನರು ಬಂದರೆ ತಾಲ್ಲೂಕಿನ ಎಷ್ಟೋ ವಿಚಾರಗಳನ್ನು ಅವರಿಂದಲೇ ತಿಳಿದುಕೊಳ್ಳುತ್ತಿದ್ದರು. ವೆಂಕಟರಾಯರು ನಾನು ಕಂಡಾಗ ನೋಡುವದಕ್ಕೆ ನಡುವಯಸ್ಸಿನವರೂ, ಸ್ಫುರದ್ರೂಪಿಗಳೂ ಆಗಿದ್ದರು. ಅತ್ಯಂತ ಸ್ವಚ್ಛವಾದ ಬಿಳಿಪಂಚೆ, ಬಿಳಿಯ ಅಂಗಿ, ಬಿಳಿಯರುಮಾಲು - ಇವುಗಳನ್ನು ಧರಿಸುತ್ತಿದ್ದರು. ಅವರು ಸ್ನಾನ ಸಂಧ್ಯಾದಿಗಳನ್ನು ಮಾಡಿ ತಪ್ಪದೇ ಧ್ಯಾನವನ್ನು ಮಾಡುತ್ತಿದ್ದರು. ಆ ಬಳಿಕ ಊರೊಳಗೆಲ್ಲ ಸಂಚಾರಮಾಡಿ ಜನರ ಯೋಗಕ್ಷೇಮವನ್ನು ವಿಚಾರಿಸಿ-ಕೊಳ್ಳುತ್ತಿದ್ದರು !. ಸಾಯಂಕಾಲ ಸ್ನಾನಸಂಧ್ಯಾದಿಗಳನ್ನು ಮತ್ತೆ ಮಾಡಿಕೊಂಡು, ಥಿಯಾಸೊಫಿಸ್ಟುಗಳೆಲ್ಲರನ್ನು ಒಂದು ಕಡೆ ಸೇರಿಸಿ ತತ್ತ್ವನಿರೂಪಣೆ ಮಾಡುತ್ತಿದ್ದರು. ಆವೂರಿನ ಥಿಯೋಸೊಫಿಸ್ಟುಗಳಲ್ಲಿ ನೇಯ್ಗೆಯವರೇ ಹೆಚ್ಚು. ಅವರಲ್ಲಿ ಪದ್ಮಸಾಲೆ, ಸ್ವಕುಳಿಸಾಲೆ ಎಂಬ ಎರಡು ವರ್ಗಗಳಿದ್ದವು, ಅವರನ್ನೆಲ್ಲ ಸಮಾಜದ ಫೆಡರೇಷನ್ ಸಮಾರಂಭಕ್ಕೆ ಕರೆದುಕೊಂಡು ಹೋಗಿ ಬೆಸೆಂಟು ಹಸ್ತಸ್ಪರ್ಶಕೊಡಿಸಿ ಕರೆದುಕೊಂಡು

ಬಂದಿದ್ದರು. ಆ ನೇಯ್ಗೆಯ ಸದಸ್ಯರುಗಳಿಗೆ ತಮ್ಮನ್ನು ವೆಂಕಟರಾಯರು ಮೇಲುಮಟ್ಟಕ್ಕೆ ಏರಿಸಿದ್ದಾರೆಂಬ ಹೆಮ್ಮೆಯಿತ್ತು. ಸ್ಕೂಲು ಹೆಡ್‌ಮಾಸ್ಟರೂ ಥಿಯೋಸೊಫಿಸ್ಟು ; ಆದರೆ ಅವರು ಈ ಗುಂಪುಗಳಲ್ಲಿ ಕಾಣಬರುತ್ತಿರಲಿಲ್ಲ, ತಾವೇ ಸ್ವಂತವಾಗಿ ಅನುಷ್ಠಾನಗಳನ್ನು ಮಾಡಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ವೆಂಕಟರಾಯರ ಸ್ನೇಹದಿಂದ ನನಗೆ ಆದ ಒಂದು ಲಾಭವೆಂದರೆ ಈ ನೇಯ್ಗೆಯವರ ಪರಿಚಯ, ಅಬ್ರಾಹ್ಮಣರಲ್ಲಿಯೂ ಮೈತ್ರಿಯ ಭಾವದಿಂದ ಇರುವುದು ಬ್ರಾಹ್ಮಣನ ಕರ್ತವ್ಯವೆಂಬ ತಿಳಿವಳಿಕೆ, ಮತ್ತು ವೇದಾಂತವಿಚಾರದಲ್ಲಿ ಹೆಚ್ಚಿನ ಆಸಕ್ತಿ. ಸಾಯಂಕಾಲದಲ್ಲಿ ಅವರೊಡನೆ ಒಂದೆರಡು ದಿನ ಥಿಯೊಸೊಫಿಕಲ್ ಸಮಾಜದಲ್ಲಿ ಸೇರಿದ್ದರಿಂದ, ನನಗೆ ವಿಚಾರಸಾಗರದ ಕನ್ನಡ ಅನುವಾದವು ಸಿಕ್ಕಿದ್ದು ಒಂದು ಅಮೋಘವಾದ ಲಾಭವಾಯಿತು. ನಾನು ಕಡೂರಿನಿಂದ ತಂದಿದ್ದ ತಮಿಳು ವಿಚಾರಸಾಗರವು ಹಿಂದಿಯಲ್ಲಿ ಸಾಧು ನಿಶ್ಚಲದಾಸರವರು ಮಾಡಿದ್ದ ಗ್ರಂಥಕ್ಕೆ ಶಿವರಾವ್ ಎಂಬ ಸಬ್‌ರಿಜಿಸ್ಟ್ರಾರೊಬ್ಬರು ಮಾಡಿದ್ದ ತಮಿಳಿನ ಅನುವಾದ ; ಇದು ಹುಬ್ಬಳ್ಳಿಯಲ್ಲಿ ಜಯ(?)ಮೊದಲಿಯಾರೆಂಬವರು ಆ ತಮಿಳಿನಿಂದ ಅನುವಾದ ಮಾಡಿದ್ದು, ಪೀತಾಂಬರಜಿಯವರ ಟಿಪ್ಪಣಿಗಳನ್ನು ಬೆಟಗೇರಿ ಕೃಷ್ಣಶಾಸ್ತ್ರಿಗಳು ಸೇರಿಸಿದ್ದ ಟಿಪ್ಪಣಿಗಳನ್ನು ಒಳಗೊಂಡಿದ್ದು, ನನಗೆ ಈಗ ಅತ್ಯಂತ ಆನಂದವಾಯಿತು. ಕನ್ನಡ ವಿಚಾರಸಾಗರವನ್ನು ಒಂದೆರಡು ಸಲ ಸಂಪೂರ್ಣವಾಗಿ ಓದಿದೆನು. ಇಷ್ಟುಹೊತ್ತಿಗೆ ನಾನು ಒಬ್ಬನೇ ಇದ್ದೆನೆಂದು ತೋರುತ್ತದೆ. ಮನೆಯವರನ್ನು ತವರುಮನೆಗೆ ಕಳುಹಿಸಿಕೊಟ್ಟಿರಬೇಕು. ನಮ್ಮ ಸ್ಕೂಲಿನಲ್ಲಿದ್ದ ಅಸಿಸ್ಟೆಂಟ್ ಮಾಸ್ಟರಾಗಿದ್ದ ಭೀಮಾಚಾರ್‌ರು ಮಧ್ವಮತದಲ್ಲಿ ಬಹಳ ಶ್ರದ್ಧೆಯುಳ್ಳವರೂ ಆಚಾರನಿಷ್ಠರೂ ಆಗಿದ್ದರು. ನನಗೆ ಸಂಸ್ಕೃತ ತಿಳಿಯುತ್ತದೆ ಎಂಬ ಕಾರಣದಿಂದ ತಮ್ಮಲ್ಲಿದ್ದ ಪುಸ್ತಕಗಳನ್ನು ನನಗೆ ಕೊಡುತ್ತಿದ್ದರು. ಅವರು ಕೊಟ್ಟ 'ಮಾಯಾವಾದ ಖಂಡನ'ವನ್ನು ನಕಲು ಮಾಡಿಕೊಂಡು ನಾನು ಈ ವಿಚಾರ ಸಾಗರದ ಯುಕ್ತಿಗಳ ಬಲದಿಂದ ನಾನೇ ಮಾಡಿದ ಖಂಡನೆಯನ್ನು ಬರೆದಿಟ್ಟುಕೊಂಡೆನು. ಆಗ ನನಗಿದ್ದ ಅದ್ವೈತದ ಹರಕಲು ತಿಳಿವಳಿಕೆಯಿಂದ ನನಗೆ ಅದ್ವೈತದಲ್ಲಿ ಹೆಚ್ಚಿನ ಅಭಿಮಾನವೂ ಮಧ್ವಾದಿಮತಗಳಲ್ಲಿ ಅನಾದರವೂ ಇತ್ತೆಂದು ಹೇಳಬಹುದು.

## ಪ್ರಾಸಂಗಿಕವಾಗಿ ಪಂಡಿತಪರೀಕ್ಷೆಯಲ್ಲಿ ತವಕ :

ಈಗ ನನಗೆ ಚಿದಂಬರಯ್ಯನವರ ಸಹವಾಸದ ಫಲವಾಗಿ ಪಂಡಿತರ ಪರೀಕ್ಷೆಗೆ ಓದಬೇಕೆಂಬ ತವಕವು ಉಂಟಾಯಿತು. ಅವರಿಗೆ ಕಾಗದವನ್ನು ಬರೆದು ಪರೀಕ್ಷೆಗೆ ಇಟ್ಟಿದ್ದ ಗ್ರಂಥಗಳ ಪಟ್ಟಿಯನ್ನು ತರಿಸಿ ನೋಡಿದೆನು. ಈ ನಿಮಿತ್ತದಿಂದ ಚಿಕ್ಕದೇವರಾಜ

ವಿಜಯ, ಚಿಕ್ಕದೇವರಾಯವಂಶಾವಳಿ - ಮುಂತಾದ ಹಲವು ಹಳಗನ್ನಡ ಗ್ರಂಥಗಳನ್ನು ತಿರಿವಿಹಾಕಿದೆನು. ಸಾಹಿತ್ಯದರ್ಪಣವನ್ನು ಕೊಂಡು ಕೊಂಡೆನು. ಬೆಂಗಳೂರಿನ ಸುಬ್ಬಾಶಾಸ್ತ್ರಿಗಳು ಕೊಟ್ಟಿದ್ದ ಧರ್ಮಸೂರಿ ವಿರಚಿತವಾದ ಸಾಹಿತ್ಯ ರತ್ನಾಕರವೆಂಬ ಗ್ರಂಥವನ್ನು ಅಭ್ಯಾಸಮಾಡಿ ಅದಕ್ಕೂ ದರ್ಪಣಕ್ಕೂ ಹೋಲಿಕೆ ಮಾಡುವುದಕ್ಕೆ ಪ್ರಾರಂಭಿಸಿದೆನು. ಪ್ರತಾಪರುದ್ರೀಯದಲ್ಲಿ ಪ್ರತಾಪರುದ್ರನ ವರ್ಣನೆಗಳಿರುವಂತೆ ಆ ಗ್ರಂಥದಲ್ಲಿ ರಾಮನನ್ನೇ ನಾಯಕನನ್ನಾಗಿ ಮಾಡಿಕೊಂಡಿರುತ್ತದೆ. ಈ ಕಾಲದಲ್ಲಿ ನನಗೆ ಸಿಕ್ಕಿದ ಭಾನುದತ್ತ ವಿರಚಿತ ರಸಮಂಜರಿಯೆಂಬ ಗ್ರಂಥವನ್ನು ನನ್ನ ಕೈಪ್ರತಿಯಲ್ಲಿ ಬರೆದುಕೊಂಡೆನಂತ ತೋರುತ್ತದೆ. ದರ್ಪಣವನ್ನು ಓದುವಾಗ ರಸವು ಅನಿತ್ಯವೆಂಬುದನ್ನು ವೇದಾಂತಿಗಳೇ ಖಂಡಿಸಬೇಕು, ಎಂದಿದ್ದ ಒಂದು ವಾಕ್ಯವನ್ನು ಕಂಡೆನು. ವೇದಾಂತಿಗಳು ರಸವು ನಿತ್ಯವೆಂಬುದನ್ನು ಹೇಗೆ ಸಿದ್ಧ ಮಾಡಿರುವರೋ ತಿಳಿದುಕೊಳ್ಳಬೇಕೆಂಬ ಕುತೂಹಲವೊಂದು ಮನಸ್ಸಿನಲ್ಲಿ ಎದ್ದುಕೊಂಡಿತು.

## ಈಶಾವಾಸ್ಯೋಪನಿಷತ್ತಿನ ಪ್ರಥಮದರ್ಶನ:

ನನಗೆ ಸಂಸ್ಕೃತವು ಅಷ್ಟಿಷ್ಟು ಬರುತ್ತದೆ ಎಂಬುದು ವೆಂಕಟರಾಯರಿಗೆ ಗೊತ್ತಾಗಲು, ಅವರು ಯಾವದಾದರೊಂದು ಉಪನಿಷತ್ತನ್ನು ಜೊತೆಯಲ್ಲಿ ಓದೋಣವೆಂದು ಸೂಚಿಸಿದರು. ವೆಂಕಟರಾಯರು ಬೆಳಗಿನ ಜಾವದಲ್ಲಿ ಮುಂಚಿತವಾಗಿ ಎದ್ದು ಸ್ನಾನವನ್ನು ಮಾಡಿ ಅದೇನೋ ಧ್ಯಾನವನ್ನು ಮಾಡುತ್ತಿದ್ದರು, ನನ್ನನ್ನು ಬೆಳಗ್ಗೆ ದೇವರ ಪೂಜೆಯನ್ನು ಮುಗಿಸಿಕೊಂಡು ಬನ್ನಿ ಎಂದರು. ಬೆಳಗ್ಗೆ ಆರೂವರೆ ಘಂಟೆಯ ಹೊತ್ತಿಗೆ ವೆಂಕಟರಾಯರ ಮನೆಯಲ್ಲಿರಬೇಕಾಗುತ್ತಿತ್ತಾದ್ದರಿಂದ ನಾನು ಕಡ್ಡಾಯವಾಗಿ ಅದಕ್ಕೂ ಮುಂಚಿತವಾಗಿಯೇ ಎದ್ದು ಬೆಳಗಿನ ಜಾವ ಸ್ನಾನ ಸಂಧ್ಯಾ ಪೂಜಾದಿಗಳನ್ನು ಮುಗಿಸಿಕೊಳ್ಳಬೇಕಾಯಿತು. ಈ ಅಭ್ಯಾಸವು ಒಂದಾನೊಂದು ನಿಮಿತ್ತದಿಂದ ಮೊದಲಾಯಿತಾದರೂ ಈ ವರೆಗೂ ಅದು ನಿಂತೇ ಬಿಟ್ಟಿದೆ. ಬೆಳಿಗ್ಗೆ ಶ್ರದ್ಧೆಯಿಂದ ದೇವರ ಪೂಜೆಮಾಡುವುದು, ಈಶ್ವರ ಸಂಬಂಧವಾದ ಹೂಗಂಧ ಧೂಪದೀಪಾದಿಗಳು ಮನಸ್ಸಿನ ಮೇಲೆ ಮಾಡುವ ಪರಿಣಾಮವಾದ ಅನುಭವವೂ ಮನಸ್ಸಿಗೆ ಹತ್ತಿತ್ತು. ಆನಂದಾಶ್ರಮದಲ್ಲಿ ಪ್ರಕಟವಾಗಿದ್ದ ಉಪನಿಷತ್ತುಗಳಲ್ಲಿ ಈಶಾವಾಸ್ಯವೇ ತೀರ ಕಡಿಮೆಯ ಬೆಲೆಯದಾದ್ದರಿಂದ ಅದನ್ನೇ ಕೊಂಡುಕೊಂಡು ಓದುವುದಕ್ಕೆ ಮೊದಲು ಮಾಡಿದೆವು. ಉಪನಿಷತ್ತಿಗೆ ಶಾಂಕರಭಾಷ್ಯವೇ ಅಲ್ಲದೆ ಉವಟಾದಿ (ಒಬ್ಬ ಆಚಾರ್ಯ) ಭಾಷ್ಯಗಳೂ ಇರುತ್ತವೆ. ಶಾಂಕರಭಾಷ್ಯವು ಉಪನಿಷತ್ತಿನ ಕಾಣ್ವಪಾಠವನ್ನು ಅನುಸರಿಸಿದೆ ; ಉವಟ (ಒಬ್ಬ ಆಚಾರ್ಯ) ಭಾಷ್ಯವು ಮಾಧ್ಯಂದಿನ ಪಾಠವನ್ನು ಅನುಸರಿಸಿದೆ. ಈ ಗುಟ್ಟು ನಮಗೆ

ತಿಳಿಯದೆ ಇದ್ದದ್ದರಿಂದ ಮಂತ್ರಗಳ ಅನುಕ್ರಮವು ಹೆಚ್ಚು ಕಡಿಮೆಯಾಗಿರುವುದಕ್ಕೆ ಕಾರಣವೇನೆಂಬುದು ನಮಗೆ ಹೊಳೆಯದೇ ಹೋಯಿತು. ಅಂತೂ ಹೇಗೋ ಕಷ್ಟಪಟ್ಟು ಭಾಷ್ಯದ ಅಭಿಪ್ರಾಯವನ್ನು ಗ್ರಹಿಸುವದಕ್ಕೆ ಪ್ರಯತ್ನಿಸುತ್ತಿದ್ದೆವು. ನಮ್ಮಿಬ್ಬರಲ್ಲಿ ಸಂಸ್ಕೃತಭಾಷಾಪರಿಚಯದ ದೃಷ್ಟಿಯಿಂದ ನಾನೇ ಉತ್ತಮ ; ಧಾರ್ಮಿಕಭಾವನೆ ದೃಷ್ಟಿಯಿಂದ ಅವರೇ ಉತ್ತಮ. ಒಂದೊಂದು ದಿನಕ್ಕೆ ಒಂದೊಂದು ಮಂತ್ರದ ಭಾಷ್ಯವನ್ನು ಪೂರೈಸಬೇಕೆಂದು ಸಂಕಲ್ಪಿಸಿದ್ದೆವಾದರೂ ಅದು ಅಷ್ಟು ಸುಲಭವಾಗಿ ದಕ್ಕಲಿಲ್ಲ. ಅಂತೂ ಒಂದೊಂದು ಮಂತ್ರದ ಭಾಷ್ಯವು ಮುಗಿಯುತ್ತಲೂ ಆ ಮಂತ್ರದ ಅರ್ಥವನ್ನು ಒಂದೊಂದು ಕಂದಪದ್ಯದಲ್ಲಿ ಇಡುವುದಕ್ಕೆ ಪ್ರಯತ್ನಿಸುತ್ತಿದ್ದೆನು. ಹಿಂದೆ ತರೀಕೆರೆಯಲ್ಲಿ ಗುಬ್ಬಿಯವರ ನಾಟಕವನ್ನು ನೋಡಿದಾಗಿನಿಂದ ನನಗೆ ಕಂದಪದ್ಯಗಳನ್ನು ರಚಿಸುವ ಹುಚ್ಚು ಹಿಡಿದಿತ್ತು ವಾಗ್ವಿಧಾಯಿನಿಯಲ್ಲಿ ಬರೆದಿದ್ದ ಕಂದಪದ್ಯದ ಲಕ್ಷಣವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡು ಬಟ್ಟೆ ಒಗೆಯುವದಕ್ಕೆ ಹೋಗುವಾಗ ಕಾವ್ಯಗಳನ್ನು ಓದಿದ್ದರಿಂದ ಕಂದಗಳನ್ನು ಬರೆಯುವ ಅಭ್ಯಾಸವು ಹೆಚ್ಚಾಗಿತ್ತು ; ಅದರಲ್ಲಿಯೂ ಪ್ರೀತಿಯೂ ಹೆಚ್ಚಿತ್ತು. ಅಂತೂ ವೆಂಕಟರಾಯರ ಸಂಬಂಧದಿಂದ ನನಗೆ ಅರಿವಿಲ್ಲದೆಯೇ ಕ್ರಮಬದ್ಧವಾಗಿ ಆಹ್ನಿಕವನ್ನು ಮಾಡುವದು, ವೇದಾಂತವಿಚಾರವನ್ನು ಮಾಡುವದು - ಇವೆರಡು ಅಭ್ಯಾಸಗಳೂ ಮೈಗೂಡಿಕೊಂಡವು.

## ನೇಯ್ಗೆಯವರ ಪರಿಚಯ :

ವೆಂಕಟರಾಯರ ಸಹವಾಸದಿಂದ ಕೆಲವು ಜನ ನೇಯ್ಗೆಯವರ ಮೊದಲನೆಯ ಪರಿಚಯವು ನನಗೆ ಆಯಿತೆಂದು ಆಗಲೆ ಹೇಳಿರುತ್ತೇನಷ್ಟೆ ? ನೇಯ್ಗೆಯವರಿಗೂ ವೆಂಕಟರಾಯರಿಗೂ ಮುಖ್ಯವಾಗಿ ಥಿಯೋಸೊಫಿಯ ಕಾರಣದಿಂದ ನಿಕಟಸಂಬಂಧವು ಆಗಿತ್ತು. ವೆಂಕಟರಾಯರು ಇಂಗ್ಲೀಷಿನಲ್ಲಿ ಕೆಲವು ಥಿಯೊಸೊಫಿಕಲ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವದರಲ್ಲಿಯೂ ಅವರಿಗೆ ಸಹಾಯವನ್ನು ಮಾಡುತ್ತಿದ್ದೆನಾದರೂ, ನಾನು ಅವರ ಸಮಾಜಕ್ಕೆ ಸದಸ್ಯನಾಗಲಿಲ್ಲ. ಹೇಗೋ ಅವರ ಮೂಲಕ ನನಗೂ ನೇಯ್ಗೆಯವರ ಪರಿಚಯವು ಹೆಚ್ಚಿತು. ಅವರುಗಳಲ್ಲಿ ಒಬ್ಬ ನರಸಿಂಗರಾವ್ ಎಂಬ ಹುಡುಗನು ಸ್ಕೂಲಿನಲ್ಲಿ ಬಹಳ ತಂಟೆಮಾಡುತ್ತಾನೆಂಬ ಕಾರಣದಿಂದ ಅವನಿಗೆ ಪ್ರೈವೇಟಾಗಿ ಪಾಠವನ್ನು ಹೇಳಿ ಕೊಡಬೇಕೆಂದು ನನ್ನ ಬಳಿಗೆ ತಂದುಬಿಟ್ಟರು. ಅವನಿಗೆ ಪಾಠವನ್ನು ಹೇಳಿಕೊಟ್ಟು ಮತ್ತೆ ಸ್ಕೂಲಿಗೂ ಸೇರುವಂತೆ ಪ್ರೋತ್ಸಾಹಿಸಿದೆನು. ಆ ಹುಡುಗನು ಈಚೆಗೆ ಒಳ್ಳೆಯ ಥಿಯೋಸೊಫಿಸ್ಟಾಗಿ ಬೆಳೆದು ಪ್ರಸಿದ್ಧಿಗೆ ಬಂದಿರುತ್ತಾನೆ. ಅವನು ಸ್ವಕುಳ ಸಾಳೆಯವನು. ಗರ್ಲ್ಸ್‌ಸ್ಕೂಲು ಮಾಸ್ಟರಾದ ರಂಗಪ್ಪನವರು ಪದ್ಮಸಾಳೆಯವರು.

ಅವರು ಅಪ್ಪರ್ ಸೆಕೆಂಡರಿಗೆ ಓದುವುದಕ್ಕೆ ಪ್ರಯತ್ನಿಸಿ ನನ್ನಿಂದ ಜಗನ್ನಾಥವಿಜಯ, ದಮಯಂತೀ ಸ್ವಯಂವರ, ವೇಣೀಸಂಹಾರ ನಾಟಕ, ಚಿಕದೇವರಾಜವಂಶಾವಳೀ-ಮುಂತಾದ ಕೆಲವು ಗ್ರಂಥಗಳನ್ನು ತಿಳಿದುಕೊಳ್ಳುವದಕ್ಕೆಂತ ನನ್ನ ಸ್ನೇಹವನ್ನು ಮಾಡಿಕೊಂಡರು. ನಾನು ಪ್ರತಿದಿನವೂ ಬೆಳಿಗ್ಗೆ ವಿಷ್ಣುಸಹಸ್ರನಾಮವನ್ನು ಓದುತ್ತಿದ್ದದ್ದು ನೋಡಿ ಅವರೂ ಅದನ್ನು ಓದುವದಕ್ಕೆ ಮೊದಲು ಮಾಡಿದರು. ಅವರಿಗೂ ನನಗೂ ಆಗಾಗ್ಗೆ ವೇದಾಂತದ ವಿಷಯಕ್ಕೆ ಸಂಭಾಷಣೆಗಳಾಗುತ್ತಿದ್ದವು. ಬಟ್ಟೆಯನ್ನು ಒಗೆಯುವದಕ್ಕೆ ಇಬ್ಬರೂ ಜೊತೆಯಲ್ಲಿಯೇ ಬಾವಿಗೆ ಹೋಗುತ್ತಿದ್ದೆವು. ಅವರಿಗೆ ನನಗೆ ಯಾವದಾದರೊಂದು ಕೆಲಸದಲ್ಲಿ ನೆರವಾಗಲೇಬೇಕೆಂಬ ತವಕವಿತ್ತು. ಮೊಳಕಾಲ್ಮೂರಿಗೆ ಏಳೆಂಟು ಮೈಲಿಗಳ ದೂರದಲ್ಲಿದ್ದ ರಾಯದುರ್ಗದವರೆಗೆ ನನ್ನೊಡನೆ ಒಮ್ಮೆ ಬಂದಿದ್ದರು ; ಸಿದ್ಧಾಪುರವೆಂಬ ಹಳ್ಳಿಗೆ ಮೂರು ಬೆಟ್ಟಗಳನ್ನು ದಾಟಿ ಹೋಗಬೇಕಾಗಿ ಬಂದ ಪ್ರಸಂಗದಲ್ಲಿ ನನ್ನ ಜೊತೆಯಲ್ಲಿ ಬಂದಿದ್ದರು. ಕತ್ತಲೆಯಿಂದ ನಾವು ರಾತ್ರೆ ಕಾಡೊಳಗೆ ಸಂಕೇಭೈರವನ ಕಣಿವೆಯ ದೇವಾಲಯದಲ್ಲಿ ವಿಶ್ರಮಿಸಿಕೊಂಡೆವು. ಆ ದಿನ ಅವರು ಪ್ರಯಾಸವಾಗಿದ್ದ ನನಗೆ ಬಹಳ ಸಹಾಯ ಮಾಡಿದ್ದರು.

## ಮೊಳಕಾಲ್ಮೂರುವಿನಲ್ಲಿ ವ್ಯಾಸಂಗಗಳು :

ಪಂಡಿತಪರೀಕ್ಷೆಯ ನಿಮಿತ್ತದಿಂದ ಸಂಸ್ಕೃತ, ಕನ್ನಡಗಳ ಅಭ್ಯಾಸ, ವೆಂಕಟ ರಾಯರ ಮೈತ್ರಿಯಿಂದ ವೇದಾಂತಾಭ್ಯಾಸ - ಇವುಗಳಲ್ಲದೆ ಮೊಳಕಾಲ್ಮೂರುವಿನಲ್ಲಿ ಇನ್ನು ಕೆಲವು ವ್ಯಾಸಂಗಗಳು ನನಗೆ ಇದ್ದವು. ಸ್ಕೂಲಿನ ಹೆಡ್‌ಮಾಸ್ಟರು ಅಮಲ್ದಾರರ ಪರಿಚಯವುಳ್ಳವರು, ಅವರ ಪ್ರೇರಣೆಯಂತೆ ನಾನೂ ಅಮಲ್ದಾರರ ಮನೆಯಲ್ಲಿ ಒಂದೊಂದು ದಿನ ರಾತ್ರೆ ಗೀತೆಯನ್ನು ಓದುತ್ತಿದ್ದೆನು ; ನನಗೆ ತಿಳಿದ ಮಟ್ಟಿಗೆ ಅದರ ಅರ್ಥವನ್ನು ಹೇಳುತ್ತಿದ್ದೆನು. ಅವರುಗಳಿಬ್ಬರೂ ಸೇರಿ ಸ್ಕೂಲಿನಲ್ಲಿ ಒಂದು ಚರ್ಚಾಕೂಟವನ್ನು ಏರ್ಪಡಿಸಿದ್ದರು. ಅದರಲ್ಲಿ ಒಬ್ಬೊಬ್ಬರು ಒಂದೊಂದು ದಿನ ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ಒಂದೊಂದು ವಿಷಯವಾಗಿ ಒಂದು ಭಾಷಣವನ್ನು ಮಾಡುವದು ಅಥವಾ ಬರೆದುಕೊಂಡು ಬಂದಿದ್ದ ಒಂದು ಲೇಖನವನ್ನು ಓದುವದು, ಆ ಬಳಿಕ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ಕೊಡುವದು ಹೀಗೆ ನಡೆಯುತ್ತಿತ್ತು. ಅಲ್ಲಿ ಒಂದು ದಿನ ಬೌದ್ಧಮತದ ವಿಚಾರದಲ್ಲಿ ಚರ್ಚೆನಡೆದಿತ್ತು. ನಾನು ಇಂಗ್ಲೀಷಿನಲ್ಲಿ ಬಹಿರಂಗವಾಗಿ ಮಾತನಾಡಿದ್ದು ಅದೇ ಮೊದಲು. ಸಭಾಕಂಪದಿಂದ ಸ್ವಲ್ಪ ಮೈಬೆವರು ಕಟ್ಟಿತೆಂದು ಕಾಣುತ್ತದೆ. ಆ ದಿನ ನಾನು ಬುದ್ಧನಿಗೆ 'ಅದ್ವಯವಾದೀ' 'ಮಾಯಾದೇವಿಸುತ' ಎಂಬ ಹೆಸರುಗಳು

ಬಂದಿರುವುದು ಕೇವಲ ಆಕಸ್ಮಿಕವಲ್ಲ; ಚೆನ್ನಾಗಿ ವಿಮರ್ಶಿಸಿ ನೋಡಿದರೆ ಅದ್ವೈತವೂ ಬೌದ್ಧಮತವೂ ಒಂದೇ ಆಗುವವು, ಎಂದು ಹೇಳಿದೆನು. ಇದು ಕೆಲವರಿಗೆ ವಿಲಕ್ಷಣವಾದ ಅಭಿಪ್ರಾಯವೆಂದು ತೋರಿದರೂ ನನ್ನ ಪ್ರತಿಪಾದನೆಯನ್ನು ಅನೇಕರು ಮೆಚ್ಚಿದರು. ಮೊಳಕಾಲ್ಮೂರು ಮೈಸೂರುಸೀಮೆಯ ಕೊನೆಯಲ್ಲಿದೆ ; ಅಲ್ಲಿಂದೀಚೆಗೆ ರಾಯದುರ್ಗ, ಅಲ್ಲಿಂದ ತೆಲುಗು ಮಾತನಾಡುವ ಶಾಸ್ತ್ರಿಗಳೊಬ್ಬರು ಬಂದು ವೇದಾಂತ ವಿಷಯಕ್ಕೆ ಉಪನ್ಯಾಸವನ್ನು ಕೊಟ್ಟರು. ಆಗ ನನಗೆ ವೇದಾಂತದ ವಿಷಯಕ್ಕೆ ಹೊಸದಾದ ವಿಚಾರಗಳು ಮೊಳೆತುಕೊಂಡವು. ಇನ್ನೊಮ್ಮೆ ಭುಜಂಗಾಚಾರ್ಯರೆಂಬ ಮಾಧ್ವರೊಬ್ಬರು ಬಂದು ರಾಮಾಯಣ ಪುರಾಣವನ್ನು ಹೇಳಿ ಮಂಗಳವನ್ನು ಮಾಡಿದ್ದರು. ಅವರು ಮಾಧ್ವದ್ವೈತದಲ್ಲಿ ಬಹಳ ಅಭಿಮಾನಿಗಳು. ಅವರನ್ನು ನೋಡಿದಮೇಲೆ ದ್ವೈತಾದ್ವೈತದ ಜಗಳದಲ್ಲಿಯೂ ಸ್ವಲ್ಪ ಬುದ್ಧಿ ಹರಿಯಿತು.

## ಸ್ಕೂಲು ಇನ್‌ಸ್ಪೆಕ್ಟರರ ಮೆಚ್ಚಿಗೆ:

ಇಷ್ಟರಲ್ಲಿ ನನಗೆ 15 ರೂ ಸಂಬಳಕ್ಕೆ ಬಡತಿಯಾಗಿತ್ತು. ಇನ್‌ಸ್ಪೆಕ್ಟರು ವೀರಭದ್ರಯ್ಯನವರು ಬೆಂಗಳೂರಿಗೆ ವರ್ಗವಾಗುವಾಗ ಕೃಷ್ಣಯ್ಯನವರಿಗೆ 'ನಿಮಗೆ ನಾನೇನು ಸಹಾಯವನ್ನು ಮಾಡಲಿಲ್ಲ' ಎಂದು ಸಹಜವಾಗಿ ಉಪಚಾರೋಕ್ತಿಗಳನ್ನು ಹೇಳಲು ವೈ. ಸುಬ್ಬರಾಯರು ಮೊಳಕಾಲ್ಮೂರುವಿನಲ್ಲಿದ್ದಾರೆ; ಅವರಿಗೆ ಪ್ರಮೋಷನ್ ಕೊಟ್ಟರೆ ನನಗೆ ಕೊಟ್ಟಂತೆ ಎಂದು ಕೇಳಿಕೊಂಡರಂತೆ! ದಯಾಳುಗಳಾದ ವೀರಭದ್ರಯ್ಯನವರು ಇದ್ದ ಅವಕಾಶವನ್ನು ಉಪಯೋಗಿಸಿ ಕೊಂಡು ನನಗೆ ಬಡತಿಗೆ ಶಿಫಾರಸು ಮಾಡಿ ಹೋದರು. ಈಚೆಗೆ ಬಂದಿದ್ದ ಶಾಮರಾಯರೆಂಬ ಇನ್‌ಸ್ಪೆಕ್ಟರು ನಮ್ಮ ಸ್ಕೂಲಿನ ಪರೀಕ್ಷೆಗೆಂದು ಬಂದರು. ನನ್ನ ತರಗತಿಗಳಲ್ಲಿ ಹುಡುಗರು ಬಹಳ ಮಟ್ಟಿಗೆ ಅವರು ಕೇಳಿದ ಪ್ರಶ್ನೆಗಳಿಗೆಲ್ಲ ಸರಿಯಾಗಿಯೇ ಉತ್ತರವನ್ನು ಕೊಟ್ಟರು. ಹೆಡ್‌ಮಾಸ್ಟರ್ ಕ್ಲಾಸುಗಳು ಯಾವುವೂ ಸರಿಯಾಗಿರಲಿಲ್ಲ. ಹುಡುಗರೆಲ್ಲರೂ ಇನ್‌ಸ್ಪೆಕ್ಟರಲ್ಲಿ ದೂರು ಹೇಳಿಕೊಂಡರು. 'ಇವರಿಗೆ ಕನ್ನಡವೇ ಬರುವುದಿಲ್ಲ ; ಇಂಡಸ್ಟ್ರಿಯಲ್ ಸ್ಕೂಲಿಗೆ ಮತ್ತೆ ಮತ್ತೆ ಹೋಗಿ ಬರುವದರಲ್ಲಿಯೇ ಇವರ ಕಾಲವು ಕಳೆದು ಹೋಗುತ್ತದೆ. ಇವರನ್ನು ವರ್ಗಮಾಡಿ ಬೇರೊಬ್ಬರನ್ನು ನಮಗೆ ಕಳುಹಿಸಿಕೊಡಬೇಕು. ಅಲ್ಲಿಯವರೆಗೆ ನಮಗೆ ಸುಬ್ಬರಾಯರೇ ಪಾಠವನ್ನು ಹೇಳಿ ಕೊಡಲಿ !' ಎಂದರು. ವೇಳಾಪತ್ರಿಕೆಯಂತೆ ನನಗೆ ದಿನಕ್ಕೆ ಏಳು ಘಂಟೆಯ ಪಾಠವನ್ನು ಕೊಡಲಾಗಿತ್ತು. ಮನೆಯಲ್ಲಿ ಅಡಿಗೆಯನ್ನು ಮಾಡಿಕೊಂಡು ಸ್ಕೂಲು ಕೆಲಸವನ್ನು ಮಾಡುವದು ಬಹಳ ಕಷ್ಟವಾಗಿತ್ತಾದರೂ ಮೇಷ್ಟರು ಕೆಲಸದಲ್ಲಿ

ಉತ್ಸಾಹವು ಹೆಚ್ಚಾಗಿದ್ದದ್ದರಿಂದ, ನಾನು ಕೆಲಸವನ್ನು ಗೋಣಗುಟ್ಟದೆ ಮಾಡಿ ಕೊಂಡಿದ್ದೆನು. ಶಾಮರಾಯರು ನನಗೆ 'ಏಳು ಘಂಟೆಯ ಕಾಲ ಕೆಲಸವನ್ನು ಕೊಟ್ಟಿರುವುದು ಅನ್ಯಾಯ, ಇವರಿಗೆ ಕ್ಯಾಜ್ಯುಯಲ್ ರಜ ಹೆಚ್ಚಾಗಿ ಕೊಡಿರಿ !' ಎಂದು ಶಿಫಾರಸು ಮಾಡಿದರು. ಆ ದಿನ ರಾತ್ರಿ ಊರಿನ ಜನರು, ನಾನು ರಂಗಪ್ಪನವರ ಪ್ರೋತ್ಸಾಹದಿಂದ ಅವರಿಗೆ ಹೊಸದಾಗಿ ರಚಿಸಿಕೊಟ್ಟಿದ್ದ ಒಂದು 'ಕರ್ಣಾಟಕ' (ರಾತ್ರಿಪೂರ್ತ ಆಡುವ ನಾಟಕ)ವನ್ನು ಆಡಿ ಅದನ್ನು ನೋಡುವದಕ್ಕೆ ಬರಬೇಕೆಂದು ಇನ್‌ಸ್ಪೆಕ್ಟರನ್ನೂ ಅಮಲ್ದಾರರನ್ನೂ ಪ್ರಾರ್ಥಿಸಿಕೊಂಡರು. ಇನ್‌ಸ್ಪೆಕ್ಟರರಿಗೆ ನನ್ನಲ್ಲಿ ಹೆಚ್ಚಿನ ಅಭಿಮಾನವುಂಟಾಯಿತು. 'ಕರ್ಣಾಟಕ'ವೆಂದರೇನು ? ಎಂದು ಪ್ರಶ್ನೆ ಮಾಡಿದರು. ಊರಿನ ಜನರು ಬಯಲಾಟವನ್ನು ಆಡುತ್ತಾರೆ, ಅದಕ್ಕೆ ನಾಟಕದ ಮಟ್ಟಿನ ಪದಗಳನ್ನು ಸೇರಿಸಿ ಬೆಳ್ಳಂಬೆಳಗು ಆಡುವದಕ್ಕೆ ಸಾಕಾಗುವಷ್ಟು ಕಂದಗಳನ್ನು ಸೇರಿಸಿ ಬರೆದುಕೊಡಬೇಕೆಂದು ನನ್ನನ್ನು ಕೇಳಿಕೊಂಡದ್ದರ ಮೇಲೆ ಅವರಿಗೆ ಸಿರಿಯಾಳದ ಕಥೆಯನ್ನು ಬರೆದು ಕೊಟ್ಟಿದ್ದೇನೆ, ಅದು ತಾವು ನೋಡುವಷ್ಟು ಸ್ವಾರಸ್ಯವಾಗಿರಲಾರದು ಎಂದು ಹೇಳಿದೆನು. ಆದರೂ ಅವರು ಆ ರಾತ್ರೆ ಆಟವನ್ನು ನೋಡುವದಕ್ಕೆ ಸ್ವಲ್ಪ ಹೊತ್ತು ಅಮಲ್ದಾರರೊಡನೆ ಬಂದಿದ್ದು ನಾಟಕದಲ್ಲಿ ಬಂದಿದ್ದ ಮಾತುಗಾರಿಕೆಯನ್ನು ಬಹಳವಾಗಿ ಮೆಚ್ಚಿ ಹೊರಟುಹೋದರು.

## ಹೊಸದುರ್ಗಕ್ಕೆ ವರ್ಗ :

ಕೆಲವು ತಿಂಗಳುಗಳು ಕಳೆದವು. ಈಗ ಮನೆಯಲ್ಲಿ ನಾನು, ಹೆಂಡತಿ, ಒಂದು ಮಗು, ಇಷ್ಟು ಜನರು ಇದ್ದೆವು. ಶಿವಗಂಗಮಠದ ವಿದ್ವಾಂಸರೆಂದು ನರಸಿಂಹ ಶಾಸ್ತ್ರಿಗಳೆಂಬ ಒಬ್ಬ ವೈದಿಕ ವಿದ್ವಾಂಸರು ಶಿಷ್ಯ ಸಮೇತರಾಗಿ ನಮ್ಮ ಮನೆಗೆ ಬಂದರು. ಅವರನ್ನು ಆದರ ಪೂರ್ವಕವಾಗಿ ನಾನು ಸತ್ಕರಿಸಿ ಮನೆಯಲ್ಲಿ ಎರಡು ಮೂರು ದಿನಗಳು ಇಟ್ಟುಕೊಂಡೆನು. ಅವರು ಬಹಳ ಮಡಿಮಾಡುತ್ತಿದ್ದದ್ದು ಮನೆಯವರಿಗೆ ಸ್ವಲ್ಪ ಕಷ್ಟವೇ ಆಗಿದ್ದರೂ ಸಂಸ್ಕೃತದಲ್ಲಿಯೂ ವೇದಾಂತದಲ್ಲಿಯೂ ಅವರಿಗೆ ಅಭಿರುಚಿಯಿದ್ದದ್ದರಿಂದ ನನಗೆ ಅವರಲ್ಲಿ ಪೂಜ್ಯ ಬುದ್ಧಿಯುಂಟಾಗಿತ್ತು. ಇಷ್ಟರೊಳಗೆ ನಾನೂ ವೆಂಕಟರಾಯರೂ ಮುಂಡಕೋಪನಿಷತ್ತನ್ನು ಮುಗಿಸಿ ತೈತ್ತಿರೀಯಭಾಷ್ಯ- ಚಿಂತನೆಯನ್ನು ಪ್ರಾರಂಭಿಸಿದ್ದೆವು. ಅವನ್ನು ಅರ್ಥಮಾಡಿಕೊಳ್ಳುವದು ನನಗೆ ಬಹಳ ಕಷ್ಟವಾಗಿದ್ದರೂ ಹೇಗೋ ಗ್ರಹಿಸಿ ವೆಂಕಟರಾಯರಿಗೆ ಹೇಳುತ್ತಿದ್ದೆನು. ಒಂದು ದಿವಸ 'ಬುದ್ಧೇರುಪಾಧಿಲಕ್ಷಣಾಯಾಶ್ಚಕ್ಷುರಾದಿ ದ್ವಾರೈರ್ವಿಷಯಾಕಾರೇಣ ಪರಿಣಾಮಿನ್ಯಾ......' ಎಂಬ ವಾಕ್ಯವು ಆನಂದಾಶ್ರಮದ ಪುಸ್ತಕದಲ್ಲಿ 'ಲಕ್ಷಣಾಯಾಶ್ಚ' ಎಂದು ಇದ್ದದ್ದು ಒಂದು ಸಾಲಿನಲ್ಲಿ ಅರ್ಧವಾಗಿ ಮುಂದಿನ ಸಾಲಿನಲ್ಲಿ

'ಕ್ಷುರಾದಿದ್ವಾರೈಶ್ಚ.........' ಎಂದು ಇದ್ದದ್ದು ನನಗೆ ಬಹಳ ಪೇಚಾಟವನ್ನುಂಟು ಮಾಡಿತ್ತು, 'ಕ್ಷುರ' ಎಂದರೆ ಕ್ಷೌರದ ಕತ್ತಿ ; ಆದರ ವಿಚಾರವಿಲ್ಲೇಕೆ ಬಂದಿದೆ ? ಎಂದು ನನ್ನ ಶಂಕೆ ! ಶಾಸ್ತ್ರಿಗಳು ನನ್ನ ಮೋಹವನ್ನು ಕಳೆದು 'ಚಕ್ಷುರಾದಿದ್ವಾರೈಃ ಎಂದು ಓದಿರಿ !' ಎಂದು ತಿದ್ದಿದರು. ನನಗೆ ಬಹಳ ಸಂತೋಷವಾಯಿತು. ಅವರು ಮಡಿಯಲ್ಲಿಯೇ ದಿವಸವೆಲ್ಲಾ ಇದ್ದು, ಕಾಲಕಾಲಕ್ಕೆ ಸಂಧ್ಯಾದಿಗಳನ್ನು ಮಾಡುವದು, ವಿದ್ಯಾರ್ಥಿಗಳಿಗೆ ಸ್ತೋತ್ರಗಳನ್ನು ಹೇಳಿ ಕೊಡುವದು - ಇವೂ ಅವರ ವಿಷಯಕ್ಕೆ ಗೌರವವನ್ನು ಹೆಚ್ಚಿಸಿದವು. ಹೀಗೆ ಎರಡು ಮೂರು ದಿನಗಳು ಕಳೆದ ಮೇಲೆ ಶಾಸ್ತ್ರಿಗಳು ನಮ್ಮನ್ನು ಬಿಟ್ಟು ಹೊರಟರು. ಸ್ವಲ್ಪ ಹೊತ್ತಿನ ಮೇಲೆ ನೋಡುವಲ್ಲಿ ನಮ್ಮ ಮಗುವಿನ ಕಾಲಿನಲ್ಲಿದ್ದ ಬೆಳ್ಳಿಯ ಮುರಿ ಮಾಯವಾಗಿತ್ತು. ಹೆಂಡತಿ ಅಳುವದಕ್ಕೆ ಮೊದಲು ಮಾಡಿದಳು. ನನಗೆ ಏನು ಮಾಡಬೇಕೆಂಬುದು ತಿಳಿಯದೇ ಸ್ಕೂಲಿನತ್ತ ಹೊರಟೆನು ; ಅಲ್ಲಿ ಒಬ್ಬರು 'ನಿಮ್ಮ ಮನೆಗೆ ಬಂದಿದ್ದ ಶಾಸ್ತ್ರಿಗಳು ಇತ್ತಕಡೆಗೆ ಕವಲುದಾರಿಯಲ್ಲಿ ಹೋಗಿರುತ್ತಾರೆ' ಅವರೇನಾದರೂ ತೆಗೆದುಕೊಂಡು ಹೋಗಿರುತ್ತಾರೋ ಏನೋ ! ಎಂದು ಸೂಚಿಸಿದ್ದಲ್ಲದೆ ಹತ್ತಿರವೇ ಇದ್ದ ಪೋಲೀಸಿನವನನ್ನು 'ನೀನು ಇವರ ಜೊತೆಗೆ ಹೋಗಿ ಪತ್ತೆಮಾಡಿಬಿಡಯ್ಯ !' ಎಂದು ಕೇಳಿಕೊಂಡರು. ಪೋಲೀಸಿನವನು ನನ್ನನ್ನು ಹಿಂದೆ ಕರೆದುಕೊಂಡು ಹೊರಟನು, ನಾನು ಮಾಡುತ್ತಿರುವದು ಯುಕ್ತವೆ ಅಯುಕ್ತವೆ ? ಎಂಬ ವಿವೇಚನೆಯಿಲ್ಲದೆ ಮುರಿ ಸಿಕ್ಕೀತೆಂಬ ಆಶೆಯಿಂದ ನಾನೂ ಹಿಂಬಾಲಿಸಿದೆನು. ಪೋಲೀಸಿನವನು ಶಾಸ್ತ್ರಿಗಳನ್ನು ಅಡ್ಡಗಟ್ಟಿನಿಲ್ಲಿಸಿದನು. 'ಎಲ್ಲಿ ನಿಮ್ಮ ಗಂಟು ಬಿಚ್ಚಿತ್ತೋರಿಸಿರಿ !' ಎಂದನು, ಅವರು 'ಏನು ಸುಬ್ಬರಾಯರೇ ! ನಿಮ್ಮ ಮನೆಯಲ್ಲಿ ನಾನು ಕಳವು ಮಾಡಬೇಕೆ ?' ಎಂದು ಗಂಟು ಬಿಚ್ಚಿದರು ; ಅದರಲ್ಲಿ ಏನೂ ಇರಲೇ ಇಲ್ಲ. ನನಗೆ ಬ್ರಾಹ್ಮಣತೇಜೋವಧೆಯನ್ನು ಮಾಡಿದ್ದಕ್ಕಾಗಿ ಬಹಳ ದುಃಖವಾಯಿತು. ಪೆಚ್ಚು ಮುಖವನ್ನು ಹಾಕಿಕೊಂಡು ಹಿಂತಿರುಗಿ ಮನೆಗೆ ಬಂದೆನು. ಮುರಿಹೋದದ್ದು, ಶಾಸ್ತ್ರಿಗಳಿಗೆ ನನ್ನಿಂದ ವಿನಾಕಾರಣವಾಗಿ ಅಪಮಾನವಾದದ್ದು ಈ ವಿಷಯಗಳನ್ನೇ ಮನಸ್ಸಿನಲ್ಲಿ ಹೊರಳಿಸುತ್ತಿರುವಲ್ಲಿ ಹೆಡ್‌ಮಾಸ್ಟರು ನಮ್ಮ ಮನೆಗೆ ಅಕಸ್ಮಾತ್ತಾಗಿ ಬಂದರು. 'ಆದದ್ದು ಆಯಿತು, ಇದಕ್ಕೇಕೆ ಚಿಂತೆ ಮಾಡುವಿರಿ ? ಇಲ್ಲಿ ನೋಡಿ, ನಿಮಗೆ ಹೊಸದುರ್ಗಕ್ಕೆ ಹೆಡ್‌ಮಾಸ್ಟರು ಕೆಲಸಕ್ಕೆ ವರ್ಗವಾಗಿದೆ !' ಎಂದು ಒಂದು ಟೆಲಿಗ್ರಾಮು ಆರ್ಡರನ್ನು ನನ್ನ ಕೈಗೆ ಇತ್ತರು !.

## ಹೊಸದುರ್ಗಕ್ಕೆ ಪ್ರಯಾಣ :

ನನಗೆ ವರ್ಗವಾದದ್ದು ರಂಗಪ್ಪನವರಿಗೆ ಬಹಳ ದುಃಖವಾಯಿತು. ಅವರು ನನ್ನನ್ನು ಆ ಊರಲ್ಲಿಯೇ ಉಳಿಸಿಕೊಡಬೇಕೆಂದು ಜನರಿಂದ ಅರ್ಜಿ ಬರೆಯಿಸುವದಕ್ಕೆ

ಪ್ರಯತ್ನಪಟ್ಟರು. ಆದರೆ ಅದನ್ನು ತಪ್ಪಿಸಿದೆನು. ನರಸಿಂಗರಾಯರೂ ಅವರ ಮನೆಯವರೂ ಬಹಳ ವ್ಯಥೆಪಟ್ಟರು. ನೇಯ್ಗೆಯವರು ನನ್ನ ಜ್ಞಾಪಕಾರ್ಥವಾಗಿ ಸಿರಿಯಾಳನ ನಾಟಕವನ್ನು ಆಡಿದರು. ಊರಿನೊಳಗೆ ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಆದಿನ ವೆಂಕಟರಾಯರೂ ನಾನು ಜತೆಯಲ್ಲಿ ಕುಳಿತಿದ್ದೆವು.ಫಲಾಹಾರಕ್ಕಾಗಿ ಮಾಡಿದ್ದ ಪದಾರ್ಥಗಳಲ್ಲಿ ನೀರುಳ್ಳಿಯ ಪಕೋಡವೂ ಇತ್ತು. ನನಗೆ ಆಗ್ಗೆ ನೀರುಳ್ಳಿ ಎಂದರೆ ಬಹಳ ಪ್ರಿಯ. ಮೊಳಕಾಲ್ಮೂರುವಿನ ಸುತ್ತಲೂ ಕಿರಾತಭೂಯಿಷ್ಠವಾದ ಸ್ಥಳ. ಅಲ್ಲಿ ಯಾವ ಸಾಮಾನೂ ಸಿಕ್ಕುತ್ತಿರಲಿಲ್ಲ. ತರಕಾರಿಯಂತೂ ಇಲ್ಲವೇ ಇಲ್ಲ. ಪ್ರತಿ ಸಂತೆಗೂ ನೀರುಳ್ಳಿಯನ್ನು ತಂದೇ ತೀರುತ್ತಿದ್ದೆವು. ಹಾಸ್ಯಕ್ಕಾಗಿ ಅದನ್ನು ನಾನು 'ಗುರುದೇವ' ಎಂದು ಕರೆಯುತ್ತಿದ್ದೆನು. ಈ ದಿನ ಕೈಯಲ್ಲಿ ನೀರುಳ್ಳಿಯ ಪಕೋಡವಿದ್ದರೂ ತಿನ್ನದೆ ಕುಳಿತಿದ್ದ ವೆಂಕಟರಾಯರನ್ನು 'ತೆಗೆದುಕೊಳ್ಳಿರಿ, ತಿನ್ನಿರಿ ! ಏಕೆ ತಡ ?' ಎಂದೆನು. ವೆಂಕಟರಾಯರು ಮೆಲುದನಿಯಲ್ಲಿ 'ಸ್ವಲ್ಪ ತಡೆಯಿರಿ ! ಶಾಸ್ತ್ರಿಗಳಿದ್ದಾರೆ !' ಎಂದರು. ಕೂಡಲೆ ನನಗೆ 'ನೀರುಳ್ಳಿಯು ಶಿಷ್ಟರು ತಿನ್ನತಕ್ಕದ್ದಲ್ಲ! ಇದು ಕದ್ದು ತಿನ್ನತಕ್ಕ ಪದಾರ್ಥವಾದರೆ ಇದನ್ನೇಕೆ ತಿನ್ನಬೇಕು ?' ಎಂಬ ಯೋಚನೆ ಹತ್ತಿಕೊಂಡಿತು. ಅಂದಿನಿಂದ ನೀರುಳ್ಳಿಯನ್ನು ಸಂಪೂರ್ಣವಾಗಿ ತ್ಯಾಗಮಾಡಿಬಿಟ್ಟೆನು. ಸರಿ ಹೊಸದುರ್ಗಕ್ಕೆಂದು ಗಾಡಿಯ ಮೇಲೆ ಹತ್ತಿದೆನು. ರಂಗಪ್ಪನವರು ಎರಡು ಮೂರು ಮೈಲಿಗಳವರೆಗೂ ಕಣ್ಣೀರಿಡುತ್ತಾ ಹಿಂದೆ ಬರುತ್ತಲೇ ಇದ್ದರು. ಬಹಳ ಒತ್ತಾಯ ಪಡಿಸಿದ ಮೇಲೆ ಹಿಂತಿರುಗಿದರು. ಗಿರಿಯಪ್ಪನೆಂಬ ಬಡಗನಾಡು ಬ್ರಾಹ್ಮಣರ ಹುಡುಗನು ಮಾತ್ರ ಏನು ಮಾಡಿದರೂ ಕೇಳದೆ ನಮ್ಮ ಜೊತೆಯಲ್ಲಿ ಬಂದೇಬಿಟ್ಟನು. ನಾನು ಒಬ್ಬನೇ ಇದ್ದಾಗ ಅವನು ನಮ್ಮ ಮನೆಯಲ್ಲಿಯೇ ಇದ್ದು ಓದಿಕೊಂಡಿದ್ದನು. ಅವನ ಮೂಲಕವಾಗಿಯೇ ಅಂಗಡಿಯಲ್ಲಿ ಸಾಮಾನುಗಳನ್ನು ತರಿಸಿಕೊಂಡು ನಾನು ಅಡಿಗೆ ಮಾಡುತ್ತಿದ್ದೆನು. ಜಯಾಚಾರ್ಯರ ಪಾಕಶಾಸ್ತ್ರದಲ್ಲಿರುವ ಅಡಿಗೆಗಳನ್ನು ಒಂದೊಂದಾಗಿ ಮಾಡುವ ಪ್ರಯೋಗಗಳು ನಮ್ಮ ಪಾಕಶಾಲೆಯಲ್ಲಿ ನಿತ್ಯವೂ ನಡೆಯುತ್ತಿದ್ದವು. ಪಾಠಗಳ ರುಚಿಯೇ ಅಲ್ಲದೆ, ಮನೆಯಲ್ಲಿ ಆಗುತ್ತಿದ್ದ ಪಾಕದ ರುಚಿಯಿಂದಲೂ ಗಿರಿಯಪ್ಪನಿಗೆ ನನ್ನ ಮೇಲೆ ಬಹಳ ಪ್ರೀತಿಯುಂಟಾಗಿತ್ತು. ನಾನು ಅವನ ಮೋಹದಿಂದ ಅವನನ್ನು ಹೊಸದುರ್ಗಕ್ಕೆ ಕರೆದುಕೊಂಡೇ ಹೋದೆನು. ಮುಂದೆ ಅವನ ತಂದೆ ಅಲ್ಲಿಗೆ ಬಂದು ಅವನನ್ನು ಹಿಂದಕ್ಕೆ ಕರೆದುಕೊಂಡು ಹೋಗಬೇಕಾಯಿತು.

# 19. ಹೊಸದುರ್ಗದಲ್ಲಿ (1906)

## ಶಿವರಾಮಯ್ಯನವರು :

ಮೊಳಕಾಲ್ಮೂರುವಿನಲ್ಲಿ ಸುಮಾರು ಒಂದು ವರ್ಷ ಮೂರು ತಿಂಗಳಷ್ಟು ಕಾಲ ನಾನು ಇದ್ದೆನು. ಅಷ್ಟರಲ್ಲಿ ಅಲ್ಲಿಯ ಜನರ ಪ್ರೀತಿಯು ನನ್ನ ಮೇಲೆ ಬಹಳವಾಗಿ ಉಂಟಾಗಿತ್ತು. ಅದರಲ್ಲಿಯೂ ವೆಂಕಟರಾಯರು ಹೆಚ್ಚಾಗಿ ನನ್ನನ್ನು ಪ್ರೀತಿಸುತ್ತಿದ್ದರು. ಈಗ ಅವರಿಗೆ ನನ್ನಿಂದ ಒಂದು ಕೆಲಸವು ಆಗಬೇಕಾಗಿತ್ತು. ಅವರಿಗೆ ಸಂಬಂಧಿಗಳಾಗಿದ್ದ ಶಿವರಾಮಯ್ಯನೆಂಬವರು ಹೊಸದುರ್ಗದಲ್ಲಿ ಹೆಡ್‌ಮಾಸ್ಟರಾಗಿದ್ದು ಏನೋ ಕಾರಣದಿಂದ ಹೇಳದೆ ಕೇಳದೆ ಕಾಶಿಯಾತ್ರೆಗೆ ಹೋಗಿಬಿಟ್ಟಿದ್ದರು. ಈಗ ಅವರ ಸ್ಥಾನಕ್ಕೆ ನನಗೆ ಆಕ್ಟಿಂಗ್ ಹೆಡ್‌ಮಾಸ್ಟರಾಗಿ ವರ್ಗವಾಗಿತ್ತು. ಹೊಸದುರ್ಗದಲ್ಲಿ ಚಾರ್ಜುಕೊಡುವವರು ಯಾರೂ ಇಲ್ಲದ್ದರಿಂದ ನಾನು ಹೋಗಿ ಸ್ಕೂಲು ಸ್ಥಿತಿಯನ್ನು ಕುರಿತು ರಿಪೋರ್ಟು ಮಾಡಬೇಕಾಗಿತ್ತು. 'ಅವರು ಹಣವನ್ನೇನಾದರೂ ಬಳಸಿಕೊಂಡಿದ್ದರೆ ಕೂಡಲೆ ಬರೆಯಬೇಕು, ನಾನು ಎಲ್ಲವನ್ನೂ ಕೊಡುತ್ತೇನೆ' ಎಂದು ವೆಂಕಟರಾಯರು ಹೇಳಿದರು. ನಾನು ಚಳ್ಳಕೆರೆಯಲ್ಲಿದ್ದ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರನ್ನು ಕಂಡು ಅವರಿಂದ ಮುಂದಿನ ನಡವಳಿಕೆ ಬಗ್ಗೆ ಸಲಹೆ ಪಡೆದುಕೊಂಡು ಹೊಸದುರ್ಗಕ್ಕೆ ಹೋದೆನು.

ಶಿವರಾಮಯ್ಯನವರನ್ನು ನಾನು ಈ ಹಿಂದೆ ಒಂದೆರಡು ಸಲ ನೋಡಿದ್ದೆನು. ಅವರು ಒಳ್ಳೆಯ ತೇಜಸ್ವಿಗಳು. ಬ್ರಾಹ್ಮಣ್ಯದಲ್ಲಿ ಬಹಳ ಅಭಿಮಾನವುಳ್ಳವರು ಅಧ್ಯಯನ ಮಾಡಿದವರು, ಔಪಾಸನಾಗ್ನಿಯನ್ನು ಇಟ್ಟುಕೊಂಡಿದ್ದರು ; ಯಾವಾಗಲೂ ಮಡಿಯಾಗಿಯೇ ಇರುತ್ತಿದ್ದರು. ಅವರಿಗೆ ಭರತಖಂಡದ ಬೇರೆಬೇರೆ ಪ್ರಾಂತಗಳ ಸಾರ್ವಜನಿಕ ಭಂಡಾರಗಳಲ್ಲಿರುವ ಪುಸ್ತಕಗಳ ಪಟ್ಟಿಯನ್ನು ತಯಾರಿಸಿಟ್ಟುಕೊಳ್ಳುವದರಲ್ಲಿಯೂ, ಹೊಸ ಕೈಪ್ರತಿಯ ಗ್ರಂಥಗಳನ್ನು ಜೋಡಿಸು ವದರಲ್ಲಿಯೂ ಬಹಳ ಆದರ. ವೇದಾಧ್ಯಯನವನ್ನು ಚೆನ್ನಾಗಿ ಮಾಡಿದರೆ ಸಮಾಧಿಸುಖವೇ ಸಿಕ್ಕುವದೆಂದು ಅವರು ಒಮ್ಮೆ ನನಗೆ ಚಿತ್ರದುರ್ಗದಲ್ಲಿ ಭೇಟಿಯಾದಾಗ ಹೇಳಿದ್ದರು. ಸಂಸ್ಕೃತದಲ್ಲಿಯೂ ವೇದಾಧ್ಯಯನದಲ್ಲಿಯೂ ಅವರಿಗಿದ್ದ ಅಭಿಮಾನವನ್ನು ಬಲ್ಲ ನಾನು ಅವರಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿದ್ದರೆ ಚೆನ್ನಾಗಿದ್ದೀತೆಂದು ಹಾರೈಸಿದ್ದೆನು. ದೈವಗತಿಯಿಂದ ಅವರು ಇಲ್ಲದ ವೇಳೆಯಲ್ಲಿ ನಾನು ಅವರ ಸ್ಥಾನಕ್ಕೆ ಹೋಗಬೇಕಾಯಿತು. ಶಿವರಾಮಯ್ಯನವರು ಇಂಗ್ಲೀಷು ಭಾಷೆಯನ್ನು ಚೆನ್ನಾಗಿ ಬಲ್ಲವರು ; ಕೆಲಸವನ್ನು ಉತ್ತಮ ರೀತಿಯಲ್ಲಿಯೇ

ಮಾಡಿಕೊಂಡಿದ್ದರು. ಸ್ಕೂಲನ್ನು ಶಿಸ್ತಿನಿಂದ ವ್ಯವಸ್ಥೆಗೊಳಿಸಿಕೊಂಡಿದ್ದರು ; ಅವರ ಮೇಲೆ ಯಾವ ದೂರೂ ಈವರೆಗೆ ಬಂದಿರಲಿಲ್ಲ. ಲೈಫ್ ಇನ್ಶೂರೆನ್ಸಿಗೆಂದು ಹೊರಟವರು ಹಾಗೆಯೇ ಮಹಾಯಾತ್ರೆ ಹೊರಟುಬಿಟ್ಟಿದ್ದರು. ಸ್ಕೂಲನ್ನು ಅಲ್ಲಿ ಕೆಲವರು ಜನರ ಎದುರಿಗೆ ಮಹಜರು ಮಾಡಿಸಿ ಝಡತಿ ಮಾಡಿನೋಡಿದ್ದರಲ್ಲಿ ಹಣಕಾಸು ಯಾವದೂ ಬಹಳ ಹೆಚ್ಚು ಕಡಿಮೆ ಬರಲಿಲ್ಲ ; ಎಲ್ಲವನ್ನು ಸರಿಪಡಿಸಿಕೊಂಡು ವೆಂಕಟರಾಯರಿಗೆ ತಿಳಿಸಿಬಿಟ್ಟೆನು. ಶಿವರಾಮಯ್ಯನವರ ಹೆಂಡತಿ ಬಹಳ ಗಟ್ಟಿಗಿತ್ತಿ, ಮನೆಯಲ್ಲಿಯೇ ಇದ್ದುಕೊಂಡು ಸ್ಕೂಲಿನ ಜವಾನನ ಮೂಲಕ ಮೇಷ್ಟರುಗಳ ಹಾಜರಿ, ಗೈರುಹಾಜರಿ ತಿಳಿದುಕೊಳ್ಳುವದು, ಕೆಲಸವು ಕಾಲಕ್ಕೆ ಸರಿಯಾಗಿ ನಡೆಯುವದೇ ಮುಂತಾದ ಏರ್ಪಾಟುಗಳನ್ನು ಮಾಡಿಕೊಂಡಿದ್ದದ್ದಲ್ಲದೆ, ಟಪ್ಪಾಲನ್ನು ಕೂಡ ತರಿಸಿ ಒಡೆಯದೇ ಹಾಗೆಯೇ ಇಟ್ಟುಕೊಂಡಿದ್ದರು. ಹೆಡ್‌ಮಾಸ್ಟರು ಊರಲ್ಲಿದ್ದರೆ ಹೇಗೋ ಹಾಗೆಯೇ ಅಸಿಸ್ಟೆಂಟು ಮಾಸ್ಟರುಗಳು ಆಕೆಗೆ ಅಂಜಿ ನಡೆದುಕೊಂಡಿದ್ದರು !.

## ಹೊಸದುರ್ಗದ ಸ್ಕೂಲು :

ಅಲ್ಲಿ ಗರ್ಲ್‌ಸ್ಕೂಲು ಹೆಡ್‌ಮಾಸ್ಟರೊಬ್ಬರಿದ್ದರು. ಅವರು ಗಡ್ಡಬಿಟ್ಟು ಸಾಧುವೇಷದಲ್ಲಿರುತ್ತಿದ್ದರು, ಯಾರೋ ಸಿದ್ಧರು ಕೊಟ್ಟ ಸಿದ್ಧ ಘಂಟಿಕೆಯನ್ನು ನುಂಗಿದ್ದರಿಂದ ತನಗೆ ಹಸಿವೇ ಆಗುವದಿಲ್ಲವೆಂದು ಹೇಳಿಕೊಂಡಿದ್ದರು. ಅವರ ನಡತೆ ಚೆನ್ನಾಗಿಲ್ಲವೆಂದು ಜನರು ದೂರಿಕೊಳ್ಳುತ್ತಿದ್ದರು. ನಾನು ಅವರನ್ನು ಪರಿಚಯ ಮಾಡಿಕೊಂಡು ಅತಿ ಸ್ನೇಹವನ್ನು ಮಾಡಿಕೊಳ್ಳದೆ ಇದ್ದದ್ದರಿಂದ ಅವರು ನನಗೆ ಎಲ್ಲಾ ವಿಷಯದಲ್ಲಿಯೂ ಸಹಾಯಕರಾಗಿದ್ದರು. ಅವರಿಂದ ಸ್ಕೂಲಿನ ಕೆಲಸವು ಸುಲಲಿತವಾಯಿತು.

ಈ ಹೊತ್ತಿಗೆ ಕಡೂರಿನಿಂದ ಚಿದಂಬರಯ್ಯನವರು ನಾನು ಹೆಡ್‌ಮಾಸ್ಟ-ರಾದದ್ದಕ್ಕೆ ಅಭಿನಂದನೆಯನ್ನು ಸೂಚಿಸಿ, ಒಂದು ಪತ್ರವನ್ನು ಬರೆದು ಸ್ಕೂಲಿನ ಕೆಲಸವನ್ನು ಹೇಗೆ ಮಾಡಿಕೊಳ್ಳಬೇಕೆಂಬ ಬಗ್ಗೆ ಬುದ್ಧಿವಾದವನ್ನು ಸೂಚಿಸಿದ್ದರು. ಡಿಸ್ಟ್ರಿಕ್ಟ್ ಇನಸ್ಪೆಕ್ಟರವರು ಸ್ವತಃ ನನ್ನಲ್ಲಿ ಅಭಿಮಾನವುಳ್ಳವರಾದ್ದರಿಂದ ನನಗೆ ಎಲ್ಲ ವಿಷಯದಲ್ಲಿ ಪ್ರೋತ್ಸಾಹಕರಾಗಿದ್ದರು, ಸ್ಕೂಲಿನಲ್ಲಿ ತಂಟೆ ಮಾಡುತ್ತಿದ್ದ ಒಬ್ಬ ಮೇಷ್ಟರನ್ನು ವರ್ಗಾಯಿಸಿ ಸಾಧು ವರ್ತನೆಯ ಹೊಸಬರೊಬ್ಬರನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಸ್ಕೂಲು ಜವಾನನು ಬಹಳ ಬುದ್ಧಿಶಾಲಿ, ಹೆಡ್‌ಮಾಸ್ಟರು ಮಾಡಬೇಕಾದ ಎಲ್ಲಾ ಕೆಲಸಗಳನ್ನು ಆಗಿಂದಾಗ್ಗೆ ಮನವರಿಕೆಮಾಡಿಕೊಟ್ಟು ಮಾಹೆವಾರಿ ಲೆಕ್ಕ ಪತ್ರಗಳನ್ನು ಬರೆಯುವದಕ್ಕೆ ಬೇಕಾದ ಫಾರಂಗಳನ್ನು

ತಂದಿಡುವದು, ಲಕ್ಕೋಟೆಗಳನ್ನು ನೋಡಿ ಜೋಡಿಸಿಡುವದು, ರಿಜಿಸ್ಟರುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವದು, ಸಂಬಳವನ್ನು ಮಾಸ್ತರುಗಳಿಗೆ ಬಟವಾಡೆ ಮಾಡಿ ರುಜು ಪಡೆಯುವದು - ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದದ್ದರಿಂದ ನನಗೆ ಹೊಸಕೆಲಸದ ಹೊಣೆಗಾರಿಕೆಯು ಅಷ್ಟಾಗಿ ಭಾರವೆನಿಸಲೇ ಇಲ್ಲ.

## ಹೊಸದುರ್ಗದಲ್ಲಿ ಜೀವನಕ್ರಮ:

ಜವಾನನಿಗೆ ವೀರನೆಂಬ ಅನ್ವರ್ಥನಾಮವಿತ್ತು. ಅಂಗಡಿಯಿಂದ ಸಾಮಾನು ತಂದು ಕೊಡುವದು, ಎಲೆ ಹಚ್ಚುವದು, ಕಸಗುಡಿಸುವದು, ಮಗುವನ್ನು ನೋಡಿಕೊಳ್ಳುವದು - ಮುಂತಾದ ಕೆಲಸವನ್ನೆಲ್ಲ ಮಾಡಿಕೊಡುತ್ತಿದ್ದನು. ತಿಂಗಳಿಗೆ ಆರಾಣೆಕೊಟ್ಟರೆ ಬಟ್ಟೆಗಳನ್ನು ಮಡಿ ಮಾಡಿಕೊಡುತ್ತಿದ್ದನು. ಆದ್ದರಿಂದ ಉತ್ತಮವಾದ ಮಲ್ಲು ಬಟ್ಟೆಗಳನ್ನೇ ಉಪಯೋಗಿಸುತ್ತಾ ಅಂಗಿ ರುಮಾಲು ಎಲ್ಲ ಬಿಳಿಯ ಬಟ್ಟೆಗಳನ್ನೇ ಮಾಡಿಕೊಂಡು ಬಿಟ್ಟೆನು. ಸ್ಕೂಲು ಬಟ್ಟೆ ಬೇರೆ, ಮನೆಯ ಮಡಿ ಬಟ್ಟೆ ಬೇರೆ, ಹೀಗೆ ಮಾಡಿಕೊಂಡು ಎರಡೂ ಹೊತ್ತು ಸ್ನಾನ, ಅಭಿಷೇಕ, ಪೂಜೆ, ಶಿವಸ್ತೋತ್ರ ಪಠನ, ಶಿವಸಹಸ್ರನಾಮ ಪೂಜೆ - ಇವುಗಳನ್ನು ಅನುಷ್ಠಾನಕ್ಕೆ ತಂದೆನು. ಆಗ ಮಧ್ಯಾಹ್ನದ ಅಡಿಗೆಯನ್ನು ರಾತ್ರೆಗೆ ಉಪಯೋಗಿಸುತ್ತಿರಲಿಲ್ಲ. ನಾವು ಬಾಡಿಗೆಯಿದ್ದ ಮನೆಯ ಯಜಮಾನರು ಯಾವಾಗಲೋ ಮಹಾಯಾತ್ರೆಗೆ ಹೋದವರು ಹಿಂತಿರುಗಿ ಬಂದಿರಲಿಲ್ಲ ; ಅವರ ಮನೆಯ ಹೆಂಗಸರು, ನಾವು ಶೂದ್ರರಿಂದ ಹಾಸಿಗೆ ಹಾಸಿಕೊಳ್ಳುವದು, ಮುಂತಾದ ಕೆಲವು ಅನಾಚಾರಗಳಿಗೆ ಇಂಬುಗೊಡುತ್ತಿದ್ದದ್ದು ಕಂಡು ಆಕ್ಷೇಪಿಸಿದ್ದರಿಂದ ನನಗೆ ಆ ವಿಷಯಕ್ಕೆ ಎಚ್ಚರಿಕೆಕೊಟ್ಟಂತೆ ಆಯಿತು. ಪ್ರತಿದಿನವೂ ಪಕ್ಕದ ಮನೆಯವರಲ್ಲಿ ತೈತ್ತಿರೀಯೋಪನಿಷತ್ತನ್ನು ಸ್ವರಸಹಿತ ಹೇಳಿಸಿಕೊಂಡು ಬಂದವನೇ ಮಧ್ಯಾಹ್ನದ ಊಟಮಾಡುತ್ತಿದ್ದೆನು. ಯಳ್ಳಂಬಳಸೆ-ಯಿಂದ ತಾಯಿಯವರು ಬಂದು ಇದೆಲ್ಲವನ್ನು ನೋಡಿ ಸಂತೋಷಪಟ್ಟರು.

ಹುಡುಗರಿಗೆ ಸ್ಕೂಲಿನಲ್ಲಿ ಉತ್ಸಾಹದಿಂದ ಪಾಠವನ್ನು ಹೇಳುವದಲ್ಲದೆ ಮನೆಗೂ ಕರೆಯಿಸಿಕೊಂಡು ಹೇಳುತ್ತಿದ್ದೆನು ; ಅದಕ್ಕಾಗಿ ಯಾವ ಫೀಜನ್ನು ವಸೂಲಿ ಮಾಡುತ್ತಿರಲಿಲ್ಲ. ಕನ್ನಡಪಾಠವನ್ನು ನಾನೇ ಆಗಾಗ್ಗೆ ಹೇಳಿಕೊಡುತ್ತಿದ್ದೆನು. ಹೊಸದಾಗಿ ಬಂದ ಸ್ಕೂಲು ಮೇಷ್ಟರು ಅಷ್ಟು ತಿಳಿದವರಲ್ಲವಾದರೂ ನನ್ನಲ್ಲಿ ಬಹಳ ವಿಶ್ವಾಸದಿಂದ ಇರುತ್ತಿದ್ದರು. ಅವರೂ ನಾನೂ ಸಾಯಂಕಾಲ ಸಂಚಾರ ಹೋಗುವಾಗ್ಗೆ ಕನ್ನಡ ರಾಮಾಶ್ವಮೇಧವನ್ನು ಜೊತೆಯಲ್ಲಿ ಓದುತ್ತಿದ್ದೆವು, ಜಯನೃಪಕಾವ್ಯವನ್ನು ಅವರಿಗೆ ಆಗಾಗ್ಗೆ ಹೇಳಿಕೊಡುತ್ತಿದ್ದೆನು. ಪರಿವರ್ಧಿನಿ ಷಟ್ಪದಿಯಲ್ಲಿ ಈಗ ಸ್ವಲ್ಪ

ಅಭಿರುಚಿಯುಂಟಾಗಿ ವಿವೇಕಚೂಡಾಮಣಿಯ ಮೂವತ್ತರಷ್ಟು ಪದ್ಯಗಳನ್ನು ಆ ಷಟ್ಪದಿಯಲ್ಲಿ ಈಗ ಅನುವಾದಮಾಡಿದೆನು. ಸ್ಕೂಲಿನಲ್ಲಿ ಆಗಾಗ್ಗೆ ಉಪನ್ಯಾಸವನ್ನು ಮಾಡುವದು, ಹೊಸಬರು ಬಂದರೆ ಉಪನ್ಯಾಸ ಮಾಡಿಸುವದು - ಹೀಗೆ ವಿನೋದದಿಂದ ಕಾಲವನ್ನು ಕಳೆದೆನು. ಪರೀಕ್ಷೆಗೆ ಬಂದ ಇನ್‌ಸ್ಪೆಕ್ಟರು ನನ್ನ ಕೆಲಸವನ್ನು ನೋಡಿ ಬಹಳ ಸಂತೋಷಪಟ್ಟರು.

ಹೀಗೆ ಸುಮಾರು ಏಳು ತಿಂಗಳುಗಳು ಕಳೆದವು, ಅಷ್ಟರಲ್ಲಿ ಕಾಲಕರ್ಮ ಸಂಯೋಗದಿಂದ ನಮ್ಮ ಮಗು ತೀರಿಕೊಂಡಿತು. ನಾನು ಪುತ್ರ ವಿಯೋಗದ ದುಃಖವನ್ನು ಅನುಭವಿಸುವದಕ್ಕೆ ಇದೇ ಮೊದಲು, ಆ ಮಗು ಉಸಿರನ್ನು ದೀರ್ಘವಾಗಿ ಎಳೆದೆಳೆದು ಬಿಡುತ್ತಿತ್ತು. ರಾತ್ರೆಯೆಲ್ಲ ಗಂಡ ಹೆಂಡಿರಿಬ್ಬರೂ ಜಾಗರಣೆಮಾಡಿ ಆ ಮಗುವಿನ ಸಂಕಟವನ್ನು ಕಣ್ಣಾರೆ ನೋಡಿಕೊಂಡಿದ್ದೆವು. ರಾತ್ರೆ ಸುಮಾರು ಎರಡು ಘಂಟೆಯ ಹೊತ್ತಿಗೆ ಅದು ಪ್ರಾಣಬಿಟ್ಟಿತು. ನಾನು ಬೆಳಗಿನ ನಾಲ್ಕು ಘಂಟೆಯ ಹೊತ್ತಿಗೆ ಎಲ್ಲಿಗೆ ಹೋಗುತ್ತಿದ್ದೇನೆಂಬ ಅರಿವಿಲ್ಲದೆ ರಸ್ತೆಯಲ್ಲಿ ಓಡುತ್ತಿದ್ದೆನು ! ದಾರಿಯಲ್ಲಿ ಆವೂರ ಜೋಯಿಸರು ಅಡ್ಡಾದರು. ವಿಷಯವನ್ನು ತಿಳಿದುಕೊಂಡು ಸಹಾನುಭೂತಿಯಿಂದ 'ಪಾಪ! ಪುತ್ರಶೋಕವು ಯಾರಿಗೂ ಅಸಹನೀಯವೇ ಸರಿ ; ಆದರೆ ಇಲ್ಲಿ ನೋಡಿ ನಾನು ವೃದ್ಧ, ಎಳೆಯದ್ದಾದ ಮಗನನ್ನು ಕಳೆದುಕೊಂಡೆನು. ಅದನ್ನು ತಡೆದುಕೊಂಡು ಬಾಳುತ್ತಿದ್ದೇನೆ ; ಇನ್ನೂ ಮಧ್ಯವಯಸ್ಸು ಕೂಡ ಆಗಿಲ್ಲದ ನೀವು ಹೀಗೆ ಎದೆಗೆಡುವದೆ, ಬನ್ನಿಬನ್ನಿ !' ಎಂದು ಕೈಹಿಡಿದು ಮನೆಗೆ ಕರೆದುಕೊಂಡು ಹೋಗಿ ಸಮಾಧಾನ ಹೇಳಿ ನಮ್ಮಿಬ್ಬರ ಯೋಗಕ್ಷೇಮವನ್ನು ಕೆಲದಿನಗಳವರೆಗೆ ನೋಡಿಕೊಂಡರು. ಆ ಶೋಕವನ್ನು ತಡೆಯಲಾರದೆ ನಾನು ಊರನ್ನು ಬಿಡುವ ಪ್ರಯತ್ನವನ್ನು ಮಾಡುವುದರಲ್ಲಿದ್ದೆನು. ಅಷ್ಟರಲ್ಲಿ ನನಗೆ ಇಪ್ಪತ್ತು ರೂಪಾಯಿ ಖಾಯಂ ತಲುಬಿನ ಮೇಲೆ ಹೊಳಲುಕೆರೆ ಎ.ವಿ.ಸ್ಕೂಲಿಗೆ ಹೆಡ್‌ಮಾಸ್ಟರಾಗಿ ಮೊಕರರು (ಗೊತ್ತುಮಾಡಿದ) ಆದ ಆರ್ಡರು ಬಂತು.

---

# 20. ಹೊಳಲ್ಕೆರೆ ಎರಡನೆಯ ಸಲಕ್ಕೆ (1906-1909)

ಹೊಸದುರ್ಗದ ಅಂಗಡಿಯಲ್ಲಿ ಬಹಳ ಸಾಲವಾಗಿತ್ತು. ಅಂಗಡಿಯಲ್ಲಿ ಸಾಲತರುವ ಪದ್ಧತಿಯು ಸರಕಾರಿಯ ನೌಕರರಿಗೆ ಇದ್ದೇ ಇರುತ್ತದೆಯಾದರೂ, ಅಲ್ಪವಾದ ಆದಾಯದಿಂದ, ಸ್ಕೂಲುಮಾಸ್ತರು ಎಂದಿಗೂ ಸಾಲಮಾಡಬಾರದು ಎಂಬ ತಿಳುವಳಿಕೆ ನನಗೆ ಇಲ್ಲದೆ ಹೋಯಿತು. ಅಂಗಡಿಯವನಿಗೆ ಸಮಾಧಾನ ಹೇಳಿ, ವೀರನು ಹೊಳಲುಕೆರೆಯವರೆಗೂ ಬಂದು ಮನೆಯಲ್ಲಿ ನಮ್ಮನ್ನು ಇಳಿಸಿದನು. ಅವನು ಹೊಸದುರ್ಗದಲ್ಲಿ ಮಾಡಿದ್ದ ಉಪಕಾರವನ್ನು ಮರೆಯುವದು ನನ್ನಿಂದ ಆಗಲಿಲ್ಲ. ನಾನು ಹಾಕಿಕೊಂಡಿದ್ದ ಸರ್ಜಿಕೋಟನ್ನು ಅವನಿಗೆ ಇನಾಮಾಗಿ ಕೊಟ್ಟುಬಿಟ್ಟೆನು. ಹೊಳಲ್ಕೆರೆಯಲ್ಲಿ ನಾನು ಹಿಂದೆ ಬಂದಿದ್ದಾಗ ಯಾರ ಸ್ಥಾನಕ್ಕೆ ಆಕ್ಟಿಂಗ್ ಮಾಸ್ಟರಾಗಿ ಬಂದಿದ್ದೆನೋ ಆ ರಾಯರೂ ಅಸಿಸ್ಟೆಂಟ್ ಮಾಸ್ಟರಾಗಿ ಇದ್ದರು, ಇನ್ನು ಕೆಲವರು ಅಸಿಸ್ಟೆಂಟು ಮಾಸ್ಟರುಗಳೂ ಇದ್ದರು. ಅವರಲ್ಲೆಲ್ಲ ಸ್ನೇಹದಿಂದಲೇ ಇದ್ದದ್ದರಿಂದ ಎಲ್ಲರಿಗೂ ನಾನು ಬಂದದ್ದು ಸಂತೋಷವೇ ಆಯಿತು.

## ಜೀವಣದೀಕ್ಷಿತರು:

ನಾನು ಆಗಾಗ್ಗೆ ಸತ್ಯನಾರಾಯಣವ್ರತವನ್ನು ಮಾಡುವದು ಪದ್ಧತಿ. ಈ ಸಲ ಆ ವ್ರತವನ್ನು ಮಾಡಿದಾಗ ಜೀವಣದೀಕ್ಷಿತರೆಂಬ ವೈದಿಕರೊಬ್ಬರನ್ನು ವ್ರತವನ್ನು ಮಾಡಿಸುವದಕ್ಕೆ ಕರೆದೆನು. ಅವರು ಬಹಳ ಕರ್ಮನಿಷ್ಠರು, ಭಕ್ತಿವಂತರು 'ದೇವರನ್ನು ಚೆನ್ನಾಗಿ ಒರೆಸಬೇಕು, ಇಲ್ಲದಿದ್ದರೆ ಚಳಿಯಾದೀತು ; ನೈವೇದ್ಯದ ಹಾಲು ಬಿಸಿಯಾಗಿರಬಾರದು' ಎಂದು ತಿಳಿವಳಿಕೆ ಹೇಳುತ್ತಿದ್ದರು. ಅವರ ಮಾತಿನಲ್ಲಿ ನನಗೆ ಬಹಳ ಶ್ರದ್ಧೆಯುಂಟಾಯಿತು. ನನಗೆ ಸಂಸ್ಕೃತವು ಬರುತ್ತದೆ ಎಂಬ ಕಾರಣದಿಂದಲೂ ವೇದಾಂತದಲ್ಲಿ ಅಭಿರುಚಿಯಿದೆ ಎಂಬ ಕಾರಣದಿಂದಲೂ ಅವರು ನಮ್ಮ ಮನೆಗೆ ಆಗಾಗ್ಗೆ ಬರುವದಕ್ಕೆ ಆರಂಭಿಸಿದರು. ಅವರ ಜೊತೆಯಲ್ಲಿ ರಂಗಣ್ಣನೆಂಬವರೂ ಬರುತ್ತಿದ್ದರು, ಅವರು ಆಗಾಗ್ಗೆ ನನ್ನಿಂದ ಗೀತಾಭಾಷ್ಯವನ್ನು ಓದಿಸಿ ಸಂತೋಷಪಡುತ್ತಿದ್ದರು. ಜೀವಣ ದೀಕ್ಷಿತರು ನನಗೆ ಆಗಾಗ್ಗೆ ಮಡಿ, ಮೈಲಿಗೆ ಸದಾಚಾರ - ಮುಂತಾದವುಗಳ ತಿಳುವಳಿಕೆಯನ್ನು ಕೊಟ್ಟು ನಡತೆಯನ್ನು ತಿದ್ದುತ್ತಿದ್ದರು, ವಯೋವೃದ್ಧರೂ ಶಿಷ್ಟರೂ ಆಗಿದ್ದದ್ದರಿಂದ ಅವರನ್ನು ಸ್ವಲ್ಪ ಹೆಚ್ಚು ಕಡಿಮೆ ತಂದೆಯವರ ಸ್ಥಾನದಲ್ಲಿಯೇ ಇಟ್ಟು ಗೌರವಿಸುತ್ತಿದ್ದೆನು. ತೈತ್ತಿರೀಯ-ನಾರಾಯಣಪನ್ನವನ್ನು ಸ್ವರಸಹಿತವಾಗಿ ನನಗೆ ಹೇಳಿಕೊಟ್ಟವರೂ ಅವರೇ. ಧರ್ಮಸಿಂಧುವನ್ನು ಓದುವದು, ಅದಕ್ಕನುಗುಣವಾಗಿ ಏಕಾದಶ್ಯಾದಿಗಳನ್ನು

ಆಚರಿಸುವದು, ಇವು ದೀಕ್ಷಿತರಿಂದಲೇ ನನ್ನ ಮನಸ್ಸಿಗೆ ಬಂದದ್ದು. ಭಾಗವತ ಸಂಪ್ರದಾಯವೆಂದರೇನೆಂಬುದು ನನಗೆ ಅವರಿಂದ ಗೊತ್ತಾಯಿತು. ಅವರಿಂದ ಕ್ರಮಬದ್ಧವಾಗಿ ಉಪದೇಶವನ್ನು ತೆಗೆದುಕೊಂಡು ವಿಷ್ಣುಸಹಸ್ರನಾಮದ ಜೊತೆಗೆ, ಗೀತಾಪಾರಾಯಣವನ್ನು ಮಾಡುವದಕ್ಕೆ ಪ್ರಾರಂಭಿಸಿದೆನು. ಇದಲ್ಲದೆ ಆಗ್ಗೆ ಬಲವಾಗುತ್ತಿದ್ದ ದೇಶೀಯ ಚಳುವಳಿಯಲ್ಲಿ ದೀಕ್ಷಿತರು ಬಹಳ ಆಸಕ್ತಿಯುಳ್ಳವರು. ಧಾರವಾಡದ ವಿದ್ಯಾರ್ಥಿಗಳು 'ಸೀಮೆ ಎಣ್ಣೆಯ ದೀಪಗಳನ್ನು ಬಿಟ್ಟಿದ್ದಾರೆ, ಅವರೆಲ್ಲ ಹರಳೆಣ್ಣೆ ಸಮಯ(ಕಂಬ)ದ ದೀಪವನ್ನೇ ಉಪಯೋಗಿಸುತ್ತಿದ್ದಾರೆ, ಪರದೇಶಿಸಕ್ಕರೆಯನ್ನು ಯಾರೂ ತಿನ್ನುವದಿಲ್ಲ, ವಿದೇಶೀಯ ಕರ್ಪೂರ ದೇವರಿಗೆ ಹೊತ್ತಿಸುವದಿಲ್ಲ' ಎಂದು ಮುಂತಾಗಿ ಸುದ್ದಿಯನ್ನು ಜನರಿಗೆ ಕೊಡುವದಲ್ಲದೆ ತಾವೂ ಆ ಸ್ವದೇಶೀಯ ವ್ರತಗಳನ್ನು ಆಚರಿಸುತ್ತಿದ್ದದ್ದೂ ನನಗೆ ಅವರನ್ನು ಅನುಕರಣೆ ಮಾಡುವ ಬಲವನ್ನು ಕೊಟ್ಟಿತು. ನನಗೆ ವೇದಾಂತದಲ್ಲಿರುವ ಆಸಕ್ತಿಯನ್ನು ಕಂಡು ಅವರು ತಮ್ಮಲ್ಲಿದ್ದ ಕೈಬರಹದ ಪಂಚದಶಿಯ ಕೆಲವು ಹಾಳೆಗಳನ್ನು ನನಗೆ ಕೊಟ್ಟರು, ಅದನ್ನು ಓದುವ ಆಸಕ್ತಿಯೂ ಹೆಚ್ಚಾಗಿದದ್ದಲ್ಲದೆ ದೀಕ್ಷಿತರಿಂದ ನನಗೆ ಹೆಚ್ಚಿನ ಲಾಭವಾಗುವ ಸಂಭವವಿದೆ ಎಂಬ ಮನೋಭಾವವು ಬೆಳೆದುಕೊಂಡಿತು.

## ಚಿದಂಬರಯ್ಯನವರೊಡನೆ ವಿಚಾರವಿನಿಮಯ :

ಈಗ ಚಿದಂಬರಯ್ಯನವರ ಮತ್ತು ನನ್ನ ಸಂಬಂಧವು ಹೆಚ್ಚು ಹೆಚ್ಚು ನಿಕಟವಾಗುವದಕ್ಕೆ ಆರಂಭವಾಯಿತು. ನಾನು ಕಡೂರಿಗೆ ಹೋಗುವದು, ಬರುವದು, ಅವರೂ ಹೊಳಲುಕೆರೆಗೆ ಬಂದು ಹೋಗುವದು - ಹೀಗೆ ನಡೆಯಿತು. ಇಬ್ಬರೂ ನಿರ್ಣಯಸಾಗರದ ಮುದ್ರಣಾಲಯದ ವೇದಾಂತಪಂಚದಶಿಯನ್ನು ತರಿಸಿಕೊಂಡು ವ್ಯಾಖ್ಯಾನಸಮೇತವಾಗಿ ಓದಿದೆವು. ಕಡೂರು ಸ್ಕೂಲು ಮತ್ತು ಹೊಳಲುಕೆರೆ ಸ್ಕೂಲು ಇವೆರಡೂ ಬೇರೆ ಬೇರೆಯ ಸರ್ಕಲುಗಳಿಗೆ ಸೇರಿದ್ದರೂ, ನಾವು ನಿಯತಕಾಲಿಕ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಹಂಚಿಕೊಂಡು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಪಾಠಗಳ ವೇಳಾಪತ್ರಿಕೆ, ಅಭಿವೃದ್ಧಿ - ಮುಂತಾದವುಗಳ ವಿಷಯಕ್ಕೆ ಚಿದಂಬರಯ್ಯನವರಿಂದ ಎಷ್ಟೋ ಸಲಹೆಗಳನ್ನು ನಾನು ಆಗಿಂದಾಗ್ಗೆ ಪಡೆಯುತ್ತಿದ್ದೆನು. ಹೀಗೆ ವೇದಾಂತದಲ್ಲಿಯೂ ಸ್ಕೂಲು ಕೆಲಸದಲ್ಲಿಯೂ ನಾವು ಪರಸ್ಪರವಾಗಿ ಸಹಕರಿಸಲು ಆರಂಭಿಸಿದೆವು.

ಚಿದಂಬರಯ್ಯನವರಿಗೆ ವೇದಾಂತದ ಗೀಳು ಬಲವಾಗಲು ಇನ್ನೊಂದು ಕಾರಣವಾಯಿತು. ನಾನು ಹೊಳಲುಕೆರೆಗೆ ಬಂದ ಮೂರುನಾಲ್ಕು ತಿಂಗಳೊಳಗೆ

ಅವರಿಗೆ ಪತ್ನೀವಿಯೋಗವಾಯಿತು. ಮುಂದಕ್ಕೆ ಅವರಿಗೂ ನನಗೂ ಬೇಗಬೇಗನೆ ಸಮಾಗಮವೂ ಆಗ ಹತ್ತಿತ್ತು. ನಾವು ಪಂಚದಶಿಯನ್ನು ಓದಿದ್ದಲ್ಲದೆ ಶಂಕರಾನಂದರ ಗೀತಾತಾತ್ಪರ್ಯಬೋಧಿನಿಯನ್ನು ನಿರ್ಣಯಸಾಗರದಿಂದ ತರಿಸಿಕೊಂಡೆವು ; ಆ ಗ್ರಂಥದ ಪರಿಚಯವೂ ನನಗೆ ಜೀವಣದೀಕ್ಷಿತರಿಂದಲೇ ಆಗಿತ್ತು. ಹೊಳಲುಕೆರೆಗೆ ಒಮ್ಮೆ ಜೀವಣದೀಕ್ಷಿತರು, ಆಶ್ರಯದಾತರಾದ ನಾನಾರಾಯರು ಬಂದು ಅಲ್ಲಿಂದ ಪ್ರಸಿದ್ಧವಾದ ಬೃಹತ್ ಗಣಪತಿಗೆ ಕರುಗಡುಬಿನ ಹಾರವನ್ನು ಹಾಕಿಸಿ ಕೆಲವು ತೆಂಗಿನಕಾಯಿಗಳನ್ನು ಒಡೆಯಿಸಿ ನೈವೇದ್ಯ ಮಾಡಿಸಿದರು. ಆ ಸಮಯದಲ್ಲಿ ಜೀವಣದೀಕ್ಷಿತರು ತಮ್ಮಲ್ಲಿದ್ದ ಶಂಕರಾನಂದಗೀತೆಯಲ್ಲಿದ್ದ 'ಯಾ ನಿಶಾ ಸರ್ವಭೂತಾನಾಮ್' (2-69), 'ಯಾವಾನರ್ಥ ಉದಪಾನೇ' (2-46) ಎಂಬ ಶ್ಲೋಕಗಳ ವ್ಯಾಖ್ಯಾನವನ್ನು ಓದಿಸಿ ವಿವರಣೆ ಮಾಡಿಸಿದ್ದರು. ಅದರಿಂದ ಬಹಳ ಸಂತುಷ್ಟರಾದ ನಾನಾರಾಯರನ್ನು, ನನಗೆ ಬೆಂಗಳೂರಿಗೆ ವರ್ಗ ಮಾಡಿಸಿಕೊಡು-ವಂತೆ ಕೇಳಿಕೊಂಡೆ ; ಅವರು ಸಿ. ಕೃಷ್ಣರಾಯರಿಗೆ ಶಿಫಾರಸು ಮಾಡಿದ್ದು ಸಫಲವಾಗಲಿಲ್ಲ. ಎಫ್. ಎ. ಓದುವುದಕ್ಕೆಂದು ಬೆಂಗಳೂರಿಗೆ ಹೋಗಬೇಕೆಂದಿದ್ದ ನನ್ನ ಇಚ್ಛೆ ಇದರಿಂದ ಪೂರೈಸಲಿಲ್ಲವಾದರೂ ಶಂಕರಾನಂದೀಯ ವ್ಯಾಖ್ಯಾನದಲ್ಲಿ ಬಲವಾದ ನಿವೇಶವು ನನಗೆ ಉಂಟಾಯಿತು. ಶಂಕರಾನಂದ ಗೀತೆಯಲ್ಲಿ ಶೈಲಿ ಲಲಿತವಾಗಿರುವುದ ರಿಂದಲೂ ಮತ್ತೆಮತ್ತೆ ಅದೇ ವಿಷಯಗಳನ್ನು ಹಲವು ಶ್ರುತಿಸ್ಮೃತಿ-ಪ್ರಮಾಣಗಳನ್ನು ಕೊಟ್ಟಿರುವುದರಿಂದಲೂ ನನಗೆ ಅದು ಸುಲಭವಾಗಿ ಅರ್ಥವಾಗುವಂತೆ ಇತ್ತು. ಈ ಕಾರಣದಿಂದ ಅದನ್ನು ನಾವಿಬ್ಬರೂ ಬಹಳ ಆದರದಿಂದ ಓದುತ್ತಿದ್ದೆವು. ಅದರಲ್ಲಿ "ಸಂನ್ಯಸ್ಯ ಶ್ರವಣಂ ಕುರ್ಯಾತ್" (ಸಂನ್ಯಾಸ ಮಾಡಿ ಶ್ರವಣವನ್ನು ಮಾಡಬೇಕು.) ಎಂಬ ವಾಕ್ಯವನ್ನು ಮತ್ತೆಮತ್ತೆ ಉದಾಹರಿಸಿದ್ದರಿಂದ ಚಿದಂಬರಯ್ಯನವರಿಗೆ ಸಂನ್ಯಾಸವನ್ನು ಸ್ವೀಕರಿಸಬೇಕೆಂಬ ಕಡೆಗೇ ಒಲವು ಬಂದಿತ್ತು.

## ಹುಬ್ಬಳ್ಳಿಯ ಶಂಕರಜಯಂತಿ :

ಒಮ್ಮೆ ಹುಬ್ಬಳ್ಳಿಗೆ ಹೋಗಿ ಶಂಕರಜಯಂತಿಯ ಉತ್ಸವವನ್ನು ನೋಡಿಕೊಂಡು ಬಂದೆವು. ಹಳೆ ಹುಬ್ಬಳ್ಳಿಯಲ್ಲಿ ವಿರೂಪಾಕ್ಷಶಾಸ್ತ್ರಿಗಳ ಮನೆಯಲ್ಲಿ ಇಳಿದು ಕೊಂಡಿದ್ದೆವು. ಉತ್ತರ ಕರ್ಣಾಟಕದ ಭಾಗವನ್ನು ನಾನು ನೋಡಿದ್ದು ಅದೇ ಮೊದಲು. ನಾವು ಇಳಿದಿದ್ದ ಮನೆಯ ಮುಂದೆ ಖಾಲಿನಳ(ನಲ್ಲಿ)ಇತ್ತು. ನೀರಿಗೆ ಬಹಳ ಕಷ್ಟ. ಕುಡಿಯುವ ನೀರಿನಲ್ಲಿ ಸ್ನಾನ ಮಾಡಲಾರದೆ ಒದ್ದೆಯ ಬಟ್ಟೆಯಲ್ಲಿ ಮೈಒರೆಸಿಕೊಂಡೆವೆಂದು ನೆನಪಿದೆ. ಮುನಿಸಿಪಾಲಿಟಿಯವರು ಹುಬ್ಬಳ್ಳಿಯಲ್ಲಿದ್ದ

ಬಾವಿಗಳನ್ನು ಕಾರಣಾಂತರದಿಂದ ಮುಚ್ಚಿಸಿ ನಳಗಳನ್ನು ಇಡಿಸಿದ್ದರೂ ಅವುಗಳಲ್ಲಿ ನೀರು ಮಾತ್ರ ಅಷ್ಟಕಷ್ಟೆ ಇದ್ದವು. ಉತ್ತರ ಕರ್ಣಾಟಕದ ಕನ್ನಡ ಮಾತುಗಳು ನನಗೆ ಆಗತಾನೆ ಕಿವಿಗೆ ಬಿದ್ದವು. ನಾವು ಅಲ್ಲಿಗೆ ಹೋದ ದಿನ ಏಕಾದಶಿ. ನಿಮಗೆ ದಶಮಿ ಆಗಬಹುದೆ ? ಎಂದು ಅವರು ಕೇಳಿದ್ದಕ್ಕೆ ಇಲ್ಲ 'ಏಕಾದಶಿ' ಎಂದು ಚಿದಂಬರಯ್ಯ-ನವರು ಉತ್ತರಕೊಟ್ಟರು, ಮನೆಯವರು ನಕ್ಕರು. ವಿರೂಪಾಕ್ಷಶಾಸ್ತ್ರಿಗಳಿಂದ ನಮಗೆ ಆಧ್ಯಾತ್ಮಿಕ ದೃಷ್ಟಿಯಿಂದ ಬಹಳ ಸಹಾಯವಾಯಿತು. ಅವರ ಮನೆಯಲ್ಲಿ ಇಳಿದುಕೊಂಡಿದ್ದ ಸುಮಾರು ಹತ್ತು ವರ್ಷದ ಬ್ರಹ್ಮಚಾರಿಯೊಬ್ಬನು - ಅವನು ಉತ್ತರದೇಶದಿಂದ ಬಂದಿದ್ದನೆಂದು ನೆನಪು - ಪ್ರಾಣಾಯಾಮಾದಿಗಳನ್ನು ಮಾಡುವದು, ಧ್ಯಾನ ಮಾಡುವದು - ಮುಂತಾದ ಸಾಧನಗಳಲ್ಲಿ ವ್ಯಗ್ರನಾಗಿದ್ದದ್ದನ್ನು ಕಂಡು ನಾವು ಬೆರಗಾದೆವು, ನಮಗೆ ಇನ್ನೂ ವೈರಾಗ್ಯವು ಹುಟ್ಟಲಿಲ್ಲವಲ್ಲ ! ಎಂದು ನಾಚಿಕೆಯಾಯಿತು. ವಿರೂಪಾಕ್ಷಶಾಸ್ತ್ರಿಗಳು ನಮಗೆ ಒಂದು ದಿನ ಸಂಜೆ ಆರೂಢರ ದರ್ಶನವನ್ನು ಮಾಡಿಸಿದರು. ಆರೂಢರು ಆಗ ಒಂದು ನೀರಿನ ಕಟ್ಟೆಯನ್ನು ತೆಗೆಯಿಸುತ್ತಿದ್ದರು. 'ಈಗ ನೋಡುವದಕ್ಕೆ ಸ್ವಲ್ಪವೇ ಕಾಣಿಸುತ್ತದೆ ; ಆದರೆ ಅದೇನೂ ಅದರ ಪರಮಾರ್ಥಸ್ವರೂಪವಲ್ಲ !' ಎಂದರು. ಅವರ ಮಾತಿನಲ್ಲಿ ಯಾವುದೋ ಅಧ್ಯಾತ್ಮದ ರಹಸ್ಯವು ಅಡಗಿದೆ ಎಂದು ನನಗೆ ಅನ್ನಿಸಿತು. ಮಠದ ಒಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಅದ್ಭುತದೃಶ್ಯವು ಗೋಚರವಾಯಿತು. ಒಂದು ಗಾಜಿನ ಬೀರುವಿನಲ್ಲಿ ಆರೂಢರು ಧ್ಯಾನಾರೂಢರಾಗಿರುವಂತೆ ನಮಗೆ ಕಂಡಿತು, ಬಹಳ ಹೊತ್ತಾದ ಮೇಲೆ ಅದೊಂದು ಪ್ರತಿಮೆಯೆಂಬ ಅರಿವು ಆಯಿತು, ಶಿಲ್ಪಿಯ ಕೌಶಲಕ್ಕೆ ಬೆರಗಾದೆವು, ಆರೂಢರು ತಮ್ಮ ಸಮಾಧಿಗೆಂದು ಏರ್ಪಡಿಸಿದ್ದ ಸ್ಥಾನವನ್ನು ನೋಡಿದೆವು. ಆಶ್ರಮವೆಲ್ಲವೂ ಶಾಂತವಾಗಿತ್ತು, ಊರ ಜನರು ಬಂದು ಭಕ್ತಿಯಿಂದ ಆರೂಢರ ದರ್ಶನವನ್ನು ಮಾಡಿಕೊಂಡು ಹೋಗುತ್ತಿದ್ದರು. ಹುಬ್ಬಳ್ಳಿಯ ಶಂಕರ ಜಯಂತಿಯ ಉತ್ಸವದಲ್ಲಿ ಮೊದಲನೆಯ ಸಲಕ್ಕೆ ನಾನು ಸುಪ್ರಸಿದ್ಧ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳನ್ನು ಕಂಡೆನು. ಅವರ ಪ್ರವಚನವನ್ನು ಕೇಳುವ ಯೋಗವೂ ನನಗೆ ಆಗ ಲಭಿಸಿತ್ತು. ಮುಂದಕ್ಕೆ ಅದೇ ಶಾಸ್ತ್ರಿಗಳ ಆಶೀರ್ವಾದಕ್ಕೆ ಪಾತ್ರನಾಗುವೆನೆಂಬುದು ಮಾತ್ರ ಆಗ್ಗೆ ನನಗೆ ಮನಸ್ಸಿನಲ್ಲಿ ಮಿಂಚಲಿಲ್ಲ.

## ಉಪಾಧ್ಯಾಯರ ಸಂಘ :

ಚಿದಂಬರಯ್ಯನವರು ವೇದಾಂತದ ಅಭ್ಯಾಸವನ್ನು ಬಲವಾಗಿ ನಡೆಯಿಸಿದ್ದರೂ, ಸ್ಕೂಲು ಕೆಲಸವನನ್ನೇನೂ ಅನಾದರದಿಂದ ಕಾಣುತ್ತಿರಲಿಲ್ಲ. ತಮ್ಮಲ್ಲಿ ಒಂದು ಉಪಾಧ್ಯಾಯರ ಸಂಘವನ್ನು ಏರ್ಪಡಿಸಿ ಪಾಠವನ್ನು ಹೇಳುವ

ಕ್ರಮವನ್ನು ಪ್ರದರ್ಶನ ಮಾಡುವದು, ಉಪನ್ಯಾಸಗಳನ್ನು ನಡೆಯಿಸುವದು - ಮುಂತಾದ ಚಟುವಟಿಕೆಗಳಲ್ಲಿ ಪ್ರಧಾನಭಾಗವನ್ನು ವಹಿಸಿದ್ದರು. ಅವರು ಬೋಧನ ಪದ್ಧತಿಯನ್ನು ಕುರಿತು ಆಗಾಗ್ಗೆ ಮಾಡಿದ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿಯೂ ಪ್ರಕಟಿಸಿದ್ದರು. ಉಪಾಧ್ಯಾಯರ ಯೋಗ್ಯತೆಗಳು, ಮನಶಿಕ್ಷಣ, ಬೋಧನಕ್ರಮ, ಬೋಧನೆಯ ಸ್ವಭಾವ-ಮುಂತಾದ ಕೆಲವು ಗ್ರಂಥಗಳನ್ನು ಸ್ಕೂಲು ಲೈಬ್ರರಿಗಳಿಗೂ ವಿದ್ಯಾಭ್ಯಾಸದ ಇಲಾಖೆಯವರು ಶಿಫಾರಸು ಮಾಡಿದರೆಂದು ಕಾಣುತ್ತದೆ. ಅವರಿಗೆ ಗ್ರಂಥಗಳನ್ನು ಬರೆಯುವ ಆಶೆಯೂ ಯೋಗ್ಯತೆಯೂ ಹುಟ್ಟುಗುಣವೆಂದು ತೋರುತ್ತದೆ. ಬಾಲ್ಯದಲ್ಲಿ ಅವರಿಗೆ ವಿದ್ಯಾಭ್ಯಾಸವೇನೂ ಸರಿಯಾಗಿ ಆಗಿರಲಿಲ್ಲವಾದರೂ, ಕ್ರಿಸ್ತಿಯನ್ ಕಾಲೇಜಿನ ಗ್ರಾಜ್ಯುಯೇಟ್ ಆಗಿದ್ದ ಲಕ್ಷ್ಮೀನರಸಿಂಹಯ್ಯನವರ ಸಹವಾಸದಿಂದ ಹಳಗನ್ನಡಕಾವ್ಯಗಳನ್ನು ಕೆಲವನ್ನು ಓದಿದ್ದರಂತೆ ; ಮೊದಮೊದಲು ಹಳಗನ್ನಡದ ಪ್ರೌಢಶೈಲಿಯಲ್ಲಿ ಕವಿತೆಗಳನ್ನು ಮಾಡುತ್ತಿದ್ದರಂತೆ. ಆದರೆ ಅವರು ಈಚೆಗೆ ಬರೆದ ಗದ್ಯಪದ್ಯಗಳೆಲ್ಲವೂ ಸುಲಭಶೈಲಿಯಲ್ಲಿದ್ದು ಭಾವಗರ್ಭಿತವಾಗಿಯೂ ಓದುವವರಿಗೆ ವಿಚಾರಪ್ರಭಾವ ಪ್ರಚೋದಕವಾಗಿಯೂ ಇರುತ್ತದೆ. ನಾನು ಹೊಳಲುಕೆರೆಯನ್ನು ಬಿಡುವದರೊಳಗೆ ಅವರು ನೀತಿಸಾರ, ಕಾಲಾಂತರ, ಸ್ತ್ರೀಧರ್ಮಸಂಗ್ರಹ, ಮಾಧವರಾವ್ ಸಿಂಧೆ, ಗುಣನಿರೂಪಣೆ, ಕೃಷ್ಣಮಹೇಶ್ವರೀ ಎಂಬ ಗ್ರಂಥಗಳನ್ನು ಬರೆದಿದ್ದರು. 1908ರಲ್ಲಿಯೊ 1909ರಲ್ಲಿಯೋ ಕಡೂರಲ್ಲಿ ಒಂದು ವಿದ್ಯಾಭ್ಯಾಸದ ಪ್ರದರ್ಶನವನ್ನೇರ್ಪಡಿಸಿದರು. ಆ ವರ್ಷ ಕಡೂರಿನ ಡಿಸ್ಟ್ರಿಕ್ಟ್‌ನ ಹಳ್ಳಿಯ ಸ್ಕೂಲುಗಳಿಗೆ ಈ ಪ್ರದರ್ಶನ ನಿಮಿತ್ತವಾಗಿ ರಜ ಕೊಟ್ಟಿದ್ದರು. ಚಿದಂಬರಯ್ಯ-ನವರಲ್ಲಿ ಬಹಳ ಪ್ರೀತಿಯನ್ನಿಟ್ಟಿದ್ದ ವೆಂಕಟರಮಣಯ್ಯನವರೆಂಬವರು ಅಲ್ಲಿಗೆ ದಯಮಾಡಿಸಿದ್ದರು. ಪ್ರದರ್ಶನವು ಬಹಳ ಯಶಸ್ವಿಯಾಗಿ ನಡೆಯಿತು. ಕಾಲಿನಲ್ಲಿ ಪೆನ್ಸಿಲು ಸಿಕ್ಕಿಸಿಕೊಂಡು ವೇಗದಿಂದ ಬರೆಯುವ ಹುಡುಗನೊಬ್ಬನು ತನ್ನ ಚಾತುರಿಯನ್ನು ಅಲ್ಲಿ ಪ್ರದರ್ಶಿಸಿದನು, ಚಿದಂಬರಯ್ಯನವರು ನನ್ನನ್ನು ಆ ಪ್ರದರ್ಶನಕ್ಕೆ ಜಾಯಿಂಟು ಸೆಕ್ರಟರಿ (ಜಂಟಿ ಕಾರ್ಯದರ್ಶಿ)ಯಾಗಿ ಮಾಡಿಕೊಂಡಿದ್ದರು. ನಾನೂ ಆ ಸಂದರ್ಭದಲ್ಲಿ ಉಪಾಧ್ಯಾಯರ ಕರ್ತವ್ಯವೆಂಬ ವಿಷಯಕ್ಕೆ ಒಂದು ಸಣ್ಣ ಉಪನ್ಯಾಸವನ್ನು ಕೊಟ್ಟೆನು. ಅದೇ ವರ್ಷದಲ್ಲಿರಬಹುದು, ಮೈಸೂರಿನಲ್ಲಿ ಸರಕಾರದ ವಿದ್ಯಾಭ್ಯಾಸದ ಪ್ರದರ್ಶನವು ನಡೆಯಿತು, ಸಹಾಯೋಪಾಧ್ಯಾರುಗಳೊಡನೆ ನಾನೂ ಚಿದಂಬರಯ್ಯನವರೂ ಅಲ್ಲಿಗೂ ಹೋಗಿ ಬಂದೆವು.

## ವಿಠ್ಠಲಶಾಸ್ತ್ರಿಗಳು :

ಈ ಕಾಲದಲ್ಲಿ ನಮ್ಮೂರಿನ ಜೋಯಿಸ ಸುಬ್ಬಾಭಟ್ಟರು, ತಮ್ಮಮಗ ವಿಠ್ಠಲಶಾಸ್ತ್ರಿಯನ್ನು ನನ್ನಲ್ಲಿಗೆ ಬಿಟ್ಟರು, (ಅವನನ್ನು ಮನೆಯವರೂ, ನಾವೂ 'ಗುಂಡ' ಎಂದು ಕರೆಯುತ್ತಿದ್ದೆವು ; ಕಾಲಾಂತರದಲ್ಲಿ, ಕಾರಣಾಂತರದಿಂದ ಈ ಏಕವಚನ ಪ್ರಯೋಗವನ್ನು ಬಿಟ್ಟು, ನಮ್ಮ ಪದ್ಧತಿಯಂತೆ ಬಹುವಚನದಲ್ಲಿಯೇ ಸಂಬೋಧಿಸುತ್ತಾ ಬಂದೆನೆಂಬುದು ಮುಂದೆ ವಾಚಕರಿಗೆ ತಿಳಿಯುವದು). ಆ ಹುಡುಗನ ಜೊತೆಗೆ ನಮ್ಮ ದೊಡ್ಡಣ್ಣನವರ ಮಗ ದೇವರೂ ಇದ್ದನು. (ಮಂಜಯ್ಯನೆಂಬುದೇ ಅವನ ಹೆಸರಾದರೂ ಮನೆಯಲ್ಲಿ 'ದೇವರು' ಎಂದೇ ಕರೆಯುತ್ತಿದ್ದೆವು, ದೇವರು ಹೊಸದುರ್ಗಕ್ಕೆ ಬಂದು ಸೇರಿದ್ದನು) ಹೊಳಲುಕೆರೆಗೆ ಬಂದು ಕೆಲವು ತಿಂಗಳುಗಳಾದ ಬಳಿಕ ಅವನನ್ನು ಅವರ ತಾಯಿ ಕರೆದುಕೊಂಡು ಹೋದರು. ಅವನಿದ್ದಷ್ಟು ಕಾಲವೂ ಇಬ್ಬರು ಹುಡುಗರೂ ಇಸಪೀಟು ಆಟದಲ್ಲಿ ಮಗ್ನರಾಗಿರುತ್ತಿದ್ದರು. ಅದನ್ನು ತಪ್ಪಿಸಿದ ಬಳಿಕ ವಿಠ್ಠಲಶಾಸ್ತ್ರಿಯು ಚೆನ್ನಾಗಿ ಓದುವದಕ್ಕೆ ಪ್ರಾರಂಭಿಸಿದನು. ಅವನ ತಂದೆಯವರು ಮನೆಯಲ್ಲಿ ರಘುವಂಶ ಕುಮಾರಸಂಭವಾದಿ ಕಾವ್ಯಗಳನ್ನು ಹೇಳಿಕೊಟ್ಟಿದ್ದರಾದರೂ ದುಷ್ಟ ಸಹವಾಸದಿಂದ ಅವನು ಇಸಪೀಟಿನ ಹವ್ಯಾಸಕ್ಕೆ ಬಿದ್ದಿದ್ದರಿಂದ ಅದನ್ನು ತಪ್ಪಿಸುವದಕ್ಕೆಂದೇ ಅವನನ್ನು ನನ್ನಲ್ಲಿಗೆ ಕರೆದುಕೊಂಡು ಬಂದಿದ್ದರು. ಹುಡುಗನು ಸ್ವಭಾವದಿಂದಲೆ ಕುಶಲಮತಿಯಾಗಿದ್ದದ್ದರಿಂದ ಈ ಮೊದಲೇ ಅವನು ಕನ್ನಡ ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರಿಂದಲೂ ಅವನನ್ನು ಸಂಸ್ಕೃತ ಲೋಅರ್ ಸೆಕೆಂಡರಿ ಪರೀಕ್ಷೆಗೆ ಕಳುಹಿಸಿದೆನು. ಅವನು ಆ ಪರೀಕ್ಷೆಯಲ್ಲಿಯೂ, ಮುಂದಿನ ವರ್ಷ ಇಂಗ್ಲೀಷು ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲಿಯೂ, ತೇರ್ಗಡೆಯಾದನು.. ಮುಂದೆ ಅವನು ಮೈಸೂರು ಸಂಸ್ಕೃತಕಾಲೇಜನ್ನು ಸೇರಿ ಓದಿದನು. ಈತನ ವಿಷಯವನ್ನು ಮತ್ತೊಮ್ಮೆ ಮುಂದೆ ಪ್ರಸ್ತಾಪಿಸುವೆನು.

## ಸ್ಕೂಲು ಕೆಲಸದ ಉತ್ಸಾಹದ ಪರಿಣಾಮ :

ಈ ಕಾಲಕ್ಕೆ ನಾನು ಸ್ಕೂಲು ಕೆಲಸವನ್ನು ಎಲ್ಲಾ ಬಗೆಯಿಂದಲೂ ಉತ್ಸಾಹಪೂರ್ವಕವಾಗಿ ಮಾಡುತ್ತಾ ಒಳ್ಳೆಯ ಹೆಸರನ್ನು ಪಡೆಯಬೇಕೆಂದು ಪ್ರಯತ್ನಿಸುತ್ತಿದ್ದೆನು. ಟೈಂಟೇಬಲಿನಲ್ಲಿ ಹೆಚ್ಚಿನ ಪಾಠಗಳನ್ನು ನಾನೇ ಹಾಕಿಕೊಂಡು ಪಾಠಮಾಡುತ್ತಿದ್ದೆನು. ಸ್ಕೂಲಿನ ತರಗತಿಗಳಲ್ಲಿ ಆಗ್ಗೆ ಈಗಿನಷ್ಟು ಕಿಕ್ಕಿರಿದಿರಲಿಲ್ಲವಾದ್ದರಿಂದ ಬೇಕಾದಷ್ಟು ಅಭ್ಯಾಸಪಾಠಗಳನ್ನು ಹುಡುಗರಿಂದ

ಮನೆಯಲ್ಲಿ ಬರೆಯಿಸಿ ತಿದ್ದುವದಕ್ಕೆ ಅವಕಾಶವಿತ್ತು. ಸುಬ್ರಹ್ಮಣ್ಯಯ್ಯರವರು ಸ್ಕೂಲಿನಲ್ಲಿ ಅನುಸರಿಸುತ್ತಿದ್ದ ಕೆಲವು ಪದ್ಧತಿಗಳನ್ನು ಆಚರಣೆಗೆ ತಂದೆನು. ಇಂಗ್ಲೀಷು ಪಾಠಗಳಿಗೆ ಕೆಲವು ಸಪ್ಲಿಮೆಂಟರಿ ರೀಡರ್ ಅಧಿಕ ಪಠ್ಯಪುಸ್ತಕಗಳನ್ನು ಇಲಾಖೆಯವರ ಪ್ರೇರಣೆಯಂತೆ ನಾನೇ ಇಟ್ಟುಕೊಂಡು ಪಾಠಹೇಳಿದೆನು. ತರಗತಿಯ ಪರೀಕ್ಷೆಗಳ ಸಂಖ್ಯೆಗಳನ್ನು ಹೆಚ್ಚಿಸಿ ಹುಡುಗರಿಗೆ ಪಾಠಗಳಲ್ಲಿ ಹೆಚ್ಚಿನ ಆಸಕ್ತಿಯನ್ನುಂಟು-ಮಾಡುತ್ತಿದ್ದೆನು. ಅಸಿಸ್ಟೆಂಟು ಮಾಸ್ತರುಗಳು, ಸಕಾಲಕ್ಕೆ ಬರುವಂತೆ ಒತ್ತಾಯ ಪಡಿಸುತ್ತಿದ್ದೆನು. ರಾತ್ರೆಯ ಹೊತ್ತಿನಲ್ಲಿ ವಯಸ್ಕರಿಗಾಗಿ ಏರ್ಪಡಿಸಿದ್ದ ನೈಟುಸ್ಕೂಲುಗಳಿಗೆ ಹೋಗುತ್ತಿದ್ದ ಕೆಲವರು ಅಸಿಸ್ಟೆಂಟು ಮಾಸ್ತರುಗಳನ್ನು ಎಚ್ಚರಿಕೆಕೊಟ್ಟು ಅವರ ಕೆಲಸವನ್ನು ಕ್ರಮಪಡಿಸಿದೆನು. ಇದೆಲ್ಲ ಅಸಿಸ್ಟೆಂಟು ಮಾಸ್ತರುಗಳ ಅಸಮಾಧಾನಕ್ಕೆ ಕಾರಣವಾಯಿತು. ಒಬ್ಬ ಅಸಿಸ್ಟೆಂಟು ಮಾಸ್ತರನು ಗೋವಿಂದಪ್ಪ ಎಂದು ಅವನ ಹೆಸರಿರಬಹುದು - ಕಾಲಕಾಲಕ್ಕೆ ಸ್ಕೂಲಿಗೆಬಾರದೆ ತಂಟೆಮಾಡುತ್ತಿದ್ದನು, ಕ್ಯಾಜ್ಯುಯಲ್‌ರಜ ಒಂದೆರಡು ದಿನ ಹೋದವನು ಯಾವಾಗಲೂ ಹೆಚ್ಚಿಗೆ ರಜವನ್ನು ಉಪಯೋಗಿಸಿಕೊಳ್ಳುತ್ತಲೇ ಇದ್ದನು. ಆಗ್ಗೆ ಲೋಅರ್ ಸೆಕೆಂಡರಿ ಪರೀಕ್ಷೆಗೆ ಮಿಕ್ಕ ಕೆಲವು ತಾಲ್ಲೂಕು ಸ್ಥಳಗಳಿಗೆ ಹೊಳಲ್ಕೆರೆಯೂ ಒಂದು ಕೇಂದ್ರವಾಗಿತ್ತು ; ಪರೀಕ್ಷೆಯ ಕಾಲದಲ್ಲಿಯೂ ಆತನು ಅರ್ಧಘಂಟೆ ಮೀರಿಯೇ ಬಂದು ಹಾಜರಿ ರಿಜಿಸ್ಟರಿನಲ್ಲಿ ತನ್ನ ರುಜು ಹಾಕಿಬಿಟ್ಟಿದ್ದನು. ನಾನು ಅವನು ಹೊತ್ತಾಗಿ ಬಂದಿದ್ದನೆಂದು ಕೆಂಪು ಮಶಿಯಲ್ಲಿ ಗುರುತು ಮಾಡಿದ್ದನ್ನು ಚಾಕುವಿನಿಂದ ಹೆರೆದುಬಿಟ್ಟಿದ್ದನು, ಇದನ್ನೆಲ್ಲ ಮೇಲಕ್ಕೆ ರಿಪೋರ್ಟುಮಾಡಲಾಗಿ ಆಗ ಸರ್ಕಲ್ ಇನ್‌ಸ್ಪೆಕ್ಟರಾಗಿದ್ದ ಸಿ. ಕೃಷ್ಣರಾಯರು ಆತನಿಗೆ ನಾಲ್ಕು ರೂಪಾಯಿ ಜುಲ್ಮಾನೆ ವಿಧಿಸಿದರು. ಆಗ ಮೇಷ್ಟರುಗಳಿಗೆ 8 ರೂಪಾಯಿ ಮಾತ್ರ ಸಂಬಳ. ಸ್ವಲ್ಪ ಕ್ಷಾಮ ಕಾಲವು ಆಗಿತ್ತು. ನನಗೆ ಹುಕುಂ ನೋಡಿ ಬಹಳ ಗಾಬರಿಯಾಯಿತು. ಅರ್ಧತಿಂಗಳು ಸಂಬಳವನ್ನೇ ಜುಲ್ಮಾನೆ ವಿಧಿಸುವದು ಅನ್ಯಾಯವೆಂದೂ ಈ ಸಲಕ್ಕೆ ಎಚ್ಚರಿಕೆ ಕೊಟ್ಟರೆ ಸಾಕೆಂದೂ ಶಿಫಾರಸು ಮಾಡಿದೆನು. ಆದರೆ ಇನ್‌ಸ್ಪೆಕ್ಟರು, ಉಪಾಧ್ಯಾಯರ ಹಾಜರಿ ರಿಜಿಸ್ಟರಿನಲ್ಲಿ ಹೆಡ್‌ಮಾಸ್ಟರು ಮಾಡಿದ್ದ ರಿಕಾರ್ಡನ್ನು ಚಾಕುವಿನಿಂದ ಹೆರೆದ ಮಹಾಪರಾಧಕ್ಕಾಗಿ ಈ ಜುಲ್ಮಾನೆಯನ್ನು ವಿಧಿಸಿದೆಯೆಂದೂ, ಅದನ್ನು ಯಾವ ಕಾರಣದಿಂದಲೂ ಕ್ಷಮಿಸುವುದು ಆಗಲಾರದೆಂದೂ ಅಪ್ಪಣೆ ಮಾಡಿದರು. ಯತ್ನವಿಲ್ಲದೆ ನಾನು ಆ ಹುಕುಮ್ಮನ್ನು ಅವನಿಗೆ ತಿಳಿಸಿದೆನು. ಈ ನಡುವೆ ಸ್ವಲ್ಪ ದುರಾಚಾರದಿಂದ ಮೈಯೆಲ್ಲ ಕಜ್ಜಿಯಾಗಿದ್ದ ಒಬ್ಬ ಮಾಸ್ಟರ್‌ನಿಗೆ ಕಡ್ಡಾಯವಾಗಿ ಹದಿನೈದು ದಿನಗಳ ರಜವನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದೂ ಬೇರೆಯಿತ್ತು. ಇವೆಲ್ಲ ಸೇರಿ ಹೊಗೆಯಾಡುತ್ತಿದ್ದ ಅಸಿಸ್ಟೆಂಟು ಮಾಸ್ಟರುಗಳ

ಅಸಮಾಧಾನವು ಭುಗಿಲೆಂದಿತು, ಅವರೆಲ್ಲರೂ ಒಟ್ಟುಗೂಡಿ ಆಲೋಚನಾ-ಪೂರ್ವಕವಾಗಿ ನನ್ನ ಮೇಲೆ ಒಂದು ಅರ್ಜಿಯನ್ನು ಬರೆದು ಇನ್‌ಸ್ಪೆಕ್ಟರಲ್ಲಿಗೆ ಕಳುಹಿಸಿಕೊಡಲೇಬೇಕೆಂದು ತಂದುಕೊಟ್ಟರು. ನಾನು ಅದಕ್ಕೆ ಅಂಜುವೆನೆಂದು ಅವರಲ್ಲನೇಕರ ನಂಬುಗೆಯಿತ್ತು ; ಆದರೆ ನಾನು ಕೂಡಲೆ ಅದನ್ನು ಇನ್‌ಸ್ಪೆಕ್ಟರಲ್ಲಿಗೆ ನನ್ನ ಹೇಳಿಕೆಯೊಡನೆ ಕಳುಹಿಸಿಬಿಟ್ಟೆನು. ಉಪಾಧ್ಯಾಯರುಗಳಲ್ಲಿ ಹಿರಿಯವರಾದವರೂ ಅದನ್ನು ದಯವಿಟ್ಟು ಕಳುಹಿಸಬೇಡಿರೆಂದು ಎಷ್ಟು ಕೇಳಿದರೂ ನಾನು ಒಪ್ಪಲಿಲ್ಲ. ಅರ್ಜಿಯಲ್ಲಿ ಬರೆದಿದ್ದ ಸಂಗತಿಗಳೆಲ್ಲ ನನಗೆ ಶಿಫಾರಸೇ ಆಗಿದ್ದವು, ಸ್ಕೂಲಿನಲ್ಲಿ ನಾನು ಹೊಸದಾಗಿ ಮಾಡಿದ್ದ ಸುಧಾರಣೆಗಳೆಲ್ಲವನ್ನೂ ಕಾಣಿಸಿ ಇದರಿಂದ ಹುಡುಗರಿಗೂ ಮೇಷ್ಟರುಗಳಿಗೂ ಬಹಳ ಕಿರಿಕಿರಿಯಾಗಿದೆ ಎಂದು ಬರೆದಿತ್ತು. ಆದ್ದರಿಂದ ನಾನು ಅರ್ಜಿಯನ್ನು ಹಿಂದಕ್ಕೆ ವಾಪಸ್ಸು ಕೊಡುವ ಕಾರಣವೇನೂ ಕಾಣಲಿಲ್ಲ. ಅಂತೂ ಸ್ಕೂಲು ಮೇಷ್ಟರುಗಳಿಗೆಲ್ಲ ನನ್ನ ಉತ್ಸಾಹವು ಅಸಮಾಧಾನವನ್ನೇ ಉಂಟುಮಾಡಿಬಿಟ್ಟಿತು.

## ಮಾತೃ ವಿಯೋಗ :

ಈ ಹೊತ್ತಿಗೆ ನಮ್ಮ ತಾಯಿಯವರು ಹೊಳಲ್ಕೆರೆಗೆ ಬಂದು ಕೆಲವು ದಿನಗಳಿದ್ದು ನಮ್ಮ ಅಣ್ಣಂದಿರ ಯೋಗಕ್ಷೇಮವನ್ನು ವಿಚಾರಿಸುವುದಕ್ಕೆಂದು ಚಿಕ್ಕಮಗಳೂರಿಗೆ ಹೋದವರು ಅಲ್ಲಿ ಪ್ಲೇಗು ನಿಮಿತ್ತದಿಂದ ಷೆಡ್ಡಿನಲ್ಲಿದ್ದವರು ಕಾಲವಾದರು. ಅವರಿಗೇನೂ ಪ್ಲೇಗು ಬಂದಿರಲಿಲ್ಲ, ಪ್ಲೇಗ್‌ಷೆಡ್ ಕಟ್ಟುವದಕ್ಕೆ ಅಣ್ಣನವರಿಗೆ ಸಹಾಯಮಾಡಿ ಶೀತವು ಮಿತಿಮೀರಿ ಮೃತರಾಗಿದ್ದರು. ಅಲ್ಲಿ ಮಕ್ಕಳಾದ ನಾವೆಲ್ಲರೂ ಸೇರಿ ಅವರ ಅಂತ್ಯಸಂಸ್ಕಾರವನ್ನು ಮಾಡಿದೆವು. ಮುತ್ತೈದೆಯಾಗಿ ವಯಸ್ಕರಾದ ಮಕ್ಕಳ ಸೇವೆಯನ್ನು ಕೈಕೊಂಡು ದೇಹವನ್ನು ಬಿಟ್ಟರೆಂದು ಎಲ್ಲರೂ ಹರ್ಷಗೊಂಡರು. ಯಳ್ಳಂಬಳಸೆಯಲ್ಲಿ ಕರ್ಮವನ್ನು ಮಾಡಿದೆವು. ಆಗ ಮೊದಲನೆಯ ಸಲಕ್ಕೆ ನಾನು ಗರುಡಪುರಾಣವನ್ನು ಕೇಳಿದೆನು. ಪಾಪಿಗಳಿಗಾಗುವ ನರಕಯಾತನೆಯನ್ನೂ, ದ್ವಾದಶಾಕ್ಷರಚಿಂತಕರಿಗೆ ಪರಲೋಕದಲ್ಲಿ ಆಗುವ ಸನ್ಮಾನವನ್ನು ಕೇಳಿ ನನ್ನ ಮನಸ್ಸಿನ ಮೇಲೆ ಉತ್ತಮ ಪರಿಣಾಮವೇ ಆಯಿತು.

## ಭಾಷ್ಯದ ಶಾಂತಿಯ ಆಶಾಂಕುರ :

ಹಿಂದೊಮ್ಮೆ ನಾನು ಯಳ್ಳಂಬಳಸೆಗೆ ಕಾಲೇಜು ರಜಾದಿನಗಳಲ್ಲಿ ಬಂದಿದ್ದಾಗ ನಡೆದ ಸಭಾಪೂಜೆಯ ಕಾಲಕ್ಕೆ ಇಂಗ್ಲೀಷಿನವರ ತತ್ತ್ವಶೋಧನ ಸಾಮರ್ಥ್ಯವನ್ನು ಹೊಗಳುತ್ತಾ ಅವರು ಬಹಳ ಗಟ್ಟಿಗರು, ಇರುವೆಯಂಥ ಸಣ್ಣಪ್ರಾಣಿಯ ವಿಷಯಕ್ಕೂ

ಮೂರು ನಾಲ್ಕು ಸಂಪುಟಗಳ ಗ್ರಂಥಗಳನ್ನೇ ಬರೆದಿರುತ್ತಾರೆ-ಎಂದು ನನ್ನ ಓದಿನ ತಿಳಿವಳಿಕೆಯ ವಿಷಯಕ್ಕೆ ಜಂಭಕೊಚ್ಚಿಕೊಂಡಿದ್ದೆನು. ಆಗ ಅಲ್ಲಿದ್ದ ಜೋಯಿಸ ಸುಬ್ಬಾಭಟ್ಟರು 'ಅವರಿಗೆ ಆತ್ಮವಿಚಾರ ತಿಳಿದಿದೆಯೆ ?' ಎಂದು ನನ್ನನ್ನು ಕೇಳಿದರು. ನನಗೆ ಕಣ್ಣು ತೆರೆದಂತೆ ಆಯಿತು. ನಮ್ಮವರಿಗೆ ಅಧ್ಯಾತ್ಮವಿಚಾರದಲ್ಲಿ ಅನಿತರ ಸಾಧಾರಣವಾದ ತಿಳಿವಳಿಕೆಯಿದೆ ಎಂಬುದು ಮನವರಿಕೆಯಾಯಿತು. ಆತ್ಮವಿಚಾರವು ಬ್ರಹ್ಮಸೂತ್ರದಲ್ಲಿದೆ ಎಂದು ಆಗಲೇ ನನಗೆ ತಿಳಿದದ್ದು. ಈಗ ಜೀವಣದೀಕ್ಷಿತರು ನನಗೆ ಭಾಷ್ಯಶಾಂತಿಯನ್ನು ಮಾಡಿಸಿಕೊಳ್ಳುವದರ ಅವಶ್ಯಕತೆಯನ್ನು ಕುರಿತು ಆಗಾಗ್ಗೆ ಹೇಳುತ್ತಿದ್ದದ್ದರಿಂದ ಅದನ್ನು ನೋಡಬೇಕೆಂಬ ಕುತೂಹಲವೂ, ಶಾಂತಿಯನ್ನು ಮಾಡಿಸಿಕೊಳ್ಳುವ ಆಶೆಯೂ ಮೊಳೆತುಕೊಂಡವು. ಅವರ ಜೊತೆಯಲ್ಲಿ ಬರುತ್ತಿದ್ದ ರಂಗಣ್ಣನವರು ವೇದಾಂತದಲ್ಲಿ ಕುತೂಹಲವುಳ್ಳವರಾದರೂ, ಬಹಳ ಚತುರರು ; ದೀಕ್ಷಿತರ ಪ್ರೇರಣೆಯಿಂದ ಅವರಿಗೆ ನಮ್ಮ ಬ್ರಾಂಚುಸ್ಕೂಲು ಒಂದನ್ನು ರಿಪೇರಿ ಮಾಡಿಸುವ ಕಂಟ್ರಾಕ್ಟು ಕೊಡಿಸಿದೆನು. ಆ ಉಪಕಾರದ ಸ್ಮರಣೆಯಿಂದ ಅವರು ನನಗೆ ರತ್ನಪ್ರಭಾ, ಭಾಮತೀ, ನ್ಯಾಯನಿರ್ಣಯ ಸಮೇತವಾದ ಬ್ರಹ್ಮಸೂತ್ರಭಾಷ್ಯ -ಪುಸ್ತಕವನ್ನು ತರಿಸಿಕೊಟ್ಟರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಅದನ್ನು ಅಲ್ಲಲ್ಲಿ ಓದುವದು, ಅನುಕ್ರಮದಿಂದ ಓದುವದಕ್ಕೆ ಆಗುವಂತೆ ಎಂದಿಗೆ ಭಾಷ್ಯಶಾಂತಿಯನ್ನು ಮಾಡಿಕೊಂಡೇನೆಂದು ಹಂಬಲಿಸುವದು, ಇವು ನನಗೆ ನಿತ್ಯಾಹ್ನಿಕವಾದವು. ಹೊಳಲುಕೆರೆಗೆ ಮೊಳಕಾಲ್ಮುರುವಿನಿಂದ ಮಾಸ್ತರು ಭೀಮಾಚಾರ್ರು ಬಂದಿದ್ದರು ; ಅವರಿಗೆ ಮಾಧ್ವರ ಪರಿಚಯವಿಲ್ಲದ್ದರಿಂದ 'ವಿಷ್ಣುಸಹಸ್ರನಾಮ ಪಾರಾಯಣ ಮಾಡುತ್ತೀರಿ, ಮನಸ್ಸು ನಿರ್ಮಲವಾಗಿದೆ ; ಆದ್ದರಿಂದ ನಿಮ್ಮಲ್ಲಿಯೇ ಈಗಿನ ಊಟ ಮಾಡುತ್ತೇನೆ' ಎಂದು ನನ್ನನ್ನು ಹೊಗಳಿದ್ದರು. ಥಿಯೊಸೊಫಿಕಲ್ ಸೊಸೈಟಿಯ ವೆಂಕಟರಾಯರು ಅವರ ಇನ್‌ಸ್ಪೆಕ್ಟರೊಡನೆ ಬಂದು ಗೋಪಾಲದೇವರ ಗುಡಿಯಲ್ಲಿಳಿದುಕೊಂಡು ಕೆಲವು ಅಧ್ಯಾತ್ಮವಿಚಾರದ ಉಪನ್ಯಾಸಗಳನ್ನು ಮಾಡಿದ್ದರು. ಆಗ ನನ್ನೊಡನೆ ಕೆಲವು ಆಧ್ಯಾತ್ಮಿಕ ವಿಷಯಗಳಲ್ಲಿ ಚರ್ಚೆಮಾಡಿದ್ದರು. (ನನಗೆ ಥಿಯೋಸೊಫಿಯನ್ನು ಸೇರಬೇಕೆಂಬ ಕುತೂಹಲವೇನೂ ಇಲ್ಲದಿದ್ದರೂ ಬಹಳ ಕಾಯಿಲೆಬಿದ್ದ ಸಂದರ್ಭದಲ್ಲಿ ಥಿಯೋಸೊಫಿಕಲ್ ಸಮಾಜಕ್ಕೆ ನನ್ನ ಲೈಫ್ ಇನ್ಶೂರೆನ್ಸು ಹಣದಲ್ಲಿ ಮೂರನೆಯ ಒಂದುಪಾಲನ್ನು ಕಟ್ಟಬೇಕು ಎಂದು ವಿಲ್ ಬರೆಯಿಸಿದ್ದೆನು). ವೆಂಕಟರಾಯರ ಚರ್ಚೆಯೂ ನನಗೆ ಅದ್ವೈತವೇದಾಂತವನ್ನು ಪೂರ್ಣವಾಗಿ ಅಳವಡಿಸಿಕೊಳ್ಳಬೇಕೆಂಬ ಆಶೆಯು ಪ್ರಬಲವಾಗುವುದಕ್ಕೆ ಕಾರಣವಾಗಿತ್ತು. ಜೀವಣದೀಕ್ಷಿತರು 'ಹಾನಗಲ್ಲು ಸೀತಾರಾಮಶಾಸ್ತ್ರಿಗಳೆಂಬ ಒಬ್ಬ ವೈದಿಕ ಶಿಷ್ಟಾಚಾರಿಗಳಾದ ವಿದ್ವಾಂಸರು ಇದ್ದಾರೆ, ಅವರು ಅಗ್ನಿಹೋತ್ರವನ್ನು ಇಟ್ಟುಕೊಂಡಿರುತ್ತಾರೆ, ಸಾಕ್ಷಾದ್ಯಜ್ಞಪುರುಷರೆಂದರೂ ಸಲ್ಲುವಂತಿದೆ. ಅವರು ಬಿಳಿಯ

ಶಾಟಿಯ ಮಠಾಧಿಪತಿಗಳೆನ್ನಬಹುದು. ಆದ್ದರಿಂದ ನೀವು ಅವರಲ್ಲಿಯೇ ಶಾಂತಿಯನ್ನು ಮಾಡಿಸಿಕೊಳ್ಳಿ' ಎಂದು ಪ್ರೋತ್ಸಾಹಿಸಿದ್ದರು, ಅವರು ಪ್ರತಿದಿವಸವೂ ದೇವರಿಗೆ ಏಕಾದಶವಾರ ರುದ್ರಾಭಿಷೇಕ ಪೂಜೆ, ಬ್ರಾಹ್ಮಣರಿಗೆ ಅನ್ನದಾನ ಮುಂತಾದವುಗಳನ್ನು ಮಾಡುತ್ತಾರೆ ಎಂದು ಮುಂತಾಗಿ ದೀಕ್ಷಿತರು ಹೊಗಳಿದ್ದರ ಮೇಲೆ ಅವರ ದರ್ಶನವನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯು ನನಗೆ ಪ್ರಬಲವಾಯಿತು. ನಂಜನಗೂಡಿಗೆ ಹೋಗುವವರಿದ್ದಾರೆಂದೂ ನೀವು ಯಳ್ಳಂಬಳಸೆಯಲ್ಲಿದ್ದರೆ ಕಾಗದದ ಮೂಲಕ ಅವರು ಬರುವ ದಿನಾಂಕವನ್ನು ತಿಳಿಸುತ್ತೇನೆಂದೂ ದೀಕ್ಷಿತರು ಹೇಳಿದ್ದರು, ಅದಕ್ಕನುಗುಣವಾಗಿ ನಾನು ಚಿದಂಬರಯ್ಯನವರೊಡನೆ ಯಳ್ಳಂಬಳಸೆಗೆ ಹೋಗಿ ಅಲ್ಲಿ ಅವರೊಡನೆ ಐತರೇಯಭಾಷ್ಯವನ್ನು ಓದುತ್ತಾ ಶಾಸ್ತ್ರಿಗಳ ಬರವನ್ನೇ ನಿರೀಕ್ಷಿಸಿಕೊಂಡು ಕೆಲವು ಕಾಲವನ್ನು ಕಳೆದಿದ್ದೆವು. ಆಗ ಸೀತಾರಾಮಶಾಸ್ತ್ರಿಗಳ ದರ್ಶನವು ನನಗೆ ಲಭಿಸಲಿಲ್ಲ.

## ಕಡೂರಲ್ಲಿ ಸಂನ್ಯಾಸಿಗಳ ದರ್ಶನ :

ಈ ನಡುವೆ ಒಮ್ಮೆ ಚಿದಂಬರಯ್ಯನವರ ಮನೆಯಲ್ಲಿ ನಾನು ಕೆಲವು ದಿನಗಳಿದ್ದೆನು, ಕೊಗಲಿ ನದಿಯಿಂದ ಸ್ನಾನಮಾಡಿಕೊಂಡು ನಾವಿಬ್ಬರೂ ಬರುತ್ತಿರುವಾಗ ಒಬ್ಬ ಸಂನ್ಯಾಸಿಗಳು ನಮ್ಮ ಹಿಂದಿನಿಂದ 'ಶೀಕ್‌ಹೈ !' ಎಂದು ಕೂಗಿದರು. 'ನೀವು ನದೀಸ್ನಾನಮಾಡಿ ಪರಮಾರ್ಥವಿಚಾರ ಮಾಡುತ್ತಿರುವದು ನನಗೆ ಬಹಳ ಸಂತೋಷ' ಎಂದು ನಮ್ಮನ್ನು ಹೊಗಳಿದರು. ಚಿದಂಬರಯ್ಯನವರು ಅವರನ್ನು ಭಿಕ್ಷಕ್ಕೆ ಕರೆದರು. ಹನ್ನೊಂದು ಘಂಟೆಯ ಹೊತ್ತಿಗೆ ಬರುತ್ತೇನೆ, ಎಂದರೆ ಗಡಿಯಾರವು ಹನ್ನೊಂದು ಹೊಡೆಯುವ ಹೊತ್ತಿಗೆ ಸರಿಯಾಗಿ ಬಂದದ್ದು ನಮಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡಿತು. ಊಟದ ನಂತರ ಅವರು ತಾವು ಬೊಂಬಾಯಿ- ಯಲ್ಲಿದ್ದದ್ದು ಬಾಲ್ಯದಲ್ಲಿಯೇ ಸಂನ್ಯಾಸ ತೆಗೆದುಕೊಂಡದ್ದು ಇದನ್ನೆಲ್ಲ ವಿವರಿಸಿ ಹೇಳಿದರು. ಕಠೋಪನಿಷತ್ತು ಪಾರಾಯಣದ ಬಳಿಕವೇ ಊಟಕ್ಕೆ ಕುಳಿತರು. ಮಧ್ಯಾಹ್ನಾನ್ತರದಲ್ಲಿ ನಮ್ಮಿಬ್ಬರಿಗೂ ಹಿಂದಿಯಲ್ಲಿ ಸ್ವಲ್ಪ ವೇದಾಂತೋಪದೇಶವನ್ನು ಮಾಡಿದಕೂಡಲೆ ಹೊರಟುಹೋದರು. ಅವರ ದರ್ಶನವು ಚಿದಂಬರಯ್ಯನವರಲ್ಲಿ ಸಂನ್ಯಾಸಾಶ್ರಮದ ಕುತೂಹಲವನ್ನು ಸ್ವಲ್ಪ ಕೆರಳಿಸಿತೆನ್ನಬಹುದು.

## ಎಫ್.ಎ. ಪರೀಕ್ಷೆಯ ಹಂಬಲು ಬಿಟ್ಟದ್ದು :

ಹೀಗೆ ದಿನದಿನಕ್ಕೂ ವೇದಾಂತಾಭ್ಯಾಸದ ಆಶೆಯು ಬಲವಾಗುತ್ತಿರುವಂತೆಯೇ ನನಗೆ ಎಫ್. ಎ. ಪರೀಕ್ಷೆಯನ್ನು ಸ್ವತಂತ್ರವಾಗಿ ಓದಬೇಕೆಂದಿದ್ದ ಕುತೂಹಲವು

ಕಡಿಮೆಯಾಗುವದಕ್ಕೂ ಕಾರಣವು ಬಂದೊದಗಿತ್ತು. ನಾನು ಪ್ರತಿವರ್ಷವೂ ಪರೀಕ್ಷೆಗೆ ಇಟ್ಟಿದ್ದ ಪುಸ್ತಕಗಳನ್ನು ಕೊಂಡು ಪ್ರಯತ್ನ ಪೂರ್ವಕವಾಗಿ ಓದುತ್ತಿದ್ದೆನಾದರೂ, ಯಾವದಾದರೊಂದು ನಿಮಿತ್ತದಿಂದ ಪರೀಕ್ಷೆಗೆ ಕಟ್ಟುವದು ಆಗದೆ ಹೋಗುತ್ತಿತ್ತು. ನಾನು ಬರೆದಿದ್ದ ನೋಟ್ಸುಗಳನ್ನು ಚಿದಂಬರಯ್ಯನವರ ತಮ್ಮ ನಾರಾಯಣರಾಯರೇ ಮುಂತಾದವರು ಉಪಯೋಗಿಸಿಕೊಂಡರು. ನನಗೆ ಮಾತ್ರ ಆ ಪುಸ್ತಕದ ಪರಮಫಲವನ್ನು ಪಡೆದುಕೊಳ್ಳುವದು ಆಗಲಿಲ್ಲ. ಈ ಕಾರಣದಿಂದ ಬೆಂಗಳೂರಿಗೆ ಯಾವದಾದರೊಂದು ಸ್ಕೂಲಿಗೆ ವರ್ಗಮಾಡಿಸಿ ಕೊಡಬೇಕೆಂದು ಕೇಳಿಕೊಂಡೆನು. ಅದರಂತೆ ವರ್ಗದ ಆರ್ಡರೂ ಬಂದಿತು; ಆದರೆ ಕಾರಣಾಂತರದಿಂದ ಅದನ್ನು **(abeyance)** ತತ್ಕಾಲಕ್ಕೆ ತಡೆದಿಟ್ಟಿದೆಯೆಂದು ತಿಳಿಸಲಾಯಿತು. ಹಿಂದೆ ಪಂಡಿತ ಪರೀಕ್ಷೆಗೆಂದು ಓದಿದ್ದು ಹೇಗೆ ಕೇವಲ ಕನ್ನಡ ಸಂಸ್ಕೃತ ಭಾಷೆಗಳ ಪರಿಚಯಕ್ಕೆ ಮಾತ್ರ ಕಾರಣವಾಯಿತೋ, ಹಾಗೆಯೇ ಎಫ್. ಎ. ಪರೀಕ್ಷೆಗೆಂದು ಮಾಡಿದ ಅಭ್ಯಾಸವು ಇಂಗ್ಲೀಷು ಭಾಷೆಯಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆದುಕೊಳ್ಳುವದಕ್ಕೆ ಮಾತ್ರ ಕಾರಣವಾಯಿತೇ ಹೊರತು ಪರೀಕ್ಷೆಗೆ ಹೋಗುವದು ಆಗಲಿಲ್ಲ.

## ದಾವಣಗೆರೆಗೆ ವರ್ಗ :

ಈಗ ನನಗೆ ಬಹಳ ಜುಗುಪ್ಸೆಯುಂಟಾಯಿತು. ಮನೆಯಲ್ಲಿ ಹೊಳಲುಕೆರೆಗೆ ಬಂದ ಕೆಲವು ತಿಂಗಳಲ್ಲಿ ಹೆಂಡತಿಗೆ ಎರಡನೆಯ ಮಗುವೊಂದು ಹುಟ್ಟಿಹೋಗಿತ್ತು. ಈಚೆಗೆ 1909ನೆಯ ನವೆಂಬರಿನಲ್ಲಿ ಮತ್ತೊಂದು ಗಂಡು ಮಗು ಜನಿಸಿತು. ಅವನ ನಾಮಕರಣಕ್ಕೆಂದು ಜೀವಣದೀಕ್ಷಿತರನ್ನು ಅರಸೀಕೆರೆಗೆ ಕರೆದುಕೊಂಡು ಹೋಗಿ ತಂದೆತಾಯಿಗಳ ಅನುಮತಿ ಪಡೆದುಕೊಂಡು ನಾಮಕರಣಮಾಡಿದ್ದೆನು. (ನಾಮಕರಣ ಮಾಡಿದ ಕೆಲವು ಮಕ್ಕಳು ಹೋದವೆಂಬ ನಿಮಿತ್ತದಿಂದ ಈಚೆಗೆ ಹಿರಿಯರು ಮಕ್ಕಳಿಗೆ ನಾಮಕರಣವನ್ನು ಮಾಡಬಾರದೆಂದು ನಿಯಮಿಸಿದ್ದರು. ನಾಮಕರಣವಿಲ್ಲದ ಮಕ್ಕಳೂ ಹೋಗುವದರಿಂದ ಶಾಸ್ತ್ರೋಕ್ತಸಂಸ್ಕಾರವನ್ನುಂಟು ಮಾಡಿದ ಫಲವಾದರೂ ಬರಬಹುದಲ್ಲ ! ಎಂದು ನಾನು ಹೇಳಿದ್ದರ ಮೇಲೆ ತಂದೆತಾಯಿಗಳಿಬ್ಬರೂ ಈ ಸಲ ನಾಮಕರಣಮಾಡಬಹುದೆಂದು ಒಪ್ಪಿದ್ದರು.) ಆದರೆ ಮಗು ಹುಟ್ಟಿದ ಹದಿನೈದು ದಿನಗಳಲ್ಲಿಯೇ ಅರಸೀಕೆರೆಯಲ್ಲಿ ಪ್ಲೇಗು ಕಾಣಿಸಿಕೊಂಡ ಕಾರಣ ಬಾಣಂತಿಯನ್ನು ಹೊಳಲಕೆರೆಗೆ ಕರೆತರಬೇಕಾಯಿತು. ಬಾಣಂತಿಯ ಪೋಷಣೆಗೆ, ಸಹಾಯಕ್ಕೆ ಬಂದ ನಮ್ಮ ಅಕ್ಕನೇ ಮೊದಲಾದವರ ವೆಚ್ಚಕ್ಕೆ, ಇನ್ನೂ ಕೆಲವು ಅನಿರೀಕ್ಷಿತವಾದ ಖರ್ಚುಗಳಿಗೆ, ಹೀಗೆ ಆದಾಯಕ್ಕಿಂತಲೂ ವೆಚ್ಚವೇ ಹೆಚ್ಚಾಗಿ

ಸಾಲವು ಮಿತಿಮೀರಿ ಹೋಗಿತ್ತು. ಈ ಎಲ್ಲಕಾರಣಗಳಿಂದ ನಾನು ಹೆಂಡತಿಯ ಮೈಮೇಲಿದ್ದ ಒಂದು ಒಡವೆಯನ್ನು ಮಾರಬೇಕಾಗಿ ಬಂತು. ಇದರಿಂದಾಗಿ ಮನಸ್ಸಿಗೆ ಬೇಜಾರಾಗಿತ್ತು. ಬೆಂಗಳೂರಿಗೆ ಆಗದಿದ್ದರೆ ದಾವಣಗೆರೆಗೆ ವರ್ಗವನ್ನು ಮಾಡಿಕೊಡಬೇಕು, ಎಂದು ಮೇಲಿನವರನ್ನು ಕೇಳಿಕೊಂಡೆನು. ಇಷ್ಟರಲ್ಲಿ ಚಿದಂಬರಯ್ಯನವರಿಗೆ ದಾವಣಗೆರೆಗೆ ವರ್ಗವಾಗಿತ್ತು. (ಅವರು ಪತ್ನೀವಿಯೋಗವಾದ ಮೇಲೆ ಕಡೂರಿನಲ್ಲಿರಲು ಮನಸ್ಸಿಲ್ಲದೆ ಸ್ಥಳಾಂತರಕ್ಕೆ ವರ್ಗ ಕೇಳಿದ್ದರು, ಅದು ಸಾಗದೆ ಕೆಲವು ತಿಂಗಳುಗಳವರೆಗೆ ಅವರ ಪ್ರಾರ್ಥನೆಯಂತೆ ಟ್ರೈನಿಂಗ್ ಸ್ಕೂಲಿಗೆ ಮೇಲಿನವರು ಹಾಕಿದ್ದರು. ಉಪಾಧ್ಯಾಯ ವೃತ್ತಿಯಲ್ಲಿ ಚೆನ್ನಾಗಿ ಪಳಗಿದ್ದ ಅವರಿಗೆ ಯಾವ ತರಬೇತಿಯೂ ಅವಶ್ಯವಿಲ್ಲವೆಂದು ಕಂಡು ಸರಕಾರದವರು ಅವರನ್ನು ದಾವಣಗೆರೆ ಮಿಡಲ್‌ಸ್ಕೂಲ್ ಹೆಡ್‌ಮಾಸ್ತರಾಗಿ ವರ್ಗಮಾಡಿಬಿಟ್ಟರು). ಚಿದಂಬರಯ್ಯನವರಿಗೆ ಆಗ 20 ರೂಗಳ ತಲಬು ಸಲ್ಲುತ್ತಿತ್ತೆಂದು ಕಾಣುತ್ತದೆ. ನನಗೆ ಇಪ್ಪತ್ತು ರೂಪಾಯಿಗಳು ಮಾತ್ರವೇ ಇದ್ದದ್ದರಿಂದ ನಾವಿಬ್ಬರೂ ಒಕ್ಕಡೆ ಸೇರುವದೆಂದರೆ ನಾನು ಅಸಿಸ್ಟೆಂಟ್ ಮಾಸ್ತರಾಗುವದು ಅನಿವಾರ್ಯವಾಗಿತ್ತು, ನನಗೆ ಮೊದಲಿನಿಂದಲೂ ಉಪಕಾರಿಗಳಾಗಿದ್ದ ಚಿದಂಬರಯ್ಯನವರಲ್ಲಿ ಸಹೋಪಾಧ್ಯಾಯನಾಗಿರುವದು ನನಗೆ ಗೌರವವೆಂದೇ ನಾನು ಬಗೆದೆನು. ಅವರಿಗೂ ತಮಗೆ ನನ್ನ ಸಹವಾಸದಿಂದ ವೇದಾಂತದ ಪ್ರಯೋಜನವಾಗಬಹುದೆಂಬ ನಿರೀಕ್ಷಣೆಯಿತ್ತು. ಆದ್ದರಿಂದ ಅವರ ಸೂಚನೆಯಂತೆಯೇ ದಾವಣಗೆರೆಗೆ ವರ್ಗವನ್ನು ಮಾಡಬೇಕೆಂದು ನಾನು ಕೇಳಿದ್ದು.

# 21. ದಾವಣಗೆರೆ - ಭಾಷ್ಯಶಾಂತಿ (1909-1911)

## ವರ್ಗದಆರ್ಡರು ವಜಾಮಾಡಿಸುವದಕ್ಕೆ ವಿಫಲಯತ್ನ :

ದಾವಣಗೆರೆಗೆ ವರ್ಗಮಾಡಬೇಕೆಂದು ನಾನೇ ಕೇಳಿಕೊಂಡಿದ್ದೆನಾದರೂ ಅದಕ್ಕೆ ಉತ್ತರವು ಬರುವದಕ್ಕೆ ಕೆಲವು ತಿಂಗಳುಗಳ ಕಾಲವು ಹಿಡಿಯಿತು. ನನ್ನ ಮೇಲೆ ಅಸಿಸ್ಟೆಂಟು ಮಾಸ್ಟರುಗಳು ಬರೆದುಕೊಂಡ ಅರ್ಜಿಯ ವಿಷಯಕ್ಕೆ ಇತ್ಯರ್ಥವಾಗದೆ ಆ ವಿಷಮಕಾಲದಲ್ಲಿಯೇ ನನಗೆ ವರ್ಗವಾಯಿತಲ್ಲ ಎಂದು ನನಗೆ ಸ್ವಲ್ಪ ಅಸಮಾಧಾನವಾಯಿತು. ಆದ್ದರಿಂದ ಯಾರಿಗೂ ಆರ್ಡರ್ ವಿಷಯವನ್ನು ಹೇಳದೆ ಹೊರಟು ಬೆಂಗಳೂರಿಗೆ ಹೋದೆನು. ಬೆಂಗಳೂರಿನಿಂದ ಕೆಲವು ತಿಂಗಳವರೆಗೆ ಆಕ್ಟಿಂಗ್ ಅಸಿಸ್ಟೆಂಟ್ ಮಾಸ್ಟರಾಗಿ ಮೊಕರಾರುವಾಗಿ ಬಂದಿದ್ದ ನರಸಿಂಹಯ್ಯನೆಂಬ ಆಂಧ್ರಯುವಕನ ಅಣ್ಣನ ಮನೆಯಲ್ಲಿ ಇಳಿದುಕೊಂಡು ಅಲ್ಲಿ ಉಪಾಕರ್ಮವನ್ನು ಮಾಡಿಕೊಂಡೆನು. ಆಗತಾನೆ ಸರ್ಕಲ್ ಇನ್‌ಸ್ಪೆಕ್ಟರಾಗಿ ಬಂದಿದ್ದ ವೆಂಕಟಸಾಮಿ ನಾಯ್ಡುರವರನ್ನು ಕಂಡು ನನ್ನ ದೂರನ್ನು ಹೇಳಿಕೊಂಡೆನು. 'ನನ್ನನ್ನು ಮತ್ತು ಅಸಿಸ್ಟೆಂಟು ಮಾಸ್ಟರುಗಳನ್ನು ತಾವು ಖುದ್ದು ವಿಚಾರಮಾಡಿ ಅವರ ಅರ್ಜಿಯ ವಿಷಯವನ್ನು ಇತ್ಯರ್ಥಮಾಡಿದ ಮೇಲೆ ಅವಶ್ಯವಾಗಿ ನನ್ನನ್ನು ದಾವಣಗೆರೆಗೆ ಕಳುಹಿಸಿರಿ; ಅವರೆಗೆ ನಾನು ಹೊಳಲ್ಕೆರೆಯಲ್ಲಿಯೇ ಇರುವದಕ್ಕೆ ಅವಕಾಶವನ್ನು ಕೊಡಿರಿ' ಎಂದು ಬೇಡಿಕೊಂಡೆನು. ನಾಯ್ಡುರವರು ಬಹಳ ಶಾಂತರು, ವಿಷಯವನ್ನು ಸಮಾಧಾನದಿಂದ ಕೇಳಿ 'ಅವರ ಅರ್ಜಿಗೂ ನಿಮ್ಮ ವರ್ಗಕ್ಕೂ ಯಾವ ಸಂಬಂಧವೂ ಇಲ್ಲ, ನೀವು ನಿಮ್ಮ ಕೆಲಸಕ್ಕೆ ಹೋಗಿರಿ, ಸರಕಾರದವರು ಸಾವಕಾಶವಾಗಿ ಆ ವಿಷಯವನ್ನು ವಿಚಾರಣೆ ಮಾಡುತ್ತಾರೆ' ಎಂದು ಹೇಳಿದರು. ಅವರು ಒಂದು ಸಲ ಆದ ಆರ್ಡರನ್ನು ಕಾರಣವಿಲ್ಲದೆ ಹಿಂತೆಗೆಯುವದಿಲ್ಲ ಎಂದು ಪ್ರಸಿದ್ಧಿಯಿದ್ದದ್ದರಿಂದ ಮನೆಗೆ ಬಂದು ಬಿಟ್ಟೆನು. ಮನಸ್ಸಿನಲ್ಲಿ ಬಹಳ ಗಲಿಬಿಲಿಯಾಗಿತ್ತು. ಹಿಂದೂ ಪತ್ರಿಕೆಯಲ್ಲಿ ಹಾಕಿದ್ದ ಒಂದು ಪ್ರಕಟನೆಯಂತೆ ಬರ್ಮಾದಲ್ಲಿ 40ರೂ ತಲುಬಿನ ಕೆಲಸಕ್ಕೆ ಅರ್ಜಿಹಾಕಿಕೊಂಡೆನು ; ಕೆಲವು ದಿನಗಳಲ್ಲಿಯೇ ನನಗೆ ಕೆಲಸಕ್ಕೆ ಸೇರುವಂತೆ ಆರ್ಡರು ಬಂತು. ಆದರೆ ನರಸಿಂಹಯ್ಯನ ಮನೆಯವರು 'ಬರ್ಮಾ ಎಂದರೆ ಬೌದ್ಧದೇಶ. ಅಷ್ಟು ದೂರದಲ್ಲಿ ಬ್ರಾಹ್ಮಣಿಕೆ ಹೇಗೆ ಉಳಿಸಿಕೊಳ್ಳುತ್ತೀರಿ ? ಖಂಡಿತ ಹೋಗಬೇಡಿ' ಎಂದು ಬುದ್ಧಿಹೇಳಿದ್ದರಿಂದ ಉಪಾಯವಿಲ್ಲದೆ ಊರಿಗೆ ಹಿಂತಿರುಗಿದೆನು.

## ದಾವಣಗೆರೆಗೆ ಪ್ರಯಾಣ :

ಈಗ ನಾನು ದಾವಣಗೆರೆಗೆ ಒಬ್ಬನೇ ಪ್ರಯಾಣಮಾಡಿದೆನು. ಹೆಂಗಸರನ್ನು ತೌರುಮನೆಗೆ ಕಳುಹಿಸಿಕೊಟ್ಟೆನೆಂದು ತೋರುತ್ತದೆ. ಚಿದಂಬರಯ್ಯನವರು ಒಬ್ಬರ ಮನೆಯಲ್ಲಿ ಊಟಮಾಡುತ್ತಿದ್ದರು ; ನಾನೂ ಅವರ ಮನೆಯನ್ನೇ ಸದ್ಯಕ್ಕೆ ಸೇರಿಕೊಂಡೆನು. ಈಗ ನನ್ನ ಬಳಿಯಲ್ಲಿ ಸೂತ್ರಭಾಷ್ಯವಿತ್ತು. ಊರಿಗೆ ಹೋದಾಗ ಕಡೂರಿನಿಂದ ವೆಂಕಟರಾಮಭಟ್ಟರ ಬೃಹದಾರಣ್ಯಕಭಾಷ್ಯವೊಂದನ್ನು ದಪ್ಪಕ್ಷರದ ಸೂತ್ರಭಾಷ್ಯವೊಂದನ್ನು ತೆಗೆದು ಕೊಂಡು ಬಂದೆನು. ಹೊಳಲುಕೆರೆಯಲ್ಲಿದ್ದಾಗ ಯಳ್ಳಂಬಳಸೆಗೆ ರಜದಲ್ಲಿ ಒಮ್ಮೆ ಹೋಗಿದ್ದೆನು. ಅಲ್ಲಿ ಜೋಯಿಸ ಸುಬ್ಬಾಭಟ್ಟರ ಅಣ್ಣನ ಮಗ ಪಾಂಡುರಂಗಶಾಸ್ತ್ರಿ, ಮತ್ತು ಅಯ್ಯನವರ ಕೃಷ್ಣಭಟ್ಟರ ಮಗ ಅಚ್ಚಪ್ಪಶಾಸ್ತ್ರಿ ಇವರಿಬ್ಬರೂ ಆಗತಾನೆ ಬೇಲೂರಿನಿಂದ ಸಂಸ್ಕೃತ ಓದಿಕೊಂಡು ಬಂದಿದ್ದರು. ಜೋಯಿಸರು ಅವರನ್ನು ಪ್ರಶ್ನೆ ಹಾಕುವಂತೆ ನನಗೆ ಹೇಳಿದರು. ನನಗೆ ಸಿದ್ಧಾಂತಕೌಮುದಿಯ ವಿಷಯದಲ್ಲಿ ಕುತೂಹಲವಿದ್ದದ್ದರಿಂದ ಅದರ ವಿಷಯಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಿದೆ. ಅವರು ಸಮರ್ಪಕವಾಗಿ ಉತ್ತರವನ್ನು ಕೊಟ್ಟದ್ದಲ್ಲದೆ 'ಬಾಲಸುಮೋದನೀ' ಎಂಬ ಕೌಮುದೀವ್ಯಾಖ್ಯಾನವು ಆಗತಾನೆ ಮಾಸಿಕ ರೂಪದಲ್ಲಿ ಅಚ್ಚಾಗುತ್ತಿದೆ ಎಂಬ ತಿಳಿವಳಿಕೆಯನ್ನು ಕೊಟ್ಟರು.ನಾನು ಆ ಕೂಡಲೆ ಆ ಪುಸ್ತಕಕ್ಕೆ ಚಂದಾದಾರನಾಗಿ ಅದನ್ನು ತರಿಸಿದೆ. ಈಗ ವೇದಾಂತ ಮತ್ತು ವ್ಯಾಕರಣ ಕಾಲಕ್ಷೇಪಕ್ಕೆ ಪ್ರಾರಂಭ ಮಾಡಿದೆ. ಪ್ರತಿದಿನವೂ ಸ್ನಾನಮಾಡಿ ಒಂದುಗೋಡೆಗೆ ಶಂಕರರ ಪಠವನ್ನು ತಗಲುಹಾಕಿ ಅದರ ಕೆಳಗೆ ಕುಳಿತುಕೊಂಡು ಭಾಷ್ಯವನ್ನು ಓದುತ್ತಿದ್ದೆನು. ಹಾಗೆ ಮಾಡಿದರೆ ಶಂಕರರ ಅನುಗ್ರಹದಿಂದ ನನಗೆ ಭಾಷ್ಯವು ಅರ್ಥವಾಗುವದೆಂದು ನನಗೆ ನಂಬಿಕೆಯಿತ್ತು .

## ಗಣಿತಪುಸ್ತಕಗಳನ್ನು ದೂರವಿರಿಸಿದ್ದು :

ಇಷ್ಟು ಹೊತ್ತಿಗೆ ಎಫ್.ಎ. ಪರೀಕ್ಷೆಗೆ ಪ್ರೈವೇಟಾಗಿ ಹೋಗುವವರಿಗೆ ಯೂನಿವರ್ಸಿಟಿಯವರು ಕೊಟ್ಟಿದ್ದ ವಾಯಿದೆ ಮುಗಿದು ಹೋಗಿತ್ತು. ಆದರೂ ನಾನು ಹಿಂದಿನ ವಾಸನೆಯಿಂದ ಟ್ರಿಗನಾಮಿಟ್ರಿ ಮುಂತಾದ ಪುಸ್ತಕಗಳನ್ನು ಕಂಡ ಕೂಡಲೇ ಯಾವದಾದರೊಂದು ಲೆಕ್ಕವು ಮಾಡುವ ತವಕವುಂಟಾಗುತ್ತಿತ್ತು. ಇದು ವೇದಾಂತ ವಿಚಾರಕ್ಕೆ ವಿಘ್ನವೆಂದು ಬಗೆದು ಎಫ್.ಎ.ಪುಸ್ತಕಗಳನ್ನು ಮುಖ್ಯವಾಗಿ ಲೆಕ್ಕದ ಪುಸ್ತಕಗಳನ್ನು ಅರಸೀಕೆರೆಗೆ ಕಳುಹಿಸಿ ಕೊಟ್ಟುಬಿಟ್ಟೆನು. ಮುಂದೆ ಬಹಳ ಕಾಲವಾದ ಮೇಲೆ ಆ ಪುಸ್ತಕಗಳು ನನ್ನ ಕಣ್ಣಿಗೆ ಬಿದ್ದವು. ಅವನ್ನು ಯಾವಾಗ ಅರಸೀಕೆರೆಗೆ ಕಳುಹಿಸಿದೆನೆಂಬುದು ಅಷ್ಟು ಹೊತ್ತಿಗೆ ಮರೆತೇ ಹೋಗಿತ್ತು.

## ಸ್ಕೂಲಿನ ಅನುಭವಗಳು :

ದಾವಣಗೆರೆ ಸ್ಕೂಲು ಆಗತಾನೆ ಚಿದಂಬರಯ್ಯನವರ ಆಡಳಿತದಿಂದ ಹೊಸ ಹೊಸ ಕ್ರಾಂತಿಗಳನ್ನನುಭವಿಸಿತ್ತು. ಚಿದಂಬರಯ್ಯನವರಿಗಿಂತ ಹಿಂದೆ ಇದ್ದ ಗುರುಶಾಂತಪ್ಪನವರು ಸ್ವಲ್ಪ ಹಳೆಯಕಾಲಕ್ಕೆ ಸೇರಿದವರು. ಹೊತ್ತುಮುಳುಗುವ ಹೊತ್ತಿಗೆ ಸ್ಕೂಲು ಬಿಡಬೇಕು, ಬೆಳಗಿನಹೊತ್ತು ಆದಷ್ಟುಮುಂಚೆ ಸ್ಕೂಲಿಗೆ ಹುಡುಗರು ಬರಬೇಕು, ವೇಳಾಪತ್ರಿಕೆ ನೆಪಮಾತ್ರಕ್ಕೆ ಇದ್ದರೂ ಹುಡುಗರಿಗೆ ಯಾವಪಾಠವು ಹೆಚ್ಚಾಗಿಬೇಕೋ ಅದನ್ನೇ ಮಾಡಬೇಕು - ಇವೇ ಮುಂತಾದ ಪದ್ಧತಿಗಳು ಕೆಲವು ಆಚರಣೆಯಲ್ಲಿದ್ದವು. ಚಿದಂಬರಯ್ಯನವರ ಕಾಲಕ್ಕೆ ಮಾಯವಾಗಿಬಿಟ್ಟವು. ಅಲ್ಲಿ ಇಂಗ್ಲೀಷು ಅಸಿಸ್ಟೆಂಟು ಮಾಸ್ಟರನ್ನು ಇಂಗ್ಲೀಷು ಹೆಡ್‌ಮಾಸ್ಟರು ಎಂದು ಕರೆಯುತ್ತಿದ್ದರು. ಆದ್ದರಿಂದ ನಾನು ವ್ಯವಹಾರ ದೃಷ್ಟಿಯಿಂದ ಇನ್ನೂ ಹೆಡ್‌ಮಾಸ್ಟರೇ. ಪ್ರೈಮರಿಭಾಗದ ಎ.ಕ್ಲಾಸನ್ನು 'ಅರ್ಧಕ್ಲಾಸು' ಎಂದು ಕರೆಯುತ್ತಿದ್ದರು. ನಾನು ಚಿದಂಬರಯ್ಯನವರ ಜೊತೆಯಲ್ಲಿಯೇ ಇದ್ದು ಅನೇಕ ವಿಷಯಗಳಲ್ಲಿ ಅವರನ್ನೇ ಅನುಕರಿಸುವದಕ್ಕೆ ಮೊದಲು ಮಾಡಿದೆನು. ಅವರ ಜೊತೆಯಲ್ಲಿಯೇ ಅದೇ ಮನೆಯಲ್ಲಿ ತತ್ಕಾಲಕ್ಕೆ ಊಟಕ್ಕೆ ಇರುತ್ತಿದ್ದೆನು. ಅವರ ಜೊತೆಯಲ್ಲಿಯೇ ಸ್ಕೂಲಿಗೆ ಹೋಗುತ್ತಿದ್ದೆನು. ಅವರಂತಯೇ ಕೈಯಲ್ಲಿ ಒಂದು ಬಗನೆಯ ಕೋಲನ್ನು ಹಿಡಿದುಕೊಳ್ಳುತ್ತಿದ್ದೆನು. (ಬಗನೆಯ ಕೋಲು ಹಿಡಿದರೆ ವ್ಯವಹಾರದಲ್ಲಿ ಎಲ್ಲೆಲ್ಲಿಯೂ ಜಯ ಎಂದು ಯಾರೋ ಹೇಳಿದ್ದರು) ಅವರ ಜೊತೆಯಲ್ಲಿಯೇ ಆಫೀಸು ರೂಮಿನಲ್ಲಿ ಕುಳಿತುಕೊಳ್ಳುತ್ತಿದ್ದೆನು. ಅವರೂ ನಾನೂ ಒಟ್ಟಿಗೆ ವೇದಾಂತ ಚಿಂತನೆಮಾಡುತ್ತಿದ್ದೆವು. ಒಟ್ಟಿಗೆ ಒಂದೇ ಕಡೆಯಲ್ಲಿ ಮಲಗುತ್ತಿದ್ದೆವು. ಆಗಾಗ್ಗೆ ಸಮೀಪದಲ್ಲಿ ಹರಿಹರಕ್ಕೆ ನದೀಸ್ನಾನಕ್ಕೆ ಜೊತೆಯಲ್ಲಿಯೇ ಹೋಗಿ ಬರುತ್ತಿದ್ದೆವು.

## ರಂಗರಾಯರ ಮೂಲಕ ಮಹಾಭಾಗವತರ ದರ್ಶನ :

ಒಂದು ಸಲ ನಾನು ನದಿಯ ಸ್ನಾನಕ್ಕೆಂದು ಹರಿಹರಕ್ಕೆ ಹೋಗಿದ್ದಾಗ, ಅಲ್ಲಿ ಮಂಗಳದ ರಂಗರಾಯರು ಇರುತ್ತಾರೆಂಬುದು ನನಗೆ ಅಕಸ್ಮಾತ್ತಾಗಿ ತಿಳಿಯ ಬಂದಿತ್ತು. ನದಿಗೆ ಬಹಳ ಹತ್ತಿರದಲ್ಲಿಯೇ ಇದ್ದ ಮನೆಯ ಮಹಡಿಯನ್ನು ಕುತೂಹಲದಿಂದ ಹತ್ತಿ ಅವರನ್ನು ಕಂಡ ನನಗೆ ಆಶ್ಚರ್ಯವೂ ಸಂತೋಷವೂ ಆಯಿತು. ಈಗ ಅವರು ವೇಷದಲ್ಲಿ ಸಂಪೂರ್ಣವಾಗಿ ಮಾರ್ಪಟ್ಟಿದ್ದರು. ಬೆಳಗಿನ ಜಾವದಲ್ಲಿಯೇ ಎದ್ದು ಸ್ನಾನ ಮಾಡಿ ಗಂಧದಿಂದ ಊರ್ಧ್ವಪುಂಡ್ರವನ್ನು ಧರಿಸಿದ್ದರು ; ಕೊರಳಲ್ಲಿ ತುಳಸಿ ಮಣಿಯನ್ನು ಧರಿಸಿದ್ದರು. ನಿಸರ್ಗವಾಗಿಯೇ ಕೆಂಪಗಿದ್ದ ಅವರ

ಮುಖವು ಈಗ ಅಧ್ಯಾತ್ಮ ಸಾಧನದಿಂದ ಹೆಚ್ಚು ಕಳೆಯೇರಿತ್ತು. ಅವರಲ್ಲಿದ್ದ ಸ್ನೇಹದ ಬಳಕೆಯಿಂದ 'ಇದೇನು ಹೀಗೆ ?' ಎಂದು ಕೇಳಿದೆನು. ಅವರು ಕುರ್ತಕೋಟಿಯ ಭಾಗವತರು, ಬೆಳಧಡಿಯ ಬ್ರಹ್ಮಾನಂದರು, ಅವರ ಗುರುಗಳಾದ ಗೋಂದಾವಳಿಯ ಬ್ರಹ್ಮಚೈತನ್ಯರು ಇವರುಗಳು ರಾಮನಾಮದ ಜಪ, ಭಜನೆ - ಮುಂತಾದವುಗಳ ಪ್ರಚಾರ ಮಾಡುತ್ತಿರುವದನ್ನು ನನ್ನ ಕಿವಿಗೆ ಹಾಕಿದರು. ನಾನು ಅವರ ಪಕ್ಕದಲ್ಲಿಯೇ ಇದ್ದ ಸಂಜೀವರಾಯರನ್ನು ಕಂಡಾಗ ಅವರಿಗೂ ಭಾಗವತರ ಗಾಳಿ ಬೀಸಿತ್ತೆಂಬುದು ಕಂಡು ಬಂದಿತು. ಅಷ್ಟೇನೂ ತಿಳಿದವರಲ್ಲವಾದರೂ ರಂಗರಾಯರ ಪ್ರಭಾವದಿಂದ ಭಕ್ತಿಮಾರ್ಗಕ್ಕೆ ತಿರುಗಿದ್ದರು. ಕರ್ಮವನ್ನು ಮಾಡುವದು, ಸ್ತೋತ್ರಗಳನ್ನು ಹೇಳುವದು, ವೇದಾಂತವನ್ನು ಅಭ್ಯಾಸ ಮಾಡುವದು - ಇಷ್ಟು ನಿತ್ಯಾಹ್ನಿಕವಾದರೂ ನನ್ನಲ್ಲಿ ನಿಜವಾದ ಭಕ್ತಿಯ ಸುಳಿವು ಇನ್ನೂ ಆಗ್ಗೆ ಇರಲಿಲ್ಲ. ರಂಗರಾಯರು ಪ್ರಸ್ತಾವಕ್ರಮದಿಂದ 'ಯಜ್ಞ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?' ಎಂದು ಕೇಳಿದರು, 'ಅದಕ್ಕೆ ನನ್ನ ಅಭಿಪ್ರಾಯವೇನು ? ವೇದದಲ್ಲಿ ಹೇಳಿರುವದರಿಂದ ಅದು ಬ್ರಾಹ್ಮಣನಿಗೆ ಕರ್ತವ್ಯವೇ ಸರಿ' ಎಂದೆನು. ಆಗ ರಂಗರಾಯರು 'ನಮ್ಮ ಭಾಗವತರೂ ಅವರ ಗುರುಗಳಾದ ಮಹಾರಾಜರೂ ಯಜ್ಞಪಶುವಿನ ಮೈಮೇಲಿರುವಷ್ಟು ಕೂದಲುಗಳ ಸಂಖ್ಯೆಯ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ಮಾಡಬೇಕು, ಮಂತ್ರ ಮಹಿಮೆಯಿಂದ ಯಜ್ಞಪಶುವನ್ನು ಸಂಜೀವನಗೊಳಿಸಬೇಕು ; ಅದು ಸಾಧ್ಯವಿದ್ದವರು ಮಾತ್ರ ಯಜ್ಞವನ್ನು ಮಾಡಬಹುದು ಎನ್ನುತ್ತಾರೆ' ಎಂದರು. ನನಗೆ ಭಾಗವತ ಎಂಬ ಹೆಸರು ಭಾಗವತರಾಟ, ಭಾಗವತೈಕಾದಶಿ - ಎಂಬ ಎರಡು ಸಂಬಂಧಗಳಿಂದ ಮಾತ್ರ ತಿಳಿದಿತ್ತು ; ಮಹಾರಾಜರು ಎಂದರೆ ಮೈಸೂರು ಮಹಾರಾಜರೇ ಹೊರತು, ಗುರುಗಳನ್ನು ಮಹಾರಾಜರು ಎಂದು ಕರೆಯುವದೂ ಉಂಟು ಎಂಬುದು ಕನಸಿನಲ್ಲಿಯೂ ಕಿವಿಗೆ ಬಿದ್ದಿರಲಿಲ್ಲ, ಆದ್ದರಿಂದ ಈ ಭಾಗವತರು ಯಾರು ? ಮಹಾರಾಜರು ಯಾರು ? ವೇದವಿಹಿತವಾದ ಯಜ್ಞದ ವಿಷಯವಾಗಿ ಹೀಗೆಲ್ಲ ಹೇಳುವದಕ್ಕೆ ಇವರಿಗೇನು ಅಧಿಕಾರ ? ಎಂದು ಮುಂತಾಗಿ ಆಕ್ಷೇಪಿಸಿದೆನು. ರಂಗರಾಯರು 'ಭಾಗವತರು ಇಲ್ಲಿಗೆ ಬರುತ್ತಿರುತ್ತಾರೆ ; ಆಗ ನೀವೂ ಬಂದು ಕೇಳಿ ತಿಳಿದುಕೊಳ್ಳಿ' ಎಂದರು. ನಾನು ಔದಾಸೀನ್ಯದಿಂದ 'ಆಗಲಿ' ಎಂದುಬಿಟ್ಟೆ.

ಕೆಲವು ದಿನಗಳಾದ ಬಳಿಕ ರಂಗರಾಯರು ನನಗೆ ಒಂದು ಚೀಟಿಯನ್ನು ಬರೆದು ಕಳುಹಿಸಿದರು **"His Holiness Sri Maha Bhagavatar is coming here tomorrow. Please make convenient to come so that we may discuss matters with him** (ಶ್ರೀ ಶ್ರೀ ಮಹಾಭಾಗವತರು ನಾಳೆ

ಇಲ್ಲಿಗೆ ಬರುವರು. ನೀವು ದಯಮಾಡಿ ಇಲ್ಲಿಗೆ ಬಂದರೆ ಅವರೊಡನೆ ವಿಷಯ ಚರ್ಚೆ ಮಾಡಬಹುದು)'' ಎಂದು ಚೀಟಿಯಲ್ಲಿ ಬರೆದಿತ್ತು. ಅಲ್ಲಿಯವರೆಗೆ **"His Holiness"** ಶ್ರೀ ಶ್ರೀ ಎಂಬರ್ಥದ ಇಂಗ್ಲೀಷು ವಿಶೇಷಣವನ್ನು ಶೃಂಗೇರಿ ಜಗದ್ಗುರುಗಳಿಗೆ ಹೊರತು ಮತ್ತೊಬ್ಬರಿಗೆ ಉಪಯೋಗಿಸಿದ್ದನ್ನು ನಾನು ಕೇಳಿರಲಿಲ್ಲ. 'ರಂಗರಾಯರಿಗೆ ಭಾಗವತರಲ್ಲಿ ಎಷ್ಟು ಅಭಿಮಾನ !' ಎಂದುಕೊಂಡು ಚಿದಂಬರಯ್ಯನವರಿಗೆ ಸಂಗತಿಯೆಲ್ಲವನ್ನು ತಿಳಿಸಿ ಕಾಗದವನ್ನು ತೋರಿಸಿದೆನು. ಅವರು ಕುತೂಹಲದಿಂದ 'ನಾಳೆ ಸಾಯಂಕಾಲ ನಾವಿಬ್ಬರೂ ಹೋಗಿ ಆ ಭಾಗವತರನ್ನು ಕಂಡುಬರೋಣ, ಏನು ಹೇಳುತ್ತಾರೋ ಕೇಳೋಣ' ಎಂದರು. ಆದರಂತೆ ನಾವಿಬ್ಬರೂ ಹರಿಹರಕ್ಕೆ ಹೋದೆವು. ಸಾಯಂಕಾಲ ಸಂಧ್ಯಾವಂದನೆ ಮಾಡಿಕೊಂಡು ಬರೋಣವೆಂದು ನದಿಗೆ ಹೋದೆವು. ಅಲ್ಲಿ ಜೀವಣದೀಕ್ಷಿತರನ್ನು ಕಂಡು ನಡೆದಿದ್ದ ಸಂಗತಿಗಳನ್ನೆಲ್ಲ ಹೇಳಿದೆನು. 'ಈ ದಿನ ಅವರೊಡನೆ ಚರ್ಚೆಮಾಡಿ ವಿಷಯ ನಿರ್ಣಯ ಮಾಡಿ ಬಿಡಬೇಕೆಂದಿದ್ದೇವೆ' ಎಂದು ನಾನು ಅಭಿಮಾನದಿಂದ ನುಡಿದದ್ದಕ್ಕೆ ದೀಕ್ಷಿತರು 'ದೊಡ್ಡವರ ಸಂಗತಿ ನಮಗೇಕೆ ? ನಾವು ಅವರ ರಾಗಕ್ಕೇ ಡೊಳ್ಳು ಬಾರಿಸಿದರೆ ಆಯಿತು !' ಎಂದು ಬಿಟ್ಟರು. ನನಗೇನೂ ಅವರ ಮಾತಿನಿಂದ ಸಮಾಧಾನವಾಗಲಿಲ್ಲ.

ನಾವೆಲ್ಲರೂ ಕಲೆತು ರಂಗರಾಯರ ಮನೆಗೆ ಹೋದೆವು, ಅವರೂ ಅವರ ಸ್ನೇಹಿತರೂ ಕೆಲವರು ಸೇರಿ ಭಾಗವತರನ್ನು ಮನೆಗೆ ಕರೆದುಕೊಂಡು ಬಂದಿದ್ದರು. ಆಗ ನನಗೊಂದು ವಿಚಿತ್ರ ದೃಶ್ಯವು ಕಂಡು ಬಂದಿತು. ಭಾಗವತರು ಬಹಳ ಸರಳ ಪ್ರಕೃತಿಯವರು, ಒಂದು ಪಂಚೆ ಉಟ್ಟಿದ್ದು, ಒಂದು ಪಂಚೆ ಹೊದ್ದುಕೊಂಡಿದ್ದರು, ಅಷ್ಟೇ ಅವರ ಉಡುಪು ; ರಂಗರಾಯರ ಕಡೆಯವರು ಒಬ್ಬೊಬ್ಬರಾಗಿ ಬಂದು ಅವರಿಗೆ ನಮಸ್ಕಾರ ಮಾಡುತ್ತಿರುವಲ್ಲಿ 'ಸಂಧ್ಯಾವಂದನೆಯಾಯಿತೊ ?' ಎಂದು ಎಲ್ಲರನ್ನು ಕೇಳುತ್ತಿದ್ದರು. ಎಲ್ಲರನ್ನು 'ಸಂಧ್ಯಾವಂದನೆ ಮಾಡಿಕೊಂಡು ಬನ್ನಿರಿ' ಎಂದು ಹೇಳಿ ಹೇಳಿ ಕಳುಹಿಸುತ್ತಿದ್ದದ್ದನ್ನು ಕಂಡು 'ಇಂಥವರಿಗೆ ವೈದಿಕ ಕರ್ಮದಲ್ಲಿ ಅನಾದರವಿದ್ದೀತೆ ? ಎಂದಿಗೂ ಇರಲಾರದು, ರಂಗರಾಯರು ಇವರ ವಿಷಯಕ್ಕೆ ತಪ್ಪು ತಿಳಿದುಕೊಂಡಿದಾರೆ' ಎಂದು ಮನಸ್ಸಿನಲ್ಲಿಯೇ ಎಂದುಕೊಂಡೆನು. ಚಿದಂಬರಯ್ಯನವರು ಗೋಂದಾವಳಿಯ ವಿಷಯವನ್ನು ಪ್ರಸ್ತಾಪಿಸಿ 'ಅವರು ಮುಖ್ಯವಾಗಿ ನಾಮಸ್ಮರಣೆಯನ್ನೇ ಹೇಳುತ್ತಾರೆಂದು ಕೇಳಿದ್ದೇನೆ' ಎಂದರು. ಮಹಾಭಾಗವತರು 'ಹಾಗೇನೂ ಇಲ್ಲ, ನಾಮಸ್ಮರಣೆಯನ್ನು ಎಲ್ಲರಿಗೂ ಹೇಳುತ್ತಾರೆ ; ಅಧಿಕಾರಿಗಳಿಗೆ ತಕ್ಕಂತೆ ಯೋಗಾದಿಗಳನ್ನು ಹೇಳುತ್ತಾರೆ' ಎಂದರು.

ಇದಾದ ಮೇಲೆ ಅಲ್ಲಿ ಭಕ್ತಮಂಡಲಿಯವರು ಏರ್ಪಡಿಸಿಕೊಂಡಿದ್ದ ರಾಮಮಂದಿರಕ್ಕೆ ಹೋದೆವು. ಸ್ವಲ್ಪ ಹೊತ್ತು ಭಜನೆಯಾದ ಬಳಿಕ ದೇವರಿಗೆ ಆರತಿಯಾಯಿತು. ಎಲ್ಲಕ್ಕೂ ಮರಾಠಿಯ ಪದಗಳನ್ನೇ ಉಪಯೋಗಿಸುತ್ತಿದ್ದರು ; ಮಂತ್ರಪುಷ್ಪಕ್ಕೆ ಮಾತ್ರ ಒಂದು ವೇದಮಂತ್ರವನ್ನು ಹೇಳಿದರೆಂದು ತೋರುತ್ತದೆ. ಆಗ ಆ ಮಂದಿರದಲ್ಲಿ ದೇವರ ಬಳಿಯಿಂದ ಬೀದಿಯ ಬಾಗಿಲಿನವರೆಗೂ ಸಾಲಾಗಿ ಕರ್ಪೂರವನ್ನು ಹತ್ತಿಸಿಟ್ಟರು. ಆ ಮಾಳಿಗೆ ಮನೆಯಲ್ಲೆಲ್ಲ ಕರ್ಪೂರದ ಹೊಗೆ ತುಂಬಿಕೊಂಡಿತು. 'ನನಗೆ ಇದೆಂಥ ಅತಿರೇಕದ ಪೂಜಾಕ್ರಮ !' ಎನಿಸಿತು. ಮಂಗಳಾರತಿಯಾದ ಮೇಲೆ ಸಾಯಂಕಾಲ ರಂಗರಾಯರ ಮನೆಯಲ್ಲಿ ಎಲ್ಲರಿಗೂ ಊಟ, ಆ ಊಟವು ಬೀಗರಿಗೆ ಮಾಡಿದ ಬಿಸಿಲಡಿಗೆ ಊಟದಂತೆ ನನಗೆ ಭಾಸವಾಯಿತು. ಊಟದ ಕಾಲಕ್ಕೆ ಭಕ್ತಿಯ ವಿಚಾರದ ಮಾತು ಬಂತು. ಭಾಗವತರು 'ಮನುಷ್ಯನಿಗೆ ತಾನೇ ಸಕ್ಕರೆಯಾಗುವದು ಹಿತವೊ, ಸಕ್ಕರೆಯನ್ನು ತಿನ್ನುವದು ಹಿತವೊ' ಎಂದು ಮುಂತಾಗಿ ಕೆಲವು ದೃಷ್ಟಾಂತಗಳಿಂದ ಸಾಯುಜ್ಯ ಮುಕ್ತಿಗಿಂತ ಪರಮೇಶ್ವರನ ಭಕ್ತಿಯ ಸವಿಯನ್ನು ಅನುಭವಿಸುವದೇ ಹೆಚ್ಚು ಎಂಬ ಭಾವನೆ ಬರುವಂತೆ ಮಾತನಾಡಿದರು. ಆ ದಿನ ಚಿದಂಬರಯ್ಯನವರೂ ನಾನೂ ಮಾತನಾಡಿ ಕೊಂಡದ್ದರಲ್ಲಿ ಭಾಗವತರಲ್ಲಿ ಯಾವದೋ ಒಂದು ಹೆಚ್ಚುಗಾರಿಕೆಯಿರುವಂತೆ ತೋರುತ್ತದೆ, ಎಂದು ನಮ್ಮಿಬ್ಬರಿಗೂ ತೋರಿತು. ಅವರು ಗ್ರಂಥಗಳಿಂದ ತಿಳಿಯ ಬೇಕಾದದ್ದನ್ನು ತಿಳಿದುಕೊಂಡು ಅನುಭವಕ್ಕಾಗಿ ಯೋಗವನ್ನು ಗೋಂದಾವಳಿಯ ಮಹಾರಾಜರಿಂದ ಕಲಿತುಕೊಳ್ಳುವದಕ್ಕೆ ಅವರ ಶಿಷ್ಯವೃತ್ತಿಯನ್ನು ಅನುಸರಿಸಿರ ಬೇಕೆಂಬುದು ಚಿದಂಬರಯ್ಯನವರ ಅಭಿಪ್ರಾಯವಾಗಿತ್ತು. ಮುಂದೆ ಅವರು ಹರಿಹರಕ್ಕೆ ಬಂದಾಗಲೆಲ್ಲ ನಮ್ಮನ್ನು ಹರಿಹರಕ್ಕೆ ಕರೆಯಿಸಿಕೊಳ್ಳುತ್ತಿದ್ದರು. ಭಗವದ್ಗೀತಾಭಾಷ್ಯವೇ ಮುಂತಾದವುಗಳನ್ನು ಮುಂದೆ ಇಟ್ಟುಕೊಂಡು ಉಪಾಸನಾ ಪ್ರಧಾನವಾದ ನಿರೂಪಣಗಳನ್ನು ಮಾಡುತ್ತಿದ್ದರು. ಆ ಉಪನ್ಯಾಸಗಳಲ್ಲಿ ಯಾವದಾದರೊಂದು ಹೆಚ್ಚಿನ ಅತಿಶಯವಿರುವಂತೆ ನಮ್ಮಿಬ್ಬರಿಗೂ ಭಾಸವಾಗುತ್ತಿತ್ತು, ಅವರಲ್ಲಿ ಶ್ರದ್ಧಾಭಕ್ತಿಗಳು ಮೆಲ್ಲಮೆಲ್ಲಗೆ ಉಂಟಾದವು.

## ಪಿತೃವಿಯೋಗ:

1910 ಮತ್ತು 1911 ಈ ಎರಡು ವರ್ಷಗಳಲ್ಲಿ ನನ್ನ ಜೀವನದಲ್ಲಿ ಬಹಳ ಮಾರ್ಪಾಡುಗಳಾಗಿದ್ದವು. ನನಗೆ ಸರಿಯಾಗಿ ತಾರೀಖುಗಳ ನೆನಪಿಲ್ಲವಾದ್ದರಿಂದ ಯಾವಯಾವಾಗ ಏನು ನಡೆಯಿತೆಂದು ಹೇಳಲಾರೆ. ನಮ್ಮ ತೀರ್ಥರೂಪರವರು ಶರೀರದಲ್ಲಿ ಅಸ್ವಸ್ಥರಾಗಿದ್ದಾರೆಂದೂ, ಮುಪ್ಪಿನ ಕಾಲವಾದ್ದರಿಂದ ಒಮ್ಮೆ ಬಂದು

ನೋಡಿಹೋಗುವದು ಒಳ್ಳೆಯದೆಂದೂ, ಗುಂಡಪ್ಪಭಾವನವರು ಕಾಗದ ಬರೆದದ್ದರಿಂದ ಕೂಡಲೇ ನಾನು ಯಳ್ಳಂಬಳಸೆಗೆ ಹೋದೆನು. ನಾನು ಹೋಗುವದರೊಳಗೆ ಅವರು ಸ್ವರ್ಗಸ್ಥರಾಗಿ ಆ ದಿನವೇ ಶರೀರ ದಹನವಾಗಿ ಬಿಟ್ಟಿತ್ತು. ತಂದೆಯವರು ಯಾವಾಗಲೂ ಕಾಯಿಲೆ ಅನುಭವಿಸಿದವರೇ ಅಲ್ಲ. ಜಗಲಿ ಮೇಲೆ ಕುಳಿತಿದ್ದವರು ಬೀದಿಯಲ್ಲಿ ಬಿದ್ದಿದ್ದ ಸಗಣಿ ತೊಪ್ಪೆಯನ್ನು ತೆಗೆದುಕೊಳ್ಳಬೇಕೆಂದು ತವಕದಿಂದ ಎದ್ದಾಗ ಕಾಲುಜಾರಿ ಬಿದ್ದರಂತೆ. ಜ್ವರ ಬಂದು ಎರಡು ಮೂರು ದಿನಗಳಲ್ಲಿ ದೇಹವನ್ನು ಬಿಟ್ಟರಂತೆ. ಹುಡುಗರೆಲ್ಲರೂ ಭಜಗೋವಿಂದಸ್ತೋತ್ರ ಹೇಳುತ್ತಿದ್ದರಂತೆ. ಗಂಗಾಪ್ರಾಶನ ಮಾಡಿ ಕಣ್ಣು ಮುಚ್ಚಿದರಂತೆ. ಅಣ್ಣತಮ್ಮಂದಿರುಗಳು ಮಾರನೆಯ ದಿನ ಬಂದರು. ಸಾಯುವಕಾಲಕ್ಕೆ ನಗದಾಗಿ ಸಾವಿರಾರುರೂಪಾಯಿ ಇದ್ದದ್ದರಿಂದ ಉತ್ತರ ಕ್ರಿಯೆಗಳಿಗೆ ಯಾವ ಅನನುಕೂಲವೂ ಇರಲಿಲ್ಲ. ಆಗ್ಗೆ ಮಲ್ಲಣ್ಣಭಾವನವರೂ ಬಂದಿದ್ದರು. ಕಡೂರ ರಂಗಾಶಾಸ್ತ್ರಿಗಳು ಗರುಡಪುರಾಣವನ್ನು ಹೇಳಿದರು, ಬಹಳ ಚೆನ್ನಾಗಿತ್ತು. ಅವರಿಗೆ ಯಥೋಚಿತ ದಕ್ಷಿಣೆಯನ್ನು ಕೊಟ್ಟದ್ದಲ್ಲದೆ ಅವರ ಇಚ್ಛೆಯಂತೆ ನನ್ನಲ್ಲಿದ್ದ ಶಂಕರಾನಂದಿಭಗವದ್ಗೀತೆಯನ್ನು ಕೊಟ್ಟೆನು. ಕರ್ಮವು ಉತ್ಕೃಷ್ಟ ರೀತಿಯಿಂದಲೇ ನಡೆಯಿತು, ಮಲ್ಲಣ್ಣಭಾವನವರ ಸೂಚನೆಯಂತೆ ನನ್ನ ತಮ್ಮ ಕೃಷ್ಣಸ್ವಾಮಿಯು ಮನೆಯ ವಿಚಾರವನ್ನು ನೋಡಿಕೊಂಡಿರಲು ಒಪ್ಪಿದನು. ನಾವುಗಳು ಕರ್ಮವನ್ನು ಮಾಡಿಕೊಂಡು ಹಿಂತಿರುಗಿದೆವು. ಇಲ್ಲಿಗೆ ಮಾತಾಪಿತೃಗಳಿಬ್ಬರ ದರ್ಶನದ ಪುಣ್ಯವೂ ನನಗೆ ಕೊನೆಗೊಂಡಿತು. ಅವರನ್ನಗಲಿದ ನನಗೆ ಸ್ವದೇಶದಿಂದ ಎಲ್ಲಿಗೋ ಗಡೀಪಾರಾದ ಹಾಗೆ ಭಾವನೆಯಾಯಿತು.

## ಭಾಷ್ಯ ಶಾಂತಿಗೆ ಪ್ರಯತ್ನ:

ಭಾಗವತರು ಆಗಾಗ್ಗೆ ಹರಿಹರಕ್ಕೆ ಬರುತ್ತಲೇ ಇದ್ದರು. ಚಿದಂಬರಯ್ಯನವರಿಗೂ ನನಗೂ ಭಾಷ್ಯಶಾಂತಿ ಮಾಡಿಸಿಕೊಳ್ಳುವದರಲ್ಲಿ ಆಸಕ್ತಿ ಇದೆ ಎಂಬುದು ಅವರಿಗೆ ತಿಳಿದು ಶೃಂಗೇರಿ ಗುರುಗಳಲ್ಲಿಯೇ ಶಾಂತಿ ಮಾಡಿಸಿಕೊಳ್ಳಿರಿ ಎಂದು ಬುದ್ಧಿ ಹೇಳಿದರು. ಇಷ್ಟರೊಳಗೆ ಜೀವಣದೀಕ್ಷಿತರು ಹಾನಗಲ್ಲ ಸೀತಾರಾಮಶಾಸ್ತ್ರಿಗಳವರ ಶಿಷ್ಯರಾದ ವಿರೂಪಾಕ್ಷಶಾಸ್ತ್ರಿಗಳಲ್ಲಿಯೇ ಶಾಂತಿ ಮಾಡಿಕೊಳ್ಳಿ ಎಂದು ಹೇಳಿದರು. ಅದಕ್ಕೆ ವಿರೂಪಾಕ್ಷಶಾಸ್ತ್ರಿಗಳವರೂ ಅನುಮತಿ ಕೊಟ್ಟರೆಂದು ಕಾಣುತ್ತದೆ. ಪೂರ್ವಭಾವಿಯಾಗಿ ನಿರ್ಣಯವಾಗಿರುವದನ್ನು ಮುರಿಯುವದು ಹೇಗೆ ? ಎಂಬ ಶಂಕೆಯನ್ನು ನಾವು ಒಡ್ಡಿದೆವು, ಅದಕ್ಕೆ ಭಾಗವತರು 'ಗುರುಗಳನ್ನು ಈ ವಿಷಯಕ್ಕೆ ತಂದೆಯಾಗಿ ಮಾಡಿಕೊಳ್ಳಿರಿ, ವಿರೂಪಾಕ್ಷಶಾಸ್ತ್ರಿಗಳವರು ಅಣ್ಣನಾಗಲಿ !

ಅವರಲ್ಲಿಯೇ ಭಾಷ್ಯವನ್ನು ಓದುವಿರಂತೆ !' ಎಂದು ಸಮಾಧಾನ ಹೇಳಿದರು. ಇಷ್ಟರಲ್ಲಿಯೇ ಕಾಲಟಿಯಲ್ಲಿ ಶಂಕರಾಚಾರ್ಯರ ಪ್ರತಿಷ್ಠೆಯಾಗುವದಿದೆಯಾದ್ದರಿಂದ ನೀವಿಬ್ಬರೂ ಅಲ್ಲಿಯೇ ಶಾಂತಿಯನ್ನು ಮಾಡಿಸಿಕೊಂಡರೆ ಮತ್ತೂ ಪ್ರಶಸ್ತವಾಗಿರುವದು ಎಂದು ಅವರು ಸೂಚಿಸಿದರು. ನಮಗೂ ಅದು ಸೂಕ್ತವೆಂದು ತೋರಿತು. ಆದರೆ ತಂದೆಯವರು ಹೋದ ವರ್ಷವಾದ್ದರಿಂದ ಈ ಕಾರ್ಯವು ಈ ಕಾಲದಲ್ಲಿ ಆಗಬಹುದೆ ? ಎಂಬ ಶಂಕೆಯೊಂದು ನನ್ನ ಮನಸ್ಸಿನಲ್ಲಿ ಮೊಳೆತು-ಕೊಂಡಿತು. ಆ ಬಗ್ಗೆ ಭಾಗವತರು ಕೂಡಲೆ ನೇರಾಗಿ ವಿರೂಪಾಕ್ಷಶಾಸ್ತ್ರಿಗಳವರಿಗೆ ಕಾಗದವನ್ನು ಬರೆಯಿಸಿದರು. 'ಉತ್ಕಟೇಚ್ಛೆಯುಳ್ಳವರಾದರೆ ಈಗಲೇ ಆಗಲಿ ದೋಷವಿಲ್ಲ' ಎಂದು ಶಾಸ್ತ್ರಿಗಳಿಂದ ಉತ್ತರವು ಬಂದಿತು.

## ಬೆಟಗೇರಿ ಕೃಷ್ಣಶಾಸ್ತ್ರಿಗಳಿಂದ ಪ್ರೋತ್ಸಾಹ :

ಈಗ್ಗೆ ನಾವು ಹರಿಹರದಲ್ಲಿಯೇ ವಾಸವಾಗಿದ್ದೆವು. ನಾನು ಪತ್ನೀ ಸಮೇತನಾಗಿದ್ದೆನು, ದಾವಣಗೆರೆಯಲ್ಲಿ ಪ್ಲೇಗಿನ ಗಲಾಟೆ ಇದ್ದಿರಬಹುದು. ನಾವಿಬ್ಬರೂ ಸೀಸನ್ ಟಿಕೆಟ್ ತೆಗೆದುಕೊಂಡು ಹರಿಹರಕ್ಕೂ ದಾವಣಗೆರೆಗೂ ರೈಲಿನಲ್ಲಿ ಹೋಗಿಬರುತ್ತಿದ್ದೆವು. ಬೆಳಗ್ಗೆ ಏಳುತ್ತಲೂ ನದಿಯಲ್ಲಿ ಸ್ನಾನವನ್ನು ಮಾಡಿ ಹರಿಹರೇಶ್ವರನ ದರ್ಶನಮಾಡಿಕೊಳ್ಳುವದು, ಮಡಿಯಲ್ಲಿಯೇ ಇದ್ದು ಪೂಜಾ ಪಾರಾಯಣ, ಸ್ತೋತ್ರಪಾಠಾದಿಗಳನ್ನು ಮಾಡಿಕೊಂಡು ದಾವಣಗೆರೆಗೆ ಹೋಗಿ ಬರುತ್ತಿದ್ದೆವು. ಸಾಯಂಕಾಲ ಮತ್ತೇ ಹರಿಹರೇಶ್ವರನ ದರ್ಶನಮಾಡಿಕೊಂಡು ಮನೆಗೆ ಬಂದು ಮಲಗಿಕೊಳ್ಳುತ್ತಿದ್ದೆವು. ಈ ಕಾಲಕ್ಕೆ ಸರಿಯಾಗಿ ಬೆಟಗೇರಿಯ ಕೃಷ್ಣಶಾಸ್ತ್ರಿಗಳೆಂಬ ವಿದ್ವಾಂಸರೊಬ್ಬರು ಹರಿಹರಕ್ಕೆ ಬಂದರು. ಅವರಿಗಿಂತ ಮೊದಲೇ ಬ್ರ॥ಶ್ರೀ॥ವಿರೂಪಾಕ್ಷಶಾಸ್ತ್ರಿಗಳನ್ನು ಒಂದೆರಡು ಸಲ ಹರಿಹರದಲ್ಲಿ ನೋಡಿರಬೇಕೆಂದು ಕಾಣುತ್ತದೆ. ಹರಿಹರವು ಕ್ಷೇತ್ರವಾದ್ದರಿಂದ ಅಲ್ಲಿ ನದಿಯ ಸ್ನಾನ, ಹರಿಹರೇಶ್ವರನ ದರ್ಶನ - ಇವುಗಳ ಲಾಲಸೆಯಿಂದ ಅನೇಕ ಕರ್ಮಠರೂ, ವಿದ್ವಾಂಸರೂ ಅಲ್ಲಿಗೆ ಬರುತ್ತಲೇ ಇದ್ದರು. ವಿರೂಪಾಕ್ಷಶಾಸ್ತ್ರಿಗಳವರು ಕೇವಲ ಸ್ನಾನಾರ್ಥವಾಗಿಯೇ ಹರಿಹರದಲ್ಲಿಳಿದು ಮುಂದಕ್ಕೆ ಪ್ರಯಾಣಮಾಡಿದ್ದರು ; ದೇವಸ್ಥಾನದಲ್ಲಿ ಅವರು ಮಾಡಿದ ಒಂದೆರಡು ಉಪದೇಶಗಳು ನಮ್ಮ ಮನಸ್ಸಿನಲ್ಲಿ ಮೂಡಿದ್ದವು. ಅವರ ಬ್ರಹ್ಮವರ್ಚಸ್ಸು, ಕರ್ಮಶ್ರದ್ಧೆ ಇವು ಅನ್ಯಾದೃಶವಾಗಿದ್ದವು. ಬ್ರ॥ಶ್ರೀ॥ ಕೃಷ್ಣಶಾಸ್ತ್ರಿಗಳವರು ಕರ್ಮದಲ್ಲಿ ಹೆಚ್ಚಿನ ಶ್ರದ್ದೆಯುಳ್ಳವರೇ ಆದರೂ, ಅವರ ವೇಷವು ತೀರ ಸಾಮಾನ್ಯವಾಗಿತ್ತು, ಅವರ ಹೆಸರನ್ನೇ ಅವರಿವರಿಂದ ಕೇಳಿ ದರ್ಶನಕ್ಕೆ ನಾವು ಹೋದಾಗ ಅವರು ಒಂದು ಸಾಮಾನ್ಯವಾದ ಪಂಚೆಯನ್ನುಟ್ಟು ಕಸೆ

ಅಂಗಿಯನ್ನು ತೊಟ್ಟಿದ್ದರು. ಅಂಗಿಯ ಮೇಲೆ ಹೊದೆಯುವ ಒಂದು ಧೋತರವನ್ನು ಕಂಕುಳಬರುವಂತೆ ಹಾಕಿಕೊಂಡಿದ್ದರು. ತಲೆಯ ಮೇಲೆ ರಾಮನಾಮವನ್ನು ಅಚ್ಚುಮಾಡಿದ್ದ ಒಂದು ರುಮಾಲು ಇತ್ತು, ಬಳಿಯಲ್ಲಿ ಒಂದು ಹಸಿಬೆಯ ಚೀಲವಿತ್ತು. ನಮ್ಮ ಕಡೆ ವೈದಿಕರು ಅಂಗಿಯನ್ನು ಹಾಕಿಕೊಳ್ಳುತ್ತಿದ್ದದ್ದು ಬಹಳ ಅಪರೂಪ. ಆದ್ದರಿಂದ ಈ ವೇಷದಲ್ಲಿ ಒಬ್ಬ ಮಹಾವ್ಯಕ್ತಿಯ ದರ್ಶನವು ನಮಗೆ ಆಗಿದೆ ಎಂದು ಮೊದಲು ಅನ್ನಿಸಲಿಲ್ಲ. ಆದರೆ ಸ್ವಲ್ಪ ಹೊತ್ತು ಮಾತನಾಡಿದ ಬಳಿಕ ಅವರೊಬ್ಬ ಗಣ್ಯಮಹನೀಯರೆಂಬುದು ಮನಸ್ಸಿಗೆ ಹೊಳೆಯಿತು. ಕೃಷ್ಣಶಾಸ್ತ್ರಿಗಳನ್ನು ವಿಚಾರಿಸಿದ್ದರಲ್ಲಿ ಅವರೂ ಮಹಾಭಾಗವತರ ಸೂಚನೆಯನ್ನು ಅನುಮೋದಿಸಿದರು. ವಿರೂಪಾಕ್ಷಶಾಸ್ತ್ರಿಗಳವರು ತಾವು ಸ್ವತ: ಸೀತಾರಾಮಶಾಸ್ತ್ರಿಗಳಲ್ಲಿ ಶಾಂತಿಮಾಡಿಸಿಕೊಂಡು ಶೃಂಗೇರಿಯ ಗುರುಗಳಲ್ಲಿ ವೇದಾಂತ ಪಾಠವನ್ನು ಮಾಡಿರುತ್ತಾರೆ. ಆದ್ದರಿಂದ ಗುರುಗಳಲ್ಲಿ ಶಾಂತಿಯನ್ನು ಮಾಡಿಕೊಂಡು ಶಾಸ್ತ್ರಿಗಳಲ್ಲಿ ಪಾಠವಾಗುವದರಲ್ಲಿ ಅನೌಚಿತ್ಯವಿಲ್ಲವೆಂದು ತಿಳಿಸಿದರು. 'ನಾನು ಕಾಲಟಿಗೆ ಹೋಗುವವನಿದ್ದೇನೆ ; ನೀವು ಬಂದರೆ ಅವಶ್ಯವಾಗಿ ಜೊತೆಯಲ್ಲಿಯೇ ಹೋಗೋಣ, ನಾನು ನಿಮಗೆ ಭಾಷ್ಯಶಾಂತಿಮಾಡಿಸುವಂತೆ ಗುರುಗಳಲ್ಲಿ ಕೇಳಿಕೊಳ್ಳುತ್ತೇನೆ' ಎಂದರು. ಅವರ ಸಾಧುವೇಷ, ಮೃದುವಾದಭಾಷೆ, ಧರ್ಮ ಸೂಕ್ಷ್ಮದನಿರ್ಣಯ, ಗುರುಗಳಲ್ಲಿ ನಮಗಾಗಿ ಪ್ರಾರ್ಥನೆ ಮಾಡಿಕೊಡುವೆನೆಂಬ ನಿರಭಿಮಾನದ ವಾಗ್ದಾನ - ಇವೆಲ್ಲಾ ನಮ್ಮ ಮನಸ್ಸನ್ನು ಸೂರೆಗೊಂಡವು. ಈ ಸಮಯವನ್ನು ಉಪಯೋಗಿಸಿಕೊಳ್ಳದೆ ಇರುವದು ತರವಲ್ಲ ಎಂದು ನಮ್ಮ ನಿಶ್ಚಯವಾಯಿತು.

## ಕಾಲಟಿಗೆ ಪ್ರಯಾಣ :

ಸರಿ, ಕೈಯಲ್ಲಿದ್ದ ಹಣವನ್ನು ಜೊತೆಗೊಳಿಸಿಕೊಂಡು ನಾನೂ ಚಿದಂಬರಯ್ಯನವರೂ ಹೀಗೆ ದಾವಣಗೆರೆಯಲ್ಲಿ ಅವರು ಊಟ ಮಾಡುತ್ತಿದ್ದ (ಮನೆಯ)ಲಕ್ಷ್ಮೀಬಾಯಿಯ ತಮ್ಮ ಒಬ್ಬರು ಹೀಗೆ ಎಲ್ಲರೂ ಒಂದೇ ಸ್ಕೂಲಿನಲ್ಲಿ ಉಪಾಧ್ಯಾಯರು, ಮೂವರೂ ಹೊರಟೆವು. ಸ್ಕೂಲಿನಲ್ಲಿ ಮೂವರೂ ಉಪಾಧ್ಯಾಯರು ಒಟ್ಟಿಗೆ ರಜತೆಗೆದುಕೊಳ್ಳುವದು ಅಷ್ಟು ಉಚಿತವಾಗಿರಲಿಲ್ಲ ; ಇದರ ಜೊತೆಗೆ ಇಷ್ಟರಲ್ಲಿಯೇ ದಿವಾನರು ದಾವಣಗೆರೆಗೆ ದಯಮಾಡಿಸುವವರಿದ್ದಾರೆಂಬ ವದಂತಿ ಬೇರೆಯಿತ್ತು, ಅದು ಯಾವದನ್ನೂ ಗಣಿಸದೆ ಬೆಂಗಳೂರಿನಲ್ಲಿ ಸರ್ಕಲ್‌ಇನ್‌ಸ್ಪೆಕ್ಟರವರನ್ನು ಕಂಡು ಅಪ್ಪಣೆ ಪಡೆದುಕೊಂಡು ಹೋಗುವದೆಂದು ನಿಶ್ಚಯಿಸಿದೆವು. ಕೃಷ್ಣಶಾಸ್ತ್ರಿಗಳು ರೈಲಿನ ಸ್ಟೇಷನ್ನುಗಳ ಅನುಕ್ರಮಣಿಕೆಯ ಪಟ್ಟಿಯನ್ನು

ಬರೆಯಿಸಿಕೊಂಡದ್ದು ನಮ್ಮ ದೃಷ್ಟಿಯಲ್ಲಿ ಸ್ವಲ್ಪ ವಿಚಿತ್ರವಾಗಿತ್ತು. ಬೆಳಗ್ಗೆ ಮಧ್ಯಾಹ್ನ ಸಾಯಂಕಾಲ - ಈ ಮೂರುಕಾಲಗಳಲ್ಲಿ ಸ್ನಾನಸಂಧ್ಯೆಗಳಿಗೆ ಅನುಕೂಲ ವಿರುವಂತೆ ನದಿ, ಬಾವಿ - ಮುಂತಾದ ಜಲಾಶಯಗಳಿರುವ ಸ್ಟೇಶನ್ನುಗಳನ್ನು ಮಾತ್ರ ಅವರು ಗುರುತುಮಾಡಿಸಿಕೊಂಡರೇ ಹೊರತು ಊಟ ಉಪಚಾರಗಳ ವಿಚಾರವನ್ನು ಮನಸ್ಸಿಗೇ ತರಲಿಲ್ಲ! ನಾನು ಪರಸ್ಥಳಕ್ಕೆ ಕೈಯಲ್ಲಿ ಏನಾದರೂ ಲಘ್ವಾಹಾರವಿರುವದು ಒಳ್ಳೆಯದೆಂದು ಕೆಲವು ರವೆಉಂಡೆಗಳನ್ನು ಮಾಡಿಸಿಕೊಂಡು ಹೊರಟಿದ್ದೆನು. ಅವುಗಳು, ದಾರಿಯಲ್ಲಿ ಕಂಡ ಹಣ್ಣುಹಂಪಲುಗಳು ಇಷ್ಟು ತೆಗೆದುಕೊಳ್ಳುವದು ಹೊರತು ಮುಂದೆ ನಾವು ದಾರಿಯಲ್ಲಿ ಊಟಮಾಡುವ ಪ್ರಸಕ್ತಿಯೇ ಬರಲಿಲ್ಲ !

ಬೆಂಗಳೂರಿನಲ್ಲಿ ತೋಟದಪ್ಪನವರ ಛತ್ರದಲ್ಲಿ ಇಳಿದುಕೊಂಡು ಮುಂದಕ್ಕೆ ಪ್ರಯಾಣ ಬೆಳೆಯಿಸಿದೆವು. ಇನ್‌ಸ್ಪೆಕ್ಟರನ್ನು ನಾವು ಕಾಣುವದು ಆಗಲೇ ಇಲ್ಲ. ಪ್ಲೇಗುಕಾಲವಾದ್ದರಿಂದ ಜೋಲಾರುಪೇಟೆಯಲ್ಲಿ ಅನೇಕರನ್ನು ಹಿಡಿದು ನಿಲ್ಲಿಸಿದರು ; ಗುರ್ವನುಗ್ರಹದಿಂದ ನಮಗೇನೂ ಅಡ್ಡಿಯಾಗಲಿಲ್ಲ. ಆವೂರಿನಲ್ಲಿಯೇ ಇರಬಹುದು, ಒಂದು ತೋಟದ ಒಳಗಿದ್ದ ಬಾವಿಯೊಳಗೆ ಸ್ನಾನವನ್ನು ಮಾಡಿ ಫಲಾಹಾರ ಮಾಡಿದೆವು. ತೋಟದವನು ಯಾರೋ ಹೇಳದೆ ನುಗ್ಗಿದ್ದಾರೆಂದು ಮೊದಲು ಸಿಟ್ಟು ಮಾಡಿಕೊಂಡನಾದರೂ ಶಾಸ್ತ್ರಿಗಳ ಶಾಂತಿಯುತವಾದ ಮುಖವನ್ನು ನೋಡಿ ತೋಟದಿಂದ ಎರಡು ಎಳನೀರನ್ನು ತಂದುಕೊಟ್ಟನು. ಮುಂದೆ ಷೋರನೂರಿನಲ್ಲಿ ಮೇಲುಗಾಡಿಗೆ ಬದಲಾಯಿಸ ಬೇಕಾಗಿದ್ದದ್ದರಿಂದ ಎಕ್ಸೆಸ್ ಟಿಕೆಟ್ ಚಾರ್ಜುಕೊಡಬೇಕಾಯಿತು. ನಾನು ಅಲ್ಲಿ ಟಿಕೆಟ್ ಕೊಂಡು ಕೊಳ್ಳುವಾಗ ದುಡ್ಡಿನ ಚೀಲವನ್ನೇ ಮರೆತು ಬಂದುಬಿಟ್ಟೆನು. ಅದರ ಅರಿವೇ ನನಗೆ ಇರಲಿಲ್ಲ. ನಮ್ಮ ಮೂವರ ಹಣವನ್ನು ಹಿಮ್ಮೇಣಿಯ (ಹಮ್ಮಿಣಿ-ಹಣ ಇಡುವ ಚೀಲ-ಥೈಲಿ) ಚೀಲಕ್ಕೆ ಹಾಕಿ ನನ್ನ ಕೈಯಲ್ಲಿ ಕೊಟ್ಟಿದ್ದರು ; ಅದನ್ನು ನಾನು ಸೊಂಟಕ್ಕೆ ಕಟ್ಟಿಕೊಂಡಿದ್ದೆ. ಇನ್ನೇನು ರೈಲುಗಾಡಿ ಹೊರಡಬೇಕು, ಅಷ್ಟರಲ್ಲಿ ಒಬ್ಬ ತರುಣನು ನಮ್ಮ ಬಳಿಗೆ ಬಂದು ನಿಮ್ಮದು ಯಾವುದಾದರೂ ಪದಾರ್ಥವು ಹೋಗಿದೆಯೆ ! ಎಂದು ಕೇಳಿದನು, ನನಗೇನೂ ಅರ್ಥವಾಗಲಿಲ್ಲ, ಚಿದಂಬರಯ್ಯನವರು 'ದುಡ್ಡಿನ ಚೀಲವಿದೆಯಷ್ಟೆ !' ಎನ್ನಲು ನಾನು ಸೊಂಟವನ್ನು ಮುಟ್ಟಿಕೊಂಡು ನೋಡಿ ಅವಾಕ್ಕಾದೆನು. ಪ್ರಯಾಣಕ್ಕೆ ಹೊರಟಾಗ ನನ್ನ ಕೈಯಲ್ಲಿದ್ದದ್ದು ನನ್ನ ಹಣವಲ್ಲ ; ಸ್ಕೂಲು ಹುಡುಗರಿಗೆ ಪುಸ್ತಕಗಳನ್ನು ತರಿಸಿಕೊಡುವದಕ್ಕೆಂದು ಮುಂಗಡವಾಗಿ ವಸೂಲಿ ಮಾಡಿದ್ದ ರೂಪಾಯಿಗಳೇ ನನಗೆ ಈಗ್ಗೆ ಚಾರ್ಜಿಗಾಗಿದ್ದವು. ಇನ್ನೂ ಇಬ್ಬರ ಹಣಕ್ಕೆ ಬೇರೆ ಹೊಣೆಯಾಗಿದ್ದೆ. ಇದೆಲ್ಲ ಕ್ಷಣಾರ್ಧದಲ್ಲಿ ಮಿಂಚಿ ನನ್ನ ಮುಖವು

ಬಿಳಿಚಿಕೊಂಡದ್ದನ್ನು ಕಂಡು ಆ ತರುಣನು 'ತೆಗೆದುಕೊಳ್ಳಿ' ಎಂದು ಹಣದ ಚೀಲವನ್ನು ಕೊಟ್ಟನು. ಅವನ ಪ್ರಾಮಾಣಿಕತೆಯನ್ನು ಎಷ್ಟುಕೊಂಡಾಡಿದರೂ ತೀರದು. ಅವನಿಗೆ ಯಥಾಸಂಭವ ವಾಗಿ ಪಾರಿತೋಷಕವನ್ನಿತ್ತೆವು. ಗುರುಗಳ ಅನುಗ್ರಹವು ನಮ್ಮ ಮೇಲೆ ಇದೆ ಎಂಬುದಕ್ಕೆ ಇದೂ ಒಂದು ನಿದರ್ಶನವಾಯಿತು. ಕ್ರಮವಾಗಿ ಕಾಲಟಿಯ (ಆಳ್ವಾಯಿ) ಸ್ಟೇಷನ್ನಿಗೆ ಬಂದಿಳಿದೆವು. ಅಲ್ಲಿ ಒಂದು ಬಂಡಿಯನ್ನು ಬಾಡಿಗೆಗೆ ಮಾಡಿಕೊಂಡು ಮುಂದಕ್ಕೆ ಹೋಗಬೇಕಾಯಿತು. ಶಾಸ್ತ್ರಿಗಳವರು ಅವನ ಕೊರಳಲ್ಲಿದ್ದ 'ಕ್ರಾಸ್' (ಸ್ವಸ್ತಿಕ) ಚಿಹ್ನೆಯನ್ನು ಕಂಡು 'ಇದೇನು' ಎಂದು ವಿಚಾರಿಸಿದರು. ಅವನ ಮೇಲೆ ಮರುಕವು ಬಂದು ನೀನು ಮತ್ತೆ ಹಿಂದು ಆಗಬೇಕು ; ನಮ್ಮ ಧರ್ಮದಲ್ಲಿ ಏನು ಕಡಿಮೆಯಿದೆ ? ಏತಕ್ಕಾಗಿ ಪರಕೀಯರ ಮತಕ್ಕೆ ಸೇರಿದೆ ?' ಎಂದು ಮುಂತಾಗಿ ಬೋಧಿಸಿದರು. ತಾವು ಒಂದಾನೊಂದು ಮಠದ ಮಠಾಧಿಪತಿಗಳೊಡನೆ ಸಂಚಾರಕ್ಕೆ ಹೋಗಿದ್ದಾಗ ಒಂದು ಗ್ರಾಮದವರು ಯಾವಾಗಲೂ ಹೆಸರಿಗೆ ಮಾತ್ರ ಕ್ರಿಸ್ತಿಯನ್ನಾರಾಗಿ ಯಾವ ಸಂಸ್ಕಾರವೂ ಇಲ್ಲದೆ ಇದ್ದದ್ದು, ಶ್ರೀಗಳಲ್ಲಿ ತೀರ್ಥವನ್ನು ಕೊಡಿಸಬೇಕೆಂದು ಕೇಳಿಕೊಂಡದ್ದು, ಅವರು ಶ್ರೀಗಳ ಅನುಗ್ರಹದಿಂದ ಶುದ್ಧರಾಗಿ ಮೊದಲಿನಂತೆ ಗ್ರಾಮದೇವತೆಯ ಪೂಜೆಯೇ ಮುಂತಾದ ಆಚಾರಗಳನ್ನು ಕೈಕೊಂಡದ್ದು ಮುಂತಾದ ಪೂರ್ವವೃತ್ತಾಂತವನ್ನು ಒಂದಿಷ್ಟು ನಮಗೆ ತಿಳಿಸಿದರು. ಶಾಸ್ತ್ರಿಗಳ ಧೈರ್ಯ, ಕೆಳಗಿನ ಜಾತಿಯ ಜನರಲ್ಲಿ ಮರುಕ, ಧರ್ಮ ಪ್ರಚಾರದಲ್ಲಿ ಆಸಕ್ತಿ - ಇವುಗಳೆಲ್ಲವೂ ನಮಗೆ ಈ ಪ್ರಸಂಗದಿಂದ ತಿಳಿದುಬಂತು.

## ಆಚಾರ್ಯ ಮೂರ್ತಿ ಪ್ರತಿಷ್ಠಾಪನೆಯ ಸಂಕ್ಷಿಪ್ತ ಪೂರ್ವೇತಿಹಾಸ

ಕಾಲಟಿ ಎಂಬ ಹಳ್ಳಿಯನ್ನು ಕಂಡುಹಿಡಿದು, ಅಲ್ಲಿ ಶಂಕರರ ಮೂರ್ತಿಯನ್ನು ಪ್ರತಿಷ್ಠೆಮಾಡಬೇಕೆಂಬ ಇಚ್ಛೆಯು ಶೃಂಗೇರಿಯ ಸ್ವಾಮಿಗಳ ಮನಸ್ಸಿನಲ್ಲಿ ಮೊಳೆತುಕೊಳ್ಳುವ ಕಾಲಕ್ಕೆ ಸರಿಯಾಗಿ ಸರ್. ಕೆ. ಶೇಷಾದ್ರಿ ಅಯ್ಯರರು ಶೃಂಗೇರಿಗೆ ಗುರುಗಳ ದರ್ಶನಕ್ಕೆಂದು ಬಂದರಂತೆ. ಅವರು ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ಮಲಬಾರ್ ಪ್ರಾಂತ್ಯಕ್ಕೆ ಹೋಗಿ ವಿಚಾರಿಸುವಲ್ಲಿ ತಿರುವಾಂಕೂರು ಸಂಸ್ಥಾನದ ಕೊಟ್ಟಾಯಮ್ ಜಿಲ್ಲೆಯಲ್ಲಿದ್ದ ಒಂದು ನಿರ್ಜನ ಪ್ರದೇಶವೇ ಶಂಕರರ ಜನ್ಮಭೂಮಿಯಾಗಿರಬೇಕೆಂದು ತಿಳಿದು ಬಂತು ; ಶಂಕರವಿಜಯದಲ್ಲಿ ವರ್ಣಿಸಿದ್ದ ಸ್ಥಳದ ಗುರುತುಗಳೆಲ್ಲ ಅಲ್ಲಿದ್ದವು. ಶಂಕರರು ಹುಟ್ಟಿದಸ್ಥಳವೆಂದು ಗೊತ್ತಾದ ಭಾಗದಲ್ಲಿದ್ದ ಗಿಡಗಂಟೆಗಳನ್ನು ತೆಗೆಯಿಸಿ, ಅಲ್ಲಿ ಒಬ್ಬ ಶಾಸ್ತ್ರಿಗಳ ಮೂಲಕ ಶಂಕರಜಯಂತಿ ಮಹೋತ್ಸವವನ್ನು ನಡೆಸಲಾಗುತ್ತಿತ್ತು. ವಿ.ಪಿ. ಮಾಧವರಾಯರು

ಟ್ರಾವಂಕೂರು ದಿವಾನರಾದ ಸಂದರ್ಭವನ್ನು ಸಾಧಿಸಿ, ದಿವಾನ್ ಬಹದ್ದೂರ್ ರಾಮಚಂದ್ರಅಯ್ಯರ್ ಮತ್ತು ಶೃಂಗೇರಿಯ ಮಠದ ಏಜೆಂಟರುಗಳನ್ನು ಟ್ರಾವಂಕೂರಿಗೆ ಕಳುಹಿಸಲಾಯಿತು, ವಿ.ಪಿ. ಮಾಧವರಾಯರ ಅನುಮತಿಯನ್ನು ಪಡೆದು ಸ್ಥಲಪರೀಕ್ಷೆಯನ್ನು ಮಾಡಿದ್ದರಲ್ಲಿ ಅಲ್ಲಿ ಪೂರ್ಣಾನದಿ, ಹತ್ತಿರವಿದ್ದ ಕೃಷ್ಣದೇವಾಲಯ ಇವುಗಳಲ್ಲದೆ ನಂಬೂದ್ರಿ ಸಂನ್ಯಾಸಿಗಳೊಬ್ಬರ ಮಠವೂ ಇತ್ತು. ಮಠಕ್ಕೆ ಸುತ್ತಲೂ ಇದ್ದ ಜಮೀನುಗಳಿಂದ ಸ್ವಲ್ಪ ಕಂದಾಯವು ಸಲ್ಲುತ್ತಿತ್ತು. ರೈತರುಗಳ ಹಕ್ಕನ್ನು ತಪ್ಪಿಸುವದು ಸಾಧ್ಯವಾಗಲಿಲ್ಲವಾದರೂ ದೈವಾಧೀನವಾಗಿ ಆಗತಾನೆ ಭಾರತದ ಸರಕಾರದವರು ಪ್ರಾಚೀನ ಸಂಸ್ಥೆಗಳ ಮತ್ತು ಸ್ಮಾರಣದ ಶೇಷಗಳನ್ನು ರಕ್ಷಿಸುವುದಕ್ಕೆಂದು ಆಚರಣೆಗೆ ತಂದಿದ್ದ ಶಾಸನದ ಬಲದಿಂದ ಟ್ರಾವಂಕೂರು ಮಹಾರಾಜರು 'ಕಾಲಟಿ ಸಂಕೇತ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿ ಆ ಭೂಪ್ರದೇಶವನ್ನೆಲ್ಲ ಸ್ವಾಧೀನಪಡಿಸಿಕೊಂಡು, ಶೃಂಗೇರಿ ಸ್ವಾಮಿಗಳಿಗೆ ಒಪ್ಪಿಸಿದರು. 1907ನೆ ಪರಾಭವ ಸಂವತ್ಸರದಲ್ಲಿ ಸ್ವಾಮಿಗಳು ಕಾಲಡಿಯ ಕಡೆಗೆ ಸಂಚಾರ ಹೊರಟರು. ಗುರುಪೀಠದ ಮರ್ಯಾದೆಗೆ ತಕ್ಕಂತೆ ಪಲ್ಲಕ್ಕಿ ಹೊರುವವರು, ಆನೆ, ಕುದುರೆ ಸವಾರರು, ಪದಾತಿಗಳು, ಹಸುಗಳು, ಎತ್ತುಗಳು, ಸೇವಕರು, ಬ್ರಾಹ್ಮಣಾऽಬ್ರಾಹ್ಮಣ ಪರಿವಾರದವರು - ಇವರುಗಳನ್ನೆಲ್ಲ ಕರೆದುಕೊಂಡು, ದಾರಿಯಲ್ಲಿ ಅಲ್ಲಲ್ಲಿ ಅಗ್ರಹಾರಗಳಲ್ಲಿ ಎರಡು ಮೂರುದಿನಗಳವರೆಗಾದರೂ ತಂಗಿ ಕಾಲಟಿಯನ್ನು ಮುಟ್ಟುವದಕ್ಕೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದೆ ಬೇಕಾಗುವದೆಂದು ನಿರ್ಣಯಿಸಲಾಗಿತ್ತು. ಆದ್ದರಿಂದ ರಿಟೈರ್ಡ್ ಚೀಫ್‌ಕೋರ್ಟು ಜಡ್ಜಿಗಳಾದ ದಕ್ಷರಾದ ಇಂಜಿನಿಯರಾದ ಸುಬ್ಬರಾಯ ಅಯ್ಯರವರೂ 1908ರಲ್ಲಿ ಮೈಸೂರಿನಿಂದ ಹೊರಟರು. ಕಲ್ಲಾಡಿಕುರು ಅಗ್ರಹಾರದ ಕೆಲವು ದೊಡ್ಡ-ಮನುಷ್ಯರುಗಳು 200 ಜನ ಕೂಲಿಗಳನ್ನು ಕರೆತಂದರು. ಕಾಲಟಿ ಪ್ರದೇಶದಲ್ಲಿದ್ದ ಗಿಡಗಂಟೆಗಳನ್ನು ತೆಗೆದು ಹಾಕಿಸಿ ನಡೆಯುವದಕ್ಕೆ ತಕ್ಕಂತೆ ದಾರಿಗಳನ್ನು ಮಾಡಿಸಿ, ಪೂರ್ಣಾನದಿಗೆ ಉತ್ತರದಲ್ಲಿ ದಕ್ಷಿಣಾಭಿಮುಖವಾಗಿ ಎರಡು ಸಣ್ಣ ದೇವಾಲಯಗಳನ್ನು ನಿರ್ಮಿಸಿದರು. ಆಚಾರ್ಯರ ತಾಯಿಯವರ ಅಂತ್ಯಕ್ರಿಯೆ ಆದ ಸ್ಥಳವೆಂದು ಕಿಂವದಂತಿಯಿದ್ದ ಪ್ರದೇಶದ ಹತ್ತಿರ ಶಾರದಾಂಬೆಗೆ ದೇವಾಲಯವನ್ನು ಗೊತ್ತುಮಾಡಲಾಯಿತು. ಅದಕ್ಕೆ ಸ್ವಲ್ಪ ಪಶ್ಚಿಮದ ಕಡೆಗೆ ಆಚಾರ್ಯರ ದೇವಾಲಯವನ್ನು ನಿರ್ಮಿಸಲಾಯಿತು. ಪೂರ್ಣಾನದಿಯ ದಂಡೆಯು ಇಲ್ಲಿ ಬಹಳ ಕಡಿದಾಗಿದ್ದದ್ದರಿಂದ ಮೂವತ್ತೆರಡು ಮೆಟ್ಟಿಲುಗಳ ಸೋಪಾನವನ್ನು ಏರ್ಪಡಿಸಿದರು. ದೇವಾಲಯಗಳ ಪೂರ್ವಕ್ಕೆ ಶ್ರೀ ಶ್ರೀಗಳವರಿಗಾಗಿ ಒಂದು ಮಠವು ಸಿದ್ಧವಾಯಿತು, ಸ್ವಾಮಿಗಳವರು ಅಲ್ಲಲ್ಲಿ ಜನರಿಂದ ಸತ್ಕೃತರಾಗಿ ಚಾತುರ್ಮಾಸ್ಯಕ್ಕೆ ಯೋಗ್ಯವಾದ

ಸ್ಥಳಗಳಲ್ಲಿ ನಿಲ್ಲುತ್ತಾ ಕಾಲಟಿಗೆ ಐದು ಮೈಲಿ ದೂರದಲ್ಲಿರುವ ಪೆರಂಬವೂರೆಂಬ ಸ್ಥಳಕ್ಕೆ ಬಂದು ಮುಟ್ಟುವ ಹೊತ್ತಿಗೆ ರಾಮಚಂದ್ರಯ್ಯರವರೂ, ಮಠದ ಏಜೆಂಟರೂ ಬಂದು ಎಲ್ಲವೂ ಸುಸಜ್ಜಿತವಾಗಿದೆ ಎಂದು ಬಿನ್ನವಿಸಿದರು. ಉತ್ಸವಕ್ಕೆ ಹತ್ತುದಿನಗಳು ಮುನ್ನವೇ ಸ್ವಾಮಿಗಳು ಕಾಲಟಿಗೆ ದಯಮಾಡಿಸಿದರು.

## ಕಾಲಟಿ ದರ್ಶನ :

ನಾವು ರೈಲಿನಿಂದ ಹೊರಟು ಉದ್ದಿಷ್ಟಸ್ಥಳವನ್ನು ಸೇರಿದಾಗ ಶಂಕರಾಚಾರ್ಯರ ಪ್ರತಿಷ್ಠೆಗಾಗಿಯೇ ಸಜ್ಜುಗೊಳಿಸಲ್ಪಟ್ಟಿದ್ದ ಆರುನೂರು ಬಿದಿರು ಮನೆಗಳ 'ಕಾಲಟೀ' ನಗರವನ್ನು ನಾವು ಕಂಡೆವು. ಅನೇಕ ರಾಜರುಗಳು ಕೂಡ ಅಲ್ಲಿಗೆ ಬರುವದಕ್ಕೆ ಏರ್ಪಾಡುಮಾಡಲಾಗಿತ್ತು. ನಾವು ಇಳಿದುಕೊಂಡ ಮನೆಯು ಯಾರೋ ಒಬ್ಬ ಮಹಾರಾಜರಿಗೆಂದು ಸಿದ್ಧವಾಗಿದ್ದು, ಅವರು ಬಾರದೇ ಇದ್ದದ್ದರಿಂದ ಖಾಲಿಯಾಗಿತ್ತು. ಆಗ ಹೊಸದಾಗಿ ನಿರ್ಮಿತವಾಗಿದ್ದ ಆ ಕ್ಷೇತ್ರವು ಒಂದು ರಮಣೀಯವಾದ ದೃಶ್ಯವಾಗಿತ್ತು. ಟ್ರಾವಂಕೂರು ಮಹಾರಾಜರ ಅಪ್ಪಣೆಯಿಂದ ಏರ್ಪಟ್ಟಿದ್ದ ಪೋಸ್ಟಾಫೀಸು, ಆಸ್ಪತ್ರೆ - ಮುಂತಾದ ವ್ಯವಹಾರ ಸ್ಥಳಗಳು, ಒಂದೊಂದು ಮನೆಗೂ ಚೀಟಿ ಹಾಕಿ ಸಂಖ್ಯೆ ಹಾಕಿದ್ದರು, ಬೀದಿಗಳನ್ನು ಗುಡಿಸುವದಕ್ಕೆ ಏರ್ಪಾಡು, ನಾಲ್ಕು ಕಡೆಗಳಲ್ಲಿಯೂ ಭೋಜನ ಶಾಲೆಗಳು, ನದಿಗೆ ಬಹಳ ಸಮೀಪವಾಗಿ ಶಂಕರ ದೇವಾಲಯ, ಶಾರದಾ ದೇವಾಲಯ, ದೇವಾಲಯಗಳ ನಡುವೆ ವಿಶಾಲವಾದ ಯಾಗಮಂಟಪ - ಇವೆಲ್ಲ ನೋಡುವಂತೆ ಇದ್ದವು. ಬಂದ ವಿದ್ವಾಂಸರು, ದೊಡ್ಡ ಮನುಷ್ಯರು, ನಿಯಮಸ್ಥರು - ಇವರುಗಳಿಗೆ ಯಥಾಯೋಗ್ಯವಾಗಿ ಬೇರೆಬೇರೆ ಕಡೆಗಳಲ್ಲಿ ಲವಾಜಮೆ ಸಲ್ಲುತ್ತಿತ್ತು. ತಿರುವಾಂಕೂರು ಸಂಸ್ಥಾನ ಕೊಟ್ಟಾಯಮ್ ವಿಭಾಗದ ದಿವಾನ ಪೇಷ್ಕಾರರು ತಮ್ಮ ನೌಕರರೊಡನೆ ಸ್ವತಃ ಸಂನಿಹಿತರಾಗಿದ್ದರು. ನಾವು ಬಂದದ್ದು ಸಾಯಂಕಾಲಕ್ಕೆ, ಕೂಡಲೆ ಸ್ನಾನವನ್ನು ಮಾಡಿ, ಸ್ವಾಮಿಗಳ ದರ್ಶನವನ್ನು ಪಡೆದವು. ಅವರು ಶಾಸ್ತ್ರಿಗಳನ್ನು ಗುರುತಿಸಿ ಆದರದಿಂದ ಮರಾಠಿಯಲ್ಲಿ ಮಾತನಾಡಿಸಿದರು. ಎರಡು ದಿನಗಳವರೆಗೆ ಉಪವಾಸ ಮಾಡಿದ್ದ ನಾವು ಚೆನ್ನಾಗಿಯೇ ಊಟ ಮಾಡಿದೆವು, ಅಲ್ಲಿಯ ಅಕ್ಕಿ ಬಹಳ ಹಗುರವೆಂದು ಕಾಣುತ್ತದೆ ; ಮೊರಮೊರವಾಗಿ ಸುರಿದರೂ ಸಾರು ಹಾಕಿ ಕಲೆಸಿದರೆ ಪ್ರಮಾಣದಲ್ಲಿ ಕುಗ್ಗಿಹೋಗುತ್ತಿತ್ತು. (ಸಾಧ್ಯವಾದರೆ ಶ್ರೀಕಂಠಶಾಸ್ತ್ರಿಗಳು ಬರೆದಿರುವ ಸ್ವಾಮಿಗಳ ಚರಿತ್ರೆಯಿಂದ ಇದಕ್ಕೆ ವಿವರವನ್ನು ಸಂಪಾದಿಸಬೇಕು). ಆಗ ಕಾಲಟಿಯು ಒಂದು ದೊಡ್ಡ ಬ್ರಾಹ್ಮಣ ನಗರಿಯಾಗಿತ್ತೆನ್ನ ಬಹುದು. ನದಿಯಲ್ಲಿ ಉದ್ದಕ್ಕೂ ದಂಡೆಹತ್ತಿದಂತೆ ಎಷ್ಟುದೂರನೋಡಿದರೂ ಭಸ್ಮದ ಬುರುಡೆಗಳು, ಮಡಿಚೀಲ, ರುದ್ರಾಕ್ಷಿ, ದರ್ಭೆ -

ಮುಂತಾದವುಗಳು ಕಾಣಬರುತ್ತಿದ್ದವು ಉದ್ದಕ್ಕೆ. ಜನರು ಪರಶುರಾಮ ಕ್ಷೇತ್ರದ ಸಂಕಲ್ಪವನ್ನು ಹೇಳಿಕೊಂಡು ಸ್ನಾನಮಾಡುತ್ತಿದ್ದರು. ಆ ಬೇಸಗೆ ಕಾಲದಲ್ಲಿಯೂ ಒಂದು ಮೊಳದಷ್ಟು ಇಳಿದ ಮಾತ್ರದಿಂದ ನದಿಯ ನೀರು ಎದೆಯಮಟ್ಟಕ್ಕೆ ಬರುತ್ತಿದ್ದು ಪೂರ್ಣಾನದಿಯೆಂಬ ಹೆಸರನ್ನು ಅನ್ವರ್ಥಗೊಳಿಸುತ್ತಿತ್ತು. ನದಿಯ ಮೇಲೆ ದೋಣಿಗಳು ಓಡಾಡುತ್ತಲೇ ಇರುತ್ತಿದ್ದವು. ಅಂಥದೃಶ್ಯವನ್ನು ನನ್ನ ಜೀವಮಾನದಲ್ಲಿಯೇ ಕಂಡಿರಲಿಲ್ಲ. ನದಿಯಲ್ಲಿ ಮೊಸಳೆಗಳು ಇದ್ದವು, ಶಿವಗಂಗಾ ಸ್ವಾಮಿಗಳ ಒಬ್ಬ ಬೋಯಿಯನ್ನು ಒಂದು ಮೊಸಳೆ ಎಳೆದುಕೊಂಡೇ ಹೋಯಿತಂತೆ. ಆಚಾರ್ಯರನ್ನು ಆ ನದಿಯಲ್ಲಿ ಮೊಸಳೆ ಹಿಡಿಯಿತೆಂಬ ಶಂಕರಾಚಾರ್ಯರ ಕಥೆಯು ನಮಗೆಲ್ಲ ಸ್ಮರಣೆಗೆ ಬಂದಿತು.

ನದಿಯ ದಡವನ್ನು ಏರಿ ಮೇಲಕ್ಕೆ ಬಂದರೆ ವಿಶಾಲವಾದ ಚಪ್ಪರ. ಅದರಲ್ಲಿ ಬೇರೆ ಬೇರೆ ಕಡೆಯಲ್ಲಿ ವಿದ್ವಾಂಸರುಗಳ ಸಂಮೇಲನಗಳೂ ಭಾಷಣಗಳೂ ಕಾಣಬರುತ್ತಿದ್ದವು. ಶಂಕರರ ವಿಗ್ರಹವು ಪ್ರತಿಷ್ಠೆಯಾಗಲಿದ್ದ ಸಮಯದಲ್ಲಿ ಒಬ್ಬ ಸ್ವಾಮಿಗಳೊಡನೆ ಶಾಸ್ತ್ರಿಗಳವರು ಭಾಷ್ಯವಿಷಯಕ್ಕೆ ಸಂಭಾಷಣೆ ಮಾಡಿದ್ದನ್ನು ಕಂಡು ನಮಗೆ ಅವರಿಗೆ ವೇದಾಂತದಲ್ಲಿ ಹೆಚ್ಚಿನ ಪರಿಚಯವಿದೆ ಎಂಬುದನ್ನು ಕಂಡುಕೊಂಡೆವು. ಒಂದು ಜ್ಯೋತಿಷ್ಕರ ಸಂಮೇಲನದಲ್ಲಿ ಒಬ್ಬರು ಅಯ್ಯಂಗಾರರು ಒಂದು ಕೃತ್ರಿಮಗೋಳವನ್ನಿಟ್ಟುಕೊಂಡು ಭೂಚಕ್ರದ ವಿಷಯವಾಗಿ ಸಂಸ್ಕೃತದಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದದ್ದನ್ನು ಕಂಡು ಸಂಸ್ಕೃತವು ಮೃತಭಾಷೆ ಎನ್ನುವವರ ಅಜ್ಞಾನವು ಎಷ್ಟರಮಟ್ಟಿನದೆಂಬದನ್ನು ಮನಗಂಡೆವು. ಬೇರೆಬೇರೆ ಕಡೆಯಲ್ಲಿ ಅಧ್ಯಯನವಾಗುತ್ತಿತ್ತು. ದೇವಸ್ಥಾನಗಳಿಗೂ ಯಾಗಶಾಲೆಗೂ ಶ್ರೀ ಶ್ರೀಸ್ವಾಮಿಗಳವರು ದಯಮಾಡಿಸಿ ಸ್ತೋತ್ರಾದಿಗಳನ್ನು ಹೇಳಿದ್ದನ್ನು ಅನೇಕರು ಭಕ್ತರುಗಳು ಎವೆಯಿಕ್ಕದೆ ನೋಡಿ ಸಂತೋಷಪಡುತ್ತಿದ್ದರು. ನಾವು ಬರುವದ-ರೊಳಗಾಗಿಯೇ ವಿರೂಪಾಕ್ಷಶಾಸ್ತ್ರಿಗಳವರು ಕಾಲಟಿಗೆ ದಯಮಾಡಿಸಿದ್ದರು. ನಾನು ಭಾಷ್ಯಶಾಂತಿಗೆ ಬಂದ ವಿಷಯವನ್ನು ತಿಳಿದು ಬಹಳಸಂತೋಷಪಟ್ಟರು.

## ಶಾಂತಿ ಪಾಠಕ್ಕೆ ಅನುಜ್ಞೆ:

ನಾವು ಸಂವಿಧಾನದ ಏಜಂಟರು ಶ್ರೀ ಶ್ರೀಕಂಠಶಾಸ್ತ್ರಿಗಳನ್ನು ಕಂಡು ಭಾಷ್ಯ ಶಾಂತಿಯ ವಿಷಯಕ್ಕೆ ನಮಗಿದ್ದ ಕುತೂಹಲವನ್ನು ವ್ಯಕ್ತಗೊಳಿಸಿದೆವು. ಅವರು 'ಈಗ ಬಹಳ ಗಲಾಟೆಯಾದ್ದರಿಂದ ಸಾಧ್ಯವಿಲ್ಲ, ಬೆಂಗಳೂರಿಗೆ ಸವಾರಿ ದಯಮಾಡಿಸಿದಾಗ ನೋಡೋಣ', ಎಂದು ಬಿಟ್ಟರು. ನಮಗೆ ಬಹಳ ಯೋಚನೆಗಿಟ್ಟುಕೊಂಡಿತು, ಶಾಸ್ತ್ರಿಗಳನ್ನು ಕೇಳಿದ್ದರಲ್ಲಿ ''ಸ್ವಲ್ಪ ತಡೆಯಿರಿ, ಪ್ರತಿಷ್ಠೆಯಾಗಲಿ, ಆಮೇಲೆ

ಪ್ರಯತ್ನಿಸೋಣ'' ಎಂದರು. ಪ್ರತಿಷ್ಠೆಯ ದಿನ ಮಾಘಶುದ್ಧದ್ವಾದಶಿಯಂದು ಎಂದಿಗಿಂತ ಎರಡುಮೂರರಷ್ಟು ಜನಸಂದಣಿ ಸೇರಿತು. ಆ ದಿನದ ವೇದಘೋಷವನ್ನು ಕೇಳಿದವರೇ ಧನ್ಯರು. ಆಗ ಸೇರಿದ್ದವರ ಸಂಖ್ಯೆ ಐವತ್ತುಸಾವಿರಕ್ಕೆ ಕಡಿಮೆಯಿರಲಾರದೆಂದು ಅಂದಾಜುಮಾಡಲಾಗಿದೆ. ಆ ದಿನದ ಬ್ರಾಹ್ಮಣ ಸಮಾರಾಧನೆಗೆ ಸಹಾಯಮಾಡುವದಕ್ಕೆ ದೊಡ್ಡ ದೊಡ್ಡ ಉದ್ಯೋಗಸ್ಥರೂ ಸೊಂಟಕಟ್ಟಿದ್ದರು. ಮಧ್ಯಾಹ್ನದ ಮೇಲೆ ಎರಡು ಮೂರು ಘಂಟೆಯವರೆಗೂ ಭೋಜನ ಸಮಾರಂಭವು ನಡೆದೇ ನಡೆಯುತ್ತಿತ್ತು. ನಾಲ್ಕು ಘಂಟೆಯ ಹೊತ್ತಿಗೆ ಒಂದು ದೊಡ್ಡ ಸಭೆಯಾಯಿತು. ಅಲ್ಲಿ ಬೇರೆಬೇರೆ ಕಡೆಯಿಂದ ವಿದ್ವಾಂಸರು ಸಂಸ್ಕೃತದಲ್ಲಿ ಬರೆದು ತಂದಿದ್ದ ಅಭಿನಂದನ ಪತ್ರಗಳನ್ನು ಶ್ರೀಶ್ರೀಗಳವರ ಸಮ್ಮುಖದಲ್ಲಿ ಓದಿ ಅರ್ಪಿಸಿದರು. ಮೊದ ಮೊದಲು ಶ್ರೀಗಳವರ ಎದುರಿಗೆ ಜುಟ್ಟಿಲ್ಲದ ತೆಂಗಿನ ಕಾಯಿಗಳನ್ನು ಉರುಳುಬಿಟ್ಟು ನಮಸ್ಕರಿಸುವವರು ಆಮೇಲೆ ಸಂಸ್ಕೃತ, ತಮಿಳು - ಮುಂತಾದ ಅಭಿನಂದನ ಪತ್ರ, ಭಾಷಣಗಳು ಮುಂತಾದವುಗಳ ಗಡಿಬಿಡಿಯಲ್ಲಿ ಜನರ ನೂಕುನುಗ್ಗಲು ಹೆಚ್ಚಾಯಿತು ; ನಾವುಗಳು ಎಲ್ಲಿಯೋ ದೂರದಲ್ಲಿದ್ದೆವು. ಕೃಷ್ಣಶಾಸ್ತ್ರಿಗಳನ್ನು ಯಾರೋ ಕರೆದರು ; ಅವರಲ್ಲಿಗೆ ಜನರು ದಾರಿಬಿಡುವದೇ ಕಷ್ಟವಾಯಿತು. ಕೊನೆಗೆ ಶಾಸ್ತ್ರಿಗಳು ಸಮ್ಮುಖದಲ್ಲಿ ನಿಂತು ಅಪ್ಪಾಸಾಹೇಬರು ಬರೆದಿದ್ದ ಕೆಲವು ಸಂಸ್ಕೃತ ಶ್ಲೋಕಗಳನ್ನು ಓದಿ ಸಮರ್ಪಿಸಿದರು. ಅದರಲ್ಲಿ ಪಾವನೀಭಿರ್ಗಿರಾಭಿಃ ಎಂಬ ಪ್ರಯೋಗ ವಿದ್ದದ್ದನ್ನು ಯಾರೋ ಆಕ್ಷೇಪಿಸಿದರು ; ಶ್ರೀಶ್ರೀಗಳವರೇ ಅದಕ್ಕೆ ಸಮಾಧಾನವನ್ನು ಹೇಳಿದರು. ಜನರೆಲ್ಲರೂ ಕರತಾಡನೆ ಮಾಡಿದರು. ಶಾಸ್ತ್ರಿಗಳು ಸಾಮಾನ್ಯ ವ್ಯಕ್ತಿಯಲ್ಲವೆಂಬುದೂ ಹತ್ತಿರವಿದ್ದ ವಿದ್ವಾಂಸರುಗಳಿಗೂ ಅರಿಕೆಗೆ ಬಂದಂತೆ ಕಂಡಿತು.

ಆ ದಿನದ ಸಭೆಗೆ ಅನೇಕ ಗಣ್ಯರು ಬಂದಿದ್ದರು. ಆಗ ಮೈಸೂರು ದಿವಾನರಾಗಿದ್ದ ವಿ.ಪಿ. ಮಾಧವರಾಯರು, ಟ್ರಾವಂಕೂರಿನ ದಿವಾನರು, ರಾಜಗೋಪಾಲಾಚಾರ್ಯರೂ, ಮೈಸೂರು ಕೌನ್ಸಿಲ್‌ಮೆಂಬರಾದ ಎಚ್.ವಿ. ನಂಜುಂಡಯ್ಯನವರು ಇವರುಗಳು ಉಪಸ್ಥಿತರಾಗಿದ್ದರು. ಶ್ರೀ ಶ್ರೀಗಳವರು ಕಾರ್ಯಾಲಯದಲ್ಲಿ ಪ್ರಧಾನ ಭಾಗವನ್ನು ತೆಗೆದುಕೊಂಡವರಿಗೆ ತಕ್ಕ ಬಿರುದುಗಳನ್ನು ದಯಪಾಲಿಸಿದರು. ರಾಮಚಂದ್ರಅಯ್ಯರ್‌ರವರಿಗೆ 'ಗುರುಭಕ್ತ ಕೇಸರಿ' ಎಂಬ ಬಿರುದು ಸಿಕ್ಕಿತು. ಶ್ರೀ ಶ್ರೀಶಂಕರಾಚಾರ್ಯರ ಅಮೋಘ ಕೃತಿರತ್ನಗಳನ್ನು ಸಂಪೂರ್ಣವಾಗಿ ಅಚ್ಚುಮಾಡಲು ಪ್ರಯತ್ನಿಸಿ ಆವರೆಗೆ ಸಿದ್ಧವಾಗಿದ್ದ ಹತ್ತು ಸಂಪುಟಗಳನ್ನು ಸಮರ್ಪಿಸಿದ ಬಾಲಸುಬ್ರಹ್ಮಣ್ಯಅಯ್ಯರ್ ಎಂಬ ಶ್ರೀರಂಗ

ವಾಣಿವಿಲಾಸ ಮುದ್ರಣಾಲಯದ ಅಧ್ಯಕ್ಷರಿಗೆ 'ಗುರುಭಕ್ತ ಶಿಖಾಮಣಿ' ಎಂಬ ಬಿರುದು ಲಭಿಸಿತು. ದೇವೇಂದ್ರನ ಸಭೆಯಲ್ಲಿ ಪ್ರತಿಯೊಬ್ಬರೂ ತಮ್ಮತಮ್ಮ ಯೋಗ್ಯತೆಯನ್ನು ಪ್ರಕಟಿಸುವ ಸೇವೆಯನ್ನು ಮಾಡುವಂತೆ ಆ ಕಾಲಕ್ಕೆ ಓಲಗದವರೇ ಮುಂತಾದ ವಾದ್ಯಗಾರರು, ವಿದ್ವಾಂಸರುಗಳು, ನೆಲಕ್ಕೆ ಚಿತ್ರವಿಚಿತ್ರ ಪುರಾಣ ದೃಶ್ಯಗಳನ್ನು ಸೂಚಿಸುವ ರಂಗವಲ್ಲಿ ಹಾಕುವವರು ನಾನು ಮುಂದು ತಾನು ಮುಂದೆಂದು ಮುಂದಕ್ಕೆ ಬರುತ್ತಿದ್ದರು. ಒಬ್ಬ ಉತ್ತರದೇಶದ ವಿದ್ವಾಂಸನು ಪಂಚದ್ರಾವಿಡ ಪಂಚಗೌಡ ಬ್ರಾಹ್ಮಣರುಗಳಿಗೆ ಸವ್ಯವಹಾರವನ್ನು ಒಪ್ಪಿಸುವುದಕ್ಕೆ ಧರ್ಮಶಾಸ್ತ್ರಜ್ಞರಲ್ಲಿ ಸಂಭಾಷಿಸುತ್ತಿದ್ದರು. ತಂದೆಯಿಲ್ಲದ ಚಿಕ್ಕವಯಸ್ಸಿನ ತೇಜಸ್ವಿಯಾದ ಬ್ರಹ್ಮಚಾರಿ ಬಾಲಕನೊಬ್ಬನು ಎಲ್ಲರೊಳಗೂ ನುಣುಚಿಕೊಂಡು ಶ್ರೀ ಶ್ರೀಗಳವರ ಅತ್ಯಂತ ಸಾಮೀಪ್ಯವನ್ನು ಹೊಂದಿ ಅವರ ಪ್ರೇಮಕ್ಕೆ ಪಾತ್ರನಾದನು. ಸ್ವಾಮಿಗಳು 'ನಿನಗೆ ಏನುಬೇಕು ?' ಎಂದು ಕೇಳಿದ್ದಕ್ಕೆ 'ತಮ್ಮ ಸೇವೆಯುಬೇಕು' ಎಂದದ್ದನ್ನು ಕೇಳಿದ್ದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಆ ಹುಡುಗನನ್ನು ತಮ್ಮ ಬಳಿಯಲ್ಲಿಯೇ ಶ್ರೀಗಳು ಇಟ್ಟುಕೊಂಡಾರೊ ! ಎಂದು ಕಲ್ಪಿಸುವಷ್ಟು ಪ್ರತಿಭಾವಂತನಾಗಿದ್ದನು ಆ ಹುಡುಗ. ಹತ್ತಿರವಿದ್ದ ಹಣ್ಣುಗಳನ್ನು ಅವನ ಮಡಿಲಿಗೆ ಹಾಕಿ ತಟ್ಟೆಯಲ್ಲಿ ಬಿದ್ದಿದ್ದ ಕಾಣಿಕೆಯ ಹಣವನ್ನು ಅವನ ತಾಯಿಯ ಮಡಿಲಿಗೆ ಸುರಿದು, ಶ್ರೀಗಳು ಒಬ್ಬ ಸೇವಕನ ಉಸ್ತುವಾರಿಯಿಂದ ಅವನನ್ನು ಮನೆಗೆ ತಲುಪಿಸುವಂತೆ ಆಜ್ಞಾಪಿಸಿದರು. ಶ್ರೀಗಳು ನೆರೆದಿದ್ದ ನಂಬೂದರಿ ಬ್ರಾಹ್ಮಣರನ್ನು ಕುರಿತು 'ಶಂಕರಾಚಾರ್ಯರಿಂದ ಹಿಂದೆ ನಿಮ್ಮ ಪೂರ್ವಿಕರಿಗೆ ಒದಗಿದ್ದ ಶಾಪವು ಈ ದಿವಸ ಅವರ ಅನುಗ್ರಹದಿಂದ ವಿಮೋಚನೆಯಾಯಿತೆಂದು ನೀವುಗಳು ಭಾವಿಸಬೇಕು, ಇಲ್ಲಿಂದ ನೀವು ಶುದ್ಧಾಚಾರರತರಾಗಿದ್ದುಕೊಂಡು ಆಚಾರ್ಯರ ಕೃಪೆಗೆ ಪಾತ್ರರಾಗಿ, ನಿಮ್ಮಗಳಲ್ಲಿ ಪ್ರಸಿದ್ಧವಾಗಿರುವ ಪಾಂಡಿತ್ಯಕ್ಕೆ ಸಾರ್ಥಕ್ಯವನ್ನು ತಂದುಕೊಳ್ಳಬೇಕು' ಎಂದು ಮುಂತಾಗಿ ಹಿತೋಪದೇಶವನ್ನು ಮಾಡಿದರು. ಒಟ್ಟಿನಲ್ಲಿ ಆ ದಿನವು ಯಾವದೋ ಒಂದು ದಿವ್ಯಲೋಕದಲ್ಲಿದೇವೆಂಬ ಭಾವನೆಯು ನಮ್ಮಗಳ ಮನಸ್ಸಿನಲ್ಲಿ ಉಕ್ಕುತ್ತಿತ್ತು.

ಆ ದಿನ ರಾತ್ರಿ ಶ್ರೀ ಶ್ರೀಗಳವರಲ್ಲಿ ಶಾಸ್ತ್ರಿಗಳು ಭಾಷ್ಯಶಾಂತಿಯ ವಿಷಯವನ್ನು ಪ್ರಸ್ತಾಪಿಸಿದರು. ಅನುಕೂಲವಿದ್ದರೆ ಈ ಪವಿತ್ರ ಕ್ಷೇತ್ರದಲ್ಲಿಯೇ ಆಗಬೇಕೆಂದು ಇವರಿಬ್ಬರೂ ತೀವ್ರವಾದ ಆಕಾಂಕ್ಷೆಯುಳ್ಳವರಾಗಿದ್ದಾರೆ ಎಂದು ಬಿನ್ನವಿಸಿಕೊಂಡರು. ಸ್ವಾಮಿಗಳು 'ಅವಶ್ಯವಾಗಿ ಆಗಲಿ ! ಇಲ್ಲಲ್ಲದಿದ್ದರೆ ಮತ್ತೆಲ್ಲಿ ಆಗಬೇಕು ? ಇನ್ನು ಯಾರುಬೇಕಾದರೂ ಬರಲಿ ! ಹೇಳು !' ಎಂದು ಏಜೆಂಟರಿಗೆ ಅಪ್ಪಣೆ ಮಾಡಿದರು.

## ಭಾಷ್ಯಶಾಂತಿ ಉಪದೇಶ :

ಮಾರನೆಯ ದಿನ ಶಾರದಾದೇವಿಯ ಜಗುಲಿಯ ಮೇಲೆ ನಾವು ಭಾಷ್ಯಶಾಂತಿಗೆ ಸಿದ್ಧರಾದೆವು. ಆಗ್ಗೆ ನಡೆದುಕೊಳ್ಳಬೇಕಾದ ಕ್ರಮವನ್ನು ಬ್ರ॥ಶ್ರೀ॥ ಶ್ರೀಕಂಠಶಾಸ್ತ್ರಿಗಳೂ ಕೃಷ್ಣಶಾಸ್ತ್ರಿಗಳವರೂ ನಮಗೆ ಮೊದಲೇ ತಿಳಿಸಿದ್ದರು. ಜಗುಲಿಯ ಕೆಳಗೂ ಎಷ್ಟೋ ಜನರು ನೆರೆದಿದ್ದರು, ಅದೊಂದು ಬ್ರಹ್ಮಸಭೆಯಂತೆ ನನಗೆ ಭಾಸವಾಯಿತು. ಶ್ರೀ ಶ್ರೀಗಳವರು ಕ್ರಮಕ್ರಮವಾಗಿ ಶಾಂತಿಗಳನ್ನು ಒಂದೊಂದಾಗಿ ಹೇಳಿದರು. ನಾವೂ ಅವರನ್ನನುಸರಿಸಿ ಅವನ್ನನುಸರಿಸಿದೆವು. ಅಲ್ಲಿಂದ ಸೂತ್ರಭಾಷ್ಯದ ಅಧ್ಯಾಸಭಾಷ್ಯದ ಅಭಿಪ್ರಾಯವನ್ನು ಸಂಸ್ಕೃತದಲ್ಲಿ ಹೇಳುವುದಕ್ಕೆ ಆರಂಭಿಸಿ 'ಭಾಷ್ಯಜನ್ಮ ಭೂಮೇರ್ಜನ್ಮ ಭೂಮಿರಿಯಮ್' (ಭಾಷ್ಯಕ್ಕೆ ಜನ್ಮಸ್ಥಾನವಾದ ಆಚಾರ್ಯರಿಗೆ ಜನ್ಮಸ್ಥಲವಿದು) ಎಂದು ಆನಂದಬಾಷ್ಪದೊಡನೆ ಪ್ರಾರಂಭಿಸಿದರು. ನಮ್ಮೊಡನೆ ಸುಮಾರು ಇಪ್ಪತ್ತು ಜನಕ್ಕೆ ಆ ದಿನ ಭಾಷ್ಯಶಾಂತಿಯಾಗಿರಬಹುದು. 'ಗೀತೋಪದೇಶವಾಗಿದೆಯೇ ?' ಎಂದು ಕೇಳಿ ಮತ್ತೆ ಆದ್ಯಂತ ಶ್ಲೋಕಗಳನ್ನು ಭಾಷ್ಯದ ಆದ್ಯಂತ ಭಾಗಗಳನ್ನು ತಾವೂ ಹೇಳಿಕೊಟ್ಟು ಆ ಕಾರ್ಯವನ್ನು ಸಮಾಪ್ತಿ ಮಾಡಿದರು. ಚಿದಂಬರಯ್ಯನವರಿಗೂ ನನಗೂ ಆದ ಸಂತೋಷಕ್ಕೆ ಪಾರವಿರಲಿಲ್ಲ. ಒಬ್ಬಾನೊಬ್ಬ ಮಹಾತಪಸ್ವಿಗಳ ಅನುಗ್ರಹಕ್ಕೆ ಪಾತ್ರರಾದಂತಾಯಿತು ಎಂದು ನಾನು ನುಡಿದದ್ದಕ್ಕೆ 'ನಮ್ಮಿಬ್ಬರನ್ನು ಅವರು ಗುರುತಿಸಿ ಭಾಷ್ಯವನ್ನು ಹೇಳಿದರೆ ? -ಎಂಬುದು ನನಗೆ ತಿಳಿಯಬೇಕಲ್ಲ !' ಎಂದರು ಚಿದಂಬರಯ್ಯನವರು. ಈಗ ಶಿವಪಂಚಾಕ್ಷರಿಯ ಉಪದೇಶಕ್ಕೆ ಸಿದ್ಧರಾದೆವು, ದಾವಣಗೆರೆಯಿಂದ ಬರುವಾಗಲೇ ನಾವಿಬ್ಬರೂ ಮಂತ್ರೋಪದೇಶವನ್ನು ಶ್ರೀಗಳಿಂದಲೇ ಪಡೆಯಬೇಕೆಂದು ಸಂಕಲ್ಪಿಸಿದ್ದೆವು. 'ನಿಮಗೆ ಯಾವ ಮಂತ್ರವು ಬೇಕು ?' ಎಂದು ಚಿದಂಬರಯ್ಯನವರು ಕೇಳಿದ್ದಕ್ಕೆ ನಾನು ಸಹಜವಾಗಿ 'ನಾರಾಯಣಾಷ್ಟಾಕ್ಷರಿಯನ್ನು ಉಪದೇಶ ಮಾಡಿಸಿಕೊಳ್ಳಬೇಕೆಂದು ನನ್ನ ಇಚ್ಛೆ' - ಎಂದೆನು. ಆಗ ಅವರು ಒಬ್ಬೊಬ್ಬರು ಒಂದೊಂದು ಬಯಸಿದರೆ, ಇಬ್ಬರಿಗೂ ಇಲ್ಲವಾದೀತು, ಆದ್ದರಿಂದ ಶಿವಪಂಚಾಕ್ಷರಿಯನ್ನೇ ಇಬ್ಬರೂ ಕೇಳಿಕೊಳ್ಳೋಣ ಎಂದು ಸೂಚಿಸಿದರು. ನಾನು 'ಹಾಗೇ ಆಗಲಿ !' ಎಂದೆನು. ಈ ಸಂದರ್ಭಗಳಲ್ಲಿ ಅವರು ನನಗೆ ಹಿರಿಯರು, ಶ್ರೇಯೋಕಾಂಕ್ಷಿಗಳು - ಎಂದೇ ನಾನು ಎಣಿಸಿದ್ದೆನಾದ್ದರಿಂದ ಅವರ ಇಚ್ಛೆಗೆ ವಿರುದ್ಧವಾಗಿ ನಾನು ಏನೂ ಹೇಳುವಂತೆ ಇರಲಿಲ್ಲ. ಚಿದಂಬರಯ್ಯನವರು ದಾರಿಯುದ್ದಕ್ಕೂ ಯಾವದೋ ಒಂದು ಮಂತ್ರವನ್ನು ಉಚ್ಚರಿಸಿಕೊಂಡೇ ಬಂದಿದ್ದರು. ಪ್ರಾಯಶಃ ಅವರಿಗೆ ಮೊದಲೇ ಪಂಚಾಕ್ಷರಿಯ ಉಪದೇಶವಾಗಿದ್ದರೂ, ದೊಡ್ಡವರಿಂದ ಕಿವಿಗೆ ಬಿದ್ದ ಮಂತ್ರವು

ವೀರ್ಯವತ್ತವಾಗುವದು ಎಂಬ ಭಾವನೆಯಿಂದ ಅವರು ಮತ್ತೊಮ್ಮೆ ಈ ಉಪದೇಶವನ್ನು ಬಯಸಿರಬೇಕೆಂದು ಕಾಣುತ್ತದೆ. ನನಗೆ ಗಾಯತ್ರಿಯ ಹೊರತು ಮತ್ತೆ ಯಾವ ಮಂತ್ರದ ಉಪದೇಶವೂ ಆಗಿರಲಿಲ್ಲ. ಆದ್ದರಿಂದ ಶಿವಮಂತ್ರವಾದರೆ ಅದೇ ಆಗಲಿ ! ಎಂದು ನಾನು ಒಪ್ಪಿದೆನು. ಇಬ್ಬರೂ ಶ್ರೀಶ್ರೀಗಳಿದ್ದ ಏಕಾಂತ ಸ್ಥಾನಕ್ಕೆ ಹೋಗುತ್ತಲೂ ನಮ್ಮನ್ನು 'ನೀವು ಭಾಷ್ಯ ಶಾಂತಿಗೆ ಬಂದಿದ್ದವರಲ್ಲವೆ ? ನಿಮಗೆ ಭಾಷ್ಯವನ್ನು ಮುಂದೆ ಯಾರು ಹೇಳಿಕೊಡುವವರು ?' ಎಂದು ಪ್ರಶ್ನಿಸಿದರು. ಚಿದಂಬರಯ್ಯನವರಿಗೆ ಪರಮಾನಂದವಾಯಿತು. ನಮಗೆ ಶಾಂತಿ ಮಾಡಿಸಿದೇವೆಂದು ಶ್ರೀಶ್ರೀಗಳು ಬಾಯಿಬಿಟ್ಟು ಹೇಳಿದಂತೆ ಆಯಿತು ಎಂಬುದು ನಮ್ಮಿಬ್ಬರಿಗೂ ಮನಸ್ತೃಪ್ತಿಕರವಾದದ್ದೇ. ನಾವು ಹಾನಗಲ್ಲ ವಿರೂಪಾಕ್ಷ ಶಾಸ್ತ್ರಿಗಳಲ್ಲಿ ಓದಬೇಕೆಂದು ಮಾಡಿಕೊಂಡಿದ್ದ ಸಂಕಲ್ಪವನ್ನು ಪ್ರಕಟಿಸಿದೆವು. ಅವರು 'ಬಹಳ ಸಂತೋಷ, ನಿಮ್ಮ ಕರ್ತವ್ಯಲೋಪವಿಲ್ಲದಂತೆ ವೇದಾಂತ ಕಾಲಕ್ಷೇಪವನ್ನು ಮಾಡುವದು ಒಳ್ಳೆಯದೇ ಸರಿ. ರಜದ ಕಾಲದಲ್ಲಿ ಧಾರವಾಡಕ್ಕೆ ಹೋಗಿ ಅವರಲ್ಲಿ ಓದುವದಕ್ಕೆ ಅನುಕೂಲವಿದೆಯಷ್ಟೆ?' ಎಂದು ಮುಂತಾಗಿ ವಿಚಾರಿಸಿದರು. ಅವರ ಅಪ್ಪಣೆಯಂತೆ ಪರಿವಾರದಲ್ಲಿದ್ದ ಒಬ್ಬ ಬ್ರಾಹ್ಮಣರು ನಮಗೆ ಶಾಂತಿಪಾಠದ ಮಂತ್ರಗಳು ಪಂಚಾಕ್ಷರಿಯ ಧ್ಯಾನಶ್ಲೋಕಾದಿಗಳು ಎಲ್ಲವನ್ನೂ ಬರೆದುಕೊಟ್ಟರು. ನಾವು ಕೃತಕೃತ್ಯರಾದೆವೆಂಬ ಭಾವನೆಯಿಂದ ಮನೆಗೆ ಬಂದೆವು.

## ಶಾಸ್ತ್ರಿದ್ವಯರ ಏಕಾಂತ ಸಂವಾದ :

ಆ ದಿನ ವಿರೂಪಾಕ್ಷಶಾಸ್ತ್ರಿಗಳೂ ಕೃಷ್ಣಶಾಸ್ತ್ರಿಗಳೂ ಧರ್ಮಶಾಸ್ತ್ರದ ಸಂಬಂಧವಾಗಿ ಅನೇಕ ವಿಷಯಗಳನ್ನು ಕುರಿತು ಒಬ್ಬರೊಡನೊಬ್ಬರು ಮಾತನಾಡುವುದನ್ನು ನಾವು ಹೊರಗಡೆಯಿದ್ದುಕೊಂಡು ಕೇಳಿ ಸಂತೋಷಪಟ್ಟೆವು. ಆ ಸಣ್ಣ ಬಿದಿರು ಮನೆಯಲ್ಲಿ ಒಳಗೂ ಹೊರಗೂ ಎಲ್ಲಾ ಒಂದೇ ; ಆದ್ದರಿಂದ ಅವರಿಬ್ಬರೂ ಮೆಲುದನಿಯಿಂದ ಮಾತನಾಡುತ್ತಿದ್ದದ್ದು ನಮಗೆ ಸ್ಪಷ್ಟವಾಗಿಯೇ ಕೇಳಿಸುತ್ತಿತ್ತು. ವಿರೂಪಾಕ್ಷಶಾಸ್ತ್ರಿಗಳು ಸಂನ್ಯಾಸದ ವಿಷಯವನ್ನು ಪ್ರಸ್ತಾಪಿಸಿದರು, ಕೃಷ್ಣಶಾಸ್ತ್ರಿಗಳು 'ನನಗೂ ಸಂನ್ಯಾಸ ಮಾಡಬೇಕೆಂಬ ಇಚ್ಛೆಯುಂಟು. ಆದರೆ ಯಾವ ಮಠಕ್ಕೂ ಅಧಿಪತಿಯಾಗುವುದು ನನ್ನ ಮನಸ್ಸಿಗೆ ಬರುವುದಿಲ್ಲ' ಎಂದರು. ಇಬ್ಬರು ಶಾಸ್ತ್ರಿಗಳಿಗೂ ಅಂತರಂಗದಲ್ಲಿ ಸಂನ್ಯಾಸದ ಉತ್ಕಟೇಚ್ಛೆಯಿದೆ ಎಂಬುದು ನಮಗೆ ತಿಳಿಯಬಂದಿತು. ನಾವಿಬ್ಬರೂ ಸಂನ್ಯಾಸದ ಹಂಬಲಿನಲ್ಲಿರುವದೇನೂ ತಪ್ಪಲ್ಲ ಎಂದು ನಮ್ಮ ಮನಸ್ಸಿಗೆ ನೆಮ್ಮದಿಯಾಯಿತು.

## ಕಾಲಟಿಯಲ್ಲಿ ಸೂತಸಂಹಿತೆ:

ಈಗ ಶಿವಪಂಚಾಕ್ಷರಿಯನ್ನು ಚೆನ್ನಾಗಿ ಜಪಿಸಿ ಸಿದ್ಧಿಯನ್ನು ಪಡೆಯಬೇಕೆಂಬ ತವಕವು ನನ್ನಲ್ಲಿ ಉಂಟಾಯಿತು. ಕೈಯಲ್ಲಿ ಹೆಚ್ಚಾಗಿ ದುಡ್ಡಿರದಿದ್ದರೂ ತೆಲುಗಿನಲ್ಲಿ ಅಚ್ಚಾಗಿದ್ದ ಸೂತಸಂಹಿತೆಯೊಂದನ್ನು ಕೂಡಲೇ ಕೊಂಡುಕೊಂಡೆನು. ಹಾಲಾನ್ನ ಶಾಸ್ತ್ರಿಗಳೆಂಬವರು ಪ್ರಸಿದ್ಧಿ ಪಡೆದಿದ್ದ ಶಿವಾರ್ಕಮಣಿದೀಪಿಕಾಸಮೇತವಾದ ಶ್ರೀಕಂಠ ಭಾಷ್ಯವನ್ನು ಕೊಂಡುಕೊಳ್ಳಬೇಕೆಂಬ ಉತ್ಕಟೇಚ್ಛೆಯಿತ್ತಾದರೂ ಹಣವಿಲ್ಲದ್ದಕ್ಕೆ ಸುಮ್ಮನಾದೆನು. ಸದಾಶಿವಬ್ರಹ್ಮೇಂದ್ರರ ಕೀರ್ತನೆಗಳು, ಆತ್ಮವಿದ್ಯಾವಿಲಾಸ ಮತ್ತು ಶ್ರೀ ಶ್ರೀಗಳವರು ರಚಿಸಿದ್ದ ಸದಾಶಿವಸ್ತೋತ್ರ - ಇವುಗಳನ್ನು ಕೊಂಡೆನು. ಅನೇಕ ಪುಸ್ತಕಗಳೂ ದೇವರುಗಳ ಮತ್ತು ಶಂಕರಾಚಾರ್ಯರು, ಶ್ರೀಗಳು, ಮುಂತಾದವರುಗಳ ಭಾವಚಿತ್ರಗಳು ಮುಂತಾದವುಗಳು ವಿಕ್ರಯಕ್ಕೆ ಬಂದಿದ್ದವು. ಅವುಗಳಲ್ಲಿ ಯಾವದನ್ನೂ ಕೊಳ್ಳುವುದಾಗಲಿಲ್ಲ.

ಹೀಗೆ ಬಹುಕಾಲದಿಂದ ಮನಸ್ಸಿನಲ್ಲಿ ಹಂಬಲಿಸುತ್ತಿದ್ದ ಭಾಷ್ಯಶಾಂತಿಯ ಕಾರ್ಯವು ಮುಗಿದು ನಾವು ಸಂತೋಷದಿಂದ ದಾವಣಗೆರೆಗೆ ಹಿಂತಿರುಗಿದೆವು. ಆಚಾರ್ಯ ಮೂರ್ತಿಯ ಪ್ರತಿಷ್ಠೆಯಾದ ಬಳಿಕ ಶ್ರೀ ಶ್ರೀಸ್ವಾಮಿಗಳವರು ಕಾಲಟಿಯಲ್ಲಿ ಮೂರು ತಿಂಗಳವರೆಗೆ ಇದ್ದರಂತೆ. ಆಗ್ಗೆ ದಿನವೂ ದೇವಾಲಯಗಳಲ್ಲಿ ಬೆಳಗಿನ ವಿಶೇಷ ಪ್ರಾರ್ಥನಾದಿಗಳನ್ನು ಮಾಡುವದು, ಸಾಯಂಕಾಲ ಜನರಿಗೆ ಉಪದೇಶ ಮಾಡುವದು ಹೀಗೆ ನಡೆಸಿದರಂತೆ. ಮಹಾ ವಿದ್ವಾಂಸರಾಗಿದ್ದ ಕೊಚ್ಚಿನ್ ಮಹಾರಾಜರೂ ದಯಮಾಡಿಸಿ ತಮ್ಮ ಪಾಂಡಿತ್ಯ ಪ್ರದರ್ಶನವನ್ನು ಮಾಡಿ ಶ್ರೀಗಳನ್ನು ಸಂತೋಷಪಡಿಸಿದರಂತೆ. ಮೈಸೂರು ಮಹಾರಾಜರವರೂ ದಯಮಾಡಿ ಎರಡು ದಿನಗಳು ಅಲ್ಲಿದ್ದರಂತೆ ; ಆಗ ಶ್ರೀಕೃಷ್ಣರಾಜ ಒಡೆಯರಿಗೆ 'ಧರ್ಮಮಯಿ' ಎಂಬ ಬಿರುದನ್ನು ಶ್ರೀ ಶ್ರೀಗಳವರು ಅನುಗ್ರಹಿಸಿದರಂತೆ. ಮೂರು ತಿಂಗಳಾದ ಬಳಿಕ ಎಲ್ಲದರ ಮೇಲುವಿಚಾರಣೆಯನ್ನು ರಾಮಚಂದ್ರ ಅಯ್ಯರಿಗೆ ಒಪ್ಪಿಸಿ ಶ್ರೀ ಶ್ರೀಗಳವರು ಶೃಂಗೇರಿಯತ್ತ ದಯಮಾಡಿಸಿದರಂತೆ. ದಾರಿಯಲ್ಲಿ ಬೆಂಗಳೂರಿನಲ್ಲಿ ಇಳಿದು ಸರ್ಕಲ್ ಇನ್‌ಸ್ಪೆಕ್ಟರು ವೆಂಕಟಸ್ವಾಮಿ ನಾಯ್ಡುರವರನ್ನು ಕಂಡು ನಾವು ಅಪ್ಪಣೆಯಿಲ್ಲದೆ ಮಂಜೂರಾತಿಯ ನಿರೀಕ್ಷಣೆಯ ಮೇಲೆ ರಜ ಪಡೆದುಕೊಂಡು ಕಾಲಟಿಗೆ ಹೋಗಿದ್ದ ತಪ್ಪನ್ನು ಮನ್ನಿಸಿ ಹೆಚ್ಚಿಗೆ ಉಪಯೋಗಿಸಿದ್ದ ರಜವನ್ನು ಮಂಜೂರು ಮಾಡಬೇಕೆಂದು ಬೇಡಿಕೊಂಡೆವು. ಇನ್‌ಸ್ಪೆಕ್ಟರು 'ಆಗಲಿ ಈ ಸಲಕ್ಕೆ ನಿಮ್ಮ ಪ್ರಾರ್ಥನೆಯಂತೆ ರಜ ಮಂಜೂರು ಮಾಡಿರುತ್ತೇನೆ' ಎಂದು ಹೇಳಿದ್ದು ಕೇಳಿ ಅದೂ ಒಂದು ಗುರುವನುಗ್ರಹ ಸೂಚಕವೇ ಎಂಬ ಭಾವನೆಯಿಂದ ನಾವು ಹರಿಹರಕ್ಕೆ ಹಿಂತಿರುಗಿದೆವು.

## ಕುರ್ತಕೋಟಿಯಲ್ಲಿ ಬ್ರಾಹ್ಮಣಪಂಡಿತರ ಸಭೆ

ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹಭಾರತೀ ಸ್ವಾಮಿಗಳವರು ಕಾಲಟಿಯಲ್ಲಿ ಆಚಾರ್ಯಮೂರ್ತಿಯ ಪ್ರತಿಷ್ಠೆಯನ್ನು ಮುಗಿಸಿಕೊಂಡು ಶೃಂಗೇರಿಗೆ ಹಿಂತಿರುಗಿದಾಗ ನಾನು, ಚಿದಂಬರಯ್ಯನವರು, ರಂಗರಾಯರು, ಇನ್ನು ಕೆಲವು ಶಿಷ್ಯರುಗಳೊಡನೆ ಶ್ರೀ ಮಹಾಭಾಗವತರು ಶಿವಮೊಗ್ಗದಲ್ಲಿ ಶ್ರೀ ಶ್ರೀಗಳ ದರ್ಶನಕ್ಕೆಂದು ಹೋಗಿದ್ದೆವು. ಶ್ರೀಶ್ರೀ ಸ್ವಾಮಿಗಳವರು ಶೃಂಗೇರಿಯನ್ನು ಸಾಧಾರಣ ಸಂವತ್ಸರದ ಫಾಲ್ಗುನ ಬಹುಳ ಬಿದಿಗೆಯ ದಿನ ಸೇರಿದರೆಂದು ಅವರ ಚರಿತ್ರೆಯಿಂದ ತಿಳಿದುಬಂದಿದೆ. ಆದ್ದರಿಂದ ಇದಕ್ಕಿಂತ ಮುಂಚೆಯೇ ನಾವು ಅವರನ್ನು ಶಿವಮೊಗ್ಗದಲ್ಲಿ ನೋಡಿರಬೇಕೆಂದು ಕಾಣುತ್ತದೆ. ಆಗ್ಗೆ ವೈಶ್ಯರುಗಳು ತಮಗೆ ವೇದೋಕ್ತ ಕರ್ಮಕ್ಕೆ ಅಧಿಕಾರವಿದ್ದರೂ, ಶೃಂಗೇರಿ ಗುರುಗಳು ಅದಕ್ಕೆ ಅಡ್ಡಿ ಬರುತ್ತಿದ್ದಾರೆಂದು ಗೊಣಗುಟ್ಟುತ್ತಾ ಗಲಾಟೆಯೆಬ್ಬಿಸಿದರು. ಈ ವಿಷಯದಲ್ಲಿ ಒಂದು ಬ್ರಾಹ್ಮಣಸಭೆಯನ್ನು ಏರ್ಪಡಿಸುವುದಕ್ಕೆಂದು ಮಹಾಭಾಗವತರು ಶ್ರೀಗಳವರ ಅನುಮತಿಯನ್ನು ಪಡೆಯುವುದಕ್ಕೆ ಬಂದಿದ್ದರು. ಶ್ರೀಗಳವರನ್ನು ಏಕಾಂತದಲ್ಲಿ ಪ್ರಶ್ನೆಮಾಡಿದ್ದರಲ್ಲಿ 'ಕೆಲವರು, ವೈಶ್ಯನಿಗೆ ವೇದಾಧಿಕಾರವಿಲ್ಲವೆಂದೂ ಮತ್ತೆ ಕೆಲವರು ಇದೆಯೆಂದೂ ವಾದಿಸುತ್ತಿದ್ದಾರೆ. ಅಧಿಕಾರವಿಲ್ಲವೆನ್ನುವವರು ಮುಂದೆ ಹಿಡಿದು ಬರೆದಿರುವ ಯುಕ್ತಿಗಳು ನನಗೆ ಸರಿಯೆಂದು ತೋರಿದ್ದರಿಂದ ಆ ರೀತಿ ನನ್ನ ಅಭಿಪ್ರಾಯವನ್ನು ಕೊಟ್ಟಿರುತ್ತೇನೆ. ಎಷ್ಟೋದಿನಗಳಿಂದ ವೇದಾಧ್ಯಯನವನ್ನು ಬಿಟ್ಟಿರುವ ವೈಶ್ಯರು, ಈಗ ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಅಧ್ಯಯನಕ್ಕೆ ಪ್ರಾರಂಭಿಸಬೇಕು ? ವೈದಿಕಗೋತ್ರಗಳನ್ನು ಬಹುಕಾಲದಿಂದ ಬಳಸದೆ ಇರುವಂತೆ ಯಾವ ಗೋತ್ರವನ್ನು ಕೊಡಬೇಕು ? ಅಜ್ಞಾತಗೋತ್ರರಿಗೆ ಕಶ್ಯಪಗೋತ್ರವನ್ನು ಕೊಡಬೇಕೆಂದು ಶಾಸ್ತ್ರದಲ್ಲಿದೆಯಂತೆ ; ಆದರೆ ಎಲ್ಲರಿಗೂ ಅದೇ ಗೋತ್ರವನ್ನು ಕೊಟ್ಟರೆ ಸಗೋತ್ರವಿವಾಹಾದಿಗಳು ಪ್ರಸಕ್ತವಾಗುತ್ತವೆ. ಹೀಗೆ ವಾದಿಸುವವರಿಗೆ ಏನು ಉತ್ತರವನ್ನು ಕೊಡುತ್ತಾರೋ ನೋಡಬೇಕಾಗಿದೆ. ಇದಕ್ಕೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟರೆ ಅವಶ್ಯವಾಗಿ ನಾನೂ ಆ ತೀರ್ಪನ್ನು ಅನುಮೋದಿಸುವೆನು. ಈಗ ಕೆಲವರು ನನಗೊಂದು ಸರಕಾರಿಯ ನೋಟೀಸು ಕೊಟ್ಟಿರುತ್ತಾರೆ, ಆದರೆ ನಾನೊಬ್ಬ ವ್ಯಕ್ತಿಯಾಗಿ ಈ ಅಭಿಪ್ರಾಯ ವ್ಯಕ್ತಗೊಳಿಸಿಲ್ಲ; ಪೀಠಾಧಿಪತಿಯಾಗಿ ಹಾಗೆ ಹೇಳಿರುತ್ತೇನೆ. ನೀವುಗಳು ಅವಶ್ಯವಾಗಿ ಸಭೆ ಮಾಡಬಹುದು ; ವೈಶ್ಯರನ್ನು ಸೇರಿಸಬಹುದು, ಎಲ್ಲರೂ ಶಾಸ್ತ್ರಸಂಮತವಾದ ತೀರ್ಪಿಗೆ ಬರುತ್ತೀರೋ ಅದೇ ನನಗೆ ಸಂಮತ' ಎಂದು ಅಪ್ಪಣೆ ಕೊಡಿಸಿದರು.

ಆ ಸಂದರ್ಭದಲ್ಲಿ ಕಾಫಿ ಪ್ಲಾಂಟರ್ ರಾಮಚಂದ್ರರಾಯರು, ಮಹಾಭಾಗವತರ ಪರಿಚಯವನ್ನು ಶ್ರೀಗಳಿಗೆ ಮಾಡಿಕೊಟ್ಟಾಗ ಶ್ರೀಗಳು ಹೇಳಿದ್ದು ನನಗೆ ಅತ್ಯಂತಾಶ್ಚರ್ಯವನ್ನುಂಟುಮಾಡಿತು. 'ಇವರು ಗೋಂದಾವಳಿಯ ಬ್ರಹ್ಮಚೈತನ್ಯ ಮಹಾರಾಜರ ಶಿಷ್ಯರು, ಮಹಾರಾಜರಲ್ಲಿ ರಾಮಶಬ್ದವುಕೂಡ ಇಲ್ಲ, ಹೀಗಿದ್ದರೂ ಇಂಥ ವಿದ್ವಾಂಸರುಗಳೆಲ್ಲ ಆ ಮಹನೀಯರ ಶಿಷ್ಯರಾಗಿರುತ್ತಾರೆ' ಎಂದರು ರಾಮಚಂದ್ರರಾಯರು. ಶ್ರೀ ಶ್ರೀಗಳು 'ಅದೇಕೆ, ಅಲ್ಲಿ ಯಾವಾಗಲೂ ರಾಮಶಬ್ದವೇ ಇದೆಯೆಂದು ಕೇಳಿದ್ದೇನಲ್ಲ !' ಎಂದರು. ಮಹಾರಾಜರವರು ಅಖಂಡ ರಾಮಭಜನೆಯನ್ನು ಮಾಡಿಸಿ ಲೋಕೋದ್ಧಾರವನ್ನು ಮಾಡುತ್ತಿರುವ ಸಂಗತಿಯು ಶ್ರೀ ಶ್ರೀಗಳಿಗೂ ಹೇಗೋ ಗೊತ್ತಾಗಿತ್ತು. ಮಹಾರಾಜರ ವಿಷಯಕ್ಕೆ ಅವರು ಈ ಶೈಲಿಯಿಂದ ಮಾತನಾಡಿದ್ದ ಮೇಲಿನಿಂದ ಭಗವದ್ಭಕ್ತರಲ್ಲಿ ಅವರು ಇಟ್ಟಿದ್ದ ಪೂಜ್ಯಬುದ್ಧಿಯೇ ಅಲ್ಲದೆ, ಅತ್ಯಂತ ದೂರದೇಶವಾದ ಸಾಧಾರಣ ಡಿಸ್ಟ್ರಿಕ್ಟಿನ ಒಬ್ಬ ಮಹಾತ್ಮರ ಸುದ್ಧಿಯನ್ನು ಅವರು ತಿಳಿದುಕೊಂಡಿದ್ದಾರೆಂಬುದು ವ್ಯಕ್ತವಾಯಿತು.

ಇದಾದ ಸ್ವಲ್ಪದಿನಗಳಲ್ಲಿಯೇ ಕುರ್ತಕೋಟಿಯಲ್ಲಿ ಬ್ರಾಹ್ಮಣ ಪಂಡಿತರ ಸಭೆ ನಡೆಯಿತು. ಆ ಸಭೆಗೆ ಬ್ರ॥ ಶ್ರೀ ವಿರೂಪಾಕ್ಷ ಶಾಸ್ತ್ರಿಗಳೇ ಅಧ್ಯಕ್ಷರಾಗಿದ್ದರು. ಬ್ರ॥ ಶ್ರೀ॥ಗಳಾದ ಬೆಟಗೇರಿ ಕೃಷ್ಣಶಾಸ್ತ್ರಿಗಳು, ಅಪ್ಪಾಸಾಹೇಬರು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು - ಮುಂತಾದ ವಿದ್ವಾಂಸರು ದಯಮಾಡಿಸಿದ್ದರು. ಅಲ್ಲಿ ಎರಡು ಮೂರು ದಿನಗಳು ಚರ್ಚೆಯಾದವು. ಆದ ತೀರ್ಮಾನಗಳನ್ನು ಶೃಂಗೇರಿಯ ಜಗದ್ಗುರುಗಳಿಗೂ ತಿಳಿಸಿದರೆಂದು ಕಾಣುತ್ತದೆ. ಪ್ರಾಯಶಃ ಈ ಸಭೆಯಲ್ಲಿಯೇ ಇರಬೇಕು, ಚಿದಂಬರಯ್ಯನವರಿಗೆ **'ಕರ್ಣಾಟಕ ಕವಿರತ್ನ'** ಎಂಬ ಬಿರುದನ್ನು ವಿದ್ವಾಂಸರುಗಳು ದಯಪಾಲಿಸಿದರು.

# 22. ದಾವಣಗೆರೆ, ಹರಿಹರ - ಭಾಷ್ಯಪಾಠ (1911)

## ಹರಿಹರದಲ್ಲಿ ಅನುಷ್ಠಾನ :

ಈಗ ಇನ್ನೂ ಕೆಲವು ದಿವಸಗಳು ಹರಿಹರದಲ್ಲಿಯೇ ಇದ್ದು ರೈಲಿನಲ್ಲಿ ದಾವಣಗೆರೆಗೆ ಹೋಗಿ ಬರುತ್ತಿದ್ದೆವು. ಈ ನಮ್ಮಿಬ್ಬರ ಅನುಷ್ಠಾನಪ್ರಮಾಣ ಒಂದಿಷ್ಟು ಬೆಳೆದುಕೊಂಡಿತೆನ್ನಬಹುದು. ಬೆಳಿಗ್ಗೆ ಸ್ನಾನಮಾಡಿ ಹರಿಹರೇಶ್ವರನ ದರ್ಶನವಾದ ಬಳಿಕ ಆಹ್ನಿಕ, ಪೂಜೆ, ಪಾರಾಯಣ, ಜಪ - ಇವುಗಳನ್ನು ಬೆಳೆಯಿಸಿದೆವು. ಸೋಮವಾರ, ಪ್ರದೋಷಗಳಲ್ಲಿ ಒಂದು ಸಾವಿರಕ್ಕೆ ಕಡಿಮೆಯಿಲ್ಲದೆಯೂ ಮಿಕ್ಕದಿನಗಳಲ್ಲಿ ಒಂದು ಮಾಲಿಕೆ (ನೂರೆಂಟಕ್ಕೆ ಕಡಿಮೆಯಿಲ್ಲದೆಯೆ) ಶಿವಪಂಚಾಕ್ಷರಿಯನ್ನು ಜಪಿಸಬೇಕೆಂದು ಶ್ರೀಗಳು ಅಪ್ಪಣೆ ಮಾಡಿದ್ದರು. ಆದರೆ ಅಷ್ಟರಿಂದ ನಮಗೆ ತೃಪ್ತಿಯಾಗಲಿಲ್ಲ ; ಪ್ರತಿದಿನವೂ ಆದಷ್ಟು ಹೆಚ್ಚಾಗಿಯೇ ಜಪಮಾಡುತ್ತಿದ್ದೆವು. ನಾನೂ ಚಿದಂಬರಯ್ಯನವರೂ ಬೇರೆಬೇರೆಯ ಮನೆಯಲ್ಲಿದ್ದೆವು. ನಾನು ಊಟಮಾಡಿಕೊಂಡು ಅವರಮನೆಗೆ ಹೋಗುವ ದರೊಳಗೆ ಅವರು ಸಿದ್ಧರಾಗಿರುತ್ತಿದ್ದರು. ಇಂತಿಷ್ಟು ಸಂಖ್ಯೆಯ ಜಪಕ್ಕೆ ಇಂತಿಷ್ಟು ಕಾಲವಾಗುತ್ತದೆ ಎಂಬುದನ್ನು ಅನುಭವದಿಂದ ಹೊಂದಿಸಿಕೊಂಡೆವಾದ್ದರಿಂದ ಎಲ್ಲವೂ ಗಡಿಯಾರದಂತೆ ಕ್ರಮದಿಂದ ನಡೆಯುತ್ತಿತ್ತು. ಸಾಯಂಕಾಲ ನಾನು ನದಿಯಲ್ಲಿ ಸಂಧ್ಯಾವಂದನೆ ಮಾಡಿಕೊಂಡು ಬಂದಬಳಿಕ, ಹರಿಹರೇಶ್ವರನ ದರ್ಶನ ಮಾಡಿ ಮನೆಯಲ್ಲಿ ಮಂಗಳಾರತಿ ಮಾಡಿ ಇಂದ್ರಾಕ್ಷಿ, ಶಿವಕವಚ, ಶಿವಸ್ತೋತ್ರಗಳು - ಇವನ್ನು ಹೆಚ್ಚಾಗಿ ಹೇಳುಕೊಳ್ಳುತ್ತಿದ್ದೆನು. ಮನಸ್ಸು ಬರುಬರುತ್ತಾ ಶಿವಮಯವಾಗಿತ್ತು .

## ಬೇಸಿಗೆಯ ರಜದಲ್ಲಿ ಭಾಷ್ಯ :

ಬೇಸಿಗೆಯ ರಜದಲ್ಲಿ ಧಾರವಾಡಕ್ಕೆ ಹೋಗಿ ಓದಬೇಕೆಂದು ಸಂಕಲ್ಪಿಸಿದ್ದೆವಾದರೂ ಪ್ಲೇಗಿನ ನಿಮಿತ್ತದಿಂದ ವಿರೂಪಾಕ್ಷ ಶಾಸ್ತ್ರಿಗಳವರು ಕೆಲವರು ಶಿಷ್ಯರೊಡನೆ ಸಹಸ್ರಬುದ್ಧೆ ಎಂಬ ಮಾಮಲೆದಾರರ ಮನೆಯಲ್ಲಿ ದೇವರಗುಡ್ಡ ಸ್ಟೇಷನ್ನಿರುವ ಖಚ್ಚರಿ ? ಎಂಬ ಗ್ರಾಮದಲ್ಲಿ ತಂಗಿದ್ದರು. ನಾವು ಅಲ್ಲಿಗೆ ಸುಮಾರು ಮುಕ್ಕಾಲುಮೈಲು ದೂರದಲ್ಲಿರುವ ದೇವರ ಗುಡ್ಡವೆಂಬಲ್ಲಿ, ಚಿಂತಾಮಣಿ ರಾಯರ ಅನುಬಂಧಿಗಳೊಬ್ಬರ ಮನೆಯಲ್ಲಿ ಇಳಿದುಕೊಂಡು, ಅಲ್ಲಿಂದ ಖಚ್ಚರಿಗೆ ಬಂದು ಭಾಷ್ಯವನ್ನು ಹೇಳಿಸಿಕೊಂಡು ಹೋಗುತ್ತಿದ್ದೆವು. ಬೆಳಿಗ್ಗೆ ಪಾಠಮಾಡುವದು, ಮಧ್ಯಾಹ್ನ ಚಿಂತನೆ, ಹೀಗೆ ಮಾಡುತ್ತಿದ್ದೆವು, ಮೊದಮೊದಲು ಪಾಠವು ಬಹಳ ಗಡುಚಾಗಿ

ಕಂಡಿತು. ಸ್ವಲ್ಪ ಸ್ವಲ್ಪವಾಗಿ ಓದಿಕೊಂಡು ಹೋಗಿ ಚಿಂತನೆಯನ್ನು ಮಾಡುವದರೊಳಗಾಗಿ ಬಿಸಿಲಿನಲ್ಲಿ ನಡೆದುಬಂದ ಆಯಾಸದಿಂದಲೂ ವಿಷಯದ ಗಹನತ್ವದಿಂದಲೂ ಎಷ್ಟೋ ಭಾಗ ಮರೆತೇ ಹೋಗಿರುತ್ತಿತ್ತು. ಆಮೇಲೆ ಬರುತ್ತ ಬರುತ್ತಾ ವಿಷಯವು ಒಂದಿಷ್ಟು ಮನಸ್ಸಿಗೆ ಹಿಡಿಯುವದಕ್ಕೆ ಮೊದಲಾಯಿತು.

ದೇವರಗುಡ್ಡದ ಜೀವನ ನನಗೆ ವಿಚಿತ್ರವಾಗಿ ತೋರುತ್ತಿತ್ತು. ದೇವರ ಗುಡ್ಡವೆಂದರೆ ಮೈಲಾರಲಿಂಗನ ಗುಡ್ಡ. ಆವೂರಲ್ಲಿ ನೀರಿನ ಕಷ್ಟವು ಬಹಳ. ಗುಡ್ಡದ ಮೇಲೆ ಇದ್ದದ್ದರಿಂದ ಅಲ್ಲಿಂದ ಇಳಿದು ಮೂರುನಾಲ್ಕು ಫರ್ಲಾಂಗು ನಡೆದು ಮೆಟ್ಟಲು ಇಳಿದು ನೀರು ಸೇದಬೇಕಾಗುತ್ತಿತ್ತು. ದೊಡ್ಡದೊಡ್ಡ ಕೊಡಗಳಲ್ಲಿ ನೀರನ್ನು ತುಂಬಿಕೊಂಡು ಹಗ್ಗವನ್ನು ತೆಗೆದುಕೊಂಡು ಗುಡ್ಡದ ಮೇಲಕ್ಕೆ ಏರಿಬರುವ ಹೆಂಗಸರ ಭಗೀರಥ ಪ್ರಯತ್ನವು ನಿಜವಾಗಿ ಮೆಚ್ಚತಕ್ಕದ್ದಾದರೂ ಜನರು ನೀರಿಗೆ ಪಡುವ ಕಷ್ಟವು ಅನುಕಂಪನೀಯವಾಗಿತ್ತು. ಆದರೆ ಅದೇನು ವಿಚಿತ್ರವೊ ದನಗಳು ಹಾಲನ್ನು ಚೆನ್ನಾಗಿಯೇ ಕೊಡುತ್ತಿದ್ದವು. ನಾವು ಹೋದದಿನ ರಾತ್ರೆಗೆ 'ಚಿಕ್ಕಯ್ಯನ' ಉತ್ಸವ, ಆದ್ದರಿಂದ ಮನೆಯಲ್ಲಿ ಫಲಾಹಾರ ಮೊಸರವಲಕ್ಕಿ , ಕೋಸುಂಬರಿ ಮುಂತಾದದ್ದೂ ಆಯಿತು. ಅದೇನೂ ಊಟಕ್ಕೆ ಕಡಿಮೆಯಿಲ್ಲ. ರಾತ್ರೆ ಹೂರಣದ ಕಡುಬು, ಪಾಯಸ -ಅನ್ನವೊಂದು ಹೊರತು ಮಿಕ್ಕದ್ದೆಲ್ಲ ಹೊಟ್ಟೆ ತುಂಬ ಹಾಕಿದರು. ರಾತ್ರೆಯಲ್ಲಿ ಉತ್ಸವದ ಗಲಾಟೆಯಿದ್ದೇ ಇತ್ತು. ನಾವು ಕಿಟಕಿಯಿಲ್ಲದ ಮಾಳಿಗೆಯ ಮನೆಯಲ್ಲಿ ಬಲಾತ್ಕಾರದ ಕುಂಭಕ ಪ್ರಾಣಾಯಾಮವನ್ನು ಅನುಭವಿಸುತ್ತಿದ್ದೆವು. ಮಾರನೆಯದಿನ 'ದೊಡ್ಡಯ್ಯ'. ಹಿಂದಿನ ದಿನದ ವಿಶೇಷದ ನೈವೇದ್ಯವಂತೆ ! ಇದೆಲ್ಲ ನನ್ನ ನೆನಪಿನಮೇಲೆ ಬರೆದದ್ದಾದ್ದರಿಂದ ಎಷ್ಟು ಹೆಚ್ಚುಕಡಿಮೆಯಾಗಿದೆಯೋ ತಿಳಿಯದು. ಮೈಲಾರದೇವರು ನಮ್ಮ ಮನೆಯ ದೇವರಾದರೂ, ಈಚೆಗೆ ಅದು ಹೇಗೋ ತಪ್ಪಿಹೋಗಿತ್ತು. ನಾವು ಆ 'ದೇವರ ಕಳ್ಳಒಕ್ಕಲು' ಎಂದು ಕೊಳ್ಳುತ್ತಿದ್ದರು ! ಅಲ್ಲಿ ಒಂದು ನಿಷ್ಕೃಷ್ಟವಾದ ದಿನ ಜ್ಯೋತಿಷ್ಯರು ಖಗೋಳ ಸಿದ್ಧಾಂತವನ್ನು ಅನುಸರಿಸಿ ಗೊತ್ತು ಮಾಡಿದ್ದ ಕಾಲಕ್ಕೆ ಸರಿಯಾಗಿ ಮೋಡಗಳ ಸಂಧಿಯಾಗಿ, ದೇವಸ್ಥಾನದ ಗೋಪುರದಮೇಲೆ ಒಂದು ಜ್ಯೋತಿಯ ದರ್ಶನವಾಗುತ್ತದೆಯಂತೆ. ಮೈಲಾರಲಿಂಗನನ್ನು ಖಂಡೇರಾಯ ಎಂದು ಕರೆಯುತ್ತಾರೆ. ನಮ್ಮೂರಿನಲ್ಲಿ ನಮ್ಮವರೊಬ್ಬರಿಗೆ ಖಂಡೇರಾಯ ಎಂಬ ಹೆಸರಿಟ್ಟಿದ್ದಕ್ಕೂ ಇನ್ನು ಹುಲಿಗೆ ಮೈಲಾರಯ್ಯನ ರಾಮಣ್ಣನವರೆಂಬ ಹೆಸರು ಬಂದಿದ್ದಕ್ಕೂ ಈ ಮೈಲಾರದೇವರ ಸಂಬಂಧವೇ ಕಾರಣವಿರಬೇಕೆಂದು ನನಗೆ ಈಗ ತಿಳಿಯಿತು. ಮಲ್ಲಾಸುರನನ್ನು ಕೊಲೆಗೈದ ಕಾರಣ ಮಲ್ಲಾರಿ ಎಂಬ ಹೆಸರು ಬಂದು ಮೈಲಾರಿ ಆಗಿತ್ತು

ಯಳ್ಳಂಬಳಸೆಯಲ್ಲಿ ನಾಡಿಗರ ಮನೆಯಲ್ಲಿ ಬಗ್ಗಯ್ಯಗಳಿಗೆ 'ಮೋನ ನೀಡುವ' ಪದ್ಧತಿ ಇತ್ತು ; ತಿರುಪತಿಯ ದೇವರಿಗೆ ದಾಸಯ್ಯಗಳು ಭಕ್ತರಾಗಿರುವಂತೆ, ಈ ಮೈಲಾರದೇವರಿಗೆ ಬಗ್ಗಯ್ಯಗಳು ಭಕ್ತರು. ದಾಸಯ್ಯಗಳು ಶಂಖಜಾಗಟೆ ಬಾರಿಸುವಂತೆ ಇವರು ಡಮರುಗವನ್ನು ಬಾರಿಸುತ್ತಾ ಶಿವಸ್ಮರಣೆಮಾಡುತ್ತಾರೆ.

## ಕೃಷ್ಣಶಾಸ್ತ್ರಿಗಳಿಂದ ಮಾನಸ ಪೂಜೆಯ ಕ್ರಮ :

ಖಿಚ್ಚರಿಯಲ್ಲಿ ನಮಗೆ ದೊರೆತ ಮತ್ತೊಂದು ಪ್ರಯೋಜನವು ಬೆಟಗೇರಿಯ ಕೃಷ್ಣಶಾಸ್ತ್ರಿಗಳ ಉಪದೇಶ. ಕುರ್ತಕೋಟಿಯ ಭಾಗವತರೂ ಆಗಿಂದಾಗ್ಗೆ ಬಂದಾಗ ಭಕ್ತಿಮಾರ್ಗದ ಕಡೆಗೆ ನಮ್ಮ ಮನಸ್ಸು ಹರಿಯುವಂತೆ ಮಾಡಿದ್ದರು. ಇದರಿಂದ ಭಗವಂತನ ಮಾನಸ ಪೂಜೆ ಮಾಡುವ ಬಗೆ ಹೇಗೆಂಬುದನ್ನು ತಿಳಿದುಕೊಳ್ಳ ಬೇಕೆಂಬ ಕುತೂಹಲವೂ ನಮಗೆ ಉಂಟಾಗಿತ್ತು. ಕೃಷ್ಣಶಾಸ್ತ್ರಿಗಳನ್ನು ಕಂಡು ನಾವಿಬ್ಬರು - ಮುಖ್ಯವಾಗಿ ಚಿದಂಬರಯ್ಯನವರು ಈ ವಿಷಯವನ್ನು ಪ್ರಸ್ತಾಪಿಸಿದೆವು. ಅವರು ಪರಮೇಶ್ವರನನ್ನು ಭಕ್ತಿಯಿಂದ ಆರಾಧಿಸುವವರಿಗೆ ಸಕಲ ಇಷ್ಟಾರ್ಥಗಳೂ ನೆರವೇರುವದೆಂಬುದನ್ನು ತಿಳಿಸಿ, ಪಾದದಿಂದ ಶಿರಸ್ಸಿನವರೆಗೆ ಪರಮೇಶ್ವರನ ಮೂರ್ತಿಯನ್ನು ಧ್ಯಾನಿಸುವ ಕ್ರಮವನ್ನು, ಪೂಜೆಮಾಡುವ ವಿಧಾನವನ್ನು ತಿಳಿಯಹೇಳಿದರು. ನಮಗೆ ಆ ಮಾರ್ಗವನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂಬ ಆಸೆಯು ಬಲವಾಯಿತು.

## ಭಾಷ್ಯಪಾಠ ವಿಚ್ಛಿನ್ನವಾಗಿ ಆದದ್ದು :

ಧಾರವಾಡಕ್ಕೆ ಭಾಷ್ಯಕ್ಕೆಂದು ಒಂದೆರಡು ಸಲ ಹೋಗಿಬಂದೆವೆಂದು ತೋರುತ್ತದೆ. ಉದ್ಗಟ್ಟಿಯಲ್ಲಿ ವಿರೂಪಾಕ್ಷಶಾಸ್ತ್ರಿಗಳವರು ಅದೇ ಸಹಸ್ರಬುದ್ಧೆಯವರ ಮನೆಯಲ್ಲಿದ್ದಾಗ ಮತ್ತೆ ಹೋಗಿದ್ದೆವು. ಧಾರವಾಡದಲ್ಲಿ ಛಾಂದೋಗ್ಯದ ಆರನೇ ಅಧ್ಯಾಯದ ಭಾಷ್ಯಪಾಠವನ್ನು ಶಿಷ್ಯರಿಗೆ ಶಾಸ್ತ್ರಿಗಳು ಹೇಳಿಕೊಡುತ್ತಿದ್ದರಿಂದ ಅದನ್ನೇ ಅಲ್ಲಿ ಓದಿದೆವು. ಸೂತ್ರಭಾಷ್ಯವನ್ನು ಓದಿದ ನೆನಪು ಇಲ್ಲ, ಆ ಕಾಲಕ್ಕೆ ಅಲ್ಲಿ ಲಲಿತ ಶಾಸ್ತ್ರಿಗಳೆಂಬ ಒಬ್ಬರು ಪಾಠಕ್ಕೆ ಬಂದಿದ್ದರು : ಅವರಿಗೆ ಕನ್ನಡವು ಬಾರದ್ದರಿಂದ ಸಂಸ್ಕೃತದಲ್ಲಿಯೇ ಅವರೊಡನೆ ಮಾತನಾಡಬೇಕಾಯಿತು. ಅವರು ಕೇವಲ ಸಾಲಿಗ್ರಾಮಪೂಜೆ, ಗೋಪಿಚಂದನದ ಊರ್ಧ್ವಪುಂಡ್ರ ತುಳಸೀ ಮಣಿಯ ಮಾಲಿಕೆಯನ್ನು ಧರಿಸುತ್ತಿದ್ದದ್ದು, ಇದೆಲ್ಲವನ್ನು ಕಂಡು ಅವರು ಮಾಧ್ವರೆಂದು ಕೊಂಡು ಮೊದಲು ಭ್ರಮಿಸಿದೆನಾದರೂ ಸಂಭಾಷಣೆಯಿಂದ ಅವರು ಭಾಗವತ ಸಂಪ್ರದಾಯದವರೆಂದು, ಅವರ ಊರಿನಲ್ಲಿ ಬಹಳ ಜನರು ಆ ಸಂಪ್ರದಾಯದವರೇ

ಇದ್ದರೆಂದು ತಿಳಿಯಿತು. ನಮ್ಮ ಮನೆಯಲ್ಲಿ ತಂದೆಯವರು ನಮಗೆ ಗಂಧವನ್ನು ಊರ್ಧ್ವಪುಂಡ್ರವಾಗಿಯೇ ಹಚ್ಚಿಸುತ್ತಿದ್ದದ್ದು, ಪೂಜೆಯನ್ನು ಮಾಡುವಾಗ ಸಾಲಿಗ್ರಾಮ ಒಂದನ್ನೇ ಬೇರೆಯಾಗಿ ಬಟ್ಟಲಲ್ಲಿಟ್ಟುಕೊಂಡು ತೀರ್ಥವನ್ನು ತೆಗೆಯುತ್ತಿದ್ದದ್ದು, ಪುರುಷಸೂಕ್ತಾನುಸಾರವಾಗಿ ವಿಷ್ಣುಪ್ರಧಾನವಾದ ಮಂತ್ರಗಳಿಂದ ಪೂಜೆಮಾಡುತ್ತಿದ್ದದ್ದು - ಇವೆಲ್ಲ ನನಗೆ ನೆನಪಿಗೆ ಬಂದು ಭಾಗವತ ಸಂಪ್ರದಾಯವೆಂಬುದರ ಅರ್ಥವು ಈಗ ಮನಸ್ಸಿನಲ್ಲಿ ಅರಳಿಕೊಂಡಿತು. ಉದ್ಗಟ್ಟಿಯಲ್ಲಿ ನಾವು ಇದ್ದದ್ದು ಸುಮಾರು 15 ದಿನಗಳು ಮಾತ್ರ ಇರಬಹುದು. ಆದರೇ ಅಲ್ಲಿದ್ದಷ್ಟು ಕಾಲವೂ ಕೂಡಲಿಯ ಶ್ರೀಶಂಕರಾಚಾರ್ಯರು ಪೂಜಿಸುತ್ತಿದ್ದ ದೇವರಗುಡಿಯಲ್ಲಿ ಮಡಿಯಲ್ಲಿಯೇ ಇದ್ದುಕೊಂಡು ಐತರೇಯ ಭಾಷ್ಯಚಿಂತನೆಯನ್ನು ಮಾಡುವದು, ಕಾಲಕಾಲಕ್ಕೆ ನದಿಯಲ್ಲಿ ಸಂಧ್ಯಾವಂದನೆ ಮಾಡುವದು, ಊಟಕ್ಕೆ ಕರೆದಾಗ ಮಾತ್ರ ಮನೆಯೊಳಕ್ಕೆ ಹೋಗಿಬರುವದು - ಹೀಗೆ ಮಾಡುತ್ತಿದ್ದೆವು. ಆಗ ಪಟ್ಟಾಭಿರಾಮಶಾಸ್ತ್ರಿಗಳೆಂಬವರೊಬ್ಬರು ಕರ್ಣಾಟಕರು ನಮ್ಮ ಜೊತೆಯಲ್ಲಿದ್ದರು. ಅವರೊಡನೆ ವೇದಾಂತವಿಚಾರ, ಕರ್ಮವಿಚಾರ - ಇವುಗಳ ಸಂಭಾಷಣೆಯು ನನಗೆ ದೊರಕಿತು. ಕರ್ಮಾನುಷ್ಠಾನದಿಂದ ಮನಸ್ಸಿಗೆ ಆಗುವ ಚಿತ್ತಶುದ್ಧಿ ಮತ್ತು ಏಕಾಂತವಾಸದಿಂದ ಆಗುವ ಪ್ರತ್ಯಕ್ಪ್ರವಣತೆಯ ಅರಿವು ನನಗೆ ಸ್ವಲ್ಪ ಮಟ್ಟಿಗೆ ಅನುಭವಕ್ಕೆ ಬಂತೆಂದು ಹೇಳಬಹುದು.

## ಗುರುನಾಥ ಪಾಠಕ ಮತ್ತು ಸಹಸ್ರಬುದ್ಧೆ:

ಈ ಮೇಲೆ ಬರೆದಿರುವ ಭಾಷ್ಯಪಾಠಗಳು ಯಾವ ಕಾಲಕ್ರಮದಲ್ಲಿ ಆದವು ಎಂಬುದು ನನ್ನ ನೆನಪಲ್ಲಿ ಚೆನ್ನಾಗಿ ಉಳಿದಿಲ್ಲ. ಆದರೂ ಅವರೆಡು ಘಟನೆಗಳನ್ನು ಉಲ್ಲೇಖಿಸದೇ ಬಿಡುವದು ನನಗೆ ಯುಕ್ತವೆಂದು ಕಾಣಲಿಲ್ಲವಾದ್ದರಿಂದ ಇಲ್ಲಿ ಬರೆದಿದ್ದೇನೆ. ಧಾರವಾಡದಲ್ಲಿ ನನ್ನ ಜೊತೆಯಲ್ಲಿ ಚಿದಂಬರಯ್ಯನವರು ಇದ್ದರೆಂಬುದು ಖಂಡಿತ ; ಉದ್ಗಟ್ಟಿಯಲ್ಲಿ ಅವರು ಇದ್ದರೆ, ಹೇಗೆ ಎಂಬುದನ್ನು ಅಷ್ಟೇ ಭರವಸೆಯಿಂದ ಹೇಳಲಾರೆ. ಅದು ಹೇಗಾದರೂ ಇರಲಿ, ಈ ಸಂದರ್ಭದಲ್ಲಿ ಧಾರವಾಡದ ಪಾಠಶಾಲೆಯ ಗುರುನಾಥರಾವ್‌ಪಾಠಕ, ಮತ್ತು ಉದ್ಗಟ್ಟಿಯಲ್ಲಿ ನನಗೆ ಪರಿಚಿತರಾದ ಸಹಸ್ರಬುದ್ಧೆ ಇವರಿಬ್ಬರ ವಿಷಯವಾಗಿ ಒಂದಿಷ್ಟು ವಾಚಕರಿಗೆ ತಿಳಿಸುವದು ಯುಕ್ತವೆಂದು ಭಾವಿಸಿರುತ್ತೇನೆ. ಗುರುನಾಥರಾಯರು ಧಾರವಾಡದ ಶ್ರೀಮದ್‌ಜಗದ್ಗುರು ಶಂಕರಾಚಾರ್ಯಪಾಠಶಾಲೆಯ ಸ್ಥಾಪಕರು. ಲಿಟರರಿ ಅಸೋಸಿಯೇಷನ್ ಎಂಬ ಸಮಿತಿಯ ಸ್ಥಾಪನೆ, ಕಟ್ಟಡ ನಿರ್ಮಾಣ, ಅನ್ನಛತ್ರದ ಸ್ಥಾಪನೆ, ಗ್ರಂಥಭಂಡಾರ ಏರ್ಪಾಟು - ಮುಂತಾದವುಗಳೆಲ್ಲದರಲ್ಲಿಯೂ

ಆಸಕ್ತಿಯನ್ನು ವಹಿಸಿ ತಮ್ಮ ವಕೀಲಿಯ ಉದ್ಯೋಗಕ್ಕೆ ಆಗುವ ತೊಂದರೆಯನ್ನು ನಿರ್ಲಕ್ಷಿಸಿ, ಪಾಠಶಾಲೆಗಾಗಿ ದುಡಿದ ಮಹಾವ್ಯಕ್ತಿ. ನಾವು ಪಾಠಶಾಲೆಗೆ ಹೋದಾಗ ಇವರಿಗೆ ಸ್ವಲ್ಪ ಪಾರ್ಶ್ವವಾಯುವಿದ್ದಂತೆ ನೆನಪಿದೆ. ಅವರು ಪಾಠಶಾಲೆಯ ಮೇಲುಭಾಗದಲ್ಲಿಯೇ ಇರುತ್ತಿದ್ದರು. ಆದರೆ ಅವರ ಪ್ರಭಾವವು ಪಾಠಶಾಲೆಯ ಎಲ್ಲಾ ವಿಭಾಗಗಳ ಮೇಲು ಬಿದ್ದಿರುತ್ತಿತ್ತು. ಒಮ್ಮೆ ಇವರನ್ನು ನಾನು ಕಂಡು 'ಪುಸ್ತಕ ಭಂಡಾರದಲ್ಲಿ ತರ್ಕದ ಪುಸ್ತಕಗಳು ಇವೆಯೆ ?' ಎಂದು ಕೇಳಿದೆನು. ಅವರು 'ಮಹರಾಯ ಹೀಗೆ ಕೇಳಿದವರೇ ಯಾರೂ ಇಲ್ಲ. ಇಗೊ ನೀವು ಮೇಲಿನ ಅಂತಸ್ತಿಗೆ ಏರಿ ಬರುವಾಗ ದಾರಿಯಲ್ಲೆಲ್ಲ ಪುಸ್ತಕಗಳ ಬೀರುಗಳೇ ಇರುತ್ತವೆ. ನೋಡಿ, ಬೇಕಾದರೆ !' ಎಂದು ನನ್ನ ಕೈಯಲ್ಲಿ ಕೀಲಿಕೈಗಳ ಗೊಂಚಲನ್ನು ಕೊಟ್ಟರು. ನಾನು ಒಂದೊಂದಾಗಿ ಬೀರುಗಳನ್ನು ತೆಗೆದು ನೋಡಿ ಅತ್ಯಂತ ಹರ್ಷಿತನಾದೆನು. 'ಇಲ್ಲಿಯೇ ಇದ್ದುಕೊಂಡು ವಿದ್ಯಾವ್ಯಾಸಂಗಕ್ಕೆ ನಿಂತುಬಿಡಲೇ ? ಈ ಗ್ರಂಥಗಳನ್ನು ಒಂದೊಂದಾಗಿ ನೋಡುವ ಸೌಭಾಗ್ಯವು ನನಗೆ ಬರಬಹುದೇ ?' ಎನ್ನಿಸಿತು. ಅವರು ಶಿಲಾಲಿಪಿಯಲ್ಲಿ ಅಚ್ಚಾಗಿದ್ದ ಒಂದು ವೃತ್ತಿ ಸಹಿತವಾದ ತರ್ಕಸಂಗ್ರಹವನ್ನು ಉಚಿತವಾಗಿ ನನಗೆ ಕೊಟ್ಟಿದ್ದರು ; ಅದು ಬಹುಕಾಲ ನನ್ನಲ್ಲಿದ್ದು ಈಗ ಕಳೆದುಹೋಗಿದೆ. ಇನ್ನೊಮ್ಮೆ ನನ್ನನ್ನು ಕರೆದು 'ಈಗ ನೀವು ಪಾಠಶಾಲೆಯಲ್ಲಿ ಏನು ಓದುತ್ತಿದ್ದೀರಿ ?' ಎಂದು ಕೇಳಿದರು, ಛಾಂದೋಗ್ಯೋಪನಿಷತ್ತು ಎಂದು ನನ್ನಿಂದ ಉತ್ತರವು ಬರುತ್ತಲೂ 'ದಾರಿಯಲ್ಲಿ ಬಳೆಯ ಚೂರುಗಳು ಬಿದ್ದಿದ್ದರೆ ಅವನ್ನು ತೆಗೆದು ಹಾಕಬೇಕೆಂದು ಅದರಲ್ಲಿ ಬರೆದಿದೆಯೆ ?' ಎಂದು ಕೇಳಿದರು. ಅವರು ನಗುಮುಖವನ್ನೇನೂ ತೋರಿಸಲಿಲ್ಲವಾಗಿ ನಾನು, ಅವರು ನಿಜವಾಗಿಯೂ ಪ್ರಶ್ನೆ ಹಾಕಿರಬೇಕೆಂಬ ಮೂರ್ಖಕಲ್ಪನೆಯಿಂದ 'ಇಲ್ಲ, ಇಂಥ ಲೌಕಿಕ ವಿಷಯಗಳ ನ್ನೇನೂ ಅವುಗಳಲ್ಲಿ ಬರೆದಿರುವದಿಲ್ಲ' ಎಂದೆನು. 'ಸರಿಸರಿ ! ಇದನ್ನೆಲ್ಲ ಅದರಲ್ಲೇಕೆ ಬರೆದಿದ್ದಾರು !' ಎಂದು ಸುಮ್ಮನಿದ್ದುಬಿಟ್ಟರು. ಆದರೆ ನನ್ನ ಮನಸ್ಸಿನಲ್ಲಿ ಈ ಪ್ರಶ್ನೆಯನ್ನೇಕೆ ಅವರು ಕೇಳಿರಬೇಕು ?' ಎಂಬ ಬಗ್ಗೆ ಯೋಚನೆ ಹುಟ್ಟಿಕೊಂಡು ನನ್ನನ್ನು ಕಾಡುವದಕ್ಕೆ ಮೊದಲುಮಾಡಿತು. ಕೊನೆಗೆ ಅನ್ನಸತ್ರದಿಂದ ಪಾಠಶಾಲೆಗೆ ಬರುವ ದಾರಿಯಲ್ಲಿ ದೇವಾಲಯದ ಮುಂದೆ ಬಳೆಚೂರುಗಳು ಬಿದ್ದಿದ್ದದ್ದು ನನ್ನ ಕಣ್ಣಿಗೆ ಅಕಸ್ಮಾತ್ತಾಗಿ ಬಿತ್ತು, ಕೂಡಲೆ ನನಗೆ ಪ್ರಶ್ನೆಯ ಅಭಿಪ್ರಾಯವು ಹೊಳೆಯಿತು. ವೇದಾಂತದ ದೊಡ್ಡ ದೊಡ್ಡ ವಿಚಾರವನ್ನು ಮಾಡುತ್ತಿರುವವರಿಗೆ, ಎಲ್ಲರಿಗೂ ಒಬ್ಬನೇ ಆತ್ಮನು ಎನ್ನುತ್ತಿರುವವರು ಎನ್ನುವವರಿಗೆ, ಒಂದು ಗಾಜಿನ ಚೂರು ನನ್ನ ಕಾಲಿಗೆ ಚುಚ್ಚಿದರೆ ನೋಯುವಂತೆಯೇ ಮತ್ತೊಬ್ಬರಿಗೂ ನೋಯುವದು ಎಂಬ ಸಣ್ಣವಿಷಯವೊಂದು ಮನಸ್ಸಿಗೆ ಹತ್ತಬಾರದೆ ? ಎಂಬುದು ಆ ಮಹಾಶಯನ

ಹೃದಯವಾಗಿರಬೇಕು ಎಂದುಕೊಂಡೆನು. ಹೀಗೆ ಪಾಠಶಾಲೆಗೆ ಮೇಲು ವಿಚಾರಣೆಯ ದೃಷ್ಟಿಯಿಂದ ಗುರುಗಳೆನಿಸಿದ್ದ ಗುರುನಾಥರಾಯರು ನನಗೆ ವೇದಾಂತವನ್ನು ವ್ಯವಹಾರಕ್ಕೆ ಇಳಿಸುವದು ಅವಶ್ಯವೆಂದು ಸೂಚಿಸುವ ವಿಷಯಕ್ಕೆ ನನಗೆ ಅನ್ವರ್ಥ ಗುರುನಾಥರಾಯರೇ ಆದರು !

ಸಹಸ್ರಬುದ್ಧೆಗಳ ವಿಷಯಕ್ಕೆ ನನಗೆ ಹೆಚ್ಚು ತಿಳಿಯದು. ನಮ್ಮ ಭಾಷ್ಯ ಗುರುಗಳಾದ ವಿರೂಪಾಕ್ಷಶಾಸ್ತ್ರಿಗಳನ್ನು ಬಹುಪೂಜ್ಯಬುದ್ಧಿಯಿಂದ ನೋಡುತ್ತಿದ್ದು, ಅವರ ಶಿಷ್ಯರನ್ನು ಕೂಡ ಅವರು ಆದರದಿಂದಲೇ ಸತ್ಕರಿಸಿದರೆಂಬುದನ್ನು ಪ್ರತ್ಯಕ್ಷವಾಗಿ ಒಂದೆರಡು ಸಲ ನೋಡಿದ್ದೆ. ಅವರು ಸರಕಾರಿಯ ನೌಕರಿಯಲ್ಲಿದ್ದಾಗ್ಯೂ ಅಗ್ನಿಯನ್ನು ಇಟ್ಟು ಪೂಜಿಸುತ್ತಿದ್ದರು. ಒಮ್ಮೆ ಒಬ್ಬ ಕಲೆಕ್ಟರು ಸಾಹೇಬರು ತಾಲ್ಲೂಕು ಕಚೇರಿಯ ಪರೀಕ್ಷೆಗೆಂದು ಅನಿರೀಕ್ಷಿತವಾಗಿ ಹನ್ನೆರಡು ಘಂಟೆಗೆ ಸರಿಯಾಗಿ ಬಂದರಂತೆ. ತಾಲ್ಲೂಕು ಕಚೇರಿಯ ನೌಕರರೆಲ್ಲರೂ ತಮ್ಮತಮ್ಮ ಸ್ಥಾನದಲ್ಲಿ ಸ್ವಕಾರ್ಯ ನಿರತರಾದದ್ದು ಕಚೇರಿಯ ಶಿಸ್ತಿನಲ್ಲಿ ಒಂದಿಷ್ಟೂ ಹೆಚ್ಚು ಕಡಿಮೆಯಿಲ್ಲದೆ ಎಲ್ಲವೂ ಸುವ್ಯವಸ್ಥಿತವಾಗಿದ್ದದ್ದೂ ಅವರಿಗೆ ಬಹಳ ಸಂತೋಷವನ್ನುಂಟುಮಾಡಿತು. ಆತನು 'ಮಾಮಲೆದಾರರು ಇನ್ನೂ ಏಕೆ ಕಚೇರಿಗೆ ಬಂದಿಲ್ಲ' ಎಂದು ಕೇಳಿದ್ದಕ್ಕೆ 'ಅವರು ಅಗ್ನ್ಯಾರಾಧಕರಾಗಿದ್ದು ತಮ್ಮ ಆಹ್ನಿಕವನ್ನು ಪೂರೈಸಿಕೊಂಡೇ ಕಚೇರಿಗೆ ದಯಮಾಡಿಸುತ್ತಾರೆ ; ಇನ್ನು ಸ್ವಲ್ಪ ಹೊತ್ತಿಗೆ ಅವರು ಅವಶ್ಯವಾಗಿ ಬರುವರು' ಎಂಬ ಉತ್ತರವು ಬಂದಿತು. ಅವರನ್ನು ಕರೆತರುವದಕ್ಕೆ ಶಿಪಾಯಿಯನ್ನು ಕಳುಹಿಸುವದಕ್ಕೆ ಕಚೇರಿಯವರು ಪ್ರಯತ್ನಿಸುತ್ತಿರುವದನ್ನು ತಿಳಿದು 'ಬೇಡ, ಅವರನ್ನೇನೂ ನಾನು ಪ್ರತ್ಯಕ್ಷವಾಗಿ ನೋಡತಕ್ಕದ್ದಿರುವದಿಲ್ಲ. ಕಚೇರಿಯನ್ನಷ್ಟೇ ನೋಡುವದಕ್ಕೆ ಬಂದಿದ್ದೆ, ಅವರು ಇಲ್ಲಿ ಇಲ್ಲದಿರುವಾಗಲೂ ಕಚೇರಿಯ ಕೆಲಸಗಳು ಇಷ್ಟು ವಿತರಣೆಯಿಂದ ನಡೆಯುತ್ತಿರುವಲ್ಲಿ ಅವರೇ ಎದುರಿಗಿದ್ದರೆ ಇನ್ನೂ ಚೆನ್ನಾಗಿಯೇ ನಡೆಯುವದೆಂದು ಹೇಳತಕ್ಕದ್ದೇನು ?'ಎಂದು, 'ಈ ಮಾಮಲೆದಾರರು ಬಹುದಕ್ಷರು, ಕಚೇರಿಯನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ, ಇವರು ಮತಾಚಾರ ನಿಮಿತ್ತದಿಂದ ಬೆಳಗಿನ ಹೊತ್ತು ಸ್ವಲ್ಪ ತಡವಾಗಿ ಬರುತ್ತಾರೆಂದು ಕೇಳಿದ್ದೇನೆ ; ಇವರನ್ನು ಈ ವಿಷಯದಲ್ಲಿ ಯಾರೂ ಆಕ್ಷೇಪಿಸಲಿಕ್ಕಿಲ್ಲವೆಂಬುದು ನಾನು ನಂಬುತ್ತೇನೆ', ಎಂದು ವಿಜಿಟರ್ಸ್ ಬುಕ್ಕಿನಲ್ಲಿ ಬರೆದು ಹೋದರಂತೆ !. ಸಹಸ್ರ ಬುದ್ಧೆಯವರನ್ನು ದೇವಮಾಮಲೆದಾರ್ ಎಂದು ಕೆಲವರು ಕರೆಯುತ್ತಿದ್ದರಂತೆ. ಅವರು ಕರ್ಮದಲ್ಲಿ ಬಹಳ ಶ್ರದ್ಧಾವಂತರು. ನಾನು ಇದ್ದ ಕಾಲದಲ್ಲಿ ಒಂದು ಆರಾಧನೆ ಮಾಡುತ್ತಿದ್ದರು. ಇವರ ಹಿರಿಯರು ಸಂನ್ಯಾಸವನ್ನು ಗ್ರಹಣಮಾಡಿ ದೇಹಬಿಟ್ಟದ್ದಕ್ಕಾಗಿ ಈ ಆರಾಧನೆ. ಆರಾಧನೆಗೆ ನನಗೆ ಆಮಂತ್ರಣಕೊಟ್ಟಿದ್ದರು. ಅಲ್ಲಿ ಎಲ್ಲವೂ ಶ್ರದ್ಧಾಪುರಸ್ಸರವಾಗಿ ವಿಜೃಂಭಣೆಯಿಂದ

ನಡೆಯುತ್ತಿತ್ತು. ಸಂನ್ಯಾಸಿಗಳಾಗಿ ದೇಹವನ್ನು ಬಿಟ್ಟವರಿಗೆ ಮಾಡುವ ಆರಾಧನೆಯನ್ನು ಅಲ್ಲಿಯೇ ನಾನು ಕಂಡದ್ದು. ಸಹಸ್ರಬುದ್ಧೆ ನಾರಾಯಣರಾಯರು ವೇದಾಂತವನ್ನು ಓದಿದ್ದಕ್ಕೆ ಗುರುದಕ್ಷಿಣೆಯಾಗಿ ಶಾಸ್ತ್ರಿಗಳವರು ಗದುಗಿನಲ್ಲಿ ಮಾಡಿದ ಸೋಮಯಾಗಕ್ಕೆ ಹೆಚ್ಚಿನ ಧನಸಹಾಯ ಮಾಡಿದರೆಂದು ಈಚೆಗೆ ತಿಳಿಯಬಂದಿದೆ. ಸಹಸ್ರಬುದ್ಧೆಯವರು ಶಾಸ್ತ್ರಿಗಳನ್ನು ತಾವು 'ಅದ್ವೈತ ಸಿದ್ಧಿಯನ್ನು ಇನ್ನೂ ಯಾರಿಗೂ ಹೇಳಿಲ್ಲವೇಕೆ ?' ಎಂದು ಕೇಳಿದರು, ಶಾಸ್ತ್ರಿಗಳು 'ನನಗೆ ಇನ್ನು ಯಾರೂ ತಕ್ಕವರು ಸಿಕ್ಕಿಲ್ಲ, ಮುಂದೆ ಒಂದು ವೇಳೆ ಇವರೇನಾದರೂ ಅದನ್ನು ಶ್ರವಣಮಾಡಬಹುದೇನೋ !' ಎಂದರು. ನನ್ನ ದುರ್ದೈವದಿಂದ ಆ ಶ್ರವಣದ ಪುಣ್ಯವೇನೂ ದೊರಕಲಿಲ್ಲ. ಶಾಸ್ತ್ರಿಗಳ ಬಾಯಿಂದ ಆ ವಾಕ್ಯವನ್ನು ಶ್ರವಣ ಮಾಡುವ ಯೋಗವು ಮಾತ್ರ ಇತ್ತೆಂದು ತೋರುತ್ತದೆ. ಹೇಗೇ ಆಗಲಿ, ಸಹಸ್ರಬುದ್ಧೆಯವರಿಂದ ಕರ್ಮಶ್ರದ್ಧೆ, ಆತಿಥಿಸತ್ಕಾರ, ಸಂಸ್ಕೃತವಿದ್ಯೆಗೆ ಪ್ರೋತ್ಸಾಹ - ಇವುಗಳನ್ನು ಕಂಡು ಬಹಳ ಸಂತುಷ್ಟನಾದೆನು.

## ಮದುವೆಯ ಸಮಾರಂಭದಲ್ಲಿ ಭಾಷ್ಯಪಾಠ :

ಶಾಸ್ತ್ರಿಗಳವರು ನಮಗೆ ಭಾಷ್ಯಪಾಠವನ್ನು ಹೇಳುವದರಲ್ಲಿ ಬಹಳ ಆದರ. ಧಾರವಾಡದಲ್ಲಿದ್ದಾಗ ಗುರುಗಳು ತಮಗೆ ಪಾಠ ಹೇಳಿದ್ದು ತಮಗೆ ಪತ್ನೀವಿಯೋಗವಾದಾಗ ಅವರು 'ನೀನು ಅಗ್ನಿಹೋತ್ರವನ್ನಿಟ್ಟುಕೊಂಡಿರಬೇಕೆಂದು ನಮ್ಮ ಇಚ್ಛೆ –' ಎಂದು ಹೇಳಿಕಳುಹಿಸಿದ್ದಕ್ಕೆ 'ಶ್ರೀಗಳ ಮುಖದಿಂದ ವೇದಾಂತವನ್ನು ಶ್ರವಣಮಾಡಿದ ಮೇಲೂ ಇನ್ನೂ ಕರ್ಮದಲ್ಲಿಯೇ ನಿಂತುಬಿಡುವ ಅಭಿಲಾಷೆ ಉಳಿಯುವದೇ ? ಯಜ್ಞಪಾತ್ರೆಗಳನ್ನು ಪತ್ನಿಯ ಜೊತೆಯಲ್ಲಿಯೇ ದಹನಮಾಡಿ ಬಿಟ್ಟಿರುತ್ತೇನೆ. ಮುಂದಕ್ಕೆ ನನಗೆ ವೇದಾಂತದಲ್ಲಿಯೇ ನಿಷ್ಠನಾಗಿರುವಂತೆ ಅನುಗ್ರಹಿಸಬೇಕು' ಎಂದು ಹೇಳಿಕಳುಹಿಸಿದ್ದು, ಇಂಥ ಕಥೆಗಳನ್ನು ಹೇಳುವದರಲ್ಲಿ ಕೂಡ ನಮಗೆ ಶಿಷ್ಟಾಚಾರಗಳನ್ನು ತಿಳಿಸುತ್ತಿದ್ದರು. ತಾವು ಮನೆಯಲ್ಲಿ ಒಬ್ಬರೇ ಇದ್ದಾಗ ಕಸಗುಡಿಸುವಾಗಲೂ ವೇದಭಾಷ್ಯಪುಸ್ತಕವನ್ನು ಒಂದು ಕಡೆ ಇಟ್ಟಿದ್ದನ್ನು ನೋಡುತ್ತಲೇ ಮನೆಗೆಲಸಗಳನ್ನು ಮಾಡುತ್ತಿದ್ದುದನ್ನು ನಮಗೆ ಒಮ್ಮೆ ಹೇಳಿದ್ದರು. ಅದು ನಿಜವೆಂದು ನಾವು ನಂಬುವದಕ್ಕೆ ನಮ್ಮ ವಿಷಯದಲ್ಲಿ ಅವರ ವರ್ತನವೇ ಸಾಕಾಗಿತ್ತು. ಅವರು ಸಂದರ್ಭವು ಸಿಕ್ಕಾಗಲೆಲ್ಲ ನಮಗೆ ವೇದಾಂತವಿಚಾರವನ್ನು ಹೇಳುತ್ತಲೇ ಇರುತ್ತಿದ್ದರು. ರಾಣಿಬೆನ್ನೂರಿನಲ್ಲಿ ಅವರ ಮಗಳ ಮದುವೆಯಾಯಿತು. ನಾವೂ ಆಗ್ಗೆ ಅಲ್ಲಿಗೆ ಅವರೊಡನೆ ಹೋಗಿದ್ದೆವು. ಆಗ ಅನಧ್ಯಯನ ಕಾಲವಾದರೂ ಬಂಡಿಯಲ್ಲಿ ಸುಮ್ಮನೆ ಕುಳಿತಿರುವದು ಏಕೆಂದು 'ಛಾಂದೋಗ್ಯದ ವಿಷಯವಾಕ್ಯವು ನಾಳೆ ಸೂತ್ರಭಾಷ್ಯದಲ್ಲಿ ಬರುತ್ತಿದೆ, ಅದರ ಸಂಬಂಧವನ್ನು ಈಗ ಬಾಯಲ್ಲಿ ಹೇಳಿರುತ್ತೇನೆ ಕೇಳಿರಿ !' ಎಂದು

ಹೇಳುತ್ತಿದ್ದರು. ಮದುವೆಯ ನಡುವೆಯಲ್ಲಿಯೂ ಸಮಯ ಸಿಕ್ಕಿದರೆ ಅವರು ಭಾಷ್ಯಪಾಠವನ್ನು ಹೇಳುವದಕ್ಕೆ ಸಿದ್ಧರಿದ್ದರು. 'ಶಾಸ್ತ್ರಿಗಳಿಗೆ ಈಗಲಾದರೂ ಸ್ವಲ್ಪ ಬಿಡುವು ಕೊಡಬಾರದೆ ?' ಎಂದು ಜನರು ನಮ್ಮನ್ನು ಹಾಸ್ಯಮಾಡಿದ್ದೂ ಉಂಟು.

ಶಾಸ್ತ್ರಿಗಳ ಮನೆಯ ಮದುವೆಯಲ್ಲಿಯೂ ನಾವು ತಿಳಿದುಕೊಳ್ಳತಕ್ಕ ಕೆಲವು ವಿಚಾರಗಳಿದ್ದವು ; ಅವರು ನಮ್ಮ ಕಡೆಯ ಪದ್ಧತಿಯಂತೆ ಓಲಗವಾದ್ಯದವರನ್ನು ಪ್ರಧಾನವಾಗಿ ಹಿಡಿಯದೆ ವೇದಘೋಷದಿಂದ ಬೀಗರನ್ನು ಕರೆಯುವದು ಕಳುಹಿಸುವದು - ಮುಂತಾದವನ್ನು ಮಾಡಿಸುತ್ತಿದ್ದರು. ವೇದಾಧ್ಯಾಪಕರಾದ ಹಲವರು ಬ್ರಾಹ್ಮಣರನ್ನು ಕರೆಯಿಸಿ ಅವರಿಗೆ ಬೇರೆಯಾಗಿ ಭೋಜನಾದಿಗಳಿಗೆ ಏರ್ಪಡಿಸಿದರು. ಆ ಬ್ರಾಹ್ಮಣರು ನಿತ್ಯವೂ ತಾವಿದ್ದಲ್ಲಿ ವೇದಾಧ್ಯಯನ, ದೇವರ ಅಭಿಷೇಕ, ಪೂಜೆ - ಮುಂತಾದ ಅನುಷ್ಠಾನಗಳಿಂದ ವಿವಾಹಕ್ಕೆ ಶೋಭೆಯನ್ನುಂಟು ಮಾಡುತ್ತಿದ್ದರು. ಈ ಪದ್ಧತಿಯನ್ನು ಈ ದಿನ ಕೆಲವರಾದರೂ ಅನುಕರಿಸುವದಾದರೆ ವೇದಾಧ್ಯಯನಕ್ಕೆ ಪ್ರೋತ್ಸಾಹವು ಸಿಕ್ಕೀತು. ಮದುವೆಯಲ್ಲಿ ಉತ್ತರಕರ್ಣಾಟಕದವರ ಬೀಗರ ಔತಣದ ಕೆಲವು ವಿನೋದಗಳು ನಮಗೆ ಈ ಸಂದರ್ಭದಲ್ಲಿ ಕಣ್ಣಿಗೆ ಬಿದ್ದವು. ಅಲ್ಲಿ ಬಹಳ ಗದ್ದಲವು ಕಾಣಿಸುತ್ತಿತ್ತಾದರೂ ಶಾಸ್ತ್ರಿಗಳಿಗೆ ಹೆದರಿ ಬಹಳ ಗಂಭೀರವಾದ ನಡತೆಯಿಂದ ಜನರು ವರ್ತಿಸುತ್ತಾರೆ ಎಂದು ತಿಳಿಯಬಂತು.

ಒಟ್ಟಿನಲ್ಲಿ ನನಗೆ ಶಾಸ್ತ್ರಿಗಳವರ ಕರ್ಮಾನುಷ್ಠಾನ ಶ್ರದ್ಧೆಯೇ ಅಲ್ಲದೆ ವಿದ್ವತ್ತು ಪಾಠವನ್ನು ಹೇಳುವದರಲ್ಲಿದ್ದ ಪರಮಾದರ, ಮೃದುಸ್ವಭಾವ, ಯಾವಾಗಲೂ ಅವರು ಧರಿಸಿದ್ದ ಹಸನ್ಮುಖ, ಇವುಗಳು ನಮ್ಮಿಬ್ಬರ ಮೇಲೂ ಅತ್ಯಂತ ಹೆಚ್ಚಿನ ಪರಿಣಾಮವನ್ನುಂಟುಮಾಡಿದ್ದವು. ನನಗಂತೂ ಶೃಂಗೇರಿಯ ಜಗದ್ಗುರುಗಳಲ್ಲಿ ಶಾಂತಿಪಾಠವನ್ನು ಪಡೆದದ್ದು ಶಾಸ್ತ್ರಿಗಳಲ್ಲಿ ಪಾಠವನ್ನು ಮಾಡಿದ್ದು ಈ ಎರಡೂ ಜೀವನದಲ್ಲಿ ಎರಡು ಕ್ರಾಂತಿಕಾರಕ ಘಟನೆಗಳೆಂದೇ ಭಾವನೆ. ಕಾಲಟಿಯಲ್ಲಿ ಯಾರೋ ಜಗದ್ಗುರುಗಳಿಗೆ ಒಪ್ಪಿಸಿದ ಸಂಸ್ಕೃತ ಭಾಷೆಯ ಮಾನಪತ್ರದ ಪ್ರತಿಯನ್ನು ಭಾಷ್ಯಪುಸ್ತಕದಲ್ಲಿಟ್ಟುಕೊಂಡಿದ್ದೆನು. ಪಾಠಕ್ಕೆ ಪುಸ್ತಕವನ್ನು ಬಿಚ್ಚಿದಾಗ ಆ ಮಾನ ಪತ್ರದಲ್ಲಿದ್ದ ಗುರುಗಳ ಭಾವಚಿತ್ರದ ದೃಷ್ಟಿ ವಿಶೇಷವು ಆಯಾದಿನ ನನ್ನ ಭಾವನೆಯಿಂದ ಸೌಮ್ಯವಾಗಿಯೋ, ಉದಾಸೀನಭಾವಯುತವಾಗಿಯೋ, ಕ್ರೂರ ವಾಗಿಯೋ ಕಾಣುತ್ತಿದ್ದವು ; ಆ ಭಾವನೆಗೆ ಅನುಗುಣವಾಗಿಯೇ ಆಯಾದಿನದ ಪಾಠವು ಚೆನ್ನಾಗಿ ತಿಳಿಯುವದು ಅಥವಾ ತಿಳಿಯದಿರುವದು, ಆಯಾದಿನದ ನಿತ್ಯವ್ಯವಹಾರವು ಹರ್ಷದಿಂದ ಅಥವಾ ದುಃಖ ಪರಿಣಾಮದಿಂದ ಸಾಗುವದೂ ಆಗುತ್ತಿತ್ತೆಂದು ತೋರುತ್ತಿತ್ತು ! ಶಾಸ್ತ್ರಿಗಳು ಭಾಷ್ಯಪಾಠದಲ್ಲಿ ಆಗಾಗ್ಗೆ ಹೇಳುತ್ತಿದ್ದ

ದೃಷ್ಟಾಂತಗಳೂ, ಅವರ ತಿತಿಕ್ಷಾದಿಗಳೂ ನನ್ನ ಮೇಲೆ ಬಹಳ ಉತ್ತಮ ಪರಿಣಾಮವನ್ನುಂಟುಮಾಡುತ್ತಿದ್ದವು. ಎಲ್ಲಿ ಎಂಬುದು ಈಗ ನೆನಪಿಲ್ಲ, ಒಮ್ಮೆ ಅವರಿಗೆ ಕಾಲಿನಲ್ಲಿ ನಾರುಹುಣ್ಣು ಎದ್ದಿತ್ತು ; ಅವರನ್ನು ನಾವು ಎತ್ತಿಕೊಂಡು ಶೌಚಾಗೃಹಕ್ಕೆ ಕಳುಹಿಸಿಕೊಡಬೇಕಾಗಿತ್ತು. ಆದರೂ ಅವರು ಮೃಜ್ಜಲ ಶೌಚದ ಆಚರಣೆಯಲ್ಲಿ ಸ್ವಲ್ಪವೂ ಕಡಿಮೆ ಮಾಡುತ್ತಿರಲಿಲ್ಲ. ವೈದ್ಯರು ಕಾಲಿಗೆ ನೀರನ್ನೇ ಹಾಕಬಾರದೆಂದು ಹೇಳಿದ್ದಾರೆ ಎಂದದ್ದಕ್ಕೆ 'ನಮ್ಮ ಡಾಕ್ಟರು ಹಾಕಬೇಕೆಂದು ಹೇಳಿದ್ದಾರೆ ; ಒಂದೊಂದು ಜನ್ಮಕ್ಕೂ ಬರುವ ಶರೀರಕ್ಕೆ ಈ ಡಾಕ್ಟರೇ ಹೇಗೆ ಹೊಣೆಗಾರರಾದಾರು ?' ಎಂದುಬಿಟ್ಟರು. ಪಾಠವನ್ನು ಹೇಳುವಾಗ 'ಸಂಸಾರದ ಸುಖವು ಹೀಗಿದೆ' ಎಂದು ನಾರುಹುಣ್ಣಿನ ಸುತ್ತಲೂ ಬೆರಳನ್ನು ಆಡಿಸುತ್ತಾ ತೋರಿಸುತ್ತಿದ್ದರು. ಹುಣ್ಣು ತಟಗುಟ್ಟುತ್ತಿದ್ದದ್ದರಿಂದ ಅದರ ಸುತ್ತಲು ಬೆರಳಾಡಿಸಿದರೆ ಸ್ವಲ್ಪ ಹಾಯೆನಿಸುತ್ತಿತಷ್ಟೆ, ಅದೇ ಸುಖ ; ಹಾಗೆ ಆಯಾ ವ್ಯಾಧಿಗೆ ನಾವು ಮಾಡಿ ಕೊಳ್ಳುವ ಪ್ರತೀಕಾರವೇ ಸಂಸಾರದ ಸುಖ ಎಂಬುದು ಶಾಸ್ತ್ರಗಳ ಅಭಿಪ್ರಾಯ.

# 23. ದಾವಣಗೆರೆ-ಗೋಂದಾವಳಿಯ ಮಹಾರಾಜರ ಅನುಗ್ರಹ

## ಚಿದಂಬರಯ್ಯನವರು ಬ್ರಹ್ಮಚೈತನ್ಯರ ಸೇವೆಗೆ ನಿಂತದ್ದು:

ಮಹಾಭಾಗವತರು ಆಗಾಗ್ಗೆ ಹರಿಹರಕ್ಕೆ ಬರುತ್ತಲೇ ಇದ್ದರು. ಬಂದಾಗಲೆಲ್ಲ ಅವರು ಗೋಂದಾವಳಿಯ ಮಹಾರಾಜರ ಪ್ರಶಂಸೆಯನ್ನು ಮಾಡುತ್ತಿದ್ದದ್ದು, ಚಿದಂಬರಯ್ಯನವರ ಚಿತ್ತವನ್ನು ಆಕಡೆಗೆ ಸೆಳೆಯಿತು. ಮೊದಲಿಂದಲೂ ಸ್ವಲ್ಪ ಪ್ರಾಣಾಯಾಮದಲ್ಲಿ ನಂಬಿಕೆಯಿದ್ದ ಅವರಿಗೆ ಮಹಾರಾಜರು ಯೋಗವನ್ನು ಹೇಳಿಕೊಡುವರೆಂಬ ನಂಬಿಕೆಯಿದ್ದಂತೆ ತೋರುತ್ತದೆ. ಮಹಾಭಾಗವತರಿಗೆ ಷಟ್ಚಕ್ರ ಬೋಧನೆಯ ಕ್ರಮವನ್ನು ಅವರು ಹೇಳಿಕೊಟ್ಟಿರುವರೆಂಬ ಕಿಂವದಂತಿಯೊಂದು ಬೇರೆ ಇತ್ತು. ಆದ್ದರಿಂದ ಭಾಗವತರ ಅಪ್ಪಣೆಯಂತೆ ಚಿದಂಬರಯ್ಯನವರು ಗೋಂದಾವಳಿಗೆ ಹೋಗಿ ಮಹಾರಾಜರ ದರ್ಶನವನ್ನು ಪಡೆದುಕೊಂಡರು. ಅಲ್ಲಿ ಏಕಾಂತವಾಗಿ ಅವರಲ್ಲಿ ಸೇವೆಗೆ ನಿಲ್ಲುವದಕ್ಕೆ ಅನುಜ್ಞೆ ಕೊಡಬೇಕೆಂದು ಬೇಡಿಕೊಂಡರಂತೆ. ಚಿದಂಬರಯ್ಯನವರ ಕುಟುಂಬ ಸ್ಥಿತಿಯನ್ನು ವಿಚಾರಿಸಿಕೊಂಡ ಬಳಿಕ, ಮಹಾರಾಜರು 'ಆರು ತಿಂಗಳುವರೆಗೆ ಸಂಧ್ಯಾವಂದನೆ, ಜಪ, ಬ್ರಹ್ಮಯಜ್ಞ, ವೈಶ್ವದೇವ, ಪಾರಾಯಣ, ಪೂಜೆ - ಮುಂತಾದವುಗಳನ್ನು ನಿಯಮದಿಂದ ಮಾಡುತ್ತಿದ್ದು, ಮತ್ತೊಂದು ಪತ್ರವನ್ನು ನನಗೆ ಹಾಕಿದರೆ ಹೇಳುವೆನು' ಎಂದರಂತೆ. ಅವರು ಹೇಳಿದ ನಿತ್ಯಾನುಷ್ಠಾನ ಪದ್ಧತಿಯನ್ನು ಒಂದು ಕಾಗದದಲ್ಲಿ ಬರೆಯಿಸಿ ಕೊಟ್ಟರಂತೆ. ಅದನ್ನು ತೆಗೆದುಕೊಂಡು ಬಂದು ಚಿದಂಬರಯ್ಯನವರು ಕಷ್ಟಪಟ್ಟು ನಿಯಮವು ಸ್ವಲ್ಪವು ತಪ್ಪದಂತೆ ಕ್ರಮವರಿತು ಆರು ತಿಂಗಳವರೆಗೆ ನಡೆಯಿಸಿ ಈಗ ದಯವಿಟ್ಟು ಅನುಜ್ಞೆಕೊಡಬೇಕು ಎಂದು ಪತ್ರಮುಖದಿಂದ ಬೇಡಿಕೊಂಡರು. ಅವರ ಪುಣ್ಯದಿಂದ ಅನುಜ್ಞೆಬಂತು. ಕೂಡಲೇ ಅವರು ತಮ್ಮ ಲೈಫ್ ಇನ್ಶೂರೆನ್ಸ್ ಪಾಲಿಸಿಯನ್ನು ಪೇಡ್ ಅಪ್ ಪಾಲಿಸಿ ಮಾಡಿಸಿದರು ; ತಮ್ಮಲ್ಲಿದ್ದ ಅನಾವಶ್ಯವಾದ ಗ್ರಂಥಗಳನ್ನೆಲ್ಲ ಅತ್ತ ಒಗೆದುಬಿಟ್ಟರು (ಅವುಗಳಲ್ಲಿ ಕೆಲವನ್ನು ನಾನು ಆರಿಸಿಕೊಂಡೆ). ದಾವಣಗೆರೆಯ ವ್ಯವಹಾರವನ್ನೆಲ್ಲ ಮುಗಿಸಿ ಸರಕಾರದಿಂದ ರಜವನ್ನು ಪಡೆದುಕೊಂಡು ಗೋಂದಾವಳಿಗೆ ಹೊರಟುಬಿಟ್ಟರು. ಆಗ್ಗೆ ಅವರಿಗೆ ಬಂದಿದ್ದ - ಶ್ರದ್ಧಾಭಕ್ತಿಗಳ ಆವೇಶವನ್ನು ನೋಡಿದರೆ 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್' ಎಂಬ ಶ್ರುತಿಗೆ ಇದೊಂದು ಉದಾಹರಣೆ ಎನ್ನುವಂತೆ ತೋರುತ್ತಿತ್ತು.

## ಮಹಾಭಾಗವತರ ಆಗಮನ :

ಈಗ ನಾನು ಸ್ಕೂಲಿನ ಆಕ್ಟಿಂಗ್ ಹೆಡ್‌ಮಾಸ್ತರಾದೆನು. ಭಾಷ್ಯವನ್ನು ಓದುವದು, ಆಹ್ನಿಕವನ್ನು ಮಾಡುವದು, ಸ್ಕೂಲಿನ ಶಾಖೆಗಳಾಗಿದ್ದ ಪ್ರೈಮರಿ ಸ್ಕೂಲುಗಳನ್ನು ಮೇಲ್ವಿಚಾರಣೆ ಮಾಡುವದು, ಪಾಠವನ್ನು ಹೇಳುವದು, ಸಾಯಂಕಾಲ ಮತ್ತೆ ದೇವರ ಮಂಗಳಾರತಿ, ಸ್ತೋತ್ರಪಾಠ - ಮುಂತಾದವುಗಳನ್ನು ನಡೆಯಿಸುವದು, ಇದು ನಿತ್ಯಪದ್ಧತಿಯಾಯಿತು. ಮಹಾಭಾಗವತರು ಈ ಕಾಲಕ್ಕೆ ದಾವಣಗೆರೆಗೆ ದಯಮಾಡಿಸಿದರೆಂದು ತೋರುತ್ತದೆ. ಅವರು ಪೇಟೆಯಲ್ಲಿ ಯಾರದೋ ಮಹಡಿಯ ಮೇಲೆ ಇಳಿದು ಕೊಂಡಿದ್ದರು. ಅಲ್ಲಿ ಭಕ್ತಿಪರವಾದ ಉಪನ್ಯಾಸಗಳನ್ನು ಮಾಡಿದರು ; ಜನರೆಲ್ಲರೂ ಬಹಳ ಶ್ರದ್ಧೆಯಿಂದ ಕೇಳಿದರು. ಸಾಯಂಕಾಲ ಅಸಿಸ್ಟೆಂಟು ಕಮಿಷನರ್ ನಾ. ಅಯ್ಯಂಗಾರ್ಯರ ಮನೆಯಲ್ಲಿ ಭಕ್ತಿವಿಷಯದ ಸಂಭಾಷಣೆಯಾಯಿತು. ಅಲ್ಲಿಗೆ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರು ತಿರುಮಲಾಚಾರ್ಯರೂ ಬಂದಿದ್ದರು. ಸ್ಕೂಲುಗಳಲ್ಲಿ ಜನರಿಗೆ ಮತ ಬೋಧೆಮಾಡುವುದು ಹೇಗೆ ? ನಾನಾ ಪಂಥದ ಜನರು ಸೇರಿರುತ್ತಾರಲ್ಲ ! ಎಂದು ಅವರು ಭಾಗವತರನ್ನು ಕೇಳಿದರು. 'ನಮಗೇನೂ ಅದರ ಕಷ್ಟವು ತೋರುವದಿಲ್ಲ, ಮಹಾರಾಜರು ಎಲ್ಲರಿಗೂ ರಾಮನಾಮವನ್ನು ಹೇಳುತ್ತಿದ್ದಾರೆ ; ಎಲ್ಲರೂ ಭಕ್ತಿಯಿಂದಲೇ ಅದನ್ನು ಸ್ವೀಕರಿಸುತ್ತಿದ್ದಾರೆ' ಎಂದು ಭಾಗವತರು ಉತ್ತರವನ್ನು ಕೊಟ್ಟರು. ಮಾರನೆಯ ದಿನ ಸಾಯಂಕಾಲಕ್ಕೆ ಅವರು ಕುರ್ತಕೋಟಿಗೆ ಪ್ರಯಾಣ ಬೆಳಸುವವರಾಗಿದ್ದರು. ಬೇರೆಬೇರೆಯವರು ತಮ್ಮ ಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿದಂತೆ, ನಾನೂ ಅವರನ್ನು ಮನೆಗೆ ಕರೆದುಕೊಂಡು ಹೋಗಬೇಕೆಂಬ ಅಭಿಲಾಷೆಯಾಯಿತು. ಮನೆಯಲ್ಲಿ ಅವರ ಪಾದಪೂಜೆಗೆ ಎಲ್ಲವನ್ನೂ ಸಿದ್ಧಮಾಡಿಕೊಂಡು ಹೋಗಿದ್ದೆನು. 'ಕಾಲವು ಬಹಳ ಉಳಿದಿಲ್ಲವಾದ್ದರಿಂದ ಬೇಗನೆ ಮಾಡಬೇಕು !' ಎಂದು ಸುತ್ತಲೂ ಇದ್ದವರು ಎಚ್ಚರಿಕೆಕೊಟ್ಟರು. 'ಆಗಲಿ !' ಎಂದು ಮುಂಜಾಗ್ರತೆಗೆಂದು ನಾನು ಮೈಮೇಲೆ ಎಚ್ಚರವಿಲ್ಲದೆ ಪೇಟೆಯಲ್ಲಿ ವೇಗದಿಂದ ಓಡಿಬಂದೆನು. ಜನರೆಲ್ಲರೂ ಈ ದಿನ ಮೇಷ್ಟರು ಹೀಗೇಕೆ ಮಾಡುತ್ತಿದ್ದಾರೆಂದು ನನ್ನ ಕಡೆಗೇ ನೋಡುತ್ತಿದ್ದರು. ಮಹಾಭಾಗವತರ ಪಾದಧೂಳಿ ನಮ್ಮ ಮನೆಯಲ್ಲಿ ಬೀಳುವುದು ತಪ್ಪೀತು - ಎಂದು ನನಗೆ ಶಂಕೆ. ದೇವರ ದಯೆಯಿಂದ ಅವರು ಸಮಾಧಾನದಿಂದ ನನ್ನ ಅಲ್ಪ ಸೇವೆಯನ್ನು ಕೈಕೊಂಡರು. 'ಅವಸರ ಪಡಬೇಡಿ, ರೈಲಿಗೆ ಹೊತ್ತಾದರೆ ನಾಳೆ ಹೊರಡೋಣವಂತೆ !' ಎಂದು ನನಗೆ ಸಮಾಧಾನ ಹೇಳುತ್ತಿದ್ದರು. ನನಗೆ ಎಲ್ಲಾ ಬಗೆಯಿಂದಲೂ ಸಂತೋಷವನ್ನುಂಟುಮಾಡಿ ಹೊರಟುಹೋದರು.

## ಗೊಂದಾವಳಿಗೆ ರಂಗಶಾಸ್ತ್ರಿಗಳೊಡನೆ ಪ್ರಯಾಣ :

ಮಹಾರಾಜರ ಆ ಪರಮಶಿಷ್ಯರ ಅನುಗ್ರಹವು ನನಗೆ ಮುಂದಾಗಲಿರುವ ಗುರ್ವನುಗ್ರಹಕ್ಕೆ ಸೂರ್ಯೋದಯಕ್ಕೆ ಸೂಚಕವಾದ ಅರುಣೋದಯದಂತೆ ಆಯಿತು. ಸ್ವಲ್ಪ ದಿನಗಳಲ್ಲಿಯೇ ಕಡೂರಿನ ರಂಗಶಾಸ್ತ್ರಿಗಳವರು ನಮ್ಮ ಮನೆಗೆ ಬಂದು 'ಗೋಂದಾವಳಿಯ ಮಹಾರಾಜರವರ ದರ್ಶನಕ್ಕೆ ಹೊರಟಿದ್ದೇನೆ, ನೀನೂ ನನ್ನೊಡನೆ ಬರಬೇಕು' ಎಂದು ಕೇಳಿಕೊಂಡರು. ರಂಗಶಾಸ್ತ್ರಿಗಳು ಈವರೆಗೆ ಮೂವರು ಹೆಂಡಿರನ್ನು ಕಳೆದುಕೊಂಡಿದ್ದರು. ಕೊನೆಯ ಇಬ್ಬರೂ ನಮ್ಮ ಲಕ್ಷ್ಮಕ್ಕನ ಹೆಣ್ಣು ಮಕ್ಕಳೇ ಆಗಿದ್ದರು. ಅವರಿಗೆ ಇನ್ನೂ ಅಷ್ಟೇನೂ ವಯಸ್ಸಾಗಿರಲಿಲ್ಲ. ಮತ್ತೊಂದು ಮದುವೆಯಾಗುವ ಮುಂಚೆ ಮಹಾರಾಜರವರ ಅಭಯದಾನವನ್ನು ಸ್ವೀಕರಿಸಬೇಕೆಂಬ ಇಚ್ಛೆ ಅವರಿಗೆ ಉಂಟಾಗಿತ್ತು. ಗೋಂದಾವಳಿಯ ಮಹಾರಾಜ-ರವರು ಭರವಸೆಕೊಟ್ಟವರಿಗೆ ಅವರವರ ಇಷ್ಟಕಾಮ್ಯಾರ್ಥಗಳು ಸಿದ್ಧವಾಗುತ್ತವೆ ಎಂಬುದು ಅವರ ಕಿವಿಗೆ ಹೇಗೋ ಮುಟ್ಟಿತ್ತು. ನಾನೂ ಚಿದಂಬರಯ್ಯನವರೂ ಕುರ್ತಕೋಟಿಯ ಮಹಾಭಾಗವತರ ಶಿಷ್ಯರೆಂದು ಅವರಿಗೆ ತಿಳಿಯಬಂದದ್ದರಿಂದ ನಾನು ಅವರ ಜೊತೆಯಲ್ಲಿರುವುದು ಒಂದು ಬೆಂಬಲವೆಂದು ತೋರಿರಬೇಕು. ಆದ್ದರಿಂದ ನಾನು 'ಈಗ ಆಕ್ಟಿಂಗ್ ಕೆಲಸದಲ್ಲಿದ್ದೇನೆ, ರಜತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ' ಎಂದು ಎಷ್ಟುಹೇಳಿದರೂ ಕೇಳಲಿಲ್ಲ; ನನ್ನನ್ನು ಗೋಂದಾವಳಿಯಲ್ಲಿ ಬಿಟ್ಟು ಕೂಡಲೇ ನೀನು ಹಿಂತಿರುಗಬಹುದು. ಇಷ್ಟು ಉಪಕಾರವನ್ನು ಮಾಡು' ಎಂದು ಒತ್ತಾಯಪಡಿಸಿ ಕೇಳಿಕೊಂಡರು. ಬಂಧುಗಳು, ವೈದಿಕರೂ, ವಿದ್ವಾಂಸರೂ ಆದ ಶಾಸ್ತ್ರಿಗಳ ಮಾತನ್ನು ಮೀರುವದು ನನ್ನಿಂದ ಆಗಲಿಲ್ಲ. ಆದ್ದರಿಂದ ಆಗಲಿ ಎಂದೆನು. ಅದು ನನ್ನ ಶ್ರೇಯಸ್ಸಿಗೆಂದೇ ಗುರುಗಳು ಅವರ ಮೂಲಕ ಪ್ರೇರಣೆ ಮಾಡಿದ್ದಾರೆ ಎಂಬುದು ನನಗೆ ಆಗ್ಗೆ ಹೊಳೆಯಲಿಲ್ಲ.

## ಅಗಡಿ ಶೇಷಾಚಲ ಸಾಧುಗಳ ದರ್ಶನ :

ನಾನು ಗೋಂದಾವಳಿ ಎಷ್ಟು ದೂರವಿದೆ ಎಂಬುದನ್ನು ಕೂಡ ಗೊತ್ತುಮಾಡಿಕೊಳ್ಳದೆ ಏಳು ದಿನಗಳ ಕ್ಯಾಜ್ಯುಯಲ್ ರಜಕ್ಕೆ ಬರೆದುಕೊಂಡು ಹೊರಟೆನು. ಈ ನಡುವೆ ನನಗೆ ಸ್ವಲ್ಪ ಪರಿಚಿತರಾಗಿದ್ದು 'ದಾಸಪ್ಪ ಸ್ವಾಮಿಗಳು'. (ಅವರ ಆಶ್ರಮನಾಮವು ನನಗೆ ಸರಿಯಾಗಿ ತಿಳಿಯದು. ಅವರು ಕಣಕಟ್ಟೆಯ ಕಡೆಯವರೆಂದು ಕೇಳಿದ್ದೆ; ಅವರನ್ನು ಅರಸೀಕೆರೆಯಲ್ಲಿ ಒಂದೆರಡು ಸಲ ಕಂಡಿದ್ದೆನು. ಎಲ್ಲರೂ ಅವರನ್ನು ದಾಸಪ್ಪ ಸ್ವಾಮಿಗಳು ಎಂದೇ ಕರೆಯುತ್ತಿದ್ದರು) ಸ್ವಾಮಿಗಳು

ಅನಿರೀಕ್ಷಿತವಾಗಿ ಒಂದು ಸಾಯಂಕಾಲ ನಮ್ಮ ಮನೆಗೆ ಬಂದುಬಿಟ್ಟರು. ಸಾಯಂಕಾಲ ಫಲಾಹಾರವಾದ ಬಳಿಕ ಅವರು ಬಂದ ಸಂಗತಿ ತಿಳಿಯಿತು. ತಾವು ಹರಿಹರದಲ್ಲಿ ಚಾತುರ್ಮಾಸ್ಯಕ್ಕೆ ನಿಲ್ಲುವುದಾಗಿಯೂ ಆ ಕಾಲಕ್ಕೆ ಬೇಕಾಗುವ ಎರಡುಜೊತೆ ಪಂಚೆಗಳನ್ನು, ನಿಂಬೆಹಣ್ಣು, ಕಾವಿ - ಇವುಗಳನ್ನು ಅಲ್ಲಿಗೆ ಒದಗಿಸಿಕೊಡಬೇಕಾಗಿ ಕೇಳಿದರು. ಸಂನ್ಯಾಸಿಗಳು ಚಾತುರ್ಮಾಸ್ಯಕ್ಕೆ ನಿಲ್ಲುವ ಕ್ರಮವು ನನಗೆ ಆಗ ತಿಳಿಯದು. ''ನಾನು ಆ ಕಾಲಕ್ಕೆ ಬರುವಂತಿಲ್ಲ ; ಒಬ್ಬ ಸ್ನೇಹಿತರೊಡನೆ ಗೋಂದಾವಳಿಗೆ ಹೋಗಿ ಬರಬೇಕಾಗಿದೆಯಾದ್ದರಿಂದ ಯಾರ ಕೈಯಲ್ಲಾದರೂ ವಸ್ತ್ರಗಳನ್ನು ಕಳುಹಿಸಿಕೊಟ್ಟೇನು'' ಎಂದೆನು. ಅವರು ನನ್ನ ಅನಾದರೋಕ್ತಿಯನ್ನು ಕೂಡ ಮನ್ನಿಸಿ 'ಹಾಗೆ ಆಗಲಿ' ಎಂದು ಬಿಟ್ಟರು. ಅದರಂತೆ ನಾನು ಹೊರಡುವ ಮುನ್ನವೇ ಸ್ವಾಮಿಗಳಿಗೆ ವಸ್ತ್ರಗಳು ಮುಟ್ಟುವ ಏರ್ಪಾಟು ಮಾಡಿ ರಂಗಶಾಸ್ತ್ರಿಗಳೊಡನೆ ಗೊತ್ತಾಗಿದ್ದ ದಿನವೇ ಹೊರಟು ಹಾವೇರಿಯನ್ನು ಮುಟ್ಟಿದೆನು. ಅಲ್ಲಿ ಮೊದಲು ನಮಗೆ ಶೇಷಾಚಲ ಸಾಧುಗಳ ದರ್ಶನವಾಯಿತು.

ಸಾಧುಗಳು ನಾವು ಹೋದಾಗ ಊಟದ ಎಲೆಗಳನ್ನು ಹಚ್ಚುತ್ತಿದ್ದರು. 'ಶೇಷಾಚಲಸದ್ಗುರುಗಳು ಎಲ್ಲಿದ್ದಾರೆ ?' ಎಂದು ಅವರನ್ನೇ ಕೇಳಿದೆವು. ಹತ್ತಿರ ಕುಳಿತಿದ್ದವರು ನಸುನಗೆಯಿಂದ 'ಇವರೇ' ಎಂದು ಸಂಜ್ಞೆಮಾಡಿ ತಿಳಿಸಿದರು. ನಾವಿಬ್ಬರೂ ಭಯಭಕ್ತಿಯಿಂದ ನಮಸ್ಕರಿಸಿದೆವು, ಸಾಧುಗಳೆಂದರೆ ಎಲ್ಲಿಯೋ ಒಂದು ಉಚ್ಚಸ್ಥಾನದಲ್ಲಿ ಕುಳಿತಿರಬೇಕೆಂದೂ ಅವರ ದರ್ಶನವು ಬಹಳ ಕಷ್ಟಸಾಧ್ಯ ವಾಗಿರಬೇಕೆಂದೂ ನಮ್ಮಗಳ ಭಾವನೆಯಿತ್ತು. ಅವರು ಇಷ್ಟು ಸರಳ ಸ್ವಭಾವದವರೆಂಬ ಕಲ್ಪನೆಯೇ ನಮಗಿರಲಿಲ್ಲ. ಅಲ್ಲಿಯ ಜನರು ಎಲ್ಲರೂ ಅತಿಥಿ ಸತ್ಕಾರದಲ್ಲಿ ನಿರತರಾಗಿದ್ದರು. ನಮಗೆ ಶೌಚಾದಿ ಸ್ಥಾನಗಳನ್ನು ತೋರಿಸಿದರು. ತಾವು ತಣ್ಣೀರು ಸ್ನಾನವನ್ನೇ ಮಾಡುತ್ತಿದ್ದರಾದರೂ ಬಂದವರಿಗೆ ಬಿಸಿನೀರು ಸ್ನಾನಕ್ಕೆ ಏರ್ಪಡಿಸಿದ್ದರು. ಶ್ರೀಕಂಠಶಾಸ್ತ್ರಿ (ಹೆಸರು ಸರಿಯೆ ? ಅಗಡಿಯವರಿಂದ ತಿಳಿದುಕೊಳ್ಳಬೇಕು) ಗಳೆಂಬವರು ಸಂಸ್ಕೃತ ಪಂಡಿತರು ; ಅವರೂ ನಮ್ಮನ್ನು ಬಹಳ ಆದರದಿಂದ ಕಂಡರು. ಅಲ್ಲಿಯ ಊಟದ ಕ್ರಮವು ರಂಗಶಾಸ್ತ್ರಿಗಳಿಗೆ ಬಹಳ ಹೊಸದು. ಭಕರಿ ಪ್ರಧಾನವಾದ ಆಹಾರ, ಅನ್ನವೂ ಸ್ವಲ್ಪ ಇತ್ತು ; ಜೋಳದ ನುಚ್ಚಿನ ಅನ್ನ ಮಜ್ಜಿಗೆಗೆ, ಹುಳಿಯನ್ನು ಅಮಠಿ ಎನ್ನುವರು. ಸಾಧುಗಳು ಮಾತ್ರ ಎಲ್ಲದರಲ್ಲಿಯೂ ಸರಳ ಸ್ವಭಾವ. ಎಲ್ಲಿ ಕೂತಿದ್ದರೆ ಅಲ್ಲಿ ಏನಾದರೊಂದು ಬೋಧೆಯ ಮಾತನ್ನು ಆಡುತ್ತಿದ್ದರು. ನನ್ನ ದೃಷ್ಟಿಯಿಂದ ಅವರು ಹರಿಕಥೆಯ ಶೈಲಿಯಲ್ಲಿ ಮಾತನಾಡುತ್ತಿದ್ದರೆಂದು ಕಾಣುತ್ತಿತ್ತು. ನಡುನಡುವೆ, 'ಮಹರಾಜ್' ಎನ್ನುತ್ತಿದ್ದರು. ಅವರಿಗೆ ಭಕ್ತರು ಆರತಿ ಮಾಡುತ್ತಿದ್ದದ್ದು ನಮಗೆ ಸ್ವಲ್ಪ ವಿಲಕ್ಷಣ ಪದ್ಧತಿ ಎಂದು ತೋರಿತು. ಸಾಧುಗಳಿಗೆ ಹೀಗೆ

ಆರತಿ ಮಾಡುತ್ತಾರೆಂಬುದು ನನಗೆ ತಿಳಿದಿರಲಿಲ್ಲ. ಶೇಷಾಚಲ ಸಾಧುಗಳಿಗೆ ಶೃಂಗೇರಿಯ ಜಗದ್ಗುರುಗಳ ಅನುಗ್ರಹದಿಂದ ಜ್ಞಾನೋದಯವಾಯಿತು ಎಂದು ಕೆಲವರು ಹೇಳಿಕೊಳ್ಳುತ್ತಿದ್ದರು. ಅವರ ಅಪ್ಪಣೆಯನ್ನು ಪಡೆದು ಗೋಂದಾವಳಿಗೆ ಪ್ರಯಾಣವನ್ನು ಬೆಳೆಸಿದ್ದೆವು.

**ಮಹಾರಾಜರ ದರ್ಶನ :** ನಾವು ಕೋರೆಗಾಂವ್ ಸ್ಟೇಷನ್ನಿನಲ್ಲಿ ಇಳಿದು ಎತ್ತಿನ ಬಂಡಿಯ ಮೇಲೆ ಗೋಂದಾವಳಿಗೆ ಹೋದೆವು. ಆಗ ಸಾಯಂಕಾಲವಾಗಿತ್ತು. ಗುರುಪೂರ್ಣಿಮೆಯ ಸಂದರ್ಭವಾದದ್ದರಿಂದ ಪರಸ್ಥಳದಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿತ್ತು. ಬಹಳ ಗದ್ದಲ. ಚಿದಂಬರಯ್ಯನವರನ್ನು ನಾವು ಹುಡುಕಿದೆವು. ಅವರು ಮಹಾರಾಜರ ಖೋಲಿ(ಕೋಣೆ)ಯಿಂದ ಹೊರಕ್ಕೆ ಬಂದು ನಮ್ಮನ್ನು ಪ್ರತ್ಯೇಕವಾಗಿ ಒಂದು ಖೋಲಿಯಲ್ಲಿ ಇಳಿಸಿ ಸ್ನಾನಕ್ಕೆ ಏರ್ಪಡಿಸಿ ಮಹಾರಾಜರ ದರ್ಶನವನ್ನು ಮಾಡಿಸಿದರು. ರಂಗಶಾಸ್ತ್ರಿಗಳು 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ' ಎಂಬ ಮಂತ್ರವನ್ನು ಪಠಿಸಿದರು. ಇಬ್ಬರೂ ನಮಸ್ಕರಿಸಿದೆವು. ಮಹಾರಾಜರಿಗೆ ಕನ್ನಡವು ಸ್ವಲ್ಪ ಮಟ್ಟಿಗೆ ತಿಳಿಯುತ್ತಿತ್ತೆಂದು ಕಾಣುತ್ತದೆ. ಕುರ್ತಕೋಟಿಯ ಭಾಗವತರು ಬಂದಮೇಲೆ ಕನ್ನಡನಾಡಿನವರಲ್ಲಿ ಅವರು ಪ್ರೇಮವನ್ನು ತೋರಿಸುತ್ತಿದ್ದರು. ಈಗ ಚಿದಂಬರಯ್ಯ ನವರೂ ಅವರ ಸೇವೆಯಲ್ಲಿ ನಿಂತಿದ್ದರು. ಅವರು ರಂಗಶಾಸ್ತ್ರಿಗಳು ಮತ್ತು ನನ್ನ ಪರಿಚಯವನ್ನು ಹಿಂದುಸ್ಥಾನಿಯ ಮೂಲಕ ಮಾಡಿಕೊಟ್ಟರು. ಅವರೂ ನಾನೂ ದಾವಣಗೆರೆಯಲ್ಲಿದ್ದ ಸ್ಕೂಲಿನ ಮರಾಠಿ ಮುನಷಿಯಿಂದ ಅಲ್ಪಸ್ವಲ್ಪ ಆ ಭಾಷೆಯನ್ನು ಅಭ್ಯಾಸಮಾಡಿದ್ದೆವಾದರೂ ಮಹಾರಾಜರವರ ಎದುರಿಗೆ ಮಾತನಾಡುವದಕ್ಕೆ ಅಂಜಿಕೊಂಡೆವೆಂದು ಕಾಣುತ್ತದೆ. ಮಹಾರಾಜರು 'ಆರೆ ಮಾತು ಬರ್ತಾವು ! ಝುಳಕ ಮಾಡು' ಎಂದು ಹೊಸದಾಗಿ ಬಂದ ಕನ್ನಡಿಗರಿಗೆಲ್ಲ ಹೇಳುವದು ಪದ್ಧತಿಯಂತೆ. ಅದರಂತೆ ನಮಗೂ ಆ ಎರಡು ಮಾತುಗಳನ್ನು ಆಡಿದರು. ಅವರ ಕೋಣೆಯಲ್ಲಿ ತುಂಬ ಜನವಿತ್ತು. ನಾವು ಅವರಿಗೆ ನಮಸ್ಕಾರ ಮಾಡಿ ಹೊರಕ್ಕೆ ಬಂದೆವು. ಚಿದಂಬರಯ್ಯನವರು ನಮ್ಮನ್ನು ಮಂಗಳಾರತಿಗೆ ಕರೆದುಕೊಂಡು ಹೋದರು. ಮಹಾರಾಜರು ಆಗ್ಗೆ ಸಂನಿಹಿತರಾಗಿರಲಿಲ್ಲ. ಮರಾಠಿಯ ಪದಗಳನ್ನು ಹೇಳಿಕೊಂಡು ಮಾಡುವ ಮಂಗಳಾರತಿ ಶಾಸ್ತ್ರಿಗಳಿಗೆ ಬಹಳ ಹೊಸತು. ನನಗೂ ಅದು ಹೊಸದೇ, ಆದರೆ ಈ ಮೊದಲು ಕುರ್ತಕೋಟಿಗೆ ಒಮ್ಮೆ ಹೋಗಿದ್ದೆನೋ ಇಲ್ಲವೋ ಚೆನ್ನಾಗಿನೆನಪಿಲ್ಲ. ರಾತ್ರೆ ಬಹಳ ಹೊತ್ತಾದಮೇಲೆ 'ಫರಾಳ್' (ಫಳಾರ)ಕ್ಕೆ ಎಬ್ಬಿಸಿದರು. ಆ ಅವೇಳೆಯಲ್ಲಿ ಮಾಡಿದ್ದ ಭಕರಿಪಲ್ಯ ಮುಂತಾದದ್ದು ಯಾವುದೂ ಶಾಸ್ತ್ರಿಗಳಿಗೆ ರುಚಿಸಲಿಲ್ಲವೆಂದು ತೋರಿತು.

## ಮಹಾರಾಜರ ನಿತ್ಯ ಕಾರ್ಯಕ್ರಮ :

ಬೆಳಿಗ್ಗೆ ನಾವು ಎದ್ದು ಮಾನಗಂಗಾ ನದಿಯಲ್ಲಿ ಸ್ನಾನ ಮಾಡಿದೆವು, ಆ ನದಿಯು ಮಾನಕ್ಕೆ ಗಂಗಾ ಎನಿಸಿಕೊಂಡಿತ್ತು. ಆದರಲ್ಲಿ ಜರತೆಯ ನೀರಿನಿಂದ ಸ್ನಾನ ಮಾಡಬೇಕಾಗಿತ್ತು. ಚಿದಂಬರಯ್ಯನವರು ಬೆಳಿಗ್ಗೆ ರಾಮರ ಪೂಜೆ ಮಾಡುವದು, ಮಹಾರಾಜರ ಪಾದಪೂಜೆಮಾಡಿ ತೀರ್ಥ ತೆಗೆದುಕೊಳ್ಳುವ ಪದ್ಧತಿ - ಇವನ್ನೆಲ್ಲ ನಮಗೆ ತಿಳಿಸಿಕೊಟ್ಟರು. 'ವಿಪ್ರಪಾದೋದಕಂ ಪೀತ್ವಾ ವಿಷ್ಣುಪಾದೋದಕಂ ಪಿಬೇತ್' ಎಂಬ ವಾಕ್ಯವನ್ನು ಯಾರೋ ಅಲ್ಲಿ ಹೇಳಿದ ನೆನಪಿದೆ. ನದಿಯ ತೀರದಲ್ಲಿದ್ದ ಲಕ್ಕೆಎಲೆಯೇ ಪೂಜೆಗೆ ಪತ್ರೆ, ಚಿಕ್ಕ ರಾಮಮಂದಿರದಲ್ಲಿ ಗಂಧತೇಯ್ದುಕೊಂಡು ಪೂಜೆಮಾಡಿ, ಆ ಬಳಿಕ ದೊಡ್ಡರಾಮಮಂದಿರಕ್ಕೆ ಪೂಜೆಗೆ ಹೋಗುವ ಪದ್ಧತಿಯಿತ್ತು. ಪಾದಪೂಜೆಗೆ ಬಂದವರನ್ನೆಲ್ಲ ಮಹಾರಾಜರು 'ಯಾ ! ಯಾ !' ಎನ್ನುತ್ತಿದ್ದರು. ಬಂದವರು ಅವರ ಪಾದದ ಅಂಗುಷ್ಠವನ್ನು ತೊಳೆದು, ಗಂಧ ಹಚ್ಚಿ ಪತ್ರೆ ಹಾಕಿ ನಮಸ್ಕರಿಸುತ್ತಿದ್ದರು. ನಾವೂ ಆ ಪದ್ಧತಿಯನ್ನು ಆಚರಿಸಿದೆವು. ಮಹಾರಾಜರು ನಮ್ಮ ಖೋಲಿಗೆ ಬಂದು ನಮ್ಮ ಯೋಗಕ್ಷೇಮವನ್ನು ವಿಚಾರಿಸಿದರು. ಹೀಗೆಯೇ ಅಲ್ಲಿರುವ ಸರ್ವರನ್ನೂ ವಿಚಾರಮಾಡಿಕೊಂಡು ಬರುವದು ಅವರಪದ್ಧತಿ. ಅವರ ಕನ್ನಡಕ, ಛತ್ರಿ, ಪೀಕದಾನಿ - ಇಷ್ಟನ್ನು ಹಿಡಿದುಕೊಳ್ಳುವ ಶಿಷ್ಯರು ಹಿಂಬಾಲಿಸುತ್ತಿದ್ದರು. ಅನೇಕ ಜನರ ಗುಂಪು ಅವರೊಡನೆ ಇರುತ್ತಲೇ ಇತ್ತು, ನಾವೂ ಅವರ ಹಿಂದೆ ಹೊರಟೆವು. ಮಹಾರಾಜರು ವೃದ್ಧರು ; ಎಡಬಲ ಪಕ್ಕಗಳಲ್ಲಿ ಜನರ ಹೆಗಲಮೇಲೆ ಕೈಹಾಕಿಕೊಂಡು ಹೋಗುತ್ತಿದ್ದರು. ಹೋದ ಹೋದ ಕಡೆಗಳಲ್ಲಿ ಅಲ್ಲಲ್ಲಿಯೇ ಜನರು ಪಾದಪೂಜೆಮಾಡುತ್ತಿದ್ದರು. ಕೆಲವು ಜನರು ಅಲ್ಲಲ್ಲಿ ಫಲಾಹಾರಕ್ಕೆಂದು ಏನಾದರೂ ತಂದು ಕೊಡುತ್ತಿದ್ದರು. ಮಹಾರಾಜರು ಹತ್ತಿರವಿದ್ದ ಜನರಿಗೆ ಅದನ್ನು ಹಂಚುತ್ತಿದ್ದರು. ಮಧ್ಯಾಹ್ನ ಹನ್ನೆರಡು ಘಂಟೆಗೆ ಮಂಗಳಾರತಿಯಾಗುತ್ತಿತ್ತು, ಜನರು ಜಪ, ಭಾವಾರ್ಥರಾಮಾಯಣ, ಏಕನಾಥೀಭಾಗವತ, ಕೈಲಾಸಬೋಧ - ಮುಂತಾದ ಮರಾಠಿ ಗ್ರಂಥಗಳನ್ನು ಪಾರಾಯಣ ಮಾಡುತ್ತಿದ್ದರು. ಎಲ್ಲಿಯೋ ಕೆಲವರು ಸಂಸ್ಕೃತಗ್ರಂಥಗಳನ್ನು ಪಾರಾಯಣ ಮಾಡುತ್ತಿದ್ದರು. ಮಹಾರಾಜರು ಸ್ನಾನವಾದ ಬಳಿಕ ಅಲ್ಲಿಗೆ ಬರುತ್ತಿದ್ದರು. ಮಹಾರಾಜರಿಗೆ ಅನೇಕರು ಸಹಾಯ ಮಾಡುತ್ತಿದ್ದರು. ಕೆಲವರು ಪಂಚಾಮೃತಸ್ನಾನವನ್ನು ಮಾಡಿಸುತ್ತಿದ್ದರು. ಸ್ನಾನವಾದ ಬಳಿಕ ಮೈಯೊರಸಿ ಕೆನ್ನೆಗೆ ಕೇಸರಿಯನ್ನು ಬಳಿಯುತ್ತಿದ್ದರು. ಸ್ವಭಾವದಿಂದಲೇ ಕೆಂಪಗಿದ್ದ ಅವರ ಮುಖಕ್ಕೆ ಆಗ ಹೆಚ್ಚಿನ ಕಾಂತಿಯು ಬರುತ್ತಿತ್ತು, ಹಣೆಗೆ ನಾಮವನ್ನು ಇಡುತ್ತಿದ್ದರು. ಮಹಾರಾಜರು ರಾಮಮುದ್ರೆಯನ್ನು ಧರಿಸುತ್ತಿದ್ದರು ; ಇದನ್ನು ಅರಿಯದವರು, ಅವರು ಮಾಧ್ವರೆಂದು

ಅನೇಕರು ಭ್ರಮಿಸುತ್ತಿದ್ದದ್ದುಂಟು. ಮೈಗೆ ಕಫನಿಯನ್ನೂ, ತಲೆಗೆ ಕುಲಾವಿಯನ್ನೂ ಧರಿಸುತ್ತಿದ್ದರು. ಹೀಗೆ ಮಿಂದು ಮಡಿಯುಟ್ಟ ಮಹಾರಾಜರು ಈ ದಿನ ದೇವರುಗಳಿಗೆಲ್ಲ ಹೂಗಳನ್ನು ಏರಿಸಿ ಪೂಜಿಸಿದರು. ಅಲ್ಲಿ ಅನೇಕ ಭಕ್ತರಿದ್ದರು. ಕೆಲವರು ಶಿವಾಚಾರದವರೂ ನನ್ನ ಕಣ್ಣಿಗೆ ಬಿದ್ದರು. ಅವರು ದೇವರಿಗೆ ನಮಸ್ಕಾರ ಮಾಡಲು ಎಲ್ಲರೂ ಅವರಿಗೂ ನಮಸ್ಕಾರಮಾಡಿದರು. ಮಂಗಳಾರತಿಯಾದ ಬಳಿಕ ತಮ್ಮ ಖೋಲಿಗೆ ಹೋದರು. ಮಹಾರಾಜರು ಊಟಕ್ಕೆ ಬರುವರೆಂದು ಎಲ್ಲರೂ ವೀಕ್ಷಿಸುತ್ತಿದ್ದರು. ಜನರಿಗೆ ತಾಟಲವಾಟಿಗಳನ್ನು (ತಟ್ಟೆಬಟ್ಟಲುಗಳನ್ನು) ಇಟ್ಟರು. ರಂಗಶಾಸ್ತ್ರಿಗಳು ನನಗೆ ತಟ್ಟೆಬೇಡ, ಊಟದ ಎಲೆಬೇಕು ಎಂದರು. ಶೂದ್ರರಿಗೆ ಆಲದ ಎಲೆಹಾಕುತ್ತಾರೆ, ನಿಮಗೆ ಬೇಡ ಎಂದು ಅಲ್ಲಿಯವರು ಸಮಾಧಾನಹೇಳಿದರು. ದೇಶಾಚಾರಭೇದದಿಂದ ಹೀಗೆ ಶಾಸ್ತ್ರಿಗಳಿಗೆ ಸ್ವಲ್ಪ ಮನಸ್ಸಿಗೆ ಕಿರಿಕಿರಿಯಾಯಿತು. ಇಷ್ಟರಲ್ಲಿ ಮಹಾರಾಜರು ಎಲ್ಲಿಗೋಹೊರಟು ಹೋಗಿದ್ದಾರೆಂದು ತಿಳಿಯಬಂತು. ಬಳಿಕ ಜನರು ಛತ್ರಿ ಮುಂತಾದ ಅವರ ಸಾಮಗ್ರಿಗಳನ್ನು ತೆಗೆದುಕೊಂಡು ಹಿಂದೆ ಓಡಿದರು. ಮಹಾರಾಜರು ಬೆಳಗ್ಗೆ ಇಬ್ಬರ ಭುಜವನ್ನು ಅವಲಂಬಿಸಿಕೊಂಡು ಮೆಲ್ಲಗೆ ನಡೆಯುತ್ತಿದ್ದವರು, ಈಗ ಒಬ್ಬರೇ ಪ್ರಾಯದವರಂತೆ ವೇಗದಿಂದ ನಡೆಯುತ್ತಿದ್ದರು ! ಜನರು ರಾಮನಾಮ ಕೀರ್ತನೆ ಮಾಡುತ್ತಾ ಅವರ ಹಿಂದೆ ಓಡಿದರು. ಮಹಾರಾಜರು ತಾವಿದ್ದ ಸ್ವಂತ ಮನೆಯನ್ನೇ ರಾಮಮಂದಿರವಾಗಿ ಮಾರ್ಪಡಿಸಿ ಬಿಟ್ಟಿದ್ದರು ; ಇಪ್ಪತ್ತು ನಾಲ್ಕು ಘಂಟೆಗಳ ಕಾಲವೂ ಮಂದಿರದ ಬಾಗಿಲು ತೆರೆದೇ ಇರುತ್ತಿತ್ತು, ಯಾವಾಗಲೂ ಜನರ ಭಜನೆ, ಅಖಂಡ ಜಪ - ಇವು ನಡೆದೇ ಇರುತ್ತಿದ್ದವು. ಹಗಲುಹೊತ್ತು ಎಲ್ಲರೂ ಹೆಣ್ಣು ಮಕ್ಕಳುಕೂಡ ನೀರನ್ನು ತರುವಾಗ, ಅಡಿಗೆಮಾಡುವಾಗ, ಬಡಿಸುವಾಗ, ಊಟಮಾಡುವಾಗ - ಎಲ್ಲರೂ ರಾಮನಾಮ ಕೀರ್ತನೆ ಮಾಡುತ್ತಲೇ ಇರುತ್ತಿದ್ದರು. ಮಹಾರಾಜರ ಹಿಂದೆಮುಂದೆ ಎಲ್ಲೆಲ್ಲಿಯೂ ಭಜನೆಯ ಸದ್ದು ಕೇಳಿಸುತ್ತಲೇ ಇರುತ್ತಿತ್ತು.

ಈ ದಿನ ಮಧ್ಯಾಹ್ನವಾದ ಒಂದು ಘಂಟೆಯ ಹೊತ್ತಿಗೆ ಮಹಾರಾಜರು ಬಂದರು. ಇನ್ನು ಊಟಕ್ಕೆ ಸಿದ್ಧವಾಯಿತು. ಊಟಕ್ಕೆ ಅಲ್ಲಿ ಸಾಮಾನ್ಯವಾಗಿ ಸಜ್ಜೆಯ ರೊಟ್ಟಿಯನ್ನುಮಾಡುವದು ವಾಡಿಕೆ. ಸಜ್ಜೆಯು ಜೋಳದಷ್ಟು ರುಚಿಯಾಗಿರುವದಿಲ್ಲ. ಅದಕ್ಕೆ ಜೋಳದ[1] ಹಿಟ್ಟಿನ 'ಝುಣಕವನ್ನು' (ನಮ್ಮಕಡೆಯ ಮೆಂತ್ಯದ ಹಿಟ್ಟಿನಂತೆ ಒಗ್ಗರಣೆ ಹಾಕಿ ಮಾಡಿದ್ದನ್ನು) ಬಡಿಸುತ್ತಿದ್ದರು. ಹಸಿವು ತೀರಿದ ಮೇಲೆ ಆ ರೊಟ್ಟಿಯು ಒಂದು ಚೂರೂ ಬಾಯಿಯೊಳಕ್ಕೆ ಹೋಗಲಾರದು. ಅದಕ್ಕೆ

1. ಆ ಕಡೆಯ ವಾಡಿಕೆಯಂತೆ, ಇದು ಕಡಲೆ ಹಿಟ್ಟು.

ನ್ಯಾಯವಾಗಿ ಸ್ವಲ್ಪ ಜಿಡ್ಡುಹೆಚ್ಚಾಗಿ ಬೇಕು ; ಆದರೆ ಮಹಾರಾಜರ ಸ್ನೇಹದ ಹೊರತು ಆ ರೊಟ್ಟಿಗೆ ಬೇರೆಯಾದ ಸ್ನೇಹದ ಜಿಡ್ಡು ಇರಲಿಲ್ಲ. ಆದರೂ ಆ ಭಕ್ತರ ಗುಂಪಿನಲ್ಲಿ ಹಸಿದ ಜನರಿಗೆ ಅದೇ ಪರಮಾನ್ನವಾಗಿರುತ್ತಿತ್ತು. ಸುಮಾರು 100-150 ಜನರು ಊಟಕ್ಕೆ ಕುಳಿತಿದ್ದರೆಂದು ತೋರುತ್ತದೆ. ಎದುರುಬದುರಿಗೆ ಸಾಲಾಗಿ ಜನರು ಊಟಕ್ಕೆ ಕುಳಿತಿದ್ದರು. ಮಹಾರಾಜರಿಗೆ ಒಂದು ಕಡೆ ಬೇರೆಯಾಗಿ ಬಡಿಸಲಾಗಿತ್ತು. ಅವರು ಹತ್ತಿರವಿದ್ದ ಶಾಸ್ತ್ರಿಗಳನ್ನು ಕರೆದು ಪರಿಷೇಚನೆ ಮಾಡುವ ಮುಂಚೆ, ತಮ್ಮ ಎಲೆಯಿಂದ ಎತ್ತಿ ಪ್ರಸಾದವನ್ನು ಕೊಟ್ಟರು. ಊಟಕ್ಕೆ ಪ್ರಾರಂಭವಾಯಿತು. ಊಟದ ನಡುನಡುವೆ 'ಜಯಜಯ ಶ್ರೀರಾಮ ಜಯಹರಿ ಶ್ರೀರಾಮ !' ಎಂದು ಬಡಿಸುವವರು ಹೇಳಿ ಎಲ್ಲರಿಂದಲೂ ಭಜನೆ ಮಾಡಿಸುತ್ತಿದ್ದರು. ಕೆಲವರು ಭಕ್ತರು ಮಹಾರಾಜರು ಊಟಕ್ಕೆ ಕುಳಿತ ಮೇಲೂ ಅವರ ಬಳಿಗೆ ಹೋಗಿ ಪ್ರಸಾದವನ್ನು ಕೇಳಿ ತೆಗೆದುಕೊಂಡು ಬಂದು ಆಮೇಲೆ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ನಮ್ಮ ಹಿಂದುಗಡೆಯಲ್ಲಿ ಕೆಲವರು ಬ್ರಾಹ್ಮಣೇತರರೂ ಊಟಕ್ಕೆ ಕುಳಿತಿದ್ದರು. ಇದು ರಂಗಶಾಸ್ತ್ರಿಗಳಿಗೆ ತಿಳಿದು ಬಂದ ಮೇಲೆ, ಅವರು ಅತ್ತಿತ್ತ ತಿರುಗಿನೋಡದೆ ಸ್ವಗತವಾಗಿ ಮಾತನಾಡುವವರಂತೆ "ಇಲ್ಲಿ ಒಂದು ಕಾಂಡವೇ (ಭಾಗವೇ) ಬಿಟ್ಟುಹೋಗಿರುವಂತೆ ಕಾಣುತ್ತದೆ !" ಎಂದರು. ರಾತ್ರಿ ಭಜನೆಯು ಪ್ರಾರಂಭವಾಯಿತು. ಜನರಲ್ಲಿ ಯಾರಾದರೊಬ್ಬರು ಹಿರಿಯರು ಹೇಳುವದೂ ಮಿಕ್ಕವರು ಎಲ್ಲರೂ ಅವರನ್ನು ಹಿಂಬಾಲಿಸಿ ಭಜನೆಮಾಡುತ್ತಿದ್ದರು. ಮಧ್ಯೆ ಮಹಾರಾಜರು ದಯಮಾಡಿಸಿದರು. ಅವರೇ ಒಂದೆರಡು ಸಲ ಸ್ವಯಂ ಹೇಳಿಕೊಟ್ಟರು. ಅವರು ನಿಂತುಕೊಂಡು 'ಸೀತಾರಾಮ್ ! ಸೀತಾರಾಮ್ !' ಎಂದು ಅಷ್ಟೇನೂ ರಾಗವಿಲ್ಲದೆ ಹೇಳಿದರೂ ಆ ಉಚ್ಚಸ್ವರದಲ್ಲಿ ಯಾವದೋ ಒಂದು ಗಾಂಭೀರ್ಯವು ಕಾಣಿಸುತ್ತಿತ್ತು. ಅವರ ಸುತ್ತಲೂ ಇದ್ದ ನಮಗೆ ಎತ್ತರವಾದ ದೃಢಗಾತ್ರದ ದೇಹದಿಂದ ಅವರು ಯಾರೋ ದ್ವಾಪರಯುಗದ ಮಹಾಪುರುಷರೆಂದು ಭಾಸವಾಗುತ್ತಿತ್ತು. ಅಜ್ಜಯ್ಯನು ಬಾಯಿಪಾಠ ಹೇಳಿ ಕೊಡುವಾಗ ಪ್ರೇಮದಿಂದ ಹೇಳುವ ಮೊಮ್ಮಕ್ಕಳಂತೆ ನಾವುಗಳು ಅವರ ಭಜನೆಯನ್ನು ಅನುಕರಿಸಿ ಹೇಳುತ್ತಿದ್ದೆವು. ಅದೊಂದು ನೋಡಬೇಕಾದ ದೃಶ್ಯವೇ ಆಗಿತ್ತು. ಪ್ರಧಾನವಾದ ಮಂಗಳಾರತಿಯು ಪ್ರಾರಂಭವಾಗುವವರೆಗೆ ಸ್ವಲ್ಪಹೊತ್ತು ಮಹಾರಾಜರು ಒಂದು ಆಸನದಲ್ಲಿ ಕುಳ್ಳಿರುತ್ತಿದ್ದರು.

ಜನರು ಒಬ್ಬರ ಮೇಲೊಬ್ಬರು ಬಂದು ಅವರ ಕಾಲನ್ನು ಒತ್ತುತ್ತಿದ್ದರು. ರಂಗಶಾಸ್ತ್ರಿಗಳೂ ಉತ್ಸಾಹದಿಂದ ಒತ್ತಿದರು. ಅಷ್ಟುಮಟ್ಟಿಗೆ ಕಾಲುಒತ್ತುವದು ಅವಶ್ಯವೆಂದೇನೂ ನನಗೆ ತೋರಲಿಲ್ಲ. ಮಾರನೆಯ ದಿನ ರಾತ್ರಿಯೂ ಹಾಗೆಯೇ

ಜನರೇನೋ ಒತ್ತುತ್ತಿದ್ದರು, ಒಂದು ದಿನ ನಾನು ಅವರ ಪಾದದ ಹತ್ತಿರವೇ ಕೂತುಕೊಂಡಿದ್ದು ಅನವಶ್ಯಕವೆಂದು ತೋರಿದಾಗಲೂ ಕಾಲು ಒತ್ತುತ್ತಿದ್ದ ಒಬ್ಬರ ಕೈಯನ್ನು ಇತ್ತ ಕಿತ್ತದ್ದೂ ಉಂಟು ; ಆಗ ಮಹಾರಾಜರು ನನ್ನ ಕಡೆಗೆ ಹುಸಿನಗೆಯಿಂದ ನೋಡಿದರೆಂದು ನನಗೆ ತೋರಿತು.

## ಮಂತ್ರೋಪದೇಶವನ್ನು ಪಡೆದುಕೊಳ್ಳುವದಕ್ಕೆ ಹವಣಿಕೆ :

ಮಹಾರಾಜರಿಂದ ರಾಮಮಂತ್ರೋಪದೇಶವನ್ನು ಪಡೆದುಕೊಳ್ಳಬೇಕೆಂದು ರಂಗಶಾಸ್ತ್ರಿಗಳು ಬಯಸಿದರು. ನನಗೂ ಈಗ ಆ ಉಪದೇಶವು ಸಿಕ್ಕಿದರೆ ಒಳ್ಳೆಯದೆಂದು ತೋರಿತು. ಚಿದಂಬರಯ್ಯನವರಲ್ಲಿ ಈ ವಿಷಯವನ್ನು ಎತ್ತಲು ಬೆಟಗೇರಿ ಕೃಷ್ಣಶಾಸ್ತ್ರಿಗಳ ಮೂಲಕವಾಗಿ ಏಕಾಂತದಲ್ಲಿ ಪ್ರಸ್ತಾಪಿಸಿದರೆ ಒಳ್ಳೆಯದೆಂದು ಅವರು ಸೂಚಿಸಿದರು. ಮಹಾರಾಜರ ಏಕಾಂತವು ಸಿಕ್ಕುವದು ಅತ್ಯಂತ ದುರ್ಲಭ. ಎಂಥ ಏಕಾಂತವಾದರೂ ಮೂರು ನಾಲ್ಕು ಜನರು ಜೊತೆಯಲ್ಲಿ ಇದ್ದೇ ಇರುವರು. ಕೃಷ್ಣಶಾಸ್ತ್ರಿಗಳು ಈ ಸಂದರ್ಭದಲ್ಲಿ ದಯಮಾಡಿಸಿದ್ದದ್ದು ನಮ್ಮ ಪುಣ್ಯ , 'ಶಿವಪಂಚಾಕ್ಷರಿಯ ಉಪದೇಶವಾಗಿದೆ ; ರಾಮಮಂತ್ರವನ್ನು ಈಗ ಉಪದೇಶ ತೆಗೆದುಕೊಳ್ಳುವದರ ಔಚಿತ್ಯವನ್ನು ಕುರಿತು ತಾವು ನನಗೆ ಬುದ್ಧಿಹೇಳಬೇಕು' ಎಂದು ನಾನು ಕೇಳಿದೆನು. ಅವರು ಮಹಾರಾಜರ ಉಪದೇಶವೆಂಬುದೇ ಒಂದು ಅಲಭ್ಯ ಲಾಭ, ಆದ್ದರಿಂದ ನೀವು ಅವಶ್ಯವಾಗಿ ಉಪದೇಶಕ್ಕೆ ಕೇಳಬಹುದು, ಅವರ ಅನುಗ್ರಹವೆಂಬುದು ಸಾಮಾನ್ಯವಲ್ಲ, ಸಂಕಲ್ಪಮಾತ್ರದಿಂದಲೇ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿಕೊಡಬಲ್ಲವರು ಅವರು. ನನಗೆ ಸ್ವತಃ ಅದರ ಅನುಭವವು ಆಗಿದೆ. ಒಮ್ಮೆ ವಾತರೋಗದಿಂದ ನರಳುತ್ತಾ ಶರೀರವನ್ನು ಚಲಿಸಲಾರದೆ ನಾನು ಚಿಕ್ಕರಾಮಮಂದಿರದಲ್ಲಿ ಮಲಗಿಕೊಂಡಿದ್ದೆನು. ಮಹಾರಾಜರು ಪೂಜೆಗೆ ಬಂದು ಹೋಗುವಾಗ 'ಶಾಸ್ತ್ರಿಗಳಿಗೆ ಕೈಮುಗಿಯಬೇಕೆಂಬ ಇಚ್ಛೆಯಿದೆ ; ಶ್ರೀರಾಮನು ನಡೆಸಿಕೊಡಬೇಕು !' ಎಂದು ನುಡಿದು ಹೊರಟುಹೋದರು. ಮಾರನೆಯ ದಿವಸ ಎರಡೂ ಕೈಗಳನ್ನು ಜೋಡಿಸಲು ನನಗೆ ಸಾಧ್ಯವಾಯಿತು. ಇನ್ನೊಂದು ದಿವಸ 'ಶಾಸ್ತ್ರಿಗಳು ಎದ್ದು ಕೂತುಕೊಳ್ಳಬೇಕೆನ್ನುತ್ತಾರೆ ; ಶ್ರೀರಾಮನ ಅನುಗ್ರಹದಿಂದ ಅದು ಆಗಬೇಕು !' ಎಂದರು, ಮಾರನೆಯ ದಿನ ಅದೂ ಆಯಿತು. ಹೀಗೆಯೇ ಅವರ ಸತ್ಯಸಂಕಲ್ಪಮಾತ್ರದಿಂದ ಒಂದೊಂದು ದಿನಕ್ಕೆ ಒಂದೊಂದು ಅವಯವವು ಸ್ವಾಧೀನಕ್ಕೆ ಬರುತ್ತಾ ಕೊನೆಗೆ ಸಂಪೂರ್ಣವಾಗಿ ಸ್ವಾಸ್ಥ್ಯವನ್ನು ಪಡೆದುಕೊಂಡೆನು. ಇನ್ನೊಂದು ಘಟನೆಯನ್ನೂ ನೀವು ತಿಳಿದಿರುವದು ಒಳ್ಳೆಯದು. ಇವರ ಶಿಷ್ಯರಾದ ಬ್ರಹ್ಮಾನಂದರಲ್ಲಿ ಕೆಲವರು ಮಂತ್ರೋಪದೇಶಕ್ಕೆ ಬರಲಾಗಿ ಅವರು

ಒಬ್ಬರಿಗೆ ಶಿವಪಂಚಾಕ್ಷರಿ, ಇನ್ನೊಬ್ಬರಿಗೆ ದತ್ತಾತ್ರೇಯಮಂತ್ರ, ಮತ್ತೊಬ್ಬರಿಗೆ ರಾಮಮಂತ್ರ ಹೀಗೆ ಬೇರೆ ಬೇರೆಯ ಮಂತ್ರಗಳನ್ನು ಉಪದೇಶಿಸಿದರಂತೆ. ಆ ಶಿಷ್ಯರು 'ನಮಗೆಲ್ಲರಿಗೂ ರಾಮಮಂತ್ರವೇ ಬೇಕಾಗಿತ್ತು. ಮಹಾರಾಜರಲ್ಲಿ ಹೋಗಿ ಪ್ರಾರ್ಥಿಸಿಕೊಳ್ಳೋಣ !' ಎಂದು, ಬ್ರಹ್ಮಾನಂದರು ಇಲ್ಲದ ಕಾಲವನ್ನು ಸಾಧಿಸಿ ಕೊಂಡು ಮಹಾರಾಜರವರಲ್ಲಿ ಮಂತ್ರೋಪದೇಶವನ್ನು ಕೊಡುವಂತೆ ಪ್ರಾರ್ಥಿಸಿ ಕೊಂಡರು. ಮಹಾರಾಜರು ಅವರ ಪ್ರಾರ್ಥನೆಯನ್ನು ಮನ್ನಿಸಿ ಉಪದೇಶವನ್ನು ಕೊಟ್ಟರು ; ಆದರೆ ಬ್ರಹ್ಮಾನಂದರು ಯಾರು ಯಾರಿಗೆ ಯಾವಯಾವ ದೇವತೆಯ ಮಂತ್ರವನ್ನು ಹೇಳಿಕೊಟ್ಟಿದ್ದರೋ ಆಯಾ ಮಂತ್ರವನ್ನೇ ಅವರಿಗೆ ಉಪದೇಶಿಸಿದರು ! ಹೀಗಿದೆ ಈ ಮಹಾನುಭಾವರ ಮಹಿಮೆ ! ಆದ್ದರಿಂದ ನೀವು ಯಾವ ಯೋಚನೆಯನ್ನೂ ಮಾಡದೆ ಉಪದೇಶವನ್ನು ತೆಗೆದುಕೊಳ್ಳಿರಿ. ನಿಮಗೆ ಹಿತವಾದದ್ದನ್ನೇ ಅವರು ಉಪದೇಶಿಸುವವರು ಎಂದು ಹೇಳಿದರು. ನನಗೆ ಈ ಮಾಹಾತ್ಮ್ಯವನ್ನು ಸರಳಸ್ವಭಾವದ ಕೃಷ್ಣಶಾಸ್ತ್ರಿಗಳಿಂದ ಕೇಳಿದ ಮೇಲಂತೂ ಭಕ್ತಿಯೇ ಎದ್ದುಕೊಂಡಿತು. ಅವರ ಮೂಲಕವಾಗಿಯೇ ಮಹಾರಾಜರವರನ್ನು ಉಪದೇಶಕ್ಕೆ ಪ್ರಾರ್ಥನೆ ಮಾಡಿಕೊಂಡೆನು. ಪೂರ್ವಸುಕೃತದ ಪರಿಪಾಕದಿಂದ ಅವರು 'ಅಸ್ತು' ಎಂದರು.

## ಗುರುಪೂಜೆ, ಜನರಿಗೆ ಉಪದೇಶ :

ಮಾರನೆಯ ದಿನ ಮಹಾರಾಜರವರನ್ನು ವಾದ್ಯಗಳ ಮತ್ತು ನಾಮ ಕೀರ್ತನೆಯ ರಭಸದಲ್ಲಿ ಉತ್ಸವಮಾಡಿಕೊಂಡು ಕರೆದುಕೊಂಡು ಹೊರಟರು. ಅವರನ್ನು ಒಂದು ಗಿಡ್ಡ ಕುದರೆಯ ಮೇಲೆ ಕುಳ್ಳಿರಿಸಿದ್ದರು. ಆ ಕುದುರೆಗೆ ಲಗಾಮು ಹಾಕಿರಲಿಲ್ಲ ; ಭಜನೆಯ ಗದ್ದಲಕ್ಕೆ ಒಂದಿಷ್ಟೂ ಬೆದರದೆ ನಡೆಯುತ್ತಿತ್ತು, ಎಲ್ಲರೂ ಇಷ್ಟಪಟ್ಟಾಗ ನಿಂತುಕೊಳ್ಳುವುದು ! ಮಹಾರಾಜರಿಗೆ ಆ ದಿನ ಕೆನ್ನೆಗೆ ಕೇಸರಿ ಬಳಿದಿತ್ತು, ರೇಶ್ಮಿಯ ಕಫನಿ ಹಾಕಿದ್ದರೆಂದು ಕಾಣುತ್ತದೆ. ತಲೆಗೆ ಒಂದು ರುಮಾಲು ಸುತ್ತಿದ್ದರು. ಭಕ್ತರು ಭಜನೆಯನ್ನು ಮಾಡುತ್ತಾ ಮೊದಲು ಗೋಶಾಲೆಗೆ ಕರೆದೊಯ್ದರು. ಗೋಶಾಲೆಯಲ್ಲಿ ಬಹಳವಾಗಿ ಅನಾಥವಾಗಿ ಕಟುಕರ ಮನೆಗೆ ಹೋಗುವದಕ್ಕೆ ಸಿದ್ಧವಾಗಿದ್ದ ಹಸುಗಳನ್ನು ಕೂಡಿಹಾಕಿದ್ದರು. ಇನ್ನು ಕೆಲವು ಹಸುಗಳನ್ನು ಕೊಂಡಿದ್ದರು. ಆ ಹಸುಗಳು ಮಾರಲು ಬರಡೆಂದು ಭಾವಿಸಲಾಗಿದ್ದವು. ಗೋಶಾಲೆಯನ್ನು ಸೇರಿದ ಮೇಲೆ ಆಹಾರದಿಂದ ದಷ್ಟಪುಷ್ಟವಾಗಿ ಬೆಳೆದು ಕರುಹಾಕಿದ್ದವು. ಮಹಾರಾಜರನ್ನು ದೂರದಿಂದ ಕಂಡಕೊಡಲೇ ಕಿವಿಗಳನ್ನು ನಿಮಿರಿಸಿಕೊಂಡು ಅಂಬೇ ಎಂದು ಕೂಗುತ್ತಿದ್ದವು - ಆಮೇಲೆ ಒಂದು ದೊಡ್ಡ ಮಂಟಪವಿದ್ದ ಮಂದಿರಕ್ಕೆ ಕರೆದೊಯ್ದರು. ಅದು ಯಾವ

ಸ್ಥಳವೆಂದು ನನಗೆ ಸರಿಯಾಗಿ ನೆನಪಿಲ್ಲ. ಅಲ್ಲಿ ಇಟ್ಟಿದ್ದ ಗುರುಗಳ ಭಾವಚಿತ್ರವನ್ನು ಮಹಾರಾಜರು ಭಕ್ತಿಯಿಂದ ಪೂಜಿಸಿ ನಮಸ್ಕರಿಸಿದರು. ಆ ಬಳಿಕ ಅವರನ್ನು ಒಂದು ಉಚ್ಚಾಸನದಲ್ಲಿ ಕುಳ್ಳಿರಿಸಿದರು. ಕೃಷ್ಣಶಾಸ್ತ್ರಿಗಳೇ ಮುಂತಾದವರು ಒಬ್ಬೊಬ್ಬರಾಗಿ ಪಾದಪೂಜೆ ಮಾಡಿದ ಬಳಿಕ, ಕೈಗೆ ಒಂದು ತೆಂಗಿನಕಾಯಿ, ದಕ್ಷಿಣೆ ಕೊಡುತ್ತಿದ್ದರು ; ಮಹಾರಾಜರು ಅವರವರಿಗೆ ಕಾಯಿಯನ್ನು ಹಿಂದಕ್ಕೆ ಕೊಡುವದು, ದಕ್ಷಿಣೆಯನ್ನು ಹತ್ತಿರವಿದ್ದವರಿಗೆ ಕೊಡುವದು - ಹೀಗೆ ಮಾಡುತ್ತಿದ್ದರು. (ಇಂಥ ಸಂದರ್ಭಗಳಲ್ಲಿ ಹಣವನ್ನು ತೆಗೆದುಕೊಂಡವರು ಇಂತಿಷ್ಟೇ ಹಣವು ನನ್ನ ವಶಕ್ಕೆ ಬಂದಿದೆ ಎಂಬುದನ್ನು ಮಹಾರಾಜರು ಯೋಗ ಸಾಮರ್ಥ್ಯದಿಂದ ತಿಳಿದುಕೊಂಡಿರುತ್ತಾರೆ ಎಂದು ನಂಬಿ ಅಂಜಿಕೆಯಿಂದ ಲೆಕ್ಕಾಚಾರ ನೋಡಿ ಕೇಳಿದಾಗ ಒಪ್ಪಿಸುತ್ತಾರೆಂದು ನನಗೆ ಯಾರೋ ಹೇಳಿದರು. ಮಂದಿರಕ್ಕೆ ದಿನಸಿಗಳನ್ನು ಕೊಡುವ ಅಂಗಡಿಯವನೂ ಹೀಗೆಯೇ ಯಾರೂ ಲೆಕ್ಕವನ್ನು ತನಿಖೆ ಮಾಡದಿದ್ದರೂ ಮಹಾರಾಜರು ಪರೋಕ್ಷವಾದ್ದದ್ದನ್ನೆಲ್ಲ ಬಲ್ಲವರೆಂಬ ದೃಢವಾದ ನಂಬಿಕೆಯಿಂದಲೇ ತನಗೆ ಸಲ್ಲಬೇಕಾದಷ್ಟು ಹಣವನ್ನು ಮಾತ್ರ ತೆಗೆದುಕೊಳ್ಳುತ್ತಾನೆ. ಅದರಲ್ಲಿ ಮೋಸವಾಗುವ ಸಂಭವವೇ ಇಲ್ಲ ಎಂದು ತಿಳಿದು ಬಂತು).

ಗುರುಪೂಜೆಯಾದ ಬಳಿಕ ಮತ್ತೆ ಉತ್ಸವದ ಮೆರವಣಿಗೆಯಿಂದ ಮಹಾರಾಜರನ್ನು ರಾಮಮಂದಿರಕ್ಕೆ ಕರೆತಂದರು. ಅಲ್ಲಿ ಮರಾಠಿಯಲ್ಲಿ ಒಂದು ನಿರೂಪಣವನ್ನುಸುಮಾರು ಅರ್ಧಮುಕ್ಕಾಲು ಘಂಟೆಯ ಹೊತ್ತು ಅನುಗ್ರಹಿಸಿ ದರು. ಅದರ ಅಭಿಪ್ರಾಯವನ್ನು ನಾವು ಆ ಮೇಲೆ ಕೃಷ್ಣಶಾಸ್ತ್ರಿಗಳಿಂದ ತಿಳಿದು ಕೊಂಡೆವು. ''ನೀವು ಕಾಡಿಗೆ ಹೋಗಿ ತಣ್ಣೀರು ಸ್ನಾನಮಾಡಿ ಬಿಸಿಲು, ಚಳಿಮಳೆಗಳಿಂದಾಗುವ ವ್ಯಥೆಯನ್ನು ತಡೆದುಕೊಂಡು ಬೇವಿನ ತೊಪ್ಪಲು, ಪರ್ಣಾಹಾರಗಳಿಂದ ತಪಸ್ಸು ಮಾಡುವದೇನೂ ಬೇಕಿರುವದಿಲ್ಲ. ನೀವು ನೀವು ಇದ್ದಲ್ಲಿಯೇ ಇದ್ದು ರಾಮನಾಮ ಸ್ಮರಣೆಯನ್ನು ಮಾಡುತ್ತಿದ್ದರೆ ಸಾಕು. ನಿಮ್ಮ ಮನೆ, ಹೆಂಡತಿ, ಮಕ್ಕಳು, ಧನ ಮುಂತಾದದ್ದು ಎಲ್ಲವೂ ಶ್ರೀರಾಮನು ನೋಡಿಕೊಳ್ಳುವದಕ್ಕೆಂದು ಕೊಟ್ಟಿರುತ್ತಾನೆಂದೂ, ಕೇಳಿದಾಗ ಆತನಿಗೆ ಎಲ್ಲವನ್ನೂ ಒಪ್ಪಿಸಬೇಕಾಗುವದೆಂದೂ ತಿಳಿದು ನಿರ್ಲಿಪ್ತರಾಗಿರಿ. ನಿರ್ಮಲವಾದ ಭಕ್ತಿ ಭಾವದಿಂದ ಆರು ತಿಂಗಳು ನೀವು ರಾಮನಾಮ ಜಪವನ್ನು ಮಾಡುತ್ತಿರಿ. ಅದರಿಂದ ಶ್ರೀರಾಮನ ಅನುಗ್ರಹವು ಆಗುವದೆಂಬುದು ನಿಮ್ಮ ಅನುಭವಕ್ಕೆ ಆರು ತಿಂಗಳೊಳಗಾಗಿ ಬರುತ್ತದೆ. ಹೀಗೆ ಮಾಡಿದರೂ ಯಾವ

ಸತ್ಫಲವೂ ಆಗಲಿಲ್ಲವೆಂದರೆ ಅಂಥವರು ಅವಶ್ಯವಾಗಿ ನನ್ನಲ್ಲಿಗೆ ಬರೆದುಕೊಳ್ಳಿರಿ. ನಾನು ಅದಕ್ಕೆ ಉತ್ತರದಾಯಿಯಾಗಿರುತ್ತೇನೆ'' ಎಂಬುದು ನಿರೂಪಣದ ಸಾರವು. ಮಹಾರಾಜರು ತಾವು ಸ್ವತಃ ನೈಮಿಷಾರಣ್ಯಕ್ಕೆ ಹೋಗಿ ಹಲವು ವರ್ಷಗಳವರೆಗೆ ಉಗ್ರತಪಸ್ಸನ್ನು ಮಾಡಿಕೊಂಡು ಬಂದವರು. ಭಕ್ತಿಯೋಗದಲ್ಲಿರುವ ನಾಮಸ್ಮರಣೆಯ ಸೌಲಭ್ಯವನ್ನು ಕಂಡು ಕೊಂಡವರು. ಅವರು ಈ ಗುರುಪೂರ್ಣಿಮೆಯ ದಿನ ಮಾಡಿರುವ ಸದುಪದೇಶವನ್ನು ನಾವು ಶ್ರದ್ಧೆಯಿಂದ ಅಳವಡಿಸಿಕೊಂಡರೆ ನಮಗೆ ಶ್ರೇಯಸ್ಸಾಗುವದರಲ್ಲಿ ಸಂಶಯವಿಲ್ಲ ಎಂದು ಕೃಷ್ಣಶಾಸ್ತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

## ಮಂತ್ರೋಪದೇಶ :

ಈ ಗಡಿಬಿಡಿಯ ನಡುವೆ ಮಹಾರಾಜರ ಅಪ್ಪಣೆಯಂತೆ ಕೃಷ್ಣಶಾಸ್ತ್ರಿಗಳವರು ನಮಗೆ ಮಂತ್ರೋಪದೇಶಕ್ಕೆ ಏರ್ಪಡಿಸಿದ್ದರು. ಮೊದಲು ಗಣಪತಿ ಪೂಜೆಯನ್ನು ಮಾಡಿಸಿದ ಬಳಿಕ ನಮಗೂ ಮಹಾರಾಜರಿಗೂ ಒಂದು ಬಟ್ಟೆಯ ಬುರುಕಿಯನ್ನು ಮೈ ಮೇಲೆ ಹಾಕುತ್ತಿದ್ದರು. ಆಗ ಸುತ್ತಲೂ ಭಕ್ತರು ಗಟ್ಟಿಯಾಗಿ ಭಜನೆಯನ್ನು ಮಾಡುತ್ತಿದ್ದರು. ಅವರು ಬಲಗಿವಿಯಲ್ಲಿ ಮಂತ್ರವನ್ನು ಉಪದೇಶಿಸುತ್ತಿದ್ದರು. ನನಗೆ ಆ ಮಂತ್ರವನ್ನು ಕೇಳಿದಾಗ ಒಂದು ಚಮತ್ಕಾರವು ನಡೆಯಿತು. ಮಹಾರಾಜರು ಎಲ್ಲರ ಧ್ವನಿಯನ್ನು ಮೀರುವ ಸುಸ್ಪಷ್ಟವಾದ ಎತ್ತರದ ಉಚ್ಚಸ್ವರದಿಂದ ಮಂತ್ರವನ್ನು ಹೇಳಿಕೊಟ್ಟಂತೆ ಭಾಸವಾಯಿತು. ಆ ಮಂತ್ರವು ಕಿವಿಯನ್ನು ಕೊರೆದುಕೊಂಡು ಒಳಹೊಕ್ಕು ಹೃದಯವನ್ನು ಪ್ರವೇಶಿಸಿದಂತೆ ಆಯಿತು. ಜನರ ಮಾತಿನ ಗುಜುಗುಜು, ಸುತ್ತಲೂ ಭಜನೆಯ ಗದ್ದಲ - ಇವೆರಡರ ನಡುವೆ ಅಷ್ಟೊಂದು ಉಚ್ಚವಾಗಿ ಕೇಳಿದ್ದು ಇತರರಿಗೂ ಕೇಳಿಸಿಯೇ ಇರಬೇಕು ಎಂದು ನನ್ನ ನಂಬುಗೆ ; ಆದರೆ ನನಗೆ ಬಹಳ ಹತ್ತಿರವೇ ಇದ್ದ ಚಿದಂಬರಯ್ಯನವರನ್ನು ವಿಚಾರಿಸುವಲ್ಲಿ ಅವರಿಗೆ ಕೂಡ ಆ ಮಂತ್ರವು ಕೇಳಿಸಿರಲಿಲ್ಲವೆಂದು ತಿಳಿಯಿತು ! ಇನ್ನೊಂದು ವಿಷಯ. ಪ್ರತಿದಿನವೂ ನಮ್ಮ ತಂದೆಯವರು ಭೋಜನಕಾಲದಲ್ಲಿ ವಿಷ್ಣು ಸಹಸ್ರನಾಮದ ಭಾಗವನ್ನು ಹೇಳಿಕೊಟ್ಟು 'ಹರೇರಾಮ ಹರೇರಾಮ ರಾಮ ರಾಮ ಹರೇಹರೇ । ಹರೇಕೃಷ್ಣ ಹರೇಕೃಷ್ಣ ಕೃಷ್ಣ ಕೃಷ್ಣ ಹರೇಹರೇ , ಶ್ರೀರಾಮ ರಾಮೇತಿ ರಮೇರಾಮೇ ಮನೋರಮೇ, ಸಹಸ್ರನಾಮತಸ್ತುಲ್ಯಂ ರಾಮನಾಮ ವರಾನನೇ ॥ ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ ।

**ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ॥**

ಎಂಬೀ ಮೂರು ಶ್ಲೋಕಗಳನ್ನು ಅನೇಕಾ ವೃತ್ತಿಯಾಗಿ ಪಠಿಸುವಂತೆ ಮಾಡಿದ ಬಳಿಕ ಇದೇ ಮಂತ್ರವನ್ನು ನನ್ನಿಂದ ಹೇಳಿಸಿದ್ದರು ; ಆದರೆ ಇದು ತಾರಕ ಮಂತ್ರವೆಂದೇನೂ ಅವರು ಹೇಳಿರಲಿಲ್ಲ. ಈಗ ಸದ್ಗುರು ಮಹಾರಾಜರಿಂದ ಆಮಂತ್ರವು ಕಿವಿಗೆ ಬಿದ್ದಮೇಲೆ ನನಗೆ ಎಷ್ಟೋ ದಿನಗಳಿಂದ ನಿದ್ರಿಸುತ್ತಿರುವವನನ್ನು ಎಚ್ಚರಿಸಿದಂತೆ ಆಯಿತು. ಆ ದಿನ ನಾನು ಎಲ್ಲೆಲ್ಲಿ ಹೋದರೂ ಈ ಮಂತ್ರವನ್ನು ಯಾರೋ ಕಿವಿಯ ಬಳಿಯಲ್ಲಿ ಉಚ್ಚರಿಸುತ್ತಲೇ ಇದ್ದಾರೆ ಎಂಬ ದೃಢಭಾವನೆಯು ನನಗೆ ಬಂದುಬಿಟ್ಟಿತು. ಓದುಗರು ನಂಬಲಿ, ಬಿಡಲಿ, ನನಗೆ ಆಗ ಬರಿಯ ಭಾವನೆಯಿರಲಿಲ್ಲ. ಯಾವುದೋ ಅಶರೀರವಾಣಿಯು ಗಟ್ಟಿಯಾಗಿ ಮಂತ್ರೋಚ್ಚಾರಣೆಯನ್ನೇ ಮಾಡುತ್ತಿತ್ತು ಎಂದೇ ನನ್ನ ದೃಢವಾದ ನಂಬಿಕೆ.

## ರಾತ್ರೆಯ ಸಂತರ್ಪಣೆ :

ಆ ದಿನವೂ ಸಾಯಂಕಾಲ ಎಂದಿನಂತೆ ಭಜನೆಯಾಯಿತು. ರಾತ್ರೆ ನನಗೆ ನಿದ್ರೆ ಹತ್ತಲಿಲ್ಲ. ಮಾನಗಂಗಾನದಿಯ ನೀರಿನ ಸ್ನಾನದ ಶೀತದಿಂದಲೋ, ಏನೋ, ಸ್ವಲ್ಪ ಜ್ವರವೂ ಬಂದಂತೆ ಕಂಡಿತು. ಎದೆಯ ಮೇಲೆ ಏನೋ ಬೊಕ್ಕೆ ಎದ್ದು ತಟಗುಟ್ಟುತ್ತಿತ್ತು. ಅದರ ನೋವೂ ನಿದ್ರಾಭಂಗಕ್ಕೆ ಕಾರಣವಾಗಿರಬೇಕು. ಇದಲ್ಲದೆ ನಾವು ಇಳಿದುಕೊಂಡಿದ್ದ ಖೋಲಿಯಲ್ಲಿ ಪರಸ್ಥಳದ ಇನ್ನೂ ಒಬ್ಬಿಬ್ಬರು ತಮ್ಮ ಸಾಮಾನುಗಳನ್ನು ತಂದು ಇಟ್ಟುಕೊಂಡರು. ಆ ಮನೆಯ ಬಾಗಿಲಿಗೆ ಭದ್ರವಾದ ಅಗಣಿ ಇರಲಿಲ್ಲ. ಪರಿಚಯವಿಲ್ಲದವರು ಬಂದು ಯಾರು ಯಾರ ಸಾಮಾನನ್ನು ಎಲ್ಲಿ ಅದಲುಬದಲು ಮಾಡುವರೋ ಎಂಬ ಅಂಜಿಕೆ ಬೇರೆ. ಹೇಗೇ ಆಗಲಿ, ನನಗೆ ಕಿವಿಯಲ್ಲಿ ಮಂತ್ರದ ಉಚ್ಚಾರಣೆಯೇನೋ ನಡೆದಿತ್ತು. ರಾತ್ರೆ ಸುಮಾರು ಹನ್ನೊಂದು ಹನ್ನೆರಡು ಘಂಟೆಯಿರಬಹುದು ; 'ಮ್ಹಣಾ ಜಾನಕೀ ಕಾಂತಸ್ಮರಣಂ ಜಯ ಜಯರಾಮ್' ಎಂಬ ಘೋಷವು ಕಿವಿಗೆ ತಾಕಿತು. ನೂರಾರು ಜನ ಕೂಗಿದಷ್ಟು ಧ್ವನಿಯಾಯಿತು. ಆಶ್ಚರ್ಯದಿಂದ ನಾನು ಹೊರಕ್ಕೆ ಬಂದು ಏನೆಂದು ವಿಚಾರಿಸುವಲ್ಲಿ ಸ್ವಲ್ಪ ದೂರದಲ್ಲಿ ಶೂದ್ರರಿಗೆ ಭೋಜನ ಸಂತರ್ಪಣವು ನಡೆದಿದೆಯೆಂಬೂ ಮಹಾರಾಜರು ತಾವೇ ಎದುರಿಗೆ ಅವರಿಗೆಲ್ಲ ಬಡಿಸುವ ಏರ್ಪಾಡಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಂದು ತಿಳಿಯಬಂದಿತು. ಆಗಾಗ್ಗೆ ಭೋಜನ, ಶ್ಲೋಕಗಳನ್ನು ಹೇಳಿಸುವದು, ರಾಮನಾಮದ ಘೋಷವನ್ನು ಮಾಡಿಸುವದು - ಹೀಗೆ ಅವರಿಗೆಲ್ಲ ಭಕ್ತಿಯ ಭೋಜನವನ್ನು ಏರ್ಪಡಿಸಿದಾರೆಂದು ತಿಳಿಯಬಂತು.

## ಗುರುಮಹಾರಾಜರ ಲೋಕ ಕುಟುಂಬತ್ವ:

ಮಹಾರಾಜರು ಬ್ರಾಹ್ಮಣರು. ಅಬ್ರಾಹ್ಮಣರು, ವಿದ್ವಾಂಸರು, ದಡ್ಡರು, ಐಶ್ವರ್ಯವಂತರು, ಬಡವರು ಎಂಬ ಭೇದಭಾವವಿಲ್ಲದೆ ಎಲ್ಲರನ್ನೂ ಸಮಭಾವದಿಂದ ಕಾಣುತ್ತಿದ್ದರು. ಅವರೇನೂ ಅಷ್ಟಾಗಿ ಓದಿದವರೆಂದು ಕಾಣಲಿಲ್ಲ. ಆದರೆ ಅವರಲ್ಲಿ ವಿದ್ವಾಂಸರೂ ತತ್ತ್ವಾರ್ಥ ವಿಷಯಕ್ಕೆ ತಮ್ಮ ತಮ್ಮ ಸಂಶಯಗಳನ್ನು ಹೇಳಿ ಪರಿಹರಿಸಿಕೊಳ್ಳುತ್ತಿದ್ದರು. ಒಂದು ದಿನ ಸಣ್ಣ ಸೋನೆಯ ಮಳೆಯು ಬಂದಿದ್ದಾಗ ಸಂಚಾರಕ್ಕೆ ಹೋಗಿದ್ದ ಮಹಾರಾಜರ ಜೊತೆಯಲ್ಲಿ ಕೆಲವರು ಅವರ ಸುತ್ತಲೂ ಪಂಚೆಗಳನ್ನು ಸೇರಿಸಿ ಮೇಲುಗಟ್ಟು ಮಾಡಿ ಸೇರಿಸಿ ಹಿಡಿದು ಕೊಂಡಿದ್ದರು, ಈ ನಡುವೆ ಯಾರೋ ಪಂಚದಶಿಯ ಕೆಲವು ಶ್ಲೋಕಗಳನ್ನು ಹೇಳಿ ಅವುಗಳ ಅರ್ಥವನ್ನು ಚರ್ಚೆಗೆ ತಂದರು. ಮಹಾರಾಜರು ಮರಾಠಿಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದದ್ದನ್ನು ನಾನು ಕಿವಿಯಾರೆ ಕೇಳಿರುತ್ತೇನೆ. ಅವರು ಮನೆಮನೆಗೆ ಹೋಗುವಾಗ ಜನರ ಯೋಗಕ್ಷೇಮವನ್ನು ಕೇಳುವದು, ಕಾಯಿಲೆಯಿಂದ ನರಳುತ್ತಿರುವವರಿಗೆ ಇಂಥಿಂಥ ಅನುಭವವೈದ್ಯಗಳನ್ನು ಉಪಯೋಗಿಸಿರಿ ಎಂದು ಹೇಳುತ್ತಿದ್ದದ್ದನ್ನು ಕೇಳಿರುತ್ತೇನೆ. ತಮ್ಮಲ್ಲಿದ್ದ ಜನರಿಗೆ ಯಾವದಾದರೊಂದು ಕೆಲಸವು ಇರಬೇಕೆಂದು ಮಾನಗಂಗೆಯ ತೀರದಲ್ಲಿ ಯಾವದೋ ಒಂದು ಯಂತ್ರವನ್ನು ತರಿಸಿ ಇಟ್ಟಿದ್ದರು. ಕೂಲಿಯ ಜನರಿಗೆ ಕೆಲಸಗಳನ್ನು ಒದಗಿಸುವ ಯಾವದಾದರೊಂದು ಏರ್ಪಾಡನ್ನು ಮಾಡುತ್ತಿದ್ದರು. ಗೋಂದಾವಳಿಯ ಸುತ್ತಮುತ್ತಲೂ ಸುಮಾರು ಇಪ್ಪತ್ತು ಮೂವತ್ತು ಮೈಲಿಗಳಷ್ಟು ದೂರದ ಜನರು ಅವರಲ್ಲಿಗೆ ಬಂದು ತಮ್ಮ ತಮ್ಮ ವ್ಯವಹಾರಗಳನ್ನು ಹೇಳಿಕೊಂಡು ಅವರ ಪಂಚಾಯತಿಯಿಂದ ತೀರ್ಮಾನವನ್ನು ಪಡೆಯುತ್ತಿದ್ದರು. ಗೋಂದಾವಳಿಗೆ ಬಂದಜನರು ಹೊರಟುಹೋಗುವಾಗ ಬಡಬ್ರಾಹ್ಮಣರಿಗೆ ಕೆಲವರಿಗೆ ಅಂಗಿಯ ಬಟ್ಟೆಗಳು, ಹೆಂಗಸರಿಗೆ ಕುಪ್ಪಸಗಳು, ಅರಿಶಿನ - ಮುಂತಾದವುಗಳನ್ನು ಕೊಡಿಸಿ ಕಳುಹಿಸಿಕೊಡುತ್ತಿದ್ದರು. ರಾಮಗೀತೆಯ ಪುಸ್ತಕಗಳನ್ನು ಸಾವಿರಗಟ್ಟಲೆಯಾಗಿ ಅಚ್ಚುಮಾಡಿಸಿ ಅವರ ಕೈಯಿಂದ ಜನರಿಗೆ ಹಂಚಿಸುತ್ತಿದ್ದರು ; ಆ ಪುಸ್ತಕದ ಪ್ರತಿಯೊಂದನ್ನು ತಂದು ನಾನೂ ಬಹುಕಾಲ ಇಟ್ಟುಕೊಂಡಿದ್ದೆನು.

ನಾನು ಗೋಂದಾವಳಿಗೆ ಬಂದು ರಜಾದಿನಗಳು ಮುಗಿದರೂ ಹಿಂತಿರುಗು-ವದಕ್ಕೆ ಅನುಕೂಲತೆಯಿಲ್ಲದೆ ಪೇಚಾಡುತ್ತಿದ್ದೆನು. ಊರಿಗೆ ಹಿಂತಿರುಗುವವರು ಗುರುಗಳಿಗೆ ಒಂದು ತೆಂಗಿನಕಾಯನ್ನು ಸಮರ್ಪಿಸಿ ಪ್ರಸಾದವಾಗಿ ಅವರಿಂದ ತೆಗೆದುಕೊಂಡು ಹೋಗುವ ಪದ್ಧತಿಯಿತ್ತು. ನಾನು ಯಾವ ಯಾವಾಗ

ಹೊರಡುವದಕ್ಕೆ ಉದ್ಯುಕ್ತನಾದರೂ, ತೆಂಗಿನಕಾಯಿಯನ್ನು ನನ್ನಿಂದ ತೆಗೆದುಕೊಂಡವರು ಅದನ್ನು ತಮ್ಮಲ್ಲಿಯೇ ಇಟ್ಟುಕೊಂಡು 'ಗಾಡಿ ಕುಠೇ ಆಗೆ ?' (ಬಂಡಿ ಎಲ್ಲಿಗೆ ?) ಎಂದು ಕೇಳುತ್ತಿದ್ದರು. ಬಂಡಿಯವರನ್ನು ಯಾರನ್ನು ಬಾಡಿಗೆ ಕೇಳಿದರೂ ಅವರಿಗೆ ಮನಸ್ಸಿಗೆ ಬಂದಷ್ಟು ದುಬಾರಿ ಬಾಡಿಗೆ ಕೇಳುತ್ತಿದ್ದರು. ವಿಚಾರಿಸಿದ್ದರಲ್ಲಿ ಮಹಾರಾಜರ ಅಪ್ಪಣೆಯಿಲ್ಲದೆ ಯಾವ ಗಾಡಿಯವನೂ ಬಾಡಿಗೆ ಬರುವದಿಲ್ಲವೆಂದು ತಿಳಿಯಬಂತು. ಕೊನೆಗೆ ಬೇಸತ್ತು 'ಏನಾದರೂ ಆಗಲಿ, ರಜದ ಅವಧಿಯನ್ನು ಮೀರಿ ನಿಂತಿದ್ದಕ್ಕೆ ಈ ಸಲ ನನಗೆ ದಂಡನೆಯನ್ನು ಮೇಲ್ಪಟ್ಟ ಅಧಿಕಾರಿಗಳು ವಿಧಿಸುವದಂತೂ ನಿಶ್ಚಿತ' ಎಂದುಕೊಂಡು ಸುಮ್ಮನಾದೆನು. ಹೀಗಿರಲು ಒಂದು ದಿನ ಊಟಮಾಡಿ ಮನೆಗೆ ಹೊರಡುತ್ತಿರುವಲ್ಲಿ ಚಿದಂಬರಯ್ಯನವರು "ಏಳಿ ಸುಬ್ಬರಾಯರೇ, ನಿಮ್ಮ ಗಾಡಿ ಸಿದ್ಧವಾಗಿದೆ !" ಎಂದರು. ಅದನ್ನು ಕೇಳಿ ಆಶ್ಚರ್ಯದಿಂದಲೂ ಗಾಬರಿಯಿಂದಲೂ ಕೂಡಿ ನಾನು ಒಂದು ತೆಂಗಿನ ಕಾಯಿಯನ್ನು ಗುರುಗಳಿಗೆ ಸಮರ್ಪಿಸಿದೆನು. ಕೂಡಲೆ ಅವರು ಅದನ್ನು ಹಿಂತಿರುಗಿ ನನಗೆ ಕೊಟ್ಟು 'ಹೋಗಿ ಸುಖವಾಗಿರಿ ಶ್ರೀರಾಮನು ಒಳ್ಳೆಯದು ಮಾಡಿಯಾನು !' ಎಂಬರ್ಥಕ್ಕೆ ಉತ್ತರಕೊಟ್ಟರು. ಕೂಡಲೇ ನಾನೂ ರಂಗಶಾಸ್ತ್ರಿಗಳೂ ಜೊತೆಯಲ್ಲಿ ಹಿಂತಿರುಗಿದೆವು. ದಾರಿಯಲ್ಲಿ ಪುಸೆಗಾಂವಿನಲ್ಲಿ ನಮಗೂ ನಮ್ಮ ಜೊತೆಯಲ್ಲಿ ಹಿಂತಿರುಗಿದ ಪ್ರಯಾಣಿಕರಿಗೂ ತಿಂಡಿ ತೀರ್ಥಗಳನ್ನು ಕೊಡುವದಕ್ಕೆ ಮಹಾರಾಜರು ಏರ್ಪಡಿಸಿದ್ದಾರೆಂದು ತಿಳಿಯಬಂತು ! ಈ ಕಲಿಯುಗದಲ್ಲಿಯೂ ಇಂಥ ವಿಶ್ವ ಕುಟುಂಬಿಗಳಾದ ಸರ್ವರನ್ನು ಸಮಬುದ್ಧಿಯಿಂದ ಕಾಣುವ ಮಹಾತ್ಮರೊಬ್ಬರನ್ನು ಕಣ್ಣಾರೆ ಕಾಣುವ ಸುಯೋಗವು ಮತ್ತೊಬ್ಬರ ನಿಮಿತ್ತದಿಂದ ಗೋಂದಾವಳಿಗೆ ಹೋದ ನನ್ನಂಥವನಿಗೂ ದೊರೆಯಿತು. !

## 24. ದಾವಣಗೆರೆ - ಸತ್ಸಂಗದ ಔತ್ಸುಕ್ಯ (1912)

### ಭಕ್ತಿಯ ಭರದಲ್ಲಿ:

ರಂಗಾಶಾಸ್ತ್ರಿಗಳು ಗೋಂದಾವಳಿಯನ್ನು ಬಿಡುವ ಮುನ್ನ ಮಹಾರಾಜರನ್ನು ಏಕಾಂತದಲ್ಲಿ ತಮ್ಮ ಹೃದಯದಲ್ಲಿದ್ದ ಪ್ರಧಾನ ವಿಷಯವನ್ನು ಕೇಳಿದರು. 'ಈಗ ಮೂವರು ಹೆಂಡಿರನ್ನು ಕಳೆದುಕೊಂಡು ಬಹಳ ನೊಂದಿರುತ್ತೇನೆ. ಈಗ ಮತ್ತೆ ಮದುವೆಯಾಗಲೆ, ಬೇಡವೆ ?' ಎಂದು ಪ್ರಶ್ನಿಸಿದರು. 'ಅದನ್ನೂ ಒಮ್ಮೆ ಮಾಡಿ ನೋಡಿರಿ !' ಎಂಬ ಉತ್ತರ ಬಂತು. ಶಾಸ್ತ್ರಿಗಳು ಅಷ್ಟಕ್ಕೇ ತೃಪ್ತರಾಗಲಿಲ್ಲ. ತಾವು ದೂರದಲ್ಲಿರುವ ಭಕ್ತರಿಗೆ ದರ್ಶನಕೊಟ್ಟು ಕಾಪಾಡಿದ್ದೀರೆಂದು ಕೇಳಿದ್ದೇನೆ. ನನ್ನ ಬೆನ್ನ ಹಿಂದೆ 'ತಾವು ಇದ್ದು ಕಾಪಾಡುತ್ತೀರೆಂಬ ಭರವಸೆ ಕೊಡಬೇಕು. ಹಾಗಾದರೆ ಮಾತ್ರ ನಾನು ಮದುವೆಯಾಗುತ್ತೇನೆ.' ಎಂದರೆ ಮಹಾರಾಜರು 'ಒಳ್ಳೆಯದು, ಈಗ ನಾನು ಕೊಟ್ಟಿರುವ ರಾಮಮಂತ್ರದ ತೇರಾಕೋಟಿಜಪವನ್ನು ಮಾಡಿರಿ. ಶ್ರೀರಾಮನಾಮದ ಸ್ಮರಣೆಯನ್ನು ಮರೆಯದಿರಿ, ಹಾಗಾದರೆ ನಿಮಗೆ ದರ್ಶನವನ್ನು ಕೊಡುವೆನು ; ಶ್ರೀರಾಮನು ನಿಮ್ಮನ್ನು ಕಾಪಾಡುವನು !' ಎಂದರು. ಶಾಸ್ತ್ರಿಗಳಿಗೆ ಅಪಾರವಾದ ಸಂತಸವಾಯಿತು. ಅವರು ಗೋಂದಾವಳಿಯಿಂದ ಹೊರಟಂದಿನಿಂದ ನನ್ನೊಡನೆ ಒಂದು ಮಾತನ್ನೂ ಆಡದೆ ಎಡೆಬಿಡದೆ ಮಂತ್ರಜಪವನ್ನು ಮಾಡಲಾರಂಭಿಸಿದರು. ದಾವಣಗೆರೆಗೆ ಹೋಗಿ ಒಂದೆರಡು ದಿನಗಳು ನನ್ನೊಡನಿದ್ದು ಮುಂದಕ್ಕೆ ಪ್ರಯಾಣಮಾಡುವವರೆಗಂತೂ ಅವರು ರಾಮಮಂತ್ರಮಯರಾಗಿದ್ದರು. 'ದೇಹಂ ವಾ ಪಾತಯಾಮಿ ಕಾರ್ಯಂ ವಾ ಸಾಧಯಾಮಿ' ಎಂಬಷ್ಟು ಆವೇಶವು ತೋರುತ್ತಿತ್ತು, ಆಗಿನ ಅವರ ಉದ್ಯಮದಲ್ಲಿ!

ಈ ಕಾಲಕ್ಕೆ ನನ್ನ ಮೇಲೂ ಮಹಾರಾಜರ ಮಂತ್ರವು ಬಹಳ ಪ್ರಭಾವವನ್ನು ಬೀರಿತ್ತು. ನಾನು ಗೋಂದಾವಳಿಯಿಂದ ಬರುವದರೊಳಗೆ ನನಗೊಂದು ಆಶೌಚವು ಬಂದು ಕಳೆದುಹೋಗಿತ್ತು. ನಾನು ಹೆಚ್ಚಿಗೆ ರಜವನ್ನುಪಯೋಗಿಸಿಕೊಂಡದ್ದನ್ನು ಮೇಲಿನವರು ಯಾವ ದುರ್ದೃಷ್ಟಿಯಿಂದಲೂ ನೋಡದೆ ರಜ ಮಂಜೂರು ಮಾಡಿಬಿಟ್ಟಿದ್ದರು. ಇದೆಲ್ಲ ಗುರುಗಳ ಮಹಿಮೆಯೆಂದೇ ನಾನು ಬಗೆದೆನು. ನನಗೆ ಮಹಾರಾಜರಲ್ಲಿ ಮತ್ತಷ್ಟು ಶ್ರದ್ಧಾಭಕ್ತಿಗಳು ಬೆಳೆದುಕೊಂಡವು. ನಾನು ಎಡಬಿಡದೆ ಮಂತ್ರವನ್ನು ಜಪಿಸುವದು, ಗುರುವಾರ ಶನಿವಾರಗಳು ಒಪ್ಪತ್ತು ಮಾಡುವದು, ಹೀಗೆ ಪ್ರಾರಂಭಿಸಿದೆ. ಮೊದಲಿನಿಂದಲೂ ಮುಂಜಾನೆ ಎದ್ದು ಆದಷ್ಟು ಗುರುಧ್ಯಾನವನ್ನು ಮಾಡಿ ಜಪವನ್ನು ಮಾಡುವದು, ಗುರುಪಾದುಕೆಗಳಿಗೆ ಕೇಸರಿ ಪಚ್ಚಕರ್ಪೂರ

ಇವುಗಳನ್ನು ಸೇರಿಸಿದ ಗಂಧವನ್ನು ಹಚ್ಚುವದು, ಸುವಾಸನೆಯ ಧೂಪವನ್ನು ದೇವರ ಕೋಣೆಯಲ್ಲಿ ಹಾಕುವದು, ಕರ್ಪೂರದ ಆರತಿ ದೇವರ ಪೂಜೆಯಾದ ಬಳಿಕ ಮಹಾಭಾಷ್ಯದ (ಶ್ರೀ ಶಾಂಕರಭಾಷ್ಯ) ಪಾರಾಯಣ, ಮಡಿಯಲ್ಲಿ ತಯಾರಿಸಿದ ಮಷಿಯಿಂದ ಸೆಣಬಿನ ಹುರಿಯಿಂದ ಹೊಲೆದ ಮಡಿ ಪುಸ್ತಕದಲ್ಲಿ ಭಾಷ್ಯವನ್ನು ನಕಲು ಮಾಡುವದು, ಇವುಗಳನ್ನು ಮಾಡುವದು - ಇದೇ ಮುಂತಾದ ರೀತಿಗಳಲ್ಲಿ ಕಾಲವನ್ನು ಕಳೆಯುತ್ತಾ ಬಂದೆ. ಆಗಿನ ಕಾಲದಲ್ಲಿ ದಿನಚರಿಯನ್ನು ಬರೆದಿಟ್ಟಿದ್ದರೆ ಚೆನ್ನಾಗಿತ್ತು, ಎನಿಸುತ್ತಿದೆ ಈಗ !

## ನಂಜಪ್ಪನವರ ಪ್ರಥಮ ಸಮಾಗಮ :

ಹೀಗೆ ನಾನು ಭಕ್ತಿಯ ಆವೇಶದಿಂದ ಕಾಲಕ್ಷೇಪ ಮಾಡುತ್ತಿರುವಲ್ಲಿ ಅರಸೀಕೆರೆಯಿಂದ ನಂಜಪ್ಪನವರೆಂಬ ಒಬ್ಬ ತರುಣ ವಯಸ್ಕರು ನನ್ನಲ್ಲಿಗೆ ಬಂದರು. ಅವರು 'ವಿವೇಕಚೂಡಾಮಣಿಯೇ ಮುಂತಾದ ಗ್ರಂಥಗಳನ್ನು ನಾನು ಓದುತ್ತಿದ್ದೇನೆ, ಕೆಲವು ವಿಷಯಗಳು ಸರಿಯಾಗಿ ತಿಳಿಯುತ್ತಲಿಲ್ಲ. ಈ ಸಂಬಂಧದಲ್ಲಿ ತಮ್ಮ ದರ್ಶನ ಮಾಡಬೇಕೆಂದು ಮನಸ್ಸು ಮಾಡಿದ್ದೇನೆ; ತಮ್ಮ ಅಪ್ಪಣೆ ಆದರೆ ದಾವಣಗೆರೆಗೆ ಬರುತ್ತೇನೆ' ಎಂದು ಒಂದು ಪತ್ರವನ್ನು ಬರೆದಿದ್ದರು. 'ವೇದಾಂತ ಗ್ರಂಥಗಳನ್ನು ನೀವು ಓದುತ್ತಿರುವುದು ತುಂಬ ಸಂತೋಷದ ವಿಷಯ ; ನೀವು ಯಾವಾಗ ಬೇಕಾದರೂ ಇಲ್ಲಿಗೆ ಬರಬಹುದು' ಎಂದು ಉತ್ತರವನ್ನು ಹಾಕಿದೆನು. ಉತ್ಸಾಹಶಾಲಿಗಳಾದ ಆಸ್ತಿಕರಿಗೆ ಮಹಾಭಾಗವತರಂಥ ಮಹಾತ್ಮರ ದರ್ಶನ ಮಾಡಿಸುವುದು ಒಳ್ಳೆಯದು; ಅವರಿಂದ ಎಲ್ಲರೂ ಕೃತಾರ್ಥರಾಗಬಹುದು - ಎಂಬುದು ನನ್ನ ಅಂತರಂಗದಲ್ಲಿದ್ದ ಭಾವ, ಅವರು ಆ ಉತ್ತರವನ್ನು ನೋಡುತ್ತಲೂ ಕೂಡಲೆ ಹೊರಟು ಬಂದು ಬಿಟ್ಟಿದ್ದರು!

ನಂಜಪ್ಪನವರು ಚಿಕ್ಕಂದಿನಲ್ಲಿಯೇ ಕಣಕಟ್ಟೆರಾಮಣ್ಣನವರು ನಡೆಯಿಸಿದ್ದ ಒಂದೆರಡು ರಾಮೋತ್ಸವಗಳನ್ನು ನೋಡಿದ್ದರು. ಅಲ್ಲಿ ಅವರ ತಂದೆಯವರೂ ಚಿಕ್ಕಪ್ಪನವರೂ ಭಜನೆಗೆ ಸೇರಿದ್ದರಿಂದ ಆ ಭಜನೆಯ ಕೆಲವು ಪದಗಳನ್ನು ಕಲಿತುಕೊಂಡಿದ್ದರು. ಹಲವು ಸಂನಿವೇಶಗಳು ಅವರಲ್ಲಿ ಅಧ್ಯಾತ್ಮದ ವಾಸನೆಯನ್ನು ಎಬ್ಬಿಸಿದ್ದವು. ಉಪನಯನವಾದ ಮೇಲೆ ಹೊನ್ನವಳ್ಳಿಯ ಉಪಾಧ್ಯರು ಕೃಷ್ಣಯ್ಯನವರೆಂಬ ಮನೆಯಲ್ಲಿ ವಾಸವಾಗಿದ್ದರ ಫಲವಾಗಿ ಸತ್ಕರ್ಮಾಚರಣೆ, ಮಡಿ ಮೈಲಿಗೆಗಳ ವಿವೇಕ - ಇವೇ ಅಲ್ಲದೆ ಉಪಾಧ್ಯರ ಔದಾರ್ಯ, ಕರುಣೆ, ವೈರಾಗ್ಯ, ಅತಿಥಿ ಸತ್ಕಾರದಲ್ಲಿ ಆದರ, ಇಂದ್ರಿಯ ಸಂಯಮ - ಇವುಗಳೆಲ್ಲ ಅವರ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡಿದ್ದವು. ಶಂಕರಜಯಂತಿಯ ಉತ್ಸವ,

ಯೋಗವಾಸಿಷ್ಠದ ಮಂಗಳ - ಇವುಗಳನ್ನು ಅವರ ಮನೆಯಲ್ಲಿ ಕಂಡರು. ಬಳಿಕ ತಿಪಟೂರಿನಲ್ಲಿ ಕಂಡ ಪಾರ್ಥಿವೇಶ್ವರ ಪೂಜೆ, ಅರಸೀಕೆರೆಯಲ್ಲಿ ಜಮೀನುದಾರ್ರು ಹನುಮಂತರಾಯರ ತಂದೆಯವರ ಯೋಗಾಭ್ಯಾಸ - ಇವುಗಳಿಂದಾದ ಪರಿಣಾಮವೇ ಅಲ್ಲದೆ ವಿವೇಕಾನಂದರ ಭಾವಚಿತ್ರದರ್ಶನವೂ ಪ್ರಬುದ್ಧಭಾರತ ಪತ್ರಿಕೆಯ ದರ್ಶನವೂ ಆಗಿದ್ದವು. ಅಲ್ಲಿದ್ದ ತಿಮ್ಮಪ್ಪದಾಸರ ಹರಿಕಥೆಗಳನ್ನು ಕೇಳುವುದರಿಂದಲೂ ಸಂಸ್ಕಾರವಾಗಿತ್ತು. ಭಕ್ತಿವಿಜಯವೇ ಮುಂತಾದ ಕೆಲವು ಗ್ರಂಥಗಳನ್ನು ಓದಿದ್ದರು. ತಮ್ಮ ಹದಿನೇಳನೆಯ ವಯಸ್ಸಿನಲ್ಲಿಯೇ ಸ್ಕೂಲು ಮಾಸ್ಟರಾದ್ದರಿಂದ ಸ್ಕೂಲಿಗೆ ಬರುತ್ತಿದ್ದ ಯೋಗವಾಸಿಷ್ಠಗ್ರಂಥದ ಪಠನವು ಲಭಿಸಿತು. ಭಕ್ತಿವಿಜಯದ ಪರಿಣಾಮದಿಂದ ಪಂಢರಪುರಕ್ಕೆ ಹೋಗಿಬಂದಿದ್ದ ನಾರಣಪ್ಪನವ-ರೆಂಬ ಸ್ನೇಹಿತರೊಡನೆ ವಿವೇಕಚೂಡಾಮಣಿಯನ್ನು ಸ್ವಲ್ಪ ಓದಿದರು ; ಅವರಿಬ್ಬರೂ ಅರಸೀಕೆರೆಯ ಶಿವಾಲಯದಲ್ಲಿ ಅಧ್ಯಾತ್ಮಗ್ರಂಥಗಳನ್ನು ಓದುತ್ತಿದ್ದರು. ವಿಷ್ಣುಸಹಸ್ರ-ನಾಮವನ್ನು ಅಖಂಡವಾಗಿ ಓದುತ್ತಾ ಕಾಲಕ್ಷೇಪ ಮಾಡಿದರು. ವಿಷ್ಣುಸಹಸ್ರ-ನಾಮವನ್ನು ತಮ್ಮ ಅಜ್ಜನವರಿಂದ ಉಪದೇಶ ಮಾಡಿಸಿಕೊಂಡಿದ್ದರು. ಗೀತೆಯ ಉಪದೇಶಕ್ಕೆ ಯಾರಾದರೂ ಬೇಕೆಂದು ಹವಣಿಸುತ್ತಿದ್ದರಂತೆ.

ಈ ಕಾಲದಲ್ಲಿ ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವದ ಉಪನ್ಯಾಸವೊಂದರಲ್ಲಿ 'ನಾನು ಯಾರು ? ಎಂಬುದನ್ನು ಕಂಡುಹಿಡಿದುಕೊಳ್ಳುವುದೇ ಜನ್ಮಸಾಫಲ್ಯಕ್ಕೆ ಕಾರಣ' ಎಂದು ಯೂರೋಪಿನ ಯಾವುದೋ ಒಂದು ದೇವಸ್ಥಾನದಲ್ಲಿ ಆಕಾಶವಾಣಿಯಾದಂತೆ ಉಲ್ಲೇಖಿಸಿತ್ತಂತೆ. ಇದೇ ಸಮಯಕ್ಕೆ ಸಾಧ್ವೀ ಪತ್ರಿಕೆಯಲ್ಲಿ ಭಕ್ತಿದೀಪಿಕೆಯ ಒಂದು ವಿಮರ್ಶೆಯು ಪ್ರಕಟವಾಗಿತ್ತು. ಅದನ್ನು ಚಿದಂಬರಯ್ಯನವರು ಕನ್ನಡಿಸಿರುವ-ರೆಂದೂ ಅದಕ್ಕೆ ಬ್ರ॥ ಶ್ರೀ॥ ವೈ. ಸುಬ್ಬರಾಯರು ಟಿಪ್ಪಣಿ ಬರೆದಿರುವರೆಂದು ಬರೆದಿತ್ತು. ಬ್ರ॥ಶ್ರೀ॥ ಎಂದು ವಿಶೇಷಣವನ್ನು ಕೊಟ್ಟಿರುವದರಿಂದ ವೈ. ಸುಬ್ಬರಾಯರು ಬ್ರಹ್ಮಜ್ಞಾನಿಗಳಿರಬೇಕೆಂದೂ ಅವರೇ ತಮಗೆ ಗುರುಗಳಾಗ ಬೇಕೆಂದೂ ನಿಶ್ಚಯಿಸಿಕೊಂಡು ನಂಜಪ್ಪನವರು ನನ್ನ ಬಳಿಗೆ ಬಂದಿದ್ದರು ! ನಂಜಪ್ಪನವರ ಮೇಲೆ 'ಬ್ರಹ್ಮಶ್ರೀ' ಎಂಬ ಪದವು ಮಾಡಿದ ವಿಚಿತ್ರ ಪರಿಣಾಮವನ್ನು ಅವರ ಮಾತಿನಿಂದಲೇ ವರ್ಣಿಸುವದು ಆಗತ್ಯ. ''ವೈ. ಸುಬ್ಬರಾಯರನ್ನು 1910-11ರಲ್ಲಿ ನಾನು ಒಂದೆರಡು ಸಲ ನೋಡಿದ್ದೆ. ಅರಸೀಕೆರೆ ಅವರ ಅತ್ತೆಯ ಮನೆ, ಒಂದು ಸಲ ನವರಾತ್ರೆಗೆ ಬಂದಿದ್ದರು. ಪ್ರತಿದಿನವೂ ರುದ್ರಾಭಿಷೇಕ ಸಹಸ್ರನಾಮಾರ್ಚನೆಗಳನ್ನು ನಡೆಸುತ್ತಿದ್ದದ್ದನ್ನು ಅವರ ಅತ್ತೆಯ ಮನೆಯ ಹತ್ತಿರ ಬಾಡಿಗೆಗೆ ಇದ್ದ ನಮ್ಮ ಚಿಕ್ಕಪ್ಪನವರ

ಮನೆಗೆ ನಮ್ಮ ಅಜ್ಜನವರು ಹೋದಾಗಲೆಲ್ಲ ಕಂಡು ನಮ್ಮ ಅಜ್ಜನವರು 'ಅವರು ಎಂಥ ನಿಷ್ಠರು !' ಎಂದು ಹೊಗಳುತ್ತಿದ್ದರು. ನವರಾತ್ರೆಯಲ್ಲಿ ನಮ್ಮೂರಿನ ವೈಶ್ಯರ ಗುಡಿಯಲ್ಲಿ ತಿಮ್ಮಪ್ಪದಾಸರು ನಡೆಸುತ್ತಿದ್ದ ಹರಿಕಥೆಗಳಿಗೆ ರಾಯರು ಬರುತ್ತಿದ್ದರು. ಸದಾ ಜಪಮಾಡುತ್ತಲೇ ಇದ್ದರು; ತುಟಿಗಳು ಅಲ್ಲಾಡುತ್ತಲೇ ಇದ್ದವು. ಅವರು ತಿಮ್ಮಪ್ಪದಾಸರಲ್ಲಿ ಕಲೆತು ಆಗಾಗ್ಗೆ ಮಾತನಾಡುತ್ತಿದ್ದಾರೆಂದು ರಾಮಮೇಷ್ಟರು ಹೇಳಿದ್ದರು; ಆದರೂ ಅವರ ವಿಷಯದಲ್ಲಿ ನನಗೆ ಅಂಥ ಹೆಚ್ಚಿನ ಭಾವನೆಯು ಮನಸ್ಸಿನಲ್ಲಿ ಮೂಡಿರಲಿಲ್ಲ. ಅಥವಾ ಒಳಗೆ ಏನಾಗಿತ್ತೋ ಮನಸ್ಸಿನಲ್ಲಿ ಮಾತ್ರ ಕಂಡಿರಲಿಲ್ಲ. ನಾನು ಇವರನ್ನು ಗುರುಗಳಾಗಿ ಮಾಡಿಕೊಳ್ಳಬೇಕೆಂದು ಬಯಸಿದ್ದು 1912ನೇಯ ಮಾರ್ಚಿಯಲ್ಲಿ. ಇದಕ್ಕೆ ಅವರ ಹಿಂದಿನ ಪರಿಚಯದ ನೆನಪು ನೇರವಾಗಿ ಕಾರಣವಲ್ಲ. ನಾನು ಒಂದು ಸಲವೂ ನನ್ನ ಮೇಲೆ ಕಂಡ ಸಾಧನ ಕಾಲದಲ್ಲಿ ನೆನಪು ಮಾಡಿಕೊಂಡಿರಲಿಲ್ಲ. 'ಬ್ರಹ್ಮಶ್ರೀ' ಎಂಬುದೇ ಮುಖ್ಯ ಕಾರಣವಾಯಿತು.''

ನಾನು 'ಬ್ರಹ್ಮಶ್ರೀ' ಯಾದ ಬಗೆಯನ್ನು ಇಲ್ಲಿ ಸ್ವಲ್ಪ ವಿವರಿಸುವದು ಒಳ್ಳೆಯದು. ಮಹಾಭಾಗವತರು ಬರೆದಿದ್ದ 'ಶತಶ್ಲೋಕೀ' ಎಂಬ ಸಂಸ್ಕೃತ ಗ್ರಂಥವು ಅವರ ಭಕ್ತರೊಬ್ಬರ ಕೈಯಿಂದ ನನಗೆ ಸಿಕ್ಕಿತು. 'ಅದಕ್ಕೆ ಒಂದು ಕನ್ನಡದ ಟೀಕೆಯನ್ನು ಬರೆಯಲೆ !' ಎಂದು ನನ್ನ ಮನಸ್ಸಿನಲ್ಲಿ ಮಿಂಚಿತು. ಆದರೆ ಸಾಧಾರಣವಾಗಿ ನನಗೆ ಪುಸ್ತಕ ಬರೆಯುವ ಗೀಳು ಇರಲಿಲ್ಲ. ಬರೆಯುವ ಹವ್ಯಾಸವು ಚಿದಂಬರಯ್ಯನವರದು ; ಓದುವದು, ವಿವರಿಸುವದು ನನ್ನದು- ಹೀಗಿತ್ತು , ಆಗಿನ ಕಾಲ. ನನ್ನ ಮನಸ್ಸಿನ ಕುತೂಹಲವನ್ನು ಚಿದಂಬರಯ್ಯನವರಿಗೆ ತಿಳಿಸಿದೆ. ಸ್ವಭಾವದಿಂದಲೆ ಗ್ರಂಥರಚನೆಯಲ್ಲಿ ಹರಿದಾಡುತ್ತಿದ್ದ ಅವರಿಗೆ ಅದನ್ನು ಕನ್ನಡಿಸಬೇಕೆಂಬ ತವಕವುಂಟಾಯಿತು ; ಅವರು ಅದನ್ನು ಷಟ್ಪದಿಯಾಗಿ ರಚಿಸಿದರು. ನನ್ನನ್ನು ಅದಕ್ಕೆ ಟಿಪ್ಪಣಿ ಬರೆಯುವಂತೆ ಪ್ರೇರಿಸಿದರು. ಮೂಲದಲ್ಲಿರುವ ಕೆಲವು ಉದಾಹರಣೆಗಳು, ಭಾಗವತ, ವಿಷ್ಣುಪುರಾಣ - ಮುಂತಾದವುಗಳಿಂದ ಆರಿಸಿಕೊಂಡವು. ಅವುಗಳ ಸ್ಥಾನಾದಿ ವಿಶೇಷಗಳು ತಿಳಿಯದೆ ನಾವು ಅವರಿಗೇ ನೇರಾಗಿ ಕಾಗದವನ್ನು ಬರೆದೆವು ; ಅದಕ್ಕೆ ಉತ್ತರವಾಗಿ ಬರೆದ ಕಾಗದಗಳಲ್ಲಿ ನಮ್ಮಿಬ್ಬರನ್ನೂ ಅವರು ಬ್ರ॥ ಶ್ರೀ॥ ಎಂಬ ವಿಶೇಷಣದಿಂದ ಕರೆದರು. ಆಗ ತಾನೆ ವೇದಾಂತಭಾಷ್ಯಶಾಂತಿಯನ್ನು ಮಾಡಿಸಿಕೊಂಡು ಬಂದಿದ್ದ ನಮಗೆ ಅದು ಸಲ್ಲತಕ್ಕದ್ದು ಎಂದು ಅವರು ಭಾವಿಸಿರಬಹುದು. ಚಿದಂಬರಯ್ಯನವರು ಇದನ್ನು ಗಟ್ಟಿಯಾಗಿ ಹಿಡಿದು ತಮ್ಮ ಪುಸ್ತಕವನ್ನು ಅಚ್ಚುಹಾಕಿಸುವಾಗ ನಾನು ಬೇಡವೆಂದರೂ

ಕೇಳದೆ ಬ್ರಹ್ಮಶ್ರೀ ಸುಬ್ಬರಾಯರು ಎಂದು ಪ್ರಕಟಿಸಿಬಿಟ್ಟರು. ಅದು ಪ್ರಕಟವಾಗಿ ವರ್ಷದ ಮೇಲಾಗಿತ್ತಾದರೂ ಅದರ ಪರಿಣಾಮವು ನಂಜಪ್ಪನವರ ಮನಸ್ಸಿನ ಮೇಲೆ ಹೇಗೆ ಆಯಿತೆಂಬುದು ವಾಚಕರಿಗೆ ಆಗಲೇ ತಿಳಿದಿವೆ.

## ಕುರ್ತಕೋಟಿಗೆ ಪ್ರಯಾಣ :

ನಂಜಪ್ಪನವರು ಬಂದ ವಿಷಯವನ್ನು ತಿಳಿದಾಗ ನಾನು ದೇವರ ಕೋಣೆಯಲ್ಲಿ ಎಂದಿನಂತೆ ಆಹ್ನಿಕದಲ್ಲಿ ವ್ಯಾಪೃತನಾಗಿದ್ದೆನು. ನಾನು ಹೊರಕ್ಕೆ ಬಂದ ಮೇಲೆ ಅವರು ಗೀತೆಯ ಉಪದೇಶವನ್ನು ಕೊಡಬೇಕೆಂದು ಕೇಳಿಕೊಂಡರು. ಉಪದೇಶದ ಮಹಿಮೆಯು ದೊಡ್ಡದು. ನಮ್ಮಂಥವರಲ್ಲ, ಉಪದೇಶ ಕೊಡತಕ್ಕವರು. ಅದಕ್ಕೆ ಒಂದು ಹೆಚ್ಚಿನ ಅಧಿಕಾರ ಸ್ಥಾನ ಅವಶ್ಯ, ಅಂಥವರು 'ನೀವು ಇನ್ನುಮುಂದೆ ಇದನ್ನು ಓದಿಕೊಳ್ಳಿ' ಎಂದರೂ ಸಾಕು, ಅದೇ ಕಾರ್ಯಕಾರಿಯಾದ ಉಪದೇಶವಾಗುವದು ಎಂದು ತಿಳಿಸಿದೆನು. ನಾನು ಉಪದೇಶವನ್ನು ಕೊಡಲಾಗದೆ ಹೀಗೆ ತಪ್ಪಿಸಿಕೊಳ್ಳು-ತ್ತಿದ್ದಾನೆಂಬ ಭಾವನೆ ಅವರಿಗೆ ಬರಬಾರದು ಎಂದು "ಕುರ್ತಕೋಟಿಯಲ್ಲಿ ಮಹಾಭಾಗವತರೆಂಬ ದೊಡ್ಡ ಸಾಧುಗಳೊಬ್ಬರು ಇದ್ದಾರೆ. ಅವರಿಂದ ಉಪದೇಶ ಕೊಡಿಸುತ್ತೇನೆ, ನೀವು ಯೋಚಿಸಬೇಕಾದದ್ದಿಲ್ಲ" ಎಂದು ಸಮಾಧಾನ ಹೇಳಿದೆನು. ನನಗೂ ನಂಜಪ್ಪನವರಿಗೂ ಆ ದಿನ ಆದ ಸಂಭಾಷಣೆಯಲ್ಲಿ ಭಕ್ತಿಯ ವಿಚಾರವು , ಸಾಧುಸಂತರ ವಿಷಯಗಳು ಪ್ರಧಾನವಾಗಿದ್ದವು. ನಂಜಪ್ಪನವರಿಗೆ ಈ ಬಗೆಯ ವಿಷಯಗಳು ಹೊಸದಾಗಿದ್ದಂತೆ ತೋರುತ್ತದೆ. ಅವರು ನಮ್ಮಿಬ್ಬರ ಸೇವೆಯನ್ನು ಹೀಗೆ ವಿವರಿಸಿದಾರೆ. "ಆ ದಿನ ಶ್ರೀರಾಮನವಮಿ. ಮನೆಯಲ್ಲಿಯೇ ಇದ್ದರು. ರಾತ್ರೆ ಬಹಳ ಹೊತ್ತಾಗುವ ತನಕ ಪರಮಾರ್ಥವಿಷಯಗಳನ್ನೂ ಸಾಧುಸಂತರ ವಿಷಯಗಳನ್ನೂ ಸೂರೆಮಾಡಿದರು. ಎಷ್ಟೋ ವರ್ಷಗಳಿಂದ ಪರಿಚಯವಿದ್ದಂತೆ ನನ್ನನ್ನೂ ತಮ್ಮವನನ್ನಾಗಿ ಮಾಡಿಕೊಂಡ ಅವರ ಕೃಪೆಯನ್ನು ಎಷ್ಟು ಹೇಳಿದರೂ ತೀರದು. ಅವರ ಮನೆಯು ನನಗೆ ಋಷ್ಯಾಶ್ರಮದಂತೆ ತೋರಿತು. ಪ್ರಾಣಾಯಾಮ, ಸಂಧ್ಯಾ, ಜಪ, ಪಾರಾಯಣ, ಪೂಜೆ, ಸಾಯಂಕಾಲಭಜನೆ, ಸದಾ ಪರಮಾರ್ಥವಿಚಾರ, ಶ್ರೀ ಮಹಾಭಾಗವತರ, ಗೋಂದಾವಳಿ ಮಹಾರಾಜರವರ ಪುಣ್ಯಚರಿತ್ರೆಗಳ ಕಥನ - ಇವುಗಳನ್ನು ಕಂಡು ನನ್ನ ಸ್ಥಿತಿಯೇ ನನಗೆ ತಿಳಿಯದಂತೆ ಬದಲಾವಣೆಯಾಯಿತು."

## ಹುಬ್ಬಳ್ಳಿಯ ಶ್ರೀಶಂಕರ ಜಯಂತಿಯ ಉತ್ಸವ :

ಆ ವರ್ಷ ಏಪ್ರಿಲ್‌ನಲ್ಲಿ ಸ್ಕೂಲಿಗೆ ರಜಬಂದೊಡನೆ ನಂಜಪ್ಪನವರು ದಾವಣಗೆರೆಗೆ ಬಂದರು. ಎರಡು ಮೂರು ದಿನಗಳಾದಮೇಲೆ ನಾವಿಬ್ಬರೂ

ಕುರ್ತಕೋಟಿಗೆ ಪ್ರಯಾಣಮಾಡಿದೆವು. ಶ್ರೀಮಹಾಭಾಗವತರು ಅವರಿಗೆ ಭಗವದ್ಗೀತೋಪದೇಶವನ್ನೂ ರಾಮಮಂತ್ರೋಪದೇಶವನ್ನೂ ಅನುಗ್ರಹಿಸಿದರು. ಬೇಸಗೆಯ ರಜದಲ್ಲಿ ಒಂದು ತಿಂಗಳಿನಷ್ಟು ಕಾಲ ಕುರ್ತಕೋಟಿಯಲ್ಲಿ ಕಳೆಯಿತು. ಅಷ್ಟುಹೊತ್ತಿಗೆ ಚಿದಂಬರಯ್ಯನವರೂ ಕುರ್ತಕೋಟಿಗೆ ಬಂದು ಮಹಾಭಾಗವತರ ಸೇವೆಯಲ್ಲಿದ್ದರು. ಅವರ ಪ್ರೇರಣೆಯಿಂದ 'ಪರಮಾರ್ಥ' ಎಂಬ ವಾರಪತ್ರಿಕೆಗೆ ಸಂಪಾದಕರಾಗಿದ್ದರು. ಆ ಕಾಲಕ್ಕೆ ಇನ್ನು ಕೆಲವರು ಬಂದು ಶ್ರೀ ಮಹಾಭಾಗವತರ ಉಪದೇಶಾಮೃತವನ್ನು ಪಾನಮಾಡಿ ಅವರ ಸಾನ್ನಿಧ್ಯಸುಖವನ್ನು ಅನುಭವಿಸುತ್ತಿದ್ದರು. ಈ ಕಾಲದಲ್ಲಿಯೋ ಅಥವಾ ಮುಂದಿನ ವರ್ಷವೋ ಚೆನ್ನಾಗಿ ನೆನಪಿಲ್ಲ, ಉಪ್ಪಿನಬೆಟಗೇರಿಕೃಷ್ಣಶಾಸ್ತ್ರಿಗಳವರು ಒಂದು ಚಿಕ್ಕಗುಡಿಯಲ್ಲಿ ಬೆಳಗ್ಗೆ ಮುಂಚಿತವಾಗಿ ಸ್ನಾನಮಾಡಿ ದೇವರಪೂಜೆ ಮಾಡುತ್ತಿದ್ದದ್ದನ್ನು ನೋಡುವ ಸೌಭಾಗ್ಯವು ನನಗೆ ದೊರೆಯಿತು. ಅವರು ದೇವರಿಗೆ ಆದರದಿಂದ ಮಾಡುತ್ತಿದ್ದ ಪೂಜೆ, ಪುನಃಪೂಜೆಯಲ್ಲಿ ಛತ್ರಚಾಮರಾದಿಗಳ ಸೇವೆ - ಇವುಗಳೆಲ್ಲ ಅನುಕರಣೀಯವಾಗಿದ್ದವು. ಈ ನಡುವೆ ನಾವು ಹುಬ್ಬಳ್ಳಿಯಲ್ಲಿ ನಡೆದ ಶ್ರೀಶಂಕರಜಯಂತಿಯ ಉತ್ಸವಕ್ಕೆ ಹೋಗಿ ಬಂದೆವು. ಅಲ್ಲಿ ಬ್ರ॥ ಶ್ರೀಗಳಾದ ವಿರೂಪಾಕ್ಷಶಾಸ್ತ್ರಿಗಳವರ, ಕೃಷ್ಣಶಾಸ್ತ್ರಿಗಳವರ ಮತ್ತು ಮಹಾಭಾಗವತರ ಉಪನ್ಯಾಸಗಳು ನಡೆದವು. ಹಿಂದೆ ಚಿದಂಬರಯ್ಯನವರೊಡನೆ ಪ್ರೇಕ್ಷಕನಾಗಿ ಬಂದ ಕಾಲಕ್ಕಿಂತ ಈಗ ನನಗೆ ಉತ್ಸವದಲ್ಲಿ ಹೆಚ್ಚುಭಾಗವು ಸಿಕ್ಕಿತ್ತು. ಅಲ್ಲಿ ಬೇರೆಬೇರೆಯ ಪರೀಕ್ಷೆಗಳನ್ನು ಏರ್ಪಡಿಸಿ ಬಹುಮಾನವನ್ನು ಕೊಟ್ಟರು. ಮಹಾಭಾಗವತರ ಅಪ್ಪಣೆಯಂತೆ ನಾನು ಸೂತ್ರಭಾಷ್ಯದ ಚತುಃಸೂತ್ರಿಯ ಭಾಷ್ಯದ ಪರೀಕ್ಷೆಗೆ ಕೂತೆ ; ಕೃಷ್ಣಶಾಸ್ತ್ರಿಗಳವರು ಮುಂತಾದವರು ಮಾಡಿದ ಪರೀಕ್ಷೆಯಲ್ಲಿ ಉತ್ತೀರ್ಣನಾದೆನೆಂದು ಹತ್ತುರೂಪಾಯಿ ಬಹುಮಾನವನ್ನು ಕೊಟ್ಟರು. ಅದನ್ನು ಮುಂದಿನ ವರ್ಷದ ಪರೀಕ್ಷೆಗೆ ವಿನಿಯೋಗಿಸಬಹುದೆಂದು ನಾನು ಹಿಂತಿರುಗಿ ಕೊಟ್ಟುಬಿಟ್ಟೆ.

## ಇಂಗ್ಲೀಷಿನಲ್ಲಿ ಗ್ರಂಥರಚನೆಗೆ ಪ್ರೇರಣೆ:

ಮಹಾಭಾಗವತರು ಶಂಕರಜಯಂತಿಯ ಉತ್ಸವದಲ್ಲಿ ಮಾಡಿದ ಉಪನ್ಯಾಸಗಳ ಟಿಪ್ಪಣಿಯನ್ನು ಚಿದಂಬರಯ್ಯನವರು ತೆಗೆದುಕೊಂಡಿದ್ದದ್ದನ್ನು ಮೂಲವಾಗಿಟ್ಟುಕೊಂಡು ಅವುಗಳ ಅಭಿಪ್ರಾಯವನ್ನು ಇಂಗ್ಲೀಷಿನಲ್ಲಿ ಬರೆಯಬೇಕೆಂದು ಮಹಾಭಾಗವತರು ನನ್ನನ್ನು ಪ್ರೇರಿಸಿದರು. ನನಗೆ ಇಂಗ್ಲೀಷು ಬರೆಯುವದಕ್ಕೆ ಬರಲಾರದೆಂದು ನಾನು ಹಿಂಜರಿಯುತ್ತಿದ್ದರೂ ಅವರು ಮತ್ತೆ ಮತ್ತೆ 'ನೀವು ಬರೆಯಬೇಕು' ಅಂದದ್ದರ ಮೇಲೆ **Highest goal of human life**

(ಜನರ ಪುರುಷಾರ್ಥ) - ಮತ್ತು **Spiritual knowledge - and how to attain it** (ಅಧ್ಯಾತ್ಮ ಜ್ಞಾನವೂ - ಅದನ್ನು ಪಡೆಯುವ ವಿಧಾನವೂ) ಎಂಬ ಎರಡು ಚಿಕ್ಕಗ್ರಂಥಗಳನ್ನು ಬರೆದೆನು. ಈ ಗ್ರಂಥ ನೋಡಿ ಕೈ ಬರಹದ ರೂಪದಲ್ಲಿ ಬರೆದ, ಧಾರವಾಡದಲ್ಲಿ ಓದಿದ ಹೈಸ್ಕೂಲ್‌ಮಾಸ್ತರೊಬ್ಬರು 'ಇದನ್ನು ಬರೆದವರು ನಿಶ್ಚಯವಾಗಿ ಗ್ರಾಜುಏಟ್ ಇರಬೇಕು, ತುಂಬ ಚೆನ್ನಾಗಿದೆ' ಎಂದು ಶ್ಲಾಘಿಸಿರುವ-ದನ್ನು ತಿಳಿದು ನನಗೆ ಸ್ವಲ್ಪ ಧೈರ್ಯ ಬಂತು. **Highest goal of human life** ಎಂಬ ಗ್ರಂಥವನ್ನು ಅಚ್ಚುಮಾಡಿಸುವ ಮುನ್ನ ನಾನು ಚಿಕ್ಕಬಳ್ಳಾಪುರದಲ್ಲಿ ಹೆಡ್‌ಮಾಸ್ತರಾಗಿದ್ದ ಕೆ.ಎ. ಕೃಷ್ಣಸ್ವಾಮಿಅಯ್ಯರವರಲ್ಲಿ ತಿದ್ದಿಸಿಕೊಂಡು ಬರಲು ಅಲ್ಲಿಗೆ ಹೋದೆ. (ಕೃಷ್ಣಸ್ವಾಮಿಅಯ್ಯರು ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ವರ್ಗವಾಗಿ 1906 ರಿಂದ 1912ರ ವರೆಗೆ ಅಲ್ಲಿಯ ಹೆಡ್‌ಮಾಸ್ತರಾಗಿದ್ದರು. ತಮ್ಮ ಸ್ಕೂಲಿನ ಕೆಲಸದಿಂದಲೇ ಅಲ್ಲದೆ ವೇದಾಂತಾಭಿರುಚಿಯಿಂದಲೂ ಅಲ್ಲಿ ಜನರ ಗೌರವವನ್ನು ಸಂಪಾದಿಸಿಕೊಂಡಿದ್ದರು). ಅಯ್ಯರವರು ಅದನ್ನು ಸಾವಧಾನವಾಗಿ ಓದಿ ಸ್ಕೂಲ್ ವಿದ್ಯಾರ್ಥಿಗಳ ಅಭ್ಯಾಸ ಪುಸ್ತಕವನ್ನು ತಿದ್ದುವಂತೆ ಅಲ್ಲಲ್ಲಿ ಭಾಷೆಯನ್ನು ಮಾರ್ಪಡಿಸುವ ಸೂಚನೆ ಮಾಡಿದ್ದಲ್ಲದೆ ವಿಚಾರಗಳ ವಿಚಾರದಲ್ಲಿಯೂ ಕೆಲವು ಸೂಚನೆಗಳನ್ನು ಕೊಟ್ಟರು. ಭಾಗವತರ ಮತ್ತು ಗೋಂದಾವಳಿ ಮಹಾರಾಜರ ಪ್ರಭಾವಕ್ಕೆ ಸಿಕ್ಕಿಬಿದ್ದಿದ್ದ ನಾನೂ ಅಯ್ಯರವರಿಗೆ ಪರಮಾರ್ಥದ ಆಳವು ಅಷ್ಟು ಬಲವಾಗಿರಲಾರದೆಂಬ ತಪ್ಪು ಭಾವನೆ ಮಾಡಿಕೊಂಡೆ. ಆದರೂ ಅವರು ಪ್ರೇಮದಿಂದ ಅಲ್ಲಿಯ ರಾಮಮಂದಿರದಲ್ಲಿ ನನ್ನಿಂದ ಒಂದು ಉಪನ್ಯಾಸ ಮಾಡಿಸಿದರು. ಭಕ್ತಿಮಾರ್ಗದಲ್ಲಿ ಆಗತಾನೇ ಪ್ರವೇಶವನ್ನು ಪಡೆದಿದ್ದ ನಾನು ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಬೇರೆಬೇರೆಯ ದೃಷ್ಟಿಕೋನ ಗಳಿಂದ ಒಂದೇ ವಿಷಯವನ್ನು ಹೇಳಿರುತ್ತಾರೆಂದೂ, ಭಕ್ತಿಯೇ ಪರಮಾರ್ಥಕ್ಕೆ ಮುಖ್ಯವಾದ ದ್ವಾರವೆಂದೂ ಪ್ರತಿಪಾದಿಸಿದೆನು. ಅಯ್ಯರವರು ನಾನು ಹೇಳಿದ್ದರಲ್ಲಿ ಗುಣವನ್ನು ಗ್ರಹಿಸಿ ಶ್ಲಾಘಿಸಿದರು. ನನ್ನನ್ನೂ ಚಿದಂಬರಯ್ಯನವರನ್ನೂ ಮನೆಗೆ ಊಟಕ್ಕೆ ಕರೆದಿದ್ದರು. ಅಲ್ಲಿ ನನ್ನಲ್ಲಿದ್ದ ಸೌಹಾರ್ದದಿಂದ ಭಕ್ತಿಮಾರ್ಗವು ಉತ್ತಮವೆಂಬುದು ನಿಜವಾದರೂ ರಾಮಾನುಜಶಂಕರಾಚಾರ್ಯರುಗಳ ಸಿದ್ಧಾಂತವೂ ಒಂದೇ ಎನ್ನುವದು ನಿಜಕ್ಕೆ ಹೊಂದಿಕೊಂಡಿಲ್ಲವಾದ್ದರಿಂದ ಬಹಿರಂಗವಾಗಿ ಅವರಿಬ್ಬರ ಪರಮಾಭಿಪ್ರಾಯವು ಒಂದೇ ಎಂದು ಹೇಳಿದ್ದು ಅಷ್ಟು ಯುಕ್ತಿಯುಕ್ತವಾಗಿ ಕಾಣುವದಿಲ್ಲ, ಇದನ್ನು ಆಲೋಚನೆ ಮಾಡಿರಿ, **ಯಾವ ಕಾರಣದಿಂದಲೂ ಶಂಕರರಿಗೆ ದ್ರೋಹವನ್ನು ಎಸಗಬಾರದು** - ಎಂದು ಮೃದುವಾದ ರೀತಿಯಲ್ಲಿ ನನಗೆ ತಿಳಿವಳಿಕೆ ಹೇಳಿದರು. ನನಗೆ ರಾಮಾನುಜ

ಸಿದ್ಧಾಂತವು ಅಷ್ಟೇನೂ ಚೆನ್ನಾಗಿ ತಿಳಿದಿರಲಿಲ್ಲವಾದ್ದರಿಂದ ಅವರ ಅಭಿಪ್ರಾಯವನ್ನು ತೂಕಮಾಡಿ ಬೆಲೆ ಕಟ್ಟಲಾರದೆ ಹೋದೆ. ಹೇಗೇ ಆಗಲಿ, ಆ ಸಮಯಕ್ಕೆ ನಾನು ಪ್ರಾಣಾಯಾಮ, ಮಾನಸಪೂಜೆ, ನಾಮಜಪ - ಇವುಗಳಿಗೆ ಹೆಚ್ಚಿನ ಮಹತ್ತ್ವವನ್ನು ಕೊಟ್ಟಿದ್ದೆನೆಂಬುದು ನಿಶ್ಚಯ. ಭಕ್ತಿಯು ಜ್ಞಾನಕ್ಕಿಂತ ಹೆಚ್ಚಿನದೆಂದೂ ಈ ವಿಷಯಕ್ಕೆ ಶ್ರೀರಾಮಕೃಷ್ಣಪರಮಹಂಸರೇ ಮುಂತಾದವರ ಉಪದೇಶದಬೆಂಬಲವಿದೆ ಯೆಂದೂ ನನ್ನ ಅಭಿಪ್ರಾಯವನ್ನು ಅವರ ಮುಂದೆ ಇಟ್ಟೆನು. ಅವರು ಹೆಚ್ಚಿಗೆ ಏನೂ ಹೇಳದೆ ಸುಮ್ಮನಾದರು. ಈ ಘಟನೆಗಳು ನಡೆದಾಗ ನಾನು ದಾವಣಗೆರೆಯಲ್ಲಿಯೇ ಇದ್ದಿರಬಹುದೆಂದು ತೋರುತ್ತದೆ. ಇಂಗ್ಲೀಷ್ ಪುಸ್ತಕಗಳು ಪ್ರಕಟವಾದ ಕಾಲವು ನಿಶ್ಚಿತವಾಗಿ ನನಗೆ ಗೊತ್ತಿಲ್ಲವಾದ್ದರಿಂದಲೂ ಆ ಪುಸ್ತಕಗಳು ನನ್ನಲಿಲ್ಲವಾದ್ದರಿಂದ ಧೈರ್ಯದಿಂದ ನಿಶ್ಚಯಿಸಿ ಯಾವದನ್ನೂ ಹೇಳಲಾರೆ.

## ಭಾಗವತರ ಸಂಪರ್ಕದ ಜೋರು :

ಈಗ ನಾನು ಭಾಗವತರು ಎಲ್ಲಿದ್ದರೆ ಅಲ್ಲಿಗೆ ಹೋಗಿ ಬರುವ ಪದ್ಧತಿಯನ್ನು ಇಟ್ಟುಕೊಂಡಿದ್ದೆನು. ಶನಿವಾರದ ದಿನ ಹೊರಟು ಭಾನುವಾರವೆಲ್ಲ ಅವರಿರುವಲ್ಲಿ ಕಾಲವನ್ನು ಕಳೆದು ಸೋಮವಾರ ಹಿಂದಕ್ಕೆ ಬರುವದು, ಅಥವಾ ಸೋಮವಾರ ಒಂದು ದಿನ ಕ್ಯಾಜುಯಲ್ ರಜಪಡೆಯುವದು - ಇದು ನೀರುಕುಡಿದಂತೆ ಆಗಿದ್ದ ಪದ್ಧತಿ. ರೈಲುಚಾರ್ಜಿಗೆ ಎಷ್ಟು ದುಡ್ಡು ವ್ಯಯವಾಗುವದೋ, ಈ ಮನೆಯ ಸಂಸಾರದ ವ್ಯವಸ್ಥೆ ಕೆಟ್ಟಿತೋ ಹೇಗೆ? ಮುಂತಾದ ಯೋಚನೆಗಳು ನನ್ನ ಮನಸ್ಸಿನಲ್ಲಿರುತ್ತಲೇ ಇರಲಿಲ್ಲ. ಪರಮಾರ್ಥಕ್ಕೆ ಒಂದೆರಡು ಲೇಖನಗಳನ್ನು ಈ ಕಾಲದಲ್ಲಿ ಬರೆದೆ. ಶ್ರೀರಂಗಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ ವಿವೇಕೋದಯಕ್ಕೆ ಹೊಳಲುಕೆರೆಯಲ್ಲಿದ್ದಾಗಲೇ ನಾರದ ಭಕ್ತಿಸೂತ್ರದ ಒಂದು ಸಣ್ಣವೃತ್ತಿಯನ್ನು ಬರೆದು ಪ್ರಕಟನೆಗೆ ಕಳುಹಿಸಿದ್ದೆನು ; ಈಗಲೂ ಒಂದೆರಡು ಲೇಖನಗಳನ್ನು ಆ ಪತ್ರಿಕೆಗೆ ಬರೆದಿರಬಹುದು. ಮುಖ್ಯವಾಗಿ ಅನುಷ್ಠಾನಮಾಡುವದು ಮಹಾಭಾಗವತರ ದರ್ಶನಲಾಭದಿಂದ ಸಿಕ್ಕಿದ ಜ್ಞಾನಗಂಗೆಯನ್ನು ಬುದ್ಧಿಯ ಕಾವಡಿಯಲ್ಲಿ ತುಂಬಿಕೊಂಡು ಬರುವದು - ಇದು ನನಗೆ ಸಾಧಾರಣವಾದ ಪದ್ಧತಿಯಾಗಿ ಬಿಟ್ಟಿತ್ತು. ಭಾಗವತರು ಕೆಲವು ಕಾಲ ಧಾರವಾಡದ ಪಾಠಶಾಲೆಯ ಕಾರ್ಯದರ್ಶಿಗಳಾಗಿದ್ದರು. ಆ ಸಮಯದಲ್ಲಿ ಅವರು ಭಗವದ್ಗೀತೆಯ ವಿಷಯಕ್ಕೆ ಕೊಟ್ಟ ಉಪನ್ಯಾಸಗಳು ಬಹಳವಾಗಿ ಜನಾನುರಾಗಕ್ಕೆ ಪ್ರಿಯವಾಗಿದ್ದವು. ಅದನ್ನು ಭಗವದ್ಗೀತಾಸಾರ ವಿಚಾರ ಎಂಬ ಹೆಸರಿನಿಂದ ಚಿದಂಬರಯ್ಯನವರು ಈಚೆಗೆ ತಮ್ಮ ಮನಮೋಹಕ ಶೈಲಿಯಲ್ಲಿ ಬರೆದು ಪ್ರಕಟಿಸಿದ್ದರು. (ಈ ಗ್ರಂಥದ ನಾಲ್ಕನೆಯ

ಮುದ್ರಣವು (2002) ಕಾರ್ಯಾಲಯದಲ್ಲಿ ಲಭ್ಯವಿದೆ.) ಧಾರವಾಡದಲ್ಲಿ ಸಂಸ್ಕೃತ ಪಾಠಶಾಲೆಯಲ್ಲಿ 'ಚಿಂತಾಮಣಿ ಸಹಸ್ರಬುದ್ಧೆ (ಧೋಂಡೋಪಂತರು) ಎಂಬುವರ ಮೂಲಕ ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಿಸುವ ವರ್ಗಗಳನ್ನು ಆರಂಭಿಸಿ ಪಾಠಶಾಲೆಗೆ ಒಂದು ಕಳೆಯನ್ನು ತಂದು ಕೊಟ್ಟಿದ್ದರು. ಅವರಿಂದ 'ಪುರುಷಾರ್ಥ' ಎಂಬ ಒಂದು ಸಂಸ್ಕೃತ ಮಾಸಪತ್ರಿಕೆಯನ್ನು ಹೊರಡಿಸಿದ್ದರು. ತಾವೂ ಯೋಗವಾಸಿಷ್ಠದ ಭಾಗಗಳನ್ನು ನಿರೂಪಣಮಾಡುವದೇ ಮುಂತಾದ ಚಟುವಟಿಕೆಗಳಿಂದ ಜನರ ಮನಸ್ಸನ್ನು ಆಕರ್ಷಿಸಿದ್ದರು. ಈ ಎಲ್ಲಾ ಕಾರಣಗಳಿಂದ ಆದಷ್ಟೂ ಅಲ್ಪವ್ಯವಧಾನದಲ್ಲಿ ಮತ್ತೆಮತ್ತೆ ಮಹಾಭಾಗವತರ ದರ್ಶನವನ್ನು ಪಡೆಯದೇ ಇದ್ದರೆ ನನಗೆ ಮನಸ್ಸಿನಲ್ಲಿ ಬಹಳ ತಳಮಳವಾಗುತ್ತಿತ್ತು. ಇನ್ನೊಂದುಮಾತು. ನನಗೆ ಭಾಗವತರ ದರ್ಶನದ ಬಳಿಕವೇ ಕಠೋಪನಿಷತ್ತನ್ನು ಓದುವಲ್ಲಿ ಅಲ್ಲಲ್ಲಿದ್ದ 'ಆಚಾರ್ಯ' ಎಂಬ ಶಬ್ದದ ಕಡೆಗೆ ಚಿತ್ತದ ಲಕ್ಷವು ಹೊರಳಿತು. ಅವರಿಂದ ಉಂಟಾದ ಚಿಂತನೆಯ ಉಪದೇಶವಾದ ಬಳಿಕವೇ ಮಾಂಡೂಕ್ಯದಲ್ಲಿರುವ ಆತ್ಮನ ಪಾದಗಳನ್ನು ಒಂದೊಂದಾಗಿ ಮುಂದುಮುಂದಿನ ಪಾದಗಳಲ್ಲಿ ಲಯಮಾಡಬೇಕೆಂಬ ಉಪದೇಶದ ಕಡೆಗೆ ಮನಸ್ಸಿನ ಅವಧಾನವಾಯಿತು. ಹೀಗೆ ಒಂದು ದೃಷ್ಟಿಯಿಂದ ನನಗೆ ಅಧ್ಯಾತ್ಮಗ್ರಂಥಗಳ ಅರ್ಥವು ಹೊಸರೀತಿಯಿಂದ ಹೊಳೆಯುವದಕ್ಕೆ ಅವರ ಸಂಸರ್ಗವೇ ಕಾರಣವಾಯಿತು ಎನ್ನಬಹುದು. ಆದರೆ ಈ ಸೌಭಾಗ್ಯದ ಸವಿಗನಸುಗಳು ನನಗೆ ಸ್ವಲ್ಪಕಾಲದಲ್ಲಿಯೇ ಕೊನೆಗಾಣುವ ದಿವಸಗಳು ನನ್ನ ಅರಿವಿಲ್ಲದೆಯೇ ಬಂದವು. ನನಗೆ ದಾವಣಗೆರೆಯಿಂದ ತಟ್ಟನೆ ವರ್ಗವಾಗಿಬಿಟ್ಟಿತು. ಮತ್ತೊಂದು ದೃಷ್ಟಿಯಿಂದ ನೋಡಿದರೆ ನಾನು ಮತ್ತೆಮತ್ತೆ ಭಾಗವತರ ಸಂಬಂಧದಿಂದಲೇ ಇರುವುದಕ್ಕೆ ಅನುಕೂಲಿಸುವಂತೆ ಮುಂದೆ ಆಗಬೇಕೆಂಬ ಕಾರಣದಿಂದಲೇ ಈಶ್ವರನು ಸದ್ಯಕ್ಕೆ ನನಗೆ ದಾವಣಗೆರೆಯ ವಾಸವನ್ನು ತಪ್ಪಿಸಿದನೆಂದು ಕಾಣಿಸುತ್ತದೆ. ಇದರ ವಿವರವನ್ನು ಇನ್ನು ವಾಚಕರಿಗೆ ತಿಳಿಸುವದು ಕ್ರಮಪ್ರಾಪ್ತವಾಗುತ್ತದೆ.

## ಮೂಡಗೆರೆಗೆ ಹೋಗಿ ಬಂದದ್ದು:

ಗೋಂದಾವಳಿಯಿಂದ ಬಂದ ಮೇಲೆ ನನಗೆ ಒಂದು ಬಗೆಯ ಭಕ್ತಿಯ ಆವೇಶವು ಬಂದಿತ್ತೆನ್ನಬಹುದು. ಅನಿವಾರ್ಯವಾಗಿ ಸ್ಕೂಲಿಗೆ ಹೋಗಿ ಸರಕಾರಿಯ ಕೆಲಸವನ್ನು ಮಾಡಿಕೊಂಡು ಬಂದಮೇಲೆ ಆದಷ್ಟು ಕಾಲವೂ ಅಧ್ಯಾತ್ಮಗ್ರಂಥ ಕಾಲಕ್ಷೇಪ ಮಾಡುವದು ಅಥವಾ ನಾಮಜಪ ಮಾಡುವದು - ಇವುಗಳಲ್ಲಿ ತೊಡಗಿದ್ದೆನು. ಅಂದಿನಿಂದ ಮೊನ್ನೆಮೊನ್ನೆಯವರೆಗೂ ನಾನು ಪ್ರಯಾಣ

ಮಾಡುವಾಗ ಗಾಡಿಯ ಸಂಚಾರದ ಸದ್ದಾಗಲಿ ರೈಲಿನ ಸಂಚಾರದ ಸದ್ದಾಗಲಿ ಕೇಳಿದಾಗಲೆಲ್ಲ ಅದಕ್ಕೆ ಹೊಂದಿಕೊಂಡೇ ಎಡಬಿಡದೇ ಜಪ ಮಾಡುವ ಅಭ್ಯಾಸವನ್ನು ಮಾಡಿಕೊಂಡೇ ಬಂದಿದ್ದೇನೆ. ಏನಾದರೂ ಉಪನ್ಯಾಸವನ್ನು ಹೇಳಬೇಕಾಗಿ ಬಂದಾಗ, ಯಾವದಾದರೊಂದು ಮಹಾಕಾರ್ಯವನ್ನು ಮಾಡಬೇಕೆಂದಿರುವಾಗ, ಯಾವದಾದರೊಂದು ವಿಷಯಕ್ಕೆ ನನ್ನ ಮನುಷ್ಯ ಯೋಚನೆಯು ಯಾವ ಕೆಲಸಕ್ಕೂ ಬರುವಂತಿಲ್ಲವೆಂದು ತೋರಿದಾಗ-ಇಂಥ ಸಂದರ್ಭಗಳಲ್ಲೆಲ್ಲ ರಾಮನಾಮಜಪವನ್ನು ಮಾಡುವದು ಪದ್ಧತಿಯಾಗಿದೆ. ಶುದ್ಧವಾದ ಮಡಿಯಲ್ಲಿರುವಾಗ ಶಿವಪಂಚಾಕ್ಷರಿ-ಯನ್ನು ಜಪಿಸುತ್ತಾ ಬಂದಿದ್ದೇನೆ ; ರಾಮನಾಮವನ್ನು ಮೈಲಿಗೆಯಲ್ಲಿಯೂ ಜಪಿಸಬಹುದೆಂಬ ಅಭಯವನ್ನು ಮಹಾರಾಜರು ಕೊಟ್ಟಿದ್ದದ್ದರಿಂದ ಮಡಿಯನ್ನು ರಕ್ಷಿಸುವದಕ್ಕೆ ಆಗದ ಸಂದರ್ಭದಲ್ಲಿಯೂ ರಾಮನಾಮವನ್ನು ಜಪಿಸಿದ್ದೇನೆ. ಆದರೆ ಗೋಂದಾವಳಿಯಿಂದ ಬಂದ ತರುಣದಲ್ಲಿ ತುಟಿಗಳು ಅಲುಗಾಡುತ್ತಲೇ ಇದ್ದವು ; ರಾಮನಾಮವು ನಡೆದೇ ಇರುತ್ತಿತ್ತು.

ನಮ್ಮ ತಂದೆಯವರ ಪ್ರಥಮಾಬ್ದಿಕಶ್ರಾದ್ಧವನ್ನು ಮಾಡುವದಕ್ಕೆ ಮೂಡಗೆರೆಗೇ ಹೋಗಬೇಕಾಗಿ ಬಂತು. ಆಗ್ಗೆ ಅಣ್ಣ ಶಿವರಾಮಯ್ಯನವರು ಅಲ್ಲಿ ಕೆಲಸ ಮಾಡುತ್ತಿದ್ದರು. ಆದ್ದರಿಂದ ನಾನು ಚಿಕ್ಕಮಗಳೂರಿನ ಮಾರ್ಗವಾಗಿ ಅಲ್ಲಿಗೆ ಹೋದೆ. ಚಿಕ್ಕಮಗಳೂರಿನಲ್ಲಿ ಉಳಿದುಕೊಂಡಾಗ ನನ್ನ ವಿದ್ಯಾಭ್ಯಾಸಕಾಲದ ಊರಿಗಿಂತ ಅದು ಸಂಕುಚಿತವಾಗಿರುವಂತೆ ಭಾಸವಾಯಿತು. ನನ್ನ ಸವಿನೆನಪಿನಲ್ಲಿದ್ದ ಎಷ್ಟೋದೃಶ್ಯಗಳು ಈಗ ಅಷ್ಟು ಚಿತ್ತಾಕರ್ಷಕವಾಗಿ ಕಾಣಲಿಲ್ಲ. ಏನೂ ಅರಿಯದ ಬಾಲ್ಯ ವಯಸ್ಸಿನಲ್ಲಿ ಜಗತ್ತು ಸುಂದರವಾಗಿ ತೋರುವದೆಂಬ ಕಾರಣದಿಂದಲೋ ಏನೋ, ಶ್ರುತಿಯು ಸಾಧಕನು 'ಬಾಲ್ಯೇನ ತಿಷ್ಠಾಸೇತ್' ಬಾಲಕನಂತೆ ಇರುವದನ್ನು ಕಲಿಯಬೇಕು ಎಂದು ಹೇಳುತ್ತಿದೆ. ಅದಂತಿರಲಿ. ಈ ಸಲ ನಾನು ಹೋದಾಗ ಚಿಕ್ಕಮಗಳೂರಿನಲ್ಲಿ ಒಬ್ಬ ಹೈಸ್ಕೂಲು ವಿದ್ಯಾರ್ಥಿಯು ಅಂಕಗಣಿತದ ಕಠಿನವಾದ ಪ್ರಶ್ನೆಯನ್ನು ಬಿಡಿಸುವದಕ್ಕೆ ಪ್ರಯತ್ನಿಸುತ್ತಿದ್ದದ್ದನ್ನು ಕಂಡು ಅದನ್ನು ಬಿಡಿಸುವ ಕ್ರಮವನ್ನು ತೋರಿಸಿಕೊಡಬೇಕೆಂದು ನಾನು ಮುಂದವರಿದದ್ದನ್ನು ಕಂಡು ಅವನು 'ಈ ಲೆಕ್ಕಗಳೆಲ್ಲವನ್ನು ಹಿಂದಕ್ಕೆ ವೈ. ಸುಬ್ಬರಾವ್ ಎಂಬವರೊಬ್ಬರು ಮಾಡಿಬಿಟ್ಟಿದ್ದಾರೆ, ಗೋಖಲೆಗಣಿತಕ್ಕೆ ಅವರ ಪುಸ್ತಕವು ಬೀಗದ ಕೈಯಾಗಿದೆ' ಎಂದು ತನ್ನಲ್ಲಿದ್ದ ಪುಸ್ತಕವನ್ನು ತೋರಿಸಿದನು. ನೋಡುವಲ್ಲಿ ಅದು ನಾನು ಸ್ಕೂಲಿನಲ್ಲಿದ್ದಾಗ ಬರೆದದ್ದಾಗಿತ್ತು! ನನ್ನನ್ನು ಗುರುತಿಸಲಾರದವರೂ ವಿದ್ಯಾರ್ಥಿಯಾಗಿದ್ದ ನನ್ನ ಹೆಸರನ್ನು ಇನ್ನೂ ನೆನಪಿನಲ್ಲಿಟ್ಟುಕೊಂಡುದ್ದದ್ದನ್ನು ಕಂಡು ಆಶ್ಚರ್ಯವಾಯಿತು.

ಮೂಡಗೆರೆಗೆ ನಾನು ಹೋಗಿ ಕರ್ಮವನ್ನು ಮುಗಿಸಿ ಒಂದೆರಡು ದಿನ ಹೆಚ್ಚಾಗಿ ಇದ್ದೆನು. ಆಗ್ಗೆ ಅಣ್ಣನವರ ಮನೆಗೆ ಬಂದವರು ನನ್ನನ್ನು ಯಾವನೋ ವಿಲಕ್ಷಣ ಪುರಷನೆಂಬಂತೆ ಕಂಡು ದೂರಕ್ಕೆ ಸರಿಯುತ್ತಿದ್ದಾಗ ನನಗೆ ಆಶ್ಚರ್ಯವಾಯಿತು. 'ಇವರು ಯಾವದೋ ಉಪಾಸನೆಯನ್ನು ಮಾಡುತ್ತಿರಬೇಕು; ತುಟಿ ಪಿಟುಕಿಸುತ್ತಲೇ ಇರುತ್ತಾರೆ!' ಎಂದು ಮೆಲ್ಲಗೆ ಒಬ್ಬರೊಡನೊಬ್ಬರು ಹೇಳಿಕೊಂಡದ್ದು ಕಿವಿಗೆ ಬಿದ್ದಿತು. 'ಮಹಾರಾಜರ ಅನುಗ್ರಹದಿಂದ ನಾನು ನಿಜವಾಗಿಯೂ ಒಬ್ಬ ಉಪಾಸಕನಾದರೆ ಸಾಕು!' ಎಂಬ ಹಂಬಲು ನನ್ನಲ್ಲಿ ಬಲವಾಯಿತು. ಕೆಲಸವನ್ನು ಮುಗಿಸಿಕೊಂಡು ಮೂಡಗೆರೆಯಿಂದ ಹಿಂತಿರುಗುವಾಗ ಮಂತ್ರಜಪವನ್ನು ಇನ್ನಷ್ಟು ಜೋರಾಗಿ ಮಾಡಿದೆ. **'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್'** ಎಂಬಂತೆ ಯಾವದೋ ನಿಮಿತ್ತದಿಂದ ಮಹಾರಾಜರನ್ನು ಕಂಡ ನನಗೂ ಸನ್ಮಾರ್ಗದತ್ತ ಚಿತ್ತವು ಇಷ್ಟು ಮಟ್ಟಿಗಾದರೂ ತಿರುಗಬೇಕಾದರೆ, ನಿಜವಾಗಿಯೂ ಆ ಮಹನೀಯರನ್ನು ವರ್ಷಗಟ್ಟಲೆ ಸೇವಿಸಿದ ಸಿದ್ಧಭಕ್ತರು ಎಷ್ಟು ಧನ್ಯರೆಂದು ಎಣಿಸಬೇಕು !

# 25. ಕಳೂರುಕಟ್ಟೆ(ಹೊಸನಗರ) ಅನಿಚ್ಛಾಪ್ರಾರಬ್ಧದಿಂದ ಕ್ಷೇತ್ರಯಾತ್ರೆ (1912-14)

## ದಾವಣಗೆರೆಯಲ್ಲಿ ಜನಾನುರಾಗ:

ದಾವಣಗೆರೆಯು ನನಗೆ ಈಗ ಅನೇಕ ಕಾರಣಗಳಿಂದ ಸ್ವರ್ಗವಾಸವೆನ್ನಿಸುವಷ್ಟು ಸುಖಪ್ರದವಾಗಿತ್ತು. ನನಗೆ ಭಾಷ್ಯಶಾಂತಿಯಾದದ್ದು ಆವೂರಲ್ಲಿದ್ದಾಗ, ಹರಿಹರದ ವಾಸವೂ, ವಿರೂಪಾಕ್ಷಶಾಸ್ತ್ರಿಗಳ ಮತ್ತು ಕೃಷ್ಣಶಾಸ್ತ್ರಿಗಳ ದರ್ಶನದ ಲಾಭವಾದದ್ದು ಅಲ್ಲಿದ್ದಾಗ. ಮಹಾಭಾಗವತರ ಮತ್ತು ಮಹಾರಾಜರವರ ಕೃಪಾಕಟಾಕ್ಷವು ನನ್ನ ಮೇಲೆ ಬಿದ್ದದ್ದು ಆವೂರಲ್ಲಿದ್ದಾಗ. ಸಾಧನಾನುಷ್ಠಾನಗಳ ಮತ್ತು ಅಧ್ಯಾತ್ಮಗ್ರಂಥರಚನೆಯ ರುಚಿಯು ನನಗೆ ಹೆಚ್ಚಿದ್ದು ಅಲ್ಲಿದ್ದಾಗ. ಸ್ಕೂಲಿನ ಕೆಲಸವು ಮೇಲುಪಟ್ಟವರಿಗೆ ಬಹಳ ಸಮರ್ಪಕವೆಂದು ಕಂಡು ಬಂದದ್ದು ಅಲ್ಲಿದ್ದಾಗ. ನಾನು ಶ್ರಾವಣ ಕಾರ್ತಿಕ ಸೋಮವಾರಗಳ ನಕ್ತವನ್ನು (ಜಾಗರಣೆ) ಮಾಡಿ ಶಿವಪೂಜೆ ಮಾಡುವದು, ಶಿವಕವಚ, ಶಿವಸಹಸ್ರನಾಮಾದಿಗಳನ್ನು ಪಠಿಸುವದು ಮುಂತಾದ ಕಾರಣಗಳಿಂದ ವೀರಶೈವರಿಗೆ ನನ್ನಲ್ಲಿ ಹೆಚ್ಚಿನ ವಿಶ್ವಾಸವುಂಟಾದದ್ದೂ ಅಲ್ಲಿದ್ದಾಗ. ಸ್ಕೂಲು ಹುಡುಗರಿಗೆ ಪ್ರೈವೇಟು ಟ್ಯೂಷನ್ ಹೇಳುವ ಪದ್ಧತಿಯು ನನಗೆ ಮನೆಯ ಖರ್ಚುವೆಚ್ಚಕ್ಕೆ ಸಾಲದೆ ಇದ್ದ ನಿಮಿತ್ತದಿಂದ, ಇತರರ ಪ್ರೇರಣೆಯಿಂದ ಗಂಟುಬಿದ್ದಿತಾದರೂ ಆವೂರಿನ ಪ್ರೈವೇಟು ಟ್ಯೂಷನ್ ಪದ್ಧತಿಯಲ್ಲಿ ನಾನು ಆಚರಣೆಗೆ ತಂದ ಕೆಲವು ಸುಧಾರಣೆಗಳು ವಿದ್ಯಾರ್ಥಿಗಳ ತಂದೆಗಳಿಗೆ ಬಹಳ ಮೆಚ್ಚಾಗಿ ಜನಾನುರಾಗಕ್ಕೆ ನಾನು ಹೆಚ್ಚಾಗಿ ಪಾತ್ರನಾದದ್ದೂ ಅಲ್ಲಿಯೇ. (ಹುಡುಗರನ್ನು ಮೊದಲು ನನ್ನ ಮೇಲ್ವಿಚಾರಣೆಗೆ ತೆಗೆದುಕೊಳ್ಳುವ ಮುಂಚೆ ಅವರನ್ನು ಪರೀಕ್ಷೆ ಮಾಡುವದು ; ಅವರ ಆಗಿನ ಸ್ಥಿತಿಗಿಂತ ವರ್ಷಾಂತ್ಯದಲ್ಲಿ ಪರೀಕ್ಷೆ ಮಾಡಿ ಎಷ್ಟು ಮಟ್ಟಿನ ಅಭಿವೃದ್ಧಿಯನ್ನು ತೋರಿಸುವನೆಂಬುದನ್ನೇ ಮುಖ್ಯವಾಗಿ ಗಮನದಲ್ಲಿಡಬೇಕೇ ಹೊರತು ಮಿಕ್ಕ ಕೆಲವರು ಉಪಾಧ್ಯಾಯರುಗಳಂತೆ ಹುಡುಗರನ್ನು ಮೇಲಿನ ತರಗತಿಗೆ ಶಿಫಾರಸು ಮಾಡಿಸಿ ಪ್ರಮೋಷನ್ ಮಾಡಿಸುವದೇ ಮುಂತಾದ ರೀತಿಯಿಂದ ಎಂದಿಗೂ ನನ್ನ ಶಿಕ್ಷಣದ ಬೆಲೆಯನ್ನು ಕಟ್ಟಬಾರದೆಂದು ಸ್ಪಷ್ಟವಾಗಿ ಮೊದಲೇ ಹೇಳಿಟ್ಟಿರುವದು, ನನ್ನಲ್ಲಿ ಓದಿದ ಹುಡುಗರು ಪಾಠಾಭ್ಯಾಸದಲ್ಲಿಯೂ ತರಗತಿಯಲ್ಲಿ ತೋರಿಸಿದ ಅಭಿವೃದ್ಧಿಯಲ್ಲಿಯೂ ನಿಯಮದಿಂದ ಎಲ್ಲರಿಗೂ ಮನಃಸಂತೋಷವನ್ನುಂಟುಮಾಡುವರೆಂಬ ಭರವಸೆಯನ್ನು ತಂದೆ ತಾಯಿಗಳಿಗೆ ತಂದು ಕೊಡುವದು - ಈ ಮುಂತಾದ

ಕಾರಣಗಳಿಂದ ನಾನು ತಿಂಗಳಿಗೆ ಕೊಡಬೇಕಾದ ಫೀಜನ್ನು ಎಲ್ಲರಿಗಿಂತಲೂ ಎರಡು ಮೂರರಷ್ಟು ಹೆಚ್ಚಾಗಿ ಕೇಳಿದರೂ ಲೆಕ್ಕಿಸದೆ ಸಂತೋಷದಿಂದ ಅವರು ಕೊಟ್ಟು ನನ್ನಲ್ಲಿಗೇ ತಮ್ಮ ಹುಡುಗರನ್ನು ಕಳುಹಿಸುವದಕ್ಕೆ ತವಕಿಸುತ್ತಿದ್ದರು.)

## ಮಾಗಾನಹಳ್ಳಿ ದೊಡ್ಡಬಸಪ್ಪನವರ ಪರಿಚಯ:

ಇವೆಲ್ಲಕ್ಕಿಂತಲೂ ಮೇಲಾಗಿ ಆವೂರಿನಲ್ಲಿದ್ದ ಸಾಹುಕಾರ ಮಾಗಾನಹಳ್ಳಿ ದೊಡ್ಡಬಸಪ್ಪನೆಂಬವರ ಮೆಚ್ಚುಗೆಗೆ ಪಾತ್ರನಾದದ್ದು ನಾನು ಆವೂರಿನಲ್ಲಿದ್ದಾಗ. ಅವರಿಗೆ ನಾನು ವ್ಯಾಪಾರ ಸಂಬಂಧದ ಕೆಲವು ಕಾಗದ ಪತ್ರಗಳಿಗೆ ಸರಿಯಾದ ಅರ್ಥವನ್ನು ಹೇಳಿದ್ದನ್ನು ಮೆಚ್ಚಿ ನನಗೆ ಅದಕ್ಕಾಗಿ ಸ್ವಲ್ಪ ಹಣವನ್ನು ಕೊಡುವದಕ್ಕೆ ಬಂದರು. ಅದನ್ನು ನಾನು ತೆಗೆದುಕೊಳ್ಳಲಿಲ್ಲವಾದ್ದರಿಂದ ನನಗೆ ಯಾವದಾದ ರೊಂದು ಮುಖದಿಂದ ಏನಾದರೂ ತಮ್ಮಿಂದ ಸೇವೆ ಸಲ್ಲತಕ್ಕದ್ದೆಂದು ಅವರು ಭಾವಿಸಿದರೆಂದು ತೋರುತ್ತದೆ. ಒಂದು ದಿನ ಏಕಾದಶಿಯದಿನ ಒಂದು ಗೊನೆ ರಸಬಾಳೆಹಣ್ಣು ಸ್ವಲ್ಪಹೆಚ್ಚಾಗಿ ದ್ರಾಕ್ಷಿ, ಬಾದಾಮಿ -ಇವುಗಳನ್ನು ಕಳುಹಿಸಿಕೊಟ್ಟರು. ಏಕಾದಶಿಯ ದಿನ ಶುದ್ಧೋಪಾಸವನ್ನೇ ಮಾಡುತ್ತಿದ್ದ ನಾನು ಅದನ್ನು ಉಪಯೋಗಿಸುವದಕ್ಕಿಲ್ಲವಾಯಿತು. ತುಪ್ಪಬಾಳೆಹಣ್ಣುಮಾಡಿಸಿ ನಮ್ಮ ಮನೆಗೂ ಸ್ನೇಹಿತರಾದ ರಾಘವೇಂದ್ರರಾಯರೆಂಬ ಉಪಾಧ್ಯಾಯರ ಮನೆಗೂ ಪ್ರೈವೇಟು ಟ್ಯೂಷನ್‌ಗೆ ಬರುತ್ತಿದ್ದ ಹುಡುಗರಿಗೂ ಮಿಕ್ಕ ಕೆಲವರು ಹುಡುಗರಿಗೂ ಅದನ್ನು ಹಂಚಿಬಿಟ್ಟೆನು. ಇದನ್ನು ತಿಳಿದು ಬಸಪ್ಪನವರಿಗೆ ನನ್ನ ವಿಷಯಕ್ಕೆ ಇನ್ನೂ ಗೌರವವು ಹೆಚ್ಚಿತು. ಅವರು, ನನಗೆ ಸ್ವಾಮಿವಿವೇಕಾನಂದರ ವಿಷಯಕ್ಕೆ ಹೆಚ್ಚಿನ ಭಕ್ತಿಯಿದೆ ಎಂಬುದನ್ನು ಹೇಗೋ ತಿಳಿದು ಇಂಗ್ಲೀಷ್‌ನಲ್ಲಿ ಪ್ರಕಟಿತವಾದ ಸ್ವಾಮಿಯವರ ಕೃತಿಸಂಗ್ರಹ **(Complete Works)**ವನ್ನೆಲ್ಲ ನನ್ನಲ್ಲಿಯೇ ಓದುವದಕ್ಕೆಂದು ಬಹುಕಾಲ ಬಿಟ್ಟುಬಿಟ್ಟಿದ್ದರು. ಇದರಿಂದ ನನಗೆ ಆದ ಉಪಕಾರವನ್ನು ಮುಂದೆ ಮತ್ತೊಂದು ಸಲ ಪ್ರಸ್ತಾಪಿಸಲಿರುವೆನು.

## ದಾವಣಗೆರೆಯಲ್ಲಿ ಆದ ಗೃಹಕೃತ್ಯದ ಅಡಚಣೆಗಳು:

ಹೀಗೆ ನನಗೆ ಎಲ್ಲಾ ಬಗೆಯಿಂದಲೂ ದಾವಣಗೆರೆಯಲ್ಲಿ ಸಂನಿವೇಶಗಳು ಸರಿಯಾಗಿದ್ದರೂ ಮನೆಯ ಖರ್ಚುವೆಚ್ಚಗಳನ್ನು ಸರಿತೂಗಿಸುವಷ್ಟು ಆದಾಯವು ನನಗೆ ಇರಲಿಲ್ಲ, ಈಗ್ಗೆ ನನಗೆ 20 ರೂ ಸಂಬಳ, ಆಕ್ಟಿಂಗ್ ಅಲೋಯನ್ಸ್ 5 ರೂ - ಹೀಗೆ ತಿಂಗಳಿಗೆ 25 ರೂ ತಲುಬು ; ಬುಕ್ಕು ಡಿಪೋವಿನಲ್ಲಿ ಪುಸ್ತಕಗಳನ್ನು ಮಾರಿದ ಕಮಿಶನ್ ಸುಮಾರು 8-10 ರೂ ; ಹುಡುಗರಿಗೆ ಪಾಠ ಹೇಳಿದ್ದಕ್ಕೆ 10 ರೂ ನಷ್ಟು

ಬರುತ್ತಿತ್ತು. ದಿನಸುಗಳ ಬೆಲೆ ಅಷ್ಟೇನೂ ಮಿತಿಮೀರಿರಲಿಲ್ಲವಾದರೂ ಮನೆಯಲ್ಲಿ ಒಂದು ಹೆಣ್ಣುಶಿಶು ಜನನವಾದದ್ದರ ನಿಮಿತ್ತದಿಂದ ಬಾಣಂತಿಯ ಉಪಚಾರಕ್ಕೆ ನಮ್ಮ ಅತ್ತೆಯವರು, ವಿದ್ಯಾಭ್ಯಾಸಕ್ಕೆ ಅವರ ಮಗ ಇಬ್ಬರೂ ಬಂದಿದ್ದರು. ಇನ್ನೂ ಒಬ್ಬ ಹುಡುಗ ಮನೆಯಲ್ಲಿ ಊಟಮಾಡಿಕೊಂಡು ಓದುತ್ತಿದ್ದನೋ ಏನೋ. ಹಬ್ಬಹರಿದಿನಗಳು, ಅತಿಥಿ ಅಭ್ಯಾಗತರು, ನಾನು ಮಾಡುವ ಅನುಷ್ಠಾನದ ನಿಮಿತ್ತ ಸ್ವಲ್ಪ ಖರ್ಚು - ಇವೆಲ್ಲ ಸೇರಿ ನಮ್ಮ ಯೋಗ್ಯತೆಗೆ ಮೀರಿಯೇ ಖರ್ಚು ಬೆಳೆಯುತ್ತಿತ್ತು.

ಈ ಅನಿರೀಕ್ಷಿತವಾದ ಒಂದು ತೊಂದರೆಯಿಂದ ಹೆಂಡತಿಯ ಮೈಮೇಲಿದ್ದ ಒಂದು ಆಸಲಿ(ಕಂಠಾಭರಣ)ಯನ್ನು ದುಬಾರಿಯ ಬಡ್ಡಿಯ ಮೇಲೆ ತಂದಿದ್ದ ಕೈಸಾಲಕ್ಕಾಗಿ ಅಡವಾಗಿಡಬೇಕಾಗಿ ಬಂದಿತ್ತು. ರಾಮರಾಯರೆಂಬ ಒಬ್ಬ ಮೇಷ್ಟರು ನಮ್ಮ ಮನೆಗೆ ಬೇಕಾದ ಸಾಮಾನುಗಳನ್ನು ಅಂಗಡಿಯಲ್ಲಿ ಬರೆಯಿಸಿ ತರುವದು, ತಿಂಗಳು ತಿಂಗಳಿಗೆ ನಾನುಕೊಡುವ ಹಣವನ್ನು ಅಂಗಡಿಯವರಿಗೆ ಕೊಡುವದು ಹೀಗೆ ಮಾಡುತ್ತಾ ಬಂದಿದ್ದರಿಂದ ಅಂಗಡಿಯವನಿಗೂ ನಮಗೂ ನೇರವಾದ ಭೇಟಿಯೇ ಇರಲಿಲ್ಲವಾಗಿ, ನನಗೆ ಬಹಳ ಸಾಲವಾಗಿದೆ ಎಂಬುದು ಗೊತ್ತಾಗಿರಲಿಲ್ಲ. ಇದೂ ಅಲ್ಲದೆ ಆಗ್ಗೆ ಕ್ರಿಕೆಟ್‌ಫಂಡಿನ ಹಣವನ್ನು ವಸೂಲುಮಾಡಿದರೂ ಎಲ್ಲವನ್ನು ಆಯಾತಿಂಗಳು ಪೂರ್ತಿಯಾಗಿ ಟ್ರೆಜರಿಗೆ ಕಟ್ಟದೆ, ಸ್ವಲ್ಪ ಕೈಯಲ್ಲಿಯೇ ಇಟ್ಟುಕೊಂಡು ಬಿಟ್ಟಿದ್ದೆನು. ಅದರ ಲೆಕ್ಕಾಚಾರವನ್ನು ಮಾಡುವಾಗ ಅದು ತಕ್ಕ ಮಟ್ಟಿಗೆ ಹೊರೆಯಾಗಿದೆಯೆಂದು ಕಂಡುಬಂತು. ಇದು ಇಲಾಖೆಯ ನಿಯಮಕ್ಕೆ ವಿರೋಧವೆಂದೂ ಈ ಹಣವನ್ನು ಕೂಡಲೆ ಟ್ರೆಜರಿಗೆ ಕಟ್ಟಿಬಿಡಬೇಕೆಂದೂ ಇನಸ್ಪೆಕ್ಟರು ನನಗೆ ಎಚ್ಚರಿಕೆ ಕೊಟ್ಟಿದ್ದರು.

## ಕಳೂರುಕಟ್ಟೆಗೆ ವರ್ಗ :

ಇಂಥ ವಿಷಮ ಸ್ಥಿತಿಯಲ್ಲಿ ನನಗೆ ಇದ್ದಕ್ಕಿದ್ದಹಾಗೆಯೇ 'ನಿಮ್ಮನ್ನು 25 ರೂ ತಲುಬಿನ ಮೇಲೆ ಕಳೂರುಕಟ್ಟೆಯ ಎ.ವಿ ಸ್ಕೂಲಿಗೆ ವರ್ಗಮಾಡಿದೆ' ಎಂಬ ಆರ್ಡರು ಬಂದಿತು. ನನ್ನ ಸ್ಥಾನಕ್ಕೆ ವರ್ಗಪಟ್ಟು ಬಂದಿದ್ದ ಗೋ. ಎಂಬವರು ಯಾವದೋ ತಪ್ಪಿಗಾಗಿ ಸಸ್ಪೆಂಡ್ ಆಗಿದ್ದವರು. ಅವರನ್ನು ಅವರ ಹಿಂದಿನ ಸಂಬಳ 20 ರೂ ಮೇಲೆ ವರ್ಗಮಾಡಿದ್ದರೂ, ಅವರು ದಾವಣಗೆರೆಯಿಂದ ಬಾರಿಯ ಎ.ವಿ.ಯ ಸ್ಕೂಲಿನಲ್ಲಿ ಚಿದಂಬರಯ್ಯನವರ ಚಾರ್ಜಿನಲ್ಲಿರಬೇಕೆಂದು ಆರ್ಡರು ಕೊಟ್ಟದ್ದರಿಂದ ಅವರಿಗೆ ಒಂದು ಬಗೆಯಿಂದ ಪ್ರಮೋಷನ್ ಕೊಟ್ಟಂತೆಯೇ ಆಗಿತ್ತು. ನಾನು ಮನಸಾಕ್ಷಿಯಿಂದ ಉತ್ಸಾಹಪೂರ್ವಕವಾಗಿ ಎಲ್ಲರ ಮೆಚ್ಚಿಕೆಗೆ ಪಾತ್ರನಾಗಿ ಕೆಲಸವನ್ನು ಮಾಡಿದ್ದಕ್ಕೆ ನನಗೆ

ಅಭುಕ್ತ ಮೂಲೆಯಲ್ಲಿದ್ದ ಮಲೆನಾಡು ಪ್ರದೇಶದ ಒಂದು ತೀರ ಸಣ್ಣ ಸ್ಕೂಲಿಗೆ ವರ್ಗವಾಗಿದ್ದು ಯಾರತಪ್ಪಿಗೆ ಎಂಬುದು ತಿಳಿಯಲಿಲ್ಲ. ನಮ್ಮ ಸ್ಕೂಲಿನಲ್ಲಿದ್ದ ಹಳೆಯ ಮೈಸೂರು ನಕ್ಷೆಯಲ್ಲಿ ಕಳೂರು ಕಟ್ಟೆಯೆಂಬ ಹೆಸರೇ ಇರಲಿಲ್ಲ; ನಾನೇ ಹೊಸದಾಗಿ ಆವೂರಿನಲ್ಲಿ ಸ್ಕೂಲು ಪ್ರಾರಂಭಿಸಬೇಕೇನೋ ಎನಿಸಿತು ನನಗೆ! ವಿಚಾರಿಸಿದ್ದಲ್ಲಿ ಅದು ನಗರದ ಸಮೀಪದಲ್ಲಿದ್ದದ್ದರಿಂದ ಈಗ ಅದನ್ನು ಹೊಸನಗರವೆಂದು ಕರೆಯುತ್ತಿದ್ದಾರೆಂದೂ ಅದು ರೋಗಿಷ್ಠರ ಕೊಂಪೆಯೆಂದೂ ತಿಳಿಯಬಂದಿತು. ನನಗೆ ಮನಸ್ಸಿನಲ್ಲಿ ಅಸಮಾಧಾನವೂ ಅತೃಪ್ತಿಯೂ ಎದ್ದು ಕೊಂಡವು. 'ನಾನು ಯಾವ ಅಪರಾಧವನ್ನು ಮಾಡದಿದ್ದರೂ ನನ್ನನ್ನು ನಿಕೃಷ್ಟವಾದ ಒಂದು ಸ್ಕೂಲಿಗೆ ವರ್ಗಮಾಡಲಾಗಿದೆ; ನನಗೆ ಬಡತಿ ಆಗತಕ್ಕದ್ದು ಯುಕ್ತವೇ ಆದರೂ ಪ್ರಾಣಾಪಾಯವಿರುವ ಈ ಸ್ಥಳಕ್ಕೆ ನನಗೆ ಹೋಗಲು ಇಷ್ಟವಿಲ್ಲ. ದಯವಿಟ್ಟು ಈ ವರ್ಗವನ್ನು ವಜಮಾಡಿಸಿಕೊಡಬೇಕು' ಎಂದು ಅರ್ಜಿಯನ್ನು ಬರೆದುಕೊಂಡೆನು. ಅದಕ್ಕೆ ಉತ್ತರವೇ ಇಲ್ಲ. ಈ ಸಂಧಿಯಲ್ಲಿ ಇನಸ್ಪೆಕ್ಟರಾಗಿದ್ದವರು ವೆಂಕಟಸ್ವಾಮಿ ನಾಯ್ಡುರವರಲ್ಲ. ಅವರು ನ್ಯಾಯಪ್ರಿಯರು. ಹೊಳಲುಕೆರೆಯಲ್ಲಿ ನನ್ನ ಮೇಲೆ ಹಾಕಿದ್ದ ಅರ್ಜಿಯನ್ನು ಡಿಸ್ಟ್ರಿಕ್ಟ್ ಇನಸ್ಪೆಕ್ಟರ ಮೂಲಕ ಸ್ಥಳದಲ್ಲಿ ಉಪಾಧ್ಯಾಯರುಗಳ ತನಿಖೆಮಾಡಿ ಹೆಡ್‌ಮಾಸ್ಟರದೇನೂ ತಪ್ಪಿಲ್ಲ ಎಂದು ಶಿಫಾರಸು ಆದದ್ದಲ್ಲದೆ ತಪ್ಪಿತಸ್ಥರಾದ ಸಹೋಪಾಧ್ಯಾಯರುಗಳನ್ನೆಲ್ಲ ದಿಕ್ಕಾಪಾಲಾಗಿ ವರ್ಗಮಾಡಿಸಿ ಬಿಟ್ಟಿದ್ದರು. ದಾವಣಗೆರೆಯಲ್ಲಿ ಚಿದಂಬರಯ್ಯನವರು ಇದ್ದಾಗಲೂ ನಾನು ಆಕ್ಟಿಂಗ್ ಹೆಡ್‌ಮಾಸ್ಟರಾಗಿದ್ದಾಗಲೂ ನನ್ನ ತರಗತಿಗಳನ್ನು ಪರೀಕ್ಷೆಮಾಡಿ ಸಂತೃಪ್ತಿಯನ್ನು ಪ್ರಕಟಿಸಿದ್ದರು. ನನ್ನ ಸಣ್ಣಪುಟ್ಟ ತಪ್ಪುಗಳಿಗೆ ಎಚ್ಚರಿಕೆ ಕೊಟ್ಟಿದ್ದರು. ಆದರೆ ಈಗ ಅವರ ಸ್ಥಾನದಲ್ಲಿ ವೆಂಕಟದಾಸಪ್ಪನವರೆಂಬ ಮತ್ತೊಬ್ಬರು ಬಂದಿದ್ದರು. ಅವರು ಯೋಗ್ಯರಿಗೆ ಪ್ರೋತ್ಸಾಹವನ್ನು ಕೊಡುವವರೇ ಆದರೂ ಸ್ವಲ್ಪ ದುಡುಕಿನ ಸ್ವಭಾವದವರು. ಅವರ ಕಾಲಕ್ಕೆ ಹಿಂದಿನಂತೆ ಆರ್ಡರುಗಳು ಸಕಾಲಕ್ಕೆ ಬರುತ್ತಿರಲಿಲ್ಲ. ಹೀಗಾಗಿ ನನ್ನ ಸ್ಥಾನಕ್ಕೆ ವರ್ಗಪಟ್ಟ ಗೊ.ರವರು ಕೆಲಸಕ್ಕೆ ಬಂದು ಚಾರ್ಜುಕೊಡಬೇಕೆಂದು ಕೇಳಿದರು. ನಾನು ಕೂಡಲೆ ಏನೂ ತಿಳಿಯದೆ ತಂತಿ ವರ್ತಮಾನವನ್ನು ಕೊಟ್ಟು ಚಿದಂಬರಯ್ಯನವರನ್ನು ಮನೆಗೆ ಕರೆಯಿಸಿಕೊಂಡೆನು. ಅವರು ಬಂದ ದಿವಸ ನಾನು ಸತ್ಯನಾರಾಯಣ ವ್ರತವನ್ನು ಮಾಡುತ್ತಿದ್ದೆನು. (ಊರಿಂದೂರಿಗೆ ವರ್ಗವಾದಾಗ, ಏನಾದರೂ ಸಂಕಷ್ಟವೊದಗಿದಾಗ, ಏನಾದರೊಂದು ಸಂತೋಷದ ಘಟನೆ- ಯಾದಾಗ ಇಂಥ ಸಂದರ್ಭಗಳಲ್ಲಿ ನಾನು ಸತ್ಯನಾರಾಯಾಣ ವ್ರತವನ್ನು ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದೆನು). ಆ ದಿವಸ ಬ್ರಾಹ್ಮಣಭೋಜನವು ಮುಗಿದು ಮಲಗುವಾಗ ನನಗೆ ತಲುಪಿದ್ದ ಅರ್ಡರನ್ನು ಚಿದಂಬರಯ್ಯನವರು ಬೇರೆಯಿಟ್ಟುಕೊಂಡಿದ್ದು ನನಗೆ

ತೋರಿಸಿದರು. ನಡೆದಿದ್ದ ಸಂಗತಿಗಳನ್ನೆಲ್ಲ ನನ್ನಿಂದ ತಿಳಿದುಕೊಂಡು ಕೂಡಲೆ ಮತ್ತೊಂದು ಅರ್ಜಿಯನ್ನು ಬರೆದುಕೊಳ್ಳುವಂತೆ ಪ್ರೋತ್ಸಾಹ ಮಾಡಿ ಅವರು ಹೊರಟು ಹೋದರು. ಅದು ಯುಕ್ತವೆಂದು ತೋರಿದ್ದರಿಂದ ನಾನು ಮತ್ತೊಂದು ಅರ್ಜಿಯನ್ನು ಇನಸ್ಪೆಕ್ಟರು ಜನರಲ್ಲರಿಗೆ ಸರ್ಕಲ್ ಇನಸ್ಪೆಕ್ಟರು ಮೂಲಕವೇ ಬರೆದುಕೊಂಡೆ. "ನಾನು ಈ ಒಳಗೆ ಒಂದು ಅರ್ಜಿಯನ್ನು ಸರ್ಕಲ್ ಇನಸ್ಪೆಕ್ಟರಿಗೆ ಬರೆದುಕೊಂಡಿದ್ದೇನೆ. ಅದರ ಸಂಗತಿ ತಮ್ಮವರೆಗೆ ತಿಳಿಸಿದಾರೊ ಇಲ್ಲವೋ ನನಗೆ ತಿಳಿಯದು. ನಿರಪರಾಧಿಯಾದ ನನ್ನನ್ನು ಮಲೆನಾಡಿಗೆ ವರ್ಗಮಾಡಿರುತ್ತಾರೆ. ಸಾಯುವದು, ಬದುಕುವದು, ಇವುಗಳಲ್ಲೊಂದನ್ನು ಆರಿಸಿಕೊಳ್ಳಬೇಕಾದ ಈ ಸಂದರ್ಭದಲ್ಲಿ ನಾನು ಕಳೂರುಕಟ್ಟೆಗೆ ಹೋಗಲು ಇಷ್ಟಪಡುವದಿಲ್ಲ. ಈ ಧಾರ್ಷ್ಟ್ಯವನ್ನು ಕ್ಷಮಿಸಬೇಕು. ನಾನು ದಕ್ಷತೆಯಿಂದ ಮೇಲ್ಪಟ್ಟ ಹುದ್ದೆದಾರರುಗಳಿಗೆ ಮೆಚ್ಚಿಗೆಯಾಗುವಂತೆ ಮಾಡಿದ ಕೆಲಸಕ್ಕೆ ನನಗೆ 5 ರೂ ಬಡತಿ ಕೊಟ್ಟಿರುವದು ನ್ಯಾಯವೇ ಆಗಿದೆಯಾದರೂ, ನನ್ನ ಬಡತಿ ತೆಗೆದು ಹಾಕಿದರೂ ಚಿಂತೆಯಿಲ್ಲ, ಮೈಸೂರು ಪ್ರಾಂತದಲ್ಲಿರುವ ಆರೋಗ್ಯಕರವಾದ ಯಾವದಾದರೊಂದು ಸ್ಥಳದ ಸ್ಕೂಲಿಗೆ ನನ್ನನ್ನು ವರ್ಗಮಾಡಿಸಿ ಕೊಟ್ಟು ಕಾಪಾಡಬೇಕು" ಎಂಬರ್ಥಕ್ಕೆ ಅರ್ಜಿಬರೆದಿದ್ದೆನು. ಈ ದಿಟ್ಟತನವು ಹೊಸ ಸರ್ಕಲ್ ಇನಸ್ಪೆಕ್ಟರನ್ನು ರೇಗಿಸಿದಂತೆ ಕಾಣುತ್ತದೆ. ಅವರು 'ಕೂಡಲೆ ಚಾರ್ಜುಕೊಟ್ಟುಬಿಡಬೇಕು ; ಇಲ್ಲದಿದ್ದರೆ ನಿಮ್ಮ ತಪ್ಪಿನ ವಿಷಯಕ್ಕೆ ಗಂಭೀರವಾದ ಆಲೋಚನೆ ಮಾಡಬೇಕಾಗುತ್ತದೆ' ಎಂಬರ್ಥಕ್ಕೆ ಒಂದು ಟೆಲಿಗ್ರಾಮು ಕೊಟ್ಟರು ; ಈಗ ನಾನು ಮೀರಲಾರದ ದುರದೃಷ್ಟಕ್ಕೆ ಏನೂ ಮಾಡುವದು ಉಳಿದಿಲ್ಲವೆಂದು ನಿರ್ಣಯಿಸಿದೆ. ಚಾರ್ಜುಕೊಡುವದಕ್ಕೆ ಸಿದ್ಧನಾದೆ.

## ಸ್ಥಳಾಂತರಕ್ಕೆ ಹೋಗಬೇಕಾದ್ದಕ್ಕೆ ಪೇಚಾಟ :

ಈಗ ನಾನು ಸ್ಕೂಲಿನ ಲೆಕ್ಕಪತ್ರಗಳು ನನ್ನ ಸಾಲಸೋಲ ಮುಂತಾದವುಗಳ ಕಡೆಗೆ ಮನಸ್ಸನ್ನು ಹೊರಳಿಸಿದೆ ಬಹಳ ಸಾಲವಾಗಿತ್ತು. ಹೆಂಡತಿಯನ್ನು ಒಪ್ಪಿಸಿ ಅವಳ ಕೈಯಲ್ಲಿದ್ದ ಒಂದು ಬೆಲೆಯುಳ್ಳ ಹವಳದ ಗುಂಡನ್ನು ಮಾರಿದೆ. ಪ್ಲೇಗ್ ಷಡ್ಡಿನ ಸಾಮಾನುಗಳನ್ನು ಮಾರಿದ್ದರಿಂದ ಸ್ವಲ್ಪ ದುಡ್ಡು ಬಂದಿತ್ತು. ಸ್ಕೂಲಿನ ಹುಡುಗರು ಸಹೋಪಾಧ್ಯಾಯರು ಮುಂತಾದವರು ನನಗೆ ಶುಭಾಶಯ ಸೂಚಕವಾಗಿ ಏರ್ಪಡಿಸಿದ ಅಭಿನಂದನ ಕೂಟದಲ್ಲಿ ಒಂದು ಜೊತೆಯ ಪಂಚೆ ಮತ್ತು ಸವರನ್ ಇವುಗಳನ್ನು ಕಾಣಿಕೆಯಾಗಿ ಒಪ್ಪಿಸಿದ್ದರು. ಇದನ್ನೆಲ್ಲ ಮಾರಿಬಿಟ್ಟು ಸಾಲ ತೀರಿಸಿದೆ. ಈ ಸಂದರ್ಭದಲ್ಲಿ ದು॥ ಎಂಬವರೊಬ್ಬರು ನನಗೆ ಕೆಲವು ಆಲೋಚನೆಗಳನ್ನು ಹೇಳಿಕೊಟ್ಟು ಕಷ್ಟದಿಂದ ಪಾರುಮಾಡಿದರು. ಅವರು ಸದುದ್ದೇಶದಿಂದಲೇ ನನಗೆ

ಸೂಚನೆಗಳನ್ನು ಕೊಟ್ಟರಾದರೂ ಅವುಗಳಲ್ಲಿ ಕೆಲವು ಅಧರ್ಮಯುಕ್ತವೂ ಆಗಿದ್ದವೆಂಬುದು ನನ್ನ ಅಂತಃಕರಣವನ್ನು ಬಹುಕಾಲ ಚುಚ್ಚುತ್ತಿತ್ತು.

## ಕಳೂರು ಕಟ್ಟೆ:

ಅಂತೂ ಇಂತೂ ಋಣಮುಕ್ತನಾಗಿ ಹೆಂಡತಿ, ಒಂದು ಗಂಡು ಮಗು, ಒಂದು ಹೆಣ್ಣುಮಗು - ಇವರನ್ನೆಲ್ಲ ಕಟ್ಟಿಕೊಂಡು ಹೊರಟೆ. ದಾರಿಯಲ್ಲಿ ಬೀರೂರು ಸ್ಟೇಷನ್ನಿನಲ್ಲಿ ಲಕ್ಷ್ಮಕ್ಕನವರು ಅನಿರೀಕ್ಷಿತವಾಗಿ ನಮ್ಮನ್ನು ಸಂಧಿಸಿದರು. ಅವರು 'ನಿನ್ನ ಹೆಂಡತಿ ಈಗ ಗರ್ಭಿಣಿಯಾಗಿದ್ದಾಳೆ' ಎಂದು ನನಗೆ ತಿಳಿಸಿದರು. ಇದರ ಅರಿವೇ ನನಗೆ ಈವರೆಗೆ ಇರಲಿಲ್ಲ. ಪರಸ್ಥಳದಲ್ಲಿ ಯಾರಾದರೂ ಸಹಾಯಕ್ಕೆ ಇರುವದು ಅವಶ್ಯವೆಂದು ತಿಳಿದು ಅವರನ್ನು ಜೊತೆಯಲ್ಲಿ ಕರೆದುಕೊಂಡು ಶಿವಮೊಗ್ಗೆಯನ್ನು ಸೇರಿದೆನು. ಅಲ್ಲಿಂದ ಮುಂದಕ್ಕೆ ಆಗ ಜಟಕಗಾಡಿಗಳಲ್ಲಿ ಪ್ರಯಾಣ ಮಾಡುತ್ತಿದ್ದರು ; ಅನಂತಪುರವೆಂಬ ಸ್ಥಳದಲ್ಲಿ ನಮ್ಮ ದಾರಿ ಕವಲು ಒಡೆಯಬೇಕಾಗಿತ್ತು. ಜಟಕಾದವನು ಸಾಗರದವರೆಗಿನ ಬಾಡಿಗೆಯನ್ನೇ ಕೊಡಬೇಕೆಂದು ನಿರ್ಬಂಧಿಸಿದ್ದದ್ದರಿಂದ ಅದಕ್ಕೇ ಒಪ್ಪಿ ಅನಂತಪುರಕ್ಕೆ ಹೋಗಿ ಅಲ್ಲಿಂದ ಕಳೂರು ಕಟ್ಟೆಗೆ ಗಾಡಿಮಾಡಿಕೊಂಡು ಹೊರಟೆವು. ಮಾರನೆಯದಿನ ಬೆಳಗ್ಗೆ ಸುಮಾರು ಒಂಭತ್ತು ಘಂಟೆಗೆ ಗಾಡಿಯನ್ನು ನಿಲ್ಲಿಸಲಾಯಿತು. ಕಾವಳವು ಬಲವಾಗಿದ್ದದ್ದರಿಂದ ಅಲ್ಲಿ ಯಾವ ಊರೂ ನನಗೆ ಕಾಣಿಸಲಿಲ್ಲ. ವಿಚಾರಿಸಿದ್ದರಲ್ಲಿ ಕಳೂರುಕಟ್ಟೆಯು ಬಹಳ ಸಣ್ಣ ಊರೆಂದು ತಿಳಿಯಬಂತು. ಅಲ್ಲಿಯ ಪ್ರಜಾಸಂಖ್ಯೆ 600-700 ಕ್ಕಿಂತ ಹೆಚ್ಚಿರಲಿಲ್ಲ ; ಸ್ಕೂಲಿನ ಹುಡುಗರು ಸುಮಾರು 45-50 ! ನಾವಿಳಿದುಕೊಂಡಿದ್ದ ಭಾಗದಲ್ಲಿ ಅಲ್ಲೊಂದು ಇಲ್ಲೊಂದು ಹೀಗೆ ಐದಾರು ಮನೆಗಳಿದ್ದವು ; ಒಂದು ದಿಣ್ಣೆಯ ಆಚೆಯಲ್ಲಿ ಸರಕಾರಿ ನೌಕರರಿಗೆಂದು ಏರ್ಪಡಿಸಿದ್ದ ಕೆಲವು ಮಂಗಳೂರು ಹಂಚಿನ ಮನೆಗಳಿದ್ದವು. ಒಂದು ಆಸ್ಪತ್ರೆ, ಒಂದು ಸ್ಕೂಲು, ತಾಲ್ಲೂಕು ಕಚೇರಿ - ಇಷ್ಟಾದರೆ ಊರಿನ ವಿವರಣೆಯೇ ಮುಗಿಯಿತು !

ಆವೂರಿನಲ್ಲಿ ಮನೆ ಬಾಡಿಗೆಗೆ ಸಿಕ್ಕುವದು ಕಷ್ಟವೆಂಬುದು ಹೇಳಲೇಬೇಡ ! ಆದರೂ ಬಹಳ ಪ್ರಯತ್ನಮಾಡಿ ಊರಿನ ಕೊನೆಯಲ್ಲಿ ಒಂದು ಮನೆಯನ್ನು ಗೊತ್ತುಮಾಡಿದ್ದಾಯಿತು. ಆದರೆ ಇಷ್ಟರಲ್ಲಿ ಆ ಮನೆಯಲ್ಲಿ ಭೀತಿಶಂಕೆಯಿದೆ ಯೆಂದೂ ಆ ಮನೆಯಿಂದಾಚೆಗೆ ಇರುವ ಮಾರಮ್ಮ(?)ನ ಗುಡಿಯಬಳಿ ಕೂಳು ಇಳುಕಿರುವ ಪದ್ಧತಿಯಿದೆಯೆಂದೂ, ಯಾರೋ ಹೇಳಿಬಿಟ್ಟದ್ದು ನನ್ನ ಹೆಂಡತಿಗೆ ಬಹಳ ಅಂಜಿಕೆಯನ್ನುಂಟುಮಾಡಿತು. ಮಲೆನಾಡು ಪ್ರಾಂತದಲ್ಲಿ ಚೌಡಿಗಳ ಹೆದರಿಕೆ ಬೇರೆ. ಆದರೆ ನಾನು ಭಗವಂತನ ಭಜನೆಯಿಂದ ಸ್ಥಳದಲ್ಲಿ ಯಾವ ಭೂತಗಳಾಗಲಿ

ಚೌಡಿಗಳಾಗಲಿ ಸುಳಿಯುವದಿಲ್ಲ ಎಂದು ಹೇಗೋ ಸಮಾಧಾನವನ್ನು ಹೇಳಿ ಆ ಮನೆಯನ್ನೇ ಬಾಡಿಗೆಗೆ ಗೊತ್ತು ಮಾಡಿಕೊಂಡೆನು. ಅಲ್ಲಿ ಮನೆಯ ಹಿಂದುಗಡೆ ಸ್ವಲ್ಪಹೋದರೆ ಅಲ್ಲೆಲ್ಲ ಕಾಡೇ ; ಆದ್ದರಿಂದ ಮರಗಳ ಸಂದಿನಲ್ಲಿ ಯಾರು ಅವಿತು ಕೊಂಡರೂ ಕೇಳುವವರಿರಲಿಲ್ಲ. ನಮ್ಮ ಮನೆಯ ಬಾವಿಯಲ್ಲಿ ಒಂದೆರಡು ಮೊಳದ ಕೆಳಗೇ ನೀರು ಸಿಕ್ಕುತ್ತಿತ್ತು; ಇತರ ಅನುಕೂಲ್ಯಗಳೂ ಇದ್ದವು. ಆದರೂ ಈ ಚೌಡಿಯ ಹೆದರಿಕೆ ನಮಗೆ ಅಡ್ಡ ಬಂದಿತ್ತು. ಆದರೆ ಪ್ರತಿ ಶನಿವಾರವೂ ಭಜನೆಯ ಪದ್ಧತಿಯನ್ನಿಟ್ಟುಕೊಂಡು ಜನರನ್ನು ಮಂಗಳಾರತಿಗೆ ಕರೆಯುವ ಪದ್ಧತಿ ಇಟ್ಟುಕೊಂಡದ್ದರಿಂದ ಜನರು ಅಲ್ಲಿಗೆ ಧಾರಾಳವಾಗಿ ಓಡಾಡುವದಕ್ಕೆ ಪ್ರಾರಂಭಿಸಿದರು. ಅದರಿಂದ ಸ್ವಲ್ಪ ಆವೂರಿನ ಜನರಿಗೂ ನಮ್ಮ ಮನೆಯವರಿಗೂ ನಾವಿರುವ ಪ್ರದೇಶದ ಅಂಜಿಕೆ ಕಡಿಮೆಯಾಯಿತು.

ಇನ್ನು ಊರಿನ ಜನರ ವಿಚಾರ. ಅಲ್ಲಿ ನಾನು ಕಂಡಂತೆ ಯಾರ ಮುಖದ ಮೇಲೂ ಕಳೆಯೇ ಇರಲಿಲ್ಲ. ಎಲ್ಲರಿಗೂ ಚಳಿಜ್ವರವೇ ಮುಂತಾದವುಗಳ ಶಂಕೆ. ಹೊರಗಿನಿಂದ ಬಂದಿದ್ದ ನೌಕರರುಗಳು ಒಬ್ಬರನ್ನೊಬ್ಬರು ಕಂಡಾಗ 'ಹೆದರಬೇಡಿ ; ಈವೂರ ವಾಯುಗುಣವೇನೂ ಅಷ್ಟು ಕೆಟ್ಟಿಲ್ಲ. ದಿವಾನ ಮಾಧವರಾಯರು ಇಲ್ಲಿಗೆ ಬಂದಾಗ್ಗೆ ಈ ಕಡೆಗೆ ಕೊಡಚಾದ್ರಿಯ ಕಡೆಯಗಾಳಿ ಬರುವುದರಿಂದ ಹವೆ ಸುಖಪ್ರದವಾಗಿದೆಯೆಂದು ಹೇಳಿದ್ದರು' ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರಾದರೂ, ವಾಚನಾಲಯದಲ್ಲಿ ವೃತ್ತಾಂತ ಪತ್ರಿಕೆಗಳನ್ನೋದಬೇಕಾದರೆ ಆಸ್ಪತ್ರೆಯಲ್ಲಿಯೇ ಸೇರುತ್ತಿದ್ದದ್ದರಿಂದ ಆಸ್ಪತ್ರೆ ಡಾಕ್ಟರರೇ ರೀಡಿಂಗ್ ರೂಮಿನ ಸೆಕ್ರೆಟರಿಗಳು ; ಆದ್ದರಿಂದ ಅವರು ತಮ್ಮ ಕೆಲಸಕ್ಕೆ ಅವಿರೋಧವಾಗಿಯೇ ರೀಡಿಂಗುರೂಮು ಕೆಲಸವನ್ನು ಮಾಡಿಕೊಳ್ಳುವದಕ್ಕೆ ಅನುಕೂಲಿಸಲೆಂದು ಪೇಪರುಗಳನ್ನೆಲ್ಲ ಆಸ್ಪತ್ರೆಯಲ್ಲಿಯೇ ಇಟ್ಟುಕೊಂಡಿರುತ್ತಿದ್ದರು. ಆದ್ದರಿಂದ ಎಲ್ಲರೂ ವೃತ್ತಾಂತಪತ್ರಿಕೆಯ ಸುದ್ದಿಗಳನ್ನು ತಿಳಿದುಕೊಂಡುಹೋಗುವ ಜೊತೆಗೆ ಒಬ್ಬರೊಬ್ಬರ ಆರೋಗ್ಯ ಸ್ಥಿತಿಯನ್ನು ತಿಳಿದುಕೊಂಡೇ ಹೋಗುತ್ತಿದ್ದರು. ಅಲ್ಲಿ ಬಹುಜನಗಳು ಕೈಯಲ್ಲಿ ಅಥವಾ ಅಂಗಿಯ ಜೇಬಿನಲ್ಲಿ ಒಂದು ಔಷಧಿಗೆ ಶೀಷಿಯನ್ನು ಇಟ್ಟು ಕೊಂಡೇ ಬಂದಿರುತ್ತಿದ್ದರು. ಇಂಥ ಅಂಡಮಾನದ್ವೀಪಕ್ಕೆ ವರ್ಗವಾಗಿತ್ತು, ನನಗೆ.

### ಕಳೂರುಕಟ್ಟೆಯ ಕೆಲವರು ಪರಿಚಯಸ್ಥರು :

ಕಳೂರುಕಟ್ಟೆಯಲ್ಲಿ ನನಗೆ ಬೇಗನೆ ಕೆಲವರು ಮುಖ್ಯಜನರ ಸ್ನೇಹವಾಯಿತು. ಅವರೊಳಗೆ ಗುಂಡೂರಾಯರೆಂಬ ಓವರ್ಸಿಯರೊಬ್ಬರು, ಅವರು ನಮ್ಮ ಬಂಧು-

ವರ್ಗದವರು. ಅವರು ಸ್ವಲ್ಪ ಅಧ್ಯಾತ್ಮವಿಚಾರರಸಿಕರು. ಥಿಯೋಸೋಫಿಯಲ್ಲಿ ಒಂದಿಷ್ಟು ಪಳಗಿದ್ದರು. ಅವರಿಗೆ ಸ್ವಲ್ಪ ವೇದಾಂತವಿಚಾರ ಬೇಕಾಗಿದ್ದರಿಂದ ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗುವದು, ತಮ್ಮ ಮನೆಗೂ ನನ್ನನ್ನು ಕರೆದುಕೊಂಡು ಹೋಗುವದು - ಹೀಗೆ ಮಾಡುತ್ತಿದ್ದರು. ತಾಲ್ಲೂಕು ಶಿರಸ್ಥದಾರರು ಇನ್ನೊಬ್ಬರು. ಅವರು ಅಷ್ಟೇನೂ ವಿಚಾರಪರರಲ್ಲವಾದರೂ ಸ್ಕೂಲು ಹೆಡ್‌ಮಾಸ್ಟರು, ಡಾಕ್ಟರು, ಓವರ್ಸಿಯರು - ಇವರನ್ನು ಬಿಟ್ಟರೆ ತಮ್ಮ ಸರಿಸಮಾನ ಸ್ಥಾನಮಾನದ ಸ್ನೇಹಿತರು ಮತ್ತೆ ಯಾರೂ ಆವೂರಲ್ಲಿ ಸಿಕ್ಕುವಂತೆಯೇ ಇರಲಿಲ್ಲವಾದ್ದರಿಂದ ನನ್ನ ಪರಿಚಯವನ್ನು ಮಾಡಿಕೊಂಡಿದ್ದರು. ತಾಲ್ಲೂಕಿನ ಅಧಿಕಾರಿಗಳಾಗಿದ್ದರಿಂದಲೂ ಗರ್ಲ್ಸ್‌ಸ್ಕೂಲಿನ ಕಮಿಟಿಯ ಪ್ರೆಸಿಡೆಂಟರಾದ್ದರಿಂದಲೂ ಆ ಸ್ಕೂಲಿನ ಸೆಕ್ರೆಟರಿಯಾದ ನನಗೂ ಅಮಲ್ದಾರರಿಗೂ ಒಂದಿಷ್ಟು ಸಂಬಂಧವು ಇರಲೇಬೇಕಾಯಿತು. ಅಮಲ್ದಾರರು ಮುಸಲ್ಮಾನರು ; ಸ್ವಲ್ಪ ಮತಾಭಿಮಾನಿಗಳು, ಆದರೂ ತಮ್ಮ ಉದ್ಯೋಗಸ್ಥಾನದ ನಿಮಿತ್ತದಿಂದ ಅನೇಕರ ಪರಿಚಯವನ್ನಿಟ್ಟುಕೊಂಡು ಆದಷ್ಟುಮಟ್ಟಿಗೆ ಸರಳಭಾವ-ದಿಂದಲೇ ವರ್ತಿಸುತ್ತಿದ್ದರು. ಊರಿನ ಜನರೂ ಸ್ಕೂಲಿನಲ್ಲಿ ಓದುವದಕ್ಕೆ ತಮ್ಮ ಹುಡುಗರನ್ನು ಸೇರಿಸುವದಕ್ಕೆಂದು ಬರುವ ಹಳ್ಳಿಯವರೂ ಆಗಾಗ್ಗೆ ಬಂದು ಹೆಡ್‌ಮಾಸ್ಟರೆಂಬ ನಿಮಿತ್ತದಿಂದ ನನ್ನನ್ನು ಗೌರವದಿಂದ ಕಾಣುತ್ತಿದ್ದರು. ಹಳ್ಳಿಯವರು ಮೆಣಸು, ಅಡಿಕೆ - ಮುಂತಾದವುಗಳನ್ನು ಸ್ವಲ್ಪ ತಂದು ಗೌರವಾರ್ಥವಾಗಿ ಕೊಡುವದೂ ಉಂಟು.

## ಸ್ಕೂಲು :

ದಾವಣಗೆರೆಯ ಸ್ಕೂಲಿನಲ್ಲಿ ಸಾವಿರಕ್ಕೆ ಕಡಿಮೆಯಿಲ್ಲದೆ ಹುಡುಗರಿದ್ದರು. ಅಂಥ ಸ್ಕೂಲಿನಿಂದ ಬಂದ ನನಗೆ ನಲವತ್ತೈವತ್ತು ಹುಡುಗರಿಂದ ಸ್ಕೂಲು ಹೇಗೆ ಕಂಡಿರಬೇಡ ! ಬೆಳಗ್ಗೆ ಕಾವಳ ಬಿದ್ದಿರುವದೇ ಹೆಚ್ಚಾದ್ದರಿಂದ ಬೆಳಗಿನ ತರಗತಿಗಳಿಗೆ ಹುಡುಗರಾಗಲಿ ಉಪಾಧ್ಯಾಯರುಗಳಾಗಲಿ ಸಕಾಲಕ್ಕೆ ಬರುವದೇ ಕಡಿಮೆ. ಸ್ಕೂಲಿನಲ್ಲಿರುವಷ್ಟು ಕಾಲವೂ ಚಟುವಟಿಕೆಯಿಂದ ಪಾಠಗಳು ನಡೆಯುವದೂ ಕಡಿಮೆ. ಅಲ್ಲಿ ಹಿಂದೆ ಹೆಡ್‌ಮಾಸ್ಟರಾಗಿದ್ದ ನಾ.ಶಾ. ಎಂಬುವರು ಮಲೆನಾಡಿನ ಪ್ರಾಂತದ ಆ ಸ್ಕೂಲಿನ ಕೆಲಸವನ್ನು ಅಷ್ಟೇನೂ ಪ್ರಾಮುಖ್ಯವಾಗಿಟ್ಟುಕೊಂಡಿರಲಿಲ್ಲ. ಸ್ಕೂಲಿಗೆ ಬಂದು ಒಂದೆರಡು ಘಂಟೆ ಪಾಠ ಹೇಳುವದು, ಶಿರಸ್ತೆದಾರರು, ಡಾಕ್ಟರು - ಮುಂತಾದವರೊಡನೆ ಸಂಭಾಷಣೆ ನಡೆಯಿಸುವುದು, ಹಳ್ಳಿಗಳಿಗೆ ಹೋಗಿ ಕೆಲವು ಉಪನ್ಯಾಸಗಳು, ಕಿಂಡರ್ ಗಾರ್ಟನ್ ಅಥವಾ ಕೈಚಳಕದ ಕೆಲವು ವಿದ್ಯೆಗಳನ್ನು ಪ್ರದರ್ಶಿಸುವದು - ಹೀಗೆಲ್ಲ ವಿನೋದಕಾಲಕ್ಷೇಪಗಳನ್ನಿಟ್ಟು ಕೊಂಡಿದ್ದರು. ಸ್ಕೂಲಿನ

ಹುಡುಗರಾಗಲಿ, ಸಹೋಪಾಧ್ಯಾಯರಾಗಲಿ, ಅವರ ಸ್ನೇಹಿತರುಗಳಾಗಲಿ, ಅವರನ್ನು ಒಬ್ಬ ಸರಕಾರಿಯ ಉದ್ಯೋಗಸ್ಥರೆಂದು ಭಾವಿಸುವದಕ್ಕಿಂತಲೂ ಒಂದು ಬಗೆಯ ವಿದೂಷಕನ ಪಾತ್ರಕ್ಕೆ ತಕ್ಕವರೆಂದೇ ಎಣಿಸಿದ್ದಹಾಗೆ ಕಾಣಿಸುತ್ತಿತ್ತು. ಅಮಲ್ದಾರರು ತಮಗೆ ಇಷ್ಟಬಂದಾಗ, ಅವರನ್ನು ಕರೆಯಿಸಿ - 'ಇಂಥದ್ದೊಂದು ವಿಷಯಕ್ಕೆ ಉಪನ್ಯಾಸವನ್ನು ಮಾಡಿರಿ' ಎಂದು ಆಜ್ಞಾಪಿಸುತ್ತಿದ್ದರಂತೆ ; ಕೂಡಲೇ ಕೀಲುಕೊಟ್ಟ ಗೊಂಬೆಯಹಾಗೆ ಅವರು ಉಪನ್ಯಾಸವನ್ನು ಮಾಡುವದಕ್ಕೆ ಪ್ರಾರಂಭಿಸಿ ಸಾಕೆಂದಕೂಡಲೆ ನಿಲ್ಲಿಸಿ ಬಿಡುತ್ತಿದ್ದರಂತೆ. ಊರಿನಲ್ಲಿ ಓದಿದ ಹುಡಗರೇ ಕಡಿಮೆಯಾದ್ದರಿಂದಲೋ ಸ್ಕೂಲಿನ ಚಟುವಟಿಕೆಯು ಅಷ್ಟೇನೂ ಇಲ್ಲದ್ದರ ಫಲವಾಗಿಯೋ ಆ ವರ್ಷಕ್ಕೆ ಲೋಅರ್ ಸೆಕೆಂಡರಿ ಪರೀಕ್ಷೆಗೆ ಬರುವ ಹುಡುಗರೇ ಇರಲಿಲ್ಲ. ಆದ್ದರಿಂದ ನನ್ನ ನಿರುತ್ಸಾಹಕತೆಗೆ ಅದೂ ಉತ್ತೇಜಕವಾಗಿತ್ತು. ಸ್ಕೂಲಿನ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆಗೆಂದು ಬಂದ ಡಾಕ್ಟರು ಬಹಳ ಮಟ್ಟಿಗೆ ಹುಡುಗರ ಹೊಟ್ಟೆಯನ್ನು ಹಿಸುಕಿನೋಡಿ ಸ್ಪ್ಲೀನ್(ಜ್ವರಗೆಡ್ಡೆ) ಎಂದೇ ಬರೆದುಕೊಳ್ಳುತ್ತಿದ್ದರು ; ಹುಡುಗರ ಮುಖದ ಮೇಲೂ ಯಾವ ಕಳೆಯೂ ಇರಲಿಲ್ಲ. ಸ್ಕೂಲು ಕೆಲಸವು ಪ್ರಾರಂಭವಾದಾಗ ಮತ್ತು ಮುಗಿಯುವಾಗ ಐದು ನಿಮಿಷಗಳು ಸ್ಕೂಲು ಹುಡುಗರೆಲ್ಲ ಹಾಲಿನಲ್ಲಿ ಸೇರಿ ಕಟ್ಟಡದ ಆ ಮುಖ್ಯಭಾಗವು ದಾವಣಗೆರೆಯ ಸ್ಕೂಲಿನ ಯಾವದೊಂದು ತರಗತಿಯ ಕೋಣೆಯಲ್ಲೂ ಅರ್ಧಕ್ಕಿಂತ ಹೆಚ್ಚಾಗಿರಲಿಲ್ಲ. ಅದರಲ್ಲಿ ಎಲ್ಲರೂ ಸೇರಿ 'ಸ್ವಾಮಿ ದೇವನೆ ಲೋಕಪಾಲನೆ' ಎಂದು ಉಚ್ಚಸ್ವರದಿಂದ ಹಾಡುವಾಗ ಮಾತ್ರ ಸ್ಕೂಲು ಜೀವಂತವಾಗಿದೆ ಎಂಬ ಭಾವನೆಯು ಹೊರಗಿನವರಿಗೆ ಬರುವಂತಿತ್ತು!

## ಮನೆಯ ಹೆಂಗಸರನ್ನು ಊರಿಗೆ ಕಳುಹಿಸಿಕೊಟ್ಟದ್ದು :

ಕಳೂರು ಕಟ್ಟೆಯ ಜೀವನವು ನಮಗೆ ವಿಲಕ್ಷಣವಾಗಿ ತೋರಿತು. ಅಲ್ಲಿ ಯಾವ ಪದಾರ್ಥಗಳೂ ಅಂಗಡಿಯಲ್ಲಿ ಸಿಕ್ಕುತ್ತಲಿರಲಿಲ್ಲ. ತೊಗರಿಬೇಳೆಯಿಲ್ಲ, ರವೆಯಿಲ್ಲ, ಆಲೂಗಡ್ಡೆ ಸಿಕ್ಕುವದೇ ಕಷ್ಟ. ತರಕಾರಿ ಎಂಬುದು ಸೊನ್ನೆ, ಯಾವಾಗಲಾದರೊಮ್ಮೆ ಬೇರೆಕಡೆಯಿಂದ ಗಾಡಿಯ ಮೇಲೆ ಗುಳ್ಳದಕಾಯಿ ಬಂದರೆ ಜನರು ಉತ್ಸವನೋಡುವವರಂತೆ ನುಗ್ಗಿಬಂದು ಕೊಳ್ಳುತ್ತಿದ್ದರು. ಅಲ್ಲಿ ಬೆಲ್ಲವು ಗಟ್ಟಿಯಾದದ್ದು ಸಿಕ್ಕುತ್ತಲೇ ಇರಲಿಲ್ಲ. ಅದು ನೀರಾಗಿಯೇ ಇರುತ್ತಿದ್ದು ಅದನ್ನು ಸೌಟಿನಲ್ಲಿ ತುಂಬಿ ಅಡಿಗೆಗೆ ಹಾಕಬೇಕಾಗಿತ್ತು. ಇಂತಿಷ್ಟು ಕೋಲು ಸುತ್ತಳತೆಯ ಬೆಲ್ಲದ ಗಡಿಗೆಗೆ ಇಂತಿಷ್ಟು ಬೆಲೆ ಎಂದು ಗೊತ್ತುಮಾಡಿಕೊಳ್ಳುತ್ತಿದ್ದೆವು. ದಿನಸಿ ಪದಾರ್ಥಗಳನ್ನು ಅಂಗಡಿಯಿಂದ ತರಿಸಿಕೊಳ್ಳುತ್ತಿದ್ದ ನಮಗೆ ಇದೆಲ್ಲ ಬಹಳ

ವಿಚಿತ್ರವಾಗಿ ತೋರಿತು. ಲಕ್ಷ್ಮಕ್ಕನವರು ಈವೂರಲ್ಲಿ ಬಾಣಂತಿಯ ಪೋಷಣೆ ಆಗುವದು ಕಷ್ಟ. ಬ್ರಾಹ್ಮಣರು ಹೆಚ್ಚಿಲ್ಲದ ಅದರಲ್ಲಿಯೂ ನಮ್ಮವರು ಯಾರೂ ಇಲ್ಲದ, ಈ ಮೂಲೆಯ ಊರಿನಲ್ಲಿ ಕಾಲಹಾಕುವದಕ್ಕಿಂತ ನಾನು ಎಲ್ಲರನ್ನೂ ತರೀಕೆರೆಗೆ ನಿಮ್ಮ ಸಣ್ಣಣ್ಣನ ಮನೆಗೆ ಕರೆದು ಕೊಂಡುಹೋಗುತ್ತೇನೆ. ನೀನು ಅಲ್ಲಿಗೇ ಏನಾದರೂ ಖರ್ಚಿಗೆ ಕಳುಹಿಸಿದರಾಯಿತು, ಹೇಗಾದರೂ ಕೆಲವು ದಿನಗಳು ನೀನೇ ಮಾಡಿಕೊಂಡು ಅಥವಾ ಹೋಟಲಿನಲ್ಲಿದ್ದುಕೊಂಡು ಕಾಲಹಾಕು, ಎಂದು ಕಟ್ಟುನಿಟ್ಟಾಗಿ ಹೇಳಿದರು.

## ಕಳೂರು ಕಟ್ಟೆಯಿಂದ ತಾತ್ಕಾಲಿಕ ಬಿಡುಗಡೆ :

ಆವೂರಿನಲ್ಲಿ ಬಹುಕಾಲವಿರುವದಕ್ಕೆ ನನಗೆ ಹೇಗೂ ಮನಸ್ಸು ಬರಲಿಲ್ಲ. ನಾನು ಕೂಡಲೆ ನನಗೆ ಎರಡು ತಿಂಗಳು ರಜವನ್ನು ಕೊಡಬೇಕೆಂದು ಅರ್ಜಿಹಾಕಿಕೊಂಡೆನು. ಈಗ ಕೆಲಸದ ಮೇಲೆ ಹಾಜರಾಗಿ ಮತ್ತೆ ರಜಕ್ಕೆ ಬರೆದುಕೊಂಡನಲ್ಲ ಎಂದು ಮೇಲಿನ ಆಫೀಸರು ಬಹಳ ಕ್ರುದ್ಧರಾದರು. ನಾನು ರಜವು ಮಂಜೂರಾಯಿತೊ ಇಲ್ಲವೊ ಎಂಬುದನ್ನು ಕೂಡ ನಿರೀಕ್ಷಿಸದೆ ತಾ 28-11-1912 ರಲ್ಲಿ ಅಲ್ಲಿದ್ದ ಒಬ್ಬ ಅಸಿಸ್ಟೆಂಟುಮಾಸ್ಟರಿಗೆ ಚಾರ್ಜುಕೊಟ್ಟು ಹೊರಟುಬಿಟ್ಟೆನು. ಬಹಳಮಟ್ಟಿಗೆ ನಾನು ಅಕ್ಕನವರ ಜೊತೆಯಲ್ಲಿಯೇ ಹೊರಟಿರಬೇಕು. ನಾನು ಬಂದು ಇಪ್ಪತ್ತುದಿನಗಳು ಮಾತ್ರ ಆಗಿದ್ದವು ಅಥವಾ ಅಕ್ಕನವರನ್ನು ಮೊದಲು ಕಳುಹಿಸಿಕೊಟ್ಟು ಹಿಂದಿನಿಂದ ನಾನೊಬ್ಬನೇ ಹೊರಟೆನೋ ಹೇಗೋ ಈಗ ನೆನಪಿಲ್ಲ. ನನಗೆ ಆಗ್ಗೆ ಪ್ರಿವಿಲೀಜು ರಜಕ್ಕೆ ಹಕ್ಕು ಇದ್ದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಎರಡು ತಿಂಗಳು ಸಂಬಳವಿಲ್ಲದ ರಜವನ್ನು ಮಂಜೂರುಮಾಡಿದರು. ನಾನು ಅದನ್ನು ಮನಸ್ಸಿಗೆ ತಂದುಕೊಳ್ಳಲೇ ಇಲ್ಲ, ನೇರವಾಗಿ ಅರಸೀಕೆರೆಗೆ ಬಂದೆನು, ನನ್ನ ಹೆಂಡತಿ ಹೆಣ್ಣುಶಿಶುವನ್ನು ಹೆತ್ತು ಸುಮಾರು ಒಂದು ತಿಂಗಳಾಗುವ ಹೊತ್ತಿಗೆ ಅಕ್ಕನವರು ಜೊತೆ ಸಿಕ್ಕಿದ್ದರಿಂದ ಸುಬ್ರಹ್ಮಣ್ಯಕ್ಕೆ ಯಾತ್ರೆ ಹೊರಟುಬಿಟ್ಟರೆಂದು ತಿಳಿಯಿತು. ಆ ಕಾರಣದಿಂದ ಮನೆಯವರನ್ನು ಅರಸೀಕೆರೆಗೆ ಕರೆಯಿಸಿಕೊಂಡರಂತೆ. ಇಲ್ಲಿಂದ ಮುಂದಕ್ಕೆ ಕುರ್ತುಕೋಟಿಗೆ ಎರಡು ಮೂರು ಸಲ ಹೋಗಿಬಂದಿರಬೇಕು, ಆಗಿನಕಾಲದಲ್ಲಿ ನಡೆದ ವಿದ್ಯಮಾನಗಳ ಕಾಲಾನುಕ್ರಮವು ಈಗ್ಗೆ ನನಗೆ ಸರಿಯಾಗಿ ನೆನಪೇ ಇಲ್ಲ, ಚಿದಂಬರಯ್ಯನವರ ಪ್ರೇರಣೆಯಿಂದ ನಾನು ಈಗ ಸ್ವಾಮಿವಿವೇಕಾನಂದರ ಭಕ್ತಿಯೋಗವನ್ನು ಕನ್ನಡಿಸಿ ಸ್ವಲ್ಪ ಭಾಗವನ್ನು ಕಳುಹಿಸಿದೆನು. ಅದರ ಕೈಬರಹದ ಪುಸ್ತಕವನ್ನು, ಪ್ರಿಂಟಾದ ಭಾಗವನ್ನು ಹತ್ತಿರ ಇಟ್ಟುಕೊಂಡಿದ್ದು ಮುಂದಕ್ಕೆ ನಾನು ಎಲ್ಲಿದ್ದರೆ ಅಲ್ಲಿಂದ ಭಾಗಭಾಗವಾಗಿ ಬರೆದು

ಅದನ್ನು ಪೂರೈಸಿದೆನು. ಭಗವಚ್ಚರಣಸ್ತೋತ್ರವೆಂಬ ರಾಮೋದಾಸಿನ ಶಿಷ್ಯ ಬ್ರಹ್ಮಾನಂದರ ಸಂಸ್ಕೃತ ಕೃತಿಗೆ ಭಾವಾರ್ಥವನ್ನೂ ಕನ್ನಡ ವಿವರಣೆಯನ್ನೂ ಬರೆದು ಕೊಟ್ಟದ್ದು ಇದಾದ ಮೇಲೆಯೋ ಇದಕ್ಕಿಂತ ಮೊದಲೋ ಈಗ ನೆನಪಿಲ್ಲ. ಕುರ್ತುಕೋಟಿಯಲ್ಲಿ ಮಹಾಭಾಗವತರ ಮಗಳ ಮದುವೆ ಯಾವಾಗ ಆಯಿತೆಂಬುದು ನೆನಪಿಲ್ಲ, ಅದು ಬಹಳ ಸಂಭ್ರಮದಿಂದ ನಡೆಯಿತು. ಅಲ್ಲಿ ಸಭಾಪೂಜೆಗೆ ನಡೆದ ವಿದ್ವತ್ಸಭೆಗೆ ಕೃಷ್ಣಶಾಸ್ತ್ರಿಗಳು, ವಿರೂಪಾಕ್ಷಶಾಸ್ತ್ರಿಗಳು, ಮುಂತಾದವರು ಬಂದಿದ್ದರು. ವಿರೂಪಾಕ್ಷಶಾಸ್ತ್ರಿಗಳು ತರ್ಕಶಾಸ್ತ್ರದಲ್ಲಿ ಮಹಾ ವಿದ್ವಾಂಸರೆಂಬುದು ಆಗಲೇ ನನಗೆ ತಿಳಿದದ್ದು.

## ಚಿದಂಬರಯ್ಯನವರ ಪೆನ್ಷನ್ :

ನಾನು ಕುರ್ತಕೋಟಿಗೆ ಹೋಗೀ ಬಂದೂ ಮಾಡುತ್ತಿದ್ದ ಈ ಕಾಲದಲ್ಲಿ ಅನೇಕ ಘಟನೆಗಳು ನಡೆದವು. ಅವುಗಳಲ್ಲಿ ಯಾವಯಾವುವು ಯಾವಯಾವಾಗ ನಡೆದವೆಂಬುದನ್ನು ನಿಶ್ಚಿತವಾಗಿ ಹೇಳಲಾರೆ. ಒಂದು ಸಲ ನಾನು ಅಲ್ಲಿಗೆ ಹೋಗಿದ್ದಾಗ ಚಿದಂಬರಯ್ಯನವರು, (ಮಹಾರಾಜರ ಖೋಲಿಯಲ್ಲಿ, ಮಹಾಭಾಗವತರು, ಶ್ರೀ ಗೋಂದಾವಳಿಯ ಬ್ರಹ್ಮಚೈತನ್ಯ ಮಹಾರಾಜರ ಕೆಲವು ತೈಲಚಿತ್ರಗಳನ್ನು ಒಂದು ಮಂಚದ ಮೇಲೆ ಇಡಿಸಿ ಅದಕ್ಕೆ ಸಕಲೋಪಚಾರಗಳನ್ನು ಮಾಡಿಸುತ್ತಿದ್ದರು. ತಾವೂ ಅಲ್ಲಿ ಆಗಾಗ್ಗೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರಂತೆ. ಅಲ್ಲಿಯೇ ಮಹಾಭಾಗವತರು ಚಿದಂಬರಯ್ಯನವರಿಗೂ ನನಗೂ ಪ್ರಾಣಾಯಾಮ ಕ್ರಮವನ್ನೂ, ಲಯಚಿಂತನೆಯ ಪ್ರಕಾರವನ್ನೂ ತಿಳಿಸಿಕೊಟ್ಟಿದ್ದರು. ಚಿದಂಬರಯ್ಯನವರು ಈಗ ಅಲ್ಲಿ) ಬೆಳಗ್ಗೆ ಪ್ರಾಣಾಯಾಮಾದ್ಯನುಷ್ಠಾನವನ್ನು ಮಾಡುವದು, ಮಧ್ಯಾಹ್ನದ ಮೇಲೆ ಪರಮಾರ್ಥಪತ್ರಿಕೆಗೆ ಲೇಖನಗಳನ್ನು ಬರೆಯುವದು, ಗ್ರಂಥಓದುವದು, ಹೀಗೆ ಸತ್ಕಾಲಕ್ಷೇಪವನ್ನು ಮಾಡುತ್ತಿದ್ದರು. ಒಂದುದಿನ ಮಧ್ಯಾಹ್ನದಮೇಲೆ ಆ ಖೋಲಿಯಲ್ಲಿ ಕುಳಿತಿರುವಾಗ ಅವರ ಕೈಮೇಜಿನ ಮೇಲೆ ಒಂದು ಲಕ್ಕೋಟೆ ಬಿದ್ದಿದ್ದನ್ನು ಕಂಡೆನು. ಅದನ್ನು ಕಂಡು ಕುತೂಹಲದಿಂದ 'ಇದೇನು ?' ಎಂದು ಕೇಳಿದೆ. ಅವರು ಉದಾಸೀನತೆಯಿಂದ 'ಅದೆ ! ರಜ ಮುಂಜೂರು ಮಾಡಿದ್ದಿರಬೇಕು !' ಎಂದರು. ಅವರು ಲಕ್ಕೋಟೆಯನ್ನು ಒಡೆದುಕೂಡ ಇರಲಿಲ್ಲವಾದ್ದರಿಂದ ನಾನೇ ಅದನ್ನು ಒಡೆದು ನೋಡಿದೆ. 'ನೀವು ಪದೇ ಪದೇ ರಜಕ್ಕೆ ಬರೆದುಕೊಳ್ಳುತ್ತಲೇ ಇರುವುದರಿಂದ ಸರಕಾರಿ ಕೆಲಸಕ್ಕೆ ಬಹಳ ತೊಂದರೆಯಾಗಿದೆ. ನಿಮಗೆ ರಜವನ್ನು ಕೊಡುವದಕ್ಕೆ ಆಗುವದಿಲ್ಲವೆಂದು ಹೇಳಿದಮೇಲೂ ನೀವು ಗೈರುಹಾಜರಾಗಿರುವದರಿಂದ ನಿಮ್ಮನ್ನು ಕೆಲಸದಿಂದ ನಿವೃತ್ತಿ ಮಾಡಿದೆ' ಎಂಬರ್ಥಕ್ಕೆ ಅದರಲ್ಲಿ ಬರೆದಿತ್ತು !

ನನಗೆ ಅತ್ಯಂತ ಆಶ್ಚರ್ಯವಾಯಿತು. ಇದು ಸರಿಯಲ್ಲ ; ಕೂಡಲೆ ಇದಕ್ಕೊಂದು ಪ್ರತೀಕಾರ ಮಾಡಲೇಬೇಕು ಎಂದುಕೊಂಡು ಅವರ ಹೆಸರಿನಲ್ಲಿ ಒಂದು ಅರ್ಜಿಯನ್ನು ಬರೆದೆನು. 'ನಾನು ಸರಕಾರಿಯ ಕೆಲಸಕ್ಕೆ ಸೇರಿದ ಮೇಲೆ ಕ್ಯಾಜುಯಲ್ ರಜಗಳನ್ನು ಕೂಡ ಪೂರ್ತಿಯಾಗಿ ಯಾವ ವರ್ಷದಲ್ಲಿಯೂ ಉಪಯೋಗಿಸಿಕೊಂಡದ್ದಿಲ್ಲ. ಎಡೆಬಿಡದೆ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕೆಲಸ ಮಾಡಿದೇನೆಂಬುದಕ್ಕೆ ನನ್ನ ಮೇಲಧಿಕಾರಿಗಳಾಗಿದ್ದ ಯಾವ ಡಿಸ್ಟ್ರಿಕ್ಟು ಇನಸ್ಪೆಕ್ಟರನ್ನಾದರೂ ಕೇಳಿ ತಿಳಿದು ಕೊಳ್ಳಬಹುದಾಗಿದೆ. ಈಚೆಗೆ ನನಗೆ ಮನಸ್ಸಿಗೆ ವಿಶ್ರಾಂತಿ ಬೇಕೆಂಬ ಕಾರಣದಿಂದಲೇ ನಾನು ರಜವನ್ನು ಪಡೆದು ಇಲ್ಲಿ ಅದಕ್ಕೆ ತಕ್ಕ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾನೂ ನನ್ನ ಮಕ್ಕಳು ಎಲ್ಲರೂ ಸ್ಕೂಲು ಇಲಾಖೆಯಲ್ಲಿಯೇ ದುಡಿಯುತ್ತಿರುವವರು, ಈ ಉದ್ಯೋಗವನ್ನು ಬಿಟ್ಟು ನನಗೆ ಮತ್ತೆ ಯಾವ ಜೀವನೋಪಾಯವೂ ಇರುವದಿಲ್ಲ. ಇದೆಲ್ಲವನ್ನು ತಾವು ಮನದಂದುಕೊಂಡು ನನಗೆ ಪೆನ್ಷನ್ನಿಗೆ ಮಂಜೂರು ಮಾಡಿಸಿಕೊಡೋಣ-ವಾಗಬೇಕು. ದಾವಣಗೆರೆಯಲ್ಲಿ ಸ್ಕೂಲು ಮಾಸ್ಟರಾಗಿರುವ ನನ್ನ ಮಗ ಎಚ್. ವೆಂಕಟರಾಮಯ್ಯನು ಬಹುಕಾಲದಿಂದ ಪ್ರಮೋಷನ್ ಇಲ್ಲದೆ ಇರುತ್ತಾನೆ. ದಯವಿಟ್ಟು ಅವನಿಗೆ ಹೆಚ್ಚಿಗೆ ಪ್ರಮೋಷನ್ ಕೊಟ್ಟು ಕಾಪಾಡಬೇಕು. ತಾವು ಇಷ್ಟಪಟ್ಟರೆ ನಾನು 'ಮೆಡಿಕಲ್ ಸರ್ಟಿಫಿಕೇಟ್' - ವೈದ್ಯರ ಅಭಿಪ್ರಾಯ ಪತ್ರಿಕೆಯನ್ನು ತಂದುಕೊಡಲು ಸಿದ್ಧನಾಗಿರುತ್ತೇನೆ. ಅದರಮೇಲೆ ನನ್ನನ್ನು ರಿಟೈರು ಮಾಡಿಸಬೇಕೆಂದು ಬೇಡುತ್ತೇನೆ' ಎಂಬರ್ಥಕ್ಕೆ ಅರ್ಜಿ ಬರೆದುಕೊಟ್ಟೆನು. ಮುಂದೆ ಅವರನ್ನು ಡಾಕ್ಟರಿಂದ ಪರೀಕ್ಷೆಮಾಡಿಸಲಾಯಿತು ; ಅವರ ಸರ್ಟಿಫಿಕೇಟ್ ಮೇಲೆ ಅವರಿಗೆ ವಿಶ್ರಾಂತಿ ಅವಶ್ಯವೆಂದು ನಿಶ್ಚಯವಾಯಿತು. ಆಗಿನ ಇನ್ಸ್‌ಪೆಕ್ಟರು ಜನರಲ್ ಆಗಿದ್ದ ಶ್ಯಾಮರಾಯರು ದಯವಿಟ್ಟು ಅವರಿಗೆ ಪೆನ್ಷನ್ ಮಂಜೂರಾತಿ ಮಾಡಿಸಿ ಕೊಟ್ಟರು. ಈ ಘಟನೆಯು ಚಿದಂಬರಯ್ಯನವರ ಉತ್ಕಟವೈರಾಗ್ಯಗಳನ್ನೂ, ಅಧ್ಯಾತ್ಮಸಾಧನಮಗ್ನತೆಯನ್ನೂ ತಿಳಿಸುವದಕ್ಕೆ ಒಂದು ಉತ್ತಮ ಉದಾಹರಣೆ ಎಂಬುದರ ಮೇಲೆ ಇದನ್ನು ಇಲ್ಲಿ ಉಲ್ಲೇಖಿಸಿರುತ್ತೇನೆ.

ಚಿದಂಬರಯ್ಯನವರ ಹಿರಿಯ ಮಕ್ಕಳು ವೆಂಕಟರಾಮಯ್ಯನವರು ನನ್ನ ಜೊತೆಯಲ್ಲಿಯೇ ದಾವಣಗೆರೆಯಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿದ್ದರು. ಚಿದಂಬರಯ್ಯ-ನವರ ಪೆನ್ಷನ್ ಕಾಲದಲ್ಲಿಯೂ ಅವರು ಅಲ್ಲಿಯೇ ಇದ್ದರು. ಆಗ ಅವರಿಗೆ 20 ರೂ. ಸಂಬಳವಿತ್ತು. ಸರಕಾರದವರು ಅವರಿಗೆ 1915ರಲ್ಲಿ ಹೊಸಕೋಟೆಯ ಸ್ಕೂಲಿನ ಹೆಡ್‌ಮಾಸ್ಟರಾಗಿ 30ರೂಗಳ ಮೇಲೆ ವರ್ಗವನ್ನು ಮಾಡಿಕೊಟ್ಟರು.

## ಕುರ್ತುಕೋಟಿ, ಧಾರವಾಡ, ಬೊಂಬಾಯಿ:

ಈ ಸಮಯದಲ್ಲಿ ನಾನು ಮನೆಮಾರಿಲ್ಲದ ಫಕೀರನಾಗಿದ್ದೆನು. ಕೈಯಲ್ಲಿ ಕಾಸಿಲ್ಲ, ಎಲ್ಲಿ ನಿಲ್ಲಬೇಕೆಂಬುದು ಗೊತ್ತಿಲ್ಲ, ಏನು ಮಾಡಬೇಕೆಂಬುದು ನಿಯತವಿಲ್ಲ. ಕುರ್ತಕೋಟಿಗೆ ಹೋಗಿ ಬರುವ ಪದ್ಧತಿಯು ಬೆಳೆಯಿತು. ಮೊದಲು 2ತಿಂಗಳು ಮತ್ತೆ 1ತಿಂಗಳು ಮತ್ತೆ 3ತಿಂಗಳು ಹೀಗೆ ಹತ್ತು ತಿಂಗಳು ಹತ್ತೊಂಬತ್ತು ದಿನಗಳು ರಜವನ್ನು ತೆಗೆದುಕೊಂಡೆನು. ಕೈಯಲ್ಲಿ ಕಾಸಿಲ್ಲದೆ ಬರಿಯ ಶಂಖುಜಾಗಟೆಯ ಬಡದಾಸಯ್ಯನಾಗಿ ಅಲ್ಲಲ್ಲಿ ತಿರುಗುತ್ತಿದ್ದೆನು. ಈ ದಿನಗಳಲ್ಲಿಯೇ ಎಂದು ಕಾಣುತ್ತದೆ, ಮಹಾಭಾಗವತರ ಸೂಚನೆಯ ಪ್ರಕಾರ ಕುರ್ತಕೋಟಿಗೆ ಸಕುಟುಂಬವಾಗಿ ಹೋಗಿ ಅಲ್ಲಿ ಕೆಲವು ತಿಂಗಳುಗಳು ಇದ್ದೆನು. ಈ ನಡುವೆ ಕುರ್ತಕೋಟಿ, ಅರಸೀಕೆರೆ ಮುಂತಾದ ಸ್ಥಳಗಳಿಗೆ ಓಡಾಡುತ್ತಲೇ ಇದ್ದೆ. ಅರಸೀಕೆರೆಯಲ್ಲಿದ್ದಾಗ ಮದ್ರಾಸಿನಿಂದ ವಿಠ್ಠಲಶಾಸ್ತ್ರಿಗಳಿಂದ ಒಂದು ಕಾಗದವು ಬಂತು. ಅವರು ಹೊಳಲ್ಕೆರೆಯಿಂದ ಹೊರಟು ಹೋದ ಮೇಲೆ ಮೈಸೂರು ಕಾಲೇಜಿನಲ್ಲಿ ಸಾಹಿತ್ಯ ಪರೀಕ್ಷೆಗೆ ಮೂರು ವರ್ಷಗಳಕಾಲ ವ್ಯಾಸಂಗವನ್ನು ಮಾಡಿ ಯೂನಿವರ್ಸಿಟಿಗೆ ಸೇರಿದ ಸಂಸ್ಕೃತ ಕಾಲೇಜಿನಲ್ಲಿ ಓದುವದಕ್ಕೆ ಪ್ರಾರಂಭಿಸಿದ್ದರು. ಅಲ್ಲಿಯ ಉಪಾಧ್ಯಾಯರು ಮೀಮಾಂಸಾಶಾಸ್ತ್ರಾಭ್ಯಾಸವನ್ನು ಮಾಡುವಂತೆ ಒತ್ತಾಯ ಪಡಿಸುತ್ತಾರೆ ಏನು ಮಾಡಲಿ ? ಎಂದು ಕೇಳಿದರು. ಮೀಮಾಂಸಾಶಾಸ್ತ್ರಕ್ಕಿಂತಲೂ ವೇದಾಂತವನ್ನೇ ಓದುವದು ಉತ್ತಮವೆಂದು ಉತ್ತರವನ್ನು ಕೊಟ್ಟೆನು. **ಈ ಪತ್ರ ವ್ಯವಹಾರವು ತತ್ಕಾಲಕ್ಕೆ ಶಾಸ್ತ್ರಿಗಳಿಗೆ ಉಪಯುಕ್ತವಾಯಿತೆಂಬುದಿಷ್ಟೆ ಅಲ್ಲ; ಮುಂದೆ ರೂಪುಗೊಳ್ಳಲಿರುವ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆ ಶಾಸ್ತ್ರಿಗಳಿಂದ ಉಪಯೋಗವಾಗುವಂತೆ ಮಾಡಿತೆಂಬುದು ಮುಂದೆ ಗೊತ್ತಾಗುವದು Study of Sanskrit, An appeal for its Revival** (ಸಂಸ್ಕೃತಾಭ್ಯಾಸ, ಅದನ್ನು ಉಜ್ಜೀವನಗೊಳಿಸವದು) ಎಂಬ ಪುಸ್ತಕಗಳನ್ನು ಮಹಾಭಾಗವತರ ಪ್ರೇರಣೆಯಿಂದ ಬರೆದಿದ್ದೆನು. ಅದಕ್ಕೆ ಬೇಕಾದ ಆಧಾರಪುಸ್ತಕಗಳನ್ನು ಬಹಳ ಮಟ್ಟಿಗೆ ಅವರೇ ಒದಗಿಸಿಕೊಟ್ಟಿದ್ದರು. ಆ ಪುಸ್ತಕವನ್ನು ತಿದ್ದಿಸಿ ಪ್ರಕಟನೆಗೆ ಸಿದ್ಧಪಡಿಸಿ ತಮ್ಮದಾಗಿ ಮಾಡಿಕೊಂಡು ಅದನ್ನು ಹೊರಕ್ಕೆ ತರುವ ಯೋಚನೆ ಮಾಡಿದರು. ಧಾರವಾಡಕ್ಕೆ ಮಧ್ಯೆ ಕೆಲದಿನಗಳವರೆಗೆ ಯಾವದೋ ಕಾರಣಕ್ಕೆ ಹೋಗಿ ಕುರ್ತಕೋಟಿಗೆ ತಿರುಗಿ ಬಂದ ನೆನಪಿದೆ. ಅಲ್ಲಿ ಕೃಷ್ಣಶಾಸ್ತ್ರಿಗಳೊಬ್ಬರೇ ಇದ್ದರು. ಆ ಕಾಲದಲ್ಲಿ ಪಾಠಶಾಲೆಯಲ್ಲಿಯೇ ಇದ್ದು ಅನ್ನಸತ್ರದಲ್ಲಿ ವಿದ್ಯಾರ್ಥಿಗಳೊಡನೆ

ಊಟಮಾಡುತ್ತಿದ್ದರು. ಪಾಠಶಾಲೆಗೆ ಮುಖ್ಯೋಪಾಧ್ಯಾಯರಾಗಿದ್ದರೂ ತಮ್ಮ ಕೆಲಸಕ್ಕಾಗಿ ಯಾವ ಸಂಬಳವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಶಾಂತಸ್ವಭಾವದಿಂದ ಇದ್ದು ಪಾಂಡಿತ್ಯ ಪ್ರಕಟನೆಯನ್ನು ಮಾಡದೆ ಅಪರಿಗ್ರಹದಿಂದ ಸಾಧುಜೀವನವನ್ನು ಮಾಡುತ್ತಿದ್ದ ಅವರ ಧರ್ಮಜ್ಞಾನವೈರಾಗ್ಯಗಳ ಪ್ರಭಾವವು ನನ್ನ ಮೇಲೆ ತಕ್ಕ ಮಟ್ಟಿಗೆ ಆಗಿತ್ತು. ಏನಾದರೂ ವ್ಯವಹಾರದಲ್ಲಿ ಅಥವಾ ಸಾಧನೆಯಲ್ಲಿ ಸಂಶಯಗಳು ಬಂದರೆ ಅವರಿಂದ ತಿಳಿದುಕೊಳ್ಳೋಣವೆನಿಸುತ್ತಿತ್ತು. ಕುರ್ತಕೋಟಿಗೆ ನಾವು ಬಂದಬಳಿಕ ಬೊಂಬಾಯಿಗೆ ಹೋಗುವ ಪ್ರಸಂಗವು ಬಂತು. **Study of Sanskrit** ಗ್ರಂಥವನ್ನು ಆ ಕಾಲದಲ್ಲಿ ಗವರ್ನರ್ ಆಗಿದ್ದ ವಿಲಿಂಗ್ಟನ್ ಎಂಬಾತನಿಗೆ ಅರ್ಪಣೆಮಾಡುವ ನಿಮಿತ್ತದಿಂದ ಆತನ ಅನುಮತಿ ಕೇಳುವದಕ್ಕೆ ಹೋದೆವೆಂದು ತೋರುತ್ತದೆ. ದಾರಿಯಲ್ಲಿ ಮಹಾಭಾಗವತರು ನನ್ನ ಅನು-ತನು (ಅನು - ಮನಸ್ಸಿನ ; ತನು-ಶರೀರದ ಸ್ಥಿತಿ) ನೋಡಿದ್ದು, ಬೊಂಬಾಯಿಯಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿಯ ಲೈಬ್ರರಿ ಮುಂತಾದವುಗಳ ದೃಶ್ಯವನ್ನು ತೋರಿಸಿದ್ದು, ಅಲ್ಲಲ್ಲಿ ತಮ್ಮ ಸ್ನೇಹಿತರುಗಳಿಗೆ ನನ್ನ ಪರಿಚಯಮಾಡಿಕೊಟ್ಟದ್ದು ಇವೇ ಮುಂತಾದವುಗಳು ಚಿರಸ್ಮರಣೀಯವಾಗಿರುತ್ತವೆ. ನಾನು ಬೊಂಬಾಯಿಯಲ್ಲಿದ್ದಾಗ ನಮ್ಮ ಅಣ್ಣಂದಿರು ತರೀಕೆರೆಯಿಂದ ಒಂದು ಕಾಗದ ಬರೆದದ್ದು ಹೇಗೋ ನನಗೆ ತಲುಪಿತು 'ನೀನು ಹೀಗೆ ಬೇಜವಾಬ್ದಾರಿಯಿಂದ ಅಲ್ಲಲ್ಲಿ ತಿರುಗುತ್ತಿರಬಾರದು, ಕುಟುಂಬಪೋಷಣೆ ಮಾಡುವುದು ನಿನ್ನ ಕರ್ತವ್ಯ, ಇಂಥದಿನ ತೀ|| ರವರ ಶ್ರಾದ್ಧಬರುತ್ತದೆ ; ಮಾಡದೆಬಿಟ್ಟೀಯೆ' ಎಂದು ಬರೆದಿದ್ದರು. ನನಗೆ ಆ ಕಾಗದವನ್ನು ನೋಡುವದಕ್ಕೂ ಅವಕಾಶವಿರಲಿಲ್ಲ; ಅಷ್ಟು ಓಡಾಟ ! ಕುರ್ತಕೋಟಿಗೆ ಬಂದಾಗ ಅದನ್ನು ನೋಡಲು ಶ್ರಾದ್ಧಕಾಲವು ಮೀರಿ ಹೋಗಿತ್ತು ; ಕೂಡಲೆ ಧಾರವಾಡಕ್ಕೆ ಹೋಗಿ ಕೃಷ್ಣಶಾಸ್ತ್ರಿಗಳವರಲ್ಲಿ ಆಪ್ತಾಲೋಚನೆ ಮಾಡಿಕೊಂಡು ಹರಿಹರಕ್ಕೆ ಬಂದು ಇಳಿದೆನು. ಅಲ್ಲಿ ಶಾಸ್ತ್ರಿಗಳು ಹೇಳಿದ್ದಂತೆ ಪ್ರಾಯಶ್ಚಿತ್ತಪೂರ್ವಕವಾಗಿ ಶ್ರಾದ್ಧಾಚರಣೆ ಮಾಡಿಕೊಂಡು ಅರಸೀಕೆರೆಗೆ ಹಿಂತಿರುಗಿದೆನು.

'ಬೆಂಗಳೂರಲ್ಲಿ ನಡೆದ ಕೃಷ್ಣಸ್ವಾಮಿಅಯ್ಯರವರ ಶಂಕರ ಜಯಂತಿಯ ಭಾಷಣದ ವಿಚಾರ ಇಲ್ಲಿಗೆ ಬರಬೇಕೆಂದು ಕಾಣುತ್ತದೆ. ಈ ಭಾಷಣವು ಶಂಕರರ ವಿಚಾರವಾಗಿದ್ದಂತೆಯೂ, ಭಾಗವತರಿಗೂ, ಅವರ ಅಭಿಪ್ರಾಯಕ್ಕೂ ಏನೋ ಸ್ವಲ್ಪ ತಾರತಮ್ಯವಿತ್ತೆಂದೂ, ಶಿಷ್ಯರುಗಳು ಕೃ. ಅಯ್ಯರನ್ನು **Criticise** ಮಾಡಿದಂತೆಯೂ ನೆನಪು, ಏನೆಂದು ಮರೆತುಹೋಗಿದೆ.'

## ತಿರುವಾಡಿಮೊದಲಾದ ಕ್ಷೇತ್ರಗಳಿಗೆ:

ಈ ಕಾಲಕ್ಕೆ ಮಹಾಭಾಗವತರಿಗೆ ತಿರುವಾಡಿಯಲ್ಲಿ ನಡೆದ ಒಂದು ಧಾರ್ಮಿಕ ವಿಚಾರದ ಪರಿಷತ್ತಿಗೆ ಆಹ್ವಾನವು ಬಂದಿತ್ತು. ಅವರು, ಚಿದಂಬರಯ್ಯನವರು, ಅಣ್ಣಪ್ಪನವರು, ಮೂಡಲ್ಲಪ್ಪನವರು, ರಂಗರಾಯರು, ಅವರ ತಂದೆ ರಿ|| ಅ|| ಕಮಿಷನರ್ ಟಿ. ರಾಮಚಂದ್ರರಾಯರು ಮುಂತಾದ ಶಿಷ್ಯರೊಡನೆ ಹೊರಟುಬಂದು ನನ್ನನ್ನು ತಮ್ಮ ಗುಂಪಿಗೆ ಸೇರಿಸಿಕೊಂಡರು. ನಾವುಗಳೆಲ್ಲರೂ ಬೆಂಗಳೂರು ಮಾರ್ಗವಾಗಿ ತಿರುವಾಡಿಗೆ ಹೋದೆವು. ಬೆಂಗಳೂರಿನಲ್ಲಿಯೋ ಅಥವಾ ಮತ್ತೊಂದು ಸ್ಟೇಷನ್ನಿನಲ್ಲಿಯೋ ಕಾಣೆ ಒಬ್ಬ ಜಾತ್ಯಂಧ ವೈಯ್ಯಾಕರಣ ಬ್ರಾಹ್ಮಣನು ನಮಗೆ ಗಂಟುಬಿದ್ದನು. ಭಾಗವತರು ಅವನನ್ನು ಕರುಣೆಯಿಂದ ನಮ್ಮ ಗುಂಪಿಗೆ ಸೇರಿಸಿಕೊಂಡರು. ಆತನು ಸಮಯ ಬಂದಾಗಲೆಲ್ಲ ವ್ಯಾಕರಣ ಮಹಾ-ಭಾಷ್ಯಾದಿಗಳಿಂದ ವಾಕ್ಯಗಳನ್ನು ಉದಾಹರಿಸುತ್ತಿದ್ದನು. 'ಹೀನಾನ್ ಧುನೋತಿ ಇತಿ ಹಿಂದುಃ' 'ಕಾಮಯತೇ ಇತಿ ಕನ್ಯಾ' ಎಂದು ಮುಂತಾಗಿ ಕೇಳಿದ ಪ್ರತಿಯೊಂದು ಶಬ್ದಕ್ಕೂ ವ್ಯುತ್ಪತ್ತಿಯನ್ನು ಕಲ್ಪಿಸಿ ಎಲ್ಲರನ್ನೂ ವಿನೋದಗೊಳಿಸುತ್ತಿದ್ದನು. ಎಲ್ಲರ ಖರ್ಚುವೆಚ್ಚಗಳೂ ಅವರದೇ (ಮಹಾಭಾಗವತರದೇ) ಪ್ರಾಯಶಃ. ರಾಮಚಂದ್ರ-ರಾಯರು ಮಾತ್ರ ತಮ್ಮ ಖರ್ಚುವೆಚ್ಚವನ್ನು ತಾವೇ ವಹಿಸಿಕೊಂಡಿರಬೇಕು. ತಿರುವಾಡಿಗೆ ನಾವು ಹೋಗುವ ಹೊತ್ತಿಗೆ ಪರಿಷತ್ತು ಕೂಡಿಬಿಟ್ಟಿತ್ತು. ಮಹಾಭಾಗವತರು ಮೂರುನಾಲ್ಕು ಶಿಷ್ಯರೊಡನೆ ನೇರಾಗಿ ಪರಿಷತ್ತಿಗೆ ಹೋದರು. ಕೆಲವರು ಮಾತ್ರ ಇಳಿಯುವ ಸ್ಥಳದ ಏರ್ಪಾಡಿಗೆ ಹೋದರೆಂದು ಕಾಣುತ್ತದೆ. ನಾವೆಲ್ಲರೂ ಊಟವಿಲ್ಲದೆ ಹಸಿದಿದ್ದೆವು. ಆದರೆ ಅವರಿಗೆ ವಿದ್ಯೆಯ ವಿಷಯಕ್ಕೆ ಇದ್ದ ಆಸಕ್ತಿಯಲ್ಲಿ ಹಸಿವು ಬಾಯಾರಿಕೆಗಳ ಲೆಕ್ಕವೇ ಇರಲಿಲ್ಲ. ಭಾಗವತರ ಹಿಂದೆ ಶಿಷ್ಯರು ಭಜನೆ ಮಾಡುತ್ತಿದ್ದರು. ಜನರು ಅವರಿಗೆ ಗೌರವಪೂರ್ವಕವಾಗಿ ಹಾದಿ ಬಿಟ್ಟರು. ನಾವುಗಳು ನೆಟ್ಟಗೆ ಅಧ್ಯಕ್ಷರು ಕುಳಿತಿದ್ದ ಸ್ಥಾನದ ಸಮೀಪಕ್ಕೆ ಹೋದೆವು. ಮಹಾಭಾಗವತರು ಒಂದೆರಡು ಸಲ ಮಾತನಾಡುವದಕ್ಕೆ ಹವಣಿಸಿದರು, ಆದರೆ ಕಾರ್ಯದರ್ಶಿಗಳಾಗಿದ್ದವರು ಈಗ ಮಾತನಾಡುವದಕ್ಕೆ ಹೊತ್ತಾಗಿದೆ ಎಂದರು. ಸಭೆಯಲ್ಲಿ ಪ್ರಾರಂಭಭಾಷಣಗಳು ಮಾತ್ರ ನಡೆದವೆಂದು ಕಾಣುತ್ತದೆ. ಸಾಯಂಕಾಲವಾಗುತ್ತಲೂ ನಾವುಗಳೆಲ್ಲರೂ ಕಾವೇರಿಯಲ್ಲಿ ಸ್ನಾನ ಮಾಡಿಕೊಂಡು ಇಳಿದುಕೊಳ್ಳಬೇಕಾಗಿದ್ದ ಛತ್ರಕ್ಕೆ ಬಂದೆವು. ಅದೊಂದು ಭವ್ಯವಾದ ಕಟ್ಟಡ, ಆವೂರಿನಲ್ಲಿ ಇನ್ನೂ ಕೆಲವು ಛತ್ರಗಳಿವೆಯೆಂದು ಕಾಣುತ್ತದೆ. ನಾವು ಆ ದಿನ ಏನೋ ಫಲಾಹಾರವನ್ನು ಮಾಡಿಕೊಂಡು ಮಲಗಿಕೊಂಡೆವು. ಬೆಳಗ್ಗೆ ಎದ್ದಕೂಡಲೆ

ಮಹಾಭಾಗವತರ ಅಪ್ಪಣೆಯಂತೆ ಸ್ನಾನಕ್ಕೂ ಅಡಿಗೆಗೂ ಬೇಕಾದ ಕೆಲವು ಅಲ್ಯುಮಿನಿಯಂ ಮತ್ತು ಮೃದ್ಭಾಂಡಗಳನ್ನು ತರಿಸಿದೆವು. ಛತ್ರದವನನ್ನು ನಮ್ಮ ಅಡಿಗೆಗೇ ಉಪಯೋಗಿಸಿಕೊಂಡೆವು. ಅಲ್ಲಿಗೆ ಬಂದಿದ್ದ ಇನ್ನೂ ಒಬ್ಬಿಬ್ಬರನ್ನು ಮಹಾಭಾಗವತರು ಊಟಕ್ಕೆ ಎಬ್ಬಿಸಿದರು. ಈಗ ನಾವು ಊರಲ್ಲಿಯೇ ಇದ್ದೇವೆಂಬ ಭಾವನೆಯಾಯಿತು.

## ತಿರುವಾಡಿಸಭೆಯಲ್ಲಿ ಭಾಷಣ :

ಬೆಳಗ್ಗೆ ಪರಿಷತ್ತಿನ ಕಾರ್ಯದರ್ಶಿಗಳು ನಮ್ಮ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವದಕ್ಕೆ ಬಂದರು. 'ಅಭ್ಯಾಗತರಾಗಿದ್ದ ಪಂಡಿತರುಗಳಿಗೂ ಅವರ ಪರಿವಾರಕ್ಕೆ ಬೇಕಾದ ಲವಾಜಮೆ ಕೊಡುವ ಏರ್ಪಾಡು ಇಂತಲ್ಲಿ ಮಾಡಿದೆ, ನಿಮಗೆ ಮತ್ತೇನಾದರೂ ಸೌಕರ್ಯಗಳು ಬೇಕಾಗಿದ್ದರೆ ತಿಳಿಸಿ' ಎಂದು ಕೇಳಿದರು. 'ನಮ್ಮಲ್ಲಿ ಎಲ್ಲಾ ಸಿದ್ಧವಿದೆ ; ನಮಗೆ ಯಾವ ಸೌಕರ್ಯಗಳೂ ಬೇಕಿಲ್ಲ' ಎಂಬ ಉತ್ತರವನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ನಮ್ಮ ಗುಂಪಿನಲ್ಲಿ ಜನಗಳು ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಿಕೊಂಡು ಗುಂಪಾಗಿ ಕುಳಿತು ತತ್ತ್ವವಿಚಾರ ಮಾಡುತ್ತಿದ್ದರು. ನಮ್ಮ ಜೊತೆಯಲ್ಲಿ ರಿಟೈರ್ಡ್ ಅಸಿಸ್ಟೆಂಟು ಕಮಿಷನರೊಬ್ಬರು ಇದಾರೆಂದೂ, ಮಹಾಭಾಗವತರು ಕುರ್ತಕೋಟಿಯ ವಕೀಲರಾದ ಪಾಟೀಲರೆಂದೂ, ಶ್ರೀಮಂತಮನೆತನದವರೆಂದೂ, ಮಹಾವಿದ್ವಾಂಸರೆಂದೂ ತಿಳಿದು ಆ ಸೆಕ್ರೆಟರಿಗಳು ಸ್ವಲ್ಪ ಚಕಿತರಾದರು. ಮಹಾಭಾಗವತರು ಆ ದಿನ ಸ್ವಲ್ಪ ಅಸಮಾಧಾನದಿಂದ ಕೂಡಿದ್ದರು. 'ಬಂದಿರುವ ವಿದ್ವಾಂಸರೂ ವೈದಿಕರೂ ಆದ ಬ್ರಾಹ್ಮಣರ ಪರಿಷತ್ತನ್ನೂ ಕೂಡಿಸಿ ಅವರನ್ನೆಲ್ಲ ಕೆಳಗಡೆಯ ಆಸನದಲ್ಲಿ ಕುಳ್ಳಿರಿಸುವದು ಲೌಕಿಕರಾದವರು ಧರ್ಮಪರಿಷತ್ತಿನ ಅಧ್ಯಕ್ಷರೆಂದು ಉಚ್ಚಾಸನದಲ್ಲಿ ಕುಳಿತುಕೊಳ್ಳುವದು ಎಂದಿಗೂ ನಮ್ಮ ದೇಶದ ಮರ್ಯಾದೆಗೆ ತಕ್ಕದಲ್ಲ. ಈ ಪರಿಷತ್ತು ಮುಗಿದಮೇಲೆ ಎಲ್ಲ ಸಭಿಕರಿಗೂ ಆಹ್ವಾನಕೊಟ್ಟು ಮತ್ತೊಂದು ಪರಿಷತ್ತನ್ನು ಇಲ್ಲಿಯೇ ಸೇರಿಸಿ ಧರ್ಮಶಾಸ್ತ್ರವಿಚಾರದ ಪರಿಷತ್ತು ಹೇಗಿರಬೇಕೆಂಬುದನ್ನು ಎಲ್ಲರಿಗೂ ನಿದರ್ಶನ ಮಾಡಿತೋರಿಸಲಿಕ್ಕೇ ಬೇಕು' ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ರಾಮಚಂದ್ರರಾಯರು ಗಾಬರಿಯಿಂದ ಪರಿಷತ್ತಿನ ಅಧ್ಯಕ್ಷರಾದ ವಿ.ಪಿ.ಮಾಧವರಾಯರನ್ನು ಕಂಡು ಮಹಾಭಾಗತವರು ಗೋಂದಾವಳಿಯ ಬ್ರಹ್ಮಚೈತನ್ಯರ ಶಿಷ್ಯರೆಂದೂ, ಮಹಾಪ್ರಭಾವಶಾಲಿಗಳೆಂದೂ ಮುಂತಾಗಿ ಅವರ ಪರಿಚಯವನ್ನು ತಿಳಿಸಿ ಮುನ್ನಿನ ದಿನ ಅವರಿಗೆ ಭಾಷಣಕ್ಕೆ ಅವಕಾಶವನ್ನು ಕೊಡದೇ ಇದ್ದದ್ದು ಸರಿಯಲ್ಲ! ಈಗಲಾದರೂ ಅವರಿಗೆ ಒಂದು ಸ್ಥಾನವನ್ನು ಕಲ್ಪಿಸಿಕೊಡುವದು

ಯೋಗ್ಯವಾಗಿದೆ ಎಂದು ಮಹಾಭಾಗವತರ ಮನೋಗತವನ್ನು ಸ್ವಲ್ಪ ಮಟ್ಟಿಗೆ ಸೂಚಿಸಿ ತಿಳಿಸಿದರಂತೆ. ಮಾಧವರಾಯರು ಪರಿಷತ್ತು ಸೇರುವ ಮುಂಚೆಯೇ ನಾವಿದ್ದಲ್ಲಿಗೆ ಬಂದು ಮಹಾಭಾಗವತರನ್ನು ವಿನಯದಿಂದ ಬರಬೇಕೆಂದು ಕೇಳಿಕೊಂಡರು. 'ನನ್ನ ಭಾಷಣವು ನಿನ್ನೆ ಇದ್ದದ್ದರಿಂದ ನಾನು ನೇರಾಗಿ ಪ್ರಯಾಣದ ಆಯಾಸವನ್ನು ಲೆಕ್ಕಿಸದೆ ಪರಿಷತ್ತಿಗೆ ಬಂದಿದ್ದೆ ; ನಿಮ್ಮ ಕಾರ್ಯದರ್ಶಿಗಳಿಗೆ ನನ್ನ ಭಾಷಣವು ಅವಶ್ಯವೆಂದು ತೋರಲಿಲ್ಲವಾದ್ದರಿಂದ ಅದು ನಿಂತುಹೋಯಿತು. ಈಗ ನನಗೆ ಪರಿಷತ್ತಿನಲ್ಲಿ ಕೆಲಸವೇನಿದೆ' ಎಂದು ಸ್ವಲ್ಪ ನಿಷ್ಠುರವಾಗಿಯೇ ಮಹಾಭಾಗವತರು ಉತ್ತರ ಕೊಟ್ಟರು. ಮಾಧವರಾಯರು 'ಇಂಥ ಸಭೆಗಳಲ್ಲಿ ತೋರುವ ಅನೌಚಿತ್ಯಗಳನ್ನು ತಿದ್ದುವದಕ್ಕೇ ತಮ್ಮಂಥವರು ಬರಬೇಕು; ಬನ್ನಿ, ತಾವು ಇಲ್ಲಿದ್ದು ಪರಿಷತ್ತಿಗೆ ಬರಲಿಲ್ಲವೆಂಬುದು ಸರಿಯಾಗುವದಿಲ್ಲ' ಎಂದು ಮುಂತಾಗಿ ಉಪಚಾರೋಕ್ತಿಗಳನ್ನು ಹೇಳಿ ಬಲವಂತದಿಂದ ಅವರನ್ನು ಎಬ್ಬಿಸಿಕೊಂಡು ಹೊರಟುಹೋದರು.

ಆ ದಿನ ಪರಿಷತ್ತಿನ ಸದಸ್ಯರುಗಳಿಗೆಲ್ಲ ಭಾಷಣಾಂತ್ಯದಲ್ಲಿ ಒಂದು ಪ್ರಶ್ನೆಪತ್ರಿಕೆಯನ್ನು ಅಚ್ಚುಮಾಡಿಸಿ ಹಂಚಲಾಗಿತ್ತು. ಅದರಲ್ಲಿ ಧರ್ಮಶಾಸ್ತ್ರಗಳಿಗೆ ಅರ್ಥವನ್ನು ಮಾಡುವಾಗ ಅನುಸರಿಸಬೇಕಾದ ಮೀಮಾಂಸಾತತ್ತ್ವಗಳನ್ನು ಕುರಿತ ಪ್ರಶ್ನೆಗಳೂ, ಪ್ರೌಢವಿವಾಹವು ಶಾಸ್ತ್ರಸಂಮತವೆ, ಅಲ್ಲವೆ ?-ಮುಂತಾದ ಕೆಲವು ಸುಧಾರಕರ ಪ್ರಶ್ನೆಗಳೂ ಇದ್ದವು. ಎಲ್ಲಾ ವಿದ್ವಾಂಸರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದುಕೊಟ್ಟರು - ಮಹಾಭಾಗವತರ ಮುಂದೆ ಬಂದ ಪತ್ರಿಕೆಗೆ ಅವರೇನೂ ಉತ್ತರಗಳನ್ನು ಬರೆಯಲಿಲ್ಲ, ಏಕೆಂದು ಕೇಳುವ ಎದೆ ಯಾರಿಗೂ ಇರಲಿಲ್ಲ, ಕೊನೆಗೆ ಮಾಧವರಾಯರ ಅಭಿಪ್ರಾಯವನ್ನು ಅನುಕರಿಸಿ ಕಾರ್ಯದರ್ಶಿಗಳಾದ ನಾರಾಯಣಅಯ್ಯರು ಮಹಾಭಾಗವತರನ್ನು, ತಮ್ಮ ಅಭಿಪ್ರಾಯವನ್ನು ಕುರಿತು ಯಾವುದಾದರೊಂದು ಭಾಷಣವನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡರು. 'ಈಗ ಹೊತ್ತಾಗಿದೆ, ಬೇಡ' ಎಂದು ಮಹಾಭಾಗವತರು ಹೇಳಿದರೂ ಒತ್ತಾಯಪಡಿಸಿದ ಮೇಲೆ ಆಶುಕವಿತೆಯ ಪ್ರೌಢಿಮೆಯುಳ್ಳ ಮಹಾಭಾಗವತರು ಉತ್ತರರಾಮಚರಿತ್ರೆಯಲ್ಲಿ ಶ್ರೀರಾಮನ ಬಾಯಿಂದ ಬಂದಿರುವ ಒಂದಾನೊಂದು ಪದ್ಯವನ್ನು ಅನುಕರಿಸಿ, ಅದೇ ವೃತ್ತದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವ ವಾಕ್ಯವನ್ನು ಪ್ರಸ್ತಾವನೆಯಾಗಿ ಉಪಯೋಗಿಸಿದರು. 'ಈಗ ಸದಸ್ಯರುಗಳೆಲ್ಲರೂ ಭಾಷಣಗಳನ್ನು ಮಾಡಿ ಆಯಾಸಪಟ್ಟಿರುತ್ತಾರೆ ; ಅವರನ್ನು ಭಾಷಣದಿಂದ ಮನನೋಯಿಸುವ ಇಚ್ಛೆಯೂ ನನಗೆ ಇಲ್ಲ. ಸಭಾಧ್ಯಕ್ಷರ

ನಿರ್ಬಂಧವನ್ನು ಮೀರಲಾರೆ. ಈಗ ಏನು ಮಾಡಲಿ ? ಎಲೆ ನಾಲಿಗೆಯೇ, ಅನೇಕ ಭಾಷಣಗಳನ್ನು ಮಾಡಿದ ಚಾಪಲ್ಯವುಳ್ಳ ನನ್ನ ನಾಲಗೆಯಲ್ಲವೆ, ನೀನು ? ಹೇಗಾದರೂ ಏನಾದರೊಂದು ಹೇಳಿಬಿಡು !' ಎಂಬರ್ಥವು ಆ ಶ್ಲೋಕದಲ್ಲಿತ್ತು. ಜನರು ಕವಿತೆಯ ಮಾಧುರ್ಯಕ್ಕೆ ಬೆರಗಾದರು. ಮುಂದೆ ಭಾಗವತರು ನಮ್ಮ ದೇಶದ ಸಂಸ್ಕೃತಿಯ ಮಹಿಮೆಯನ್ನು, ಸಂಸ್ಕೃತಭಾಷೆಯ ಹೆಚ್ಚುಗಾರಿಕೆಯನ್ನೂ, ಧರ್ಮಶಾಸ್ತ್ರಗಳ ಉಪಯೋಗವನ್ನೂ ಕುರಿತು ಅಸ್ಖಲಿತವಾದ ವಾಣಿಯಿಂದ ಮಾಡಿದ ಸುಮಾರು ಅರ್ಧಮುಕ್ಕಾಲು ಘಂಟೆಯ ಭಾಷಣವು ಪಂಡಿತರಿಂದ 'ಸಾಧು ! ಸಾಧು !' ಎಂಬ ಘೋಷವನ್ನು ಹೊರಡಿಸುತ್ತಿತ್ತು. ಮಾಧವರಾಯರು 'ಈಗ ಏನು ಹೇಳುತ್ತಿದ್ದಾರೆ ?' ಎಂದು ಆಗಾಗ್ಗೆ ತಮಿಳಿನಲ್ಲಿ ಹತ್ತಿರವಿದ್ದ ಸಂಸ್ಕೃತ ಪಂಡಿತರೊಬ್ಬರನ್ನು ಕೇಳುತ್ತಿದ್ದರು. ಭಾಷಣಾಂತ್ಯದಲ್ಲಿ ನಾನಾದೇಶಗಳಿಂದ ಬಂದಿದ್ದ ವಿದ್ವಾಂಸರುಗಳು ಮಹಾಭಾಗವತರನ್ನು ಸುತ್ತುಗಟ್ಟಿ ಅಭಿನಂದನಾಸೂಚಕವಾದ ಮಾತುಗಳನ್ನಾಡುತ್ತಾ ನಮ್ಮ ಛತ್ರದವರೆಗೂ ಬಂದು ತಮ್ಮ ಸಂತೋಷವನ್ನು ಸೂಚಿಸಿ ಅವರನ್ನು ಗೌರವಿಸಿದರು. ಬೆಳಗ್ಗೆ ಹಿಂದು ಮುಂತಾದ ಇಂಗ್ಲೀಷು ವೃತ್ತಪತ್ರಿಕೆಗಳಲ್ಲಿ ದಪ್ಪ ದಪ್ಪ ಅಕ್ಷರದ ತಲೆಬರಹಗಳಿಂದ **"A Stirring Speech !"** (ಉತ್ತೇಜಕ ಭಾಷಣ) ಎಂದು ಮುಂತಾಗಿ ಹೊಗಳಿ ಮಹಾಭಾಗವತರ ಭಾಷಣವನ್ನು ಹಾಕಿದ್ದವು. ತಿರುವಾಡಿಯ ಪರಿಷತ್ತು ಸರ್ವರಿಗೂ ಹರ್ಷಾಂತವಾದ ಒಂದು ಏಕಾಂಕ ನಾಟಕವಾಯಿತು. ತಿರುವಾಡಿಯು ಕಾವೇರಿಯ ದಡದ ಮೇಲೆ ಇದೆ. ಅದು ತಂಜಾವೂರು ಸ್ಟೇಷನ್ನಿಗೆ ಏಳು ಮೈಲು ಉತ್ತರವಾಗುತ್ತದೆಯಂತೆ. ತಿರುವಾಡಿಯಲ್ಲಿ ಸೂರ್ಯಪುಷ್ಕರಣಿ, ಗಂಗಾ, ಅಮೃತನಾಡೀ, ಚಂದ್ರಪುಷ್ಕರಣೀ, ಪಾಲಾರು, ನಂದೀತೀರ್ಥ ಎಂಬ ಐದು ತೀರ್ಥಗಳಿವೆ. ಇಲ್ಲಿ ಪಂಚನದೀಶ್ವರ ದೇವಾಲಯವೇ ಮುಖ್ಯವಾದದ್ದು. ಶಿಲಾಲೇಖನಗಳಿಂದ ದೇವಾಲಯವು ಪ್ರಾಚೀನಯುಗದಲ್ಲಿ ನಿರ್ಮಿತವಾಗಿದೆಯೆಂದು ತಿಳಿಯಬಂದಿದೆ. ತಿರುವಾಡಿಯಲ್ಲಿ ನಮ್ಮ ಸತೀರ್ಥ್ಯಪರಿಷತ್ತು ಸರ್ವರಿಗೂ ಸ್ವಾಮಿವಿವೇಕಾನಂದರ ವಿಷಯಕ್ಕೆ ಮಹಾಭಾಗವತರ ಅಭಿಪ್ರಾಯವೇನೆಂಬ ವಿಷಯಕ್ಕೆ ಸ್ವಲ್ಪ ಚರ್ಚೆಯಾಯಿತು. ಕೆಲವರು ವಿವೇಕಾನಂದರನ್ನು ಸ್ವಲ್ಪ ಕೆಳಗಿಳಿಸಿ ಮಾತನಾಡಿದ್ದು ನನ್ನ ಮನಸ್ಸಿಗೆ ಒಗ್ಗಲಿಲ್ಲ. ಈ ಚರ್ಚೆಯು ಹೇಗೋ ಭಾಗವತರ ಕಿವಿಗೂ ಬಿತ್ತು. ಆಗ ಅವರು ವಿವೇಕಾನಂದರನ್ನು ಹೊಗಳಿ, ಎಲ್ಲರಿಗೂ ಹೇಳಿದ ವಿವರಣೆಯು ವಿಶೇಷವಾಗಿ ನನಗೆ ಬಹಳ ಸಂತೋಷವನ್ನುಂಟುಮಾಡಿತು.

## ರಾಮೇಶ್ವರದವರೆಗೆ:

ನಾವು ತಿರುವಾಡಿಯಿಂದ ಸೀದಾ ಮಧುರೆಗೆ ಬಂದೆವೆಂದು ಕಾಣುತ್ತದೆ. ಮಹಾಭಾಗವತರು ಒಬ್ಬಿಬ್ಬರೊಡನೆ ತಂಜಾವೂರಿಗೆ ಹೋಗಿ ಅಲ್ಲಿರುವ ದೇವಾಲಯ, ಲೈಬ್ರರಿ ಮುಂತಾದವುಗಳನ್ನು ನೋಡಿಕೊಂಡು ಮಾರನೆಯ ದಿನ ನಮ್ಮನ್ನು ಸೇರಿದರು. ಅಲ್ಲಿ ಮೀನಾಕ್ಷಿಯ ದರ್ಶನಮಾಡಿಕೊಂಡು ಒಂದು ದಿನವಿದ್ದು ಮುಂದೆ ರಾಮೇಶ್ವರ, ಧನುಷ್ಕೋಟಿಗಳನ್ನು ನೋಡಿಕೊಂಡು ಬಂದೆವು. ರಾಮೇಶ್ವರದಲ್ಲಿ ತೀರ್ಥಸ್ನಾನ ಶ್ರಾದ್ಧಾದಿಗಳನ್ನು ಮಾಡಿದೆವು. ದೇವಾಲಯದಲ್ಲಿ ಮಹಾಭಾಗವತರು ಸಂಸ್ಕೃತದಲ್ಲಿ ಭಕ್ತಿಯ ವಿಷಯವಾಗಿ ಉಪನ್ಯಾಸ ಮಾಡಿದರು. ಆ ಉಪನ್ಯಾಸದಲ್ಲಿ 'ಅತಿದಕ್ಷಿಣದೇಶದಲ್ಲಿ ಭಕ್ತ್ಯುಪಸರ್ಜನ ಕರ್ಮವೂ, ಉತ್ತರದಲ್ಲಿರುವ ಪಂಢರಾಪುರವೇ ಮುಂತಾದವುಗಳಲ್ಲಿ ಕರ್ಮೋಪಸರ್ಜನ ಭಕ್ತಿಯೂ ಕಾಣಬರುತ್ತದೆ.' ಎಂಬರ್ಥದ ವಾಕ್ಯವಿತ್ತು. ಅದರ ವಿಷಯಕ್ಕೆ ಅಲ್ಲಿಯ ವಿದ್ವಾಂಸರೊಬ್ಬರು ಸಣ್ಣ ಆಕ್ಷೇಪವೊಂದನ್ನು ತೆಗೆದರು; ಮಹಾಭಾಗವತರು ಅದನ್ನು ನೆಪಮಾಡಿಕೊಂಡು ಭಕ್ತಿಯ ಬಗ್ಗೆ ತಮ್ಮ ಆಶಯವನ್ನು ವಿಶದಗೊಳಿಸಿದರು. ಶ್ರೋತೃಗಳೆಲ್ಲರೂ ಸಂತೋಷಪಟ್ಟರು. ರಾಮೇಶ್ವರದಿಂದ ಹಿಂತಿರುಗಿ ಬರುವಾಗ ಶ್ರೀರಂಗಂ, ಜಂಬುಕೇಶ್ವರ ಇವುಗಳನ್ನು ನೋಡಿಕೊಂಡು ಬಂದೆವು. (ಶ್ರೀರಂಗನಾಥ ಮಂದಿರವು ಭರತ ಖಂಡದಲ್ಲೆಲ್ಲ ವಿಸ್ತಾರವಾದದ್ದೆಂದು ಹೇಳುತ್ತಾರೆ. ಒಳಮಂದಿರದಲ್ಲಿ ಶ್ರೀರಂಗನಾಥನು ಶೇಷಶಾಯಿಯಾಗಿದ್ದಾನೆ; ಶೇಷನ ಐದುಹೆಡೆಗಳ ಛತ್ರವು ದೇವರಿಗಿದೆ. ಲಕ್ಷ್ಮೀವಿಭೀಷಣಾದಿಗಳಿಂದ ಪರಿವೃತನಾಗಿರುವ ದೇವಮೂರ್ತಿಯು ಭವ್ಯವಾಗಿದೆ. ಸ್ಥಾನವು ಬಹಳ ಸಾತ್ತ್ವಿಕ ವಾತಾವರಣದಿಂದ ಕೂಡಿತ್ತು. ಜಂಬುಕೇಶ್ವರದಲ್ಲಿ ಅಬ್ಲಿಂಗವಿದೆ. ಇಲ್ಲಿಯ ಮಂದಿರವು ಶ್ರೀರಂಗಮಂದಿರಕ್ಕಿಂತಲೂ ಪ್ರಾಚೀನವಾದದ್ದು).

## ಈ ಕಾಲದಲ್ಲಿ ನನ್ನ ಶರೀರಸ್ಥಿತಿ:

ಈ ಪ್ರಯಾಣದಲ್ಲಿ ನೋಡಿದ ಸ್ಥಳಗಳ ವಿವರವೆಲ್ಲಾ ಈಗ ಬಲುಮಟ್ಟಿಗೆ ಮರೆತು ಹೋಗಿದೆ. ಮಹಾಭಾಗವತರ ಸಂನಿಧಿ, ಅವರ ಸಂಭಾಷಣೆಯ ಉತ್ತೇಜನ, ಜೊತೆಯಲ್ಲಿದ್ದವರೊಡನೆ ಪರಮಾರ್ಥವಿಷಯದ ಚರ್ಚೆ - ಇವುಗಳಲ್ಲಿ ನಾನು ದೇಹದ ಕಷ್ಟವನ್ನು ಕೂಡ ಮರೆತುಬಿಟ್ಟಿದ್ದೆನು. ಈ ಕಾಲಕ್ಕೆ ನನ್ನಲ್ಲಿ ಎರಡು ಮೂರು ಬಟ್ಟೆಗಳು ಮಾತ್ರವೇ ಇದ್ದವು. ದಕ್ಷಿಣದೇಶದಲ್ಲಿ ಬಟ್ಟೆಗಳ ಅವಶ್ಯಕತೆಯೇನೂ ಅಷ್ಟು ಇರುವದಿಲ್ಲವಾದ್ದರಿಂದ ಒದ್ದೆಯ ಬಟ್ಟೆಯನ್ನು ಮೈಮೇಲೆ ಹಾಕಿಕೊಂಡರೂ ಸಾಗುತ್ತದೆ. ನನಗೆ ಇಂಥ ವಸ್ತ್ರಾಭಾವವಿದೆಯೆಂದರೆ ಮಹಾಭಾಗವತರು ಖಂಡಿತ

ಸುಮ್ಮನೆ ಇರುತ್ತಿರಲಿಲ್ಲ. ಆದರೆ ಆದ ಮಟ್ಟಿಗೂ ಅವರಿಗೆ ನನ್ನ ಈ ಸ್ಥಿತಿ ಗೊತ್ತಾಗದಂತೆ ಎಚ್ಚರಿಕೆಯಿಂದ ಇರುತ್ತಿದ್ದೆನು. ನಾವು ಹಿಂತಿರುಗಿ ಬರುವ ಹೊತ್ತಿಗೆ ಮಾಧವರಾಯರ ತಂತಿಯ ಸುದ್ದಿ ಮುಟ್ಟಿ ಬೆಂಗಳೂರಿನ ಪಾಟನ್ ಭವನದಲ್ಲಿ ಇಳಿದುಕೊಂಡೆವು. ಅಲ್ಲಿ ನಮಗೆಲ್ಲ ಅತ್ಯಂತ ವೈಭವದ ಔತಣವೂ ಸತ್ಕಾರವೂ ದೊರೆಯಿತು. ಬೆಂಗಳೂರಿನಲ್ಲಿ ಸರ್ಕಲ್ ಇನ್‌ಸ್ಪೆಕ್ಟರನ್ನು ನೋಡಿದಾಗ ನನ್ನ ವೇಷವು ಅವರಿಗೆ ಅಸಹ್ಯವಾಗಿರಬೇಕು. ಏಕೆಂದರೆ ತಮ್ಮ ಮಿತ್ರರೊಬ್ಬರೊಡನೆ ಮಾತನಾಡುವಾಗ 'ಇವನೊಬ್ಬ ಪೋಲಿಯಾಗಿ ತಿರುಗಿದ್ದಾನೆ. ಅವನಿಗೆ ಕರ್ತವ್ಯದ ಕಡೆಗೆ ದೃಷ್ಟಿಯೇ ಇಲ್ಲ' ಎಂದರೆಂದು ಹಿಂದಿನಿಂದ ನನಗೆ ತಿಳಿದು ಬಂತು. ಹೇಗಾದರೂ ಆಗಲಿ, ಈಗ ಸಂತತಪ್ರಯಾಣದ ನಿಮಿತ್ತದಿಂದ ನನಗೆ ದೇಹಾರೋಗ್ಯವು ಸ್ವಲ್ಪ ಕೆಟ್ಟಿತ್ತು. ಆದ್ದರಿಂದ ಎಲ್ಲಿಯಾದರೂ ಸ್ವಲ್ಪಕಾಲನಿಂತು ವಿಶ್ರಮಿಸಿಕೊಳ್ಳಬೇಕು ಎಂಬ ಯೋಚನೆಯೊಂದು ಅವರನ್ನು ನೋಡಿದಾಗ ನನ್ನ ಮನಸ್ಸಿನಲ್ಲಿ ಮಿಂಚಿತು, 'ಈ ಸಲದ ರಜವು ಮುಗಿದಮೇಲೆ ಕೆಲಸದ ಮೇಲೆ ಹಾಜರಾಗಬೇಕೆಂದಿದ್ದೇನೆ ಆಗಬಹುದೇ ?' ಎಂದು ಕೇಳಿದೆ. 'ಅವಶ್ಯ ಆಗಬಹುದು' ಎಂದರು. ತಲುಬಿಲ್ಲದ ರಜದ ಮೇಲೆ ದೀರ್ಘಕಾಲವಿದ್ದವರು ಮತ್ತೆ ಕೆಲಸಕ್ಕೆ ಸೇರಬೇಕಾದರೆ ಲಿಖಿತ ಮೂಲಕವಾಗಿ ಮೇಲಿನ ಅಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಳ್ಳಬೇಕೆಂಬುದು ನಿಯಮ ; ಆದರೆ ಇನ್‌ಸ್ಪೆಕ್ಟರು ನನಗೆ ಹಾಗೆಂದು ತಿಳಿಸಲಿಲ್ಲ. ನಾನು ಕಳೂರುಕಟ್ಟೆಗೆ ಹೋಗಲೇಬೇಕೆಂಬ ತವಕವಿಲ್ಲದವನಾದ್ದರಿಂದ ಆ ವಿಷಯಕ್ಕೆ ಅನುಸರಿಸಬೇಕಾದ ನಡವಳಿಕೆಯನ್ನು ತಿಳಿದುಕೊಳ್ಳಲೂ ಇಲ್ಲ. ಹೀಗೆ ಈ ಪ್ರವಾಸವನ್ನು ಮುಗಿಯಿಸಿ ಅರಸೀಕೆರೆಗೆ ಬಂದು ತಲುಪಿದೆನು.

## ತಿಮ್ಮಪ್ಪದಾಸರು :

ಅರಸೀಕೆರೆಯಲ್ಲಿ ನಾನಿದ್ದ ಮನೆಯ ಪಕ್ಕದಲ್ಲಿಯೇ ಇದ್ದ ತಿಮ್ಮಪ್ಪದಾಸರವರಲ್ಲಿ ನಾನು ಆಗಾಗ್ಗೆ ವೇದಾಂತ ವಿಚಾರವನ್ನು ಮಾಡುವದು ಪದ್ಧತಿ. ದಾಸರು ನಮ್ಮ ಮಾವನವರ ಸ್ನೇಹಿತರೂ ಆಗಿದ್ದರು. ಈಗ್ಗೆ ನಮ್ಮ ಮಾವನವರು ಇರಲಿಲ್ಲವಾದರೂ ಅವರೊಡನೆ ಅವರು ವೇದಾಂತವೆಂಬ ಹೆಸರಿನಿಂದ ತಪ್ಪು ತಿಳುವಳಿಕೆಯಿಂದ ಇರುತ್ತಿದ್ದ ಕೆಲವರು ವೇದಾಂತಿಗಳ ವಿಚಾರವನ್ನು ಹೇಳುತ್ತಿದ್ದರು ; ಅದನ್ನೆಲ್ಲ ನಾನು ಶಾಸ್ತ್ರಾಧಾರದಿಂದ ಖಂಡಿಸುತ್ತಿದ್ದೆ. ಭಕ್ತಿಗೂ ವೇದಾಂತಕ್ಕೂ ಸಾಮರಸ್ಯವನ್ನು ಮಾಡದೆ ಅವರು ಮಾತನಾಡುತ್ತಿದ್ದದ್ದನ್ನು ನಾನು ತಿದ್ದಿ ಭಕ್ತಿಯ ಆಧಾರದ ಮೇಲೆಯೇ ವೇದಾಂತವು ನಿಲ್ಲಬೇಕು ಎಂದು ಪ್ರತಿಪಾದಿಸುತ್ತಿದ್ದೆ. ಅದರ ಪರಿಣಾಮವು ಒಂದಿಷ್ಟು ಅವರ ಮೇಲೆ ಆದಂತೆ ಕಂಡಿತು. ಜ್ಞಾನಸಿಂಧು, ಕನ್ನಡ-

ಭಗವದ್ಗೀತೆ - ಮುಂತಾದವುಗಳಲ್ಲಿದ್ದ ಕೆಲವು ಅಭಿಪ್ರಾಯಗಳನ್ನು ನಾನು ಒಪ್ಪದೆ ಇದ್ದದ್ದು ಅವರಿಗೆ ಮೊದಮೊದಲು ಆಶ್ಚರ್ಯವನ್ನುಂಟುಮಾಡಿದರೂ ಮಹಾಭಾಗವತರ ಮತ್ತು ಗೋಂದಾವಳಿಯ ಮಹಾರಾಜರ ವಿಷಯವಾಗಿ ಅವರಿಗೆ ಹೇಳಿದ್ದು ಪರಿಣಾಮಕಾರಿಯಾಯಿತು. ಅವರ ಮಗ ನಾರಣಪ್ಪನೆಂಬವರು ಗೋಂದಾವಳಿಗೆ ಹೋಗಿ ಬಂದಿದ್ದರು. ಅವರು ಯಾವಾಗಲೂ ಜಪವನ್ನು ಮಾಡುತ್ತಾ ಮೌನವಾಗಿ ಒಂದು ಕಡೆಯಲ್ಲಿ ಕುಳಿತು ಕೊಂಡಿರುತ್ತಾರೆಂದು ತಿಳಿದುಬಂತು. ನಾನೂ ಗೋಂದಾವಳಿಯವನೆಂಬ ಕಾರಣದಿಂದ ನಾರಣಪ್ಪನವರಿಗೆ ನನ್ನಲ್ಲಿ ಸ್ವಲ್ಪ ಶ್ರದ್ಧೆಯುಂಟಾಗಿತ್ತು. ನಂಜಪ್ಪನವರ ಜೊತೆಯಲ್ಲಿ ಒಂದೆರಡು ಸಲ ಬಂದು ನನ್ನನ್ನು ಅವರು ನೋಡಿದ್ದರು. ಅರಸೀಕೆರೆಯಲ್ಲಿಯೂ ನನ್ನನ್ನು ಬಂದು ಅವರಿಬ್ಬರೂ ಕಾಣುತ್ತಿದ್ದರು. ನಾರಣಪ್ಪನವರು ಅಷ್ಟೊಂದು ಉತ್ಕಟವಾದ ಏಕಾಂತವಾಸವನ್ನು ಮಾಡಿದರೆ ಗೋಂದಾವಳಿಯ ಗುಂಪಿನವರು ಲೋಕವಿಲಕ್ಷಣ ಸ್ವಭಾವದವರೆಂಬ ಅಪವಾದಕ್ಕೆ ಕಾರಣವಾದೀತೆಂಬ ಅಂಜಿಕೆ ನನಗೆ. ಆದ್ದರಿಂದ ಆಗಾಗ್ಗೆ ನಾರಣಪ್ಪನವರನ್ನು ಸ್ವಲ್ಪ ವಿಚಾರದ ಪಂಥಕ್ಕೆ ತಿರುಗಿಸುವದಕ್ಕೆ ಪ್ರಯತ್ನ ಮಾಡುತ್ತಿದ್ದೆನು.

ಮತ್ತೆ ಕಳೂರುಕಟ್ಟೆಗೆ : ಈಗ್ಗೆ ನನ್ನ ದೇಹಶ್ರಮವು ಸುಧಾರಿಸಿತ್ತಾದರೂ ಆರೋಗ್ಯ ಸ್ಥಿತಿಯು ಸರಿಯಾಗಿರಲಿಲ್ಲ. ಸಂತತಪ್ರಯಾಣದ ನಿಮಿತ್ತವೋ ಏನೋ ನನಗೆ ಅನ್ನಾಹಾರಗಳು ಸರಿಯಾಗಿ ಸೇರುತ್ತಿರಲಿಲ್ಲ. ತಲೆಯಲ್ಲಿ ಒಳಗೆ ಹತ್ತಿ-ತುರುಕಿದಂತೆ ಭಾವನೆಯಾಗಿತ್ತು. ತಲೆಭಾರವಾಗಿದ್ದು ದಿನ ದಿನಕ್ಕೆ ಯಾವ ಚಟುವಟಿಕೆಯೂ ಬೇಡದಂತೆ ಆಯಿತು. ತಿಮ್ಮಪ್ಪದಾಸರ ಮನೆಯಲ್ಲಿ ಯಾರಿಗೋ ಔಷಧಿಕೊಟ್ಟಿದ್ದಕ್ಕಾಗಿ ರೈಲ್ವೆ ಡಾಕ್ಟರರೊಬ್ಬರಿಗೆ ಸತ್ಕಾರವನ್ನು ಏರ್ಪಡಿಸಿದ್ದೆನು. ಅವರಿಗೆ ನಾನು ನನ್ನ ಸ್ಥಿತಿಯನ್ನು ಹೇಳಿಕೊಂಡೆನು. ಮಾರನೆಯ ದಿನ ಅವರು ನನ್ನನ್ನು ಬಗೆಬಗೆಯಾಗಿ ಡಾಕ್ಟರುಗಳ ಕ್ರಮದಂತೆ ಪರೀಕ್ಷೆಮಾಡಿ 'ಇದು ವಾಸಿಯಾಗುವದು ಬಹಳ ಕಷ್ಟ. ಒಂದು ನೂರು ರೂಪಾಯಿಕೊಡುವದಾದರೆ ನನ್ನ ಕೈಯಲ್ಲಾದ ಪ್ರಯತ್ನವನ್ನು ಮಾಡುವೆನು' ಎಂದರು. ಈಗ ನನಗೆ ಜೀವನದಲ್ಲಿಯೇ ಬೇಸರಿಕೆಯಾಯಿತು. ಕೈಯಲ್ಲಿ ಒಂದು ಬಿಡಿಗಾಸೂ ಇರಲಿಲ್ಲ. ನಂಜಪ್ಪನವರಿಂದ ಹತ್ತು ರೂಪಾಯಿಗಳಷ್ಟು ಸಾಲ ತೆಗೆದುಕೊಂಡಿದ್ದೆನೆಂದು ನೆನಪು. ಅದನ್ನು ತೀರಿಸುವದು ಹೇಗೆಂಬುದೇ ತಿಳಿದಿರಲಿಲ್ಲ. ಈ ದುರವಸ್ಥೆಯಲ್ಲಿ ಇಲ್ಲಿದ್ದು ಸಾಯುವದಕ್ಕಿಂತ ಕಳೂರುಕಟ್ಟೆಗೆ ಹೋಗಿ ಉಂಡು ತಿಂದು ಸಾಯಬಾರದೇಕೆ ?- ಎನಿಸಿತು. 'ಆದೇಸರಿ' ಎಂದು ನಿಶ್ಚಯಿಸಿ ಕೂಡಲೇ ಕಳೂರುಕಟ್ಟೆಯ ಮಾರ್ಗವನ್ನು ಹಿಡಿದೆನು.

# 26. ಕಳೂರು ಕಟ್ಟೆಯಿಂದ ದಾವಣಗೆರೆಗೆ, ದಾವಣಗೆರೆಯಿಂದ ಹೊಳಲುಕೆರೆಗೆ (1914)

## ಒಂದು ಸಣ್ಣ ತಪ್ಪಿಗೆ ದಂಡನೆ :

ನಾನು ಬಂದಾಗ ನವರಾತ್ರೆ ರಜಕ್ಕೆ ಕೆಲವು ದಿನಗಳಿದ್ದವು. ಬಂದ ಕೂಡಲೆ ಕೆಲಸದ ಮೇಲೆ ಹಾಜರಾಗಿದ್ದೇನೆಂದು ರಿಪೋರ್ಟು ಬರೆದುಕೊಂಡೆನಾದರೂ ಬದಲಿಗಿದ್ದ ಸ್ಕೂಲು ಮಾಸ್ತರು 'ಇವರಿಗೆ ಚಾರ್ಜುಕೊಡಲೆ ?' ಎಂದು ಕೇಳಿ ಮೇಲಕ್ಕೆ ಬರೆದುಕೊಂಡರು. ಸರ್ಕಲ್ ಇನ್‌ಸ್ಪೆಕ್ಟರು ನೀವು ಮತ್ತೆಮತ್ತೆ ರಜ ತೆಗೆದುಕೊಂಡು ದೀರ್ಘಕಾಲ ಗೈರುಹಾಜರಾಗಿದ್ದವರು ಮೊದಲೇ ಅನುಮತಿ ಪಡೆದುಕೊಳ್ಳ-ಬೇಕಾಗಿತ್ತು ; ಆದ್ದರಿಂದ 22-9-1913ರ ನಿಮ್ಮ ರಿಪೋರ್ಟನ್ನು ಮನ್ನಿಸಲಾಗು-ವದಿಲ್ಲ. ನಿಮಗೆ ಇಷ್ಟವಿದ್ದರೆ ದಸರಾ ರಜವಾದಮೇಲೆ 13-10-1913ರಲ್ಲಿ ಸ್ಕೂಲು ಪ್ರಾರಂಭವಾಗುತ್ತಲೂ ಕೆಲಸಕ್ಕೆ ಬರಬಹುದು ಎಂದು ಅಪ್ಪಣೆಮಾಡಿದರು. ಇದರಿಂದ ನನಗೆ ಒಂಬತ್ತು ತಿಂಗಳ ಸಂಬಳಹೋಯಿತು. ಯತ್ನವಿಲ್ಲದೆ ಹಾಗೇ ಮಾಡಿದೆನು.

**ಕಳೂರು ಕಟ್ಟೆಯಲ್ಲಿ ಜೀವನಕ್ರಮ :** ಈಗ ನಾನು ಒಂಟಿಗನಾಗಿದ್ದದ್ದರಿಂದ ಕಳೂರು ಕಟ್ಟೆಯ ತಪಸ್ಸು ಹಿತವಾಗಿಯೇ ಇದ್ದಿತು. ಪ್ರತಿದಿನವೂ ಬೆಳಗ್ಗೆ ಎದ್ದು ಸ್ನಾನಮಾಡಿ ಆಹ್ನಿಕಮಾಡಿಕೊಂಡು ಅಡಿಗೆಗೆ ಬೇಳೆ ಬೇಯಹಾಕಿ ಸ್ಕೂಲಿಗೆ ಹೋಗಿ ಬರುವದು, ಮತ್ತೆ ಊಟಮಾಡಿಕೊಂಡು ಸ್ಕೂಲಿಗೆ ಹೋಗುವದು, ಆದಷ್ಟುಕಾಲ ವಿಶ್ರಾಂತಿ ತೆಗೆದುಕೊಳ್ಳುವದು - ಹೀಗೆ ಮಾಡುತ್ತಿದ್ದೆನು. ಈಗ ನನಗೆ ಬಹಳ ಬಿಡುವು ಇದ್ದಿತು. ಸ್ಕೂಲಿನಲ್ಲಿಯೂ ಅಷ್ಟೇನೂ ಕೆಲಸವಿರಲಿಲ್ಲ. ಆದ್ದರಿಂದ ಮಹಾಭಾಗವತರ ಪ್ರೇರಣೆಯಿಂದ ಬರೆಯುವದಕ್ಕೆ ಪ್ರಾರಂಭಿಸಿದ್ದ **Heart of the Bhagavadgita** (ಭಗವದ್ಗೀತಾ ಹೃದಯ) ಎಂಬ ಇಂಗ್ಲೀಷು ಪುಸ್ತಕವನ್ನು ಮುಂದುವರಿಸುವದಕ್ಕೆ ಪ್ರಾರಂಭಿಸಿದೆನು. ವಿವೇಕಾನಂದರ ಗ್ರಂಥಗಳನ್ನು ಓದುವದು, ಗ್ರಂಥಲೇಖನಕ್ಕೆ ಮನಸ್ಸು ಕೊಡುವದು - ಇದಿಷ್ಟೇ ನನ್ನ ನಿತ್ಯಕರ್ತವ್ಯ. ಇದನ್ನು ನಾನು ಹೀಗೆ ಬರೆದು ಮುಂದೆ ಕೆಲವು ಕಾಲದ ಮೇಲೆ ಪೂರೈಸಿದೆನಾದರೂ ಇದನ್ನು ಸರಿಪಡಿಸುವದು, ಕ್ರಮಬದ್ಧವಾಗಿ ಮಾಡುವದು ಮುಂತಾದ ಭಾರವು ಮಹಾಭಾಗವತರ ಮೇಲೆಯೇ ಬಿದ್ದದ್ದು, ಅದನ್ನು ಅವರು ತಮ್ಮದನ್ನಾಗಿಯೇ ಮಾಡಿಕೊಂಡು ಕಾಲಕ್ರಮದಲ್ಲಿ ಗಾಯಕ್ವಾರ್ ಗ್ರಂಥಾವಳಿಯಲ್ಲಿ ಪ್ರಕಟಿಸಿದರು. ಅದರ ಪೂರ್ವಸಿದ್ಧತೆಯು ಸದ್ಯಕ್ಕೆ ನನಗೆ ಏಕಾಂತವಾಸಕ್ಕೊಂದು ಸಾಧನವಾಗಿ ಪರಿಣಮಿಸಿತು.

## ಚಂದ್ರಶೇಖರಶಾಸ್ತ್ರಿಗಳು:

ಈ ವೇಳೆಗೆ ಜಗಳೂರು ಸ್ಕೂಲಿನಿಂದ ವರ್ಗವಾಗಿ ಬಂದ ಚಂದ್ರಶೇಖರ ಶಾಸ್ತ್ರಿಗಳೆಂಬ ಒಬ್ಬ ಸಹಾಯೋಪಾಧ್ಯಾಯರು ನನಗೆ ಅನ್ವರ್ಥವಾಗಿಯೂ ಸಹಾಯೋಪಾಧ್ಯಾಯರಾದರು. 'ನೀವು ಯಾವ ಯೋಚನೆಯನ್ನೂ ಹತ್ತಿಸಿಕೊಳ್ಳಬೇಡಿ ; ವಿಶ್ರಾಂತಿ ತೆಗೆದುಕೊಳ್ಳಿರಿ. ನಾನು ಎಲ್ಲವನ್ನು ನೋಡಿ ಕೊಳ್ಳುತ್ತೇನೆ'. ಎಂದು ಉತ್ಸಾಹದಿಂದ ಕೆಲಸಕ್ಕೆ ಆರಂಭಿಸಿದ್ದರಿಂದ ನನಗೆ ಸದ್ಯಕ್ಕೆ ಬಹಳ ಉಪಕಾರವಾಯಿತು. ಅವರಿಂದ ಸ್ಕೂಲೆಲ್ಲ ಸಚೇತನವಾಯಿತು. ಶಾಸ್ತ್ರಿಗಳು ಇನ್ನೂ ಯುವಕರು, ಸ್ವಲ್ಪಮಟ್ಟಿಗೆ ವೇದಾಧ್ಯಯನವನ್ನು ಮಾಡಿದವರು, ಆಚಾರ-ಪರರು, ಉಪಾಧ್ಯಾಯವೃತ್ತಿಯಲ್ಲಿ ತರಬಿ(ತರಬೇತಿ)ಯತ್ತಾದವರು, ಚಟುವಟಿಕೆ ಯಿಂದ ಕೂಡಿದವರು. ಅವರು ಶಿಸ್ತಾಗಿ ಪೋಷಾಕು ಹಾಕಿಕೊಂಡು ಪಾಠ ಹೇಳುವದಕ್ಕೆ ನಿಂತರೆ ಹುಡುಗರು ಸಂತೋಷದಿಂದ ಪಾಠಕ್ಕೆ ಕಿವಿಗೊಡುತ್ತಿದ್ದರು. ಅಲ್ಲಿ ಇಲ್ಲಿ ಇರುವ ಎಲೆ ಮುಂತಾದವುಗಳನ್ನು ತಂದು ಅಥವಾ ಅವುಗಳ ಚಿತ್ರಗಳನ್ನು ಕಪ್ಪುಹಲಗೆಯ ಮೇಲೆ ಬರೆದು ತೋರಿಸುತ್ತಿದ್ದರೆ ಹುಡುಗರೇ ಅಲ್ಲದೆ ಊರಿನ ಜನರೂ ಯಾವದೋ ಒಂದು ವಿಚಿತ್ರ ಪ್ರದರ್ಶನ ಶಾಲೆಗೆ ಬಂದವರಂತೆ ಬೆರಗಾಗಿ ನೋಡುತ್ತಿದ್ದರು ! ಆ ಪ್ರಾಂತಕ್ಕೆ ತರಬಿ(ತರಬೇತಿ)ಯತ್ತಾದ ಬೋಧಕರು ಬಂದದ್ದು ಇದೇ ಮೊದಲೆಂದು ತೋರುತ್ತದೆ. ಇಂಥ ಯೋಗ್ಯರೂ ಕಾರ್ಯದಕ್ಷರೂ ಆದ ಉಪಾಧ್ಯಾಯರನ್ನು ಈ ಕೊಂಪೆಗೇಕೆ ವರ್ಗಮಾಡಿರಬಹುದು ? ಎಂಬ ಪ್ರಶ್ನೆಯು ನನ್ನ ಮನಸ್ಸಿನಲ್ಲಿ ತಲೆ ಎತ್ತಿತು. ವಿಚಾರಿಸುವಲ್ಲಿ ಅವರು ಹಿಂದೆ ಇದ್ದ ಸ್ಕೂಲಿನ ಹೆಡ್‌ಮಾಸ್ಟರು ಉಪಾಧ್ಯಾಯವೃತ್ತಿಗೆ ಯೋಗ್ಯವಲ್ಲದ ನಡತೆಯವರಾಗಿದ್ದು, ಲಂಚವೇ ಮುಂತಾದವುಗಳಲ್ಲಿ ನಿರತರಾಗಿದ್ದರಂತೆ ; ಸಹಾಯೋಪಾಧ್ಯಾಯರನ್ನು ಅಸಡ್ಡೆಯಿಂದ ಕಾಣುತ್ತಿದ್ದರಂತೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ, ಜನರಿಗೂ ಅವರನ್ನು ಕಂಡರೆ ಅನಾದರವುಂಟಾಗಿತ್ತಂತೆ. ಒಂದು ದಿನ ಉಪಾಧ್ಯಾಯರುಗಳು ಚಂದ್ರಶೇಖರಶಾಸ್ತ್ರಿಗಳನ್ನು ಮುಂದಾಳಾಗಿ ಮಾಡಿಕೊಂಡು ಏಕಾಂತದಲ್ಲಿ ಅವರಿಗೆ ಬುದ್ಧಿ ಹೇಳುವದಕ್ಕೆ ಪ್ರಯತ್ನಿಸಲು, ಅವರು ಎಲ್ಲರನ್ನೂ ತಿರಸ್ಕರಿಸಿ, ಕೂಡಿಸಿಲು, ಅವಿನಯಕ್ಕೆ ಬೇಸತ್ತು ರೇಗಿ ಶಾಸ್ತ್ರಿಗಳು ಅವರ ಬೆನ್ನಮೇಲೆ ಗುದ್ದಿಬಿಟ್ಟರಂತೆ. ಈ ತಪ್ಪು ಮೇಲಿನವರಿಗೆ ರಿಪೋರ್ಟಾಗಿ, ಅದಕ್ಕಾಗಿ ಮೇಲಿನವರು ಅವರನ್ನು ಈ ಸ್ಕೂಲಿಗೆ ಗಡೀಪಾರು ಮಾಡಿದ್ದರು. ಹೆಡ್‌ಮಾಸ್ಟರದ್ದು ಏನೂ ತಪ್ಪಿಲ್ಲವೆಂದೂ ನಿರ್ಣಯವಾಯಿತು. ನ್ಯಾಯಪ್ರಿಯರಾದ ಶಾಸ್ತ್ರಿಗಳಿಗೆ ಈ ತೀರ್ಮಾನವನ್ನು ಸಹಿಸಲಾರದೆ, ಮನಸ್ಸಿನಲ್ಲಿಯೇ ನೊಂದುಕೊಳ್ಳುತ್ತಿದ್ದರೆಂಬುದು

ಅವರು ನನಗೆ ಈ ವೃತ್ತಾಂತವನ್ನು ಹೇಳುವಾಗ ಪ್ರಕಟಿಸಿದ ಉದ್ವೇಗದಿಂದ ವ್ಯಕ್ತವಾಯಿತು. 'ಇದ್ದಸಂಗತಿಯನ್ನು ಇದ್ದಂತೆ ತಮ್ಮಲ್ಲಿ ಅರಿಕೆಮಾಡಿಕೊಂಡಿದ್ದೇನೆ ; ತಾವೇನೂ ನನ್ನ ವಿಷಯಕ್ಕೆ ಅಂಜಿಕೆಪಡಬೇಕಾದದ್ದಿಲ್ಲ. ನಾನು ಅನುಚಿತವಾದ ಕಾರ್ಯಕ್ಕೆ ಎಂದಿಗೂ ಕೈಹಾಕುವವನಲ್ಲವೆಂದು ಈಶ್ವರಸಾಕ್ಷಿಯಾಗಿ ಹೇಳುತ್ತೇನೆ. ಆಗಿನ ಸಂದರ್ಭದಲ್ಲಿ ಮಿತಿಮೀರಿದ ಕೋಪವು ನನ್ನಿಂದ ಆ ಕೆಲಸವನ್ನು ಮಾಡಿಸಿಬಿಟ್ಟಿತು' ! ಎಂದು ಅವರು ಹುಡುಗನಂತೆ ಹೇಳಿಕೊಂಡದ್ದನ್ನು ನಾನು ನಂಬಿದೆ. ಮುಂದೆ ಅವರು ನನ್ನಲ್ಲಿ ನಡೆದುಕೊಂಡ ರೀತಿಯಿಂದಲೂ, ನನಗೆ ಅವರ ನಡತೆಯ ವಿಷಯಕ್ಕೆ ಯಾವ ಸಂಶಯವೂ ಬರುವದಕ್ಕೆ ಅವಕಾಶವಾಗಲಿಲ್ಲ. ಹೊಳಲುಕೆರೆಯಲ್ಲಿ ನನ್ನ ವಿಷಯಕ್ಕೆ ಸಹಾಯೋಪಾಧ್ಯಾಯರುಗಳು ತೋರಿಸಿದ ಅವಿಧೇಯತೆಗೂ, ಈ ಸಂದರ್ಭದಲ್ಲಿ ಜಗಳೂರ ಮೇಷ್ಟರುಗಳು ಹೆಡ್‌ಮಾಸ್ಟರಲ್ಲಿ ಅವಿಧೇಯತೆಯಿಂದ ನಡೆದುಕೊಂಡದ್ದಕ್ಕೆ ಯಾವ ಸಾಮ್ಯವೂ ಇಲ್ಲವೆಂದು ನನಗೆ ತೋರಿತು.

ಶಾಸ್ತ್ರಿಗಳಿಗೆ ಉಪಾಧ್ಯಾಯವೃತ್ತಿಯಲ್ಲಿ ಉತ್ಸಾಹವು ತುಂಬಿತುಳುಕುತ್ತಿದ್ದಂತೆಯೇ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳಬೇಕೆಂಬ ಕುತೂಹಲವೂ ಹೆಚ್ಚಾಗಿದ್ದಿತು. ಅವರು ನಾನು ಇದ್ದಲ್ಲಿಗೆ ಬಂದು ನನ್ನ ಗ್ರಂಥಕಾಲಕ್ಷೇಪದ ರೀತಿಯನ್ನು ನೋಡಿ ಬಹಳ ಮೆಚ್ಚಿದರು. ಕೆಲವು ಪುಸ್ತಕಗಳನ್ನು ನನ್ನಿಂದ ತೆಗೆದುಕೊಂಡು ಓದಿದರು. ಸ್ಕೂಲು ಹುಡುಗರಿಗೆ ಕ್ರಿಕೆಟ್ ಮುಂತಾದ ಆಟಗಳಲ್ಲಿ ಆಸಕ್ತಿಯುಂಟಾಗುವದಕ್ಕೆ ಪ್ರೋತ್ಸಾಹಿಸುವದು, ನನ್ನೊಡನೆ ಸಂಜೆಯ ಸಂಚಾರಕ್ಕೆ ಬರುವದು, ದೂರದ ಹಳ್ಳದಲ್ಲಿ (ಅಥವಾ ಕಾಲುವೆಯಲ್ಲಿಯೋ) ನನಗೆ ಬಟ್ಟೆ ಒಗೆದುಕೊಡುವದು, ಸಂಧ್ಯಾವಂದನೆಯನ್ನು ಅಲ್ಲಿ ಮಾಡಿಕೊಂಡು ಹಿಂತಿರುಗುವಾಗ ನನ್ನೊಡನೆ ಯಾವದಾದರೊಂದು ಸದ್ವಿಚಾರವನ್ನು ಮಾಡುವದು - ಮುಂತಾದ ರೀತಿಯಲ್ಲಿ ನನಗೊಬ್ಬ ನೆಚ್ಚಿನ ಭಂಟರಾಗಿದ್ದರು, ನನ್ನ ಪರೋಕ್ಷದಲ್ಲಿ 'ಹೆಡ್‌ಮಾಸ್ಟರೆಂದರೇ ಒಂದು ವಿಶ್ವವಿದ್ಯಾನಿಲಯವೆಂದು ಭಾವಿಸಿರಿ ! ಅವರಲ್ಲಿರುವ ಗ್ರಂಥಸಂಗ್ರಹವೂ ಅವರ ತಿಳಿವಳಿಕೆಯೂ ಬೋಧನಶಕ್ತಿಯೂ ಅಗಾಧವಾದದ್ದು' ಎಂದು ಮುಂತಾಗಿ ಊರಿನ ಪ್ರಮುಖ ಅಧಿಕಾರಿಗಳ ಮುಂದೆ ಹೊಗಳುತ್ತಿದ್ದರಂತೆ.

ಇಂಥವರಿಗೆ ಇನ್ನೊಂದು ವಿಪತ್ತು ಬರುವದಿತ್ತು. ಅವರು ಬಂದ ಕೆಲವು ದಿನಗಳೊಳಗಾಗಿ 'ಚಂದ್ರಶೇಖರಶಾಸ್ತ್ರಿಗಳ ಈ ವರ್ಷದ ಇಂಕ್ರಿಮೆಂಟನ್ನು ನಿಲ್ಲಿಸಿದೆ ; ಅವರ ನಡತೆಯನ್ನು ಪರೀಕ್ಷಿಸುತ್ತಿದ್ದು ವರ್ಷಾಂತ್ಯದಲ್ಲಿ ಹೆಡ್‌ಮಾಸ್ಟರು ರಿಪೋರ್ಟು ಮಾಡಬೇಕು' ಎಂಬ ಆರ್ಡರೊಂದು ಬಂದಿತು. ನಾನು

ಸಹಾನುಭೂತಿಯಿಂದ ಶಾಸ್ತ್ರಿಗಳಿಗೆ ಇದ್ದ ಸಂಗತಿ ತಿಳಿಸಿ 'ನೀವು ಬೇಕಾದರೆ ಬೆಂಗಳೂರಿಗೆ ಹೋಗಿ ಇನ್‌ಸ್ಪೆಕ್ಟರವರಲ್ಲಿ ನಿಮ್ಮ ಅಹವಾಲನ್ನು ಹೇಳಿಕೊಳ್ಳಿರಿ, ಅವರು ಕ್ಷಮಿಸಿದರೆ ಸಂತೋಷ, ಇಲ್ಲದಿದ್ದರೆ ಯಾವದೋ ಸಂಚಿತಕರ್ಮದ ಫಲವಾಗಿ, ಒದಗಿಬಂದಿರುವ ಈ ಆಪತ್ತಿಗೆ ಅಂಜಬೇಡಿರಿ. ನಾನು ನಿಮಗೆ ಎಲ್ಲಾ ವಿಧದಿಂದಲೂ ಸಹಾಯಮಾಡುತ್ತೇನೆ. ಬೇಗನೆ ನಿಮ್ಮ ವಿಷಯಕ್ಕೆ ಶಿಫಾರಸು ಮಾಡುತ್ತೇನೆ ; ಶಿವಮೊಗ್ಗದ ಡಿಸ್ಟ್ರಿಕ್ಟ್‌ಇನ್‌ಸ್ಪೆಕ್ಟರು ಶ್ಯಾಮರಾಯರು ನನಗೆ ಬೇಕಾದವರು ಅವರಿಂದಲೂ ಶಿಫಾರಸು ಬರೆಯಿಸುತ್ತೇನೆ' ಎಂದು ಮುಂತಾಗಿ ಸಮಾಧಾನ ಪಡಿಸಿದೆನು. ಆದರೆ ಅವರಿಗೆ ಈ ಅನ್ಯಾಯದ ಆರ್ಡರನ್ನು ಸಹಿಸಿಕೊಳ್ಳುವ ತಾಳ್ಮೆಯು ಬರಲಿಲ್ಲವೆಂದು ತೋರುತ್ತದೆ. ಒಂದಾನೊಂದು ಶ್ರಾದ್ಧವನ್ನು ಮಾಡುವದಕ್ಕೆ ಚಿತ್ರದುರ್ಗಕ್ಕೆ ಹೋಗಿ ಬರಬೇಕೆಂದು ರಜ ತೆಗೆದುಕೊಂಡು ಹೋದವರು ಮತ್ತೆ ಹಿಂತಿರುಗಿ ಬರಲೇ ಇಲ್ಲ. ಅವರು ರಜಕ್ಕೆ ಬರೆದು ಕೊಂಡದ್ದದ್ದಲ್ಲದೆ ಕಾಲಾನುಕಾಲಕ್ಕೆ ರಾಜಿನಾಮೆಯನ್ನು ಕೊಟ್ಟುಬಿಟ್ಟರು ! ಅವರ ವೃತ್ತಾಂತವನ್ನು ಮತ್ತೊಮ್ಮೆ ಪ್ರಸ್ತಾಪಿಸಲಿರುವೆನು.

## ಸ್ಕೂಲಿನ ಸ್ಥಿತಿ :

ಕಳೂರುಕಟ್ಟೆಯ ಸ್ಕೂಲು ಬಹಳ ಸಣ್ಣದೆಂದೂ, ಅಲ್ಲಿ ಯಾರೊಬ್ಬರೂ ಸರಿಯಾಗಿ ಕೆಲಸವನ್ನು ಮಾಡುತ್ತಿರಲಿಲ್ಲವೆಂದೂ, ಆಗಲೇ ಒಂದು ಸಲ ಹೇಳಿಟ್ಟಿದ್ದೇನೆ. ಈಗ ನನ್ನ ಕೈಯ್ಯಲ್ಲಾದಷ್ಟು ಸ್ಕೂಲನ್ನು ಮುಂದಕ್ಕೆ ತರಬೇಕೆಂದು ಪ್ರಯತ್ನಪಟ್ಟೆನು. ಉಪಾಧ್ಯಾಯರು ಕಾಲಕಾಲಕ್ಕೆ ಬರುವಂತೆ ನಯಭಯಗಳಿಂದ ಪ್ರಚೋದನೆ ಮಾಡಿದೆನು. ಪಾಠಗಳನ್ನು ವೇಳಾಪತ್ರಿಕೆಗೆ ಅನುಸಾರವಾಗಿ ತಪ್ಪದೆಮಾಡುವಂತೆ ಏರ್ಪಡಿಸಿದೆನು. ಪಾಠಗಳನ್ನು ಹೇಳಿ ಕೊಡುವ ವಿಧಾನವನ್ನು ಪ್ರದರ್ಶನಪೂರ್ವಕವಾಗಿ ಉಪಾಧ್ಯಾಯರಿಗೆ ತಿಳಿಸಿಕೊಟ್ಟೆನು. ಅವರಿಗೆ ಬೇಕಾದ ಕಾಗದ, ಮಷಿ, ಲೇಖನಿಮುಳ್ಳು, ಸೀಮೆಯಸುಣ್ಣ - ಮುಂತಾದವುಗಳನ್ನು ಒದಗಿಸಿಕೊಟ್ಟೆನು. ಇದೆಲ್ಲ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಉತ್ಸಾಹಜನಕವೇ ಆಯಿತಾದರೂ, ಒಬ್ಬಿಬ್ಬರಿಗೆ ಅದರಿಂದ ಸ್ವಲ್ಪತೊಂದರೆಯೂ ಆಯಿತು. ನನ್ನನ್ನು ಹೊಳಲ್ಕೆರೆಯಲ್ಲಿದ್ದಾಗ ನೋಡಿದ್ದೆನೆಂದು ಹೇಳಿದ ಶ್ಯಾ॥ ಎಂಬ ಒಬ್ಬಮೇಷ್ಟರು 'ನೀವು ಆಗ ಮೀಶೆ ಬಿಟ್ಟಿದ್ದಿರಿ, ರೇಶ್ಮೆರುಮಾಲು ಹಾಕಿಕೊಳ್ಳುತ್ತಿದ್ದಿರಿ ; ಆಗ್ಗೂ ಈಗ್ಗೂ ನಿಮ್ಮ ವೇಷಭಾಷೆಗಳು ಬದಲಾಯಿಸಿವೆ. ದೂರಕ್ಕೆ ತಮ್ಮನ್ನು ನೋಡಿದ್ದ ನನಗೆ ತಾವು ಕೆಲಸದಲ್ಲಿ ಇಷ್ಟು ನಿಷ್ಠುರವಾಗಿ ನಡೆಯುತ್ತೀರೆಂದು ತಿಳಿದಿತ್ತಿರಲಿಲ್ಲ. ಕಾಲಕ್ಕೆ ಸರಿಯಾಗಿಯೇ ಬರಬೇಕು, ಕಾಲಕ್ರಮದಿಂದಲೇ

ಕೆಲಸಮಾಡಬೇಕು - ಎಂದು ಐದು ನಿಮಿಷಗಳೂ ಹೆಚ್ಚು ಕಡಿಮೆಯಾಗದಂತೆ ನೋಡಿಕೊಳ್ಳುವದಕ್ಕೆ ಇದೇನು ಶ್ರಾದ್ಧನಿಯಮವೇ ?' ಎಂದು ಒಮ್ಮೆ ಆಕ್ಷೇಪಿಸಿದರು. ಪಾಪ ! ನಾನು ರಾಮೇಶ್ವರಕ್ಕೆ ಹೋಗಿ ತೀರ್ಥಶ್ರಾದ್ಧವನ್ನು ಮಾಡಿದಂದಿನಿಂದ ಮೀಶೆಯನ್ನು ಮತ್ತೆ ಬಿಡಲಿಲ್ಲವೆಂಬುದು, ಕಾರಣಾಂತರಗಳಿಂದ ನನ್ನ ಉಡುಪು ಬದಲಾಯಿಸಿದೆ ಎಂಬುದೂ, ಅವರಿಗೆ ಹೇಗೆ ಗೊತ್ತಾಗಬೇಕು ? ಸರಕಾರಿಯ ಉದ್ಯೋಗವಾದರೂ ನಾವು ಸಂಬಳ ತೆಗೆದುಕೊಳ್ಳುವವರೆಗೆ ಮನಸ್ಸಾಕ್ಷಿಗೆ ಒಪ್ಪುವಂತೆಯೇ ಮಾಡಬೇಕು ; ಅದೃಷ್ಟಫಲಕವಾದ ಪಿತೃಶ್ರಾದ್ಧಾದಿಗಳಿಗೆ ಹೋಲಿಸಿದರೆ ದೃಷ್ಟಫಲವುಳ್ಳ ಈ ಕರ್ತವ್ಯವು ಯಾವ ವಿಧದಿಂದಲೂ ಕಡಿಮೆಯೆಂದು ಅನಾದರಣೆ ಮಾಡತಕ್ಕದಲ್ಲವೆಂಬುದೂ ಅವರಿಗೆ ತಿಳಿದಿರಲಿಲ್ಲವಾದ್ದರಿಂದ ನನ್ನ ವ್ಯವಸ್ಥಾಕ್ರಮವು ಅವರಿಗೆ ಒಪ್ಪಾಗದೇ ಇದ್ದದ್ದು ಸ್ವಾಭಾವಿಕವಾಗಿದೆ. ಆದರೆ ಒಟ್ಟಿನಲ್ಲಿ ನಮ್ಮ ಸ್ಕೂಲಿನ ಕೆಲಸವು ವಿದ್ಯಾರ್ಥಿಗಳಿಗೂ ಅವರ ತಂದೆತಾಯಿಗಳಿಗೂ, ಊರಿನ ಅಧಿಕಾರಿಗಳಿಗೂ ಬಹಳ ಮೆಚ್ಚಾಯಿತೆಂಬುದನ್ನು ಹೇಳಬೇಕಾದದ್ದೇ ಇಲ್ಲ, ನಾನು ಇದ್ದ ಅಲ್ಪಾವಧಿಯ ಕಾಲದಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರ್ (ಎಸ್.ನಾ.ಎಂಬವರು) ಬಂದು ಸ್ಕೂಲನ್ನು ನೋಡಿಕೊಂಡು ಹೋದರು. ಆಗ ದಿವಾನರಾಗಿದ್ದ ಕಾಂತರಾಜೆಅರಸ್‌ನವರು ಊರಿಗೆ ಬಂದು ರಾಜಮರ್ಯಾದೆಯ ಸ್ವಾಗತವನ್ನು ಹೊಂದಿ ನೋಡಿಕೊಂಡು ಹೋದರು. (ಆ ದಿನ ಭಾನುವಾರವಾದರೂ ಅಮಲ್ದಾರರ ಪ್ರೋತ್ಸಾಹದಿಂದ ಹುಡುಗರನ್ನು ಸ್ಕೂಲಿಗೆ ಬರಮಾಡಿಕೊಳ್ಳಲಾಗಿತ್ತು. ಕಾ.ರಾ. ಅರಸಿನವರು ನನ್ನನ್ನು 'ಎಲ್ಲಿಂದ ಬಂದಿರಿ ?' - ಎಂದು ಕೇಳಿ 'ಅಷ್ಟು ದೊಡ್ಡ ಸ್ಕೂಲಿನಿಂದ ಈ ಸಣ್ಣ ಸ್ಕೂಲಿಗೆ ನಿಮ್ಮನ್ನು ಏಕೆ ಹಾಕಿದರು' ? - ಎಂದು ಕೇಳಿದ್ದಕ್ಕೆ, ನನಗೆ ಉತ್ತರವೇ ಹೊಳೆಯದೇ ಬಹಳ ಪೇಚಾಡಿದೆನು.) ಡಿಸ್ಟ್ರಿಕ್ಟಿನ ಸ್ಕೂಲುಇನ್‌ಸ್ಪೆಕ್ಟರಾದ ಎನ್. ಶ್ಯಾಮರಾಯರು ಬಂದು ಪರೀಕ್ಷೆ ಮಾಡಿಕೊಂಡು ತಮ್ಮ ಮೆಚ್ಚಿಗೆಯನ್ನು ತೋರ್ಪಡಿಸಿ ಹೊರಟು ಹೋದರು. ಹೋಗುವ ಮುಂಚೆ ಉಪಾಧ್ಯಾಯರುಗಳ ಸಂಬಳದ ಪ್ರಮಾಣವನ್ನು ಹೆಚ್ಚಿಸುವ ಯೋಚನೆಯು ನಡೆದಿದೆಯೆಂದೂ ನನಗೆ ಸದ್ಯದಲ್ಲಿಯೇ ಮೂವತ್ತುರೂಪಾಯಿಗೆ ಬಡ್ತಿಯಾಗುವ ಸಂಭವವಿದೆಯೆಂದೂ ಒಸಗೆ(ಶುಭಸಮಾಚಾರ) ಯನ್ನು ಹೇಳಿ ಹೊರಟುಹೋದರು.

## ದಾವಣಗೆರೆಯತ್ತ :

ಇಷ್ಟರಲ್ಲಿ ದಾವಣಗೆರೆಯ ಸಾಹುಕಾರ್ ಮಾಗಾನಹಳ್ಳಿಯ ದೊಡ್ಡಬಸಪ್ಪನವರಿಂದ ನನಗೆ ಒಂದು ಕಾಗದವು ಬಂತು. 'ನಿಮ್ಮನ್ನು ಕಳೂರುಕಟ್ಟೆಗೆ ವರ್ಗಾಯಿಸಿದ್ದು ನಮಗೆಲ್ಲ ಬಹಳ ವ್ಯಥೆಯನ್ನುಂಟುಮಾಡಿದೆ, ನಿಮ್ಮ ಸಹವಾಸದಲ್ಲಿ

ಕೆಲವು ಕಾಲ ಕಳೆಯಬೇಕೆಂದು ನನ್ನ ಇಚ್ಛೆಯಿದೆ. ನಿಮ್ಮ ಆಕ್ಷೇಪಣೆಯೇನೂ ಇಲ್ಲದಿದ್ದರೆ ನಿಮಗೆ ಈಗ ಸಲ್ಲುತ್ತಿರುವಷ್ಟು ತಲುಬಿಗೆ ಕಡಿಮೆಯಿಲ್ಲದ ಉದ್ಯೋಗವನ್ನು ನಿಮಗೆ ಏರ್ಪಡಿಸಿಕೊಳ್ಳಲು ನಾನು ಸಿದ್ಧವಾಗಿರುತ್ತೇನೆ. ದಯವಿಟ್ಟು ತಾವು ಇಲ್ಲಿಗೆ ಬಂದು ಕೆಲವು ತಿಂಗಳುಗಳ ಕಾಲ ಇರಬೇಕೆಂದು ಬೇಡಿಕೊಳ್ಳುತ್ತೇನೆ' ಎಂಬರ್ಥಕ್ಕೆ ಬರೆದಿದ್ದರು. 'ನೀವು ನನಗೆ ಏರ್ಪಡಿಸಿರುವ ಉದ್ಯೋಗವು ಯಾವದು ? ನಿಮ್ಮ ಗಿರಣಿಯಲ್ಲಿಯೋ ಅಥವಾ ಮತ್ತೆ ಯಾವ ಸ್ಥಾನದಲ್ಲಿ ? ದಯವಿಟ್ಟು ತಿಳಿಸಬೇಕು. ನಿಮ್ಮ ಉತ್ತರವು ಬಂದಮೇಲೆ ಅಲ್ಲಿಗೆ ಬರುವ ಯೋಚನೆ ಮಾಡುತ್ತೇನೆ' ಎಂದು ಉತ್ತರವನ್ನು ಕೊಟ್ಟೆನು.

ಈಗ ನಾನು ರಾಮತೀರ್ಥರ ಮತ್ತು ವಿವೇಕಾನಂದರ ಗ್ರಂಥಗಳನ್ನು ಓದುವದು, ಉಪನಿಷದ್ಭಾಷ್ಯವನ್ನೂ, ಸೂತ್ರಭಾಷ್ಯವನ್ನೂ ಅವಲೋಕನ ಮಾಡುವದು, ಗ್ರಂಥರಚನೆ, ಸ್ಕೂಲಿನ ಕೆಲಸ - ಮುಂತಾದವುಗಳಲ್ಲಿ ಅನವರತವೂ ವ್ಯಾಪೃತನಾಗಿದ್ದದ್ದರಿಂದ ನನಗೆ ಕಳೂರುಕಟ್ಟೆಯದೇನೂ ಬೇಸರವಿರಲಿಲ್ಲ. ಆದರೂ ಆ ಪ್ರಾಂತದಲ್ಲಿ ಜೂನ್ ತಿಂಗಳಲ್ಲಿ ಇಪ್ಪತ್ತನೆಯ ತಾರೀಖಿನ ಹೊತ್ತಿಗೆ ಮಳೆ ಜೋರಾಗಿ ಬೀಳುತ್ತದೆಯಾದ್ದರಿಂದ ಒಣಗಿದ ಸೌದೆಯನ್ನು ಜನರು ಇಪ್ಪತ್ತು ಮೂವತ್ತು ಗಾಡಿಯಷ್ಟು ಕೂಡಿಹಾಕಿಸಿಟ್ಟುಕೊಳ್ಳುತ್ತಾರೆ ; ತರಕಾರಿ ಯಾವದೂ ಸಿಕ್ಕುವದೇ ಇಲ್ಲವಾದ್ದರಿಂದ [1]ಬಣ್ಣದ ಸೌತೆಕಾಯಿ ಶೇಖರಿಸಿಡುತ್ತಾರೆ ; ಉಪ್ಪು, ಬೆಲ್ಲ ಎಲ್ಲವೂ ನೀರೇ ಆಗಿರುತ್ತವೆ ; ಹಿಡಿದ ಮಳೆ ಬಿಡುವದೇ ಇಲ್ಲ ; ಯಾವ ಸಾಮಾನೂ ಶಿವಮೊಗ್ಗದ ಕಡೆಯಿಂದ ಬರುವದೇ ಇಲ್ಲ. ಬಂಡಿಗಳನ್ನು ಗಾಲಿಕಳಚಿ ಇಟ್ಟು ಬಿಡುತ್ತಾರಾದ್ದರಿಂದ ಬಾಡಿಗೆಗೆ ಗಾಡಿ ಸಿಕ್ಕುವದೇ ಇಲ್ಲ ಎಂದು ಮುಂತಾಗಿ ಮಳೆಗಾಲದ ವರ್ಣನೆಯನ್ನು ಜನರು ಮಾಡುತ್ತಿರುವದನ್ನು ಕೇಳಿ ನನಗೆ ಗಾಬರಿಯಾಯಿತು. ಇನ್ನು ಇಲ್ಲಿ ನಿಲ್ಲಬಾರದೆಂದು ಎನ್ನಿಸಿತು. ಆದ್ದರಿಂದ 'ದೂರ ಪ್ರಾಂತದಲ್ಲಿ ನನ್ನ ಅನುಬಂಧಿಗಳನ್ನು ನೋಡಿಕೊಂಡು ಬರಬೇಕಾಗಿರುವದರಿಂದ 10 ದಿನಗಳ ರಜೆಬೇಕು,' ಎಂದು ಬರೆದು ಮಂಜೂರು ಮಾಡಿಸಿಕೊಂಡೆನು. ಜೂನ್ 16ರಿಂದ ರಜವನ್ನು ಉಪಯೋಗಿಸಿಕೊಂಡು, ಮತ್ತೊಮ್ಮೆ ಕಳೂರುಕಟ್ಟೆಗೆ ಶರಣುಹೊಡೆದು ದಾವಣಗೆರೆಯ ಕಡೆಗೆ ಹೊರಟೆನು.

## ರಾಜಯೋಗದ ಭಾಷಾಂತರ :

ದಾವಣಗೆರೆಗೆ ಹೋಗಿ ದೊಡ್ಡ ಬಸಪ್ಪನವರನ್ನು ಕಾಣುವಲ್ಲಿ ಅವರು

1. ಬನಸೌತೆಕಾಯಿ ಎಂದೂ ಕರೆಸಿಕೊಳ್ಳುವ ಇದು ಮಲೆನಾಡಿನಲ್ಲಿ ಸಮಯಕ್ಕೊದಗುವ ತರಕಾರಿ, ಆಪದ್ಬಾಂಧವ !

'ಮತ್ತೊಬ್ಬರ ಕೆಲಸವನ್ನು ಕಿತ್ತು ಹಾಕಿ ನಿಮಗೆ ಅವರ ಸ್ಥಾನದಲ್ಲಿ ಉದ್ಯೋಗವನ್ನು ಕೊಡುವೆನೆಂದು ಅಂಜಿದಿರೇನು ? ಹಾಗೇನೂ ಇಲ್ಲ. ನಾನು ನಿಮಗೆ ಕೊಡುವ ಕೆಲಸವೆಂದರೆ ಇಷ್ಟೆ. ಇಲ್ಲಿ ಇಂಥದ್ದೊಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದೇನೆ, ನೀವು ಅಲ್ಲಿದ್ದುಕೊಂಡು ವಿವೇಕಾನಂದರ ರಾಜಯೋಗವನ್ನು ಕನ್ನಡಿಸಬೇಕು, ನಿಮ್ಮ ಆಹ್ನಿಕಗಳನ್ನು ನೆರವೇರಿಸಿಕೊಂಡು, ಬೇಕಾದ ಗ್ರಂಥಕಾಲಕ್ಷೇಪವನ್ನು ಮಾಡಿಕೊಳ್ಳಿರಿ ; ಇಷ್ಟವಿದ್ದರೆ ಯಾವದಾದರೂ ಪ್ರೈವೇಟ್‌ಟ್ಯೂಷನ್ ಇಟ್ಟುಕೊಳ್ಳಿರಿ, ನಿಮಗೆ ಈವೂರ ಜವಳಿಅಂಗಡಿಯ ವಿರೂಪಣ್ಣ(?)ನವರಲ್ಲಿ ನೂರೈವತ್ತು ರೂಪಾಯಿಗಳನ್ನು ಠೇವಣಿ ಇಟ್ಟು ಬಿಡುತ್ತೇನೆ. ತಿಂಗಳಿಗೊಂದು ಸಲ ಒಂದನೆಯ ತಾರೀಖಿಗೆ ಸರಿಯಾಗಿ ಇಪ್ಪತ್ತೈದು ರೂಪಾಯಿಗಳನ್ನು ತೆಗೆದುಕೊಳ್ಳಿರಿ. ನಾನು ಸಾಯಂಕಾಲ ಯಾವಾಗಲಾದರೂ ತಮ್ಮಲ್ಲಿಗೆ ಬಂದರೆ ಪರಮಾರ್ಥವಿಷಯಕ್ಕೆ ನಾನು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಈ ಕೆಲಸವು ತಮಗೆ ಹೇಗೆ ರುಚಿಸುತ್ತದೆ ?' ಎಂದು ಕೇಳಿದರು. ನನಗೆ ಅತ್ಯಾನಂದವಾಯಿತು. ನನ್ನ ಮನಸ್ಸಿಗೆ ಪ್ರಿಯವೂ ಹಿತವೂ ಆದ ಸತ್ಕಾಲಕ್ಷೇಪವನ್ನು ಮಾಡಿಕೊಂಡಿರುವದಕ್ಕೇ ನನಗೆ ಕಳೂರು ಕಟ್ಟೆಯ ಸ್ಕೂಲಿನ ಸಂಬಳವು ಸಿಕ್ಕುವದಾದರೆ ನಾನೇಕೆ ಆ ರೋಗದ ಕೊಂಪೆಗೆ ಹೋಗಬೇಕು ? - ಎನಿಸಿತು. ಅವರ ಸೂಚನೆಯನ್ನು ಅನುಮೋದಿಸಿದೆನು. ದಾವಣಗೆರೆಯಲ್ಲಿದ್ದು ರಾಜಯೋಗವನ್ನು ಕನ್ನಡಿಸುವದಕ್ಕೆ ಆರಂಭಿಸಿದೆನು.

## ಹೊಳಲ್ಕೆರೆಗೆ ವರ್ಗ :

ಆದರೆ ಈ ಕನಸು ನನಸಾಗುವದರೊಳಗೆ ದಾವಣಗೆರೆಗೆ ಪ್ಲೇಗು ಬಂದಿತು. ಅಲ್ಲಿ ಎರಡು ತಿಂಗಳು ಮಾತ್ರ ಇದ್ದಂತೆ ಕಾಣುತ್ತದೆ. ಆಮೇಲೆ ಅರಸೀಕೆರೆಗೆ ಬಂದಿರಬೇಕು. ಯಾವ ನಿಮಿತ್ತದಿಂದಲೋ ಬೆಂಗಳೂರಿಗೆ ಹೋಗಿದ್ದೆನು. ಅರಸೀಕೆರೆಯಲ್ಲಿ(ಅಥವಾ ಬೆಂಗಳೂರಲ್ಲಿ)ನನಗೆ ಹೊಳಲ್ಕೆರೆ ಎ. ವಿ.ಸ್ಕೂಲಿಗೆ 30 ರೂ. ತಲುಬಿನ ಮೇಲೆ ವರ್ಗವಾಗಿರುವದು ತಿಳಿಯಬಂತು. ಆದ್ದರಿಂದ ನಾನು ಕೂಡಲೆ ಕೆಲಸದ ಮೇಲೆ ಹಾಜರಾಗಬೇಕೆಂದು ನಿಶ್ಚಯಿಸಿದೆ. ಯಾವದೋ ಕಾರ್ಯದ ನಿಮಿತ್ತದಿಂದ ಮಾಗಾನಹಳ್ಳಿ ದೊಡ್ಡಬಸಪ್ಪನವರೂ ಆಗ ಬೆಂಗಳೂರಿಗೆ ಬಂದಿದ್ದರು. ವಿಷಯವನ್ನೆಲ್ಲ ನನ್ನಿಂದ ತಿಳಿದುಕೊಂಡು ನೀವು ಅಲ್ಲಿಗೆ ಹೆಡ್‌ಮಾಸ್ಟರಿಗೆ ತಕ್ಕ ವೇಷಭೂಷಣಗಳಿಂದ ಹೋಗುವದು ಯುಕ್ತ' ಎಂದು ನನಗೆ ಕೋಟು, ರುಮಾಲು, ಪಂಚೆ, ಹಾಸಿಗೆ - ಮುಂತಾದವುಗಳಿಗೆ ಬೇಕಾದ ಖರ್ಚು ಕೊಟ್ಟು ಎಲ್ಲವನ್ನೂ ಸಿದ್ಧಪಡಿಸಿಕೊಟ್ಟು ಹೋದರು. ನಾನು ಹೊಳಲುಕೆರೆಗೆ ಬಂದು ಕೆಲಸವನ್ನು ಸೇರಿಕೊಂಡೆ.

# 27. ಮೂರನೆಯ ಸಲಕ್ಕೆ ಹೊಳಲ್ಕೆರೆ (1914-1915)

## ಹೊಳಲ್ಕೆರೆ ಸ್ಕೂಲು :

ಈಗ ಮೂರನೆಯ ಸಲಕ್ಕೆ ನನಗೆ ಹೊಳಲ್ಕೆರೆಗೆ ವರ್ಗವಾಯಿತು. ಆಗ್ಗೆ ಹೊಳಲ್ಕೆರೆ ಸ್ಕೂಲಿನಲ್ಲಿದ್ದ ಮೇಷ್ಟರುಗಳೆಲ್ಲರೂ ಉತ್ಸಾಹ ಶೀಲರು, ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಹುರುಪಿನಿಂದಲೂ ಅಹಮಹಿಮಿಕೆಯಿಂದಲೂ ಮಾಡುತ್ತಿದ್ದರು. ಎಲ್ಲರೂ ನನ್ನೊಡನೆ ಸಹಕರಿಸುತ್ತಿದ್ದರು. ನರಸಿಂಹಮೂರ್ತಿ, ರಾಮರಾವ್, ಶ್ಯಾಮರಾವ್, ಸಿದ್ಧಗಂಗಯ್ಯ (ಆಗ ಗ॥ ಸ್ಕೂ॥ ಹೆಡ್‌ಮಾಸ್ಟರಾಗಿದ್ದರು). ಬಿಜಲಿ ಹನುಮಂತರಾವ್ - ಮುಂತಾದವರು (ಆಗಿನವರು ಇನ್ನೂ ಕೆಲವರ ಹೆಸರುಗಳ ನೆನಪಿಲ್ಲ) ಪಾಠಕ್ಕೆ, ಆಟಕ್ಕೆ, ಸಂಚಾರಕ್ಕೆ ಯಾವಾಗಲೂ ಜೊತೆಯಲ್ಲಿಯೇ ಇರುತ್ತಿದ್ದರು. ಉಪಾಧ್ಯಾಯರುಗಳಿಗಾಗಿ ಒಂದು ಲೈಬ್ರರಿಯನ್ನು ಏರ್ಪಡಿಸಿ ಕೊಂಡು ಎಲ್ಲರೂ ಓದುವಂತೆ ಪ್ರೋತ್ಸಾಹಿಸಿದ್ದೆನು. ಪ್ರತಿ ಮಂಗಳವಾರ ಒಬ್ಬೊಬ್ಬರು ಒಕ್ಕಡೆ ಹುಡುಗರನ್ನು ಸೇರಿಸಿಕೊಂಡು ಉಪನ್ಯಾಸಮಾಡುವ ಪದ್ಧತಿಯಿಟ್ಟುಕೊಂಡಿದ್ದೆವು. ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುವದು ರೂಢಿಯಾಗಬೇಕೆನ್ನುವದು ಉದ್ದೇಶ. ಶನಿ ಶನಿವಾರ (?) ಭಜನೆಗೆ ಸೇರುತ್ತಿದ್ದೆವು. ನಮ್ಮಲ್ಲಿ ಹಾಡುವವರು, ತಬಲಬಾರಿಸುವವರು ಮುಂತಾದವರೂ ಇದ್ದರು. ಎಲ್ಲರೂ ಅಣ್ಣತಮ್ಮಂದಿರಂತೆ ಒಂದುಗೂಡಿಕೊಂಡು ಕೆಲಸಮಾಡುತ್ತಿದ್ದೆವು. ಅದೊಂದು ದೊಡ್ಡ ಸಂತೋಷದ ಕೂಟವಾಗಿತ್ತು.

## ನಂಜಪ್ಪನವರು :

ಹೊಸದಾಗಿ ಏರ್ಪಟ್ಟಿದ್ದ ಸ್ಕೂಲುಸಿಬ್ಬಂದಿಗೆ ಒಬ್ಬ ಮೇಷ್ಟರು ಬೇಕಾಗಿತ್ತು. ಬೇಕಾದವರನ್ನು ನಿಯಮಿಸಿಕೊಳ್ಳುವಂತೆ ಸರ್ಕಲ್ ಇನ್‌ಸ್ಪೆಕ್ಟರು ಬರೆದಿದ್ದರು. (ಸರ್ಕಲ್ ಇನ್‌ಸ್ಪೆಕ್ಟರು ದಾಸಪ್ಪನವರು ಕಳೂರು ಕಟ್ಟೆಯಲ್ಲಿದ್ದಾಗ ನನ್ನನ್ನು ಸ್ವಲ್ಪ ಕ್ರೂರ ದೃಷ್ಟಿಯಿಂದ ಕಂಡುಕೊಳ್ಳುತ್ತಿದ್ದರಾದರೂ ಕೃಷ್ಣಸ್ವಾಮಿಅಯ್ಯರೂ, ವಿ. ಸುಬ್ರಹ್ಮಣ್ಯಅಯ್ಯರವರೂ ಅವರಿಗೆ ನನ್ನ ವಿಷಯದಲ್ಲಿ ಶಿಫಾರಸು ಮಾಡಿದ ಮೇಲೆ ಪ್ರಸನ್ನಚಿತ್ತರಾಗಿದ್ದರು. ನಾನು ಎರಡನೆಯ ಸಲ ಕಳೂರುಕಟ್ಟೆಗೆ ಕೆಲಸಕ್ಕೆ ಸೇರಿದಾಗ ದಸರಾ ರಜದ ಸಂಬಳವನ್ನು ನನಗೆ ಕೊಡಿಸಿಕೊಡಬೇಕೆಂದು ಅರ್ಜಿ ಹಾಕಿಕೊಂಡು, ಅಯ್ಯರುಗಳಿಬ್ಬರಿಗೂ ಶಿಫಾರಸು ಮಾಡುವಂತೆ ಕೇಳಿಕೊಂಡಿದ್ದೆನು. ಅವರ ಹೊಗಳಿಕೆಯಿಂದ ನಾನು ಕೆಲಸದಲ್ಲಿ ದಕ್ಷನೆಂದೂ

ವಿದ್ಯಾವಂತನೆಂದೂ ಇನ್‌ಸ್ಪೆಕ್ಟರವರ ಬಂಧುಜನವೇ ಎಂದೂ ಮುಂತಾಗಿ ಅವರಿಗೆ ತಿಳಿಯಬಂದು ವಿನಾಕಾರಣವಾಗಿ ನನಗೆ ತೊಂದರೆಯಾದದ್ದಕ್ಕೆ ಅನುತಾಪ ಪಟ್ಟಿದ್ದರು. ಶಿವಮೊಗ್ಗದ ಡಿ|| ಇ||ರೂ ಶಿಫಾರಸು ಮಾಡಿದ್ದು ಅವರಿಗೆ ನನ್ನ ಮೇಲೆ ಮಮತೆಯುಂಟಾಗುವದಕ್ಕೆ ಕಾರಣವಾಯಿತು. ಆದ್ದರಿಂದ ಈಗ ಅವರು ನನಗೆ ಎಲ್ಲಾ ಬಗೆಯಿಂದಲೂ ಸ್ಕೂಲು ಕೆಲಸಕ್ಕೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು). ನಾನು ನನಗೆ ಬೇಕಾಗಿದ್ದ ನಂಜಪ್ಪನವರಿಗೆ ಅರ್ಜಿಹಾಕಿಕೊಳ್ಳುವಂತೆ ಅರಸೀಕೆರೆಗೆ ಕಾಗದ ಬರೆದು ನಾನೂ ಶಿಫಾರಸು ಮಾಡಿದೆನು. ನಂಜಪ್ಪನವರು ಈವರೆಗೆ ಕಳೂರುಕಟ್ಟೆಯೊಂದು ಹೊರತು ಮಿಕ್ಕಕಡೆಗಳಲ್ಲಿ ನನ್ನನ್ನು ಮತ್ತೆ ಮತ್ತೆ ನೋಡುತ್ತಲೇ ಇದ್ದರು. ಕಳ್ಳೂರುಕಟ್ಟೆಯ ನಿಮಿತ್ತದಿಂದ ನಾನು ರಜದ ಮೇಲೆ ಅರಸೀಕೆರೆಯಲ್ಲಿದ್ದಾಗಲಂತೂ ಅವರಿಗೂ ನನಗೂ ಹೆಚ್ಚಿನ ಸಮೀಪ ಸಂಬಂಧವಿರುತ್ತಿತ್ತು. 1913 ರಲ್ಲಿ ಅವರು ಹೈಸ್ಕೂಲಿನಲ್ಲಿ ಓದುವದಕ್ಕೆ ಹೋಗಿದ್ದಾಗಲೂ ಬೆಂಗಳೂರಿನಲ್ಲಿ ಅವರನ್ನು ಕಂಡಿದ್ದೆನು. ದಾವಣಗೆರೆಯಲ್ಲಿ ಕಂಡಾಗಿನಿಂದ ಹೀಗೆ ಅವರು ನಮಗೆ ಸೇರಿಕೊಂಡವರೇ ಆಗಿದ್ದದ್ದರಿಂದಲೂ, ಇನ್ನೂ ಚಿಕ್ಕ ವಯಸ್ಸಿನವ ರಾಗಿದ್ದು ಕೆಲಸವನ್ನು ಚೆನ್ನಾಗಿಮಾಡಿಯಾರೆಂಬ ಹಾರೈಕೆಯಿದ್ದದ್ದರಿಂದಲೂ ಅವರ ಹೆಸರನ್ನು ಸೂಚಿಸಿದೆ.

ನಂಜಪ್ಪನವರಿಗೆ ಹೊಳಲ್ಕೆರೆಯಲ್ಲಿ ಯಾವ ಕೆಲಸವೂ ಖಾಲಿಯಿಲ್ಲವೆಂದೂ ಉತ್ತರ ಬಂದಿತ್ತಂತೆ; ನನಗೇನೋ ಅವರನ್ನು ಕೆಲಸಕ್ಕೆ ಸೇರಿಸಿಕೊಂಡು ರಿಪೋರ್ಟುಮಾಡಿ ಎಂದು ಬರೆಯಲಾಗಿತ್ತು. ಅಂತೂ ಅವರು ಬಂದು, ನಮ್ಮ ಮನೆಯ ಹತ್ತಿರದಲ್ಲಿಯೇ ಮನೆ ಮಾಡಿಕೊಂಡು ನನ್ನ ಜೊತೆಯಲ್ಲಿಯೇ ಓಡಾಡಿಕೊಂಡಿದ್ದರು. ಸ್ಕೂಲಿನಲ್ಲಿ ಒಂದನೆಯ ತರಗತಿಗೆ ಅವರನ್ನು ಮೊದಲು ನಿಯಮಿಸಿದೆನೆಂದು ನೆನಪಿದೆ. ಅವರು ಕಥೆ, ಹಾಡು, ಲೆಕ್ಕ - ಮುಂತಾದವುಗಳನ್ನು ಹುಡುಗರಿಗೆ ಉತ್ಸಾಹವು ಉಕ್ಕೇರುವಂತೆ ಹೇಳಿಕೊಡುತ್ತಿದ್ದರು ; ಮಿಕ್ಕ ಸ್ಕೂಲಿನ ಮೇಷ್ಟರುಗಳಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಾಗಿರಲಿಲ್ಲ, ಪರಮಾರ್ಥ-ವಿಚಾರದಲ್ಲಂತೂ ಅತ್ಯಂತ ಆಸಕ್ತರಾಗಿರುತ್ತಿದ್ದರು.

## ಹೊಳಲ್ಕೆರೆಯ ಜೀವನ:

ಈ ಸಲ ಹೊಳಲ್ಕೆರೆಯಲ್ಲಿ ಜೀವನ ಕ್ರಮವು ಉಲ್ಲಾಸಕರವಾಗಿತ್ತು. ರಾಜಯೋಗವನ್ನು ಕನ್ನಡಿಸುವದಕ್ಕೆ ದಾವಣಗೆರೆಗೇ ಬರಬೇಕೆಂದು ದೊಡ್ಡಬಸಪ್ಪ-ನವರು ಬಯಸಿದ್ದರೂ ಇಲ್ಲಿಯೇ ಇದ್ದು ಅದನ್ನು ಪೂರೈಸಿಕೊಡುತ್ತೇನೆಂದು ವಾಗ್ದಾನವಿತ್ತು ಅದರಂತೆ ಅದನ್ನು ಇಲ್ಲಿ ಮುಗಿಸಿದೆ. ಚಂಪೂಭಾಗವತಕ್ಕೆ ಒಂದು

ಸುಂದರವ್ಯಾಖ್ಯಾನವನ್ನು ಬರೆಯಬೇಕೆಂಬ ಹಿರಿಯಾಸೆಯಿಂದ ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳುತ್ತಿದ್ದೆ. ರಾಮಾನುಜಭಾಷ್ಯವನ್ನು ತರಿಸಿ ಅದನ್ನು ಓದುತ್ತಲೂ ಶಾಂಕರಭಾಷ್ಯಕ್ಕೆ ಹೋಲಿಸುತ್ತಲೂ ವಿಚಾರದಲ್ಲಿ ಮಗ್ನನಾಗಿದ್ದ ಕಾಲವಿದು. ಇದೇ ಕಾಲದಲ್ಲಿ ಮಹಾಭಾಗವತರ ಪ್ರೇರಣೆಯಿಂದ ಹೊಸದಾಗಿ ಶ್ರೀರಂಗದಲ್ಲಿ ಪ್ರಕಟವಾಗಿದ್ದ ಬಾಲಬೋಧಿನೀ ವ್ಯಾಖ್ಯಾನ ಸಮೇತವಾದ, ವೇದಾಂತಸಾರವನ್ನು ತರಿಸಿ ಅದರಲ್ಲಿದ್ದ ಸುಂದರಮ್ ಅಯ್ಯರವರ ಇಂಗ್ಲಿಷ್ ಪ್ರವೇಶಿಕೆಯನ್ನು ಓದಿದ ಮೇಲೆ ಬಾದರಾಯಣಸೂತ್ರವು ಶಾಂಕರಭಾಷ್ಯ ಸಮ್ಮತ್ರವೆ, ಅಲ್ಲವೆ ? - ಎಂಬುದನ್ನು ಚರ್ಚಿಸಿ ಒಂದು ಇಂಗ್ಲೀಷು ಪ್ರಬಂಧವನ್ನು ಬರೆದೆನು. (ಅದು ಮಹಾಭಾಗವತರ ಕೈಗೆ ಹೋದದ್ದು ಏನಾಯಿತೆಂಬುದು ನನಗೆ ತಿಳಿಯಲಿಲ್ಲ). ಶ್ರೀರಾಮನವಮಿಯ ಉತ್ಸವದಲ್ಲಿಯೂ ಮತ್ತೆ ಕೆಲವು ಬಿಡಿ ದಿನಗಳಲ್ಲಿಯೂ ದೇವಸ್ಥಾನದಲ್ಲಿ ಕೆಲವು ಉಪನ್ಯಾಸಗಳನ್ನು ಮಾಡಿದೆನು. (ಈ ಸಾರಿಯೋ, ಅಥವಾ ಹಿಂದೆ ಹೆಡ್‌ಮಾಸ್ಟರಾಗಿದ್ದಾಗಲೋ ಮರೆತುಹೋಗಿದೆ - ಈ ಸಾರಿ ಅಲ್ಲ ಹಿಂದೆಯೇ - ಪುರಾಣಗಳ ಮೇಲೆ ಉಪನ್ಯಾಸವನ್ನು ಕೊಟ್ಟು, ದೇವಾಲಯದಲ್ಲಿ ಒಂದು ಪುರಾಣದ ಪುಸ್ತಕ ಭಂಡಾರವನ್ನು ಏರ್ಪಡಿಸಬೇಕೆಂದು ಜನರನ್ನು ಪ್ರೋತ್ಸಾಹಿಸಿದೆನು. ದುರ್ದೈವದಿಂದ ನಾನು ಮತ್ಸ್ಯಪುರಾಣವನ್ನು ಪ್ರಾರಂಭಿಸಬೇಕೆಂದು ಸೂಚಿಸಿದಾಗ, ಚನ್ನಗಿರಿಯಿಂದ ದಯಮಾಡಿಸಿದ್ದ ಒಬ್ಬ ಆಚಾರ್ಯರು ಅದು ತಾಮಸಪುರಾಣವೆಂದು ಗುಲ್ಲೆಬ್ಬಿಸಿದ್ದರ ಫಲವಾಗಿ ಪುರಾಣಗಳ ಸುದ್ದಿಯು ಪುರಾಣವೇ ಆಗಿಬಿಟ್ಟಿತ್ತು!). ಮಗ ನರಸಪ್ಪನಿಗೆ ಉಪನಯನ ಆದದ್ದೂ ಈಗಲೇ. ಗರ್ಭಾಷ್ಟಮದಲ್ಲಿಯೇ ಉಪನಯನ ಮಾಡುವದು ಒಳ್ಳೆಯದೆಂದು ನಮ್ಮೂರ ಸುಬ್ಬಾಜೋಯಿಸರು ಹೇಳಿದ್ದ ಪ್ರಕಾರ ತರೀಕೆರೆಗೆ ಹೋಗಿ ಅಲ್ಲಿ ತಂಗಕ್ಕನವರ ಮಗಳಿಗೆ ಮದುವೆಯನ್ನೂ, ನರಸಪ್ಪನಿಗೂ, ತಂಗಕ್ಕನವರ ಮಗ ಅಯ್ಯ (ಮಂಜಯ್ಯ)ನಿಗೂ ಉಪನಯನವನ್ನು ಮಾಡಿದೆವು. ಇನ್‌ಸ್ಪೆಕ್ಟರು ದಾಸಪ್ಪನವರು ಸ್ಕೂಲಿನ ಪರೀಕ್ಷೆಗೆ ದಯಮಾಡಿಸಿದಾಗ ಸ್ಕೂಲಿನ ಉಪಾಧ್ಯಾಯರುಗಳೆಲ್ಲರೂ ಜೊತೆಯಲ್ಲಿ ಸೇರಿಕೊಂಡು ಹೊಳಲ್ಕೆರೆ ಸ್ಟೇಷನ್ನಿನ ಬಳಿಯಿದ್ದ ಛತ್ರದಲ್ಲಿ ಅವರನ್ನು ಎದುರುಗೊಂಡು ಸತ್ಕರಿಸಿದ್ದನ್ನು ಅವರು ಬಹಳ ಸಂತೋಷದಿಂದ ಸ್ವೀಕರಿಸಿದರು. 'ನೀವೆಲ್ಲರೂ ಹೀಗೆ ಒಟ್ಟಿಗೆ ಇರುವದನ್ನು ಕಂಡು ನನಗೆ ಬಹಳ ಸಂತೋಷವಾಗಿದೆ. ಹೆಡ್‌ಮಾಸ್ಟರೇ ನೀವು ಕಾಲಿಗೆ ಎಕ್ಕಡ ಹಾಕಬಾರದು, ಬೂಟ್ಸು ಹಾಕಿಕೊಳ್ಳಿರಿ, ಎಲ್ಲರೂ ಪೋಲೀಸ್ ಡ್ರಿಲ್ ಅಭ್ಯಾಸ ಮಾಡಿರಿ ; ಅಮಲ್ದಾರರಿಗೆ ನಿಮಗೆ ಸಹಾಯವನ್ನು ಮಾಡುವಂತೆ ಹೇಳುತ್ತೇನೆ' ಎಂದು ಉತ್ಸಾಹದಿಂದ ನುಡಿದರು. ಬೆಳಗಿನ ಹೊತ್ತು ಚಿಕ್ಕ ತರಗತಿಗಳ ಹುಡುಗರಿಗೆ ಪ್ರತಿದಿನವೂ ಡ್ರಿಲ್ ಇಟ್ಟಿದ್ದದ್ದನ್ನೂ

ಕಿಂಡರ್ಗಾರ್ಟನ್ ಮುಂತಾದವುಗಳನ್ನು ಏರ್ಪಡಿಸಿದ್ದನ್ನು ನೋಡಿ ಸಂತೋಷಪಟ್ಟರು. ಮಿಕ್ಕ ಉಪಾಧ್ಯಾಯರುಗಳು ತೋರಿಸಿದ ಉತ್ಸಾಹವೂ ಅವರಿಗೆ ಪೂರ್ಣ ಸಂತೋಷವನ್ನುಂಟುಮಾಡಿತು.

## ಮಹಾಭಾಗವತರ ಆಗಮನ:

ಈ ಕಾಲಕ್ಕೆ ಚಿತ್ರದುರ್ಗಕ್ಕೆ ಹೋಗುವದಕ್ಕೆಂದು (ಇದು ಎರಡನೆಯ ಸಲ) ಮಹಾಭಾಗವತರು ಮಾಘಮಾಸದಲ್ಲಿ ದಯಮಾಡಿಸಿದರು. (ಬೇಸಿಗೆಯ ರಜದಲ್ಲಿ ನಂಜಪ್ಪನವರು 'ವೆಕೇಷನ್ ಟ್ರೈನಿಂಗ್' ಎಂಬ ಹೆಸರಿನಿಂದ, ಆರು ವಾರಗಳವರೆಗೆ ಒಂದು ಬೋಧಕರ ತರಬಿಯತ್ತಿನ ತರಗತಿಗೆ ಹೋಗಿದ್ದಾಗ ಅಲ್ಲಿ ಮಹಾಭಾಗವತರು ದಯಮಾಡಿಸಿ ಉಪನ್ಯಾಸಗಳನ್ನು ಮಾಡಿದ್ದರೆಂದೂ ಶಂಕರಮಠದಲ್ಲಿಯೂ ಅವರ ಉಪನ್ಯಾಸವು ಆಯಿತೆಂದೂ, ನಂಜಪ್ಪನವರು ಹೇಳುತ್ತಾರೆ. ನಾನೂ ಆಗಿನ ಕಾಲಕ್ಕೆ ಹೋಗಿರಬಹುದು. ಶಂಕರಯ್ಯ ಹಾಲ್ ಮತ್ತು ರಾಮಕೃಷ್ಣಾಶ್ರಮದಲ್ಲಿಯೂ ಒಂದು ಉಪನ್ಯಾಸವು ಆದದ್ದು ಈಗಲೇ ಇರಬಹುದು. ಅಲ್ಲಿ ಶ್ರೀ ರಾಮಕೃಷ್ಣಪರಮಹಂಸರ ವಿಷಯಕ್ಕೆ ಕೊಟ್ಟಿರುವ ಉಪನ್ಯಾಸವು ಬಹಳ ವಿಚಾರಪ್ರಚೋದಕವಾಗಿತ್ತು. ವೈರಾಗ್ಯದ ವಿಷಯಕ್ಕೆ ಯಾರೋ ಒಬ್ಬರು ಸ್ವಲ್ಪ ಆಕ್ಷೇಪಿಸಿದಾಗ ಒಳ್ಳೆಯ ಹುರುಪಿನಿಂದ ವೈರಾಗ್ಯವನ್ನು ಹೊಗಳಿ ಮಾತನಾಡಿದ್ದರು.) ಈ ಸಲ ನನ್ನ ಪ್ರಾರ್ಥನೆಯಂತೆ ಹೊಳಲ್ಕೆರೆಯಲ್ಲಿ ನಾಲ್ಕೈದು ದಿನಗಳು ಇದ್ದರು. ಒಂದು ದಿನ ಬೆಳಗ್ಗೆ ನಮ್ಮ ಸ್ಕೂಲಿನ ಉಪಾಧ್ಯಾಯರ ಸಂಘದ ಉಪನ್ಯಾಸದಲ್ಲಿ ಅಧ್ಯಕ್ಷರಾಗಿ ಉಪದೇಶವನ್ನು ಮಾಡಿದರು. ರಾಮನವಮಿಯ ಉತ್ಸವವನ್ನು ಆವೂರಿನಲ್ಲಿಯೇ ನೆರವೇರಿಸಿದರು (ಇದು ನಾನು ಬರುವದಕ್ಕಿಂತ ಮುಂಚೆಯೇ ಅವರು ಅಲ್ಲಿಗೆ ಬಂದಿದ್ದಾಗ). ಮಧ್ಯಾಹ್ನ ಊಟವಾಗುವದು ಬಹಳ ಹೊತ್ತಾಗಿತ್ತು, ರಾತ್ರೆ ಹರಿಕಥೆಯಾದ ಬಳಿಕ ಬಹಳ ಹೊತ್ತಾದ ಮೇಲೆ ಆಂಜನೇಯನ ಗುಡಿಗೆ ಹೋಗಿದ್ದೆವು, ಅಲ್ಲಿ ರಾಮದಾಸರ ವಿಷಯವಾಗಿ ಉಪನ್ಯಾಸಮಾಡಿದಾಗ ತೂಕಡಿಕೆಯಲ್ಲಿದ್ದವರೆಲ್ಲರೂ, ಸಚೇತನರಾಗಿ ಕಿವಿಗಳನ್ನು ನಿಮಿರಿಸಿಕೊಂಡು ಸಂತೋಷಭರಿತರಾಗಿ ಕೇಳುವದಕ್ಕೆ ಮೊದಲು ಮಾಡಿದರು. ಆ ದಿನ ಹರಿಕಥೆ ಮಾಡಿದ ಒಬ್ಬ ಮೇಷ್ಟರು ಕಥೆಯಲ್ಲಿ ನಡುನಡುವೆ ಆಡಿದ ವಿರಕ್ತರುಗಳಿಗೆ ಮನೋವೇಧಕವಾದ ಕೆಲವು ಅಪಚಾರೋಕ್ತಿಗಳನ್ನು ಮನಸ್ಸಿಗೆ ಬಹಳ ಹಚ್ಚಿಕೊಂಡು ವ್ಯಥೆಪಟ್ಟರು. ಹರಿಕಥೆ ಎಂದರೆ ಹೀಗಿರಬೇಕು ಎಂದು ತಮ್ಮ ಮತವನ್ನು ಸೂಚಿಸಿದರು. ಮಾರನೆಯದಿನ ನಾನೂ, ಚಿದಂಬರಯ್ಯನವರೂ ಪ್ರಾರ್ಥಿಸಿಕೊಂಡ ಪ್ರಕಾರ ಹರಿಕಥೆಯ ಮಾದರಿಯನ್ನು ತೋರಿಸುವದಕ್ಕೆ ಒಪ್ಪಿ, ಅದೇ ಮೇಷ್ಟರ ಕೆಲವು

ಪದಗಳನ್ನು ಉಪಯೋಗಿಸಿ ಕೊಂಡು ಕೀರ್ತನಮಾಡಿದರು. ಸೂತ್ರರೂಪವಾಗಿ ಉಪಯೋಗಿಸಿಕೊಂಡ (ಸಂತರ ಪಾದವನ್ನು ಹೊಂದಬೇಕು ಎಂಬರ್ಥದ) ಒಂದು ಮರಾಠಿಪದಕ್ಕೆ ಅರ್ಥವನ್ನು ವಿವರಿಸುತ್ತಾ ವಿವರಿಸುತ್ತಾ ಭಕ್ತಿಜ್ಞಾನವೈರಾಗ್ಯಗಳ ಭಾವನೆಗಳ ಉಪದೇಶಗಳನ್ನು ಸೂರೆಮಾಡಿದರು. ದಾವಾಜಿಪಂತನ ಕಥೆಯನ್ನು ನಿರೂಪಿಸಿದರು. ಜನರಿಗೆ ಹೊತ್ತು ಹೋದದ್ದೇ ತಿಳಿಯಲಿಲ್ಲ. ಮೈಮರೆತು ಚಿತ್ರ ಪ್ರತಿಮೆಗಳಾಗಿ ಕೇಳುತ್ತಿದ್ದರು. ಕಥೆಯಲ್ಲಿ ನವಾಬನು ಹೊಲೆಯನ ವೇಷದಲ್ಲಿ ಬಂದಿದ್ದ ಭಗವಂತನನ್ನು ಹುಡುಕುತ್ತಾ 'ಹೇ ಮಹರಾಜ್ !' ಎಂದು ಆರ್ತ ಧ್ವನಿಯಿಂದ ಕೂಗುತ್ತಿದ್ದನೆಂಬುದನ್ನು ಕೇಳಿದಾಗಲಂತೂ ಜನರು ಕಣ್ಣೀರು ಸುರಿಸುತ್ತಿದ್ದರು. ಎಲ್ಲರೂ ಆನಂದದಲ್ಲಿ ಬೆರೆತುಹೋಗಿದ್ದರು. ಕಥೆ ನಿಲ್ಲಿಸಿದಾಗ ರಾತ್ರೆ ಎರಡು ಘಂಟೆಯಾಗಿರಬಹುದು. ಅಂಥ ಹರಿಕಥೆಯನ್ನು ಶ್ರವಣಮಾಡುವ ಸುಯೋಗವು ಎಲ್ಲರಿಗೂ ಸುಲಭವಾಗಿ ಲಭಿಸುವದಿಲ್ಲ. ನಮ್ಮ ಜನ್ಮದಲ್ಲಿ ಅದೊಂದೇ ನಮಗೆ ದೊರೆತದ್ದು ಎನ್ನಬಹುದು. ಭಾಗವತರು ಆವೂರಿನಿಂದ ಹೊರಟು ಹೋದಮೇಲೂ ಜನರು ಅವರ ಕೀರ್ತನೆಯನ್ನು ಸ್ಮರಿಸಿಕೊಳ್ಳುತ್ತಲೇ ಇದ್ದರು. ಉಪಾಧ್ಯಾಯರುಗಳು (ಅದರಲ್ಲಿಯೂ ಸಿದ್ಧಗಂಗಯ್ಯನವರು) ಅದನ್ನು ; ಅಂಥ ಸುಯೋಗವು ಎಲ್ಲಿ ದೊರಕಬೇಕು ? ಎಂದು ಮತ್ತೆಮತ್ತೆ ಆಡಿಕೊಳ್ಳುತ್ತಿದ್ದರು !

## ಹೊಳಲ್ಕೆರೆ ಬಿಟ್ಟದ್ದು :

ಇಷ್ಟು ಹರ್ಷಜನಕವಾಗಿದ್ದ ಹೊಳಲ್ಕೆರೆಯ ಸಂಬಂಧವು ಹತ್ತು ತಿಂಗಳ ಮೇಲೆ ನನಗೆ ಲಭಿಸಲಿಲ್ಲ. ಆ ಉತ್ಸಾಹಭರಿತವಾದ ಉಪಾಧ್ಯಾಯರುಗಳ ಸಂಘವೂ ಅಲ್ಲಿ ಬಹುಕಾಲ ನಿಲ್ಲಲಿಲ್ಲ. ನಂಜಪ್ಪನವರಿಗೆ ಈ ಹೊತ್ತಿಗೆ ಕೆಲಸವು ಖಾಯಂ ಆಗಿತ್ತು. ಸ್ವಲ್ಪ ದಿನಗಳಲ್ಲಿಯೇ ಅವರಿಗೆ ಬಡತಿಯ ಮೇಲೆ ಚಿತ್ರದುರ್ಗದ ಸ್ಕೂಲಿಗೆ ವರ್ಗವಾಗಿ ಹೋದರು. ಆ ಮುಂಚೆಯೇ ನನಗೂ ಹರಿಹರಕ್ಕೆ ವರ್ಗವಾಗಿಬಿಟ್ಟಿತು. ಹೊಳಲ್ಕೆರೆ ಸ್ಕೂಲಿನ ಆ ಸಹಾಯೋಪಾಧ್ಯಾಯರಲ್ಲಿ ಒಬ್ಬಿಬ್ಬರನ್ನು ಮಾತ್ರ ಕಾಲಾಂತರದಲ್ಲಿ ನಾನು ಕಂಡೆ. ಮಿಕ್ಕವರು ಗಾಳಿಗೊಡ್ಡಿದ ಮೋಡಗಳಂತೆ ಎಲ್ಲೆಲ್ಲಿಗೋ ವರ್ಗವಾಗಿ ಹೋಗಿಬಿಟ್ಟರು.

# 28. ಹರಿಹರ - ಎರಡನೆಯ ಸಲಕ್ಕೆ (1916)

## ಹರಿಹರದ ಸ್ಕೂಲು :

ಹರಿಹರಕ್ಕೆ ನನಗೆ ಇಷ್ಟು ಬೇಗ ವರ್ಗವಾಗುವದಕ್ಕೆ ಅಲ್ಲಿದ್ದ ಮಹದೇವರಾವ್ ಎಂಬ ರಿಟೈರ್ಡ್ ಅಸಿಸ್ಟೆಂಟ್ ಕಮಿಷನರು ಕಾರಣವಾದರು. ಅಲ್ಲಿಯ ಸ್ಕೂಲು ಅವ್ಯವಸ್ಥಿತಸ್ಥಿತಿಯಲ್ಲಿದ್ದದ್ದರಿಂದ ಯಾರಾದರೂ ಕಾರ್ಯಶ್ರದ್ಧೆಯುಳ್ಳ ದಕ್ಷರನ್ನು ಕಳುಹಿಸಿಕೊಡಿ ಎಂದು ಅವರು ದಾಸಪ್ಪನವರನ್ನು ಕೇಳಿ ಕೊಂಡರಂತೆ. ಈಗ ನನ್ನಲ್ಲಿ ಅಭಿಮಾನವನ್ನಿಟ್ಟುಕೊಂಡಿದ್ದ ದಾಸಪ್ಪನವರು ನನ್ನನ್ನು ಅಲ್ಲಿಗೆ ವರ್ಗಮಾಡಿದರು.

ನಿಜವಾಗಿಯೂ ಸ್ಕೂಲಿನ ಸ್ಥಿತಿ ಅಷ್ಟು ಸಮರ್ಪಕವಾಗಿರಲಿಲ್ಲ. ಹೆಡ್‌ಮಾಸ್ತರು ರಿಟೈರು ಆಗುವ ವಯಸ್ಸಿನಲ್ಲಿದ್ದದ್ದರಿಂದ ಯಾವ ಹೊಣೆಗಾರಿಕೆಯನ್ನೂ ಇಟ್ಟುಕೊಳ್ಳದೆ ಮೊದಲನೆಯ ಅಸಿಸ್ಟೆಂಟು ಮಾಸ್ತರಿಗೆ ಎಲ್ಲವನ್ನೂ ವಹಿಸಿಬಿಟ್ಟಿದ್ದರು. ವೇಳಾಪತ್ರಿಕೆ ನೆಪಕ್ಕೆ ಇದ್ದಿತೇ ಹೊರತು ಅದರಂತೆ ಪಾಠವನ್ನೇನೂ ಮಾಡುತ್ತಿರಲಿಲ್ಲ. ಯಾವ ಮಾಸ್ತರು ಯಾವಾಗ ಅನುಕೂಲವೋ ಆಗ್ಗೆ ಅವರು ಗೈರುಹಾಜರಾಗಿರುವ ಮಾಸ್ತರಿನ ತರಗತಿಯನ್ನು ಸೇರಿಸಿಕೊಂಡು ಪಾಠ ಮಾಡಿ ಮುಗಿಸುತ್ತಿದ್ದರು. ನಾನು ಚಾರ್ಜು ತೆಗೆದುಕೊಳ್ಳುವದಕ್ಕೆ ಹೋದಾಗ ಸ್ಕೂಲಿನ ಬಾಗಿಲು ಮುಚ್ಚಿತ್ತು ; ಜವಾನನು ಮಾತ್ರ ಬಾಗಿಲಲ್ಲಿ ಕುಳಿತಿದ್ದ. ವಿಚಾರಿಸಿದ್ದರಲ್ಲಿ ''ಈಗ 'ನೀತಿಪಾಠ'ವಾದ್ದರಿಂದ ಇನ್ನೂ ಅರ್ಧಘಂಟೆಯಾದ ಮೇಲೆ ಎಲ್ಲರೂ ಬರುತ್ತಾರೆ'' ಎಂದನು. ನೀತಿಪಾಠವೆಂದರೆ ಕರ್ತವ್ಯಪರಾಙ್ಮುಖತೆ ಎಂಬರ್ಥವನ್ನು ಎಲ್ಲರೂ ಇಟ್ಟುಕೊಂಡಿದ್ದಾರೆಂಬುದು ನನಗೆ ಸ್ಪಷ್ಟವಾಯಿತು. ವಿದ್ಯಾರ್ಥಿಗಳು ಈ ವಿಷಯದಲ್ಲಿ **'ಯಥಾಗುರುಸ್ತಥಾ ಶಿಷ್ಯಃ'** ; ಅಥವಾ **'ಶಿಷ್ಯಾದಿಚ್ಛೇತ್ ಪರಾಜಯಮ್'** ಎಂಬ ನ್ಯಾಯಗಳನ್ನು ಅನುಸರಿಸುತ್ತಿದ್ದರೆಂದು ಹೇಳಬಹುದು.

ನಾನು ಯಾರೊಬ್ಬರಿಗೂ ಮನಸ್ಸಿಗೆ ನೋವಾಗದಂತೆ ನೋಡಿಕೊಂಡು, ಮೆಲ್ಲಮೆಲ್ಲಗೆ ಕಾಲಕಾಲಕ್ಕೆ ಸ್ಕೂಲಿಗೆ ಬರುವ ಪದ್ಧತಿ, ವೇಳಾಪತ್ರಿಕೆಯಂತೆ ಪಾಠವನ್ನು ನಡೆಯಿಸುವದು, ಹುಡುಗರಿಗೆ ಮನೆಯಲ್ಲಿ ಉತ್ತರವನ್ನು ಬರೆದುಕೊಂಡು ಬರುವ ಅಭ್ಯಾಸದ ಪ್ರಶ್ನೆಗಳು, ಉತ್ತರಗಳ ಎಚ್ಚರಿಕೆಯಿಂದ ತಿದ್ದುವಿಕೆ, ಪ್ರತಿಯೊಂದು ತರಗತಿಗೂ ನಂಬರು ಬುಕ್ಕನ್ನು ಇಟ್ಟು ಹುಡುಗರ ಅಭಿವೃದ್ಧಿಯನ್ನು ಗೊತ್ತುಪಡಿಸುವದು, ಸ್ಕೂಲು ಬುಕ್ಕು, ಡಿಪೋವಿನ ಲೆಕ್ಕ ಪತ್ರಗಳನ್ನು ಕ್ರಮವಾಗಿಟ್ಟುಕೊಳ್ಳುವದು, ಕ್ರಿಕೆಟ್‌ಹಣದ ಲೆಕ್ಕಾಚಾರವ್ಯವಸ್ಥೆ, ಸ್ಕೂಲಿನ

ಸಾದಿಲ್ವಾರಿನ (ಕಛೇರಿ ಮೊದಲಾದವುಗಳಲ್ಲಿ ಕಾಗದವೇ ಮೊದಲಾದ್ದದ್ದಕ್ಕೆ ಸಣ್ಣಪುಟ್ಟ ಖರ್ಚು) ಸದ್ವಿನಿಯೋಗ, ಇವುಗಳನ್ನೆಲ್ಲಾ ಕ್ರಮಕ್ರಮವಾಗಿ ಆಚರಣೆಗೆ ತಂದೆನು. ಬೇರೆ ಬೇರೆ ತರಗತಿಗಳಿಗೆ ಹೋಗಿ ಪಾಠವನ್ನು ಹೇಳುವರೀತಿಯನ್ನು ಆಗಾಗ್ಗೆ ತಿಳಿಯಹೇಳಿದೆನು. ನನ್ನ ಸ್ವಂತ ಕೆಲಸವನ್ನು ಆದಷ್ಟು ಆದರ ಪೂರ್ವಕವಾಗಿ ಮಾಡುವದಕ್ಕೆ ಪ್ರಾರಂಭಿಸಿದೆನು. ಆಗ ಶರನ್ನವರಾತ್ರೆಯು ಬಂದ ಕೂಡಲೆ ಆವರೆಗೆ ಪರೀಕ್ಷೆಯ ತರಗತಿಗೆ ಆಗದೆ ಇದ್ದ ಪಾಠಗಳನ್ನು ರಜಕಾಲದಲ್ಲಿಯೂ ವಿಶೇಷ ತರಗತಿಯನ್ನೇರ್ಪಡಿಸಿ ಮುಗಿಸಿದೆನು. ಹುಡುಗರ ಅವಿಧೇಯತೆಯನ್ನು ಯಾವ ದಾಕ್ಷಿಣ್ಯವೂ ಇಲ್ಲದೆ ನಯಭಯಗಳಿಂದ ಸರಿಪಡಿಸಿದೆನು. ಇದೆಲ್ಲವೂ ಮಹದೇವರಾಯರಿಗೆ ಬಹಳ ಸಂತೋಷವನ್ನುಂಟುಮಾಡಿದವು. ಅವರ ಮಗನು ಸ್ವಲ್ಪ ತುಂಟತನದಲ್ಲಿದ್ದನು. ನಾನು ಬಂದ ಮೇಲೆ ವಿನೀತನಾದದ್ದು ಅವರಿಗೆ ಮತ್ತಷ್ಟು ಸಂತೋಷವನ್ನುಂಟುಮಾಡಿತು. ಅವರು ನನ್ನಲ್ಲಿಗೆ ಆಗಾಗ್ಗೆ ಬಂದು ಹಿಂದುಳಿದ ವರ್ಗದವರಿಗೆ ಕೊಡಬೇಕಾದ ಪ್ರೋತ್ಸಾಹದ ವಿಷಯಕ್ಕೆ ತಾವು ಮಾಡಲಿದ್ದ ರಿಪೋರ್ಟಿಗೆ ವಿಷಯಗಳನ್ನು ಚರ್ಚಿಸಿ ಸಂಗ್ರಹಿಸಿಕೊಳ್ಳುತ್ತಿದ್ದರು. ಬೆಂಗಳೂರಿಗೆ ಹೋದಾಗ ಇನಸ್ಪೆಕ್ಟರುಜನರಲ್ ಶ್ಯಾಮರಾಯರನ್ನು ಕಂಡು ನನ್ನ ಯೋಗ್ಯತೆಯ ವಿಷಯವಾಗಿ ಬಹಳವಾಗಿ ಕೊಂಡಾಡಿದ್ದಲ್ಲದೆ ಆಗ್ಗೆ ದಾವಣಗೆರೆಗೆ ಕೊಡಬೇಕೆಂದಿದ್ದ ಹೈಸ್ಕೂಲನ್ನು ಹರಿಹರಕ್ಕೇ ಕೊಡಬೇಕೆಂದೂ, ನನ್ನನ್ನು ಆ ಸ್ಕೂಲಿಗೆ ಸೇರಿಸಿಕೊಳ್ಳಬೇಕೆಂದೂ ಮುಂತಾಗಿ ಶಿಫಾರಸುಮಾಡಿದರು. ಅವರ ಅಭಿಮಾನದ ಫಲವಾಗಿ ಶ್ಯಾಮರಾಯರಿಗೆ ಕಳೂರುಕಟ್ಟೆಯ ಸಂಬಂಧದಿಂದ ನನ್ನ ವಿಷಯದಲ್ಲಾದ ದುರಭಿಪ್ರಾಯವೂ ಹೋಯಿತು ; ಹರಿಹರದ ಸ್ಕೂಲಿನ ಅವ್ಯವಸ್ಥೆಯ ವಿಷಯಕ್ಕೆ ಜನಜನಿತವಾಗಿದ್ದ ಕೆಟ್ಟ ಹೆಸರೂ ಮಾಯವಾಯಿತು.

## ಗ್ರಂಥರಚನೆಯಲ್ಲಿ ಚಟುವಟಿಕೆಗಳು :

ಹರಿಹರದಲ್ಲಿ ನಾನಿದ್ದಷ್ಟು ಕಾಲವೂ ಗ್ರಂಥ ರಚನೆಯಲ್ಲಿ ತೊಡಗಿದ್ದೆನು. ಮಹಾಭಾಗವತರ ಸಂಸರ್ಗದ ಫಲವಾಗಿ ನಾರದಭಕ್ತಿಸೂತ್ರಕ್ಕೆ ಒಂದು ವಿಸ್ತಾರವಾದ ವಿವರಣೆಯನ್ನು ಬರೆದೆನು. ಹಿಂದೆ ವಿವೇಕೋದಯ ಪತ್ರಿಕೆಗೆ ಬರೆದುಕೊಟ್ಟಿದ್ದ ವೃತ್ತಿಗಿಂತಲೂ ಇದು ಅನೇಕ ವಿಷಯಗಳಲ್ಲಿ ಹೆಚ್ಚು ತೃಪ್ತಿಕರವಾಗಿತ್ತು. ಮಹಾಭಾಗವತ, ವಿಷ್ಣುಪುರಾಣ, ಭಗವದ್ಗೀತೆ ಮುಂತಾದ ಗ್ರಂಥಗಳಿಂದ ಮೂಲವಾಕ್ಯಗಳನ್ನು ಸಂಗ್ರಹಿಸಿ ಅಲ್ಲಲ್ಲಿ ಸೇರಿಸಿ ಕಥೆಗಳು ದೃಷ್ಟಾಂತಗಳು ಮುಂತಾದವುಗಳಿಂದ ವಿಷಯವನ್ನು ಹಿಗ್ಗಿಸಿ ಬರೆದೆನು. ಅದನ್ನು ಚಿದಂಬರಯ್ಯನವರು ಓದಿ ಪ್ರಾಯಶ: ತಾವೇ ಶುದ್ಧ ಪ್ರತಿಯನ್ನು ಬರೆದುಕೊಟ್ಟರು.

ಕಾಲಕ್ರಮದಲ್ಲಿ ಅದನ್ನು ಅಚ್ಚುಮಾಡಿಸುವ ಏರ್ಪಾಡನ್ನು ಮಾಡಿಸಿದರು. (ಈಗ ಈ ಪುಸ್ತಕವು 'ಭಕ್ತಿಚಂದ್ರಿಕೆ' ಎಂಬ ಹೆಸರಿನಲ್ಲಿ ಮುದ್ರಿತವಾಗಿ ಕಾರ್ಯಾಲಯದಲ್ಲಿ ದೊರಕುತ್ತದೆ).

ಚಿದಂಬರಯ್ಯನವರು ಬರೆದ 'ಗೀತಾರ್ಥವಿವರಣೆ' ಎಂಬ ಪುಸ್ತಕದ ಕೈಬರಹದ ಪ್ರತಿಯನ್ನು ನಾನು ಒಂದು ಸಲ ಓದಿ ಅವರಿಗೆ ಹಿಂತಿರುಗಿಸಿ ಕಳುಹಿಸಿದ್ದು ಈ ಕಾಲದಲ್ಲಿ. ಅವರು 'ಬ್ರಹ್ಮಾನಂದಗಿರಿ' ಎಂಬ ಸಂಸ್ಕೃತ ವ್ಯಾಖ್ಯಾನವನ್ನು ಬಹಳ ಮಟ್ಟಿಗೆ ಅದರಲ್ಲಿ ಅನುಸರಿಸಿದ್ದರು. ಭಕ್ತಿಜ್ಞಾನಗಳ ಸಾಮರಸ್ಯವನ್ನು ತೋರಿಸುವ ಕೆಲವು ಸೂಚನೆಗಳನ್ನು ನಾನು ಅವರಿಗೆ ಕೊಟ್ಟೆನು. ನಾರದಭಕ್ತಿಸೂತ್ರವೂ ಗೀತಾರ್ಥವಿವರಣೆಯೂ ಮುಂದೆ ಬೆಂಗಳೂರಲ್ಲಿ ಮತ್ತೊಬ್ಬರಿಂದ ಪ್ರಕಟಿತವಾದವು.

ರಾಜಯೋಗವು ಬೆಂಗಳೂರಿನಿಂದ ಅಚ್ಚಾಗಿ ಕೈಗೆ ಬಂದದ್ದು ಆಗಲೇ. ಅದನ್ನು ಅಲ್ಲಲ್ಲಿಗೆ ಸಲಹೆ ಕೊಟ್ಟು ಅಚ್ಚಿಗೆ ಸಿದ್ಧಪಡಿಸಿ ತಮ್ಮ ತಮ್ಮಂದಿರಾದ ನಾರಾಯಣರಾಯರಿಂದ ಅಚ್ಚಿನ ಕರಡುಗಳನ್ನು ತಿದ್ದಿಸಿಕೊಟ್ಟು ಚಿದಂಬರಯ್ಯ-ನವರು ಉಪಕಾರಮಾಡಿದರು. ಇಷ್ಟರಲ್ಲಿ ಬೆಂಗಳೂರಿನ ಸ್ವಾಮಿ ನಿರ್ಮಲಾನಂದ-ರನ್ನು ದೊಡ್ಡಬಸಪ್ಪನವರು ಭಾಷಾಂತರೀಕರಣಕ್ಕೆ ಅನುಮತಿಯನ್ನು ಕೇಳಿದ್ದಕ್ಕೆ ಪ್ರತಿಯೊಂದು ಮುದ್ರಣಕ್ಕೆ ಇನ್ನೂರು ಪ್ರತಿಗಳನ್ನು ತಮ್ಮ ಆಶ್ರಮಕ್ಕೆ ಕೊಡುವ ಷರತ್ತಿನ ಮೇಲೆ ಅವರು ಅನುಜ್ಞೆಯಿತ್ತರು. ರಾಮಕೃಷ್ಣಾಶ್ರಮದವರಿಗೆಲ್ಲ ಬೆಂಗಳೂರಿನಮಠವೇ ಪ್ರತಿನಿಧಿಯೆಂಬದೇನೂ ಇಲ್ಲದಿದ್ದರೂ ವಿನಯದಿಂದ ದೊಡ್ಡಬಸಪ್ಪನವರು ಆ ಷರತ್ತಿಗೆ ಒಪ್ಪಿದ್ದರು. ನಾನು ಕೆಲವು ಪುಸ್ತಕಗಳನ್ನು ಬೆಂಗಳೂರಿನ ಕೆಲವು ಪುಸ್ತಕವ್ಯಾಪಾರಿಗಳಲ್ಲಿಟ್ಟು ಮಿಕ್ಕವುಗಳನ್ನೆಲ್ಲ ದೊಡ್ಡ ಬಸಪ್ಪನವರಿಗೆ ಕಳುಹಿಸಿ ಕೊಡಬೇಕೆಂದು ಮುದ್ರಣಾಲಯಕ್ಕೆ ಬರೆದೆನು. ಆದರೆ ಬಸಪ್ಪನವರು ನಮ್ಮನ್ನು ದಾವಣಗೆರೆಗೆ ಕರೆಯಿಸಿಕೊಂಡು, ಇದನ್ನು ಮಾರಿ ಬಂದ ಹಣದಲ್ಲಿ ಮುಕ್ಕಾಲುಭಾಗವನ್ನು ನೀವು ಮುಂದೆ ಬರೆಯುವ ಗ್ರಂಥಕ್ಕೆ ಮೂಲಧನವಾಗಿ ಉಪಯೋಗಿಸಿಕೊಳ್ಳಬೇಕೆಂದು ಹೇಳಿದರು. ನಾನು 'ನನ್ನ ಕೈಯಲ್ಲಿ ಹಣವು ನಿಲ್ಲುವದಿಲ್ಲವಾದ್ದರಿಂದ ಅದು ನಿಮ್ಮಲ್ಲಿಯೇ ಇರಲಿ !' ಎಂದರೂ ಕೇಳದೆ ಇಷ್ಟರ ಮೇಲೆ ನೀವು ಬ್ರಾಹ್ಮಣರು. ನಿಮಗೆ ಹಣದ ತಗಾದೆ ಬಂದರೆ ಅವಶ್ಯವಾಗಿ ಉಪಯೊಗಿಸಿಕೊಂಡುಬಿಡಿರಿ' !" ಎಂದು ಹೇಳಿ ಬಂದಿದ್ದ ರೈಲ್ವೇ ಪಾಸನ್ನು ಹರಿಹರಕ್ಕೇ ಕಳುಹಿಸಿಬಿಟ್ಟರು. ಆ ಉದಾರ ಮಹಾಶಯರ ಈ ಸಹಾಯವು ಅಧ್ಯಾತ್ಮಪ್ರಕಾಶಕಾರ್ಯಾಲಯದ ಜೀವಧನವಾಯಿತೆಂಬುದು ಮುಂದೆ ವಾಚಕರಿಗೆ ತಿಳಿಯುವದು. ಮಹಾಭಾಗವತರು ಬೆಂಗಳೂರು ಶಂಕರಮಠದಲ್ಲಿ

ಸ್ಥಾಪನೆ ಮಾಡಿದ್ದ **Sanskrit Research Institute** (ಸಂಸ್ಕೃತ ಶೋಧ-ಮಂದಿರ) ಪತ್ರಿಕೆಗೆ ಇಂಗ್ಲೀಷು ಲೇಖನಗಳನ್ನು ಬರೆದದ್ದು ಈ ಕಾಲದಲ್ಲಿಯೇ.

## ವೇದಾಂತದ ಮೂಲತತ್ತ್ವಗಳು :

1916ರಲ್ಲಿ ಯಾವದೋ ಒಂದು ರಜದಲ್ಲಿರಬೇಕು, ಪ್ರಾಯಶಃ ನವರಾತ್ರೆ ಇರಬಹುದು, ನಾನು ಅರಸೀಕೆರೆಗೆ ಹೋಗಿರುವಲ್ಲಿ ಕೆ.ಎ.ಕೃಷ್ಣಸ್ವಾಮಿಅಯ್ಯರು ಕೋಲಾರದಿಂದ ತುಮಕೂರಿಗೆ ವರ್ಗವಾಗಿರುತ್ತಾರೆಂದು ತಿಳಿಯಬಂತು. ಅವರು ಚತುಃಸೂತ್ರಿಯನ್ನು ಕನ್ನಡಿಸುವದರಲ್ಲಿದ್ದಾರೆಂದು ಹೇಗೋ ನನಗೆ ತಿಳಿದಿತ್ತು. ಅದನ್ನು ಕಳುಹಿಸಿಕೊಟ್ಟರೆ ನೋಡಿ ಕಳುಹಿಸುತ್ತೇನೆಂದು ಅವರಿಗೊಂದು ಕಾಗದವನ್ನು ಬರೆದೆ. ಆದರೆ 'ನೀವೇ ಇಲ್ಲಿಗೆ ಬಂದು ನೋಡಿಕೊಳ್ಳಿ' ಎಂದು ಉತ್ತರ ಬರೆದರು. ಅಲ್ಲಿಗೆ ಹೋಗಿ ನೋಡಿದ್ದರಲ್ಲಿ ಅವರು ಅಧ್ಯಾಸಭಾಷ್ಯಕ್ಕೆ ಕನ್ನಡ ಅನುವಾದವನ್ನು ಬರೆದಿದ್ದಾರೆಂದು ಕಾಣುತ್ತದೆ. ಆದರೆ ಅದಕ್ಕಿಂತ ಉತ್ಕೃಷ್ಟವಾದ ಒಂದು ಗನಿ ಸಿಕ್ಕಿತು. ಅಯ್ಯರು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಮಾಡಿದ್ದ **Fundamentals of Vedanta** (ವೇದಾಂತದ ಮೂಲತತ್ತ್ವಗಳು) ಎಂಬ ಇಂಗ್ಲೀಷ್ ಉಪನ್ಯಾಸವೊಂದನ್ನು ಓದುತ್ತಾ ಹೋದಂತೆ ನನಗೆ ರೋಮಾಂಚ-ವಾಯಿತು. ಅವಸ್ಥಾತ್ರಯಪ್ರಕ್ರಿಯೆಯ ಮರ್ಮವು ಇಂಥದ್ದೆಂಬುದು ಮೊಟ್ಟ ಮೊದಲು ನನಗೆ ಮನವರಿಕೆಯಾದದ್ದು ಆಗಲೇ. ಈ ವಿಷಯವನ್ನು ಮುಂದೆ ನಾನು ಮೆಲುಕು ಹಾಕುತ್ತಲೇ ಇದ್ದೆನು. ಈ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸುವೆನು.

ಕೆಲವು ಸ್ಕೂಲು ಪುಸ್ತಕಗಳನ್ನು ಬರೆದದ್ದು ಹರಿಹರದಲ್ಲಿದ್ದಾಗಲೇ. ಮೊಟ್ಟಮೊದಲನೆಯದಾಗಿ 'ವಾಕ್ಯರಚನೆ' ಎಂಬ ಕನ್ನಡ ಪುಸ್ತಕವು ಇಲ್ಲಿ ಸ್ವಲ್ಪ ರೂಪುಗೊಂಡಿತು. ನಾನು ಒಮ್ಮೆ ಕುರ್ತಕೋಟಿಯಲ್ಲಿದ್ದಾಗ ಕನ್ನಡವನ್ನು ಅನುಕರಣೀಯವಾದ ಶೈಲಿಯಲ್ಲಿ ಬರೆದಿರುವ ಆಗಿನ ಕೆಲವು ಪ್ರಖ್ಯಾತ ಲೇಖಕರ ಲೇಖನಗಳಲ್ಲಿರುವ ಗುಣಾಂಶಗಳೇನು ? ಅವರ ಶೈಲಿಗೆ ಬಂದಿರುವ ಸೊಬಗು ಯಾವ ಯಾವ ಶಬ್ದಮರ್ಯಾದೆಗಳನ್ನು ವ್ಯಾಕರಣನಿಯಮವನ್ನು ಅಲಂಕಾರ ರಸಾದಿಗಳನ್ನು ಅಳವಡಿಸಿಕೊಂಡದ್ದರಿಂದ ಬಂದಿದೆ ಎಂಬುದನ್ನು ತಿಳಿಯಪಡಿಸುವ ಒಂದು ಪ್ರೌಢಸಾಹಿತ್ಯಗ್ರಂಥವನ್ನು ಬರೆಯಬೇಕೆಂಬ ಹಿರಿಯಾಸೆಯು ಮನಸ್ಸಿನಲ್ಲಿ ಮೊಳೆತುಕೊಂಡಿತು. ಅದಕ್ಕಾಗಿ ಬೇರೆಬೇರೆಯ ಲೇಖಕರ ಪ್ರಕಟಿತ ಗ್ರಂಥಗಳಿಂದ ಚಿತ್ತಾಕರ್ಷಕವಾಗಿ ಕಂಡುಬರುವ ಕೆಲ ಕೆಲವು ಭಾಗಗಳನ್ನು ಆರಿಸಿಕೊಳ್ಳುವದಕ್ಕೆ ಮೊದಲು ಮಾಡಿದ್ದೆನು. ಈ ಗ್ರಂಥಕ್ಕೆ ನಾನು ಇನ್ನೂ ವಿಷಯಗಳನ್ನು ಆರಿಸಿ ಕೊಳ್ಳುತ್ತಿದ್ದ ಹಾಗೆಯೇ, ಹರಿಹರದಲ್ಲಿ ಸಹೋಪಾಧ್ಯಾಯರಾಗಿದ್ದ ಸಂನತಿ(ಸನ್ನತಿ)

ರಾಯರೆಂಬವರು ನೀವು ಸ್ಕೂಲು ಹುಡುಗರಿಗೆ ಅನುಕೂಲವಾಗುವಂತೆ ಕನ್ನಡದ ವ್ಯಾಕರಣಾದಿಪುಸ್ತಕಗಳನ್ನು ಬರೆದರೆ ಅದರಿಂದ ಆರ್ಥಿಕ ಪ್ರಯೋಜನವೂ ಆಗಬಹುದು ಎಂದು ಒಂದೆರಡು ಸಲ ಸೂಚಿಸಿದರು. ಇದರಿಂದ ನನ್ನ ಮನಸ್ಸಿನಲ್ಲಿ ಆಗಲೇ ರೂಪುಗೊಳ್ಳುತ್ತಿದ್ದ ಸಾಹಿತ್ಯಗ್ರಂಥದ ವಿಚಾರವನ್ನು ಮುಂದುವರೆಸಿ ಕರ್ನಾಟಕವಾಕ್ಯರಚನೆ ಎಂಬ ಗ್ರಂಥವನ್ನು ಬರೆಯುವದಕ್ಕೆ ಮೊದಲು ಮಾಡಿದೆನು. ಅದಕ್ಕಾಗಿ ಇಂಗ್ಲೀಷಿನಲ್ಲಿ ಆಗಲೇ ಬರೆದು ಸಿದ್ಧವಾಗಿರುವ 'ವಾಕ್ಯರಚನೆ'ಯ ಪುಸ್ತಕಗಳನ್ನು ಆದರ್ಶವಾಗಿಟ್ಟುಕೊಂಡು ಪುಸ್ತಕವನ್ನು ವ್ಯಾಕರಣ ಬದ್ಧವಾಗಿ ಹೊಸಗನ್ನಡಕ್ಕೆ ಒಪ್ಪಾಗುವಂತೆ ಬರೆಯುವದಕ್ಕೆ ಆರಂಭಿಸಿದೆನು. ಸ್ಕೂಲಿನಲ್ಲಿ ಪುಸ್ತಕಭಂಡಾರದಲ್ಲಿದ್ದ ಕನ್ನಡಗ್ರಂಥಗಳನ್ನೆಲ್ಲ ಓದುವದು, ನನ್ನ ಪುಸ್ತಕದ ಬೇರೆಬೇರೆ ಪ್ರಕರಣಕ್ಕೆ ಹೊಂದುವ ಅಭ್ಯಾಸೋದಾಹರಣೆಗಳನ್ನು ಗ್ರಂಥಗಳಿಂದ ಆರಿಸಿಕೊಳ್ಳುವದು - ಹೀಗೆ ಮಾಡುತ್ತಾ ಪುಸ್ತಕವನ್ನು ಏರ್ಪಡಿಸಿದೆನು. ಪುಸ್ತಕವು ಇನ್ನೂ ರೂಪುಗೊಳ್ಳುತ್ತಿರುವಾಗಲೇ ಆ ಡಿಸ್ಟ್ರಿಕ್ಟಿನ ಇನ್ಸ್ಪೆಕ್ಟರಾಗಿದ್ದ ನಾರಾಯಣ-ರಾಯರು ಅದನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಲ್ಲದೆ, ಡಿಸ್ಟ್ರಿಕ್ಟಿನ ವಾರ್ಷಿಕ ರಿಪೋರ್ಟಿನಲ್ಲಿಯೂ ಮೆಹನತ್ತಿನಿಂದ ಕೆಲಸಮಾಡುತ್ತಿರುವ ಉಪಾಧ್ಯಾಯರುಗಳ ಹೆಸರುಗಳಲ್ಲಿ ನನ್ನದೂ ಒಂದೆಂದು ಗಣಿಸಿದ್ದು ನನಗೆ ಬಹಳ ಪ್ರೋತ್ಸಾಹಕವಾಯಿತು. ಈ ಗ್ರಂಥವು ಸಂನತಿ(ಸನ್ಮತಿ)ರಾಯರ ಭವಿಷ್ಯವಾಣಿಯಂತೆ ನಿಜವಾಗಿ ನನ್ನ ಆರ್ಥಿಕ ಜೀವನಕ್ಕೆ ತುಂಬ ಸಹಾಯಕಾರಿಯಾಯಿತೆಂಬುದು ಮುಂದೆ ಓದುಗರಿಗೆ ಗೊತ್ತಾಗುವದು.

ಇನ್ನೊಂದು ಸ್ಕೂಲು ಪುಸ್ತಕವನ್ನು ಬರೆಯುವದಕ್ಕೆ ಪ್ರೈಮರಿ ಸ್ಕೂಲಿನ ಮೇಷ್ಟರೊಬ್ಬರು ನಿಮಿತ್ತರಾದರು. ನಾನು ಅವರ ತರಗತಿಯ ಮೇಲ್ವಿಚಾರಣೆಗೆಂದು ಹೋಗಿರಲು ಅವರು ಒಂದನೆಯ ತರಗತಿಯ ಹುಡುಗರಿಗೆ ತಿಳಿಯುವದಕ್ಕೆ ಕಷ್ಟವಾಗಿರುವ ಪ್ರೌಢವಿಷಯಗಳನ್ನು ಹೇಳಿಕೊಡುತ್ತಿದ್ದದ್ದು ಲಕ್ಷ್ಯಕ್ಕೆ ಬಂದಿತು. ವಿಚಾರಿಸುವಲ್ಲಿ ವ್ಯಾಕರಣದ ನಿಯಮಗಳಿಲ್ಲದೆ ಪುಸ್ತಕವಿಲ್ಲದೆ ಹುಡುಗರಿಗೆ ಹೇಳಿಕೊಡಬೇಕೆಂದು ಕರಿಕ್ಯುಲಮ್ (ಪಾಠದ ನಿಯಮದಪಟ್ಟಿ)ಯಲ್ಲಿ ಇದ್ದದ್ದನ್ನು ಅಕ್ಷರಶಃ ಅವರು ಪಾಲಿಸಿ ಶಬ್ದದರ್ಶನದ ಕೆಲವು ಸೂತ್ರಗಳನ್ನು ಬಾಯಿಯಲ್ಲಿ ಗಟ್ಟಿಮಾಡಿಕೊಂಡು ತಿಳಿಸುತ್ತಾರೆಂದು ಗೊತ್ತಾಯಿತು. ಆ ತರಗತಿಯಲ್ಲಿ ನಮ್ಮ ಹುಡುಗನೂ ಓದುತ್ತಾ ಇದ್ದನು. ಅವನಿಗೂ ತಿಳಿಯುವಂತೆ ಒಂದು ಬಹು ಸುಲಭವಾದ ಪ್ರಥಮ ವ್ಯಾಕರಣವನ್ನು ಬರೆಯಬೇಕೆಂದು ಔತ್ಸುಕ್ಯವು ನನಗೆ ಉಂಟಾಯಿತು. ಇದರ ಫಲವಾಗಿ ಪಾದತ್ರಯ ಎಂಬ ವ್ಯಾಕರಣ ಪುಸ್ತಕವನ್ನು ಬರೆದೆನು. ಇದೂ ಮುಂದೆ ಸಂನತಿರಾಯರ ಭವಿಷ್ಯವಾಣಿಯನ್ನು ನಿಜವೆನ್ನಿಸಿತು.

ಸಂಸ್ಕೃತದಲ್ಲಿ ಸ್ಕೂಲು ಹುಡುಗರಿಗೆ ತಿಳಿಯುವಂತೆ ಸಂಭಾಷಣಾ ಪದ್ಧತಿಯನ್ನು ಅನುಕರಿಸಿ ಒಂದು ಪುಸ್ತಕವನ್ನು ಬರೆಯಬೇಕೆಂದು ಪ್ರಯತ್ನಿಸಿದ್ದು ಹರಿಹರದಲ್ಲಿಯೇ. ಕೆಲವು ಪಾಠಗಳನ್ನು ಅಲ್ಲಿ ಬರೆದು ಮುಗಿಸಿದೆನಾದರೂ 'ಸಂಸ್ಕೃತ ಪ್ರವೇಶ'ವೆಂಬ ಹೆಸರಿನಿಂದ ಅವು ಪ್ರಕಟವಾದದ್ದು ಬೆಂಗಳೂರಿನಲ್ಲಿ.

## ಬಲಾತ್ಕಾರದ ವಿದ್ಯಾಭ್ಯಾಸ :

ಸಂಸ್ಥಾನದಲ್ಲಿ ಬಲಾತ್ಕಾರದ ವಿದ್ಯಾಭ್ಯಾಸವನ್ನು ಆಚರಣೆಗೆ ತರುವ ನಿಮಿತ್ತದಿಂದ ಪ್ರತಿಯೊಂದು ಸ್ಥಳದಲ್ಲಿಯೂ ಆಗ್ಗೆ ಹೆಚ್ಚಾಗಿ ಸ್ಕೂಲುಗಳನ್ನು ತೆರೆದು, ಎ.ವಿ. ಸ್ಕೂಲು ಹೆಡ್‌ಮಾಸ್ಟರುಗಳನ್ನು ಅಟೆಂಡೆನ್ಸುಆಫೀಸರಾಗಿಯೂ, ಅಮಲ್ದಾರರನ್ನು ಪ್ರೆಸಿಡೆಂಟರನ್ನಾಗಿಯೂ ಏರ್ಪಡಿಸಿದ್ದರು. ಆ ಸಂಬಂಧದಲ್ಲಿ ನಾನು ವಹಿಸಿದ ಆದರವನ್ನು, ನಾನು ಪುಸ್ತಕರಚನೆಯನ್ನು ಮಾಡಿರುವದನ್ನೂ ಸ್ಕೂಲನ್ನು ಮುಂದಕ್ಕೆ ತಂದದ್ದಕ್ಕೆ ಮಾಡಿದ ಪ್ರಯತ್ನಗಳನ್ನೂ ಶ್ಲಾಘಿಸಿ ಮಹದೇವರಾಯರು ಇನಸ್ಪೆಕ್ಟರುಜನರಲ್ ಶ್ಯಾಮರಾಯರವರಿಗೆ ನನ್ನ ವಿಷಯಕ್ಕೆ ಬಹಳವಾಗಿ ಶಿಫಾರಸುಮಾಡಿದರು. ಶ್ಯಾಮರಾಯರು ಆಗ ಕರ್ನಾಟಕ ಪರಿಷತ್ತಿನ ಅಧ್ಯಕ್ಷರಾಗಿದ್ದರೆಂದು ಕಾಣುತ್ತದೆ. ಅವರಿಗೆ ನನ್ನನ್ನು ಬೆಂಗಳೂರಿಗೆ ವರ್ಗಮಾಡಿಸಿ ಕೊಳ್ಳಬೇಕೆಂಬ ಇಚ್ಛೆಯು ಈ ಕಾರಣಗಳಿಂದ ಸಣ್ಣದಾಗಿ ಮೊಳೆತುಕೊಂಡಿತು.

## ಹರಿಹರದಲ್ಲಿ ಒದಗಿದ ಮನೋವ್ಯಥೆಗಳು :

ಹರಿಹರದಲ್ಲಿದ್ದಾಗ ಒಮ್ಮೆ ವಿಠ್ಠಲಶಾಸ್ತ್ರಿಗಳವರು ಬಂದಿದ್ದರು (ಇದು ಅವರ ತಮ್ಮನನ್ನು ಬೊಂಬಾಯಿಯಲ್ಲಿ ಹುಡುಕಿಕೊಂಡು ಕರೆದುತಂದಾಗ ಎಂದು ಕಾಣುತ್ತದೆ, ವಿಚಾರಿಸಬೇಕು). ಅವರು ಅದ್ವೈತಸಿದ್ಧಿಯನ್ನು ಓದಿ ಅದರ ಪಂಕ್ತಿಗಳನ್ನು ಗಡಗಡನೆ ಹೇಳುವದು ಕೇಳಿ ನನಗೆ ಆಶ್ಚರ್ಯವೂ ಸಂತೋಷವೂ ಆಯಿತು. ನಾನಂತೂ ಅದನ್ನು ಓದುವದಕ್ಕೆ ಆಗಲಿಲ್ಲವಲ್ಲ ! 'ಶಿಷ್ಯಾದಿಚ್ಛೇತ್ ಪರಾಜಯಮ್' ಎನ್ನುವಂತೆ ಆಯಿತು ಎಂದು ಹರ್ಷಪಟ್ಟಿದ್ದೆ. ಇಷ್ಟೆಲ್ಲ ಅಭ್ಯುದಯದ ಶುಭಚಿಹ್ನೆಗಳಿದ್ದ ಹರಿಹರದಲ್ಲಿಯೂ ಒಂದೆರಡು ಮನೋವ್ಯಥೆಗೆ ಕಾರಣಗಳು ನನಗೆ ಬಂದೊದಗಿದವು. ಅವುಗಳಲ್ಲಿ ಒಂದು ನಮ್ಮ ತಂಗಕ್ಕನ ಮಗ ಅಯ್ಯನ ಅಕಾಲಮರಣ. ಅಯ್ಯನು ಉಪನಯನವಾದ ಮೇಲೆ ಬಹಳಮಟ್ಟಿಗೆ ನನ್ನ ಜೊತೆಯಲ್ಲಿಯೇ ಇದ್ದುಬಿಟ್ಟನೆಂದು ಕಾಣುತ್ತದೆ. ಹರಿಹರಕ್ಕೆ ಪ್ಲೇಗು ಬಂದ ಸಮಯಕ್ಕೆ ಸರಿಯಾಗಿ ಅವನಿಗೆ ಏನೋ ನಿಮಿತ್ತದಿಂದ ಸ್ವಲ್ಪ ಜ್ವರ ಬಂದಿತು. ಅವನಿಗೆ ನಿದ್ದೆಯಿಲ್ಲವೆಂದೂ ಭೇದಿಯಿಲ್ಲವೆಂದೂ ಹೇಳಿದ್ದರಿಂದ ಡಾಕ್ಟರು ಯಾವದೋ

ಔಷಧಿಯನ್ನು ಕೊಟ್ಟರು. ಅದೇ ನೆಪವಾಗಿ ಅವನಿಗೆ ರಕ್ತಭೇದಿಯಾಗಿ ಜ್ವರವು ಹೆಚ್ಚಿ ಸಂನಿಯಾಗಿ ಪರಿಣಮಿಸಿತು. ಸಂನಿಯಾದವರು ನೀರನ್ನು ಕಂಡರೆ ಮುಳುಗಿಬಿಡುವಂತೆಯೂ ಆದ್ದರಿಂದ ಎಚ್ಚರಿಕೆಯಿಂದ ಕಾಯಬೇಕೆಂದೂ ಯಾರೋ ಹೇಳಿದ್ದರಿಂದ ನಾನು ಬಹಳ ಎಚ್ಚರಿಕೆಯಿಂದ ಅವನನ್ನು ಹಗಲೂ ಇರುಳೂ ಕಾಯುತ್ತಿದ್ದೆನು. ನಾನು ಸ್ಕೂಲಿಗೆ ಹೋಗಿರುವ ಸಮಯವನ್ನು ಸಾಧಿಸಿ ಅವನು ಹೆಂಗಸರನ್ನು ಹೆದರಿಸಿ ದೇವಸ್ಥಾನದ ಹಿಂದುಗಡೆಯಿಂದ ನದಿಗೆ ಇಳಿದು ಯಾವ ಮಾಯದಲ್ಲಿಯೋ ನದಿಯಲ್ಲಿ ಮುಳುಗಿ ಅಕಾಲಮೃತ್ಯವಿಗೆ ತುತ್ತಾಗಿ ಬಿಟ್ಟನು. ನನಗೆ ಬಲು ಬೇಗನೆ ಅವನು ಮನೆಯಿಂದ ತಪ್ಪಿಸಿಕೊಂಡ ಸುದ್ದಿಯು ಮುಟ್ಟಿತಾದರೂ, ನಾನು ಅನೇಕ ಜನರ ಸಹಾಯದಿಂದ ಅವನನ್ನು ನದಿಯಲ್ಲಿಯೂ ಬೇರೆ ಕಡೆಗಳಲ್ಲಿಯೂ ಹುಡುಕಿಸಿದ ಪ್ರಯತ್ನವು ಸಫಲವಾಗಲಿಲ್ಲ. ಈ ಅನಿರೀಕ್ಷಿತವಾದ ಅನರ್ಥವು ನನ್ನ ಮನಸ್ಸಿಗೆ ಬಹಳ ವ್ಯಥೆಯನ್ನುಂಟುಮಾಡಿತು. ಹರಿಹರದ ವಾಸದಲ್ಲಿ ನನಗೆ ಇದ್ದ ಅಭಿಮಾನವನ್ನು ಕುಗ್ಗಿಸಿ ಬಿಟ್ಟಿತು.

ಇನ್ನೊಂದು ಆಶಾಭಂಗವೆಂದರೆ ನನಗೆ ಕಾಶೀಯಾತ್ರೆಯ ಅವಕಾಶವು ತಪ್ಪಿದ್ದು. ಮಹಾಭಾಗವತರು ಕಾಶಿಗೆ ಹೊರಡುವದಾಗಿಯೂ, ನಾನು ಜೊತೆಯಲ್ಲಿ ಬರುವದಕ್ಕೆ ಅವಕಾಶವಿದ್ದರೆ ಬರಬೇಕೆಂತಲೂ ಚಿದಂಬರಯ್ಯನವರು ಕಾಗದವನ್ನು ಬರೆದದ್ದರ ಮೇಲೆ ಕೂಡಲೆ ನಾನು ರಜಕ್ಕೆ ರಿಪೋರ್ಟನ್ನು ಹಾಕಿ ಹೊರಟೆನು. ನನ್ನ ಜೊತೆಯಲ್ಲಿ ಚಿತ್ರದುರ್ಗದಿಂದ ಬಂದಿದ್ದ ನಂಜಪ್ಪನವರೂ ಅರಸೀಕೆರೆಯಿಂದ ಬಂದಿದ್ದ ನಾರಣಪ್ಪನವರೂ ಇದ್ದರು. ಆದರೆ ನನ್ನ ದುರ್ದೈವ, ಕುರ್ತಕೋಟಿ ಯಿಂದ ಧಾರವಾಡಕ್ಕೆ ಹೋಗಿ ಅಲ್ಲಿಂದ ಮುಂದೆ ಹೋಗುವದರೊಳಗೆ ರಜವು ದೊರೆಯಲಾರದೆಂದು ಆರ್ಡರು ಬಂದದ್ದರಿಂದ ಯತ್ನವಿಲ್ಲದೆ ಹರಿಹರಕ್ಕೆ ಬಂದುಬಿಟ್ಟೆನು. ಭಾಗವತರು ಬೊಂಬಾಯಿ, ಬರೋಡ, ಅಮಲ್ನೇರು - ಮುಂತಾದ ಮಾರ್ಗಗಳಿಂದ ಕಾಶಿಗೆ ತೆರಳಿ ಹಿಂದೂ ಯೂನಿವರ್ಸಿಟಿ ಕಟ್ಟಡ ನಿರ್ಮಾಣ ಪ್ರಾರಂಭೋತ್ಸವವನ್ನು ಮಾಡಿಕೊಂಡು ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಸೇರಿದ್ದ ರಾಜಕಾರಣಿಗಳ ಭಾಷಣ, ಶ್ರವಣ, ಕಲ್ಕತ್ತೆಯಲ್ಲಿ ಶ್ರೀರಾಮಕೃಷ್ಣರು ವಾಸವಾಗಿದ್ದ ದಕ್ಷಿಣೇಶ್ವರದರ್ಶನ - ಇವುಗಳನ್ನೆಲ್ಲ ಮಾಡಿಕೊಂಡು ನಂಜಪ್ಪನವರೂ ನಾರಣಪ್ಪ-ನವರೂ ಹಿಂತಿರುಗಿದರು. ಸತ್ಸಂಗವೂ ತೀರ್ಥಯಾತ್ರೆಯೂ ದೇಶಸಂಚಾರವೂ ಒಮ್ಮೆಗೇ ಲಭಿಸುವದೊಂದು ಸುಯೋಗವೇ ಸರಿ. ಆದರೆ ಆ ಯೋಗವು ನನ್ನ ಪಾಲಿಗೆ ಲಭಿಸಲಿಲ್ಲ, ನಂಜಪ್ಪನವರಿಂದ ನಡೆದದ್ದೆಲ್ಲವನ್ನೂ ಕೇಳಿ ಸಂತೋಷಪಡುವಷ್ಟು ಮಾತ್ರ ನನ್ನ ಪಾಲಿಗೆ ಬಂತು.

---

# 29 ಹೊಸದುರ್ಗ - ಎರಡನೆಯ ಸಲಕ್ಕೆ - ನಿತ್ಯಸಂಚಾರ (1917)

1917ನೆಯ ಮಾರ್ಚಿಯ ತಿಂಗಳಿನಿಂದ ನನ್ನ ಜೀವನ ಕ್ರಮವು ಸ್ವಲ್ಪ ಬದಲಾಯಿಸಿತು. ಆಗ ತಾತ್ಕಾಲಿಕವಾಗಿ ಹೊಸದಾಗಿ ಏರ್ಪಾಡಾಗಿದ್ದ 'ಎಜ್ಯುಕೇಷನ್ ಸೂಪರ್‌ವೈಸರ್' ಎಂಬ ಕೆಲಸಕ್ಕೆ ನನ್ನನ್ನು ಮೊಕರೂರು (ನಿಶ್ಚಯಿಸ) ಮಾಡಲಾಯಿತು. ದಾವಣಗೆರೆ ರೇಂಜಿಗೆ ನನ್ನನ್ನು ಸೇರಿಸಿ ಮೊದಲು ಕೆಲವು ದಿನಗಳವರೆಗೆ ಹರಿಹರದಲ್ಲಿಯೇ ಇಟ್ಟಿದ್ದರು; ಆ ಬಳಿಕ ಹೊಸದುರ್ಗವನ್ನು ನನ್ನ ಮುಖ್ಯಸ್ಥಾನ (ಹೆಡ್‌ಕ್ವಾರ್ಟರ್ಸ್) ಎಂದು ಗಣಿಸಿ ಅಲ್ಲಿಗೆ ಕಳುಹಿಸಿಕೊಟ್ಟರು. ನಾನು ಸೂಪರ್‌ವೈಸರಾಗಿ ಕೆಲಸ ಮಾಡಿದ ಐದು ತಿಂಗಳು ನನಗೆ ಐದು ವರ್ಷಕ್ಕಿಂತ ಹೆಚ್ಚು ದೀರ್ಘಕಾಲವೆಂಬ ಭಾವನೆ ಬಂದಿತ್ತು. ಈಗ ಸಂಬಳ 40ರೂ, ಅಲೊಯನ್ಸು 20 ರೂ ; ಆದರೆ ತಿಂಗಳಲ್ಲಿ ಇಪ್ಪತ್ತು ದಿನಗಳು ಸಂಚಾರದಲ್ಲಿರಬೇಕು ! ಸಾಲದ ಕಡಿಮೆಗೆ, ನನ್ನ ಕ್ಷೇತ್ರವು ಹೊಳಲ್ಕೆರೆ ಮತ್ತು ಹೊಸದುರ್ಗ - ಎಂಬ ಎರಡು ತಾಲ್ಲೂಕುಗಳಷ್ಟು ವಿಸ್ತೀರ್ಣವಾಗಿತ್ತು. ಬಹುಮಟ್ಟಿಗೆ 'ಗ್ರಾಂಟ್ ಇನ್ ಏಡ್' ಸ್ಕೂಲುಗಳೇ ನನ್ನ ಮೇಲು ವಿಚಾರಣೆಗೆ ಸೇರಿರುತ್ತಿದ್ದವು. ಆಗ್ಗೆ ವಿದ್ಯಾಭ್ಯಾಸದ ಇಲಾಖೆಯವರೇ ಅಲ್ಲದೆ ರೆವಿನ್ಯೂ ಇಲಾಖೆಯ ಡೆಪ್ಯೂಟಿ ಕಮಿಷನರು ಅಂದರೆ, ಅವರ ಅನುಮತಿಯಿಂದ ಶೇಕದಾರರು ಕೂಡ - ಹೆಡ್‌ಮಾಸ್ಟರನ್ನು ನೇಮಕ ಮಾಡುತ್ತಿದ್ದರು. ಸ್ಕೂಲುಗಳು ನಾಯಿಕೊಡೆಗಳ ಹಾಗೆ ಅಪರಿಮಿತ ಸಂಖ್ಯೆಯಲ್ಲಿ ಎದ್ದುಕೊಳ್ಳುತ್ತಿದ್ದವು; ಸಾಮಾನ್ಯವಾಗಿ ಓದುವದಕ್ಕೆ ಬರುವದು, ಹಾಜರಿರಿಜಿಸ್ಟರು ಇಡುವದು, ರಿಪೋರ್ಟಬರೆಯುವದು, ಹುಡುಗರಿಗೆ ಪಾಠಕ್ರಮದಂತೆ ಪಾಠ ಹೇಳುವದು ಮುಂತಾದವುಗಳ ಪರಿಚಯವಿಲ್ಲದವರು ಕೂಡ - ಮೇಷ್ಟರಾಗಿರುತ್ತಿದ್ದರು. ಕೆಲವು ಮೇಷ್ಟರುಗಳಿಗೆ ಸರಕಾರಿಯ ನಿಯಮಗಳೇನೆನ್ನುವದು ಗೊತ್ತಿರಲಿಲ್ಲ. ಇಂಥ ಮೇಷ್ಟರುಗಳನ್ನು ಕಂಡು, ಸ್ಕೂಲುಗಳ ಅಭಿವೃದ್ಧಿಯನ್ನು ತೋರಿಸುವದು ಭಗೀರಥ ಪ್ರಯತ್ನವೇ ಆಗಿತ್ತೆಂದು ಹೇಳಬಹುದು. ಮೊದಮೊದಲು ನನ್ನಲ್ಲಿ ಬಂಡಿ ಮುಂತಾದ ಸಾಧನಗಳಿಲ್ಲದ್ದರಿಂದ ಕಾಲು ನಡಿಗೆಯ ಮೇಲೆಯೇ ಹೋಗುವದು, ಊರಿನವರು ಕೊಡುವ ಕುದುರೆ ಮುಂತಾದ ವಾಹನಗಳನ್ನು ಉಪಯೋಗಿಸಿಕೊಳ್ಳುವದು - ಹೀಗೆ ನಡೆಯಿತು. ಕೊನೆಗೆ ಒಂದು ಬಂಡಿಯನ್ನು ಕೊಂಡುಕೊಂಡೆನಾದರೂ ಎತ್ತುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವದು ಬಹಳ ಕಷ್ಟವಾಯಿತು. ನಾನು ಹೊಸದುರ್ಗದಲ್ಲಿದ್ದು, ದಾವಣಗೆರೆಯಿಂದ ಸಂಬಳವನ್ನು ತರಿಸಿಕೊಳ್ಳಬೇಕಾಗಿದ್ದ

ಕಿರಿಕಿರಿಬೇರೆ. ಹೀಗಿದ್ದರೂ ನಾನು ನನ್ನ ರೇಂಜಿನ ಸ್ಕೂಲುಗಳನ್ನು ಆದಷ್ಟುಮಟ್ಟಿಗೆ ಒಂದು ಹಿಡಿತಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನ ಮಾಡಿದೆನು. ಹತ್ತಿರಹತ್ತಿರವಿರುವ ಎರಡು ಸ್ಕೂಲುಗಳ ಉಪಾಧ್ಯಾಯರುಗಳನ್ನು ಒಕ್ಕೆಡೆ ಕೂಡಿ ಹಾಕಿ, ಅವರಿಗೆ ಹೇಳಬೇಕಾದ ಪಾಠಗಳ ಪರಿಚಯ ಮಾಡಿಕೊಟ್ಟು ಇನ್ನೊಂದು ಸಲ ನಾನು ಬರುವದರೊಳಗೆ ಇಂತಿಷ್ಟು ಪಾಠಗಳನ್ನು ನಡೆಯಿಸಬೇಕು ಎಂದು ಗೊತ್ತುಮಾಡು-ತ್ತಿದ್ದೆನು. ನಿಜವಾಗಿ ಹೇಳಿದರೆ ಹಲವು ಸಂದರ್ಭಗಳಲ್ಲಿ ಉಪಾಧ್ಯಾಯರುಗಳೇ ವಿದ್ಯಾರ್ಥಿಗಳು, ನಾನೇ ಉಪಾಧ್ಯಾಯ ಎಂದರೂ ಸಲ್ಲುವಂತಿತ್ತು.

ಈ ಗೋಳುಕರೆ ನನಗೆ ಸಾಕಾಯಿತು. ಇದರ ಮೊಟ್ಟಮೊದಲನೆಯ ಪರಿಣಾಮವೆಂದರೆ ಕಾಲಕ್ಕೆ ಸ್ನಾನಾಹ್ನಿಕಗಳು ನಡೆಯುವ ಕ್ರಮಕ್ಕೆ ಭಂಗ. ಈಗ ಗ್ರಂಥಕಾಲಕ್ಷೇಪವು ಅತಿ ದೂರವಾಯಿತು. ದೇಹ ಶ್ರಮವು ಹೆಚ್ಚಿತು. ಮನಸ್ಸಿಗೆ ನೆಮ್ಮದಿಯು ತೀರ ಕಡಿಮೆಯಾಯಿತು ; ಒಂದು ಸಂದರ್ಭದಲ್ಲಿ ನಾನು ಈ ದಿನ ಏಕಾದಶಿ ಎಂಬದನ್ನು ಕೂಡ ತಿಳಿಯದೆ ಊಟ ಮಾಡಿ ಉಪಾಧ್ಯಾಯರು ತಂದು ಕೊಟ್ಟಿದ್ದ ವೀಳ್ಯದೆಲೆಯನ್ನು ಕೂಡ ಉಪಯೋಗಿಸಿಕೊಂಡು ಬಿಟ್ಟಿದ್ದೆನು ; ಮಾರನೆಯ ದಿನ ಬೆಳಿಗ್ಗೆ ಊರಿಗೆ ಬರುವಾಗ ನೋಡಿದರೆ ಮನೆಯವರು ದ್ವಾದಶಿ ಪಾರಣೆಗೆ ನಾನು ಎಲ್ಲಿದ್ದರೂ ಮನೆಗೆ ಬಂದೇ ತೀರುವೆನೆಂಬ ಭರವಸೆಯಿಂದ ನನ್ನನ್ನೇ ನಿರೀಕ್ಷಿಸಿಕೊಂಡು ಬಾಗಿಲಲ್ಲಿ ನಿಂತಿದ್ದರು ! ಈ ಸ್ಥಿತಿಯಿಂದ ಹೇಗಾದರೂ ಪಾರಾಗಬೇಕೆಂದು ನಾನು ದಾಸಪ್ಪನವರಿಗೂ, ಶ್ಯಾಮರಾಯರಿಗೂ ಒಂದು ಮನವಿಯನ್ನು ಮಾಡಿಕೊಂಡೆ. ನನಗೆ ಈ ಸಂಚಾರದ ಕೆಲಸವು ಒಗ್ಗುತ್ತಿಲ್ಲ-ವಾದ್ದರಿಂದ ದಯವಿಟ್ಟು ಮತ್ತೆ ಸ್ಕೂಲುಮಾಸ್ತರ ಕೆಲಸಕ್ಕೇ ಹಾಕಿಕೊಡಬೇಕು ಎಂದು ಅಂಗಲಾಚಿ ಬೇಡಿಕೊಂಡೆ. ಆದರಂತೆ ನನಗೆ ಹರಿಹರದ ಸ್ಕೂಲಿಗೇ ಮತ್ತೆ ವರ್ಗಮಾಡಿಬಿಟ್ಟರು. ಈಗ ಮತ್ತೊಂದು ವಿಷಯವು ಪೇಚಾಟಕ್ಕೆ ಇಟ್ಟುಕೊಂಡಿತು. ನಮ್ಮ ಅಕ್ಕನ ಮಗ ಅಯ್ಯನು ನದಿಯಲ್ಲಿ ಬಿದ್ದು ಕಾಲವಾದ ಸಂಗತಿಯನ್ನು ಆಗಲೆ ತಿಳಿಸಿರುತ್ತೇನಷ್ಟೆ ; ಆ ದುರಂತ ಘಟನೆಯನ್ನು ನೆನಪಿಗೆ ತಂದುಕೊಂಡು 'ನಾವು ಖಂಡಿತ ಹರಿಹರಕ್ಕೆ ಹೋಗಕೂಡದು, ಮತ್ತೆಲ್ಲಿಗಾದರೂ ವರ್ಗವನ್ನು ಮಾಡಲಿ !' ಎಂದು ಮನೆಯ ಹೆಂಗಸರು ಹಟಹಿಡಿದರು. ನಾನು ಏನೊಂದೂ ತೋಚದೆ ನೇರಾಗಿ ಬೆಂಗಳೂರಿಗೇ ಹೋದೆನು. ಕೃಷ್ಣಸ್ವಾಮಿಅಯ್ಯರ ಮೂಲಕವಾಗಿ ದಾಸಪ್ಪನವರಿಗೆ ನನ್ನ ದೂರನ್ನು ಹೇಳಿಕೊಂಡೆನು. ಆ ದಿನ ಅವರು ಓದುತ್ತಿದ್ದ 'ಶಿವಭುಜಂಗಪ್ರಯಾತ'ವೆಂಬ ಸ್ತೋತ್ರದ ಕೊನೆಯಲ್ಲಿ

ಅಕಂಠೇಕಲಂಕಾದನಂಗೇ ಭುಜಂಗಾ -
ದಪಾಣೌ ಕಪಾಲಾದಫಾಲೇನಲಾಕ್ಷಾತ್ ।
ಅಮೌಳೌ ಶಶಾಂಕಾದವಾಮೇ ಕಲತ್ರಾ -
ದಹಂ ದೇವಮನ್ಯಂ ನಮನ್ಯೇ ನಮನ್ಯೇ ॥

ಎಂಬ ಶ್ಲೋಕಕ್ಕೆ ಅನ್ವಯವು ಹೇಗೆ, ಅರ್ಥವನ್ನು ಹೇಗೆ ಹೊಂದಿಸಬೇಕು - ಎಂಬ ಬಗ್ಗೆ ಚರ್ಚೆ ಪ್ರಾರಂಭವಾಗಿತ್ತು. ಆ ವಿಷಯದಲ್ಲಿ ನಾನು ಹೇಳಿದ ಉತ್ತರವು ದಾಸಪ್ಪನವರಿಗೆ ಬಹಳ ಹರ್ಷವನ್ನುಂಟುಮಾಡಿತು.

ಹೀಗೆ, ಪ್ರಫುಲ್ಲಿತವಾದ ಮನಸ್ಸೂ, ನನ್ನ ವಿಷಯದಲ್ಲಿ ಅಭಿಮಾನವನ್ನೂ ಅವರಿಗೆ ತಂದಿರಬೇಕು. ಜೊತೆಗೆ, ಗೌರವಾನ್ವಿತರಾದ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರು ಯಾವ ಮಾತನ್ನು ಆಡದಿದ್ದರೂ, ಅವರು ಬಂದದ್ದಾಗಲೀ, ಅವರ ಮನೋಭಾವ, ಇಂಗಿತವನ್ನು ಸ್ಪಷ್ಟವಾಗಿ ಅಚ್ಚುಮಾಡಿದಂತೆ ಮೂಡಿಸುವಂತಿದ್ದುದು ಶ್ರೀ ದಾಸಪ್ಪನವರ ಮೇಲೆ ಉತ್ತಮ ಪ್ರಭಾವವನ್ನೂ ಬೀರಿದಂತಾಗಿರಬೇಕು. ಪದ್ಧತಿಯಂತೆ ಇದು ವಿಚಾರಮಾಡತಕ್ಕದ್ದೇ, ಪರಿಶೀಲಿಸೋಣ ಎಂದಷ್ಟೇ ಹೇಳಿದರೂ ಆ ಸಾಯಂಕಾಲವೋ ಮರುದಿನವೋ ಶ್ರೀ ಅಯ್ಯರ್‌ರವರೊಡನೆ ಇದನ್ನು ಕುರಿತು, ಅವರ ಕೋರಿಕೆಯನ್ನು ಒಪ್ಪೋಣ, ಆದರೆ ಎಲ್ಲಿಗೆ ಎಂಬುದು ಪ್ರಶ್ನಾರ್ಥಕವಾಗಿದ್ದು, ಅದಕ್ಕೆ ಉತ್ತರವಾಗಿ ಶ್ರೀ ಅಯ್ಯರವರು ಇಂತಹ ಮೇಧಾವಿ, ಉತ್ಸಾಹೀ ಉಪಾಧ್ಯಾಯರಿಗೆ ಆ ಪ್ರಾಂತಕ್ಕಿಂತ, ಬೆಂಗಳೂರೇ ಹೆಚ್ಚು ಉತ್ತಮ, ಜೊತೆಗೆ ವೇದಾಂತ ಚಿಂತನೆಗೂ ಸಹಾಯಕವಾಗುವ ತೀಕ್ಷ್ಣಮತಿಯೊಬ್ಬರು ಇಲ್ಲಿಯೇ ಇದ್ದರೆ, ಆಗಾಗ ನಮ್ಮಲ್ಲಿ ವೇದಾಂತ ವಿಚಾರಕ್ಕೂ ಪ್ರಯೋಜನವೇ ಎಂದು ಅಭಿಪ್ರಾಯ ಪಟ್ಟಮೇಲೆ, ನನಗೆ ಬೆಂಗಳೂರಿನ ಫೋರ್ಟ್ ಎ.ವಿ. ಸ್ಕೂಲಿಗೆ ವರ್ಗಾವಣೆಯನ್ನು ದಾಸಪ್ಪನವರು ನಿರ್ಣಯಿಸಿದರೆಂದು ಅನಂತರ ತಿಳಿದುಬಂತು. ಅಂತೂ, ನನಗೆ ಬೆಂಗಳೂರಿಗೆ ಈ ಇಬ್ಬರು ಮಹನೀಯರ ಕೃಪೆಯಿಂದ ವರ್ಗವಾಯಿತು.

# 30. ಬೆಂಗಳೂರಿನಲ್ಲಿ (1917 - 1920 )

## ವಿಠ್ಠಲಶಾಸ್ತ್ರಿಗಳು :

ನಾನು ಬೆಂಗಳೂರು ಸ್ಟೇಷನ್ನಿಗೆ ಬರುವ ಹೊತ್ತಿಗೆ ವಿಠ್ಠಲಶಾಸ್ತ್ರಿಗಳು, ನನ್ನ ವಿಷಯವನ್ನು ಹೇಗೆ ತಿಳಿದುಕೊಂಡರೆಂಬುದು ತಿಳಿಯದು, ನನ್ನನ್ನು ತಾವು ಇದ್ದ ಕೊಟ್ಟಡಿಗೆ ಕರೆದುಕೊಂಡು ಹೋದರು. ಆಗ ಅವರು ಮೀಮಾಂಸಾಶಿರೋಮಣಿಗಳಾದ ತಮ್ಮ ಮಿತ್ರರೊಬ್ಬರೊಡನೆ ಒಂದು ಫಾಲ್ಫಾಟು ಹೋಟಲಿನಲ್ಲಿದ್ದರೆಂದು ನೆನಪಿದೆ. ಈ ಒಳಗಾಗಿ ಅವರು 1915ರಲ್ಲಿ ಹರಿಹರಶಾಸ್ತ್ರಿಗಳು, ದಂಡಪಾಣಿದೀಕ್ಷಿತರು ಈ ಪರೀಕ್ಷಕರ ಮೂಲಕ ನಡೆದ ಅದ್ವೈತವೇದಾಂತ ಸಭೆಯ ಪರೀಕ್ಷೆಯಲ್ಲಿ ಉತ್ತಮತರಗತಿಯಲ್ಲಿ ಉತ್ತೀರ್ಣರಾಗಿ ಬಹುಮಾನವನ್ನು ಪಡೆದಿದ್ದರು. 1916ರಲ್ಲಿ ನಡೆದ ಮದ್ರಾಸುಯೂನಿವರ್ಸಿಟಿಯ ಪರೀಕ್ಷೆಯಲ್ಲಿ ಪ್ಯಾಸಾಗಿ ಆ ವರ್ಷದ ನವೆಂಬರಿನಲ್ಲಿ ವೇದಾಂತಶಿರೋಮಣಿ ಡಿಪ್ಲೊಮೊ ಪಡೆದುಕೊಂಡಿದ್ದರು. 1917ನೆಯ ಜನವರಿಯಲ್ಲಿ ಎಂದರೆ ನಾನು ಬಂದದ್ದಕ್ಕೆ ಎರಡು ತಿಂಗಳು ಮುಂಚೆಯೇ, ಅದೇ ಫೋರ್ಟು ಎ.ವಿ.ಸ್ಕೂಲಿಗೆ ವರ್ಗವಾಗಿ ಬಂದಿದ್ದರು. ಯಳ್ಳಂಬಳಸೆಯಲ್ಲಿ ಮತ್ತು ಹರಿಹರದಲ್ಲಿ ನಾವು ಸೇರಿದ್ದಾಗ, ಅವರ ತಿಳಿವಳಿಕೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾನು ನಿಶ್ಚಯಿಸುವದು ಅಷ್ಟಾಗಿ ಆಗಿರಲಿಲ್ಲ. ಈಗ ಮತ್ತೆ ಅವರೂ ನಾನೂ ಜೊತೆಯಲ್ಲಿಯೇ ಇರುವ ಸುಯೋಗವು ಬಂದೊದಗಿತು.

## ಕೆ. ಎ. ಕೃಷ್ಣಸ್ವಾಮಿಅಯ್ಯರ್ :

ನಾನು ಬಂದದ್ದು ರಾತ್ರೆ ಏಳೆಂಟು ಘಂಟೆಗೆ ಇರಬಹುದು. ಬೆಳಗಾಗುತ್ತಲೂ ನಾವು ನೇರಾಗಿ ಕೃಷ್ಣಸ್ವಾಮಿಅಯ್ಯರವರ ಮನೆಗೆ ಹೋದೆವು. ಕೃಷ್ಣಸ್ವಾಮಿ ಅಯ್ಯರು ಚಿಕ್ಕಬಳ್ಳಾಪುರದಿಂದ ಕೋಲಾರಕ್ಕೂ, ಕೋಲಾರದಿಂದ ತುಮಕೂರಿಗೂ ಹೋಗಿದ್ದವರು ತುಮಕೂರಿನಲ್ಲಿದ್ದ ಎರಡೇ ತಿಂಗಳೊಳಗಾಗಿ ಕೊಲೊಜಿಯೇಟ್ ಹೈಸ್ಕೂಲಿಗೆ ಹೆಡ್‌ಮಾಸ್ಟರಾಗಿ ವರ್ಗವಾಗಿ (1916ರಲ್ಲಿ) ಬಂದಿದ್ದರು. ನಾನು ದಾವಣಗೆರೆಯಲ್ಲಿದ್ದಾಗ ಹೇಗೊ ಅಯ್ಯರಿಗೆ ನಾನು ದೇವನೂರಿನಲ್ಲಿದೇನೆಂಬ ಭ್ರಮೆಯುಂಟಾಗಿ ಕೊನೆಗೆ ದಾವಣಗೆರೆಯಲ್ಲಿದೇನೆಂಬುದನ್ನು ತಿಳಿದು ಒಂದು ಕಾರ್ಡು ಬರೆದಿದ್ದರು. ಅಲ್ಲಿಂದ ಈಚೆಗೆ ಚಿಕ್ಕಬಳ್ಳಾಪುರದಲ್ಲಿ ಒಮ್ಮೆ ಅವರನ್ನು ನೋಡಿದ್ದದ್ದನ್ನು ಆಗಲೇ ತಿಳಿಸಿರುತ್ತೇನೆ; ತುಮಕೂರಿನಲ್ಲಿ ನಾನು ಅವರನ್ನು ಕಂಡ ದಿನವೇ ಅವರು ಕೋಲಾರದಿಂದ ಆಗ ತಾನೆ ಬಂದವರು ಸಾಮಾನುಗಳನ್ನು

ಗಂಟುಬಿಚ್ಚಿಕೊಳ್ಳುತ್ತಿದ್ದರು. ಆ ಸ್ಥಿತಿಯಲ್ಲಿ ಅವರ ಪುಸ್ತಕವೊಂದನ್ನು ಓದುವ ಭಾಗ್ಯವೊಂದು ಹೊರತು ಹೆಚ್ಚಾಗಿ ಮಾತುಕಥೆಯಾಗಲು ಅವಕಾಶ ಸಿಕ್ಕಲಿಲ್ಲ. ಈಗ ನನಗೇ ನೇರಾಗಿ ಬೆಂಗಳೂರಿಗೆ ವರ್ಗವಾಗಿದೆ ಎಂದು ತಿಳಿದು ಅವರಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಕೂಡಲೇ ಸಾಮಾನುಗಳೆಲ್ಲವನ್ನೂ ತಂದು ಬಿಡುವಂತೆ ಒತ್ತಾಯಪಡಿಸಿದರು. ಮನೆಯಲ್ಲಿ ತಮ್ಮ ಮಗ ದೊರೆಸ್ವಾಮಿ ಎಂಬವನಿಗೆ ಪಾಠ ಹೇಳುತ್ತಿದ್ದ ಇಬ್ಬರು ಪ್ರೈವೆಟ್ ಟ್ಯೂಟರ್ (ವಿಶೇಷೋಪಾಧ್ಯಾಯರನ್ನು) ತಪ್ಪಿಸಿಬಿಡುವಂತೆ ಮನೆಯ ಹೆಂಗಸರಿಗೆ ಅಪ್ಪಣೆ ಮಾಡಿದರು. ಸರಿ, ನಾನು ಅವರ ಪೋಷಣೆಗೆ ಸೇರಿಕೊಂಡು ಬಿಟ್ಟೆನು.

## ಫೋರ್ಟ್ ಎ.ವಿ. ಸ್ಕೂಲು :

ಈಗ ನಾನು ಕೆಲಸಕ್ಕೆ ಸೇರಿದ ಎ.ವಿ. ಸ್ಕೂಲು ಇದುವರೆಗೆ ನಾನು ನೋಡಿದ್ದ ಯಾವ ಸ್ಕೂಲಿಗೂ ಹೋಲಿಸುವದಕ್ಕೆ ಬರುವಂಥದ್ದಾಗಿರಲಿಲ್ಲ. ಹಿಂದೆ ಹೈಸ್ಕೂಲಿಗಾಗಿ ಏರ್ಪಡಿಸಿದ್ದ ಆ ಕಟ್ಟಡವನ್ನೂ ಎ.ವಿ. ಸ್ಕೂಲಿಗೆ ಬಿಟ್ಟುಕೊಟ್ಟಿದ್ದರು, ಸೀತಾರಾಮಯ್ಯನವರೆಂಬ ವಿಚಕ್ಷಣರೊಬ್ಬರು ಅಲ್ಲಿ ಹೆಡ್‌ಮಾಸ್ಟರಾಗಿದ್ದರು. ಪ್ರತಿಯೊಂದು ತರಗತಿಯೂ ಮೂರು, ನಾಲ್ಕು, ಐದು ಸೆಕ್ಷನ್ (ವಿಭಾಗ)ಗಳುಳ್ಳದ್ದಾಗಿತ್ತು. ಒಂದೊಂದು ವಿಭಾಗದಲ್ಲಿಯೂ 50-60 ಹುಡುಗರು ಇರುತ್ತಿದ್ದರು! ನನ್ನ ಕಣ್ಣಿಗೆ ಸ್ಕೂಲೇ ಒಂದು ಹುಡುಗರ ಸಂತೆಯಾಗಿ ಕಾಣಿಸುತ್ತಿತ್ತು. ಸೀತಾರಾಮಶಾಸ್ತ್ರಿಗಳು (ಒಬ್ಬ ಆಂಧ್ರರು), ನರಸಿಂಹಾಚಾರ್ (ಒಬ್ಬ ಅಯ್ಯಂಗಾರ್ ಗ್ರ್ಯಾಜುಏಟ್), ಶ್ರೀನಿವಾಸಯ್ಯಂಗಾರ್ - ಮೊದಲಾದವರ ಪರಿಚಯವು ಬೇಗನೆ ಆಯಿತು. ರೈಟರ್ ಸುಬ್ಬಯ್ಯನೆಂಬವರೊಬ್ಬರು ನನ್ನನ್ನು ಬಹಳ ಆದರದಿಂದ ಕಂಡರು. ಇಷ್ಟೆಲ್ಲ ಆದರೂ ಮೊದಮೊದಲು ಸ್ಕೂಲಿನ ಹುಡುಗರನ್ನು ಹತೋಟಿಯಲ್ಲಿಟ್ಟುಕೊಂಡು ಪಾಠ ಹೇಳುವದು ನನಗೆ ಬಹಳ ಕಷ್ಟವಾಯಿತು. ಹೆಡ್‌ಮಾಸ್ಟರು ಬಹಳ ಸಹಾನುಭೂತಿಯಿಂದ ನೋಡಿ ನನಗೆ ಅವಕಾಶವನ್ನು ಕೊಟ್ಟದ್ದರ ಮೇಲೆ ಮೆಲ್ಲಗೆ ಹೊಸ ಸ್ಥಳವನ್ನು ಹೇಗೋ ಒಗ್ಗಿಸಿಕೊಂಡೆನು. ಹುಡುಗರಿಗೆ ಲೆಕ್ಕ, ಇಂಗ್ಲಿಷುವ್ಯಾಕರಣ, ಆರೋಗ್ಯಶಾಸ್ತ್ರ - ಇವುಗಳ ಪಾಠವು ನನಗೆ ಗೊತ್ತಾಗಿದ್ದವೆಂದು ನೆನಪಿದೆ.

## ವಾಸದ ಮನೆಗಳು :

ಕೃಷ್ಣಸ್ವಾಮಿ ಅಯ್ಯರು ನನಗೆ ವಾಸದ ಮನೆಯನ್ನು ಗೊತ್ತು ಮಾಡುವದಕ್ಕೆ ಬಹಳ ಶ್ರಮವನ್ನು ವಹಿಸಿದರು. ಹತ್ತಿರವಾಗಿ ಎಲ್ಲಿಯೂ ದೊರಕಲಿಲ್ಲ;

ಗವೀಪುರದಲ್ಲಿ ಕೃ. ಶಾಸ್ತ್ರಿಗಳೆಂಬವರ ಮನೆಯ ಭಾಗವೊಂದು ದೊರಕಿತು. ಆಮೇಲೆ ಮನೆಯವರನ್ನು ಕರೆಯಿಸಿಕೊಂಡೆನು. ಆಗಸ್ಟ್ ತಿಂಗಳಾಗಿದ್ದರೂ ಬೆಂಗಳೂರಿನಲ್ಲಿ ಆಗಲೆ ಬಹಳ ಚಳಿ ಎಂತ ನಮಗೆ ತೋರಿತು. ಹೊದೆಯುವುದಕ್ಕೆ ತಕ್ಕ ಬಟ್ಟೆಗಳನ್ನು ಹೊಂದಿಸಿಕೊಂಡೆವು, ಬಸವನಗುಡಿಯ ಪೇಟೆಯು ತಕ್ಕಮಟ್ಟಿಗೆ ದೂರವಾಗಿಯೇ ಇತ್ತು. ಅಲ್ಲಿಂದ ಸಾಮಾನುಗಳನ್ನು ತಂದುಕೊಳ್ಳುವದು ಮನೆಯಿಂದ ಸ್ಕೂಲಿಗೆ ಹೋಗಿ ಬರುವದು ಈ ತಾಪತ್ರಯವೂ ತಕ್ಕಮಟ್ಟಿಗೆ ಆಯಾಸಕರವಾಗಿಯೇ ಇತ್ತು. ಇದರ ಜೊತೆಗೆ ಕೃ.ಅಯ್ಯರ ಮನೆಗೆ ಹುಡುಗನ ಪಾಠಕ್ಕೆ ಹೋಗಿ ಬರುವದು, ಅವರೊಡನೆ ವೇದಾಂತಕಾಲಕ್ಷೇಪ - ಇವುಗಳನ್ನು ಬಿಡುವಂತೆಯೇ ಇರಲಿಲ್ಲ. ಅಯ್ಯರವರೂ ಅವರ ಪತ್ನಿ ಸುಬ್ಬಮ್ಮನವರೂ ಆಗಾಗ್ಗೆ ಬಂದು ನಮ್ಮ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಲೇ ಇದ್ದರು. ಕೆಲವು ತಿಂಗಳುಗಳಾದ ಮೇಲೆ ಗವಿಪುರದ ಮನೆಯನ್ನು ಬಿಟ್ಟು ಬಾಂದಿನವರ ಬೀದಿಯಲ್ಲಿ(?) ಪಂತರಮ್ ಮನೆಯೆಂಬಲ್ಲಿಗೆ ಸ್ಥಳಾಂತರವಾದದ್ದರಿಂದ ಕೃ.ಅಯ್ಯರ ಮನೆಗೆ ಸ್ವಲ್ಪ ಹತ್ತಿರವಾಯಿತು. ಆದರೆ ಅಲ್ಲಿ ಹಿಂದುಗಡೆಯ ಮನೆ, ಬಾವಿಯನೀರು, ಇವುಗಳಿಂದಲೇ ತೃಪ್ತರಾಗಬೇಕಾಗಿ ಬಂತು. ಹೇಗೆ ಆಗಲಿ ಈ ಮನೆಯು ನನಗೆ ಬಹುದಿನ ಶಾಶ್ವತ ವಾಸಸ್ಥಾನವಾಗಲಿಲ್ಲ. ಕೆಲವು ತಿಂಗಳಲ್ಲಿಯೇ ಬಸವನಗುಡಿಯ ಪೇಟೆಯ ಮನೆಗೆ ತಿಂಗಳಿಗೆ ಹದಿನಾಲ್ಕು ರೂಪಾಯಿ ಬಾಡಿಗೆಗೆ ಗೊತ್ತುಮಾಡಿಕೊಂಡು - ಹೋದೆನು. ಆದರೆ ಅಲ್ಲಿಗೆ ಕೃ.ಸ್ವಾ.ಅಯ್ಯರ ಹಿರಿಯ ಅಳಿಯಂದಿರು ಬರಬೇಕೆಂಬ ಯೋಚನೆ ಬಂದದ್ದರಿಂದ ಅದನ್ನು ನಾನು ಬೇಗ ಬಿಡಬೇಕಾಗಿ ಬಂದಿತು. ಕೊನೆಗೆ ಶಂಕರಮಠದ ಎದುರು ಸಾಲಿನಲ್ಲಿ ಒಂದು ತಗ್ಗಿನಲ್ಲಿದ್ದ ಮನೆಗೆ ಬಂದಿಳಿದೆನು. ಬೆಂಗಳೂರಿನಲ್ಲಿ ಮಧ್ಯ ಸ್ಥಿತಿಯ ನಿಯತ ಆದಾಯದ ಜನರಿಗೆ ವಾಸದ ಮನೆಗಳು ಸಿಕ್ಕುವದು ಬಹಳ ಕಷ್ಟ ; ಆದ್ದರಿಂದ ಅವರು ಬೆಕ್ಕು ಹೊಲೆಯನ್ನು ತೆಗೆಯುವಂತೆ ಅವರು ಮನೆಗಳನ್ನು ಬದಲಾಯಿಸಲೇಬೇಕಾಗುತ್ತದೆ.

## ವೇದಾಂತ ವಿಚಾರ ಮುಂದುವರಿದದ್ದು:

ಈಗ ನನಗೆ ಅಯ್ಯರ ಮನೆಯಲ್ಲಿ ಅವರ ಮಗನಿಗೆ ಪಾಠವನ್ನು ಹೇಳುವ ನೆಪದಿಂದ ದಿನದಿನವೂ ಗೊತ್ತಾಗಿ ಹೋಗಲೇ ಬೇಕಾಗಿದ್ದದ್ದರಿಂದ ವೇದಾಂತವಿಚಾರಕ್ಕೆ ಏನಾದರೊಂದು ಅವಕಾಶವು ದೊರೆಯುತ್ತಲೇ ಇದ್ದಿತು. ಅವರು ಮೊದಲು ಮಿಥಿಕ್ ಸೊಸೈಟಿಗೆಂದು ಬರೆದಿದ್ದ **Fundamentals of Vedanta** (ವೇದಾಂತದ ಮೂಲತತ್ತ್ವಗಳು) ಎಂಬ ಪುಸ್ತಕವನ್ನು ಈಗ ಅಚ್ಚು

ಹಾಕಿಸಿದ್ದರೆಂದು ಕಾಣುತ್ತದೆ, ಅದನ್ನು ನಾನು ಸ್ವಲ್ಪ ನಿಧಾನವಾಗಿ ಓದಿದ ಮೇಲೆ ನನಗೆ ವೇದಾಂತವನ್ನು ಜಿಜ್ಞಾಸ್ಯವಾದ ಬಾಹ್ಯಪ್ರಪಂಚದೃಷ್ಟಿಯಿಂದ ವಿಚಾರ ಮಾಡುವದಕ್ಕಿಂತಲೂ ಜಿಜ್ಞಾಸುವಿನ ದೃಷ್ಟಿಯಿಂದ ವಿಚಾರಮಾಡುವದು ಹೆಚ್ಚಿನ ಫಲಕಾರಿ ಎಂಬ ಭಾವನೆ ಬಂದಿತು. ಅದನ್ನು ಸ್ಫುಟಗೊಳಿಸುವದಕ್ಕೆಂದು ಒಂದು ಗ್ರಂಥವನ್ನು ಬರೆಯಬೇಕೆಂಬ ಕುತೂಹಲವುಂಟಾಗಿ ಪುಸ್ತಕಕ್ಕೆ ಬೇಕಾಗಿದ್ದ ಟಿಪ್ಪಣಿಯನ್ನು ಸ್ವಲ್ಪಮಟ್ಟಿಗೆ ಬರೆದುಕೊಂಡೆನು. ಅಯ್ಯರು ಅದನ್ನು ನೋಡಿ ಸಂತೋಷಪಟ್ಟರು. ಆದರೆ ನಾನು ಅದನ್ನು ಬರೆಯುವದಕ್ಕೆ ಉಪಯೋಗಿಸಿದ್ದ ಕಾಗದವು ಆಗ್ಗೆ ಸರಕಾರಿಯ ಬುಕ್ಕು ಡಿಪೋಗಳಿಗೆ ಒದಗಿಸುತ್ತಿದ್ದ ಒಂದು ಪುಸ್ತಕಕ್ಕೆ ಸೇರಿತ್ತು. ಅದು ಹಳೆಯದಾಗಿದ್ದು ಲೆಕ್ಕದ ಕೆಲಸಕ್ಕೆ ಬರುವದಿಲ್ಲವೆಂಬ ನಿಮಿತ್ತದಿಂದ ನಾನು ಅದನ್ನು ಈ ಕರಡಿಗೆ ಉಪಯೋಗಿಸಿಕೊಂಡೆನೆಂದು ತೋರುತ್ತದೆ. ಅದು ಅಯ್ಯರವರ ಮನಸ್ಸಿಗೆ ಸರಿ ಬರಲಿಲ್ಲ. ಸರಕಾರಿ ಕಾಗದವನ್ನು ನಮ್ಮ ಸ್ವಂತ ಕೆಲಸಕ್ಕೆ ಉಪಯೋಗಿಸುವದು ಸರ್ವಥಾ ಸರಿಯಲ್ಲ ಎಂದು ಅವರು ಬುದ್ಧಿ ಹೇಳಿದರು. ಆಗ ನನಗೆ ನಾಚಿಕೆಯಾಗಿ ಆ ಪುಸ್ತಕವನ್ನು ಹರಿದು ಹಾಕಿಬಿಟ್ಟೆನು. ಇದೇ ಕಾರಣದಿಂದ ನಾನು ಶಂಕರಾಚಾರ್ಯರ ಮತದಲ್ಲಿ ಅವಿದ್ಯೆಯೆಂದರೇನು ? ಮೋಕ್ಷವಿಚಾರಕ್ಕೆ ಶಂಕರರು ಏನು ಹೇಳುತ್ತಾರೆ ? ವರ್ಣಾಶ್ರಮಧರ್ಮಗಳು ಅವರಿಗೆ ಒಪ್ಪಿತವೆ ? ಎಂದು ಮುಂತಾಗಿ ಖಾತೆಗಳ ಹಾಗೆ ವಿಂಗಡ ವಿಂಗಡವಾಗಿ ಬೇರೆಬೇರೆಯ ಭಾಷ್ಯಗಳಿಂದ ವಾಕ್ಯಗಳನ್ನು ಆರಿಸಿ ಬರೆದುಕೊಂಡಿದ್ದ ಪುಸ್ತಕವನ್ನು ಕೂಡ ಹರಿದುಹಾಕಿಬಿಟ್ಟೆನು. ಆ ಪುಸ್ತಕದಲ್ಲಿದ್ದ ವಿಷಯಗಳನ್ನು ಕೂಡ ಮತ್ತೊಂದು ಪುಸ್ತಕದಲ್ಲಿ ಬರೆಯುವ ತಾಳ್ಮೆ ನನಗೆ ಬರಲಿಲ್ಲ.

ಪ್ರಾಸಂಗಿಕವಾದ ಈ ವಿಚಾರವಿರಲಿ. ಕೃ.ಅಯ್ಯರ ಪುಸ್ತಕವನ್ನು ಸಂಸ್ಕೃತಕ್ಕೆ ಇಳಿಸಿದರೆ ಸರಿಯಾದೀತೆಂದು ನನಗೆ ತೋರಿತು. ಅದರ ಸ್ವಲ್ಪಭಾಗವನ್ನು ಪರಿವರ್ತನೆ ಮಾಡಿ ಅಯ್ಯರವರಿಗೆ ತೋರಿಸಿದೆನು. ಅವರು ಹೃಷ್ಟ (ಸಂತೋಷ-ಗೊಂಡ) ಚಿತ್ತರಾಗಿ ಈ ಕಾಗದವನ್ನು ಮೇಜಿನ ಮೇಲೆಯೇ ಇಟ್ಟಿರಿ ಎಂದರು. ಒಂದೆರಡು ದಿನಗಳಾದ ಮೇಲೆ ಹೈಸ್ಕೂಲಿನ ಪಂಡಿತರಾದ ಒಬ್ಬ ಆಚಾರ್ಯರಿಗೆ ಅದನ್ನು ತೋರಿಸಲು 'ಶೈಲಿಯು ಪುರಾತನ ಗ್ರಂಥಕರ್ತರದಾಗಿರುವಂತೆ ತೋರುತ್ತಿದೆ, ಬಹಳ ಚೆನ್ನಾಗಿದೆ ಇದನ್ನು ಯಾರು ಬರೆದರು ?' ಎಂದು ಮುಂತಾಗಿ ಶ್ಲಾಘಿಸಿದರಂತೆ. ಮುಂದೆ ಆಚಾರ್ಯರಿಗೂ ನನಗೂ ದ್ವೈತಾದ್ವೈತಗಳ ವಿಷಯಕ್ಕೆ ಉಪನಿಷದ್ವ್ಯಾಖ್ಯಾನ ವಿಚಾರದಲ್ಲಿ ಸ್ವಲ್ಪ ವಾದವೂ ನಡೆಯಿತು. ಅಯ್ಯರಿಗೆ ನನ್ನ ವಿಷಯಕ್ಕೆ ಸ್ವಲ್ಪ ಆಶಾಂಕುರವಾಯಿತು. 'ಈ ಗ್ರಂಥವನ್ನು ಪೂರೈಸಿಬಿಟ್ಟರೆ

ಒಳ್ಳೆಯದು ; ಆ ಕೆಲಸವನ್ನು ಮಾಡಿರಿ' ಎಂದು ಪ್ರೋತ್ಸಾಹಿಸಿದರು. ನಾನು 'ವೇದಾಂತ ಪ್ರಕ್ರಿಯಾರಹಸ್ಯ'ವೆಂಬ ಹೆಸರನ್ನಿಟ್ಟು ಸಂಸ್ಕೃತಕ್ಕೆ ತಿರುಗಿಸಿದೆನು. ಇದನ್ನು ಆ ಕೂಡಲೆ ಪೂರ್ಣಗೊಳಿಸಿದೆನೋ ಇಲ್ಲವೋ ನೆನಪಿಲ್ಲ. ಅಂತೂ ಈಗ ಕೈ ಬರವಣಿಗೆಯಲ್ಲಿರುವ ರೂಪದಲ್ಲಿ ಪೂರ್ಣವಾಗಿದೆ. ಅವಾಂತರ ವಿಷಯಗಳಿಗೆ ತಲೆ ಬರಹಗಳನ್ನು ಕೊಟ್ಟಿದೆ. ಅಲ್ಲಲ್ಲಿ ಬರೆದಿರುವ ಪ್ರಧಾನವಿಚಾರಗಳಿಗೆ ಮೂಲ ಪ್ರಮಾಣವಚನಗಳನ್ನು ಉದಾಹರಿಸಿದೆ. ಕೊನೆಯಲ್ಲಿ 'ಇತಿ ಶ್ರೀ ಕೃಷ್ಣಾರ್ಯ-ಪ್ರಣೀತಂ ಸುಬ್ರಹ್ಮಣ್ಯೇನ ವೇದಾಂತತತ್ತ್ವವಿಜಿಜ್ಞಾಸೂನಾಮಾಙ್ಗ್ಲಭಾಷಾ ಪರಿಚಯ-ರಹಿತಾನಾಂ ಕೃತೇ ಗೀರ್ವಾಣಭಾಷಾಭೂಷಣಾಲಂಕೃತಂ ಯಥಾಮತಿ ತತ್ರ ತತ್ರ ಯುಕ್ತ್ಯುಪಬೃಂಹಿತಂ ಪ್ರಮಾಣವಾಕ್ಯಸಂಯೋಜಿತಂ ವೇದಾಂತಪ್ರಕ್ರಿಯಾ ರಹಸ್ಯಂ ನಾಮ ಪ್ರಕರಣಂ ಪರಿಸಮಾಪ್ತಮ್' ಎಂಬ ಪುಷ್ಪಿಕೆಯಿದೆ.

ಅಯ್ಯರವರ ಮೂಲಕ ಇನ್ನು ಕೆಲವು ಪಂಡಿತರೊಡನೆ ಚರ್ಚೆ ಮಾಡುವ ಸುಯೋಗವೂ ನನಗೆ ಲಭಿಸಿತು. ವಿಠ್ಠಲಶಾಸ್ತ್ರಿಗಳ ವಿಷಯವನ್ನು ಹೇಳಬೇಕಾಗಿಯೇ ಇಲ್ಲ. (ಅವರು ಪಂಡಿತರಾಗಿ ಸ್ಕೂಲಿನ ಉಪಾಧ್ಯಾಯರಾದ ಮೇಲೂ ಊರಿನ ಪರಿಚಯದಿಂದ 'ಗುಂಡ' ಎಂಬ ಹೆಸರಿನಿಂದಲೇ ನಾನು ಈವರೆಗೆ ಕರೆಯುತ್ತಿದ್ದೆನು. ಒಂದು ದಿನ ಒಬ್ಬ ಸಹೋಪಾಧ್ಯಾಯರನ್ನು 'ಗುಂಡ ಎಲ್ಲಿ' ಎಂದು ಕೇಳಲು ಅವರು 'ಯಾರು ?' ಎಂದರು. ತಟ್ಟನೆ ನನ್ನ ತಪ್ಪು ನೆನಪಿಗೆ ಬಂದು ನಾಚಿಕೆಯಾಯಿತು; ಚಿಕ್ಕಮಗಳೂರ ಹರಿಯಪ್ಪನವರು ಎಲ್ಲರನ್ನೂ ಬಹುವಚನದಿಂದ ಕರೆಯುವ ಅಭ್ಯಾಸವನ್ನು ಮಾಡಿಸಿದ ಮೇಲೂ ಒಬ್ಬಿಬ್ಬರನ್ನು ಹಾಗೆಯೇ ಸಲಿಗೆಯಿಂದ ಏಕವಚನದಿಂದ ಕರೆಯುತ್ತಿದ್ದದ್ದು ತಪ್ಪೇ. ಅಂದಿನಿಂದ ನಾನು 'ವಿಠ್ಠಲಶಾಸ್ತ್ರಿಗಳು' ಎಂದೇ ಅವರನ್ನು ಪರಾಮರ್ಶಿಸುತ್ತಾ ಬಂದಿದ್ದೇನೆ). ಅವರು ಬೆಂಗಳೂರಿಗೆ ಹೋದ ಕೂಡಲೆ ಕೃಷ್ಣಸ್ವಾಮಿ ಅಯ್ಯರನ್ನು ಕಂಡು ನನ್ನ ಹೆಸರನ್ನು ಹೇಳಿದ್ದರಿಂದ ಅಯ್ಯರು 'ನೀವು ಸುಬ್ಬರಾಯರ ಕಡೆಯವರೆ ?' ಎಂದು ಸಾಭಿಮಾನವಾಗಿ ವಿಚಾರಿಸಿ ಅವರೊಡನೆ ವೇದಾಂತವಿಚಾರವನ್ನು ಮಾಡುತ್ತಲೇ ಬಂದಿದ್ದರಂತೆ. ನಾನು ಬಂದ ಕೂಡಲೇ ಅಯ್ಯರವರ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳಲಾರದೆ ತಾವು ಪೇಚಾಡುತ್ತಿದ್ದದ್ದನ್ನು ನನ್ನಲ್ಲಿ ಪ್ರಸ್ತಾಪಿಸಿದರು. ನಾನು ಭಾಷ್ಯಾನುಸಾರವಾಗಿ ಸಮಾಧಾನ ಹೇಳುತ್ತಾ ಇದ್ದೆನು, ಅವಸ್ಥಾತ್ರಯವಿಚಾರಕ್ರಮದಿಂದ ಹೇಗೆ ಎಲ್ಲಾ ತೊಡಕುಗಳೂ ಬಿಚ್ಚಿಕೊಳ್ಳುವವೆಂಬುದನ್ನು ಅವರಿಗೆ ಹೇಳುತ್ತಲಿದ್ದೆ. ಆದರೆ ಆ ಕ್ರಮವು ಇನ್ನೂ ನನಗೆ ಅಷ್ಟು ಸರಿಯಾಗಿ ಅಳವಟ್ಟಿರಲಿಲ್ಲವೆಂಬುದು ಆಮೇಲೆ ಮನದಟ್ಟಾಯಿತು. ಇದನ್ನು ಮುಂದೆ ವಾಚಕರಿಗೆ ತಿಳಿಸುವೆನು.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಮತ್ತೊಬ್ಬ ಪಂಡಿತರು. ಅವರನ್ನು ಕುರ್ತಕೋಟಿಯ ವಿದ್ವತ್ಸಭೆಯಲ್ಲಿ ದೂರಕ್ಕೆ ಕಂಡಿದ್ದೆನಾದರೂ ಅವರ ವಿಶೇಷ ಪರಿಚಯವು ನನಗೆ ಆದದ್ದು ಅಯ್ಯರ ಮನೆಯಲ್ಲಿಯೇ. ಚತುಃಸೂತ್ರೀಭಾಷ್ಯಕ್ಕೆ ಕನ್ನಡದ ಅನುವಾದವನ್ನು ಬರೆಯುವದಕ್ಕೆ ಆರಂಭಿಸಿ ಪಂಡಿತರುಗಳಿಗೆ ಅದನ್ನು ತೋರಿಸಿದ್ದರು, ಅದನ್ನು ಪಂಡಿತರು ತಮತಮಗೆ ತೋರಿದ ರೀತಿಯಿಂದ ತಿದ್ದಿ ಅಲ್ಲಲ್ಲಿ ಗುರುತು ಮಾಡಿದ್ದರು. ಈ ಸಂದರ್ಭದಲ್ಲಿಯೇ ನನಗೂ ಶಾಸ್ತ್ರಿಗಳಿಗೂ ಪರಸ್ಪರಪರಿಚಯವಾಯಿತು. ಅಯ್ಯರವರು ಶಾಸ್ತ್ರಿಗಳಿಗೆ ನನ್ನ ವಿಚಾರವನ್ನು ತಿಳಿಸಿ 'ಪ್ರಕ್ರಿಯಾ ರಹಸ್ಯ'ವನ್ನು ಬರೆದಿರುವದನ್ನು ಅವರಿಗೆ ಸ್ವಲ್ಪ ಓದಿ ಹೇಳಬೇಕೆಂದು ಒಂದು ದಿನ ಇಚ್ಛೈಸಿದರು. ಅದರಂತೆ ನಾನು ಸ್ವಲ್ಪಭಾಗವನ್ನು ಅವರಲ್ಲಿ ಓದಿ ಹೇಳಿದೆನು. ಶಾಸ್ತ್ರಿಗಳು ವಾದದಲ್ಲಿ ಬಹಳ ಕುಶಲರು. ಪ್ರಕ್ರಿಯಾ ರಹಸ್ಯದಲ್ಲಿ ಒಂದು ಕಡೆ 'ಏವಂ ವಿನ್ಯೈವ ಮೇಧಾನ್ಯಸ್ತಭಾರಂ ವಿನ್ಯೈವ ಚ ಕಲ್ಪನಾಕ್ಲೇಶಂ ಕಲ್ಪಿತ ಏವ ಸರ್ವೋ ಜಿಜ್ಞಾಸುರಸ್ಯಾರ್ಥಸ್ಯ ಸಾಕ್ಷಾತ್ಕಾರಣಾಯೇತಿ' ಎಂಬ ವಾಕ್ಯವಿತ್ತು, ಅವರು ಅದನ್ನು ಕೇಳಿದ ಕೂಡಲೇ 'ಮೇಧಾ' ಎಂದರೇನು ? ಎಂದು ಕೇಳಿದರು. ನಾನು 'ಗ್ರಂಥಧಾರಣಶಕ್ತಿ' ಎಂದೆನು. ಶಾಸ್ತ್ರಿಗಳು 'ಅದಕ್ಕೆ ಪ್ರಮಾಣವೇನು ?' ಎಂದು ಕೇಳಿದರು. 'ಧೀರ್ಧಾರಣಾವತೀ ಮೇಧಾ' ಎಂಬ ಕೋಶವೇ ಪ್ರಮಾಣವು ಎಂದೆನು. ಅವರು ಅದು ಸರಿಯಲ್ಲ. ಮೇಧಾ ಎಂದರೆ ಬುದ್ಧಿ; ಧೀಃ, ಧಾರಣಾವತೀ, ಮೇಧಾ - ಎಂಬ ಮೂರೂ ಬುದ್ಧಿಗೆ ಹೆಸರುಗಳು' ಎಂದು ವಾದಿಸಿದರು. ನನಗೆ ಶಂಕರಾಚಾರ್ಯರ ಗ್ರಂಥಗಳನ್ನು ಓದಿದ ಸಂಸ್ಕೃತದ ವಾಸನೆಯೊಂದನ್ನು ಬಿಟ್ಟರೆ ಕಾವ್ಯನಾಟಕ ಚಂಪೂಗ್ರಂಥಗಳನ್ನು ಗುರುಮುಖದಿಂದ ಓದಿದ ಅಭ್ಯಾಸವೇ ಇಲ್ಲ; ಅಮರಕೋಶವನ್ನಂತೂ ಒಂದು ಕ್ರಮದಿಂದ ಬಾಯಿಪಾಠ ಮಾಡಿದವನೇ ಅಲ್ಲ. ನನಗೆ ಆಗಿರುವ ಅಲ್ಪ ಸಂಸ್ಕಾರಕ್ಕೆ ಇಷ್ಟು ಮಟ್ಟಿನ ಸಂಸ್ಕೃತ ಭಾಷೆಯನ್ನು ಬರೆಯುವ ಯೋಗ್ಯತೆ ಬಂದದ್ದು ಆಚಾರ್ಯರ ಅನುಗ್ರಹವೇ ಸರಿ ಎಂದು ದೃಢವಾಗಿ ನಂಬಿದ್ದೆನಾದ್ದರಿಂದ ಶಾಸ್ತ್ರಿಗಳು ಹೇಳಿದ್ದೇ ಸರಿ ಎಂದು ಅಷ್ಟಕ್ಕೇ ಸುಮ್ಮನಾಗಿಬಿಟ್ಟೆನು. ಮನೆಗೆ ಬಂದು ನೋಡಿದ್ದರಲ್ಲಿ ಅಮರದಲ್ಲಿ 'ಸಂಕಲ್ಪಃ ಕರ್ಮ ಮಾನಸಮ್' ಎಂದು ವಾಕ್ಯಶೇಷವಿತ್ತು. ಸಂಕಲ್ಪಃ, ಕರ್ಮ, ಮಾನಸಮ್ - ಎಂಬ ಮೂರೂ ಪರ್ಯಾಯ ಪದಗಳಾಗಿರಲಾರವು. ಹಾಗಾದರೆ ನಾನು ಹೇಳಿದ್ದೇಕೆ ತಪ್ಪೋ ? ಎಂದುಕೊಂಡು ಕೆಲವು ದಿನಗಳಾದ ಮೇಲೆ ಶಾಸ್ತ್ರಿಗಳನ್ನು ಕಂಡಾಗ ಈ ವಿಷಯವನ್ನು ಪ್ರಸ್ತಾಪಿಸಲು 'ನಾನು ಹಾಗೆಂದೆನೆ ? ಅದು ವಾದಕ್ಕಾಗಿ ಹೇಳಿದ್ದಾಗಿರಬೇಕು !' ಎಂದು ಬಿಟ್ಟರು ! ಈ ವಿಷಯವನ್ನು ಇಷ್ಟು ಉದ್ದಕ್ಕೆ ಇಲ್ಲಿ

ಹೇಳಬೇಕಾದದ್ದಿರಲಿಲ್ಲವಾದರೂ, ನನಗೆ ಪಂಡಿತರೊಡನೆ ಸಂಭಾಷಣೆ ಮಾಡಿ 'ತದ್ವಿದ್ಯೈಃ ಸಹ ಸಂವಾದಃ' ಎಂಬಂತೆ ಜ್ಞಾನವೃದ್ಧಿಯನ್ನು ಮಾಡಿಕೊಳ್ಳುವದಕ್ಕೆ ಸುಯೋಗವು ಈಗ ಲಭಿಸಿತೆಂದು ತಿಳಿಸುವದಕ್ಕೆ ಮಾತ್ರ ಇದನ್ನು ಬರೆದಿರುತ್ತೇನೆ, ಹೀಗೆಯೇ ಅಯ್ಯರವರ ಮನೆಯಲ್ಲಿ ಅನೇಕ ವಿದ್ವದ್ಗೋಷ್ಠಿಗಳು ಲಭಿಸುತ್ತಿದ್ದವು. ಇದು ಪೂರ್ವಸುಕೃತದ ಪರಿಪಾಕವಲ್ಲದೆ ಮತ್ತೇನಾಗಿದ್ದೀತು ?

## ಶಂಕರಮಠ :

ಈಗ ನನಗೆ ಶಂಕರಮಠವನ್ನು ನೋಡುವ ಯೋಗವೂ ಅಲ್ಲಿ ನಡೆಯುವ ಪಾಠಗಳ ಸದುಪಯೋಗವನ್ನು ಪಡೆಯುವ ಯೋಗವೂ ಒಮ್ಮೆಗೇ ಲಭಿಸಿದವು. 1907 ರಲ್ಲಿ ಶೃಂಗೇರಿಯ ಶ್ರೀಶ್ರೀಗಳವರು ಕಾಲಟಿಯ ಕಡೆಗೆ ಪ್ರಯಾಣ ಮಾಡಿದಾಗ ಮಠದ ತಳಹದಿಹಾಕಲಾಯಿತು. ಎ.ರಾಮಚಂದ್ರ ಅಯ್ಯರೊಬ್ಬರೇ ಇಪ್ಪತ್ತು ಸಾವಿರ ರುಪಾಯಿಗಳನ್ನು ಕೊಟ್ಟರು. ದಿವಾನ ವಿ.ಪಿ ಮಾಧವರಾಯರು ಚಾಮರಾಜಪೇಟೆಗೂ ಬಸವನಗುಡಿಗೂ ನಡುವೆ ಇರುವ ಭಾಗವನ್ನೆಲ್ಲ ಗೃಹನಿವೇಶನಗಳಾಗಿ ಮಾಡಿ ಹರಾಜುಮಾಡಿಸಿ ವಿಶೇಷವಾಗಿ ಬ್ರಾಹ್ಮಣಗೃಹಸ್ಥರಿಗೆ ಕೊಡಿಸಿದರು; ಶ್ರೀಗಳ ಮಠಕ್ಕೆ ಒಂದು ವಿಸ್ತಾರವಾದ ವಿಭಾಗವನ್ನು ಅರ್ಪಿಸಲಾಯಿತು. ಇಲ್ಲಿ ಶ್ರೀಶ್ರೀಗಳವರು ಶಂಕರಮೂರ್ತಿಯ ಪ್ರತಿಷ್ಠೆಯನ್ನು ಮಾಡಿಸಿ ಮುಂದಕ್ಕೆ ಪ್ರಯಾಣವನ್ನು ಬೆಳಸಿದರು. ಕಾಲಟಿಯಿಂದ ಮತ್ತೆ ಅವರು ದಯಮಾಡಿಸುವದರೊಳಗೆ ಕಟ್ಟಡವೆಲ್ಲ ಸಿದ್ಧವಾಗಿತ್ತು. ಶ್ರೀಶ್ರೀಗಳವರು 1911ನೆಯ ಫೆಬ್ರವರಿ ಮೂರನೆಯ ತಾರೀಖಿನ ದಿನ ಮಹಾರಾಜರ ಮತ್ತು ಕೆಲವು ಮುಖ್ಯಾಧಿಕಾರಿಗಳನ್ನು ಸೇರಿಸಿ ಇಲ್ಲಿ ಇನ್ನು ಮೇಲೆ 'ಭಾರತೀಯ ಗೀರ್ವಾಣ-ಪ್ರೌಢವಿದ್ಯಾಭಿವರ್ಧಿನೀ' ಎಂಬ ಹೆಸರಿನ ಪ್ರೌಢಪಾಠಶಾಲೆಯೊಂದನ್ನು ಸ್ಥಾಪಿಸಿ ಐವತ್ತು ಜನ ಪ್ರೌಢವಿದ್ಯಾರ್ಥಿಗಳಿಗೆ ಪೂರ್ವೋತ್ತರಮೀಮಾಂಸಾಶಾಸ್ತ್ರಗಳ ಪಾಠಕ್ಕೆ ಏರ್ಪಡಿಸುವದಾಗಿ ಅಪ್ಪಣೆ ಕೊಡಿಸಿದರು. ಸದ್ಯಕ್ಕೆ ವಿ.ಪಿ ಮಾಧವರಾಯರು ನಿರ್ಮಾಣ ಮಾಡಿಸಿ ಒಪ್ಪಿಸಿದ್ದ ಏಳು ಸಂಭಾರಸಹಿತವಾದ ಗೃಹಗಳನ್ನು ಉಪಯೋಗಿಸಿಕೊಂಡು ಎಂಟು ಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಏರ್ಪಡಿಸುವದಾಗಿಯೂ ಇಬ್ಬರು ವಿದ್ವಾಂಸರುಗಳನ್ನು ಉಪಾಧ್ಯಾಯರಾಗಿ ಏರ್ಪಡಿಸುವದಾಗಿಯೂ ತಿಳಿಸಿದರು. ಒಬ್ಬೊಬ್ಬ ವಿದ್ಯಾರ್ಥಿಗೂ 20 ರೂ.ಗಳ ವಿದ್ಯಾರ್ಥಿವೇತನವನ್ನು ಗೊತ್ತುಪಡಿಸಲಾಯಿತು ; ವಿದ್ಯಾಭ್ಯಾಸವು ಎಂಟು ವರ್ಷಗಳು ಸಾಗಬೇಕೆಂದು ನಿಯಮಿಸಲಾಯಿತ್ತು. ನಾನು ಬರುವ ಹೊತ್ತಿಗೆ ಆರನೆಯ ವರ್ಷದ ಪಾಠಗಳು ಮುಗಿಯುವದಕ್ಕೆ ಬಂದಿದ್ದವೆಂದು ಕಾಣುತ್ತದೆ.

## ಬ್ರ॥ಶ್ರೀ॥ವಿರೂಪಾಕ್ಷಶಾಸ್ತ್ರಿಗಳು:

ವಿರೂಪಾಕ್ಷಶಾಸ್ತ್ರಿಗಳು ಆಗ್ಗೆ ವೇದಾಂತ ಉಪಾಧ್ಯಾಯರಾಗಿದ್ದರು. ಶೃಂಗೇರಿಯ ಪೀಠಾಧಿಪರಾದ ಶ್ರೀಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀ ಸ್ವಾಮಿಗಳರವರ ಅಪ್ಪಣೆಯಂತೆ ಪಾಠಪ್ರವಚನಗಳನ್ನು ನಡೆಯಿಸುತ್ತಿದ್ದು ಸ್ವಾಮಿಗಳವರು ಪರೀಧಾವಿ ಸಂವತ್ಸರದ ಚೈತ್ರಶುಕ್ಲ ದ್ವಿತೀಯ (1912ನೇ ಮಾರ್ಚಿ) ದಲ್ಲಿ ಬ್ರಹ್ಮೀಭೂತರಾದ ಬಳಿಕ ಅದೇ ಧರ್ಮಪೀಠವನ್ನೇರಿದ ಶ್ರೀಶ್ರೀ ಚಂದ್ರಶೇಖರಭಾರತೀಸ್ವಾಮಿಗಳವರಿಗೆ ತರ್ಕ, ವೇದಾಂತಪಾಠವನ್ನು ಹೇಳುತ್ತಿದ್ದರು. ಕಾಶಿಯಲ್ಲಿ ನಡೆದ ಭಾರತಮಹಾಮಂಡಲದಲ್ಲಿ ತಮ್ಮ ವಿದ್ವತ್ಪ್ರಭಾವವನ್ನು ಬೀರಿ 'ವಿದ್ಯಾವಾಚಸ್ಪತಿ' ಎಂಬ ಬಿರುದನ್ನು, ಶೃಂಗೇರಿಯ ಕುಂಭಾಭಿಷೇಕದ ಸಮಯದಲ್ಲಿ 'ನ್ಯಾಯಪಂಚಾನನ' ಎಂಬ ಬಿರುದನ್ನೂ ಗಳಿಸಿಕೊಂಡು ಈಗ್ಗೆ ಶಂಕರಮಠಕ್ಕೆ ಪ್ರಧಾನೋಪಾಧ್ಯಾಯರಾಗಿ ದಯಮಾಡಿಸಿದ್ದರು. ಇಂಥ ಮಹನೀಯರ ಕೃಪೆಗೆ ಮೊದಲೇ ಪಾತ್ರನಾಗಿದ್ದ ನನಗೆ ಈಗ ಮತ್ತೆ ಅವರು ನಡೆಯಿಸುತ್ತಿದ್ದ ಪ್ರೌಢಪಾಠವನ್ನು ಶ್ರವಣಮಾಡುವ ಯೋಗವು ಬಂದಿತು. ಆಗ್ಗೆ ಸೂತ್ರಭಾಷ್ಯವು ನಡೆಯುತ್ತಿದ್ದು ನಾನು ಹಿಂದೆ ಓದುತ್ತಿದ್ದ ಕ್ರಮಕ್ಕೂ ಈ ಪಾಠಶಾಲೆಯ ಕ್ರಮಕ್ಕೂ ಇರುವ ಅಂತಸ್ತಿನ ತಾರತಮ್ಯವು ಮನದಟ್ಟಾಯಿತು. ಶಾಸ್ತ್ರಿಗಳವರು ಆಗ್ಗೆ ನಾನೂ ಚಿದಂಬರಯ್ಯನವರೂ, ಶಾಸ್ತ್ರರೀತಿಯಿಂದ ಅಭ್ಯಾಸಮಾಡುವ ಯೋಗ್ಯತೆಯಿಲ್ಲದ ಲೌಕಿಕರೆಂಬದನ್ನರಿತು, ನಮಗಾಗಿ ಹಗುರವಾದ ಶೈಲಿಯಿಂದ ಭಾಷ್ಯವನ್ನು ಹೇಳುತ್ತಿದ್ದು, ಸಮಯ ಬಂದಹಾಗೆಲ್ಲ ನ್ಯಾಯಶಾಸ್ತ್ರವೇ ಮುಂತಾದವುಗಳ ಪಾರಿಭಾಷಿಕಶಬ್ದಗಳನ್ನು ಆ ಶಾಸ್ತ್ರಗಳ ಮುಖ್ಯವಿಷಯಗಳ ಸಾಮಾನ್ಯಪರಿಚಯವನ್ನು ಮಾಡಿಕೊಡುತ್ತಿದ್ದರು. ಆದರೆ ಈಗ ಅಭ್ಯಾಸಮಾಡುವದಕ್ಕೆ ಬಂದಿದ್ದ ವಿದ್ಯಾರ್ಥಿಗಳು ಹೆಚ್ಚಿನ ಅಂತಸ್ತಿನವರಾಗಿದ್ದದ್ದರಿಂದ ಅವರಿಗೆ ತಕ್ಕಂತೆ ನ್ಯಾಯ- ಮೀಮಾಂಸಾದಿಗಳ ವಿಷಯಗಳನ್ನು ಬೆರೆಯಿಸಿ ಮಾಡುತ್ತಿದ್ದರು. ಹೀಗಿದ್ದರೂ ಅವರು ವಿದ್ವತ್ಪ್ರೌಢಿಮೆಯನ್ನು ಪ್ರದರ್ಶನ ಮಾಡುವ ಹೆಮ್ಮೆಗೆ ಎಂದಿಗೂ ವಶರಾದವರಲ್ಲ. ಸಾಮಾನ್ಯವಾದ ಲೌಕಿಕರೂ ಪಾಠಕ್ಕೆ ಒಬ್ಬಿಬ್ಬರು ಬರುತ್ತಿದ್ದರೆಂಬದನ್ನು ಲಕ್ಷ್ಯವಿಟ್ಟುಕೊಂಡು ವಿಷಯಗಳನ್ನು ತಮ್ಮ ಗುರುಗಳು ಹೇಳುತ್ತಿದ್ದ ದೃಷ್ಟಾಂತಗಳಿಂದಲೂ ಇತಿಹಾಸಪುರಾಣಗಳಿಂದ ಆರಿಸಿದ ಉಪಾಖ್ಯಾನಗಳ ನಿದರ್ಶನದಿಂದಲೂ ಸವಿಗೊಳಿಸುತ್ತಿದ್ದರು. ನಾನು ಒಂದು ದಿನ ಕುತೂಹಲಕ್ಕೆಂದು ಅವರು ಹೇಳುತ್ತಿದ್ದ ದೃಷ್ಟಾಂತಗಳನ್ನೂ ಕಥೆಗಳನ್ನೂ ನನ್ನ ಭಾಷ್ಯದ ಮರೆಹಾಳೆಯ ಮೇಲೆ ಚುಟುಕು ಚುಟುಕಾಗಿ ಗುರುತುಮಾಡಿಕೊಂಡು ಕೊನೆಗೆ ಎಣಿಸಿ

ನೋಡುವಲ್ಲಿ ಆ ದಿನ ಒಂದು ಘಂಟೆಯ ಪಾಠಕ್ಕೆ ಸುಮಾರು 20 ದೃಷ್ಟಾಂತಗಳಿದ್ದವು ! ಶಾಸ್ತ್ರಿಗಳವರು ತಾವು ಶಾಸ್ತ್ರೀಯ ರೀತಿಯಿಂದ ಪಾಠವನ್ನು ಮಾಡುತ್ತಿದ್ದರೂ, ತಮಗೆ ವೇದಾಂತದ ಅನುಭವವೇ ಆಗಿಬಿಟ್ಟಿದೆಯೆಂಬ ಅಭಿಮಾನವನ್ನಿಟ್ಟುಕೊಂಡಿದ್ದವರಲ್ಲ. ನಾನು ಕುರ್ತಕೋಟಿಗೂ ಗೋಂದಾವಳಿಗೂ ಹೋಗಿ ಬಂದಿರುವವನೆಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ ಅವರು 'ಕರ್ಮಾನುಷ್ಠಾನವನ್ನು ಎಂದಿಗೂ ಬಿಡಬಾರದು ; ಚಿತ್ತಶುದ್ಧಿಯಿಂದ ಸಾಧಕರಿಗೆ ಕಾಲಾನುಕಾಲಕ್ಕೆ ಪರಮೇಶ್ವರನ ಅನುಗ್ರಹದಿಂದ ವಿಷಯವು ಅನುಭವಕ್ಕೆ ಬಂದೀತು. ಶಾಸ್ತ್ರವನ್ನು ಕಡೆಗಣಿಸಿ ನಾವು ಭಕ್ತರಾದ್ದರಿಂದ ನಮಗೆ ಯಾವ ಗ್ರಂಥದ ಪರಿಚಯವಿಲ್ಲದಿದ್ದರೂ ವೇದಾಂತಾನುಭವವು ಆಗಿಬಿಡುವದು ಅಥವಾ ಈಗಲೇ ಆಗಿಬಿಟ್ಟಿದೆ ಎಂದು ಮಿಥ್ಯಾಭ್ರಮೆಗೆ ಒಳಗಾಗಬಾರದು' ಎಂದು ಬುದ್ಧಿ ಹೇಳಿದರು, ಅವರ ಬುದ್ಧಿವಾದವು ಯುಕ್ತವೇ ಆಗಿತ್ತೆಂದು ನನ್ನ ಭಾವನೆ. ಏಕೆಂದರೆ ಕುರ್ತಕೋಟಿಯಲ್ಲಿ ನಾನು ಕಂಡ ಕೆಲವು ಜನಸಾಧಕರು ತಾವು ಭಕ್ತಿ ಮಾರ್ಗದವರು, ಮಹಾಭಾಗವತರ ಅಚ್ಚುಮೆಚ್ಚಿನ ಶಿಷ್ಯರು - ಎಂದುಕೊಂಡು ಕರ್ಮವನ್ನು ತ್ಯಜಿಸಿದ್ದದ್ದನ್ನು ನೋಡಿದ್ದೆನು ; ಅವರು ವೇದಾಂತಗ್ರಂಥದಲ್ಲಿ ಅಭಿರುಚಿಯುಳ್ಳ ಮತ್ತು ಸಂಧ್ಯಾದಿ ಕರ್ಮಗಳನ್ನು ಮಾಡುವದರಲ್ಲಿ ಆಸಕ್ತಿಯುಳ್ಳ ನನ್ನ ವಿಷಯದಲ್ಲಿ ಸ್ವಲ್ಪ ಹುಸಿನಗೆಯ ಮಾತುಗಳನ್ನು ಆಡಿದ್ದುಂಟು. ಗೋಂದಾವಳಿಯ ಮಹಾರಾಜರ ಅನುಗ್ರಹದಿಂದ ಮಹಾಭಾಗವತರ ಜೊತೆಯಲ್ಲಿದ್ದು, ಅವರು ಬೋಧಿಸುತ್ತಿದ್ದ ಉಪಸನಾಮಾರ್ಗದ ರುಚಿಯು ಒಂದಿಷ್ಟು ನನಗೆ ಕಂಡುಬಂದಿದ್ದರೂ, ಕರ್ಮಾನುಷ್ಠಾನವನ್ನಾಗಲಿ ವೇದಾಂತಶಾಸ್ತ್ರದ ಅಭ್ಯಾಸವನ್ನಾಗಲಿ ಬಿಡುವದಕ್ಕೆ ಮನಸ್ಸಿಲ್ಲದ ನನಗೆ ಮಹಾಭಾಗವತರೂ ಪ್ರೋತ್ಸಾಹವನ್ನು ಕೊಡುತ್ತಿದ್ದರಲ್ಲದೆ, ಶಾಸ್ತ್ರಿಗಳವರೂ ಎಚ್ಚರಿಕೆಯನ್ನು ಕೊಟ್ಟು ಕಾಪಾಡಿದರೆನ್ನಬೇಕು. ಇದಕ್ಕೆ ಹೊಳಲ್ಕೆರೆಯ ಜೀವಣದೀಕ್ಷಿತರ ಸಹವಾಸವು ನನಗೆ ತಳಹದಿ ಹಾಕಿಕೊಟ್ಟಿತ್ತೆಂಬುದನ್ನು ನಾನು ಎಂದಿಗೂ ಮರೆಯುವಂತಿಲ್ಲ.

## ಡಿ.ಐ.ಜಿ. ದಾಸಪ್ಪನವರು :

ನಾನು ಬೆಂಗಳೂರಿಗೆ ಬಂದು ಕೃ.ಸ್ವಾ. ಅಯ್ಯರವರ ಮನೆಗೆ ಮತ್ತೆ ಮತ್ತೆ ಹೋಗಿಬರುವದು ದಾಸಪ್ಪನವರಿಗೆ ತಿಳಿಯಿತು. ಅಲ್ಲಿ ನಾವಿಬ್ಬರೂ ವೇದಾಂತ ಕಾಲಕ್ಷೇಪ ಮಾಡುತ್ತಿದ್ದೇವೆಂಬುದೂ ಅವರಿಗೆ ಗೊತ್ತಾಯಿತು. ಹಿಂದೆ ನಾನು ಹರಿಹರದಲ್ಲಿದ್ದಾಗ ಒಮ್ಮೆ ದಾವಣಗೆರೆಯ ಸ್ಕೂಲು ಮಾಸ್ಟರುಗಳು ಅವರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿ ನನ್ನನ್ನು ಅದರಲ್ಲಿ ಭಾಗವನ್ನು ವಹಿಸುವಂತೆ ಕೇಳಿಕೊಂಡಿದ್ದರು. ನಾವೆಲ್ಲರೂ ಯಾವದೋ ಒಂದು ತೋಟದ (?) ಬಯಲಿಗೆ

ಹೋದೆವೆಂದು ನೆನಪಿದೆ. ಅಲ್ಲಿ ಉಪಹಾರದ ಪದಾರ್ಥಗಳು ಸಿದ್ಧವಾಗುವವರೆಗೆ ಏನಾದರೂ ಮಾತುಕತೆ ನಡೆಯಿಸುವದಕ್ಕೆ ಎಲ್ಲರೂ ನನ್ನನ್ನು ಮುಂದೆಬಿಟ್ಟರು. ನಾನು ಆಗ ತಾನೆ ಕೈಗೆ ಬಂದಿದ್ದ ರಾಜಯೋಗ ಪುಸ್ತಕವನ್ನು ಅವರ ಕೈಗೆ ಕೊಟ್ಟೆನು. ಅವರು ಅದನ್ನು ಅಲ್ಲಲ್ಲಿ ಸ್ವಲ್ಪನೋಡಿ 'ಬಹಳ ಚೆನ್ನಾಗಿದೆ ; ಆದರೆ ಇದರಲ್ಲಿ ಸ್ವಾಮಿವಿವೇಕಾನಂದರ ಚಿತ್ರವನ್ನು ಮಾತ್ರ ಹಾಕಿರುತ್ತೀರಿ, ಷಟ್ಚಕ್ರಗಳನ್ನೇಕೆ ಸೇರಿಸಲಿಲ್ಲ?' ಎಂದರು. ನಾನು ಇವರಿಗೆ ಡೆಪ್ಯುಟಿ ಇನ್‌ಸ್ಪೆಕ್ಟರು ಜನರಲ್ ಕೆಲಸ ಗೊತ್ತೇ ಹೊರತು ಅಧ್ಯಾತ್ಮಶಾಸ್ತ್ರವೇನು ಗೊತ್ತು ? - ಎಂದುಕೊಂಡು 'ಚಕ್ರಗಳು ರಾಜಯೋಗಕ್ಕೆ ಬೇಕಿಲ್ಲ ; ಅವೆಲ್ಲ ಹಠಯೋಗದ ವಿಷಯ. ಇದೂ ಅಲ್ಲದೆ ಸ್ವಾಮಿಗಳು ರಾಜಯೋಗವನ್ನು ವೇದಾಂತಪ್ರಧಾನವಾಗಿ ಬರೆದಿದ್ದಾರೆ, ಪಾತಂಜಲ-ಸೂತ್ರಗಳಿಗೂ ಕೇವಲ ವ್ಯಾಸಭಾಷ್ಯವನ್ನೇ ಹಿಡಿಯದೆ ತಮ್ಮದೇ ಆದ ಹೊಸ ಮಾರ್ಗವನ್ನು ಹಿಡಿದಿದ್ದಾರೆ' ಎಂದು ಮುಂತಾಗಿ ನನ್ನ ತಿಳುವಳಿಕೆಯನ್ನು ಒಂದಿಷ್ಟು ಪ್ರದರ್ಶನ ಮಾಡಿಕೊಂಡೆನು. ಆಗ 'ಇದನ್ನೆಲ್ಲ ಯಾವಾಗ ಕನ್ನಡಿಸಿದಿರಿ ? ನಿಮಗೆ ಸ್ಕೂಲು ಕೆಲಸದ ನಡುವೆ ವಿರಾಮ ಹೇಗೆ ಸಿಕ್ಕಿತು ?' ಎಂದು ಕೇಳಿದರು. 'ತಾವು ಕಳೂರುಕಟ್ಟೆಗೆ (ಹೊಸನಗರ) ವರ್ಗಮಾಡಿಕೊಡಿಸಿಕೊಟ್ಟ ವಿರಾಮವನ್ನು ಇದಕ್ಕೆ ಉಪಯೋಗಿಸಿದೇನೆ' ಎಂದೆನು. ಅವರು ಮುಗುಳು ನಗೆಯಿಂದ 'ಹಾಗಾದರೆ ಇದರ ನಿರ್ಮಾಣದಿಂದ ಬಂದಿರುವ ಕೀರ್ತಿಗೆ ನನಗೂ ಭಾಗವಿದೆಯೆಂದಾ-ಯಿತು !' ಎಂದರು. 'ಮತ್ತೆ ನೀವು ಕುರ್ತಕೋಟಿಯ ಭಾಗವತರ ಹಿಂದೆ ಸಂಚರಿಸುತ್ತಾ ಇದ್ದಿರಲ್ಲವೆ ? ಆಗ ಅವರು ನಿಮಗೆ ಏನು ಕೊಡುತ್ತಿದ್ದರು ?' ಎಂದು ಕೇಳಿದರು. 'ಮಹಾಭಾಗವತರು ನನಗೆ ತಿಂಗಳಿಗೆ ಇಂತಿಷ್ಟೆಂದು ಸಂಬಳ ಕೊಡುತ್ತಿದ್ದರೆಂದೂ ಅದರ ಬಲದಿಂದಲೆ ಇವನು ಸಂಬಳವಿಲ್ಲದ ರಜವನ್ನು ಕೊಟ್ಟರೂ ಸೊಕ್ಕಿನಿಂದ ಅದನ್ನು ಅಸಡ್ಡೆ ಮಾಡಿರಬೇಕು' ಎಂದು ಭಾವಿಸಿಕೊಂಡಂತೆ ತೋರಿತು. 'ಅವರು ಕೊಟ್ಟದ್ದನ್ನು ಅಷ್ಟು, ಇಷ್ಟು - ಎಂದು ಅಳೆಯುವ ಹಾಗಿಲ್ಲ. ರೂಪಾಯಿಗಳಾದರೆ ಇಂತಿಷ್ಟು ಎಂದು ಹೇಳಬಹುದು. ಅತೀಂದ್ರಿಯವಾದ ಲಾಭಗಳನ್ನು ಇಷ್ಟೇ ಎಂದು ಗೊತ್ತುಪಡಿಸಿ ಹೇಳುವದಕ್ಕಾದೀತೆ ?' ಎಂದೆನು. ಆ ಉತ್ತರದಿಂದ ಅವರಿಗೆ ನನ್ನ ವಿಷಯದಲ್ಲಿ ಸ್ವಲ್ಪ ಒಳ್ಳೆಯ ಅಭಿಪ್ರಾಯವಾದಂತೆ ತೋರಿತು. ಮಾತನ್ನು ಮತ್ತೊಂದು ಕಡೆಗೆ ತಿರುಗಿಸಿ 'ಎಲ್ಲಿ, ಯಾವದಾದರೊಂದು ಅಧ್ಯಾತ್ಮಪ್ರಕರಣದ ಶ್ಲೋಕಗಳನ್ನು ಹೇಳಿ, ಕೇಳೋಣ' ಎಂದರು. ನಾನು ಲೋಅರ್ ಸೆಕೆಂಡರಿ ಪರೀಕ್ಷೆಗೆ ಕನ್ನಡ ನೀತಿಶತಕದ ಪದ್ಯಗಳನ್ನು ಕಂಠಪಾಠ ಮಾಡಿದ್ದ ಹೊರತು ಮತ್ತೆ ಯಾವದನ್ನೂ ಗಟ್ಟಿ ಮಾಡಿಕೊಂಡಿರಲಿಲ್ಲ. ಪ್ರಾಚೀನಪದ್ಧತಿಯಂತೆ ಓದಿದ್ದನ್ನೆಲ್ಲ ವಾಚೋವಿಧೇಯವಾಗಿ ಮಾಡಿಕೊಳ್ಳುವ ಪದ್ಧತಿಯು ಈಚೆಗೆ

ಹೋಗಿಬಿಟ್ಟಿದೆಯಷ್ಟೆ? ನನಗಂತೂ ಯಾವದನ್ನಾದರೂ ಬಾಯಿಗೆ ಕಲಿತುಕೊಂಡು ಇಟ್ಟುಕೊಳ್ಳಬೇಕೆಂಬ ಆಸಕ್ತಿಯೇ ಕಡಿಮೆ ; ನನಗೆ ಆ ಬಗೆಯ ಮೇಧಾಶಕ್ತಿಯೂ ಕಡಿಮೆ. ಆದ್ದರಿಂದ ಭಾಷ್ಯಶಾಂತಿಗಾಗಿ ಕಡ್ಡಾಯದಿಂದ ಕಲಿತುಕೊಂಡಿದ್ದ ಆ ದಕ್ಷಿಣಾಮೂರ್ತಿಸ್ತೋತ್ರವು ಸಮಯದಲ್ಲಿ ನನ್ನ ಮರ್ಯಾದೆಯನ್ನು ಕಾಪಾಡಿತು. ಆಗ ದಾಸಪ್ಪನವರು 'ನಿಮಗೆ ಆತ್ಮವಿದ್ಯಾವಿಲಾಸವು ಬರುತ್ತದೆಯೆ ?' ಎಂದು ಕೇಳಿದರು. ಕಾಲಟಿಯಲ್ಲಿ ನಾನು ಕೊಂಡುಕೊಂಡಿದ್ದ ಪುಸ್ತಕದಲ್ಲಿ ಆತ್ಮವಿದ್ಯಾ-ವಿಲಾಸವೂ ಶೃಂಗೇರಿಯ ಗುರುಗಳು ಮಾಡಿದ್ದ ಸದಾಶಿವೇಂದ್ರಸ್ತುತಿಯೂ ಇದ್ದವು. ಆದರೆ ನನಗೆ ಅವುಗಳಲ್ಲಿ ಒಂದೆರಡು ಶ್ಲೋಕಗಳನ್ನು ಬಿಟ್ಟರೆ ಮತ್ತೇನೂ ಬರುತ್ತಿರಲಿಲ್ಲ. 'ನಾತ್ಮನಿ ಕಿಂಚಿನ್ಮಾಯಾ ತತ್ಕಾರ್ಯಂ ವಾಸ್ತಿ ವಸ್ತುತೋ ವಿಮಲೇ। ಇತಿ ನಿಶ್ಚಯವಾನನ್ತರ್ಹೃಷ್ಯತ್ಯಾನಂದನಿರ್ಭರೋ ಯೋಗೀ ॥' ಎಂಬ ಶ್ಲೋಕವನ್ನು ಹೇಳಿ 'ವೇದಸ್ಮೃತಿಸ್ಥವಿದ್ವಲ್ಲಕ್ಷಣಲಕ್ಷ್ಯೇಷು ಸಂದಿಹಾನಾನಾಮ್ । ನಿಶ್ಚಯಕೃತೇ ವಿಹರ್ತ್ರೇ ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ'॥ 'ನೃಪತನುಸಮಾನಿ ಮೂರ್ಧನಿ ಯೇನೋಚ್ಚರಿತೇಷು ನಾಮಸೂಗ್ರಸ್ಯ । ತಸ್ಮೈ ಸಿದ್ಧವರಾಯ ಪ್ರಣತಿಂ ಕುರ್ಮಃ ಸದಾಶಿವೇಂದ್ರಾಯ' ಎಂಬ ಎರಡು ಶ್ಲೋಕಗಳನ್ನು ಸದಾಶಿವೇಂದ್ರಸ್ತುತಿಯಿಂದ ಉದಾಹರಿಸಿದೆನು. 'ಸದಾಶಿವೇಂದ್ರರು ಎಂಥ ಬ್ರಹ್ಮಜ್ಞಾನಿಗಳು! ಎಂಥ ಭಗವದ್ಭಕ್ತರು! ಎಂಥ ಸಿದ್ಧರು !' ಎಂದು ನನ್ನ ಅಭಿಪ್ರಾಯವನ್ನು ಅವರ ಮುಂದೆ ಇಟ್ಟೆನು. ದಾಸಪ್ಪನವರಿಗೆ ಆತ್ಮವಿದ್ಯಾ ವಿಲಾಸವನ್ನು ಕಂಡರೆ ಬಹಳ ಪ್ರೀತಿ ಎಂಬುದು ನನಗೆ ಆಗಲೆ ಗೊತ್ತಾದದ್ದು. 'ನನಗೆ ಬಂದಷ್ಟು ಹೇಳುತ್ತೇನೆ ಕೇಳಿ' ಎಂದು ಆದಿಯಿಂದ ಅಂತದವರೆಗೂ ಸ್ವಲ್ಪ ತಡೆಬಡೆಯಿಲ್ಲದೆ ಮಧುರವಾಗಿ ಆತ್ಮವಿದ್ಯಾವಿಲಾಸವನ್ನೆಲ್ಲ ಒಪ್ಪಿಸಿಬಿಟ್ಟರು!.

ಈಗ ಬೆಂಗಳೂರಿನಲ್ಲಿ ನನ್ನನ್ನು ಸಾಯಂಕಾಲ ಸಂಚಾರಕಾಲಕ್ಕೆ ಕಂಡಾಗ 'ನಮ್ಮ ಮನೆಯ ಕಡೆಗೆ ಒಂದು ದಿನ ಬನ್ನಿ' ಎಂದು ಒಂದೆರಡು ಸಲ ಹೇಳಿದರೂ, ಕೃ.ಸ್ವಾ. ಅಯ್ಯರವರಿಗೂ 'ಸುಬ್ಬರಾಯರನ್ನು ನಮ್ಮ ಮನೆಗೆ ಯಾವಾಗಲಾದರೂ ಬರುವಂತೆ ಹೇಳಿ' ಎಂದು ಹೇಳಿದ್ದರಂತೆ. ಅವರಿಗೆ ವೇದಾಂತದಲ್ಲಿ ಸ್ವಲ್ಪ ಅಭಿರುಚಿಯಿದೆ ಎಂದು ತಿಳಿಸಿದ್ದರು. ಅವರು ಸಿಡುಕಿನ ಸ್ವಭಾವದವರೆಂದೂ ಮನೆ ಬಾಗಿಲಲ್ಲಿ ನಿಂತಿರುವ ಸಿಪಾಯಿಯು ಯಾರನ್ನೂ ಒಳಕ್ಕೆ ಬಿಡುವ ಸಂಭವವಿಲ್ಲವೆಂದೂ ಕೇಳಿದ್ದೆನಾದ್ದರಿಂದ ನಾನು ಕೂಡಲೆ ಅವರಲ್ಲಿಗೆ ಹೋಗಲಿಲ್ಲ. ಮತ್ತೆ ಮತ್ತೆ ಅವರು ಒಂದು ದಿನ ಬನ್ನಿ ಎಂದರು. ಹಾಗೆಯೇ ಕೇಳುತ್ತಿದ್ದದ್ದನ್ನು ಅಸಡ್ಡೆಮಾಡುವದು ಮನಸ್ಸಿಗೆ ಬರಲಿಲ್ಲ. ಒಂದು ದಿನ 'ನಾಳೆ ಭಾನುವಾರ ಬನ್ನಿ' ಎಂದು ಗೊತ್ತಾಗಿ ಹೇಳಿದ್ದರಿಂದ, ಆ ದಿನ

ಹೋದಾಗ ಜವಾನನು ತಡೆದೇ ಬಿಟ್ಟನು. ಮಾರನೆಯ ದಿನವೋ ಏನೋ 'ಏಕೆ ಬರಲಿಲ್ಲ' ? ಎಂದು ಕೇಳಿದರು. ನಡೆದ ವಿಷಯವನ್ನು ತಿಳಿದುಕೊಂಡು 'ನಾಳೆ ಗುರುವಾರ ಬನ್ನಿರಿ ; ಜವಾನನಿಗೆ ಹೇಳಿಟ್ಟಿರುತ್ತೇನೆ' ಎಂದರು. ಅದರಂತೆ ಹೋಗಲು ಜವಾನನು 'ತಾವು ಹೇಳಿದ ಆಚಾರ್ರು ಬಂದಿದಾರೆ' ಎಂದು ಒಳಗೆ ಹೋಗಿ ಹೇಳಿದ್ದು ನನಗೆ ಕೇಳಿಸಿತು. 'ಬಿಡು !' ಎನ್ನಿಸಿಕೊಂಡೇ ಬಂದು ನನ್ನನ್ನು ಒಳಕ್ಕೆ ಬಿಟ್ಟನು. ಅವರು ಸೂತ್ರಭಾಷ್ಯ , ಐತರೇಯಭಾಷ್ಯ - ಮುಂತಾದವುಗಳಲ್ಲಿ ಅಲ್ಲಿ ಇಲ್ಲಿ ತೆಗೆದು ಇದಕ್ಕೆ ಅರ್ಥವನ್ನು ಹೇಳಿ ಎನ್ನುತ್ತಿದ್ದರು. ನಾನು ಹೇಳುತ್ತಲೂ 'ಚೆನ್ನಾಗಿದೆ' ಎಂದು ಹೇಳುತ್ತಿದ್ದರು. ಒಂದು ದಿನ 'ನೀವು ಯಾವ ಯಾವ ಯೋಗಿಗಳನ್ನು ನೋಡಿದ್ದೀರಿ ?' ಎಂದು ಕೇಳಿದರು. 'ನನಗೆ ಯಾರ ಪರಿಚಯವೂ ಇಲ್ಲ' ಎಂದೆನು. ಬಹುಶಃ ಅವರು ಮಹಾಭಾಗವತರ ವಿಷಯವನ್ನು ನಾನು ಹೇಳುವೆನೆಂದು ಬಗೆದಿರಬೇಕು. 'ನಿಮಗೇನಾದರೂ ಯೋಗಬರುತ್ತದೆಯೋ ?' ಎಂದು ಕೇಳಿದರು, ನಾನು 'ಇಲ್ಲ' ಎಂದಿಷ್ಟೇ ಉತ್ತರವಿತ್ತೆನು. ಕೊನೆಗೆ ಅವರು ತಮ್ಮ ಯೋಗಾಭ್ಯಾಸದ ಅನುಭವವನ್ನು ಒಂದಿಷ್ಟು ಹೇಳಿಕೊಂಡರು ; 'ಆಗ ನನಗೆ ನಾನು ಡಿ.ಐ.ಜಿ ಆಗಿದ್ದೇನೆ ಎಂಬ ಭಾವವು ಕೂಡ ಹೋಗಿಬಿಟ್ಟಿರುತ್ತದೆ !' ಎಂದರು. ಅವರಿಗೆ ತಮ್ಮ ಅಧಿಕಾರದಲ್ಲಿ ಎಂಥ ಅಭಿಮಾನವಿದೆ ಎಂಬುದು ನನ್ನ ಮನಸ್ಸಿಗೆ ಹೊಳೆಯಿತು. ದೈವಕ್ಕೆ ನಾನು ಪ್ರತಿದಿನವೂ ರುಮಾಲು ಹಾಕಿಕೊಂಡು ಕಚೇರಿಗೆ ಹೋಗುವ ಪ್ರಕಾರದಿಂದಲೇ ಹೋಗಿ ಅವರಿಗೆ ಕೈಮುಗಿದೇ ಕುಳಿತುಕೊಳ್ಳುತ್ತಿದ್ದೆ. ಅವರು 'ರುಮಾಲು ಕೆಳಕ್ಕೆ ಇಡಿ' ಎಂದರೂ ಇಡುತ್ತಿರಲಿಲ್ಲ.

ಹೀಗೆ ಕೆಲವು ದಿನಗಳಾದ ಮೇಲೆ 'ಯಾವದಾದರೂ ಒಂದು ಪುಸ್ತಕವನ್ನು ಗೊತ್ತಾಗಿ ನೋಡೋಣ !' ಎಂದರು, 'ಆಗಲಿ' ಎಂದೆ. 'ಮಾಂಡೂಕ್ಯೋಪನಿಷತ್ತು, ಅದರ ಕಾರಿಕೆಗಳನ್ನು ಓದೋಣವೆ ? ಅದರಲ್ಲಿ ನನಗೆ ಬಹಳ ಗೌರವವಿದೆ. ಶೇಷಾದ್ರಿಅಯ್ಯರವರ ಮನೆಯಲ್ಲಿ ನಾನು ಇದ್ದಾಗ್ಯೆ ಅವರು ಶ್ಯಾಮಶಾಸ್ತ್ರಿಗಳಿಂದ ಅದನ್ನು ಓದಿಸುತ್ತಿದ್ದರು; ಅದಕ್ಕೆ 'ಆತ್ಮಸತ್ಯಾನುಬೋಧ' ಎಂಬ ಹೆಸರನ್ನಿಟ್ಟುಕೊಂಡಿದ್ದರು' ಎಂದರು. ನನಗೆ ಪರಮಾನಂದವಾಯಿತು. ನನಗೆ ಕೊನೆಯ ಸಲಕ್ಕೆ ಕೈಗೆ ಬಂದಿದ್ದ ಪುಸ್ತಕವೇ ಮಾಂಡೂಕ್ಯ. ಅದನ್ನು ಓದಿದಂತೆಲ್ಲ ಮನಸ್ಸಿನಲ್ಲಿ ಏನೋ ಹೊಸ ಪರಿಣಾಮವಾಗುತ್ತಿತ್ತು. ಕೃ.ಸ್ವಾ.ಅಯ್ಯರ ಅವಸ್ಥಾತ್ರಯ ವಿಚಾರದ **(Fundamentals of Vedanta)** ಉಪನ್ಯಾಸ ಪ್ರಬಂಧವನ್ನು ಓದಿ ಸಂಸ್ಕೃತಕ್ಕೆ ಆಗತಾನೆ ಪರಿವರ್ತಿಸುತ್ತಿದ್ದೆನು. ಈ ಪುಸ್ತಕದ ವಿಚಾರದಿಂದ ನನ್ನ ಚಿಂತನೆಯು ಮತ್ತಷ್ಟು ಗಟ್ಟಿಯಾಗುವದು - ಎಂದುಕೊಂಡು ಪರಮಸಂತೋಷದಿಂದ ಒಪ್ಪಿಕೊಂಡೆನು. ದಾಸಪ್ಪನವರು ನಡುನಡುವೆ ಶಂಕರಭಾಷ್ಯಗಳಲ್ಲಿ ತಾವು ಕಂಠಪಾಠ

ಮಾಡಿಕೊಂಡಿದ್ದ ಭಾಗಗಳನ್ನು ಆನಂದದಿಂದ ಕಣ್ಣುಮುಚ್ಚಿಕೊಂಡು ಒಪ್ಪಿಸುತ್ತಿದ್ದರು. ಅವರಿಗೆ ವೇದಾಂತದಲ್ಲಿ ಇಷ್ಟೊಂದು ಪ್ರೀತಿಯಿದೆ ಎಂಬುದು ಈಗ ನನಗೆ ಮನವರಿಕೆಯಾಯಿತು.

ದಾಸಪ್ಪನವರು ವೇದಾಂತವಿಚಾರವನ್ನು ತಾವೂ ಮಾಡುತ್ತಿದ್ದಲ್ಲದೆ ದೊಡ್ಡವರಿಂದ ತತ್ತ್ವವನ್ನು ತಿಳಿದುಕೊಳ್ಳುವ ಕುತೂಹಲವನ್ನೂ ಬೆಳೆಯಿಸಿ ಕೊಂಡಿದ್ದರೆಂಬುದು ನನಗೆ ಅವರ ಮಾತಿನಿಂದ ಗೊತ್ತಾಯಿತು. ಒಂದು ದಿನ ಪ್ರಸ್ತಾವಕ್ರಮದಿಂದ ಶೃಂಗೇರಿಯ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹ-ಭಾರತೀಸ್ವಾಮಿಗಳವರು ತಮಗೆ ಭಗವದ್ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯವನ್ನು ಕಂಠಪಾಠ ಮಾಡಿಕೊಳ್ಳಬೇಕೆಂದು ಹೇಳಿದ್ದರು. ಮತ್ತೊಂದು ಸಲ ಹದಿನೈದನೆಯ ಅಧ್ಯಾಯವನ್ನು ಕಂಠಪಾಠಮಾಡಿಕೊಳ್ಳಬೇಕೆಂದು ಹೇಳಿದ್ದರು ; ಅವುಗಳಲ್ಲಿರುವ ಸ್ವಾರಸ್ಯವೇನು ? - ಎಂದು ಒಂದು ದಿನ ಕೇಳಿದರು. ಇನ್ನೊಂದು ದಿನ ಆ ಗುರುಗಳವರು ತಮ್ಮ ಸ್ವಂತ ಉದಾಹರಣೆಯಿಂದ ದೇಹಾಭಿಮಾನದ ವಿಷಯಕ್ಕೆ ಎಚ್ಚರಿಕೆಯಿಂದ ಇರಬೇಕೆಂಬುದನ್ನು ತಮಗೆ ತಿಳಿಸಿಕೊಟ್ಟಿದ್ದರೆಂದು ಒಂದು ಆಖ್ಯಾಯಿಕೆಯನ್ನು ಹೇಳಿದ್ದರು. ಗುರುಗಳವರು ಒಮ್ಮೆ ಉತ್ತರಕ್ಕೆ ದಿಗ್ವಿಜಯ ಯಾತ್ರೆ ಮಾಡಬೇಕೆಂದು ನಿಶ್ಚಯಿಸಲಾಗಿತ್ತಂತೆ. ಬಳ್ಳಾರಿಯವರೆಗೆ ಪ್ರಯಾಣವೂ ಆಯಿತಂತೆ. ಪಂಢರಾಪುರದಲ್ಲಿ ನೀರಿಗೆ ಅನಾನುಕೂಲವೆಂದು ಯಾರೋ ಹೇಳಿದ್ದರಿಂದ ಅಲ್ಲೊಂದು ಬಾವಿಯನ್ನು ತೆಗೆಯಿಸಬೇಕೆಂದು ಅಪ್ಪಣೆ ಮಾಡಿಸಿದ್ದರಂತೆ. ಆಗ್ಗೆ ಅವರ ದೇಹಸ್ಥಿತಿಯು ಅಷ್ಟು ಸಮರ್ಪಕವಾಗಿಲ್ಲದ್ದರಿಂದ ಡಾಕ್ಟರು ಅಕ್ಕಿಯ ಅನ್ನವನ್ನು ಬಿಡಬೇಕು, ಬಿಸಿನೀರನ್ನೇ ಕುಡಿಯುವದಕ್ಕೆ ಉಪಯೋಗಿಸಬೇಕು ಎಂದು ಮುಂತಾಗಿ ಕೆಲವು ಪಥ್ಯಾಚಾರಗಳನ್ನು ಹೇಳಿದ್ದರಂತೆ. ಬಳ್ಳಾರಿಯಲ್ಲಿದ್ದಾಗ ಆಹ್ನಿಕಕ್ಕೂ ಬಿಸಿನೀರನ್ನೇ ಇಟ್ಟಿರುವದನ್ನು ಮನದಂದು 'ಎಲ ಎಲಾ, ಇದೇನು ಬಿಸಿನೀರಿನಲ್ಲಿ ಆಚಮನವನ್ನು ಮಾಡಬಾರದೆಂದು ಶಾಸ್ತ್ರ ಹೀಗಿರುವಲ್ಲಿ ನಾನು ದೇಹಾಭಿಮಾನದಿಂದ ಶಾಸ್ತ್ರವನ್ನು ಉಲ್ಲಂಘನೆಮಾಡುತ್ತಿರುವೆನಲ್ಲ !. ಹೀಗಿದ್ದರೂ ಜನರಿಗೆ ದೇಹಾಭಿಮಾನವನ್ನು ಬಿಡಬೇಕು ಎಂದು ಮುಂತಾಗಿ ಉಪದೇಶಿಸುವದಕ್ಕೆ ಹೊರಟಿರುವೆನಲ್ಲ !' ಎಂಬ ಆಲೋಚನೆ ಮನಸ್ಸಿಗೆ ಹೊಳೆಯಿತಂತೆ. ಕೂಡಲೆ ಸರ್ವಾಧಿಕಾರಿಗಳನ್ನು ಕರೆದು 'ಮುಂದಿನ ಪ್ರಯಾಣವನ್ನು ನಿಲ್ಲಿಸಿರಿ, ಶೃಂಗೇರಿಗೆ ಹೋಗೋಣ' ಎಂದು ಅಪ್ಪಣೆ ಮಾಡಿದರಂತೆ. ಸರ್ವಾಧಿಕಾರಿಗಳು 'ಕಾರ್ಯಕ್ರಮವನ್ನು ಬ್ರಿಟಿಷ್ ಸರಕಾರ ದವರಿಗೆ ಆಗಲೇ ತಿಳಿಸಿದ್ದಾಗಿದೆ ; ಆದ್ದರಿಂದ ಈಗ ಪ್ರಯಾಣವಿಚ್ಛೇದ ಮಾಡುವದು ಸರಿಯಾಗಿ ತೋರುವದಿಲ್ಲ' ಎಂದು ಎಷ್ಟು ಬಿನ್ನವಿಸಿಕೊಂಡರೂ ಕೇಳದೆ ಹಿಂದಕ್ಕೆ ಹೊರಟೇ ಬಿಟ್ಟರಂತೆ. ಶೃಂಗೇರಿಗೆ

ಬಂದಕೂಡಲೆ ತಮ್ಮ ಗುರುಗಳ ಸಮಾಧಿ ಬಳಿಯಲ್ಲಿ ನಿಂತು 'ತಮ್ಮ ಶಿಷ್ಯನಾದ ನನಗೂ ಹೀಗೆ ಅಭಿಮಾನವು ಬರಬಹುದೆ ? ವೈಯುಕ್ತಿಕವಾಗಿ ನನಗೆ ಯತಿಧರ್ಮವು ಸಡಿಲವಾಯಿತೆಂಬ ವ್ಯಥೆಯೇನೂ ನನಗಿಲ್ಲ, ಆದರೆ ಸದಾಶಿವಬ್ರಹ್ಮೇಂದ್ರರಂತೆ ನಾನು ಸರ್ವಥಾ ದೇಹಾಭಿಮಾನವನ್ನು ತೊರೆದು ಇರುವ ಸ್ಥಿತಿಗೆ ಏರುವೆ ಎಂದು ತಾವು ಹೇಳಿದ ಅಭಯವಚನವು ಹುಸಿಯಾಯಿತಲ್ಲ ಎಂಬುದೊಂದೇ ನನ್ನ ವ್ಯಥೆಗೆ ಕಾರಣ.' ಎಂಬರ್ಥವು ಬರುವಂತೆ ಸಂಸ್ಕೃತದಲ್ಲಿ ಸ್ತೋತ್ರವನ್ನು ಮಾಡಿದ್ದರಂತೆ. ಆ ಶ್ಲೋಕವನ್ನು ದಾಸಪ್ಪನವರು ನನಗೆ ಹೇಳಿದರೋ ಇಲ್ಲವೋ ಈಗ ನೆನಪಿಲ್ಲ. ಆದರೆ ದೃಷ್ಟಾಂತದಿಂದ ದೇಹಾಭಿಮಾನವು ಹೇಗೆ ನಮಗೆ ಗೊತ್ತಿಲ್ಲದೆಯೇ ನುಸುಳಿ ಕೊಂಡು ಬರುತ್ತದೆ ಎಂಬುದನ್ನು ನೆನಪಿಡುವದು ಉತ್ತಮ ಎಂಬರ್ಥವನ್ನು ಸ್ವಾಮಿಗಳಿಂದ ತಿಳಿದುಕೊಂಡಂತೆ ಆಯಿತು ಎಂದು ದಾಸಪ್ಪನವರು ತಿಳಿಸಿದರು.

ಅವರ ಸದ್ಹೃದಯದ ವಿಚಾರಕ್ಕೂ ನನಗೆ ಕೆಲವು ಉದಾಹರಣೆಗಳು ಈಗ ಸಿಕ್ಕಿದವು, ನನಗೆ ಆದಷ್ಟು ಸಲುಗೆಯನ್ನು ಕೊಟ್ಟು ಮಾತನಾಡಿಸುವದಕ್ಕೆ ಪ್ರಯತ್ನಿಸುತ್ತಿದ್ದರು. ನಾನು ಮನೆಗೆ ಬಂದಾಗ ತಾವು ಊಟಮಾಡುತ್ತಿದ್ದು ಅದು ಮುಗಿಯುವವರೆಗೆ ನಾನು ಕಾಯಬೇಕಾಗಿ ಬಂಧ ದಿನಗಳಲ್ಲಿ ಹೊರಕ್ಕೆ ಬಂದಕೂಡಲೆ ಮಾತನಾಡುವದಕ್ಕೆ ಗಂಟಲು ಸರಿಮಾಡಿಕೊಳ್ಳುವದೇ ಮುಂತಾದ ರೀತಿಯಿಂದ ಸಂಜ್ಞೆಯನ್ನು ಮಾಡಿ, ಅವರ ಮಗಳಿಂದ ಯಾವುದಾದರೊಂದು ಹಣ್ಣು ಅಥವಾ ಚಕ್ಕುಲಿ ಮುಂತಾದ ಮತ್ತೆ ಯಾವದಾದರೊಂದು ತಿಂಡಿ ಇವುಗಳನ್ನು ತರಿಸಿ ತಿನ್ನುವದಕ್ಕೆ ಕೊಡುತ್ತಿದ್ದರು. ನಾನು ಅದನ್ನು ಸ್ವೀಕರಿಸಿದ ಹೊರತು ಬಿಡುತ್ತಿರಲಿಲ್ಲ. ದಸರ ರಜಕಾಲದಲ್ಲಿ ಹೈಸ್ಕೂಲು ಐದನೇಯ ಫಾರಂನಲ್ಲಿ ಓದುತ್ತಿದ್ದ ತಮ್ಮ ಮಗಳಿಗೆ ಗಣಿತಪಾಠವನ್ನು ಹೇಳಿಕೊಡುವಂತೆ ಅಪ್ಪಣೆ ಮಾಡಿದರು ; ವಾರಕ್ಕೆ ಒಂದೆರಡು ದಿನಗಳು ಮಾತ್ರ ನಾನು ಹೇಳಿಕೊಟ್ಟ ಪಾಠ ಇಂತಿಷ್ಟೆಂದು ದಕ್ಷಿಣೆಯನ್ನು ಗೊತ್ತುಮಾಡಿ ಕೊಡುವದಕ್ಕೆ ಬಂದರು. ನಾನು ಅದನ್ನು ತೆಗೆದುಕೊಳ್ಳುವದಕ್ಕೆ ಒಪ್ಪದೇ ಇರಲು ಆಗ ತಾನೇ ಆಚರಣೆಗೆ ಬಂದಿದ್ದ ಪ್ರೈವೆಟ್ ಟ್ಯೂಷನ್ ವಿಷಯದ ಇಲಾಖೆಯ ಹುಕುಮ್ಮಿಗೆ ಅಂಜಿರಬಹುದೆಂದು ಊಹಿಸಿ 'ನಾನು ಸರ್ಟಿಫೈ ಮಾಡಿಸಿಕೊಡುತ್ತೇನೆ' ಎಂದು ಭರವಸೆಯಿತ್ತರು ; ಆದರೂ ನಾನು ನನಗೆ ಮನೆಯಲ್ಲಿ ಗ್ರಂಥಕಾಲಕ್ಷೇಪಕ್ಕೆ ವಿರಾಮವಿಲ್ಲದ್ದರಿಂದ, ಯಾವ ಪ್ರೈವೆಟ್ ಟ್ಯೂಷನ್ ಇಟ್ಟುಕೊಳ್ಳುವ ಸಂಭವವಿಲ್ಲವೆಂತಲೂ ಕೃ. ಅಯ್ಯರವರ ಮನೆಯನ್ನು ಇಷ್ಟರಲ್ಲಿಯೇ ಬಿಡುತ್ತೇನೆಂದೂ ಖಂಡಿತವಾಗಿ ಹೇಳಿದ್ದರಿಂದ ಸುಮ್ಮನಾದರು. ಅಂತೂ ಒಟ್ಟಿನಲ್ಲಿ ದಾಸಪ್ಪನವರೆಂದರೆ ಕಳೂರುಕಟ್ಟೆಗೆ ವರ್ಗ

ಮಾಡಿದ ಕಠಿನಹೃದಯದಾಸಪ್ಪನವರೇ ಅಲ್ಲವೆಂದೂ ಅವರಿಗೆ ಶಾಸ್ತ್ರಾಭಿರುಚಿ, ಸಾಮಾನ್ಯರಲ್ಲಿ ಕರುಣಾದಿಭಾವನೆಗಳು, ಇವೇ ಮುಂತಾದವೂ ಇವೆಯೆಂದೂ ಈಗ ನನಗೆ ನಿಶ್ಚಯವಾಯಿತು.

## ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲು :

ದಾಸಪ್ಪನವರ ಪರಿಚಯವೂ ಪ್ರೀತಿಯೂ ನನಗೆ ಮತ್ತೊಂದು ರೂಪದಿಂದ ಫಲಕಾರಿಯಾಯಿತು. ವಿದ್ಯಾಭ್ಯಾಸದ ಇಲಾಖೆಯವರು ಕನ್ನಡವನ್ನು ಮಾಧ್ಯಮ ವಾಗಿ ಉಪಯೋಗಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂತಸ್ತಿನ ತಿಳಿವಳಿಕೆಯನ್ನು ಮಾಡಿಕೊಡುವದಕ್ಕೆ ಸಂಕಲ್ಪಿಸಿದರೋ ಏನೋ, ನಾನು ಬೆಂಗಳೂರಿಗೆ ಬಂದು ಇನ್ನೂ ಒಂದು ವರ್ಷವಾಗುವದರ ಒಳಗೆ ಸಂಸ್ಥಾನಗಳಲ್ಲಿ ಹಲವು ಕಡೆಗಳಲ್ಲಿ ಅಪ್ಪರ್ ಸೆಕೆಂಡರಿ ಸ್ಕೂಲುಗಳನ್ನು ಪ್ರಾರಂಭಿಸುವ ಯೋಜನೆಯನ್ನು ರೂಪಿಸಿದರು. ಬೆಂಗಳೂರಿನಲ್ಲಿ ಪ್ರಾರಂಭಿಸುವ ಸ್ಕೂಲಿಗೆ 50 ರೂ. ತಲುಬಿನ (ಸಂಬಳದ) ಒಬ್ಬ ಇಂಗ್ಲೀಷು ಉಪಾಧ್ಯಾಯರು ಬೇಕಾಗಬಹುದೆಂಬ ಸುದ್ದಿ ನನಗೆ ಗೊತ್ತಾಗುತ್ತಲೂ, ಒಮ್ಮೆ ದಾಸಪ್ಪನವರನ್ನು ಶಂಕರಮಠದ ಬಳಿ ಕಂಡು ವಿಷಯವನ್ನು ಪ್ರಸ್ತಾಪಿಸಿದೆನು ; ಮತ್ತೊಂದು ಸಲ ಅವರನ್ನು ಮನೆಯಲ್ಲಿಯೇ ಕಂಡು ಹೇಳಿಕೊಂಡೆನು. ಅವರು ವಿಚಾರಿಸಿ ನೋಡಿ ನನಗೆ ಆ ಕೆಲಸವು ಸಿಕ್ಕುವಂತೆ ಮಾಡಿಸಿಕೊಟ್ಟರು. ಇಷ್ಟು ಹೊತ್ತಿಗೆ ನಾನು ಶಂಕರಮಠದ ಬೀದಿಯ ಸಣ್ಣ ಮನೆಗೆ ಬಂದೆ. ಅದು ಶಂಕರಮಠಕ್ಕೆ ನಾರ್ಮಲ್ ಸ್ಕೂಲಿಗೆ ಮತ್ತು ನಮ್ಮ ನರಸಪ್ಪನು ಓದುತ್ತಿದ್ದ ಎ. ವಿ. ಸ್ಕೂಲಿಗೆ ಎಲ್ಲಕ್ಕೂ ಹತ್ತಿರವೇ ಇತ್ತು.

ನಾರ್ಮಲ್ ಸ್ಕೂಲಿನಲ್ಲಿ ಈಗ ಅನೇಕ ವಿದ್ವಾಂಸರ ಪರಿಚಯವಾಯಿತು. ವಿಠ್ಠಲಶಾಸ್ತ್ರಿಗಳ ಸ್ನೇಹಿತರು ವೆಂಕಟೇಶಶಾಸ್ತ್ರಿಗಳು (ಸಂ. ಪಂಡಿತರು) ಕೆ. ನಂಜುಂಡ ಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು, ಮತ್ತು ಗಂಗಾಧರ ಶಾಸ್ತ್ರಿಗಳು, (ಹಳ್ಳಿ ಉಪಾಧ್ಯಾಯರುಗಳ ಟ್ರೇನಿಂಗ್ ಸ್ಕೂಲು ಮಾಸ್ಟರುಗಳು), ನಾರಾಯಣ-ರಾಯರು (ಸೈನ್ಸ್ ಟೀಚರ್) - ಇವರುಗಳು ಒಬ್ಬೊಬ್ಬರು ಒಂದೊಂದು ವಿಧದಲ್ಲಿ ನನಗೆ ಸಹಾಯಕರಾದರು. ಅದನ್ನು ಸಂದರ್ಭಾನು ಗುಣವಾಗಿ ಮುಂದೆ ತಿಳಿಸುತ್ತಾ ಹೋಗುವೆನು.

## ಮೂಲಾವಿದ್ಯಾನಿರಾಸ ಲೇಖನ ಪ್ರಾರಂಭ :

ಕೃಷ್ಣಸ್ವಾಮಿ ಅಯ್ಯರವರು ಪ್ರತಿದಿನವೂ ನನ್ನನ್ನು ಸಾಯಂಕಾಲ ಸಂಚಾರಕ್ಕೆ ಕರೆದುಕೊಂಡು ಹೋಗುವದು, ವೇದಾಂತವಿಚಾರವನ್ನು ಬಲಪಡಿಸುವದು,

ವೇದಾಂತದಲ್ಲಿ ಆದರವಿರುವವರ ಸಂಪರ್ಕವನ್ನು ಕಲ್ಪಿಸಿಕೊಡುವದು - ಹೀಗೆ ಅಂತಃಕರಣ ಸಂಸ್ಕಾರಕ್ಕೆ ಹಲವು ಬಗೆಗಳಿಂದ ಕಾರಣರಾದರು. ತಮ್ಮ ಇಂಗ್ಲೀಷು ಉಪನ್ಯಾಸ ಪ್ರಬಂಧವನ್ನು ಅನುವಾದ ಮಾಡಿದ ನನ್ನ ಸಂಸ್ಕೃತ ಭಾಷೆಯು ಬಹಳ ಲಲಿತವಾಗಿಯೂ ಶಕ್ತಿಯುತವಾಗಿಯೂ ಕಂಡು ಬಂದದ್ದರಿಂದ ಮೂಲಾ-ವಿದ್ಯಾಕುಠಾರ ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಬರೆಯಬೇಕೆಂದು ಒಂದು ದಿನ ನನಗೆ ಹೇಳಿದರು. ನನಗೆ ಮೂಲಾವಿದ್ಯೆ ಎಂದರೇನೆಂಬುದೇ ಆವರೆಗೆ ತಿಳಿದಿರಲಿಲ್ಲ. ಅವರು ಅದರ ವಿಷಯವನ್ನು ಸ್ವಲ್ಪಮಟ್ಟಿಗೆ ನನಗೆ ತಿಳಿಸಿಕೊಟ್ಟು ಅದು ಅಧ್ಯಾಸಕ್ಕೆ ಕಾರಣವಾಗಿರವದೆಂದೂ ಸುಷುಪ್ತಿಪ್ರಲಯಗಳಲ್ಲಿ ಬೀಜರೂಪದಿಂದ ಇದ್ದುಕೊಂಡಿರುವದೆಂದೂ ಜ್ಞಾನಿಗಳಲ್ಲಿಯೂ ಅದರ ಒಂದಂಶವು ಇದ್ದುಕೊಂಡಿರುವದೆಂದೂ ಈಗಿನ ವೇದಾಂತಿಗಳು ಹೇಳುತ್ತಿದ್ದಾರೆ. ಈ ಪ್ರಕಾರವು ಶಾಂಕರಸಿದ್ಧಾಂತಕ್ಕೆ ಅತ್ಯಂತ ವಿರುದ್ಧವಾಗಿರುವದರಿಂದಲೂ ಯುಕ್ತಿ ವಿರುದ್ಧವಾಗಿರುವದರಿಂದಲೂ ಇದನ್ನು ಕಡಿದುಹಾಕುವದಕ್ಕಾಗಿ ಮೂಲಾವಿದ್ಯಾ-ಕುಠಾರ ಎಂಬ ಒಂದು ಗ್ರಂಥವನ್ನು ಬರೆಯುವದು ಅತ್ಯವಶ್ಯ ಎಂದು ಹೇಳಿದರು. ನಾನು 'ಹಾಗೆ ಯಾರು ಹೇಳುತ್ತಾರೆ ?' ಎಂದು ಕೇಳಲು ಅಯ್ಯರು 'ವೇದಾಂತ ವ್ಯಾಖ್ಯಾನಗಳಲ್ಲಿ ಹಾಗೆಂದು ಬರೆದಿದೆ; ಈಗಿನ ವೇದಾಂತಿಗಳು, ಶಂಕರಮಠದಲ್ಲಿರುವ ವಿದ್ವಾಂಸರುಗಳೆಲ್ಲರೂ ಹಾಗೆಯೇ ಹೇಳುತ್ತಾರೆ' ಎಂದರು. ನನಗೆ ಅತ್ಯಾಶ್ಚರ್ಯವಾಯಿತು. ಶ್ರೀ ವಿರೂಪಾಕ್ಷಶಾಸ್ತ್ರಿಗಳವರು ನಮಗೆ ಭಾಷ್ಯಪಾಠವನ್ನು ಹೇಳುವಾಗ ಮೂಲಕ್ಕೆ ಅನುಗುಣವಾಗಿಯೇ ಹೇಳುತ್ತಿದ್ದದ್ದರಿಂದ ಪಾಠದಲ್ಲಿ ಅದರ ಸೊಲ್ಲೇ ಬಂದಿರಲಿಲ್ಲ. ನಾನು ವ್ಯಾಖ್ಯಾನವನ್ನು ಅನವಶ್ಯವಾಗಿ ನೋಡುವವನಲ್ಲವಾದ್ದರಿಂದ, ರತ್ನಪ್ರಭಾವ್ಯಾಖ್ಯಾನದಲ್ಲಿ ಅದು ಇದೆ ಎಂಬುದರ ಅರಿವೂ ನನಗೆ ಆಗಿರಲಿಲ್ಲ. ಆದ್ದರಿಂದ ನಮ್ಮ ಶಾಸ್ತ್ರಿಗಳು ಹೀಗೆ ಹೇಳುವದಿಲ್ಲ ಎಂದು ಸ್ಪಷ್ಟವಾಗಿ ಅವರಿಗೆ ಹೇಳಿಬಿಟ್ಟೆನು. ಅವರು ಮೊದಲು ನನಗೆ ಇದರ ನಿಶ್ಚಯವು ಆಗುವದು ಅವಶ್ಯಕವೆಂಬುದನ್ನು ಮನದಂದುಕೊಂಡು, ಒಂದು ದಿನ ಶಾಸ್ತ್ರಿಗಳ ಮನೆಗೆ ಕರೆದುಕೊಂಡು ಹೋಗಿ ವಿಷಯವನ್ನು ಪ್ರಸ್ತಾಪಿಸಿದರು. ಅದ್ವೈತಕ್ಕೆ ಪ್ರಮಾಣವೇನು ? ಎಂದು ಪ್ರಶ್ನಿಸಿದ್ದಕ್ಕೆ ಶಾಸ್ತ್ರಿಗಳು 'ಜೀವನ್ಮುಕ್ತರ ಅನುಭವವೇ ಪ್ರಮಾಣ' ಎಂದು ಉತ್ತರವನ್ನು ಕೊಟ್ಟರು. 'ಜೀವನ್ಮುಕ್ತರಿಗೆ ದ್ವೈತವು ಕಾಣಿಸುವದಿಲ್ಲವೆ ?' ಎಂದು ಕೇಳಿದ್ದಕ್ಕೆ ಸುಟ್ಟಬಟ್ಟೆಯಂತೆ ಬಾಧಿತಾನುವೃತ್ತಿಯಿಂದ ಅವರಿಗೆ ದ್ವೈತವು ಕಂಡರೂ ಅದು ಪ್ರಾರಬ್ಧಕರ್ಮವಿರುವವರೆಗೆ ಮಾತ್ರ ಇರುತ್ತದೆಯಾದ್ದರಿಂದ ಬಾಧಕವಿಲ್ಲ-ಎಂದು ಹೇಳಿದರು. ಪ್ರಾರಬ್ಧಕರ್ಮವಾದರೂ ಏತಕ್ಕೆ ಉಳಿದುಕೊಂಡಿದೆ ? - ಎಂಬುದಕ್ಕೆ ಅವಿದ್ಯಾಲೇಶವೇ ಅದಕ್ಕೆ ಹೇತುವೆಂದು

ನುಡಿದರು. ಸರ್ವಥಾ ಅದ್ವೈತ ಸ್ಥಿತಿಯು ಯಾವದು ? - ಎನ್ನಲು ವಿದೇಹ ಮುಕ್ತಿಯೇ ಎಂದರು. ಹೀಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ತಮ್ಮ ಹೇಳಿಕೆಗೆಲ್ಲ ಶಾಸ್ತ್ರಗಳಿಂದ ಸಾಕ್ಷ್ಯವನ್ನು ಹೇಳಿಸಿದ ತರುವಾಯ ನಾವಿಬ್ಬರೂ ಮನೆಗೆ ಬಂದೆವು. ನನಗೆ ಅತ್ಯಂತ ಆಶ್ಚರ್ಯವಾಯಿತು. ನಾನು ಇಷ್ಟುಕಾಲ ಉಪನಿಷದಾದಿ ಭಾಷ್ಯಗಳನ್ನು ಓದಿದ್ದರೂ ಈ ಅವಿದ್ಯೆಯ ಸೊಲ್ಲು ಎಲ್ಲಿಯೂ ಇಲ್ಲದಿದ್ದರೂ ಇವರು ಹೀಗೇಕೆ ಹೇಳುತ್ತಿದ್ದಾರೆ ? ಇದಕ್ಕೆ ಆಧಾರವು ಎಲ್ಲಿದೆ ? - ಎಂಬುದನ್ನು ಶೋಧಿಸಬೇಕೆಂಬ ಕುತೂಹಲವು ನನಗೆ ಉಂಟಾಯಿತು. ಅಯ್ಯರವರು ಅಧ್ಯಾಸಭಾಷ್ಯದ ರತ್ನಪ್ರಭಾವ್ಯಾಖ್ಯಾನವನ್ನು ನನಗೆ ತೋರಿಸಿದರು. ಆ ಮೇಲೆ ನನಗೆ ಭಾಷ್ಯವ್ಯಾಖ್ಯಾನಗಳಲ್ಲಿ ನನಗೆ ಇದು ಎಲ್ಲೆಲ್ಲಿಯೂ ಕಾಣುವದಕ್ಕೆ ಮೊದಲಾಯಿತು. ನನ್ನಲ್ಲಿ ಮೊದಲೇ ಇದ್ದ ಸವ್ಯಾಖ್ಯಬೃಹದಾರಣ್ಯಕಭಾಷ್ಯವನ್ನು ಈಗ ಮನಮುಟ್ಟಿ ಓದುವದಕ್ಕೆ ಪ್ರಾರಂಭ ಮಾಡಿದೆನು. ಅದರಲ್ಲಿ ವಿಶೇಷವಾಗಿ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬು ದನ್ನು ಮತ್ತೆಮತ್ತೆ ಸಾರಿದೆ. ಅಲ್ಲಿ 'ಅಪಹತಪಾಪ್ಮಾಭಯಂ ರೂಪಮ್' ಎಂಬುದಕ್ಕೆ 'ತತ್ರಾಭಯಮಿತಿ ಅವಿದ್ಯಾರಾಹಿತ್ಯಮುಚ್ಯತೇ । ಸಾ ಚ ಸುಷುಪ್ತೇ ಸ್ವರೂಪೇಣ ಸತ್ಯಪಿ ನಾಭಿವ್ಯಕ್ತಾ ಭಾತೀತಿ ದ್ರಷ್ಟವ್ಯಮ್' - (ಸುಷುಪ್ತಿಯಲ್ಲಿ ಅವಿದ್ಯೆಯಿದ್ದರೂ ಅಭಿವ್ಯಕ್ತವಾಗಿ ಕಾಣುವದಿಲ್ಲವೆಂದು ಇಟ್ಟುಕೊಳ್ಳಬೇಕು. ಪು. 599), 'ಅವಿದ್ಯಾಯಾ ಯದಾ ಪ್ರವಿವಿಕ್ತೋ ಭವತಿ' ಎಂಬ ಭಾಷ್ಯಕ್ಕೆ 'ಪ್ರವಿವಿಕ್ತತ್ವಂ ಕಾರ್ಯಕಾರಣಾವಿದ್ಯಾ ವಿರಹಿತತ್ವಮ್' (ವಿಂಗಡವಾಗಿರುವದೆಂದರೆ ಕಾರ್ಯಕಾರಣಾವಿದ್ಯೆಗಳಿಲ್ಲದಿರುವದು, ಪು 608), 'ಅನ್ಯತ್ವಪ್ರತ್ಯುಪಸ್ಥಾಪಕಹೇತೋರವಿದ್ಯಾಯಾ ಅಭಾವಾತ್' ಎಂಬ ಭಾಷ್ಯಕ್ಕೆ 'ಯದ್ಯಪಿ ಸುಷುಪ್ತೇ । ಅವಿದ್ಯಾ ವಿದ್ಯತೇ ತಥಾಪಿ ಸಾऽನಭಿವ್ಯಕ್ತಾ-ಸ್ತೀತ್ಯನರ್ಥಪರಿಹಾರೋಪಪತ್ತಿರಿತ್ಯರ್ಥಃ' (ಸುಷುಪ್ತಿಯಲ್ಲಿ ಅವಿದ್ಯೆಯಿದ್ದರೂ ಅಭಿವ್ಯಕ್ತವಾಗಿಲ್ಲದ್ದರಿಂದ ಅನರ್ಥಪರಿಹಾರವಾಗಬಹುದಾಗಿದೆ ಎಂದರ್ಥ. ಪು. 609) 'ಅವಿದ್ಯಾಕಾಮಕರ್ಮವಿನಿರ್ಮುಕ್ತಮೇವ ಅಪಿತದ್ರೂಪಂ ಯತ್ಸುಷುಪ್ತೇ ಆತ್ಮನೋ ಗೃಹ್ಯತೇ ಪ್ರತ್ಯಕ್ಷತಃ' ಎಂಬ ಭಾಷ್ಯಕ್ಕೆ 'ಪ್ರತ್ಯಕ್ಷತಃ । ಸ್ವರೂಪಚೈತನ್ಯವಶಾ-ದ್ಯಥೋಕ್ತರೂಪಸ್ಯ ಸುಷುಪ್ತೇ ಗೃಹ್ಯಮಾಣತ್ವಮ್ ಉತ್ಥಿತಸ್ಯ ಪರಾಮರ್ಶಾದ-ವಧೇಯಮ್' (ಸುಷುಪ್ತಿಯಲ್ಲಿ ಪ್ರತ್ಯಕ್ಷವಾಗಿ ಗ್ರಹಿಸುತ್ತದೆ ಎಂದರೆ ಎಚ್ಚತ್ತಾದರೂ ಸ್ಮರಿಸುತ್ತಾರೆ ಎಂದರಿಯಬೇಕು, ಪು 611) - ಹೀಗೆಲ್ಲ ಭಾಷ್ಯದಲ್ಲಿ ಸ್ಪಷ್ಟವಾಗಿರುವ ವಾಕ್ಯಗಳಿಗೆ ವ್ಯಾಖ್ಯಾನಕಾರರು ಹೇಗೋ ತಿರುಚಿ ಅರ್ಥ ಮಾಡಿರುವದು ಕಂಡು ಬಂತು. ಇದೆಲ್ಲಾ ಗವಿಪುರದಲ್ಲಿದ್ದಾಗಲೇ ನಾನು ಕಂಡುಕೊಂಡದ್ದು; ಆಗಲೆ ಆ

ಮೇಲೆ ಕೊಟ್ಟಿರುವ ಪುಟಸಂಖ್ಯೆಗಳು ಆನಂದಗಿರಿ ವ್ಯಾಖ್ಯಾನದ ಬೃಹದಾರಣ್ಯಕಭಾಷ್ಯದ್ದು

ವಾಕ್ಯಗಳಿಗೆಲ್ಲ ಹಸಿರುಪೆನ್ಸಿಲ್ಲು ಗುರುತುಮಾಡಿದೆನು. ಮಾರನೆಯದಿನವೇ ಅಯ್ಯರವರಿಗೆ ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬುದಕ್ಕೆ ಪ್ರತ್ಯಕ್ಷಭಾಷ್ಯವಚನಗಳಿವೆ ಎಂದು ಉತ್ಸಾಹಭರಿತವಾಗಿ ತಿಳಿಸಿದೆನು; ಆದರೆ ಆಗ ಅಲ್ಲಿ ಹೇಳಿರುವದು ಮೂಲಾವಿದ್ಯಾ ವಿಷಯವಲ್ಲವೆಂಬುದೂ ಭಾಷ್ಯದಲ್ಲಿ ಮೂಲಾವಿದ್ಯೆಯ ವಿಚಾರವೇ ಇಲ್ಲವೆಂಬುದೂ ಈಗ ಸ್ಪಷ್ಟವಾಯಿತು. ಈ ಸಮಯಕ್ಕೆ ಸರಿಯಾಗಿ ವೆಂಕಟೇಶ ಶಾಸ್ತ್ರಿಗಳಿಂದ ನನಗೆ ಪಂಚಪಾದಿಕಾವಿವರಣ **(Vizianagaram Series)** ಮತ್ತು ಅದ್ವೈತಸಿದ್ಧಿ ಸವ್ಯಾಖ್ಯಾನ (ನಿರ್ಣಯಸಾಗರ ಮುದ್ರಣಾಲ ಯದ್ದು) ಇವೆರಡೂ ದೊರೆತವು. ಪಂಚಪಾದಿಕೆಯನ್ನೂ ಅದರಲ್ಲಿಯೂ ವಿವರಣವನ್ನು ಓದಿದಹಾಗೆಲ್ಲ ಭಾಷ್ಯಕ್ಕಿಂತ ಬೇರೊಂದು ಪ್ರಕ್ರಿಯೆಯೇ ಅದರಲ್ಲಿ ಹೊಸದಾಗಿ ಹೊರಕ್ಕೆ ಬಂದಿದೆ ಎಂಬುದು ಸ್ಪಷ್ಟವಾಗುತ್ತಾ ಬಂತು. ಆದ್ದರಿಂದ ಹೊಸಹೊಸ ವಿಷಯಗಳನ್ನು ಒಂದು ನೋಟು ಬುಕ್ಕಿನಲ್ಲಿ ಬರೆದುಕೊಳ್ಳುವದು ; ಆಯಾ ದಿನದ ಸಾಯಂಕಾಲಕ್ಕೆ ಚರ್ಚಿಸುವದು ಹೀಗೆ ಮಾಡುತ್ತಾ ಕೊನೆಗೆ ಒಂದು ಗ್ರಂಥಕ್ಕೆ ಬೇಕಾದ ವಿಷಯಗಳನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡೆನು. ಅಯ್ಯರವರಲ್ಲಿ ಸಿಕ್ಕಿದ ಇಂಗ್ಲೀಷು ಟಿಪ್ಪಣಿಗಳ ವಿಷಯಗಳನ್ನು ಆಗಾಗ್ಗೆ ಗುರುತುಹಾಕಿಕೊಳ್ಳುತ್ತಾ ಬಂದೆನು. ಈ ವಿಷಯವನ್ನು ವಿಠ್ಠಲಶಾಸ್ತ್ರಿಗಳು, ವೆಂಕಟೇಶಶಾಸ್ತ್ರಿಗಳು - ಇಬ್ಬರಲ್ಲಿಯೂ ಚರ್ಚಿಸುತ್ತಿದ್ದೆನು. ವಿಠ್ಠಲಶಾಸ್ತ್ರಿಗಳೇ ಇಷ್ಟರೊಳಗೆ ಮೊದಲು ನಮ್ಮ ಪಂಗಡಕ್ಕೆ ಸೇರಿಕೊಂಡರು ; ವೆಂಕಟೇಶಶಾಸ್ತ್ರಿಗಳು ಸಂಪ್ರದಾಯದವರನ್ನೆಲ್ಲ ಇವರು ಹಳಿಯುತ್ತಾರೆ ಎಂದು ಮೊದಮೊದಲು ಕೋಪವನ್ನು ತೋರಿಸಿದರೂ ಬರುಬರುತ್ತಾ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸುತ್ತಾ ಬಂದರು. ಹೀಗೆಲ್ಲಾ ನಡೆದು 'ಮೂಲಾವಿದ್ಯಾನಿರಾಸ' ಎಂಬ ಗ್ರಂಥಕ್ಕೆ ತಳಹದಿ ಏರ್ಪಟ್ಟಿತು.

## ಪದತ್ರಯ, ವಾಕ್ಯರಚನೆ:

ಕನ್ನಡ ಸ್ಕೂಲು ಪುಸ್ತಕಗಳೆರಡನ್ನು ಹರಿಹರದಲ್ಲಿಯೇ ಬರೆದಿದ್ದೆನಾದರೂ ಪದತ್ರಯವು ಮಾತ್ರ ಅಚ್ಚಾಗಿ ಸ್ಕೂಲುಗಳಿಗೆ ಪಠ್ಯಪುಸ್ತಕವಾಗಿ ಇಡಬೇಕೆಂದು ಕೇಳಿಕೊಂಡಿದ್ದೆನು. ನಾನು ಎ.ವಿ. ಸ್ಕೂಲಿನಲ್ಲಿದ್ದಾಗಲೇ ಅದು ಮುಂಜೂರಾಯಿತು. ಪುಸ್ತಕವ್ಯಾಪಾರಿಗಳಲ್ಲಿ ಅದನ್ನು ಮಾರುವದಕ್ಕೆ ಕೊಟ್ಟೆನು. ವಿಶೇಷವಾಗಿ ಎಂ.ಎಸ್.ರಾವ್ ಎಂಬವರು ಅದನ್ನು ಒಟ್ಟಾಗಿ ಕೊಂಡು ಹೆಚ್ಚಾಗಿ ಪ್ರೋತ್ಸಾಹಿಸಿದರು. 'ಪದತ್ರಯ' ಎಂಬ (ನಾಮಪದ, ಕ್ರಿಯಾಪದ, ಅವ್ಯಯ - ಎಂಬ ಮೂರು ಮುಖ್ಯ ಪದಗಳನ್ನು ಸೂಚಿಸುವ) ಹೆಸರು ಕೆಲವರಿಗೆ ಕುಚೋದ್ಯಕ್ಕೆ ಅವಕಾಶವನ್ನು ಕೊಟ್ಟಿತು ; ತತ್ತ್ವಮಸಿ ಎಂಬ ಮೂರು ಪದಗಳ ವಿಚಾರವಾಗಿ ಇವರು

ಬರೆದಿರುತ್ತಾರೆ, ವೇದಾಂತಿಗಳು - ಎಂದು ಮುಂತಾಗಿ ಕೆಲವರು ತಮಾಷೆಮಾಡಿದರು. ಆದರೂ ಆ ಗ್ರಂಥವು ಸ್ಕೂಲುಗಳಿಗೆ ನಿಯಮಿತವಾಗಿದೆ ಎಂಬ ಕಾರಣದಿಂದ ಉಪಾಧ್ಯಾಯರುಗಳು ಅದಕ್ಕೆ ಹೊಂದಿಸಿಕೊಂಡರು. ಅದರಲ್ಲಿರುವ ಅಭ್ಯಾಸಗಳ ವಾಕ್ಯಗಳು ಬಹಳ ಸುಲಭವಾಗಿದ್ದದ್ದರಿಂದ ಹುಡುಗರಿಗೂ ವಿಚಾರ ಪ್ರಚೋದಕವಾಗಿದ್ದವು. ಇನ್ನು ವಾಕ್ಯರಚನೆ ಎಂಬ ಪುಸ್ತಕವು ಬಹಳ ದೊಡ್ಡದಾಯಿತು. ಅದನ್ನು ಪ್ರಿಂಟು ಮಾಡಿಸುವದಕ್ಕೆ ನನ್ನಲ್ಲಿ ಹಣವಿಲ್ಲದ್ದರಿಂದ ವಿದ್ಯಾಭ್ಯಾಸದ ಇಲಾಖೆಯವರಿಗೆ ಒಪ್ಪಿಸಿಬಿಡಬೇಕೆಂದು ಹೊರಟು ದಾರಿಯಲ್ಲಿ ಎಕನಾಮಿಕ್ಸ್ ಕಾನ್ಫರೆನ್ಸ್ ಸೆಕ್ರೆಟರಿಗಳ ಕೆಲಸದಲ್ಲಿದ್ದ ಸುಬ್ರಹ್ಮಣ್ಯಅಯ್ಯರವರಿಗೆ ಮೊದಲು ತೋರಿಸಿದೆನು. ಅವರು ವಾಕ್ಯರಚನೆಯ ಪ್ರತಿಪಾದನೆಯ ಕ್ರಮವು ಹೀಗಿರಬೇಕು - ಎಂದು ಕೆಲವು ಸೂಚನೆಗಳನ್ನು ಕೊಟ್ಟರು ; ಅವು ಗ್ರಾಹ್ಯವಾಗಿ ಕಂಡದ್ದರಿಂದ ಮನೆಗೆ ಹಿಂತಿರುಗಿ ಬಂದು ಇನ್ನೊಂದು ಸಲ ಎಲ್ಲವನ್ನೂ ಮೊದಲಿನಿಂದ ಬರೆದೆನು. ಆ ಪುಸ್ತಕದ ಒಂದು ಭಾಗವು ಪ್ರಿಂಟಾದದ್ದು ನಾನು ನಾರ್ಮಲ್ ಸ್ಕೂಲಿನಲ್ಲಿದ್ದಾಗಲೇ.

## ಕುಟುಂಬದಲ್ಲಿ ಬದಲಾವಣೆ :

ಈ ಹೊತ್ತಿಗೆ ನನ್ನ ಹೆಂಡತಿ ಗರ್ಭಿಣಿಯಾಗಿದ್ದದ್ದರಿಂದ ಆಕೆಯನ್ನು ಅರಸೀಕೆರೆಯಲ್ಲಿ ತವರುಮನೆಗೆ ಬಿಟ್ಟುಬಂದೆನು. ಇಷ್ಟರಲ್ಲಿ ಆಗ ಎಲ್ಲೆಲ್ಲಿಯೂ ಇನ್ಫ್ಲುಯೆಂಜ ಎಂಬ ರೋಗವು ಬಲವಾಗಿ ಹರಡಿಕೊಂಡಿತು. ಹಿಂದೆ ಬಂದಿದ್ದ ಪ್ಲೇಗಿಗಿಂತ ಇದು ಮಿಂಚಿನ ವೇಗದಲ್ಲಿ ವ್ಯಾಪಿಸುತ್ತಿದ್ದದ್ದರಿಂದಲೂ ಜನರಿಗೆ ಆಹಾರ ಪದಾರ್ಥಗಳು ಸಿಕ್ಕುವದು ಕಷ್ಟವಾದ್ದರಿಂದಲೂ ವೈದ್ಯರ ಸಹಾಯವಿಲ್ಲದೆ ಒಂದೊಂದು ಕಡೆ ನೂರಾರು ಜನರು ಕಾಲವಾದರು. ಸರಕಾರದವರು ತಾತ್ಕಾಲಿಕವಾಗಿ ನಮ್ಮ ಸ್ಕೂಲಿಗೆ ರಜಕೊಟ್ಟರೆಂದು ಕಾಣುತ್ತದೆ. ನಾನು ಮಕ್ಕಳ ಸಹಿತವಾಗಿ ಅರಸೀಕೆರೆಗೆ ಹೋದೆನು. ನಾನು, ಮಗ ನರಸಪ್ಪ ಇಬ್ಬರೂ ಹರಿಹರಕ್ಕೆ ಹೋಗಿ ಅಲ್ಲಿಟ್ಟಿದ್ದ ನನ್ನ ಕೆಲವು ಪುಸ್ತಕಗಳನ್ನು ತಂದೆವು. ಇಬ್ಬರಿಗೂ ಅಲ್ಲಿ ಒಂದೆರಡು ದಿನಗಳು ಜ್ವರಬಂದಿತ್ತು. ನಮಗೆ 'ಇನ್ಫ್ಲುಯಂಜ'ದ ಸೋಂಕು ಮಾತ್ರ ಕೊಟ್ಟು ಯಮಧರ್ಮರಾಯನ ದೂತರು ಬೇಗನೆ ಬಿಟ್ಟು ಬಿಟ್ಟರೆಂದು ಕಾಣುತ್ತದೆ. ನಾವಿಬ್ಬರೂ ಹಿಂತಿರುಗುವ ಹೊತ್ತಿಗೆ ನಮ್ಮ ಅತ್ತೆಯವರ ಮನೆಯಲ್ಲಿ ನನ್ನ ಭಾವಮೈದುನ ರಾಮಣ್ಣನ ಹೊರತು ಮಿಕ್ಕ ಎಲ್ಲರೂ ರೋಗದಿಂದ ನರಳುತ್ತಾ ಬಿದ್ದಿದ್ದರು. ನಾನೊಬ್ಬನೇ ಆರೋಗ್ಯದಲ್ಲಿದ್ದದ್ದರಿಂದ ಅವರಿಗೆಲ್ಲ ಗಂಜಿ ಮುಂತಾದ ಆಹಾರವನ್ನು ಮಾಡಿಕೊಡುವದು, ನೀರು ತಂದುಕೊಳ್ಳುವದು, ಪಾತ್ರೆ ಪರಡಿಗಳನ್ನು

ತೊಳೆದುಕೊಳ್ಳುವದು, ಕಸ, ಮುಸುರೆ - ಎಲ್ಲಾ ಕೆಲಸವನ್ನು ಮಾಡಿಕೊಳ್ಳ ಬೇಕಾಯಿತು. ನರಸಪ್ಪನು ಆಸ್ಪತ್ರೆಯಿಂದ ಔಷಧಿ ತರುವದು - ಅಂಗಡಿಯಿಂದ ಸಿಕ್ಕಿದರೆ ಸಾಮಾನುಗಳನ್ನು ತರುವದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದನು. ಭಾವಮೈದುನ ರಾಮು ಮಾತ್ರ ಸುಮ್ಮನೆ ಒಂದು ಕಡೆ ಕುಳಿತಿರುತ್ತಿದ್ದನು. ಅವನಿಗೆ ಕೆಲವು ವರ್ಷಗಳಿಂದ ಏನೋ ಒಂದು ಬಗೆಯ ಮಂಕು ಕವಿದುಕೊಂಡು ಬಿಟ್ಟಿತ್ತು. ಈ ದುರವಸ್ಥೆಯಲ್ಲಿದ್ದಾಗ ನನ್ನ ಹೆಂಡತಿ ಒಂದು ಹೆಣ್ಣುಮಗುವನ್ನು ಹಡೆದು ಸ್ನಾನವನ್ನು ಮಾಡಿದ ದಿನವೇ ಇಹಲೋಕವನ್ನು ಬಿಟ್ಟಳು ; ಮಗು ಮೊದಲೇ ಪ್ರಾಣವನ್ನು ಬಿಟ್ಟಿತ್ತು. ಈಗ ಮಕ್ಕಳಲ್ಲಿ ಹಿರಿಯವನು ನರಸಪ್ಪ ; ಅವನಿಗೆ ಒಂಬತ್ತು ತುಂಬಿ ಹತ್ತು ವರ್ಷವಾಗಿರಬಹುದು. ಇನ್ನು ಮೂರು ಮಕ್ಕಳು ಕ್ರಮವಾಗಿ ಎಂಟು, ಐದು, ಎರಡು ವರ್ಷ ತುಂಬಿದ್ದವು. ಈ ಕಾಲಕ್ಕೆ ನಮಗೆ ನೆರಮನೆಯ ತಿಮ್ಮಪ್ಪದಾಸರು ಬಹಳ ಸಹಾಯ ಮಾಡಿದರು. ನಮಗೆ ಧೈರ್ಯವನ್ನು ಹೇಳಿ, ಶವಸಂಸ್ಕಾರಕ್ಕೆ ಬೇಕಾದ ಸಾಮಾನು, ಪುರೋಹಿತರು ಮುಂತಾದವುಗಳನ್ನು ಒದಗಿಸಿಕೊಟ್ಟು ಉಪಕಾರವನ್ನು ಮಾಡಿದರು. ಅವರೂ ನಾನೂ ರಾತ್ರೆಯೆಲ್ಲ ಶವವನ್ನು ಕಾಯಬೇಕಾಗಿ ಬಂದಿತ್ತು, ಅವರಿಗೆ ರಾತ್ರೆ ತೂಕಡಿಕೆ ಬಾರದಂತೆ ಅವಸ್ಥಾತ್ರಯ ವಿಚಾರವನ್ನು ನಾನು ನಡುನಡುವೆ ತೆಗೆದು ಮನಸ್ಸನ್ನು ಇತ್ತ ಎಳೆಯುತ್ತಿದ್ದೆನು ; ಇಂಥ ದುಃಖ ಕಾಲದಲ್ಲಿಯೂ ವೇದಾಂತವಿಚಾರವನ್ನು ಮಾಡುವವರು ಬಹುವಿರಳ - ಎಂದು ಅವರು ನನ್ನನ್ನು ಬಹುವಾಗಿ ಕೊಂಡಾಡಿದರಂತೆ. ಪ್ರಧಾನ ಸಂಸ್ಕಾರವು ಮುಗಿದ ಮೇಲೆ ನಾನು ಹರಿಹರಕ್ಕೆ ಹೋಗಿ ಉಳಿದ ಕರ್ಮಗಳನ್ನೆಲ್ಲ ಹುಡುಗನಿಂದ ಮಾಡಿಸಿದೆನು. ಹರಿಹರದಲ್ಲಿ ನರಸಪ್ಪನೂ ನಾನೂ ಆಗಾಗ್ಗೆ ಇಬ್ಬರೇ ಇದ್ದು ನದಿಗೆ ಸ್ನಾನಕ್ಕೆ ಸಂಧ್ಯಾವಂದನೆಗೂ ಹೋಗಿ ಬರುತ್ತಿದ್ದೆವು ; ಆದರೂ ಈಗ ಚಿಕ್ಕ ವಯಸ್ಸಿನ ಹುಡುಗನು ಮಾತೃವಿನ ಅಂತ್ಯಕರ್ಮಗಳನ್ನು ಮಾಡಬೇಕಾಗಿ ಬಂದದ್ದನ್ನು ಕಂಡು ಅನೇಕರು, ಆಪ್ತಮಿತ್ರರು ವ್ಯಥೆಪಟ್ಟರು.

## ಬೆಂಗಳೂರಿನಲ್ಲಿ ಮನೆಗಳ ಬದಲಾವಣೆ :

ಈ ಕೆಲಸಗಳನ್ನೆಲ್ಲ ಮುಗಿಸಿಕೊಂಡು ನಾನು ಬೆಂಗಳೂರಿಗೆ ಬಂದೆನು. ಹುಡುಗರೆಲ್ಲರನ್ನು ಕರೆಯಿಸಿಕೊಂಡೆನು. ಹಳೆಯ ಮನೆಯು ನನಗೆ ಬಾಡಿಗೆಗೆ ದೊರೆಯಲಿಲ್ಲ. ಮೋಟಗಾನಹಳ್ಳಿ ರಾಮಾಶಾಸ್ತ್ರಿಗಳ ಮನೆಯ ಹಿಂಭಾಗದ ಮನೆಯನ್ನು ಬಾಡಿಗೆಗೆ ಹಿಡಿದೆವು. ಆ ಮನೆಯ ಅಂಗಳವು ಶಾಸ್ತ್ರಿಗಳ ಮನೆಯ ಹಿತ್ತಲಾಗಿತ್ತು. ಬೀದಿಯಲ್ಲಿ ಮೋಟಾರು, ಸೈಕಲುಗಳು -ಮುಂತಾದವುಗಳ

ಉಪಟಳವಿಲ್ಲವಾದ್ದರಿಂದಲೂ ಹುಡುಗರು ಮನೆಯ ಸಾಮಾನುಗಳನ್ನು ಕಳೆಯದಂತೆ ಇರುವದಕ್ಕೆ ಸಾಧಕವಾದ್ದರಿಂದಲೂ ಆ ಮನೆಯನ್ನು ಬಾಡಿಗೆಗೆ ಇಟ್ಟುಕೊಳ್ಳಬೇಕಾಯಿತು. ಅಲ್ಲಿ ನಾನು ಹೊರಕ್ಕೆ ಹೋಗುವಾಗ ಬಾಗಿಲು ಹಾಕಿ, ಹುಡುಗರನ್ನು ನೋಡಿಕೊಳ್ಳುವದಕ್ಕೆ ನರಸಪ್ಪನನ್ನು ನಿಯಮಿಸಿ ಹೊರಡುತ್ತಿದ್ದೆನು. ಮಕ್ಕಳಿಗೆ ಸ್ನಾನಮಾಡಿಸುವದು, ತಲೆ ಬಾಚುವದು, ತಿಂಡಿ ತೀರ್ಥಗಳನ್ನು ಮಾಡಿಕೊಂಡು ಹೀಗೆ ಒಳಗೆ ಹೆಂಗಸಾಗಿರುವದು, ಹೊರಗೆ ಗಂಡಸಾಗುವದು ಎರಡು ಕೆಲಸಗಳೂ ನನ್ನ ಪಾಲಿಗೆ ಬಿದ್ದವು. ಕೆಲವು ದಿನಗಳವರೆಗೆ ಹೀಗೆ ಕಷ್ಟವನ್ನನುಭವಿಸಿದ ಬಳಿಕ ನನ್ನ ಪ್ರಾರ್ಥನೆಯಂತೆ ನಮ್ಮ ಲಕ್ಷ್ಮಕ್ಕನವರು ನಮ್ಮ ನೆರವಿಗೆ ಬಂದರು. ಆದರೆ ಅವರಿಗೆ ಒಂದು ಸ್ತ್ರೀಯರ ರೋಗವಿದ್ದದ್ದರಿಂದ ಅವರನ್ನು ನೋಡಿಕೊಳ್ಳುವವರೂ ಬೇಕಾಗಿತ್ತು. ಇದರ ಜೊತೆಗೆ ನಮ್ಮ ಶಿವರಾಮಣ್ಣನವರ ಮಗಳು ಒಬ್ಬಳು ರೋಗಗ್ರಸ್ತಳಾಗಿ ಜೊತೆಯಲ್ಲಿ ಬಂದಿದ್ದಳು. ಕೆಲವು ದಿನ ಅವಳ ಗಂಡನೂ ಜೊತೆಯಲ್ಲಿರಬೇಕಾಗಿತ್ತು. ತಿಂಗಳು ತಿಂಗಳಿಗೆ ಮಾಸಿಕದ ಕರ್ಮಗಳನ್ನು ಮಾಡುವದು, ತುಟ್ಟಿಯಾಗಿದ್ದ ದಿನಸುಗಳನ್ನು ಅಲ್ಪವೇತನಕ್ಕೆ ಸಾಕಾಗುವಷ್ಟನ್ನು ತರುವದು, ಮಿಕ್ಕದ್ದನ್ನು ಬಸವನಗುಡಿಯ ಸೊಸೈಟಿಯಿಂದ ಸಾಲವಾಗಿ ತರುವದು ಹೀಗೆ ಕಾಲಹಾಕುತ್ತಿದ್ದೆನು. ಅಂತೂ ಕುಟುಂಬ ಭರಣವು ಸ್ವಲ್ಪ ಕಷ್ಟಸಾಧ್ಯವಾಗಿಯೇ ಇತ್ತೆನ್ನಬೇಕು.

## ಸುಖದುಃಖಗಳು, ಲಾಭಾಲಾಭಗಳು :

ಆದರೆ ಮನುಷ್ಯನಿಗೆ ಎಂಥ ಕಷ್ಟಗಳು ಬಂದೊದಗಿದರೂ ಅವನ್ನು ತಡೆದುಕೊಳ್ಳುವ ಶಕ್ತಿಯನ್ನು ಈಶ್ವರನು ಆ ಕಾಲಕ್ಕೆ ಕೊಟ್ಟೇ ಇರುತ್ತಾನೆ. ಇಷ್ಟೇ ಅಲ್ಲ, ಆ ಕಷ್ಟಗಳು ಅವನಿಗೆ ಎಚ್ಚರಿಕೆ ಕೊಟ್ಟು ಹಿಂದಕ್ಕೆ ಆದದ್ದು ಆಗಿಹೋಯಿತು; ಇನ್ನು ಮೇಲಾದರೂ ನೀನು ಸನ್ಮಾರ್ಗಕ್ಕೆ ತಿರುಗಬೇಕು ಎಂದು ತಿಳಿವಳಿಕೆ ಕೊಡುತ್ತವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಪರಮಾತ್ಮನನ್ನು ನಾವು ಎಷ್ಟು ಮಟ್ಟಿಗೆ ಮರೆತಿರುವೆವೋ ಅಷ್ಟುಮಟ್ಟಿಗೇ ದುಃಖಗಳು ಬಂದು 'ನೀನು ನಿನ್ನ ಸ್ವಭಾವದಿಂದ ಈಗ ಚ್ಯುತನಾಗಿದ್ದೀಯೇ; ಆದ್ದರಿಂದಲೇ ನಿನಗೆ ವ್ಯಥೆಯಾಗಿದೆ, ನಿನ್ನ ಸುಖ ಸ್ವರೂಪಕ್ಕೆ ಹಿಂತಿರುಗುವದಕ್ಕೆ ಇದೇ ಸಮಯ' ಎಂದು ಬುದ್ಧಿ ಹೇಳುತ್ತಿರುವವು. 'ಈ ದುಃಖವು ಯಾವ ತಪ್ಪು ಮಾರ್ಗದ ಅನುಸರಣೆಯಿಂದ ಬಂದಿತು ?' ಎಂದೇ ಅಲ್ಲದೆ ಎಲ್ಲಕ್ಕೂ ಮೂಲವಾದ ಪರಮಾರ್ಥದ ಅನುಸರಣೆಯನ್ನು ಬಿಟ್ಟಿರುವವರೆಗೂ ನಮಗೆ ಒಂದಲ್ಲ ಒಂದು ತಪ್ಪುಹಾದಿಯನ್ನು ತುಳಿಯುವ ಪ್ರಸಂಗವು ಬಂದೇ ಬರುವದು ಎಂಬ ಮೂಲತತ್ತ್ವವನ್ನು ಮನದಂದುಕೊಳ್ಳುವದಕ್ಕೆ ದುಃಖಗಳು ನಮಗೆ ಸರ್ವಥಾ

ಸಾಧನಗಳಾಗಿರುತ್ತವೆ. ಇನ್ನು ಕೆಲವು ವೇಳೆಗಳಲ್ಲಿ ನಾವು ದುಃಖವೆಂದು ತಿಳಿದಿರುವದು ನಮಗೆ ಪ್ರಿಯವಾದದ್ದರ ಅಗಲುವಿಕೆಯಿಂದ ನಮಗೆ ಆಗಿರುವ ಭ್ರಾಂತಿಯೂ ಆಗಿರಬಹುದು ; ನಿಜವಾಗಿ ನಾವು ಆಗ ಸುಖದ ಹಾದಿಯನ್ನೇ ತುಳಿಯುತ್ತಲೂ ಇರಬಹುದು. ಕಳೂರುಕಟ್ಟೆಯಲ್ಲಿದ್ದಾಗ ನಾನು ತೆಗೆದುಕೊಂಡ ತಲುಬಿಲ್ಲದ (ಸಂಬಳವಿಲ್ಲದ) ರಜಗಳು ಎಂಥೆಂಥ ಸತ್ಸಂಗ, ಪವಿತ್ರ ತೀರ್ಥಕ್ಷೇತ್ರ ದರ್ಶನ, ಸದ್ವಿಚಾರ, ಗ್ರಂಥಾವಲೋಕನ, ಗ್ರಂಥರಚನೆ - ಮುಂತಾದ ಉತ್ತಮ ಮಾರ್ಗಕ್ಕೆ ಒಯ್ದವು ಎಂಬುದನ್ನು ನೆನಪಿಟ್ಟರೆ ನನಗೆ ಆ ಕಾಲವು ಆಗ್ಗೆ ಅಪ್ರಿಯವೆಂದು ತೋರಿದರೂ ಈಗ ನೋಡಿದರೆ ಅದು ನನ್ನ ಹಿತಕ್ಕೆ ಆಯಿತೆಂದು ಹೇಳಬೇಕಲ್ಲವೆ ? ಇದರಂತೆ ಬೆಂಗಳೂರಿನಲ್ಲಿ ಬಂದೊದಗಿದ್ದ ಪ್ರಕೃತಕಾಲ ವಿಶೇಷದ ಘಟನೆಗಳೂ ನನ್ನನ್ನು 'ಇದೀಗ ಸಮಯ, ಪರಮಾರ್ಥವಿಚಾರಕ್ಕೆ !' ಎಂದು ನೆನಪು ಕೊಟ್ಟಿರಬೇಕು.

ಇನ್ನೊಂದು ವಿಷಯವನ್ನು ಇಲ್ಲಿ ಮನದಂದುಕೊಳ್ಳಬೇಕೆನ್ನಿಸಿದೆ. ನನ್ನ ಜೀವನದಲ್ಲಿ ಬಲು ಮಟ್ಟಿಗೆ ಜೀವನಕ್ಕೆ ತಕ್ಕಷ್ಟು ಮಾತ್ರ ಆದಾಯವಿರುತ್ತಿತ್ತೇ ಹೊರತು ಬೇಕಾದದ್ದಕ್ಕಿಂತ ಹೆಚ್ಚಿಗೆ ಎಂದಿಗೂ ಧನದ ಉತ್ಪತ್ತಿಯಾದದ್ದಿಲ್ಲ. ಸಂಸಾರದ ಆಗುಹೋಗುಗಳಿಗೆ ಅವಶ್ಯವಾದಷ್ಟಕ್ಕೆ ತೀರ ಕೊರತೆಯಾದದ್ದೂ ಇಲ್ಲ. ಆದ್ದರಿಂದ ನನಗೆ ಯಾವಾಗಲೂ ಹಣವು ಸಾಲದೆನಿಸಿದಾಗ 'ಯಾವ ದ್ವಾರದಿಂದಲೊ ಹಣ ಬರುವದಿರಬೇಕು' ಎಂದು ಸಮಾಧಾನ ಮಾಡಿಕೊಳ್ಳುತ್ತಿದ್ದೆನು ; ಯಾವಾಗಲಾದರೂ ಹಣವು ಸ್ವಲ್ಪ ಕೂಡಿ ಬಂದಾಗ 'ಇದು ಯಾವದೋ ಮುಂಬರಲಿರುವ ಖರ್ಚಿಗೋಸ್ಕರ ಬಂದಿರಬೇಕು' ಎಂದು ಅದನ್ನು ಹಾಗೆಯೇ ಇಟ್ಟುಕೊಳ್ಳುತ್ತಿದ್ದೆನು. ಯಾವ ಕಾರಣದಿಂದಲೂ ನಾನು ಅನವಶ್ಯವಾದ ದುಂದು ವೆಚ್ಚಗಳಿಗೆ ಅವಕಾಶವನ್ನು ಕೊಡುತ್ತಿರಲಿಲ್ಲ ; ಅಥವಾ ಅವಶ್ಯವಾಗಿ ಮಾಡಬೇಕಾ-ಗಿರುವ ಖರ್ಚುವೆಚ್ಚಗಳನ್ನು ಕಿಸುಗಣ್ಣಿನಿಂದ ನೋಡಿ ಬಿಗಿಹಿಡಿಯುವದಕ್ಕೂ ಹೋಗುತ್ತಿರಲಿಲ್ಲ. ಇದರಿಂದ 'ನೆರೆಹೊರೆಯವರಂತೆ ನಾವೂ ಈ ಕಾಲದ ಆಟ ನೋಟಗಳಿಗೂ ವೇಷಭೂಷಾದಿ ವಿಹಾರಗಳಿಗೂ ಹೆಚ್ಚಾಗಿ ಮಾಡುವದಕ್ಕಿಲ್ಲವಲ್ಲ !' ಎಂದು ಕುಟುಂಬದವರಿಗೆ ಸ್ವಲ್ಪ ಅಸಮಾಧಾನವಾಗಿರಬೇಕು. ಆದರೆ ನಮ್ಮ ಅಂತಸ್ತಿಗೆ ತಕ್ಕಂತೆ ಹಬ್ಬ ಹರಿದಿನಗಳಲ್ಲಿ ಹೊಸಬಟ್ಟೆ, ಊಟಉಪಚಾರಗಳು ಮುಂತಾದವುಗಳಿಗೆ ಏರ್ಪಾಡು ಮಾಡಿಕೊಳ್ಳುತ್ತಲೇ ಇದ್ದೆವು. ಮನೆಯಲ್ಲಿ ಧರ್ಮಸಂಬಂಧವಾದ ಪುರಾಣಪ್ರವಚನ, ಉತ್ಸವ, ಭಜನೆ, ಕೀರ್ತನಾದಿಗಳೂ ನಡೆಯುತ್ತಿದ್ದವಾದ್ದರಿಂದ ನಮಗೆ ಜೀವನದಲ್ಲಿ ಯಾವ ವಿನೋದವೂ ಇಲ್ಲವೆನ್ನುವ ಹಾಗೂ ಇರಲಿಲ್ಲ. ಇದಂತಿರಲಿ, ಪ್ರಕೃತದಲ್ಲಿ ನಾನು ಹೆಂಡತಿಯನ್ನು ಅರಸೀಕೆರೆಗೆ

ಕರೆದುಕೊಂಡು ಹೋಗುವದರೊಳಗೆ ನನಗೆ ಪದತ್ರಯ ಪುಸ್ತಕಗಳನ್ನು ಮಾರಿದ್ದರ ಪ್ರತಿಫಲವಾಗಿ ಒಂದೇ ಗಂಟಿಗೆ 300 ರೂ.ಗಳು ಕೈಗೆ ಬಂದವು. ನಾನು ಈವರೆಗೆ ನೂರುಗಟ್ಟಲೆ ರೂಪಾಯಿಗಳನ್ನು ಏಕಕಾಲದಲ್ಲಿ ಕಂಡಿದ್ದೇ ಇಲ್ಲವಾದ್ದರಿಂದ ನನಗೆ 'ಈ ಹಣವನ್ನು ಹೇಗೆ ಕಾಪಾಡುವದು ?' ಎಂಬ ಯೋಚನೆ ಮನಸ್ಸಿಗೆ ಬಹಳ ಕಿರಿಕಿರಿಯನ್ನುಂಟು ಮಾಡಿತು. ಆ ರಾತ್ರಿಯನ್ನು ಹೇಗೋ ಕಳೆದು ಮಾರನೇ ದಿನವೇ ಕೃಷ್ಣಸ್ವಾಮಿ ಅಯ್ಯರವರ ಮನೆಗೆ ಹೋಗಿ ಅದನ್ನು ಅವರ ಕೈಯಲ್ಲಿ ಕೊಟ್ಟು 'ಇದನ್ನು ಸುರಕ್ಷಿತವಾಗಿಟ್ಟುಕೊಂಡಿರಬೇಕು ; ನಾನು ಬೇಕಾದಾಗ ಕೇಳುತ್ತೇನೆ' ಎಂದು ಕೊಟ್ಟುಬಿಟ್ಟೆ. ತತ್ಕಾಲಕ್ಕೆ ನನಗೆ ಅರ್ಥರಕ್ಷಣೆಯ ಚಿಂತೆ ತಪ್ಪಿತು. ಆದರೆ ಅರಸೀಕೆರೆಯಲ್ಲಿ ಹೆಂಡತಿಗೆ ಹೆಣ್ಣು ಮಗು ಪ್ರಸವವಾದ ಮೇಲೆ ಸ್ವಲ್ಪ ಬುದ್ಧಿಭ್ರಮಣೆ ಬಂದಿತ್ತು. ಆ ಸಂದರ್ಭದಲ್ಲಿ ಅವಳು ನನ್ನನ್ನು ಕರೆದು 'ನೀವು ಕೂಡಲೆ ಹೋಗಿ ನಮ್ಮ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳುವದು ಮೇಲು ; ಕೃಷ್ಣಸ್ವಾಮಿಅಯ್ಯರವರು ಇನ್ಫ್ಲುಯೆಂಜ ರೋಗದಿಂದ ಸತ್ತರೆಂದು ಸುದ್ದಿ ಬಂದಿದೆ' ಎಂದಳು. ನನಗೂ ಯೋಚನೆ ಹತ್ತಿಕೊಂಡಿತು. ಬೆಂಗಳೂರಿನಲ್ಲಿ ಆಗ ಆ ಭಯಂಕರ ರೋಗಕ್ಕೆ ಅಮಿತ ಸಂಖ್ಯೆಯ ಜನರು ತುತ್ತಾಗಿದ್ದರು ; ಜನರು ನಿರಾಶರಾಗಿದ್ದರು. ಆದ್ದರಿಂದ ಕೂಡಲೆ ರೈಲು ಹತ್ತಿ ಬೆಂಗಳೂರು ಸ್ಟೇಷನ್ನಿನಲ್ಲಿ ಇಳಿದು ದಾರಿಯಲ್ಲಿ ನನ್ನ ಪರಿಚಯಸ್ಥರನ್ನೆಲ್ಲ ನಮಗೆ ಬೇಕಾದವರ ಯೋಗಕ್ಷೇಮವನ್ನು ಕುರಿತು ವಿಚಾರಿಸುತ್ತಾ ನಡೆದೆನು. ಬಸವನಗುಡಿಯನ್ನು ಮುಟ್ಟುವದರೊಳಗೆ ಕೃ.ಸ್ವಾಮಿಅಯ್ಯರ ಹಿರಿಯ ಮಗ ಇನ್ಫ್ಲುಯೆಂಜದಿಂದ ದೈವಾಧೀನನಾದನೆಂದು ತಿಳಿಯಿತು. 'ಪುಣ್ಯಕ್ಕೆ ಅಯ್ಯರು ಬದುಕಿದ್ದಾರಲ್ಲ !' ಎಂದು ಸಮಾಧಾನವನ್ನು ಹೊಂದಿ ಅವರ ಮನೆಗೆ ಹೋದೆನು. ಅವರು ನಾನು ಹೀಗೆ ಏಕಾಏಕಿ ತಟ್ಟನೆ ಬಂದದ್ದನ್ನು ಕಂಡು ಇವನಿಗೆ ಹಣದ ಚಿಂತೆ ಹತ್ತಿಕೊಂಡಿರಬೇಕೆಂದು ಊಹಿಸಿ ಕೂಡಲೆ 'ಏನಪ್ಪಾ, ಕೆಟ್ಟಕಾಲ, ನಿಮ್ಮ ಹಣವನ್ನು ಎಲ್ಲಿಯಾದಾರೂ ಭದ್ರವಾಗಿಟ್ಟುಕೊಂಡಿರುವದು ಮೇಲು !' ಎಂದು 300 ರೂ.ಗೆ ಒಂದು ಚೆಕ್ಕು ಬರೆದುಕೊಟ್ಟುಬಿಟ್ಟರು. ಮನೆಯವರು ನನಗೆ ಯಾವದೋ ಆಪತ್ತು ಬಂದೊದಗಿದ್ದಕ್ಕೆ ಅಯ್ಯರು ಧನಸಹಾಯ ಮಾಡಿರಬೇಕೆಂದು ಕಲ್ಪಿಸಿ ನಿಜವನ್ನು ವಿಚಾರಿಸಿ ತಿಳಿದುಕೊಂಡರು. ''ನಮಗೆ ತಿಳಿಯದಂತೆ ಈ ಹಣವನ್ನು ಕೊಟ್ಟಿದ್ದೀರಲ್ಲ ! ಏನಾದರೂ ಅಪಾಯವು ಘಟಿಸಿದ್ದರೆ ನೀವು ನಮಗೆ ಹೇಳಿದ್ದರೂ 300 ರೂ. ಕೊಟ್ಟಿದ್ದಿರೆಂದು ನಾವು ನಂಬುತ್ತಿರಲಿಲ್ಲ'' ಎಂದರು. ಈ ಹಣವನ್ನುಪಯೋಗಿಸಿ ಕೊಂಡು ಒಂದಾನೊಂದು ನಿವೇಶನವನ್ನು ನಾನು ಕೊಳ್ಳಬೇಕೆಂಬ ಸೂಚನೆಯನ್ನು ಅಯ್ಯರು ಮಾಡಿದ್ದರು. ಮನೆ ತಪ್ಪಿದ್ದ ಅವರ ಮಗಳಿಗೂ ಆ ಸಮೀಪದಲ್ಲಿಯೇ ಒಂದು ನಿವೇಶನವನ್ನು ಮಾಡಿಕೊಡಬೇಕೆಂದು ಅವರು ಯೋಚಿಸಿದ್ದರಂತೆ. ಆದರೆ

ನಾನು ವಿಠ್ಠಲಶಾಸ್ತ್ರಿಗಳಲ್ಲಿ 'ಈ ಹಣವು ಒಟ್ಟಿಗೆ ನನ್ನ ಕೈಗೆ ಬಂದಿದೆ ; ಆದರೆ ಯಾವ ಖರ್ಚಿಗಾಗಿ ಇದು ಬಂದಿದೆಯೋ ತಿಳಿಯದಲ್ಲ! ಸದ್ಯಕ್ಕಂತೂ ನಮಗೆ ಯಾವ ಅತ್ಯವಶ್ಯವಾದ ಖರ್ಚಿನ ಬಾಬ್ತು ಕಾಣಿಸುತ್ತಿಲ್ಲ' ಎಂದಿದ್ದೆನು. ಮುಂದೆ ಪತ್ನೀ ವಿಯೋಗದಿಂದ ಕರ್ಮಗಳಿಗೆ ಆ ಹಣವು ವಿನಿಯೋಗವಾಯಿತು !. ಈ ದೈವನಿಯಮವನ್ನು ಕಂಡು ನನಗೆ 'ಯೋಗಕ್ಷೇಮಂ ವಹಾಮ್ಯಹಮ್' ಎಂಬ ಗೀತೋಕ್ತಿಯು ನೆನಪಿಗೆ ಬಂತು. ನನ್ನಂಥ ಪಾಮರನ ಯೋಗಕ್ಷೇಮಕ್ಕೆ ಮೊದಲೇ ಏರ್ಪಾಡುಮಾಡಿರುವ ಭಗವಂತನು ಅನನ್ಯಭಕ್ತರ ಯೋಗಕ್ಷೇಮವನ್ನು ವಹಿಸುವದೇನಾಶ್ಚರ್ಯ ಎನಿಸಿತು. ಆದ್ದರಿಂದ ಈಗ ನಾನು ನನ್ನ ಸುಖದುಃಖ-ಗಳನ್ನೂ ಲಾಭಾಲಾಭಗಳನ್ನೂ ಎಣಿಸುತ್ತಾ ಕೂರುವದಕ್ಕಿಂತ ಕರ್ತವ್ಯಕರ್ಮದಲ್ಲಿ ನಿರತನಾಗುವದೇ ಮೇಲೆಂದು ಬಗೆದೆನು.

## ಮಾಂಡೂಕ್ಯದ ಭಾಷಾಂತರ :

ಈಗ ಇನ್ನೊಂದು ಘಟನೆಯು ನಾನು ಪರಮಾರ್ಥವಿಚಾರದಲ್ಲಿ ಹೆಚ್ಚು ಆಸಕ್ತನಾಗಲು ಕಾರಣವಾಯಿತು. ರಾಜಯೋಗದ ಪುಸ್ತಕಗಳನ್ನು ಬೆಂಗಳೂರಿನ ಕೆಲವು ಪುಸ್ತಕ ವ್ಯಾಪಾರಿಗಳಲ್ಲಿಟ್ಟಿದ್ದೆನಷ್ಟೆ. ಅದಕ್ಕೆ ಅಲ್ಪಸ್ವಲ್ಪ ಹಣ ಕೈಗೆ ಬಂದದ್ದು ಖರ್ಚಾಗಿ ಹೋಗಿತ್ತು ; ಉಳಿದದ್ದನ್ನು ವ್ಯಾಪಾರಿಗಳು ಕೊಡಲೇ ಇಲ್ಲ! ಕೇಳಿ ಕೇಳಿ ಬೇಸತ್ತು ಸುಮ್ಮನಾಗಿದ್ದೆನು. ಇನ್ಫ್ಲುಯೆಂಜ ರೋಗನಿಮಿತ್ತದ ವಿರಾಮಕಾಲದಲ್ಲಿ ಅರಸೀಕೆರೆಗೆ ಹೋಗುವಾಗ ನನ್ನಲ್ಲಿದ್ದ ಪುಸ್ತಕಗಳನ್ನು ಸ್ಕೂಲಿನಲ್ಲಿ ಒಂದು ಪೆಟ್ಟಿಗೆಯಲ್ಲಿ ಹಾಕಿಟ್ಟಿದ್ದೆನು. ಬೆಂಗಳೂರಿನ ಎಕ್ಸ್‌ಟೆನ್‌ಷನ್ ಸ್ಥಳದಲ್ಲಿ ಬಹುಕಡೆ ಗೆದ್ದಲು ಕಾಟವೂ ಬಹಳವಾಗಿತ್ತು. ನಾನು ಈಗ ಉಳಿದುಕೊಂಡಿದ್ದ ರಾಮಶಾಸ್ತ್ರಿಗಳ ಮನೆಯಲ್ಲಿ ಗೆದ್ದಲು ತಿಂದು ಎಷ್ಟೋ ಸಾಮಾನುಗಳೂ ಪುಸ್ತಕಗಳೂ ಹಾಳಾಗಿದ್ದವು ; ಸ್ಕೂಲಿನಲ್ಲಿಟ್ಟಿದ್ದ ಪೆಟ್ಟಿಗೆ ಗೆದ್ದಲು ಹತ್ತಿ ಅನೇಕ ರಾಜಯೋಗದ ಪ್ರತಿಗಳು ಪೂರ್ಣವಾಗಿ ಹೋಗಿ ಬಿಟ್ಟಿದ್ದವು. ರಾಜಯೋಗದ ಪ್ರತಿಗಳನ್ನು ಮಾರಿದ ಹಣವನ್ನು ಮುಂದಿನ ಗ್ರಂಥರಚನೆಗೆ ಮೂಲಧನವಾಗಿ ಮಾಡಿಕೊಳ್ಳಬೇಕೆಂದು ದಾವಣಗೆರೆಯ ಮಾಗಾನಹಳ್ಳಿಯ ದೊಡ್ಡಬಸಪ್ಪನವರು ಹೇಳಿದ್ದರು. 'ಚಿಲ್ಲರೆ ಚಿಲ್ಲರೆಯಾಗಿ ಬಂದ ಹಣವನ್ನು ಕೂಡಿಡುವದು ನನ್ನಂಥವರಿಗೆ ಬಹಳ ಕಷ್ಟ' ಎಂದು ನಾನು ಗೊಣಗಿದ್ದಕ್ಕೆ ಅವರು 'ಇಷ್ಟರ ಮೇಲೆ ನೀವು ಬ್ರಾಹ್ಮಣರು, ನೀವೆ ಎಲ್ಲವನ್ನೂ ಉಪಯೋಗಿಸಿಕೊಂಡರೂ ನನಗೆ ಸಂತೋಷವೇ' ಎಂದಿದ್ದರು. ಆ ಮಾತು ಮನಸ್ಸಿನಲ್ಲಿ ಕೊರೆಯುತ್ತಲೇ ಇತ್ತು. ಇನ್ನು ಹೀಗೆಯೇ ಬಿಟ್ಟರೆ ನಾನು ದೊಡ್ಡಬಸಪ್ಪನವರ ಆಕಾಂಕ್ಷೆಗೆ ಅಡ್ಡಿ ಮಾಡಿದ ಅಪರಾಧಕ್ಕೆ ಗುರಿಯಾಗುವದು

ಖಂಡಿತ ಎಂದು ತೋರಿತು. ಆದ್ದರಿಂದ ಬೆಂಗಳೂರಿಗೆ ಅರಸೀಕೆರೆಯಿಂದ ಬಂದ ಕೆಲವು ದಿನಗಳೊಳಗಾಗಿಯೇ ಹೋಗಿ ಎಂ.ಎಸ್. ರಾವ್ ಕಂಪನಿಯವರಿಗೆ ಶೇಕಡ 40 ರಂತೆ ಕಮಿಷನ್ ಕೊಟ್ಟು ಬಂದ ಹಣಕ್ಕೆ ಕೂಡಲೆ ಪ್ರಿಂಟಿಂಗ್ ಪೇಪರು ಕೊಂಡಿಟ್ಟೆನು. ನಾನು ಅರೆಬರೆಯಾಗಿ ಬರೆದಿಟ್ಟಿದ್ದ ಮಾಂಡೂಕ್ಯದ ಭಾಷಾಂತರವನ್ನು ಬೇಗಬೇಗನೆ ಮುಂದುವರಿಸಿದೆನು.

ಮಾಂಡೂಕ್ಯೋಪನಿಷತ್ತನ್ನು ಹಿಂದೆ ನಾನು ದಾವಣಗೆರೆಯಲ್ಲಿದ್ದಾಗಲೊ ಹರಿಹರದಲ್ಲಿದ್ದಾಗಲೊ ಸ್ವಲ್ಪಭಾಗವನ್ನು ಭಾಷಾಂತರಿಸಿದ್ದೆನು. ಅದರಲ್ಲಿರುವ ಅವಸ್ಥಾತ್ರಯವಿಚಾರವು ಈ ಮೊದಲೆ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಮಾಡಿತ್ತು. ಒಮ್ಮೆ ಕುರ್ತಕೋಟಿಯಲ್ಲಿ ದೇವಸ್ಥಾನದ ಆವರಣದಲ್ಲಿ ಮಲಗಿದ್ದಾಗ ನಾನು ಅವಸ್ಥಾತ್ರಯ ವಿಚಾರವಾಗಿ ಕನವರಿಸಿ ಕೊಂಡದನ್ನು ಚಿದಂಬರಯ್ಯನವರು ಹೇಳಿ ಹಾಸ್ಯಮಾಡಿದ್ದರು. ಸ್ವಲ್ಪ ಮಟ್ಟಿಗೆ ಭಾಷ್ಯಮಾಡಿದ್ದ ನನ್ನ ಭಾಷಾಂತರವನ್ನು ವಿ.ಸು. ಅಯ್ಯರವರಿಗೆ ತೋರಿಸಬೇಕೆಂಬ ಕುತೂಹಲದಿಂದ ನಾನು ಬೆಂಗಳೂರಿಗೆ ಬಂದೆನು. ಅಯ್ಯರವರಿಗೆ ಮಾಂಡೂಕ್ಯವನ್ನು ಕಂಡರೆ ಬಹಳ ಪ್ರೀತಿ. ಅವರು ಅವಸ್ಥಾತ್ರಯ ವಿಚಾರದಲ್ಲಿ ಬರೆದಿದ್ದ ಒಂದು ಇಂಗ್ಲೀಷು ಲೇಖನವನ್ನು ನಾನು ನಕಲು ಮಾಡಿಕೊಂಡು ಓದಿದ್ದೆನು. ಆದ್ದರಿಂದ ಅವರಿಗೆ ತೋರಿಸಿದರೆ ಒಳ್ಳೆಯದೆಂದು ನಾನು ಬಗೆದೆನು. ಅವರು ನನ್ನ ಭಾಷಾಂತರವನ್ನು ಅಲ್ಲಲ್ಲಿ ನೋಡಿ ತಮ್ಮಲ್ಲಿದ್ದ ಇಂಗ್ಲೀಷು ಭಾಷಾಂತರಕ್ಕೆ ಹೋಲಿಸಿ ನನ್ನ ತಪ್ಪನ್ನು ತೋರಿಸುವದಕ್ಕೆ ಮೊದಲು ಮಾಡಿದರು. ಅವರು ಇಟ್ಟುಕೊಂಡಿದ್ದ ದ್ವಿವೇದಿಗಳ ಭಾಷಾಂತರವು ನನಗೂ ದೊರೆತಿತ್ತು. ಮೊಟ್ಟಮೊದಲನೆಯ ಮಂತ್ರವನ್ನು ದ್ವಿವೇದಿಗಳು **"The Syllable Aum is all this"** ಎಂದು ಪರಿವರ್ತಿಸಿದ್ದಾರೆ; ಮೂಲದಲ್ಲಿ ಇದೆಲ್ಲವೂ ಓಂಕಾರವೇ ಎಂದಿರುವದನ್ನು ಓಂಕಾರವು ಇದೆಲ್ಲವೂ ಆಗಿದೆ ಎಂದು ಮಾಡಿರುವದು ಸರಿಯಲ್ಲವೆಂಬುದನ್ನು ನಾನು ವಿವರಿಸಿ ಹೇಳಿದೆ ; ಅಯ್ಯರು ಅದನ್ನು ಒಪ್ಪಿದರೋ ಇಲ್ಲವೋ ತಿಳಿಯದು. 'ದಕ್ಷಿಣಾಕ್ಷಿಮುಖೇ ವಿಶ್ವಃ' ಎಂಬ (1-2) ಕಾರಿಕೆಗೆ, ಪ್ರಯೋಜನವು ಜಾಗ್ರದವಸ್ಥೆಯಲ್ಲಿಯೇ ವಿಶ್ವಾದಿಗಳನ್ನು ತೋರಿಸಿ ಕೊಡುವದೆಂಬುದನ್ನು ಭಾಷ್ಯದಲ್ಲಿ ಬರೆದಿದ್ದರೂ ನಾನು ಅದರ ಭಾಷಾಂತರವನ್ನು ಕೈ ಬಿಟ್ಟಿದ್ದೆನು ; ಅದನ್ನು ಅಯ್ಯರು ತೋರಿಸಿದರು. ಹೀಗೆ ಒಂದೆರಡು ತಪ್ಪುಗಳನ್ನು ತೋರಿಸಿದ ಬಳಿಕ ಅಧ್ಯಾಸದ ವಿಚಾರದಲ್ಲಿಯೂ ಸ್ವಲ್ಪ ಮಾತುಕತೆ ನಡೆದಿರಬೇಕು. ಕೊನೆಗೆ ಸು.ಅಯ್ಯರು 'ಈಗ್ಗೆ ಕೃಷ್ಣಸ್ವಾಮಿ ಅಯ್ಯರವರೇ ಈ ವಿಷಯಕ್ಕೆ ಪ್ರಮಾಣ ಭೂತರಾಗಿರುವವರು. ಅವರು ಕೋಲಾರದಲ್ಲಿದ್ದಾರೆ; ಅವರಿಗೆ ನಿನ್ನ ಅನುವಾದ-ವನ್ನು ತೋರಿಸುವದು ಒಳ್ಳೆಯದು' ಎಂದರು. ನಾನು ಅರಸೀಕೆರೆಗೆ ಹಿಂದಕ್ಕೆ

ಬಂದುಬಿಟ್ಟೆ. ಅಷ್ಟಕ್ಕೆ ನಿಂತಿದ್ದ ಮಾಂಡೂಕ್ಯದ ಅನುವಾದವನ್ನು ಈಗ ನಾನು ಬಹಳ ಔತ್ಸುಕ್ಯದಿಂದ ಕನ್ನಡಿಸುವದಕ್ಕೆ ಪ್ರಾರಂಭಿಸಿದೆ. ಅದಕ್ಕೆ ತಕ್ಕ ಟಿಪ್ಪಣಿಗಳನ್ನು ಜೋಡಿಸಿದೆ. ಕೃ.ಸ್ವಾ. ಅಯ್ಯರವರ ಸಂಭಾಷಣೆಯ ಫಲವೂ ಅದರಲ್ಲಿ ಸೇರಿತ್ತು. ಮುಂದೆ **ಅಧ್ಯಾತ್ಮಪ್ರಕಾಶಕಾರ್ಯಾಲಯದಿಂದ ಹೊರಡಲಿರುವ ಅಧ್ಯಾತ್ಮ ಗ್ರಂಥಾವಳಿಗೆ ಇದು ಮೊಟ್ಟಮೊದಲನೆಯ ಗ್ರಂಥವಾಯಿತು.**

## ಚಿಂದಬರಯ್ಯನವರು :

ಇವರು 1918 ಅಥವಾ 19ರಲ್ಲಿ ಬೆಂಗಳೂರಿಗೆ ಬಂದರು. ಕೊಲ್ಲಾಪುರದಲ್ಲಿ ಮಹಾಭಾಗವತರಿಗೆ ಕರವೀರಸಂಕೇಶ್ವರ ಪೀಠದ ಅಧಿಪತಿಗಳಾಗಿ ತುರೀಯಾಶ್ರಮ ಸ್ವೀಕಾರಮಾಡಿದ ಮೇಲೆ ಹೊಸದುರ್ಗದಿಂದ ಅಲ್ಲಿಗೆ ಹೋಗಿ ಒಂದೆರಡು ದಿನಗಳು ಇದ್ದು ಹಿಂತಿರುಗಿದೆನೆಂದು ನೆನಪಿದೆ. ಆಗಿನಿಂದ ಇತ್ತ ಚಿದಂಬರಯ್ಯನವರ ಮತ್ತು ನನ್ನ ಸಮಾಗಮವಾಗಿರಲಿಲ್ಲ. ಚಿದಂಬರಯ್ಯನವರು ಮಹಾಭಾಗವತರ ಸೇವೆಯಲ್ಲಿ ಮುಳುಗಿದ್ದು ಶರೀರದ ಭಾವವನ್ನೇ ಮರೆತಿದ್ದರು. ಈಗ್ಗೆ ಅವರ ದೇಹಕ್ಕೆ ವಿಶ್ರಾಂತಿಯು ಅವಶ್ಯವೆಂದು ತೋರಿರಬೇಕು. ಅವರು ನಾನು ಮೋಟಗಾನಹಳ್ಳಿ ರಾಮಶಾಸ್ತ್ರಿಗಳ ಮನೆಯಲ್ಲಿರುವಾಗಲೆ ಬಂದರೋ ಅಥವಾ ಗೋಲ್ಕೊಂಡಹೌಸ್ ಎಂಬ ಮನೆಗೆ ಹೋದ ಮೇಲೆ ಬಂದರೋ ತಿಳಿಯದು. ಅಂತೂ ಅವರ ಮೇಲೂ ಈ ಕಾಲಕ್ಕೆ ಮಾಂಡೂಕ್ಯದ ಪ್ರಭಾವವು ಇತ್ತು. ಅವರು ನನ್ನ ಕೈಬರವಣಿಗೆಯ ಪುಸ್ತಕವನ್ನು ಓದುವದು, ಆಗಾಗ್ಗೆ ಪೂರ್ವಪಕ್ಷವನ್ನು ಮಾಡಿ ಸಮಾಧಾನವನ್ನು ಪಡೆಯುವದು ಹೀಗೆ ಮಾಡಿದ್ದಲ್ಲದೆ ಆ ಪುಸ್ತಕವನ್ನು ಅಚ್ಚಿಗೆ ಸಿದ್ಧಪಡಿಸುವದು, ಪ್ರೂಫುಗಳನ್ನು ತಿದ್ದುವದು - ಮುಂತಾದ ಕಾರ್ಯದಲ್ಲಿ ನನಗೆ ತುಂಬ ನೆರವಾದರು.

ಗೋಲ್ಕೊಂಡಹೌಸಿಗೆ ಹೋದಮೇಲಂತೂ ನಾನೂ ಅವರು, ಕೆಲವು ತಿಂಗಳು ಒಟ್ಟಿಗೇ ಇರುತ್ತಿದ್ದೆವು. ರಾತ್ರೆಯಲ್ಲಿ ಮಲಗುವಾಗಲೂ ಅವಸ್ಥಾತ್ರಯದ ವಿಚಾರವನ್ನೇ ಮಾಡುತ್ತಿದ್ದೆವು. ನಾನು ಬರೆದಿದ್ದ 'ವೇದಾಂತಪ್ರಕ್ರಿಯಾ ರಹಸ್ಯ'ವೆಂಬ ಸಂಸ್ಕೃತ ಗ್ರಂಥವನ್ನು ವೇದಾಂತವಿಚಾರದ ಗುಟ್ಟು ಎಂಬ ಹೆಸರಿನಿಂದ ಅವರು ಕನ್ನಡಿಸಿದ್ದು ಆ ಮನೆಯಲ್ಲಿದ್ದಾಗ. ಗೋಂದಾವಳಿಯ ಮಹಾರಾಜ-ರಲ್ಲಿಯೂ ಮಹಾಭಾಗವತರಲ್ಲಿಯೂ ಅವರಿಟ್ಟಿದ್ದ ಅಸೀಮಭಕ್ತಿಯನ್ನು ಅವರು ಆಗ್ಗೆ ಸಂಪಾದಿಸಿ ಪ್ರಕಟಿಸಿದ್ದ 'ಪರಮಾರ್ಥ'ವೆಂಬ ಪತ್ರಿಕೆಯಲ್ಲಿ ಕಾಣಬೇಕು 'ಗುರುಸ್ತುತಿ ಕುಸುಮಾಂಜಲಿ' (1914) ಎಂಬ ಅವರ ಗ್ರಂಥದಿಂದ ಊಹಿಸಬೇಕು. ಅವಸ್ಥಾತ್ರಯವಿಚಾರದಿಂದ ಅವರು ಪರವಶರಾದ ಕಾಲದ ಸ್ಥಿತಿಯನ್ನು 'ವೇದಾಂತವಿಚಾರದ ಗುಟ್ಟು' ಸೂಚಿಸುವದೆನ್ನಬಹುದು. 'ಈ ಆಶಯಗಳೆಲ್ಲ ನನಗೆ

ಹೊಸಹೊಸ ಸಂಗತಿಗಳಂತೆ ನನ್ನ ಮನಸ್ಸಿನ ಮೇಲೆ ಬಹುವಿಲಕ್ಷಣವಾದ ಪರಿಣಾಮವನ್ನುಂಟುಮಾಡಿದವು' ಎಂದು ಸಿದ್ಧಾರ್ಥ ಶ್ರಾವಣದಲ್ಲಿ ಬರೆದ ಆ ಪುಸ್ತಕದ ಪೀಠಿಕೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಅವರು 'ಭರತನ ಬಂಧು ಪ್ರೇಮ' ಎಂಬ ಗ್ರಂಥದ ಎರಡನೆಯ ಸಂಸ್ಕರಣವನ್ನು ಈಗಲೇ ಮಾಡಿದ್ದು ; ಆ ಗ್ರಂಥದಲ್ಲಿ ಕೆಲವು ಸ್ವಪ್ನದ ವಿಚಾರದಲ್ಲಿ ಕೆಲವು ವಿಚಾರಗಳನ್ನು ಸೇರಿಸಿರುವದನ್ನು ವಾಚಕರು ಕಾಣಬಹುದು. 'ಮಹಾಭಾಗವತರೇಕೆ ಅವರ ಉಪನ್ಯಾಸಗಳಲ್ಲಿ ಅವಸ್ಥಾತ್ರಯ ವಿಚಾರವನ್ನು ಹೇಳಲೇ ಇಲ್ಲ ?' ಎಂದು ಒಮ್ಮೆ ಅವರು ನನ್ನನ್ನು ಪ್ರಶ್ನಿಸಿದ್ದರು. 'ಭಕ್ತಿವಿಚಾರಕ್ಕೆ ಅದರ ಗೊಡವೆಯಿಲ್ಲವಲ್ಲ' ಎಂದು ನಾನು ಉತ್ತರವನ್ನು ಕೊಟ್ಟಿದ್ದೆನು. ಮುಂದೆ ಕೆಲವು ತಿಂಗಳುಗಳಲ್ಲಿಯೇ ಸೂರಪ್ಪನೆಂಬವರು ಅವರಲ್ಲಿಗೆ ಬಂದು 'ಯಾವ ಉಪನಿಷತ್ತನ್ನು ಪ್ರಾರಂಭಮಾಡೋಣ ?' ಎಂದು ಕೇಳಿದ್ದಕ್ಕೆ 'ಮಿಕ್ಕದ್ದೆಲ್ಲ ತಲೆಹರಟೆ ! ಮಾಂಡೂಕ್ಯವನ್ನು ಮುಖ್ಯವಾಗಿ ಓದಿರಿ !'' ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರಂತೆ. ಇದನ್ನು ಈಚೆಗೆ ಪರಮಾರ್ಥದ ಸಂಪಾದಕತ್ವವನ್ನು ವಹಿಸಿದ್ದ ಸಾಲಿಗ್ರಾಮದ ನಾರಾಯಣಶಾಸ್ತ್ರಿಗಳು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಮುಂಚೆಯೇ ಅವರು ಚಿದಂಬರಯ್ಯನವರ ಜೀವನ್ಮುಕ್ತಿವಿವೇಕವನ್ನೂ ನನ್ನ ನಾರದಭಕ್ತಿಸೂತ್ರವನ್ನೂ ಅದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದರು ; ಆದರೆ ಗುಟ್ಟನ್ನು ಅವರು ಕಾಡು ಕಗ್ಗವಾಗಿದೆ, ನಮ್ಮ ವಾಚಕರಿಗೆ ಹಿಡಿಸುವದಿಲ್ಲ ಎಂದು ಹಳಿದು ಒಂದು ಕಾಗದ ಬರೆದಿದ್ದರು. ಅಂತೂ ಹೀಗಿತ್ತು ಆಗಿನ ನಮ್ಮಗಳ ವಿಚಾರಧಾರೆ !

## ಮೂಲಾವಿದ್ಯಾನಿರಾಸ:

ಈಗ ನಾನು ಮೂಲಾವಿದ್ಯಾನಿರಾಸ ಗ್ರಂಥದ ವಿಚಾರವನ್ನು ಮುಂದುವರಿಸಿದ್ದೆನು. ಮೋಟಗಾನಹಳ್ಳಿಯ ರಾಮಶೇಷಶಾಸ್ತ್ರಿಗಳು ನಾರ್ಮಲ್ ಸ್ಕೂಲಿನಲ್ಲಿದ್ದಾಗ ಅವರ ಸ್ನೇಹವು ನನಗೆ ಲಭಿಸಿತೆಂದು ಹೇಳಿದ್ದೆನಷ್ಟೆ ಅವರು ಕೃ.ಸ್ವಾ.ಅಯ್ಯರವರ ಗುರುಸ್ಥಾನದಲ್ಲಿದ್ದ ಶಂಕರಶಾಸ್ತ್ರಿಗಳ ತಮ್ಮಂದಿರು. ಹಿಂದೆ ಅಣ್ಣ ತಮ್ಮಂದಿರಿಬ್ಬರೂ ಮಂಡಿಪೇಟೆಯಲ್ಲಿ ರಾಮಾಯಣವನ್ನು ಜನರಿಗೆ ಶ್ರವಣಮಾಡಿಸಿದ್ದರಂತೆ. ರಾಮಶಾಸ್ತ್ರಿಗಳ ಸುಶ್ರಾವ್ಯವಾದ ಕಂಠದಿಂದ ಶ್ಲೋಕಗಳ ಹಾಡುಗಾರಿಕೆ, ಶಂಕರಶಾಸ್ತ್ರಿಗಳ ಅರ್ಥಪ್ರವಚನ - ಇವೆರಡೂ ಜನರನ್ನು ಮುಗ್ಧಗೊಳಿಸಿಬಿಟ್ಟಿದ್ದವಂತೆ. ಲೆಕ್ಕವಿಲ್ಲದಷ್ಟು ಜನರು ಶ್ರವಣಕ್ಕೆ ಬರುತ್ತಿದ್ದರಂತೆ. ಲವಕುಶರಂತೆ ರಾಮಾಯಣ ಶ್ರವಣ ಮಾಡಿಸಿದ ಆ ಅಣ್ಣತಮ್ಮಂದಿರುಗಳಿಬ್ಬರು ಚಾಮರಾಜಪೇಟೆಯ ಒಂದೇ ಕಡೆಯಲ್ಲಿ ಅವಳಿ ಮನೆಯನ್ನು ಕಟ್ಟಿಕೊಂಡಿದ್ದರು.

ಅವರ ಮನೆಗಳು ಎರಡೂ ಒಂದೇ ಸಮನೆಯಿದ್ದವು ; ಎಲ್ಲಾ ಬಗೆಯಿಂದಲೂ ಒಂದೇ ಆಕಾರದ ಕೋಣೆಗಳಿಂದ ಕೂಡಿದ್ದವು. ನಾನು ವಾಸವಾಗಿದ್ದಾಗ ಇಬ್ಬರು ಹಿತ್ತಲುಗಳ ನಡುವೆ ಗೋಡೆಯಿರಲಿಲ್ಲ ; ಎಲ್ಲವೂ ಒಂದೇ ಹಿತ್ತಲಾಗಿತ್ತು. ರಾಮಶೇಷಶಾಸ್ತ್ರಿಗಳು ಸ್ಕೂಲಿನಲ್ಲಿದ್ದಾಗ ಒಂದು ದಿನ ಪ್ರಸ್ತಾವಕ್ರಮದಿಂದ ಗುರುಜ್ಞಾನವಾಸಿಷ್ಠವೆಂಬ ಒಂದು ಗ್ರಂಥದ ಹೆಸರನ್ನು ಎತ್ತಿದ್ದರು. ಅವರು ಒಂದು ದಿನ ಅದನ್ನು ಪಾರಾಯಣ ಮಾಡುತ್ತಿದ್ದದ್ದನ್ನು ಕೇಳಿ ಕುತೂಹಲದಿಂದ ಹೋಗಿ ಆ ಪುಸ್ತಕವನ್ನು ತೆರೆದು ನೋಡಿದರೆ ನನ್ನ ಕಣ್ಣಿಗೆ ತಟ್ಟನೆ ಈ ಶ್ಲೋಕಗಳು ಬಿದ್ದವು. 'ಅದ್ವೈತಿಭಿರ್ದ್ವೈತಿಭಿಶ್ಚ ವಿಶಿಷ್ಟಾದ್ವೈತಿಭಿಶ್ಚ ಯಾ । ಯದ್ಯತ್ಪ್ರಣೀತಂ ಭಾಷ್ಯಾದಿ ತತ್ತತ್ಸರ್ವಮಸಂಗತಮ್ ॥ ಅಸ್ಮದೀಯೈರ್ಬುಧಶ್ರೇಷ್ಠೈರ್ದ್ವೈತಾ-ದ್ವೈತವಾದಿಭಿಃ । ಯದ್ಯತ್ಪ್ರಣೀತಂ ಭಾಷ್ಯಾದಿ ತತ್ತತ್ಸರ್ವಂ ಹಿ ಸಂಗತಮ್ ॥' ಅದ್ವೈತಿಗಳೂ ದ್ವೈತಿಗಳೂ ವಿಶಿಷ್ಟಾದ್ವೈತಿಗಳೂ ಭಾಷ್ಯವೇ ಮುಂತಾಗಿ ಯಾವಯಾವದನ್ನು ರಚಿಸಿರುವರೋ ಅದೆಲ್ಲವೂ ಅಸಂಗತವು ; ನಮ್ಮವರಾದ ಬುಧಶ್ರೇಷ್ಠರಾದ ದ್ವೈತಾದ್ವೈತವಾದಿಗಳು ಯಾವ ಭಾಷ್ಯವೇ ಮುಂತಾಗಿ ಬರೆದರೋ ಅದೆಲ್ಲವೂ ಸಂಗತವು' ಎಂದು ಶ್ಲೋಕದ ಅರ್ಥ ! ಇದು ದಕ್ಷಿಣಾಮೂರ್ತಿಯು ವಸಿಷ್ಠನಿಗೆ ಹೇಳಿದನೆಂದು ಬರೆದ ಪುರಾಣ ! ಗ್ರಂಥಕರ್ತನ ದಿಟ್ಟತನವನ್ನು ನೋಡಿ ಬೆರಗಾದೆನು. ವಿಶಿಷ್ಟಾದ್ವೈತಿಗಳ ಮತ್ತು ದ್ವೈತಿಗಳ ವಾಖ್ಯಾನಗಳು ಹುಟ್ಟಿದ ಮೇಲೆ ಬರೆದ ಗ್ರಂಥವೆಂದು ಸ್ಪಷ್ಟವಾಯಿತು. ಅದರೊಳಗೆ ವಿವರ್ತವಾದ, ಅರೂಪಬ್ರಹ್ಮವಾದ, ನಿತ್ಯಸಿದ್ಧಾದ್ವೈತವಾದ - ಇವೇ ಮುಂತಾದವುಗಳನ್ನು ನಿಂದಿಸಿರುವದಲ್ಲದೇ ವಿಶೇಷವಾಗಿ ಸುಷುಪ್ತಿಯಲ್ಲಿ ಅವಿದ್ಯೆ ಇಲ್ಲವೆಂಬ ಮತವನ್ನು ಬಹಳ ಕಡೆಗಳಲ್ಲಿ ಖಂಡನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈಚೆಗೆ ಬಂದಿರುವ ವ್ಯಾಖ್ಯಾನಕಾರರು ಸುಷುಪ್ತ್ಯವಿದ್ಯಾವಾದವನ್ನು ಸ್ವೀಕರಿಸಿದ್ದಕ್ಕೆ ವಿವರಣಾದಿಗಳನ್ನು ಅನುಸರಿಸಿದ್ದೇ ಅಲ್ಲದೆ ಗುರುಜ್ಞಾನ ವಾಸಿಷ್ಠದಂತ ಗ್ರಂಥಗಳಿಗೆ ಅಂಜಿಕೊಂಡದ್ದು ಕಾರಣವಾಗಿರಬೇಕೆಂದು ನನಗೆ ಕಡಾ ಖಂಡಿತವಾಗಿ ನಿಶ್ಚಯವಾಯಿತು. ನಾನು ಬರೆಯುತ್ತಿದ್ದ ಮೂಲಾವಿದ್ಯಾನಿರಾಸಕ್ಕೆ ಈ ವಿಷಯವನ್ನು ಸೇರಿಸಿಕೊಂಡೆನು.

ಗೋಲ್ಕೊಂಡಹೌಸಿಗೆ ಬಂದ ಮೇಲೆ ಮೂಲಾವಿದ್ಯಾನಿರಾಸದ ಬರವಣಿಗೆ-ಯಲ್ಲಿ ನಾನು ಭಾವದಿಂದ ಮುಳುಗಿಬಿಟ್ಟೆನು. ಸ್ಕೂಲಿನಲ್ಲಿ ಆ ವಿಷಯದ ಚರ್ಚೆಯೇ. ಗ್ರಂಥದ ಭಾಗವನ್ನು ಓದುವಾಗ ಶಬ್ದಪ್ರಯೋಗದಲ್ಲಿ

ಯಾವುದಾದರೂ ಸ್ಖಾಲಿತ್ಯಗಳು ಕಂಡುಬಂದರೆ ನಂಜುಂಡಶಾಸ್ತ್ರಿಗಳು. ನನಗೆ ತಿಳಿಸುತ್ತಿದ್ದರು. ಟ್ರೈನಿಂಗ್ ಸೆಕ್ಷನ್ನಿನಲ್ಲಿ ಮಾಸ್ಟರಾಗಿದ್ದ ಕೃ. ಅಯ್ಯಂಗಾರ್ ಎಂಬವರೊಡನೆ ಆಗಾಗ್ಗೆ ವೇದಾಂತಚರ್ಚೆ ಮಾಡುತ್ತಿದ್ದುದು ಉಂಟು ; ಅವರು ನನಗೆ ಶುಕಭಾಷ್ಯೆಯೆಂಬ ಒಂದು ಪುಸ್ತಕವನ್ನು ಕೊಟ್ಟರು. ಆದರೆ ಬಲುಮಟ್ಟಿಗೆ ನನಗೆ ಬಿಡುವು ಸಿಕ್ಕಿದಾಗಲೆಲ್ಲ ಮೂಲಾವಿದ್ಯಾನಿರಾಸಕ್ಕೆ ವಿಷಯಸಂಗ್ರಹ-ಮಾಡುವದರಲ್ಲಿಯೇ ಕಾಲವು ಕಳೆದು ಹೋಗುತ್ತಿತ್ತು. ಸಂಸ್ಕೃತಕಾಲೇಜಿನಲ್ಲಿ ನನಗೆ ದೊರೆತ ಬೃಹದಾರಣ್ಯಕವಾರ್ತಿಕದಿಂದ ನನಗೆ ಬಹಳ ಪ್ರಯೋಜನವಾಯಿತು. ಆ ಕಾಲೇಜಿನಲ್ಲಿ ರೈಟರಾಗಿದ್ದ ಶಿವರಾಮಯ್ಯನವರು - ಹೊಸದುರ್ಗದ ಎ.ವಿ. ಸ್ಕೂಲಿನಿಂದ ಹೇಳದೆ ಕೇಳದೆ ಹೋಗಿದ್ದ ಶಿವರಾಮಯ್ಯನವರು - ಇವರೇ ಕಾಶೀ-ಯಾತ್ರೆಯನ್ನು ಮುಗಿಸಿಕೊಂಡು ಹಿಂತಿರುಗಿದ ಮೇಲೆ ಸರಕಾರದವರು ಅವರ ತಪ್ಪನ್ನು ಮನ್ನಿಸಿ ಹೇಗೋ ಮತ್ತೆ ಅವರಿಗೆ ಕೆಲಸವನ್ನು ಕೊಟ್ಟು ಬೆಂಗಳೂರಿನಲ್ಲಿ ನಿಲ್ಲಿಸಿದ್ದರು. ಅವರು ವಾರ್ತಿಕದ ಮೂರು ಸಂಪುಟಗಳನ್ನು ನನಗೆ ಕೊಟ್ಟು ಇದನ್ನು ಅಧ್ಯಕ್ಷರ ಅಪ್ಪಣೆ ಇಲ್ಲದೆ ನಿಮಗೆ ಕೊಟ್ಟಿದ್ದೇನೆ ; ಆದರೆ ಮೂರೇ ದಿವಸಗಳು ಇಟ್ಟುಕೊಂಡಿದ್ದು ವಾಪಸ್ಸು ಮಾಡಬೇಕು - ಎಂದು ಕಟ್ಟುನಿಟ್ಟಾಗಿ ಹೇಳಿಕೊಟ್ಟಿದ್ದರು. ನಾನು ಆ ವಾರ್ತಿಕವನ್ನು ಮನೆಯಲ್ಲಿಯೂ ಸ್ಕೂಲಿನಲ್ಲಿ ಬಿಡುವಾದಾಗಲೂ ಓದಿ ಅಲ್ಲಲ್ಲಿಗೆ ಬೇಕಾದ ವಾರ್ತಿಕಗಳನ್ನು ಗುರುತುಮಾಡಿಕೊಂಡು ಅವರು ಹೇಳಿದ್ದಂತೆ ಮೂರೇ ದಿನಗಳಲ್ಲಿ ಹಿಂತಿರುಗಿಸಿದೆನು. ಕೊನೆಯ ದಿನ ಹಗಲು ರಾತ್ರಿ ಎಲ್ಲವೂ ಬರೆದು ಬೆಳಗಿನ ಜಾವದಲ್ಲಿ ಮಲಗಿಕೊಂಡೆನು. 'ಶಿವರಾಮಯ್ಯನವರು ಬಂದು ಕೇಳಿದರೆ ಈ ಪುಸ್ತಕಗಳನ್ನು ಕೊಡಿ' ಎಂದು ಹೇಳಿ ಮಲಗಿಕೊಂಡವನು ಬಹಳ ಹೊತ್ತಿನ ಮೇಲೆ ಎಚ್ಚೆತ್ತೆನು. (ನಾನು ಆಗ ಬರೆದುಕೊಂಡ ಶ್ಲೋಕಗಳ ಕೈಪ್ರತಿ ಈಗಲೂ ನನ್ನಲ್ಲಿವೆ; ಈಚೆಗೆ ಅಚ್ಚಾದ ಪುಸ್ತಕವನ್ನು ಕೊಂಡುಕೊಂಡಿದ್ದೇನೆ. ಆದರೆ ಪ್ರಕಟಿತವಾದ ಮೂಲಾವಿದ್ಯಾನಿರಾಸಕ್ಕೆ ಬರೆದುಕೊಂಡ ಕೈಪ್ರತಿಯೇ ಆಧಾರ).

ಆಗ್ಗೆ ಮೂಲಾವಿದ್ಯಾಲೇಖನದಲ್ಲಿ ನನಗೆ ಎಂಥ ಸಮಾಧಿ ಬಂದಿತ್ತೆಂಬುದಕ್ಕೆ ಎರಡು ಉದಾರಹಣೆಗಳನ್ನು ಕೊಡಬಹುದು. ಸುಪ್ರಸಿದ್ಧರಾದ ಕಣಕಟ್ಟೆ ರಾಮಣ್ಣ-ನವರು ವರ್ಷವರ್ಷವೂ ನಡೆಯಿಸುತ್ತಿದ್ದ ರಾಮಭಜನೆಗೆಂದು ಜನರಿಂದ ಹಣ ವಸೂಲು ಮಾಡುವದಕ್ಕಾಗಿ ಬಂದವರು ನಮ್ಮ ಮನೆಯಲ್ಲಿ ಇಳಿದುಕೊಂಡಿದ್ದರು. ಅವರು ಸಾಯಂಕಾಲ ಸಂಧ್ಯಾವಂದನೆ ಫಲಾಹಾರಕ್ಕೆ ಎದ್ದಾಗ ನಾನು ಅವರೊಡನೆ ಏಳಲಿಲ್ಲ ; ರಾತ್ರಿ ಅವರು ಮಲಗುವಾಗಲು ಸಂಧ್ಯಾವಂದನೆ ಮುಗಿಸಿ ನಾನು ಬರೆಯುತ್ತಿದ್ದೆನು. ಆಮೇಲೆ ಬರೆಯುತ್ತಲೇ ಇದ್ದು ನಡುವೆ ಅವರು ಜಲಶಂಕೆಗೆ ಎದ್ದು

ನನ್ನ ಕೋಣೆಯಲ್ಲಿ ಇಣುಕಿ ನೋಡಿದಾಗ ನನ್ನ ಹರಳೆಣ್ಣೆ ದೀಪವು ಮಿಣುಗುಟ್ಟುತ್ತಲೇ ಇದ್ದದ್ದನ್ನು ಕಂಡು 'ಇನ್ನೂ ಮಲಗಿಲ್ಲವೇ ?' ಎಂದು ತಾವು ಮಲಗಿಕೊಂಡರು. ಬೆಳಗ್ಗೆ ಅವರು ಎದ್ದು ಮತ್ತೆ ಕೋಣೆಯಲ್ಲಿ ಇಣುಕಿನೋಡಿ 'ಆಗಲೇ ಎದ್ದು ಬರೆಯುತ್ತಿದ್ದೀಯಲ್ಲ!' ಎಂದರು. ಆಗ ನನಗೆ ರಾತ್ರೆಯೆಲ್ಲ ಬರೆಯುತ್ತಿದ್ದೆನೆಂಬುದರ ಅರಿವಾಯಿತು !. ಇನ್ನೊಮ್ಮೆ ಮಾಗಳದ ರಂಗರಾಯರು ನಮ್ಮ ಮನೆಯಲ್ಲಿ ಒಂದು ದಿನ ಉಳಿದುಕೊಂಡಿದ್ದರು. ಅವರು ನಾನು ಯಾವಾಗಲೂ ಬರೆಯುತ್ತಿದ್ದದ್ದನ್ನು ನೋಡಿ 'ನಿಮ್ಮ ಆರೋಗ್ಯ ಕೆಡುತ್ತದೆ, ಜಾಗ್ರತೆ !' ಎಂದರು. ಊಟಕ್ಕೆಂದು ನಾನು ಬನೀನು ಬಿಚ್ಚಿದಾಗ ನನ್ನ ಎದೆಗುಂಡಿಗೆ-ಯಲ್ಲಿ ಪಕ್ಕೆಲುಬುಗಳು ಎದ್ದುಕೊಂಡಿರುವದನ್ನು ಕಂಡು 'ಇದೇನ್ರೀ ? ನಿಮ್ಮ ಆರೋಗ್ಯ ಸ್ಥಿತಿ ? ಹೋಗಿ ಡಾಕ್ಟರಲ್ಲಿ ವಿಚಾರಿಸಿಕೊಳ್ಳಿರಿ, ನೀವು ಹೀಗೆ ಒಂದೇ ಆಸನದಲ್ಲಿ ಕುಳಿತುಕೊಂಡು ಬರೆಯುತ್ತಿರುವದರಿಂದಲೇ ಹೀಗೆ ಆಗಿರಬೇಕು. ನಿಮ್ಮ ರಕ್ತಪುಷ್ಟಿ ಬಹಳ ಕಡಿಮೆಯಾಗಿರುವಂತಿದೆ. ಮರೆಯದೆ ವಿಚಾರಿಸಿಕೊಳ್ಳಿ !' ಎಂದರು. ಆದರೂ ಅವರ ಮಾತಿನಿಂದ ಯಾವ ಗಾಬರಿಯಾಗಲಿಲ್ಲ. ನಾನು ಎಂದಿನಂತೆ ಬರೆಯುವದರಲ್ಲಿ ಮುಳುಗಿಬಿಟ್ಟಿದ್ದೆನು. ನಿಜವಾಗಿಯೂ ನನ್ನ ಆರೋಗ್ಯಸ್ಥಿತಿಯೂ ಕೆಟ್ಟಿತ್ತೆಂಬುದು ಮುಂದೆ ಗೊತ್ತಾಯಿತು.

## ಬಸಪ್ಪನವರಲ್ಲಿ ಮಾತುಕಥೆಗಳು :

ಪತ್ನೀ ವಿಯೋಗವಾದ ಮೇಲೆ ದಾಸಪ್ಪನವರ ಮನೆಗೆ ಹೋಗಿ ಬರುವದು ಬಹಳ ಕಡಿಮೆಯಾಯಿತು. ರಾಮಶೇಷಶಾಸ್ತ್ರಿಗಳು ಮನೆಯಲ್ಲಿದ್ದಾಗ ಒಂದು ದಿನಹೋಗಿದ್ದೆ. ಅವರು ನಡೆದ ಸಂಗತಿಯನ್ನೆಲ್ಲ ತಿಳಿದು ಬಹಳ ವ್ಯಥೆಪಟ್ಟರು. ನಿಮಗೆ ಅನುಕೂಲವಾದಾಗ ಬನ್ನಿ, ಕ್ಷಿಪ್ರವಾಗಿ ಬರಬೇಕಾದ್ದದಿಲ್ಲ ಎಂದರು. ಇನ್ನೊಂದು ದಿನ ವಾಕ್ಯರಚನಾಕ್ರಮ ಪ್ರಿಂಟಾದದ್ದನ್ನು ಅವರಿಗೆ ಸಮರ್ಪಿಸಿದೆನು. ನೋಡಿ ಸಂತೋಷಪಟ್ಟಿದ್ದರು. ಒಮ್ಮೆ ಶೃಂಗೇರಿ ನ್ಯಾಷನಲ್ ಸ್ಕೂಲಿಗೆ 75 ರೂ. ತಲುಬಿನ ಮೇಲೆ ಹೋಗುತ್ತಿರಾ ಎಂದು ಕೇಳಿದರು ; ಮೊದಲು ಒಪ್ಪಿ ಆಮೇಲೆ ಚಿದಂಬರಯ್ಯನವರ ಬುದ್ಧಿವಾದದಿಂದ ಬೇಡವೆಂದೆ ? ಆ ಸ್ಕೂಲಿನವರು ತಮಗೆ 'ಗ್ರಾಜ್ಯುಯೇಟ್ ಬೇಕೆಂದರೂ ನನ್ನನ್ನೇ ಹೊಗಳಿ ಶಿಫಾರಸ್ಸು ಮಾಡಿದ್ದರಂತೆ. ತಮ್ಮ ಕಡೆಯ ಹೆಣ್ಣನ್ನು ಕೊಡುತ್ತಾರೆಂದು' ಪ್ರಸ್ತಾಪಿಸಿದರು. ನಾನು ಮದುವೆಯಾಗುವ ದಿಲ್ಲವೆಂದೆ. ಹೇಗಾದರೂ ಅವರ ಅಭಿಮಾನವು ನನ್ನ ಮೇಲೆ ಉಳಿದುಕೊಂಡಿತ್ತು ಎನ್ನುವದಕ್ಕೆ ಬಹಳ ಗುರುತುಗಳಿದ್ದವು.

## ಗ್ರಂಥ ಪ್ರಕಟಣೆಗೆ ಯಾಚನೆ :

ಮೂಲಾವಿದ್ಯಾನಿರಾಸವನ್ನು ಬರೆಯುವ ನನಗೆ ಉತ್ಸಾಹವೆ ಇದ್ದಿತ್ತಾದರೂ ಅದನ್ನು ಪ್ರಕಟಿಸುವದಕ್ಕೆ ಮುಂಚೆ ಮುದ್ರಣ ವ್ಯಯಕ್ಕೆ ಏನು ಮಾಡಬೇಕೆಂಬುದರ ಕಡೆಗೆ ಲಕ್ಷ್ಯವಿಟ್ಟಾಗ ಆಶಾಭಂಗವೇ ಆಯಿತೆನ್ನಬಹುದು. ನನ್ನ ಪ್ರಥಮ ಪ್ರಯತ್ನವು ಯಾವ ಫಲವನ್ನು ಕೊಟ್ಟಿತ್ತೆಂಬುದನ್ನು ಇಲ್ಲಿ ಸ್ವಲ್ಪ ವಿವರಿಸುವದು ಸಪ್ರಯೋಜನ ವೆಂದು ತೋರುತ್ತದೆ. ನಾನು ಶರೀರ ಸ್ವಾಸ್ಥ್ಯಕ್ಕೆ ಸಪ್ಪೆ ಔಷಧಿಯನ್ನು ತೆಗೆದುಕೊಳ್ಳ ಬೇಕೆಂದು ಯಳ್ಳಂಬಳಸೆಗೆ ಹೋದೆನು. ಆ ಚಿಕಿತ್ಸೆಯು ಮುಗಿಯುವ ಹೊತ್ತಿಗೆ ಬ್ರ॥ಶ್ರೀ॥ ವಿಠ್ಠಲಶಾಸ್ತ್ರಿಗಳ ಎರಡನೆಯ ಮದುವೆಯು ಸಕ್ರೇಪಟ್ಟಣದಲ್ಲಿ ಆಗಬೇಕೆಂದು ನಿಷ್ಕರ್ಷೆಯಾಗಿತ್ತು. ಅವರ ಪ್ರಾರ್ಥನೆಯಂತೆ ನಾನೂ ಅಲ್ಲಿಗೆ ಹೋದೆ. ಮದುವೆಯ ಕಾರ್ಯಕಲಾಪಗಳ ನಡುವೆ ನನ್ನ ಮತ್ತು ವಿಠ್ಠಲಶಾಸ್ತ್ರಿಗಳ ಉಪನ್ಯಾಸಗಳು ಆದವು. ಶಾಸ್ತ್ರಿಗಳು ನೆರೆದಿದ್ದ ಮಹಾಜನರುಗಳಿಗೆ ನಾನು ಹೊಸದಾಗಿ ಬರೆದಿರುವ ಮೂಲಾವಿದ್ಯಾನಿರಾಸದ ವೃತ್ತಾಂತವನ್ನು ತಿಳಿಸಿ ಅದಕ್ಕೆ ಧನಸಹಾಯವನ್ನು ಮಾಡಬೇಕೆಂದು ಸೂಚಿಸಿದರು.ಆಗ ಯಥೋಚಿತ ಸಹಾಯ ದ್ರವ್ಯವನ್ನು ಕೊಟ್ಟವರ ಹೆಸರನ್ನು ಈಗ ಅಚ್ಚಾಗಿರುವ ಮೂಲಾವಿದ್ಯಾನಿರಾಸ ಗ್ರಂಥದಲ್ಲಿ ಪ್ರಕಟಿಸಿದ್ದು ಕಾಣಿಸುತ್ತದೆ. ಆ ಕಾಲಕ್ಕೆ ತಾವೂ ಸಹಾಯದ್ರವ್ಯವನ್ನು ಕೊಟ್ಟು ನಮ್ಮೂರಿನ ಪುರಾಣಿಕ ರಂಗಾಭಟ್ಟರು ನನ್ನಲ್ಲಿ ಚಿಕ್ಕಮಗಳೂರಿನಲ್ಲಿ ತಮ್ಮ ಪರಿಚಯಸ್ಥರಾದ ಒಬ್ಬ ಲಾಯರ ಮನೆಗೆ ಕರೆದುಕೊಂಡು ಹೋಗಿದ್ದರು. 'ವೇದಾಂತ'ದಲ್ಲಿ ಅಭಿಮಾನವುಳ್ಳವರು. ಅವರು, ರಾ.ರಾಯರು ಗ್ರಂಥದ ವಿಚಾರವನ್ನು ನನ್ನಿಂದ ತಿಳಿದುಕೊಂಡು 'ಈ ಗ್ರಂಥವನ್ನು ಬರೆಯುವದಕ್ಕೆ ನಿಮಗೆ ಎಂಥ ಹೆಮ್ಮೆಯಿರಬೇಕು ! ಹಿಂದಿನ ವಿದ್ಯಾರಣ್ಯರೇ ಮೊದಲಾದವರು ಬರೆದ ಮೇಲೂ ಈ ಗ್ರಂಥದ ಆವಶ್ಯಕತೆ ಏನು ಇತ್ತು?' ಎಂದು ಆಕ್ಷೇಪಿಸಿದರು. 'ಗ್ರಂಥವನ್ನು ತಾವು ಸ್ವಲ್ಪ ಒಳಹೊಕ್ಕು ನೋಡಿ ತಮ್ಮ ಅಭಿಪ್ರಾಯವನ್ನು ಕೊಡಿ' ಎಂದು ನಾನು ಹೇಳಿದ್ದನ್ನು ಕಿವಿಗೆ ಹಾಕಿಕೊಳ್ಳದೇ 'ನನಗೇನು ಅದರ ಅವಶ್ಯಕತೆ ಕಾಣುವುದೇ ಇಲ್ಲ' ಎಂದು ತಮ್ಮ ಹಠವನ್ನೇ ಹಿಡಿದರು. ಈ ಗ್ರಂಥವು ಅಚ್ಚಾಗಬೇಕಾದರೆ ಜನರು ಇದನ್ನು ಹೇಗೆ ಸ್ವಾಗತಿಸುವರು, ಅಚ್ಚಾದ ಮೇಲೆ ಇದನ್ನು ವಿದ್ವಾಂಸರು ಹೇಗೆ ಕಂಡಾರು ?' ಎಂಬ ವಿಷಯಕ್ಕೆ ನನಗೆ ಆಗಲೆ ಮನಸ್ಸಿನಲ್ಲಿ ಆಲೋಚನೆ ಉಂಟಾಯಿತು. ನಾನು ಈ ಗ್ರಂಥವನ್ನು ಬರೆದದ್ದು ನಿಜವಾಗಿಯು ಪಾಂಡಿತ್ಯ ಪ್ರದರ್ಶನಕ್ಕೆ ಇರಬಹುದೆ ? ಎಂಬ ಯೋಚನೆಯು ಹತ್ತಿಕೊಂಡಿತು. ಅಚ್ಚಾದ ಮೇಲೆ ಗ್ರಂಥಕ್ಕಾದ ತಿರಸ್ಕಾರಪುರಸ್ಕಾರಗಳನ್ನು ಮುಂದೆ ಮತ್ತೆ ಉಲ್ಲೇಖಿಸುತ್ತೇನೆ.

## ಸೂರಪ್ಪನವರು :

ನಂಜಪ್ಪನವರು ಮೈಸೂರಿಗೆ ಟ್ರೇನಿಂಗ್ ಸ್ಕೂಲಿಗೆ ಹೋಗಿದ್ದವರು ನನಗೊಂದು ಪತ್ರವನ್ನು ಬರೆದು ತಿಪಟೂರಿನಿಂದ ಸೂರಪ್ಪನವರೆಂಬ ಮಹಾಶಯರೊಬ್ಬರು ತಮ್ಮಲ್ಲಿಗೆ ಬರುವವರಿದ್ದಾರೆ. ಅವರು ಭಕ್ತಿಮಾರ್ಗದಲ್ಲಿ ಹೆಚ್ಚಿನ ಅನುಭವವನ್ನು ಪಡೆದು ಈಗ ಜ್ಞಾನದ ಕಡೆಗೆ ತಿರುಗಲಿದ್ದಾರೆ. ಅವರಿಗೆ ತಮ್ಮ ಉಪದೇಶವು ಸಿಕ್ಕಿದರೆ ಅದೇ ಒಂದು ಯೋಗ ! ಎಂದು ಅವರು ತಿಳಿಸಿದ್ದರು. ಸೂರಪ್ಪನವರು ನಮ್ಮ ಮನೆಗೆ ತಮ್ಮ ಸ್ನೇಹಿತರೊಬ್ಬರೊಡನೆ ಬಂದದ್ದು 1919ರಲ್ಲಿರಬೇಕು. ಅವರ ನಗೆ ಮುಖದಿಂದಲೇ ಅವರ ಸಾತ್ತ್ವಿಕತನವು ಹೊರಸೂಸುವಂತಿತ್ತು. ಅವರು ಬೃಂದಾವನಾದಿಗಳಿಗೆ ಹೋಗಿ ರಾಧಾಕೃಷ್ಣರ ವಿಗ್ರಹಗಳನ್ನು ತಂದಿಟ್ಟುಕೊಂಡು ನಿತ್ಯವೂ ಭಜನೆ ಮಾಡುತ್ತಿದಾರೆಂದು ತಿಳಿಯಿತು. ಅಧ್ಯಾತ್ಮರಾಮಾಯಣದಲ್ಲಿ ಅವರಿಗೆ ಆಸಕ್ತಿಯಿದ್ದಂತೆ ಕಂಡಿತು. ಪ್ರಸ್ತಾವಕ್ರಮದಿಂದ ಬೃಂದಾವನದಲ್ಲಿ ಶ್ರೀಕೃಷ್ಣನು ಈಗಲೂ ಪ್ರತ್ಯಕ್ಷವಾಗಿ ರಾಸಲೀಲೆಯನ್ನು ತೋರಿಸುತ್ತಿರುವನು, ಅದನ್ನು ಕಂಡ ಮಹನೀಯರು ಮಾತ್ರ ವಿರಳ - ಎಂದು ಮುಂತಾಗಿ ಆನಂದದ ಕಣ್ಣೀರುಸುರಿಸುತ್ತ ಹೇಳಿದರು. 'ನಾನು, ಅದೇನೂ ವಿಶೇಷವಲ್ಲ, ಆತನು ನಮ್ಮ ಎಲ್ಲಾ ಅವಸ್ಥೆಗಳಲ್ಲಿಯೂ ಭಕ್ತರಿಗೆ ಅವರ ಆತ್ಮರೂಪದಿಂದಲೇ ಪ್ರತ್ಯಕ್ಷನಾಗುತ್ತಾನೆ' ಎಂದೆ. ನನಗೆ 'ಅವಸ್ಥಾತ್ರಯದ ಆವೇಶ. ಅವರು ಅದು ಹೇಗೆ' ಎಂದು ಕೇಳಿದರು, ನನಗೆ ತಿಳಿದದ್ದು ಏನೋ ಹೇಳಿದೆ. ಹೀಗೆ ಎರಡು ಮೂರು ದಿನಗಳು ಬಂದು ಹೋಗುವುದರೊಳಗಾಗಿ ಅವರಿಗೆ ನನ್ನಲ್ಲಿ ಉಪನಿಷದ್ಭಾಷ್ಯದ ಶ್ರವಣವನ್ನು ಮಾಡಬೇಕೆನಿಸಿತು. ಚಿದಂಬರಯ್ಯನವರ ಸೂಚನೆಯಿಂದ ಮಾಂಡೂಕ್ಯೋಪನಿಷತ್ತನ್ನೇ ಆರಿಸಿಕೊಂಡರು. ನವರಾತ್ರೆಯ ರಜದಿನವಾದ್ದರಿಂದ ಮೈಸೂರಿನಿಂದ ನಂಜಪ್ಪನವರೂ ನಮ್ಮನ್ನು ಬಂದು ಸೇರಿದರು.

ನಂಜಪ್ಪನವರು ಅವರ ಹಿಂದಿನ ಜೀವನ ಚರಿತ್ರೆಯ ವಿಷಯವನ್ನು ಸಂಕ್ಷೇಪವಾಗಿ ತಿಳಿಸಿದರು. ಈಚೆಗೆ ತಿಳಿಯಬಂದಿರುವದರಲ್ಲಿ ಅವರು ಕೊರಟಗೆರೆ ಯವರು. ಅಲ್ಲಿಯ ಕಸಬ ಶ್ಯಾನುಭೋಗ ರಾಮಚಂದ್ರಪ್ಪನವರ ಎರಡನೆಯ ಮಕ್ಕಳು. ಇವರು ತಿಪಟೂರಿನ ಆರ್ಯಬಾಲಿಕಾ ಪ್ರೌಢಶಾಲೆಯಲ್ಲಿದ್ದರು. ಏನು ಕಾರಣದಿಂದಲೊ ವಿರಕ್ತರಾಗಿ ಹೆಂಡತಿ ಮಗಳಿಬ್ಬರನ್ನು ತೌರುಮನೆಗೆ ಕಳುಹಿಸಿಕೊಟ್ಟು ತಾವು ಒಂಟಿಯಾಗಿಯೇ ಕಾಲಕ್ಷೇಪವನ್ನು ಮಾಡುತ್ತಿದ್ದರಂತೆ. ಗೋಂದಾವಳಿಯ ಬ್ರಹ್ಮಚೈತನ್ಯ ಮಹಾರಾಜರ ಅನುಗ್ರಹದಿಂದ ಅವರಿಗೆ ಭಜನೆಯಲ್ಲಿ ಆಸಕ್ತಿಯುಂಟಾಯಿತಂತೆ. ಆ ಗುರುವರ್ಯರು 'ಭಜನ ಕರೋ' ಎಂದು ಅಪ್ಪಣೆ

ಮಾಡಿದ ಮಾತ್ರದಿಂದ ಭಜನೆಗೆ ಪ್ರಾರಂಭಿಸಿದವರು ಅವರೇ ಬಂದು ಮೈಮೇಲೆ ಕೈಯಾಡಿಸುವವರೆಗೆ ಹೊರಗಿನ ಭಾವವೇ ಇಲ್ಲದೆ ಭಜನೆ ಮಾಡುತ್ತಿದ್ದರಂತೆ. ಈಚೆಗೆ ಅವರು ಒಂದು ತೋಟದಲ್ಲಿ ಒಂದು ಗುಡಿಸಲಲ್ಲಿ ಇದ್ದುಕೊಂಡು ನರ್ತನಮಾಡುತ್ತಾ ಭಜನೆ ಮಾಡುತ್ತಿದ್ದರಂತೆ. ಭಜನೆಯಿಲ್ಲದ ವೇಳೆ ಯಾರೊಡನೆಯೂ ಮಾತನಾಡದೆ ಧ್ಯಾನದಲ್ಲಿರುತ್ತಿದ್ದರಂತೆ. ಸ್ನಾನಸಂಧ್ಯಾದಿ ಬ್ರಹ್ಮಯಜ್ಞಾದಿಗಳನ್ನು ಮಾಡುವದು - ಗೀತಾ, ಅಧ್ಯಾತ್ಮರಾಮಾಯಣ, ಭಾಗವತ, ಶ್ರೀ ಸಮರ್ಥರಾಮದಾಸರವರ ಮನಾಚೆ ಶ್ಲೋಕ ಮತ್ತು ದಾಸಬೋಧೆ - ಮುಂತಾದ ಗ್ರಂಥಗಳನ್ನು ಪಾರಾಯಣ ಮಾಡುವದು ಹೀಗೆ ಸತ್ಕಾಲಕ್ಷೇಪವನ್ನು ಮಾಡುತ್ತಿದ್ದರಂತೆ. ಅಖಂಡಭಜನೆ, ನವಗ್ರಹಜಪ, ಏಕಾದಶವಾರ ರುದ್ರಾಭಿಷೇಕ, ಸೂರ್ಯನಮಸ್ಕಾರ, ರಾಮಾಯಣಪಾರಾಯಣ, ಮಹಾಸಂತರ್ಪಣೆಯ ಬ್ರಾಹ್ಮಣಭೋಜನ - ಹೀಗೆ ನಾಲ್ಕು ಸಪ್ತಾಹಗಳನ್ನು ತುಮಕೂರು, ಚಿಕ್ಕನಾಯಕನ ಹಳ್ಳಿ, ತಿಪಟೂರು - ಈ ಕಡೆಗಳಲ್ಲಿ ಮಾಡಿದ್ದರು. ಈಗ ನಾಲ್ಕನೆಯ ಸಪ್ತಾಹಕ್ಕೆ ಬೆಂಗಳೂರಿನಲ್ಲಿದ್ದ ಬರಕದ ಶ್ರೀಕಂಠಯ್ಯನವರ ಮನೆಗೆ ರಾಧಾಕೃಷ್ಣ ವಿಗ್ರಹಗಳನ್ನು ತಂದು ಇಟ್ಟುಕೊಂಡಿದ್ದರು. ಅವರೊಡನೆಯೇ ಸೂರಪ್ಪನವರು ಮೊದಲು ನಮ್ಮ ಮನೆಗೆ ಬಂದದ್ದು.

## ಮಾಂಡೂಕ್ಯಭಾಷ್ಯಪಾಠ, ಭಾಗವತ:

ಸೂರಪ್ಪನವರು ಸಂಜೆಯ ಹೊತ್ತಿನಲ್ಲಿ ತಮ್ಮ ಅಣ್ಣನ ಮಗ ಕೃಷ್ಣಪ್ಪನ ಮನೆಗೆ ಹೋಗಿ ಬೆಳಗ್ಗೆ ನಮ್ಮ ಮನೆಗೆ ಬರುತ್ತಿದ್ದರು. ನಾನು ಮನೆಯಲ್ಲಿ ಪ್ರತಿದಿನವೂ ರುದ್ರಾಭಿಷೇಕ, ಸಹಸ್ರನಾಮ, ಭಜನೆ, ಪಾರಾಯಣಾದಿಗಳನ್ನು ಮುಗಿಸಿಕೊಂಡು ಅವರು ಬಂದ ಮೇಲೆ ಭಾಷ್ಯವನ್ನು ಹೇಳಿ ನೈವೇದ್ಯವಾದ ಮೇಲೆ ಎಲ್ಲರೊಡನೆ ಊಟಮಾಡುತ್ತಿದ್ದೆನು. ಸಾಯಂಕಾಲ ಲಲಿತಾಸಹಸ್ರನಾಮಾದಿ ಪೂಜೆಯನ್ನು ಮಾಡುತ್ತಿದ್ದೆವು. ಸೂರಪ್ಪನವರು ಬರಕದ ಶ್ರೀಕಂಠಯ್ಯನವರ ಮನೆಗೆ ಹೋಗಿ ಭಜನಾದಿಗಳನ್ನು ಸಾಗಿಸುತ್ತಲೂ ಇದ್ದರು. ಭಾಷ್ಯದಲ್ಲಿ ಅವರ ಉತ್ಸಾಹವು ಹೇಳತೀರದು. ನಡುನಡುವೆ ಭಾಗವತದ ಪ್ರಸ್ತಾಪವು ಬರುತ್ತಿತ್ತು. ಒಂದು ದಿನ ಅವರು ''ಶ್ರೀಕೃಷ್ಣನು ಸಶರೀರನಾಗಿಯೇ ಪರಂಧಾಮವನ್ನೈದಿದನು'' ಎಂದರು. ಅದಕ್ಕೆ ನಾನು 'ಅದಾಗಲಾರದು; ಭಗವಂತನು ಹಾಗೇಕೆ ಮಾಡಿಯಾನು ?' ಎಂದೆನು. ಕೂಡಲೆ ಅವರು ಭಾಗವತ ಪುಸ್ತಕವನ್ನು ತಂದು ನನ್ನ ಕೈಯಲ್ಲಿಟ್ಟರು. ಅದನ್ನು ತೆಗೆದು ನೋಡುವಲ್ಲಿ 'ಲೋಕಾಭಿರಾಮಾಂ ಸ್ವತನುಂ ಧಾರಣಾಧ್ಯಾನ-ಮಙ್ಗಲಮ್ । ಯೋಗಧಾರಣಯಾಽಽಗ್ನೇಯ್ಯಾ ದಗ್ಧ್ವಾ ಧಾಮಾವಿಶತ್

ಸ್ವಕಮ್॥' ಎಂಬ ಶ್ಲೋಕವಿತ್ತು. ಧಾರಣೆಮಾಡಿ ಧ್ಯಾನಮಾಡುವ ತರದಿಂದ ಮಂಗಲಕರವಾದ ಲೋಕಾಭಿರಾಮವಾದ ತನ್ನ ಶರೀರವನ್ನು ಯೋಗಧಾರಣಾಗ್ನಿ-ಯಿಂದ ಸುಟ್ಟು ಸ್ವಧಾಮವನ್ನು ಸೇರಿದನು - ಎಂದಿತ್ತು. ಆದರೆ ಅವರ ಪುಸ್ತಕದಲ್ಲಿ 'ಆಗ್ನೇಯ್ಯಾ ದಗ್ಧ್ವಾ' ಎಂದು (ಸುಡದೆ ಎಂಬರ್ಥ ಬರುವಂತೆ) ಅಚ್ಚುಮಾಡಿತ್ತು. ಈ ಸಂಶಯದ ಪರಿಹಾರಕ್ಕಾಗಿ ಮುಂದೆ ನೋಡಲು ಈ ಶ್ಲೋಕಗಳಿದ್ದವು, ರಾಜನ್ಪರಸ್ಯ ತನುಭೃಜ್ಜನನಾಪ್ಯಯೇಹಾ ಮಾಯಾವಿಡಂಬನಮವೇಹಿ ಯಥಾ ನಟಸ್ಯ । ಸೃಷ್ಟ್ವಾತ್ಮನೇದಮನುವಿಶ್ಯ ವಿಹೃತ್ಯ ಚಾಂತೇ, ಸಂಹೃತ್ಯ ಚಾತ್ಮಮಹಿಮೋಪರತಃ ಸ ಆಸ್ತೇ ॥ (ರಾಜನೆ, ಆ ಪರಮಾತ್ಮನಿಗೆ ದೇಹಧಾರಣೆ ಮಾಡುವ ಜನನ, ಮರಣ, ವ್ಯಾಪಾರ - ಇದೆಲ್ಲವೂ ನಟನಿಗೆ ಹೇಗೋ ಹಾಗೆ ಮಾಯಾವಿಡಂಬನವೆಂದು ತಿಳಿ. ಇದನ್ನು ತನ್ನಿಂದಲೇ ಸೃಷ್ಟಿಸಿ ಒಳಹೊಕ್ಕು ವಿಹಾರ ಮಾಡಿ ಕೊನೆಯಲ್ಲಿ ಸಂಹರಿಸುವವನಾಗಿ ತನ್ನ ಮಹಿಮೆಯಲ್ಲಿ ಉಪರತಿಯನ್ನು ಅವನು ಹೊಂದುತ್ತಾನೆ).

'ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ । ತ್ವಾಂ ಚಾನಯ-ಚ್ಛರಣದಃ ಪರಮಾಸ್ತ್ರದಗ್ಧಮ್। ಜಿಗ್ಯೇऽನ್ತಕಾನ್ತಕಮಪೀಶಮಸಾವನೀಶಃ।, ಕಿಂ ಸ್ವಾವನೇ ಸ್ವರನಯನ್ಮೃಗಯುಂ ಸ್ವದೇಹಮ್ ॥' ಯಾವನು ಯಮಲೋಕಕ್ಕೆ ಒಯ್ದಿದ್ದ ಗುರುಪುತ್ರನನ್ನೂ, ನಾರಾಯಣಾಸ್ತ್ರದಗ್ಧನಾಗಿದ್ದ ನಿನ್ನನ್ನು ಕೂಡ ಯಾವಾತನು ಹಿಂದಕ್ಕೆ ತಂದು ಕೊಟ್ಟನೋ, ಅಂತಕಾಂತಕನಾದ ಈಶ್ವರನನ್ನು ಕೂಡ ಯಾವನು ಜಯಿಸಿದನೋ, ಕಿರಾತನನ್ನು ಸದೇಹವಾಗಿ ಸ್ವರ್ಗಕ್ಕೆ ಯಾವನು ಕಳುಹಿಸಿಕೊಟ್ಟನೋ, ಆತನು ತನ್ನನ್ನು ತಾನು ಕಾಪಾಡಿಕೊಳ್ಳದೆ ಇದ್ದಾನೇನು ?'

ತಥಾಪ್ಯಶೇಷಸ್ಥಿತಿಸಂಭವಾಪ್ಯಯೇಷ್ವನನ್ಯಹೇತುರ್ಯದಶೇಷಶಕ್ತಿಧೃಕ್ । ನೈಚ್ಛತ್ ಪ್ರಣೇತುಂ ವಪುರತ್ರ ಶೇಷಿತಂ ಮರ್ತ್ಯೇನ ಕಿಂ ಸ್ವಸ್ಥಗತಿಂ ಪ್ರದರ್ಶಯನ್ ॥ ಹೀಗಿದ್ದರೂ ಸರ್ವಸೃಷ್ಟಿಸ್ಥಿತಿಲಯಗಳಿಗೂ ಅಸಾಧಾರಣ ಹೇತುವಾಗಿರುವ ಸರ್ವಶಕ್ತಿಯುಕ್ತನಾದ ಆತನು ತನ್ನ ಶರೀರವನ್ನು ಇಲ್ಲಿ ಉಳಿಸಲಿಲ್ಲವಲ್ಲ, ಅದೂ ಮರ್ತ್ಯವಾದ ಶರೀರದಿಂದೇನು ? – ಎಂದು ಆತ್ಮಸ್ಥಗತಿಯನ್ನು ತೋರಿಸುವದಕ್ಕಾಗಿಯೇ. ನಾನು ಈ ಮೂರು ಶ್ಲೋಕಗಳನ್ನು ಓದಿ ಅರ್ಥವನ್ನು ಹೇಳುತ್ತಲೂ ಸೂರಪ್ಪನವರು ಮೇಲಕ್ಕೆದ್ದು ಬಂದು ನನ್ನನ್ನು ಆಲಂಗಿಸಿಕೊಂಡರು 'ನಾನು ಬಗೆ ಬಗೆಯ ಛಾಪೆಯ ಭಾಗವತಗಳನ್ನು ಓದಿದ್ದೇನೆ. ಟೀಕಾಸಮೇತವಾದ ಭಾಗವತವು ನನ್ನಲ್ಲಿದೆ. ತಾವು ಗ್ರಂಥವನ್ನು ಓದದೆ ಮೊದಲೇ ಅಲ್ಲಿ ಹೀಗೆಯೇ ಇರಬೇಕೆಂದು ಊಹಿಸುವ ಕಲ್ಪನಾ ಶಕ್ತಿಗೆ ಏನೆನ್ನಬೇಕು ? ತಾವು ದಯವಿಟ್ಟು ನನಗೋಸ್ಕರವಾಗಿ ಭಾಗವತವನ್ನು ಆದ್ಯಂತವಾಗಿ ಓದಬೇಕು.

ತಮ್ಮಲ್ಲಿರುವ ಸಣ್ಣಕ್ಷರದ ಪುಸ್ತಕವು ನನಗಿರಲಿ ! ಈ ದಪ್ಪಕ್ಷರದ ಎರಡು ಸಂಪುಟಗಳ ಪುಸ್ತಕವನ್ನು ತಮಗೆ ಅರ್ಪಿಸುತ್ತೇನೆ ' ಎಂದು ಹೇಳಿ ಭಾಗವತವನ್ನು ಆರಂಭಿಸುವದಕ್ಕೆ ಸುಮುಹೂರ್ತವನ್ನು ಗೊತ್ತು ಮಾಡಿಕೊಟ್ಟರು. ಅವರು ಜ್ಯೋತಿಷ್ಯದಲ್ಲಿಯೂ ನಿಪುಣರಾಗಿದ್ದರು.

## ಬರಕದ ಶ್ರೀಕಂಠಯ್ಯನವರ ಮನೆಭಜನೆ :

ಸೂರಪ್ಪನವರು ಹೀಗೆ ನಮ್ಮ ಮನೆಯಲ್ಲಿ ಹಗಲು ಹೊತ್ತು ಸತ್ಕಾಲಕ್ಷೇಪವನ್ನು ಮಾಡುವದಲ್ಲದೆ ರಾತ್ರೆ ಶ್ರೀಕಂಠಯ್ಯನವರ ಮನೆಗೂ ಭಜನೆಗೆ ಹೋಗಿ ಬರುತ್ತಿದ್ದರು. ಒಂದೊಂದು ದಿನ ನಾನೂ ಅಲ್ಲಿಗೆ ಹೋಗಿ ಬರುತ್ತಿದ್ದೆನು. ಆ ವರ್ಷದ ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರವರ ಆರಾಧನೆಯು ಶ್ರೀಕಂಠಯ್ಯನವರ ಮನೆಯಲ್ಲಿಯೇ ನಡೆಯಿತು. ಶ್ರೀಕಂಠಯ್ಯನವರು ಕೊರಟಗೆರೆ ಬರಕಗ್ರಾಮದ ಬಳಿಯಿರುವ ಒಂದು ಹಳ್ಳಿಯವರು. ಬರಕಗ್ರಾಮದ ಮನೆದೇವರಾದ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಬಹುದಿನ ಸೇವೆಯಲ್ಲಿದ್ದದ್ದರಿಂದಲೊ ಏನೊ ಅವರು ಬರಕದ ಶ್ರೀಕಂಠಯ್ಯನವರೆಂದೇ ನಮಗೆಲ್ಲ ಪ್ರಸಿದ್ಧರಾಗಿದ್ದರು. ನಾನು ನೋಡಿದಾಗ ರೈಲ್ವೆ ಇಲಾಖೆಯಲ್ಲಿ ನೌಕರರಾಗಿದ್ದರು. ಅವರು ಮದ್ರಾಸಿನಿಂದ ಬೆಂಗಳೂರಿಗೆ ವರ್ಗವಾದ ಬಳಿಕ ಕೃಷ್ಣಪ್ಪನವರ ಮನೆಯಲ್ಲಿ ಬಾಲ್ಯಸ್ನೇಹಿತರಾಗಿದ್ದ ಸೂರಪ್ಪನವರನ್ನು ಕಂಡರಂತೆ. ಆ ಪರಿಚಯವು ಬೆಳೆದು ಮೈತ್ರಿಯಾಗಿ ರಾಧಾಕೃಷ್ಣವಿಗ್ರಹಗಳು ಶ್ರೀಕಂಠಯ್ಯನವರ ಮನೆಗೆ ಬಂದಿದ್ದವು. ಈ ಎಲ್ಲಾ ಕಾರಣಗಳಿಂದ ನಾವು ಗುರುಮಹಾರಾಜರವರ ಸಂಬಂಧದಿಂದ ಪರಸ್ಪರ ಸಂಬಂಧಿಗಳಾಗಿ ಸೇರಿದೆವು. ಸೂರಪ್ಪನವರ ಜೊತೆಯಲ್ಲಿಯೇ ಬಹುಕಾಲದಿಂದ ಇದ್ದು-ಕೊಂಡಿದ್ದ ಚಿಂತಾಮಣಿ ತಾಲ್ಲೂಕು ಹಿರಿಕಟ್ಟೇನಹಳ್ಳಿಯ ನಂಜುಂಡಯ್ಯನವರು, ದೊಡ್ಡಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳವರು, ಚಿದಂಬರಯ್ಯನವರು, ಸೂರಪ್ಪ-ನವರು, ನಾರಾಣಯ್ಯರ್ - ಇವರೆಲ್ಲರ ಪರಿಚಯವೂ ನನಗೆ ಶ್ರೀಕಂಠಯ್ಯನವರ ಮನೆಯಲ್ಲಿ ಸೂರಪ್ಪನವರ ನಿಮಿತ್ತದಿಂದ ಆಯಿತು. ಎಲ್ಲರೂ ಭಕ್ತಿಯಭರದಿಂದ ಭಜನೆಮಾಡುವದು ಪರಸ್ಪರವಾಗಿ ಅನಿಮಿತ್ತಪ್ರೇಮದಿಂದ ಇರುವದು, ಸತ್ಕಥಾಲಾಪವನ್ನು ಮಾಡುವದು ಹೀಗೆ ಆನಂದದಿಂದ ಕಾಲವು ಕಳೆಯುತ್ತಿತ್ತು.

## ಅಧ್ಯಾತ್ಮ ಪ್ರಕಾಶ :

ಸೂರಪ್ಪನವರಿಗೂ ನನಗೂ ಗಾಢವಾದ ಆತ್ಮಬಂಧುತ್ವವು ಉಂಟಾಯಿತು. ಅವರು 'ಕರ್ಮ, ಯೋಗ, ಭಕ್ತಿ, ಜ್ಞಾನ - ಇವುಗಳ ಸಮನ್ವಯವನ್ನು ಮಾಡುತ್ತಾ ಪರಮಾತ್ಮತತ್ತ್ವವನ್ನು ತಿಳಿಯುವಂತೆ ಅಗಾಧಬೋಧೆಯನ್ನು ಮಾಡುವ

ಮಹನೀಯರನ್ನು ಈ ದಿನ ದರ್ಶನ ಮಾಡುವ ಪುಣ್ಯವುಂಟಾಯಿತು. ನಮ್ಮ ಶ್ಯಾಮಸುಂದರನೇ ಅವರನ್ನು ತೋರಿಸಿದ್ದಾನೆ. ನಮ್ಮ ಸದ್ಗುರು ಮಹಾರಾಜರೇ ಈ ರೂಪಿನಲ್ಲಿ ಕೃಪೆಮಾಡಿರುವರೆಂದು ನನ್ನ ನಂಬಿಕೆ, ಇನ್ನು ನನಗೆ ತಿಪಟೂರಿನಲ್ಲಿ ನಿಲ್ಲಲು ಇಷ್ಟವಿಲ್ಲ, ಅವರಿರುವ ಸ್ಥಳದಲ್ಲಿಯೇ ಇದ್ದು ನನ್ನ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದಿದ್ದೇನೆ. ಅಂಥವರನ್ನು ನೀವೂ ನೋಡಲು ಬಯಸುವಿರಾ....' ಎಂಬುದಾಗಿ ತಮ್ಮ ಸ್ನೇಹಿತರೊಬ್ಬರಿಗೆ ಪತ್ರವನ್ನು ಬರೆದಿದ್ದರಂತೆ. ಅವರು ನನ್ನಲ್ಲಿಟ್ಟಿದ್ದ ಪ್ರೇಮದಿಂದ ನನ್ನನ್ನು ಎಷ್ಟು ಹೊಗಳಿದರೂ ಅವರ ಮನಸ್ಸಿಗೆ ತೃಪ್ತಿಯಾಗಿರಲಾರದು. 'ನಾನು ಇನ್ನು ಮೇಲೆ ಇಲ್ಲಿಯೇ ಕಾಲಕ್ಷೇಪವನ್ನು ಹಾಕುತ್ತೇನೆ; ನನಗೆ ದೈನಂದಿನ ಕೃತ್ಯವೇನಾದರೂ ಇರಬೇಕಲ್ಲ, ನನಗೊಂದು ಉದ್ಯೋಗವನ್ನು ಕಲ್ಪಿಸಿಕೊಡಿ!' ಎಂದು ಅವರು ಕೇಳಿಕೊಂಡರು. ಅವರು ಮುಖ್ಯವಾಗಿ ಅಧ್ಯಾತ್ಮ ಪ್ರಿಯರು. ಅವರಿಗೆ ಮತ್ತೆ ಯಾವ ಕೆಲಸವನ್ನು ಕೊಟ್ಟರೂ ಸರಿಯಾಗಲಾರದು ಎಂದು ನನಗೆ ತೋರಿತು. ಚಿದಂಬರಯ್ಯನವರೂ ನಾನೂ ಯಳ್ಳಂಬಳಸೆಯಲ್ಲಿದ್ದಾಗ ಒಂದು ದಿನ ನಾವಿಬ್ಬರೂ ಸೇರಿ 'ಪುಂಡರೀಕ' ಎಂಬ ಹೆಸರಿನ ಒಂದು ಮಾಸಪತ್ರಿಕೆಯನ್ನು ಹೊರಡಿಸಿದಂತೆ ಕನಸಾಯಿತು ಎಂದು ಹೇಳಿದ್ದರು. ಅಧ್ಯಾತ್ಮಪ್ರಧಾನವಾದ ಒಂದು ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ನಾವಿಬ್ಬರೂ ಪ್ರಧಾನಲೇಖನಗಳನ್ನು ಬರೆದರೆ ಚೆನ್ನಾಗಿದ್ದೀತೆಂದು ನನ್ನ ಮನಸ್ಸಿನಲ್ಲಿ ಬಹಳ ದಿನದಿಂದಲೂ ಇತ್ತು. ಆದರೆ ನಾವಿಬ್ಬರೂ ಒಬ್ಬರನ್ನೊಬ್ಬರು ಅಗಲಿದ ಮೇಲೆ ನಾನು ಸರಕಾರಿಯ ನೌಕರಿಯಲ್ಲಿದ್ದದ್ದರಿಂದ ನನಗೆ ಅದರ ಯೋಚನೆ ಮತ್ತೆ ಹೊಳೆದಿರಲಿಲ್ಲ. ಈಗ ನಿಮ್ಮನ್ನು ಸಂಪಾದಕರೆಂದು ಕರೆದು 'ಅಧ್ಯಾತ್ಮ ಪ್ರಕಾಶ'ವೆಂಬ ಹೆಸರಿನ ಒಂದು ಮಾಸಪತ್ರಿಕೆಯನ್ನು ತೆಗೆಯುವೆನು ; ಅದನ್ನು ನೀವು ನಡೆಯಿಸಬೇಕು ಎಂದು ಕೇಳಿದೆನು. ಯಾವುದೋ ಪುಸ್ತಕಗಳ ಪಟ್ಟಿಯಲ್ಲಿ 'ಅಧ್ಯಾತ್ಮ ಪ್ರಕಾಶ'ವೆಂಬ ಹೆಸರಿನ ಒಂದು ಗ್ರಂಥವನ್ನು ಹೆಸರಿಸಿದ್ದದ್ದನ್ನು ಆಗತಾನೆ ಓದಿದ್ದರಿಂದ ಈ ಹೆಸರು ನನ್ನ ಮನಸ್ಸಿನಲ್ಲಿ ಮಿಂಚಿತು. ಸೂರಪ್ಪನವರು 'ಹಾಗೇ ಆಗಲಿ. ಆದರೆ ಮಾತೃವಿಯೋಗದ ವರ್ಷವು ಮುಗಿಯುವದರೊಳಗಾಗಿ ಕಾಶಿಗೆ ಹೋಗಿ ಬೇಗನೆ ಬಂದು ಬಿಡುತ್ತೇನೆ ; ಆ ಮೇಲೆ ನನಗೆ ಇನ್ನು ಯಾವ ಕೆಲಸವೂ ಉಳಿದಿರುವದಿಲ್ಲ' ಎಂದು ಹೇಳಿದರು.

### ಸೂರಪ್ಪನವರ ಕಾಶೀಯಾತ್ರೆ :

ಅವರಿಗೆ ನಾನು ಕೃ.ಸ್ವಾ. ಅಯ್ಯರವರ ಭೇಟಿ ಮಾಡಿಸಿಕೊಟ್ಟು ಅಯ್ಯರವರಿಗೆ ಸೂರಪ್ಪನವರ ವಿಷಯವನ್ನೆಲ್ಲ ಅರಿಕೆಮಾಡಿದೆ. ಅವರು 'ಅದೆಲ್ಲ ಸರಿಯೇ, ಇವರಿಗೆ

ಶರೀರದಲ್ಲಿ ರಕ್ತಬಲ ಕಡಿಮೆಯಿರುವಂತೆ ಕಾಣುತ್ತದೆ. ಈ ವರ್ಷ ತಡೆದು ಆರೋಗ್ಯವನ್ನು ಸ್ವಲ್ಪ ಸರಿಪಡಿಸಿಕೊಂಡು ಹೋದರೆ ಒಳ್ಳೆಯದೆಂದು ಕಾಣುತ್ತದೆ' ಎಂದರು. ಸೂರಪ್ಪನವರು 'ಹಾಗಲ್ಲ, ಈ ವರ್ಷ ಮಾತೃಶ್ರಾದ್ಧಾದಿಗಳನ್ನು ಕಾಶಿಯಲ್ಲಿ ಮಾಡಬೇಕೆಂದು ಸಂಕಲ್ಪವಾಗಿದೆ. ಅದನ್ನು ಮುಗಿಸಿಕೊಂಡು ಬಂದು ಬೆಂಗಳೂರಿನಲ್ಲಿಯೇ ರಾಯರ ಸೇವೆಯಲ್ಲಿ ನಿಂತು ಬಿಡಬೇಕೆಂದಿದ್ದೇನೆ' ಎಂದರು. ಆ ಮಾತು ಅಲ್ಲಿಗೆ ನಿಂತಿತು. ಸೂರಪ್ಪನವರು ಕಾಶಿಗೆ ಹೊರಟು ಹೋದದ್ದರಿಂದ ಅಧ್ಯಾತ್ಮಪ್ರಕಾಶವೆಂಬ ಹೆಸರಿನ ಮಾಸ ಪತ್ರಿಕೆ ಕೂಡಲೆ ಹೊರಡಲಿಲ್ಲ. ಆದರೆ ಹೆಸರೇನೋ ಪ್ರಕಾಶವಾಗಿಬಿಟ್ಟಿತು. ನಾನು ಪ್ರಕಟಿಸಿದ ಮಾಂಡೂಕ್ಯೋಪನಿಷತ್ತಿನ ರಟ್ಟಿನ ಕೊನೆಯ ಪುಟದಲ್ಲಿ ಅಧ್ಯಾತ್ಮಪ್ರಕಾಶ ಎಂಬ ಹೆಸರಿನಿಂದ ಶ್ರೀ ಶಂಕರಾಚಾರ್ಯರ ಪ್ರಸಿದ್ಧ ಗ್ರಂಥಗಳನ್ನಾದರೂ ಪ್ರಕಟಿಸಬೇಕೆಂದು ಸಂಕಲ್ಪಿಸಿದೆ - ಎಂದು ತಿಳಿಸಲಾಗಿದೆ. ಆ ಪುಸ್ತಕದ ಒಂದು ಪ್ರತಿಯನ್ನು ಮಾಗಾನಹಳ್ಳಿ ದೊಡ್ಡಬಸಪ್ಪನವರಿಗೆ ಕೊಟ್ಟು ಕೃತಕೃತ್ಯನಾದೆ. ಹೀಗೆ ಯಾವ ಗದ್ದಲವೂ ಇಲ್ಲದೆ ಸಮಾರಂಭ ಮಹೋತ್ಸವವಿಲ್ಲದೆ **1920** ರಲ್ಲಿ ನನಗೂ ಅರಿವಿಲ್ಲದೆ ಅಧ್ಯಾತ್ಮ ಪ್ರಕಾಶಕಾರ್ಯಾಲಯವು ಜನಿಸಿತು. ಆರಾಧನೆಯ ಬಳಿಕ ಸೂರಪ್ಪನವರು ತಮ್ಮ ಪರಿವಾರದ ಕೆಲವರೊಡನೆ ವಿದುರಾಶ್ವತ್ಥಕ್ಕೆ ಹೊರಟರು ; ನಾವೂ, ಅಂದರೆ ಚಿದಂಬರಯ್ಯನವರು, ನಂಜಪ್ಪನವರು ಮತ್ತು ನಾನು ಹೊರಟೆವು. ಅಲ್ಲಿ ರಾತ್ರೆ ಬಹಳ ಚಳಿಯಾಗಿತ್ತು. ನನಗೂ ಸೂರಪ್ಪನವರಿಗೂ ನಡೆದ ಮಾತಿನಲ್ಲಿ 'ನಾನು ಕೇವಲ ಕರ್ಮಬದ್ಧನಾಗಿ ಹೋಗಿ ಬರಬೇಕೆಂದಿದ್ದೇನೆ ; ಇವರುಗಳೂ ಬರುತ್ತೇವೆಂದು ಹಟಹಿಡಿದಿದ್ದಾರೆ' ಎಂದು ಅವರು ಹೇಳಿದ್ದರು. ಅದು ಹೇಗಾದರೂ ಇರಲಿ, ಬರಕದ ಶ್ರೀಕಂಠಯ್ಯನವರಿಗೆ ಮೊದಲು ಸಿಕ್ಕದೆ ಇದ್ದ ರಜೆ ಕೊನೆಗೆ ದೊರಕಿತು. ಅವರು (ದಂಪತಿಗಳು), ಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳು (ದಂಪತಿಗಳು), ಕೃಷ್ಣಪ್ಪನವರು - ಇಷ್ಟು ಜನವೂ ಸೇರಿ ಯಾತ್ರೆ ಹೊರಟರು. ಸೂರಪ್ಪನವರು ಹುಷಂಗಾಬಾದಿನಲ್ಲಿ ನರ್ಮದಾ ಸ್ನಾನ ಮಾಡಿದಾಗಲೆ ಶರೀರಕ್ಕೆ ಚಳಿ ಬಂತಂತೆ. ಮುಂದೆ ಕಾಶಿಗೆ ಹೋದಬಳಿಕ ಕಾಯಿಲೆಯಿಂದ ನರಳುತ್ತಲೇ ಇದ್ದರೂ ಖಡಿದಾಗಿ ಮಾತನಾಡುತ್ತಲೇ ಇದ್ದರಂತೆ ; ಆಗ ಹತ್ತಿರವಿದ್ದವರು ನಿಮ್ಮ ಸ್ಥಿತಿ ಹೇಗಿದೆ ? ಎಂದು ಕೇಳಿದ್ದಕ್ಕೆ ಸದ್ಗುರುಗಳ ಕೃಪೆಯಿಂದ ಎಲ್ಲವೂ ಸರಿಯಾಗಿದೆ ಎಂದು ಹೇಳಿದರಂತೆ. ಆಗ್ಗೆ 'ಸುಬ್ಬರಾಯರು ಹೇಳಿಕೊಟ್ಟಿರುವ ಮಾಂಡೂಕ್ಯಾರ್ಥ ನೆನಪಿರುವಾಗ ಯಾವದಕ್ಕೂ ಚಿಂತಿಸಬೇಕಾದದ್ದಿಲ್ಲ' ಎಂದು ಹೇಳಿದರೆಂತ ಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳು ತಿಳಿಸಿದರು.

## ಕಾವೇರಿ ಪಟ್ಟಣಕ್ಕೆ :

1920ರಲ್ಲಿ ನಡೆದ ಮತ್ತೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಕೃ.ಸ್ವಾ.ಅಯ್ಯರವರ ಮಗ ಶ್ರೀರಾಮಚಂದ್ರ ಅಯ್ಯರ್ (ಆಗ ಮನೆಯವರು ಪ್ರೇಮಕ್ಕೆ ಇಟ್ಟದ್ದ ಚಿನ್ನಾ ಎಂಬ ಹೆಸರಿನಿಂದಲೇ ನಾವು ಅವರನ್ನು ಸಂಬೋಧಿಸು-ತ್ತಿದ್ದೆವು) ಅವರ ಮದುವೆಯು ಕಾವೇರಿಪಟ್ಟಣದಲ್ಲಿ ಆಯಿತು. ವಿಠ್ಠಲಶಾಸ್ತ್ರಿಗಳೂ, ವೆಂಕಟೇಶಶಾಸ್ತ್ರಿಗಳೂ ನಾನೂ ಅಲ್ಲಿಗೆ ಹೋಗಿದ್ದೆವು. ಮದುವೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಅಯ್ಯರ ಬೀಗರು ಹೆಚ್ಚಿನ ಶ್ರೀಮಂತರಲ್ಲದಿದ್ದರೂ ಗುಣವಂತರು. ನಮ್ಮನ್ನೆಲ್ಲ ಬೀಗರ ಕಡೆಯವರೆಂದೇ ಭಾವಿಸಿ ಸತ್ಕರಿಸುತ್ತಿದ್ದರು. ಅಯ್ಯರವರು ತಮಗೆ ಬಿಡುವು ದೊರೆತಾಗಲೆಲ್ಲ ನಮ್ಮಗಳಿಗೆ ಊರಿನ ದೃಶ್ಯವಿಶೇಷಗಳನ್ನು ತೋರಿಸುತ್ತಿದ್ದರು. ಕಾವೇರಿಪಟ್ಟಣವು ಐತಿಹಾಸಿಕ ಸ್ಥಳ. ಅಲ್ಲಿಯ ರೈತರು ಬಿಸಿಲಿನ ತಾಪವನ್ನು ತಡೆದುಕೊಂಡು ಕೆಲಸ ಮಾಡುತ್ತಿದ್ದದ್ದು, ತಮಿಳು ಜನ ಕಷ್ಟಸಹಿಷ್ಣುಗಳೆಂಬುದನ್ನು ಮನಸ್ಸಿಗೆ ತಂದಿತ್ತು, ಆವೂರಿನಲ್ಲಿ ನೇಯ್ಗೆಯವರ ಮನೆಗಳೂ ಅಲ್ಲಲ್ಲಿ ತಕ್ಕಮಟ್ಟಿಗೆ ಇದ್ದವು. ಅಯ್ಯರವರನ್ನು ನೇಯ್ಗೆಯ ಜನರು ರಾಜಮರ್ಯಾದೆಯಿಂದ ಕಂಡಂತೆ ನಮಗೆ ಭಾಸವಾಗುತ್ತಿತ್ತು. ಅಯ್ಯರ ಪೂರ್ವಜರೊಬ್ಬರು ಶ್ರೀಮಂತರ ಕಾಲಕ್ಕೆ ಪೂನಹಗೆ (ಪೂನಾ)ಹೋಗಿ ಸಾಮವೇದದಲ್ಲಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ಹೇರಳವಾಗಿ ಹಣವನ್ನು ಸಂಪಾದಿಸಿಕೊಂಡು ಬಂದಿದ್ದರಂತೆ. ಅವರು ಕೆಲವರು ನೇಯ್ಗೆಯವರನ್ನು ಆವೂರಿಗೆ ಕರೆಯಿಸಿ ಒಬ್ಬೊಬ್ಬರಿಗೆ ಬಡ್ಡಿಯಿಲ್ಲದೆ ನಲವತ್ತು ನಲವತ್ತು ರೂಪಾಯಿಗಳಂತೆ ಕೊಟ್ಟು ತಿಂಗಳಿಗೊಂದು ರೂಪಾಯಿನಂತೆ ಸಾಲ ತೀರಿಸಿರೆಂದು ಹೇಳಿದರಂತೆ. ಒಳ್ಳೊಳ್ಳೆಯ ಮಾದರಿಯ ಸೀರೆ, ಕುಪ್ಪಸಗಳನ್ನು ತಯಾರಿಸುವದಕ್ಕೆ ತಾವೇ ಅವರಿಗೆ ಹೇಳಿ ಪ್ರೋತ್ಸಾಹಿಸಿದರಂತೆ. ಅವರು ಚಿತ್ರಕಲೆಯಲ್ಲಿಯೂ, ಹೂದೋಟವನ್ನು ಮಾಡುವದರಲ್ಲಿಯೂ ನಿಪುಣರಂತೆ. ಇದೆಲ್ಲಕ್ಕಿಂತಲೂ ಅವರು ಸಾಮವೇದಕ್ಕೆ ಲಕ್ಷಣಶಾಸ್ತ್ರವನ್ನು ಬರೆದು ಪುಸ್ತಕವು ಎಲ್ಲಿಯಾದರೂ ಕಳೆದು ಹೋದೀತೆಂದು ಒಂದು ದಸ್ತರದಲ್ಲಿ ಕಟ್ಟಿಸಿ ತಮ್ಮ ಹತ್ತಿರವೇ ಇರಿಸಿಕೊಂಡಿದ್ದರಂತೆ ; ಯಾರ ಮನೆಗಾದರೂ ಹೋಗಬೇಕಾದರೆ ಆಳಿನ ಮೇಲೆ ಹೊರಿಸಿಕೊಂಡು ಹೋಗುತ್ತಿದ್ದರಂತೆ. ಹೀಗಿರುವಲ್ಲಿ ಯಾರೋ ಅಸೂಯಾಪರರು ಆ ಆಳಿನಿಂದಲೇ ಆ ಪುಸ್ತಕವನ್ನು ಹಾರಿಸಿಬಿಟ್ಟರಂತೆ ! ಈ ಕಥೆಯನ್ನು ಹೇಳಿ ಅಯ್ಯರು, 'ಜೋಕೆ ನಿಮ್ಮ ಮೂಲಾವಿದ್ಯಾನಿರಾಸವು ಹೀಗೆ ಎಲ್ಲಿಯಾದರೂ ಆದೀತು ! ಅದನ್ನು ಸುಮ್ಮನೆ ಅಚ್ಚು ಮಾಡಿಸಿದರೆ ಸಾಲದು, ಅದನ್ನು ತಾಳೆಯ ಗರಿಯ ಪುಸ್ತಕಗಳಲ್ಲಿ ಬರೆಯಿಸಿ

ಯಾವದಾದರೂ ಪ್ರಸಿದ್ಧ ಪುಸ್ತಕ ಭಂಡಾರಗಳಲ್ಲಿರಿಸಬೇಕು !' ಎಂದು ನನಗೆ ಬುದ್ಧಿ ಹೇಳಿದರು.

ಆವೂರಿನ ಕಾವೇರಿ ತೀರವು ಬಹಳ ರಮಣೀಯವಾಗಿದೆ. ಅಲ್ಲಿಗೆ ಹೋದಾಗ ಕೃ.ಸ್ವಾ. ಅಯ್ಯರು 'ನೀವು ಆಗಾಗ್ಗೆ ತುರೀಯಾಶ್ರಮವನ್ನು ಸ್ವೀಕರಿಸಬೇಕೆಂದು ಹೇಳುತ್ತಿರುತ್ತೀರಷ್ಟೆ ? ನನಗೆ ನಿಮ್ಮಷ್ಟು ಧೈರ್ಯವಾಗಲಿ ಅಷ್ಟು ಉತ್ಕಟವೈರಾಗ್ಯ-ವಾಗಲಿ ಇನ್ನೂ ಬರಲಿಲ್ಲ. ಆದರೂ ವಾರ್ಧಕ್ಯದಲ್ಲಿ ಈ ಊರಿಗೆ ಬಂದರೆ ನದೀ ತೀರದಲ್ಲಿ ಒಂದು ಕುಟೀರವನ್ನು ಮಾಡಿಸಿಕೊಂಡು ಏಕಾಂತವಾಸ ಮಾಡಬೇಕೆಂಬ ಮನಸ್ಸಿದೆ !' ಎಂದಿದ್ದರು. ಅವರು ಆಶ್ರಮವನ್ನು ಸ್ವೀಕಾರ ಮಾಡದಿದ್ದರೂ ಪರಮಾರ್ಥದೃಷ್ಟಿಯಿಂದ ಸಂನ್ಯಾಸಿಗಳೇ ಎನ್ನಬೇಕು. ಜನಕಾದಿಗಳಂತೆ ಲೋಕ ಸಂಗ್ರಹ ಕರ್ಮವನ್ನು ಮಾಡುತ್ತಾ ಅನಾಸ್ಥೆಯಿಂದಲೇ ಇದ್ದು ಬಿಟ್ಟಿದ್ದರು. ವೇದಾಂತ-ವಿಚಾರ, ವಿದ್ವಾಂಸರ ಅಭಿಮಾನ, ಬಡವರ ಮೇಲೆ ಪ್ರೀತಿ, ಸರ್ವಸಮತಾ ಬುದ್ಧಿ- ಇವುಗಳೆಲ್ಲವೂ ಅವರಲ್ಲಿದ್ದದ್ದರಿಂದ ಅವರು ಋಷಿತುಲ್ಯರು ಎನ್ನುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಅವರಿಗೆ ಲೌಕಿಕ ದೃಷ್ಟಿಯಿಂದ ಬಂದೊದಗಿದ್ದ ಕಷ್ಟಗಳ ಕಾಲದಲ್ಲಿ, ಉದಾಹರಣೆಗೆ ಅವರ ಅಳಿಯಂದಿರಿಬ್ಬರು ಒಬ್ಬರ ಹಿಂದೊಬ್ಬರು ಬಲುಬೇಗನೆ ನಡುವಯಸ್ಸಿನಲ್ಲಿಯೇ ಕಾಲವಾಗಿ ಕುಟುಂಬದ ಹೊರೆಯೆಲ್ಲ ಅವರ ಮೇಲೆಯೇ ಬಿದ್ದಾಗ, ಅಥವಾ ಅವರಿಗಿಂತ ತೀರ ಕಡಿಮೆಯ ಸರ್ವಿಸಿನವರನ್ನು ಮೇಲಕ್ಕೆ ಹಾಕಿ ಅವರ ಯೋಗ್ಯತೆಯನ್ನು ಸರ್ಕಾರದವರು ಕಡೆಗಣಿಸಿದಾಗ - ಸ್ನೇಹಿತರುಗಳು ಸಹಾನುಭೂತಿಯನ್ನು ತೋರಿಸುವದಕ್ಕೆ ಬಂದವರೇ ದುಃಖಕ್ಕೆ ಒಳಗಾಗಿರುವಂತೆಯೂ ಇವರೇ ಅವರಿಗೆ ಸಮಾಧಾನೋಕ್ತಿ-ಗಳನ್ನು ಹೇಳುವಂತೆಯೂ ಕಾಣುತ್ತಿತ್ತು ! ಅಂಥ ತಿತಿಕ್ಷೆಯು ಅಯ್ಯರದು.

## ಮದ್ದೂರಿಗೆ ವರ್ಗ, ಮುಂಚಿನ ಕೆಲವು ಘಟನೆಗಳು :

ಸೂರಪ್ಪನವರ ಮರಣವಾದದ್ದು ಮಾಘ ಶುದ್ಧ ರಥಸಪ್ತಮಿಯ ದಿನ 1921 (ಫೆಬ್ರವರಿ ಇರಬಹುದು)ರಲ್ಲಿ. ಆದರೆ ಅಷ್ಟರೊಳಗೆ ಅಪ್ಪರ್ ಸೆಕೆಂಡರಿ ಕ್ಲಾಸುಗಳನ್ನು ಸರಕಾರದವರು ವಜಮಾಡಿಬಿಟ್ಟದ್ದರಿಂದ ನನಗೆ (4-11-20ರಲ್ಲಿ) ಮಧುಗಿರಿ (ಮದ್ದಗಿರಿ) ಸ್ಕೂಲಿಗೆ ಹೆಡ್‌ಮಾಸ್ಟರಾಗಿ ವರ್ಗವಾಯಿತು. ನಾನು ಹೋಗುವದಕ್ಕೆ ಪೂರ್ವದಲ್ಲಿ ಕೆಲವು ಘಟನೆಗಳು ಆಗಿದ್ದವು. ಅವನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಬೇಕಾಗಿದೆ.

1) ಶಂಕರಮಠದಲ್ಲಿ ಒಂದು ಕೀರ್ತನ ಸಮ್ಮೇಲನವಾಯಿತು. ಅದನ್ನು ಜಯರಾಮಾಚಾರ್ರರೆಂಬ ಪ್ರಸಿದ್ಧ ದೇಶಭಕ್ತ ಕೀರ್ತನಕಾರರು ಕೂಡಿಸಿದ್ದರು. ಅಲ್ಲಿ ನಡೆದ ಮುಳುಗುಂದ ರಾಮಶಾಸ್ತ್ರಿಗಳೇ ಕೆಲವು ಕೀರ್ತನಕಾರರ ದರ್ಶನದಿಂದ ನನಗೆ ಕೀರ್ತನವೂ ಒಂದು ಅಧ್ಯಾತ್ಮಪ್ರಸಾರಣಾ ಸಾಧನವೇ ಎಂಬ ಬುದ್ಧಿಯು ಅಂಕುರವಾಯಿತು. ಮುಂದೆ ಚಿದಂಬರಯ್ಯನವರು ಕೆಲವು ಕೀರ್ತನೆಗಳನ್ನು ಬರೆದದ್ದು ಈ ಸಮ್ಮೇಲನದ ಪ್ರಭಾವವೇ ಎಂದು ಹೇಳಬಹುದು. ಇದರ ಜೊತೆಗೆ ಚಿದಂಬರಯ್ಯನವರಲ್ಲಿ ಸುಪ್ತವಾಗಿದ್ದ ದೇಶಾಭಿಮಾನವು ಈಗ ತೆರೆ ಎತ್ತಿಕೊಂಡಿತೆನ್ನ-ಬಹುದು. ಮುಂದಕ್ಕೆ ಅವರು ಧಾರವಾಡಕ್ಕೆ ಹೋಗಿ ಅಲ್ಲಿ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಕೆಲವು ಕಾಲ ಕೆಲಸ ಮಾಡಿದರು. ಮಹಾತ್ಮಗಾಂಧಿಯವರ ಮುದ್ರಿಕೆಯುಳ್ಳ ಪದಗಳನ್ನು ಕೂಡ ಆಗ ರಚಿಸಿರುತ್ತಾರೆ. ಜಯರಾಮಾಚಾರ್ರರಿಗೆ ಜನಗಳಲ್ಲಿ ದೇಶಭಕ್ತಿಯನ್ನು ಹುರುಪೆಬ್ಬಿಸುವ ಶಕ್ತಿ ಚೆನ್ನಾಗಿತ್ತು. ನಾನು ಹೊಳಲ್ಕೆರೆಯಲ್ಲಿದ್ದಾಗ 'ಎಂಪೈರ್‌ಡೇ' ಎಂಬ ಚಕ್ರಾಧಿಪತ್ಯದಿನದ ಉತ್ಸವವನ್ನು ಆಚರಣೆ ಮಾಡುವದರಲ್ಲಿ ಸಂತೋಷದಿಂದಲೂ ಉತ್ಸಾಹದಿಂದಲೂ ತೊಡಗುತ್ತಿದ್ದೆ ; ಕಳೂರುಕಟ್ಟೆಗೆ ಹೋಗುವ ಹೊತ್ತಿಗೆ ನನ್ನ ಆ ರಾಜಭಕ್ತಿಯಲ್ಲಿ ಅಷ್ಟು ಜೋರು ಇರಲಿಲ್ಲ. ಬ್ರಿಟಿಷರು ಬಹಳ ಅನ್ಯಾಯ ಮಾಡುತ್ತಿದ್ದಾರೆ ಎಂಬ ಚಳುವಳಿಯಿಂದ ನನ್ನ ಹಿಂದಿನ ಅಭಿಮಾನವು ಕಡಿಮೆಯಾಗಿರಬೇಕೆಂದು ಕಾಣುತ್ತದೆ. ಆದರೆ ಸರಕಾರದ ಮೇಲೆ ತಿರುಗಿ ಬೀಳುವಂಥ ದೇಶಭಕ್ತಿ ನನ್ನ ಹೃದಯದಲ್ಲಿ ಹುಟ್ಟಲಿಲ್ಲ ; ಕಾಂಗ್ರೆಸ್ಸಿನವರು ಪ್ರದರ್ಶಿಸುತ್ತಿದ್ದ ಚಟುವಟಿಕೆಗಳು ದೇಶಕ್ಕೆ ಅಷ್ಟು ಹಿತಕರವಲ್ಲವೆಂತಲೇ ನನ್ನ ಭಾವನೆಯಿತ್ತು. ಆದರೂ ಚಿದಂಬರಯ್ಯನವರು ಕೀರ್ತನಸಮ್ಮೇಳನದ ಅಂತ್ಯದಲ್ಲಿ ಸ್ಥಾಪನೆಯಾದ ಒಂದಾನೊಂದು ಶಾಶ್ವತ ಕಮಿಟಿಗೆ ನನ್ನನ್ನು ಒಬ್ಬ ಸದಸ್ಯನನ್ನಾಗಿ ಸೂಚಿಸಿ ಸೇರಿಸಿಬಿಟ್ಟಿದ್ದರು. ಹೇಗಿದ್ದರೂ ನಾನು ವರ್ಗವಾಗಿದೇನಲ್ಲ ಎಂದು ಆ ವಿಷಯದಲ್ಲಿ ತಟಸ್ಥನಾದೆ. ಅದನ್ನು ಮುಂದೆ ಮತ್ತೆ ಪ್ರಸ್ತಾಪಿಸುವೆನು.

ನನಗೆ ಗೋಲ್ಕೊಂಡ ಹೌಸಿನಲ್ಲಿದ್ದಾಗ ಕುಟುಂಬದ ಖರ್ಚು ಮಿತಿಮೀರಿ ಹೋಗಿತ್ತು. ಅದನ್ನು ಸರಿತೂಗಿಸುವದಕ್ಕಾಗಿ ಕೆಲವು ದಿನಗಳವರೆಗೆ ಯಳ್ಳಂಬಳಸೆಗೆ ಮನೆಯವರನ್ನೆಲ್ಲ ಕಳುಹಿಸಿ ಚಾಮರಾಜಪೇಟೆಯ 2ನೇಯ ರಸ್ತೆಯಲ್ಲಿದ್ದ ಒಂದು ಕೊನೆಯ ಒಂದು ರೂಮನ್ನು ಬಾಡಿಗೆ ಹಿಡಿದಿದ್ದೆ. ಅಲ್ಲಿ ನಾನು ನರಸಪ್ಪ ಇಬ್ಬರೇ ಇದ್ದು ಕೊಂಡಿದ್ದೆವು. ಅಲ್ಲಿ ನಾನು ಕಾಯಿಲೆ ಬಿದ್ದಾಗ ನೋಡಿಕೊಂಡು

ಹೋಗುವದಕ್ಕೆ ನಂಜಪ್ಪನವರೂ ಮೈಸೂರಿನಿಂದ ಬಂದಿದ್ದರು. ಕೃ. ಸ್ವಾ. ಅಯ್ಯರಿಗೆ ಎರಡನೆಯ ಸಲಕ್ಕೆ ತುಮಕೂರು ಹೈಸ್ಕೂಲಿಗೆ ಹೆಡ್‌ಮಾಸ್ಟರಾಗಿ ವರ್ಗವಾಯಿತು ;

2) ಅವರು ಹೋಗುವಾಗ ಗರಡಿರಾಚಪ್ಪ ಎಂಬ ವೀರಶೈವರೊಬ್ಬರನ್ನು ನನ್ನ ಬಳಿಗೆ ಹೋಗುವಂತೆ ಹೇಳಿದ್ದರು. ಅವರು ನನ್ನಲ್ಲಿಗೆ ಆಗಾಗ್ಗೆ ಬಂದು ವೇದಾಂತವಿಚಾರವನ್ನು ಮಾಡಿ ಹೋಗುತ್ತಿದ್ದರು. ಅವರ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಲಿರುವೆನು.

3) ರಾಮಕೃಷ್ಣಮಿಷನ್ನಿನವರು ಯಾವದೋ ಒಂದು ಉತ್ಸವಕ್ಕೆ - ಶ್ರೀರಾಮಕೃಷ್ಣರ ಜಯಂತಿಯಿರಬಹುದು - ಉಪನ್ಯಾಸ ಮಾಡಬೇಕೆಂದು ಆಹ್ವಾನ ಮಾಡಿದ್ದರು. ನಾನು 'ಅಭಯಧರ್ಮ' ಎಂಬ ಹೆಸರಿನಿಂದ ಒಂದು ಉಪನ್ಯಾಸ ಮಾಡಿದೆನು. ಬಹಿರಂಗವಾಗಿ ದೊಡ್ಡ ಸಭೆಯ ಮುಂದೆ ನಾನು ಉಪನ್ಯಾಸ ಮಾಡಿದ್ದು ಅದೇ ಮೊದಲನೆಯ ಸಲ. ಅರ್ಧ ಘಂಟೆಯ ಹೊತ್ತು ಉಪನ್ಯಾಸ ಮಾಡಿ ಅಷ್ಟಕ್ಕೆ ಬಹುಶಃ ಸಭಾಕಂಪದಿಂದ ನಿಲ್ಲಿಸಿ ಬಿಟ್ಟಿದ್ದೆನಾದರೂ ಆ ಉಪನ್ಯಾಸವನ್ನು ಕೆಲವರು ಶ್ಲಾಘಿಸಿದರು. ಇಂಥವರಲ್ಲಿ ಕರ್ಪೂರ ಶ್ರೀನಿವಾಸರಾಯರೊಬ್ಬರು. ಅವರಿಗೆ ಹೊಸದಾಗಿ ಪ್ರಕಟವಾಗಿದ್ದ ನನ್ನ ಮಾಂಡೂಕ್ಯೋಪನಿಷತ್ತನ್ನು ಕೊಟ್ಟೆನು. ಅವರ ವಿಷಯವನ್ನು ಇನ್ನೊಮ್ಮೆ ಪ್ರಸ್ತಾಪಿಸುವೆನು.

4) ತಿರುಮಲಕೂಡಲು ನರಸೀಪುರದಲ್ಲಿ ನಡೆದ ಸಪ್ತಾಹಕ್ಕೆ ನಾನು, ಚಿದಂಬರಯ್ಯನವರು, ನಂಜಪ್ಪನವರು, (?) ಸೀತಾರಾಮಯ್ಯನವರು, ಶ್ರೀಕಂಠಯ್ಯನವರು, ನಾರಾಯಣಯ್ಯರ್ - ಮುಂತಾದ ಭಕ್ತಬಂಧುಗಳೆಲ್ಲ ಸೇರಿದೆವು. ಅಲ್ಲಿ ಬ್ರಹ್ಮಾನಂದರ ಶಿಷ್ಯರಾದ ಶ್ರೀನಿವಾಸಶಾಸ್ತ್ರಿಗಳೆಂಬವರು ಏರ್ಪಡಿಸಿದ್ದ ಆ ಸಪ್ತಾಹ ಬಹಳ ವಿಜೃಂಭಣೆಯಿಂದ ನಡೆಯಿತು. ಅಖಂಡ ಭಜನೆಯ ಜೊತೆಗೆ ಪ್ರತಿದಿನವೂ ನೂರಾರು ಜನರಿಗೆ ಮೃಷ್ಟಾನ್ನಭೋಜನ, ಬೆಳಗ್ಗೆ ಮತ್ತು ಸಾಯಂಕಾಲ ಪ್ರವಚನಗಳು, ಉಪನ್ಯಾಸಗಳು, ಕೀರ್ತನೆಗಳು - ಇವೆಲ್ಲ ಊರಿನವರ ಮನಸ್ಸನ್ನು ಮೇಲಕ್ಕೆತ್ತಿದ್ದವು. ನಾನೂ ಅಲ್ಲಿ ಉಪನ್ಯಾಸಗಳನ್ನು ಮಾಡಿದೆ. ರಾಮಕೃಷ್ಣ ಮಿಷನ್ನಿನ ಉಪನ್ಯಾಸಕ್ಕಿಂತ ಅದು ಹೆಚ್ಚು ಪರಿಣಾಮಕಾರಿಯಾದಂತೆ ಕಂಡಿತು. ಒಂದು ಉಪನ್ಯಾಸದ ಸಾರವನ್ನು ಒಬ್ಬ ಹೆಣ್ಣುಮಗಳು ತಮ್ಮ ತಾಯಿಗೆ ಚಾಚೂ ತಪ್ಪದೆ ರಾತ್ರೆ ಒಪ್ಪಿಸಿದ್ದನ್ನು ಕೇಳಿ ನಾನು ಚಕಿತನಾದೆನು. ಹೆಂಗಸರಿಗೆ ತಿಳಿವಳಿಕೆ ಸಾಲದು, ವಿದ್ಯಾಭ್ಯಾಸವು ಬೇಕಿಲ್ಲ - ಎಂಬವರ ಅಭಿಪ್ರಾಯದ ಜೊಳ್ಳುತನಕ್ಕೆ ಅದೊಂದು ಉದಾಹರಣೆಯಾಗಿತ್ತು. ಆ ಹೆಣ್ಣುಮಗಳ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಲಿರುವೆನು.

5) ಈ ಸಮಯದಲ್ಲಿ ಚಿದಂಬರಯ್ಯನವರು ನಮ್ಮ ಮನೆಗೆ ಹತ್ತಿರವೇ ಶಂಕರಪುರದ ಒಂದು ಮನೆಯಲ್ಲಿ ವಾಸವಾಗಿದ್ದರು ; ಅವರ ಮೂವರು ಮಕ್ಕಳೂ ಅಲ್ಲಿದ್ದರು. ಹಿರಿಯವರಾದ ವೆಂಕಟರಾಮಯ್ಯನವರು ಹೊಸಕೋಟೆಯಿಂದ ವರ್ಗವಾಗಿ ಬಂದಿದ್ದರು. ಶ್ರೀನಿವಾಸಮೂರ್ತಿಗಳು ಕುರ್ತಕೋಟಿ, ಧಾರವಾಡ, ಮದರಾಸ್ - ಪ್ರಾಂತಗಳಲ್ಲಿ ವಿದ್ಯಾಭ್ಯಾಸಮಾಡಿಕೊಂಡು 'ವೇದಾಂತ ಶೀರೋಮಣಿ' ಎಂಬ ಬಿರುದನ್ನು ಸಂಪಾದಿಸಿಕೊಂಡು ಬಂದಿದ್ದರು. ನನ್ನ ಪ್ರಾರ್ಥನೆಯಂತೆ ಅವರು ನನ್ನ ಪುಸ್ತಕವನ್ನೆಲ್ಲ ದೇವನಾಗರಿಯಲ್ಲಿ ಸುಂದರಾಕ್ಷರಗಳಲ್ಲಿ ಬರೆದುಕೊಟ್ಟರು. ಕೃ.ಸ್ವಾ.ಅಯ್ಯರಿಗೆ ಮೂಲಾವಿದ್ಯಾನಿರಾಸದ ವಿಷಯಕ್ಕೆ ಅತ್ಯಂತ ಉತ್ಸಾಹ. ರಾತ್ರೆ ಒಂಬತ್ತಾದ ಮೇಲೆ ತಪ್ಪದೆ ನಿದ್ರೆಹೋಗುತ್ತಿದ್ದ ಅವರು ಒಂದು ದಿನ ರಾತ್ರೆ ಹನ್ನೆರಡು ಘಂಟೆಯವರೆಗೂ ಎಚ್ಚತ್ತೇ ಇದ್ದು ಅದರ ಒಂದು ಭಾಗವನ್ನು ಕೇಳಿ ಅಭಿನಂದನೆ ಮಾಡಿದ್ದರು. 'ಈ ಪುಸ್ತಕವನ್ನು ಓಲೆಗರಿಯ ಪುಸ್ತಕದಲ್ಲಿ ಬರೆಯಿಸಿಟ್ಟರೆ ಶಾಶ್ವತವಾಗಿರುತ್ತದೆ. ನಾನೇ ಬರೆಯುವವರನ್ನು ವಿಚಾರಿಸುತ್ತೇನೆ' ಎಂದರು. ಪುಸ್ತಕವನ್ನೆಲ್ಲ ಆದ್ಯಂತವಾಗಿ ಅವರ ಪ್ರೇರಣೆಯಿಂದಲೇ ಆದದ್ದೆಂದು ಆಗಲೆ ಹೇಳಿರುತ್ತೇನೆ. ಅವರ ಪ್ರೇರಣೆಯನ್ನು ಸ್ಮಾರಕವಾಗಿ ಅದರ ಕೊನೆಯಲ್ಲಿ 'ಶ್ರುತಿಶಿರಸಿ ನಿಗೂಢಂ ಶುದ್ಧಮದ್ವೈತತತ್ತ್ವಂ। ಕುಮತಿಭಿರನವಾಪ್ಯಂ ಹ್ಯೇತದರ್ಥಂ ನಿಬದ್ಧಮ್। ವ್ಯತನುತ ಕೃಪಯಾ ಯಃ ಪ್ರೇರಯಿತ್ವಾ ಧಿಯೋ ಮೇ। ತಮಖಿಲಹೃದಯಜ್ಞಂ ಕೃಷ್ಣಸಂಜ್ಞಂ ನತೋಽಸ್ಮಿ ॥' ವೇದಾಂತದಲ್ಲಿ ಅಡಗಿರುವ ಶುದ್ಧವಾದ ಅದ್ವೈತತತ್ತ್ವವು ಅಲ್ಪ ಬುದ್ಧಿಯವರಿಗೆ ಸಿಕ್ಕತಕ್ಕದಲ್ಲವಷ್ಟೆ. ಇದಕ್ಕಾಗಿ ಯಾವಾತನು ಕೃಪೆಯಿಂದ ನನ್ನ ಬುದ್ಧಿವೃತ್ತಿಗಳನ್ನು ಪ್ರೇರಿಸಿ ಈ ನಿಬಂಧವನ್ನು ಮಾಡಿಸಿದನೋ ಅಂಥ ಎಲ್ಲರ ಹೃದಯವನ್ನು ಬಲ್ಲ ಕೃಷ್ಣನೆಂಬ ಹೆಸರಿನಾತನನ್ನು ನಮಿಸುತ್ತೇನೆ ಎಂಬುದು - ಆ ಶ್ಲೋಕದ ಅಭಿಪ್ರಾಯ. ಕೃ.ಸ್ವಾ. ಅಯ್ಯರವರ ಮೂಲಕ ಎಲ್ಲರ ಆತ್ಮನಾದ ಕೃಷ್ಣ ಪರಮಾತ್ಮನೇ ಈ ಗ್ರಂಥವನ್ನು ಬರೆಯುವಂತೆ ನನ್ನನ್ನು ಪ್ರೇರಣೆ ಮಾಡುತ್ತಾನೆ ಎಂಬುದು ನನ್ನ ಭಾವವು.

# 31. ಮದ್ದಗಿರಿ (1920-21)

ಮದ್ದಗಿರಿಯಲ್ಲಿ ನಾನು ಇದ್ದದ್ದು ಒಂಬತ್ತೂವರೆ ತಿಂಗಳು ಮಾತ್ರ. ಆದರೆ ಅಷ್ಟು ಕಾಲದಲ್ಲಿಯೇ ಕೆಲವು ಪ್ರಧಾನವಾದ ಘಟನೆಗಳು ನಡೆದವು.

## ತುಮಕೂರಿನಲ್ಲಿ ಹಳೆಯ ಪರಿಚಿತರು :

ತುಮಕೂರಿಗೆ ಹೋಗಿದ್ದ ಕೃ. ಸ್ವಾ. ಅಯ್ಯರು ಮದ್ದಗಿರಿಗೆ ಹೋಗುವ ಮುಂಚೆ ತಮ್ಮನ್ನು ನೋಡಬೇಕೆಂದೂ ಮೂಲಾವಿದ್ಯೆಯ ಕೈಪ್ರತಿಯನ್ನು ಇನ್ನೊಂದು ಸಲ ತಾವು ನೋಡಬೇಕೆಂದೂ ಬರೆದಿದ್ದರು. ಅವರು ನಾನು ಹೋಗುವದರೊಳಗೆ ತಮ್ಮ ಸ್ನೇಹಿತರುಗಳಿಗೆ ನನ್ನ ವಿಷಯವನ್ನು ಹೇಳಿಟ್ಟಿದ್ದರು. ಅಲ್ಲಿ ಒಂದು ದೇವಾಲಯದಲ್ಲಿರಬಹುದು, ನನ್ನಿಂದ ಒಂದು ಸಣ್ಣ ಉಪನ್ಯಾಸವನ್ನು ಮಾಡಿಸಿದರು. ಅಲ್ಲಿ ರಂಗಯ್ಯಂಗಾರ್, ಜೋಯಿಸರು, ಕೃಷ್ಣಮಾಚಾರ್ ಮೊದಲಾದವರು ಸೇರಿದ್ದರು. ಕೃಷ್ಣಮಾಚಾರ್ಯರೆಂದರೆ ಚಿಕ್ಕಮಗಳೂರಿನಲ್ಲಿ ನನಗೆ ಕನ್ನಡ ವ್ಯಾಕರಣದಲ್ಲಿ ಪ್ರವೇಶಿಸಿ ಕನ್ನಡದ ಅಭಿಮಾನವನ್ನು ಹುಟ್ಟಿಸಿದ್ದ ಮಹನೀಯರು. ಅವರು ನನ್ನ ಉಪನ್ಯಾಸವನ್ನು ಶ್ಲಾಘಿಸಿ, ಈಗ ಸುಬ್ಬರಾಯರು 'ಶಿಷ್ಯಾದಿಚ್ಛೇತ್ ಪರಾಜಯಮ್' ಎಂಬ ಉಕ್ತಿಯನ್ನು ನನಗೆ ತಂದು ಕೊಟ್ಟಿರುತ್ತಾರೆ. ಅವರು ಉತ್ತರೋತ್ತರ ಅಭ್ಯುದಯಾದಿಗಳನ್ನು ಪಡೆಯಲಿ ಎಂಬುದು ನನ್ನ ಹಾರ್ದಿಕವಾದ ಹಾರೈಕೆ ಎಂದು ಸಂತೋಷದಿಂದ ಅಭಿನಂದನೆ ಮಾಡಿದರು. ರಂಗಯ್ಯಂಗಾರರು ಸೆಂಟ್ರಲ್ ಕಾಲೇಜಿನಲ್ಲಿ ನನ್ನ ಜೊತೆಯಲ್ಲಿ ಓದುತ್ತಿದ್ದರಂತೆ; ಅದನ್ನು ಜ್ಞಾಪಿಸಿಕೊಂಡು 'ಬಹಳ ಸಂತೋಷ ; ನೀವು ಯಾರೋ, ಉಪನ್ಯಾಸ ಹೇಗಾದೀತೋ ಎಂಬ ಶಂಕೆಯಿಂದ ಬಹಿರಂಗ ಸ್ಥಲದಲ್ಲಿ ನಾವುಗಳು ಏರ್ಪಡಿಸಲಿಲ್ಲ' ಎಂದರು. ಕೃ.ಸ್ವಾ. ಅಯ್ಯರು ಕೆಲವು ವೇದಾಂತವಿಚಾರಗಳನ್ನು ಮನೆಯಲ್ಲಿ ಪ್ರಸ್ತಾಪಿಸಿದರು. ಅಂತೂ ತುಮಕೂರಿನ ಒಂದು ದಿನ ಸಂತೋಷದಿಂದ ಕಳೆಯಿತು.

## ಮದ್ದಗಿರಿ ಪ್ರವೇಶ :

ಮದ್ದಗಿರಿಯಲ್ಲಿ ಸುಬ್ಬಣ್ಣನವರೆಂಬ ತಮ್ಮ ಬಂಧುವೊಬ್ಬರನ್ನು ಉಪಯೋಗಿಸಿಕೊಂಡರೆ ಕೆಲಸವೆಲ್ಲ ಸಲೀಸಾಗುವದೆಂದು ಚಿದಂಬರಯ್ಯನವರು ಹೇಳಿದ್ದರು. ನಾನು ಹೋದ ಮಾರನೆಯ ದಿನವೇ ಹಳೆಯ ಹೆಡ್‌ಮಾಸ್ಟರಿಗೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದ ಸ್ಥಳದಲ್ಲಿ ನನ್ನಿಂದಲೂ ಒಂದು ಸಣ್ಣ ಭಾಷಣವನ್ನು ಉಪಾಧ್ಯಾಯರುಗಳು ಮಾಡಿಸಿದರು. ಅದು ಊರೊಳಗೆಲ್ಲ ಹರಡಿ ಜನರಲ್ಲಿ

ಸದಭಿಪ್ರಾಯಕ್ಕೆ ಬೀಜಾವಾಪವಾಯಿತು. ಸ್ಕೂಲು ಮೇಷ್ಟರುಗಳಲ್ಲಿದ್ದ ಕೆಲವು ಪರಸ್ಪರ ವೈಷಮ್ಯಗಳು ಸುಬ್ಬಣ್ಣನವರ ಸಲಹೆಯಿಂದ ಮಾಯವಾದವು. ಪಾಠಕ್ರಮವನ್ನು ಹುರುಪಿನಿಂದ ಸರಿಪಡಿಸುವದಕ್ಕೆ ಆರಂಭಿಸಿದೆ.

## ಸ್ವದೇಶಿ :

ಇಷ್ಟರಲ್ಲಿಯೇ ಜಯರಾಮಚಾರರು, ರಂಗಯ್ಯಂಗಾರ್, ಜೋಯಿಸರು - ಇವರೊಡನೆ ಮದ್ದಗಿರಿಗೆ ಬಂದರು. ಅವರು ಆ ಊರಿನ ದೇವಸ್ಥಾನದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ರಂಗಯ್ಯಂಗಾರ್ ಮೊದಲಾದವರಿಂದ ಮಾಡಿಸಿದರು. ಆಚಾರ್ಯರ ವಿಷಯಕ್ಕೆ ನನ್ನ ಮನೋಭಾವ ಹೇಗಿತ್ತೆಂಬುದನ್ನು ಆಗಲೇ ಹೇಳಿರುತ್ತೇನೆ. ಅವರು ಸರ್ಕಾರದ ವಿರುದ್ಧವಾಗಿ ಜನರನ್ನು ದಂಡೆಗೆ ಎತ್ತುಗಟ್ಟುವ ರಾಜ್ಯದ್ರೋಹಿಗಳು ಎಂದು ನನ್ನ ಮನಸ್ಸಿನಲ್ಲಿ ನಿಶ್ಚಯವಾಗಿತ್ತು. ಇಷ್ಟರಲ್ಲಿ ಇಂಡಿಯಾ ಗವರ್ನಮೆಂಟಿನವರ ಪ್ರೇರಣೆಯಿಂದ ನಮ್ಮ ದೇಶದ ಸ್ಕೂಲುಗಳಿಗೆಲ್ಲಾ ಒಂದು ಗುಪ್ತವಾಗಿರಿಸಬೇಕಾದ ಸರ್ಕ್ಯುಲರ್ ಬಂದು ತಲುಪಿತ್ತು. ಸ್ಕೂಲು ಹುಡುಗರು ತಮ್ಮ ನ್ಯಾಯವಾದ ಕೆಲಸಗಳನ್ನು ಬಿಟ್ಟು ರಾಜಕೀಯ ಚಳುವಳಿಗಳಲ್ಲಿ ಸೇರದಂತೆ ಆದಷ್ಟು ಮಟ್ಟಿಗೆ ಎಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಅದರಲ್ಲಿ ಬರೆದಿತ್ತು. ಆ ವಿಷಯದಲ್ಲಿ ತಾತ್ಸಾರ ಮಾಡಿದವರಿಗೆ ದಂಡನೆಯಾಗಬಹುದೆಂದು ಜನರು ಅಂದುಕೊಳ್ಳುತ್ತಿದ್ದರು. ಆದ್ದರಿಂದ ಸ್ಕೂಲು ಹುಡುಗರು ಯಾರೂ ಈ ಚಳುವಳಿಯಲ್ಲಿ ಸೇರಬಾರದೆಂಬುದು ನನ್ನ ಮನೋಗತ. ಈವರೆಗೆ ಆಗಿದ್ದ ಕಾಂಗ್ರೆಸ್ಸಿನ ಚಟುವಟಿಕೆಗಳ ಇತಿಹಾಸವಾಗಲಿ ಸರಕಾರದವರು ಅವರನ್ನು ಹತ್ತಬಡೆಯುವದಕ್ಕೆ ಕೈಗೊಂಡಿದ್ದ ಕಾರ್ಯಾಚರಣೆಗಳಾಗಲಿ ನನ್ನ ಲಕ್ಷ್ಯಕ್ಕೆ ಬಂದೇ ಇರಲಿಲ್ಲ. ಖಿಲಾಫತ್ತಿನ ವಿಷಯದಲ್ಲಿ ಮುಸಲ್ಮಾನರಿಗೆ ಆಗಿದ್ದ ಅನ್ಯಾಯ, ಪಂಜಾಬಿನಲ್ಲಿ ಸರಕಾರದವರ ಬೆನ್ನು ಚಪ್ಪರಿಸುವ ಧೈರ್ಯದಿಂದ ಅಧಿಕಾರಿಗಳು ನಡೆಯಿಸಿದ್ದ ಕ್ರೂರ ಕೊಲೆಗಳು, ಅಲಿ ಸಹೋದರರ ಬಂಧನ, ಕಾಂಗ್ರೆಸಿಗರ ವೈಯುಕ್ತಿಕ ಸಿವಿಲ್ ಡಿಸೊಬೀಡಿಯನ್ಸ್ (ಶಾಸನೋಲ್ಲಂಘನ), ಅಸಹಕಾರ, ಪರದೇಶಿವಸ್ತುಗಳ ಬಹಿಷ್ಕಾರವಿಧಾನ, ವಿದ್ಯಾರ್ಥಿಗಳ ಸಹಕಾರ ಅಪೇಕ್ಷೆ ಇವು ಯಾವವೂ ನನ್ನ ಕಿವಿಗೆ ಬಿದ್ದೆ ಇರಲಿಲ್ಲವೆನ್ನಬಹುದು. ಆದ್ದರಿಂದ ನನಗೆ ಸರ್ಕಾರದ ವಿಷಯಕ್ಕೆ ಅಸಮಾಧಾನವಾಗುವದಕ್ಕೆ ಕಾರಣವೇ ಇರಲಿಲ್ಲ. ಜಯರಾಮಚಾರ್ರು ಜನರನ್ನು ಹುರಿದುಂಬಿಸುವ ರೀತಿ, ಕೀರ್ತನೆಗಳಲ್ಲಿ ಭಕ್ತಿರಸಪ್ರಧಾನವಾದ ಪದಗಳಿಗೂ ವೀರರಸಪ್ರಧಾನವಾದ ಅರ್ಥವನ್ನು ಕೊಡುವ ಪದ್ಧತಿ, ಅವರ ನಡತೆಯ

ವಿಷಯದಲ್ಲಿ ಒಬ್ಬಿಬ್ಬರು ಆಡಿಕೊಳ್ಳುತ್ತಿದ್ದ ಪೈಶುನ್ಯದ ಮಾತುಗಳು ನನ್ನ ಕಿವಿಗೆ ಬಿದ್ದಿದ್ದದ್ದು ಇದೆಲ್ಲಾ ಅವರ ವಿಷಯಕ್ಕೆ ನನಗೆ ವಿರುದ್ಧ ಭಾವನೆಯನ್ನೇ ಎಬ್ಬಿಸಿತ್ತು.

ಅವರು ಕಾರ್ಯಕ್ರಮದ ಅಂತ್ಯದಲ್ಲಿ ಸ್ಕೂಲುವಿದ್ಯಾರ್ಥಿಗಳನ್ನು ಸ್ವಯಂ ಸೇವಕರಾಗಿ ಮಾಡುವ ಸೂಚನೆಯನ್ನು ಮುಂದಕ್ಕೆ ತಂದರು. ಆ ದಿನ ಕೆಲವರು ನನ್ನನ್ನು ಒತ್ತಾಯದಿಂದ ಸಭೆಗೆ ಕರೆದೊಯ್ದಿದ್ದರು. ಒಬ್ಬ ಪ್ಲೀಡರು 'ಹೊಸ ಹೆಡ್‌ಮಾಸ್ತರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಕೊಡಬೇಕು !' ಎಂದು ಕೇಳಿಕೊಂಡರು. ಜಯರಾಮಚಾರ್ರು 'ಅವರು ಬೆಂಗಳೂರಿನ ಸಬ್ಜೆಕ್ಟ್ ಕಮಿಟಿಯ ಮೆಂಬರೇ ಆಗಿದ್ದಾರೆ' ಎಂದರು. ನನಗೆ ಚಿದಂಬರಯ್ಯನವರ ಅವಕಾಶದ ಸ್ಮರಣೆಯಾಯಿತು ; ಅವರು ನನ್ನ ಅನುಮತಿಯಿಲ್ಲದೆ ಹಾಗೆ ಸೂಚಿಸಬಾರದಾಗಿತ್ತೆಂದು ನನಗೆ ತೋರಿತು. ನಾನು ಮಾತನಾಡಲೇಬೇಕೆಂಬ ಅಭಿಪ್ರಾಯವಿದೆ ಎಂದು ವ್ಯಕ್ತವಾದ್ದರಿಂದ, ನಾನು ಎದ್ದುನಿಂತು ''ಸ್ಕೂಲು ಹುಡುಗರು ಪ್ರಥಮತಃ ವಿದ್ಯಾರ್ಥಿಗಳು ; ಅವರಿಗೆ ಹೊರಗಿನ ಯಾವ ಕಾರ್ಯದಲ್ಲಿ ಪ್ರವೇಶವಾಗಬೇಕಾದರೂ ಅವರ ತಂದೆತಾಯಿಗಳ ಅನುಜ್ಞೆ ಅವಶ್ಯವಾಗಿರುತ್ತದೆ. ಈ ವಿಷಯದಲ್ಲಿ ಹೆಡ್‌ಮಾಸ್ತರರು ಹೇಳಬೇಕಾದದ್ದು ಏನೂ ಇರುವದಿಲ್ಲ ಎಂದು ನನಗೆ ತೋರುತ್ತದೆ. ಆದರೂ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ನನ್ನ ಉಪದೇಶವು ಇಷ್ಟೇ, ಅವರು ಪಾಠಗಳನ್ನು ಅಭ್ಯಾಸ ಮಾಡಿ, ಮನೆಯ ಕೆಲಸಗಳಲ್ಲಿ ತಮ್ಮ ಕೈಯಲ್ಲಾದ ಸಹಕಾರವನ್ನು ಮಾಡಿ, ಉಳಿದ ಕಾಲವನ್ನು ಹಿರಿಯರ ಅನುಮತಿ ಪಡೆದು ದೇಶಸೇವೆಗೂ ಉಪಯೋಗಿಸಬಹುದಾಗಿದೆ. ತಂದೆತಾಯಿಗಳು ಏನಾದರೂ ಕೆಲಸವನ್ನು ಹೇಳಿದರೆ 'ನಾನು ಸ್ವಯಂಸೇವಕನಾದ್ದರಿಂದ ದೇಶಸೇವೆಯ ಕೆಲಸಕ್ಕೆ ಹೋಗಬೇಕು ; ಆದ್ದರಿಂದ ನನಗೆ ಮನೆಯ ಕೆಲಸಗಳಿಗೆ ವಿರಾಮವಿಲ್ಲ' ಎನ್ನಬಾರದು. ಹುಡುಗರಿಗೆ ರಾಜಕೀಯ ವಿಚಾರಗಳು ತಿಳಿಯುವ ಅವಕಾಶವು ಬಹಳ ಕಡಿಮೆ. ಯಾರೋ ಹೊರಗಿನವರು ಅವರನ್ನು ಆ ಕಾರ್ಯಗಳಿಗೆ ಪ್ರೇರಿಸಿದ ಮಾತ್ರದಿಂದ ಅವರು ಅವುಗಳಲ್ಲಿ ತೊಡಗತಕ್ಕದ್ದಲ್ಲ. ಆದರೆ ಅವರು ದೇಶಸೇವೆ ಮಾಡಲೇಬಾರದೆಂದೇನು ನನ್ನ ಅಭಿಪ್ರಾಯವಲ್ಲ. ಉದಾಹರಣೆಗೆ ಈ ದೇವಸ್ಥಾನವನ್ನು ಚೊಕ್ಕಟವಾಗಿಟ್ಟುಕೊಳ್ಳುವದಕ್ಕೆ, ಇಲ್ಲಿ ಗೋಡೆಗಳ ಮೇಲೆ ಹುಡುಗರು ಇದ್ದಲಿಯಿಂದ ಗೀಚಿ ಏನೇನೋ ಮಾತುಗಳನ್ನು ಬರೆದಿರುವದನ್ನು ಅಳಿಸಿಹಾಕಿ, ಇನ್ನುಮುಂದೆ ಅದಕ್ಕೆ ಅವಕಾಶವಿಲ್ಲದ ಹಾಗೆ ನೋಡಿಕೊಳ್ಳುವದಕ್ಕೆ ಅವರು ಸಹಾಯ ಮಾಡಬಹುದು. ಊರಿನವರು ಒಟ್ಟಾಗಿ ಮಾಡುವ ಸಾರ್ವಜನಿಕ

ಕಾರ್ಯಗಳಲ್ಲಿ ತಮ್ಮತಮ್ಮ ಕೈಯಲ್ಲಾದ ಸೇವೆಯನ್ನು ಸಲ್ಲಿಸಬಹುದು. ಇದನ್ನೆಲ್ಲಾ ವಿದ್ಯಾರ್ಥಿಗಳು ಮನದಂದುಕೊಂಡು, ತಮಗೆ ಪಾಠವು ಮನೆಕೆಲಸವೂ ಎಷ್ಟರ ಮಟ್ಟಿಗೆ ಬಿಡುವು ಕೊಡುವದೆಂಬುದನ್ನು ನಿರ್ಣಯಿಸಿಕೊಂಡು ಬಳಿಕವೇ ಸ್ವಯಂ-ಸೇವಕರಾಗುವ ಸಂಕಲ್ಪವನ್ನು ಸೂಚಿಸಲಿ !'' ಎಂದು ಹೇಳಿ ಕುಳಿತುಕೊಂಡೆನು. ಜಯರಾಮಚಾರ್ರು ಪ್ರೋತ್ಸಾಹಕ ವಾಕ್ಯಗಳನ್ನು ಕೇಳಿದ್ದರೂ ಅಲ್ಲಿದ್ದ ವಿದ್ಯಾರ್ಥಿಗಳ ತಾಯಿ ತಂದೆಗಳಿಗೆ ನಾನು ಹೇಳಿದ ಹಿತೋಕ್ತಿಯು, ಯುಕ್ತಿಯುಕ್ತವೂ ಕಾಲಾನುಗುಣವೂ ಆಗಿದೆ ಎಂದು ತೋರಿರಬೇಕು, ಅವರೆಲ್ಲರು 'ಸರಿ ! ಚೆನ್ನಾಗಿದೆ !' ಎಂದು ಕೂಗಿ ತಮ್ಮ ಸಮ್ಮತಿಯನ್ನು ಸೂಚಿಸಿದರು. ಜಯರಾಮಚಾರ್ರು ಕಾರ್ಯಕ್ರಮಕ್ಕೆ ಸ್ವಲ್ಪಮಟ್ಟಿಗಾದರೂ ಅಡ್ಡಿಯಾದ ಅಪರಾಧವು ನನ್ನ ಮೇಲೆ ಹೊರುತ್ತದೆ ಎಂದು ನನಗೆ ಅನ್ನಿಸಿರಲಿಲ್ಲ. ಕಾಂಗ್ರೆಸಿನವರು ಸ್ವಯಂಸೇವಕರು 18 ವರ್ಷಗಳಿಗಿಂತ ಕಡಿಮೆಯ ವಯಸ್ಸಿನವರಾಗಿರಬಾರದೆಂದು ನಿಬಂಧನೆ ಮಾಡಿಕೊಂಡಿದ್ದಾರೆಂದು ಈಗ ನನಗೆ ತಿಳಿಯಬಂದಿದೆ. ಆ ದೃಷ್ಟಿಯಿಂದ ನೋಡಿದರೆ ನಮ್ಮ ಸ್ಕೂಲಿನ ವಿದ್ಯಾರ್ಥಿಗಳನ್ನು ಆ ಕೆಲಸಕ್ಕೆ ಆರಿಸಿಕೊಂಡದ್ದೇ ಸರಿಯಲ್ಲವೆಂದು ಹೇಳಬೇಕಾಗುತ್ತದೆ. ಹೇಗಾದರೂ ಆಗಲಿ ನಾನಂತು ನನ್ನ ಅಭಿಪ್ರಾಯವನ್ನು ಆಗ್ಗೆ ಸ್ಪಷ್ಟವಾಗಿಯೇ ತಿಳಿಸಿದೆನೆಂಬುದು ನಿಶ್ಚಯ.

ಆ ದಿನ ರಾತ್ರೆ ಊರೊಳಗೆ ಜಯರಾಮಚಾರರಿಗೆ ಒಂದು ಉತ್ಸವವನ್ನು ಏರ್ಪಡಿಸಲಾಗಿತ್ತು. ದೇವರ ಉತ್ಸವವೊಂದು ಹೊರತು ಇಂತಹ ಉತ್ಸವಗಳು ಈ ವರೆಗೆ ಕಣ್ಣಿಗೆ ಬಿದ್ದಿಲ್ಲವಾದ್ದರಿಂದ ಊರ ಜನರು ಕುತೂಹಲದಿಂದ ಗುಂಪುಕಟ್ಟಿಕೊಂಡು ನೋಡುತ್ತಿದ್ದರು. ನಮ್ಮ ಮನೆಯ ಮುಂದಕ್ಕೆ ಉತ್ಸವವು ಬರುವದರೊಳಗೆ ಜನವು ಬಹಳ ಸೇರಿತ್ತು. ಜಯರಾಮಚಾರ್ರು ನನ್ನನ್ನು ಕಾಣಬೇಕೆಂದು ಹೇಳಿಕಳುಹಿಸಿದರು. ಯತ್ನವಿಲ್ಲದೆ ನಾನು ಮನೆಯ ಬಾಗಿಲಿಗೆ ಬಂದೆ. ''ಮಹಾತ್ಮಗಾಂಧಿ ಕೀ ಜೈ !'' ''ಷೌಕತ್ಾಲಿ ಕೀ ಜೈ !'' ''ಜಯರಾಮಚಾರೂ ಕೀ ಜೈ !'' ಎಂಬ ಘೋಷಗಳು ಭೋರ್ಗರೆದವು. ಜಯರಾಮಚಾರ್ರೂ 'ಬನ್ನಿ !' ಎಂದರು. 'ಹೂಂ' ಎಂದು ನಾನು ಸ್ವಲ್ಪದೂರ ಹೋದಂತೆ ಮಾಡಿ ಹಿಂದಕ್ಕೆ ಬಂದು ಬಿಟ್ಟೆ. ಅವರ ವಿಷಯದಲ್ಲಿ ನನಗೆ ಒಳ್ಳೆಯ ಅಭಿಪ್ರಾಯವಾಗಲಿಲ್ಲ. 'ಎಂಥ ಹೆಮ್ಮೆಯ ಮನುಷ್ಯ ! ಗಾಂಧಿಯ ಜೊತೆಗೆ ತನಗೆ ಜಯಕಾರ ಹೇಳಿದರೂ ಸುಮ್ಮನಿದ್ದಾನಲ್ಲ' ಎಂದುಕೊಂಡೆ. ಈ ಉತ್ಸವವನ್ನು ನೋಡಿದ್ದರ ವಾಸನೆಯಿಂದಲೋ ಏನೋ ಕೆಲವು ದಿನಗಳ ಮೇಲೆ ನನಗೆ ಒಂದು ಕನಸಾಯಿತು. ಊರಿನ ಬೀದಿಯಲ್ಲಿ ಒಂದು

ಕೊಪ್ಪರಿಗೆಯಲ್ಲಿ ಯಾವದೋ ಎಣ್ಣೆ ಅಥವಾ ಗುಗ್ಗುಳ ಧಗಧಗನೆ ಉರಿಯುತ್ತಿತ್ತು ; ವಾದ್ಯಗಳು ಬಾರಿಸುತ್ತಿದ್ದವು. ಒಂದೊಂದು ಮನೆಯ ಮುಂದೆ ಅದರ ಉತ್ಸವವು ನಿಂತಾಗಲೂ ಜನರು ತಮ್ಮ ಮನೆಯಿಂದ ಒಂದೊಂದು ಕೊಳ್ಳಿಯನ್ನು ತಂದು ಅದರಲ್ಲಿ ಅದ್ದಿ ಚೆನ್ನಾಗಿ ಹೊತ್ತಿಕೊಂಡ ಮೇಲೆ ಮನೆಯ ಮೇಲೆ ಹಾಕಿಕೊಳ್ಳುತ್ತಿದ್ದರು ! ಕನಸಿನ ಸೂಚನೆಯೇನಾದರೂ ಇರಲಿ, ಈ ರಾಜಕೀಯ ವ್ಯಾಪಾರದಲ್ಲಿ ಸೇರಿದವರು ಇಲ್ಲದ ತೊಂದರೆಯನ್ನು ಮೈಮೇಲೆ ಹಾಕಿಕೊಳ್ಳುತ್ತಿದ್ದಾರೆಂದು ನನಗೆ ಆ ಕಾಲಕ್ಕೆ ತೋರಿದ್ದು ನಿಜ, ಮುಂದೆ ಯಾವ ಕಾರಣದಿಂದಲೋ ಮದ್ದಗಿರಿಯ ಕೆಲವರು ಗೃಹಸ್ಥರು ತಾವು ಆ ಕಾರ್ಯದಲ್ಲಿ ಭಾಗಿಗಳಾಗದೆ ಇದ್ದಿದ್ದರೆ ಚೆನ್ನಾಗಿತ್ತೆಂದು-ಕೊಂಡರೋ ಆ ವಿಷಯದಲ್ಲಿ ನನ್ನ ಔದಾಸೀನ್ಯವನ್ನೇ ಶ್ಲಾಘಿಸಿದರು.

## ಹೊಸಸ್ಕೂಲು ಕಟ್ಟಡ :

ನಾನು ಮದ್ದಗಿರಿಗೆ ಬಂದ ಕೆಲವು ದಿನಗಳಲ್ಲಿಯೇ ಸ್ಕೂಲಿನ ಹೊಸ ಕಟ್ಟಡಕ್ಕೆ ಹೊರಡಬೇಕಾಯಿತು. ಆಗ್ಗೆ ದಿವಾನರಾಗಿದ್ದ ಕಾಂತರಾಜೇಅರಸುರವರು ಆವೂರಿಗೆ ಬರುತ್ತಾರೆಂಬ ಸುದ್ದಿ ಬಂದದ್ದರಿಂದ ಹೊಸದಾಗಿ ಸರ್ಕಲ್ ಇನ್‌ಸ್ಪೆಕ್ಟರಾಗಿ ಬಂದಿದ್ದ ವೆಂಕಟರಾಮಯ್ಯನವರು ('ಕೃ.ಸ್ವಾ. ಅಯ್ಯರಿಗೆ ತುಮಕೂರಿಗೆ ವರ್ಗವಾದಾಗ ಸರ್ಕಲ್ ಇನ್‌ಸ್ಪೆಕ್ಟರ್ ಕೃಷ್ಣಮೂರ್ತಿಗಳಿಗೆ ಅವರ ಸ್ಥಾನಕ್ಕೆ ವರ್ಗವಾಯಿತು') ಆದಷ್ಟು ಬೇಗನೆ ಸಾಮಾನುಗಳನ್ನು ಸಾಗಿಸುವ ಏರ್ಪಾಡು ಮಾಡಬೇಕೆಂದೂ, ಅಲ್ಲಿ ದಿವಾನರನ್ನು ಬರಮಾಡಿಕೊಂಡು ಅವರಿಗೆ ಸ್ಕೂಲು ರಿಪೋರ್ಟು ವರದಿ ಮಾಡಿ ಸಂತೋಷಪಡಿಸಬೇಕೆಂದೂ ಅಪ್ಪಣೆಮಾಡಿದರು. ಆ ತ್ವರಿತವಾದ ಬದಲಾವಣೆಯಿಂದ ನನಗೆ ಸ್ವಲ್ಪ ಶ್ರಮವಾಯಿತು. ದಿವಾನರು ಮೇಲಿನ ತರಗತಿಯ ಹುಡುಗರಿಗೆ ಬುದ್ಧಿವಾದ ಹೇಳುವದಕ್ಕೆಂದು ಅವರನ್ನು ತಮ್ಮೆದುರಿಗೆ ಕೂರಿಸಬೇಕೆಂದು ತೀರಕೊನೆಯಲ್ಲಿ ಇಷ್ಟಪಟ್ಟದ್ದರಿಂದ ಹುಡುಗರನ್ನು ಗೊತ್ತು ಗುರಿಯಿಲ್ಲದೆ ಅಲ್ಲಿಗೆ ಹೋಗಿ ಎಂದು ಇನ್‌ಸ್ಪೆಕ್ಟರ್ ಹೇಳಿದ್ದರು ; ಅವರ ವಾಕ್ಯವನ್ನು ಅರ್ಥ ಮಾಡಿಕೊಳ್ಳದೆ ಹುಡುಗರು ಎಲ್ಲಿಗೋ ಹೋಗಿ ಕುಳಿತುಬಿಟ್ಟರು. ಆ ವಿಷಯಕ್ಕೆ ವೆಂಕಟರಾಮಯ್ಯನವರಿಗೆ ನನ್ನ ಮೇಲೆ ಅಕಾರಣವಾಗಿ ಸ್ವಲ್ಪ ಕೋಪವೂ ಬಂತು. ಹೇಗೇ ಆದರೂ ಕೊನೆಯಲ್ಲಿ ಎಲ್ಲವೂ ಸಂತೋಷಕರವಾಗಿ ಪರ್ಯವಸಾನವಾಯಿತು ; 'ದಿವಾನರು ಸಂತೋಷಪಟ್ಟರು' ಎಂದು ವೆಂಕಟ-ರಾಮಯ್ಯನವರು ಹೇಳಿದರು. ಆಗ್ಗೆ ನನ್ನದೊಂದು ಮಾಂಡೂಕ್ಯೋಪನಿಷತ್ತಿನ ಅನುವಾದದ ಪ್ರತಿಯನ್ನು ಅವರಿಗೆ ಅರ್ಪಿಸಿದೆ ; ಸಂತೋಷದಿಂದ ತೆಗೆದುಕೊಂಡರು.

## ಬರಕದ ರಾಮೋತ್ಸವ :

ಬರಕದ ಶ್ರೀಕಂಠಯ್ಯನವರ ವಿಷಯವನ್ನು ಹಿಂದೆ ಸೂರಪ್ಪನವರಿಂದ ಪರಾಮರ್ಶೆ ಮಾಡಿರುತ್ತೇನೆ. ಅವರು ಬರಕದಲ್ಲಿ ತಮ್ಮ ಮನೆದೇವರಾದ ಮಲ್ಲಿಕಾರ್ಜುನಸ್ವಾಮಿಯ ದೇವಾಲಯದಲ್ಲಿ ಹೆಚ್ಚು ಕಾಲವನ್ನು ಕಳೆಯುತ್ತಿದ್ದ-ರೆಂಬುದನ್ನು ತಿಳಿಸಿದ್ದೇನೆ. ಅವರ ದೈವಭಕ್ತಿಯನ್ನು ಕಂಡು ಕುಲಪುರೋಹಿತರಾದ ಲಕ್ಷ್ಮೀನಾರಾಯಣಭಟ್ಟರೆಂಬುವರು ಅವರಿಗೆ ಮಂತ್ರೋಪದೇಶವನ್ನು ಮಾಡಿದ್ದರು. ಆ ಬಳಿಕ ದ್ವಿತೀಯವಿವಾಹವಾಗಿ ರೈಲ್ವೇ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದರು. ಬೆಂಗಳೂರಲ್ಲಿ ಟ್ರೈಂಕೀಪರು ಕೆಲಸದಲ್ಲಿದ್ದಾಗಲೇ ಅವರನ್ನು ನಾನು ಸೂರಪ್ಪನವರ ಜೊತೆಯಲ್ಲಿ ಕಂಡದ್ದು. ಬೆಂಗಳೂರಿನಲ್ಲಿ ತಮ್ಮ ಮೇಲಿನ ಅಧಿಕಾರಿಗಳಾದ ವೆಂಕಟಸುಬ್ಬಯ್ಯನೆಂಬವರು ಗೋಂದಾವಳಿಯ ಮಹಾರಾಜರ ಶಿಷ್ಯರಾದ ಬ್ರಹ್ಮಾನಂದರಿಂದ ಅನುಗ್ರಹ ಪಡೆದು ಪೂಜಾದಿಗಳಲ್ಲಿ ನಿರತರಾಗಿದ್ದದ್ದು ತಿಳಿಯ-ಬಂದು ಶ್ರೀಕಂಠಯ್ಯನವರೂ ಪತ್ನೀ ಸಮೇತರಾಗಿ ಬೆಳಧಡಿಗೆ ಹೋದರಂತೆ. ಅಲ್ಲಿ ಅವರಿಂದ ಅನುಷ್ಠಾನದಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ತಿಳಿದುಕೊಂಡು ಬೆಂಗಳೂರಿಗೆ ಬಂದಿದ್ದರು. ಕಾಶಿಯಾತ್ರೆಯಲ್ಲಿ ಸೂರಪ್ಪನವರನ್ನು ಅಗಲಿ, ಬಂದಬಳಿಕ ವ್ಯವಹಾರದಲ್ಲಿ ವಿರಕ್ತಿಯುಂಟಾಗಿ ತಮ್ಮ ನೌಕರಿಗೆ ರಾಜಿನಾಮೇಕೊಟ್ಟು ಮಲ್ಲಿಕಾರ್ಜುನ ದೇವಾಲಯದಲ್ಲಿದ್ದರು. ಆ ದೇವಾಲಯ-ದಲ್ಲಿದ್ದಾಗ ಒಂದೆರಡು ಸಲ ಹೋಗಿದ್ದೆ. ಒಂದು ಸಪ್ತಾಹಕ್ಕೂ ಹೋಗಿದ್ದೆ. ಅಲ್ಲಿ ನಂಜಪ್ಪನವರು, ಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳೇ ಮುಂತಾದವರೂ ಬಂದಿದ್ದರು. ಭೋಜನಾದಿಗಳು ಬಹಳ ಸಂಭ್ರಮದಿಂದ ನಡೆದವು. ಬ್ರಾಹ್ಮಣಭೋಜನ ಕಾಲಕ್ಕೆ ಸೀತಾರಾಮಶಾಸ್ತ್ರಿಗಳು ಪತ್ನೀ ಸಮೇತರಾಗಿ ರಾಮನಾಮ ಕೀರ್ತನೆ ಮಾಡಿ ಪಂಕ್ತಿಯ ಮೇಲೆ ಸಂಚರಿಸಿ ಎಲ್ಲರಿಂದಲೂ ಕೀರ್ತನೆ ಮಾಡಿಸಿ ಉತ್ಸಾಹಗೊಳಿಸುತ್ತಿದ್ದರು. ಒಬ್ಬ ಗೃಹಸ್ಥರು ಯಾರು ಎಷ್ಟು ಹೇಳಿದರೂ ಕೀರ್ತನೆ ಮಾಡದೆ ಮೌನವನ್ನು ಧರಿಸಿದ್ದದ್ದು, ಶಾಸ್ತ್ರಿಗಳು ಅವರೆದುರಿಗೆ ಬಹಳ ಹೊತ್ತು ನಿಂತು ಭಜನೆ ಮಾಡಿ ಕೊನೆಗೂ ಆ ಗೃಹಸ್ಥರು ಅದೇಕೋ ಮೌನವನ್ನು ಧರಿಸಿದ್ದು ನೋಡುವವರಿಗೆ ವಿನೋದವೂ ಆದದ್ದಲ್ಲದೆ, ಚಿರಕಾಲದ ಕೀರ್ತನೆಯ ಲಾಭವೂ ದೊರೆಯಿತು. ಆ ಸಂದರ್ಭದಲ್ಲಿ ನಾನು ಒಂದೆರಡು ಉಪನ್ಯಾಸಗಳನ್ನು ಮಾಡಿದೆನೆಂದು ನೆನಪು.

## ಅರಸೀಕೆರೆಯ ಶ್ರೀರಾಮ ಸೇವಾಸಂಘಕ್ಕೆ :

ಅರಸೀಕೆರೆಯಿಂದ ನವರಾತ್ರೆಯ ಉತ್ಸವಕ್ಕೆ ಬರಬೇಕೆಂದು ನಂಜಪ್ಪನವರಿಂದ ರಾಮಸೇವಾಸಂಘದ ಪರವಾಗಿ ಪತ್ರವು ಬಂದಿತ್ತು. ತಿಮ್ಮಪ್ಪದಾಸರ ಮಕ್ಕಳು

ಗೋಂದಾವಳಿಗೆ ಹೋಗಿ ಬಂದ ಮೇಲೆ ಅವರೂ ಊರಿನವರೂ ಸೇರಿ 1917ರಲ್ಲಿ ಒಂದು ರಾಮೋತ್ಸವ ಸಂಘವನ್ನು ಏರ್ಪಡಿಸಿಕೊಂಡಿದ್ದರು. ನಂಜಪ್ಪನವರೂ ನಾರಣಪ್ಪನವರ ಸ್ನೇಹಕ್ಕಾಗಿ ಅದರಲ್ಲಿ ಭಾಗವನ್ನು ವಹಿಸಿದರು. ಸಂಘದವರು ಆಂಜನೇಯ ದೇವರಗುಡಿಯನ್ನು ಮುಖ್ಯಸ್ಥಾನವನ್ನಾಗಿ ಮಾಡಿಕೊಂಡು ಪ್ರತಿ ಶನಿವಾರವೂ ಸಾಯಂಕಾಲ ಊರೊಳಗೆ ಭಜನೆಯಾದ ಮೇಲೆ ಮಂಗಳಾರತಿಯನ್ನು ಮಾಡಿಸುತ್ತಿದ್ದರು ; ಶ್ರಾವಣಮಾಸದಲ್ಲಿ ಒಂದು ತಿಂಗಳು ಭಜನೆ ಮಾಡುತ್ತಿದ್ದರು. ಶನಿವಾರಗಳಲ್ಲಿಯೂ, ಕೃಷ್ಣಾಷ್ಟಮಿ ಈ ದಿನಗಳಲ್ಲಿ ನಂಜಪ್ಪನವರು ಏನಾದರೂ ಉಪನ್ಯಾಸಮಾಡುತ್ತಿದ್ದರು. ಸಂಘಕ್ಕೆ ಮೊದಲು ತಿಮ್ಮಪ್ಪದಾಸರು ಆಮೇಲೆ ಮಧ್ವರಾಯರೆಂಬವರು ಪ್ರೆಸಿಡೆಂಟರು ; ನಾರಾಣಪ್ಪನವರೂ ನಂಜಪ್ಪನವರೂ ಸೆಕ್ರೆಟರಿಗಳು, ಜೆ.ಟಿ. ಶ್ರೀಕಂಠಯ್ಯನವರು ಕೋಶಾಧ್ಯಕ್ಷರು. ಗೃಹಸ್ಥರ ಮನೆಗಳಿಗೆ ಸಣ್ಣ ಸಣ್ಣ ಚೀಲಗಳನ್ನು ಕೊಟ್ಟು ಶನಿವಾರದ ದಿನ ಅವರು ಅದರಲ್ಲಿ ಹಾಕಿಟ್ಟಿದ್ದ ಅಕ್ಕಿಯನ್ನು ತರುತ್ತಿದ್ದರು. ಮುಖ್ಯವಾಗಿ ಹುಡುಗರು ಅನೇಕರು ಭಜನೆಗೆ ಸೇರಿದರು ! ತಿಮ್ಮಪ್ಪದಾಸರ ಮಗ ರಾಮ ಮೇಷ್ಟರು, ಅವರ ಮನೆಯ ಹುಡುಗರು ಸಂಗೀತದಲ್ಲಿ ಮತ್ತು ಗದ್ಯಗಳಲ್ಲಿ ನೆರವಾಗುತ್ತಿದ್ದರು. ಗರುಡಗಂಭದಲ್ಲಿಯೂ ದುಡ್ಡು ಬರುತ್ತಿತ್ತು. ಅಕ್ಕಿಯನ್ನು ಆಗಾಗಲೇ ಹರಾಜುಹಾಕಿ ದುಡ್ಡನ್ನು ಶೇಖರಿಸಿಡುತ್ತಿದ್ದರು. ಸ್ವಾಮಿ-ವಿವೇಕಾನಂದರವರ ಜಯಂತಿಗೆ ಬೆಂಗಳೂರಿಂದ ನನ್ನನ್ನು ಕರೆಸಿಕೊಂಡಿದ್ದರು. ಊರಲ್ಲೆಲ್ಲ ಭಜನೆಯ ಸವಿ ಹತ್ತಿಕೊಂಡಿತ್ತು ; ಜನರ ಮನಸ್ಸಿನ ಮೇಲೆ ಸತ್ಪರಿಣಾಮವನ್ನು ಮಾಡುತ್ತಿತ್ತು.

ಈ ಸಂಘದವರ ಕೋರಿಕೆಯಂತೆ ನಾನು ಅರಸೀಕೆರೆಗೆ ಹೋದೆನು, ಚಿದಂಬರಯ್ಯನವರು ಅಲ್ಲಿ ಪ್ರತಿದಿವಸವೂ ಅಧ್ಯಾತ್ಮರಾಮಾಯಣವನ್ನು ಪುರಾಣ ಹೇಳುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿ ಶ್ರವಣಮಾಡುತ್ತಿದ್ದರು ; ದೇಶೀಯ ಭಾವನೆಯ ಅಭಿಪ್ರಾಯಗಳು ನಿರೂಪಣದಲ್ಲಿ ಅಲ್ಲಲ್ಲಿ ಸೇರುತ್ತಿದ್ದವೆಂದು ಕಾಣುತ್ತದೆ. ರಾತ್ರೆ ಹರಿಕಥೆಗಳೂ ಆಗುತ್ತಿದ್ದವು. ಹರಿಕಥೆಗೆ ಜಯರಾಮಾಚಾರ್ರು ಬರುವ ಹೊತ್ತಿಗೆ ಸರಕಾರದವರ ಅಡಚಣೆಗೆ ಪ್ರಾರಂಭವಾಯಿತೆಂದು ಕಾಣುತ್ತದೆ. ಅವರು ನವಮಿಯ ದಿನ ಹತ್ತೇ ನಿಮಿಷಗಳಲ್ಲಿ ರಾಮಜನ್ಮದ ಸಂವಿಧಾನವನ್ನು ಕೀರ್ತನರೂಪವಾಗಿ ನಿರೂಪಣಮಾಡಿದ್ದು ಜನರ ಮೇಲೆ ಬಹಳ ಪರಿಣಾಮ ವನ್ನುಂಟುಮಾಡಿತು. ಚಿದಂಬರಯ್ಯನವರು ಸುಧರ್ಮಪ್ರಭಾವ ಎಂಬ ನಾಟಕ ವನ್ನು ಬರೆದು 1917ರಲ್ಲಿಯೇ ಪ್ರಕಟಿಸಿದ್ದರು; ಅದರಲ್ಲಿ ಪ್ರಬೋಧಚಂದ್ರೋ ದಯದಂತೆ ಕೆಲವು ಅಧ್ಯಾತ್ಮಕಥಾ ಸಂವಿಧಾನಗಳನ್ನು ಸೇರಿಸಿತ್ತು. ಅದನ್ನು ದಶಮಿಯ ರಾತ್ರೆ ರಂಗಸ್ಥಲದಲ್ಲಿ ಆಡಿ ಪ್ರದರ್ಶನ ಮಾಡಬೇಕೆಂಬ ಏರ್ಪಾಡಾಗಿತ್ತು. ಆದರೆ

ಸರಕಾರದವರು ಲೈಸನ್ಸ್ ಕೊಡುವದಕ್ಕೆ ಹಾಕಿದ ಷರತ್ತುಗಳು ನಾಟಕದ ಕೆಲವರಿಗೆ ಒಪ್ಪಾಗದೆ ನಿಂತುಹೋಯಿತು. ಈ ವರ್ಷವೇ ನಂಜಪ್ಪನವರ ಮಗನ ಉಪನಯನವು ನಡೆಯಿತು. ಆ ಕಾಲದಲ್ಲಿ ಚಿದಂಬರಯ್ಯನವರು, ಹೆಜ್ಜಾಜಿ ಸೀತಾರಾಮಶಾಸ್ತ್ರಿಗಳು, ದೇವರಾಯ ಪುರಾಣಿಕರು, ತಿಮ್ಮಪ್ಪದಾಸರ ಮನೆಯವರು ಎಲ್ಲರೂ ಉಪಸ್ಥಿತರಾಗಿದ್ದರು. ಆಗ್ಗೆ ಭಜನೆ, ಹರಿಕಥೆ, ಉಪನ್ಯಾಸ ಇವುಗಳು ನಡೆದು ಕಾರ್ಯಕ್ಕೆ ಶೋಭಾಯಮಾನವಾಗಿದ್ದವು.

## ಮಗಳ ವಿವಾಹ :

ಉಪನಯನದ ಕೊನೆಯಲ್ಲಿ ಸಾಮಾನ್ಯವಾಗಿ, ಈ ಪ್ರಾಂತದಲ್ಲಿ ನಮ್ಮ ಹುಡಿಗಿಗೆ ವರ ಎಲ್ಲಿಯಾದರೂ ಸಿಕ್ಕಿಯಾನೇ ಎಂದು ವಿಚಾರಿಸಿದೆ, ಪುರೋಹಿತ ಕೃಷ್ಣಸ್ವಾಮಿಭಟ್ಟರು 'ಕಣಕಟ್ಟೆಯಲ್ಲಿ ಒಬ್ಬ ವರ ಇದ್ದಾನೆ; ಈ ದಿನವೇ ಪ್ರಯಾಣ ಮಾಡಿದರೆ ಮಾತ್ರ ಅನುಕೂಲ' ಎಂದು ತಿಳಿಸಿದರು. (ನಂಜಪ್ಪನವರೂ ಜೊತೆಯಲ್ಲಿದ್ದರೆಂದು ಕಾಣುತ್ತದೆ). ನಾವಿಬ್ಬರೂ ಕಣಕಟ್ಟೆಗೆ ಹೋಗಿ ವಿಚಾರಿಸಿದ್ದರಲ್ಲಿ, ಕಣಕಟ್ಟೆಯ ರಾಮಣ್ಣನವರ ಶಿಫಾರಸಿನಿಂದ ಮನೆಯವರು ಹೆಣ್ಣನ್ನು ನೋಡದೆಯೇ ಸೀತಾರಾಮದೀಕ್ಷಿತನೆಂಬ ವರನಿಗೆ ತಂದುಕೊಳ್ಳುವದಕ್ಕೆ ಒಪ್ಪಿಕೊಂಡು ಲಗ್ನಪತ್ರಿಕೆ ಮಾಡಿಸಿಕೊಟ್ಟರು. ಅನಿರೀಕ್ಷಿತವಾಗಿ ಆದ ಈ ಘಟನೆಯಿಂದ ಕೂಡಲೆ ನಾನು ಏರ್ಪಾಡುಮಾಡಿಕೊಳ್ಳಬೇಕಾಯಿತು. ಬೆಂಗಳೂರಿಗೆ ಹೋಗಿ ಕೋ-ಆಪರೇಟಿವ್ ಸೊಸೈಟಿಯಲ್ಲಿ ಸಾಲಕ್ಕೆ ಅರ್ಜಿಹಾಕಿ, ಚಿದಂಬರಯ್ಯನವರಿಂದಲೂ ಸಹಾಯವನ್ನು ಕೋರಿ, ಮನೆಯವರನ್ನೆಲ್ಲ ಕರೆದುಕೊಂಡು ಯಳ್ಳಂಬಳಸೆಗೆ ಹೋದೆ. ಚಿದಂಬರಯ್ಯನವರು, ಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳು, ಬರಕದ ಶ್ರೀಕಂಠಯ್ಯನವರು (ದಂಪತಿಗಳು), ತಿಮ್ಮಪ್ಪ ದಾಸರು, ಅವರ ಮಕ್ಕಳುಗಳಾದ ನಾರಣಪ್ಪನವರು, ರಾಮಣ್ಣನವರು - ಎಲ್ಲರೂ ಅಭಿಮಾನವಿಟ್ಟು ಮದುವೆಗೆ ಬಂದರು, ನೆಂಟರಿಷ್ಟರಿಗೇನೂ ಕಡಿಮೆಯಿರಲಿಲ್ಲ-ವಾದ್ದರಿಂದ ಭಕ್ತಮಂಡಲಿಯವರಿಗೆಲ್ಲ ರಂಗಾಭಟ್ಟರ ಮನೆಯನ್ನು ಏರ್ಪಾಡಿಸಿದ್ದೆವು. ಶ್ರೀಕಂಠಯ್ಯನವರು ಸೂರಪ್ಪನವರಿಂದ ತಮ್ಮ ವಶಕ್ಕೆ ಬಂದಿದ್ದ ರಾಧಾಕೃಷ್ಣ ವಿಗ್ರಹಗಳನ್ನು ತಂದು ನಡುಮನೆಯಲ್ಲಿಟ್ಟು ಪೂಜೆಗೆ ಏರ್ಪಾಡು ಮಾಡಿದ್ದರು. ಅಲ್ಲಿ ಹಗಲು ಸ್ನಾನ, ಸಂಧ್ಯಾ, ಜಪಪಾರಾಯಣಾದಿಗಳೂ ವಿಚಾರಗಳೂ ಮಧ್ಯಾಹ್ನ ಪುರಾಣವೂ ಸಾಯಂಕಾಲ ಭಜನೆಯೂ ಆಗುತ್ತಿದ್ದವು. ಗೋಂದಾವಳಿಯಿಂದ ನಾರಾಯಣರಾಯರೆಂಬವರು ಬಂದಿದ್ದರು ; ಅವರು ಮರಾಠಿಯಲ್ಲಿರುವ ಏಕನಾಥಭಾಗವತವನ್ನು ಓದುತ್ತಿದ್ದರು, ರಾತ್ರೆಯ ಭಜನೆಯಲ್ಲಿ ಹೆಂಗಸರೂ ಸೇರಿ

50-60 ಜನವಾಗುತ್ತಿತ್ತು. ಮದುವೆಯ ಕಾರ್ಯಕಲಾಪಗಳಿಗಿಂತಲೂ ಭಕ್ತ ಮಂಡಲಿಯವರ ಕಾಲಕ್ಷೇಪಪದ್ಧತಿಯು ಹೆಚ್ಚಾಗಿ ಜನಮನೋರಂಜನೆಯಾಗುತ್ತಿತ್ತು ಎನ್ನಬಹುದು. ಮದುವೆಗೆ ಹೆಣ್ಣಿನ ಕಡೆಯವರು 40-50 ಜನ ಸೇರಿದ್ದರು ; ಗಂಡಿನ ಕಡೆಯವರೂ ಅಷ್ಟೇ ಜನವಿರಬಹುದು. ಬೇಕಾದ ಪದಾರ್ಥಗಳನ್ನು ನಂಜಪ್ಪನವರ ತಂದೆಯವರು ಅಂಗಡಿಯಿಂದ ಸಾಲವಾಗಿ ಕೊಡಿಸಿದ್ದರು; ಮನೆಯಲ್ಲಿ ಬಂದವರನ್ನು ಕಡೂರಿನಿಂದ ಗಾಡಿಗಳ ಮೇಲೆ ಕರೆದುಕೊಂಡು ಬರುವದು, ಉಪಚಾರ ಮಾಡುವದು - ಮುಂತಾದ ಕೆಲಸಗಳನ್ನು, ಮದುವೆಯ ಕಾರ್ಯಕಲಾಪಗಳ ಹೊಣೆಯನ್ನು ಮುಖ್ಯವಾಗಿ ನನ್ನ ತಮ್ಮ ಕೃಷ್ಣಸ್ವಾಮಿಯೇ ಹೊತ್ತುಕೊಂಡಿದ್ದನು. ಯಳ್ಳಂಬಳಸೆಯಲ್ಲಿ ನೀರಿಗೆ ಸ್ವಲ್ಪ ತೊಂದರೆಯೇ ಆಗಿದ್ದರೂ ಊರ ಮುಂದಿನ ಬಾವಿ, ದೂರದಲ್ಲಿರುವ ಹಳ್ಳ ಮುಂತಾದ ಪ್ರದೇಶಗಳಿಂದ ಭಕ್ತಮಂಡಲಿಯವರೇ ನೀರು ಸೇದಿ ಗಾಡಿಯ ಮೇಲೆ ಇಟ್ಟುಕೊಂಡು ತರುತ್ತಿದ್ದರು. ಅವರು ಹೋಗುವಾಗ ಬರುವಾಗ ದೇವರನಾಮಸ್ಮರಣೆಯ ಕೀರ್ತನೆಗಳಿಂದ ತುಂಬಿ ಊರನ್ನು ಒಂದು ಸಣ್ಣ ಗೋಂದಾವಳಿಯಾಗಿ ಮಾಡಿಬಿಟ್ಟಿದ್ದರು. ಬೀಗರೂ ಹೊಂದಿಕೊಂಡಿದ್ದರಾದ್ದರಿಂದ ನನಗೆ ಕಾರ್ಯನಿಮಿತ್ತವಾಗಿ ಯಾವ ಯೋಚನೆಯೂ ಉಂಟಾಗಲಿಲ್ಲ. ಆದ್ದರಿಂದ ವಿಶೇಷವಾಗಿ ಭಕ್ತಮಂಡಲಿಯ ಜೊತೆಗೇ ಇರುತ್ತಿದ್ದೆ. ಹೀಗಾಗಿ ನಾನೂ ಒಬ್ಬ ಪರಸ್ಥಳದಿಂದ ಮದುವೆಗಾಗಿ ಬಂದಿರುವವನು ಎಂದೆಣಿಸಿದ ಒಬ್ಬರು 'ನೀವು ಯಾವಾಗ ಹೊರಡುತ್ತೀರಿ ?' ನಿಮಗೆ ಯಜಮಾನರೇನಾಗಬೇಕು ? ಎಂದು ಮುಂತಾಗಿ ಕೇಳಿದ್ದರು !

## ವಾಕ್ಯರಚನಾಕ್ರಮವು ಸಂಸಾರಕ್ಕೆ ನೆರವಾದದ್ದು:

ಮದುವೆಯನ್ನು ಮುಗಿಸಿಕೊಂಡು ನಾನು ಮದ್ದಗಿರಿಗೆ ಬರುವ ಹೊತ್ತಿಗೆ ''ವಾಕ್ಯರಚನೆಯು ಮಿಡಲ್ ಸ್ಕೂಲು ತರಗತಿಗಳಿಗೆ ಪಠ್ಯಪುಸ್ತಕವಾಗಿ ನಿಯಮಿತವಾಗಿದೆ ! ನಿಮ್ಮ ಪುಸ್ತಕಗಳನ್ನು ನಮ್ಮಲ್ಲಿಟ್ಟರೆ ಏನು ಕಮಿಷನ್ ಕೊಡುತ್ತೀರಿ ತಿಳಿಸಿ'' ಎಂದು ಬೆಂಗಳೂರು ಪುಸ್ತಕ ವ್ಯಾಪಾರಿಗಳಿಂದ ಕಾಗದವು ಬಂದಿತು. ಪರಮಾತ್ಮನ ಲೀಲೆಯಿದು. ನಾನು ಹಿಂದು ಮುಂದು ನೋಡದೆ ಮದುವೆಗೆ ಸಾಲವನ್ನು ಮಾಡಿಕೊಂಡಿರುವ ವೇಳೆಗೆ ಸರಿಯಾಗಿ ದಾಸಪ್ಪನವರ ಅಭಿಮಾನದ ನಿಮಿತ್ತದಿಂದ ಆ ಗ್ರಂಥವು ನಿಯಮಿತವಾಗಿತ್ತು. ಅದಕ್ಕಾಗಿ ನಾನು ಟೆಕ್ಸ್ಟ್‌ಬುಕ್ಕು ಕಮಿಟಿಯ ಯಾವ ಮೆಂಬರುಗಳನ್ನೂ ಕಂಡು ಏನೂ ಪ್ರಯತ್ನವನ್ನೂ ಮಾಡಿರಲಿಲ್ಲ. ಈ ಸಲ ಆದ ನನ್ನ ಅಪರಿಮಿತ ಖರ್ಚಿಗೆ ಅಲ್ಲದೇ ಮುಂದೆಯೂ ನಮ್ಮ ಮನೆಯಲ್ಲಿ ಆಗಾಗ್ಗೆ ಅನಿವಾರ್ಯವಾಗಿ ಆಗಬೇಕಾಗಿದ್ದ ವಿಶೇಷ- ಕಾರ್ಯಗಳಿಗೆಲ್ಲ ಆ ಗ್ರಂಥದ

ಉತ್ಪತ್ತಿಯೇ ನನಗೆ ಸಮಯಕ್ಕೆ ಒದಗಿತು ಎಂದು ಹೇಳಿದರೆ ಅತ್ಯುಕ್ತಿಯಲ್ಲ. ಕಳೂರುಕಟ್ಟೆಯಲ್ಲಿ ಸಂಬಳವಿಲ್ಲದ ರಜ ಮಂಜೂರು ಮಾಡಿದ್ದರಿಂದ ಆಗಿದ್ದ ನಷ್ಟವನ್ನೆಲ್ಲ ಭರ್ತಿಮಾಡಿ ನನಗೆ ಮುಂದೆ ವ್ಯವಹಾರದ ಯಾವ ಯೋಚನೆಯೂ ಇಲ್ಲದೆ ಪರಮಾರ್ಥಕ್ಕೆ ಮನಸ್ಸು ಕೊಡುವಂತೆ ಏರ್ಪಡಿಸುವ ದಾಸಪ್ಪನವರ ಸಹಾಯವು ಸ್ಮರಣೀಯವಾದದ್ದು. ಸತ್ಕಾಲಕ್ಷೇಪಕ್ಕೆ ನನ್ನನ್ನು ಮೀಸಲಾಗಿರುವಂತೆ ಅನುಗ್ರಹಿಸಿದ ಪರಮೇಶ್ವರನ ದಯೆಯಂತೂ ನಿತ್ಯ- ಸ್ಮರಣೀಯವಾದದ್ದು.

ಮದ್ದಗಿರಿಯಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹಿಸುವಾಗ ನಾನು ಬಹಳ ಕಟ್ಟುನಿಟ್ಟಿನಿಂದ ಇಂತಿಷ್ಟು ನಂಬರು ತೆಗೆದವರಿಗಿಂತ ಕೆಳಗಿನ ಅಂತಸ್ತಿನವರನ್ನು ಪರೀಕ್ಷೆಗೆ ಕಟ್ಟಿಸಬಾರದೆಂದು ವ್ಯವಸ್ಥೆ ಮಾಡಿಕೊಂಡಿದ್ದೆನು. ಆದರೆ ಅಲ್ಲಿ ಮೊದಲನೆಯ ಅ. ಮಾಸ್ಟರಾಗಿದ್ದ ಅ. ಶಾಸ್ತ್ರಿಗಳೆಂಬವರು ತಮ್ಮ ಮಗನನ್ನು ಪರೀಕ್ಷೆಗೆ ಕಳುಹಿಸಲಿಲ್ಲವೆಂಬ ಕಾರಣದಿಂದ ಬಹಳ ಮನೋವ್ಯಥೆ ಪಟ್ಟುಕೊಂಡಿದ್ದರೆಂದು ತಿಳಿಯಬಂದದ್ದರಿಂದ ಅವನನ್ನು ಕಳುಹಿಸಬಹುದು ; ಅವನಿಗಿಂತ ಉತ್ತಮವಾಗಿರುವ ಹುಡುಗರು ಇನ್ನು ಯಾರಾದರೂ ಇದ್ದರೆ ಅವಶ್ಯವಾಗಿ ಅವರನ್ನು ಕಳುಹಿಸಬಹುದು - ಎಂದು ನಿರ್ಣಯಿಸಿದೆನು. ಈ ಎರಡನೆಯ ನಿರ್ಣಯದಂತೆ ಗಣಿತದಲ್ಲಿ ಬಹಳ ಕಡಿಮೆ ನಂಬರು ಬಂದಿದ್ದ ನಮ್ಮ ನರಸಪ್ಪನಿಗೂ ಸುಬ್ಬಣ್ಣನವರ ಹುಡುಗನಿಗೂ ಪರೀಕ್ಷೆಗೆ ಅಪ್ಲಿಕೇಷನ್ ಹಾಕುವ ಅವಕಾಶ ದೊರೆಯಿತು. ಹೇಗೂ ನರಸಪ್ಪನು ಪ್ಯಾಸಾಗುವದಿಲ್ಲವೆಂದೇ ನಾನು ಮಾಡಿಕೊಂಡಿದ್ದೆ.

ಆದರೆ ನಾನು ಯಳ್ಳಂಬಳಸೆಯಿಂದ ಬಂದು ತುಮಕೂರಿನ ಹೈಸ್ಕೂಲಿನಲ್ಲಿ ವಿಚಾರಿಸುವಲ್ಲಿ ಸುಬ್ಬಣ್ಣನವರ ಹುಡುಗನೂ ಪ್ಯಾಸಾಗಿದ್ದನು, ನಮ್ಮ ಹುಡುಗನೂ ಪ್ಯಾಸಾಗಿದ್ದನು ! ಆದ್ದರಿಂದ ನರಸಪ್ಪನನ್ನು ತುಮಕೂರು ಹೈಸ್ಕೂಲಿಗೇ ಸೇರಿಸುವ ಏರ್ಪಾಡುಮಾಡಿ ಅಲ್ಲಿ ಒಂದು ಮನೆ ಗೊತ್ತು ಮಾಡಿದೆನು. ಆ ಬಳಿಕ ಮದ್ದಗಿರಿಗೆ ಹೋಗಿ ಮನೆಯವರೆಲ್ಲರನ್ನೂ ತುಮಕೂರಿಗೇ ಕಳುಹಿಸಿಕೊಟ್ಟೆನು. ನಾನು ಒಬ್ಬನೇ ಮದ್ದಗಿರಿಯಲ್ಲಿ ಸ್ವಲ್ಪಕಾಲ ಇರಬೇಕಾಯಿತು.

# 32. ಮತ್ತೆ ಬೆಂಗಳೂರು (1921-22)

## ಎಸ್.ಆರ್.ಎನ್. ಸ್ಕೂಲು ಬೆಂಗಳೂರು :

ಮದ್ದಗಿರಿಯ ಸ್ಕೂಲಿನಲ್ಲಿ ಉತ್ಸಾಹಪೂರ್ವಕವಾಗಿ ಕೆಲಸವನ್ನೇನೋ ಮಾಡುತ್ತಿದ್ದೆ, ಜನರಿಗೂ ನನ್ನ ಕೆಲಸವು ಒಪ್ಪಿಗೆಯಾಗಿದ್ದಂತೆ ಕಂಡುಬಂದಿತು. ಆದರೆ ಇಷ್ಟರಲ್ಲಿಯೇ ನನಗೆ ಮತ್ತೆ ಬೆಂಗಳೂರಿಗೆ ಎಸ್.ಆರ್. ನಂಜುಂಡಯ್ಯನವರ ಎ.ವಿ.ಸ್ಕೂಲಿಗೆ ವರ್ಗವಾಯಿತು. ಮತ್ತೆ ಬೆಂಗಳೂರಿಗೆ ಆದದ್ದಕ್ಕೆ ದಾಸಪ್ಪನವರ ಶಿಫಾರಸ್ಸು ಕಾರಣವಾಗಿರ ಬಹುದೇನೋ ; ನಾನಂತೂ ವರ್ಗಕ್ಕೆ ಪ್ರಾರ್ಥನೆ-ಮಾಡಿಕೊಂಡ ನೆನಪಿಲ್ಲ. ಅಂತೂ ತುಮಕೂರಿನಿಂದ ನರಸಪ್ಪನ ಸಹಿತ ಎಲ್ಲರನ್ನೂ ಬೆಂಗಳೂರಿಗೆ ಕರೆತಂದೆನು. ನರಸಪ್ಪನು ಹೈಸ್ಕೂಲಿಗೆ ಹೋದನು. ನಾನು ಬಂದಾಗ ನನ್ನ ಪೂರ್ವದ ಸ್ನೇಹಿತ ಎಲ್. ಸ್ವಾಮಿರಾವ್ ಎಂಬುವರು ಹೆಡ್‌ಮಾಸ್ಟರಾಗಿದ್ದರು, ನಾನು ವಿದ್ಯಾರ್ಥಿಯಾಗಿ ಅವರ ಮನೆಯಲ್ಲಿದ್ದಾಗ ಅವರು ಕೆಳಗಿನ ಕ್ಲಾಸಿನಲ್ಲಿ ಓದುತ್ತಿದ್ದು **Friends Union Magazine** ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರೆಂದು ಹಿಂದೆ ಹೇಳಿರುತ್ತೇನೆ. ಈಚೆಗೆ ಅವರು ಬಿ.ಎ. ಪ್ಯಾಸು ಮಾಡಿ ಲೌಕಿಕವ್ಯವಹಾರದಲ್ಲಿ ನನ್ನನ್ನು ಹಿಂದೆ ಹಾಕಿದ್ದರು. ಅವರು ಸ್ಕೂಲನ್ನು ಬಹುದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ನನ್ನನ್ನು ಬಹಳ ಸಂತೋಷದಿಂದ ಬರಮಾಡಿಕೊಂಡರು. ನನಗೆ ಅನುಕೂಲವಾದ ತರಗತಿಗಳ ಪಾಠಗಳನ್ನು ಕೊಟ್ಟು ನನಗೆ ಎಲ್ಲಾ ಬಗೆಯ ಸೌಕರ್ಯಗಳನ್ನು ಮಾಡಿಕೊಟ್ಟರು, ಆದರೆ ಅವರು ಬೇಗನೆ ವರ್ಗವಾಗಿ ಹೊರಟುಹೋದರು ; ಅವರ ಸ್ಥಾನಕ್ಕೆ ಕೃಷ್ಣರಾಯರೆಂಬುವರು ಬಂದರು. ಕೃ.ರಾಯರು ತಮ್ಮ ಹತ್ತಿರವಿರುವವರ ಮಾತನ್ನು ಕೇಳಿ ಅದೇನೋ ನನ್ನ ವಿಷಯಕ್ಕೆ ಸ್ವಲ್ಪ ತಪ್ಪು ಅಭಿಪ್ರಾಯವನ್ನು ಮಾಡಿಕೊಂಡುಬಿಟ್ಟರು. ಆದ್ದರಿಂದ ಸರಕಾರಿ ಪರೀಕ್ಷೆಗೆ ಆಯ್ಕೆಯಾಗದೆ ಉಳಿದಿದ್ದ ಸಾಮಾನ್ಯ ತಿಳಿವಳಿಕೆಯ ಹುಡುಗರನ್ನೆಲ್ಲ ನಾಲ್ಕನೆಯ ತರಗತಿಯ ಒಂದು ಸೆಕ್ಷನ್ ಎಂದು ಒಟ್ಟುಗೂಡಿಸಿ ನನಗೆ ಬಲುಮಟ್ಟಿಗೆ ಅದರಲ್ಲಿ ಪಾಠವನ್ನು ಕೊಟ್ಟರು. ಪಾಠಕ್ಕೆ ಸುಮಾರು 19 ಪೀರಿಯಡ್ಡುಗಳಷ್ಟು ಮಾತ್ರ ಪಾಠಗಳನ್ನು ನನಗೆ ಕೊಟ್ಟು ಮೂಲೆಗೆ ಕೂರಿಸಿದರು.

## ಚಿತ್ಸುಖಿ, ವೇದಾಂತ ಬಾಲಬೋಧೆ :

ನನಗೆ ಒಂದು ದೃಷ್ಟಿಯಿಂದ ಇದೊಂದು ಸೌಕರ್ಯವನ್ನು ಕಲ್ಪಿಸಿ-ಕೊಟ್ಟಂತೆಯೇ ಆಯಿತು, ಸ್ಕೂಲಿನಲ್ಲಿ ವಿರಾಮವೇ ಬಹಳವಾಗಿ ಸಿಕ್ಕಿದ್ದರಿಂದ ನಾನು ಈ ಕಾಲದಲ್ಲಿ ಚಿತ್ಸುಖರ ಅದ್ವೈತದೀಪಿಕೆ ಎಂಬ ಗ್ರಂಥವನ್ನು ಅಭ್ಯಾಸಮಾಡುವದಕ್ಕೆ

ಕಾಲವನ್ನು ಉಪಯೋಗಿಸುತ್ತಿದ್ದೆನು. ಮಧ್ಯಾಹ್ನದ ಮೇಲೆ ನನಗೆ ಬಿಡುವಿದ್ದಾಗ ಗರಡಿ ವಾಚಪ್ಪನವರು ಸ್ಕೂಲಿಗೆ ಬರುತ್ತಿದ್ದರು. 'ಮುಸ್ಲಿಮ್ ಹಾಲ್' ಎಂಬ ಕಟ್ಟಡದಲ್ಲಿ ಏಕಾಂತವಾಗಿ ಕುಳಿತುಕೊಂಡು ಉಪದೇಶಸಾಹಸ್ರಿಯನ್ನು ನನ್ನಿಂದ ಅರ್ಥ ಹೇಳಿಸಿ ಬರೆದು ಕೊಳ್ಳುತ್ತಿದ್ದರು. ಅವರು ಆಗ ಪೆನ್ಸಿಲ್ಲಿನಲ್ಲಿ ಬರೆದುಕೊಂಡ ಅನುವಾದದ ಹಾಳೆಗಳು ಇನ್ನೂ ನನ್ನಲ್ಲಿವೆ. ಬೆಳಗಿನ ಹೊತ್ತು ಶಂಕರಮಠಕ್ಕೆ ಹೋಗಿ, ವಿರೂಪಾಕ್ಷ-ಶಾಸ್ತ್ರಿಗಳಲ್ಲಿ ಭಾಮತಿಯ ಕೆಲವು ಭಾಗಗಳನ್ನು ಓದಿದೆನು. ಶಂಕರಮಠದ ಕೆಲವು ವಿದ್ಯಾರ್ಥಿಗಳಿಗೆ ಅವರು ಅದನ್ನು ಹೇಳಿಕೊಡುತ್ತಿದ್ದರು. ಸ್ಕೂಲಿನಲ್ಲಿ ಪ್ರತಿ ಶನಿವಾರವೂ ವಾರಪರೀಕ್ಷೆಗೆ ಕೆಲವು ಪ್ರಶ್ನೆಗಳನ್ನು ಕೊಟ್ಟು ಬರೆಯಿಸುವ ಪದ್ಧತಿ ಇತ್ತು. ಆದರೆ ಅದೇಕೋ, ಉಪಾಧ್ಯಾಯರುಗಳು ಉತ್ತರಪತ್ರಿಕೆಗಳನ್ನು ತಿದ್ದಿ ಹುಡುಗರಿಗೆ ಹಿಂತಿರುಗಿಸುತ್ತಿರಲಿಲ್ಲ. ನಾನು ಈ ಪ್ರಮಾದವನ್ನು ಕೆಲವರು ಉಪಾಧ್ಯಾಯರ ಲಕ್ಷ್ಯಕ್ಕೆ ತಂದರೂ, ಯಾರೂ ನನ್ನ ಸೂಚನೆಯನ್ನು ಅಷ್ಟು ಆದರಿಸಲಿಲ್ಲ. ಆದ್ದರಿಂದ ನನ್ನಲ್ಲಿಗೆ ಬಂದ ಪತ್ರಿಕೆಗಳನ್ನು ಮಾತ್ರ ತಿದ್ದುತ್ತಿದ್ದೆ. ಮಿಕ್ಕವರ ಪ್ರಶ್ನೆಗಳಿಗೆ ಹುಡುಗರು ಉತ್ತರಗಳನ್ನು ಬರೆಯುವಾಗ ಸುಮ್ಮನೇ ಚಿತ್ಸುಖಿಯನ್ನು ಓದಿಕೊಂಡಿರುತ್ತಿದ್ದೆ. ಹುಡುಗರು ಪ್ರಶ್ನೆಗಳಿಗೆ ಉತ್ತರಗಳನ್ನು ಪಠ್ಯಪುಸ್ತಕಗಳಿಂದ ತಿಳಿದುಕೊಂಡು ಬರೆದರೂ ಆಗಬಹುದು, ಅವರಿಗೆ ಸರಿಯಾದ ಉತ್ತರವಾದರೂ ತಿಳಿದಂತೆ ಆಗುತ್ತದೆ - ಎಂಬುದು ನನ್ನ ಅಂತರಂಗದ ಭಾವ. ಆದರೆ ಹಾಗೆಂದು ಹೇಳದೇ ನಾನು ಚಿತ್ಸುಖಿಯ ಪುಸ್ತಕವನ್ನು ಓದುತ್ತಿದ್ದದ್ದರಿಂದ ಹುಡುಗರಿಗೆ ತಮ್ಮ ಉತ್ತರಗಳನ್ನು ಸುಲಭವಾಗಿ ಆರಿಸಿಕೊಳ್ಳುವದಕ್ಕೆ ಅವಕಾಶವಿರುತ್ತಿತ್ತು. ಇದನ್ನು ಹೆಡ್‌ಮಾಸ್ಟರು ಹೇಗೋ ತಿಳಿದುಕೊಂಡು, ಒಂದು ಶನಿವಾರ ಎರಡು ಮೂರು ಸಲ ನನ್ನ ತರಗತಿಯನ್ನು ಕಿಟಕಿಯಿಂದ ಇಣಕಿ ನೋಡಿ 'ನೀವು ಮಾಡುತ್ತಿರುವದು ಸರಿಯಲ್ಲ; ಹುಡುಗರು ತಮ್ಮ ಉತ್ತರಗಳನ್ನು ಮತ್ತೊಬ್ಬರಿಂದ ನಕಲು ಮಾಡುವದಕ್ಕೆ ಅವಕಾಶ ಕೊಡುತ್ತಿದ್ದೀರಿ!' ಎಂದು ಆಕ್ಷೇಪಿಸಿದರು. ನನ್ನ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳುವದಕ್ಕೆ ಅವರಿಗೆ ತಾಳ್ಮೆ ಇರಲಿಲ್ಲ. ಇದೇ ಮೊದಲಾದ ಕಾರಣಗಳಿಂದ ನನಗೂ ಆ ಸ್ಕೂಲಿನಲ್ಲಿರುವದಕ್ಕೆ ಬೇಜಾರಾಯಿತು. "ಈ ಹೆಡ್‌ಮಾಸ್ಟರಿಗೆ ನನ್ನ ಕೆಲಸವು ಅಷ್ಟು ಸಮರ್ಪಕವಾಗಿರುವಂತೆ ಕಾಣಿಸಲಿಲ್ಲ ; ಆದ್ದರಿಂದ ಮತ್ತೆ ಯಾವದಾದರೊಂದು ಸ್ಕೂಲಿಗೆ, ಈ ಸರ್ಕಲಿನಲ್ಲಿ ಖಾಲಿಯಿಲ್ಲದಿದ್ದರೆ ಮತ್ತೊಂದು ಸರ್ಕಲಿನ ಸ್ಕೂಲಿಗಾದರೂ ದಯವಿಟ್ಟು ವರ್ಗ ಮಾಡಬೇಕು ; ಅವರೆಗೆ ಅವಕಾಶವನ್ನು ಕಲ್ಪಿಸಿಕೊಡುವದಕ್ಕೆ ಸಾಧ್ಯವಾದರೆ ನನಗೆ 2 ತಿಂಗಳು ರಜವನ್ನು ಕೊಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ" ಎಂಬ ಅರ್ಥಕ್ಕೆ ಸಿಟಿರೇಂಜ್ ಅ॥ಇ॥ ರವರಿಗೆ ಒಂದು ಅರ್ಜಿಯನ್ನು ಬರೆದುಕೊಟ್ಟೆನು. ಹೆಡ್‌ಮಾಸ್ಟರು ಸ್ವಲ್ಪ ಮುಂಗೋಪಿಗಳಾದ್ದರಿಂದ 'ಮೇಲಕ್ಕೆ ಕಳುಹಿಸಿರಿ' **(Submit)** ಎಂತ ಬರೆದು

ರೈಟರಿಗೆ ಕೊಟ್ಟುಬಿಟ್ಟರು ; ಆ ದಿನವೇ ಅರ್ಜಿ ಇನ್‌ಸ್ಪೆಕ್ಟರಲ್ಲಿಗೆ ಹೊರಟು ಹೋಯಿತು ! ಇದಿಷ್ಟೂ ಚಿತ್ತುಖಿಯ ಪ್ರಭಾವ ! ನಂಜಪ್ಪನವರೂ ಆಗ್ಗೆ ಬಂದಿದ್ದು ರೈಲಿಗೆ ಹೋಗಿ ಬಂದರೋ ಏನೋ ತಿಳಿಯದು, ಅವರು ಬರುವದರೊಳಗೆ ಒಂದು ಶ್ಲೋಕದ ವಿವರಣೆ ಮುಗಿದಿತ್ತೆಂಬ ಸಂಸ್ಕಾರವು ಮನಸ್ಸಿನಲ್ಲಿ ಉಳಿದಿದೆ.

ಈ ಕಾಲಕ್ಕೆ ಸ್ವಲ್ಪ ಮುಂಚೆಯೇ ನಮ್ಮ ಮನೆಗೆ ಅರಸೀಕೆರೆಯ ನಾರಣಪ್ಪನವರು ಏತಕ್ಕೋ ಬಂದಿದ್ದರು. ಅವರಿಗೆ ವೇದಾಂತವು ಚೆನ್ನಾಗಿ ತಿಳಿಯುವಂತೆ ಒಂದು ಸಣ್ಣ ಪುಸ್ತಕವನ್ನು ಬರೆಯಬೇಕೆಂದು ನನಗೆ ಅನ್ನಿಸಿತು, ಕೂಡಲೆ ನಾನು ಪ್ರತಿದಿನವೂ ಹೇಳಿಕೊಳ್ಳುತ್ತಿದ್ದ ಪ್ರಾತಃಸ್ಮರಣಸ್ತೋತ್ರದ ಒಂದೊಂದು ಶ್ಲೋಕಕ್ಕೂ ವಿವರಣೆಯನ್ನು ಪ್ರಶ್ನೋತ್ತರರೂಪದಿಂದ ಹೇಳಿ ಅವರ ಕೈಯಿಂದಲೇ ಬರೆಯಿಸಿದೆನು. ಆ ಗ್ರಂಥವು ವೇದಾಂತದಲ್ಲಿ ಸುಲಭಶೈಲಿಯಿಂದ ಬರೆಯಬೇಕೆಂದು ನಾನು ಇಚ್ಛಿಸಿದ್ದ ಪ್ರಕರಣಗಳಲ್ಲಿ ಮೊದಲನೆಯದಾಯಿತು. ಈ ಪುಸ್ತಕವನ್ನು ನಾನು ಕಾಲಕ್ರಮದಲ್ಲಿ ಹಣವನ್ನು ಕೊಟ್ಟು ತೆಗೆದುಕೊಳ್ಳುವ ಒಪ್ಪಿಗೆಯ ಮೇಲೆ ಕೋಟೆಯಲ್ಲಿದ್ದ ಸಿಟಿ ಮುದ್ರಣಾಲಯದವರಿಗೆ ಕೊಟ್ಟಿದ್ದೆನು. ಮುದ್ರಣಾಲಯದ ಮಾಲಿಕರ ತಂದೆಯವರು ಒಂದು ದಿನ ನನ್ನನ್ನು ಕಂಡು 'ಇಂಥ ದರಿದ್ರಪುಸ್ತಕಗಳನ್ನೇಕೆ ಬರೆಯುತ್ತೀರಿ ? ಯಾವದಾದರೂ ಕಥೆಯನ್ನೋ ಕಾದಂಬರಿಯನ್ನೋ ಬರೆಯಬಾರದೆ ? ಸಾವಿರಾರು ಪ್ರತಿಗಳು ಖರ್ಚಾದಾವು !' ಎಂದು ಬುದ್ಧಿವಾದ ಹೇಳಿದರು, 'ಇಲ್ಲ, ನಾನು ಕಥೆ ಬರೆಯುವವನಲ್ಲ; ಇಂಥ ವೇದಾಂತಪುಸ್ತಕಗಳನ್ನೇ ಬರೆದು ಜನರಲ್ಲಿ ಇವುಗಳಲ್ಲಿಯೂ ಆಸಕ್ತಿಯುಂಟಾಗುವ ಹಾಗೆ ಮಾಡುತ್ತೇನೆ, ಸ್ವಲ್ಪ ತಡೆದು ನೋಡಿರಿ !' ಎಂದು ಹೇಳಿದ್ದೆನು. ಆ ನನ್ನ ಜಂಭಕೊಚ್ಚಿಕೊಂಡ ಮಾತನ್ನು ಶ್ರೀಶಂಕರಭಗವತ್ಪಾದರವರು ಸತ್ಯವಾಗಿ ಮಾಡಿಸಿರುವ ಅನುಗ್ರಹಕ್ಕೆ ನಾನು ಅವರಿಗೆ ಎಷ್ಟು ನಮಸ್ಕಾರಗಳನ್ನು ಅರ್ಪಿಸಿದರೆ ತಾನೆ ಸಾಕೆನಿಸೀತು ? ವೇದಾಂತ ಬಾಲಬೋಧೆಯ ಪೀಠಿಕೆಯ ಪ್ರಾರಂಭದಲ್ಲಿ ಹೀಗೆ ಬರೆದಿದ್ದೆನು 'ಕನ್ನಡದಲ್ಲಿ ವೇದಾಂತದ ಗ್ರಂಥಗಳು ಅನೇಕವಾಗಿವೆಯಾದರೂ ಈ ದರ್ಶನದ ಮುಖ್ಯಸಿದ್ಧಾಂತವೇನೆಂಬುದನ್ನು ತಿಳಿಸುವದಕ್ಕೆ ಹೆಚ್ಚು ಲಕ್ಷ್ಯಕೊಡದೆ ಯೋಗ, ಸಾಂಖ್ಯ, ನ್ಯಾಯ, ಮುಂತಾದ ದರ್ಶನಗಳನ್ನು ಅಲ್ಲಲ್ಲಿ ಬೆರೆಸಿರುವದರಿಂದ ವಿಷಯವನ್ನು ತಿಳಿಯಬೇಕೆಂಬವರಿಗೆ ತೊಡಕುಂಟಾಗುತ್ತಿರುವದು ಕಂಡುಬಂದಿದೆ. ಈ ಗ್ರಂಥಗಳು ಈಚೆಗೆ ಬರೆದು, ಭಾಷ್ಯ, ವಾರ್ತಿಕಗಳಿಗೆ ವಿರುದ್ಧವಾಗಿರುವ ಹಾಗೂ ತೋರುತ್ತವೆ. ಇದಲ್ಲದೆ ದೊಡ್ಡ ದೊಡ್ಡ ಸಂಸ್ಕೃತ ಶಬ್ದಗಳು – ಅರ್ಥವನ್ನು ವಿವರಿಸದೆ ಹೇರಳವಾಗಿ ಉಪಯೋಗಿಸಿರುವ ಪಾರಿಭಾಷಿಕಶಬ್ದಗಳು ಇವುಗಳೂ ವಿಷಯವನ್ನು ನಿಶ್ಚಯ ಮಾಡಿಕೊಳ್ಳುವದಕ್ಕೆ ಅಡ್ಡಿಯಾಗಿರುತ್ತವೆ. ಈ ಕಾರಣಗಳಿಂದ ವೇದಾಂತ-

ತತ್ತ್ವವನ್ನು ಅರಿಯಬೇಕೆಂಬ ನಿಜವಾದ ಮುಮುಕ್ಷುಗಳು ನಿರುತ್ಸಾಹವಾಗುವ ಸಂಭವವುಂಟು. ಈ ಕೊರತೆಗಳನ್ನು ಸಾಧ್ಯವಾದಮಟ್ಟಿಗೆ ಹೋಗಲಾಡಿಸುವದಕ್ಕಾಗಿ ಈ ಗ್ರಂಥಾವಳಿಯನ್ನು ಪ್ರಾರಂಭಿಸಿರುತ್ತದೆ. ಈ ಸಂಕಲ್ಪವು ಈಗ ಎಷ್ಟುಮಟ್ಟಿಗೆ ನೆರವೇರಿದೆ ಎಂಬುದನ್ನು ವಾಚಕರು ಇದುವರೆಗೆ ಪ್ರಕಟವಾಗಿರುವ ವೇದಾಂತ ಪ್ರಕರಣಗಳಿಂದ ನಿಶ್ಚಯಿಸಬೇಕಾಗಿದೆ.

## ಅಧ್ಯಾತ್ಮ ಪುಸ್ತಕಾಲಯ :

ಈ ಹೊತ್ತಿಗೆ ಅರಸೀಕೆರೆಯಲ್ಲಿ 'ಅಧ್ಯಾತ್ಮ ಪುಸ್ತಕಾಲಯ'ವೆಂಬ ಹೆಸರಿನಿಂದ ಒಂದು ಬುಕ್ಕು ಡಿಪೋವನ್ನು ನಾರಣಪ್ಪನವರು ತೆಗೆದರು. ಬಹಳ ಮಟ್ಟಿಗೆ ಅವರ ಮನೆಗೇ ಈ ಹೆಸರನ್ನಿಟ್ಟುಕೊಂಡಿರಬೇಕು. 'ಅಧ್ಯಾತ್ಮಪ್ರಕಾಶ'ವೆಂಬ ಹೆಸರಿನಿಂದ ಪ್ರಚಾರವಾಗುವ ಗ್ರಂಥಗಳಿಗೆ ಶಾಶ್ವತ ಚಂದಾದಾರರಿಗೆ ಪುಸ್ತಕಗಳನ್ನು ಮುಕ್ಕಾಲು ಬೆಲೆಗೆ ಕೊಡಲಾಗುತ್ತದೆ' ಎಂದು ವೇದಾಂತಬಾಲಬೋಧೆಯ ರಟ್ಟಿನ ಮೇಲೆ ಅಚ್ಚಾಗಿದೆ, ಆ ಪುಸ್ತಕಾಲಯವು ಕಾಲಕ್ರಮದಲ್ಲಿ ನಂಜಪ್ಪನವರ ವಶಕ್ಕೆ ಬಂತು. 'ಅಧ್ಯಾತ್ಮಪ್ರಕಾಶ' ಮಾಸ ಪತ್ರಿಕೆಯು ಇನ್ನೂ ದೇಹವನ್ನು ಧರಿಸಿರಲಿಲ್ಲವಾದ್ದರಿಂದ ಗ್ರಂಥಾವಳಿಗೆ ಆ ಹೆಸರನ್ನಿಟ್ಟು 'ಮಾಂಡೂಕ್ಯದ' ಆಗಮ ಪ್ರಕರಣದ ರಟ್ಟಿನ ಮೇಲೆ ಪ್ರಕಟಿಸಿದ್ದಂತೆಯೇ ವೇದಾಂತಬಾಲಬೋಧೆಯ ಮೇಲೂ ಪುಸ್ತಕಾಲಯದ ಹೆಸರಿನಲ್ಲಿ ಪ್ರಕಟಿಸಿದ್ದಿರಬೇಕು.

## ಕಾಶೀಯಾತ್ರೆಗೆ ಸಿದ್ಧತೆ :

ನಾನು ಮನಸ್ಸಿನ ಉದ್ವೇಗವನ್ನು ಕಳೆದು ಕೊಳ್ಳುವದಕ್ಕೆಂದು ಎರಡು ತಿಂಗಳು ರಜಕ್ಕೆ ಬರೆದುಕೊಂಡಿದ್ದೆನಾದರೂ ಆ ರಜವನ್ನು ಹೇಗೆ ಉಪಯೋಗಿಸಿಕೊಳ್ಳ-ಬೇಕೆಂಬುದು ನನಗೆ ತಿಳಿದಿರಲಿಲ್ಲ, ಆದ್ದರಿಂದ ತರೀಕೆರೆಗೆ ವರ್ಗವಾಗಿದ್ದ ನಂಜಪ್ಪನವರಿಗೂ ಹೆಜ್ಜಾಜಿಯಲ್ಲಿದ್ದ ಸೀತಾರಾಮಯ್ಯನವರಿಗೂ 'ನಿಮ್ಮಲ್ಲಿಗೆ ಬಂದು ಕೆಲವು ದಿನಗಳು ಇರಬೇಕೆಂದು ಮಾಡಿದೇನೆ' ಎಂದು ಪತ್ರವನ್ನು ಹಾಕಿದೆನು. ಅವರೂ ಆಗಬಹುದೆಂತ ಉತ್ತರ ಬರೆದಿದ್ದರೊ ಏನೊ ನೆನಪಿಲ್ಲ, ಇಷ್ಟರೊಳಗೆ ಒಂದು ದಿನ ಬೆಳಗಿನ ಜಾವದಲ್ಲಿ ನನಗೊಂದು ವಿಚಿತ್ರವಾದ ಕನಸಾಯಿತು. ಯಾರೋ ಒಬ್ಬರು ಬಂದು ನಿಮ್ಮಗಡ್ಡದ ಹಸುರು ಪಂಚಾಂಗವನ್ನು ಹಿಡಿದುಕೊಂಡು ಬಂದು ನನಗೆ ತೋರಿಸಿದರು ಅದರ ರಟ್ಟಿನ ಮೇಲೆ 'ತೀರ್ಥರಾಜಃ ಪ್ರಯಾಗ' ಎಂದು ದಪ್ಪಕ್ಷರದಲ್ಲಿ ಅಚ್ಚಾಗಿತ್ತು 'ನೋಡಪ್ಪ ನಿಮ್ಮ ಪೂರ್ವಜರು ಪ್ರಯಾಗಾದಿ ಕ್ಷೇತ್ರಗಳನ್ನು ನೋಡಿಬಂದಿರುತ್ತಾರೆ, ನೀನೇಕೆ ಹೋಗುವದಿಲ್ಲ ?' ಎಂದಂತೆ ಆಯಿತು. ತಟ್ಟನೆ ಎಚ್ಚರವಾಗಿ ಈ ಕನಸಿನ ವಿವರವನ್ನು ಲಕ್ಷ್ಮಕ್ಕನಿಗೆ ತಿಳಿಸಿದೆ.

ಅವರು 'ನೀನು ಹೊರಡುವದಾದರೆ ನಾನೂ ಬರುತ್ತೇನೆ; ಹಿಂದೆ ಒಮ್ಮೆ ಕಾಶೀಯಾತ್ರೆಗೆ ಹೊರಟು ಅರ್ಧಮಾರ್ಗದಲ್ಲಿಯೇ ವಿಘ್ನವಾದ್ದರಿಂದ ಹಿಂದಕ್ಕೆ ಬಂದಿದ್ದೇನೆ' ಎಂದರು. ನಂಜಕ್ಕನವರ ಮಗ ಮಂಜಯ್ಯನೂ ಹೈಸ್ಕೂಲಿನಲ್ಲಿಯೇ ಕೆಲಸದಲ್ಲಿದ್ದನು. ಆ ಅಕ್ಕನವರು ಈ ಸುದ್ದಿಯನ್ನು ತಿಳಿದು ನಾನೂ ಬರುತ್ತೇನೆಂದರು, ವಿಠ್ಠಲಶಾಸ್ತ್ರಿಗಳು ತಮ್ಮ ತಾಯಿಯನ್ನು ಕಳುಹಿಸುತ್ತೇನೆಂದರು, ಅವರ ಸ್ನೇಹಿತರಾದ ವೆಂಕಪ್ಪಯ್ಯನವರೆಂಬವರು ತಮ್ಮ ಅಜ್ಜಿಯನ್ನೂ ಕರೆದುಕೊಂಡು ಹೋಗ-ಬೇಕೆಂದರು. ಹೆಣ್ಣು ಹುಡುಗಿಯರಲ್ಲಿ ಇಬ್ಬರನ್ನು ಅರಸೀಕೆರೆಯಲ್ಲಿಯೂ ನಡುವಿನ ಮಗಳಾದ ಗಿರಿಜೆಯನ್ನು ಕಡೂರಲ್ಲಿ ಸರಾಫರಾಗಿದ್ದ ಅಣ್ಣ ಶಿವರಾಮಯ್ಯ-ನವರ ಮನೆಯಲ್ಲಿಯೂ ಬಿಟ್ಟುಹೋಗಬೇಕೆಂದು ಸಿದ್ಧಮಾಡಿಕೊಂಡೆವು. ಇದೆಲ್ಲ ನಿಶ್ಚಿತವಾದ ಮೇಲೆ ನಾನು ಸಿಟಿ ಇನ್‌ಸ್ಪೆಕ್ಟರನ್ನು ಕಂಡು ನಾನು ಕೇಳಿಕೊಂಡಿದ್ದ ರಜವನ್ನು ಮಂಜೂರು ಮಾಡಬೇಕೆಂದು ಕೇಳಿಕೊಂಡೆನು. ಕೆಲಸವಿಲ್ಲದೆ ಒದ್ದಾಡುತ್ತಿದ್ದ ಒಬ್ಬ ಗ್ರಾಜುಯೇಟನು ದೇವರದಯೆಯಿಂದ ನನ್ನ ಬದಲಿಯಾಗಿ ಕೆಲಸಮಾಡಲು ಒಪ್ಪಿಕೊಂಡನು. ಅದನ್ನು ಕಾಣಿಸಿ ತಾ 26-01-22 ರಿಂದ ನಾನು ರಜವನ್ನುಪಯೋಗಿಸಲು ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡೆನು. ವಿಷಯವೆಲ್ಲ ಗೊತ್ತಿದ್ದ ಇನ್‌ಸ್ಪೆಕ್ಟರು 'ನಿಮಗೆ ಇಷ್ಟರಲ್ಲಿಯೇ ಬಸವನಗುಡಿ ಎ.ವಿ. ಸ್ಕೂಲಿಗೆ ವರ್ಗವಾಗಲಿದೆ. ಆದ್ದರಿಂದ ನೀವು ಬಹಳ ರಜ ಉಪಯೋಗಿಸಿ ಕೊಳ್ಳಬೇಡಿ' ಎಂದು ತಿಳಿವಳಿಕೆ ಹೇಳಿ, 'ಸರ್ಕಲ್ ಇನ್‌ಸ್ಪೆಕ್ಟರ್ ಮಂಜೂರಾತಿ ನಿರೀಕ್ಷಣೆಯ ಮೇಲೆ ನೀವು ರಜ ಉಪಯೋಗಿಸಲು ಅನುಮತಿ ಕೊಟ್ಟಿದೆ' ಎಂದು ಆರ್ಡರು ಕೊಟ್ಟರು. ಆ ಹುಕುಂ 28-01-22ರಲ್ಲಿ ನನಗೆ ತಲುಪಿತು. ಸರಿ, ನಾನು 30-01-22 ರಿಂದ ರಜವನ್ನು ಉಪಯೋಗಿಸಿಕೊಂಡು ಹೊರಟೆ. ಎಲ್ಲರೂ ಮಾಘ ಶುದ್ಧ 3 ಸೋಮವಾರ ಪ್ರಯಾಣ ಬೆಳೆಸಿದೆವು, ಈ ಸುದ್ದಿಯನ್ನು ಮೊದಲೆ ತಿಳಿದುಕೊಂಡಿದ್ದ ಹೆಜ್ಜಾಜಿಯ ಸೀತಾರಾಮಶಾಸ್ತ್ರಿಗಳವರು ದೊಡ್ಡಬೆಲೆ ಸ್ಟೇಷನ್ನಿನಲ್ಲಿ ನಮ್ಮನ್ನು ಸೇರಿಕೊಂಡರು. ಹೀಗೆ ನಾವಿಬ್ಬರು ಗಂಡಸರು, ನಾಲ್ಕು ಜನ ಹೆಂಗಸರು ಕಾಶೀಯಾತ್ರೆಯ ಪ್ರಯಾಣಿಕರಾದೆವು. ಹಿಂದೆ ಮಹಾಭಾಗವತರ ಜೊತೆಗೆ ಹೋಗಿ ಬರಬೇಕೆಂದು ಪ್ರಯತ್ನಿಸಿದರೂ ವಿಫಲವಾಗಿದ್ದ ಕಾಶೀಯಾತ್ರೆಯು ಅನಿಮಿತ್ತವಾಗಿ ತಾನೇ ಬಂದೊದಗಿ ಕಾರ್ಯಗತವಾಯಿತು.

## ಹೆಜ್ಜಾಜಿಯ ಸೀತಾರಾಮ ಶಾಸ್ತ್ರಿಗಳು :

ಸೀತಾರಾಮಶಾಸ್ತ್ರಿಗಳ ವಿಷಯವನ್ನು ಸೂರಪ್ಪನವರ ಸಂಬಂಧದಿಂದ ಪರಾಮರ್ಶಿಸಿದ್ದೇನೆ. ಅವರು ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡಹೆಜ್ಜಾಜಿ-ಗ್ರಾಮದವರು. ಸರಕಾರಿಯ ಸ್ಕೂಲಿನಲ್ಲಿ ಓದುವದರ ಜೊತೆಗೆ ಇವರಿಗೆ ಹಿರಿಯ

ಚಿಕ್ಕಪ್ಪಂದಿರಾದ ಅನ್ನದಾನ ಶಾಸ್ತ್ರಿಗಳಿಂದ ಸಂಸ್ಕೃತ, ಸಾಹಿತ್ಯ, ಜ್ಯೋತಿಷ್ಯ - ಇವುಗಳ ಪರಿಚಯವನ್ನೂ, ಆ ಅನ್ನದಾನಶಾಸ್ತ್ರಿಗಳ ತಮ್ಮಂದಿರಿಂದ ಸಂಗೀತ, ಚಿತ್ರಕಲೆ ಮುಂತಾದವುಗಳನ್ನು ಕಲಿತರಂತೆ. ಚಿಕ್ಕಂದಿನಿಂದ ಹಳ್ಳಿಯಲ್ಲಿ ಆಡುತ್ತಿದ್ದ ಆಟಗಳಲ್ಲಿ ಕೆಲವು ಪಾತ್ರಗಳನ್ನೂ ವಹಿಸುತ್ತಿದ್ದರಂತೆ. ನಾವು ಕಾಣುವ ಹೊತ್ತಿಗೆ ಬರಕದ ಲಕ್ಷ್ಮೀನಾರಾಯಣಭಟ್ಟರ ಮಗಳು ಕಾಶಮ್ಮ ಎಂಬವರನ್ನು ಮದುವೆಯಾಗಿದ್ದರು. ಇಬ್ಬರು ಹೆಣ್ಣು ಮಕ್ಕಳೂ ಇದ್ದರು (ಬರಕದಲ್ಲಾದ ರಾಮೋತ್ಸವದ ಭಜನೆಯಲ್ಲಿ ಇವರು ಸಪತ್ನೀಕರಾಗಿ ಭಾಗವಹಿಸಿದ್ದನ್ನು ಹಿಂದೆಯೇ ತಿಳಿಸಿದ್ದೇನೆ). ಲಕ್ಷ್ಮೀನಾರಾಯಣ ಭಟ್ಟರ ಪ್ರೋತ್ಸಾಹದಿಂದ ದೇವತಾರ್ಚನೆ, ರಾಮಾಯಣ-ಪಾರಾಯಣ ಇವುಗಳನ್ನು ಆಚರಣೆಗೆ ತಂದದ್ದಲ್ಲದೇ, ಯೋಗವಾಸಿಷ್ಠ, ತತ್ತ್ವಸಂಗ್ರಹರಾಮಾಯಣ, ಭಾಗವತ, ಭಗವದ್ಗೀತೆ – ಮುಂತಾದವುಗಳನ್ನು ಓದುವದಕ್ಕೆ ಮೊದಲು ಮಾಡಿದರಂತೆ. ಪ್ರಹ್ಲಾದಚರಿತ್ರೆ, ಸುಲೋಚನಾ ಸಹಗಮನ, ಗೋರಕುಂಬಾರ, ಸಾವಿತ್ರಿ – ಮುಂತಾದ ಆಖ್ಯಾನಗಳನ್ನು ತಾವೇ ರಚಿಸಿಕೊಂಡು ಶನಿವಾರ, ಏಕಾದಶಿ ಇಂಥ ದಿನಗಳಲ್ಲಿ ಜನರನ್ನು ಸೇರಿಸಿ ಕೀರ್ತನೆ ಮಾಡುತ್ತಿದ್ದರಂತೆ. ಇವರ ಬಂಧುಗಳಾದ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಂದ ಬದರಿಯ ಮಹಿಮೆಯನ್ನು ಕೇಳಿ ಆಗಿಂದಾಗಲೇ ಯಾತ್ರೆ ಹೊರಟು ಬಿಟ್ಟಿದ್ದರಂತೆ ; ಇವರ ಸ್ನೇಹಿತರೊಬ್ಬರು ಇವರನ್ನು ಊರಿಗೆ ಕರೆದುಕೊಂಡುಬಂದು ಬಿಟ್ಟರಂತೆ. ಮನೆಯವರು "ನೀವು ಪರಮಾರ್ಥವಿಚಾರದಲ್ಲಿಯೇ ಇರಬಹುದು. ನಾವು ಯಾರೂ ಅಡ್ಡಿ ಮಾಡುವದಿಲ್ಲ ; ದಯವಿಟ್ಟು ಮನೆಯಲ್ಲಿಯೇ ಇರಿ" ಎಂದು ಬಹುವಾಗಿ ಬೇಡಿಕೊಂಡಿದ್ದರಿಂದ ಒಂದು ವರ್ಷದ ರಜಪಡೆದುಕೊಂಡು ಮನೆಯಲ್ಲಿ ಪೂಜಾದಿಗಳಲ್ಲಿ ಮಗ್ನರಾಗಿದ್ದು ಬಿಟ್ಟಿದ್ದರಂತೆ.

ಒಮ್ಮೆ ಇವರು ತಮ್ಮ ಸೋದರಮಾವನವರ ಮನೆಗೆ ಹೋಗಿದ್ದಾಗ ಬ್ರಹ್ಮಚೈತನ್ಯಸದ್ಗುರು ಮಹಾರಾಜರ ಶಿಷ್ಯರಾದ ಸೂರಪ್ಪನವರ ಪರಿಚಯವನ್ನು ಮಾಡಿಕೊಂಡರು. ಆವರ ಸತ್ಸಂಗವನ್ನು ಬಿಡಲಾರದೆ ಜೊತೆಯಲ್ಲಿಯೇ ಒಂದೆರಡು ತಿಂಗಳು ಅಲ್ಲಿದ್ದರು. ಇವರಿಗೆ ಕನಸಿನಲ್ಲಿ ಯಾರೋ ಮಹನೀಯರು ಬಂದು ರಾಮನಾಮದ ಉಪದೇಶವನ್ನು ಮಾಡಿದಂತೆ ಆಗಿದ್ದು, ಈಗ ಸೂರಪ್ಪನವರಲ್ಲಿದ್ದ ಫೋಟೋವನ್ನು ನೋಡುವಲ್ಲಿ ಅವರೇ ತಮ್ಮ ಕನಸಿನಲ್ಲಿ ಕಂಡ ಮಹಾತ್ಮರೆಂಬುದು ತಿಳಿದು ಕೊಂಡರೆಂದು ಅವರೇ ನೇರಾಗಿಯೋ ಅಥವಾ ಮತ್ತೊಬ್ಬರೋ ನನಗೆ ಹೇಳಿದ ನೆನಪಿದೆ. ಬರುವಾಗ ಬ್ರಹ್ಮಚೈತನ್ಯರ ಫೋಟೋ ಜಪಮಾಲಿಕೆಯನ್ನು ಸೂರಪ್ಪನವರಿಂದ ತೆಗೆದುಕೊಂಡು ಬಂದು ಮನೆಯಲ್ಲಿಯೇ ಸತ್ಕಾಲಕ್ಷೇಪವನ್ನು ಮಾಡಿಕೊಂಡಿರುತ್ತಿದ್ದರು. ಮನೆಯಲ್ಲಿ ಒಮ್ಮೆ ಎಲ್ಲರೂ

ಮಲಗಿರುವಾಗಿ ಕಳ್ಳರು ಕನ್ನಹಾಕಿಕೊಂಡು ಒಡವೆಗಳನ್ನು ಅಪಹರಿಸಿಕೊಂಡು ಹೋದರೂ ಸುಮ್ಮನೆ ಇರುತ್ತಿದ್ದರಂತೆ - (ಇದು ನನ್ನ ಕಿವಿಗೂ ಬಿದ್ದಂತೆ ಇದೆ ! ಇದು ಯಾವಾಗ ?). ತುಮಕೂರಿನಲ್ಲಿ ಸೂರಪ್ಪನವರು ಸಪ್ತಾಹ ನಡೆಯಿಸಿದ ಕಾಲಕ್ಕೆ ಇವರೂ ಅದರಲ್ಲಿ ಭಾಗಿಗಳಾಗಿದ್ದರಂತೆ. ಇವರಿಂದಲೇ ಬರಕದ ಶ್ರೀಕಂಠಯ್ಯನವರಿಗೆ ಸೂರಪ್ಪನವರ ಪರಿಚಯವೂ ಆದದ್ದು. ಶ್ರೀಕಂಠಯ್ಯನವರ ಮನೆಯಲ್ಲಿ ನಾನು ಅವರನ್ನು ಕಂಡದ್ದನ್ನು ಹಿಂದೆಯೇ ಹೇಳಿದ್ದಾಗಿದೆ; ಸೂರಪ್ಪನವರ ಜೊತೆಯಲ್ಲಿ ಕಾಶೀಯಾತ್ರೆ ಮಾಡಿ ಬಂದದ್ದನ್ನು ತಿಳಿಸಿದ್ದಾಗಿದೆ. ಇವರು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಅಭ್ಯಾಸ ಮಾಡುವದಕ್ಕೆ ಮೈಸೂರಿಗೆ ಹೋದಾಗ ಅಲ್ಲಿ ಜಮೀನುದಾರರೂ ಸರಕಾರಿಯ ಅಧಿಕಾರಿಗಳೂ ಆದ ಬಚ್ಚೇರಾಯರೆಂಬ ದೇಶಸ್ಥಬ್ರಾಹ್ಮಣರ ಮನೆಯಲ್ಲಿ ಬಾಡಿಗೆಗೆ ಇರುವಲ್ಲಿ ಇವರ ದೈವಭಕ್ತ್ಯಾದಿಗಳನ್ನು ನೋಡಿ ಅವರು ಇವರನ್ನು ತಮ್ಮ ಕುಟುಂಬದವರಂತೆ ಭಾವಿಸಿಕೊಂಡು ತಮ್ಮೊಳಗೇ ಒಬ್ಬರನ್ನಾಗಿ ಮಾಡಿಕೊಂಡುಬಿಟ್ಟರಂತೆ. ಇವರ ಭಜನಾದಿಗಳು ಅನೇಕ ಜನರ ಮೇಲೆ ಪ್ರಭಾವವನ್ನು ಬೀರಿದವಂತೆ. ರಜಾಕಾಲದಲ್ಲಿ ಬಚ್ಚೇರಾಯರ ಜೋಡಿ ಗ್ರಾಮವಾದ ಕಾರಂಗೂರಿನ ಬಳಿಯಿಂದ ಕರೀಘಟ್ಟದಲ್ಲಿ ನೃಸಿಂಹಸ್ವಾಮಿಯ ದೇವಸ್ಥಾನದಲ್ಲಿ ಏಕಾಂತವಾಸವನ್ನು ಮಾಡಿಕೊಂಡು ಇದ್ದುಬಿಟ್ಟರಂತೆ. ಈ ಅಖಂಡವಾದ ಪರಮೇಶ್ವರನ ಭಕ್ತಿಯಿಂದ ವಿದ್ಯಾಭ್ಯಾಸಕ್ಕೇನೂ ಅಡ್ಡಿಯಾಗಲಿಲ್ಲ; ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಊರಿಗೆ ಬಂದಿದ್ದರು. ಇಷ್ಟು ಇವರ ಪೂರ್ವಚರಿತ್ರೆ (ರಾಮಸಪ್ತಾಹದಲ್ಲಿ ನಾನೂ ಸೇರಿ ಭಾಗವತರೂ ಚಿದಂಬರಯ್ಯ-ನವರೂ ಇದ್ದೆವು. ನಾನು ಅಜಾಮಿಳನ ಕಥೆ, ಚಿದಂಬರಯ್ಯನವರು ಯಾವದೋ ಕಥೆ ಮಾಡಿದವೆಂದು ನೆನಪು). ಸೀತಾರಾಮಶಾಸ್ತ್ರಿಗಳು ಬಹಳ ಭಾವುಕರು 'ನಾನು ಮಹಾಯಾತ್ರೆಗೆ ಹೊರಟಿರುವದರಿಂದ ನಾನು ಮತ್ತೆ ಬರುವಷ್ಟು ಕಾಲದ ರಜ ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ ಎಂದಿಷ್ಟೇ ಅರ್ಜಿ ಬರೆದು, ರಜ ಮಂಜೂರಾದದ್ದು ಕೂಡ ನೋಡದೆ ಹೊರಟು ಬಂದು ಬಿಟ್ಟಿದ್ದರು ! ಅವರು ನಮ್ಮ ಜೊತೆಯಲ್ಲಿ ಬರುತ್ತಾರೆಂಬ ಅರಿವೇ ನನಗಿರಲಿಲ್ಲ 'ಯಾತ್ರೆಗೆ ಕೈಯಲ್ಲಿ ಹಣವನ್ನು ತಂದಿದ್ದೀರೋ ?' ಎಂದು ಕೇಳಿದ್ದಕ್ಕೆ 'ದೇವರು ಕೊಡಿಸುತ್ತಾನೆ ; ಅಲ್ಲಲ್ಲಿ ಜನರನ್ನು ಯಾಚನೆ ಮಾಡುತ್ತಾ ಹೋಗುತ್ತೇನೆ' ಎಂದುಬಿಟ್ಟರು. ಅಷ್ಟರಲ್ಲಿ ರೈಲು ಹೊರಟೇ ಬಿಟ್ಟಿದ್ದರಿಂದ ಏನು ಮಾಡಬೇಕೆಂಬುದು ನನಗೆ ತೋಚಲಿಲ್ಲ. ಅರಸೀಕೆರೆಯಲ್ಲಿ ಒಂದು ದಿನ ತಂಗಿದೆವು. ಅಲ್ಲಿ ಇವರು ಜನರನ್ನು ಯಾಚನೆ ಮಾಡುವದಕ್ಕೆಂದು ಹೋದಾಗ ಒಂದು ಕಾಸೂ ಸಿಕ್ಕಲಿಲ್ಲ. ಆದರೆ ಅಲ್ಲಿ ಎಕ್ಸೈಸು ಇನ್‌ಸ್ಪೆಕ್ಟರಾಗಿದ್ದ ಲಕ್ಷಣರಾವ್ ಎಂಬುವರು, ಇವರು ಚಿಕ್ಕಮಗಳೂರಿನಲ್ಲಿ ನನ್ನ ಜೊತೆಯಲ್ಲಿ ಹೈಸ್ಕೂಲಿನಲ್ಲಿ ಓದುತ್ತಿದ್ದವರು. ಇವರ ಸುಂದರವಾದ ಅಕ್ಷರವನ್ನು ನೋಡಿ

ವಿ.ಸುಬ್ರಹ್ಮಣ್ಯ ಐಯ್ಯರ್‌ರವರು **Heaven** (ಸ್ವರ್ಗಸುಖ) ಎಂದು ಹೊಗಳುತ್ತಿದ್ದದ್ದನ್ನು ಹಿಂದೆ ಪರಾಮರ್ಶಿಸಿದ್ದೇನೆ. ನನ್ನ ಹೆಸರನ್ನು ಕೇಳಿ 'ಅವರನ್ನು ನಾನು ನೋಡಬೇಕು' ಎಂದು ಕೈಯಲ್ಲಿ ಎಂಟಾಣೆಕೊಟ್ಟಿದ್ದರು. ಹೀಗಾದರೆ ಇವರ ಖರ್ಚಿಗೆ ಎಲ್ಲಿಂದ ಹಣ ಶೇಖರಿಸಬೇಕೆಂಬುದು ನನಗೆ ತೋಚಲಿಲ್ಲ. 'ದಾವಣಗೆರೆಯಲ್ಲಿ ಮಾಗಾನಹಳ್ಳಿ ದೊಡ್ಡ ಬಸಪ್ಪನವರು ಇದ್ದಾರೆ; ಅವರು ಸಾತ್ತ್ವಿಕರಾದ ಯಾತ್ರಿಕರಿಗೂ ಸಾಧುಸಂನ್ಯಾಸಿಗಳಿಗೂ ಸಹಾಯವನ್ನು ಮಾಡುವದು ನನಗೆ ಗೊತ್ತಿದೆ ಅವರನ್ನು ವಿಚಾರಿಸೋಣ' ಎಂದುಕೊಂಡಿದ್ದೆ, ಆದರೆ ಸ್ಟೇಷನ್ನಿನಲ್ಲಿ ಕಂಡ ನನ್ನ ಪರಿಚಯಸ್ಥರಲ್ಲಿ ಕೆಲವರನ್ನು ವಿಚಾರಿಸಿದ್ದರಲ್ಲಿ ಅವರು ಕೈಲಾಸ ವಾಸಿಗಳಾದರೆಂದು ತಿಳಿಯಬಂದಿತು! ಈಶ್ವರನು ಮಾಡಿಸಿದ್ದಾಗಲಿ ಎಂದು ಮುಂದಕ್ಕೆ ಹೊರಟೆವು, ಸೀತಾರಾಮಶಾಸ್ತ್ರಿಗಳ ಹೆಚ್ಚಿಗೆ ಖರ್ಚು ಹೇಗೋ ಆಯಿತು. ನನ್ನ ಜೊತೆಯಲ್ಲಿದ್ದವರೆಲ್ಲರೂ ಒಬ್ಬ ಬ್ರಾಹ್ಮಣನಿಗೆ ಯಾತ್ರೆ ಮಾಡಿಸಿದ ಪುಣ್ಯವೆಂದು ತಮ್ಮ ತಮ್ಮ ಭಾಗಕ್ಕೆ ಬಂದಷ್ಟು ಹಂಚಿಕೊಂಡು ಅವರ ವೆಚ್ಚವನ್ನು ಕೊಟ್ಟುಬಿಟ್ಟರು. ಆದರೆ ಅಷ್ಟು ಜನ ಹೆಣ್ಣುಮಕ್ಕಳೊಂದಿಗೆ ಒಬ್ಬನೇ ಹೋಗಿದ್ದರೆ ನನ್ನ ಗತಿ ಏನಾಗುತ್ತಿತ್ತೋ ಯಾರು ಬಲ್ಲರು ? ನನಗೆ ಪ್ರಯಾಣದಲ್ಲಿ ನೆಚ್ಚಿನ ಸಹಾಯಕರೊಬ್ಬರು ಇರಬೇಕೆಂದೇ ಭಗವಂತನು ಅವರನ್ನು ಪ್ರೇರಿಸಿರಬೇಕು. ನಮ್ಮ ಪ್ರಯಾಣವು ಸುಕರವಾಗಿ ನೆರವೇರಿದ್ದಕ್ಕೆ ಅವರ ನೆರವು ಬಹಳ ಪ್ರಯೋಜನ ಕಾರಿಯಾಯಿತೆಂಬುದಕ್ಕೆ ಎಳ್ಳಷ್ಟೂ ಸಂಶಯವಿಲ್ಲ.

## ಯಾತ್ರೆಯ ವಿವರ :

ಕಾಶೀಯಾತ್ರೆಯು ಹೆಣ್ಣುಮಕ್ಕಳ ಜೊತೆಯಲ್ಲಿದ್ದದ್ದರಿಂದ ಕೇವಲ ಕರ್ಮ-ಪ್ರಧಾನವಾಗಿತ್ತೆನ್ನಬಹುದು. ಅಲ್ಲಲ್ಲಿ ನದೀಸ್ನಾನ, ತೀರ್ಥವಿಧಿಯನ್ನು ಮಾಡುವದು, ದೇವರ ದರ್ಶನ, ಕಾಣಿಕೆ ಒಪ್ಪಿಸುವದು - ಹೀಗೆಯೇ ಬಲು ಮಟ್ಟಿಗೆ ನಡೆಯಿತು. ನನಗೆ ಹಿಂದೆ ದಕ್ಷಿಣದೇಶದ ಯಾತ್ರೆಯ ಜೊತೆಗೆ ಈಗ ಉತ್ತರದೇಶದ ಯಾತ್ರೆಯಾಯಿತು. ಸ್ವಲ್ಪಮಟ್ಟಿಗೆ ದೇಶ ಪರಿಚಯವಾಯಿತು, ಜನರ ಭಾಷಾವೇಷಗಳು ಆಚಾರಭೇದಗಳು ಮುಂತಾದವು ತಿಳಿದು ಬಂದವು ಅಷ್ಟೆ. ಆದ್ದರಿಂದ ಈ ಯಾತ್ರೆಯನ್ನು ಹೆಚ್ಚಾಗಿ ಇಲ್ಲಿ ವಿವರಿಸಬೇಕಾದದ್ದೇನೂ ಇರುವದಿಲ್ಲ. ನಾವು ಕಂಡ ಪ್ರಧಾನ ಸ್ಥಾನಗಳನ್ನು ಮಾತ್ರ ಹೇಳಿ ಮುಗಿಸುವೆನು.

ಹರಿಹರದಲ್ಲಿ ನಮ್ಮ ಕಾರ್ಯಕ್ರಮ ಬಹಳ ಸುಲಲಿತವಾಗಿ ಸಾಗಿತು. ಅಲ್ಲಿ ನಮ್ಮ ಜೀವಣದೀಕ್ಷಿತರೇ ಇದ್ದರು. ಅಲ್ಲಿ ತುಂಗಭದ್ರಾ ಸ್ನಾನ, ಹರಿಹರೇಶ್ವರ ದರ್ಶನ, ತೀರ್ಥವಿಧಿ ಎಲ್ಲವೂ ಆಯಿತು. ಅಲ್ಲಿ ನನಗೆ ಮೈಯಲ್ಲಿ ಸ್ವಲ್ಪ ತುರಿಕಜ್ಜಿ ಎದ್ದು

ಕೊಂಡಿತ್ತು; ಉಷ್ಣವು ಪ್ರಬಲವಾದ್ದರಿಂದಲೋ ಏನೋ, ಹರಿಹರದಿಂದ ಹೊರಡುವ ಮುನ್ನಿನ ರಾತ್ರೆಯಲ್ಲಿಯೆ ನನ್ನ ನಾಲಗೆಯು ಒಡೆದುಕೊಂಡು ಕಾರವು ಸ್ವಲ್ಪ ಸೋಂಕಿದರೂ ತಡೆಯದಂತೆ ಆಗಿಬಿಟ್ಟಿತು. ಅದರಿಂದ ಆದ ಒಂದು ಅನುಕೂಲ್ಯವೇನೆಂದರೆ ಪ್ರಯಾಣ ಕಾಲದಲ್ಲಿ ಯಾರೂ ಮೆಣಸಿನ ಕಾಯಿಕಾರವನ್ನು ಮುಟ್ಟಕೂಡದು, ಆರೋಗ್ಯ ಕೆಡುತ್ತದೆ ಎಂದು ಸೀತಾರಾಮಶಾಸ್ತ್ರಿಗಳು ಹೇಳಿದ್ದರು. ಅದಕ್ಕೆ ಹೆದರಿ ಯಾರೊಬ್ಬರೂ ಕಾರವನ್ನು ಮುಟ್ಟಲಿಲ್ಲ. ಸಪ್ಪೆಯಾದ ಹೆಸರುಬೇಳೆಕಟ್ಟು, ತೊವ್ವೆ, ಗೋಧಿರೊಟ್ಟಿ, ತುಪ್ಪ, ಸಕ್ಕರೆ – ಇಂಥ ಸಾತ್ವಿಕಾಹಾರವನ್ನೇ ಸೇವಿಸುತ್ತಾ ಹೋದೆವು.

ಹರಿಹರದಿಂದ ಮೀರಜಿಗೆ ಹೋಗಿ ಅಲ್ಲಿಂದ ಖರೋಳ್‌ರೋಡನ್ನು ತಲುಪಿ ನರಸೋಬವಾಡಿಯನ್ನು ತಲುಪಿದೆವು. ಅಲ್ಲಿ, ಕುರ್ತಕೋಟಿಯಲ್ಲಿ ನಮಗೆಲ್ಲ ಅನ್ನಸತ್ರದಲ್ಲಿ ಸತ್ಕಾರಮಾಡುತ್ತಿದ್ದ ಅಣ್ಣಪ್ಪನವರು ಸಿಕ್ಕಿದರು; ವಾಡಿಯು ಜಾಗ್ರತ್ಸ್ಥಲವಾದ್ದರಿಂದ ಅಲ್ಲಿ ತಪಸ್ಸು ಮಾಡಿಕೊಂಡಿರುವವರಿಗೆ ಗುರುದರ್ಶನ-ವಾಗುವದೆಂದು ಬಹು ಜನರ ನಂಬಿಕೆಯಿದೆ. ಅಲ್ಲಿ ಕೃಷ್ಣಾಸ್ನಾನವನ್ನು ಮಾಡಿಕೊಂಡು ಮತ್ತೆ ಮೀರಜಿಗೆ ಬಂದು ಪೂನಾ ಮಾರ್ಗದಿಂದ ನಾಸಿಕ ಕ್ಷೇತ್ರವನ್ನು ತಲುಪಿದೆವು. ಅಲ್ಲಿಂದ ಪಂಚವಟಿಗೆ ಹೋದೆವು, ಅಲ್ಲಿ ಪಂಚವಟಿಯಲ್ಲಿ ಶಂಕರಾಚಾರ್ಯರ ಮಠದಲ್ಲಿ ಇಳಿದುಕೊಂಡಿದ್ದು, ಪಂಡರ ಸಹಾಯದಿಂದ ನದೀಸ್ನಾನವನ್ನು ಮಾಡಿ ಕಪಿಲಾಶ್ರಮವೇ ಮುಂತಾದ ನೋಡತಕ್ಕ ದಿವ್ಯ ಸ್ಥಳಗಳನ್ನು ನೋಡಿದೆವು. ರಾಮಕುಂಡ, ಸೀತಾಕುಂಡಗಳಲ್ಲಿ ಸ್ನಾನ ಮಾಡುವಾಗ ನೀರು ಬಹಳ ತಣ್ಣಗಿದ್ದದ್ದರಿಂದ ಪಂಡನು ಹೇಳುತ್ತಿದ್ದ ದೀರ್ಘವಾದ ಸ್ನಾನಸಂಕಲ್ಪ ಮಂತ್ರವನ್ನು ಕೇಳಿಕೊಂಡಿರಲಾರದೆ ಲಕ್ಷ್ಮಕ್ಕನವರು ಗಡಗುಟ್ಟಿಕೊಂಡು ನಡುಗುವದಕ್ಕೆ ಪ್ರಾರಂಭಿಸಿದರು. ನನಗೆ ಅವರಿಗೆ ನಿಜವಾಗಿ ಚಳಿಜ್ವರವು ಪ್ರಾರಂಭವಾಗು-ವುದೇನೋ ಎಂಬ ಭೀತಿಯಾಯಿತು. ನಾನೇ ಬೇಗ ಬೇಗ ಸಂಕಲ್ಪವನ್ನು ಹೇಳಿ ಅವರನ್ನು ಬಿಡಾರಕ್ಕೆ ಕರೆದೊಯ್ದು, ಮೈಗೆಲ್ಲ ಬೆರಣಿ ಬೂದಿ ತಿಕ್ಕಿದ ಮೇಲೆ ಅವರಿಗೆ ಸಮಾಧಾನವಾಯಿತು. ಮಾಘಮಕರಗಳ ಸಂಧಿಯು ಬರುವ ಕಾಲವಾದ್ದರಿಂದ ಅಷ್ಟು ಶೀತವಾಗಿತ್ತು; ನಾಸಿಕಕ್ಕೆ 18-20 ಮೈಲಿಗಳ ದೂರದಲ್ಲಿದ್ದ ತ್ರಿಯಂಬಕ ಕ್ಷೇತ್ರಕ್ಕೆ ಹೋಗಿ ಅಲ್ಲಿ ಕುಶಾವರ್ತದಲ್ಲಿ ಸ್ನಾನ ಮಾಡಿದೆವು ; ತೀರ್ಥದ ನೀರು ಬಹಳ ಶುದ್ಧವಾಗಿತ್ತು, ಅಲ್ಲಿದ್ದ ವೈದಿಕ ಬ್ರಾಹ್ಮಣರು ಬಹಳ ನಿಃಸ್ಪೃಹರಾಗಿದ್ದಂತೆ ಕಂಡು ಬಂದಿತು. ಬ್ರಹ್ಮಗಿರಿಯ ದರ್ಶನಮಾತ್ರದಿಂದ ತೃಪ್ತರಾದೆವು; ಗಿರಿಪ್ರವಾಸ ಮಾಡಲಿಲ್ಲ. ನಾಸಿಕಕ್ಕೆ ಹಿಂತಿರುಗಿ ತ್ರಿರಾತ್ರೆಗಳ ವಾಸವನ್ನು ಮುಗಿಸಿಕೊಂಡು ಖಾಂಡ್ವಕ್ಕೆ ಹೋದೆವು.

ಖಾಂಡ್ವದಿಂದ ಮೋಟಕ್ಕಾ ಸ್ಟೇಷನ್ನಿಗೆಹೋಗಿ ಗಾಡಿಯ ಮೇಲೆ ಓಂಕಾರೇಶ್ವರಕ್ಷೇತ್ರಕ್ಕೆ ಹೋದೆವು. ನರ್ಮದಾ ಸ್ನಾನವನ್ನು ಮಾಡಿದೆವು. ದೇವಸ್ಥಾನದಲ್ಲಿ ಜನರ ನೂಕುನುಗ್ಗಲು ಬಹಳವಾಗಿತ್ತು ; ಅಲ್ಲಿ ನಾವು ಕನ್ನಡವನ್ನು ಮಾತನಾಡುತ್ತಿದ್ದದ್ದನ್ನು ಕೇಳಿ, ಒಬ್ಬ ಕನ್ನಡಿಗನು ಓಡಿಬಂದು ನಮ್ಮ ಯೋಗಕ್ಷೇಮ-ವನ್ನು ಕೇಳಿದನು. ಪರದೇಶದಲ್ಲಿ ಭಾಷಾಭಿಮಾನದ ಫಲವು ಹೇಗಿದೆ ಎಂಬುದು ಗೊತ್ತಾಯಿತು. ಓಂಕಾರದಲ್ಲಿ ಗೌಡಪಾದಾಚಾರ್ಯರು ಇದ್ದರೆಂದು ಯಾರೋ ಹೇಳಿದ್ದದ್ದನ್ನು ಕೇಳಿದ್ದ ನನಗೆ, ಆ ಸ್ಥಾನದ ವಿಷಯಕ್ಕೆ ಬಹಳ ಪೂಜ್ಯಬುದ್ಧಿ ಯುಂಟಾಯಿತು. ಮತ್ತೆ ಮೋಟಕ್ಕಾದಿಂದ ರತ್ಲಾಂ ಎಂಬಲ್ಲಿಗೆ ಹೋದೆವು. ಆ ಸ್ಥಲದಲ್ಲಿ ಒಂದು ಧರ್ಮಶಾಲೆಯಲ್ಲಿ ಇಳಿದುಕೊಳ್ಳುವದಕ್ಕೆ ಬಹಳ ಕಷ್ಟವಾಗಿತ್ತು ; ಬಂದ ಬೈರಾಗಿಗಳೇ ಮುಂತಾದವರು ಬಯಲಿನಲ್ಲಿಯೇ ಕಾಳಿಬಟ್ಟಿ (ಮಡಿಕೆ) ರೊಟ್ಟಿಸುಟ್ಟುಕೊಳ್ಳುತ್ತಿದ್ದರು, ಸ್ನಾನ ಮಾಡಿ ಊಟವನ್ನು ಮಾಡದೆ ಹಾಗೆಯೇ ಕುಳಿತುಕೊಂಡು ನಾನೂ ಸೀತಾರಾಮಶಾಸ್ತ್ರಿಗಳು ಮಾಂಡೂಕ್ಯೋಪನಿಷತ್ತನ್ನು ಓದುತ್ತಿದ್ದದ್ದನ್ನು ಕಂಡು ಯಜಮಾನನು ಆದರದಿಂದ ನಮ್ಮ ಹತ್ತಿರಕ್ಕೆ ಬಂದು, ಒಂದು ಹೊಚ್ಚಡಿಯ ಬಾಗಿಲನ್ನು ತೆಗೆದುಕೊಟ್ಟು ನಮಗೆ ಬೇಕಾದ ಸೌಕರ್ಯಗಳನ್ನೆಲ್ಲ ಒದಗಿಸಿಕೊಟ್ಟನು. ವೇದಾಂತವು ಹೀಗೆ ಪ್ರಯೋಜನವನ್ನು ಉಂಟುಮಾಡಿ ಕೊಟ್ಟಿತ್ತು.

ಅಲ್ಲಿಂದ ಮಥುರೆಗೆ ಹೋದೆವು, ಅಲ್ಲಿ ತೀರ್ಥವಿಧಿಯನ್ನು ಮಾಡಿಕೊಂಡು ನೋಡತಕ್ಕ ಸ್ಥಳಗಳನ್ನೆಲ್ಲ ನೋಡಿಬಂದೆವು. ಯಮುನಾ ಸ್ನಾನಕ್ಕೆ ಹೋಗುವಾಗ ಒಂದು ಸ್ಥಲದಲ್ಲಿ ಒಬ್ಬೊಬ್ಬ ಯಾತ್ರಿಕನಿಗೂ ಇಂತಿಷ್ಟು ರೂಪಾಯಿಗಳೆಂದು ಸುಂಕ ಕೇಳಿದ್ದು ನನಗೆ ಬಹಳ ಅಸಹ್ಯವೆನಿಸಿತು. ಕಾಳಿಂದೀನದಿಯು ಕಪ್ಪಾಗಿರುವದು, ಆಮೆಗಳು ತುಂಬಿರುವದು, ಇದು ಮನಸ್ಸಿನಲ್ಲಿ ಮರೆಯದಂತೆ ನೆಟ್ಟುಕೊಂಡಿತು. ಗೋಕುಲಕ್ಕೆ ಗಾಡಿಮಾಡಿಕೊಂಡು ಹೋಗಿಬಂದೆವು. ಅಲ್ಲಿ ಪಂಡರು ಇಲ್ಲಿ ಈ ವಿಗ್ರಹನೋಡು, ಅಲ್ಲಿ ಆ ವಿಗ್ರಹನೋಡು; ಇಲ್ಲಿ ಇಷ್ಟು ಕೊಡು, ಅಲ್ಲಿ ಅಷ್ಟು ಕೊಡು ಎಂದು ಹಿರಿದು ತಿನ್ನುವದಕ್ಕೆ ಸಿದ್ಧವಾಗಿದ್ದರು. ಒಂದು ಸಾಮಾನ್ಯವಾದ ಮನೆಯೊಳಗೆ ಶ್ರೀಕೃಷ್ಣನ ಜನ್ಮಸ್ಥಳವೆಂದು ಘರದೆ ಹಾಕಿಕೊಂಡು ಒಬ್ಬಿಬ್ಬರು ಕುಳಿತಿದ್ದರು. ಆ ಘರದೆಯ ಮುಂದೆ ಯಾತ್ರಿಕರು ಮೂವತ್ತು ನಲವತ್ತರಷ್ಟು ಜನರಿರಬಹುದು, ಒಬ್ಬೊಬ್ಬ ಯಾತ್ರಿಕನಿಗೆ 3ರೂ 4ಅಣೆ 6ಪೈಸೆ ನಂತೆ ಕೊಟ್ಟರೆ ದೇವರದರ್ಶನ ಮಾಡಿಸುತ್ತಾರೆಂದು ತಿಳಿಯಿತು, ನನಗೇಕೋ ಮನಸ್ಸಿಗೆ ಬೇಜಾರಾಯಿತು. ಜೊತೆಯಲ್ಲಿದ್ದವರನ್ನು ಕೇಳಿದೆ 'ನೀವು ಇಲ್ಲಿ ದರ್ಶನಮಾಡಿಕೊಳ್ಳಬೇಕೋ ?' ಎಂದು ಅವರು 'ನೀವು ಹೇಗೆ ಹೇಳಿದರೆ ಹಾಗೆ' ಎಂದರು, ನಾನು ಮರು

ಮಾತನಾಡದೆ ಎದ್ದುಬಿಟ್ಟೆ ನನ್ನ ಜೊತೆಯಲ್ಲಿಯೆ ಇಪ್ಪತ್ತು ಮೂವತ್ತು ಜನರು ಎದ್ದರು; ಅವರು 'ದಖ್ಖಿನ್ ವಾಲೆ(ದಕ್ಷಿಣ ದೇಶದವರು) ಏಳುತ್ತಾರೆ, ಅಂದ ಮೇಲೆ ನಾವೇಕೆ ಇರೋಣ ?' ಎಂದುಕೊಂಡಂತೆ ನನಗೆ ಅರ್ಥವಾಯಿತು. ದಕ್ಷಿಣ ದೇಶದವರು ಅಲ್ಲಿಯ ಪಂಡರಿಗೆ ಸಿಕ್ಕಿದರೆ ಕಬ್ಬು ಸಿಕ್ಕಿದಂತೆ ಎಂದು ತೋರಿತು. ಮನೆಯ ಜಗುಲಿಯ ಮೇಲೆ ಕುಳಿತ್ತಿದ್ದವನು ಅವನು ನಮ್ಮ ಕಡೆ ಘುಟ್ ಲಾಯರ ಹಾಗೆ ಪಂಡರಿಗೆ ಒಳ ಏಜೆಂಟ್ ಇರಬೇಕು "ಏನಿರಿ ? ನೀವು ಇಲ್ಲಿಗೆ ಬಂದದ್ದು ಏಕೆ ? ಶ್ರೀಕೃಷ್ಣನ ಜನ್ಮಸ್ಥಾನವನ್ನೇ ನೋಡದೆ ಹೋಗುತ್ತೀರಾ ?" ಎಂಬ ಅರ್ಥವು ಬರುವಂತೆ ಮಾತನಾಡಿದನು. ನಾನು "ಶ್ರೀಕೃಷ್ಣನು ಗೋಕುಲದಲ್ಲೆಲ್ಲ ಓಡಾಡಿರುತ್ತಾನೆ. ಆದ್ದರಿಂದ ಅವನ ಬಾಲ್ಯವಿಹಾರ ಸ್ಥಲವನ್ನು ನಾವು ದರ್ಶನ ಮಾಡಿದ್ದೇವೆ ; ಈ ಮನೆಯಲ್ಲಿಯೇ ನನ್ನ ದರ್ಶನವನ್ನು ತೆಗೆದುಕೊಳ್ಳಬೇಕು, ಎಂದೇನೋ ಅವನು ಹೇಳಿದಂತೆ ಯಾವ ಪುರಾಣದಲ್ಲಿಯೂ ಬರೆದಿಲ್ಲ" ಎಂದು ಹಿಂದಿರುಗಿದೆನು. ಜೊತೆಯಲ್ಲಿದ್ದ ಪಂಡರ ಮಾರ್ಗದರ್ಶಿಯು ಇವರು ಜಿಪುಣರು ಎಂಬ ಭಾವನೆಯಿರಬಹುದೇನೋ, 'ಬೃಂದಾವನಕ್ಕೆ ಹೋಗಬೇಕೇನು ?' ಎಂದು ಕೇಳಿದನು. ಆ ದೇಶದವರ ಸ್ವಭಾವವನ್ನೇ ಅರಿಯದ ನಾನು 'ಅಲ್ಲಿ ಏನಾದರೂ ನೋಡತಕ್ಕದ್ದಿದೆಯೆ ?' ಎಂದೆ. 'ಅಲ್ಲಿ ಏನೂ ವಿಶೇಷವಿಲ್ಲ ಬಿಡಿ' ಎಂದು ಬಿಟ್ಟನು. ನಮ್ಮ ದೌರ್ಭಾಗ್ಯಕ್ಕೆ ಬೃಂದಾವನ ದರ್ಶನವು ತಪ್ಪಿಹೋಯಿತು. ಪಂಡನು 'ನಾನು ತಾಲೀಮು ಮಾಡುವದಕ್ಕೆ ಹೋಗಬೇಕು ನನಗೆ ಗಾಂಜಾ ಸೇದುವದಕ್ಕೆ ಏನಾದರೂ ಕೊಡಿ !' ಎಂದು ಕೇಳಿದ್ದಂತೂ ನನಗೆ ಬಹಳ ಅಸಹ್ಯವಾಯಿತು. ಆವೂರಲ್ಲಿ ಹೊರಗೆ ಪಂಡರ ಕಾಟವಾದರೆ ಮನೆಯಲ್ಲಿ ಮಂಗಗಳ ಕಾಟವಿತ್ತು, ನಂಜಕ್ಕನವರ ತಂಬಿಗೆಯನ್ನೇ ಬಂದು ಎತ್ತಿಕೊಂಡು ಹೋಗಿತ್ತು ! ಮಥುರೆಯಲ್ಲಿ ನೋಡತಕ್ಕ ಮಂದಿರಗಳನ್ನು ನಾವೇ ಪಂಡರ ಸಹಾಯವಿಲ್ಲದೆ ನೋಡಿಕೊಂಡು ಬಂದೆವು. ಮಾರನೆಯ ದಿನ ಪ್ರಯಾಗಕ್ಕೆ ಹೊರಟೆವು. ಪ್ರಯಾಗದಲ್ಲಿ ಮಾಘ ಬಹುಳ ಗುರುವಾರದಿಂದ ಭಾನುವಾರದ ವರೆಗೂ ಇದ್ದೆವು. ಅಲ್ಲಿ ನಾವು ಇಳಿದುಕೊಂಡ ಮನೆಯು ಜಗನ್ನಾಥಶಾಸ್ತ್ರಿಗಳೆಂಬ-ವರ ಮನೆ. ಅವರು ಬಹಳ ನಿಷ್ಠರು, ಸೀತಾರಾಮಶಾಸ್ತ್ರಿಗಳು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಹೆಸರು ಹೇಳಿದ್ದರಿಂದ ಇವರು ಶಿವಗಂಗಾಮಠದವರೆಂದೂ ನಮ್ಮನ್ನು ಭಾವಿಸಿ ಬಹಳ ಗೌರವಿಸಿದರು. ಅಲ್ಲಿ ತ್ರಿವೇಣೀ ಸ್ನಾನ, ದೇವತಾ-ದರ್ಶನ ಮುಂತಾದದ್ದನ್ನು ಉತ್ತಮ ರೀತಿಯಲ್ಲಿ ಮಾಡಿಸಿದರು. ಅಲ್ಲಿ ನಮಗೆ ಪರಿಶುದ್ಧವಾದ ಸ್ಥಳವನ್ನು ಏರ್ಪಡಿಸಿಕೊಟ್ಟರು. ವೇಣೀಮಾಧವ, ಅಕ್ಷಯವಟ, ರಾಸಾ, ಭಾರದ್ವಾಜಾಶ್ರಮ – ಮುಂತಾದ ಸ್ಥಳಗಳ ದರ್ಶನ ಮಾಡಿಸಿದರು.

ತೀರ್ಥಶ್ರಾದ್ಧಾದಿಗಳನ್ನು ಮಾಡಿದೆವು. ಸೀತಾರಾಮಶಾಸ್ತ್ರಿಗಳು ನಾನು ಮೂಲಾ ವಿದ್ಯಾನಿರಾಸವನ್ನು ಬರೆದಿರುವ ವಿಷಯವನ್ನು ಅವರಿಗೆ ಹೇಳಲು, ಅವರು ನನ್ನನ್ನು ಇನ್ನಷ್ಟು ಗೌರವದಿಂದ ಕಂಡರು. ನಿದಿಧ್ಯಾಸನ ವಿಚಾರವಾಗಿ ಏನೋ ಪ್ರಶ್ನೆಯನ್ನು ಮಾಡಿದರು. 'ಪುಸ್ತಕವು ಅಚ್ಚಾದ ಮೇಲೆ ನನಗೊಂದು ಪ್ರತಿಯನ್ನು ದಯವಿಟ್ಟು ಕಳುಹಿಸಿಕೊಡಿ' ಎಂದು ಕೇಳಿದರು. ನನಗೆ ಏನೋ ದಕ್ಷಿಣೆ ಕೊಡುವದಕ್ಕೆ ಬಂದರು ; ನಾನು ತೆಗೆದುಕೊಳ್ಳಲಿಲ್ಲ, ಸೋಮವಾರ ಪ್ರಯಾಗದಿಂದ ಪ್ರತಾಪಘರ್‌ಗೆ ಅಲ್ಲಿಂದ ಫೈಜಾಬಾದ್‌ಗೆ ಹೋದೆವು.

ಫೈಜಾಬಾದಿನಿಂದ ಅಯೋಧ್ಯೆಗೆ ಹೋಗುವ ರೈಲು ಬಹಳ ತಡವಾಗಿ ಬರುತ್ತದೆ ಎಂದು ತಿಳಿದುಬಂದದ್ದರಿಂದ ಸುಮ್ಮನೆ ಕುಳಿತುಕೊಂಡೆವು. ಮೂರನೆ ತರಗತಿಯ ವೇಟಿಂಗ್ ರೂಮಿನ ಬಯಲಿನಲ್ಲಿ ಜನ ಕಿಕ್ಕಿರಿದಿತ್ತು. 'ನಾವು ಈ ದಿನವೆಲ್ಲ ತಿಂಡಿತೀರ್ಥ ಏನೂ ಇಲ್ಲದೆ ಇರಬೇಕಾಗುತ್ತದೆಯಲ್ಲ, ಏನು ಮಾಡೋಣ ?' ಎಂದು ಯೋಚಿಸುತ್ತಿದ್ದೆವು. ಹಿಂದಿಮಾತು ಸರಿಯಾಗಿ ಬಾರದ್ದರಿಂದ ಯಾರನ್ನೂ ಏನೂ ಕೇಳುವದಕ್ಕಿಲ್ಲದೆ ಕುಳಿತಿದ್ದೆವು. 'ಸೀತಾರಾಮ ಶಾಸ್ತ್ರಿಗಳೇ ಏನು ಹೇಳುತ್ತೀರಿ ?' ಎಂದೆನು. 'ಹಸುರು ಪಂಚಾಂಗದವನಿದಾನಲ್ಲ !' ಎಂದರು. ಅವರಿಗೆ ಯಾವಾಗಲೂ ಅಂಥ ಅಚಲವಿಶ್ವಾಸ ದೇವರಲ್ಲಿ ! ಅಷ್ಟರೊಳಗೆ ಪಕ್ಕದಲ್ಲಿದ್ದವನು 'ಎಲ್ಲಿಗೆ ಹೋಗಬೇಕು' ಎಂದು ಹಿಂದಿಯಲ್ಲಿ ಕೇಳಿದನು. 'ಅಯೋಧ್ಯೆ' ಎನ್ನಲು 'ಢಕ್ಕಮಾಡಿಕೊಂಡು ಹೊರಡಿರಿ, ಇಲ್ಲೇಕೆ ಸುಮ್ಮನೆ ಕೂತಿದ್ದೀರಿ ?' ಎಂದು ಅವನು ಉತ್ತರಕೊಟ್ಟನು. ನಮ್ಮ ಭಾಗಕ್ಕೆ ಅವನೇ ಹಸುರುಪಂಚಾಂಗದವನು. ಕೂಡಲೆ ನಾವು ಎದ್ದು ಗಾಡಿಮಾಡಿಕೊಂಡು ಅಯೋಧ್ಯೆಗೆ ಹೋದೆವು. ಅಲ್ಲಿ ಶಾಸ್ತ್ರಿಗಳ ಗುರುತಿನವರು ಯಾರೋ ಒಬ್ಬರು ಇದ್ದರು. ಅವರನ್ನು 'ಏ ಗಣೂ !' ಎಂದು ಇವರು ಕೂಗಿದ ಒಡನೆ ಅವರು ಬಂದು ನಮ್ಮೊಡನೆ ಕನ್ನಡದಲ್ಲಿ ಮಾತನಾಡಿಸಿದರು. ಬೇಕಾದ ಅನುಕೂಲ್ಯಗಳನ್ನೆಲ್ಲ ಮಾಡಿಕೊಟ್ಟರು. ಅಲ್ಲಿ ಒಂದೇ ದಿನವಿದ್ದು ಸ್ನಾನ, ದೇವತಾ ದರ್ಶನಾದಿಗಳನ್ನು ಮಾಡಿಕೊಂಡು ಕಾಶಿಗೆ ಹೊರಟೆವು. ಅಯೋಧ್ಯೆಯಿಂದ ನಾವು ಹೊರಟದ್ದು ರಾತ್ರೆ ; ಬಹಳ ಹೊತ್ತಿನ ಮೇಲೆ ರೈಲು ಹೊರಡುವದರಿಂದ ಮೊದಲೇ ಒಂದು ಗಾಡಿಗೊತ್ತು ಮಾಡಿಕೊಟ್ಟು ಅಲ್ಲಿ ಮಲಗಿಸಿರುತ್ತೇನೆಂದು ಒಬ್ಬ ಹಮಾಲಿ ನಮ್ಮನ್ನು ಅಲ್ಲಿಗೆ ಒಯ್ದನು. ನಮಗೆ ನಿದ್ರೆಹತ್ತಿ 'ನೀನು ಬಾರದೆ ಇದ್ದರೆ ಏನು ಮಾಡೋಣ' ಎಂದು ನಾನು ಕೇಳಿದ್ದಕ್ಕೆ 'ನಾನು ಬ್ರಾಹ್ಮಣ ಸುಳ್ಳು ಹೇಳುವದಿಲ್ಲ !' ಎಂದು ಹಿಂದಿಯಲ್ಲಿ ಅವನು ಹೇಳಿದ್ದು, ನನಗೆ ಜಾಬಾಲನ ಕಥೆಯನ್ನು ನೆನಪಿಗೆ ತಂದು ಕೊಟ್ಟಿತು. ವಿಚಾರಿಸಿದ್ದರಲ್ಲಿ ಅವನು

ಶಾಂಡಿಲ್ಯಗೋತ್ರದವನು ತೇಜಸ್ವಿಯಾಗಿದ್ದನು. 'ನಿತ್ಯವೂ ಗಾಯತ್ರೀ ಮಾಡು ಒಳ್ಳೆದಾಗುತ್ತೆ' ಎಂದು ಅವನಿಗೆ ಬುದ್ಧಿ ಹೇಳಿ ಇನಾಮು ಕೊಟ್ಟೆವು.

ಕಾಶಿಯಲ್ಲಿ ಮಾಘ ಬಹುಳ ದ್ವಾದಶಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಗಂಗಾಸ್ನಾನವನ್ನು ಮಾಡಿಕೊಂಡು ದೇವತಾದರ್ಶನ ಮಾಡಿದೆವು ; ಗಂಗಾಪುತ್ರರು ದಕ್ಷಿಣೆಯಿಲ್ಲದೆ ನಮ್ಮ ಸ್ನಾನದ ಬಟ್ಟೆಗಳನ್ನು ಅವರಿಗೆ ಬಿಟ್ಟುಕೊಡಬೇಕೆಂದು ನಿರ್ಬಂಧ ಮಾಡಿದ್ದು ನನಗೆ ವಿಚಿತ್ರವೆನಿಸಿತು. ನಮ್ಮ ಕಡೆಯ ಹೆಂಗಸರಿಗೆ ಇದು ಮೊದಲೇ ಗೊತ್ತಿತ್ತೆಂದು ಕಾಣುತ್ತದೆ; ಅವರೆಲ್ಲರೂ ಅದಕ್ಕೆ ಬೇಕೆಂತಲೇ ಒಂದೊಂದು ತುಂಡನ್ನು ತಂದಿದ್ದರು, ಕೊಟ್ಟರು. ಮಾರನೆಯ ದಿನವೂ ದೇವತಾದರ್ಶನ; ಶನಿವಾರ ಕವಡೇಬಾಯಿ ನೋಡಿಕೊಂಡು ಬಂದೆವು. ಭಾನುವಾರ ಶ್ರಾದ್ಧ, ಮಂಗಳವಾರ ವ್ಯಾಸಕಾಶಿಗೆ ಹೋಗಿ ಬಂದೆವು, ಬುಧವಾರ ನಿತ್ಯಯಾತ್ರೆ, ಗುರುವಾರ ಪಂಚತೀರ್ಥಸ್ನಾನ, ಶನಿವಾರ ಕಾಲಾಷ್ಟಕ – ಹೀಗೆ ಮಾಡಿದೆವು. ಕವಡೇಬಾಯಿ ದರ್ಶನದ ದಿನ ಮಹಾಶಿವರಾತ್ರಿ, ಆ ದಿನ ಆದಷ್ಟು ಮಟ್ಟಿಗೆ ಜಾಗರಣೆ ಮಾಡಬೇಕೆಂದು ಪ್ರಯತ್ನಿಸಿದೆವು; ನನಗೆ ಸ್ವಲ್ಪ ತಲೆನೋಯುತ್ತಿದ್ದದ್ದರಿಂದ, ಅಂಗಡಿಯಲ್ಲಿ ಕಾಫಿಪುಡಿ ಕೇಳಿ ಬರೋಣವೆಂದು ಹೋಗಿ ವಿಚಾರಿಸುವಲ್ಲಿ ಒಬ್ಬನು ಕಾಫಿ ಎಂಬ ಶಬ್ದವನ್ನು ಕೇಳಿ ಕಾಪಿ ಪುಸ್ತಕವನ್ನು ತೋರಿಸಿದನು ! ಆ ದೇಶದಲ್ಲಿ ಟೀ ಕುಡಿಯುವದು ಬಹಳ; ಕಾಫಿ ಅಷ್ಟು ಅಪೂರ್ವ, ಭಾನುವಾರದ ದಿನ ಕ್ಷೇತ್ರದಿಂದ ತರಬೇಕಾದ ಕೆಲವು ಪದಾರ್ಥಗಳನ್ನು ಕೊಂಡೆವು. ಗಯೆಗೆ ಪ್ರಯಾಣ ಬೆಳೆಸಿದೆವು, ಕಾಶಿಯಲ್ಲಿ ಹತ್ತುದಿನವಿದ್ದಂತೆ ಆಯಿತು.

**ಗಯೆಗೆ** ಟಿಕೆಟ್ ಕೊಳ್ಳುವಾಗ ನಮ್ಮ ಕಡೆ ಪಂಡರ ಆಳು 'ಟಿಕೆಟ್ ಚಾರ್ಜು ಇಷ್ಟು, ಭಕ್ಷೀಸು ಇಷ್ಟು' ಎಂದು ಹೇಳಿದ್ದು ಕೇಳಿ ನನಗೆ ಬಹಳ ಅಸಮಾಧಾನವಾಯಿತು, ಬಹಿರಂಗವಾಗಿ ಹೀಗೆ ಲಂಚ ವಸೂಲ್ಮಾಡುತ್ತಾರಲ್ಲ ! ಎಂದೆನು. ಅಲ್ಲಿ ಕೆಲವರು 'ಇದು ಬಹಳ ರೂಢಿಯಲ್ಲಿದೆ, ಕೊಡದಿದ್ದರೆ ನಮ್ಮ ಕೆಲಸವೇ ಕೆಟ್ಟು ಹೋಗುತ್ತದೆ' ಎಂದರು. ಅಂತೂ ಗಯೆಯನ್ನು ಮುಟ್ಟಿದೆವು. ಕಾಶಿಯಲ್ಲಿ ಸೀತಾರಾಮಶಾಸ್ತ್ರಿಗಳಿಗೆ ಗುರುತಿನವರಾದ ಕನ್ನಡಿಗರೊಬ್ಬರು ಇದ್ದದ್ದರಿಂದ ಅಲ್ಲಿ ನಮಗೆ ಯಾವ ತೊಂದರೆಗಳೂ ಆಗಲಿಲ್ಲ. ಗಯೆಗೂ ಅವರ ಕಡೆಯವರ ವಿಳಾಸವನ್ನು ಬರೆದುಕೊಟ್ಟಿದ್ದರು. ಅಲ್ಲಿ ಸೋಮವಾರ ತಲುಪಿ ಮಾರನೆಯ ದಿನ ಗಯಾಶ್ರಾದ್ಧಾದಿಗಳನ್ನು ಮಾಡಿದೆವು, ವಿಷ್ಣುಪಾದದಲ್ಲಿ ಪಿಂಡಗಳನ್ನು ಒಬ್ಬರ ಮೇಲೊಬ್ಬರು ಹಾಕುವದು, ಫಲ್ಗುನೀನದಿಯಲ್ಲಿ ಪಿಂಡವನ್ನು ಹಾಕಿದರೆ ಶೂದ್ರರ ಹುಡುಗರು ನಾವು ಕಾಣುವ ಹಾಗೆಯೇ ಅದರೊಳಕ್ಕೆ ಬಿದ್ದು ಆ ಪಿಂಡಾನ್ನಕ್ಕಾಗಿ

ಒಬ್ಬರೊಡನೊಬ್ಬರು ಹೊಡೆದಾಡುವದು – ಇವು ನನಗೆ ಸ್ವಲ್ಪ ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ದರ್ಶನಗಳಾಗಿದ್ದವು.

ಗಯೆಯಿಂದ ಪುರಿಗೆ ಟಿಕೆಟ್ ತೆಗೆದುಕೊಂಡದ್ದೊಂದು ವಿಚಿತ್ರಾನುಭವ, ನಡು ರಾತ್ರೆಯಲ್ಲಿ ರೈಲು ಹೊರಡುವದರಿಂದ ಸಕಾಲಕ್ಕೆ ಟಿಕೆಟು ತೆಗೆದು-ಕೊಳ್ಳುವದಕ್ಕೆ ಕಷ್ಟವಾಗುತ್ತದೆ ; ಆದ್ದರಿಂದ ಈಗಲೆ ಟಿಕೆಟ್ ಮಾಸ್ಟರನಿಗೆ ಲಂಚಕೊಟ್ಟು ತೆಗೆದುಕೊಳ್ಳತ್ತಿದ್ದಾರೆ, ನಾವೂ ಹಾಗೇ ಮಾಡೋಣ ಎಂದು ನಮ್ಮವರು ಹೇಳಿದರು. ಲಂಚಕೊಡುವದಕ್ಕೆ ನಾನು ಏನು ಮಾಡಿದರೂ ಒಪ್ಪಲಿಲ್ಲ; ಅವರಿಗೆಲ್ಲ ಬಹಳ ಅಸಮಾಧಾನವಾಯಿತು. ಊರನ್ನು ಬಿಟ್ಟು ಬಂದು ಈ ಬಯಲಿನಲ್ಲಿ ರಾತ್ರೆ ಕಳೆಯಬೇಕಾಯಿತಲ್ಲ ಎಂದು ಪೇಚಾಡಿಕೊಂಡರು. ನಾನು ಯತ್ನವಿಲ್ಲದೆ ಇನ್ನೇನು ಮಾಡುವದು ಲಂಚವೇ ಕೊಡಬೇಕಾಗುತ್ತದೆಯೋ ಏನೋ ನೋಡೋಣ ! ಎಂದುಕೊಂಡು ಟಿಕೆಟು ಕೊಡುವ ಸ್ಥಳಕ್ಕೆ ಹೋದೆ. ಅದು ಒಂದು ಎತ್ತರವಾದ ಸ್ಥಳ ; ಅದಕ್ಕೆ ನಾಲ್ಕು ಕಲ್ಲು ಮೆಟ್ಟಲುಗಳಿದ್ದವು, ನಾನು ಆ ಕೊಠಡಿಯ ಸುತ್ತಲೂ ಸುತ್ತುತ್ತಾ ಇದ್ದು ಒಳಗಿದ್ದ ಪೋಲೀಸಿನವರಿಗೆ 50 ರೂಗಳ ನೋಟೊಂದನ್ನು ತೋರಿಸಿ' ಟಿಕೆಟು ಕೊಡಿಸಪ್ಪ ಎಂದು ಕೇಳಿಕೊಂಡೆ ; ಅವನು ನೋಟುಕಂಡ ಮೇಲೆ ಏನಾದರೂ ಕೊಡುತ್ತಾರೆಂದು ಆಶೆಯಾಯಿತೇನೋ, ಬಾಗಿಲ ಕಡೆಗೆ ಬರುವಂತೆ ಹೇಳಿದನು; ಖರಗಪುರವಾಲೆ ! ಎಂದು ಕೂಗಿದನು. ನಾನು ಆತುರವಾಗಿ ಮೇಲಕ್ಕೆ ಮೆಟ್ಟಲು ಹತ್ತಿದೆನು. ಅವನು ಜನರನ್ನು ಹಿಂದಕ್ಕೆ ತಳ್ಳಿದನು, ಅವರು ನನ್ನ ಮೇಲೆ ಬಿದ್ದದ್ದರಿಂದ ನಾನೂ ಬೀಳುವ ಅಂಜಿಕೆಯಿತ್ತು . ಕಿಟಕಿಯ ಸರಳನ್ನು ಹಿಡಿದುಕೊಂಡು ನೇತಾಡುತ್ತಿದ್ದೆನು. ಪೋಲಿಸಿನವನು ಕನಿಕರದಿಂದ ನನ್ನನ್ನು ಮೇಲಕ್ಕೆತ್ತಿ ಒಳಕ್ಕೆ ಕಳುಹಿಸಿದನು. ಟಿಕೆಟ್ ಮಾಸ್ಟರನು ಒಬ್ಬ ಆಂಗ್ಲೋ ಇಂಡಿಯನ್ ತರುಣ. ನಾನು ಇಷ್ಟು ಟಿಕೆಟ್ ಪುರಿಗೆ ಎಂದು ಇಂಗ್ಲಿಷಿನಲ್ಲಿ ಹೇಳಿ ನೋಟನ್ನು ಮೇಜಿನ ಮೇಲೆ ಇಟ್ಟೆನು. ನೋಟಿನ ಹಿಂಗಡೆ ಸೈನು ಹಾಕಿ ಉದ್ಯೋಗವನ್ನು ಬರೆಯಬೇಕೆಂದು ಅವನು ಹೇಳಿದನು, 'ಹೆಡ್‌ಮಾಸ್ಟರ್ ಗೌ। ಎ.ವಿ.ಸ್ಕೂಲು ಬಸವನಗುಡಿ ಬೆಂಗಳೂರು' ಎಂದು ಬರೆದೆನೊ ಇಲ್ಲವೊ, ಅವನ ಮೇಲೆ ಯಾವ ಪರಿಣಾಮವಾಯಿತೊ ಕಾಣೆ ಕೂಡಲೆ ತುಸುವೀಸವೂ ಕಡಿಮೆಯಾಗದಂತೆ ನನಗೆ ಕೊಡಬೇಕಾದ ದುಡ್ಡನ್ನು ಎಣಿಸಿಕೊಟ್ಟುಬಿಟ್ಟನು. ಅವನ ಈ ಚರ್ಯೆಯನ್ನು ಕಂಡ ಪೋಲಿಸಿನವನು ನನಗೆ ಸೆಲ್ಯೂಟುಮಾಡಿ ದೂರಕ್ಕೆ ಸರಿದನು ! 'ಬದುಕಿಸಿದೆಯಪ್ಪ, ವಿಶ್ವನಾಥ !' ಎಂದುಕೊಂಡು ಅವನಿಗೆ ಏನೋ ಅಲ್ಪಸ್ವಲ್ಪ ಇನಾಮುಕೊಟ್ಟು ಮುಂದಕ್ಕೆ ಸರಿದೆನು.

ದಾರಿಯಲ್ಲಿ ಖರಗಪುರದಲ್ಲಿ ಒಂದೆರಡು ದಿನ ಇಳಿದೆವು, ಏನು ಕಾರಣದಿಂದಲೋ ಅಲ್ಲಿ ಜನರ ನೂಕುನುಗ್ಗಲು ಬಹಳವಾಗಿತ್ತು. ಇಳಿದವರಿಗೆ ಹೊರಕ್ಕೆ ಹೋಗುವದಕ್ಕೆ ಅವಕಾಶವಿಲ್ಲ ; ರೈಲು ಏರುವವರಿಗೆ ಸ್ಥಳವಿಲ್ಲ. ಅಲ್ಲಿ ಏನೋ ಜಾತ್ರೆಯಿರಬಹುದೆಂದು ಕಾಣುತ್ತದೆ. ನಮ್ಮಂತೆಯೇ ಎರಡು ದಿನಗಳಿಂದ ರೈಲು ಸಿಕ್ಕದೆ ಕಾದಿದ್ದವರು ಬಹಳ ಮಂದಿಯಿದ್ದರು. ಅಲ್ಲಿ ಸ್ಟೇಷನ್ ಕಾಂಪೌಂಡಿನಲ್ಲಿ ಕೊಠಡಿಗಳು ಬಾಡಿಗೆಗೆ ಸಿಕ್ಕುತ್ತವೇ ಎಂದು ಕೇಳಿದೆವು. ಸ್ಟೇಷನ್ನಿನಲ್ಲಿ ಇದ್ದ ಒಬ್ಬನನ್ನು ವಿಚಾರಿಸಿದೆವು. ಅವನು 'ಇಲ್ಲಿ ಕೊಠಡಿ ಖಾಲಿ ಇಲ್ಲ' ಎಂದು ಹೇಳಿದರೂ ಪಕ್ಕದಲ್ಲಿದ್ದ ತರುಣನೊಬ್ಬ ಅವನ ಕಡೆಗೆ ಕಣ್ಣು ಹೊರಳಿಸಿ 'ಕೇಳಿರಿ ಸಿಕ್ಕುತ್ತದೆ' ಎಂಬಂತೆ ಸನ್ನೆ ಮಾಡಿದನು. ನಾನು ಇಂಗ್ಲೀಷಿನಲ್ಲಿ 'ನಿಮ್ಮಲ್ಲಿ ಬೀಗದ ಕೈಗಳಿವೆಯಲ್ಲ, ಕೊಡಿರಿ !' ಎಂದು ಕೇಳಲು ಅವನು ಕಂ ಕಿಮ್ ಎನ್ನದೆ ಒಬ್ಬ ಆಳನ್ನು ಕರೆದು ನಮ್ಮೊಡನೆ ಕಳುಹಿಸಿಕೊಟ್ಟನು. ಆ ಕಡೆಯಲ್ಲಿ ಇಂಗ್ಲೀಷು ವಾಣಿಗೆ ಹೀಗೆ ಮಂತ್ರಶಕ್ತಿಯಿದೆ ಎಂಬುದು ನನಗೆ ಗೊತ್ತಾದದ್ದು ಇದು ಎರಡನೆಯ ಸಲ ! ಖರಗಪುರದಿಂದ ಬಹಳ ಶ್ರಮಪಟ್ಟು ಹಮಾಲಿಯವನಿಗೆ ಅವನು ಕೇಳಿದಷ್ಟು ಕೂಲಿಕೊಟ್ಟು ರೈಲು ಏರಿದೆವು, ಪ್ರಯಾಣಮಾಡಿ ಪುರಿಗೆ ಬಂದೆವು.

ಪುರಿ ಅಥವಾ ಜಗನ್ನಾಥವು ಪವಿತ್ರ ಕ್ಷೇತ್ರವೆಂಬುದನ್ನು ನಾನು ಕೇಳಿದ್ದೆನು. ಸಮುದ್ರಸ್ನಾನ, ದೇವತಾದರ್ಶನ ಮುಂತಾದ ದೃಷ್ಟಿಗಳಿಂದ ಅದು ಪವಿತ್ರ ಸ್ಥಾನವೇ ಸರಿಯಾದರೂ, ನಮ್ಮ ದೌರ್ಭಾಗ್ಯಕ್ಕೆ ನಾವು ಇಳಿದಿದ್ದ ಸ್ಥಳವು ಬಹಳ ಅಪವಿತ್ರವಾಗಿತ್ತು. ಆ ವಠಾರದಲ್ಲಿ ಕ್ಷೌರಿಕರ ಮನೆಗಳೇ ಕಂಡವು, ಪಂಡರು ತಮ್ಮ ಫೀ ತೆಗೆದು ಕೊಳ್ಳುವದೇ ಹೊರತು ಮತ್ತೆ ಏತರಲ್ಲಿಯೂ ಶ್ರದ್ಧೆಯನ್ನು ತೋರಿಸಲಿಲ್ಲ. ಅಲ್ಲಿರುವಷ್ಟು ಕಾಲವೂ ನಾವು ಉಪವಾಸದಿಂದಲೇ ಇದ್ದೆವು (ಪ್ರಾಯಶಃ ಒಂದೇ ದಿನ). ಪುರಿಯಲ್ಲಿ ಟಿಕೆಟ್ ಸಿಕ್ಕುವದೂ ಬಹಳ ಕಷ್ಟವಾಯಿತು, ಅಲ್ಲಿ ಟಿಕೆಟ್ ಮಾರುವ ಸ್ಥಳವು ಬಹಳ ಸಣ್ಣ ಪ್ರದೇಶವಾಗಿದ್ದು ಸುತ್ತಲೂ ಕಟಕಟೆ ಹಾಕಿದ್ದರು. ಬಹಳ ಹೊತ್ತು ಕಾದುಕಾದು ಸಾಕಾದೆವು. ನಾನು ಪಕ್ಕದಲ್ಲಿದ್ದ ಒಬ್ಬಾತನನ್ನು ಮಾತನಾಡಿಸಿದ್ದರಲ್ಲಿ ಆತನನ್ನು **Servants of India** ಸಂಘಕ್ಕೆ ಸೇರಿದವನೆಂದು ತಿಳಿದು ಬಂತು. ''ನೀವುಗಳೂ ಇದನ್ನೆಲ್ಲ ನೋಡಿ ಸುಮ್ಮನಿರುವಿರಲ್ಲ ; ಇಲ್ಲಿಯ ಸ್ಥಿತಿಯನ್ನೆಲ್ಲ ಸರಕಾರಕ್ಕೆ ರಿಪೋರ್ಟುಮಾಡಿ ವ್ಯವಸ್ಥೆ ಮಾಡಿಸಬಾರದೆ ?'' ಎಂದು ಇಂಗ್ಲೀಷಿನಲ್ಲಿ ನಾನು ಅಂದದ್ದು ಇಲ್ಲಿಯೂ ಭೂತೋಚ್ಚಾಟನ ಮಂತ್ರೋಚ್ಚಾರಣೆಯ ಫಲವನ್ನುಂಟುಮಾಡಿತು. ಟಿಕೆಟ್ ಮಾರುವವನು ಜವಾನನ ಮೂಲಕ ನನ್ನನ್ನು ಕರೆಯಿಸಿಕೊಂಡು ಕೂಡಲೆ ನಮಗೆ ಬೇಕಾಗಿದ್ದ ಖುರ್ದಾ ರೋಡಿಗೆ ಟಿಕೆಟ್ಟುಗಳನ್ನು

ಕೊಟ್ಟು ಕಳುಹಿಸಿಬಿಟ್ಟನು ! ಫಾಲ್ಗುನ ಶುಕ್ಲ 14 ಭಾನುವಾರ ವಿಜಯನಗರಕ್ಕೆ ಟಿಕೆಟು ತೆಗೆದುಕೊಂಡೆವು. ಅಲ್ಲಿ ಶ್ರೀರಾಮ ಛತ್ರದಲ್ಲಿ ಉಳಿದು ಕೊಂಡೆವೆಂದು ಕಾಣುತ್ತದೆ. ಅಲ್ಲಿ ಬುಧವಾರದವರೆಗೂ ಇದ್ದುಕೊಂಡಿದ್ದೆವು. ಆವೂರಲ್ಲಿ ನಮಗೆ ಹಣವು ಜರೂರು ಬೇಕಿತ್ತು. ಆದ್ದರಿಂದ ಬೆಂಗಳೂರಿಗೆ ಲಕ್ಷ್ಮಕ್ಕನ ಮೈದುನ ಸೀತಾರಾಮಯ್ಯನವರೇ ಮುಂತಾದ ಕೆಲವರಿಗೆ ಹಣವನ್ನು ಕಳುಹಿಸಬೇಕೆಂದು ತಂತಿ ಕೊಟ್ಟೆವು ; ಕೊಡುವಾಗ ನಾನು ಪೋಸ್ಟುಮಾಸ್ಟರಿಗೆ 'ನಾವು ಹೀಗೆ, ಯಾತ್ರೆಗೆ ಹೋಗಿದ್ದವರು ಹಿಂತಿರುಗಿರುತ್ತೇವೆ ; ಇನ್ನು ಮುಂದಕ್ಕೆ ಬೆಂಗಳೂರಿಗೆ ಹೋಗುತ್ತೇವೆ. ಹಣ ಕಳುಹಿಸಬೇಕೆಂತ ತಂತಿ ಕೊಡುತ್ತೇನೆ, ದಯವಿಟ್ಟು ಜ್ಞಾಪಕದಲ್ಲಿರಲಿ, ಬಂದಾಗ ನಮಗೆ ಕೊಡಿಸಬೇಕು' ಎಂದು ಕೇಳಿಕೊಂಡದ್ದಕ್ಕೆ ಅವಶ್ಯ ಆಗಲಿ ಎಂದರು. ನಮಗೆ ಸೀತಾರಾಮಯ್ಯನವರಿಂದ 50ರೂ, ವಿಠ್ಠಲಶಾಸ್ತ್ರಿಗಳ ತಮ್ಮ ಹಿರಿಯಣ್ಣನವರಿಂದ 50ರೂ, ಹೀಗೆ 100ರೂ ಟೆಲಿಗ್ರಾಂ ಮನಿ ಆರ್ಡರು ಮೂಲಕ ಬಂತು. ಆದರೆ ಪೋಸ್ಟ್ ಮಾನ್ ಏನೋ ಹೇಳಿಕೊಂಡಂತೆ ಕಾಣುತ್ತದೆ ; ಪೋಸ್ಟು ಮಾಸ್ಟರು ನನ್ನ ಹೊಣೆಗಾರಿಕೆಯೇನೂ ಇಲ್ಲ ಅವನು ಕೊಟ್ಟರೆ ತೆಗೆದುಕೊಳ್ಳಿ ಎಂದು ಬಿಟ್ಟರು, ನಮಗೆ ಸಾಮಾನುಕೊಡುತ್ತಿದ್ದ ಅಂಗಡಿಯ ಶೆಟ್ಟಿಯು 'ನನಗೆ ಇವರ ಗುರುತಿದೆ' ಎಂದು ಸಾಕ್ಷಿ ಹಾಕಿ ಹಣಕೊಡಿಸುವ ಪೋಸ್ಟುನವನಿಗೆ ನಾಲ್ಕಾಣೆ ಬಕ್ಷೀಸ್ ಕೊಟ್ಟು ! ಮುಂದೆ ರಾಜಮಹೇಂದ್ರಕ್ಕೆ ಹೋದೆವು ; ಅಲ್ಲಿ ಒಬ್ಬ ರೈಲ್ವೆ ನೌಕರನು ನಮ್ಮ ಸಾಮಾನು ಕೂಡ ಹೆಚ್ಚಾಗಿದೆ ಎಂದು ತರಲೆ ತೆಗೆದು ಮತ್ತೆ ಸೀತಾರಾಮಶಾಸ್ತ್ರಿಗಳಿಂದ ಸ್ವಲ್ಪ 'ಭಕ್ಷೀಸು' ತೆಗೆದುಕೊಂಡನು ! ಈ ಭಕ್ಷೀಸುಗಳು ನಮ್ಮನ್ನು ಅಲ್ಲಲ್ಲಿ ಭಕ್ಷಿಸುತ್ತಿರುವದನ್ನು ನೋಡಿ ನೋಡಿ ನನಗೆ ಬೇಸರವಾಗಿ ಹೋಗಿತ್ತು.

ಗೋದಾವರಿ ಸ್ನಾನವನ್ನು ಮುಗಿಸಿಕೊಂಡು ನಂದ್ಯಾಲಕ್ಕೆ ಹೊರಟೆವು. ನಂದ್ಯಾಲದಲ್ಲಿ ನಂದೀದರ್ಶನವಾಯಿತು. ಆವೂರಿನಲ್ಲಿ ಹಾಲು ಮೊಸರು ತರುವದಕ್ಕೆ ಹೋದ ಸೀತಾರಾಮಶಾಸ್ತ್ರಿಗಳನ್ನು ಹಾಲು ಮೊಸರು ಮಾರುವವಳು ಅಪರಿಚಿತಳಾದರೂ ಆದರದಿಂದ ಉಪಚಾರ ಮಾಡಿದ್ದು ನೋಡುವ ಹಾಗಿತ್ತು. ಪರದೇಶದವರೆಂದು ಸುಲಿಗೆ ಮಾಡುವವರಿದ್ದರೆ, ಸತ್ಕರಿಸಿ ಪುಣ್ಯವನ್ನು ಸಂಪಾದಿಸುವವರೂ ಇದ್ದಾರೆ ಎಂಬುದು ಮನದಟ್ಟಾಯಿತು. ನಂದ್ಯಾಲದಿಂದ ಗುಂತಕಲ್ಲು ಮಾರ್ಗವಾಗಿ ಬೆಂಗಳೂರನ್ನು (ಇದುವರೆಗೆ ಬರೆದಿರುವದು ಸೀತಾರಾಮ ಶಾಸ್ತ್ರಿಗಳು ಬರೆದ ನೋಟುಬುಕ್ಕಿನ ಆಧಾರದ ತಿಥಿಗಳು ಇವುಗಳು ಹೊಂದದೆ ಇದ್ದರೆ ತಿಥಿಗಳ ಹೆಸರನ್ನು ಬಿಟ್ಟು ಬಿಡಬಹುದು). ಫಾಲ್ಗುಣ ಭಾನುವಾರ ಬಂದು ಸೇರಿದೆವು. ಕಾಶಿಯಾತ್ರೆಯ ಅನುಭವವನ್ನು ಸಂಗ್ರಹಿಸಿ ಹೇಳಿದರೆ ಇಷ್ಟಾಗುವದು. ನಮ್ಮ ದಕ್ಷಿಣದೇಶದಲ್ಲಿರುವಷ್ಟು ಶುದ್ಧ ಕರ್ಮಾಚರಣೆ ಉತ್ತರದಲ್ಲಿ ಕಂಡು

ಬರುವದಿಲ್ಲ; ಆದರೆ ಆ ದೇಶದ ಜನರು ಯಾತ್ರೆಯಲ್ಲಿ ಯಾವಾಗಲೂ ಭಗವಂತನ ಭಜನೆಯೇ ಮುಂತಾದವುಗಳನ್ನು ಮಾಡುತ್ತಾ ನಮಗಿಂತಲೂ ಹೆಚ್ಚು ಶ್ರದ್ಧಾಭಕ್ತಿಗಳಿಂದ ಕೂಡಿರುವದು ಕಂಡು ಬಂತು. ತೀರ್ಥಗಳಲ್ಲಿರುವ ಪಂಡರು ಸ್ವಾರ್ಥದಿಂದ ಸ್ವಲ್ಪ ತೊಂದರೆ ಕೊಟ್ಟರು. ಆದರೆ ಒಟ್ಟಿನಲ್ಲಿ ಅವರಿಂದ ನಮಗೆ ಅನೇಕ ಸೌಲಭ್ಯಗಳೂ ದೊರೆತವು. ನಮ್ಮ ದೇಶದ ಜನರು ತೀರ್ಥಶ್ರಾದ್ಧಾದಿಗಳ ಬಹಿರಾಚರಣೆಗಳನ್ನು ಲಕ್ಷ್ಯವಿಟ್ಟು ಮಾಡುತ್ತಾರೆ; ಅವರಿಗೆ ಉತ್ತರ ದೇಶದಲ್ಲಿ ಆಗುವ ಕರ್ಮವು ಹರಕುಬರಕಲಾಗಿ ಕಾಣುತ್ತದೆ. ನನಗಂತೂ ಶ್ರಾದ್ಧಕ್ಕೆಂದು ನಾವು ವಿನಿಯೋಗಿಸಲಿಚ್ಛಿಸುವ ದ್ರವ್ಯವನ್ನು ಒಟ್ಟುಕೂಡಿಸಿ ನಮ್ಮ ಕಡೆಗೆ ಬಂದ ಮೇಲೆ ಯಾವದಾದರೊಂದು ತೀರ್ಥದಲ್ಲಿ ಶ್ರಾದ್ಧಮಾಡಿ ಬ್ರಾಹ್ಮಣರಿಗೆ ಭೂರಿಭೋಜನ ಮಾಡಿಸಿಬಿಟ್ಟರೆ ಸಾಕೆಂದು ತೋರಿತು. ಆದರೆ ಉತ್ತರ ದೇಶದವರ ಭಾವಭಕ್ತಿಯನ್ನು ನಾವು ಸಂಪಾದಿಸಿಕೊಳ್ಳಬೇಕಾದದ್ದು ಅತ್ಯವಶ್ಯ. ಇಲ್ಲದಿದ್ದರೆ ಬರಿಯ ಬಾಹ್ಯ ಕರ್ಮವು ನಮ್ಮನ್ನು ಎಂದಿಗೂ ದಾಟಿಸಲಾರದು ಎನಿಸಿತು. ರೈಲಿನ ಕೂಲಿಗಳು ಒಟ್ಟಿನಲ್ಲಿ ಬಹಳ ಶ್ರದ್ಧೆಯಿಂದ ಪ್ರಯಾಣಿಕರ ಕೆಲಸವನ್ನು ಮಾಡಿಕೊಡುವಂತೆ ತೋರಿತು; ಅವರಿಗೆ ನಾವು ಕೊಡುವ ಕೂಲಿಯು ಅವರ ಶ್ರಮಕ್ಕೆ ಹೆಚ್ಚಲ್ಲವೆಂದೇ ಹೇಳಬೇಕು. ಅಲ್ಲಲ್ಲಿ ರೈಲು ಪೋಸ್ಟಾಫೀಸು ನೌಕರರು ಲಂಚಕೋರರೂ ಇದಾರೆ; ಮಾನವನ ಮನಸ್ಸಿನ ದೌರ್ಬಲ್ಯವನ್ನು ಮನದಂದರೆ ಪರಸ್ಥಳಕ್ಕೆ ಹೋದವರು ಅವರಿಗೆ ಅವರು ಕೇಳದಯೇ ಅಲ್ಪಸ್ವಲ್ಪ ಪಾರಿತೋಷಿಕ ಮಾಡುವದೇ ಒಟ್ಟಿನಲ್ಲಿ ಒಳ್ಳೆಯದಾಗಿ ತೋರುತ್ತದೆ. ಪುರಾಣಗಳಲ್ಲಿ ಶ್ರದ್ಧೆಯಿರುವವರೂ ಸತ್ಸಂಗದ ಮಹಿಮೆಯನ್ನು ಬಲ್ಲವರೂ, ಉತ್ತರದಲ್ಲಿರುವ ನಿಜವಾದ ಸಾಧು ಸತ್ಪುರುಷರನ್ನು ಕಾಣುವದಕ್ಕೆ ಅವಶ್ಯವಾಗಿ ಪ್ರಯತ್ನಿಸಬೇಕು; ನನಗೆ ಆ ಪುಣ್ಯವು ಈ ಯಾತ್ರೆಯಲ್ಲಿ ದೊರೆಯಲಿಲ್ಲವೆಂದೇ ಹೇಳಬೇಕು. ನನಗೆ ಇರುವಷ್ಟು ಅಲ್ಪಕಾಲದಲ್ಲಿ ಯಾತ್ರೆಯನ್ನು ಮುಗಿಸಿಕೊಂಡು ಬರಬೇಕೆಂದು ಪ್ರಯತ್ನಿಸಿದ್ದರಿಂದ ಇಂಡಿಯಾದ ಯಾವ ಮುಖ್ಯ ನಗರಗಳನ್ನೂ ನೋಡಲಾಗಲಿಲ್ಲ, ಆದರೆ ನನಗೆ ಆ ನಿಮಿತ್ತದಿಂದ ಯಾವ ಪಶ್ಚಾತ್ತಾಪವೂ ಆಗಲಿಲ್ಲ. ಒಟ್ಟಿನಲ್ಲಿ ಭರತ ಖಂಡದ ಜನರು ವಿವಿಧ ಭಾಷಾ ವೇಷಾಚಾರಗಳಿಂದ ಕೂಡಿದ್ದರೂ ಅವರೆಲ್ಲರನ್ನು ಒಂದು ಗೂಡಿಸಿರುವ ಒಂದು ಸಂಸ್ಕೃತಿಯು ಇನ್ನೂ ಜೀವಂತವಾಗಿದೆ ಎಂಬುದು ಮನದಟ್ಟಾಯಿತು.

# 33. ಬೆಂಗಳೂರಿನಿಂದ ಹೊರಗೆ ಕೆಲಕಾಲ (1922)

## ಬಸವನಗುಡಿಯ ಎ.ವಿ. ಸ್ಕೂಲು :

ನಾನು ಬರುವದರೊಳಗೆ ಇನ್‌ಸ್ಪೆಕ್ಟರವರ ವಾಗ್ದಾನದಂತೆ ಬಸವನಗುಡಿ ಸ್ಕೂಲಿಗೆ ವರ್ಗವನ್ನು ಮಾಡಿದ್ದರು. ಬಸವನಗುಡಿಯಲ್ಲಿ ನಾನು ಕೆಲಸಮಾಡಿದ್ದು ಮೂರೇ ತಿಂಗಳು. ಅಲ್ಲಿ ಏನು ವಿಶೇಷವು ನಡೆಯಿತೆಂಬುದು ಸ್ವಲ್ಪವೂ ನೆನಪಿಲ್ಲ (ಮಹಾರಾಜರ ವರ್ಧಂತ್ಯುತ್ಸವ ಮಾಡಿದಾಗ ಸಿಟಿ ಇನ್‌ಸ್ಪೆಕ್ಟರಿಗೂ ನನಗೂ ಏನೋ ಸ್ವಲ್ಪ ಬಿಸಿ ಬಿಸಿ ಮಾತಾದವು ; ಸ್ಕೂಲಿನ ಜವಾನರನ್ನು ತಾವು ಹೇಳಿದ ಕಡೆಗೆ ಕಳುಹಿಸಲಿಲ್ಲವೆಂಬುದು ಅವರ ಆಕ್ಷೇಪ. ಎಲ್ಲರೆದುರಿಗೂ ನನ್ನನ್ನು ಗದರಿಸಿ ಮಾತನಾಡಿದರು, ನಾನೂ ಸ್ವಲ್ಪ ಎತ್ತರಿಸಿದ ದನಿಯಿಂದ ಉತ್ತರ ಕೊಟ್ಟೆ ಇದು ಅಲ್ಪ ವಿಷಯ, ಹೇಗೇ ಆಗಲಿ) ಮತ್ತೆ ನನಗೆ ಮದ್ದಗಿರಿಗೆ ವರ್ಗವಾಗಿಬಿಟ್ಟಿತು. ನಾನು ಅಲ್ಲಿಗೆ ಹೋಗುವದಕ್ಕೆ ಸ್ವಲ್ಪವೂ ಮನಸಿಲ್ಲದೆ ಮನೆಯವರನ್ನೆಲ್ಲ ಬಿಟ್ಟು ಒಬ್ಬನೇ ಹೊರಟೆ. ಹೊರಡುವಾಗ ಸ್ಕೂಲಿನವರು ನನಗೆ ಸತ್ಕಾರ ಕೂಟವನ್ನು ಏರ್ಪಡಿಸಿದರು, ಆಗ್ಗೆ ನಂಜಪ್ಪನವರು ಕಾರಣಾಂತರದಿಂದ ಬಂದವರು ಹರಿಕಥೆ ಮಾಡಿದ್ದರು.

## ಮದ್ದಗಿರಿ ಎ.ವಿ. ಸ್ಕೂಲ್ :

ನಾನು ಈ ಸಲ ಮದ್ದಗಿರಿಯಲ್ಲಿ ಇದ್ದನೆಂದು ಕೂಡ ಹೇಳುವದಕ್ಕೆ ಬರುವದಿಲ್ಲ. ಜೂನ್ ತಿಂಗಳಲ್ಲಿ ಹೋದೆ. ಜುಲೈ ತಿಂಗಳು 5ನೇಯ ತಾರೀಖು ಹೊರಟೆ, ಅಲ್ಲಿಗೆ ಹೋದ ಕೂಡಲೆ ಹಳೆಯ ಪರಿಚಿತರಾದ ಅಹೋಬಲಶಾಸ್ತ್ರಿಗಳಿಂದ ರಜಾ ಜಾರಿಪಟ್ಟಿಗೆ ರುಜು ಮಾಡಿ ಎಲ್ಲವನ್ನು ಅವರ ವಶದಲ್ಲಿಯೇ ಬಿಟ್ಟು ಬಿಟ್ಟಿದ್ದೆ ; ಸಾಲುರೂಥಿ ಲೆಕ್ಕಗಳನ್ನು ಬರೆಯಿಸುವದಕ್ಕೆ ಪ್ರಾರಂಭಿಸಿ 5ನೆಯ ತಾರೀಖಿನ ದಿನ ಎಲ್ಲವನ್ನೂ ಅಂಚೆಗೆ ಹಾಕಿದೆ. ಹೋದ ದಿನವೇ 5 ನೇ ತಾರೀಖಿನಿಂದ ಒಂದು ತಿಂಗಳು ರಜಬೇಕೆಂದು ಬರೆದು ಕೊಂಡಿದ್ದೆ; ಜುಲೈ ತಾರೀಖು 5 ರಿಂದ ಅದನ್ನು ಉಪಯೋಗಿಸಿಕೊಳ್ಳುತ್ತೇನೆಂದೂ ಕಾಣಿಸಿದ್ದೆ. ತುಮಕೂರು ಡಿ|| ಎಜ್ಯುಕೇಷನಲ್ ಆಫೀಸರಾಗಿದ್ದ ಶ್ರೀಧರಮೂರ್ತಿಗಳು ನನ್ನ ಸ್ಥಿತಿಯೆಲ್ಲವನ್ನೂ ಬಲ್ಲವರಾಗಿದ್ದದ್ದರಿಂದ ನಾನು ಹೊರಡುವ ದಿನವೇ ತಲುಪುವಂತೆ ರಜ ಸ್ಯಾಂಕ್ಷನ್ನಾದ ಆರ್ಡರನ್ನು ಕಳುಹಿಸಿಕೊಟ್ಟರು.

## ಗವಿಪುರದಲ್ಲಿ ವಾಸ :

ನಾನು ಬೆಂಗಳೂರು ಗವಿಪುರದಲ್ಲಿ ಹಿಂದೆ ಇದ್ದ ಮನೆಯ ಹತ್ತಿರವೇ ಒಂದು ಮನೆಯಲ್ಲಿ ವಾಸವಾಗಿದ್ದುಕೊಂಡು ಪ್ರತಿದಿನವೂ ಸುಂದರಕಾಂಡ ಪಾರಾಯಣವನ್ನು

ಮಾಡುವದು, ವೇದಾಂತವಿಚಾರ, ಗ್ರಂಥಕಾಲಕ್ಷೇಪ-ಹೀಗೆ ಕಾಲವನ್ನು ಕಳೆದೆನು. ಇ|| ಜನರಲ್‌ರವರನ್ನು ಒಂದೊಂದು ಸಲ ಹೋಗಿ, ನನ್ನನ್ನು ಮದ್ದಗಿರಿಯಿಂದ ಬೆಂಗಳೂರಿಗೆ ವರ್ಗಮಾಡಿಕೊಡಬೇಕೆಂದು ಕೇಳಿಕೊಂಡೆನು. ಆಮೇಲೆ 'ಏನು ಬೇಕಾದರೂ ಮಾಡಿಕೊಳ್ಳಲಿ' ಎಂದು ಸುಮ್ಮನಿದ್ದುಬಿಟ್ಟೆನು. ಪಾರಾಯಣವು ಪೂರ್ತಿಯಾಗಿ ಬ್ರಾಹ್ಮಣರಿಗೆ ಹಸ್ತೋದಕವನ್ನು ಹಾಕಿದ ಮೇಲೆ ತಾಂಬೂಲವನ್ನು ಕೊಡುವಾಗ 'ಇಷ್ಟರಲ್ಲಿ ಆರ್ಡರು ಬರಬೇಕಿತ್ತು, ಏಕೋ ಬರಲಿಲ್ಲ' ಎಂದು ಸ್ವಾಭಾವಿಕವಾಗಿ ಹೇಳಿದೆನು. ಬುದ್ಧಿ ಮಂಕಾಗಿದ್ದನೆಂದು ಹಿಂದೆ ಹೇಳಿರುವ ನನ್ನ ಭಾವಮೈದುನನು, ಆ ಆರ್ಡರು ಕಾಗದವನ್ನು ತೆಗೆದುಕೊಂಡು ತನ್ನ ಪುಸ್ತಕದಲ್ಲಿಟ್ಟುಕೊಂಡಿದ್ದವನು ಕೂಡಲೆ ಅದನ್ನು ತಂದು ನನ್ನ ಮುಂದೆ ಇಟ್ಟನು. ಮತ್ತೆ ಎಸ್.ಆರ್.ಎನ್. ಎ. ವಿ. ಸ್ಕೂಲಿಗೆ ವರ್ಗಮಾಡಿದೆ ಎಂದು ಬರೆದಿತ್ತು, ಆ ದಿನ ಸಾಯಂಕಾಲವೇ ಸರ್ಕಲ್ ಇ|| ಡಿ. ವೆಂಕಟರಾಮಯ್ಯನವರನ್ನು ಕಂಡು ಕೆಲಸಕ್ಕೆ ಹಾಜರಾಗಲು ಅನುಮತಿ ಕೇಳಿದೆ. ಅವರು 'ನಿಮಗೆ ಅದೃಷ್ಟವಿಲ್ಲ, ಅದು ಬೇರೊಬ್ಬರಿಗೆ ಆಗಿ ಹೋಗಿದೆ; ನಿಮಗೆ ಚೆನ್ನಪಟ್ಟಣಕ್ಕೆ ವರ್ಗಮಾಡಲು ಶಿಫಾರಸ್ಸು ಮಾಡಿದ್ದೇನೆ. ಅದು ಬಂದ ಕೂಡಲೆ ಹೋಗಿ ಸೇರಿಕೊಳ್ಳಿ !' ಎಂದರು. 'ದೈವೀ ವಿಚಿತ್ರಾ ಗತಿಃ !'

## ಚಾಮರಾಜಪೇಟೆಯಲ್ಲಿ ಮನೆಕೊಂಡದ್ದು:

ಈ ಮಧ್ಯದಲ್ಲಿ ಕೃ.ಸ್ವಾ. ಅಯ್ಯರವರು ತಮ್ಮ ಸ್ನೇಹಿತರಾದ ಡಿ.ಎಮ್.ಲಕ್ಷ್ಮಯ್ಯ ಎಂಬುವರೊಡನೆ ನನಗೆ ಯಾವದಾದರೊಂದು ಮನೆಯನ್ನು ವಾಸಕ್ಕೆ ಖರೀದಿಗೆ ಕೊಡಿಸಬಾರದೆ ? ಎಂದು ಪ್ರಾಸಂಗಿಕವಾಗಿ ಮಾತನಾಡಿದ್ದರು. ಲಕ್ಷ್ಮಯ್ಯನವರು ಆ ಸೂಚನೆಯನ್ನು ರೂಪಕ್ಕೆ ತಂದು, ತಮ್ಮ ಮನೆಯ ಎಡಕ್ಕೆ ಇದ್ದ ಒಂದು ಮನೆಯವರು ರೈಲ್ವೆ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದು, ರಿಟೈರ್ ಆಗಿದ್ದದ್ದರಿಂದ ಮನೆಯನ್ನು ಮಾರುವದಕ್ಕೆ ಯತ್ನಿಸುತ್ತಿದ್ದದ್ದನ್ನು ತಿಳಿಸಿದರು. ಆದರೆ ಆ ಮನೆಯವರು ಖರೀದಿಯಾದ ಬಳಿಕ ಇನ್ನು ಎರಡು ತಿಂಗಳು ಮನೆಯಲ್ಲಿರಬೇಕಾಗುತ್ತದೆ ಎಂದದ್ದರಿಂದ ಹೇಗೆ ಮಾಡಬೇಕೆಂದು ಲಕ್ಷ್ಮಯ್ಯನವರು ಪೇಚಾಡುತ್ತಿದ್ದರು. ಕೃ. ಸ್ವಾ. ಅಯ್ಯರು ಒಂದು ಹಂಚಿಕೆಯನ್ನು ಮಾಡಿದರು. ಮನೆಯ ಖರೀದಿ ಎರಡು ಸಾವಿರ ರೂಪಾಯಿ ಆಗಿತ್ತು; ಈಗ ಒಂದು ಸಾವಿರ ರೂಪಾಯಿ ಬರೆದುಕೊಟ್ಟು ಉಳಿದ ಒಂದು ಸಾವಿರ ರೂಪಾಯಿಗೆ ಪ್ರಾಮಿಸರಿನೋಟು ಬರೆದುಕೊಡುವದು, ಅವರು ಮನೆ ಬಿಡುವಾಗ ಒಂದು ಸಾವಿರ ರೂಪಾಯಿಕೊಡುವದು ಎಂದು ಸೂಚಿಸಿದ್ದರು. ಇದಕ್ಕೆ ಮನೆಯವರು ಒಪ್ಪಿದರು.

ವಾಕ್ಯರಚನೆಯಲ್ಲಿ ಬಂದ ಏಳುನೂರು, ಸೊಸ್ಶೈಟಿಯಿಂದ ಸಾಲವಾಗಿ ಪಡೆದ ಮುನ್ನೂರು - ಹೀಗೆ ಒಂದು ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟು ಪ್ರಾಮಿಸರಿನೋಟು ಬರೆದುಕೊಟ್ಟೆವು. ಮನೆ ನಮಗೆ ಸುಪರ್ದುಕೊಡುವಾಗ ಇನ್ನೊಂದು ಸಾವಿರ ರೂಪಾಯಿ ಕೊಡುವದಾಗಿ ಹೇಳಿದೆವು. ಮನೆ ನಮ್ಮದೆಂದಾದ ಮೇಲೆ ಬೆಂಗಳೂರು ಸೆಂಟ್ರಲ್ ಕೊ. ಸೊಸೈಟಿಗೆ ಸೇರಿದ ಹೌಸ್ ಬಿಲ್ಡಿಂಗ್ ಸೊಸೈಟಿ ಎಂಬಲ್ಲಿ ಮನೆಯ ಆಧಾರದ ಮೇಲೆ 1,100 ರೂ ಸಾಲ ಕೊಡಿಸಬೇಕೆಂದು ಕೇಳಿಕೊಂಡೆವು. ಸೆಕ್ರೆಟರಿಗಳಾದ ಶ್ರೀಕಂಠಯ್ಯನವರು ಕೃ.ಸ್ವಾ. ಅಯ್ಯರ ಸ್ನೇಹಿತರಾದ್ದರಿಂದ ಇದಕ್ಕೆ ಒಪ್ಪಿ ರಿಕಾರ್ಡುಗಳನ್ನೆಲ್ಲ ತೆಗೆದುಕೊಂಡು ನಮ್ಮ ಅಣ್ಣತಮ್ಮಂದಿರುಗಳಿಂದ ಅಟರ್ನಿ ಆಫ್‌ಸೇಕ್ - (ಈ ಮನೆಗೆ ತಮ್ಮ ಹಕ್ಕೂ ಯಾವದೂ ಇಲ್ಲವೆಂಬ ಹೇಳಿಕೆ) ಬರೆಯಿಸಿಕೊಡಬೇಕೆಂದು ಕೇಳಿದರು. ಅದರಂತೆ ಕಡೂರಿಗೂ ಯಳ್ಳಂಬಳಸೆಗೂ ಅಣ್ಣತಮ್ಮಂದಿರಿಗೆ ಕಾಗದ ಬರೆಯಿಸಿದೆ, ಚೆನ್ನಪಟ್ಟಣಕ್ಕೆ ಹೊರಟೆ.

## ಚೆನ್ನಪಟ್ಟಣ ಎ.ವಿ. ಸ್ಕೂಲ್ :

ಚೆನ್ನಪಟ್ಟಣದ ಎ.ವಿ. ಸ್ಕೂಲು ಹೈಸ್ಕೂಲಿನಲ್ಲಿ ಅಂತರ್ಭಾವಿತವಾಗಿದ್ದದ್ದು ಆಗತಾನೆ ಬೇರೆಯಾಗಿತ್ತು, ಅಲ್ಲಿ ಹೆಡ್‌ಮಾಸ್ಟರಾಗಿದ್ದವರಿಗೂ ಹೈಸ್ಕೂಲು ಹೆಡ್‌ಮಾಸ್ಟರಿಗೂ ಕೆಲವು ಮತಭೇದಗಳಿದ್ದದ್ದರಿಂದ ಸ್ಕೂಲಿನ ಅಭಿವೃದ್ಧಿಗೆ ತೊಡಕುಗಳಾಗಿದ್ದವು. ಸರ್ಕಲ್ ಇನ್‌ಸ್ಪೆಕ್ಟರ್‌ರವರು ನನ್ನನ್ನು ವರ್ಗಮಾಡಿ ಹೈಸ್ಕೂಲು ಹೆಡ್‌ಮಾಸ್ಟರಿಗೂ ನನ್ನ ವಿಷಯವನ್ನು ಶಿಫಾರಸು ಮಾಡಿದ್ದರು. ದೇವರ ದಯದಿಂದ ಆ ಹೆಡ್‌ಮಾಸ್ಟರು ಎಫ್.ಎ ಕ್ಲಾಸಿನಲ್ಲಿ ನನ್ನ ಸತೀರ್ಥ(ಸಹಪಾಠಿ)-ರಾಗಿದ್ದ ಶ್ರೀನಿವಾಸರಾವ್ ಎಂಬುವರಾಗಿದ್ದದ್ದರಿಂದ, ಅವರನ್ನು ನಾನು ನೋಡಿದ ಕೂಡಲೆ ನನಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಮಾಡಿಕೊಟ್ಟರು. ಹೊಸ ಸ್ಕೂಲು ಎಂಬುದರ ಮೇಲೆ 'ಅಲ್ಲಿಗೆ ಬೇಕಾದ ಸಾಮಾನುಗಳಿಗೆಲ್ಲ ಬರೆದುಕೊಳ್ಳಿ ಕೂಡಲೆ ಮಂಜೂರು ಮಾಡುತ್ತೇನೆ. ಅವಶ್ಯವಿದ್ದರೆ ಇನ್‌ಸ್ಪೆಕ್ಟರ್ ಜನರಲ್‌ರವರಿಗೂ ಬರೆದುಕೊಳ್ಳಿ' ಎಂದು ಸರ್ಕಲ್ ಇನ್‌ಸ್ಪೆಕ್ಟರ್‌ರವರು ಹೇಳಿದ್ದರು. ಬೇಕಾದಷ್ಟು ಬೆಂಚು, ಕುರ್ಚಿ, ಮ್ಯಾಪು ವಗೈರೆ ಸಾಮಾನುಗಳು ಕೆಲವು ವೇಳೆ ಇ||ಜ||ರವರ ಅಪ್ಪಣೆ, ಸ್ಕೂಲು||ಇ||ರ ಶಿಫಾರಸು ಎರಡೂ ಸೇರಿ ಎರಡೆರಡು ಸಲ ಬಂದು ಬಿದ್ದವು. ಬೇರೆ ಕಡೆ ಹೆಚ್ಚೆಂದು ಕಂಡ ಸ್ಕೂಲು ಮೇಷ್ಟರುಗಳನ್ನು ವರ್ಗಮಾಡಿದರು. ನನಗೆ ಬೇಕಾದಷ್ಟು ವಿರಾಮವು ಸಿಕ್ಕಿತು ; ಸ್ಕೂಲಿನ ಕೆಲಸಕ್ಕೆ ಯಾವ ಅಡಚಣೆಯೂ ಇರಲಿಲ್ಲ, ಟ್ರೇನಿಂಗಾದ ಒಬ್ಬ ಮೇಷ್ಟರು ದೊಡ್ಡಬಳ್ಳಾಪುರದವರು, ಅವರ ಹೆಸರು

ಸಿದ್ದಪ್ಪ ಎಂದಿತ್ತೇನೋ ಮರೆತು ಹೋಗಿದೆ. ಕಳೂರುಕಟ್ಟೆಯ ಚಂದ್ರಶೇಖರ-ಶಾಸ್ತ್ರಿಗಳಂತೆ ಕೆಲಸವನ್ನೆಲ್ಲ ತಾವೇ ಹೊತ್ತುಕೊಂಡು ಮಾಡಿದರು, ಆದರಿಂದ ನನಗೆ ಮತ್ತಷ್ಟು ಅನುಕೂಲವಾಯಿತು.

## ಈಶ, ಮುಂಡಕ, ಪ್ರಶ್ನ ಭಾಷ್ಯಗಳು :

ಈಗ ನನಗೆ ಸಿಕ್ಕಿದ ವಿರಾಮಕಾಲವನ್ನು ಉಪನಿಷದ್ಭಾಷ್ಯಗಳ ಭಾಷಾಂತರವನ್ನು ಮಾಡುವದಕ್ಕೆ ವಿನಿಯೋಗಿಸಿದೆ. ಉಪನಿಷತ್ತಿನ ಅನುವಾದ, ಪ್ರಘಟ್ಟಗಳಾಗಿ ಒಡೆದು ತಲೆಬರಹಗಳೊಡನೆ ವಿಂಗಡಿಸಿದ ಭಾಷ್ಯದ ಅನುವಾದ, ಅಡಿಯಲ್ಲಿ ಟಿಪ್ಪಣಿ - ಹೀಗೆ ಬರೆದು ಭಾಷ್ಯದೊಳಗೆ ಬರುವ ಪ್ರಮಾಣವಚನಗಳಿಗೆಲ್ಲ ಸ್ಥಾನಸೂಚನೆ ಮಾಡುವದು, ಪುಸ್ತಕದ ಕೊನೆಯಲ್ಲಿ ಗ್ರಂಥದ ಸಾರ, ಉಪನಿಷತ್ತಿನ ಮೂಲ (ಕನ್ನಡ ಅಕ್ಷರದಲ್ಲಿ) ಕ್ಲಿಷ್ಟ ಪದಗಳ ಅರ್ಥ ಸಹಿತವಾದ ಅಕ್ಷರಾನುಕ್ರಮಣಿಕೆ - ಹೀಗೆ ಈ ಮೂರು ಉಪನಿಷತ್ತುಗಳನ್ನು ಒಂದೊಂದಾಗಿ ಬರೆದಿಟ್ಟೆನು.

## ಮಹಾಭಾರತ :

ಚೆನ್ನಪಟ್ಟಣದ ಎ.ವಿ.ಸ್ಕೂಲಿನಲ್ಲಿಯೇ ಮೊದಲು ನಾನು ಹರಿಜನ ಹುಡುಗರನ್ನು ಕಂಡದ್ದು. ಆಗತಾನೆ ಒಂದನೆಯ ತರಗತಿಗೆ ಕೆಲವರು ಹುಡುಗರು ಸೇರಿದ್ದರು; ಆ ಹುಡುಗರಿಗೆ ಕೆಲವು ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿದ್ದರು. ನಾನು ತಂದೆತಾಯಿಗಳನ್ನು ಕರೆಯಿಸಿ ಅವರ ರುಜು ತೆಗೆದುಕೊಂಡು ಹಣಸಂದಾಯ ಮಾಡಬೇಕಿತ್ತು. ಕರ್ಮಾಚರಣೆಯಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದ ನನಗೆ ಇದೊಂದು ಏನೋ ಅವಘಡವಾಗಿ ತೋರಿತು. ಬೆಂಗಳೂರಿಗೆ ಹೋಗಿಬಂದು ಹೇಗಾದರೂ ಮಾಡಿ ಮತ್ತೆ ಬೆಂಗಳೂರಿಗೆ ವರ್ಗಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದೆ ; ಆದರೆ ಕೂಡಲೆ ಆಗಲಿಲ್ಲ. ದೇವರ ದಯೆಯಿಂದ ಸ್ಕೂಲು ಜವಾನನು ಒಬ್ಬ ಮುಸಲ್ಮಾನನು; ನನ್ನ ಇಂಗಿತವನ್ನರಿತುಕೊಂಡು ಅವನು ಸ್ಕೂಲಿನ ಹೊರಗೆ ಬಯಲಿನಲ್ಲಿ ಕುರ್ಚಿ ಮೇಜು ಹಾಕಿ ನನ್ನನ್ನು ಕೂರಿಸಿ ಒಬ್ಬೊಬ್ಬರನ್ನಾಗಿ ಹುಡುಗರ ತಂದೆ ತಾಯಿಗಳ ಹೆಸರುಗಳನ್ನು ಕೂಗಿ ಅವರಿಂದ ರುಜು ಅಥವಾ ಬಹಳ ಸಂದರ್ಭಗಳಲ್ಲಿ ಎಡಹೆಬ್ಬೆಟ್ಟಿನ ಗುರುತುಗಳನ್ನು ಹಾಕಿಸಿ ಹಣಸಂದಾಯ ಮಾಡುತ್ತಿದ್ದನು. ಯಾರನ್ನಾದರೂ ಕರೆಯಿಸಿ ಹೆಬ್ಬೆಟ್ಟಿನ ಗುರುತುಗಳಿಗೆ ಸಾಕ್ಷಿ ಬರೆಯಿಸುತ್ತಿದ್ದನು. ಇದರಂತೆ ಅವನು ನನಗೆ ಸ್ಕೂಲಿಗೂ ಮನೆಗೂ ಬೇಕಾಗಿರುವಷ್ಟೇ ಸೌಕರ್ಯಗಳಿಗೆ ಹೊಸದುರ್ಗದ ಜವಾನ ವೀರನಂತೆ ಸಹಾಯಕನಾಗಿದ್ದದ್ದರಿಂದ ನನಗೆ ಯಾವ ತೊಂದರೆಯೂ ಇಲ್ಲದೆ ಕೆಲಸವು ಸಾಗಿತು. ಅದೃಷ್ಟಕ್ಕೆ ಸಹಾಯೋಪಾಧ್ಯಾಯರ ಸಂಖ್ಯೆಯೂ ಹೆಚ್ಚಾಗಿದ್ದದ್ದರಿಂದ ಸ್ಕೂಲು ಕೆಲಸಕ್ಕೆ

ಯಾವ ಅಡ್ಡಿಯೂ ಇರಲಿಲ್ಲ. ಪ್ರತಿದಿವಸವೂ ಸ್ಕೂಲು ಮೈಲಿಗೆಯ ಪರಿಹಾರಕ್ಕೆಂದು ಸ್ನಾನ, ಯಜ್ಞೋಪವೀತ ಧಾರಣೆ ಹೀಗೆ ಮಾಡಿ ಫಲಾಹಾರವಾದ ಮೇಲೆ ಮಹಾಭಾರತವನ್ನು ಅನುಕ್ರಮದಿಂದ ಓದುವುದಕ್ಕೆ ಪ್ರಾರಂಭಿಸಿದೆನು. ಮಹಾಭಾರತದ ಶ್ಲೋಕಗಳನ್ನು ಆರಿಸಿ ಒಂದು ಪುಸ್ತಕದಲ್ಲಿ ಬರೆಯುತ್ತಿದ್ದೆನು. ಇದು ಮುಂದೆ ನನಗೆ ಬಹಳ ಸಹಾಯವಾಯಿತು.

## ರಾಸಬಣಜಿಗರು :

ಆವೂರಿನಲ್ಲಿ ರಾಸಬಣಜಿಗರ ಜಾತಿಯವರು ಎಂಬ ಕೆಲವರು ಅಬ್ರಾಹ್ಮಣರನ್ನು ಯಾರೋ ಅಯ್ಯಂಗಾರ್ಯರು ಶುಚಿಯಾದ ಆಚಾರ ಗಳಿಗೆ ತಿರುಗಿಸಿದ್ದರು. ಅವರಲ್ಲಿ ಕೆಲವರಿಗೆ ವೈದಿಕಕರ್ಮಗಳನ್ನು ಅವರು ಅಥವಾ ಅವರ ಸ್ನೇಹಿತರು ಮಾಡಿಸುತ್ತಾರೆಂದು ತಿಳಿಯಬಂತು. ಅದು ಹೇಗಾದರೂ ಇರಲಿ. ಆ ಜನರು ಬೆಳಗ್ಗೆ ಎದ್ದು ದೂರವಾಗಿದ್ದ ಕೊಳಕ್ಕೆ ಹೋಗಿ ಸ್ನಾನವನ್ನು ಮಾಡಿ ಮುಕುಂದಮಾಲಾ ಸ್ತೋತ್ರವೇ ಮುಂತಾದವುಗಳನ್ನು ಹೇಳಿಕೊಂಡು ಬರುವದನ್ನು ನೋಡಿದರೆ ಮನಸ್ಸಿಗೆ ಬಹಳ ಹರ್ಷವಾಗುತ್ತಿತ್ತು. ಆವೂರಿನಲ್ಲಿದ್ದ ಒಬ್ಬ ವೈದಿಕ ಬ್ರಾಹ್ಮಣರು 'ಕಾಲಕೆಟ್ಟು ಹೋಯಿತು ಸ್ವಾಮಿ! ಅಬ್ರಾಹ್ಮಣರೆಲ್ಲ ಹೀಗೆ ಸ್ನಾನ ಸ್ತೋತ್ರಪಾಠಾದಿಗಳನ್ನು ಮಾಡುತ್ತಿದ್ದಾರೆ' ಎಂದು ಪರಿತಪಿಸಿ ನನ್ನೊಡನೆ ಹೇಳಿದರು, 'ಇವರಿಂದೇನೂ ಕಾಲಕೆಟ್ಟಿಲ್ಲ ; ಬ್ರಾಹ್ಮಣರು ತಮ್ಮ ಶುದ್ಧಾಚಾರಗಳನ್ನು ಬಿಟ್ಟಿರುವುದು ಮಾತ್ರ ಕಾಲಕೆಡುವುದಕ್ಕೆ ಕಾರಣವಾಗಿದೆ. ಹಿಂದೂಗಳೆಲ್ಲರೂ ಶುದ್ಧಾಚಾರರತರಾದರೆ, ಎಲ್ಲರೂ ದೈವಭಕ್ತಿಯನ್ನು ಸಂಪಾದಿಸಿಕೊಂಡರೆ ನಮ್ಮ ದೇಶವು ಉದ್ಧಾರವಾಗುವದು' ಎಂದು ಹೇಳಿದೆನು. ಅವರಿಗೇನೂ ತೃಪ್ತಿಯಾಗಲಿಲ್ಲ.

## ಸೂರ್ಯನಾರಾಯಣರಾವ್ :

ನಾನು ಇದ್ದ ಮನೆಯ ಪಕ್ಕದಲ್ಲಿಯೇ ನಮ್ಮ ಅ॥ ಮಾಸ್ಟರಾಗಿದ್ದ ಸೂರ್ಯನಾರಾಯಣರಾವ್ ಎಂಬ ಒಬ್ಬ ಥಿಯೋಸೊಫಿಸ್ಟು ಇದ್ದರು. ಅವರು ಯಾವಾಗಲೂ ಸತ್ಕಾಲಕ್ಷೇಪವನ್ನು ಮಾಡುತ್ತಾ ಕಾಲಹಾಕುತ್ತಿದ್ದರು. ಅವರ ಸಹವಾಸದಿಂದ ನನಗೆ ಸದ್ವಿಚಾರಕ್ಕೆ ಅವಕಾಶವಿತ್ತು. ಅವರು ತಮ್ಮ ಥಿಯೋಸೊಫಿಕಲ್ ಸೊಸೈಟಿಯಲ್ಲಿ ನನ್ನಿಂದ ಒಂದೆರಡು ಉಪನ್ಯಾಸವನ್ನು ಮಾಡಿಸಿದ್ದರು. ಜೇಮ್ಸ್ ಆಲೆನ್ ಎಂಬಾತನು ಬರೆದ ಒಂದು ಫ್ರೀಥಾಟ್ (ಸ್ವತಂತ್ರ ವಿಚಾರದ) ಪುಸ್ತಕವನ್ನು ನನಗೆ ಓದುವದಕ್ಕೆ ಕೊಟ್ಟಿದ್ದರು. ಅದರಲ್ಲಿ ನನಗೆ ಸಿಕ್ಕಿದ ಕೆಲವು ಸೂಚನೆಗಳನ್ನು ಉಪಯೋಗಿಸಿಕೊಂಡು ನಾನು ಉಪನಿಷದ್ವಚನಗಳ ಆಧಾರದಿಂದ 'ಸರ್ವೇಷ್ಟ ಸಿದ್ಧಿ' ಎಂಬ ಗ್ರಂಥವೊಂದನ್ನು ಬರೆದೆನು.

## ಬೆಂಗಳೂರಿಗೆ ವರ್ಗ :

ಹೀಗೆ ಚೆನ್ನಪಟ್ಟಣದಲ್ಲಿ ಒಂದು, ಒಂದುವರೆ ವರ್ಷಕಳೆದದ್ದಾಯಿತು. ನನಗೆ ಅಲ್ಲಿ ಆಚಾರವಂತರಾದ ಬ್ರಾಹ್ಮಣರ ಸಹವಾಸವಿರಲಿಲ್ಲ; ವೇದಾಂತವಿಚಾರಕ್ಕೆ ತಕ್ಕ ಸ್ನೇಹಿತರು ಇರಲಿಲ್ಲ, ಆದ್ದರಿಂದ ಬೆಂಗಳೂರಿಗೆ ಹೇಗಾದರೂ ಮಾಡಿ ವರ್ಗಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದೆನು. ಒಮ್ಮೆ ನಂಜಪ್ಪನವರೂ ಅಲ್ಲಿಗೆ ಬಂದಿದ್ದರು. ಆಗ್ಗೆ ನಾನು ಶ್ರಾದ್ಧಕ್ಕೆ ಬೆಂಗಳೂರಿನಿಂದ ಬ್ರಾಹ್ಮಣರನ್ನು ಕರೆಸಿಕೊಳ್ಳಬೇಕಾಗಿತ್ತು. ಇಷ್ಟು ಹೊತ್ತಿಗೆ ಬೆಂಗಳೂರ ಸಂಸ್ಕೃತ ಕಾಲೇಜಿನಲ್ಲಿ ಒಂದು ಇಂಗ್ಲೀಷು ಟೀಚರ್ ಕೆಲಸ ಖಾಲಿ ಇದೆ. ಎಂಬ ಸುದ್ದಿಯು ನನಗೆ ಮುಟ್ಟಿತು. ಕೂಡಲೆ ಒಂದು ಅರ್ಜಿ ಹಾಕಿದೆನು. ಆಗ ಕಾಲೇಜ್ ಕಮಿಟಿಗೆ ಪ್ರೆಸಿಡೆಂಟರು ಬಾಲಸುಬ್ರಹ್ಮಣ್ಯ ಅಯ್ಯರ್, ಮೆಂಬರುಗಳಲ್ಲಿ ಇ|| ಜನರಲ್ ಆಗಿದ್ದ ಶ್ಯಾಮರಾಯರು, ಮತ್ತು ಬ್ರ||ಶ್ರೀ|| ವಿರೂಪಾಕ್ಷಶಾಸ್ತ್ರಿಗಳವರೂ ಇದ್ದರು. ಶ್ಯಾಮರಾಯರು ಅಧಿಕಾರದಲ್ಲಿದ್ದಾಗಲೆ ಆಗಿನ ಸರ್ಕಲ್ ಇನ್‌ಸ್ಪೆಕ್ಟರು ಕೃಷ್ಣಮೂರ್ತಿಗಳ ಮೂಲಕ 'ಸಂಸ್ಕೃತ ಪಾಠಶಾಲೆಗೆ ಬರುತ್ತೀರಾ ? ಬಂದರೆ ಬೆಂಗಳೂರಿಂದ ಮತ್ತೆ ಮತ್ತೆ ಕದಲದಂತೆ ಇರುವದಕ್ಕೆ ನಿಮಗೆ ಅನುಕೂಲವಾಗುತ್ತದೆ' ಎಂದು ಹೇಳಿ ಕಳುಹಿಸಿದ್ದರು. ಆದರೆ ಆಗ್ಗೆ ಅವರು ಸೂಚಿಸಿದ್ದ ಕೆಲಸವು ಗ್ರೇಡಿನದಾದ್ದರಿಂದ 50 ರೂಗಳು ದೊರೆಯುವದಕ್ಕೆ ದೀರ್ಘಕಾಲವಾದೀತೆಂಬುದರ ಮೇಲೆ ನಾನು ಅದನ್ನು ಅಂಗೀಕಾರ ಮಾಡಿರಲಿಲ್ಲ. ಈಗ ನಾನಾಗಿಯೇ ಪ್ರಾರ್ಥನೆ ಮಾಡಿದ್ದರಿಂದ ಅವರು 'ಇವರಿಗೆ ಸಂಸ್ಕೃತ ಎಷ್ಟರ ಮಟ್ಟಿಗೆ ಬರುತ್ತದೆಯೋ ಕಾಣೆ ಇಂಗ್ಲೀಷೇನೋ ಬರುತ್ತದೆ' ಎಂದು ಶಿಫಾರಸು ಮಾಡಿದ್ದರಂತೆ. ಶಾಸ್ತ್ರಿಗಳವರು ಸಾಯಂಕಾಲದ ಸಂಧ್ಯಾವಂದನೆಯ ಹೊತ್ತಿಗೇ ಆಗುತ್ತಿದ್ದ ಆ ಮೀಟಿಂಗಿಗೆ ಎಂದೂ ಬಾರದೆಯೇ ಇದ್ದವರು, ನನ್ನ ಪುಣ್ಯಕ್ಕೆ ಆದಿನ ಸ್ವಲ್ಪ ಮುಂಚಿತವಾಗಿ ಮೀಟಿಂಗು ಸೇರಿದ್ದರಿಂದ ಉಪಸ್ಥಿತರಾಗಿದ್ದರು. 'ಸಂಸ್ಕೃತ ವಿಷಯ ತಾವೇನೂ ಯೋಚಿಸಬೇಡಿ, ಇಂಗ್ಲೀಷಿನ ವಿಷಯಯೋಚಿಸಿನೋಡಿ' ಎಂದು ನನ್ನನ್ನು ಸಂಸ್ಕೃತವಿಷಯಕ್ಕೆ ಶಿಫಾರಸು ಮಾಡಿದರಂತೆ. ಆ ಸ್ಥಾನಕ್ಕೆ ಇನ್ನು ಕೆಲವರು ಅರ್ಜಿ ಹಾಕಿಕೊಂಡಿದ್ದರೂ ಇಂಗ್ಲೀಷು ಮತ್ತು ಸಂಸ್ಕೃತ - ಎರಡನ್ನೂ ತಿಳಿದವರೆಂಬ ಕಾರಣದಿಂದ ಕಮಿಟಿಯವರು ನನಗೇ ಅದನ್ನು ಕೊಟ್ಟರು. ಆದ್ದರಿಂದ ನನಗೆ ಚನ್ನಪಟ್ಟಣದಿಂದ ಬಿಡುಗಡೆಯಾಯಿತು. ಸಂಸ್ಕೃತಪಂಡಿತರ ಸಹವಾಸವೂ ದೊರಕಿತು.

# 34. ಬೆಂಗಳೂರು ಸಂಸ್ಕೃತ ಕಾಲೇಜ್ (1923-1927)

## ಸ್ವಂತ ಮನೆಯಲ್ಲಿ:

ಇಷ್ಟು ಹೊತ್ತಿಗೆ ಬಿಲ್ಡಿಂಗ್ ಸೊಸೈಟಿಯಲ್ಲಿ ನನಗೆ ಸಾಲವು ಮಂಜೂರಾಗಿತ್ತು. ನನಗೆ ಮನೆಯನ್ನು ಖರೀದಿಗೆ ಕೊಟ್ಟವರು ಇನ್ನು ಕೆಲಕಾಲ ನೌಕರಿಯಲ್ಲಿ ಇರಬೇಕಾಗಿ ಬಂದದ್ದರಿಂದ ಸ್ವಂತಮನೆಯನ್ನು ಬಿಟ್ಟು ಬಾಡಿಗೆ ಮನೆಗೆ ಹೋಗುವದಕ್ಕೆ ಇಷ್ಟಪಡುತ್ತಿರಲಿಲ್ಲ; ಆದ್ದರಿಂದ ಅವರೂ ಈವರೆಗೆ ಹಣಕ್ಕೆ ತಗಾದೆ ಮಾಡಿರಲಿಲ್ಲ. ಇದರಿಂದ ನನಗೆ ರೊಟ್ಟಿ ಜಾರಿ ತುಪ್ಪಕ್ಕೆಬಿದ್ದಂತೆ ಎಲ್ಲವೂ ನಿರಾತಂಕವಾಗಿ ನೆರವೇರಿತು. ಈಗ ಮನೆಯವರೆಲ್ಲರೂ ಸಂತೋಷದಿಂದ ಹೂ ಹಣ್ಣುಗಳುಳ್ಳ ಹಿತ್ತಲು, ಅಂಗಳ, ನಮಗೆ ಬೇಕಾಗಿದ್ದಷ್ಟು ಕೊಠಡಿಗಳು - ಎಲ್ಲಾ ಅನುಕೂಲವೂ ಇದ್ದ ಸ್ವಂತಮನೆಯನ್ನು ಪ್ರವೇಶಿಸಿದರು.

## ಕಾಲೇಜಿನಲ್ಲಿ:

ನನಗೆ ಇಂಗ್ಲೀಷು ಜೊತೆಗೆ ಕಿರಾತಾರ್ಜುನೀಯ, ದಶಕುಮಾರಚರಿತ್ರೆ (ನಾನು ಅದೇ ಕಾಲೇಜಿನಲ್ಲಿ ಓದಿದ್ದ ಪುಸ್ತಕಗಳು) ಮುಂತಾದ ಕೆಲವು ಸಂಸ್ಕೃತ ಭಾಗಗಳನ್ನು ಕೊಟ್ಟಿದ್ದರು. ನಾನು ಉತ್ಸಾಹದಿಂದ ಪಾಠವನ್ನು ಹೇಳುವದಕ್ಕೆ ಪ್ರಾರಂಭಿಸಿದೆ. ಇಂಗ್ಲೀಷು ಸ್ಕೂಲುಗಳ ಪದ್ಧತಿಯಲ್ಲಿ ಕಪ್ಪು ಹಲಗೆಯನ್ನು ಉಪಯೋಗಿಸುವದು, ಹುಡುಗರಿಗೆ ಟಿಪ್ಪಣಿ ಬರೆಸುವದು, ಮನೆಯಲ್ಲಿ ಮಾಡಿಕೊಂಡು ಬರುವದಕ್ಕೆ ಅಭ್ಯಾಸಗಳನ್ನು ಕೊಡುವದು - ಇವನ್ನೆಲ್ಲ ಅನುಸರಿಸಿದ್ದರಿಂದ ಹುಡುಗರಿಗೆ ಬಹಳ ಉತ್ಸಾಹವಾಯಿತು. ಕೆಲವು ಪಂಡಿತರುಗಳು ನನ್ನ ಪಾಠಕ್ರಮವನ್ನು ನೋಡಿಕೊಂಡು ಹೋದರು. ಈಗ ಬ್ರ॥ಶ್ರೀ॥ ದೇಶಿಕಾಚಾರ್ಯರು (ಸಾಹಿತ್ಯ), ತಿರುನಾರಾಯಣ ಅಯ್ಯಂಗಾರ್ಯರು (ತರ್ಕ), ಕೃಷ್ಣಾಚಾರ್ಯರು (ವ್ಯಾಕರಣ), ಯಜ್ಞವಿಠಲಾ-ಚಾರ್ಯರು (ತರ್ಕ) ಮೊದಲಾದ ಪಂಡಿತರುಗಳ ಪರಿಚಯವೂ ಆಯಿತು.

ಆದರೂ ನನಗೆ ಸಾಕಾದಷ್ಟು ಕೆಲಸವಿಲ್ಲದ್ದರಿಂದ ಬೇಕಾದಷ್ಟು ವಿರಾಮವು ದೊರಕಿತ್ತು. ಆದ್ದರಿಂದ ಲೈಬ್ರರಿಯಿಂದ ಸಂಸ್ಕೃತ ಪುಸ್ತಕಗಳನ್ನು ಎರವಲಾಗಿ ತಂದು ನನಗೆ ಬೇಕಾದ ವಿಷಯಗಳನ್ನು ಸಂಗ್ರಹಿಸುವದಕ್ಕೆ ಅನುಕೂಲವಾಯಿತು. ಕೃ.ಸ್ವಾ.ಅಯ್ಯರು ನನ್ನ ಪುನರಾಗಮನ, ಸಂಸ್ಕೃತಾಭ್ಯಾಸಕ್ಕೆ ಉತ್ತೇಜಕವಾದ ಸ್ಥಾನದಪ್ರಾಪ್ತಿ, ಸ್ವಂತಮನೆಯವಾಸ ಇವೆಲ್ಲವನ್ನು ಕಂಡು ಬಹಳ ಹೃಷ್ಟರಾದರು.

ನನಗೂ ಅವರ ನಿತ್ಯದರ್ಶನ ಪಡೆಯುವ ಯೋಗವು ಸಿಕ್ಕಿತೆಂಬ ಸಂತೋಷ ವುಂಟಾಯಿತು.

## ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ :

ನಾನು ಕಾಲೇಜಿಗೆ ಬಂದದ್ದು ಜನವರಿಯಲ್ಲಿ. 1923ನೆಯ ಮಾರ್ಚ ತಿಂಗಳಲ್ಲಿ ರುಧಿರೋದ್ಗಾರಿ ಸಂವತ್ಸರದ ಚೈತ್ರದಲ್ಲಿ (ಬಹಳ ಮಟ್ಟಿಗೆ ಆ ತಿಂಗಳಿನ ರಾಮನವಮಿಯ ದಿನ ಹೊರಕ್ಕೆ ಹಿಡಿದಿರಬೇಕು. ಇದು ಮುಂದೆ ಕಾರ್ಯಾಲಯದಲ್ಲಿ ಆಗುವ ಶ್ರೀರಾಮ ಪ್ರತಿಷ್ಠೆಗೆ ಸೂಚಕವಾಗಿತ್ತೆಂದು ಈಗ ಹೇಳಬೇಕಾಗಿದೆ.) ಬಂದು ಮೂರುತಿಂಗಳಾಗುವದರೊಳಗೆ ಪತ್ರಿಕೆಯನ್ನು ಹೊರಡಿಸುವದನ್ನು ನೋಡಿದರೆ ಆಗ ನನ್ನ ಮನಸಿನಲ್ಲಿದ್ದ ಉತ್ಸಾಹವು ಹೇಗಿರಬೇಕೆಂಬುದನ್ನು ಕಲ್ಪಿಸಬಹುದು. ಪತ್ರಿಕೆಯನ್ನು ಹೊರಡಿಸಿದ ಕೂಡಲೆ ಪರಸ್ಥಳದಲ್ಲಿ ಕೆಲವರಿಗೆ ಚಂದಾದಾರರನ್ನು ಜೊತೆಗೂಳಿಸಿಕೊಟ್ಟು ವಿದ್ಯಾಪ್ರಸಾರಕ್ಕೆ ಸಹಾಯ ಮಾಡಬೇಕೆಂದು ಬೇಡಿಕೊಂಡೆನು. ಅಲ್ಲಲ್ಲಿ ಕೆಲವರು ಸಹಾಯ ಮಾಡಿದರು. ಅವರಲ್ಲಿ ಹೊಳೆನರಸೀಪುರದ ಪ್ಲೀಡರ್ ಪಿ.ಎನ್. ನರಸಿಂಹಯ್ಯ ನವರು ಒಬ್ಬರು. ಅವರ ವಿಷಯವನ್ನು ಮುಂದೆ ಪ್ರಸ್ತಾಪಿಸುವೆನು. ಈ ಪತ್ರಿಕೆಯನ್ನು ಶೃಂಗೇರಿಯ ಜಗದ್ಗುರುಗಳ ಆಶೀರ್ವಾದವನ್ನು ಪಡೆದು ಪ್ರಕಟಿಸಬೇಕೆಂಬ ಕುತೂಹಲವು ನನಗೆ ಬಹಳವಿತ್ತು. ಆದ್ದರಿಂದ ವೈಶಾಖಮಾಸದಲ್ಲಿ ಕಾಲೇಜಿಗೆ ರಜವಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಚಿದಂಬರಯ್ಯನವರನ್ನು ಜೊತೆಯಲ್ಲಿ ಕರೆದುಕೊಂಡು ತರೀಕೆರೆಯ ಮಾರ್ಗವಾಗಿ ಶೃಂಗೇರಿಗೆ ಹೋದೆನು. ತರೀಕೆರೆಯವರು-ನಂಜಪ್ಪನವರು, ಹೋ.ವೆಂಕಟರಾಮಯ್ಯನವರು ಇವರುಗಳ ಪ್ರೋತ್ಸಾಹದಿಂದ 'ಆತ್ಮೋದ್ಧಾರಸಂಘ'ವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದರು. ನಂಜಪ್ಪನವರು, ನಂಜಪ್ಪಭಾಗವತರೆಂಬ ಹೆಸರಿನಿಂದ ಅಧ್ಯಾತ್ಮಪ್ರಕಾಶಕ್ಕೆ ಲೇಖನವನ್ನು ಬರೆಯುವದಕ್ಕೆ ಮೊದಲುಮಾಡಿದ್ದು ಇನ್ನು ಕೆಲವು ವರ್ಷಗಳಾದಮೇಲೆ ಆದರೂ ಇಷ್ಟುಹೊತ್ತಿಗೆ ಅವರು ಆಗಲೇ ನಿಜವಾಗಿಯೂ ಭಾಗವತರಾಗಿಯೇ ಇದ್ದರು. ತರೀಕೆರೆಯಲ್ಲಿ ಪ್ರತಿ ಏಕಾದಶಿಯ ದಿನ ಹರಿಕಥೆ ಮಾಡುವದು, ಸಾಯಂಕಾಲ ಅಧ್ಯಾತ್ಮರಾಮಾಯಣ ಪುರಾಣ ಹೇಳುವದು ಹೀಗೆಲ್ಲ ಮಾಡುತ್ತಿದ್ದರು. ವರ್ಷಕ್ಕೊಮ್ಮೆ ಶ್ರೀಮದ್ರಾಮಾಯಣ, ಅಧ್ಯಾತ್ಮರಾಮಾಯಣ - ಇವುಗಳನ್ನು ಪಾರಾಯಣ ಮಾಡಿ ಒಂದು ದಿನ ಅಖಂಡ ಭಜನೆಗೆ ಏರ್ಪಡಿಸಿದ್ದರು. ಅಲ್ಲಿಗೆ ಚಿದಂಬರಯ್ಯನವರು, ರಾಮದಾಸರು, ನಾರಣಪ್ಪನವರು, ದೇವರಾಯ ಪುರಾಣಿಕರು, ಹೆಜ್ಜಾಜಿ ಸೀತಾರಾಮಶಾಸ್ತ್ರಿಗಳು, ವಿಠ್ಠಲಶಾಸ್ತ್ರಿಗಳು-ಇವರುಗಳು ಬೇರೆ

ಬೇರೆ ಕಾಲಗಳಲ್ಲಿ ಬಂದು ಸಂಘಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದರು. ಈಗ ನಾನು ಆ ಸಂಘದಲ್ಲಿ 'ಆತ್ಮೋದ್ಧಾರ'ವೆಂಬ ವಿಷಯಕ್ಕೆ ಉಪನ್ಯಾಸವನ್ನು ಕೊಟ್ಟೆನು. ಚಿದಂಬರಯ್ಯನವರೂ ಒಂದು ಉಪನ್ಯಾಸವನ್ನು ಕೊಟ್ಟಿದ್ದರು.

ಮುಂದೆ ನಾವು ನಂಜಪ್ಪಭಾಗವತರೊಡನೆ ಶೃಂಗೇರಿಗೆ ಹೋದೆವು. ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರು ಸ್ವಸ್ಥವಾಗಿರಲಿಲ್ಲ, ಆದ್ದರಿಂದ ಪತ್ರಿಕೆಗೆ ಮಠದಿಂದ ಯಾವ ಪ್ರೋತ್ಸಾಹವೂ ಸಿಕ್ಕಲಿಲ್ಲ, ಶ್ರೀ ಶಂಕರಜಯಂತಿಯ ಉತ್ಸವವು ಅಷ್ಟೇನೂ ವಿಜೃಂಭಣೆಯಿಂದ ನಡೆಯಲಿಲ್ಲ. ನಂಜಪ್ಪಭಾಗವತರು ಆ ದಿನವೇ ನನ್ನಿಂದ ಭಾಷ್ಯಶಾಂತಿ ಮಾಡಿಸಿಕೊಂಡರು. ಶೇಷಶಾಸ್ತ್ರಿಗಳವರು ನಮಗೆ ಹೆಚ್ಚಿನ ಆದರಾತಿಥ್ಯಗಳನ್ನು ಮಾಡಿದರು ; ಅವರ ಪ್ರೋತ್ಸಾಹದಿಂದ 'ಶ್ರೀ ಶಂಕರಭಗವತ್ಪಾದರವರ ಉಪದೇಶದ ಬೆಲೆ ' ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದೆನು. ಪತ್ರಿಕೆಗೆ ಒಂದೆರಡು ಚಂದಾದಾರರನ್ನು ಮಾಡಿಕೊಂಡು ಹಿಂತಿರುಗಿದೆವು. ಬರುವಾಗಲೋ ಅಥವಾ ಮೊದಲೇ ಹೋಗುವಾಗಲೋ ಬಾಣಾವರದಲ್ಲಿ ವೈದಿಕಕರ್ಮವೆಂಬ ವಿಷಯವನ್ನು ಕುರಿತೂ, ಅರಸೀಕೆರೆಯಲ್ಲಿ ಸಂಸ್ಕೃತವಿದ್ಯಾಭ್ಯಾಸವೆಂಬ ವಿಷಯವನ್ನು ಕುರಿತೂ ಉಪನ್ಯಾಸಮಾಡಿದೆನೆಂದು ಪತ್ರಿಕೆಯ ಜ್ಯೇಷ್ಠ ಸಂಚಿಕೆಯಿಂದ ತಿಳಿದುಬರುತ್ತದೆ. ಅಧ್ಯಾತ್ಮಪ್ರಕಾಶ ಪತ್ರಿಕೆಗೆ ಚಿದಂಬರಯ್ಯನವರು, ಅವರ ಮಗ ಶ್ರೀನಿವಾಸಮೂರ್ತಿಗಳು, ಕೃಷ್ಣಸ್ವಾಮಿ ಅಯ್ಯರ್, ನಂಜಪ್ಪನವರು, ವಿಠ್ಠಲ ಶಾಸ್ತ್ರಿಗಳು-ಇವರೆಲ್ಲ ಲೇಖನಗಳನ್ನು ಬರೆದಿದ್ದರು. ವೈತಥ್ಯಪ್ರಕರಣ, ಅದ್ವೈತಪ್ರಕರಣ ಇವುಗಳೆರಡನ್ನು ಸ್ವತಂತ್ರಪುಟಗಳನ್ನಾಗಿ ಕೊಟ್ಟು ಪ್ರಕಟಿಸಲಾಯಿತು; ಅದೇ ರೀತಿಯಿಂದ ವೇದಾಂತ ಕಥಾವಳಿ, ಸರ್ವೇಷ್ಟಸಿದ್ಧಿ - ಇವೆರಡೂ ಬೆಳಕನ್ನು ಕಂಡವು. ಅಧ್ಯಾತ್ಮಗೀತಾವಳಿಯ ಕೆಲವು ಪದಗಳು ಪ್ರಕಟವಾದವು. ಪತ್ರಿಕೆಯಲ್ಲಿ ಸ್ವತಂತ್ರಪುಟಗಳಾಗಿ ಪ್ರಕಟಿಸುವುದಕ್ಕಾಗಿ ಪ್ರಾರಂಭಿಸಿದ ಸಮುದ್ರಮಥನವನ್ನೂ ಬೇರೆಯಾಗಿಯೇ ಪ್ರಕಟಿಸಿ ಹೊರಕ್ಕೆ ತರುವದಕ್ಕೆ 1928ರವರೆಗೆ ಕಾಯಬೇಕಾಯಿತು. ಅಲಾತಶಾಂತಿ ಪ್ರಕರಣವು ಪತ್ರಿಕೆಯಲ್ಲಿ ಮತ್ತೊಮ್ಮೆ ಅಚ್ಚಾಗಬೇಕಾಯಿತು. ಎಚ್. ರಂಗರಾಯರು, ಪಾಟೀಲ್ ಕಂಪೆನಿ ಲಿಮಿಟೆಡ್, ದಾವಣಗೆರೆ-ಇವರು ನನ್ನನ್ನು ಅರಸೀಕೆರೆಯಲ್ಲಿದ್ದು ಕಂಡು 100ರೂಗಳನ್ನು ಕೊಟ್ಟು ಅಧ್ಯಾತ್ಮಪ್ರಕಾಶಕ್ಕೆ ಆಶ್ರಯದಾತರಾದರು. ಇಷ್ಟಾಗಿ ಪತ್ರಿಕೆಯು ಒಂದುವರ್ಷ ನಿಂತುಹೋಯಿತು. ಇದಕ್ಕೇನು ಕಾರಣವೇನೆಂಬುದು ಈಗ ತಿಳಿಯುವಂತಿಲ್ಲ, ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಆಗಿನ ಚಂದಾರಿಜಿಸ್ಟರಾಗಲಿ, ಡೈರಿಯಾಗಲಿ ಇಲ್ಲವಾದ್ದರಿಂದ ಚಂದಾದಾರರ ಸಂಖ್ಯೆ ಕಡಿಮೆ ಯಾಗಿತ್ತೋ ಏನೋ ನಾನು ಹೇಳಲಾರದೆ ಇದ್ದೇನೆ.

ಮತ್ತೆ ಕ್ರೋಧನ ಸಂವತ್ಸರದ ಚೈತ್ರದಲ್ಲಿ ಪತ್ರಿಕೆಯು ತಲೆಯೆತ್ತಿಕೊಂಡಿತು. ಪತ್ರಿಕೆಗೆ ಎಂಟು ಪುಟಗಳನ್ನು ಹೆಚ್ಚಿಸಲಾಯಿತು. ಚಿದಂಬರಯ್ಯನವರು, ಡಿ. ಗೋಪಾಲಾಚಾರ್ಯರು, ಕೃಷ್ಣಸ್ವಾಮಿ ಅಯ್ಯರ್, ಕರ್ಪೂರ ಶ್ರೀನಿವಾಸ-ರಾಯರು, ಎಚ್.ಆರ್. ಸಿದ್ಧವೀರಪ್ಪನವರು, ಸಿ. ರಘುನಾಥಾಚಾರ್ಯರು, ಶ್ರೀನಿವಾಸಮೂರ್ತಿಗಳು - ಇವರುಗಳು ಲೇಖನಗಳನ್ನು ಬರೆದರು. ಆಷಾಢ ಸಂಚಿಕೆಯು ಹೊರಟು ಮತ್ತೆ ಪತ್ರಿಕೆ(1925 ಜೂನ್)ನಿಂತು ಹೋಯಿತು. ಆ ವರ್ಷ ನಮ್ಮ ಅಣ್ಣ ಶಿವರಾಮಯ್ಯನವರು ಯಾವದೋ ಕಾಯಿಲೆಯಿಂದ ನರಳುತ್ತಾ ಒಂದು ಆಸ್ಪತ್ರೆಗೆ ಸೇರಿ, ಅಲ್ಲಿಯೇ ದೇಹವನ್ನು ಬಿಟ್ಟರು. ಆ ಕಾರಣದಿಂದ ನಾನು ಪತ್ರಿಕೆಯ ಚಂದಾದಾರರ ಸಂಗ್ರಹಕ್ಕೆ ಪ್ರಯತ್ನಿಸುವದು ಆಗದೆಯೇ ಮನೆಯ ಖರ್ಚು ವೆಚ್ಚಗಳಿಗೆ ತಕ್ಕಷ್ಟು ಆದಾಯವಿಲ್ಲದೆಯೂ ಪತ್ರಿಕೆಯು ನಿಂತುಹೋಗಿರ-ಬೇಕು. ಚಂದಾದಾರರಿಗೆ ಉಳಿದ ತಿಂಗಳ ಹಣಕ್ಕೆ ತಕ್ಕಷ್ಟು ಪ್ರಕಟಿತ ಪುಸ್ತಕಗಳನ್ನು ಕಳುಹಿಸಿಕೊಟ್ಟು ಪತ್ರಿಕೆಯನ್ನು ಸದ್ಯಕ್ಕೆ ಹೊರಡಿಸುವದಿಲ್ಲ ಎಂದು ತಿಳಿಸಿದೆನು. ಮೂರನೆಯ ಸಂಪುಟವು ಹೊರಟಿದ್ದ ಪ್ರಜೋತ್ಪತ್ತಿ ಸಂವತ್ಸರದ ಶ್ರಾವಣದಲ್ಲಿ, 1931ನೆಯ ಸೆಪ್ಟಂಬರಿನಲ್ಲಿ! ಎರಡನೆಯ ಸಂಪುಟದ ಮೊದಲನೆಯ ಸಂಚಿಕೆಯಲ್ಲಿ 'ವಿಘ್ನೇರ್ಮುಹುರ್ಮುಹುರಪಿ ಪ್ರತಿಹನ್ಯಮಾನಾಃ ಪ್ರಾರಬ್ಧ- ಮುತ್ತಮಗುಣಾ ನ ಸಂತ್ಯಜನ್ತಿ' ಎಂಬ ಶ್ಲೋಕವನ್ನು ಉದಾಹರಿಸಲಾಗಿತ್ತು; ಸಂಪಾದಕರು ಎಷ್ಟು ಎಡರುಗಳು ಬಂದರೂ ಪ್ರಾರಂಭಿಸಿದ್ದನ್ನು ಬಿಡುವದಿಲ್ಲ ಎಂಬುದನ್ನು ತಿಳಿಯುವದಕ್ಕೆ ವಾಚಕರು ಆರು ವರ್ಷಗಳವರೆಗೆ ಕಾದು ನೋಡಬೇಕಾಯಿತು.

## ಪತ್ರಿಕೆಯ ಮೂರನೆಯ ಸಂಪುಟವು :

ಅಧ್ಯಾತ್ಮಪ್ರಕಾಶದ ಮೂರನೆಯ ಸಂಪುಟವು ಬರುವದರೊಳಗೆ ಹಲವು ಘಟನೆಗಳಾದವು. ಅವುಗಳನ್ನು ಒಂದೊಂದಾಗಿ ಇಲ್ಲಿ ಹೇಳಬೇಕಾಗಿದೆ.

**1. ಆವನಿ ಮಠಕ್ಕೆ :** ಮಠಗಳಿಗೆ ಬ್ರಹ್ಮಚಾರಿಗಳನ್ನು ಬಲಾತ್ಕಾರದಿಂದ ಸಂನ್ಯಾಸಿಗಳಾಗಿ ಒಯ್ಯುವದು, ಮಠಗಳಲ್ಲಿ ಅಧ್ಯಾತ್ಮವಿಚಾರದ ಪ್ರಸಕ್ತಿಯು ಕಡಿಮೆಯಾಗುತ್ತಿರುವುದು - ಇದು ಹೇಗೋ ಸಂಭಾಷಣೆಯಲ್ಲಿ ಪ್ರಸ್ತಾವಕ್ಕೆ ಬಂದು ಕೃ.ಸ್ವಾ.ಅಯ್ಯರು 'ಈಗ ಆವನಿ ಮಠಕ್ಕೆ ಒಬ್ಬ ಪೀಠಾಧಿಕಾರಿಗಳು ಬೇಕಾಗಿದ್ದಾರೆ; ನೀವು ಆಗಾಗ್ಗೆ ಸಂನ್ಯಾಸವನ್ನು ಸ್ವೀಕರಿಸುವ ವಿಚಾರ ನನ್ನಲ್ಲಿ ಮಾಡುತ್ತಿದ್ದದ್ದರಿಂದ ನಿಮ್ಮ ಹೆಸರು ನನ್ನ ಸ್ಮೃತಿಪಥಕ್ಕೆ ಬಂದಿತ್ತು. ಈಗ ಆ ವಿಚಾರವೇ ಪ್ರಸ್ತಾಪಿತವಾಗಿದೆ. ಈ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನು ? ನೀವು ಒಪ್ಪುವದಾದರೆ ಮುಂದಿನ

ಪ್ರಯತ್ನವನ್ನು ಮಾಡುತ್ತೇವೆ' ಎಂದು ಕೇಳಿದರು. 'ನಾನು ನನಗೇಕೆ ಮಠದ ಗೋಜು ?' ಎಂದದ್ದಕ್ಕೆ 'ಹಾಗಲ್ಲ, ನಾನು ನಿಮ್ಮ ಜೊತೆಯಲ್ಲಿ ಕೆಲಸಮಾಡುತ್ತೇನೆ. ಆ ಪೀಠಕ್ಕೆ ಕನ್ನಡ, ತಮಿಳು, ತೆಲಗು - ಮೂರು ಭಾಷೆಗಳನ್ನಾಡುವ ಶಿಷ್ಯರು ಇದಾರೆ. ಮಠಕ್ಕೆ ಹೇಗೆ ಇರಬೇಕೆಂಬ ಬಗ್ಗೆ ಅದನ್ನು ಒಂದು ಆದರ್ಶವಾಗಿ ಮಾಡಿಬಿಡೋಣ. ಇಂಗ್ಲೀಷು,ತಮಿಳು ಭಾಷೆಗಳಲ್ಲಿ ಲೇಖನಗಳನ್ನು, ಪುಸ್ತಕಗಳನ್ನು ನಾನು ಸಿದ್ಧಪಡಿಸಿಕೊಡುತ್ತೇನೆ. ನೀವು ಕನ್ನಡ, ಸಂಸ್ಕೃತಗಳಲ್ಲಿ ಬರೆಯಬಹುದು. ನೀವು ಸುಮ್ಮನಿದ್ದರೂ ಸಾಕು; ನಾವುಗಳೆಲ್ಲರೂ ಕೆಲಸಮಾಡುತ್ತೇವೆ' ಎಂದು ಮುಂತಾಗಿ ಹೇಳಿದರು. ಆ ದಿನ ಅಲ್ಲಿಗೆ ಆ ವಿಷಯದ ಮಾತು ನಿಂತಿತು. ಆದರೆ ನಾನು ಯಾವ ನಿಮಿತ್ತದಿಂದಲೋ ಅರಸೀಕೆರೆಗೆ ಹೋಗಿ ಬರುವದರೊಳಗೆ ಅಯ್ಯರು ವಿಷಯವನ್ನು ಬಲಪಡಿಸಿ ಸರಕಾರಕ್ಕೆ ಶಿಷ್ಯರಿಂದ ಅರ್ಜಿ ಹಾಕಿಸಿಬಿಟ್ಟಿದ್ದರು. ಡಾಕ್ಟರ್ ಸಿ.ರಾಮರಾಯರು, ವಿ.ಶಾಸ್ತ್ರಿಗಳು ಇವರುಗಳನ್ನು ನೆರವಿಗೆ ತೆಗೆದುಕೊಂಡರು. ಅದು ಬಲವಾಗಿ ಅನೇಕರು ಅದನ್ನು ಅನುಮೋದಿಸಿದ್ದರು. ಶಂಕರಮಠದ ಬ್ರಾ॥ ಶ್ರೀ॥ ವಿರೂಪಾಕ್ಷಶಾಸ್ತ್ರಿಗಳೂ, ವೈದ್ಯನಾಥಶಾಸ್ತ್ರಿಗಳೂ ಅರ್ಜಿಗೆ ರುಜು ಮಾಡಿದ್ದರಂತೆ. ಮಠದಲ್ಲಿದ್ದ ಸ್ವಾಮಿಗಳ ಜನಗಳಾದ ಒಬ್ಬ ಯೋಗೀಶ್ವರರು ಇದ್ದರು. ಅವರು ಈಚೆಗೆ ಸಂನ್ಯಾಸಿಗಳಾಗಿ ಓಂಕಾರ ಸ್ವಾಮಿಗಳು ಎಂಬ ಹೆಸರಿನಿಂದ ಮೈಸೂರಿನಲ್ಲಿರುತ್ತಾರೆ. 'ನನಗೆ ಸ್ವಾಮಿಗಳು ಸಂನ್ಯಾಸವನ್ನು ಕೊಟ್ಟೇಬಿಟ್ಟಿದ್ದಾರೆ; ನನಗೆ ಮಠವನ್ನು ಸ್ವಾಧೀನಕೊಡಿಸಬೇಕು' ಎಂದು ಅವರು ಸರಕಾರಕ್ಕೆ ಬರೆದುಕೊಂಡಿದ್ದಾರೆ. ಮುಂದೆ ಅದು ಕಮಿಟಿಯಲ್ಲಿ ಬಹಳ ಚರ್ಚೆಗೆ ಬಂದು ಅಸ್ಖಲಿತ ಬ್ರಹ್ಮಚಾರಿಯಾಗಿಯೇ ಪೀಠಕ್ಕೆ ಬರತಕ್ಕದ್ದು ಎಂದು ನಿರ್ಣಯವಾಯಿತು.

**2. ಮಕ್ಕಳ ವಿವಾಹ :** ಮಠಕ್ಕೆ ನಾನು ಹೋಗುವದು ಬಹುಮಟ್ಟಿಗೆ ಸಂಭಾವಿತವೆಂದು ತೋರುತ್ತಿದ್ದಾಗ ನಾನು ನರಸಪ್ಪನಿಗೂ, ಎರಡನೆಯ ಮಗಳಾದ ಗಿರಿಜೆಗೂ ಮದುವೆ ಮಾಡಿಬಿಡಬೇಕೆಂದು ನಿಶ್ಚಯಿಸಿದೆ. ನರಸಪ್ಪನಿಗೆ ತಮ್ಮ ಮಗಳನ್ನು ಕೊಡುವದಾಗಿ ಈ ಮೊದಲೇ ನಂಜಪ್ಪ ಭಾಗವತರು ಸೂಚಿಸಿದ್ದರು. ಒಬ್ಬ ಜೋಯಿಸರು ಜಾತಕಗಳು ಹೊಂದುತ್ತವೆ ಎಂದದ್ದರಿಂದ, ನಾನು ಆಗಲಿ ಎಂದೇ ಮಾಡಿಕೊಂಡಿದ್ದೆ. ಆದರೆ ಹೆಣ್ಣು ಮೂಲ ನಕ್ಷತ್ರದ್ದೆಂಬ ಶಂಕೆ ಬಂತು. ಅದು ಮಾವನಿಗಲ್ಲದ್ದೆಂದು ತಿಳಿಯಿತು. ನಾನು ಸಂನ್ಯಾಸವನ್ನು ತೆಗೆದುಕೊಳ್ಳುವದರಿಂದ ಆ ದೋಷವು ಏನೂ ಮಾಡಲಾರದು ಎಂದು ಸಮಾಧಾನವನ್ನು ಹೇಳಿದರೂ ನಮ್ಮ ಮನೆಯವರು ಯಾರೂ ಒಪ್ಪಲಿಲ್ಲ. ಆದ್ದರಿಂದ ಆ ಸೂಚನೆಯು ನಿಂತುಹೋಯಿತು. ಮುಂದೆ ನಮ್ಮೂರಿನ ನಾಡಿಗ ಶ್ಯಾಮಯ್ಯನ ಮಗಳ ಜಾತಕವು

ಬಂತು; ಅದಕ್ಕೂ ಹೊಂದಲಿಲ್ಲವಾಗಿ ಅದೂ ನಿಂತುಬಿಡಬೇಕಾಯಿತು. ನರಸಪ್ಪನಿಗೆ ಯಳ್ಳಂಬಳಸೆಯ ಹತ್ತಿರವಿದ್ದು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುವವರು ಯಾರಾದರೂ ಸಿಕ್ಕಿದರೆ ಆಗಬಹುದೆಂದು ನನ್ನ ಮನಸ್ಸಿನಲ್ಲಿತ್ತು. ಅದಕ್ಕೆ ಸರಿಯಾಗಿ ಬೆಂಗಳೂರಿನಲ್ಲಿ ಆಗ ಡಿ.ಪಿ.ಡಬ್ಲ್ಯು ಇಲಾಖೆಯಲ್ಲಿದ್ದು ರಿಟೈರಾಗಲಿದ್ದ ಸೀತಾರಾಮಯ್ಯನವರು ಲಕ್ಷ್ಮಕ್ಕನಿಗೆ ಮೈದುನರೂ ಆಗಿದ್ದು, ಎಲ್ಲಾ ವಿಧದಿಂದಲೂ ಹೊಂದುಗೆಯಾಗಿ ಕಂಡಿತು. ಜಾತಕಗಳ ಕೂಟವು ಜ್ಯೋತಿರ್ಮಠದ ಮತದಂತೆ ವಾದಗ್ರಸ್ತದಂತೆ ತಿಳಿದುಬಂದದ್ದರ ಮೇಲೆ ದೇವರಪೂಜೆಯನ್ನು ಮಾಡಿ ರಾಮಾಯಣ ಪ್ರಶ್ನೆಯನ್ನು ನೋಡಿ 'ಪ್ರದೀಯತಾಂ ದಾಶರಥಾಯ ಮೈಥಿಲೀ' ಎಂಬ ಶ್ಲೋಕವು ಬಂದದ್ದರಿಂದ ಸರ್ವಸಮ್ಮತವಾಗಿ ಒಪ್ಪಾಯಿತು. ಗಿರಿಜಮ್ಮನಿಗೆ ಮದುವೆಯಾದ ಬಳಿಕವೇ ನರಸಪ್ಪನ ಮದುವೆ ಮಾಡಬೇಕೆಂದು ಇಬ್ಬರೂ ಒಪ್ಪಿದೆವು. ವರಾನ್ವೇಷಣೆಯಲ್ಲಿ ಮೈಸೂರಿನಲ್ಲಿದ್ದ ಚಂದ್ರಶೇಖರಯ್ಯನೆಂಬ ಬಿ.ಎ.ತರಗತಿಯ ವಿದ್ಯಾರ್ಥಿಯ ಜಾತಕವು ಹೊಂದಿತು. ಆದ್ದರಿಂದ ಆ ವರನಿಗೆ ಕೊಟ್ಟು ಮದುವೆಯಾಯಿತು. ವಿವಾಹವು ಸರ್ವವಿಧದಿಂದಲೂ ತೃಪ್ತಿಕರವಾಗಿ ನಡೆಯಿತು. ಸಂಸ್ಕೃತ ಪಾಠಶಾಲೆಯ ಪಂಡಿತರೂ, ವೇದ ವಿದ್ವಾಂಸರೂ ಬಂದು ದಂಪತಿಗಳನ್ನು ಹರಸಿದ್ದರು. ಬ್ರ॥ ಶ್ರೀ॥ ವಿರೂಪಾಕ್ಷ ಶಾಸ್ತ್ರಿಗಳು, ವೈದ್ಯನಾಥ ಶಾಸ್ತ್ರಿಗಳು, ಕರ್ಪೂರ ಶ್ರೀನಿವಾಸರಾಯರು, ನಾಗೇಶ ಅಯ್ಯರು, ಕೃಷ್ಣಸ್ವಾಮಿ ಅಯ್ಯರ್ ಮುಂತಾದವರು ಬಂದು ಹರಸಿದರು. ವೈದ್ಯನಾಥಶಾಸ್ತ್ರಿಗಳು ಮುಂದೆ ನೀವು ಗುರುಪೀಠದಲ್ಲಿದ್ದು ನಮ್ಮಗಳಿಗೆಲ್ಲ ಮಾನ್ಯರಾಗಬೇಕಲ್ಲ ! ಎಂದು ಮುಂತಾಗಿ ಅಭಿನಂದನವನ್ನು ಮಾಡಿದರು. ಇದಾದಮೇಲೆ ನರಸಪ್ಪನಿಗೂ ಸೀತಾರಾಮಯ್ಯ-ನವರ ಮಗಳನ್ನು ತಂದು ಮದುವೆಯಾಯಿತು.

**3. ಬ್ರ॥ಶ್ರೀ॥ವಿರೂಪಾಕ್ಷಶಾಸ್ತ್ರಿಗಳು :** ಬ್ರ॥ಶ್ರೀ॥ವಿರೂಪಾಕ್ಷಶಾಸ್ತ್ರಿಗಳವರು ಬೆಂಗಳೂರಿನಲ್ಲಿ ಅನೇಕ ಲೌಕಿಕ, ವೈದಿಕರುಗಳಿಗೆ ಪಾಠಪ್ರವಚನವನ್ನು ಮಾಡಿ ಯಶಸ್ಸನ್ನುಗಳಿಸಿದ್ದರು. 1922 ರಲ್ಲಿಯೇ ಶ್ರೀಮನ್ಮಹಾರಾಜರು ಆಶ್ವಯುಜ ಶುಕ್ಲ 11ದಿನದ ತಮ್ಮ ವಿಶೇಷ ದರ್ಬಾರಿನಲ್ಲಿ ಅವರಿಗೆ 'ವಿದ್ಯಾನಿಧಿ' ಎಂಬ ಬಿರುದನ್ನು ದಿವ್ಯವಸ್ತ್ರಭೂಷಣಾದಿಗಳೊಡನೆ ಕೊಟ್ಟಿದ್ದರು. 1923ನೆಯ ಜೂನ್ ತಿಂಗಳಲ್ಲಿ ಎರಡನೆಯ ಜಾರ್ಜ್ ಚಕ್ರವರ್ತಿಗಳಿಂದ ಅವರಿಗೆ 'ಮಹಾಮಹೋಪಾಧ್ಯಾಯ' ಎಂಬ ಬಿರುದು ಬಂದಿತ್ತು. ಆವನಿ ಮಠಕ್ಕೆ ನನ್ನನ್ನು ಆರಿಸುವ ಸಂಭವವಿದೆಯೆಂದು ಕೇಳಿದಾಗ ಬಹಳ ಸಂತೋಷದಿಂದ ಅವರು ಅಭಿನಂದನ ಮಾಡಿದ್ದರು. ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ ಪಂಚಪಾದಿಕಾವಿವರಣವನ್ನು ನನಗೂ

ಸಂತೋಷದಿಂದ ಹೇಳಿದ್ದರು. ಅವರು 1926ರಲ್ಲಿ ಮೈಸೂರು ಶ್ರೀಮನ್ಮಹಾರಾಜ-ರವರ ಸಂಸ್ಕೃತ ಪಾಠಶಾಲೆಗೆ ಅದ್ವೈತವೇದಾಂತ ಪ್ರಧಾನೋಪಾಧ್ಯಾಯರಾಗಿ ದಯಮಾಡಿಸಿದರು. ಆ ಬಳಿಕ ಕೆಲವು ಕಾಲ ವಿದ್ವಾನ್ ವೈದ್ಯನಾಥಶಾಸ್ತ್ರಿಗಳೇ ಲೌಕಿಕರಿಗೆ ಪಾಠವನ್ನು ಹೇಳುತ್ತಿದ್ದರು. ಅಲ್ಲಿ ಮಾಂಡೂಕ್ಯೋಪನಿಷತ್ತಿನ ಪಾಠವು ನಡೆಯುತ್ತಿತ್ತು. ಆಗಾಗ್ಗೆ ನಾನು ಹೊರಕ್ಕೆ ತಂದಿದ್ದ ಆಗಮಪ್ರಕರಣದ ಅನುವಾದದ ವಿಷಯವಾಗಿ ಶಿಷ್ಯರಲ್ಲಿ ಚರ್ಚೆ ಮಾಡುತ್ತಿದ್ದರು.

**4. ಕೃಷ್ಣಸ್ವಾಮಿ ಅಯ್ಯರ್ :** ಕೃಷ್ಣಸ್ವಾಮಿ ಅಯ್ಯರವರು ತಮ್ಮ ಮನೆಯಲ್ಲಿ ಕೆಲವರು ಗೃಹಸ್ಥರನ್ನು ಸೇರಿಸಿಕೊಂಡು ನನ್ನ ಆಗಮ ಪ್ರಕರಣದ ಅನುವಾದವನ್ನೇ ಪಾಠಹೇಳುತ್ತಿದ್ದರು; ಆಗ ಅದರಲ್ಲಿ ನಾನು ಬರೆದಿದ್ದ ಅಡಿಟಿಪ್ಪಣಿಗಳ ಚರ್ಚೆಯು ಆಗಾಗ್ಗೆ ನಡೆಯುತ್ತಿತ್ತೆಂದು ತಿಳಿಯಬಂತು. ಅಲ್ಲಿ ಸೇರುತ್ತಿದ್ದವರಲ್ಲಿ ಅಡ್ವೋಕೇಟ್ (ಈಗ ನಿವೃತ್ತ ಚೀಫ್ ಜಡ್ಜ್) ನಾಗೇಶ್ವರಯ್ಯರು ಒಬ್ಬರು.

**5. ಬ್ರ॥ ಶ್ರೀ॥ ವಿಠ್ಠಲಶಾಸ್ತ್ರಿಗಳು :** ಬ್ರ॥ ಶ್ರೀ॥ ವಿಠ್ಠಲಶಾಸ್ತ್ರಿಗಳು ತಮ್ಮ ಮನೆಯಲ್ಲಿ 1925 ರಿಂದ ಕೆಲವರಿಗೆ ಭಾಷ್ಯಾದಿಗಳನ್ನು ಪ್ರವಚನಮಾಡುವದಕ್ಕೆ ಆರಂಭಿಸಿದ್ದರು. ಕಳೂರುಕಟ್ಟೆಯಲ್ಲಿದ್ದು ಕೆಲಸಕ್ಕೆ ರಾಜೀನಾಮೆ ಕೊಟ್ಟು ಮೈಸೂರಿಗೆ ಬಂದಮೇಲೆ ಕಂಟ್ರೋಲರ್ ಆಫೀಸಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಚಂದ್ರಶೇಖರಶಾಸ್ತ್ರಿಗಳು ಅಲ್ಲಿ ಸೇರುತ್ತಿದ್ದ ಶ್ರೋತೃಗಳಲ್ಲಿ ಒಬ್ಬರು.

**6. ಸೂತ್ರಭಾಷ್ಯ :** ಅಡ್ವೋಕೇಟ್ ನಾಗೇಶ್ವರಯ್ಯನವರು, ವಿದ್ಯಾಭ್ಯಾಸ ಇಲಾಖೆಯ ರಿ॥ ಅ॥ ಇನಸ್ಪೆಕ್ಟರು ರಾಮಯ್ಯನವರು (ಇವರಲ್ಲಿಯೇ ನಾನು ಹಿಂದೆ ವಿದ್ಯಾರ್ಥಿಯಾಗಿದ್ದಾಗ ಮಹಾದೇವಶಾಸ್ತ್ರಿಗಳ ಗೀತಾನುವಾದವನ್ನು ನೋಡಿದ್ದದ್ದು), ಟಿ.ಎಮ್. ಲಕ್ಷ್ಮಯ್ಯನವರು (ನನಗೆ ಮನೆಯನ್ನು ಕ್ರಯಕ್ಕೆ ಕೊಡಿಸಿ ಪಕ್ಕದ ಮನೆಯಲ್ಲಿಯೇ ವಾಸವಾಗಿದ್ದವರು) ಇಷ್ಟು ಜನರೂ ಸೂತ್ರಭಾಷ್ಯ-ಪಾಠವನ್ನು ಹೇಳಬೇಕೆಂದು ಕೃಷ್ಣಸ್ವಾಮಿ ಅಯ್ಯರವರ ಸೂಚನೆಯಂತೆ ಬಂದು ನನ್ನನ್ನು ಕೇಳಿದರು. ಚತುಃಸೂತ್ರಿಯು ಪೂರ ನಡೆಯಿತೆಂದು ತೋರುತ್ತದೆ.

**7. ಸಂಹಿತೋಪನಿಷತ್ತು :** 1925 ರಲ್ಲಿಯೇ ನಾನು ಚನ್ನಪಟ್ಟಣದಲ್ಲಿ ಅನುವಾದ ಮಾಡಿದ್ದ ಸಂಹಿತೋಪನಿಷತ್ತು (ಈಶಾವಾಸ್ಯೋಪನಿಷತ್ತು) ನಾಗೇಶ್ವರಯ್ಯರವರ ಪ್ರೋತ್ಸಾಹದಿಂದ ಕಾಕ್ಸನ್ ಪ್ರೆಸ್‌ನಲ್ಲಿ (ಸಿಟಿ ಪ್ರೆಸ್ಸಿನ ಯಜಮಾನರಾದ ಶಿಂಗ್ರಾಚಾರ್ರ ಚಿಕ್ಕಪ್ಪಂದಿರ ಮುದ್ರಣಾಲಯದಲ್ಲಿ) ಅಚ್ಚಾಯಿತು. ಅದೇ ಪ್ರೆಸ್ಸಿನಲ್ಲಿ ಮುಂಡಕೋಪನಿಷತ್ತು 1927 ರಲ್ಲಿ ಹೊರಕ್ಕೆ ಬಂದಿತು.

**8. ಅಧ್ಯಾತ್ಮ ಗೀತಾವಳಿ :** ಸಂಸ್ಕೃತ ಪಾಠಶಾಲೆಗೆ ಹೋಗುವಾಗ ಬರುವಾಗ ಆಗಾಗ್ಗೆ ನಾನು ಹಾಡಿಕೊಂಡು ಒಂದೊಂದು ಅಧ್ಯಾತ್ಮವಿಚಾರದ ಪದವನ್ನು ರಚಿಸುತ್ತಿದ್ದೆನು. ಅವುಗಳಲ್ಲಿ ಕೆಲವು ಚಿದಂಬರಯ್ಯನವರ ಕೀರ್ತನೆಯ ಪುಸ್ತಕಗಳಲ್ಲಿಯೂ ಅಧ್ಯಾತ್ಮಪ್ರಕಾಶದ ಒಂದನೆಯ, ಎರಡನೆಯ ಸಂಪುಟಗಳಲ್ಲಿಯೂ ಹೊರಕ್ಕೆ ಬಂದಿದ್ದವು. ಅವುಗಳನ್ನೆಲ್ಲ ಸೇರಿಸಿ ಟಿಪ್ಪಣಿಯನ್ನು ಕೊಟ್ಟು, 'ಅಧ್ಯಾತ್ಮ ಗೀತಾವಳಿ ' ಎಂಬ ಹೆಸರಿನಿಂದ ಒಂದು ಪುಸ್ತಕವಾಗಿ ಮಾಡಿ ಹೊರಕ್ಕೆ ತಂದೆನು. ಭಗವಚ್ಚರಣ ಸ್ತೋತ್ರವನ್ನು ಬರೆದ ಬ್ರಹ್ಮಾನಂದರೇ ರಚಿಸಿದ ಹರಿಶರಣಾಷ್ಟಕವನ್ನು ಅದೇ ಮಾದರಿಯಲ್ಲಿ ಪ್ರಕಟಿಸಿದೆನು. ನಮ್ಮ ಮನೆಯಲ್ಲಿ ಆಗಾಗ್ಗೆ ಶುಕ್ರವಾರದ ದಿನ ಸರಸ್ವತೀಪೂಜೆಯ ಕಾಲಕ್ಕೆ ಹಾಡಿಕೊಳ್ಳುತ್ತಿದ್ದ ವಾಗ್ದೇವೀಸ್ತೋತ್ರವನ್ನು ಪ್ರಕಟಿಸಿದೆ. ಈ ಮೂರು ಪುಸ್ತಕಗಳೂ ಬಿ.ಬಿ.ಡಿ. ಪವರ್ ಪ್ರೆಸ್‌ನಲ್ಲಿ ಅಚ್ಚಾಗಿ 1927ರಲ್ಲಿ ಹೊರಕ್ಕೆ ಬಂದವು.

**9. ಸೂರ್ಯನಮಸ್ಕಾರ :** ಮನೆಯಲ್ಲಿ ಪೂಜೆ, ಪಾರಾಯಣ, ಸೂರ್ಯನಮಸ್ಕಾರ - ಪ್ರತಿ ಶುಕ್ರವಾರವೂ ಸರಸ್ವತೀಪೂಜೆ ಇವೆಲ್ಲವೂ ನಡೆಯುತ್ತಲೇ ಇದ್ದವು. ನಂ. ಭಾಗವತರ ಮಗ ಕೃಷ್ಣಮೂರ್ತಿ (ಈಗ ಇವರು ಕೇಂದ್ರಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ) ತಮ್ಮ ಅನಂತರಾಮಯ್ಯ (ಇವರು ಬೆಂಗಳೂರಿನಲ್ಲಿ ಕನ್ಸಲ್ಟಿಂಗ್ ಇಂಜಿನಿಯರಾಗಿದ್ದಾರೆ) ಇಬ್ಬರೂ ವಾರ ಮಾಡಿಕೊಂಡು ನನ್ನ ಮನೆಯಲ್ಲಿಯೇ ಇದ್ದುಕೊಂಡು ಓದುತ್ತಿದ್ದರು. ವಿಶೇಷವಾಗಿ ಅನಂತರಾಮಯ್ಯನು ಸರಸ್ವತೀಪೂಜೆಗೆ ಹೊಂದುವಂತೆ ನಮ್ಮ ಮನೆಯಲ್ಲಿ ವಾರವನ್ನು ಮಾಡಿಕೊಂಡು ತಪ್ಪದೇ ಭಜನೆಗೆ ಬರುತ್ತಿದ್ದನು ; ಆಗತಾನೆ ಪ್ರಕಟವಾಗಿದ್ದ ಅಧ್ಯಾತ್ಮಗೀತಾವಳಿಯಿಂದ ನಾನು ಹೇಳಿಕೊಡುತ್ತಿದ್ದ ಪದಗಳನ್ನು ನಮ್ಮ ಹೆಣ್ಣುಹುಡುಗರ ಜೊತೆಗೆ ತಾನೂ ಹಾಡುತ್ತಿದ್ದನು.

ಇಲ್ಲಿ ಇದನ್ನು ಪ್ರಸ್ತಾಪಿಸಿರುವ ಕಾರಣವೇನೆಂದರೆ ಸೂರ್ಯನಮಸ್ಕಾರದ ವಿಶೇಷ ಮಹಿಮೆಯು ನನಗೆ ತಿಳಿದಿದ್ದು ಈ ಕಾಲದಲ್ಲಿ. ಪ್ರೊಫೆಸರ್ ರಾಧಾಕೃಷ್ಣನ್ ಒಂದು ಬಾರಿ ವಿಶ್ವೇಶ್ವರಪುರದಲ್ಲಿ ಇಳಿದು ಕೊಂಡಿದ್ದರು. ಅವರಲ್ಲಿಗೆ ಆಗ್ಗೆ ಹೋಗಿಬರುವದಕ್ಕಾಗಿ ಕೃಷ್ಣಸ್ವಾಮಿ ಅಯ್ಯರು ನನ್ನನ್ನು ಕರೆದರು. ನನ್ನ ಎಡಗಾಲಿನ ಹೆಬ್ಬೆಟ್ಟು ಒಡೆದು ರಕ್ತ ಕೀವು ಸೋರುತ್ತಿದ್ದದ್ದರಿಂದ ಅದಕ್ಕೆ ಬಟ್ಟೆಕಟ್ಟಿರುತ್ತಿದ್ದೆ. ಈ ಸ್ಥಿತಿಯಲ್ಲಿ ಪ್ರೊಫೆಸರರ ಬಳಿಗೆ ಹೋಗಲು ಇಷ್ಟಪಡದೆ ಇದ್ದದ್ದನ್ನು ತಿಳಿದು, ಕೃಷ್ಣಸ್ವಾಮಿ ಅಯ್ಯರವರು ನಿಮ್ಮಲ್ಲಿಯೇ ಇರುವ ಔಷಧಿಯನ್ನು ಏಕೆ ಉಪಯೋಗಿಸುವುದಿಲ್ಲ ? ಸೂರ್ಯನಮಸ್ಕಾರದ ತೀರ್ಥವನ್ನು ಉಪಯೋಗಿಸಿರಿ

ಎಂದು ಹೇಳಿದರು. ಅವರು ಪ್ರತಿ ಭಾನುವಾರವೂ ತಪ್ಪದೇ ಸೂರ್ಯನಮಸ್ಕಾರವನ್ನು ಮಾಡುತ್ತಿದ್ದರು. ಚಿಕ್ಕಬಳ್ಳಾಪುರದಲ್ಲಿ ಒಬ್ಬ ಬ್ರಾಹ್ಮಣನು ವಿಶೇಷವಾಗಿ ಯಾವಕೆಲಸವನ್ನೂ ಮಾಡದೇ ಇದ್ದರೂ ಪೂರ್ಣಾರೋಗ್ಯದಿಂದ ಇದ್ದದ್ದನ್ನು ಕಂಡು ಆದರ ಮರ್ಮವನ್ನು ಕೇಳಲು ತಾನು ಅತ್ಯಂತವಾಗಿ ರೋಗದಿಂದ ನರಳುತ್ತಿರುವಾಗ ಯಾರೋ ಒಬ್ಬರು ಸೂರ್ಯನಮಸ್ಕಾರವನ್ನು ಮಾನಸವಾಗಿ ಮಾಡುವದಕ್ಕೆ ಪ್ರಾರಂಭಿಸಿ ಆರೋಗ್ಯವಾದಂತೆಲ್ಲ ತೃಚಕಲ್ಪದಿಂದಲೂ ಅರುಣಪೂರ್ವಕವಾಗಿಯೂ ನಮಸ್ಕಾರಮಾಡುತ್ತ ಹೋಗುವಂತೆ ಹೇಳಿದರು ; ಅಂದಿನಿಂದ ಈವರೆಗೂ ತಾನು ಕಾಯಿಲೆ ಬಿದ್ದದ್ದೇ ಇಲ್ಲ ಎಂದು ಹೇಳಿದ್ದನ್ನು ಅನುಸರಿಸಿ ತಾವೂ ಮಾಡುತ್ತ ಬಂದಿರುವದಾಗಿಯೂ ಅದರ ಫಲವು ಪ್ರತ್ಯಕ್ಷಾನುಭವಿಸಿದ್ದವೆಂತಲೂ ಕೊಂಡಾಡಿ ತಿಳಿಸಿದರು. ಹೊಳಲ್ಕೆರೆಯಲ್ಲಿ ಮಹಾಭಾಗವತರು ನರಸಪ್ಪನಿಗೆ ಸೂರ್ಯನಮಸ್ಕಾರವನ್ನು ಮಾಡುವಂತೆ ಹೇಳಿದಂದಿನಿಂದ ಅವನೂ ನಾನೂ ನಮಸ್ಕಾರ ಮಾಡುತ್ತಲೇ ಇದ್ದೆವಾದರೂ ತೀರ್ಥವನ್ನು ಹೀಗೆ ಔಷಧವಾಗಿ ಉಪಯೋಗಿಸಿದ್ದಿಲ್ಲ. ಈವರೆಗೆ ಎಷ್ಟೋ ಔಷಧಗಳನ್ನು ಮಾಡಿ ಮಾಡಿ ಬೇಸತ್ತಿದ್ದೆನು. ಆದ್ದರಿಂದ ಇದನ್ನು ಕೂಡಲೇ ಪ್ರಯೋಗ ಮಾಡುವದಕ್ಕೆ ಪ್ರಾರಂಭಿಸಿದೆನು. ಮೂರು ನಾಲ್ಕು ದಿನಗಳಲ್ಲಿಯೇ ಅದು ಸಂಪೂರ್ಣವಾಗಿ ವಾಸಿಯಾಯಿತು. ಇದನ್ನು ಕಂಡು ಮನೆಯವರೆಲ್ಲ ಆಶ್ಚರ್ಯಪಟ್ಟರು. ನಾನು ಈಗ ಪ್ರತಿ ಭಾನುವಾರವೂ ವಿಶೇಷವಾಗಿ ಸೂರ್ಯನಮಸ್ಕಾರವನ್ನು ಮಾಡುವದಕ್ಕೆ ಮೊದಲು ಮಾಡಿದೆನು. ಮಗಳು ಸುಕನ್ಯಳಿಗೆ ಅರೆದಲೆ ನೋವು ಬರುತ್ತಿದ್ದದ್ದು 'ಹಂಸಾಯ ಭುವನಧ್ವಾನ್ತಧ್ವಂಸಾಯಾಮಿತತೇಜಸೇ' ಎಂದು ಮೊದಲಾಗಿರುವ ಪೌರಾಣಿಕ ಶ್ಲೋಕಗಳನ್ನು ಮಿತ್ರ, ರವಿ ಮುಂತಾದ ದ್ವಾದಶನಾಮಗಳಿಂದ ನಮಸ್ಕಾರ ಮಾಡುವದಕ್ಕೆ ಪ್ರಾರಂಭಿಸಿದಮೇಲೆ ಅವಳಿಗೆ ಅದು ನಿಂತುಹೋಯಿತು. ನಮ್ಮ ಅಣ್ಣ ಶಿವರಾಮಯ್ಯನವರ ಮಗನೂ ನಮ್ಮ ಮನೆಯಲ್ಲಿದ್ದನು. ಅವನಿಗೆ ತನ್ನ ಜನನೇಂದ್ರಿಯದಲ್ಲಿದ್ದ ಒಂದಾನೊಂದು ವ್ಯಾಧಿಯು ಬಹಳ ವ್ಯಥೆಪಡಿಸುತ್ತಿದ್ದದ್ದು ಸುಕನ್ಯೆಯನ್ನು ಅನುಸರಿಸಿ ಸೂರ್ಯನಮಸ್ಕಾರ ಮಾಡಲಾಗಿ ಅವನಿಗೂ ವಾಸಿಯಾಯಿತು. ಈಗ ನರಸಪ್ಪನೂ ಪತ್ನೀಸಮೇತನಾಗಿ ಸೂರ್ಯನಮಸ್ಕಾರಕ್ಕೆ ಸಿದ್ಧನಾದನು. ಅನಂತರಾಮಯ್ಯನೂ ಮಾಡುವದಕ್ಕೆ ಆರಂಭಿಸಿದನು. ಲಕ್ಷ್ಮಕ್ಕನವರೂ ಮಾಡುವದಕ್ಕೆ ಮನಸ್ಸು ಮಾಡಿದರು. ಹೀಗೆ ಮನೆಗೆ ಮನೆಯೇ ಸೂರ್ಯನಮಸ್ಕಾರದ ಮನೆಯಾಯಿತು. ನಮ್ಮ ಮನೆಗೆ ಬಂದವರನೇಕರು ಸ್ನೇಹಿತರು ನಾನು ಬರೆದಿಟ್ಟುಕೊಂಡಿದ್ದ ಸೂರ್ಯನಮಸ್ಕಾರದ ಮಂತ್ರಗಳನ್ನು

ಬರೆದುಕೊಂಡು ತಾವೂ ಅದನ್ನು ಅನುಸರಿಸುವ ಸಂಕಲ್ಪವನ್ನು ಮಾಡಿದರು !. ಕೃಷ್ಣಸ್ವಾಮಿಅಯ್ಯರು ಬರಿಯ ಒಣವೇದಾಂತಿಗಳಾಗಿರಲಿಲ್ಲ. ತಮ್ಮ ಶ್ರದ್ಧಾಸ್ತಿಕ್ಯ-ಗಳನ್ನು ಲೋಕಸಂಗ್ರಹಕ್ಕೂ ಉಪಯೋಗಿಸಬಲ್ಲವರಾಗಿದ್ದರೆಂಬುದಕ್ಕೆ ಇದೊಂದು ನಿದರ್ಶನವಾಯಿತು.

**10.** ಮೂಲಾವಿದ್ಯಾನಿರಾಸ : ಈ ಗ್ರಂಥವನ್ನು ನಾನು ಚನ್ನಪಟ್ಟಣದಲ್ಲಿರುವಾಗ ಮತ್ತೆ ಅಲ್ಲಲ್ಲಿ ಬರೆದು ತಿದ್ದಿದೆನು. ಈ ಮೊದಲೇ ಯಳ್ಳಂಬಳಸೆಗೆ ಔಷಧಿಸೇವೆಗೆ ಹೋದಾಗ ಅಲ್ಲಿಯೂ ಒಂದಿಷ್ಟು ಸರಿಪಡಿಸಿ, ಅಲ್ಲಲ್ಲಿ ಕೆಲವು ಶ್ಲೋಕಗಳನ್ನು ಹೊಸದಾಗಿ ಸೇರಿಸಿದ್ದೆನು. ಗ್ರಂಥದಲ್ಲಿ ಕೆಲವು ಬದಲಾವಣೆಗಳು ಆಗುವದು ಅವಶ್ಯವೆಂದು ತೋರಿದ್ದರಿಂದ ಮತ್ತೆ ಅದನ್ನು ಶ್ರೀನಿವಾಸಮೂರ್ತಿಗಳಿಂದ ದೇವನಾಗರಿಯಲ್ಲಿ ಬರೆಯಿಸಿದೆನು. ಅತ್ಯಂತ ಸುಂದರಾಕ್ಷರಗಳಿಂದ ಅವರು ಮೊದಲನೆಯಸಲಕ್ಕೆ ಬರೆದುಕೊಟ್ಟ ಪುಸ್ತಕವು ಈಗಲೂ ನನ್ನಲ್ಲಿದೆ; ಆದರೆ ನಾನು ಬದಲಾವಣೆ ಮಾಡಿದ ಮೇಲಿನ ಪುಸ್ತಕವು ಇಲ್ಲ. ಈ ಗ್ರಂಥವು ತಯಾರಾಗುತ್ತಿದ್ದಾಗ ವಿರೂಪಾಕ್ಷಶಾಸ್ತ್ರಿಗಳಿಗೆ ನಾನು ಯಾವದೋ ಸಂಪ್ರದಾಯವಿರುದ್ಧವಾದ ಗ್ರಂಥವನ್ನು ಬರೆಯುತ್ತಿದ್ದೇನೆಂಬ ಸುದ್ದಿಮುಟ್ಟಿ, ಒಂದು ದಿನ ಬೆಳಗ್ಗೆ ಪಾಠವಾದಮೇಲೆ ನನ್ನನ್ನು ಕರೆದು ಶಂಕರಮಠದ ಮುಂದೆ ನಿಲ್ಲಿಸಿಕೊಂಡು ಶಂಕರದ್ರೋಹಕರವಾದ ಯಾವ ಬರವಣಿಗೆಯನ್ನೂ ಬರೆಯಬಾರದೆಂದು ಎಚ್ಚರಿಕೆ ಕೊಟ್ಟರು. ನಾನು ಶಂಕರರಿಗೆ ವಿರುದ್ಧವಾಗಿ ಹೇಳುವವರಿಗೆ ಪ್ರತ್ಯುತ್ತರವನ್ನು ಬರೆಯುತ್ತಿದ್ದೇನೆ, ಎಂದಿಷ್ಟೇ ಹೇಳಿದೆನೇ ಹೊರತು ವಿಷಯವೇನೆಂಬುದನ್ನು ವಿಶೇಷವಾಗಿ ಹೇಳಲಿಲ್ಲ ; ಅವರೂ ಕೇಳಲಿಲ್ಲ. ವಿವರಣದ ಪಾಠವು ಆಗುತ್ತಿರುವಾಗ ಒಂದು ದಿನ ಮೂಲಾವಿದ್ಯಾ ವಿಚಾರವು ಬಂದಿತ್ತು. "ಸು.ರಾಯರು ಮೂಲಾವಿದ್ಯಾಯಿಲ್ಲವೆಂದು ಹೇಳುತ್ತಾರೆಂದು ಜನರು ಎನ್ನುತ್ತಾರೆ ? ಅವರೇನೆನ್ನುತ್ತಾರೋ ಜನರೇನು ತಿಳಿದುಕೊಂಡಿದ್ದಾರೋ !" ಎಂದರು. ನಾನು ಬಹುಜನರ ಮುಂದೆ ಚರ್ಚೆ ಮಾಡಬಾರದೆಂದು ಸುಮ್ಮನಾದೆ. ಹೀಗಾಗಿ ಗ್ರಂಥದ ವಿಷಯವನ್ನು ನೇರಾಗಿ ಶಾಸ್ತ್ರಿಗಳಲ್ಲಿ ವಿಚಾರಮಾಡಿ ನಿಷ್ಕರ್ಷಿಸುವ ಧೈರ್ಯವೂ, ಯೋಗವೂ ನನಗೆ ಇಲ್ಲವಾಯಿತು. ಆದರೆ ಪುಸ್ತಕವೇನೋ ಬರೆದು ಸಿದ್ಧವಾಗುತ್ತಿತ್ತು. 1927ರಲ್ಲಿ ದೇವರಾಜಬಹದ್ದೂರು ಧರ್ಮಸಹಾಯದ ನಿಧಿಗೆ ಸೇರಿದ ವಾಙ್ಮಯಶಾಖೆಯವರ ಕಮಿಟಿಗೆ ಸಿದ್ಧವಾದಷ್ಟು ಭಾಗವನ್ನೇ ಪ್ರೋತ್ಸಾಹಕ್ಕೆಂದು ಅರ್ಪಿಸಿದೆ. ದೇವರದಯೆಯಿಂದ ಅದಕ್ಕೆ 300ರೂ.ಗಳ ಬಹುಮಾನವು ಬಂದಿತು.

## ಅಧ್ಯಾತ್ಮಪ್ರಕಾಶ ಮುದ್ರಣಾಲಯ ಸ್ಥಾಪನೆ:

ಮೂಲಾವಿದ್ಯಾನಿರಾಸಕ್ಕೆ ಬಹುಮಾನವು ಬಂದಾಗ ಗ್ರಂಥವನ್ನು ಗೊತ್ತಾದ ಅವಧಿಯಲ್ಲಿ ಅಚ್ಚುಮಾಡಿಸಬೇಕು ಎಂಬ ಷರತ್ತು ಹಾಕಿದ್ದರು. ಆದರೆ ನನ್ನ ಕೈಯಲ್ಲಿ ಒಂದು ಕಾಸೂ ಇರಲಿಲ್ಲ. ಅದು ಹೊರಕ್ಕೆ ಬರುವ ಬಗೆ ಹೇಗೆ ? ವಿದ್ಯಾಭ್ಯಾಸದ ಇಲಾಖೆಯವರೇ ಅದನ್ನು ಅಚ್ಚುಮಾಡಿಸಿಕೊಳ್ಳುತ್ತಾರೆಯೇ ಎಂದು ನೋಡಿದೆ; ಅದಕ್ಕೆ ಅವಕಾಶವಿರಲಿಲ್ಲ. ನನಗೆ ಕಾಲಾವಧಿಯನ್ನು ಸ್ವಲ್ಪ ಹೆಚ್ಚಾಗಿ ಕೊಡಬೇಕೆಂದು ಕೇಳಿಕೊಂಡೆ ; ಕೊಡಲಿಲ್ಲ. ಒಬ್ಬಾನೊಬ್ಬ ಮುದ್ರಣಾಧಿಪತಿಯು ತಾನೇ ಅದನ್ನು ಅಚ್ಚುಮಾಡುವದಾಗಿ ಕೃಷ್ಣಸ್ವಾಮಿ ಅಯ್ಯರ ಶಿಫಾರಸ್ಸಿನಮೇಲೆ ಒಪ್ಪಿದನು ; ಆದರೆ ಆಗ ಈಗ ಎಂದು ಹೇಳಿ ಕೊನೆಗೆ ಆಗುವದಿಲ್ಲವೆಂದು ಹೇಳಿ ಕೈಬಿಟ್ಟನು. ಮೈಸೂರು ಮಹಾರಾಜರವರಿಗೆ ಅದಕ್ಕೆ ಪ್ರೋತ್ಸಾಹವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ಮೂಲಗ್ರಂಥವನ್ನು ಕಳುಹಿಸಿಕೊಟ್ಟೆ ; ಗ್ರಹಚಾರವಶದಿಂದ ಅದನ್ನು ವಿರೂಪಾಕ್ಷ-ಶಾಸ್ತ್ರಿಗಳವರ ಸಮಾವಲೋಕನಕ್ಕೆ ಕಳುಹಿಸಿದ ಕಾರಣ ಅವರು ಗ್ರಂಥದ ಶೈಲಿಯು ಉತ್ತಮವಾಗಿದೆಯಾದರೂ ಪ್ರತಿಪಾದ್ಯ ವಿಷಯವು ಸಂಪ್ರದಾಯ ವಿರುದ್ಧವೆಂದು ಅದನ್ನು ತಳ್ಳಿಹಾಕಿದರು. ಇನ್ನು ಕೆಲವುಕಾಲ ಅದನ್ನು ಬೇರೆಯವರಿಂದ ಸಮಾಲೋಚನೆ ಮಾಡಿಸುವ ಸಂಭವವಿತ್ತು ; ಆದರೆ ನಾನೇ ಗ್ರಂಥವು ಬೇಗನೆ ಮುದ್ರಣವಾಗಬೇಕಾಗಿರುವದರಿಂದ, ದಯವಿಟ್ಟು ಬರೆದ ಪ್ರತಿಯನ್ನು ಹಿಂದಕ್ಕೆ ಕಳುಹಿಸೋಣಾಗಬೇಕೆಂದು ಬೇಡಿಕೊಂಡೆನು. ಬೆಂಗಳೂರಿಗೆ ದಯಮಾಡಿಸಿದ್ದ ಪ್ರೊಫೆಸರ್ ರಾಧಾಕೃಷ್ಣನ್ನರಲ್ಲಿ ಅದರ ವಿಷಯವನ್ನು ಪ್ರಸ್ತಾಪಿಸಿದೆನು. ಕಲಕತ್ತಾ ಯೂನಿವರ್ಸಿಟಿಯಲ್ಲಿ ಅದಕ್ಕೆ ಪ್ರೋತ್ಸಾಹವನ್ನು ಕೊಡುವಂತೆ ಶಿಫಾರಸ್ಸು ಮಾಡುವದಾಗಿ ಹೇಳಿದರು. ಅದೇಕೋ ನೆರವೇರಲಿಲ್ಲ. ಅಂತೂ ಇಂತೂ ಗ್ರಂಥ ಮುದ್ರಣಕ್ಕೆ ಯಾವ ಅವಕಾಶವೂ ದೊರೆಯಲಿಲ್ಲ. ಇಷ್ಟರಲ್ಲಿ ನರಸಪ್ಪನು ಎನ್ಟ್ರೆನ್ಸ್ ಪರೀಕ್ಷೆಯಲ್ಲಿ ಎರಡುಮೂರು ಸಲ ಫೇಲಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಲಾರದೆ ಬೇಸತ್ತಿದ್ದನು. ಎನ್ಟ್ರೆನ್ಸ್ ಪರೀಕ್ಷೆಯ ಕ್ರಮವು ನಿಂತು ಇಂಟರ್ಮೀಡಿಯೇಟ್ ಕ್ರಮವು ಆಚರಣೆಗೆ ಬಂದಾಗ ಎಂಜಿನಿಯರಿಂಗ್ ಕೋರ್ಸಿಗೆ ಅನುಕೂಲಿಸುವಂತೆ ಸ್ಕೂಲಿನಲ್ಲಿ ಅವಕಾಶವು ದೊರೆಯಿತು. ಆದರೆ ನಾಲ್ಕೈದು ವರ್ಷಗಳು ಅದಕ್ಕೆ ಓದಿಸುವ ಆರ್ಥಿಕ ಸಂಪತ್ತು ನನ್ನಲ್ಲಿರಲಿಲ್ಲವಾದ್ದರಿಂದ ಅದು ಕಾರ್ಯಕಾರಿಯಾಗಲಿಲ್ಲ. ಓದಿದಮೇಲೆ ಯಾವದಾದರೊಂದು ಸ್ವತಂತ್ರ ಜೀವನದ ಕೆಲಸಕ್ಕೆ ನರಸಪ್ಪನನ್ನು ಹಾಕಬೇಕೆಂದು ನನ್ನ ಸಂಕಲ್ಪವಾಗಿತ್ತು; ಇದನ್ನು ತಿಳಿದ ಅವನ ಮಾವನವರು, ಹಾಗಾದರೆ ಅದನ್ನು ಈಗಲೇ ಪ್ರಾರಂಭಿಸಿಬಿಡುವದು

ಒಳ್ಳೆಯದು ಎಂದರು. ಇದೆಲ್ಲ ಸೇರಿ ನರಸಪ್ಪನನ್ನು ಮುದ್ರಣಕೆಲಸಕ್ಕೆ ಸಜ್ಜುಗೊಳಿಸಿದರೆ ಒಳ್ಳೆಯದಾದೀತೆಂಬ ಯೋಚನೆ ಹೊಳೆಯುವದಕ್ಕೆ ಮೊದಲಾಯಿತು. ಸಿಟಿ ಪ್ರೆಸ್‌ನಲ್ಲಿ ಅಲ್ಪ ಸ್ವಲ್ಪ ಕಂಪೋಸಿಂಗ್ (ಮೊಳೆ ಜೋಡಿಸುವ) ಕೆಲಸವನ್ನು ಅವನು ಪರಿಚಯ ಮಾಡಿಕೊಂಡಿದ್ದನು. ಈ ಕಾಲಕ್ಕೆ ನನಗೆ ಒಬ್ಬ ಸಂಸ್ಕೃತವನ್ನು ಕಂಪೋಸುಮಾಡುವ ಬ್ರಾಹ್ಮಣನು ದೊರೆತನು. ಸರಿ, ಅಚ್ಚಿನ ಮೊಳೆಗಳನ್ನು ಕೊಂಡು ಮನೆಯಲ್ಲಿಯೇ ಮೂಲಾವಿದ್ಯಾನಿರಾಸವನ್ನು ಮುದ್ರಿಸುವುದೆಂದು ನಿಶ್ಚಯಿಸಿದೆವು. ಕನ್ನಡ, ಸಂಸ್ಕೃತ ಅಚ್ಚಿನ ಮೊಳೆಗಳನ್ನು ಕೊಂಡೆವು. ಒಂದೆರಡು ತಿಂಗಳುಗಳವರೆಗೆ ಮನೆಯಲ್ಲಿ ಮೊಳೆ ಜೋಡಿಸಿ ಮತ್ತೊಬ್ಬರ ಯಂತ್ರದಲ್ಲಿ ಅಚ್ಚುಮಾಡಿಸಿಕೊಂಡು ತರುತ್ತಿದ್ದೆವು. ಆಮೇಲೆ ಮದರಾಸಿನ ಒಂದು ಡೆಮಿ ಟ್ರೆಡಲ್(ಕಾಲಿನಿಂದ ತುಳಿಯುವ) ಅಚ್ಚಿನ ಯಂತ್ರವನ್ನು ಕೊಂಡೆವು. ಹೀಗೆ 1928ರಲ್ಲಿ ಅಧ್ಯಾತ್ಮಪ್ರಕಾಶ ಮುದ್ರಣಾಲಯವು ಪ್ರಾರಂಭವಾಯಿತು.

ಸಂಸ್ಕೃತಕಾಲೇಜಿನ ಉದ್ಯೋಗ ಸಮಾಪ್ತಿ : ಮುದ್ರಣಾಲಯದ ಜಾತಕರ್ಮವಾಗುವುದರೊಳಗೆ ನಾನು ಮತ್ತೆ ಮಿಡಲುಸ್ಕೂಲು ಮಾಸ್ಟರಾದ ಬಗೆ ಹೀಗೆ: ಸಂಸ್ಕೃತಕಾಲೇಜು ಮುಜರಾಯಿ ಇಲಾಖೆಯಿಂದ ಈಗ ವಿದ್ಯಾಭ್ಯಾಸದ ಇಲಾಖೆಗೆ ಬಂದಿತ್ತು, ಹೊಸದಾಗಿ ಆದ ಏರ್ಪಾಡುಗಳಿಂದ ತರ್ಕವ್ಯಾಕರಣಾದಿಗಳ ಪಾಠವನ್ನು ಇಲ್ಲಿ ಹೇಳಬಹುದಾಗಿತ್ತು ; ಅಬ್ರಾಹ್ಮಣರಿಗೂ ಇಲ್ಲಿ ಅವಕಾಶವುಂಟಾಯಿತು. ಕಾಲೇಜಿನಲ್ಲಿ 75ರೂ ತಲುಬಿನ ಒಂದು ಕೆಲಸವು ಆಗುವದರಲ್ಲಿದೆ ಎಂದು ಅದಕ್ಕೆ ನನ್ನನ್ನು ಶಿಫಾರಸ್ಸು ಮಾಡಲಾಗಿತ್ತಂತೆ, ಆದರೆ ಅದು ದೊರೆಯುವದಕ್ಕೆ ಬದಲು ನನಗೆ ತರಗತಿಗಳಿಗೆ ಲಿಟರೇಚರ್ ಮುಂತಾದವುಗಳನ್ನು ಹೇಳುವ ಹೊಣೆ ಬಂದಿತು. ಹುಡುಗರ ಗದ್ದಲದಿಂದಾಗಿ ಯಾವಾಗಲೋ ಕಿವಿ ಮಂದಾಗಿಬಿಟ್ಟಿತ್ತು, ವ್ಯಾಕರಣ, ತರ್ಕ ಪ್ರೊಫೆಸರುಗಳ ಕೆಲಸದಲ್ಲಿ ಇದ್ದ ಖಾಲಿ ಕೆಲಸದಲ್ಲಿ ನಾನು ಸೂಪರ್‌ವೈಸರೆಂದಾಗಿ ಕೆಲಸವಿಲ್ಲದವನಾಗಿ ಕೆಲಸಮಾಡುತ್ತಿದ್ದೆನು. ನನ್ನ ಖಾಯಂ ಸ್ಥಾನದ ಹೆಸರುಗಳನ್ನು ಬೇರೆ ಬೇರೆ ಮಿಡಲುಸ್ಕೂಲುಗಳಲ್ಲಿ ತೋರಿಸಲಾಗುತ್ತಿತ್ತು. ಮಿಡಲುಸ್ಕೂಲಿಗೆ ಹೋದರೆ ಸಂಬಳ ಹೆಚ್ಚಾಗುವ ಸಂಭವವಿದೆ ಎಂಬ ಆಶೆ ಬೇರೆ ಹುಟ್ಟಿತು; ಆದರೆ ಅಂಥ ಅವಕಾಶವೇನೂ ಸಿಕ್ಕಲಿಲ್ಲ. ಕೊನೆಗೆ ನನಗೆ ಗೀತಾಮಿಡಲುಸ್ಕೂಲು ಹೆಡ್‌ಮಾಸ್ಟರಾಗಿ ವರ್ಗವಾಗಿದೆ ಎಂದು ಹುಕುಂ ಬಂತು. ನನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿದರೂ ಪ್ರಿನ್ಸಿಪಾಲರು ಹೊಸದಾಗಿ ಏರ್ಪಟ್ಟಿದ್ದ ಪರೀಕ್ಷೆಗಳ ಪ್ರಶ್ನಪತ್ರಿಕೆಗಳನ್ನು ಸಿದ್ಧಪಡಿಸಿಕೊಂಡು ಬರುವದಕ್ಕೆಂದು ಮೈಸೂರಿಗೆ ಕಳುಹಿಸಿಕೊಟ್ಟರು. ಆ ಕೆಲಸವನ್ನು

ಮುಗಿಸಿಕೊಂಡು ಬಂದಮೇಲೆ ಕೃಷ್ಣಸ್ವಾಮಿ ಅಯ್ಯರು ಆಗಿನ ಸರ್ಕಲ್ ಇನಸ್ಪೆಕ್ಟರ್‌ರಿಗೆ ಹೇಳಿ ನನ್ನನ್ನು ಬೆಂಗಳೂರು ಪೋರ್ಟ್ ಮಿಡಲುಸ್ಕೂಲಿಗೇ ಅ॥ ಮಾಸ್ತರಾಗಿ ವರ್ಗಮಾಡಿಸಿಕೊಟ್ಟರು ; ಹೀಗೆ ನಾನು ಮತ್ತೆ ಮಿಡಲುಸ್ಕೂಲುಗಳಿಗೆ ಸಂಬಂಧಿಸಿಕೊಂಡೆ. ಅಲ್ಲಿಂದ ಮುಂದಕ್ಕೆ ಆಗಾಗ್ಗೆ ಬೇರೊಂದು ಸ್ಕೂಲಿಗೆ ವರ್ಗವಾಗುವದು, ಮತ್ತೆ ಪೋರ್ಟ್ ಮಿಡಲುಸ್ಕೂಲಿಗೇ ಪುನರಾಯಾನ್ ಎಂದು ಬರುವದು - ಹೀಗೆ ಆಗುತ್ತಲೇ ಇತ್ತು. ಕೊನೆಗೂ ಮಿಡಲುಸ್ಕೂಲಿನಿಂದಲೇ ಕೆಲಸಕ್ಕೆ ವಿಶ್ರಾಂತಿಯಾಯಿತು. ಆದ್ದರಿಂದ ಇನ್ನು ಮುಂದಕ್ಕೆ ಅಧ್ಯಾತ್ಮಪ್ರಕಾಶಕಾರ್ಯಾಲಯದ ವಿಷಯವನ್ನೇ ಹೇಳುತ್ತಾ ಹೋದರೆ ಸಾಕಾಗುವದು.

# 35. ಕಾರ್ಯಾಲಯದ ಕ್ರಮಬದ್ಧವಾದ ಚಟುವಟಿಕೆಗಳ ಆರಂಭ (1927-32)

## ಮುದ್ರಣಾಲಯದ ಪ್ರಥಮ ಪ್ರಕಟಣೆಗಳು :

ಅಧ್ಯಾತ್ಮಪ್ರಕಾಶ ಮುದ್ರಣಾಲಯವೆಂಬ ಹೆಸರನ್ನಿಟ್ಟಿದ್ದರೂ ಅದು ನನ್ನ ಸ್ವಂತದ್ದಾಗಿದ್ದು, ನರಸಪ್ಪನಿಗೆ ಉದ್ಯೋಗವನ್ನು ಒದಗಿಸುವದಕ್ಕಾಗಿ ಹುಟ್ಟಿದ್ದು ಅದು ; ಆದ್ದರಿಂದ ಅದರಲ್ಲಿ ಮೂಲಾವಿದ್ಯಾನಿರಾಸವನ್ನು ಅಚ್ಚುಮಾಡಿದ್ದು ಅನಿವಾರ್ಯವಾಗಿ. ಆದಷ್ಟು ಮಟ್ಟಿಗೂ ಅದರಲ್ಲಿ ನರಸಪ್ಪನಿಗೆ ಯಾವದಾದರೊಂದು ರೀತಿಯಿಂದ ಐಹಿಕಲಾಭವನ್ನು ತಂದುಕೊಡುವ ಗ್ರಂಥಗಳನ್ನೇ ಹೊರಡಿಸಬೇಕೆಂಬ ಸಂಕಲ್ಪವು ಸಹಜವಾಗಿಯೇ ಉಂಟಾಯಿತು. ಆದ್ದರಿಂದ ಅಧ್ಯಾತ್ಮಗ್ರಂಥಾವಳಿಗೆ ಸಂಬಂಧವಿಲ್ಲವೆಂಬುದನ್ನು ಸೂಚಿಸುವದಕ್ಕಾಗಿ 'ಪುರುಷಾರ್ಥಗ್ರಂಥಾವಳಿ' ಎಂಬ ಹೆಸರಿನಿಂದ ಕೆಲವು ಪುಸ್ತಕಗಳನ್ನು ಅಚ್ಚುಮಾಡಿಸುವದಕ್ಕೆ ಮೊದಲುಮಾಡಿದೆವು. ರಹಸ್ಯೋಪದೇಶ, ನಳಚರಿತ್ರೆಯ ನೋಟ್ಸು, ಮಾರ್ಜಿಯಾನಳ ಚಾತುರ್ಯ, ಭೀಷ್ಮಚರಿತ್ರೆ, ಸೋಮವಾರ ಮಂಗಳವಾರದ ಕಥೆಗಳು, ರಘುವಂಶ 1ನೆಯ ಮತ್ತು 10ನೆಯ ಸರ್ಗಗಳು ಟಿಪ್ಪಣಿಸಹಿತ, ವಿಷ್ಣುಸಹಸ್ರನಾಮ ಮತ್ತು ನಾಮಾವಳಿ, ಶಿವಕವಚ-ಇಂದ್ರಾಕ್ಷಿ, ಮಹಾಶಿವರಾತ್ರಿ ವ್ರತ ಇಷ್ಟು ಪುಸ್ತಕಗಳು ಆ ಗ್ರಂಥಾವಳಿಗೆ ಸೇರಿದಂತೆ ಅಚ್ಚಾದವು. ಆದರೆ ಮುದ್ರಣಾಲಯದಲ್ಲಿ ಐಹಿಕ ಪುರುಷಾರ್ಥಪ್ರಾಪ್ತಿಗಿಂತಲೂ ಪರಮಾರ್ಥ- ಲಾಭವೇ ನಮಗೆ ಆಗಬೇಕೆಂದು ಈಶ್ವರಸಂಕಲ್ಪವಿತ್ತೆಂದು ತೋರುತ್ತದೆ. ಆದ್ದರಿಂದ ಪುಸ್ತಕಗಳಿಂದ ಹೆಚ್ಚಿನ ದ್ರವ್ಯವೇನೂ ಉತ್ಪನ್ನವಾಗಲಿಲ್ಲ, ನರಸಪ್ಪನು ಮುದ್ರಣಾಲಯದಲ್ಲಿ, ನಾನು ಸರಕಾರಿಯ ಉದ್ಯೋಗ ಮತ್ತು ಗ್ರಂಥಲೇಖನ ಇವುಗಳಲ್ಲಿ ; ಹೀಗಿದ್ದದ್ದರಿಂದ ಪುಸ್ತಕಗಳ ವ್ಯಾಪಾರವೇನೂ ಕೂಡಲೆ ಲಾಭವನ್ನು ತೋರಿಸುವ ರೀತಿಯಿಂದ ಆಗಲಿಲ್ಲ, ಆದ್ದರಿಂದ ಆ ಕೆಲಸವನ್ನು ಅಲ್ಲಿಗೇ ಕೈಬಿಟ್ಟು ಬಿಟ್ಟೆವು. ಗುರುಭಕ್ತಿಸಾರವೆಂಬ ಕುಸುಮಷಟ್ಪದಿಯ ಗ್ರಂಥವೇ ಈ ಮುದ್ರಣಾಲಯದಲ್ಲಿ ಅಚ್ಚಾದ ಮೊಟ್ಟಮೊದಲನೆಯ ಅಧ್ಯಾತ್ಮಗ್ರಂಥಾವಳಿಯ ಗ್ರಂಥವು.

## ಮೂಲಾವಿದ್ಯಾನಿರಾಸ :

ಈ ಗ್ರಂಥದ ಕೆಲವು ಭಾಗಗಳನ್ನು ಶಂಕರಮಠದಲ್ಲಿ ವೇದಾಂತಾಧ್ಯಾಪಕರಾಗಿದ್ದ ವಿದ್ವಾನ್ ನವೀನಂ ವೆಂಕಟೇಶಶಾಸ್ತ್ರಿಗಳವರು ನೋಡಿದರು. ಆ ಮೇಲೆ ಅವರ ನಮ್ಮ

ಮತಭೇದದಿಂದ ಅಲ್ಲಿಗೇ ಬಿಟ್ಟುಬಿಟ್ಟರು. ನಾನು ಸಂಸ್ಕೃತ ಪುಸ್ತಕವನ್ನು ಬರೆದು ಅಚ್ಚುಮಾಡಿಸಿದ್ದು ಇದೇ ಮೊದಲನೆಯಸಲವಾದ್ದರಿಂದ ಎಷ್ಟೋ ಸ್ಖಾಲಿತ್ಯಗಳು ಅದರಲ್ಲಿ ಉಳಿದುಕೊಂಡವು. ಅಂತೂ ಗ್ರಂಥವೇನೋ 1929ರಲ್ಲಿ ಹೊರಕ್ಕೆ ಬಂತು. ಅದನ್ನು ನಮ್ಮ ದೇಶದ ಮತ್ತು ಉತ್ತರದೇಶದ ಕೆಲವು ಪಂಡಿತರುಗಳಿಗೆ ಕಳುಹಿಸಿದೆನು. ಇಂಗ್ಲೀಷಿನಲ್ಲಿ **Review on Philosophy and Religion** ಎಂಬ ಪತ್ರಿಕೆಯಲ್ಲಿ ಪ್ರೊಫೆಸರ್ ಕೆ.ಸುಂದರಮಯ್ಯರ್‌ರವರೂ, **Vedanta Kesari** (ವೇದಾಂತಕೇಸರಿ)ಯಲ್ಲಿ ಅರ್ಥಶಾಸ್ತ್ರವಿಶಾರದ ಡಾ|| ಆರ್. ಶಾಮಾ-ಶಾಸ್ತ್ರಿಗಳೂ ವಿಸ್ತಾರವಾಗಿ ಗ್ರಂಥವನ್ನು ಖಂಡಿಸಿ ವಿಮರ್ಶೆಗಳನ್ನು ಬರೆದರು. ಇವೆರಡಕ್ಕೂ ನಾನು ಪ್ರತ್ಯುತ್ತರವನ್ನು ಬರೆದೆನು. ವಿಠ್ಠಲಶಾಸ್ತ್ರಿಗಳು, ಅಣ್ಣಾಮಲೈ ಯೂನಿವರ್ಸಿಟಿಯ ಸಿ.ಟಿ.ಶ್ರೀನಿವಾಸನ್ ಇವರೂ ಬರೆದರು. ಪ್ರೊಫೆಸರ್ ಕೋಟೀಶ್ವರಶಾಸ್ತ್ರಿಗಳು ಅದಕ್ಕೊಂದು ಖಂಡನವನ್ನು ಬರೆದರು. ಆಮೇಲೆ ಈ ಚರ್ಚೆಯು ಕೆಲವುಕಾಲದವರೆಗೆ ತಣ್ಣಗಾಯಿತು. ಮೂಲಾವಿದ್ಯಾನಿರಾಸದ ರಟ್ಟಿನಮೇಲೆ ಹಾಕಿದ್ದ ಮರೆಹಾಳೆಯಲ್ಲಿ ಹೀಗೆಂದು ಬರೆದಿದ್ದೆನು. ‘‘ಮೂಲಾವಿದ್ಯಾನಿರಾಸಸ್ಯ ದ್ವಿತೀಯಭಾಗೇ ವೇದಾಂತಪ್ರಕ್ರಿಯಾಸ್ವರೂಪ-ನಿರ್ಧಾರಣಪರಮತಪ್ರವೇಶಶಙ್ಕಾನಿರಾಕರಣಪ್ರಕರಣೋಪಸಂಹಾರಾಃ ತ್ರಯಃ ಖಂಡಾಃ । ಕೃತ್ಸ್ನಗ್ರಂಥಸ್ಯ ವಿಷಯಾಣಾಮಕ್ಷರಾನುಕ್ರಮೇಣಸೂಚಿಕಾ ಚ ಅವೇಕ್ಷ್ಯತೇ । ಭಾಗೇಽಸ್ಮಿನ್ ನ ಕೇವಲಂ ಪೂರ್ವಭಾಗತಃ ವಿಷಯಾಣಾಮಾಕ್ಷೇಪ-ಪರಿಹಾರಾಃ, ಕಿಂ ತು ಪ್ರಾಚ್ಯಪಾಶ್ಚಾತ್ತ್ಯವಿದ್ವದಾದೃತಾನಾಂ ಪ್ರಾಯಶಃ ಸರ್ವೇಷಾಮಪಿ ತತ್ತ್ವವಿಚಾರಪ್ರಸ್ಥಾನಾನಾಂ ಸಮಾಲೋಚನಪೂರ್ವಕಂ ವೇದಾಂತದರ್ಶನಸ್ಯೈವ ಯುಕ್ತಿಗಾಢತ್ವೇನ ಪೂರ್ಣಾನುಭವಕಲ್ಪಿತತ್ವೇನ ಚ ಯಥಾ ಸರ್ವಾತಿಶಾಯಿತ್ವಂ ತಥಾ ಸಮ್ಯಙ್ನಿರೂಪಿತಮ್|| ಬಹುಧನಾಪೇಕ್ಷತ್ವಾ-ದೇತತ್ಪ್ರಕಾಶನಸ್ಯ ಸ್ವಲ್ಪಸಂಖ್ಯಾಕಾನ್ಯೇವ ಪುಸ್ತಕಾನಿ ಮುದ್ರಾಪಯಿಷ್ಯಂತೇ । ಅತಃ ಸಂಗ್ರಾಹಕೈರಿದಾನೀಮೇವ ಸ್ವನಾಮಧಾಮಾದಿದರ್ಶಕಪತ್ರಪ್ರೇಷಣೇನ ತ್ವರಯಿತ-ವ್ಯಮ್। ಯತಸ್ತೇಷಾಂ ನಾಮಗ್ರಹಣಪಟ್ಟಿಕಾಪ್ರವಿಷ್ಟಾನಾಂ ಗ್ರನ್ಥೇ ಮಾರ್ಗಭೃತಿಂ ವಿನೈವ ವಿತರಿಷ್ಯತೇ । ಪರಿಶಿಷ್ಟಾನ್ಯೇವ ಪುಸ್ತಕಾನ್ಯನ್ಯೇಷಾಂ ಮಾರ್ಗಭೃತಿಸಹಿತಽ-ಮೂಲ್ಯದಾನೇನೈವ ಲಭ್ಯಾನಿ ಸ್ಯುರಿತಿ ||’’ ಎರಡನೆಯ ಭಾಗದಲ್ಲಿ ವೇದಾಂತ ಸಂಪ್ರದಾಯ ಸ್ವರೂಪನಿರ್ಧಾರಣ, ಪರಮತಪ್ರವೇಶ ಶಙ್ಕಾನಿರಾಕರಣ, ಪ್ರಕರಣೋಪಸಂಹಾರವೆಂಬ ಮೂರು ಖಂಡಗಳನ್ನಿಟ್ಟು ವಿಷಯಗಳ ಅಕ್ಷರಾನು-ಕ್ರಮಣಿಕೆಯನ್ನು ಕೊಡಲಾಗುವದು ; ಪೂರ್ವಪಶ್ಚಿಮದೇಶಗಳ ತತ್ತ್ವವಿಚಾರ ಪ್ರಸ್ಥಾನಗಳ ಸಮಾಲೋಚನೆಯನ್ನು ಮಾಡಲಾಗುವದು ಎಂಬ ಅಭಿಪ್ರಾಯಕ್ಕೆ

ಬರೆದಿದ್ದ ಆ ಪ್ರಕಟನೆಯು ಪ್ರಕಟನ ಮಾತ್ರದಲ್ಲಿ ಪರ್ಯವಸಾನವಾಯಿತು. ಅದು ಈವರೆಗೂ ಬರಲೇ ಇಲ್ಲ. ಮುಂದಕ್ಕೆ ಬರುವ ಸಂಭವವೂ ಇಲ್ಲ.

## ಅಧ್ಯಾತ್ಮಗ್ರಂಥಗಳು :

ಅಧ್ಯಾತ್ಮಪ್ರಕಾಶದ ಮೂರನೆಯ ಸಂಪುಟವು ಹೊರಕ್ಕೆ ಬರುವ ಮುಂಚೆ ಶ್ರೀಮದ್ಭಗವದ್ಗೀತಾ ಭಾಷ್ಯದ 1ನೆಯ ಭಾಗವು (1 ರಿಂದ 3 ಅಧ್ಯಾಯಗಳದ್ದು), 1930ರಲ್ಲಿ ಹೊರಕ್ಕೆ ಬಂದಿತು. ಅದನ್ನು ಪ್ರಕಟಿಸುವದಕ್ಕೆ ಹೊಳೆನರಸೀಪುರದಲ್ಲಿದ್ದ ರುದ್ರಪಟ್ಟಣದ ಶ್ರೀನಿವಾಸಯ್ಯನವರು ತಮ್ಮ ಮಗನ ಉಪನಯನಕಾಲಕ್ಕೆ ಕೊಟ್ಟ 100ರೂ, ಡಿ.ಪಿ.ಡಬ್ಲ್ಯು ಸಬ್‌ಓವರ್‌ಸಿಯರಾಗಿದ್ದ ಸೂರ್ಯನಾರಣಪ್ಪನವರು ಕೊಟ್ಟ 100ರೂ, ಪ್ಲೀಡರ್ ಆರ್. ರಾಮಸ್ವಾಮಯ್ಯನವರು ಕೊಟ್ಟ 100 ರೂ ಇವುಗಳನ್ನು ಉಪಯೋಗಿಸಲಾಗಿತ್ತು. ಎರಡನೆಯ ಭಾಗವು (4ರಿಂದ 7ನೆಯ ಅಧ್ಯಾಯಗಳಷ್ಟು) ಹೊರಕ್ಕೆ ಬಂದಾಗ ಪತ್ರಿಕೆಯ ಮೂರನೆಯ ಸಂಪುಟವು ಹೊರಕ್ಕೆ ಬಂದಿತ್ತು. 1930ರಲ್ಲಿ ತಮ್ಮಹೆಸರನ್ನು ಪ್ರಕಟಿಸಬಾರದೆಂದು ಒಬ್ಬ ಮಹನೀಯರು ಕೊಟ್ಟ ಹಣವನ್ನು ಉಪಯೋಗಿಸಿಕೊಂಡು ಕಾಠಕೋಪನಿಷತ್ತಿನ ಭಾಷ್ಯವನ್ನು ಹೊರತರಲಾಯಿತು.

ಹೊಳೆನರಸೀಪುರದ ಪ್ಲೀಡರ್ ಪಿ.ಎನ್.ನರಸಿಂಹಯ್ಯನವರು ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಚಟುವಟಿಕೆಗಳು ರೂಪುಗೊಳ್ಳುವದಕ್ಕೆ ಮಾಡಿದ ಉಪಕಾರವನ್ನು ಸ್ಮರಿಸುವದಕ್ಕೆ ಇಲ್ಲಿ ಮೊದಲು ಮಾಡಬೇಕು. ಅಧ್ಯಾತ್ಮಪ್ರಕಾಶ ಪತ್ರಿಕೆಯು ಮೊದಲು ಹೊರಟಾಗ ಚಂದಾದಾರರನ್ನು ಜೊತೆಗೊಳಿಸುವದಕ್ಕೆಂದು ಅಲ್ಲಲ್ಲಿ ನನಗೆ ಅಥವಾ ನನ್ನ ಸ್ನೇಹಿತರಿಗೆ ಗೊತ್ತಿದ್ದ ಕೆಲವು ಮಹಾಶಯರಿಗೆ ಪ್ರಾರ್ಥನಾಪತ್ರಗಳನ್ನು ಬರೆದೆನು. ಅಂಥ ಮಹಾಶಯರುಗಳಲ್ಲಿ ನರಸಿಂಹಯ್ಯ ನವರು ಒಬ್ಬರು. 'ನಿಮ್ಮ ಪರಿಚಯವು ಅಷ್ಟಾಗಿಲ್ಲದಿದ್ದರೂ ಅಧ್ಯಾತ್ಮವಿದ್ಯಾಪ್ರಚಾರಕ್ಕೆ ನಿಮ್ಮ ನೆರವನ್ನು ಬೇಡಿ ಈ ಕಾಗದವನ್ನು ಬರೆದಿದ್ದೇನೆ' ಎಂದು ನಾನು ಬರೆದಿದ್ದೆ. 'ತಮಗೆ ನನ್ನ ಪರಿಚಯವು ಇಲ್ಲದೆ ಇಲ್ಲ, ನಾನೇನೂ ಹೊಸಬನಲ್ಲ, ಶಂಕರಮಠದಲ್ಲಿ ನನ್ನನ್ನು ನೀವು ನೋಡಿದ್ದೀರಿ. ಅವಶ್ಯವಾಗಿ ನನ್ನ ಕೈಯಲ್ಲಾದ ಪ್ರಯತ್ನವನ್ನು ಮಾಡುವೆನು' ಎಂದು ಅವರು ಉತ್ತರಕೊಟ್ಟರು. ಚಿದಂಬರಯ್ಯನವರು ಪತ್ರವನ್ನು ಬರೆದದ್ದರಮೇಲೆ ಕೆಲವರು ಚಂದಾದಾರರು ಒದಗಿದ್ದರು. ಅವರ ಸೂಚನೆಯಂತೆ ನಾನು ಮೈಸೂರು, ನಂಜನಗೂಡು ಮುಂತಾದ ಪ್ರಾಂತಗಳಲ್ಲಿ ಸುತ್ತಾಡಿ ಹೊಳೆನರಸೀಪುರಕ್ಕೆ ಹೋದೆನು. ನರಸಿಂಹಯ್ಯನವರು ಆಗತಾನೇ ಕಾಶಿಯಾತ್ರೆಯಿಂದ ಹಿಂತಿರುಗಿದ್ದರು. ''ಈಗಲೇ ನಾನು ಮನೆಗೆ ಬಂದು

ಇಳಿದುಕೊಂಡಿದ್ದೇನೆ, ಆದ್ದರಿಂದ ತಮ್ಮ ಉಪಚಾರದ ವಿಷಯಕ್ಕೆ ಯಾವದಾದರೂ ಕುಂದುಕೊರತೆಗಳಾದರೆ ಮನಸ್ಸಿಗೆ ಹಚ್ಚಿಕೊಳ್ಳಬಾರದು'' ಎಂದು ಹೇಳಿ ನನ್ನನ್ನು ನದಿಗೆ ಕರೆದುಕೊಂಡು ಹೋದರು. ಸ್ನಾನ, ಆಹ್ನಿಕ, ಊಟವೂ ಆದಬಳಿಕ ಊರಲ್ಲಿ ಅಡ್ಡಾಡಿ ತಮಗೆ ಪರಿಚಯವಿದ್ದವರನ್ನು ಚಂದಾದಾರರಾಗುವಂತೆ ಪ್ರೋತ್ಸಾಹಿಸಿದರು. ಇನ್ನೊಮ್ಮೆ ನಾನು ಬಂದಾಗ ಹಾಸನಕ್ಕೆ ತಮ್ಮ ಸ್ನೇಹಿತರಿಗೊಬ್ಬರಿಗೆ ಕಾಗದವನ್ನು ಬರೆದುಕೊಟ್ಟರು. ಅಲ್ಲಿ ಸೂರ್ಯನಾರಾಯಣಪ್ಪನವರು ಸಿಕ್ಕಿದ್ದರು. ಮುಂದೆ ರಜಾಕಾಲದಲ್ಲಿ ತಮ್ಮ ಮನೆಗೇ ಕರೆಯಿಸಿಕೊಂಡು ಕಠೋಪನಿಷತ್ತಿನ ಭಾಷ್ಯವನ್ನು ಅವರು ಓದಿದರು. ಆ ಸಂದರ್ಭದಲ್ಲಿ ಶ್ರೀನಿವಾಸಯ್ಯನವರ, ರಾಮಸ್ವಾಮಯ್ಯ-ನವರ ಪರಿಚಯವಾಯಿತು. ಆ ಕಾಲದಲ್ಲಿ ಮೇಲಿಂದಮೇಲೆ ಉಪನಿಷತ್ತುಗಳ ವಿಷಯದಲ್ಲಿ ತಮಗೆ ತೋರಿದ ಸಂಶಯಗಳಿಗೆ ಆಗಿಂದಾಗ್ಗೆ ನನಗೆ ಅವರು ಕಾಗದಗಳನ್ನು ಕೆಲವುವೇಳೆ ರಿಪ್ಲೈಕಾರ್ಡುಗಳನ್ನು ಬರೆದು ಉತ್ತರಗಳನ್ನು ತರಿಸಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಗೀತಾಭಾಷ್ಯವೂ, ಕಾಠಕೋಪನಿಷತ್ತೂ ಹೊರಕ್ಕೆ ಬರುವದಕ್ಕೂ ಪತ್ರಿಕೆಗೆ ಹಾಸನದ ಡಿಸ್ಟ್ರಿಕ್ಟಿನಲ್ಲಿ ಪ್ರಚಾರವಾಗುವದಕ್ಕೂ ಅವರು ಹೆಚ್ಚಿನ ಪ್ರಮಾಣದಲ್ಲಿ ಸಹಾಯಕರಾದರು. ಅವರು ಕಾರ್ಯಾಲಯದ ಅಭಿವೃದ್ಧಿಗೆ ಇನ್ನೂ ಹೇಗೆ ಹೇಗೆ ಮೂಲಸ್ತಂಭರಾದರೆಂಬುದನ್ನು ಮುಂದೆ ತಿಳಿಸುವೆನು.

## ಪತ್ರಿಕೆಯ ದ್ವಿತೀಯ ಪುನರುತ್ಥಾನ :

1931ನೆಯ ಸೆಪ್ಟೆಂಬರು ತಿಂಗಳಿನಲ್ಲಿ ಅಧ್ಯಾತ್ಮಪ್ರಕಾಶದ ಮೂರನೆಯ ಸಂಪುಟದ ಮೊದಲನೆಯ ಸಂಚಿಕೆಯು ಹೊರಕ್ಕೆ ಬಂತು. ಹಿಂದಿನ ಎರಡು ಸಂಚಿಕೆಗಳನ್ನು 'ಲಕ್ಷ್ಮೀನರಸಿಂಹ ಪ್ರೆಸ್' (ಹಿಂದಿನ ಸಿಟಿ ಪ್ರೆಸ್ಸಿನ ನಾಮಾಂತರವಿದು) ಅದರ ಮಾಲೀಕರಾದ ಶಿಂಗಲಾಚಾರರು ಅಚ್ಚುಮಾಡಿ ಕೊಟ್ಟಿದ್ದರು. ಕಾಲಕಾಲಕ್ಕೆ ನಾವು ಹಣವನ್ನು ಕೊಡಲಾರದೇ ಇದ್ದದ್ದರಿಂದಲೋ ಏನೋ ಪತ್ರಿಕೆಯು ಆಯಾ ತಾರೀಖಿಗೆ ಹೊರಡುವದು ಬಹಳ ಕಷ್ಟವಾಗಿತ್ತು. ನ್ಯೂಸ್ ಪೇಪರುಗಳಿಗೆ ಅನ್ವಯಿಸುವ ಸರಕಾರದ ನಿರ್ಬಂಧವು ಅಧ್ಯಾತ್ಮಪತ್ರಿಕೆಗಳಿಗೂ ತಪ್ಪಿರಲಿಲ್ಲವಾದ್ದರಿಂದ ವರ್ಷವರ್ಷಕ್ಕೆ ನವೆಂಬರು ತಿಂಗಳಲ್ಲಿ ಹೊಸದಾಗಿ ರಿಜಿಸ್ಟರುಮಾಡುವದಕ್ಕೆ ಅರ್ಜಿಹಾಕಿಕೊಳ್ಳಬೇಕಾಗುತ್ತಿತ್ತು. ಅದಕ್ಕೆ ಅನುಕೂಲಿಸುವಂತೆ ಪತ್ರಿಕೆಯನ್ನು ಸೆಪ್ಟೆಂಬರಿನಿಂದ ಆರಂಭಿಸಬೇಕೆಂದು ಮಾಡಿಕೊಂಡೆವು. ಆ ನಿಯಮವನ್ನೇ ಈವರೆಗೆ ಪಾಲಿಸಿಕೊಂಡು ಬರಲಾಗಿದೆ. ಪತ್ರಿಕೆಯ ವಾರ್ಷಿಕ ಮೌಲ್ಯವನ್ನು ಕಡಿಮೆಮಾಡಿದರೆ ಗ್ರಾಹಕರ ಸಂಖ್ಯೆ ಹೆಚ್ಚಬಹುದೆಂಬ ಆಶೆಯಿಂದ ವರ್ಷಕ್ಕೆ 2ರೂ

ಚಂದಾ ಇಡಲಾಯಿತು; ತತ್ತ್ವವಿಚಾರದ ಜೊತೆಗೆ ಧಾರ್ಮಿಕ, ಸಾಮಾಜಿಕ, ವಿದ್ಯಾಭ್ಯಾಸ – ಮುಂತಾದ ವಿಚಾರಗಳ ಬರವಣಿಗೆಗಳಿಗೂ ಅವಕಾಶವನ್ನು ಕಲ್ಪಿಸುವೆವೆಂದು ಪ್ರಕಟಿಸಲಾಯಿತು ; ಚಂದಾದಾರರಿಗೆ ಪುಸ್ತಕಗಳನ್ನು ತಗ್ಗಿಸಿದ ಬೆಲೆಗೆ ಕೊಡುವ ಪದ್ಧತಿಯು ಆಚರಣೆಗೆ ಬಂತು. ಗ್ರಾಹಕರಿಗೆ ವರ್ಷಾಂತ್ಯದಲ್ಲಿ ಒಂದೊಂದು ಪುಟ್ಟಗ್ರಂಥವನ್ನು ಕಾಣಿಕೆಯಾಗಿ ಕೊಡುವ ಸಂಕಲ್ಪವನ್ನು ಮಾಡಲಾಯಿತು. ಗ್ರಾಹಕರ ಸಂಖ್ಯೆ ಹೆಚ್ಚಲೆಂಬಿದೇ ಮುಖ್ಯಗುರಿ. ಆ ಗುರಿಯನ್ನು ಎಷ್ಟರಮಟ್ಟಿಗೆ ಮುಟ್ಟಲಾಯಿತೆಂಬುದು ಮುಂದೆ ವ್ಯಕ್ತವಾಗುವದು.

## ಕಾರ್ಯಾಲಯದ ರೂಪರೇಖೆಯು ಪ್ರಕಟಗೊಂಡದ್ದು:

ಮೂರನೆಯ ಸಂಪುಟದ ಒಂದನೆಯ ಸಂಚಿಕೆಯ ಕೊನೆಯಲ್ಲಿ ಅಧ್ಯಾತ್ಮ-ಪ್ರಕಾಶಕಾರ್ಯಾಲಯದ ಪರಿಚಯವನ್ನು ವಿವರಿಸುವದರಲ್ಲಿ ''ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನುಂಟು ಮಾಡುವದೇ'' ಮುಖ್ಯೋದ್ದೇಶವೆಂಬುದನ್ನು ಉಲ್ಲೇಖಿಸಿದೆ. ಅಧ್ಯಾತ್ಮವಿಚಾರದಲ್ಲಿ ಸಾಮಾನ್ಯರಿಗೂ ಸವಿಯುಂಟಾಗುವಂತೆ ಪ್ರಯತ್ನಿಸುವದು, ಮೂಢವಿಶ್ವಾಸಗಳನ್ನು ಕಿತ್ತುಹಾಕಿ ಆತ್ಮವಿಚಾರಕ್ಕೆ ಅನುಕೂಲವಾಗಿ ಒದಗುವಂಥ ಸಾಧನಗಳನ್ನು ಮಾಡಬೇಕೆನ್ನುವವರಿಗೆ ಸಹಾಯಮಾಡುವದು, ಅಧ್ಯಾತ್ಮವಿಚಾರದಲ್ಲಿ ತೊಡಗಿರುವವರಿಗೆ ಒಬ್ಬರೊಬ್ಬರ ಪರಿಚಯಕ್ಕೆ ಅವಕಾಶವನ್ನು ಕಲ್ಪಿಸುವದು, ವಿಚಾರಸಂಘಗಳನ್ನು ಏರ್ಪಡಿಸುವದಕ್ಕೆ ಸಹಾಯಮಾಡುವದು ಇವುಗಳನ್ನು ಸಹಕಾರಿಯಾದ ಉದ್ದೇಶಗಳೆಂದಿದೆ. ಗ್ರಂಥಪ್ರಕಟಣೆ, ಅಧ್ಯಾತ್ಮಪ್ರಕಾಶ-ಪತ್ರಿಕೆ ಈ ಎರಡನ್ನೇ ಆವರೆಗೆ ಮಾಡಿರುವ ಕೆಲಸವೆಂದಿದೆ. ನಿಜವಾಗಿ ನೋಡಿದರೆ ಬೆಳಗ್ಗೆಯ ಹೊತ್ತು ಭಾಷ್ಯ ಪ್ರವಚನವು ಆಗಲೇ ನಡೆದಿತ್ತು. ಭಜನೆಯ ಪದ್ಧತಿಯು ಆಚರಣೆಗೆ ಬಂದಿತ್ತು, ಅಲ್ಲಲ್ಲಿ ಉಪನ್ಯಾಸಗಳೂ ನಡೆದಿದ್ದವು. ವೇದಾಂತಪ್ರವೇಶಿಕೆ, ತತ್ತ್ವಸಮಾಸ, ಪಂಚೀಕರಣ, ಉಪದೇಶಸಾಹಸ್ರಿಗದ್ಯ, ಪದ್ಯದಭಾಗ, ನೈಷ್ಕರ್ಮ್ಯ-ಸಿದ್ಧಿ ಪ್ರಶ್ನೋಪನಿಷದ್ಭಾಷ್ಯ, ಅಪರೋಕ್ಷಾನುಭೂತಿ, ಅಲಾತಶಾಂತಿಪ್ರಕರಣ ಇವುಗಳನ್ನು ಆಗಲೇ ಬರೆದಾಗಿತ್ತು. ಭಗವದ್ಗೀತಾರ್ಥಸರ್ವಸ್ವದ ಕರಡು ಪ್ರತಿಯನ್ನು ಬರೆಯಲಾಗಿತ್ತು. ಶಂಕರಮಹಾಮನನವು ಈವರ್ಷದಲ್ಲಿ ಹೊರಕ್ಕೆ ಬಂದಿತು. ಸಂಸ್ಕೃತಈಶಾವಾಸ್ಯ ಸಟಿಪ್ಪಣಿಯು ಅಚ್ಚಿನಲ್ಲಿತ್ತು. ಉಪದೇಶಸಾಹಸ್ರಿಗದ್ಯವೂ, ಭಗವದ್ಗೀತಾಭಾಷ್ಯವು (2ನೆಯ ಭಾಗವು) ಅಚ್ಚಿನಲ್ಲಿದ್ದವು. ಶ್ರೀಯುತ ಅಡ್ವೊಕೇಟ್ ನಾಗೇಶ್ವರಯ್ಯರ್, ಶ್ರೀನಿವಾಸಯ್ಯನವರು, ಒಬ್ಬ ಮಹನೀಯರು (ಕಠೋಪನಿಷತ್ತಿಗೆ ಸಹಾಯಕೊಟ್ಟವರು) ದೇವರಾಜಬಹದ್ದೂರ್ ಧರ್ಮ-

ಸಹಾಯದ ಸಂಘ, ಗರಡಿ ರಾಚಪ್ಪನವರು - ಇವರನ್ನು ಆಶ್ರಯದಾತರೆಂದು ಕರೆದಿದೆ. ಡಿ.ಸಿ.ನಂಜಪ್ಪಭಾಗವತರು, ಆರ್. ರಾಮಸ್ವಾಮಯ್ಯನವರು – ಇವರನ್ನು ಪೋಷಕರೆಂದಿದೆ.

**ಶಂಕರಸಪ್ತಾಹ :**

ಕಾರ್ಯಾಲಯದಲ್ಲಿ ಭಾಷ್ಯಪ್ರವಚನ, ಗ್ರಂಥಪ್ರಕಟನೆ, ಉಪನ್ಯಾಸಗಳು ಇವುಗಳಲ್ಲದೆ ಬೇರೊಂದು ದಿಕ್ಕಿನಲ್ಲಿಯೂ ಆಗಲೇ ಮುಂದಡಿಯಿಟ್ಟಿತ್ತು. ಅದನ್ನು ಅವಶ್ಯವಾಗಿ ಇಲ್ಲಿ ಉಲ್ಲೇಖಿಸಬೇಕಾಗಿದೆ. ಬೆಂಗಳೂರಿನಲ್ಲಿ ಶಂಕರಮಠದಲ್ಲಿ ಕೆಲವು ವರ್ಷಗಳಿಂದಲೂ ಶಂಕರ ಜಯಂತಿಯ ಉತ್ಸವವು ಪ್ರತಿ ವೈಶಾಖ ಶುದ್ಧ 1 ರಿಂದ 5 ರವರಗೆ ನಡೆದಿತ್ತು. ಅದರಲ್ಲಿ ಬೆಳಗ್ಗೆ ಭಾಷ್ಯಪಾರಾಯಣ, ಆಚಾರ್ಯರಿಗೆ ಅಭಿಷೇಕ, ಪೂಜೆ, ಬ್ರಾಹ್ಮಣಭೋಜನ ಇವುಗಳೆ ಅಲ್ಲದೆ, ಆಗಾಗ್ಗೆ ದೂರಪ್ರದೇಶಗಳಿಂದ ವಿದ್ವಾಂಸರನ್ನು ಕರೆಯಿಸಿ ಸಾಯಂಕಾಲದಲ್ಲಿ ಉಪನ್ಯಾಸಗಳನ್ನು ಮಾಡಿಸುತ್ತಿದ್ದರು ; ಸಾಯಂಕಾಲದ ಕಾರ್ಯಕ್ರಮದಲ್ಲಿ ಭಾರತವಾಚನ, ಸಂಗೀತ, ಹರಿಕಥೆ - ಮುಂತಾದವುಗಳು ಇದ್ದವು. ನಾನು ಒಂದೆರಡು ಸಂದರ್ಭಗಳಲ್ಲಿ ಅಲ್ಲಿ ಉಪನ್ಯಾಸ ಮಾಡಿದ್ದೆನು. ಶಂಕರರ ಸ್ಮರಣೆಗೆ ಬರಿಯ ಪೂಜಾದಿಕರ್ಮಗಳೇ ಆಗಲಿ, ಪಾನಕಪನಿವಾರ, ಭೋಜನ ಮುಂತಾದವುಗಳಾಗಲಿ ಸಾಲದು, ಮುಖ್ಯವಾಗಿ ವೇದಾಂತೋಪನ್ಯಾಸಗಳಿಗೂ, ಭಾಷ್ಯಪ್ರವಚನಕ್ಕೂ, ಅವಕಾಶವನ್ನು ಕಲ್ಪಿಸಬೇಕು ಎಂದು, ನಾನು ಅಧ್ಯಕ್ಷರಾಗಿದ್ದ ದಿ||ಸರ್ಕಲ್ ಇನ್‌ಸ್ಪೆಕ್ಟರ್ ವೆಂಕಟರಾಮಯ್ಯನವರಿಗೆ ನಾನು ಸೂಚಿಸಿದೆನು. ಅವರಿಗೆ ಅದು ಅಷ್ಟು ಒಪ್ಪಾಗಲಿಲ್ಲ. 'ವೇದಾಂತದಲ್ಲಿ ನನಗೂ ನಿಮಗೂ ಪ್ರೀತಿ ಇರಬಹುದು ; ಆದರೆ ಜನಸಾಮಾನ್ಯಕ್ಕೆ ಎಂದಿಗೂ ಆಗಲಾರದು' ಎಂದು ಬಿಟ್ಟರು. ಒಂದೆರಡು ವರ್ಷಗಳು ಮತ್ತೆಮತ್ತೆ ನಾನು ಸಲಹೆ ಕೊಟ್ಟಮೇಲೂ ಅದು ಯಾರಿಗೂ ಸೊಗಸಿದಂತೆ ಕಾಣಲಿಲ್ಲ. ಆದ್ದರಿಂದ ವಿಠ್ಠಲಶಾಸ್ತ್ರಿಗಳು, ವೆಂಕಟೇಶಶಾಸ್ತ್ರಿಗಳು ಇಬ್ಬರನ್ನು ಕರೆಯಿಸಿಕೊಂಡು, ನಾವೇ ಸ್ವತಂತ್ರವಾಗಿ ಈ ಬಗೆಯ ಶಂಕರೋತ್ಸವವನ್ನೇಕೆ ಮಾಡಬಾರದು- ಎಂಬ ವಿಷಯಕ್ಕೆ ಆಲೋಚನೆ ಮಾಡಿದೆ. ಸೂಚನೆಯನ್ನು ಇಬ್ಬರೂ ಅನುಮೋದಿಸಿದರು. ವಿಠ್ಠಲಶಾಸ್ತ್ರಿಗಳು 'ನಾವು ಪ್ರವಚನ ಮಾಡಿದ ಮೇಲೆ ನೀವು ಸ್ವಲ್ಪಹೊತ್ತು ಅನುವಾದ ಮಾಡಬೇಕು; ಆದರಿಂದ ಬಂದ ಜನರಿಗೆ ವಿಷಯವು ಸಂಗ್ರಹವಾಗಿ ತಿಳಿದೀತಲ್ಲದೆ ನಮಗೂ ತಿದ್ದಿಕೊಳ್ಳುವುದಕ್ಕೆ ಏನಾದರೂ ಸೂಚನೆಗಳು ಸಿಕ್ಕಾವು' ಎಂದರು. ನಾನು ಅದಕ್ಕೆ ಒಪ್ಪಿದೆ. ಹೀಗೆ ಮೂರು ಜನರು ಒಮ್ಮತಕ್ಕೆ ಬಂದು ಪ್ರಜೋತ್ಪತ್ತಿಸಂವತ್ಸರದ ವೈಶಾಖದಿಂದ ರಾಮೇಶ್ವರ

ದೇವಸ್ಥಾನಕ್ಕೆ ಸೇರಿದ್ದ ಕಟ್ಟಡದಲ್ಲಿ ಮೊದಲನೆಯ ಉತ್ಸವವಾಗಬೇಕೆಂದು ನಿಶ್ಚಯಿಸಿದೆವು. ಅದರಂತೆ ಒಂದು ಪ್ರಕಟಣೆಯನ್ನು ಅಚ್ಚು ಮಾಡಿಸಿ ಮಹಾಜನರಲ್ಲಿ ಹಂಚಿದೆವು.

ಉತ್ಸವವನ್ನು ಮೊದಲುಮಾಡಿದಾಗ ಅನೇಕರು ನಮ್ಮ ಸೂಚನೆಗೆ ಬೆರಗಾದರು. ಏಕೆಂದರೆ ನಾವು ಯಾರಿಂದಲೂ ಯಾವ ದ್ರವ್ಯಸಹಾಯವನ್ನು ಕೇಳಿರಲಿಲ್ಲ; ಡಬ್ಬಿಗಡಿಗೆಯಲ್ಲಿ ತಮಗೆ ತೋಚಿದ ಸಹಾಯ ಧನವನ್ನು ಮಹಾಶಯರು ಹಾಕಬಹುದೆಂದು ಪ್ರಕಟಿಸಿದ್ದೆವು. ಬೆಳಿಗ್ಗೆ ಭಾಷ್ಯ, ಮಧ್ಯಾಹ್ನ ಪುರಾಣ, ಸಾಯಂಕಾಲಕ್ಕೆ ಉಪನ್ಯಾಸ ಅಥವಾ ಕೀರ್ತನೆ ಹೀಗೆ ವಿಷಯಗಳನ್ನಿಟ್ಟುಕೊಂಡಿದ್ದೆವು. ಇಷ್ಟು ಭರ್ತಿಯ ಕಾರ್ಯಕ್ರಮವನ್ನು ಹೇಗೆ ನಡೆಸುವದು, ಜನರು ಇದರಲ್ಲಿ ಎಷ್ಟರಮಟ್ಟಿಗೆ ಆದರವನ್ನು ತೋರಿಸುವರೋ ನೋಡಬೇಕೆಂದು ನಮಗೆ ಕಟ್ಟಡವನ್ನು ಉಪಯೋಗಕ್ಕೆ ದಯಮಾಡಿ ಬಿಟ್ಟುಕೊಟ್ಟಿದ್ದ ದಿ॥ಇ॥ಜ॥ಶ್ಯಾಮರಾಯರು ಸ॥ಇ॥ವೆಂಕಟರಾಮಯ್ಯನವರು ಬೆಳಿಗ್ಗೆ ಬಂದು ನೋಡಿಕೊಂಡು ಹೋದರು. ಆಗ ಅಧ್ಯಾಸಭಾಷ್ಯವು ನಡೆದಿದ್ದು ಸುಮಾರು 10-15 ಜನರು ಬಂದಿದ್ದರು. ನಾವೇ ಮನೆಯಿಂದ ಒಂದು ಶಂಕರರ ಪಟವನ್ನು ತಂದು ಇಟ್ಟು ಹೂವಿನಹಾರವನ್ನು ಹಾಕಿ, ಪೂಜೆ ಮಾಡಿ ಪ್ರಾರಂಭಿಸಿದ್ದೆವು. ಮಧ್ಯಾಹ್ನ ಪುರಾಣವಾದಬಳಿಕ ಸಾಯಂಕಾಲಕ್ಕೆ ಉಪನ್ಯಾಸದ ಮತ್ತು ಹರಿಕಥೆಗಳ ಕಾಲಕ್ಕಂತೂ ಜನರು ಬೇಕಾದಹಾಗೆ ಕಿಕ್ಕಿರಿದು ಹೋದರು. ಮಾರನೆಯ ದಿನದಿಂದ ಬೆಳಿಗ್ಗೆ ಮಧ್ಯಾಹ್ನ ಸಾಯಂಕಾಲ-ಮೂರೂ ಹೊತ್ತು ಜನರು ಉತ್ಸಾಹದಿಂದ ಬರುತ್ತಿದ್ದರು.

ಉತ್ಸವವನ್ನು ಶಂಕರಜಯಂತಿಯಿಂದ ಹಿಡಿದು (ವೈ.ಶು.5ರಿಂದ) ಶಂಕರಾರಾಧನೆಯನ್ನು (ವೈ.ಶು.12ರವರೆಗೂ) ಮಾಡಿ ಅದಕ್ಕೆ ಶಂಕರಸಪ್ತಾಹವೆಂಬ ಹೆಸರನ್ನಿಟ್ಟುಕೊಂಡೆವು. ತಿಥಿಗಳ ವೃದ್ಧಿಕ್ಷಯದಿಂದ ಒಂದೊಂದು ಸಲ ಒಂದೊಂದು ದಿನ ಹೆಚ್ಚೋ ಅಥವಾ ಕಡಿಮೆಯಾಗುತ್ತಿದ್ದರೂ ಅದಕ್ಕೆ ಸಪ್ತಾಹವೆಂಬ ಹೆಸರೇ ಇರುತ್ತಿದೆ. ಆ ಉತ್ಸವವು ಇಂದಿನವರೆಗೆ ತಪ್ಪದೇ ನಡೆದಿದೆ. ಕಾರ್ಯಾಲಯದ ಅವಿನಾಭಾವಿಯಾದ ಅಂಗವಾಗಿಬಿಟ್ಟಿದೆ. ಈವರೆಗಿನ ಶಂಕರಸಪ್ತಾಹಗಳ ಪಟ್ಟಿಯನ್ನು ಬೇರೊಂದು ಕಡೆಯಲ್ಲಿ ಕೊಡಲಾಗಿದೆ. ಯಾವುದಾದರೂ ಉತ್ಸವಗಳಲ್ಲಿ ವಿಶೇಷಗಳು ಏನಾದರು ಇದ್ದರೆ, ಅವನ್ನು ಮುಂದೆ ತಿಳಿಸುತ್ತಾ ಹೋಗುವೆನು.

## ಗರಡಿ ರಾಚಪ್ಪನವರು :

ಇವರು ಕೃಷ್ಣಸ್ವಾಮಿಅಯ್ಯರ್‌ರವರು ತುಮಕೂರಿಗೆ ಹೊರಟಂದಿನಿಂದ ನನ್ನ ಬಳಿಗೆ ಆಗಾಗ್ಗೆ ಬಂದು ವಿಚಾರ ಮಾಡುತ್ತಲೇ ಇದ್ದರು. ಮುಖ್ಯವಾಗಿ ಉಪದೇಶಸಾಹಸ್ರಿಯ ಗದ್ಯಪದ್ಯಪ್ರಬಂಧಗಳನ್ನು ಆದ್ಯಂತವಾಗಿ ತಿಳಿದುಕೊಂಡು ಅನುವಾದವನ್ನು ಬರೆದದ್ದಲ್ಲದೆ, ಅದರ ಪ್ರಕಟನೆಗೂ ಅವರೇ ಕಾರಣರಾದರು.

ಅವರ ಜೀವನಚರಿತ್ರೆಯೂ ಶ್ರವಣೀಯವೇ ಆಗಿರುವದರಿಂದ ಅದನ್ನು ಬಹು ಸಂಕ್ಷೇಪವಾಗಿ ಇಲ್ಲಿ ಕೊಟ್ಟಿರುತ್ತದೆ. ಇವರು ಮುದ್ದುರಾಚಪ್ಪ (ಅಥವಾ ಪುಟ್ಟಶಾಮಪ್ಪ) ಎಂಬವರ ಮೂರನೆಯ ಭಾರ್ಯೆಯಲ್ಲಿ ಜನಿಸಿದ, ಒಂಬತ್ತುಜನ ಮಕ್ಕಳಲ್ಲಿ ಕೊನೆಯವರು. ತಂದೆತಾಯಿಗಳೂ, ಅಣ್ಣಂದಿರೂ, ಅಕ್ಕಂದಿರೂ, ಎಲ್ಲರೂ ಅಧ್ಯಾತ್ಮವಿಷಯದಲ್ಲಿ ಆದರವುಳ್ಳವರು. ಶಿವಪೂಜೆಯಲ್ಲಿ ಶ್ರದ್ಧೆ, ಶಿವಶರಣರಲ್ಲಿ ಭಕ್ತಿ, ತೀರ್ಥಯಾತ್ರೆಯಲ್ಲಿ ಆದರ-ಇವುಗಳು ಸ್ವಲ್ಪಹೆಚ್ಚುಕಡಿಮೆ ಎಲ್ಲರ ಜೀವನದಲ್ಲಿಯೂ ವ್ಯಕ್ತವಾಗಿರುತ್ತದೆ. ರುದ್ರಪ್ಪನೆಂಬ ಇವರ ಅಣ್ಣಂದಿರು ಇಂಗ್ಲೆಂಡಿಗೆ ಹೋಗಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಬೊಂಬಾಯಿಯಲ್ಲಿ ಹೈಕೋರ್ಟು ವಕೀಲರಾಗಿದ್ದು ನಮ್ಮ ದೇಶದಲ್ಲಿ ಡೆಪ್ಯುಟಿಕಮಿಷನರ್ ಪದವಿಯವರೆಗೂ ಏರಿ ನಿವೃತ್ತರಾದರು; ಕೆಲಸವನ್ನು ನ್ಯಾಯಪಕ್ಷಪಾತಿಗಳಾಗಿ ನಿಃಸ್ಪೃಹತೆಯಿಂದ ನೆರವೇರಿಸಿದವರೆಂದು ಪ್ರಖ್ಯಾತರಾದವರು.

ನಮ್ಮ ರಾಚಪ್ಪನವರು ಬಾಲ್ಯದಿಂದಲೂ ಒಬ್ಬರಲ್ಲ ಒಬ್ಬರು ಸಾಧುಗಳ ಸಂಗದ ಲಾಭವನ್ನು ಪಡೆದವರು. ಬೊಂಬಾಯಿಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಓದುತ್ತಿರುವಾಗ ಆನಿಬೆಸೆಂಟರವರ ಗ್ರಂಥವೊಂದರಲ್ಲಿ ಹಿಂದೂದೇಶದ ಆಧ್ಯಾತ್ಮಿಕ ಸಂಪತ್ತನ್ನು ಬಹಳವಾಗಿ ಹೊಗಳಿದ್ದನ್ನು ಕಂಡು ಧರ್ಮವಿಚಾರದತ್ತ ಇವರ ಮನಸ್ಸು ತಿರುಗಿತು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ತರಗತಿಯಲ್ಲಿ ಓದುತ್ತಿದ್ದಾಗ ಸ್ವಾಮಿವಿವೇಕಾನಂದರ ಫೋಟೋಗಳನ್ನು ಯಾರೋ ಮಾರಾಟಕ್ಕೆ ತಂದರಂತೆ; ಒಂದು ಚಿತ್ರವನ್ನು ಕೊಂಡು ಮನೆಯಲ್ಲಿ ಕಾಣುವಂಥ ಸ್ಥಲದಲ್ಲಿ ಅದನ್ನು ನೇತುಹಾಕಿ ಅವರ ಜೀವನವನ್ನು ಧ್ಯೇಯವಾಗಿ ಮಾಡಿಕೊಂಡು ಅವರ ಜೀವನಚರಿತ್ರೆಯನ್ನೂ ಸರ್ವಗ್ರಂಥಗಳನ್ನೂ ಕೊಂಡು ಓದಿದರು. ಬಸವನಗುಡಿಯಲ್ಲಿರುವ ರಾಮಕೃಷ್ಣಮಠಕ್ಕೆ ನಿತ್ಯವೂ ಹೋಗುತ್ತಿದ್ದು ಕೆಲವು ಕಾಲವಾದ ಮೇಲೆ ಅಲ್ಲಿದ್ದ ಸ್ವಾಮಿಯತೀಶ್ವರಾನಂದರ ಪ್ರೋತ್ಸಾಹದಿಂದ (27-5-1918ರಲ್ಲಿ) ಮದ್ರಾಸಿಗೆ ಹೋಗಿ ಮೈಲಾಪುರದ ರಾಮಕೃಷ್ಣಾನಂದ ಮಠಕ್ಕೆ ಸೇರಿಕೊಂಡುಬಿಟ್ಟರು.

ಮನೆಯವರಿಗೆ ಈ ವಿಷಯವು ತಿಳಿಯಿತು. ಇವರ ಅಣ್ಣನವರಾದ ಸಿದ್ಧವೀರಪ್ಪನವರು ಬಂದು ಮನೆಗೆ ಹಿಂತಿರುಗುವಂತೆ ಎಷ್ಟು ಬಗೆಯಿಂದ ಇವರನ್ನು ಪ್ರೋತ್ಸಾಹಿಸಿದರೂ ಇವರು ಒಡಂಬಡಲಿಲ್ಲ. ಇವರು ನಿಜವಾಗಿಯೂ ವಿರಕ್ತಿ ಮಾರ್ಗದಲ್ಲಿದ್ದಾರೆಂಬುದನ್ನು ತಿಳಿದು ಸಿದ್ಧವೀರಪ್ಪನವರು 'ಈ ಮಠದಲ್ಲಿ ಊಟ ಉಪಚಾರಗಳಿಗೆ ಯಾವ ಕೊರತೆಯೂ ಇಲ್ಲ ; ಇಲ್ಲಿ ಕಾಯಕ್ಲೇಶದ ತಪಸ್ಸು ದೊರೆಯಲಾರದು. ನಮ್ಮ ಮನೆಗೆ ಬರುತ್ತಿದ್ದ ಜಂಗಮರೊಬ್ಬರು ಮುಕ್ತಿಗಿರಿಯಲ್ಲಿ ತಪಸ್ಸುಮಾಡಿಕೊಂಡಿರುತ್ತಾರೆ. ಅವರ ಸಂಗದಲ್ಲಿ ಕೆಲವು ದಿನಗಳು ಇರುವುದು ಒಳ್ಳೆಯದಲ್ಲವೇ ?' ಎಂದು ಸೂಚಿಸಿದರು. ಅದಕ್ಕೆ ಒಪ್ಪಿ ರಾಚಪ್ಪನವರು ಕೋಲಾರ ಜಿಲ್ಲೆಯ ಚಿಂತಾಮಣಿತಾಲ್ಲೂಕಿಗೆ ಸೇರಿದ ಮುರುಗಮಲೆಯ ಹತ್ತಿರವಿರುವ ಮುಕ್ತಿಗಿರಿಗೆ (ಭರದ್ವಾಜಾಶ್ರಮಕ್ಕೆ) ಹೋದರು. ಹಿಂಸ್ರಪ್ರಾಣಿಗಳಿಂದ ನಿಬಿಡವಾಗಿದ್ದ ಪ್ರದೇಶದಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳೆಂಬವರು ಏಕಾಂತವಾಸದಲ್ಲಿದ್ದರು. ಇವರೇ ಸಿದ್ಧವೀರಪ್ಪನವರು ಹೇಳಿದ ತಪಸ್ವಿಗಳು.

ವಿರಕ್ತರೂ ವಿಚಾರಪರರೂ ಆಗಿದ್ದ ಸ್ವಾಮಿಗಳವರಲ್ಲಿ ಕೆಲವು ತಿಂಗಳುಗಳವರೆಗೆ ಇದ್ದು ರಾಚಪ್ಪನವರು ವಿಚಾರಚಂದ್ರೋದಯ, ವಿಚಾರಸಾಗರ - ಇವುಗಳನ್ನು ಓದಿದರು. ಆ ಕಾಲದಲ್ಲಿ ಸ್ವಾಮಿಗಳು ಬೆಟ್ಟದ ಕೆಳಗೆ ಮಠದಲ್ಲಿಯೇ ಇರುತ್ತಿದ್ದರು. ಇವರು ಮಾತ್ರ ಬೆಟ್ಟದ ಮಧ್ಯಭಾಗದಲ್ಲಿರುವ ಮುಕ್ತೇಶ್ವರ ದೇವಾಲಯದಲ್ಲಿಯೇ ಹೆಚ್ಚಾಗಿರುತ್ತಿದ್ದರು. ಇನ್ಫ್ಲುಯೆಂಜ ರೋಗವು ದೇಶದಲ್ಲಿ ಹರಡಿದಾಗ ಇವರು ಬೇನೆಬಿದ್ದರು. ಮನೆಯವರಿಗೆ ಇದು ತಿಳಿದು ಬಂತು. ಇವರ ತಾಯಿಯೂ ಸಿದ್ಧವೀರಣ್ಣನವರೂ ಉಪಚರಿಸಿದರು. ಸ್ವಾಮಿಗಳು ಇಷ್ಟರಲ್ಲಿಯೇ ಅಸ್ವಸ್ಥರಾಗಿ ಚೇತರಿಸಿಕೊಳ್ಳುವುದಕ್ಕಾಗಿ ಬೆಂಗಳೂರಿಗೆ ಹೊರಟುಹೋದದ್ದರಿಂದ ರಾಚಪ್ಪನವರು ಚಿಕ್ಕಬಳ್ಳಾಪುರಕ್ಕೆ ಹೋದರು. ಅಲ್ಲಿ ಒಬ್ಬ ಯೋಗೀಶ್ವರರ ದರ್ಶನ ಮಾಡಿದರು ; ಹಿಂದೀ ವಿಚಾರಸಾಗರವನ್ನು ಸ್ವಲ್ಪ ಓದಿದರು. ಅಲ್ಲಿ ಉಪದೇಶಸಾಹಸ್ರಿಯೆಂಬುದು ಒಂದು ಉತ್ಕೃಷ್ಟಗ್ರಂಥವೆಂಬುದು ಇವರ ಕಿವಿಗೆ ಬಿತ್ತು. ಶಿವರಾತ್ರಿಯ ಹೊತ್ತಿಗೆ ಶ್ರೀ ಸಿದ್ಧಾರೂಢರ ರಥೋತ್ಸವ ಕಾಲಕ್ಕೆ ಹುಬ್ಬಳ್ಳಿಗೆ ಹೋದರು. ಜಾತ್ರೆ ಮುಗಿದ ಬಳಿಕ ಕೆಲವು ತಿಂಗಳು ಮಠದಲ್ಲಿದ್ದು ನಿಜಗುಣರ ಕೈವಲ್ಯಪದ್ಧತಿ, ಅನುಭವಸಾರ, ಪರಮಾನುಭವಬೋಧೇ ಮತ್ತು ವಿದ್ಯಾರಣ್ಯರ ಪಂಚದಶೀ ಇವುಗಳನ್ನು ಓದಿದರು. ಆಗ್ಗೆ ಅಲ್ಲಿ ಶಿವಪುರಸ್ವಾಮಿಗಳು, ಶ್ರೀ ಸಿದ್ಧರಾಮಸ್ವಾಮಿ ಸೇಡುಬ, ಶ್ರೀ ಕಬೀರಸ್ವಾಮಿ - ಇವರುಗಳ ಪರಿಚಯವಾಯ್ತು. ಹುಬ್ಬಳ್ಳಿಯಲ್ಲಿದ್ದಾಗ ಕಾವಿಬಟ್ಟೆಯನ್ನು ಧರಿಸುವಂತೆ ಕೆಲವರು ಒತ್ತಾಯ

ಮಾಡಿದರು ; ಅದಕ್ಕೆ ಒಪ್ಪಲಿಲ್ಲ. ಆದರೆ ಇವರು ಸ್ನಾನಮಾಡಿ ಬಟ್ಟೆ ಒಗೆಯುತ್ತಿದ್ದ ಕೆರೆಯ ನೀರು ಕೆಂಪಾಗಿದ್ದದ್ದರಿಂದ ಇವರ ಬಟ್ಟೆಯ ತುಂಡುಗಳೆರಡೂ ಕ್ರಮಕ್ರಮವಾಗಿ ಕಾವಿಬಣ್ಣಕ್ಕೆ ತಿರುಗಿದವು. ಅವು ಇವರ ಮೈಮೇಲೆ ಬಹುಕಾಲವಿದ್ದದ್ದರಿಂದ ಆಗ ಇವರನ್ನು ನೋಡಿದ್ದ ಅಥವಾ ಆ ವಿಷಯವನ್ನು ಕೇಳಿದ್ದ ಕೆಲವರು ಇವರು ಸಂನ್ಯಾಸಾಶ್ರಮವನ್ನೇ ವಿಧಿವತ್ತಾಗಿ ಸ್ವೀಕರಿಸಿ, ಈಚೆಗೆ ಆರೂಢಪತಿತರಾಗಿ ಗೃಹಸ್ಥರಾದರೆಂದು ಭ್ರಾಂತರಾಗಿರುವರು.

ಹುಬ್ಬಳ್ಳಿಯಿಂದ ಗೋಕರ್ಣಕ್ಕೆ ಹೋಗಿಬಂದರು. ಬಳ್ಳಾರಿ, ಆದೋನಿ- ಇವುಗಳಲ್ಲಿ ನಿರ್ವಾಣರಾಗಿಯೇ ಇರುತ್ತಿದ್ದ ಒಬ್ಬರು ಸ್ವಾಮಿಗಳನ್ನು ನೋಡಿಕೊಂಡು, ಚಳ್ಳಗುರಿಕೆಎದ್ರಿಸ್ವಾಮಿಗಳನ್ನು ದರ್ಶನಮಾಡಿದರು. ಅಥಣಿ ಶಿವಯೋಗಿಗಳ ಗಚ್ಚಿನಮಠ, ಹಾನಗಲ್ಲು ಸ್ವಾಮಿಗಳ ಶಿವಯೋಗಮಂದಿರ, ಬನಶಂಕರಿ, ಪಂಢರಾಪುರ - ಈ ಮಾರ್ಗವಾಗಿ ಬೊಂಬಾಯಿಗೆ ಹೋದರು. ಅಲ್ಲಿ ಮಹಾತ್ಮಾಗಾಂಧಿಯವರನ್ನು ಕಂಡಾಗ 'ನೀವು ಮುಕ್ತಿಗಾಗಿ ಕಾಲಕಳೆಯಬೇಡಿರಿ ; ಸುಮ್ಮನೆ ಮನೆಗೆ ಹೋಗಿ ನಮ್ಮ ಹಕ್ಕುಗಳ ಚಿಂತೆಯನ್ನು ಬಿಟ್ಟು, ನೆರೆಹೊರೆಯವರ ಸೇವೆಯನ್ನು ಮಾಡಿರಿ' ಎಂದು ತಿಳಿಯ ಹೇಳಿದರಂತೆ. ಅಲ್ಲಿಂದ ನಾಸಿಕ, ಮಥುರೆ, ವೃಂದಾವನ, ಹರಿದ್ವಾರ, ಆರ್ಯಸಮಾಜದ ಗುರುಕುಲ ಇವುಗಳನ್ನು ನೋಡಿದರು. ಸ್ವಾಮಿರಾಮತೀರ್ಥಾಶ್ರಮದಲ್ಲಿ ಅವರ ಗ್ರಂಥಗಳನ್ನು ಓದಿದರು. ಸ್ವರ್ಗಾಶ್ರಮ, ಕೈಲಾಸಾಶ್ರಮಗಳಲ್ಲಿ ಎರಡು ದಿನವಿದ್ದರು. ಅಲ್ಲಿಂದ ಕಾಶಿಗೆ ಹೋಗಿ ಜಂಗಮವಾಡಿಮಠ, ತಿಲಭಾಂಡೇಶ್ವರ, ರಾಮಕೃಷ್ಣಾಶ್ರಮ ಇವುಗಳಲ್ಲಿ ಕೆಲವು ದಿನವಿದ್ದು ಕಲ್ಕತ್ತ, ಶ್ರೀ ರಾಮಕೃಷ್ಣಪರಮಹಂಸರಿದ್ದ ದಕ್ಷಿಣೇಶ್ವರ, ವಿವೇಕಾನಂದರು ಸ್ಥಾಪಿಸಿದ್ದ ಬೇಲೂರುಮಠ - ಇವುಗಳಲ್ಲಿ ಸ್ವಲ್ಪಕಾಲವಿದ್ದು, ಪುರಿ (ಜಗನ್ನಾಥ), ಭುವನೇಶ್ವರೀ, ಕಂಚಿ, ಕುಂಭಕೋಣ, ತಂಜಾವೂರು, ತಿರುವಣ್ಣಾ ಮಲೈ, ಪಳನಿ, ಶ್ರೀರಂಗ, ಪಕ್ಷಿತೀರ್ಥ, ಮಧುರೈ, ಕುಂದ್ರಕುಡಿ, ಕೊವಿಲೂರಾಶ್ರಮ, ನವಪಾಶಾಣಾ, ಉತ್ತರಕಾಶಿ, ದರ್ಭಶಯನ, ರಾಮೇಶ್ವರ, ಧನುಷ್ಕೋಟಿ - ಇವುಗಳ ಯಾತ್ರೆಯನ್ನು ಮುಗಿಸಿಕೊಂಡು ಮದರಾಸಿನ ರಾಮಕೃಷ್ಣಾಶ್ರಮಕ್ಕೆ ಬಂದರು. ಅಲ್ಲಿ ಅವರು ಮಲೇರಿಯಾ ಜ್ವರದಿಂದ ನರಳುತ್ತಿರಲು ಆಶ್ರಮದವರು ಸಿದ್ಧವೀರಪ್ಪನವರಿಗೆ ತಂತಿಕೊಟ್ಟರು. 25-9-1919ರಲ್ಲಿ ಮನೆಗೆ ಕರೆತಂದರು.

ಜ್ವರದಿಂದ ಗುಣಹೊಂದುವದಕ್ಕೆ ಎರಡುಮೂರು ತಿಂಗಳು ಬೇಕಾಯಿತು. ಬೆಂಗಳೂರಿನ ಸಹಜಾನಂದ ಸ್ವಾಮಿಗಳ ವಾರ್ಷಿಕಾರಾಧನೆಯ ಸಂದರ್ಭದಲ್ಲಿ ಅವರ ಶಿಷ್ಯರಾದ ಮೈಸೂರಿನ ಚಿಕ್ಕಲಿಂಗಣ್ಣನವರು ಪಂಚದಶಿಯನ್ನು ಶ್ರವಣ

ಮಾಡಿಸುತ್ತಿದ್ದರು. ಆ ಮಠದ ಟ್ರಸ್ಟಿಗಳಲ್ಲಿ ಒಬ್ಬರಾದ ರಾಚಪ್ಪನವರ ಚಿಕ್ಕಪ್ಪ ಯಜಮಾನಗರಡಿಚಿಕ್ಕವೀರಪ್ಪನವರೂ, ದೊಡ್ಡಣ್ಣನವರೂ, ಇವರನ್ನು ಅಲ್ಲಿಗೆ ಒಂದು ದಿನ ಕರೆದುಕೊಂಡು ಹೋದರು. ಲಿಂಗಣ್ಣನವರ ವಿಚಾರಶೈಲಿ ಇವರನ್ನು ಆಕರ್ಷಿಸಿತು. ಅವರ ಜೊತೆಯಲ್ಲಿ ಬೆಣ್ಣೆಸಿದ್ದಣ್ಣನವರೂ ಬಂದಿದ್ದರು; ಅವರಿಗೆ ನಿಜಗುಣರ ಪರಮಾನುಭವದ ಬೋಧೆ ಸಮಗ್ರವಾಗಿ ಕಂಠಪಾಠವಾಗಿತ್ತು. ಆ ಪದ್ಯಗಳ ಮೂಲಕವಾಗಿಯೇ ಅವರು ಸ್ವಾರಸ್ಯವಾಗಿ ವೇದಾಂತದ ವಿಚಾರವನ್ನು ಮಾಡುತ್ತಿದ್ದರು. ಅವರಿದ್ದ ಆರೇಳುದಿನಗಳೂ ರಾಚಪ್ಪನವರು ಅಲ್ಲಿಗೆ ಹೋಗುತ್ತಲೇ ಇದ್ದರು. ಬಳಿಕ ಅವರ ಜೊತೆಯಲ್ಲಿ ಮೈಸೂರಿಗೆ ಹೋದರು; ಹಿರೋಡೆ ಬೆಟ್ಟದಲ್ಲಿ ಒಂದು ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿ ಪ್ರತಿಷ್ಠಾಮಹೋತ್ಸವಕ್ಕೆ ಲಿಂಗಣ್ಣನವರನ್ನು ಶಂಕರಾನಂದರು ಆಹ್ವಾನಿಸಿದರು. ಅವರ ಜೊತೆಯಲ್ಲಿ ರಾಚಪ್ಪನವರೂ ಹೋದರು. ಆ ಬೆಟ್ಟದ ಮೇಲಿದ್ದಾಗ ಮಧ್ಯಾಹ್ನ ಕಾಲಕಳೆಯುವದಕ್ಕಾಗಿ ಲಿಂಗಣ್ಣನವರು ಕೈಗೆ ಸಿಕ್ಕಿದ್ದ ಒಂದು ಸಣ್ಣ ಪುಸ್ತಕವನ್ನು ರಾಚಪ್ಪನವರಿಂದ ಓದಿಸಿದರು. ಅದು ಚಿದಂಬರಯ್ಯನವರು, ಸಂಸ್ಕೃತ ವೇದಾಂತಪ್ರಕ್ರಿಯೆಯನ್ನು ಕನ್ನಡಕ್ಕೆ ಇಳಿಸಿದ್ದ **ವೇದಾಂತವಿಚಾರದ ಗುಟ್ಟು** ಎಂಬ ಪುಸ್ತಕವು. ಆ ಪುಸ್ತಕವು ಲಿಂಗಣ್ಣನವರಿಗೆ ಬೆಂಗಳೂರಿನಲ್ಲಿ ಆಕಸ್ಮಿಕವಾಗಿ ಸಿಕ್ಕಿತ್ತಂತೆ. ಯಾವದೋ ಒಂದು ಪುಸ್ತಕವನ್ನು ಕೊಳ್ಳುವದಕ್ಕಾಗಿ ಅವರು ಪರಮಾರ್ಥ ಮುದ್ರಾಣಾಲಯಕ್ಕೆ ಹೋಗಿದ್ದರು. ಆಗ ಆ ಮುದ್ರಣಾಲಯವು ಒಂದು ಗಾಡಿಖಾನೆಯಲ್ಲಿತ್ತು. ತಮಗೆ ಬೇಕಾಗಿದ್ದ ಪುಸ್ತಕವು ದೊರೆಯದೆ ಹಿಂತಿರುಗುತ್ತಿರುವಾಗ ಬಾಗಿಲ ಹಿಂದಿದ್ದ ಒಂದು ಹರಕಲು ಕಸದಬುಟ್ಟಿಯಲ್ಲಿ ಈ ಪುಸ್ತಕದ ಪ್ರತಿಗಳು ಕೆಲವು ಬಿದ್ದಿದ್ದವು. ಅವನ್ನು ಕುತೂಹಲದಿಂದ ಲಿಂಗಣ್ಣನವರು ಮೈಸೂರಿಗೆ ತಂದಿದ್ದರು. ಎಚ್ಚರವನ್ನು ಸ್ವಪ್ನದಂತೆ ತಿಳಿಯುತ್ತಾ ವ್ಯವಹರಿಸಬಲ್ಲ ಮೂಲಗ್ರಂಥ ಕರ್ತರಾದ ಕೃಷ್ಣಸ್ವಾಮಿಅಯ್ಯರ್‌ರವರು ಬ್ರಹ್ಮಜ್ಞಾನಿಗಳಾಗಿರಬೇಕು ಎಂದು ಲಿಂಗಣ್ಣನವರು ಅಂದದ್ದು ಕೇಳಿ ರಾಚಪ್ಪನವರಿಗೆ ಅವರನ್ನು ನೋಡಲೇ ಬೇಕೆನಿಸಿತು.

ಮೈಸೂರಿಗೆ ಹೋದಮೇಲೆ ಕೃಷ್ಣಸ್ವಾಮಿಅಯ್ಯರು ಇಂಗ್ಲೀಷಿಗೆ ಭಾಷಾಂತರಿಸಿದ್ದ ಪಾಂಚರಾತ್ರ ತಮ್ಮ ಅಣ್ಣ ರುದ್ರಪ್ಪನವರಲ್ಲಿದ್ದದ್ದು ನೆನಪಿಗೆ ಬಂತು. ರುದ್ರಪ್ಪನವರು ಆಗ ಹಾಸನದಲ್ಲಿದ್ದರು. ಕೂಡಲೇ ಹಾಸನಕ್ಕೆ ಹೋಗಿ ಆ ಪುಸ್ತಕವನ್ನು ಬೆಂಗಳೂರಿಗೆ ತಂದರು. ಆ ಮಧ್ಯಾಹ್ನವೇ ಕೃಷ್ಣಸ್ವಾಮಿ ಅಯ್ಯರನ್ನು ಪತ್ತೆ ಮಾಡಿ ಆತ್ಮನ **'ಅಜ್ಞಾನಕ್ಕೆ ಕಾರಣವೇನು ? ಈ ಜನನಮರಣಾತ್ಮಕ ಸಂಸಾರವು ಹೇಗೆ ಉಂಟಾಯಿತು'** ? ಎಂದು ಕೇಳಿದರು. ''ಅವರು ಮನೆಗೆ ಬೆಂಕಿ ಬಿದ್ದು ಮನೆಯು

ಧಗಧಗನೆ ಉರಿಯುತ್ತಿರುವಾಗ ಬೆಂಕಿ ಹೇಗೆ ಬಿದ್ದಿರಬೇಕೆಂದು ವಿಚಾರಿಸುತ್ತಾ ಕೂರುವದಕ್ಕಿಂತ ಉರಿಯನ್ನು ಆರಿಸಲು ಮೊದಲು ಪ್ರಯತ್ನ ಮಾಡುವದು ಲೇಸಲ್ಲವೇ ? ಇದೂ ಅಲ್ಲದೇ ಪ್ರಪಂಚಕ್ಕೆ ಕಾರಣವನ್ನು ಹುಡುಕುವದು ವೃಥಾಯಾಸ. ನಿಮ್ಮ ಪ್ರಶ್ನೆ ನ್ಯಾಯವಿರುದ್ಧ. ಕಾರ್ಯಕಾರಣಗಳನ್ನೂ ಪ್ರಶ್ನೋತ್ತರಗಳನ್ನೂ ಒಳಗೊಂಡ ಈ ಚಿಜ್ಜಡಾತ್ಮಕ ಪ್ರಪಂಚವೇ ಅಜ್ಞಾನದ ಕಾರ್ಯವಾಗಿರುವಾಗ ಅದರಿಂದಾಚೆ ಇಣಿಕಿ ನೋಡುವದಕ್ಕೆ ಯತ್ನಿಸುವದು ನ್ಯಾಯವೇ ? ತತ್ತ್ವಜ್ಞಾನವಾದರೆ ಸಂಸಾರ ನಿವೃತ್ತಿಯಾಗುವದಲ್ಲದೇ ಈ ಸಂಶಯ ಗಳೆಲ್ಲ ಮಾಯವಾಗುವವು'' ಎಂದು ಮುಂತಾಗಿ ಸುಲಲಿತವಾಗಿ ಬೋಧಿಸಿದರಂತೆ.

ಶ್ರೀ ಅಯ್ಯರ ದರ್ಶನವಾದ ಒಂದೆರೆಡು ದಿನಗಳಮೇಲೆ ರಾಚಪ್ಪನವರ ಮನೆಯವರು ಗವೀಪುರದಲ್ಲಿದ್ದ ಒಬ್ಬ ಸ್ವಾಮಿಗಳ ಪರಿಚಯವನ್ನು ಮಾಡಿಕೊಳ್ಳಬಹುದೆಂದು ಸೂಚನೆಯಿತ್ತರು. ಇದನ್ನು ಅಯ್ಯರರಲ್ಲಿ ಪ್ರಸ್ತಾಪಿಸಲು ಅವರು 'ಚಾಮರಾಜಪೇಟೆಯಲ್ಲಿ ವೈ. ಸುಬ್ಬರಾಯರೆಂಬವರು ಒಬ್ಬರಿದ್ದಾರೆ. ಅವರು ನೀವು ಹೇಳುವ ಸ್ವಾಮಿಗಳಂಥ ಸಾವಿರ ಸ್ವಾಮಿಗಳಿಗೆ ಸಮಾನ ರಾದವರು. ಅಲ್ಲಿ ಹೋಗಿ ನಾನು ಹೇಳಿಕಳುಹಿಸಿದೆನೆಂದು ಹೇಳಿ ಅವರನ್ನು ನೋಡಿ' ! ಎಂದರಂತೆ. ರಾಚಪ್ಪನವರು ಹೀಗೆಂದಿದ್ದಾರೆ. ''ಮರುದಿವಸವೇ ಹೋಗಿ ಅವರ ದರ್ಶನವನ್ನು ಮಾಡಿದೆ.... ಆ ದಿನ ಅವರನ್ನು ಶ್ರೀ ಶಂಕರರ ಅಪರೋಕ್ಷಾನುಭೂತಿಯಲ್ಲಿ ಅವಸ್ಥಾತ್ರಯದ ವಿಷಯದ 57ನೆಯ ಶ್ಲೋಕದ ಮೇಲೆ ಪ್ರಶ್ನಿಸಿದೆ. ಅದನ್ನು ಅವರು ಸಂತೋಷವಾಗಿ ವಿವರಿಸಿದರು. ಅವಸ್ಥಾತ್ರಯದ ವಿಚಾರದಿಂದಲ್ಲದೇ ತತ್ತ್ವಜ್ಞಾನವು ನಿಸ್ಸಂದಿಗ್ಧವಾಗಿಯಾಗಲಿ ಸ್ಪಷ್ಟವಾಗಿಯಾಗಲಿ ಆಗುವದಿಲ್ಲ, ಅವಸ್ಥೆಗಳನ್ನು ಪರೀಕ್ಷಿಸುವಾಗ ಒಂದವಸ್ಥೆಯನ್ನು ಮತ್ತೊಂದವಸ್ಥೆಯ ದೃಷ್ಟಿಯಿಂದಲ್ಲದೆ ಆಯಾ ಅವಸ್ಥೆಯ ದೃಷ್ಟಿಯಿಂದಲೂ ಪರೀಕ್ಷಿಸಬೇಕು. ಬೆಂಗಳೂರಿನಲ್ಲಿದ್ದು ಬೆಂಗಳೂರಿನಿಂದಲೇ ಮೈಸೂರಿನಲ್ಲೇನಿದೆ ಏನಿಲ್ಲ ಎಂಬುದನ್ನು ವಿಚಾರಿಸುವದೊಂದು ವಿಧ ; ಬೆಂಗಳೂರಿನಲ್ಲಿದ್ದರೂ ತಾನು ಮೈಸೂರಿನಲ್ಲಿದ್ದಾಗ ಅನುಭವಿಸಿದ್ದನ್ನು ಮೈಸೂರಿನಲ್ಲಿದ್ದಂತೆಯೇ ಭಾವಿಸಿಕೊಂಡು ಅಲ್ಲಿ ಏನಿದೆ, ಏನಿಲ್ಲ ಎಂಬುದನ್ನು ವಿಚಾರಿಸುವದು ಮತ್ತೊಂದು ವಿಧ. ಅದೇ ರೀತಿ ಸ್ವಪ್ನವನ್ನು ಜಾಗ್ರದ್ದೃಷ್ಟಿಯಿಂದಲೂ, ಸ್ವಪ್ನದೃಷ್ಟಿಯಿಂದಲೂ ವಿಚಾರಿಸಿದಾಗಲೇ ಸ್ವಪ್ನದ ತತ್ತ್ವವು ಸ್ಪಷ್ಟವಾಗಿ ತಿಳಿಯಬರುವದು ಎಂದು ಮುಂತಾಗಿ ಹೃದಯಂಗಮವಾದ ವಿಧವಿಧವಾದ ದೃಷ್ಟಾಂತಗಳಿಂದ ಮನಸ್ಸಿಗೆ ಹಿಡಿಯುವಂತೆ ಶ್ಲೋಕಾರ್ಥವನ್ನು ಉಪದೇಶಿಸಿದರು. ಅಯ್ಯರಂತೆಯೇ ಇವರೂ ಅಂದಿನಿಂದಲೇ

ನನ್ನನ್ನು ಆಕರ್ಷಿಸತೊಡಗಿದರು. ದೇಶದ ಮೂಲೆಮೂಲೆಗಳಲ್ಲಿ ನಾನು ಹುಡುಕುತ್ತಿದ್ದ ಸದ್ಗುರುಗಳು ನಮ್ಮೂರಿನಲ್ಲಿಯೇ ಸಿಕ್ಕಿದ್ದು ನನ್ನ ಸ್ಥಿರ ಪ್ರಯತ್ನದ ಮತ್ತು ಮನಃಪೂರ್ವಕವಾದ ಪ್ರಾರ್ಥನೆಯ ಫಲವೆಂದೂ ನಾನು ಧನ್ಯನಾದೆನೆಂದು ತಿಳಿದು ಹಿಗ್ಗಿದೆ. ಅಂದಿನಿಂದ ಎಡೆಬಿಡದೆ ವರ್ಷಾನುಗಟ್ಟಲೆ ಪ್ರತಿನಿತ್ಯವೂ ಈ ಇಬ್ಬರಲ್ಲೊಬ್ಬರ ಬಳಿಗೆ ಹೋಗಿ ವಿಚಾರ ಮಾಡತೊಡಗಿದೆ. ಇಬ್ಬರೂ ಸತ್ಯದಲ್ಲಿ ಪ್ರತಿಷ್ಠಿತರಾಗಿದ್ದದ್ದರಿಂದ ಯಾರು ಎಂಥ ಕಠಿಣ ಪೂರ್ವಪಕ್ಷವನ್ನು ತಂದೊಡ್ಡಿದರೂ ಅದನ್ನು ಲೀಲಾಪ್ರಾಯವಾಗಿ ಬಗೆಹರಿಸುತ್ತಿದ್ದರು. ಕೇವಲ ಶಾಸ್ತ್ರಕ್ಕೆ ಪ್ರಾಧಾನ್ಯವನ್ನು ಕೊಡದೆ ಅನುಭವಾನುಸಾರಿಯಾದ ತರ್ಕಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದದ್ದು ಇವರ ವಿಚಾರಸರಣಿಯು ನನ್ನ ಮನಸ್ಸಿಗೆ ಒಪ್ಪಿತು. ಇವರು ಅಸಾಧಾರಣ ಪುರುಷರೆಂದು ನನ್ನ ಮನಸ್ಸಿನಲ್ಲಿ ಮೂಡಿತು. ಇಬ್ಬರೂ ರಸಿಕರು ಮತ್ತು ವಿಶಾಲ ಹೃದಯರು. ಎಲ್ಲಿ ಗುಣವನ್ನು ಕಂಡರೂ ಸಂತೋಷಪಡುತ್ತಿದ್ದರು. ಒಂದಾವರ್ತಿ ಹರಿದ್ವಾರದಿಂದ ಬಂದಿದ್ದ ಸಂಸ್ಕೃತ, ಇಂಗ್ಲೀಷ್ ಮತ್ತು ತೆಲುಗಿನಲ್ಲಿ ಗೀತೆಯ ಮೇಲೆ ಉಪನ್ಯಾಸವನ್ನು ಮಾಡುತ್ತಿದ್ದ ಆಂಧ್ರದೇಶದ ಕೃಷ್ಣಮೂರ್ತಿ, ರಾಮಮೂರ್ತಿ ಎಂಬ ಬಾಲಕಸಹೋದರರನ್ನು ಕಾಣಲು ಅಯ್ಯರವರೂ, ರಾಯರೂ, ನಾನು ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಹೋಗಿದ್ದೆವು. ಈ ಈರ್ವರ ಗುಣಗ್ರಾಹಕ ಬುದ್ಧಿಗೆ ಇನ್ನೊಂದು ಉದಾಹರಣೆ, ಇವರು ಬ್ರಾಹ್ಮಣ ಶ್ರೇಷ್ಠರಾಗಿದ್ದರೂ ಒಕ್ಕಲಿಗರ ಮಠಕ್ಕೆ ಸೇರಿದ ಲಿಂಗಣ್ಣನವರ ವಿಷಯವನ್ನು ಕೇಳಿ ಅವರು ಬೆಂಗಳೂರಿಗೆ ಬಂದಾಗ ಅವರಿಳಿಯುತ್ತಿದ್ದ ಸಹಜಾನಂದರ ಮಠಕ್ಕೆ ಬಂದು ಅವರ ವಿಚಾರ ಸರಣಿಯನ್ನು ಕೇಳಿ ಆನಂದಿಸುತ್ತಿದ್ದರು. ಅಯ್ಯರವರು ಇಂಗ್ಲೀಷಿನಲ್ಲಿ ಬರೆದಿರುವ 'ವೇದಾಂತ ಅಥವಾ ತತ್ತ್ವಜ್ಞಾನ' ಎಂಬ ಉದ್ಗ್ರಂಥದಲ್ಲಿ ಸ್ವಕುಲ ಸಾಳಿ ಮತದಲ್ಲಿ ಜನಿಸಿದ್ದ ಅನಂತಪ್ಪಮಹಾರಾಜರಲ್ಲಿ ಗುರುಭಾವನೆಯನ್ನು ಸೂಚಿಸಿರುತ್ತಾರೆ.''

ಎಸ್.ಆರ್.ಎನ್ಸ್. ಎ.ವಿ. ಸ್ಕೂಲಿನಲ್ಲಿದ್ದಾಗ ಇವರು ಉಪದೇಶಸಾಹಸ್ರಿ ಯನ್ನು ನನ್ನಿಂದ ಅನುವಾದಮಾಡಿಸಿ ಬರೆದುಕೊಂಡ ವಿಷಯವನ್ನು ಆಗಲೇ ಹೇಳಿರುತ್ತೇನೆ. '1921 ನೇ ಇಸವಿ ಕಾರ್ತಿಕ ಮಾಸದ ಕಡೆಯ ಸೋಮವಾರದ ದಿನ ಚಿಕ್ಕಪೇಟೆಯ ಈಶ್ವರ ದೇವಸ್ಥಾನದಲ್ಲಿ ದೇವರದರ್ಶನ ಮಾಡಿಕೊಂಡು ಹಿಡಿದ ಕಾರ್ಯವು ಪೂರೈಸುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡು ಈ ಕಾರ್ಯವನ್ನು ಪ್ರಾರಂಭಿಸಿದೆ' ಎಂದು ಅವರು ತಿಳಿಸಿರುತ್ತಾರೆ. ಈಶ್ವರನ ಅನುಗ್ರಹದಿಂದ ಕಾರ್ಯವು ಪೂರೈಸಿತು. 'ಇವರು ನನ್ನಿಂದ ಏನಾದರೂ ಸೇವೆಯನ್ನು ತೆಗೆದುಕೊಳ್ಳಬೇಕು' ಎಂದು ಮತ್ತೆಮತ್ತೆ ಕೇಳಿಕೊಂಡಿದ್ದರಿಂದ ಉಪದೇಶಸಾಹಸ್ರಿಯ ಗದ್ಯಬಂಧದ ಪ್ರಕಟಣೆಗೆ

ಆದರ ಪೋಷಕದ್ರವ್ಯವನ್ನು ಕಾರ್ಯಾಲಯಕ್ಕೆಂದು ತೆಗೆದುಕೊಂಡೆನು. ಶ್ರೀಯುತರು ಬಹಳ ದಿವಸ ಅವಿವಾಹಿತರಾಗಿಯೇ ಇರುತ್ತಿದ್ದರು ; ಅವರ ಭಾವನವರ ಬಲವಾದ ಪ್ರಾರ್ಥನೆಯಂತೆ ಕೃ.ಸ್ವಾ. ಅಯ್ಯರವರ ಪ್ರೋತ್ಸಾಹದಿಂದ ತಮ್ಮ ಅಕ್ಕನವರ ಮಗಳನ್ನೇ ವಿವಾಹ ಮಾಡಿಕೊಂಡು ಈಗ ಬೆಂಗಳೂರಿನಲ್ಲಿಯೇ ಇರುತ್ತಾರೆ.

## ಗ್ರಂಥ ಪ್ರಕಟಣೆಗೆ ಪ್ರಯತ್ನ ವಿಶೇಷ :

ಅಧ್ಯಾತ್ಮಪ್ರಕಾಶದ 3,4,5ನೆಯ ಸಂಪುಟಗಳಲ್ಲಿ ಸ್ವತಂತ್ರಪುಟದ ಗ್ರಂಥಗಳು ಯಾವವೂ ಅಚ್ಚಾಗಲಿಲ್ಲ, ಆದರೆ ಅವುಗಳಲ್ಲಿ ಅವಸ್ಥಾತ್ರಯ ವಿಚಾರದ ಲೇಖನಗಳು ಬಂದು, ಮುಂದೆ ಪ್ರಕಟವಾಗಲಿದ್ದ 'ಪರಮಾರ್ಥಚಿಂತಾಮಣಿ'ಗೆ ವಿಷಯವನ್ನು ಒದಗಿಸಿಟ್ಟಂತೆ ಆಯಿತು. ಕೃ.ಸ್ವಾ.ಅಯ್ಯರವರ 'ವಿಲಕ್ಷಣಮೌನಿ' ಎಂಬ ಪುಟ್ಟ ಗ್ರಂಥವನ್ನು ಭಾಗಭಾಗವಾಗಿ ಪ್ರಕಟಿಸಿ ಬಳಿಕ ಒಟ್ಟುಗೂಡಿಸಿ ಪ್ರಕಟಿಸಲಾಯಿತು. ಸಂಸ್ಕೃತದಲ್ಲಿ ಈಶಾವಾಸ್ಯೋಪನಿಷತ್ತಿನ ಭಾಷ್ಯವನ್ನು ತಲೆಬರಹಗಳು, ಟಿಪ್ಪಣಿ, ಸಾರಗಳೊಡನೆ ಸಂಸ್ಕೃತದಲ್ಲಿ ಪ್ರಕಟಿಸಿದ್ದು, 'ವೇದಾಂತಕಥಾವಳಿ' (2ನೆಯ ಸಂಸ್ಕರಣ) 'ಗಣೇಶಾಷ್ಟಕ' (ಸವಿವರಣ), 'ತತ್ತ್ವಸಮಾಸ' (ಸಾಂಖ್ಯಗ್ರಂಥ) - ಇವುಗಳನ್ನು ಅಚ್ಚು ಮಾಡಿ ಹೊರಕ್ಕೆ ಹಿಡಿದದ್ದು ಇದಿಷ್ಟು 1932ರಲ್ಲಿ ಆದ ಕೆಲಸವು. ಆದರೆ 3ನೆಯ ಸಂಪುಟದ ಜೊತೆಗೇ ಇನ್ನೊಂದು ದಿಶೆಯಲ್ಲಿ ಗ್ರಂಥ ಪ್ರಚಾರಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸಲಾಯಿತು. ಸಾಧನಪ್ರಸ್ಥಾನವೆನಿಸಿದ ಭಗವದ್ಗೀತೆಯನ್ನು ಮೂರು ಅಧ್ಯಾಯಗಳನ್ನು ಹಿಂದೆ ಹೇಳಿರುವಂತೆ ಶ್ರೀನಿವಾಸಯ್ಯನವರೇ ಮೊದಲಾದವರ ಪ್ರೋತ್ಸಾಹದಿಂದ ಪ್ರಕಾಶಪಡಿಸ ಲಾಗಿತ್ತಷ್ಟೆ. ಅದನ್ನು ಮುಂದುವರೆಸಿ 4 ರಿಂದ 7ನೆಯ ಅಧ್ಯಾಯಗಳವರೆಗಿನ 2ನೆಯ ಭಾಗವನ್ನು ಅಚ್ಚು ಮಾಡಿಸಿ ಗೀತೆಯ ಭಾಗಗಳಿಗೆ ಚಂದಾದಾರರಾಗುವವರಿಗೆ ತಗ್ಗಿಸಿದ ಬೆಲೆಗೆ ಗ್ರಂಥವನ್ನು ಕೊಡುವದಾಗಿ ಪ್ರಕಟಿಸಿದೆವು. ಆದರೆ ಚಂದಾದಾರರ ಪ್ರೋತ್ಸಾಹವೇನೂ ಅಷ್ಟಾಗಿರಲಾರದು. ಏಕೆಂದರೆ 8ರಿಂದ 12 ಅಧ್ಯಾಯಗಳ 3ನೆಯ ಭಾಗವು ಹೊರಕ್ಕೆ ಬರುವದಕ್ಕೆ 34ನೆಯ ಇಸವಿಯವರೆಗೆ ಕಾಯಬೇಕಾಯಿತು.

## ಅಧ್ಯಾತ್ಮಪ್ರಕಾಶ ಪ್ರೆಸ್ ಬುಕ್ ಡಿಪೊ :

ಅಧ್ಯಾತ್ಮಪ್ರಕಾಶ ಮುದ್ರಣಾಲಯವು ಸ್ಥಾಪಿತವಾದ ಕೆಲವು ದಿನಗಳಲ್ಲಿಯೇ ಅಲ್ಲಿ ಅಚ್ಚಾಗುವ ಪುಸ್ತಕಗಳನ್ನು ಮಾರಾಟ ಮಾಡುವದಕ್ಕೆ ಏರ್ಪಾಟುಮಾಡತಕ್ಕದ್ದು

ಅವಶ್ಯವೆಂಬ ಯೋಚನೆ ಹತ್ತಿತು. ನಂಜಪ್ಪಭಾಗವತರು ಅರಸೀಕೆರೆಯಲ್ಲಿಟ್ಟಿದ್ದ ಅಧ್ಯಾತ್ಮ ಪುಸ್ತಕಾಲಯವು ಸ್ವತಂತ್ರವಾಗಿ ವ್ಯಾಪಾರಮಾಡುವ ಸಂಸ್ಥೆಯಾಗಿರಲಿಲ್ಲ. ಆದ್ದರಿಂದ ಮುದ್ರಣಾಲಯಕ್ಕೆ ಸೇರಿದ್ದಂತೆ ಒಂದು ಬುಕ್ಕುಡಿಪೋವನ್ನು ತೆರೆಯಲಾಯಿತು.ಇಷ್ಟು ಹೊತ್ತಿಗೆ ಯಾವದಾದರೊಂದು ಉದ್ಯೋಗಕ್ಕೆ ನಿಲ್ಲಬೇಕಾಗಿ ಯೋಚಿಸುತ್ತಿದ್ದ ನನ್ನ ಅಳಿಯ, ಸುಕನ್ಯಮ್ಮನ ಗಂಡ ಸೀತಾರಾಮಯ್ಯನವರನ್ನು ಆ ಕೆಲಸಕ್ಕೆ ನಿಯಮಿಸಿಕೊಂಡು ಚಾಮರಾಜಪೇಟೆಯ ನಾಲ್ಕನೆಯ ರೋಡಿನಲ್ಲಿ ಪುಸ್ತಕ ವಿಕ್ರಯಕ್ಕೆ ಏರ್ಪಾಟುಮಾಡಲಾಯಿತು. ಸೀತಾರಾಮಯ್ಯನವರು ಹೊ.ನ. ಪುರದ ಅನಂತರಾಮಯ್ಯನವರ ಮಕ್ಕಳು. ಅವರು ಎಸ್.ಎಸ್.ಎಲ್.ಸಿ ಮಾಡಿಕೊಂಡು ಇಂಟರ್‌ಗೆ ಹೋಗಬೇಕೆಂದು ಹವಣಿಸುತ್ತಿದ್ದರು. ಹೊ.ನ.ಪುರದ ಪ್ಲೀಡರ್ ನರಸಿಂಹಯ್ಯನವರ ಸಹಾಯದಿಂದ ಆ ವರನನ್ನು ಗೊತ್ತುಮಾಡಿಕೊಂಡು 1929ರಲ್ಲಿ ಸುಕನ್ಯಳನ್ನು ಕೊಟ್ಟು ವಿವಾಹ ನಡೆಯಿಸಿದೆ. ಸೀತಾರಾಮಯ್ಯನವರು 1931ರಲ್ಲಿ ಇಂಟರ್ ಪರೀಕ್ಷೆಯಾಗದೆ ವಿದ್ಯಾಭ್ಯಾಸವನ್ನು ಬಿಟ್ಟಿದ್ದರು. ಮುದ್ರಣಾಲಯವು ಹೆಸರಿಗೆ ನರಸಪ್ಪನ ಜೀವನೋಪಾಯಕ್ಕೆಂದು ಏರ್ಪಟ್ಟರೂ ವಸ್ತುತಃ ಕಾರ್ಯಾಲಯಕ್ಕೇ ಅಂಗವಾಗಿ ಕೆಲಸ ಮಾಡುತ್ತಿದ್ದಂತೆ ಸೀತಾರಾಮಯ್ಯನವರ ಜೀವನೋಪಾಯಕ್ಕೆಂದು 1930 ಮೇ ತಿಂಗಳಲ್ಲಿ ಏರ್ಪಟ್ಟ ಈ ಪುಸ್ತಕಾಲಯವೂ ಕಾಲಕ್ರಮದಲ್ಲಿ ಕಾರ್ಯಾಲಯಕ್ಕೇ ಹೊಂದಿಕೊಂಡುಬಿಟ್ಟಿತೆಂಬುದು ಮುಂದೆ ವಾಚಕರಿಗೆ ಗೊತ್ತಾಗುವದು.

# 36. ಕಾರ್ಯಾಲಯದ ಮುನ್ನಡೆ (1933 - 1937)

## ಪತ್ರಿಕೆಯಲ್ಲಿ ಪ್ರಸಿದ್ಧವಾದ ಗ್ರಂಥಗಳು :

ಎರಡನೆಯ ಸಂಪುಟದಲ್ಲಿ ಭಾಗಭಾಗವಾಗಿ ಅಚ್ಚಾದ ಲಕ್ಷಣಶಾಸ್ತ್ರೀ ಉರುಫ್ ಹಸೇನ್ ಎಂಬ ತರ್ಕವೇದಾಂತಗಳ ತಾರತಮ್ಯವನ್ನು ಬೋಧಿಸುವ ಕಥೆಯು ಆ ವರ್ಷದ ಏಳನೆಯ ಸಂಪುಟಕ್ಕೆ ಮುಗಿದು ಬೇರೆಯ ಗ್ರಂಥವಾಗಿ ಹೊರಕ್ಕೆ ಬಂದಿತು. ಅಲ್ಲಿಂದ ಮುಂದಕ್ಕೆ ಆತ್ಮವಿದ್ಯಾವಿಲಾಸವನ್ನು ಸಾರ್ಥವಾಗಿ ಪ್ರಕಟಿಸಿ ಹನ್ನೆರಡನೆ ಸಂಚಿಕೆಯಲ್ಲಿ ಪೂರ್ಣವಾಗಿ ಪುಸ್ತಕರೂಪದ ಬೆಳಕನ್ನು ಕಂಡಿತು. ಆರನೆಯ ಸಂಪುಟದಲ್ಲಿ ಪ್ರಾರಂಭಿಸಿದ ತಲವಕಾರೋಪನಿಷತ್ತನ್ನು ಹನ್ನೊಂದನೆಯ ಸಂಚಿಕೆಯಲ್ಲಿ ಪೂರೈಸಿ ಹೊರಕ್ಕೆ ತರಲಾಯಿತು. ಏಳನೆಯ ಸಂಪುಟದಲ್ಲಿ ಸ್ವಾಮಿ ವಿವೇಕಾನಂದರ ಜ್ಞಾನಯೋಗದಲ್ಲಿ ಪ್ರಾರಂಭಿಸಿದ ಭಾಗವನ್ನು ಎಂಟನೆಯ ಸಂಪುಟದ ಎರಡನೆಯ ಸಂಚಿಕೆಯಲ್ಲಿ ಮುಗಿಸಿ ಬಹಿರಂಗಕ್ಕೆ ತಂದೆವು. ಆ ಸಂಪುಟದಲ್ಲಿ ಮೊದಲಾದ ಅಲಾತಶಾಂತಿ ಪ್ರಕರಣವು ಎರಡನೆಯ ಸಂಪುಟದಲ್ಲಿ ನಾಲ್ಕು ಸಂಚಿಕೆಗಳಲ್ಲಿ ಅಚ್ಚಾಗಿ ಅಲ್ಲಿಗೇ ನಿಂತದ್ದದ್ದು ಮತ್ತೆ ಮೊದಲಿಂದ ಹನ್ನೆರಡನೆಯ ಸಂಚಿಕೆಗೆ ಪ್ರತ್ಯೇಕವಾಗಿ ಪುಸ್ತಕರೂಪವನ್ನು ತಳೆಯಿತು. ಮುಕುಂದಮಾಲಾ ಸ್ತೋತ್ರವು ಆರನೆಯ ಸಂಪುಟದಲ್ಲಿ ಭಾಗಭಾಗವಾಗಿ ಅಚ್ಚಾಗಿ ಐದನೆಯ ಸಂಚಿಕೆಯು ಮುಗಿಯುವ ಹೊತ್ತಿಗೆ ಪುಸ್ತಕರೂಪಕ್ಕೆ ಬಂತು. ಶಿವಾನಂದರ ಅಧ್ಯಾತ್ಮಸೂಕ್ತಿಮಂಜರಿಯನ್ನು ಜ್ಞಾನಯೋಗವಾದಮೇಲೆ ಎಂಟನೆಯ ಸಂಪುಟದಲ್ಲಿ ಪ್ರಕಟಿಸಲಾಯಿತು. ಇವಿಷ್ಟೂ ಪತ್ರಿಕೆಯಿಂದ ತೆಗೆದಚ್ಚುಗಳು. ಪತ್ರಿಕೆಯು ಕನ್ನಡನಾಡಿನಲ್ಲಿಯೇ ಅಲ್ಲದೆ ಹೊರಗೂ ಗುಡುಗಾಡುತ್ತಿತ್ತು. ಬೆಜವಾಡದ ಪ್ರಕೃತಿ ಎಂಬ ನೈಸರ್ಗಿಕ ಚಿಕಿತ್ಸಾಕ್ರಮದ ಪತ್ರಿಕೆಯ ಮ್ಯಾನೇಜರು ಅದನ್ನು ಕೊಂಡಾಡಿ ಇದರಲ್ಲಿರುವ ಲೇಖನಗಳು ಅಮೋಘವಾಗಿವೆ, ಸ್ವಾರಸ್ಯಯುಕ್ತವಾಗಿವೆ, ಶಿಕ್ಷಣಾಸ್ಪದವಾಗಿವೆ, (invaluable interesting and instructive). ಇಂಥ ಪತ್ರಿಕೆಗಳು ನಮ್ಮ ತೆಲಗು ಭಾಷೆಯಲ್ಲಿಲ್ಲ. ಮೂಲಾವಿದ್ಯಾನಿರಾಸದ ಗ್ರಂಥಕರ್ತರೆಂದು ನಮ್ಮ ಕಡೆಯಲ್ಲಿ ನಿಮ್ಮ ಕೀರ್ತಿ ಹರಡಿದೆ. ಇಂಗ್ಲೀಷಿನಲ್ಲಿಯೂ ಒಂದು ತತ್ತ್ವಜ್ಞಾನದ ಪತ್ರಿಕೆಯನ್ನೇಕೆ ನೀವು ಹೊರಡಿಸಬಾರದು ?'' ಎಂದು ಬರೆದಿದ್ದರು.

**ಸ್ವತಂತ್ರಪ್ರಕಟಣೆಗಳು :** ಇನ್ನು ಸ್ವತಂತ್ರ ಪುಸ್ತಕಗಳೆಂದರೆ ಮೋಹಮುದ್ಗರ

(ಸಾರ್ಥಸಟಿಪ್ಪಣಿ) ದ್ವಾದಶಮಂಜರಿ, ವೇದಾಂತಡಿಂಡಿಮ (ಸಾರ್ಥ), ಅಧ್ಯಾತ್ಮ ವೆಂದರೇನು ? (ಸಂಭಾಷಣೆ), ಸವಾರ್ತಿಕಪಂಚೀಕರಣ, ಭಗವಚ್ಚರಣಸ್ತೋತ್ರ, ವಿವೇಕಾನಂದರ ವೇದಾಂತೋಪನ್ಯಾಸಗಳು, ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ ಧಮ್ಮಪದವೆಂಬ ಬೌದ್ಧಗ್ರಂಥದ ಅನುವಾದ - ಇಷ್ಟು ಪುಟ್ಟ ಪುಸ್ತಕಗಳು. ಸಂಸ್ಕೃತ-ದಲ್ಲಿ ವೇದಾಂತಡಿಂಡಿಮವನ್ನು ನಾನೇ ಮಾಡಿದ ಹೊಸದೊಂದು ವ್ಯಾಖ್ಯಾನ ಸಹಿತವಾಗಿ ಶುದ್ಧಪಾಠವನ್ನು ಕೊಟ್ಟು ಹೊರಕ್ಕೆ ತಂದದ್ದು ಒಂದು ವಿಶೇಷವು. ಇಂಗ್ಲೀಷಿನಲ್ಲಿ ಕಲ್ಯಾಣಕಲ್ಪತರುವಿಗೆ ನಾನು ಬರೆದಿದ್ದ ಲೇಖನಗಳಲ್ಲಿ ಒಂದಾದ **(Avasthatraya or the Unique method of Vedanta)** ಎಂಬುದೊಂದು ಚಿಕ್ಕ ಸ್ವತಂತ್ರ ಗ್ರಂಥವನ್ನು ವಾಚಕರಿಗೆ ಅರ್ಪಿಸಲಾಯಿತು. ಅದು ಬರುವುದಕ್ಕಿಂತ ಒಂದು ವರ್ಷ ಮುಂಚಿತವಾಗಿಯೇ **Words of Wisdom** ಎಂಬ ಮದರಾಸಿನ ರಾಜೇಶ್ವರಾನಂದರ ಸೂಕ್ತಿಮಂಜರಿಯೊಂದನ್ನು ಹೊರಕ್ಕೆ ತರಲಾಗಿತ್ತು.

**ಶಂಕರ ಸಪ್ತಾಹಗಳು :** ಪ್ರಜೋತ್ಪತ್ತಿ ಸಂವತ್ಸರದಲ್ಲಿ (23-04-31 ರಿಂದ 29-04-31)ರವರಗೆ ನಡೆದ ಉತ್ಸವದ ವಿಷಯವನ್ನು ಆಗಲೇ ಪರಾಮರ್ಶಿಸಿರು ತ್ತೇನೆ. ಆ ವರ್ಷ ನಾನು, ವಿ॥ಶಾಸ್ತ್ರಿಗಳು, ವೆಂಕಟೇಶಶಾಸ್ತ್ರಿಗಳೇ ಅಲ್ಲದೆ ಕೃ.ಸ್ವಾ. ಅಯ್ಯರ್ (ದ್ವೈತವ್ಯವಹಾರದತತ್ತ್ವ), ಮಾಯಸಂದ್ರದ ಸೀತಾರಾಮಯ್ಯನವರು (ಕುಚೇಲೋಪಾಖ್ಯಾನ, ಪ್ರಹ್ಲಾದ, ದಾಮಾಜಿಪಂತ), ನಂಜಪ್ಪಭಾಗವತರು (ರಾಮನ ಸಾತಿಥ್ಯ), ಇವರುಗಳೂ ಸಹಕರಿಸಿದ್ದರು. 2ನೇಯ ವರ್ಷ (10-05-32 ರಿಂದ 17-05-32) ಕೋಟೆಯಲ್ಲಿ ಜಲಕಂಠೇಶ್ವರ ದೇವಸ್ಥಾನದಲ್ಲಿ ಉತ್ಸವವು ಜರಗಿತು. ಈ ಸಲವೂ ಮಾಯಸಂದ್ರದ ಸೀತಾರಾಮಯ್ಯನವರು ಭದ್ರಾಚಲದಾಸರ ಆಖ್ಯಾನವನ್ನು, ಕೇಶವರಾವ್‌ಚನ್ನಪ್ಪನವರು-ಮಾರ್ಕಂಡೇಯ ಚರಿತ್ರೆಯನ್ನು, ನಂ. ಭಾಗವತರು ತುಲಸೀದಾಸರ ಆಖ್ಯಾನವನ್ನು ಕೀರ್ತನ ರೂಪವಾಗಿ ನಿರೂಪಣ ಮಾಡಿದರು. ಕೃ.ಸ್ವಾ.ಅಯ್ಯರ್ 'ದರ್ಶನಗಳು' ಎಂಬ ವಿಷಯವನ್ನು ಕುರಿತ ಉಪನ್ಯಾಸವನ್ನು ಮಾಡಿದರು. ಆ ವರ್ಷ ಎ. ಕೆ. ಶಂಕರಯ್ಯ- ನವರು ಆಗಾಗ್ಗೆ ಬಂದು ಹೆಚ್ಚಿನ ಆಸಕ್ತಿಯಿಂದ ಶ್ರವಣ ಮಾಡುವದಕ್ಕೆ ಪ್ರಾರಂಭಿಸಿದವರು, ಮುಂದಿನ ವರ್ಷಗಳಲ್ಲೆಲ್ಲ ಉತ್ಸವಕ್ಕೆ ಬಂದರು ಮತ್ತು ಕಾರ್ಯಾಲಯದ ಅಭಿವೃದ್ಧಿಗೆ ಸಹಕಾರ ಮಾಡಿದರು, ಹೀಗೆ ಮಾಡುತ್ತಲೇ ಬಂದಿರುತ್ತಾರೆ. ಅಡ್ವೊಕೇಟ್ ಬಿ.ನಂಜುಂಡಯ್ಯನವರು ಬೃಹದಾರಣ್ಯಕಭಾಷ್ಯ ಪ್ರವಚನದ ಸಂಬಂಧವಾಗಿ ಏನೋ ಪ್ರಶ್ನೆಗಳನ್ನು ಕೇಳಿ ವಿಠ್ಠಲಶಾಸ್ತ್ರಿಗಳಿಂದ ಉತ್ತರವನ್ನು ಪಡೆದುಕೊಂಡರು. ಮುಂದೆ ಒಂದೆರಡು ದಿನ ಬಿಡುವಾದಾಗ ನನ್ನೊಡನೆ ವೇದಾಂತ ವಿಚಾರವಾಗಿ

ಚರ್ಚಿಸಿದರು. ಅವರು ಮುಂದೆ ವೇದಾಂತಾಭ್ಯಾಸದಲ್ಲಿ ವಹಿಸಿದ ಆಸಕ್ತಿಗೂ ಕಾರ್ಯಾಲಯಕ್ಕೆ ಮಾಡಿದ ಸಹಾಯಕ್ಕೂ ನಮಗೆ ಯಾರಿಗೂ ತಿಳಿಯದೆಯೇ ಆ ಸಂದರ್ಭದಲ್ಲಿ ಬೀಜಾವಾಪ ವಾಯಿತೆಂಬುದು ಮುಂದೆ ಗೊತ್ತಾಗುವದು. ಬ್ರ॥ಶ್ರೀ॥ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳವರು ಭಾಗವತಪುರಾಣವನ್ನು ಶ್ರಾವ್ಯವಾಗಿ ಓದಿ ಜನರಿಗೆ ಅರ್ಥಶ್ರವಣವನ್ನು ಮಾಡಿಸಿದ್ದು ಆಗಲೇ ಮೊದಲು. ಮೂರನೆಯ ಉತ್ಸವವು (30-4-33ರಿಂದ 7-5-33ರವರೆಗೆ) ಶಿವಗಂಗೆಮಠದಲ್ಲಿ ಜರುಗಿತು. ಈ ಸಲದ ಉತ್ಸವದ ವರದಿಯನ್ನು ಕಂಟ್ರಾಕ್ಟರ್ ವೈ.ಎಸ್.ಹಿರಿಯಣ್ಣನವರು (ವಿ. ಶಾಸ್ತ್ರಿಗಳ ತಮ್ಮಂದಿರು) ಅಚ್ಚುಮಾಡಿಸಿಕೊಟ್ಟರು. ಕೆಲವು ವಿದ್ಯಾರ್ಥಿಗಳಿಗೆ ವೇದಾಂತ ಪ್ರಕರಣಾದಿಗಳಲ್ಲಿ ಪರೀಕ್ಷೆಯನ್ನು ಮಾಡಿ ಬಹುಮಾನವನ್ನು ಕೊಡಲಾಯಿತು. ಈ ಸಲ ನಂ.ಭಾಗವತರು (ರಾಮನ, ಲಕ್ಷ್ಮಣನ ಶಕ್ತಿ), ಮಾ.ಸೀತಾರಾಮಯ್ಯನವರು (ಸುಧಾಮ), ರಾಜಣ್ಣದಾಸರು (ರಾಮನ ಸಾತಿಥ್ಯ) -ಹೀಗೆ ಹರಿಕಥೆಗೆ ಒದಗಿದ್ದರು. ಕೃ.ಸ್ವಾ.ಅಯ್ಯರವರು 'ಆತ್ಮೈಕ್ಯ' ಎಂಬ ಉಪನ್ಯಾಸವನ್ನು ಮಾಡಿದರು. ಮಿಕ್ಕ ಭಾಗಗಳನ್ನೆಲ್ಲ ವಿ.ಶಾಸ್ತ್ರಿಗಳು, ವೆಂ.ಶಾಸ್ತ್ರಿಗಳು ಮತ್ತು ನಾನು ಹಂಚಿಕೊಂಡಿದ್ದೆವು. ಈ ಉತ್ಸವದಲ್ಲಿ ಮಧ್ಯಾಹ್ನ ಪುರಾಣವಾದ ಮೇಲೆ ಸಾಯಂಕಾಲದ ಉಪನ್ಯಾಸವು ಅಥವಾ ಹರಿಕಥೆಯು ಮೊದಲಾಗುವ ನಡುವೆ ಭಜನೆಗೆ ಏರ್ಪಾಡು ಮಾಡಲಾಗಿತ್ತು. ಈ ಪದ್ಧತಿಯು ಅಂದಿನಿಂದ ಇಂದಿನವರೆಗೆ ನಡೆದುಕೊಂಡು ಬಂದಿರುತ್ತದೆ.

ನಾಲ್ಕನೆಯಸಲದ ಸಪ್ತಾಹವು (18-5-34 ರಿಂದ 26-5-34 ರವರೆಗೆ) ರಾಮೇಶ್ವರ ದೇವಸ್ಥಾನದ ಸಭಾಮಂಟಪದಲ್ಲಿಯೇ ನಡೆಯಿತು. ಕೀರ್ತನೆಗೆ ನಂ.ಭಾಗವತರೂ, ಸೀತಾರಾಮಯ್ಯನವರೂ ಅಲ್ಲದೆ ಅರಸೀಕೆರೆಯ ವಿಶ್ವೇಶ್ವ-ರಯ್ಯನವರೂ ಸೇರಿದ್ದರು. ವಿದ್ವಾನ್ ತಿಪ್ಪಾಶಾಸ್ತ್ರಿಗಳು ಭಾಗವತದಲ್ಲಿ 'ಶ್ರುತಿಗೀತೆ'ಯನ್ನು ಶ್ರವಣಮಾಡಿಸಿದರು. ಉಪನ್ಯಾಸಗಳೆಲ್ಲ ನನ್ನವೇ. ವಿದ್ವಾನ್ ಎಚ್. ಅನಂತಮೂರ್ತಿಗಳವರು ಮೊದಲನೆಯ ಸಲಕ್ಕೆ ಸಪ್ತಾಹದಲ್ಲಿ ಸಹಕರಿಸಿ ತೈತ್ತಿರೀಯೋಪನಿಷತ್ತಿನ ಪ್ರವೇಶವಾಕ್ಯದ ಭಾಷ್ಯವನ್ನು ಪ್ರವಚನಮಾಡಿದರು. ಅನಂತಮೂರ್ತಿಗಳು ನಮ್ಮ ಚಿದಂಬರಯ್ಯನವರ ಮಕ್ಕಳು. ಅವರಿಗೆ ಬಾಲ್ಯದಲ್ಲಿಯೇ ಕುರ್ತಕೋಟಿಯ ಮಹಾಭಾಗವತರ ಸಾಂನಿಧ್ಯದ ಬಲವು ದೊರೆಕಿತ್ತು. ಭಾಗವತರು ಯಲ್ಲಾಪುರದ ಪೀಠಾಧಿಪತಿಗಳಾದಾಗಲೂ ಅವರ ಜೊತೆಯಲ್ಲಿ ಎರಡು ವರ್ಷಗಳಿದ್ದು ಮಹಾರಾಷ್ಟ್ರದಲ್ಲೆಲ್ಲ ಸಂಚರಿಸಿದರು. ಬೆಂಗಳೂರಿಗೆ ಚಿದಂಬರಯ್ಯನವರು ಬಂದಾಗ ಮಿಡಲ್ ಸ್ಕೂಲಿನಲ್ಲಿಯೂ ನ್ಯಾಷನಲ್ ಹೈಸ್ಕೂಲಿನಲ್ಲಿಯೂ ಐದನೆ ಫಾರಂವರೆಗೆ ಓದಿ ತಂದೆಯವರೊಡನೆ

ಧಾರವಾಡಕ್ಕೆ ಹೋದರು. ಅಲ್ಲಿ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಓದಿದರು. ಬೆಟಗೇರಿ ಕೃಷ್ಣಶಾಸ್ತ್ರಿಗಳ ಮಕ್ಕಳು ನಾಗೇಶಶಾಸ್ತ್ರಿಗಳಲ್ಲಿ ಪ್ರಾರಂಭದ ತರ್ಕವನ್ನು ಓದಿದರು. ಆಗ ಬೇಟನಾರಾಯಣ ಮಹಾರಾಜರ ದರ್ಶನವನ್ನು ಪಡೆದು ಕೊಂಡಿದ್ದರು. 1923ರಲ್ಲಿ ಮದ್ರಾಸಿನ ಮೈಲಾಪುರದ ಸಂಸ್ಕೃತ ಕಾಲೇಜಿನಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಬೆಂಗಳೂರಿಗೆ ಬಂದು ಆಗ ತಾನೆ ತೆಗೆದ ತರ್ಕದ ತರಗತಿಗೆ ಸೇರಿದರು. ಅಲ್ಲಿ ತರ್ಕ ವಿದ್ವತ್ ಪರೀಕ್ಷೆ ಮುಗಿದು ಶಂಕರಮಠದಲ್ಲಿ ವೇದಾಂತ-ವ್ಯಾಸಂಗಕ್ಕೆ ಸೇರಿದರು. ಅವರು ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು (1936ರಲ್ಲಿ) ಅಲ್ಲಿ ವ್ಯಾಸಂಗದಲ್ಲಿ ಇರುವಾಗಲೇ ನಾವು ಅವರನ್ನು ಈ ಸಪ್ತಾಹಕ್ಕೆ ಆಹ್ವಾನಿಸಿದ್ದೆವು. ಅಂದಿನಿಂದ ಅವರು ಕಾರ್ಯಾಲಯದಲ್ಲಿ ಭಾಗವನ್ನು ವಹಿಸುತ್ತಲೇ ಬಂದಿರುತ್ತಾರೆ. ಮುಂದೆ ಸಂದರ್ಭ ಬಂದ ಹಾಗೆ ಅವರ ಹೆಸರನ್ನು ಮತ್ತೆ ಪರಾಮರ್ಶಿಸುವೆನು.

ಐದನೆಯ ವರ್ಷದ ಸಪ್ತಾಹಮಹೋತ್ಸವವು (7-5-35 ರಿಂದ 15-5-35 ರವರೆಗೆ) ಮತ್ತೊಂದು ಸಲ ಶಿವಗಂಗಾ ಮಠದಲ್ಲಿ ನಡೆಯಿತು. ಈ ಉತ್ಸವದಲ್ಲಿ ಕೀರ್ತನಕ್ಕೆ ನಂ.ಭಾಗವತರು, ಸೀತಾರಾಮಯ್ಯನವರು ಅಲ್ಲದೆ ಅರಸೀಕೆರೆಯ ರಾಮದಾಸರು ಮತ್ತು ಕೀರ್ತನತಿಲಕಾಗ್ರಗಣ್ಯೇತ್ಯಾದಿ ಬಿರುದಾಂಕಿತ ಮುಳುಗುಂದದ ರಾಮಶಾಸ್ತ್ರಿಗಳು ಬಂದಿದ್ದರು. ಭಾಷ್ಯಾದಿಗಳಿಗೆ ವೆಂಕಟೇಶಶಾಸ್ತ್ರಿಗಳು ಬಂದಿರಲಿಲ್ಲ. ಆದರೆ ಬ್ರ॥ಶ್ರೀ॥ತರ್ಕ ವಿದ್ವಾನ್ ವಿ.ಚಂದ್ರಶೇಖರಭಟ್ಟರವರು ಮೊದಲನೆಯ ಸಲಕ್ಕೆ ದಯಮಾಡಿಸಿದ್ದರು. ಇವರು ಮುಂದಿನ ಹಲವು ಸಪ್ತಾಹಗಳಲ್ಲಿ ಸಹಕರಿಸಿ ಉಪಕಾರ ಮಾಡುತ್ತಾ ಬಂದಿರುತ್ತಾರೆ.

ಈ ಐದುವರ್ಷಗಳು ಪರಸ್ಥಳದಿಂದ ಬಂದ ಅತಿಥಿಗಳನ್ನು ನಾನು, ವಿಠಲಶಾಸ್ತ್ರಿಗಳು, ನಂ.ಭಾಗವತರು, ಇವರುಗಳು ಹಂಚಿಕೊಂಡು ಭೋಜನ ಮಾಡಿಸುತ್ತಿದ್ದೆವು. ನಂ.ಭಾಗವತರು 1932ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದಿದ್ದು, ನಮ್ಮ ಮನೆಯ ಸಮೀಪದಲ್ಲಿಯೇ ಮನೆ ಮಾಡಿಕೊಂಡಿದ್ದರು. ಭೋಜನಕಲಾಪವನ್ನು ಹೆಚ್ಚಾಗಿ ಇಟ್ಟುಕೊಳ್ಳಬಾರದು, ಜ್ಞಾನಯಜ್ಞವೇ ಪ್ರಧಾನವಾಗಿ ನಡೆಯಬೇಕು - ಎಂಬುದೇ ನಮ್ಮ ಪ್ರಥಮೋದ್ದೇಶವಾಗಿದ್ದದ್ದರಿಂದ ನಾವುಗಳು ಆ ವಿಷಯವನ್ನು ಅಷ್ಟಾಗಿ ಮನಸ್ಸಿಗೆ ಹತ್ತಿಸಿಕೊಳ್ಳಲಿಲ್ಲ. ಆದರೂ ಶ್ರೀಯುತ ಚಿಕ್ಕಬಳ್ಳಾಪುರದ ವಾಸುದೇವರಾಯರು ಆಂಗೀರಸ, ಶ್ರೀಮುಖ, ಭಾವ, ಯುವ ಈ ಸಂವತ್ಸರಗಳು ದ್ವಾದಶಿಯ ದಿನ ಬಂದಿದ್ದ ಬ್ರಾಹ್ಮಣರುಗಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಸಮಾರಾಧನೆ ಮಾಡಿಸಿದ್ದರು. ಎ.ಕೆ.ಶಂಕರಯ್ಯನವರೂ ಸೀತಾರಾಮಯ್ಯನವರೂ ಹೊರಗಿನಿಂದ ಬಂದವರಿಗೆ

ಆತಿಥ್ಯವನ್ನು ಮಾಡುವುದರಲ್ಲಿ ಭಾಗವಹಿಸಿದ್ದರು. ಉತ್ಸವಗಳ ವರದಿಯನ್ನು ಬರಿಯ ಜಮಾ ಖರ್ಚುಗಳ ಪಟ್ಟಿಯಾಗಿ ಮಾಡದೆ ಉತ್ಸವದಲ್ಲಿ ನಡೆದ ಕಾರ್ಯಕ್ರಮಗಳನ್ನು, ಪ್ರವಚನ ಪುರಾಣಾದಿಗಳ ಸಾರವನ್ನು ಸಂಗ್ರಹಿಸಿ ಜನರಿಗೆ ಉಚಿತವಾಗಿ ಹಂಚುತ್ತಾ ಬಂದದ್ದರಿಂದ ಶಂಕರ ಸಪ್ತಾಹವು ಜನರಿಗೆ ಮೆಚ್ಚಾಗುತ್ತಾ ಬಂದವು. ಅವುಗಳಲ್ಲಿ ಹೆಚ್ಚು ಸಂಖ್ಯೆಯ ಜನರು ಉತ್ಸಾಹವನ್ನು ತೋರಿಸುತ್ತಾ ಬಂದರು. ಶಂಕರಮಠದವರು ಕೂಡ ಸ್ವಲ್ಪಮಟ್ಟಿಗೆ ನಮ್ಮ ಕ್ರಮವನ್ನು ಅನುಸರಿಸುವ ಉತ್ಸಾಹವನ್ನು ತೋರಿಸಿದರು ; ನಮ್ಮ ವಿದ್ವಾಂಸರುಗಳು ಅಲ್ಲಿಗೂ ಹೋಗಿ ಸಹಕರಿಸಿದರು.

ಆರನೆಯ ವರ್ಷಕ್ಕೆ ಶಂಕರಸಪ್ತಾಹದ ವ್ಯಾಪ್ತಿಯು ಬೆಂಗಳೂರಿನಿಂದ ಹೊರಕ್ಕೆ ಆಯಿತು. ಅಷ್ಟರಲ್ಲಿ ವಿಠ್ಠಲಶಾಸ್ತ್ರಿಗಳವರು ಶಿವಮೊಗ್ಗಕ್ಕೆ ವರ್ಗವಾಗಿ ಹೋಗಿದ್ದರು. ಅವರು ಆವೂರಲ್ಲಿ ಜನರಿಗೆ ವೇದಾಂತಪಾಠವನ್ನು ಹೇಳುವುದಕ್ಕೆ ಪ್ರಾರಂಭಿಸಿ ಜನಾನುರಾಗಕ್ಕೆ ಪಾತ್ರರಾಗಿದ್ದರು. ಕಾರ್ಯಾಲಯದ ಅಂಗವಾಗಿ ಎರಡೂವರೆ ವರ್ಷಗಳಿಂದಲೂ ಗೀತಾ ತರಗತಿಯನ್ನು ಏರ್ಪಡಿಸಿ ಮಾಡುತ್ತಿದ್ದ ಪ್ರವಚನವು ಮುಗಿದು 29-3-36ರಲ್ಲಿ ಮಂಗಳವನ್ನು ಮಾಡಿ ದೊಡ್ಡ ಸಭೆಯನ್ನು ಮಾಡಿ ಗೀತೋಪದೇಶದ ತಿರುಳು ಎಂಬ ವಿಷಯದಲ್ಲಿ ಉಪನ್ಯಾಸವನ್ನು ಮಾಡಿ ಎಲ್ಲರಿಗೂ ವೇದಾಂತದಲ್ಲಿ ಆಸಕ್ತಿಯನ್ನುಂಟುಮಾಡಿದ್ದರು. ಅದಕ್ಕಿಂತಲೂ ಮುಂಚೆ ಹರಿಹರದ ರಥೋತ್ಸವ ಕಾಲದಲ್ಲಿ ನಡೆದ ವಿದ್ವತ್ಸಮ್ಮೇಳನದಲ್ಲಿ ಅವರು ಅದ್ವೈತ ವಿಷಯಕ್ಕೆ ಮಾಡಿದ ಉಪನ್ಯಾಸಗಳು ಮಾಧ್ವದ್ವೈತಿಗಳಲ್ಲಿ ಕೆಲವರ ಕುತೂಹಲವನ್ನು ಕೆರಳಿಸಿತ್ತು. ಆದ್ದರಿಂದ ಶಿವಮೊಗ್ಗದಲ್ಲಿ ಏರ್ಪಡಿಸಿದ (26-4-36 ರಿಂದ 3-5-36) ಈ ಉತ್ಸವಕ್ಕೆ ಕೆಲವು ಮಾಧ್ವವಿದ್ವಾಂಸರು ದಯಮಾಡಿಸಿದ್ದರು.

ವಿಠಲಶಾಸ್ತ್ರಿಗಳೇ ಅಲ್ಲದೆ ಬ್ರ॥ಶ್ರೀಗಳಾದ ಪಾಟಣಕರ ಚಂದ್ರಶೇಖರಭಟ್ಟರು, ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು- ಈ ವಿದ್ವಾಂಸರುಗಳೂ ಸಹಾಯಮಾಡಿದರು. ಕೀರ್ತನಕ್ಕೆ ನಂ.ಭಾಗವತರು, ರಾಮಣ್ಣನವರು ಇಬ್ಬರೂ ಬಂದಿದ್ದರು. ಶಿವಮೊಗ್ಗದ ಮಹಾಜನರು ಆಸ್ಥಾನ ಮಹಾವಿದ್ವಾನ್ ಕುಕ್ಕೇ ಸುಬ್ರಹ್ಮಣ್ಯಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶಂಕರಸಪ್ತಾಹ ಸಭೆಯನ್ನು ಏರ್ಪಡಿಸಿಕೊಂಡು ಕಾರ್ಯವನ್ನು ಬಹಳ ದಕ್ಷತೆಯಿಂದ ನಿರ್ವಹಿಸಿದರು. ಉತ್ಸವವು ಭೀಮೇಶ್ವರ ದೇವಾಲಯದಲ್ಲಿ ನಡೆಯಿತು. ಬೆಳಗ್ಗೆ ಭೀಮೇಶ್ವರ ದೇವರಿಗೆ ಅಭಿಷೇಕಪೂಜಾದಿಗಳನ್ನೂ, ಆಚಾರವಂತರಿಗೆಲ್ಲಾ ಹೊಂದುವಂತೆ ಭೋಜನದ ಏರ್ಪಾಡನ್ನು ಬೇರೆಬೇರೆಯ ಮಹೋದಯರ ಮೇಲುವಿಚಾರಣೆಯಲ್ಲಿ ಸಮರ್ಪಕವಾಗಿ ಮಾಡಿದ್ದರು. ಒಟ್ಟು ಕಾರ್ಯದ

ಮೇಲುವಿಚಾರಣೆಯನ್ನು ಅಡ್ವೋಕೇಟ್ ವೆಂಕಟಸುಬ್ಬಾಶಾಸ್ತ್ರಿಗಳೂ ಮತ್ತು ಶ್ರೀಕಂಠಯ್ಯನವರೂ ವಹಿಸಿದ್ದರು. ಪ್ರತಿದಿನವೂ ಆಯಾ ದಿನದ ಅಭಿಷೇಕ, ಪೂಜೆ, ಸಂತರ್ಪಣೆ ಇವುಗಳ ಖರ್ಚನ್ನು ಒಬ್ಬೊಬ್ಬ ಮಹನೀಯರು ಒಪ್ಪಿಕೊಂಡಿದ್ದರು. ಕಾರ್ಯದ ಪ್ರಾರಂಭೋತ್ಸವವನ್ನು ಡೆಪ್ಯುಟಿಕಮಿಷನರ್ ಎಸ್. ನಾರಾಯಣ-ರಾಯರು ನೆರವೇರಿಸಿಕೊಟ್ಟರು. ಹೊರಗಿನಿಂದ ಬಂದವರಿಗೆ ಚಿಕಿತ್ಸಾದಿಗಳನ್ನು ಡಾ|| ದತ್ತಾತ್ರಿರಾಯರು ನೋಡುತ್ತಿದ್ದರು. ದೀಪದ ಖರ್ಚನ್ನು ಎಲೆಕ್ಟ್ರಿಕ್ ಕಂಪೆನಿಯ ನೌಕರರು ವಹಿಸಿಕೊಂಡಿದ್ದರು. ಪ್ರತಿದಿನವೂ ಇನ್ನೂರರಿಂದ ಮುನ್ನೂರು ಜನರು ಭೋಜನಕ್ಕೆ ಸೇರಿರಬಹುದೆಂದು ತೋರುತ್ತದೆ. ಶಿವಮೊಗ್ಗದವರು ಬಂದ ಪರಸ್ಥಲದ ವಿದ್ವಾಂಸರಿಗೆ ಪ್ರಯಾಣದ ಖರ್ಚನ್ನು ಕೊಟ್ಟು ಸಪ್ತಾಹದ ವೆಚ್ಚವನ್ನೂ ವಹಿಸಿಕೊಂಡರು. ಒಟ್ಟಿನಲ್ಲಿ ಈ ಸಲದ ಉತ್ಸವವು ಎಲ್ಲಾ ಬಗೆಯಿಂದ ಹಿಂದಿನ ಉತ್ಸವಗಳಿಗಿಂತ ಮೇಲುಗೈಯಾಗಿದ್ದೆಂದು ಹೇಳಬಹುದು. ಉತ್ಸವವು ಮುಗಿಯುವ ಹೊತ್ತಿಗೆ ಬ್ರಹ್ಮಸೂತ್ರಭಾಷ್ಯದ ಐದು ಅಧಿಕರಣಗಳು ಪರಿಶಿಷ್ಟಸಹಿತ ಅಚ್ಚಾಗಿ ಪುಸ್ತಕಗಳನ್ನು ಮಾರಲಾಯಿತು. ಇದೇ ವರ್ಷದಲ್ಲಿ ಹರಿಹರದಲ್ಲಿ ದಶಮಿಯಿಂದ ಪೂರ್ಣಿಮೆಯವರೆಗೆ ನಡೆದ ಶಂಕರೋತ್ಸವದಲ್ಲಿಯೂ ನಾನೂ ವಿಠಲಶಾಸ್ತ್ರಿಗಳೂ ಭಾಗವಹಿಸಿದ್ದೆವು.

## ಕೃಷ್ಣಸ್ವಾಮಿ ಅಯ್ಯರವರ ಹೊಸಗ್ರಂಥ :

ಒಂದು ದೃಷ್ಟಿಯಿಂದ ನೋಡಿದರೆ ಈಗ್ಗೆ ಕೃಷ್ಣಸ್ವಾಮಿಅಯ್ಯರೇ ಒಳ ಉಸಿರಾಗಿದ್ದರು ಎನ್ನಬಹುದು. ಅವರ ಪ್ರೇರಣೆಯಿಲ್ಲದಿದ್ದರೆ ಮೂಲಾವಿದ್ಯಾನಿರಾಸವು ದೇಹಧಾರಣೆ ಮಾಡುತ್ತಿರಲಿಲ್ಲ. ಮುದ್ರಣಾಲಯವು ಸ್ಥಾಪಿತವಾಗುತ್ತಿರಲಿಲ್ಲ. ಕಾರ್ಯಾಲಯದ ಗ್ರಂಥಗಳೂ ಹೊರಕ್ಕೆ ಬರುತ್ತಿರಲಿಲ್ಲ. ಅವರ ಲೇಖನಗಳು ಪತ್ರಿಕೆಯಲ್ಲಿ ಇದ್ದೇ ಇರುತ್ತಿದ್ದವು, ಸಪ್ತಾಹ ಮುಂತಾದ ಅನುಷ್ಠಾನಗಳಲ್ಲಿ ಒಂದಲ್ಲ ಒಂದು ರೀತಿಯಿಂದ ಅವರು ಭಾಗವನ್ನು ವಹಿಸುತ್ತಿದ್ದರು. ನಾನು ಅ.ಪ್ರ ಪತ್ರಿಕೆಯಲ್ಲಿ ಅವಸ್ಥಾತ್ರಯ ವಿಚಾರದ ಲೇಖನಗಳನ್ನು ಸಂತತವಾಗಿ ಬರೆಯುವದಕ್ಕೆ ಅವರೊಡನೆ ನಡೆದ ಸಂಭಾಷಣೆಯೂ ಅವರ ಗ್ರಂಥರಚನೆಯೂ ಪ್ರೇರಕವಾದವು. ತುಮಕೂರಿನಿಂದ ಅವರು ಬಂದ ಮೇಲೆ 1930ರವರೆಗೂ ಹೀಗೆ ಅವರ ಒತ್ತಾಸೆಯೂ ನನಗೆ ಇದ್ದೇ ಇತ್ತು. ಬಸವನಗುಡಿಯಲ್ಲಿದ್ದ ತಮ್ಮ ಮನೆಯನ್ನು ಮಾರಿ ಬುಲ್‌ಟೆಂಪಲ್ ರಸ್ತೆಯ ಮನೆಗೆ ಬಂದ ಮೇಲೆಯೇ 1930ರ ಕೊನೆಕೊನೆಗೆ **Vedanta or the Science of Reality** (ವೇದಾಂತ ಅಥವಾ ಪರಮಾರ್ಥದ ತತ್ತ್ವಶಾಸ್ತ್ರ) ಎಂಬ ಉದ್ಗ್ರಂಥವು ಹೊರಕ್ಕೆ ಬಂದಿತು. ಆ ಗ್ರಂಥವು ಸಿದ್ಧವಾಗುತ್ತಿದ್ದಾಗ

ನಾನು ಅವರೊಡನೆ ವಿಷಯಗಳನ್ನು ಚರ್ಚಿಸುತ್ತಿದ್ದೆನಾದರೂ ಅವರು ಬರೆದ ಪುಸ್ತಕಗಳನ್ನು ಅಚ್ಚಾಗುವ ಮುನ್ನ ನೋಡುವ ಭಾಗ್ಯವು ನನಗೆ ಬರಲಿಲ್ಲ. ಅವರೇನೊ ಉದಾರಭಾವದಿಂದ ಇವರು ನನಗೆ ಶಂಕರಾಚಾರ್ಯರ ಕೆಲವು ಕ್ಲಿಷ್ಟವಾಕ್ಯಗಳಿಗೆ ಅರ್ಥವನ್ನು ವಿವರಿಸಿ ತಿಳಿಸಿಕೊಟ್ಟಿರುತ್ತಾರೆ ಎಂದು ಬರೆದಿರುತ್ತಾರಾದರೂ ಸಂಭಾಷಣೆಯ ಕಾಲಕ್ಕೆ ನನ್ನ ಬಾಯಿಂದ ಮಾತುಗಳನ್ನು ಅವರು ನೆನಪಿನಿಂದ ಉಪಯೋಗಿಸಿಕೊಂಡಿರಬಹುದೇ ಹೊರತು ಆ ಗ್ರಂಥಕ್ಕಾಗಿ ಹೇಳಿದವುಗಳಲ್ಲ. ಆ ಗ್ರಂಥವು ಸಾಕಾದಷ್ಟು ಪ್ರಚಾರವಾಗಿಲ್ಲ. ಆ ಮಹಾತ್ಮರ ತತ್ತ್ವನಿರೂಪಣ-ಸಾಮರ್ಥ್ಯವೂ ಜನರಿಗೆ ಚೆನ್ನಾಗಿ ವಿಶದವಾಗಿಲ್ಲ. **The world knows nothing of its greatmen.** ಪ್ರಪಂಚಕ್ಕೆ ತನ್ನಲ್ಲಿರುವ ಮಹಾತ್ಮರ ವಿಷಯವೇನೂ ತಿಳಿಯದು ಎಂಬ ಆಂಗ್ಲ ಸೂಕ್ತಿಯು ಅವರ ವಿಷಯಕ್ಕೆ ಅನ್ವರ್ಥವಾಗಿದೆ. ಅವರ ಗ್ರಂಥವನ್ನು ಚೆನ್ನಾಗಿ ಮನನಮಾಡಿಕೊಂಡು ಉಪಯೋಗಿಸಿಕೊಳ್ಳುವವರಿಗೆ ಅದೊಂದು ಅಮೋಘವಾದ ರತ್ನಗಳ ಘನಿಯಾಗಿದೆ ಎನ್ನಬಹುದು. ಕಾರ್ಯಾಲಯದ ಅಭಿವೃದ್ಧಿಗೆ ನೇರಾಗಿ ಸಂಬಂಧಪಡದೆ ಇದ್ದರೂ ಪುರಾಣೇತಿಹಾಸಗಳಿಗೆ ವೇದವಿರುವ ಹಾಗೆ ಕಾರ್ಯಾಲಯದ ಅನೇಕ ಗ್ರಂಥಗಳಿಗೆ ಆ ಗ್ರಂಥವು ಮೂಲಸ್ಥಾನವಾಗಿರುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದ ಅದನ್ನು ಇಲ್ಲಿ ಉಲ್ಲೇಖಿಸಿರುತ್ತೇನೆ.

## ಮೂಲಾವಿದ್ಯಾನಿರಾಸದ ಪ್ರಸಾರ:

ಮೂಲಾವಿದ್ಯಾನಿರಾಸವು ಹೊರಟ ಕಾಲಕ್ಕೆ ನಮ್ಮ ದೇಶದಲ್ಲಿ ಸ್ವಲ್ಪ ಗದ್ದಲವೆದ್ದು ನಿಂತುಬಿಟ್ಟಿತು. ಆದರೂ ಅದರ ವ್ಯಾಪ್ತಿಯು ಪರದೇಶಗಳಿಗೆ ಹಬ್ಬುತ್ತಿತ್ತು. ನಮಗೆ ಗುಜರಾತು ಕಡೆಯಿಂದ ಒಬ್ಬ ಸ್ವಾಮಿಗಳು ಆ ಪುಸ್ತಕಗಳಿಗಾಗಿ ಬರೆಯುತ್ತಲೇ ಇದ್ದರು. ಅವರು ಯಾರೆಂಬುದು ಆಗ್ಗೆ ತಿಳಿಯಲಿಲ್ಲ.

## ಚಿಕ್ಕಲಿಂಗಣ್ಣನವರು:

ಇವರ ಪರಾಮರ್ಶವು ಗರಡಿ ರಾಚಪ್ಪನವರ ಸಂಬಂಧದಿಂದ ಬಂದಿದೆ. ಇವರು ಕೃಷ್ಣಸ್ವಾಮಿ ಅಯ್ಯರವರ **Fundamentals** ಎಂಬ ಗ್ರಂಥದ ಅನುವಾದದ ಅನುವಾದವಾದ ವೇದಾಂತವಿಚಾರದ ಗುಟ್ಟನ್ನು ಓದಿದ ಮೇಲೆ ತತ್ತ್ವವಿಚಾರದಕ್ಷರಾದ ಕೃ. ಸ್ವಾ. ಅಯ್ಯರವರನ್ನು ನೋಡಲೇಬೇಕೆಂದು ಹಾತುವರಿಯುತ್ತಾ ಬೆಂಗಳೂರಿಗೆ ಬಂದಾಗ ಅವರನ್ನೂ, ಅವರ ಗ್ರಂಥವನ್ನೂ ಅನುವಾದ ಮಾಡಿದ ನನ್ನನ್ನೂ ಕಂಡು ಮಾತನಾಡಿದರು. ನನ್ನನ್ನು ಮೊದಲನೆಯ

ಸಲ ಕಂಡಾಗ ನನಗೆ ಮೈ ಸ್ವಾಸ್ಥ್ಯವಿರಲಿಲ್ಲ ; ಅವರ ಜೊತೆಯಲ್ಲಿ ಬಂದಿದ್ದ ಸಂಪಂಗಿರಾಮಯ್ಯನೆಂಬವರು ಯಾವದೋ ಅನುಭವವೈದ್ಯವನ್ನು ಹೇಳಿದರು. ಸಂಪಂಗಿರಾಮಯ್ಯನವರೇ ಲಿಂಗಣ್ಣನವರ ಪರಿಚಯವನ್ನು ಮಾಡಿಕೊಟ್ಟರು. ಲಿಂಗಣ್ಣನವರ ಭವ್ಯಮೂರ್ತಿಯೂ ಅವರು ಮಾತನಾಡುವ ಭಾಷೆಯೂ ಶೈಲಿಯೂ ಅವರು ಸುಸಂಸ್ಕೃತರೆಂಬುದಕ್ಕೆ ಹೆಗ್ಗುರುತಾಗಿದ್ದವು. ಆ ದಿನ "ನನ್ನನ್ನು ಏನಾದರೂ ಕೇಳಬಹುದೆ ? ಆಯಾಸವಿಲ್ಲದೆ ಸ್ವಲ್ಪದರಲ್ಲಿ ಅಪ್ಪಣೆಕೊಡಿಸಿದರೂ ಸಾಕು" ಎಂದು ಪೀಠಿಕೆಯನ್ನು ಹಾಕಿಕೊಂಡು 'ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥' (ಗೀ 6-29) ಎಂಬ ಗೀತಾಶ್ಲೋಕದ ವಿಷಯವಾಗಿ ಪ್ರಶ್ನೆ ಮಾಡಿದರು. ನಾನು ಆ ಶ್ಲೋಕದಲ್ಲಿ ಹೇಳಿರುವುದು ಪಾತಂಜಲಯೋಗವಲ್ಲ. ವೇದೋಕ್ತವಾದ ಧ್ಯಾನಯೋಗವೆಂಬ ಹೆಸರುಳ್ಳ, ನಿದಿಧ್ಯಾಸನವೆಂಬುದನ್ನು ವಿವರಿಸಿ, ಧ್ಯಾನಯೋಗದಿಂದ ತತ್ತ್ವವನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುತ್ತಾರೆ. ಈಗ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸದಿಂದ ಪ್ರತಿಯೊಬ್ಬರಿಗೂ ನಾನು ಕರ್ತೃಭೋಕ್ತೃರೂಪನು ಪ್ರಪಂಚದಲ್ಲಿರುವ ಧರ್ಮಾಧರ್ಮಸುಖದುಃಖಾದಿಗಳ ತಾರತಮ್ಯವುಳ್ಳ ಅನೇಕ ಜೀವರುಗಳಲ್ಲಿ ಒಬ್ಬನು ಎಂಬ ತಪ್ಪುತಿಳಿವಳಿಕೆಯಿಂದ ವ್ಯಥೆಪಡುತ್ತಿದ್ದನಷ್ಟೆ, ಧ್ಯಾನಯೋಗದ ಫಲವಾಗಿ ಎಲ್ಲರಿಗೂ ಆತ್ಮನು ಒಬ್ಬನೇ, ಬ್ರಹ್ಮವನ್ನು ಮೊದಲುಗೊಂಡು ಸ್ತಂಬದವರೆಗಿನ ಪ್ರಾಣಿಗಳೆಲ್ಲವೂ ಆತ್ಮನಲ್ಲಿ ಒಂದಾಗಿವೆ - ಎಂಬ ನಿರ್ವಿಶೇಷ ಬ್ರಹ್ಮಾತ್ಮೈಕ್ಯವನ್ನು ಕಂಡುಕೊಳ್ಳುತ್ತಾನೆ ಎಂಬುದು ಶ್ಲೋಕದ ಅಭಿಪ್ರಾಯವು" ಎಂದು ವಿವರಿಸಿದೆನು. "ತಾವು ಹೇಳಿದ್ದನ್ನು ನಾನು ಎಷ್ಟುಮಟ್ಟಿಗೆ ತಿಳಿದುಕೊಂಡಿರುವೆನೆಂಬುದನ್ನು ನಿಶ್ಚಯಿಸಿಕೊಳ್ಳುವದಕ್ಕಾಗಿ ಸ್ವಲ್ಪ ಅನುವಾದ ಮಾಡಿ ಹೇಳುತ್ತೇನೆ. ಏನಾದರೂ ದೋಷಾರೋಪಗಳಿದ್ದರೆ ಅಪ್ಪಣೆಕೊಡಿಸಬೇಕು ಎಂದು ಚಿಕ್ಕಲಿಂಗಣ್ಣನವರು ಸ್ಫುಟವಾದ ಅಸ್ಖಲಿತವಾದ ವಾಣಿಯಿಂದ ನಾನು ಹೇಳಿದ್ದನ್ನು ವಿಸ್ತರಿಸಿ ಹೇಳಿದರು. ಅವರು ಶಾಸ್ತ್ರವಿಭಾಗದ ಸರಣಿಯನ್ನು ಅರಿತುಕೊಂಡಿರುವವರು. ಸ್ವಾಭಿಪ್ರಾಯವನ್ನು ಸುಸ್ಪಷ್ಟವಾಗಿ ತಿಳಿಸಬಲ್ಲ ಭಾಷೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವರು – ಎಂಬುದು ಆಗಲೆ ನನಗೆ ವ್ಯಕ್ತವಾಯಿತು. 'ತಮಗೆ ಆಯಾಸವಾಗಿದೆ ಇನ್ನೊಂದು ಸಲ ನೋಡುತ್ತೇನೆ' ಎಂದು ಹೊರಟವರು ಮತ್ತೆ ನಮ್ಮ ಮನೆಗೆ ಬರುವದಕ್ಕೆ ಅವರಿಗೆ ಅವಕಾಶವೇ ಸಿಕ್ಕಲಿಲ್ಲ, ಮೈಸೂರಿಗೆ ನಾನು ಒಂದು ಸಲ ಅಧ್ಯಾತ್ಮಪ್ರಕಾಶದ ಪ್ರಚಾರಕ್ಕೆಂದು ಹೋದಾಗ ಒಂದೆರಡು ಸಲ ಅವರಿದ್ದಲ್ಲಿಗೆ ಹೋಗಿದ್ದೆನು. ಮೊದಲನೆಯ ಸಲ ಹೋದದ್ದು ಮೂರನೆಯ ಸಂಪುಟದ ಪ್ರಾರಂಭದೆಶೆಯಲ್ಲಿ ಎಂತ ಕಾಣುತ್ತದೆ. ಆಗ ಅವರು

ಸಂತೋಷದಿಂದ ತಮ್ಮ ಶಿಷ್ಯರಲ್ಲಿ ಕೆಲವರನ್ನು ಚಂದಾದಾರರಾಗಿ ಮಾಡಿಕೊಟ್ಟರು. ಮತ್ತೆ ಅವರನ್ನು ಕಂಡದ್ದು ಅವರ ಗುರುಗಳಾದ ಬೆಂಗಳೂರಿನ ಸಹಜಾನಂದ ಸ್ವಾಮಿಗಳ ಮಠದಲ್ಲಿ. ಅಷ್ಟು ಹೊತ್ತಿಗೆ ಅವರಿಗೆ ಕಣ್ಣು ಬಹಳ ಮಂಜಾಗಿ ದೃಷ್ಟಿ ಸರಿಯಾಗಿ ಕಾಣಿಸುತ್ತಿರಲಿಲ್ಲ. "ನಾನೇ ಬಂದು ದರ್ಶನವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೆ" ಎಂದರು ; ತಾವು ಅಲ್ಲಿಗೆ ಬರುವದಾದರೆ ಕರೆದುಕೊಂಡು ಹೋಗುತ್ತೇನೆ ಎಂದು (ಯಾರೋ - ಬಹಳಮಟ್ಟಿಗೆ ಗರಡಿ-ರಾಚಪ್ಪನವರಿರಬೇಕು) ತಿಳಿಸಿದ್ದರ ಮೇಲೆ ನಾನೇ ಹೋದೆನು. ನನ್ನೊಡನೆ ಮಾತು ಕಥೆಗಳನ್ನು ಆಡುತ್ತಾ "ಆಗಾಗ್ಗೆ ದಯಮಾಡಿಸುತ್ತಿರಬೇಕು" ಎಂದು ಲಿಂಗಣ್ಣನವರು ಹೇಳುತ್ತಿದ್ದರು. ಒಂದೊಂದು ದಿನ ಅವರ ಪಂಚದಶೀ ನಿರೂಪಣಗಳನ್ನು ಕೇಳಿ ಬರುತ್ತಿದ್ದೆ. ನಾನು ವಿಶ್ವೇಶ್ವರಪುರದ ಸ್ಕೂಲಿನಲ್ಲಿ ಹೆಡ್ ಮಾಸ್ಟರ್ ಆಗಿದ್ದಾಗ ಅವರ ಮಠಕ್ಕೆ ಹೋಗುವದು ಬರುವದು ಹೆಚ್ಚಾಯಿತು. ಪಾಠ ಕಾಲದಲ್ಲಿ ಆಗಾಗ್ಗೆ ಕೃ.ಸ್ವಾ.ಅಯ್ಯರವರೂ ಬರುತ್ತಿದ್ದು ನಾನು ಜೊತೆಯಲ್ಲಿರುತ್ತಿದ್ದದ್ದು ಉಂಟು. ಆಗ್ಗೆ ಅನೇಕ ವೇದಾಂತವಿಷಯಗಳ ಚರ್ಚೆಗಳು ಬಂದೊದಗುತ್ತಿದ್ದವು. ನಾನು ಹೇಳುತ್ತಿದ್ದ ಅನೇಕ ವಿಷಯಗಳು ಅವರಿಗೆ ಸಂಪ್ರದಾಯವಿರುದ್ಧವೆಂದು ಕಂಡು ಬಂದರೂ ಶಾಂತರಾಗಿಯೇ ವಿಚಾರ ಮಾಡುತ್ತಾ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ಬರಮಾಡಿಕೊಳ್ಳುತ್ತಿದ್ದರು. ಅವರು ನಡೆಯಿಸುತ್ತಿದ್ದ ಪಾಠಗಳ ಶ್ರವಣಕ್ಕೆ ಅಡ್ಡಿಯಾಗದಂತೆ ನನಗೆ ಬಿಡುವಿದ್ದಾಗ ಮಧ್ಯಾಹ್ನದ ಮೇಲೆ ಸ್ವಲ್ಪಹೊತ್ತು ಎಷ್ಟೋ ದಿನಗಳು ನಾನು ಮಠಕ್ಕೆ ಹೋದದ್ದುಂಟು. ಇತ್ತೀಚೆಗೆ ಅವರು ಪಾಠದಲ್ಲಿ ಹೊಸದಾಗಿ ಪ್ರಕಟವಾಗಿರುವ ನನ್ನ ಗ್ರಂಥಗಳನ್ನು ಮಾರಾಟಕ್ಕೆ ಇಡಿಸಿ ಬೇಕಾದವುಗಳನ್ನು ತೆಗೆದುಕೊಂಡು ಓದುವಂತೆ ಶಿಷ್ಯರಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. (ಅವರಲ್ಲಿ ಶಿಷ್ಯರಾಗಿ ವೇದಾಂತದ ಗ್ರಂಥಗಳನ್ನು ಅಭ್ಯಾಸಮಾಡುತ್ತಿದ್ದ ಬಿ.ಎಚ್.ಮುನಿಸ್ವಾಮಿ-ರಾವ್ಎಂಬುವರು ಬರೆದಿರುವ ಚಿಕ್ಕಲಿಂಗಣ್ಣಸ್ವಾಮಿಯವರ ಜೀವನಚರಿತ್ರೆ ಎಂಬ ಪುಸ್ತಕದಲ್ಲಿ 92 ರಿಂದ 99 ಪುಟಗಳನ್ನು ನೋಡಿರಿ.) ಬಿ.ಎಚ್.ಮುನಿಸ್ವಾಮಿ-ರಾವ್ಎಂಬುವರು ಎಷ್ಟೋ ದಿನ ನನ್ನ ಜೊತೆಯಲ್ಲಿ ನಮ್ಮ ಮನೆಯವರೆಗೂ ವಿಚಾರಮಾಡಿದ ಪ್ರಶ್ನೆಗಳ ವಿಷಯವಾಗಿ ಕೇಳಿಕೊಂಡು ಬರುತ್ತಿದ್ದದ್ದೂ ಉಂಟು. (ಪಂಡಿತ ಬಿ.ಎಚ್.ಎಮ್.ಆರ್. ಎಂಬ ಹೆಸರೂ ಈಚೆಗೆ ಅವರಿಗೆ ಕೆಲವು ದಿನಗಳು ಇತ್ತು. ಈಗ ರಾಮನಾಥಸ್ವಾಮಿ ಎಂದು ಅವರನ್ನು ಕರೆಯುತ್ತಿದ್ದಾರೆ.) ಅವರು ನನ್ನ ವಿಚಾರ ಸರಣಿಯಲ್ಲಿ ಬಹಳ ಕುತೂಹಲವನ್ನು ತೋರಿಸಿದ್ದಲ್ಲದೇ ಮೈಸೂರಿ-ನಲ್ಲಿದ್ದಾಗ ಉಪದೇಶಸಾಹಸ್ರಿಯೇ ಮುಂತಾದ ಗ್ರಂಥಗಳನ್ನು ಲಿಂಗಣ್ಣಯ್ಯನವರ ಶಿಷ್ಯರುಗಳಲ್ಲಿಯೂ, ಪರಿಚಿತರಲ್ಲಿಯೂ, ಪ್ರಚಾರಮಾಡುವದರಲ್ಲಿ ಆಸಕ್ತಿಯನ್ನು

ವಹಿಸಿದರು. ಚಿಕ್ಕಲಿಂಗಣ್ಣಯ್ಯನವರು ಆ ಗ್ರಂಥಗಳನ್ನು ಅವರಿಂದ ಓದಿಸಿ ಕೇಳಿ ಬಹಳ ಸಂತೋಷಪಡುತ್ತಿದ್ದರಂತೆ. 1935ನೆಯ ಫೆಬ್ರವರಿಯಲ್ಲಿ ಮೈಸೂರಿನ ಶ್ರೀರಾಮಕೃಷ್ಣಮಠದವರು ನನ್ನನ್ನು ಶ್ರೀರಾಮಕೃಷ್ಣಜಯಂತಿಯ ಉತ್ಸವದ ಉಪನ್ಯಾಸಕ್ಕೆ ಕರೆಯಿಸಿದ್ದರು. ನಾನು ಬರುವ ಸುದ್ದಿಯನ್ನು ಕೇಳಿದ ಲಿಂಗಣ್ಣಯ್ಯನವರು ಅಲ್ಲಿಗೆ ಬಂದಿದ್ದರು. ನನ್ನ ಉಪನ್ಯಾಸವನ್ನು ಬಹಳ ಕುತೂಹಲ ದಿಂದ ಕೇಳಿದರು. ಅವರ ಪ್ರಾರ್ಥನೆಯಂತೆ ಮಾರನೆಯ ದಿನ ಜಗ್ಗಾಲಾಲ ಛತ್ರದಲ್ಲಿ ನಾನು ಒಂದು ಉಪನ್ಯಾಸವನ್ನು ಮಾಡಿದೆನು. ಆ ದಿನ ಉಪನ್ಯಾಸಕ್ಕೆ ಪೂರ್ವದಲ್ಲಿ ತಲಕಾಡು ಗಮಕಕಲಾಕೋವಿದ ಮಾಯಿಕಗೌಡರ ಭಾರತವಾಚನವಾಗಿತ್ತು. ಹಿರಿಯಣ್ಣನೆಂಬವರು ಅರ್ಥವಿವರಣೆಯನ್ನು ಮಾಡಿದ್ದರು. ಜನ ಕಿಕ್ಕಿರಿದು ಹೋಗಿತ್ತು. ಆ ಸಭೆಯಲ್ಲಿ ಲಿಂಗಣ್ಣನವರು ಅಲ್ಲಿಗೆ ಬಂದಿದ್ದರು. ನನ್ನನ್ನು ಬಾಯಿತುಂಬ ಹೊಗಳಿ ಆಗ ಇನ್ನು ಪ್ರಕಟವಾಗಲಿದ್ದ ಬ್ರಹ್ಮಸೂತ್ರವನ್ನು ಅವಶ್ಯವಾಗಿ ಕೊಂಡುಕೊಂಡು ಕೃತಾರ್ಥರಾಗಬೇಕೆಂದು ಕೇಳಿಕೊಂಡರು. ಮಾರನೆಯ ವರ್ಷ ಅವರು ಬೆಂಗಳೂರಿಗೆ ಬಂದಾಗಲೂ ಮಠದಲ್ಲಿ ಆಗಾಗ್ಗೆ ಯಾವುದಾದರೊಂದು ಚರ್ಚೆಯು ನಡೆಯುತ್ತಲೇ ಇದ್ದಿತು. ಅಧ್ಯಾತ್ಮಪ್ರಕಾಶಕಾರ್ಯಾಲಯದ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದ ಚಿಕ್ಕಲಿಂಗಣ್ಣನವರು 1937ನೇ ಫೆಬ್ರವರಿಯಲ್ಲಿ ಮುಕ್ತರಾದರು.

## ವಿರೂಪಾಕ್ಷಶಾಸ್ತ್ರಿಗಳು :

ಇವರು ಮೈಸೂರಿಗೆ ದಯಮಾಡಿಸಿದಮೇಲೆ ಅವರ ವಿದ್ವತ್ತು ಎಲ್ಲೆಲ್ಲಿಯೂ ಪ್ರಸರಿಸಿತ್ತು. ಅಲ್ಲಿಯ ಸಂಸ್ಕೃತ ಮಹಾಪಾಠಶಾಲೆಯ ಸ್ವರ್ಣಮಹೋತ್ಸವ ಕಾಲಕ್ಕೆ ಬಂದಿದ್ದ ಪಂಡಿತ ಮದನಮೋಹನಮಾಳವೀಯರೊಡನೆ ಕೆಲವು ಮತ ಸುಧಾರಣೆಗಳ ವಿಷಯದಲ್ಲಿ ಚರ್ಚಿಸಿ ವಿಧವಾ ವಿವಾಹಾದಿಗಳು ಅಶಾಸ್ತ್ರೀಯ-ವೆಂಬುದನ್ನು ಮನಗಾಣಿಸಿ ಕೊಟ್ಟರಂತೆ. ಅದರ ಹಿಂದೆಯೂ ಆಮೇಲೂ ಮಾಳವೀಯರವರು ಬಂದಿದ್ದರು. ಅಲ್ಲಿ ಬ್ರಾಹ್ಮಣೇತರರಿಗೆ ಪುರಾಣಾದಿಗಳನ್ನು ಹೇಳಿ ಶ್ರವಣ ಮಾಡಿಸಬಹುದೆ ? ಪ್ರಣವಸಹಿತ ಪಂಚಾಕ್ಷರಿಯ ಉಪದೇಶವನ್ನು ಮಾಡಬಹುದೆ ? - ಮುಂತಾದ ಚರ್ಚೆಗಳನ್ನು ಪಂಡಿತರು ನಡೆಯಿಸಿದ್ದರು. ನಮ್ಮ ವಿಠ್ಠಲಶಾಸ್ತ್ರಿಗಳೂ ಅದರಲ್ಲಿ ಭಾಗವಹಿಸಿದ್ದರು. ಪ್ರಣವವನ್ನು ಉಪದೇಶಿಸ-ಬಾರದೆಂಬುದಕ್ಕೆ ವಚನವೇ ಇಲ್ಲವೆಂದು ಮಾಳವೀಯರು ವಾದಿಸುತ್ತಿರುವಾಗ ಸೂತಸಂಹಿತಾವಾಕ್ಯವನ್ನು ನಾನು ಉದಾಹರಿಸಿದ್ದಕ್ಕೆ ಅವರು ಒಪ್ಪಿಕೊಂಡಿದ್ದರು. ಉತ್ತರಾದಿಮಠದ ಸತ್ಯಧ್ಯಾನತೀರ್ಥರವರು ಬರೆಯಿಸಿದ್ದ 'ದ್ವೈತವೇದಾಂತವಿಚಾರ'

ಎಂಬ ಗ್ರಂಥದ ವಿಮರ್ಶೆಯನ್ನು ನಾನು ಬರೆದದ್ದನ್ನು ಶಾಸ್ತ್ರಿಗಳವರಿಗೆ ತೋರಿಸಿ, ಅವರ ಅನುಮತಿಯನ್ನು ಪಡೆದು, ಅಲ್ಲಿಯ ವಿದ್ವಾಂಸರುಗಳು ಕೆಲವರು ಅದನ್ನು ಅಚ್ಚುಮಾಡಿಸಿ ಕಾರ್ಯಾಲಯಕ್ಕೆ ಕೆಲವು ಪ್ರತಿಗಳನ್ನು ಕಳುಹಿಸಿದ್ದರು. ಅದು ಕೇವಲ ವಾದಗ್ರಂಥವಾದ್ದರಿಂದ ಅದನ್ನು ಕಾರ್ಯಾಲಯದಲ್ಲಿ ಅಚ್ಚು ಹಾಕಿಸುವದಕ್ಕೆ ಪ್ರಯತ್ನಿಸಲಿಲ್ಲ. ಶಾಸ್ತ್ರಿಗಳವರು ದರ್ಭಾನಗರದಲ್ಲಿ ನಡೆದ ಅಖಿಲಭಾರತ-ಮಹಾಮಹೋಪಾಧ್ಯಾಯಸನ್ಮಾನ ಸಮಾರಂಭದಲ್ಲಿ ಉಪನ್ಯಾಸಕೊಟ್ಟು ಯಶಸ್ಸನ್ನು ಗಳಿಸಿದರು. ಕಾಶಿಯಲ್ಲಿ ಅಖಿಲಭಾರತಮಹಾವರ್ಧೀಯಬ್ರಾಹ್ಮಣ ಮಹಾ-ಸಮ್ಮೇಳನಕ್ಕೆ ಹೋಗಿ ಸನಾತನ ಧರ್ಮದ ವಿಷಯವಾಗಿ ಭಾಷಣ ಮಾಡಿದ್ದರು. ಆ ಮೇಲೆ ಮಹಾರಾಜರವರು ಇವರನ್ನು ಆಸ್ಥಾನ ಧರ್ಮಾಧಿಕಾರಿಗಳಾಗಿ ನಿಯಮಿಸಿಕೊಂಡಿದ್ದರು. ಮುಂದೆ ಶ್ರೀ ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀ ವಿದ್ಯಾಭಿನವ ವಾಲುಕೇಶ್ವರಭಾರತೀ ಮಹಾಸ್ವಾಮಿಗಳೆಂಬ ಅಭಿಧಾನದಿಂದ ಕೂಡಲಿಯ ಶೃಂಗೇರಿ ಜಗದ್ಗುರು ಪೀಠವನ್ನಲಂಕರಿಸಿದರು. ಅದಾಗಿ ಒಂದು ವರ್ಷವಾಗುವದರೊಳಗೆ ಮೈಸೂರಿಗೆ ದಯಮಾಡಿಸಿದ ಸಂದರ್ಭದಲ್ಲಿ ನಾನೂ ಅವರ ದರ್ಶನವನ್ನೊಮ್ಮೆ ಪಡೆದಿದ್ದೆನು. ಸುಮಾರು ಮೂರುವರ್ಷಗಳವರೆಗೂ ಶಿಷ್ಯರಿಗೆ ಪಾಠಪ್ರವಚನ ಧರ್ಮೋಪದೇಶಾದಿಗಳನ್ನು ಮಾಡುತ್ತಿದ್ದು ಧಾತು ಸಂ॥ಚೈತ್ರ ಬಹುಳ ಶುಕ್ರವಾರ (10-01-36ರಲ್ಲಿ) ಬ್ರಹ್ಮೀಭೂತರಾದರು. ಅವರಿಂದ ಪಡೆದ ಭಾಷ್ಯಪಾಠ ಪ್ರವೇಶವು, ಅವರು ನನ್ನ ಮೇಲೆ ಇಟ್ಟಿದ್ದ ಅಭಿಮಾನವೂ ನನ್ನನ್ನು ಎಂದಿಗೂ ಋಣಮುಕ್ತನಾಗಿ ಮಾಡಲಾರವು. ಮೂಲಾವಿದ್ಯಾನಿರಾಸದ ನಿಮಿತ್ತದಿಂದ ಅವರಿಗೆ ನನ್ನಿಂದ ಸ್ವಲ್ಪ ಮನೋವ್ಯಥೆಯು ಯತ್ನವಿಲ್ಲದೆ ಆಗಿದೆ. ಆ ವಿಷಯದಲ್ಲಿ ಅವರೊಡನೆ ಸಂಭಾಷಣೆಮಾಡಿ ಕ್ಷಮಾಪಣೆ ಕೇಳುವದಕ್ಕಾಗಲಿ ನನ್ನ ಅಭಿಪ್ರಾಯವನ್ನು ಅವರಲ್ಲಿ ವಿಶದಗೊಳಿಸುವದಕ್ಕಾಗಲಿ ಕೊನೆಯವರೆಗೂ ನನಗೆ ಅವಕಾಶವು ದೊರೆಯಲಿಲ್ಲವಲ್ಲ ಎಂಬ ಪರಿತಾಪವು ನನ್ನನ್ನು ಈಗಲೂ ಬಿಟ್ಟಿಲ್ಲ.

## ಧರ್ಮಸಮ್ಮೇಲನಗಳು:

1938ರಲ್ಲಿ ಎರಡು ಧರ್ಮಸಮ್ಮೇಲನಗಳಲ್ಲಿ ನಾನು ಭಾಗವನ್ನು ವಹಿಸಿದೆನು. ಬೆಂಗಳೂರಿನಲ್ಲಿದ್ದ ಎ.ಜೆ. ಖಲೀಲ್ ಎಂಬ ಲಾಯರು ಒಂದು ಸರ್ವಧರ್ಮ-ಸಮ್ಮೇಲನ (International Religious Conference)ವನ್ನು ಏಪ್ರಿಲ್ ತಿಂಗಳಿನಲ್ಲಿ ಏರ್ಪಡಿಸಿದ್ದರು. ಅದು ಬೆಂಗಳೂರು ಸುಲ್ತಾನಪೇಟೆಯ ಮುಸ್ಲಿಂ ಹಾಲಿನಲ್ಲಿ ನಾಲ್ಕುದಿನಗಳವರೆಗೆ ನಡೆಯಿತು. ಅದರಲ್ಲಿ ಹಿಂದೂ, ಮುಸಲ್ಮಾನ,

ಕ್ರಿಸ್ತಿಯನ್, ಬೌದ್ಧಮತಗಳವರು ಉಪನ್ಯಾಸ ಮಾಡಿದರು. ಹ್ಯೂಮನಿಸಮ್ ಎಂಬ ಮಾನವಸಮಾಜದ ಆರಾಧನೆಯನ್ನು ಹೊಗಳುವ ಮತವನ್ನು ವಿ.ವಿ.ಕೆ. ರಂಗಾಚಾರ್ ಎಂಬುವರು ಪ್ರತಿನಿಧೀಕರಿಸಿದ್ದರು. ನಾನು ಎರಡು ದಿನಗಳ ಸಭೆಗೆ ಅಧ್ಯಕ್ಷನಾಗಿದ್ದೆನು. ಅಲ್ಲಿ ಸ್ವಾಭಾವಿಕವಾಗಿ ಮುಸಲ್ಮಾನರಿಗೇ ಪ್ರಾಮುಖ್ಯವಿತ್ತು. ಆದರೂ ಸಭೆಯಲ್ಲಿ ಎಲ್ಲರಿಗೂ ಬಹುಮಟ್ಟಿಗೆ ಪ್ರಾತಿನಿಧ್ಯವನ್ನು ಕಲ್ಪಿಸಿದ್ದರು.ಅದೇ ವರ್ಷದ ಜೂನ್ ತಿಂಗಳಲ್ಲಿ ಕರವೀರಮಠದ ಶಂಕರಾಚಾರ್ಯರು (ಡಾ|| ಕುರ್ತಕೋಟಿ ಮಹಾಭಾಗವತರು) ನಾಸಿಕದಲ್ಲಿ ಏರ್ಪಡಿಸಿದ **(All Faiths Conference)** ಸರ್ವಮತಸಮ್ಮೇಲನವೂ ಬಹಳ ವಿಜೃಂಭಣೆಯಿಂದ ಮೂರುದಿನಗಳು ನಡೆಯಿತು. ಅದು ಇನ್ನೂ ದೊಡ್ಡ ಪ್ರಮಾಣದಿಂದ ಆಯಿತು. ಅದರಲ್ಲಿ ಇಸ್ಲಾಂ, ಬಾಹೇಮತ, ಆರ್ಯಸಮಾಜ, ಹ್ಯೂಮನಿಸಮ್, ಯಹೂದಿಮತ, ಸ್ವೀಡನ್ ಬಾರ್ಗಮ್, ಶಾಕ್ತಮತ- ಮುಂತಾದ ಮತಗಳವರು ಸೇರಿದ್ದರು. ಅಲ್ಲಿ ನಾನು ಜಯಪರಾಜಯ **(The Conquest of fear)** ಎಂಬ ವಿಷಯದಲ್ಲಿ ಔಪನಿಷದ ಮತವನ್ನು ಪ್ರತಿಪಾದನೆ ಮಾಡುವ ಒಂದು ಉಪನ್ಯಾಸ ಲೇಖನವನ್ನು ಓದಿದೆನು ; ಅದು ಮದರಾಸಿನ 'ವೇದಾಂತಕೇಸರಿ' ಪತ್ರಿಕೆಯ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾಯಿತು. ಮಾರನೇ ವರ್ಷವೂ ಖಲೀಲ್ ಅವರು ಮತ್ತೊಂದು ಸಮ್ಮೇಳನವನ್ನು ಏರ್ಪಡಿಸಬೇಕೆಂದು ನನ್ನ ಸಲಹೆಯನ್ನು ಕೇಳಿದ್ದರು; ಆದರೆ ಭಾಷಣಕಾರರ ಉತ್ತೇಜನೆಯಿಲ್ಲದೆ ಅದು ನಿಂತುಹೋಯಿತು.

## ಕಾರ್ಯಾಲಯವು ಬೆಂಗಳೂರಿನಿಂದ ವರ್ಗವಾಗಬೇಕಾದದ್ದಕ್ಕೆ ಕಾರಣಗಳು :

ನನಗೆ 1935ರಲ್ಲಿ ಸರಕಾರಿಯ ಉದ್ಯೋಗದಿಂದ ನಿವೃತ್ತಿಯಾಯಿತು. ಆಗ್ಗೆ ಜಾರಿಯಲ್ಲಿದ್ದ ಸರಕಾರದ ನಿಬಂಧನೆಯ ಪ್ರಕಾರ 57ನೇ ವಯಸ್ಸಿನವರೆಗೂ ಕೆಲಸಮಾಡಬಹುದು ; ಮೆಡಿಕಲ್ ಇಲಾಖೆಯವರು ಸರ್ಟಿಫಿಕೇಟ್ ಕೊಟ್ಟರೆ 60ವರ್ಷಗಳವರೆಗೂ ನೌಕರಿಯು ಮುಂದುವರೆಯಬಹುದು ಎಂಬುದು ಅನುಮತಿಯಿತ್ತಾದರೂ, ಯಾವಾಗ ನಿವೃತ್ತನಾದರೂ ಅರ್ಧಸಂಬಳದ ಪೆನ್ಷನ್ ಬಂದೇ ಬರುತ್ತದೆಯಾದ್ದರಿಂದ ಇನ್ನು ಅರ್ಧಸಂಬಳಕ್ಕಾಗಿ ನಿರ್ಬಂಧದಲ್ಲಿರುವುದು ಯುಕ್ತವಲ್ಲವೆಂದು ನನಗೆ ತೋರಿತ್ತು. ಆದ್ದರಿಂದ ಫೋರ್ಟ್ ಮಿಡಲ್‌ಸ್ಕೂಲಿನಲ್ಲಿ ನಾನು ಹೆಡ್‌ಮಾಸ್ಟರ್ ಛಾರ್ಜಿನಲ್ಲಿದ್ದ ಒಂದು ತಿಂಗಳಿನಲ್ಲಿಯೇ ಮುಂದಿನ ಕ್ರಿಸ್‌ಮಸ್ ರಜ ಆಗಿ ಸ್ಕೂಲು ಪ್ರಾರಂಭವಾದಂದಿನಿಂದ ನನ್ನನ್ನು ರಿಟೈರ್ ಮಾಡಿಸಬೇಕೆಂದು ನಾನೇ ಕೇಳಿಕೊಂಡೆನು. ಅದರಂತೆ ಸರಕಾರದ

ಅನುಜ್ಞೆದೊರೆಯಿತು. ಈ ನಡುವೆ ನಾನು ಬೆಂಗಳೂರನ್ನು ಬಿಟ್ಟು ಯಾವದಾದರೊಂದು ಶಾಂತವಾದ ಸ್ಥಳದಲ್ಲಿ ಏಕಾಂತವಾಗಿಯಾದರೂ ಇರಬೇಕೆಂದು ಇಚ್ಛೆಪಟ್ಟೆ; ಏಕೆಂದರೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂಬ ಅಭಿಪ್ರಾಯವು ಇದ್ದರೂ ಅದು ಕಾರ್ಯತಃ ನಡೆಯದೆ ಮುಂದುಮುಂದಕ್ಕೆ ಹೋಗುತ್ತಲೇ ಇತ್ತು. ಹೊಳೆನರಸೀಪುರಕ್ಕೆ ಬಂದಾಗ ಒಮ್ಮೆ ಪಿ.ಎನ್.ನರಸಿಂಹಯ್ಯನವರಲ್ಲಿ ನಾನು ಈವೂರಲ್ಲಿರುವದಕ್ಕೆ ಅನುಕೂಲವಾಗಿ ಗದ್ದೆ, ಮನೆ ಇವುಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡೆ. ಅವರು ಆಗಲಿ ಎಂದು ಒಪ್ಪಿಕೊಂಡರು. ಆ ವರ್ಷವೇ ಊರಬಳಿಯಲ್ಲಿ ಒಂದು ಗದ್ದೆಯನ್ನು ಕೊಂಡದ್ದು ಆಯಿತು. 1937ನೆಯ ಮಾರ್ಚಿಯಲ್ಲಿ ಕೋಟೆಪೇಟೆಗಳ ನಡುವೆ ಇದ್ದ ಒಂದು ಮನೆನಿವೇಶನವನ್ನು ಹರಾಜಿನಲ್ಲಿ ಅವರು ಕೊಂಡುಕೊಟ್ಟರು. ಈಗ ನಾನು ಹೊಳೆನರಸೀಪುರದಲ್ಲಿ ಮನೆ ಕಟ್ಟುವದಕ್ಕೆ ಸಿದ್ಧನಾಗಬೇಕಾಯಿತು; ಆದ್ದರಿಂದ ಆ ವರ್ಷದ 1937ನೆಯ ಏಪ್ರಿಲ್‌ನಿಂದ ಸಂಪಾದಕರ ಸಂಘವು ಹೊಳೆನರಸೀಪುರಕ್ಕೆ ಬಂದಿತು. ಕಾರ್ಯಾಲಯವು ಇನ್ನು ಒಂದು ವರ್ಷದವರೆಗೆ ಬೆಂಗಳೂರಿನಲ್ಲಿಯೇ ಇತ್ತು. ಬೆಂಗಳೂರಿನಲ್ಲಿದ್ದ ನನ್ನ ಮನೆಯನ್ನು ಮಾರಿಯೇ ಬಿಟ್ಟಮೇಲೆ ಕಾರ್ಯಾಲಯವೇ ಸಂಪೂರ್ಣವಾಗಿ 1938ನೆಯ ಏಪ್ರಿಲ್‌ನಲ್ಲಿ ಹೊಳೆನರಸೀಪುರಕ್ಕೆ ಬಂದಂತೆ ಆಯಿತು.

## ಬೆಂಗಳೂರನ್ನು ಸಂಪಾದಕರು ಬಿಟ್ಟಾಗ ಕಾರ್ಯಾಲಯದ ಸ್ಥಿತಿ :

ಬೆಂಗಳೂರನ್ನು ಬಿಟ್ಟು ನಾನು ಹೊಳೆನರಸೀಪುರಕ್ಕೆ ಬರುವ ಹೊತ್ತಿಗೆ ಕಾರ್ಯಾಲಯವು ಏನೇನು ಮಾಡಿತ್ತು ? ಎಂಬುದನ್ನೀಗ ಲೆಕ್ಕಕ್ಕೆ ತೆಗೆದುಕೊಳ್ಳುವದು ಒಳ್ಳೆಯದು. ಏಕೆಂದರೆ ಅಲ್ಲಿಂದ ಮುಂದಕ್ಕೆ ಅದಕ್ಕೆ ಬೇರೊಂದು ಘಟ್ಟವು ಏರ್ಪಡುವದಿತ್ತು. ಬೆಳಗ್ಗೆ ಸತ್ಕಾಲಕ್ಷೇಪವು ನಡೆಯುತ್ತಿತ್ತು. ಕೆಲವು ದಿನಗಳು ಚಿದಂಬರಯ್ಯನವರು ಮೂಲಾವಿದ್ಯಾನಿರಾಸವನ್ನು ಅಲ್ಲಿ ಓದಿದರು. ವಿಠ್ಠಲಶಾಸ್ತ್ರಿಗಳು ಅಲ್ಲಿಗೆ ಬರುತ್ತಿದ್ದರು. ಅಡ್ವೋಕೇಟ್ ನಾಗೇಶ್ವರಅಯ್ಯರೇ ಮುಂತಾದವರು ಸೂತ್ರಭಾಷ್ಯವನ್ನು ಓದುತ್ತಿದ್ದದ್ದನ್ನು ಆಗಲೇ ಹೇಳಿದ್ದಾಗಿದೆ. ಅಡ್ವೋಕೇಟ್ ನಂಜುಂಡಯ್ಯನವರು ಪ್ರತಿಭಾನುವಾರವೂ ಬಂದು ಓದಿಕೊಂಡು ಹೋಗುತ್ತಿದ್ದರು. ಈಶಾವಾಸ್ಯಭಾಷ್ಯ, ವೇದಾಂತಡಿಂಡಿಮ, ಕೇನೋಪನಿಷದ್ಭಾಷ್ಯ, ಗೀತಾಭಾಷ್ಯ - ಇವುಗಳನ್ನು ಅಗ್ರಹಾರದ ಶ್ರೀನಿವಾಸಭಟ್ಟರು, ಕಣಕಟ್ಟೆಯ ದೀಕ್ಷಿತರು, ನಂಜಪ್ಪ ಭಾಗವತರು ಮುಂತಾದವರು ಶ್ರವಣ ಮಾಡಿರುತ್ತಾರೆ. ಇವಿಷ್ಟೂ ಗ್ರಂಥಕಾಲಕ್ಷೇಪದ ವರ್ಣನೆ.

## ಚರ್ಚೆಗಳು :

ಅಡ್ವೋಕೇಟ್ ನಂಜುಂಡಯ್ಯನವರು, ಅ॥ಇ॥ ರಾಮಯ್ಯನವರು, ಶಿರಸ್ತೇದಾರ ಸುಬ್ಬರಾಯರು - ಮುಂತಾದವರು ಪ್ರತಿದಿನವೂ ಸಂಜೆ ಸಂಚಾರ-ಕಾಲದಲ್ಲಿ ಒಂದೇಸಮನೆ ಯಾವದಾದರೊಂದು ವಿಷಯವನ್ನು ಕುರಿತು ಚರ್ಚೆ ಮಾಡುತ್ತಲೇ ಇದ್ದರು. ಸತ್ಯಧ್ಯಾನತೀರ್ಥರು ಪ್ರಕಟಿಸಿದ ದ್ವೈತಾದ್ವೈತವಿವಾದ ಚರ್ಚೆಯ ಗ್ರಂಥಗಳ ಗುಂಪಿಗೆ ನಾನೂ ದ್ವೈತವಿವಾದದ ವಿಮರ್ಶೆ ಎಂಬ ಪುಸ್ತಕವೊಂದನ್ನು ಬರೆದು ಜನರಿಗೆ ಹಂಚಿದೆನು.

## ಭಜನೆ :

ಶುಕ್ರವಾರ ಭಜನೆಗಳು ನಡೆಯುತ್ತಿದ್ದವು. ಅದರಲ್ಲಿ ಮನೆಯವರೆಲ್ಲರೂ, ನನ್ನ ಹೆಣ್ಣುಮಕ್ಕಳು, ಆಗಾಗ್ಗೆ ಮನೆಯಲ್ಲಿ ಇದ್ದ ಅನಂತರಾಮಯ್ಯನೇ ಮೊದಲಾದ ಗಂಡುಹುಡುಗರು, ಅಳಿಯ ಸೀತಾರಾಮಯ್ಯ ಮೊದಲಾದವರು ಭಾಗವನ್ನು ವಹಿಸುತ್ತಿದ್ದರು.

## ಉತ್ಸವಗಳು :

ಶಂಕರಸಪ್ತಾಹ, ಬ್ರಹ್ಮಚೈತನ್ಯರ ಆರಾಧನೆ ಇವು ಕ್ರಮಕ್ರಮವಾಗಿ ನಡೆದವು.

## ಉಪನ್ಯಾಸಗಳು :

ದೇಶೀಯ ವಿದ್ಯಾಶಾಲೆ, ರಾಮಕೃಷ್ಣಾಶ್ರಮ ಇಂಥ ಸ್ಥಳಗಳಲ್ಲಿ ಆಗಾಗ್ಗೆ ಉಪನ್ಯಾಸಗಳು ಆದವು. 1936ರಲ್ಲಿ ಕಾರ್ಯಾಲಯವು ಹೊಸತರಗುಪೇಟೆಗೆ ಸ್ಥಳಾಂತರಿತವಾದಮೇಲೆ ಅಶಕ್ತ ಪೋಷಕ ಸಭೆಯಲ್ಲಿ ಆಗಾಗ್ಗೆ ಕೆಲವು ದಿನ, ಶಂಕರಾನಂದರು ಬೆಂಗಳೂರಿಗೆ ಬಂದು ಹೋದಮೇಲೆ ಪ್ರತಿಶುಕ್ರವಾರವೂ ಗೀತಾವಿಷಯವಾದ ಉಪನ್ಯಾಸಗಳು ಆದವು.

## ಗ್ರಂಥಪ್ರಕಟಣೆ :

ಪತ್ರಿಕೆಯಲ್ಲಿಯೂ ಸ್ವತಂತ್ರವಾಗಿಯೂ ಪುಸ್ತಕಗಳನ್ನೂ ಪ್ರಕಟಿಸಲಾಯಿತು. ಗೀತಾಭಾಷ್ಯ, ಸೂತ್ರಭಾಷ್ಯ - ಇವುಗಳನ್ನು ಚಂದಾಕ್ರಮದಿಂದ ಪ್ರಕಟಿಸಲು ಪ್ರಯತ್ನಿಸಿ ಒಂದೊಂದು ನಿಯತಭಾಗವನ್ನು ಹೊರಕ್ಕೆ ತಂದು ಪ್ರೋತ್ಸಾಹವಿಲ್ಲದೆ ಅಲ್ಲಿಗ್ಗೆ ನಿಲ್ಲಿಸಲಾಯಿತು. ಕನ್ನಡ, ಸಂಸ್ಕೃತ, ಇಂಗ್ಲೀಷು - ಮೂರುಭಾಷೆಗಳಲ್ಲಿಯೂ ಪುಸ್ತಕಗಳು ಹೊರಕ್ಕೆ ಬಂದವು. ಗ್ರಂಥಗಳಿಗೆ ಮಹಾಜನರಿಂದಲೂ ದೇವರಾಜ

ಬಹದ್ದೂರ್ ವಾಙ್ಮಯ ಶಾಖಾಸಹಾಯ ನಿಧಿ, ಕ್ರಿಸ್ತಿಯನ್ ಲಿಟರೇಚರ್ ಸೊಸೈಟಿ ಇವುಗಳಿಂದಲೂ ಪ್ರೋತ್ಸಾಹವು ದೊರೆತಿತ್ತು.

## ಪುಸ್ತಕಭಂಡಾರ (ವಾಚನಾಲಯ) :

ನನ್ನಲ್ಲಿದ್ದ ಪುಸ್ತಕಗಳು ರಾ||ರೈಲ್ವೇ ಆಫೀಸರ್ ಬೊಂಬಾಯಿ ಶ್ಯಾಮರಾಯರೇ ಮೊದಲಾದ ಮಹಾಜನರು ದಾನವಾಗಿ ಕೊಟ್ಟ ಪುಸ್ತಕಗಳು, ಕಾರ್ಯಾಲಯಕ್ಕಾಗಿಯೇ ಕೊಂಡ ಪುಸ್ತಕಗಳು - ಇವುಗಳನ್ನು ಸೇರಿಸಿ 1934ರಿಂದ ಭಂಡಾರವನ್ನು ತೆರೆಯಲಾಯಿತು. ಪತ್ರಿಕೆಗೆ ವಿನಿಮಯದಿಂದ ಬರುತ್ತಿದ್ದ ಅನೇಕ ಪತ್ರಿಕೆಗಳನ್ನು, ಕೊಂಡುಕೊಂಡ ಎರಡುಮೂರು ಇಂಗ್ಲೀಷು ಪತ್ರಿಕೆಗಳು, ಉಚಿತವಾಗಿ ಬರುತ್ತಿದ್ದ ಇಂಗ್ಲೀಷು, ಹಿಂದಿ ಪತ್ರಿಕೆಗಳು ಇವುಗಳೆಲ್ಲ ವಾಚನಾಲಯಕ್ಕೆ ಸೇರಿದ್ದವು. ಆದರೆ ಅವುಗಳನ್ನು ಮಹಾಜನರಿಗೆ ಉಪಯೋಗಿಸಲು ಸ್ಥಳವಿರಲಿಲ್ಲ.

## ಬುಕ್ಕುಡಿಪೋ :

ಅಧ್ಯಾತ್ಮಪ್ರಕಾಶ ಪ್ರೆಸ್ ಬುಕ್ಕುಡಿಪೋ ಎಂಬ ಹೆಸರಿನಿಂದ ತೆಗೆದಿದ್ದ ಪುಸ್ತಕವಿಕ್ರಯಾಲಯವು ಕಾರ್ಯಾಲಯದ ಸ್ಥಳಾಂತರದ ಕಾಲದಲ್ಲಿ ಹೊಸತರಗು ಪೇಟೆಗೆ ಬಂದಿತು. ಅಳಿಯ ಸೀತಾರಾಮಯ್ಯನವರು ಇಷ್ಟರಲ್ಲಿ ದಿನಸಿ ಅಂಗಡಿಯನ್ನಿಟ್ಟುಕೊಳ್ಳುವುದು ಲಾಭಕರವೆಂದು ಕಂಡುಬಂದದ್ದರಿಂದ ಅವರ ಅಂಗಡಿಗೆ 1934ರಲ್ಲಿ 'ಅಧ್ಯಾತ್ಮಸ್ಟೋರ್ಸ್' ಎಂದು ಹೆಸರಿಡಲಾಯಿತು. ಮುಂದೆ ನಾನು ಬರೆದಿದ್ದ ವಾಕ್ಯರಚನೆಯನ್ನು ಒಬ್ಬರು ಕಳವಿನಿಂದ ನಕಲಚ್ಚು ಮಾಡಿಕೊಂಡರು. ಅನಿವಾರ್ಯವಾಗಿ ಕೋರ್ಟುವ್ಯವಹಾರಕ್ಕೆ ಬೀಳಬೇಕಾಗಿಬಂದು ಡಿಪೋವಿನಲ್ಲಿ ಬಹಳ ಪುಸ್ತಕಗಳು ಬಿಕರಿಯಾಗದೆ ಉಳಿದುಬಿಟ್ಟವು. ಹೀಗೆ ಡಿಪೋ ವ್ಯಾಪಾರವು ಕಾರ್ಯಾಲಯದ್ದೇ ಅಂಗವಾಗಿ ಉಳಿದುಕೊಂಡಿತು.

ಒಟ್ಟಿನಲ್ಲಿ ಕಾರ್ಯಾಲಯವು 1937ನೆಯ ಏಪ್ರಿಲ್‌ತಿಂಗಳ ಒಳಗೆ ತಕ್ಕಮಟ್ಟಿಗೆ ರೂಪುಗೊಂಡಿತ್ತು ಎಂದು ಧಾರಾಳವಾಗಿ ಹೇಳಬಹುದು.

# 37. ಹೊಳೆನರಸೀಪುರದಲ್ಲಿ ಸಂಪಾದಕರು (1937-1938)

## ಸ್ವತಂತ್ರ ಕಾರ್ಯಾಲಯದ ಬೀಜಾವಾಪ:

ಪರಮೇಶ್ವರನಿಗೆ ಜಯಕಾರವಿರಲಿ ! ಆ ದೇವಾಧಿದೇವನ ಮಹಿಮೆಯು ಅಗಾಧವಾದದ್ದು; ಆತನ ಲೀಲೆಯನ್ನು ವರ್ಣಿಸುವದು ಯಾರಿಂದಲೂ ಸಾಧ್ಯವಿಲ್ಲ, ವರ್ಣಿಸುವದು ಹಾಗಿರಲಿ, ಮನಸ್ಸಿನಲ್ಲಿ ಇಂಥ ಕಾಲಕ್ಕೆ ಹೀಗೆ ಆತನ ಸಂಕಲ್ಪವು ಫಲರೂಪಕ್ಕೆ ಬರುವದು ಎಂಥ ಸೂಕ್ಷ್ಮಮತಿಗಳಾದ ಋಷಿಗಳಾಗಲಿ, ದೇವತೆಗಳಾಗಲಿ ಊಹಿಸಿ ತಿಳಿಯಲಾರರು, ಇನ್ನು ನಮ್ಮಂಥ ಹುಲು ಮನುಷ್ಯರ ಪಾಡೇನು ? ಇದುವರೆಗೆ ವರ್ಣಿಸಿರುವ ವೃತ್ತಾಂತದಿಂದ ತಿಳಿದುಬರುವದೇನೆಂದರೆ, ಆ ಸತ್ಯಕಾಮನೂ, ಸತ್ಯಸಂಕಲ್ಪನೂ ಆದ ಭಗವಂತನು ಸಾಮಾನ್ಯಜನರೊಳಗೆ ಅತ್ಯಂತ ಅಲ್ಪವಾದ ಈ ಲೇಖಕನನ್ನು ನಿಮಿತ್ತವಾಗಿಟ್ಟುಕೊಂಡು ಈ ಕಲಿಯುಗದಲ್ಲಿಯೂ ಒಂದು ಲೀಲೆಯನ್ನು ತೋರಿಸಲು ಇಚ್ಛಿಸಿದನು. ಅಥವಾ ''ಇಚ್ಛಿಸಿದನು'' ಎಂದೇಕೆನಬೇಕು ? ಆತನ ನಿತ್ಯಶುದ್ಧಬುದ್ಧಮುಕ್ತ ಸ್ವಭಾವವೆಂಬ ಮಹಾಗ್ನಿಯಿಂದ ಪಾಮರರಿಗೆ ಇಚ್ಛೆಯೆಂದು ತೋರಬಹುದಾದ ಒಂದು ಕಿಡಿಯು ಹಾರಿಬಂತು.

ಆ ಪರಮಪುರುಷನು ತನ್ನ ಲೀಲೆಗೆ ಅನುಗುಣವಾಗುವಂತೆ ಮೂಢ ವಿಶ್ವಾಸಗಳಿಗೆ ಎಡೆಯಾಗಿದ್ದರೂ, ಪರಂಪರಾಗತವಾದ ಈಶ್ವರ ಶ್ರದ್ಧಾಭಕ್ತಿಗಳಿಗೆ ಬೇಕಾದಷ್ಟು ಅವಕಾಶವುಳ್ಳ ಒಂದು ಹಳ್ಳಿಯನ್ನು ಉಪಯೋಗಿಸಿಕೊಂಡನು. ಶುದ್ಧಾಚಾರಪರರೂ ಆದರ್ಶಗೃಹಸ್ಥರೂ ಆದ, ನವನಾಗರೀಕತೆಯ ಸೋಂಕಿಲ್ಲದೆ ಹೆಚ್ಚಿನ ವಿದ್ಯಾಭಿಮಾನಕ್ಕೆ ಕಾರಣವಿಲ್ಲದೆ ಸರಳ ಜೀವನದಿಂದ ಧರ್ಮಪರರಾಗಿರುವ ದಂಪತಿಗಳಿಬ್ಬರನ್ನು ನನ್ನ ಜನ್ಮಕ್ಕೆ ಕಾರಣರಾಗುವಂತೆ ಜೋಡಿಸಿದನು. ಪ್ರಕೃತಿ ಸೌಂದರ್ಯವೂ, ನೈಸರ್ಗಿಕ ಜೀವನವೂ, ಧಾರ್ಮಿಕ ಪ್ರವೃತ್ತಿಯೂ ಕಣ್ಣಮುಂದೆ ಆಡುತ್ತಿರುವಂಥ ಮಲೆನಾಡಿನ ಪ್ರದೇಶಗಳಲ್ಲಿಯೇ ನನಗೆ ಪ್ರಾಥಮಿಕ ಶಿಕ್ಷಣವನ್ನು ಅನುಗ್ರಹಿಸಿದನು. ವಿದ್ಯೆಯಿಂದಲೂ, ನಡೆನುಡಿಗಳಿಂದಲೂ, ಧ್ಯೇಯವಾಗಿಟ್ಟು-ಕೊಳ್ಳಬಹುದಾದ ವಿ.ಸು.ಅಯ್ಯರಂಥ ಉಪಾಧ್ಯಾಯರುಗಳನ್ನು ಕೊಟ್ಟು ವಿದ್ಯಾಸಕ್ತಿಯನ್ನು ಹೆಚ್ಚಿಸಿದನು. ಮೊದಲು ತಾಯ್ನುಡಿಯಲ್ಲಿಯೂ, ಬಳಿಕ ದೇವವಾಣಿಯಲ್ಲಿಯೂ, ಪ್ರವೇಶವು ದೊರೆತು ಆದಷ್ಟು ಬೇಗನೆ ಅಧ್ಯಾತ್ಮವಿದ್ಯೆಯ ಸಂಪರ್ಕವು ದೊರಕುವದಕ್ಕೆ ಅನುಕೂಲಕರವಾದ ಸನ್ನಿವೇಶಗಳನ್ನು ಅನಿರೀಕ್ಷಿತವಾದ ಮಾರ್ಗಗಳಿಂದ ಒದಗಿಸಿಕೊಟ್ಟನು. ಪ್ರೌಢವಿದ್ಯಾಭ್ಯಾಸಕ್ಕೆ ನವನಾಗರಿಕತೆಯ

ನಗರಿಗೇ ಹೋಗಬೇಕಾದಾಗ ಅಲ್ಲಿ ಮುಂದಕ್ಕೆ ಅಧ್ಯಾತ್ಮವಿಚಾರದ ಪ್ರೋತ್ಸಾಹಕರು, ಆಚಾರ, ಶಾಸ್ತ್ರ, ಸದ್ವಿಚಾರ, ಔದಾರ್ಯಾದಿ ಗುಣಗಳುಳ್ಳವರೂ ಆದ ಕೃ.ಸ್ವಾ. ಅಯ್ಯರಂಥ ಮಹನೀಯರ ಸಾಂನಿಧ್ಯವನ್ನೇ ಸೇರಿಸಿದನು. 'ವಿದ್ಯಾಮದದಿಂದ ಬೀಗುವಂತೆ ನಾನು ಯಾವದಾದರೊಂದು ಲೌಕಿಕಾಧಿಕಾರಸ್ಥಾನವನ್ನು ಪಡೆದು ಹೆಮ್ಮೆಯಿಂದ ಮರೆತಾನು' ಎಂದು ಕರುಣೆಯಿಂದ ಆಂಗ್ಲಭಾಷೆಯಲ್ಲಿ ತಕ್ಕಷ್ಟು ಪರಿಚಯವನ್ನುಂಟುಮಾಡಿಕೊಟ್ಟಬಳಿಕ ಪ್ರೌಢವಿದ್ಯಾ ಪರೀಕ್ಷೆಗಳಲ್ಲಿ ತೇರ್ಗಡೆ-ಯಾಗದಂತೆಮಾಡಿ ನಗರ ವಾಸವನ್ನು ತಪ್ಪಿಸಿದನು. ಸಮಯಸಮಯಕ್ಕೆ ನನ್ನ ಪ್ರಯತ್ನವೇನೂ ಇಲ್ಲದೆಯೇ ಅಧ್ಯಾತ್ಮವಿಚಾರದ ಪುಸ್ತಕಗಳು ದೃಗ್ಗೋಚರವಾಗು-ವಂತೆ ಮಾಡಿದನು. ಮನೆಯವರು ಸರಕಾರಿಯ ನೌಕರಿಗೇ ಸೇರಲೆಂದು ಹವಣಿಸುತ್ತಿದ್ದರೂ, ಲಂಚಕೋರತನವೇ ಮುಂತಾದ ದುರ್ವ್ಯಾಪಾರಗಳಿಗೆ ಅವಕಾಶವಿರುವ ಇಲಾಖೆಗಳಲ್ಲಿ ಸೇರಗೊಡದೆ ಹಸುಮಕ್ಕಳೊಡನೆ ಒಡನಾಡುತ್ತಾ, ವಿದ್ಯಾಕಾಲಕ್ಷೇಪದಲ್ಲಿರುವದಕ್ಕೆ ಅನುಕೂಲಿಸಲೆಂದು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿದನು. ಸ್ವಸಾಮರ್ಥ್ಯದಿಂದ ಉತ್ತಮ ವಿದ್ವಾಂಸರೂ, ಕವಿವರ್ಯರೂ, ಸನ್ಮಾರ್ಗದವರೂ, ಆದ ಚಿದಂಬರಯ್ಯನವರಂಥ ಉಪಾಧ್ಯಾಯರ ಸ್ನೇಹವನ್ನು ಕಲ್ಪಿಸಿಕೊಟ್ಟನು. ಆ ಇಲಾಖೆಯಲ್ಲಿ ಬರಿಯ ಲೌಕಿಕವಿದ್ಯೆಯಲ್ಲಿಯೇ ಮೈಮರೆತಾ-ನೆಂದು ವೈದಿಕಾಚಾರಪರರೂ ಸಚ್ಛಾಸ್ತ್ರಾಭ್ಯಾಸಿಗಳೂ, ಆದ ಜೀವಣದೀಕ್ಷಿತರು, ವಿರೂಪಾಕ್ಷಶಾಸ್ತ್ರಿಗಳು ಮುಂತಾದ ಬ್ರಾಹ್ಮಣೋತ್ತಮರ ಸಂಪರ್ಕವನ್ನೂ, ಉಪಾಸನಾಮಾರ್ಗದಲ್ಲಿ ಅನುಭವಿಗಳೂ, ದಯಾರ್ದ್ರಹೃದಯರೂ, ಭಕ್ತರೂ, ಸಾಧುಸಂತರೂ ಆದ ಬೆಟಗೆರೆ ಕೃಷ್ಣಶಾಸ್ತ್ರಿಗಳು, ಮಹಾಭಾಗವತರು – ಇಂಥ ಮಹನೀಯರ ಸಂಗವನ್ನು ಏರ್ಪಡಿಸಿಕೊಟ್ಟನು. ವಿದ್ಯೆಗಳಲ್ಲೆಲ್ಲ ಪರವಿದ್ಯೆಯೆಂದು ಖ್ಯಾತಿವೆತ್ತ ಬ್ರಹ್ಮವಿದ್ಯೆಗೆ ಸದ್ಗುರೂಪದೇಶವು ಅತ್ಯವಶ್ಯವೆಂಬುದನ್ನು ತಿಳಿದಿರಲಿ ಎಂದು ತಪಸ್ವಿಗಳೂ, ವಿದ್ಯಾವಿನಯಸಂಪನ್ನರೂ, ಸರ್ವಮಾನ್ಯಗುರುಸ್ಥಾನ-ವನ್ನಲಂಕರಿಸಿದವರೂ, ಆದ ಶೃಂಗೇರಿಯ ಸ.ಶಿ.ನೃಸಿಂಹಭಾರತೀಸ್ವಾಮಿಗಳಂಥ ವರಿಂದಲೇ ಅದ್ವೈತವೇದಾಂತ ಭಾಷ್ಯಕ್ಕೆ ಜನ್ಮಭೂಮಿಯೆನಿಸಿದ ಸಕಲ ಗುರುಗುರುಗಳೆನಿಸಿರುವ ಶ್ರೀಮಚ್ಛಂಕರರ ಜನ್ಮಭೂಮಿಯಾದ ಕಾಲಡಿಯಂಥ ಪವಿತ್ರತಮವಾದ ಕ್ಷೇತ್ರದಲ್ಲಿಯೇ ಭಾಷ್ಯಶಾಂತಿಯನ್ನು ಮಾಡಿಸಿಕೊಟ್ಟನು. ಅವರ ಶಿಷ್ಯರೇ ಆಗಿದ್ದು ಕರ್ಮಾನುಷ್ಠಾನದಲ್ಲಿಯೂ, ಶಾಸ್ತ್ರಪಾಂಡಿತ್ಯದಲ್ಲಿಯೂ ಅನಿತರ-ಸಾಧಾರಣರೆನಿಸಿ ಕೊಂಡಿದ್ದ ಪೂಜ್ಯ ವಿರೂಪಾಕ್ಷಶಾಸ್ತ್ರಿಗಳಂಥ ಮಹಾವಿದ್ವಾಂಸರಿಂದ ಭಾಷ್ಯಪರಿಚಯ ಮಾಡಿಸಿಕೊಟ್ಟನು. ವೇದಾಂತವಿದ್ಯೆಯನ್ನು ಕೇವಲ ಉದರಂಭರಣೆಗೆ ಉಪಯೋಗಿಸಿಕೊಂಡು ಕುಳಿತಾನೆಂದು ಸಾಧನಪರವಾಗಿರುವಂತೆ ಆ ಜಗದ್ಗುರುಗಳಿಂದಲೂ, ಮಾರುತಿಯ ಅವತಾರರೆಂದು ಪ್ರಖ್ಯಾತಿ ಹೊಂದಿದ

ಗೋಂದಾವಳಿಯ ಬ್ರಹ್ಮಚೈತನ್ಯರಂಥ ಸಾಧುವರೇಣ್ಯರಿಂದಲೂ ಮಂತ್ರೋಪದೇಶವನ್ನು ಹೃದಯದಲ್ಲಿ ಬಿತ್ತಿಸಿದನು. ಮನೆಯಲ್ಲಿ ಕೂಪಕೂರ್ಮದಂತೆ, ಕುಟುಂಬಾಸಕ್ತನಾಗಿ ಕೆಟ್ಟುಹೋದಾನೆಂದು ಯಾವಯಾವದೋ ನಿಮಿತ್ತಗಳಿಂದ ಭರತಖಂಡದ ಕ್ಷೇತ್ರತೀರ್ಥಗಳ ದರ್ಶನಲಾಭವನ್ನು ಅನುಗ್ರಹಿಸಿ ದೃಷ್ಟಿಯನ್ನು ಅಗಲಿಸಿದನು. ಸಮಯವು ಪಕ್ವವಾಗುತ್ತಲೂ ಮೊದಲು ನನ್ನ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಕ್ರುದ್ಧರಾಗಿದ್ದ ದಾಸಪ್ಪನವರೂ, ಶ್ಯಾಮರಾಯರು-ಇಂಥವರಿಂದಲೇ ನನಗೆ ಬಗೆಬಗೆಯ ಲೌಕಿಕವಾದ ಅನುಕೂಲ್ಯಗಳು ದೊರೆಯುವಂತೆ ಮಾಡಿ ಕುಟುಂಬ ಪೋಷಣೆಗೆ ನಾನು ವ್ಯಥಾಯಾಸವನ್ನು ವಹಿಸದಂತೆ ಏರ್ಪಡಿಸಿದನು. ಸದ್ವಂಶದವರೂ, ಸೂಕ್ಷ್ಮಮತಿಗಳೂ, ಪ್ರತ್ಯಗ್ದೃಷ್ಟಿಯುಳ್ಳವರೂ ಆದ ಕೃ.ಸ್ವಾ. ಅಯ್ಯರವರಿಂದ ಒತ್ತಾಸೆಯನ್ನು ಪಡೆದು ಸಂಸ್ಕೃತ ಭಾಷೆಯ ಸಾಮಾನ್ಯ ಜ್ಞಾನವಿದ್ದ ಈ ದೀನನಿಂದಲೇ ಮೂಲಾವಿದ್ಯಾನಿರಾಸದಂಥ ಶಾಸ್ತ್ರವಿಚಾರಗ್ರಂಥವನ್ನು ಬರೆಯಿಸಿ ಶ್ರೀಶಂಕರ ಭಗವತ್ಪಾದರವರ ಸೇವೆಯನ್ನು ಮಾಡಿಸಿದನು. ಆ ಬಳಿಕ ಆ ಗ್ರಂಥವನ್ನೇ ನೆಪಮಾಡಿ ಮುದ್ರಣಾಲಯವನ್ನು ಸ್ಥಾಪಿಸಿ ಕಾರ್ಯಾಲಯದ ಕೆಲಸವು ಅಪ್ರತಿಬಂಧವಾಗಿ ನಡೆಯುವಂತೆ ಏರ್ಪಡಿಸಿಕೊಟ್ಟನು. ಕಾರ್ಯಾಲಯವು ತನ್ನ ಬಾಲ್ಯವನ್ನು ಕಳೆದು, ಇನ್ನು ಸ್ವತಂತ್ರವಾಗಿ ತನ್ನ ಕಾರ್ಯವನ್ನು ನಡೆಯಿಸಬಹುದೆಂಬ ಧೈರ್ಯವು ನನಗೆ ಉಂಟಾಗುವ ಹೊತ್ತಿಗೆ ಇನ್ನು ನಗರದ ವಾಸವು ಸಾಕೆಂದು ನನ್ನನ್ನು ಬೆಂಗಳೂರಿನಿಂದ ಹೊಳೆನರಸೀಪುರಕ್ಕೆ ಕಳುಹಿಸಿಕೊಟ್ಟನು. ಅದಕ್ಕೆ ತಕ್ಕ ಸನ್ನಿವೇಶಗಳನ್ನು ಒದಗಿಸಿಕೊಡುವಂತೆ ಪ್ಲೀಡರ್ ನರಸಿಂಹಯ್ಯನವರಂಥ ಸ್ಥಿರ ಪ್ರಯತ್ನಶೀಲರನ್ನು ಪ್ರೇರಿಸಿದನು. ಸ್ವತಂತ್ರ ಕಾರ್ಯಾಲಯದ ಬೀಜಾವಾಪವನ್ನು ಮಾಡಿಟ್ಟನು ! ಆ ಮಹಾಮಹಿಮನ ಲೀಲೆಯನ್ನು ಎಷ್ಟೆಂದು ಹೇಗೆ ವರ್ಣಿಸುವದು?

## ಶಂಕರ ಸಪ್ತಾಹ :

ಏಳನೆಯ ಶಂಕರಸಪ್ತಾಹವು ಈಶ್ವರ ಸಂವತ್ಸರದ ವೈಶಾಖ ಶುಕ್ಲ ಪಂಚಮಿಯಿಂದ ದ್ವಾದಶಿಯವರೆಗೆ (15-5-1937 ರಿಂದ 21-5-1937) ಶಿವಮೊಗ್ಗದಲ್ಲಿಯೇ ನಡೆಯಿತು. ಪ್ರವಚನದಲ್ಲಿ ಈ ಸಲವೂ ಪಾಟಣಕರ ಚಂದ್ರಶೇಖರಭಟ್ಟರು ಸಹಕರಿಸಿದರು. ಕೀರ್ತನೆಗೆ ನಂಜಪ್ಪಭಾಗವತರು, ರಾಮಣ್ಣದಾಸರು, ಮತ್ತು ಬ್ಯಾಡಗಿಯ ಬಾಳಂಭಟ್ಟರು ದಯಮಾಡಿಸಿದ್ದರು. ಹೋದವರ್ಷಕ್ಕಿಂತಲೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಶಂಕರಸಪ್ತಾಹವು ಬರಿಯ ಭೋಜನಕೂಟವಾಗಬಾರದೆಂಬುದೇ ನಮ್ಮ ಮೂಲೋದ್ದೇಶವಾಗಿದ್ದರೂ, ಪರಸ್ಥಲಗಳಿಂದಲೂ ಬಂದ ಜನರಿಗೆ ಊಟವಸತಿಗಳಿಗೆ ಏರ್ಪಾಡುಮಾಡುವದು ಅತ್ಯವಶ್ಯವಾಗಿತ್ತು. ಅಲ್ಲಿನ ಅಧಿಕಾರಿಗಳೂ, ಸಾಹುಕಾರರುಗಳೂ ಒಂದೊಂದು

ದಿನದ ವೆಚ್ಚವನ್ನು ಉದಾರಭಾವದಿಂದ ವಹಿಸಿಕೊಂಡರು. ಬಂದ ವಿದ್ವಾಂಸರುಗಳಿಗೆ ಸಂಭಾವನೆಯೂ, ಪ್ರಯಾಣ ವೆಚ್ಚವೂ ದೊರೆಯುವದಕ್ಕೆ ಅನುಕೂಲಪಡಿಸಲಾಗಿತ್ತು. ದೀಪ, ಕರಪತ್ರಗಳ ಮುದ್ರಣ ಮುಂತಾದವುಗಳ ಖರ್ಚನ್ನು ಒಬ್ಬೊಬ್ಬರು ವಹಿಸಿಕೊಂಡರು. ಸಪ್ತಾಹದ ವರದಿಯನ್ನು ಮುದ್ರಿಸುವದಕ್ಕೆ ಧನಸಹಾಯವಾಯಿತು. ಹೀಗೆ ಎಲ್ಲಾ ಬಗೆಯಿಂದಲೂ ಈ ಸಪ್ತಾಹವು ಹಿಂದಿನ ಸಪ್ತಾಹಗಳನ್ನು ಮೀರಿಸಿತು.

## ಗ್ರಂಥಕಾಲಕ್ಷೇಪ:

ಊರಿಗೆ ಬಂದ ಒಂದೆರಡು ತಿಂಗಳು ನರಸಿಂಹಯ್ಯನವರ ಪಕ್ಕದ ಮನೆಯಲ್ಲಿದ್ದೆನು. ಆಗ ಉಪದೇಶಸಾಹಸ್ರಿಯ (ಪದ್ಯಭಾಗದ) ಪ್ರವಚನವು ಪ್ರಾರಂಭವಾಯಿತು. ಆದಕ್ಕೆ ಮೊದಮೊದಲು ಅಷ್ಟೇನೂ ಜನಗಳು ಸೇರಲಿಲ್ಲ ; ನರಸಿಂಹಯ್ಯನವರು, ರಾಮಸ್ವಾಮಯ್ಯನವರು ಇನ್ನೊಬ್ಬ ವೈದಿಕ ಬ್ರಾಹ್ಮಣರು ಇಷ್ಟು ಜನ ಮಾತ್ರ ಇದ್ದರು. ಸಂಪಾದಕರು ಮತ್ತೊಂದು ಮನೆಗೆ ಹೋಗುವ ಹೊತ್ತಿಗೆ ಜನರು ಹೆಚ್ಚಾಗಿ ಬರುವದಕ್ಕೆ ಪ್ರಾರಂಭಿಸಿದರು. ಈಶಾವಾಸ್ಯೋಪನಿಷತ್ತು, ಕೇನೋಪನಿಷತ್ತು, ಕಠೋಪನಿಷತ್ತು, ಮುಂಡಕೋಪನಿಷತ್ತು – ಇವುಗಳ ಭಾಷ್ಯವು ನಡೆಯುವಾಗ ಲಿಂಗದಹಳ್ಳಿಯ ನರಸಿಂಹಶಾಸ್ತ್ರಿಗಳೆಂಬವರು ಬಂದಿದ್ದು ಕೆಲವು ತಿಂಗಳುಗಳವರೆಗೆ ವ್ಯಾಸಂಗ ಮಾಡಿದರು. ಗೀತಾಭಾಷ್ಯವು ಪ್ರಾರಂಭವಾಗುವ ಹೊತ್ತಿಗೆ ಶ್ರೋತೃಗಳ ಸಂಖ್ಯೆಯು ಹದಿನೈದರವರೆಗೆ ಏರಿತ್ತು.

## ಉಪನ್ಯಾಸಗಳು:

ಶಿವಮೊಗ್ಗದ ಕರ್ಣಾಟಕ ಸಂಘದಲ್ಲಿ 'ಉಪನಿಷತ್ತುಗಳು', 'ವೇದಾಂತವೂ ಈಗಿನ ಕೆಲವು ಸಮಸ್ಯೆಗಳು', ಬೆಂಗಳೂರಿನ ದೇಶೀಯ ವಿದ್ಯಾಶಾಲೆಯಲ್ಲಿ 'ಭಾಗವತಧರ್ಮ', 'ಭಾಗವತಧರ್ಮದ ಸಾಧನ ಭಾಗ', 'ಭಾಗವತಧರ್ಮದ ಸಿದ್ಧಾಂತಭಾಗ', 'ಪರಭಕ್ತಿ', ಬೆಂಗಳೂರು ಬೆಟ್ಟಸೆಟ್ಟಿಯ ಪೇಟೆಯಲ್ಲಿ ಚಿಕ್ಕಲಿಂಗಗುರು ಸೇವಾಸಕ್ತಮಂಡಳಿಯಲ್ಲಿ 'ಭಗವದ್ಗೀತೋಪದೇಶ', 'ವೇದಾಂತ- ಪ್ರಕ್ರಿಯೆ' – ಹೀಗೆ ಸಂಪಾದಕರ ಉಪನ್ಯಾಸಗಳಾದವು. ಹೊಳೆನರಸೀಪುರದಲ್ಲಿಯೂ ಆಗಾಗ್ಗೆ ಆದವು.

## ವಿಠ್ಠಲಶಾಸ್ತ್ರಿಗಳು:

ಶಿವಮೊಗ್ಗದಲ್ಲಿ ಇವರು ಛಾಂದೋಗ್ಯಭಾಷ್ಯವನ್ನು ಮುಗಿಯಿಸಿ 1937ರಲ್ಲಿ ಸೂತ್ರಭಾಷ್ಯವನ್ನು ಆರಂಭಿಸಿ ಸ್ವಲ್ಪ ಭಾಗವನ್ನು ಮುಗಿಸುವದರೊಳಗೆ ಅವರಿಗೆ ಮೈಸೂರಿಗೆ ವರ್ಗವಾಯಿತು. ಕಾರ್ಯಾಲಯದ ಎಷ್ಟೋ ಚಟುವಟಿಕೆಗಳು

ಮೈಸೂರಿನಲ್ಲಿ ನಡೆಯುವದಕ್ಕೆ ಇದು ಪೂರ್ವರಂಗವಾಯಿತು. ಮೈಸೂರಿನಲ್ಲಿ ಅವರು ಹೋದಕೂಡಲೆ ಉಪನಿಷದ್ಭಾಷ್ಯವನ್ನು ಏರ್ಪಡಿಸಿದರು.

## ಗ್ರಂಥಪ್ರಕಟಣೆ:

ಶಿವಕವಚ (ಸಾರ್ಥವಿವರಣೆ), ಆತ್ಮಬೋಧೆ, ಅಧ್ಯಾತ್ಮಸೂಕ್ತಿಮಂಜರಿ, ಚಿದಾನಂದರಗಳೆ, ದೃಗ್ದೃಶ್ಯವಿವೇಕ - ಇವು ಪತ್ರಿಕೆಯಲ್ಲಿ ಪ್ರಕಟವಾಗಿ ಪ್ರತ್ಯೇಕ ಪುಸ್ತಕರೂಪವನ್ನು ಪಡೆದವು. ಈ ಮೊದಲೇ ಪ್ರಾರಂಭಿಸಿದ್ದ ಅಲಾತಶಾಂತಿಯು ಪುಸ್ತಕವಾಗಿ ಹೊರಕ್ಕೆಬಂತು. ಸದ್ಗುರುವಿನ ಅನುಗ್ರಹವೆಂಬ ಗ್ರಂಥವು ಮಾಟಲದಿಣ್ಣೆಯ ಶುಕ್ರಾಶ್ರಮದೇವರ ಪ್ರೋತ್ಸಾಹದಿಂದಲೂ **Narada's Aphorisims on Bhakti** (ನಾರದ ಭಕ್ತಿಸೂತ್ರಗಳು ಎಂಬ ಸಟಿಪ್ಪಣಿ) ಇಂಗ್ಲೀಷು ಪುಸ್ತಕವು ಬೆಂಗಳೂರಿನ ಅಡ್ವೋಕೇಟ್ ನಂಜುಂಡಯ್ಯನವರ ಪ್ರೋತ್ಸಾಹದಿಂದಲೂ ಪ್ರಕಟಿತವಾದವು. ದೃಗ್ದೃಶ್ಯವಿವೇಕ, ಭಕ್ತಿಯೋಗದ ತಿದ್ದಿದ ಸಂಸ್ಕರಣ - ಇವು ಸ್ವತಂತ್ರವಾಗಿ ಬೆಳಕಿಗೆಬಂದವು.

## ಪುಸ್ತಕಭಂಡಾರ:

ಪುಸ್ತಕಭಂಡಾರವು 1937ನೆಯ ನವಂಬರಿನಲ್ಲಿ ಹೊಳೆನರಸೀಪುರಕ್ಕೆ ಬಂತು. ಶಿವಮೊಗ್ಗದಲ್ಲಿದ್ದ ಕೂಡಲಿ ಸುಬ್ಬರಾಯರು ಕೆಲವು ವೇದಾಂತಗ್ರಂಥಗಳು, ಶ್ರೌತಸೂತ್ರಗಳು, ಧರ್ಮಸೂತ್ರಗಳು, ಮೀಮಾಂಸಾ ಗ್ರಂಥಗಳು - ಒಟ್ಟು 23 ಪುಸ್ತಕಗಳನ್ನು ಭಂಡಾರಕ್ಕೆ ಕಾಣಿಕೆಯಾಗಿ ಕೊಟ್ಟರು. ಕೆಲವು ಇಂಗ್ಲೀಷು ಮತ್ತು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳಲಾಯಿತು.

## ಅಧ್ಯಾತ್ಮವಿದ್ಯಾಲಯ:

ಪತ್ರಿಕೆ, ಗ್ರಂಥಕಾಲಕ್ಷೇಪ, ಉತ್ಸವ, ಉಪನ್ಯಾಸ ಇವುಗಳ ಜೊತೆಗೆ ಒಂದು ವಿದ್ಯಾನಿಲಯವೂ ಕಾರ್ಯಾಲಯಕ್ಕೆ ಅಂಗವಾಗಿರಬೇಕೆಂಬ ಯೋಚನೆ 1938ನೆಯ ಫೆಬ್ರವರಿಯಲ್ಲಿ ಮೊಳಕೆಯಾಯಿತು. ಇದರ ಪ್ರಕಟನೆಯನ್ನು ಆ ತಿಂಗಳಿನ ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

## ಅಧ್ಯಾತ್ಮಪ್ರಕಾಶ ಪತ್ರಿಕೆ:

ಪತ್ರಿಕೆಯಲ್ಲಿ ಮೂವತ್ತೆರಡು ಪುಟಗಳು ಮಾತ್ರವಿದ್ದರೂ ಕಾಗದವು ಉತ್ತಮತರದ್ದಾಗಿತ್ತು, ಗ್ರಂಥಗಳ ಪ್ರಕಟನೆಗೇ ಹೆಚ್ಚು ಅವಕಾಶವನ್ನು ಕಲ್ಪಿಸಲಾಗಿತ್ತು.

# 38. ಕಾರ್ಯಾಲಯವು ಹೊಳೆನರಸೀಪುರಕ್ಕೆ ಬಂದ ಎರಡುವರ್ಷ (1938-1939)

## ಕಾರ್ಯಾಲಯವು ಬೆಂಗಳೂರಿನಿಂದ ಬಂದಾಗಿನ ಸ್ಥಿತಿ :

ಬೆಂಗಳೂರಿನಲ್ಲಿದ್ದ ಮನೆಯನ್ನು ಮಾರಿದ ಮೇಲೆ ನರಸಪ್ಪನೂ ಹೊಳೆನರಸೀಪುರಕ್ಕೆ ಬರಬೇಕಾಯಿತು. ಅವನು ಮನೆಯ ಮತ್ತು ಮುದ್ರಣಾಲಯದ ಸಾಮಾನುಗಳನ್ನೆಲ್ಲ ಲಾರಿಯ ಮೇಲೆ ಹಾಕಿಕೊಂಡು 1938ನೆಯ ಮೇ ತಿಂಗಳಿನಲ್ಲಿ ಬಂದನು. ಅಷ್ಟು ಹೊತ್ತಿಗೆ ಹೊಳೆನರಸೀಪುರದಲ್ಲಿ ಹೊಸಮನೆಯನ್ನು ಕಟ್ಟಿದ್ದಾಗಿತ್ತಾದರೂ ಅದು ಎಲ್ಲಾ ವಿಷಯದಲ್ಲಿಯೂ ಕಾರ್ಯಾಲಯದ ಕೆಲಸಕ್ಕೆ ಅರ್ಹವಾಗಿರಲಿಲ್ಲ. ಹೇಗೋ ಮನೆಯ ಮುಂದೆ ಒಂದು ಜಿಂಕುಷೀಟಿನ ಜೋಪಡಿಯನ್ನು ಹಾಕಿ ಅಲ್ಲಿ ಮುದ್ರಣಾಲಯಕ್ಕೆ ಏರ್ಪಡಿಸಿಕೊಂಡೆವು. ಸ್ಥಾನವನ್ನು ಸಿದ್ಧಗೊಳಿಸುವದಕ್ಕೆ ಆದ ಕಾಲವಿಳಂಬ, ಕೆಲಸಗಾರರ ಅಭಾವ, ಮುದ್ರಣ ಯಂತ್ರವು ಕೆಟ್ಟು ಹೋದದ್ದು ಮುಂತಾದ ಕಾರಣಗಳಿಂದ ಪತ್ರಿಕೆಯಾಗಲಿ, ಮಿಕ್ಕಚಟುವಟಿಕೆಗಳಾಗಲಿ ವ್ಯವಸ್ಥಿತವಾಗಿ ಸಾಗಲಿಲ್ಲ. ಹೊಸಮನೆಯ ಹಸಿ ನೆಲದಿಂದಾಗಿ ನನಗೆ ಶೀತಜ್ವರಾದಿಗಳು ಬಂದವು. ಔಷಧೋಪಚಾರಗಳು ಸರಿಯಾಗಿಲ್ಲದ್ದರಿಂದ ರೋಗವು ಪ್ರಬಲಿಸಿತು. ಒಬ್ಬ ವೈದ್ಯರು ಭೇದಿಗೆಂದು ಕೊಟ್ಟ ಔಷಧಿಯಿಂದ ಅದೇಕೋ ವಾಂತಿಯೂ ಹೆಚ್ಚಿ ಬಾಯಿಂದ ರಕ್ತವು ಸುರಿಯಿತು; ಗಂಟಲಿಗೆ ಬಹಳ ಅಪಾಯವಾಯಿತು. ಚಳಿಜ್ವರ ಬರುತ್ತಲೇ ಇತ್ತು.

ಶಂಕರಸಪ್ತಾಹ : ಬಹುಧಾನ್ಯ ಸಂವತ್ಸರದ ಶಂಕರಸಪ್ತಾಹವು (4-5-1938 ರಿಂದ 11-5-1938) ಈ ಸ್ಥಿತಿಯಲ್ಲಿ ಹೊಳೆನರಸೀಪುರದಲ್ಲಿಯೇ ಜರುಗಬೇಕಾಯಿತು. ಊರಜನರ ಪರಿಚಯವೂ ಸಾಕಾದಷ್ಟು ಇಲ್ಲದಿದ್ದರೂ, ಉತ್ಸವವೇನೋ ಚನ್ನಾಗಿಯೇ ಆಯಿತು. ಚತುರ್ಭುಜ ಪಟ್ಟಾಭಿರಾಮಸ್ವಾಮಿ ದೇವಾಲಯದಲ್ಲಿ ನಡೆಯಬೇಕಾಗಿದ್ದ ಉತ್ಸವವು ಕೆಲವು ಅಡಚಣೆಗಳಿಂದ ಹಂಗರಹಳ್ಳಿಶ್ಯಾನುಭೋಗ ಮಾವಿನಕೆರೆತಿಮ್ಮಪ್ಪಯ್ಯನವರ ವಿಶಾಲವಾದ ಮನೆಯಲ್ಲಿ ನಡೆಯಿತು. ಪಂಡಿತರುಗಳ ಸಹಾಯವು ತಕ್ಕಮಟ್ಟಿಗೆ ದೊರೆಯಿತು. ಆಸ್ಥಾನ ವಿದ್ವಾನ್ ಕೆ.ಪಿ.ನಾರಾಯಣಶಾಸ್ತ್ರಿಗಳವರು, ಸಾ.ವೇ.ವಿದ್ವಾನ್ ಇವರೂ, ಸಾ.ವಿದ್ವಾನ್ ರಾಮಸ್ವಾಮಿಶಾಸ್ತ್ರಿಗಳೂ ಮೊದಲನೇ ಸಲಕ್ಕೆ ಭಾಗವನ್ನುವಹಿಸಿದರು. ನಂಜಪ್ಪಭಾಗವತರು, ರಾಮಣ್ಣನವರು ಕೀರ್ತನೆಯನ್ನು ಮಾಡಿದರು. ನನಗೆ ಅನ್ನಾಹಾರಗಳು ಸೇರದಷ್ಟು ಅಸ್ವಸ್ಥತೆಯಿದ್ದರೂ ಯತ್ನವಿಲ್ಲದೇ ಉಪನ್ಯಾಸಗಳನ್ನು

ಮಾಡಿದೆನು. ಪ್ರವಚನದ ಅನುವಾದಗಳನ್ನು ಅತಿಸಂಕ್ಷೇಪವಾಗಿ ಮಾಡಬೇಕಾಯಿತು. ತಾ|| 9ನೇ ಸೋಮವಾರ ಆಸ್ಥಾನ ವಿದ್ವಾನ್ ವೈ.ಚಂದ್ರಶೇಖರ ಶಾಸ್ತ್ರಿಗಳ ನಿರೀಕ್ಷಣೆಯಿತ್ತು; ಆದರೆ ಅವರು ಬರುವದಕ್ಕೆ ಆಗಲಿಲ್ಲವಾದ್ದರಿಂದ ನಾನೇ ಆ ದಿನವೂ ಅಸ್ವಸ್ಥತೆಯಲ್ಲಿಯೇ 'ಪರಮೇಶ್ವರಭಕ್ತಿ' ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ಮಾಡಿದೆನು. ಆದರಿಂದ ಶರೀರದಲ್ಲಿದ್ದ ರೋಗವು ಉಲ್ಬಣವಾಗುವದಕ್ಕೆ ಕಾರಣವಾಯಿತು. ನಮಗೆ ಆಗಲೇ ಪರಿಚಿತರಾಗಿದ್ದ ಆರ್. ರಾಮಸ್ವಾಮಯ್ಯನವರು, ಸಂ||ಬಾ||ಸುಬ್ಬರಾಯರು, ಪಿ.ಎನ್. ನರಸಿಂಹಯ್ಯ-ನವರು ಈ ಮೂವರು ಪ್ಲೀಡರ್‌ಗಳು ಒಂದೊಂದು ಅತಿಥಿಸತ್ಕಾರಾದಿಗಳ ವೆಚ್ಚವನ್ನು ವಹಿಸಿಕೊಂಡರು. ಕಾರ್ಯವು ಸಾಂಗವಾಗಿ ನೆರವೇರಿತು.

## ಚಿದಂಬರಯ್ಯನವರು ಸ್ವರ್ಗಸ್ಥರಾದದ್ದು:

ಜಯರಾಮಾಚಾರ್ಯರು ಕೀರ್ತನ ಸಮ್ಮೇಲನವೊಂದನ್ನು ಏರ್ಪಡಿಸಿದಮೇಲೆ 'ಭಕ್ತಬಂಧು'ವೆಂಬ ಮಾಸಪತ್ರಿಕೆಯನ್ನು ಹೊರಡಿಸಿದ್ದರು. ಅದರಲ್ಲಿ ಪುರಾಣದ ಆಖ್ಯಾನಗಳನ್ನು ಚಿದಂಬರಯ್ಯನವರು ಕೀರ್ತನಪರವಾಗಿ ಬರೆಯುತ್ತಿದ್ದು ಕೊನೆಗೆ ಅವನ್ನೆಲ್ಲ ಕೀರ್ತನಕಂಠಾಭರಣವೆಂಬ ಹೆಸರಿನಿಂದ ಒಟ್ಟುಗೂಡಿಸಿ ಪ್ರಕಟಿಸಿದ್ದರು. ಅವರು ಜಯರಾಮಾಚಾರ್ಯರ ದೇಶೀಯ ಚಳುವಳಿಯಿಂದ ಪ್ರಭಾವಿತರಾಗಿ ನನ್ನನ್ನು ಕೂಡ ಕಾರ್ಯಕಾರಿ ಸಮಿತಿಯ ಸದಸ್ಯನನ್ನಾಗಿ ಸೂಚಿಸಿದ್ದನ್ನು ಹಿಂದೆಯೇ ತಿಳಿಸಿದ್ದೇನೆ. ಮುಂದೆ ಅವರು ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಗೆ ಆಹ್ವಾನ ಬಂದದ್ದರಿಂದ ತಮ್ಮ ಸಹಕಾರವನ್ನು ನೀಡುವದಕ್ಕೆ ಅಲ್ಲಿಗೆ ಹೋದರು. ಭರತಖಂಡದ ಜೀವಜ್ಯೋತಿಗಳು, ಆತ್ಮಶಕ್ತಿಯತೇಜಸ್ಸು, ಆರ್ಯಧರ್ಮಪ್ರದೀಪ, ವಿದ್ಯಾರಣ್ಯಕಾವ್ಯ – ಮುಂತಾದ ಗ್ರಂಥಗಳನ್ನು ಆಗ ಹೊರಕ್ಕೆ ತಂದರು. ಮತ್ತೆ ಅವರು ಬೆಂಗಳೂರಿಗೆ ಬಂದ ಮೇಲೆ ವೇದಾಂತ-ವಿಚಾರದಲ್ಲಿ ಮುಳುಗಿಬಿಟ್ಟರು. ನನ್ನಿಂದ ಸ್ವಲ್ಪ ಕಾಲದವರೆಗೆ ಮೂಲಾವಿದ್ಯಾ-ನಿರಾಸವನ್ನು ಹೇಳಿಸಿಕೊಂಡರು. ದಾವಣಗೆರೆಯ ಬ್ರಹ್ಮೇಶ್ವರಪ್ಪನವರು ಪರಿಶೋಧನೆಗೆಂದು ನನಗೆ ಕೊಟ್ಟಿದ್ದ 'ಅನುಭವಾಮೃತ'ವನ್ನು ನಾನು ಹಾಗೇ ಇಟ್ಟಿದ್ದದ್ದರಿಂದ ಚಿದಂಬರಯ್ಯನವರಿಗೆ ಆ ಕೆಲಸವನ್ನು ವಹಿಸಿದರು. ಅವರು ಆ ಗ್ರಂಥದಲ್ಲಿ ನನ್ನ ಹೊಸ ಅಭಿಪ್ರಾಯಗಳನೇಕವನ್ನು ಟಿಪ್ಪಣಿಯ ರೂಪದಲ್ಲಿ ಸೇರಿಸಿ ಪ್ರಕಟಿಸಿದರು; 'ಮಾಂಡೂಕ್ಯಸಂವಾದ'ವೆಂಬ ಗ್ರಂಥವೂ ಆಗಲೇ ಬರೆದದ್ದು. ಆದರೆ ಈಚೆಗೆ ಅವರ ಮಗ ಅನಂತಮೂರ್ತಿಗಳು ಶಂಕರಮಠದಲ್ಲಿ ಓದುವದಕ್ಕೆ ಪ್ರಾರಂಭಿಸಿದ ಮೇಲೆ ಅವರಿಗೆ ನಡುವೆ ಸ್ವಲ್ಪಕಾಲ ನಮ್ಮ ಪ್ರಕ್ರಿಯೆಯು ಅಷ್ಟು

ನಿರ್ದುಷ್ಟವಲ್ಲವೆಂದು ತೋರಿತು. ಆದ್ದರಿಂದ ಅನುಭವಾಮೃತದ ಎರಡನೆಯ ಸಂಸ್ಕರಣದಲ್ಲಿ ಅಂಥಹ ರಹಸ್ಯವಿಚಾರಗಳನ್ನು ತೆಗೆದು ಹಾಕಿದರು. 'ಪಂಚದಶೀ ತತ್ತ್ವಾರ್ಥ', 'ವೇದಾಂತದ ಜೀವಾಳ', 'ವೇದಾಂತದ ರೂಪರೇಖೆ' ಮುಂತಾದ ಗ್ರಂಥಗಳು ಆ ಮನಃಸ್ಥಿತಿಯಲ್ಲಿಯೇ ಬರೆದ ಗ್ರಂಥಗಳಾದ್ದರಿಂದ ಅದನ್ನು ಹೊರಕ್ಕೆ ತರುವಾಗ ನನ್ನ ಯಾವ ಸಹಾಯವನ್ನೂ ಕೋರಲಿಲ್ಲ. ಈ ಕಾಲದಲ್ಲಿ ಬೆಂಗಳೂರಿನಲ್ಲಿ ತಮ್ಮ ಮಕ್ಕಳು ಅನಂತಮೂರ್ತಿಶಾಸ್ತ್ರಿಗಳ ಜೊತೆಯಲ್ಲಿಯೇ ಇದ್ದರು. ಇದಾದ ಮೇಲೆ ಕೆಲವು ಕಾಲ ಅವರು ಚಿತ್ರಾವತಿ ಎಂಬಲ್ಲಿ ಏಕಾಂತವಾಸವನ್ನು ಮಾಡಿದರು. ಶರೀರಾಲಸ್ಯ ನಿಮಿತ್ತದಿಂದ ಹಿಂದಕ್ಕೆ ಬಂದು ತಿರಮಕೂಡಲು ನರಸೀಪುರದಲ್ಲಿಯೇ ಇದ್ದು ಕೊಂಡಿದ್ದರು. ಆಗ ವಿಠ್ಠಲಶಾಸ್ತ್ರಿಗಳಲ್ಲಿ ವಿಚಾರವಿನಿಮಯವನ್ನು ಮಾಡಿಕೊಂಡ ಬಳಿಕ ನನ್ನ ಅಭಿಪ್ರಾಯಗಳು ಶಂಕರಾಚಾರ್ಯರ ಭಾಷ್ಯಗಳನ್ನೇ ಹೊಂದಿ-ಕೊಂಡಿರುವವೆಂಬುದನ್ನು ಚೆನ್ನಾಗಿ ಮನಗಂಡರು. ಕೂಡಲೆ ಅವರು ಹೊಳೆನರಸೀಪುರಕ್ಕೆ ಬಂದು ಕೆಲವು ದಿನಗಳು ಅಲ್ಲಿರುವ ಇಚ್ಛೆಯನ್ನು ಸೂಚಿಸಿ, ಶಂಕರಸಪ್ತಾಹದ ಹೊತ್ತಿಗೆ ತಮ್ಮ ಪರಿಚಿತರಾದ ಹತ್ತುಹನ್ನೆರಡು ಜನರೊಡನೆ ಬರುವದಾಗಿ ಹೇಳಿಕಳುಹಿಸಿದ್ದರು. ಮಕ್ಕಳು ಅನಂತಮೂರ್ತಿಗಳಿಗೂ ಸಪ್ತಾಹಕ್ಕೆ ಖಂಡಿತ ಬರಬೇಕೆಂದು ಕಾಗದ ಬರೆದಿದ್ದರು. ಆದರೆ ನಮ್ಮಗಳ ದುರ್ದೈವದಿಂದ ಅದಕ್ಕೆ ಅವಕಾಶವು ದೊರೆಯಲಿಲ್ಲ; ಅವರು ಆ ಸಂವತ್ಸರದ ಚೈತ್ರ ಬಹುಳ ತದಿಗೆಯ ದಿನವೇ ದಿವಂಗತರಾದರು. ನನ್ನನ್ನು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿ ಆಗಾಗ್ಗೆ ಉಪಯುಕ್ತವಾದ ಸಲಹೆಗಳನ್ನು ನಡೆನುಡಿಗಳಿಂದ ಕೊಡುತ್ತಾ ಏಕದೇಹನ್ಯಾಯದಿಂದ ದೀರ್ಘಕಾಲದವರೆಗೆ ಇದ್ದುಕೊಂಡಿದ್ದು, ನನ್ನ ಬಾಳಿಗೆ ಸುಖದ ಹೊಯ್ನೀರನ್ನು ಎರೆಯುತ್ತಿದ್ದ ಅವರು ಮೊದಲು ಚಿದಂಬರರೇ ಆಗಿದ್ದು ಈಗ ಚಿದಂಬರರಲ್ಲಿ ಬೆರೆತು ಹೋದರು.

## ಅಧ್ಯಾತ್ಮವಿದ್ಯಾನಿಲಯ:

ಈಗ ಅಧ್ಯಾತ್ಮವಿದ್ಯಾನಿಲಯವನ್ನು ರೂಪಿಸುವದಕ್ಕೆ ಪ್ರಯತ್ನವನ್ನು ಮಾಡಬೇಕೆಂಬ ಆಸೆಯು ಬಲವಾಯಿತು. ಅಧ್ಯಾತ್ಮಪ್ರಕಾಶ ಪತ್ರಿಕೆಯ, 1937ನೆಯ ಜುಲೈ ಸಂಚಿಕೆಯಲ್ಲಿ ಈ ವಿದ್ಯಾಲಯದ ಉದ್ದೇಶವನ್ನು, ಪಾಠಕ್ರಮವನ್ನು ವಿವರಿಸಿ ಒಂದು ಪ್ರಕಟಣೆಯನ್ನು ಹೊರಡಿಸಲಾಯಿತು. ಅದೇ ವರ್ಷದ ಸೆಪ್ಟೆಂಬರು ತಿಂಗಳಿನ ಸಂಚಿಕೆಯಲ್ಲಿ ನಾಗೇಶ್ವರಯ್ಯರ್, ವಿ. ಸುಬ್ರಹ್ಮಣ್ಯಯ್ಯರ್, ಡಿ. ವೆಂಕಟ-ರಾಮಯ್ಯನವರು – ಮುಂತಾದವರ ಸದಭಿಪ್ರಾಯಗಳನ್ನು ಪ್ರಕಟಿಸಿ ಮತ್ತೊಂದು

ಪ್ರಕಟಣೆಯನ್ನು ಹೊರಡಿಸಲಾಯಿತು. ಮತ್ತೂರಿನಿಂದ ಸುಬ್ಬರಾಯಾವಧಾನಿಗಳು ಆಗಲೇ ಬಂದು ವಿದ್ಯಾರ್ಥಿಗಳಾಗಿ ಸೇರಿಕೊಂಡಿದ್ದರು. ಉಪನಿಷದ್ಭಾಷ್ಯಗಳನ್ನು ಓದುತ್ತಿದ್ದರು. ಈಗ ಕಣಕಟ್ಟೆಯ ದೀಕ್ಷಿತರು, ಅಗ್ರಹಾರದ ಶ್ರೀನಿವಾಸಭಟ್ಟರು-ಇವರುಗಳೂ ಅವರ ಜೊತೆಗೆ ನೈಷ್ಕರ್ಮ್ಯಸಿದ್ಧಿಯನ್ನು ಓದುವದಕ್ಕೆ ಪ್ರಾರಂಭಿಸಿದರು. ಸಪ್ತಾಹವು ಮುಗಿದ ಮೇಲೆ ನಾವು ಹೊಸಮನೆಗೆ ಪ್ರವೇಶವನ್ನು ಮಾಡಿದೆವು. ಅಲ್ಲಿಯೇ ಪಾಠಗಳು ಆಗುತ್ತಿದ್ದವು. ಶಂಕರಸಪ್ತಾಹವಾದ ಬಳಿಕ ನನಗೆ ಗಂಟಲು ಒಡೆದು ಮಾತನಾಡುವದಕ್ಕೆ ಆಗದೆ ಕೆಲವು ದಿನಗಳು ಹಾಗೆಯೇ ಮೌನದಿಂದ ಇರಬೇಕಾಯಿತು. ಆದರೂ ಅವಧಾನಿಗಳು ಓದುವದು, ಸಂಜ್ಞೆಯಿಂದಲೇ ನಾನು ಅಂಗೀಕಾರ ಅಥವಾ ಅನಂಗೀಕಾರವನ್ನು ಸೂಚಿಸುವದು ಹೀಗೆ ಪಾಠವು ಸಾಗಬೇಕಾಗಿತ್ತು. ಏಪ್ರಿಲ್ 1939ರಿಂದ ಮಾಂಡೂಕ್ಯಭಾಷ್ಯ, ಗೀತಾಭಾಷ್ಯಗಳನ್ನು ಹಾಗೆಯೇ ಕ್ಲೇಶದಿಂದ ಮುಂದುವರಿಸುತ್ತಿದ್ದೆನು. ನನಗೆ ಗಂಟಲಿಗೆ ಬಾಧೆಯಾದದ್ದರ ಮೂಲಕಾರಣವನ್ನು ಆಗಲೆ ಹೇಳಿರುತ್ತೇನೆ. ಆದರೆ ಶಂಕರ ಸಪ್ತಾಹದ ಕೊನೆಯ ದಿವಸ, ಶಂಕರವಿಜಯದಲ್ಲಿ ಕಂಡುಬರುವ ಆಚಾರ್ಯ ಮಂಡನಮಿಶ್ರರ ಸಂವಾದ, ಆಚಾರ್ಯರ ಪರಕಾಯ ಪ್ರವೇಶ - ಮುಂತಾದ ಕೆಲವು ವಿಷಯಗಳಲ್ಲಿ ನಾನು ಪ್ರಕಟಿಸಿದ ಭಿನ್ನಾಭಿಪ್ರಾಯಗಳಿಂದ ಮನನೊಂದ ಕೆಲವರು ಅಂಧಪರಂಪರಾ ಸಂಪ್ರದಾಯ ಶರಣರು, 'ಇವರು ಗುರುಗಳಿಗೆ ನಿಂದೆಯನ್ನು ಮಾಡಿದ್ದರಿಂದ ಮಾತನಾಡುವದಕ್ಕೆ ನಾಲಗೆಯೇ ಇಲ್ಲವಾಗಿದೆ' ಎಂದು ಅಪಪ್ರಚಾರದ ಕುಚೇಷ್ಟೆಯನ್ನು ಮಾಡುವದಕ್ಕೆ ಹತ್ತಿದ್ದರು. ಸದ್ಗುರುಗಳ ಅನುಗ್ರಹದಿಂದ ಮುಂದಿನ ವರ್ಷದ ಶಂಕರಸಪ್ತಾಹಕ್ಕೆ ಸರಿಯಾಗಿ ನನಗೆ ಮಾತಾನಾಡುವ ಸೌಕರ್ಯವು ಲಭಿಸಿ ಆ ಅಪಪ್ರಚಾರಕ್ಕೆ ತಡೆಹಾಕಿದ ವಿಷಯವನ್ನು ಇಷ್ಟರಲ್ಲಿಯೇ ಪ್ರಸ್ತಾಪಿಸುತ್ತೇನೆ.

## ಗ್ರಂಥಪ್ರಕಟಣೆ:

ಪತ್ರಿಕೆಯಲ್ಲಿ ದೃಗ್ದೃಶ್ಯವಿವೇಕ, ಉಪದೇಶ ಸಾಹಸ್ರಿಯ ಪದ್ಯಭಾಗ (ಪು1ರಿಂದ13) ಅಧ್ಯಾತ್ಮ ಸೂಕ್ತಿ ಮಂಜರಿಯ ಎರಡನೆಯ ಭಾಗ ಇಷ್ಟುಗ್ರಂಥಗಳು ಮುಗಿದವು. ವೇದಾಂತ ಪ್ರವೇಶಿಕೆ, ಜ್ಞಾನಯೋಗ (2ನೆಯ ಭಾಗ) ಇವು ಪ್ರಾರಂಭವಾದವು. ಸ್ವತಂತ್ರವಾಗಿ ಗೀತಾಭಾಷ್ಯದ ಎರಡನೆಯ ಭಾಗ (ಅ13ರಿಂದ18) ಭಾಷ್ಯವೂ ಗೀತಾಸಾರ್ಥ ಸಟಿಪ್ಪಣವೂ ಬಂದವು. ಮಾಂಡೂಕ್ಯದ 'ಆಗಮಪ್ರಕರಣ'ದ ವಿವೃತಿಯನ್ನು ಸಂಸ್ಕೃತದಲ್ಲಿ ಬರೆಯಲಾಯಿತು.

## ಮೈಸೂರಿನಲ್ಲಿ ಶಂಕರಸಪ್ತಾಹ:

ವಿಠ್ಠಲಶಾಸ್ತ್ರಿಗಳವರು ಮೈಸೂರಿಗೆ ಬಂದ ಮೇಲೆ ವೇದಾಂತಕ್ಕೆ ಜೀವಕಳೆ ಹೆಚ್ಚಿತು. ಅವರು ಮನೆಯಲ್ಲಿ ಭಾಷ್ಯಪಾಠದ ತರಗತಿಗಳನ್ನು ಏರ್ಪಡಿಸಿದರು. ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡುವದಕ್ಕೆ ಆರಂಭಿಸಿದರು. ಪ್ರಮಾಥಿ ಸಂವತ್ಸರದ (24-4-1939 ರಿಂದ 30-4-1939) ಸಪ್ತಾಹವು ಅಭಿನವಶಂಕರಾಲಯದಲ್ಲಿ ನಡೆಯಿತು.

ಚಿದಂಬರಯ್ಯನವರ ಮಕ್ಕಳಾದ ಅನಂತಮೂರ್ತಿಶಾಸ್ತ್ರಿಗಳವರು ಎರಡನೆಯ ಸಲಕ್ಕೆ ಸಪ್ತಾಹದಲ್ಲಿ ಭಾಗವನ್ನು ವಹಿಸಿದ್ದರು. ಇವರು ಈಗ ನ್ಯಾಯ, ಸಾಹಿತ್ಯ, ವೇದಾಂತಗಳಲ್ಲಿ ವಿದ್ವಾಂಸರಾಗಿದ್ದರು. 1928 ರಲ್ಲಿ ನವೀನತರ್ಕ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ವಿಶೇಷಬಹುಮಾನವನ್ನು ಪಡೆದಿದ್ದರು; 1933 ರಲ್ಲಿ ಪ್ರಾಚೀನತರ್ಕವಿದ್ವತ್ಪರೀಕ್ಷೆಯಲ್ಲಿ ಒಂದನೇ ತರಗತಿಯಲ್ಲಿ ತೇರ್ಗಡೆಯಾಗಿ ಅಗ್ರಸ್ಥಾನವನ್ನು ಪಡೆದು ವಿಶೇಷಬಹುಮಾನವನ್ನುಗಳಿಸಿದ್ದರು ; 1936 ರಲ್ಲಿ ವೇದಾಂತ ವಿದ್ವತ್ಪರೀಕ್ಷೆಯಲ್ಲಿ ಒಂದನೇ ತರಗತಿಯಲ್ಲಿ ಅಗ್ರಸ್ಥಾನವನ್ನು ಗಳಿಸಿ ಮೂರು ಚಿನ್ನದ ಪದಕಗಳನ್ನು, ಚಿನ್ನದ ವೀರಶೃಂಖಲೆಯನ್ನು ಪಡೆದಿದ್ದರು. ಕಾಲೇಜಿನಲ್ಲಿ ಪರೀಕ್ಷೆಗಳಲ್ಲಿಯೂ, ಮತತ್ರಯ ಪರೀಕ್ಷೆಗಳಲ್ಲಿಯೂ ನಿರತಿಶಯವಾದ ಗುಣಸಂಖ್ಯೆಯನ್ನು ಪಡೆದವರೆಂಬ ಕಾರಣದಿಂದ ವಿಶೇಷ ಪ್ರಾವೀಣ್ಯ ಪಾರಿತೋಷಕವನ್ನೂ ವೀರಶೃಂಖಲೆಯನ್ನೂ ಗಳಿಸಿದ್ದರು. ಶಂಕರ ಮಠದ ಪ್ರೌಢವಿದ್ಯಾಭಿನವ ವೇದಾಂತಶಾಲೆಯ ವೇದಾಂತದಲ್ಲಿ ಒಂದನೆಯ ತರಗತಿಯಲ್ಲಿಯೇ ತೇರ್ಗಡೆ ಹೊಂದಿದ ಬಳಿಕ ಶೃಂಗೇರಿಯ ಶ್ರೀಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರು ಪಂಡಿತಪ್ರವರ ಎಂಬ ಬಿರುದನ್ನೂ ಉತ್ತಮವಾದ ಶಾಲುಜೊತೆಯನ್ನೂ ಅನುಗ್ರಹಿಸಿ ಕೊಟ್ಟಿದ್ದರು; 1938 ರಲ್ಲಿ ಮೈಸೂರಿನ ಸಾಹಿತ್ಯ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅಗ್ರಸ್ಥಾನವನ್ನು ಸಂಪಾದಿಸಿಕೊಂಡದ್ದಕ್ಕಾಗಿ ಬಂಗಾರದ ಪದಕವೂ ಬಹುಮಾನವೂ ಬಂದಿದ್ದವು. ಇಂಥ ವಿದ್ವಾಂಸರ ಸಹಕಾರವು ಸಪ್ತಾಹಕ್ಕೆ ಅಂದಿನಿಂದ ಇಂದಿನವರೆಗೂ ದೊರೆತಿರುವದು ಕಾರ್ಯಾಲಯದ ಒಂದು ಭಾಗ್ಯವೇ ಸರಿ.

ಈವರೆಗೆ ನಮಗೆ ಆಗಲೇ ಸಹಾಯಮಾಡಿದ್ದ ನ್ಯಾಯಸಾಹಿತ್ಯ ವಿದ್ವಾನ್, ವೇದಾಂತಶಿರೋಮಣಿ, ವೇದಾಂತಾಚಾರ್ಯ ಚಂದ್ರಶೇಖರಭಟ್ಟ ಪಾಟಣಕರರೂ ಈ ಸಪ್ತಾಹದಲ್ಲಿ ಭಾಗವನ್ನುವಹಿಸಿದ್ದರು. ಆಸ್ಥಾನ ಮಹಾವಿದ್ವಾನ್ ಸಾಹಿತ್ಯರತ್ನಂ ಕೆ.ಗೋಪಾಲಕೃಷ್ಣಶಾಸ್ತ್ರಿಗಳು ಈ ವರ್ಷ ಹೊಸದಾಗಿ ಬಂದು

ಸೇರಿದ್ದರು. (ಗಂಟಲು ಬಾಧೆಯ ನಿಮಿತ್ತದಿಂದ ನಾನು ಮಾತನಾಡಲಾರದೆ ಇದ್ದ ಕಾರಣ ಉಪನ್ಯಾಸಗಳನ್ನು ವಿಠ್ಠಲಶಾಸ್ತ್ರಿಗಳೇ ಮಾಡಬೇಕೆಂದು ಮೊದಲು ನನ್ನ ಸೂಚನೆಯಿತ್ತು ; ಆದರೆ ಭಗವತ್ಪಾದರ ಅನುಗ್ರಹದಿಂದ ಸಪ್ತಾಹದ ಹೊತ್ತಿಗೆ ಯಾವ ಅಡ್ಡಿಯೂ ಇಲ್ಲದೆ ಅನುವಾದಗಳನ್ನೂ ಉಪನ್ಯಾಸಗಳನ್ನೂ ನಾನೇ ಮಾಡಿದೆನು.) ನಂಜಪ್ಪಭಾಗವತರು, ರಾಮಣ್ಣದಾಸರು ಇಬ್ಬರೂ ಎಂದಿನಂತೆ ಸಹಕರಿಸಿದರು. ದ್ವಾದಶಿಯದಿನ ಕೃಷ್ಣಮೂರ್ತಿಪುರಂ ನಿವಾಸಿಗಳು ಪರಸ್ಥಳದಿಂದ ಬಂದಿದ್ದವರಿಗೆ ವಿಶೇಷ ಸಮಾರಾಧನೆಯನ್ನು ಏರ್ಪಡಿಸಿದ್ದರು. ಆ ದಿನ ಸಾಯಂಕಾಲ ವಿದ್ವಾನ್ ಸಂಗೀತಭೂಷಣ ಶೆಲ್ವಪಿಳ್ಳೆಐಯ್ಯಂಗಾರರ ಸಂಗೀತವಾಯಿತು. ವಿದ್ವಾನ್ ಟಿ. ಎಸ್. ತಾತಾಚಾರ್ಯರೂ, ವಿದ್ವಾನ್ ಗೋಪಾಲರಾವ್ ಇವರುಗಳು ಪಕ್ಕವಾದ್ಯಗಳಿಗೆ ಸಹಾಯಕರಾಗಿದ್ದರು. ಒಟ್ಟಿನಲ್ಲಿ ಈ ಸಪ್ತಾಹವು ಅನೇಕ ವಿಷಯಗಳಲ್ಲಿ ಭಕ್ತವೃಂದಕ್ಕೆ ತೃಪ್ತಿಯನ್ನುಂಟುಮಾಡಿತು.

## ಮೂಲಾವಿದ್ಯೆಯ ಗಡಿಬಿಡಿ :

ಪ್ರಮಾಥಿ ಸಪ್ತಾಹದಲ್ಲಿ ನಡೆದ ಒಂದು ವಿಶೇಷ ಘಟನೆಯೆಂದರೆ ಪಾಟಣಕರ ಚಂದ್ರಶೇಖರಭಟ್ಟರೂ, ಗೋಪಾಲಕೃಷ್ಣಶಾಸ್ತ್ರಿಗಳವರೂ, ತಮ್ಮತಮ್ಮ ಪ್ರವಚನಕಾಲದಲ್ಲಿ ಆವರೆಗೆ ಆಗಲೇ ಶಾಂತವಾಗಿದ್ದ ಮೂಲಾವಿದ್ಯಾಚರ್ಚೆಯನ್ನು ಮತ್ತೆ ಸಂಜೀವನಗೊಳಿಸಿದ್ದು. ಚಂದ್ರಶೇಖರ ಭಟ್ಟರವರು ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ 31-32ನೆಯ ಮಂತ್ರಗಳ ಭಾಷ್ಯದ ಅರ್ಥವನ್ನು ವಿವರಿಸುತ್ತಾ 'ಯತ್ರ ಪುನಃ ಸಾ ಅವಿದ್ಯಾ ವಸ್ತ್ವಂತರ-ಪ್ರತ್ಯುಪಸ್ಥಾಪಿತಾ ಶಾನ್ತಾ' (ಬೃ 4-3- 33) ಎಂಬ ಭಾಷ್ಯವಾಕ್ಯವನ್ನು ವಿವರಿಸುವಾಗ, "ಅವಿದ್ಯೆಯು ಶಾನ್ತವಾಗಿರುತ್ತದೆ ಎಂದರೆ ಅದು ಸಂಪೂರ್ಣವಾಗಿ ಇಲ್ಲದೆ ಹೋಗುತ್ತದೆ ಎಂದು ಅರ್ಥವಲ್ಲ, ಅದು ವ್ಯಾಪಾರಶೂನ್ಯವಾಗಿ, ಭಾವರೂಪವಾದ ಮೂಲಾವಿದ್ಯೆಯ ರೂಪದಲ್ಲಿರುತ್ತದೆ ಎಂದರ್ಥ" ಎಂದು ಹೇಳಿದರು. ಮೂಲಾವಿದ್ಯೆಯನ್ನು ಭಾಷ್ಯಕಾರರೂ ಗೌಡಪಾದರೂ ಒಪ್ಪಿರುತ್ತಾರೆ. ಅದನ್ನು ಒಪ್ಪದಿದ್ದರೆ ಸಿದ್ಧಾಂತಕ್ಕೆ ಕೆಲವು ಅಡಚಣೆಗಳುಬರುತ್ತವೆ-ಎಂದು ಕೆಲವು ಪ್ರಮಾಣವಚನಗಳನ್ನು ಉದಾಹರಿಸಿ ಹೇಳಿದರು. ನಾನು ಅನುವಾದದ ಕಾಲಕ್ಕೆ, ಪ್ರಕೃತದಲ್ಲಿ 'ಶಾನ್ತಾ' ಎಂಬ ಮಾತಿಗೆ ಅವಿದ್ಯೆಯು ಅಲ್ಲಿರುವದಿಲ್ಲ ಎಂದೇ ಅರ್ಥಮಾಡಬೇಕು; ಇದೇ ಬ್ರಾಹ್ಮಣದ 21ನೆಯ ಮಂತ್ರದ ಭಾಷ್ಯದಲ್ಲಿ 'ಯತ್ರಾವಿದ್ಯಾಕಾಮಕರ್ಮಾಣಿ ನ ಸನ್ತಿ' (ಈ ಸುಷುಪ್ತಿಯಲ್ಲಿ ಅವಿದ್ಯಾಕಾಮ-ಕರ್ಮಗಳು ಇರುವದಿಲ್ಲ) 'ಅನ್ಯತ್ವಪ್ರತ್ಯುಪಸ್ಥಾಪಕ ಹೇತೋರವಿದ್ಯಾಯಾ

ಅಭಾವಾತ್' (ಮತ್ತೊಂದನ್ನು ಕಲ್ಪಿಸುವದಕ್ಕೆ ಕಾರಣವಾದ ಅವಿದ್ಯೆಯು ಇಲ್ಲದ್ದರಿಂದ) ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಪ್ರಕರಣಕ್ಕೆ ಈ ಅರ್ಥವೇ ಹೊಂದುತ್ತದೆ. ಭಾವಾವಿದ್ಯಾವಾದವು ಕೆಲವು ವ್ಯಾಖ್ಯಾನಪ್ರಸ್ಥಾನಗಳಲ್ಲಿ ಕಂಡು ಬರುತ್ತದೆಯಾದರೂ, ಶ್ರೀಗೌಡಪಾದಭಾಷ್ಯಕಾರರುಗಳಿಗೆ ಅದು ಸಮ್ಮತವಲ್ಲ. ಇಲ್ಲಿ ಶಾಸ್ತ್ರಿಗಳು ಹೇಳಿರುವ ಮೂಲಾವಿದ್ಯಾವಾದಿಗಳ ಆಕ್ಷೇಪಕ್ಕೆ ಪರಿಹಾರವನ್ನು 'ಮೂಲಾವಿದ್ಯಾನಿರಾಸ ಎಂಬ ಗ್ರಂಥದಲ್ಲಿ ಬರೆದಿರುತ್ತೇನೆ' ಎಂದು ಉಪಸಂಹಾರ ಮಾಡಿದ್ದೆನು. ಗೋಪಾಲಕೃಷ್ಣಶಾಸ್ತ್ರಿಗಳವರು ಭಗವದ್ಗೀತೆಯ 13ನೆಯ ಅಧ್ಯಾಯ 26 ರಿಂದ 31ನೆಯವರೆಗಿನ ಶ್ಲೋಕಗಳ ಭಾಷ್ಯವನ್ನು ವಿವರಿಸಬೇಕಾಗಿತ್ತು. ಆ ಸಂದರ್ಭದಲ್ಲಿ 'ಕ್ಷೇತ್ರಕ್ಷೇತ್ರಜ್ಞಸ್ವರೂಪವಿವೇಕಾಭಾವನಿಬನ್ಧನೋ ರಜ್ಜುಶುಕ್ತಿಕಾದೀನಾಂ ತದ್ವಿವೇಕಾಭಾವದಧ್ಯಾರೋಪಿತ ಸಂಯೋಗವತ್। ಸೋऽಯಮಧ್ಯಾಸರೂಪಃ ಕ್ಷೇತ್ರಕ್ಷೇತ್ರಜ್ಞಸಂಯೋಗೋ ಮಿಥ್ಯಾಜ್ಞಾನಲಕ್ಷಣಃ' ಎಂಬ ಭಾಷ್ಯವಾಕ್ಯವನ್ನು ತೆಗೆದು ಮಿಥ್ಯಾಜ್ಞಾನವೆಂದರೆ ಭಾವರೂಪವಾದ ಮೂಲಾವಿದ್ಯೆ; ಇದು ಸುಷುಪ್ತಿಪ್ರಲಯಗಳಲ್ಲಿ ಬೀಜರೂಪವಾಗಿರುತ್ತದೆ. ಅವಿದ್ಯೆಯನ್ನು ಅಭಾವವೆಂದರೆ ಅದಕ್ಕೆ ಕಾರಣತ್ವವು ಹೊಂದುವದಿಲ್ಲ-ಎಂದು ಮುಂತಾಗಿ ಹೇಳಿದರು. ನಾನು ಅನುವಾದ ಕಾಲಕ್ಕೆ ಕ್ಷೇತ್ರಕ್ಷೇತ್ರಜ್ಞರ ಇತರೇತರ ತದ್ಧರ್ಮಾಧ್ಯಾಸವೇ ದ್ವೈತಕ್ಕೆ ಮೂಲ-ಎಂಬುದರಲ್ಲಿ ಭಾಷ್ಯಕ್ಕೆ ತಾತ್ಪರ್ಯವೇ ಹೊರತು ಮೂಲಾವಿದ್ಯೆಯಲ್ಲಿ ಭಾಷ್ಯಕ್ಕೆ ತಾತ್ಪರ್ಯವಿಲ್ಲ. ಮಿಥ್ಯಾಜ್ಞಾನರೂಪವಾದ ಅವಿದ್ಯೆಗೆ ಕ್ಷೇತ್ರಕ್ಷೇತ್ರಜ್ಞ ಸ್ವರೂಪ ''ವಿವೇಕಾಭಾವನಿಬನ್ಧನಃ'' ಎಂದು ಹೇಳಿರುವದರಿಂದ ವಿವೇಕಾಭಾವವೇ ನಿಮಿತ್ತವು ಎಂದು ಮುಂತಾಗಿ ಹೇಳಿ ವಿಷಯವನ್ನು ವಿಶದಗೊಳಿಸಿದ್ದೆನು.

ಸಪ್ತಾಹವು ಮುಗಿದ ಮೇಲೆ ಅಭಿನವಶಂಕರಾಲಯದಲ್ಲಿ ಪ್ರತಿ ಭಾನುವಾರವೂ ವೇದಾನ್ತೋಪನ್ಯಾಸಗಳನ್ನು ಏರ್ಪಡಿಸಿದ್ದರು. ಗೋಪಾಲಕೃಷ್ಣಶಾಸ್ತ್ರಿಗಳು ತಾ 23-7-39ರಲ್ಲಿ ಮಾಡಿದ ಒಂದು ಉಪನ್ಯಾಸದಲ್ಲಿ ಈ ಅವಿದ್ಯೆಯ ವಿಚಾರವನ್ನು ಮತ್ತೆ ಪ್ರಸ್ತಾಪಿಸಿದರು. ಅದರ ನಿಮಿತ್ತದಿಂದ ವಿಠ್ಠಲಶಾಸ್ತ್ರಿಗಳಿಗೂ, ಗೋಪಾಲಕೃಷ್ಣಶಾಸ್ತ್ರಿಗಳಿಗೂ ಕೆಲವು ಆಕ್ಷೇಪ ಸಮಾಧಾನಗಳು ಆದವು. ಆಮೇಲೆ ಸಂಸ್ಕೃತಕಾಲೇಜಿನ ವೇದಾಂತ ಪ್ರೊಫೆಸರ್ ಪಾಲಘಾಟು ನಾರಾಯಣಶಾಸ್ತ್ರಿಗಳು ಮೂಲಾವಿದ್ಯಾವಾದ ಪಕ್ಷವನ್ನು ವಹಿಸಿ ವಿಠ್ಠಲಶಾಸ್ತ್ರಿಗಳ ಆಕ್ಷೇಪಗಳಿಗೆ ಉತ್ತರವಿತ್ತರು. ಈ ಚರ್ಚೆಯವಿವರವನ್ನು ಅಧ್ಯಾತ್ಮಪ್ರಕಾಶಪತ್ರಿಕೆಯ (ಅಕ್ಟೋಬರ್ 1939) ಸಂಚಿಕೆಯಲ್ಲಿ ವಿವರವಾಗಿ ಕೊಟ್ಟಿರುತ್ತದೆ. ಆ ಬಳಿಕ ಅಧ್ಯಾಸಾತಿರಿಕ್ತವಾದ ಅವಿದ್ಯೆಯು ಭಾಷ್ಯಸಂಮ್ಮತವಲ್ಲ, ಯುಕ್ತಿಗೂ ಹೊಂದುವದಿಲ್ಲ- ಎಂಬ ವಿಷಯಕ್ಕೆ ವಿಠ್ಠಲಶಾಸ್ತ್ರಿಗಳು

ಮುಂದಿನ ಭಾನುವಾರ ಉಪನ್ಯಾಸ ಮಾಡತಕ್ಕದ್ದೆಂದು ಹಲಸೂರು ವೆಂಕಟರಾಮಾಶಾಸ್ತ್ರಿಗಳು ಸೂಚಿಸಿದಂತೆ ಎಲ್ಲರೂ ಅನುಮೋದಿಸಿದರು. ಅದರಂತೆ ವಿಠ್ಠಲಶಾಸ್ತ್ರಿಗಳು 6-8-1939ರಲ್ಲಿ ತಮ್ಮ ಅಭಿಪ್ರಾಯವನ್ನು ವಿಶದಪಡಿಸಿ ಒಂದು ಉಪನ್ಯಾಸವನ್ನು ಮಾಡಿದರು. ಅದನ್ನು ಅಧ್ಯಾತ್ಮ ಪ್ರಕಾಶದಲ್ಲಿ ಪ್ರಚಾರಪಡಿಸಲಾಗಿರುತ್ತದೆ. ಆ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳುವದಕ್ಕೆಂದೇ ಮರಿಕೆರೆ ಸು॥ಶಾಸ್ತ್ರಿಗಳವರು 13-8-1939ರಲ್ಲಿ ಉಪನ್ಯಾಸ ಮಾಡಿದರು. ಅದನ್ನು ಅಧ್ಯಾತ್ಮ ಪ್ರಕಾಶದ 11ನೆಯ ಸಂಪುಟದ ಐದನೆಯ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಅದಾದ ಬಳಿಕ ಮುಂದಿನ ಭಾನುವಾರ ನನ್ನನ್ನು ಅಧ್ಯಾಸವಾದವನ್ನು ವಿವರಿಸುವದಕ್ಕೆ ಕರೆಯಿಸಬೇಕೆಂದು ನಿರ್ಣಯವಾಗಿತ್ತು. ಆದರೆ ಅದು ಅಷ್ಟಕ್ಕೇ ನಿಂತುಹೋಯಿತು. ಈ ಮೂಲಾವಿದ್ಯಾವಿಚಾರದ ಸೆಲೆಯು ಮುಂದಿನ ವರ್ಷದವರೆಗೂ ವ್ಯಾಪಿಸಿತು. ಅದನ್ನು ಮತ್ತೆ ತಿಳಿಸಲಿರುವೆನು.

## ಗ್ರಂಥ ಕಾಲಕ್ಷೇಪ :

ಈ ಕಾಲದಲ್ಲಿ ಕೇನೋಪನಿಷದ್ಭಾಷ್ಯ, ನೈಷ್ಕರ್ಮ್ಯಸಿದ್ಧಿ, ಮಾಂಡೂಕ್ಯಭಾಷ್ಯ, ಕಠೋಪನಿಷದ್ಭಾಷ್ಯ, ಗೀತಾಭಾಷ್ಯವಿಚಾರ, ಪ್ರಶ್ನೋಪನಿಷದ್ಭಾಷ್ಯ, ಐತರೇಯ-ಭಾಷ್ಯ, ತೈತ್ತಿರಿಯಭಾಷ್ಯ-ಇವುಗಳ ಪಾಠವು ನಡೆಯಿತು. ವಿಠ್ಠಲಶಾಸ್ತ್ರಿಗಳು ಮೈಸೂರು, ನಂಜನಗೂಡುಗಳಲ್ಲಿ ಪಾಠ, ಉಪನ್ಯಾಸಗಳನ್ನು ಮಾಡಿದರು. ನಂಜಪ್ಪ ಭಾಗವತರು ಮಲ್ಲೇಶ್ವರದಲ್ಲಿ ಕೀರ್ತನವೇ ಮುಂತಾದ ಚಟುವಟಿಕೆಗಳಲ್ಲಿದ್ದರು. ಆ ಇಬ್ಬರೂ ಕೆಲವು ದಿನ ಕಾರ್ಯಾಲಯಕ್ಕೆ ಬಂದರು.

## ಪುಸ್ತಕ ಭಂಡಾರ :

ಮತತ್ರಯ ಸಂಬಂಧವಾದ ಕೆಲವುಗ್ರಂಥಗಳು ಭಂಡಾರಕ್ಕೆ ಸೇರಿದವು. ಕೆಲವು ಇಂಗ್ಲೀಷು ತತ್ತ್ವವಿಚಾರದ ಪುಸ್ತಕಗಳೂ ಸೇರಿದವು.

## ಉಪನ್ಯಾಸಗಳು :

ಕಾರ್ಯಾಲಯದಲ್ಲಿಯೇ ಅಲ್ಲದೆ ಭದ್ರಾವತಿ, ಮತ್ತೂರು ಈ ಸ್ಥಳಗಳಲ್ಲಿಯೂ ಆದವು.

# 39. ಹೊಸ ಚಟುವಟಿಕೆಗಳು (1940-1944)

## ಅಧ್ಯಾತ್ಮಪ್ರಕಾಶ ಪತ್ರಿಕೆ:

ಪತ್ರಿಕೆಯು 1940 ರಿಂದ 1944ನೆಯ ಆಗಸ್ಟ್‌ವರೆಗೆ ನಡೆಯಿತು. ಹದಿನೈದನೆಯ ಸಂಪುಟವನ್ನು ಹಾಗೂ ಹೀಗೂ ಮುಗಿಸಿದೆವು. ಚಂದಾದಾರರ ಸಂಖ್ಯೆಯು ಬಹಳ ಕಡಿಮೆಯಾಯಿತು. ಒಳ್ಳೆಯ ಕಾಗದವು ಸಮಯಕ್ಕೆ ಸಿಕ್ಕುವದು ಕಷ್ಟವಾಯಿತು. ಮುದ್ರಣದ ಸಹಾಯವು ಸಾಲದೆ ಹೋಯಿತು. ಸಂಪಾದಕರ ಆರೋಗ್ಯ ಸ್ಥಿತಿಯು ಸರಿಯಾಗಿಲ್ಲದ್ದರಿಂದ ಸ್ಥಲಾಂತರದಲ್ಲಿ ಅಚ್ಚುಮಾಡಿಸುವ ಧೈರ್ಯವಿಲ್ಲವಾಯಿತು. ಈ ಎಲ್ಲಾಕಾರಣಗಳಿಂದ ಮುಂದೆ ಎರಡು ವರ್ಷಗಳ-ವರೆಗೆ ಪತ್ರಿಕೆಯು ನಿಂತು ಹೋಯಿತು.

## ಗ್ರಂಥಪ್ರಕಟಣೆ:

ಈ ಕಾಲದಲ್ಲಿ ವೇದಾಂತಪ್ರವೇಶಿಕೆ, ಜ್ಞಾನಯೋಗ 2ನೆಯ ಭಾಗ, ಕೇನೋಪನ್ಯಾಸಮಂಜರಿ, ಮುಂಡಕೋಪನ್ಯಾಸಮಂಜರಿ, ಅಪರೋಕ್ಷಾನುಭೂತಿ, ಚಿದಾನಂದಸವಾಯಿ, ವೇದಾಂತವಿಚಾರದ ಇತಿಹಾಸ, ಭೀಷ್ಮಸ್ತವರಾಜ, ಶಿವನಾಮಾಷ್ಟೋತ್ತರಶತಕ, ಉಪದೇಶಸಾಹಸ್ರಿ-ಇಷ್ಟು ಗ್ರಂಥಗಳು ಪತ್ರಿಕೆಯಲ್ಲಿ ಭಾಗಭಾಗವಾಗಿ ಅಚ್ಚಾಗಿ ಪುಸ್ತಕ ರೂಪವನ್ನು ತಳೆದವು. ಉಪದೇಶಸಾಹಸ್ರಿಯ 18ನೆಯ ಪ್ರಕರಣ 120 ರವರೆಗೆ ಅಚ್ಚಾಗಿ ಅಲ್ಲಿಗೇ ನಿಂತಿತು. ಆದ್ದರಿಂದ 16ನೆಯ ಪ್ರಕರಣದವರೆಗಿನಗ್ರಂಥವನ್ನುಮಾತ್ರ ಎರಡನೆಯ ಭಾಗವೆಂದು ಕರೆದು ಮಾರುವದಕ್ಕೆ ಇಡಲಾಯಿತು.

ಉಪನಿಷತ್ತುಗಳ ಮೊದಲನೆಯ ಪರಿಚಯ, ಶ್ರೀರಾಮಗೀತಾ, ವೇದಾಂತದರ್ಶನ (ಬ್ರಹ್ಮಸೂತ್ರಗಳ ಮೊದಲನೆಯ ಪರಿಚಯ), ಗೀತಾಭಾಷ್ಯ (13-18) ಇವುಗಳನ್ನು ಸ್ವತಂತ್ರವಾಗಿಯೇ ಮುದ್ರಿಸಲಾಯಿತು. ಪತ್ರಿಕೆಯಲ್ಲಿ ಪ್ರಕಟಿತವಾಗಿದ್ದ ಅವಸ್ಥಾತ್ರಯ ವಿಚಾರಗಳ ಲೇಖನಗಳನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಪರಮಾರ್ಥಚಿಂತಾಮಣಿ ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಬೆಳಕಿಗೆ ಹಿಡಿಯಲಾಯಿತು. ವಾಚಕರಿಗೆ ಪರಿಚಿತರಾಗಿರುವ ಅಡ್ವೋಕೇಟ್ ನಂಜುಂಡಯ್ಯನವರು, ಬಂಗಾಳ-ನಾಗಪುರ ರೈಲ್ವೆಯ ಸ್ಟಾಟಿಸ್ಟಿಕಲ್ ಆಫೀಸರ್ ಶ್ರೀಕಂಠಯ್ಯನವರು, ಹೊಳೆನರಸೀಪುರ ಪ್ಲೀಡರ್ ಆರ್. ರಾಮಸ್ವಾಮಯ್ಯನವರು ಗ್ರಂಥಪ್ರಕಟಣೆಗೆ ಪೋಷಕರಾದರು. ವೇ.ಬಾಲಬೋಧೆ, ಸರ್ವೇಷ್ಟಸಿದ್ಧಿ ಇವುಗಳ

ಎರಡನೆಯ ಸಂಸ್ಕರಣಗಳು ಹೊರಕ್ಕೆಬಂದವು. **Minor works of Shankaracharya** (ಶಂಕರಾಚಾರ್ಯರ ಪುಟ್ಟ ಪ್ರಕರಣಗಳು) ಎಂಬ ಗ್ರಂಥವೂ ಸ್ವತಂತ್ರವಾಗಿಯೇ ಪ್ರಕಾಶಿತವಾಯಿತು.

## ಶಂಕರಸಪ್ತಾಹಗಳು :

ವಿಕ್ರಮ ಸಂವತ್ಸರದ ಸಪ್ತಾಹವು(15-5-1940 ರಿಂದ 18-5-1940) ರವರೆಗೆ ಮೈಸೂರಿನ ಶ್ರೀ ಚಾಮುಂಡೀಪುರದ ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ನಡೆಯಿತು. ವಿಠ್ಠಲಶಾಸ್ತ್ರಿಗಳು ಮತ್ತು ನಂಜಪ್ಪಭಾಗವತರೇ ಅಲ್ಲದೆ ಕೆ.ವಿ.ನಾರಾಯಣಶಾಸ್ತ್ರಿಗಳವರು, ಮತ್ತೂರು ಸುಬ್ಬರಾಯಾವಧಾನಿಗಳೂ ಪಾತ್ರವನ್ನು ವಹಿಸಿದ್ದರು. ಭಜನೆಗೂ ಕೀರ್ತನೆಗೂ ವಾದ್ಯಗಳಿಗೆ ಅರಸೀಕೆರೆ ನಾರಣಪ್ಪನವರು, ವಿಶ್ವೇಶ್ವರಯ್ಯನವರು, ಮನ್ನಾರು ಅಯ್ಯಂಗಾರ್ಯರು ಮುಂತಾದವರ ಸಹಾಯವಿತ್ತು. ಅಡ್ವೋಕೇಟ್ ಎ. ಸೀತಾರಾಮಯ್ಯನವರು, ಪಂಡಿತರತ್ನಂ ಬೆಟ್ಟಹಲಸೂರು ವೆಂಕಟರಾಮಾಶಾಸ್ತ್ರಿಗಳೂ ಇದ್ದು ಪ್ರೋತ್ಸಾಹಪಡಿಸಿದರು.

ವಿಷು ಸಂವತ್ಸರದಲ್ಲಿ ಹನ್ನೊಂದನೆಯ ಉತ್ಸವವು(1-5-1941 ರಿಂದ 8-8-1941) ರವರೆಗೆ ಮೂರನೆಯ ಸಲವೂ ಮೈಸೂರಿನ ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿಯೇ ನಡೆಯಿತು. ಆಗ ವಿಠ್ಠಲಶಾಸ್ತ್ರಿಗಳು, ನಂಜಪ್ಪ ಭಾಗವತರು, ಮತ್ತೂರು ಸುಬ್ಬರಾಯಾವಧಾನಿಗಳು, ಅನಂತಮೂರ್ತಿಶಾಸ್ತ್ರಿ ಗಳವರು – ಇವರುಗಳು ಸಹಕರಿಸಿದರು. ದ್ವಾದಶಿಯದಿನ ಎಂದಿನಂತೆ ನನ್ನಿಂದ ಆಚಾರ್ಯರ ಗುಣಕಥನವಾದ ಬಳಿಕ ವೆಂಕಟರಾಮಾಶಾಸ್ತ್ರಿಗಳವರು 'ಆಚಾರ್ಯರು ಕರುಣಾಳುಗಳು' ಎಂದು ತಾವೂ ಗುಣಕಥನವನ್ನು ಮಾಡಿದರು. ತರೀಕೆರೆಯಿಂದ ಬಂದಿದ್ದ ಮಳಲಿ ನರಸಿಂಹಭಟ್ಟರು ತಾವೇ ಗುರುಭಕ್ತಿಯಿಂದ ಪ್ರೇರಿತರಾಗಿ ಎರಡು ಕೀರ್ತನೆಗಳನ್ನು ಮಾಡಿ ಎಲ್ಲರನ್ನೂ ಸಂತೋಷಪಡಿಸಿದರು.

ಚಿತ್ರಭಾನು ಸಂವತ್ಸರದಲ್ಲಿ ಹನ್ನೆರಡನೆಯ ಉತ್ಸವವು (20-4-1942 ರಿಂದ 28-4-1942) ತರೀಕೆರೆಯಲ್ಲಿ ಪೂರ್ಣಯ್ಯನವರ ಛತ್ರದಲ್ಲಿ ನಡೆಯಿತು. ಆಗ ವಿಠ್ಠಲಶಾಸ್ತ್ರಿಗಳು, ನಂಜಪ್ಪ ಭಾಗವತರು, ಮಳಲಿ ನರಸಿಂಹಭಟ್ಟರು, ಅನಂತಮೂರ್ತಿಶಾಸ್ತ್ರಿಗಳು, ತರೀಕೆರೆಯ ಚಿದಂಬರ ಪಂಡಿತರು, ಕಾಯಗೊಳದ ಜೀವಬಾಳಶಾಸ್ತ್ರಿ ಇವರೆಲ್ಲರೂ ಸಹಕರಿಸಿದರು.

ಸ್ವಭಾನು ಸಂವತ್ಸರದಲ್ಲಿ ಹದಿಮೂರನೆಯ ಉತ್ಸವವು(9-5-1943 ರಿಂದ 16-5-1943ರವರೆಗೆ) ತುಮಕೂರು ಬ್ರಾಹ್ಮಣ ಸೇವಾಸಂಘದಲ್ಲಿ ನಡೆಯಿತು. ಈ

ಸಲ ವಿಠ್ಠಲಶಾಸ್ತ್ರಿಗಳು, ಅನಂತಮೂರ್ತಿಶಾಸ್ತ್ರಿಗಳು, ಸುಬ್ಬರಾಯಾವಧಾನಿಗಳು, ನಂಜಪ್ಪಭಾಗವತರು, ರಾಮದಾಸರು ಇವರುಗಳಲ್ಲದೆ ಗೀತಾಪ್ರಚಾರಿಣೀ ಸಭೆಯ ಶಂಕರಾನಂದ ಭಾರತೀಸ್ವಾಮಿಗಳವರು, ಗಮಕಿ ರಾಮಕೃಷ್ಣಶಾಸ್ತ್ರಿಗಳು, ಗಮಕಿ ಶ್ರೀನಿವಾಸರಾಯರು – ಇವರುಗಳ ಸಹಕಾರವೂ ದೊರೆಯಿತು. ಬ್ರಾಹ್ಮಣ ಸಂಘದವರೇ ಅತಿಥಿಗಳ ಸೇವೆಯನ್ನು ನಡೆಯಿಸಿದರು.

ಹದಿನಾಲ್ಕನೆಯ ಉತ್ಸವವು ತಾರಣ ಸಂವತ್ಸರದಲ್ಲಿ (27.4.44 ರಿಂದ 5.5.44) ಹೊಳೆನರಸೀಪುರದಲ್ಲಿ ಚತುರ್ಭುಜ ಪಟ್ಟಾಭಿರಾಮದೇವಸ್ಥಾನದಲ್ಲಿ ಆಯಿತು. ಆಗ್ಗೆ ವಿಠ್ಠಲಶಾಸ್ತ್ರಿಗಳು, ನಂಜಪ್ಪ ಭಾಗವತರೂ, ಅಲ್ಲದೆ ಸುಬ್ಬರಾಯಾವಧಾನಿಗಳು, ವ್ಯಾಕರಣ ವಿದ್ವಾನ್ ಹೊ. ಶ್ರೀಕಂಠಶಾಸ್ತ್ರಿಗಳು ಇವರು ಎಂದಿನಂತೆ ಸಹಕರಿಸಿದರು. ಪಂಡಿತರಾಜ ನವೀನಂ ವೆಂಕಟೇಶಶಾಸ್ತ್ರಿಗಳು 'ಭಕ್ತಿಯೋಗ' ಎಂಬ ವಿಷಯದಲ್ಲಿ, ಶಂಕರಭಾರತೀಸ್ವಾಮಿಗಳು 'ಇಹಪರಸುಖ ಸಾಧನ' ಎಂಬ ವಿಷಯದಲ್ಲಿ, ಶ್ರೀಕೃಷ್ಣಯೋಗೀಂದ್ರ ಬ್ರಹ್ಮಾನಂದ ಸರಸ್ವತೀಸ್ವಾಮಿಗಳವರು 'ಸದಾಚಾರ' ಎಂಬ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡಿದರು. ಊರಿನ ಮಹನೀಯರುಗಳಲ್ಲಿ ಕೆಲವರು ಒಂದೊಂದು ದಿನದ ವೆಚ್ಚವನ್ನು ವಹಿಸಿಕೊಂಡರು; ಕೆಲವರು ದಿನಸಿಗಳನ್ನು ಕೊಟ್ಟು ಸಹಾಯಮಾಡಿದರು.

## ಮೂಲಾವಿದ್ಯಾ ಚರ್ಚೆಯು ಮರುಕಳಿಸಿದ್ದು:

ಮೂಲಾವಿದ್ಯಾನಿರಾಸವನ್ನು ನಾನು ಬರೆದ ಮೇಲೆ ಪಂಡಿತರುಗಳಲ್ಲಿ ಉಂಟಾದ ಮನಃಕ್ಷೋಭೆಯ ವಿಷಯವನ್ನು ಆಗಲೆ ಸ್ವಲ್ಪ ತಿಳಿಸಿರುತ್ತೇನೆ. ಈಚೆಗೆ ಆ ವಿಷಯದಲ್ಲಾದ ವಾದವಿವಾದಗಳ ಕವಲುಗಳನ್ನು ಇಲ್ಲಿ ಸ್ವಲ್ಪ ತಿಳಿಸುವದು ಅವಶ್ಯ. ನಿಷ್ಪಕ್ಷಪಾತದಿಂದ ವಿಚಾರಮಾಡಿದ ಪಂಡಿತರುಗಳಲ್ಲಿ ನನಗೆ ಮೊದಲು ಕಂಡು ಬಂದವರು ಪಂಡಿತ ಪ್ರವರ ಅನಂತಮೂರ್ತಿಶಾಸ್ತ್ರಿಗಳು. ಅವರು ಈವರೆಗೆ ಶಂಕರಸಪ್ತಾಹಗಳಲ್ಲಿ ಸೇರಿಕೊಂಡು ಸಹಕರಿಸಿದ ರೀತಿಯನ್ನು ತಿಳಿಸಿದ್ದಾಗಿದೆ. ಆದರೆ ಅವರು ಮೊದಮೊದಲು ನನ್ನ ಅವರ ಅಭಿಪ್ರಾಯವು ಹೊಂದುವಷ್ಟುಮಟ್ಟಿಗೆ ಸೇರಿಕೊಂಡು ಸಹಕರಿಸುತ್ತಿದ್ದರೇ ಹೊರತು ಸಂಪೂರ್ಣವಾಗಿ ಶುದ್ಧ ಶಾಂಕರ ಪ್ರಕ್ರಿಯೆಗೆ ರುಜುಹಾಕಿರಲಿಲ್ಲ. ಮೈಸೂರಿನಲ್ಲಿ ಪಂಡಿತರುಗಳಿಗೂ ವಿಠ್ಠಲ-ಶಾಸ್ತ್ರಿಗಳಿಗೂ ಆದ ಚರ್ಚೆಗಳ ವಿಷಯವನ್ನು ಪತ್ರಿಕೆಯಲ್ಲಿ ಹಾಕಿದಮೇಲೆ ಕನ್ನಡದಲ್ಲಿಯೂ ಮೂಲಾವಿದ್ಯಾವಿಷಯಕವಾದ ಒಂದು ಸಣ್ಣಗ್ರಂಥವನ್ನು ಬರೆಯುವದು ಉತ್ತಮವೆಂದು ನನಗೆ ತೋರಿತು. ಶಂಕರಸೂರ್ಯ ಎಂಬ ಕೈ

ಹೊತ್ತಿಗೆಯೊಂದನ್ನು ಬರೆದು ಶಂಕರನಾರಾಯಣ ದೇವಸ್ಥಾನದಲ್ಲಿ ನಡೆದ ಸಪ್ತಾಹದಲ್ಲಿ ಜನರಲ್ಲಿ ಹಂಚಿದ್ದೆವು. ಅದರಿಂದೀಚೆಗೆ ಶಂಕರಸಿದ್ಧಾಂತವೆಂಬ ಗ್ರಂಥವನ್ನು ವಿಕ್ರಮಸಂವತ್ಸರದಲ್ಲಿ ಪ್ರಕಟಿಸಲಾಗಿತ್ತು. ಆ ಗ್ರಂಥವನ್ನು ನೋಡಿದರೆ ಅನಂತಮೂರ್ತಿಶಾಸ್ತ್ರಿಗಳು ತಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಕೊಡಬಹುದೆಂದು ನಂಜಪ್ಪ ಭಾಗವತರು ನನಗೆ ಸೂಚಿಸಿದರು. ಅದರಂತೆ ನಾನು ಒಂದು ಪುಸ್ತಕವನ್ನು ಅವರಿಗೆ ಕಳುಹಿಸಿಕೊಟ್ಟೆ. 1939ರಲ್ಲಿ ಅವರಿಗೆ ಸಂಸ್ಕೃತ ಕಾಲೇಜಿನಲ್ಲಿ ಕೆಲಸವಾಗಿ ಚೆನ್ನಪಟ್ಟಣ, ಕಾನಕಾನಹಳ್ಳಿಗಳಲ್ಲಿ ಸ್ವಲ್ಪಕಾಲವಿದ್ದು ಕೊನೆಗೆ ಹೈಸ್ಕೂಲಿಗೆ ತೀರ್ಥಹಳ್ಳಿಗೆ ಆಗ್ಗೆ ವರ್ಗವಾಗಿ ಬಂದಿದ್ದರು. ಅವರು ಪುಸ್ತಕವನ್ನು ನಿಧಾನವಾಗಿ ಓದಿ ಮೂಲಾವಿದ್ಯಾವಾದದಲ್ಲಿರುವಂತೆ ಅಧ್ಯಾಸವಾದದಲ್ಲಿಯೂ ದೋಷವಿದೆ, ಸಾಕ್ಷಿಯನ್ನಿಟ್ಟುಕೊಂಡರೆ ಸಾಕಾಗಿದೆ-ಎಂದು ತಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿದರು. ಸಾಕ್ಷಿಯೇ ಪರಮಾರ್ಥವೆಂಬುದನ್ನು ಎಲ್ಲರೂ ಒಪ್ಪಬೇಕು ; ಆದರೆ ಅಧ್ಯಾಸವಾದವು ಇಂಥಿಂಥ ದೋಷಗಳಿಗೆ ಕಾರಣವೆನ್ನುವದಕ್ಕೆ ಬದಲು ಗುಣ, ದೋಷ, ಆಗುವದು, ಹೋಗುವದು ಎಲ್ಲವೂ ಅಧ್ಯಾಸವೇ ಎಂದು ಒಪ್ಪಿಕೊಳ್ಳಬೇಕು ; ಅಧ್ಯಾಸವನ್ನಿಟ್ಟುಕೊಳ್ಳುವ-ದಲ್ಲ ; ಅದು ಅನುಭವದಲ್ಲಿ ತೋರುತ್ತಲಿದೆ. ನಾನು ಜ್ಞಾತೃ, ಕರ್ತೃ, ಭೋಕ್ತೃ- ಎಂದಿಟ್ಟುಕೊಂಡಿರುವದು ಶರೀರೇಂದ್ರಿಯಾದಿಗಳನ್ನು ನಾನು ನನ್ನದೆಂಬ ಅಭಿಮಾನದಿಂದಲೇ ಎಂಬುದು ಸರ್ವಲೋಕಪ್ರತ್ಯಕ್ಷವಾಗಿದೆ ಎಂಬುದನ್ನು ತಿಳಿಸಿ ಅವರಿಗೆ ವಿಸ್ತಾರವಾಗಿ ಪ್ರತ್ಯುತ್ತರವನ್ನು ಬರೆದೆನು. ಅವರು ಆ ವಿಷಯದಲ್ಲಿ ಏನೂ ಹೇಳದೆ ಸುಮ್ಮನೆ ಇದ್ದುಬಿಟ್ಟರು. ಅವರ ಅಭಿಪ್ರಾಯವು ಕ್ರಮಕ್ರಮವಾಗಿ ಮಾರ್ಪಟ್ಟ ರೀತಿಯನ್ನು ಅವರ ಮಾತಿನಿಂದಲೇ ತಿಳಿಸುವದು ಯುಕ್ತವಾಗುವದು. 1939 ರಿಂದ ಶಂಕರ ಸಪ್ತಾಹಗಳಲ್ಲಿ ಸೇರುತ್ತಾಬಂದೆ ; ಅವರ ವಿಚಾರಗಳನ್ನು ತಿಳಿದುಕೊಳ್ಳುವದರಲ್ಲೇ ಆಸಕ್ತನಾದೆ, ಅವರು ಹೇಳುತ್ತಿದ್ದ ವಿಚಾರಗಳೆಲ್ಲ ನ್ಯಾಯವೆಂದು ಕಂಡುಬಂದರೂ ಅದನ್ನು ಒಪ್ಪಿಕೊಳ್ಳಲು ನಾನು ಸಿದ್ಧವಾಗಿರಲಿಲ್ಲ..... ತುಮಕೂರಿನ ಸಪ್ತಾಹವು ಮುಗಿಯುವವರೆಗೆ ನಾನು ಇವರು ಹೇಳುತ್ತಿದ್ದ ವಿಷಯಗಳಿಗೆ ಅಂಟಿಕೊಂಡಿರಲಿಲ್ಲ. ಮೊದಮೊದಲು ನಮಸ್ಕಾರವನ್ನು ಕೂಡಮಾಡಲು ಹಿಮ್ಮೆಟ್ಟುತ್ತಿದ್ದೆ. ಕೊನೆಗೆ ಮಾಡತೊಡಗಿದೆ. ವಿಚಾರವನ್ನು ಹೆಚ್ಚು ಆದರದಿಂದ ಕೇಳತೊಡಗಿದೆ. ಮೂಲಗ್ರಂಥಗಳ ಕಡೆಗೇ ಲಕ್ಷ್ಯಕೊಡಬೇಕೆಂದು ತಿಳಿಸಿದ ವಿಷಯ ಮನಸ್ಸಿಗೆ ಬಂತು. ( ಕಾಲೇಜಿನಲ್ಲಿ ತರ್ಕ

ಓದುತ್ತಿದ್ದಾಗ ಮುಂದೆ ಬರುವದನ್ನೆಲ್ಲ ಮೊದಲೇ ಅನುವಾದ ಮಾಡಿರುವದು ಓದುವ ವಿದ್ಯಾರ್ಥಿಗಳಿಗೆ ಅಸೌಕರ್ಯ ಎಂದು ತಿಳಿಸುತ್ತಿದ್ದರು. ನನಗೆ ಅರ್ಥವಾಗದೆ ಬೇಜಾರಾದಾಗ ಇವರ ಬಳಿ ಈ ವಿಷಯವನ್ನು ಕೊಂಡೊಯ್ದಾಗ ಇವರು ಹೀಗೆ ಹೇಳುತ್ತಿದ್ದರು.) ಇವರು ತಿಳಿಸುತ್ತಿರುವ ಪ್ರಕ್ರಿಯೆಯೇ ಸಾಧುವಾದದ್ದೆಂದು ಅನುಭವ ಮತ್ತು ಶಾಸ್ತ್ರಗಳಿಗೆ ಹೊಂದುಗಡೆಯಾಗಿರುತ್ತದೆ ಎಂದು ನನಗೆ ಈಗ ಮನವರಿಕೆಯಾಗಿದೆ. ಹಿಂದೆ ತಿಳಿಸಿರುವ ಅಭಿನವಶಂಕರಾಲಯದ ಚರ್ಚೆಗಳಾದ ಮೇಲೆ ವಿಠ್ಠಲಶಾಸ್ತ್ರಿಗಳನ್ನೂ ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರನ್ನೂ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಬೇರೆ ಬೇರೆಯಾಗಿ ಕರೆಯಿಸಿಕೊಂಡು ಅವರಿಂದ ಅದ್ವೈತ ವಿಷಯವಾಗಿ ಅರಮನೆಯಲ್ಲಿಯೇ ತಮ್ಮ ಎದುರಿಗೆ ಉಪನ್ಯಾಸಮಾಡುವಂತೆ ಹೇಳಿದರಂತೆ. ಆದರ ಫಲವಾಗಿ ಮಹಾಪ್ರಭುಗಳು ವಿಠ್ಠಲಶಾಸ್ತ್ರಿಗಳನ್ನು ಮಹಾರಾಜ ಕಾಲೇಜಿನಲ್ಲಿ ಪಾಶ್ಚಾತ್ಯರ ತತ್ತ್ವಶಾಸ್ತ್ರವನ್ನು ಅಭ್ಯಾಸಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟರು. ಮೂಲಾವಿದ್ಯಾಚರ್ಚೆಯಿಂದ ಶಾಸ್ತ್ರಿಗಳಿಗೆ ಇದೊಂದು ದೃಷ್ಟಫಲವಾಯಿತು. ಅಲ್ಲಿಂದೀಚೆಗೆ ಮೂಲಾವಿದ್ಯಾ ಪ್ರಸ್ಥಾನದಲ್ಲಿ ಅಭಿಮಾನವಿದ್ದ-ಪಂಡಿತರುಗಳು ಬಹಿರಂಗವಾಗಿ ಚರ್ಚೆಮಾಡುವದನ್ನು ಬಿಟ್ಟುಬಿಟ್ಟರು. ಅನಂತಮೂರ್ತಿಗಳನ್ನು ಬಿಟ್ಟರೆ ಮಿಕ್ಕವರು ಸಪ್ತಾಹಗಳಲ್ಲಿ ಭಾಗವಹಿಸುವದಕ್ಕೂ ಒಪ್ಪಲಿಲ್ಲ. ಅವರು ಅಲ್ಲಲ್ಲಿಯೇ ತಮ್ಮತಮ್ಮ ಅನುಯಾಯಿಗಳಿಗೆ ಮೂಲಾವಿದ್ಯಾನಿರಾಸ ಪಕ್ಷಪಾತಿಗಳ ದೋಷಗಳನ್ನು ಎತ್ತಿ ತೋರಿಸುತ್ತಿದ್ದರು. ಮೈಸೂರಿನಲ್ಲಲ್ಲದೆ ಬೆಂಗಳೂರಿನಲ್ಲಿಯೂ ಈ ವಿಷಯದಲ್ಲಿ ಕೆಲವು ಉಪನ್ಯಾಸ-ಗಳಾದವು. ಶಂಕರಸಿದ್ಧಾಂತವನ್ನು ಖಂಡಿಸುವದಕ್ಕೆಂದು ಮೂಲಾವಿದ್ಯಾನಿರಾಸ ವಾದದ ವಿಮರ್ಶೆ ಎಂಬ ಚಿಕ್ಕ ಗ್ರಂಥವನ್ನು ಚಟ್ಟೋಪಾಧ್ಯ-ಶೃಂಗಗಿರಿ ಕವಿನರಸಿಂಹಶರ್ಮರು ಬರೆದರು, ಮೂಲಾವಿದ್ಯಾಸಾಂಪ್ರದಾಯದಂತೆ ಗ್ರಂಥಗಳನ್ನು ಪ್ರಕಟಿಸುವದಕ್ಕೆ ಒಂದು ಸಂಸ್ಥೆಯನ್ನೇ ತೆಗೆಯಲಿರುವದಾಗಿಯೂ ಅವರು ಪ್ರಕಟಿಸಿದರು. ಎಮ್.ರಂಗಣ್ಣನೆಂಬುವರು ಮೂಲಾವಿದ್ಯಾನಿರಾಸ ಖಂಡನ ಎಂಬ ಸಣ್ಣಹೊತ್ತಿಗೆಯನ್ನು ಪಂಡಿತರ ಸಹಾಯದಿಂದ ಬರೆದು ಪ್ರಕಟಿಸಿದರು. ವಿದ್ಯಾಲಂಕಾರ, ವೇದಾಂತವಿದ್ವಾನ್, ಬಿರುದಾಂಕಿತರಾದ ರಾಮಚಂದ್ರಶಾಸ್ತ್ರಿಗಳು ಶಂಕರಸಿದ್ಧಾಂತದ ವಿಮರ್ಶೆ ಎಂಬ ಲೇಖನವನ್ನು ಬರೆದರು ; ನಾನು ಅದನ್ನು ಪ್ರತ್ಯುತ್ತರರೂಪವಾದ ಟಿಪ್ಪಣಿಗಳ ಸಹಿತವಾಗಿ

ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಪ್ರಕಟಿಸಿದೆನು. ಮೈಸೂರಿನ ಸಂಸ್ಕೃತಪಾಠಶಾಲೆಯಲ್ಲಿ ನಾನು 1940ನೆ ಡಿಸೆಂಬರ್ 7ರಿಂದ10ರವರೆಗೆ ಶಂಕರಸಿದ್ಧಾಂತ, ಅನುಶಾಂಕರ ಪ್ರಸ್ಥಾನಭೇದಗಳು, ಅನುಶಾಂಕರ ಗ್ರಂಥರಚನೆ, ವೇದಾಂತವಿಚಾರದ ಈಗಿನಸ್ಥಿತಿ ಎಂಬ ನಾಲ್ಕು ಉಪನ್ಯಾಸಗಳನ್ನು ಮಾಡಿದ್ದರಲ್ಲಿ ಶಂಕರರಿಂದೀಚೆಗೆ ಬಂದಿರುವ ಅದ್ವೈತಿಗಳು ಮೂಲಾವಿದ್ಯಾವಾದವನ್ನೆ ಅಲ್ಲದೆ ಇನ್ನು ಕೆಲವು ಪ್ರಸ್ಥಾನ ಭೇದಗಳನ್ನು ಶಂಕರರಹೆಸರಿನಲ್ಲಿ ಅವಲಂಬಿಸಿರುತ್ತಾರೆಂಬುದನ್ನು ಪ್ರತಿಪಾದಿಸಿದ್ದೆನು. (ಈ ವ್ಯಾಖ್ಯಾನಮಾಲೆಯೇ ಮುಂದೆ ವೇದಾಂತವಿಚಾರದ ಇತಿಹಾಸ ಎಂಬ ಹೆಸರಿನಿಂದ ಹೊಸಗ್ರಂಥವನ್ನು ಬರೆಯುವದಕ್ಕೆ ಪ್ರಚೋದಕವಾಯಿತು.) ಅಡಿಯಾರಿನ 'ಬ್ರಹ್ಮವಿದ್ಯಾ' ಎಂಬ ಹೆಸರಿನ ಆಂಗ್ಲಪತ್ರಿಕೆಯಲ್ಲಿ ಕೆ. ಮಾಧವಕೃಷ್ಣ-ಶರ್ಮ, ಎಂ.ಓ.ಎಲ್‌ರವರು ಬರೆದ ವಿಮರ್ಶೆಯೊಂದನ್ನೂ ಅಧ್ಯಾತ್ಮಪ್ರಕಾಶದ ಹನ್ನೆರಡನೇ ಸಂಪುಟದಲ್ಲಿ ಪ್ರತ್ಯುತ್ತರ ಸಮೇತವಾಗಿ ನಾನು ಬಹಿರಂಗ ಪಡಿಸಿದೆನು. ವಿಠ್ಠಲಶಾಸ್ತ್ರಿಗಳು ಮದರಾಸಿನಲ್ಲಿ ನಡೆದ ಅಖಿಲಭಾರತ ತತ್ತ್ವಸಮ್ಮೇಳನದಲ್ಲಿ ಶಂಕರರೂ ಅವರ ಈಚಿನ ವ್ಯಾಖ್ಯಾನಕಾರರೂ ಎಂಬ ನಿವೇದನ ಪತ್ರವನ್ನು ಓದಿದ್ದರು. ಆದನ್ನು ಪರಾಮರ್ಶ ಮಾಡಿಕೊಂಡೇ ಮೇಲೆ ಹೇಳಿರುವ ಕವಿ ನರಸಿಂಹ ಭಟ್ಟರು ತಮ್ಮ ವಿಮರ್ಶೆಗಳನ್ನು ಬರೆದರು. ಮೈಸೂರು ಸಂಸ್ಕೃತ ಮಹಾಪಾಠಶಾಲೆಯ ಈ ಎರಡರ ಸಾರವೂ ಅಧ್ಯಾತ್ಮಪ್ರಕಾಶ ಪತ್ರಿಕೆಯ 12ನೆಯ ಸಂಪುಟದ ಏಳನೆಯ ಸಂಚಿಕೆಯಲ್ಲಿ ಪ್ರಕಟವಾಯಿತು. ಬೈಲಹೊಂಗಲದ ಎನ್.ಆರ್.ಕುಲಕರ್ಣಿ, ಎಂ.ಎ., ಎಲ್.ಎಲ್.ಬಿ. ಇವರು 'ಮೂಲಾವಿದ್ಯಾ ವಾದ'ವೆಂಬ ಹೆಸರಿನ ಒಂದು ಲೇಖನವನ್ನು ಪತ್ರಿಕೆಗೆ ಬರೆದರು. ಆಮೇಲೆ ಮೂಲಾವಿದ್ಯಾ ಚರ್ಚೆಯ ಫಲಿತಾಂಶ ಎಂಬ ಲೇಖನವನ್ನು ಅದೇ ಸಂಚಿಕೆಯಲ್ಲಿ ನಾನು ಬರೆದೆನು. ಅದಾದ ಬಳಿಕ ಗೋಪಾಲಕೃಷ್ಣಶಾಸ್ತ್ರಿಗಳು ಸಮಾಲೋಚನಾ ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಬರೆದು ಫಲಿತಾಂಶದ ಸಮಾಲೋಚನೆಯನ್ನು ಬರೆದರು ; ಅದರ ಜೊತೆಗೆ ರಂಗಣ್ಣನವರೂ 'ಸಮಾಲೋಚನಾ' ಎಂಬ ಲೇಖನವನ್ನೂ, ಪಾಟಣಕರ ಚಂದ್ರಶೇಖರಭಟ್ಟರೂ 'ಮೂಲಾವಿದ್ಯಾಸಮರ್ಥನಾ' ಎಂಬ ಲೇಖನವನ್ನೂ ಬರೆದಿದ್ದರು. ಸಮಾಲೋಚನೆಯು ಬರುವ ಮುಂಚೆಯೇ ಪಾಲಘಾಟು ನಾರಾಯಣಶಾಸ್ತ್ರಿಗಳು 'ಅದ್ವೈತ ಸಿದ್ಧಾಂತ' ಎಂಬ ಹೆಸರಿನ ಉಪನ್ಯಾಸವನ್ನು ಸಂಗ್ರಹಿಸಿ ನನ್ನಿಂದ 'ಅದ್ವೈತ ಸಿದ್ಧಾಂತದಲ್ಲಿ ಅವಿದ್ಯಾತತ್ತ್ವ' ಎಂಬ ಹೆಸರಿನಿಂದ ಅದರ ವಿಮರ್ಶೆಯನ್ನೂ ಬರೆಯಿಸಿ ಮೈಸೂರಿನ ಅಧ್ಯಾತ್ಮವಿಚಾರ ಸಂಘದವರಾದ ಅಡ್ವೋಕೇಟ್

ಸೀತಾರಾಮಯ್ಯನವರೇ ಮೊದಲಾದವರು ಬೆಳಕಿಗೆ ಹಿಡಿದಿದ್ದರು. ವಿಠ್ಠಲಶಾಸ್ತ್ರಿಗಳು 'ಸಮಾಲೋಚನೆಯ ಸಮಾಲೋಚನೆ' ಎಂಬ ಕರಪತ್ರವನ್ನೂ ಅಚ್ಚುಮಾಡಿಸಿ ಹಂಚಿದರು. ಎಡತೊರೆ ಸುಬ್ರಾಯಶರ್ಮರು ಬರೆದ 'ಮೂಲಾವಿದ್ಯಾ ಸಮರ್ಥನಾ' ಎಂಬ ಚಿಕ್ಕ ಪುಸ್ತಕವೂ ಬಂದು ತಲೆಹಾಕಿತು. ಈ ಲೇಖಕರ ಹೆಸರನ್ನೂ, ನನ್ನ ಹೆಸರನ್ನೂ ಒಬ್ಬ ವ್ಯಕ್ತಿಯ ಹೆಸರೇ ಎಂದು ಅಧ್ಯಾತ್ಮಪ್ರಕಾಶದ ವಾಚಕರನೇಕರು ಭ್ರಮಿಸಿ ಅವರ ವಿಷಯದಲ್ಲಿ ನನ್ನನ್ನು ನನ್ನ ವಿಷಯದಲ್ಲಿ ಅವರನ್ನು ವಿಚಾರಿಸಹತ್ತಿದ್ದನ್ನು ಕಂಡು ನಾನು ವೈ.ಸುಬ್ಬರಾವ್ ಎಂಬ ಹೆಸರನ್ನು ಯ.ಸುಬ್ರಹ್ಮಣ್ಯಶರ್ಮಾ, (ಯಳ್ಳಂಬಳಸೆ ಸುಬ್ರಹ್ಮಣ್ಯಶರ್ಮ) ಎಂಬ ರೂಪಗಳಿಗೆ ತಿರಿಗಿಸಿಕೊಳ್ಳಬೇಕಾಯಿತು. ಇದೆಲ್ಲ ಆದಮೇಲೆ ಬಿ.ಎಚ್.ಮುನಿಸ್ವಾಮಿರಾವ್, ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳು, ಸೇವಾಸದನ, ಮೈಸೂರು - ಇವರು 'ಜಿಜ್ಞಾಸುಗಳ ತೊಡಕು' ಎಂಬ ಪುಸ್ತಕವೊಂದನ್ನು ಬರೆದರು. ಕಾರ್ಯಾಲಯದ 'ಮೂಲಾವಿದ್ಯಾ- ನಿರಾಸ'ವೆಂಬ ಮೊದಲನೆಯ ಸಂಸ್ಕೃತ ಗ್ರಂಥವು ಆಂಗ್ಲವಿದ್ಯಾವಿಶಾರದರಲ್ಲಿಯೂ ಸಂಸ್ಕೃತ ಪಂಡಿತರುಗಳಲ್ಲಿಯೂ ಬಗೆಬಗೆಯ ಪರಿಣಾಮಗಳನ್ನು ಮಾಡಿ ಸದ್ಯಕ್ಕೆ ಅಲ್ಲಿಗೆ ನಿಂತಿತು. ಈ ವಿಷಯದಲ್ಲಿ ಅಲ್ಲಿ ಇಲ್ಲಿ ಹಿಂದುಗಡೆ ಏನಾದರೂ ಮಾತಾಡಿಕೊಳ್ಳುವವರು ಈಗಲೂ ಇಲ್ಲದೆ ಇಲ್ಲ ; ಆದರೆ ಈ ವಿಷಯದ ಪ್ರತ್ಯಕ್ಷ ಚರ್ಚೆಯಾಗಲೀ ಗ್ರಂಥರಚನೆಯಾಗಲೀ ಆದಂತೆ ತಿಳಿದು ಬಂದಿರುವದಿಲ್ಲ.

## ಹೊರಗಿನಿಂದ ಬರುತ್ತಿದ್ದವರು :

ಬಿ.ಎಚ್.ಮುನಿಸ್ವಾಮಿರಾಯರು ಹೊಳೆನರಸೀಪುರಕ್ಕೆ ಆಗಾಗ್ಗೆ ಬರುತ್ತಲೇ ಇದ್ದರು. ಚಿಕ್ಕಲಿಂಗಣ್ಣನವರ ಚರಿತ್ರೆಯನ್ನು ತೋರಿಸುವದಕ್ಕೆಂದು ಒಂದೆರಡು ಸಲ ಬಂದಿದ್ದರು. 1941ನೆಯ ಜೂನ್ ತಿಂಗಳಿನಲ್ಲಿ ಬಂದವರು ಮೂರುವರೆ ತಿಂಗಳು ಇದ್ದು ಸುಬ್ಬರಾಯ ಅವಧಾನಿಗಳಿಗೆ ಆಗುತ್ತಿದ್ದ ಮೂಲಾವಿದ್ಯಾನಿರಾಸದ ಶ್ರವಣಕ್ಕೆ ಬರುತ್ತಿದ್ದರು ; ಮತ್ತೊಂದು ಸಲ 1944ನೇ ಮೇ ತಿಂಗಳಲ್ಲಿ ಬಂದವರು ನೈಷ್ಕರ್ಮ್ಯಸಿದ್ಧಿಯ ಪಾಠಕ್ಕೆ ಉಪಸ್ಥಿತರಾಗಿದ್ದರು. ಈಚೆಗೆ ಬೆಂಗಳೂರಲ್ಲಿದ್ದುಕೊಂಡು ಜನರಿಗೆ ಭಾಗವತಾದಿಗಳನ್ನು ಶ್ರವಣ ಮಾಡಿಸುತ್ತಿದ್ದಾರೆ. ನಂಜಪ್ಪಭಾಗವತರು ಆಗಾಗ್ಗೆ ಬಂದು ಹೋಗುತ್ತಲೇ ಇದ್ದರು ; 1942ರಲ್ಲಿ ಸಂಸಾರ ಸಮೇತರಾಗಿ ಸೂತ್ರಭಾಷ್ಯಪಾಠಕ್ಕೆ ಒಂದು ವರ್ಷವಿದ್ದರು. ಸ್ಯಾನಿಟರಿ ಇನಸ್ಪೆಕ್ಟರು ಅನಂತಯ್ಯರ್‌ರವರು ಕೆಲಸದಿಂದ ನಿವೃತ್ತರಾದ ಬಳಿಕ ಇಲ್ಲಿಗೆ ಬಂದು, ಸೂತ್ರಭಾಷ್ಯ ಶ್ರವಣ ಮಾಡುತ್ತಿದ್ದು ಕೋಲಾರಕ್ಕೆ ಹೊರಟುಹೋದರು. ವಿಠ್ಠಲಶಾಸ್ತ್ರಿಗಳು ಆಗಾಗ್ಗೆ ಬರುತ್ತಲೇ ಇದ್ದರು.

## ಪಾಠಪ್ರವಚನಗಳು :

ಕಾರ್ಯಾಲಯದಲ್ಲಿ ಪ್ರಾರಂಭವಾಗಿದ್ದ ಪ್ರಸ್ಥಾನತ್ರಯ ಭಾಷ್ಯಪ್ರವಚನವು ಒಂದನೆಯ ಸಲಕ್ಕೆ ಮುಗಿದು 1943ನೆಯ ನವಂಬರ್ 21, 22 ನೇ ದಿನಾಂಕಗಳಲ್ಲಿ ಮಂಗಳದ ಉಪನ್ಯಾಸಗಳಾದವು. ಉಪನಿಷತ್ಪ್ರಸ್ಥಾನ, ಗೀತಾಪ್ರಸ್ಥಾನ, ಬ್ರಹ್ಮಸೂತ್ರಪ್ರಸ್ಥಾನ - ಈ ಮೂರು ಉಪನ್ಯಾಸಗಳನ್ನು ಮಾಡಲಾಯಿತು. ಅದೇ ದಿನ ವಿಠ್ಠಲಶಾಸ್ತ್ರಿಗಳವರು ಚತುರ್ಭುಜ ಪಟ್ಟಾಭಿರಾಮ ದೇವಸ್ಥಾನದಲ್ಲಿ 'ಕರ್ಮ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಅಲ್ಲಿಂದ ಮುಂದಕ್ಕೆ ದ್ವಿತೀಯವ್ಯಾಪ್ತಿಯ ಪಾಠಗಳೂ, ಮಧ್ಯಾಹ್ನಕ್ಕೆ ವೇದಾಂತವಿಚಾರದ ಇತಿಹಾಸವೂ, ರತ್ನಪ್ರಭಾಟೀಕೆಯ ಚಿಂತನೆಯೂ ನಡೆಯುತ್ತಿದ್ದವು.

## ಉಪನ್ಯಾಸಗಳು ( ಅನಿಯತಕಾಲಗಳಲ್ಲಾದ ಉಪನ್ಯಾಸಗಳು) :

ಮೈಸೂರಿನ ಪಂಡಿತ ಮಂಡಲದ ಆಶ್ರಯದಲ್ಲಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಮಾಡಿದ ಉಪನ್ಯಾಸಗಳನ್ನು ಆಗಲೇ ತಿಳಿಸಿದ್ದಾಗಿದೆ. ಆ ಉಪನ್ಯಾಸಗಳಲ್ಲಿ ಶಂಕರರಿಂದೀಚಿನ ಅದ್ವೈತಪ್ರಭೇದಗಳನ್ನೇ ಅಲ್ಲದೆ ದ್ವೈತ, ವಿಶಿಷ್ಟಾದ್ವೈತಗಳ ಅವತಾರದ ಕ್ರಮವನ್ನು ವಿಶದಗೊಳಿಸಿ ಈಗ್ಗೆ ವೇದಾಂತದಿಂದ ಜನಜೀವನಕ್ಕೆ ಉಪಯೋಗವಾಗಬೇಕಾದರೆ ಪಂಡಿತರು ಕೈಕೊಳ್ಳಬೇಕಾಗಿರುವ ಕಾರ್ಯಕ್ರಮವನ್ನು ವಿವರಿಸಲಾಯಿತು. ಮತತ್ರಯಕ್ಕೂ ಸೇರಿದ ಬ್ರಾಹ್ಮಣ ಬ್ರಾಹ್ಮಣೇತರ ಮಹಾಶಯರುಗಳು ಹೆಚ್ಚಿನ ಸಂಖ್ಯೆಯಿಂದ ಉತ್ಸಾಹಪೂರ್ವಕವಾಗಿ ಬಂದು ಉಪನ್ಯಾಸಗಳನ್ನು ಕೇಳಿದರು. ಕೃಷ್ಣರಾಜನಗರದಲ್ಲಿ 1940ನೇ ಏಪ್ರಿಲ್ 9 ರಿಂದ 11ರವರೆಗೆ (ಎಡತೊರೆ ಕಾವೇರಮ್ಮನವರು ಶ್ರೀರಾಮನಾಮ ಕೋಟಿಜಪದ ಉದ್ಯಾಪನೆ ಮಾಡಿದ ಸಂದರ್ಭದಲ್ಲಿ) 'ಭಗವನ್ನಾಮಸ್ಮರಣೆ', 'ಸುಖದಸಾಧನೆ', 'ಕರ್ಮವೀರ್ಯವತ್ತಾಗುವ ಬಗೆ' - ಎಂಬ ವಿಷಯಗಳನ್ನು ಕುರಿತು ಉಪನ್ಯಾಸವಾಯಿತು. ಈ ಉಪನ್ಯಾಸಕಾಲಕ್ಕೆ ನಡೆದ ಒಂದು ವಿಶೇಷ ವೇನೆಂದರೆ ಗದಗಿನ ಹತ್ತಿರವಿರುವ ಹುಲ್ಲುಕೋಟೆಯ ಕೃಷ್ಣಪ್ಪಆರಪ್ಪಗೌಡರ ಎಂಬ ಒಕ್ಕಲುಜಾತಿಯ ಒಬ್ಬ ಮಹಾಶಯನು ಮೈಸೂರು ಶಂಕರ ಸಪ್ತಾಹದಲ್ಲಿ ಮಾಡಿದ ಒಂದಾನೊಂದು ಉಪನ್ಯಾಸದಲ್ಲಿ ಅವಸ್ಥೆಯೊಳಗೆ ಕಾಲವಿರುವದೇ ಹೊರತು ಕಾಲದಲ್ಲಿ ಅವಸ್ಥೆಯಿರುವದಿಲ್ಲ ಎಂಬ ವಾಕ್ಯವಿದ್ದದ್ದನ್ನು ಕಂಡು ಎಲಎಲಾ ! ಇದರಿಂದ ಕಾಲಕ್ಕೆ ಕಿಮ್ಮತ್ತೇ ಇಲ್ಲದಂತೆ ಆಯಿತಲ್ಲ ! ಎಂದುಕೊಂಡು ಈ ಅನುಭವವಾಕ್ಯವನ್ನು ನುಡಿದವರನ್ನು ನಾನು ಕಣ್ಣಾರೆ ನೋಡಬೇಕೆಂದು ಬಂದು

ಎಡತೊರೆಯನ್ನು ಸೇರಿದನು. ಅಲ್ಲಿ ನಡೆದ ಉಪನ್ಯಾಸಗಳ ವಿಷಯವಾಗಿ ಆತನು ಮಾಡುತ್ತಿದ್ದ ಪ್ರಶ್ನೆಗಳು ಅಮೋಘವಾಗಿದ್ದವು. ಮುಂದೆ ಅವನು ಒಂದೆರಡು ಸಪ್ತಾಹಗಳಿಗೂ ಬಂದು ಕಾರ್ಯಾಲಯದ ಗ್ರಂಥಪ್ರಕಟಣೆಗೆ ಪೋಷಕದ್ರವ್ಯವನ್ನು ಕೊಟ್ಟನು. 1941ನೆಯ ಅಕ್ಟೋಬರಿನಲ್ಲಿ ನಂಜನಗೂಡಿನ ಶ್ರೀಕಂಠೇಶ್ವರಾದ್ವೈತ-ಸಭೆಯಲ್ಲಿ ಅದ್ವೈತವಿಚಾರದ ಅವಶ್ಯಕತೆ, ಅದ್ವೈತರೀತಿಯಿಂದ ಉಪನಿಷತ್ತುಗಳಿಗೆ ಅರ್ಥಮಾಡುವ ಕ್ರಮ (ಅ.ಪ್ರ 13-6) ಎಂಬ ವಿಷಯಗಳನ್ನು ಕುರಿತು ಉಪನ್ಯಾಸಗಳಾದವು. ಅದೇ ವರ್ಷದ ನವಂಬರ್ ತಿಂಗಳಿನಲ್ಲಿ ಪಂಡಿತಸಭೆಯ ಆಶ್ರಯದಲ್ಲಿ ಅಜಾತಿವಾದವೂ ಶಂಕರಾಚಾರ್ಯರೂ, ವೇದಾಂತ ಪಾಠನಕ್ರಮ ಎಂಬ ವಿಷಯದಲ್ಲಿಯೂ ಉಪನ್ಯಾಸವಾದವು. 1942ನೇ ಜನವರಿ, ಫೆಬ್ರವರಿಗಳಲ್ಲಿ ರುದ್ರಪಟ್ಟಣದ ಕರ್ಣಾಟಕ ಸಂಘದಲ್ಲಿ 'ಸ್ವಾಮಿವಿವೇಕಾನಂದರ ಜೀವನಚರಿತ್ರೆಯು, ಉಪದೇಶಗಳು' ಬೆಂಗಳೂರಿನ ಜುಮ್ಮಾಮಸೀದಿ ರೋಡಿನಲ್ಲಿರುವ ದೇವಾಂಗ ಹಾಲಿನಲ್ಲಿ 'ಶಂಕರಸಿದ್ಧಾಂತದ ತಿರುಳು' ಎಂಬ ಹೆಸರಿನಿಂದ ಮೂರುದಿನಗಳವರೆಗೆ ಉಪನ್ಯಾಸಗಳು; ಆ ಉಪನ್ಯಾಸಗಳಲ್ಲಿ 'ಅಧ್ಯಾಸವೆಂಬ ಅಡಿಗಟ್ಟು, ಅವಸ್ಥಾತ್ರಯ ಪ್ರಕ್ರಿಯೆಯ ಹಿರಿಮೆ, ಉಪಾಸನಾ ಕರ್ಮಗಳಿಗೆ ಸಿದ್ಧಾಂತದಲ್ಲಿರುವ ಸ್ಥಾನ – ಇವುಗಳನ್ನು ವಿವರಿಸಲಾಯಿತು. ಮೈಸೂರು ಶ್ರೀರಾಮಕೃಷ್ಣಾಶ್ರಮದಲ್ಲಿ 'ಶಬ್ದಪ್ರಾಮಾಣ್ಯ'ದ ವಿಷಯದಲ್ಲಿ ಒಂದು ಪ್ರವಚನವನ್ನು ಮಾಡಲಾಯಿತು. ಆ ವರ್ಷದ ಮೇ ತಿಂಗಳು 28ನೇ ತಾರೀಖಿನಿಂದ ಅನಧ್ಯಯನ ದಿನಗಳಲ್ಲಿ ಶ್ರೀ ರಾಮಕೃಷ್ಣಾಶ್ರಮದವರು ಏರ್ಪಡಿಸಿಕೊಂಡಿರುವ ತತ್ತ್ವವಿಚಾರಸಂಘ (**Study group**)ದಲ್ಲಿ ಗೌಡಪಾದಕಾರಿಕೆಯನ್ನು ಕುರಿತು ಉಪನ್ಯಾಸಗಳನ್ನು ಮಾಡಿ ಮುಗಿಸಲಾಯಿತು. ಅಕ್ಟೋಬರಿನಲ್ಲಿ ಅಲ್ಲಿಯ ಅಧ್ಯಾತ್ಮವಿಚಾರ ಸಂಘದಲ್ಲಿ 'ಆತ್ಮಜ್ಞಾನ'ದ ವಿಷಯವಾಗಿ ಉಪನ್ಯಾಸವಾಯಿತು. ನವೆಂಬರಿನಲ್ಲಿ ಮೈಸೂರಿನಲ್ಲಿ ವಿಠ್ಠಲಶಾಸ್ತ್ರಿಗಳು ನಡೆಯಿಸುತ್ತಿದ್ದ ಬೃಹದಾರಣ್ಯಕ ಭಾಷ್ಯಪಾಠವು ಮುಗಿದು ಮಂಗಳವಾದಾಗ ಉಪನಿಷದ್ಭಾಷ್ಯವನ್ನು ಕುರಿತು ಉಪನ್ಯಾಸ 1943ನೇ ಫೆಬ್ರವರಿಯಲ್ಲಿ ಸಕಲೇಶಪುರದ ಕರ್ಣಾಟಕಸಂಘದ ಆಶ್ರಯದಲ್ಲಿ ವಿಠ್ಠಲಶಾಸ್ತ್ರಿಗಳಿಂದ 'ಗೀತೆಯಮಹತ್ತ್ವ', 'ಸುಖಸಾಧನ', ಸಂಪಾದಕರಿಂದ 'ಹಿಂದೂಧರ್ಮದ ಮೂಲತತ್ತ್ವಗಳು' ಹೀಗೆ ಉಪನ್ಯಾಸಗಳು. ವಿಠ್ಠಲಶಾಸ್ತ್ರಿಗಳು ಹೊಳೆನರಸೀಪುರದ ಟೌನ್ ಹಾಲಿನಲ್ಲಿ 'ಭಗವನ್ನಾಮದ ಹಿರಿಮೆ' ; ಸಂಪಾದಕರು ಮೈಸೂರು ಶಂಕರಜಯಂತಿಯ ಸಭೆಯ ಆಶ್ರಯದಲ್ಲಿ 'ಗೀತಾಶಾಸ್ತ್ರದತಿರುಳು', ಪಂಡಿತಮಂಡಲಿಯ ಆಶ್ರಯದಲ್ಲಿ 'ಭಗವದ್ಗೀತೆಯೂ ಜಗತ್ಕಲ್ಯಾಣವೂ'. ತುಮಕೂರಿನ ಸಪ್ತಾಹವಾದಮೇಲೆ ಚಿಕ್ಕಮಗಳೂರಿನಲ್ಲಿ ಕಾಫಿಪ್ಲಾಂಟರ್

ಮಂಜುನಾಥಯ್ಯನವರ ಮನೆಯಲ್ಲಿ 'ಪರಮಾರ್ಥ' ಎಂಬ ವಿಷಯದಲ್ಲಿ ಉಪನ್ಯಾಸ ಆಯಿತು. ಆ ತಿಂಗಳಿನಲ್ಲಿಯೇ ಸಂಸ್ಕೃತ ಕಾಲೇಜ್ ಸಾಹಿತ್ಯ ಮತ್ತು ವೇದಾಂತ ಪ್ರೊಫೆಸರ್ ಆಸ್ಥಾನ ವಿದ್ವಾನ್ ಶ್ರೀ ಗೋಮಠಂ ತಿರುನಾರಾಯಣ ಅಯ್ಯಂಗಾರ್ಯರು ಹೊಳೆನರಸೀಪುರದ ಟೌನ್ ಹಾಲಿನಲ್ಲಿ ಕಾರ್ಯಾಲಯದ ಆಶ್ರಯದಲ್ಲಿ 'ಧರ್ಮವೂ ಭಾಷೆಯೂ' ಎಂಬ ಉಪನ್ಯಾಸವನ್ನು ಮಾಡಿದರು. ಆಗಸ್ಟ್ ತಿಂಗಳಲ್ಲಿ ದಾವಣಗೆರೆಯ ಡಿ.ಇ.ಎ. ಸ್ಕೂಲಿನಲ್ಲಿ ಶ್ರೀಶಂಕರಸೇವಾಸಂಘದ ಆಶ್ರಯದಲ್ಲಿ 'ವೇದಾಂತದ ಪ್ರಯೋಜನ', 'ಸಿದ್ಧಾಂತತ್ರಯ', ವೀರಶೈವಾಶ್ರಮ-ದಲ್ಲಿ 'ವೇದಾಂತದ ರಹಸ್ಯ', ಮೈಸೂರಿನಲ್ಲಿ ವಿಠ್ಠಲಶಾಸ್ತ್ರಿಗಳ ಮನೆಯಲ್ಲಿ 'ಸದಸದ್ವಿವೇಕ', ಶಿವಮೊಗ್ಗೆಯಲ್ಲಿ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ 'ಅಧ್ಯಾತ್ಮ ವಿಚಾರ', ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ 'ಧಾರ್ಮಿಕಜೀವನ', ಮತ್ತೂರಿನಲ್ಲಿ 'ನಾನು ಬ್ರಹ್ಮ', 'ಅವಸ್ಥಾತ್ರಯ', 'ಭಕ್ತಿಜ್ಞಾನಗಳ ಸಂಬಂಧ' ಎಂಬ ವಿಷಯಗಳಲ್ಲಿ ಉಪನ್ಯಾಸ.

## ನಿಯತಕಾಲಗಳಲ್ಲಿ:

ಬ್ರಹ್ಮಚೈತನ್ಯರ ಆರಾಧನೆ, ಗೀತಾಜಯಂತಿ, ಮಹಾತ್ಮರುಗಳ ಜಯಂತಿ ಅಥವಾ ಪುಣ್ಯದಿನಗಳು, ಹಬ್ಬಹರಿದಿನಗಳು, ಉಪಾಕರ್ಮ – ಮುಂತಾದವುಗಳ ನಿಮಿತ್ತದಿಂದ ತತ್ತತ್ಕಾಲಕ್ಕೆ ಕಾರ್ಯಲಯವಿದ್ದ ಸ್ಥಳದಲ್ಲಿ, ಟೌನ್‌ಹಾಲಿನಲ್ಲಿ ಆ ದಿನ ಮನಃಸಂಸ್ಕಾರ ಎಂಬ ಉಪನ್ಯಾಸ, ಹೀಗೆ ಉಪನ್ಯಾಸಗಳಾಗುವದರ ಜೊತೆಗೆ 1943ನೇ ಸೆಪ್ಟಂಬರ್ 18 ರಿಂದ ನಿಯತಕಾಲಗಳಲ್ಲಿ ಚತುರ್ಭುಜ ಪಟ್ಟಾಭಿರಾಮ ದೇವಸ್ಥಾನದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಮೊದಮೊದಲು ಸಾಮಾನ್ಯವಾಗಿ ಹದಿನೈದು ದಿನಗಳಿಗಿಂತ ಹೆಚ್ಚಿನ ವ್ಯವಧಾನವಿಲ್ಲದೆ ಈ ಉಪನ್ಯಾಸಗಳಾಗುತ್ತಿದ್ದವು. ಆಮೇಲೆ ಅವು ಪ್ರತಿ ವಾರವೂ ಆದವು. 'ಕಾಮದ ಕವಲುಗಳು', 'ಮನಸ್ಸಿನಿಂದ ಹೆಚ್ಚಿನ ಲಾಭವನ್ನು ಪಡೆಯುವ ಉಪಾಯ (ಅ. ಪ್ರ)' 'ಕರ್ಮಯೋಗ', 'ಸ್ವಧರ್ಮ', 'ಗುಣತ್ರಯ', 'ಸಾತ್ವಿಕಧರ್ಮ', 'ಸಮತ್ವ', 'ಕರ್ಮವನ್ನು ಭಗವದರ್ಪಣ ಮಾಡುವದು', 'ಆತ್ಮಪರೀಕ್ಷೆ', 'ಕರ್ಮವೂ ಕರ್ಮಯೋಗವೂ', 'ಶ್ರದ್ಧೆ', 'ಧ್ಯಾನಯೋಗದಮೆಟ್ಟಿಲುಗಳು', 'ಕರ್ಮ-ಯೋಗವೂ ಧ್ಯಾನಯೋಗವೂ', 'ಸಾಕಾರನಿರಾಕಾರಧ್ಯಾನಗಳು', 'ಭಗವದರ್ಚನೆ', 'ಧ್ಯಾನವಿಘ್ನಗಳೂ ಅವುಗಳ ಪರಿಹಾರವೂ', 'ಭಗವನ್ಮಹಿಮೆಯ ಚಿಂತನೆ', 'ಕರ್ಮಯೋಗದಲ್ಲಿ ಭಕ್ತಿಯ ಸ್ಥಾನ', 'ಭಕ್ತಿಯೋಗದ ಮಾರ್ಗದ ಚಿಹ್ನೆಗಳು', 'ಗೌಣಭಕ್ತಿಯೂ ಜ್ಞಾನವೂ', 'ಭಾಗವತಧರ್ಮ', 'ಗುರುಭಕ್ತಿ ಆತ್ಮಜ್ಞಾನಸಾಧನ',

'ಪೂರ್ಣಾತ್ಮಜ್ಞಾನ'. ಪತ್ರಿಕೆಯ ಹದಿನೈದನೆಯ ಸಂಪುಟವಾದಮೇಲೆ ಎರಡು ವರ್ಷಗಳು ಪತ್ರಿಕೆ ನಿಂತದ್ದರಿಂದ ಮುಂದಕ್ಕಾದ ಉಪನ್ಯಾಸಗಳ ವಿವರ ಸಿಕ್ಕಲಿಲ್ಲ.

## ಕೃಷ್ಣಸ್ವಾಮಿ ಅಯ್ಯರವರ ಸಹಾಯ ತಪ್ಪಿದ್ದು:

ಹೊಳೆನರಸೀಪುರಕ್ಕೆ ಬಂದ ಮೇಲೆ ಕಾರ್ಯಾಲಯದಲ್ಲಿ ಸಹಾಯಭೂತಿ-ಯುಳ್ಳ ವಿಭೂತಿಪುರುಷರುಗಳು ಒಬ್ಬೊಬ್ಬರಾಗಿ ಕಣ್ಮರೆಯಾದರು. ಚಿದಂಬರಯ್ಯ-ನವರು, ಚಿಕ್ಕಲಿಂಗಣ್ಣನವರು - ಇವರುಗಳು ದೇಹಬಿಟ್ಟು ಹೋದದ್ದನ್ನು ಆಗಲೇ ತಿಳಿಸಿರುತ್ತೇನೆ. ಆದರೆ ನನ್ನ ಜೀವನಕ್ಕೆ ಉಸಿರಾಗಿಬಿಟ್ಟಿರುವ ವೇದಾಂತದ ಅಭಿರುಚಿಯನ್ನು ಬೆಳೆಯಿಸಿ ಕ್ರಮವಾದ ದಿಕ್ಕಿನಲ್ಲಿ ಹಬ್ಬಿಸುವದಕ್ಕೆ ಮುಖ್ಯಕಾರಣರಾದ ಕೃ.ಸ್ವಾ. ಅಯ್ಯರವರ ಅಗಲುವಿಕೆಯು **1943**ನೇ ಫೆಬ್ರವರಿ ಏಳನೇಯ ತಾರೀಖಿನಲ್ಲಿ ಅನಿವಾರ್ಯವಾಗಿ ಬಂದೊದಗಿತು.

ಹೊಳೆನರಸೀಪುರಕ್ಕೆ ನಾನು ಬಂದ ಮೇಲೂ ಅವರು ನನ್ನನ್ನು ಮರೆತಿರಲಿಲ್ಲ. ಅವರಿಗೆ ಪ್ರಾರಬ್ಧಕರ್ಮದ ಯೋಗದಿಂದ ಪಾರ್ಶ್ವವಾಯು ಬಂದ ಮೇಲೆ ಸಂಕೇತ ನಾಮಗಳು ಬಲುಬೇಗನೆ ಮರೆತು ಹೋಗುತ್ತಿದ್ದವು. ಆದರೆ ನನ್ನ ಹೆಸರನ್ನು ಹೇಳಿದರೆ ಸಾಕು, ಕೂಡಲೆ ಸಂತೋಷದಿಂದ ನನ್ನ ಅಭಿಪ್ರಾಯಗಳನ್ನು ಕೇಳಿ ಹರ್ಷಪಡುತ್ತಿದ್ದರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಸಂಸ್ಕೃತ, ತಮಿಳು, ತೆಲುಗು, ಇಂಗ್ಲೀಷು ಇವುಗಳಲ್ಲಿ ಉತ್ತರೋತ್ತರವಾಗಿ ಹೆಚ್ಚಿನ ಪ್ರಾಮಾಣ್ಯವಿತ್ತು. ಅವರು ಪಂಡಿತರೊಡನೆ ಸಂಭಾಷಣೆ ಮಾಡುತ್ತಿಲ್ಲವೆಂದ ದಿನವೇ ಅಪೂರ್ವ ಜ್ಯೋತಿಷ್ಯ, ಸಾಮುದ್ರಿಕ, ಆಯುರ್ವೇದ, ವೇದಾಧ್ಯಯನ, ವ್ಯಾಕರಣಾಲಂಕಾರ - ಮುಂತಾದವುಗಳಲ್ಲಿ ನಿಪುಣರಾದವರೊಡನೆ ಸಂಭಾಷಣೆ ಮಾಡುವದು, ಅವರಿಗೆ ಪ್ರೋತ್ಸಾಹವನ್ನು ಕೊಡುವದು – ಇವುಗಳಲ್ಲಿ ಅವರಿಗೆ ಪರಿಣತೆ, ದೃಶ್ಯ, ಶ್ರಾವ್ಯ ಕಾವ್ಯಗಳೆರಡರಲ್ಲಿಯೂ ಅವರು ಲೇಖನಿಯನ್ನಾಡಿಸಿದವರು. ಅವರು ಸಂಗೀತಕ್ಕೆ ತವರುಮನೆ ; ಪಿಟೀಲು ಕೃಷ್ಣಸ್ವಾಮಿ ಅಯ್ಯರಂದೇ ಅವರನ್ನು ಜನರು ಕರೆಯುತಿದ್ದರು. ಅವರ ಕುಟುಂಬದವರೆಲ್ಲರೂ ಗಂಧರ್ವಾಂಶದವರು. ವೀಣೆ, ಕೊಳಲು, ಮೃದಂಗ - ಮುಂತಾದ ಚಿತ್ತಾಕರ್ಷಕ ಗಾನದ ಇಂಪು ಅವರ ಮನೆಯಲ್ಲಿ ತುಂಬಿರುತ್ತಿತ್ತು. ತತ್ತ್ವಶಾಸ್ತ್ರವೆಂದರೆ ಅವರಿಗೆ ಅಚ್ಚುಮೆಚ್ಚು. ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಚಿಕ್ಕವಯಸ್ಸಿನಿಂದಲೂ ಅಭ್ಯಾಸಮಾಡುತ್ತಿದ್ದರಂತೆ. ಡಾಯ್ಸನ್ ಎಂಬ ಪಾಶ್ಚಾತ್ಯ ವಿಮರ್ಶಕರು ಬರೆದಿರುವ **Elements of Metaphysics** (ಆಧಿಭೌತಿಕ ವಿಚಾರಗಳ ಮೂಲತತ್ತ್ವಗಳು) ಎಂಬ ಗ್ರಂಥವನ್ನು ಕುರಿತು ಅವರು

ಬರೆದಿದ್ದ **Critical Reflection** ವಿಮರ್ಶಾತ್ಮಕ ಮಂತವ್ಯಗಳು (ವಿಚಾರಣೀಯಗಳು) ಎಂಬ ಗ್ರಂಥವನ್ನು ಆ ಪಾಶ್ಚಾತ್ಯಗ್ರಂಥಕರ್ತನು ಸ್ವತ: ಓದಿ ಮೆಚ್ಚಿಕೆಯನ್ನು ಸೂಚಿಸಿದ್ದನು. ವೇದಾಂತಶಾಸ್ತ್ರವೆಂಬುದಂತೂ ಅವರ ಹೃದಯವು. ಅವರು ತಮಗೆ ಆಗಾಗ್ಗೆ ಹೊಳೆದ ವೇದಾಂತಭಾವನೆಗಳನ್ನು ಗ್ರಂಥಗಳಲ್ಲಿಯೂ ದಿನಚರಿಯ ಪುಸ್ತಕಗಳಲ್ಲಿಯೂ ಬರೆದಿಟ್ಟಿದ್ದರು. ಆ ಲೇಖನರಾಶಿ ಏನಾಯಿತೆಂಬುದು ಈವರೆಗೆ ಪತ್ತೆಯಿಲ್ಲ. ಸ್ವಪ್ನದಲ್ಲಿ ಅವರಿಗೆ ಶಂಕರಾಚಾರ್ಯರೇ ತತ್ತ್ವೋಪದೇಶವನ್ನು ಮಾಡಿದರೆಂದು ಅವರಿಗೆ ನಂಬಿಕೆಯಿತ್ತು. ಅವರು ಶಂಕರಶಾಸ್ತ್ರಿಗಳು, ಅನಂತಪ್ಪ ಮಹಾರಾಜರಲ್ಲಿಯೂ ಇಟ್ಟಿದ್ದ ಗೌರವವನ್ನು ಆಗಲೆ ತಿಳಿಸಿರುತ್ತೇನೆ. ಮೂಲಾವಿದ್ಯಾನಿರಾಸಕ್ಕೆ ಹೇಗೆ ಪ್ರೇರಕರಾದರೆಂಬುದನ್ನು, ಪತ್ರಿಕೆಗೆ ಅವರ ಲೇಖನಗಳು ಕೊಡುತ್ತಿದ್ದ ಒತ್ತಾಸೆಯನ್ನು ತಿಳಿಸಿರುತ್ತೇನೆ. ಅವರ ಮತ್ತು ನನ್ನ ಚರ್ಚೆಯಲ್ಲಿ ಎಷ್ಟೋ ವಿಷಯಗಳು ಅವರ ಮುಖದಿಂದ ನನಗೆ ಮನವರಿಕೆಯಾದ ಬಳಿಕವೇ ಅವು ಭಾಷ್ಯದಲ್ಲಿಯೂ ಇವೆಯೆಂಬುದು ನನಗೆ ತಿಳಿಯಬರುತ್ತಿತ್ತು. ಸ್ವತಂತ್ರವಾಗಿ ವಿಚಾರಮಾಡುತ್ತಿದ್ದ ಅವರ ವಾದಸರಣಿಯಲ್ಲಿ ಕೆಲವು ಶಾಸ್ತ್ರೀಯವಲ್ಲವೆಂದು ನನಗೆ ತೋರುತ್ತಿದ್ದಿತ್ತಾದರೂ ಸ್ವಾನುಭವದಿಂದಲೇ ಭಾಷ್ಯದ ಹಲವು ವಿಷಯಗಳನ್ನು ಹೊರಗೆ ಹಾಕುತ್ತಿದ್ದ ಅವರನ್ನು ನಾನು ಋಷಿಸದೃಶರೆಂದು ಎಣಿಸಿದ್ದದ್ದರಲ್ಲಿ ಆಶ್ಚರ್ಯವೇನು ?

ಅವರು ಬರೆದಿರುವ ಲೇಖನಗಳಲ್ಲಿ ಹಲವು ವೇದಾಂತಕೇಸರಿಯಲ್ಲಿ[1] ಪ್ರಕಟವಾದವು. ಶ್ರೀರಾಮಕೃಷ್ಣಪರಮಹಂಸರವರ ಶತಮಾನೋತ್ಸವದ ಸ್ಮಾರಕವಾಗಿ ಪ್ರಕಾಶವಾಗಿರುವ **The Cultural Heritage of India** (ಭರತಖಂಡದ ಸಂಸ್ಕೃತಿಯಲ್ಲಿ ಪಿತ್ರಾರ್ಜಿತ) ಎಂಬ ಮಹಾನಿಬಂಧಮಾಲೆಯಲ್ಲಿ **The Philosophy of Advaita or Nondualism** ( ಅದ್ವೈತ ಸಿದ್ಧಾಂತ) ಎಂಬ ಹೆಸರಿನ ಒಂದು ಉತ್ತಮ ನಿಬಂಧವಿರುತ್ತದೆ. **The Drumbeat of Angles** (ದೇವತೆಗಳ ಡಂಗುರ) **Umas Mirror** (ಉಮಾದರ್ಶ) ಎಂಬ ಎರಡು ಇಂಗ್ಲೀಷ್ ಕಾವ್ಯಗಳು ಅಚ್ಚಾಗಿವೆ. ಡಾ॥ಎಮ್. ಶ್ರೀನಿವಾಸರಾಯರು ಅವರ ಸಹಾಯದಿಂದ ಇಂಗ್ಲೀಷಿನಲ್ಲಿ ಪ್ರಕಟಿಸಿರುವ ಪಂಚದಶಿಯಲ್ಲಿರುವ ಅಮೋಘವಾದ ಟಿಪ್ಪಣಿಗಳು ಅವರ ವಿಚಾರ ಪ್ರೌಢಿಮೆಯನ್ನು ವ್ಯಕ್ತಗೊಳಿಸುತ್ತವೆ. ಎಲ್ಲಕ್ಕೂ ಮೇಲಾಗಿ **Vedanta or The Science of Reality** (ವೇದಾಂತವೆಂಬ

---

1. ವೇದಾಂತಕೇಸರಿ 1932, 33, 34

ಪರಮಾರ್ಥ ವಿಜ್ಞಾನ ಶಾಸ್ತ್ರವು) ಎಂಬ ಗ್ರಂಥರತ್ನವಂತೂ ವೇದಾಂತ-ಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘ್ಯವಾದ ವಜ್ರದಂತೆ ಇರುತ್ತದೆ, ಶಾಂಕರ ಸಿದ್ಧಾಂತವನ್ನು ಭದ್ರವಾದ ಯುಕ್ತ್ಯನುಭವಗಳ ತಳಗಟ್ಟಿನ ಮೇಲೆ ನಿಲ್ಲಿಸುವದಕ್ಕೆ ಶ್ರೀಕೃಷ್ಣಸ್ವಾಮಿ ಅಯ್ಯರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆಯಿಂದ ಕೊಂಡಾಡತಕ್ಕದ್ದಾಗಿರುವದೆಂಬುದು ಅದೊಂದು ಗ್ರಂಥದಿಂದಲೇ ಸ್ಪಷ್ಟವಾಗಿರುತ್ತದೆ. ಅಯ್ಯರವರು ಈಲೋಕವನ್ನು ಬಿಟ್ಟು ಸ್ವಸ್ಥಾನವನ್ನು ಸೇರಿದ ಕಾಲಕ್ಕೆ ನಾನು ಬೆಂಗಳೂರಲ್ಲಿ ಇರಲಿಲ್ಲ. ನಂ.ಭಾಗವತರು ಆಗಾಗ್ಗೆ ಹೋಗಿ ಅವರ ದರ್ಶನ ಸಂಭಾಷಣಾ ಲಾಭಗಳನ್ನು ಪಡೆಯುತ್ತಲೇ ಇದ್ದರು. ನಾನು ಎಲ್ಲಿದ್ದರೂ ಅವರ ಸ್ಮರಣೆಯು ಮಾತ್ರ ಬರುತ್ತಲೇ ಇತ್ತು. ನನ್ನ ಪಾಠಪ್ರವಚನಗಳು, ಉಪನ್ಯಾಸಗಳು, ಸಂಭಾಷಣೆ - ಇವುಗಳಲ್ಲಿ ಅವರ ಹೆಸರಿನ ಪರಾಮರ್ಶವಿಲ್ಲದ ಸಂದರ್ಭಗಳೇ ಅಪರೂಪ. ಅವರು ದೇಹವನ್ನು ಬಿಡುವ ಕೆಲವು ದಿನಗಳ ಮುಂಚಿನಿಂದ ನನಗೆ ಕನಸಿನಲ್ಲಿ ಅವರು ಕಾಣಿಸಿಕೊಳ್ಳುತ್ತಲೇ ಇದ್ದರು ; ಒಂದು ದಿನ ಬೆಳಗಿನ ಜಾವದಲ್ಲಿ ಅವರ ಮನೆಯಲ್ಲಿ ಮಹಾಸಂತರ್ಪಣೆ-ಯಾದಂತೆಯೂ ಎಲ್ಲೆಲ್ಲಿಯೂ ಕುಡಿಬಾಳೆಯಲೆಗಳನ್ನು ಊಟಕ್ಕೆ ಹಾಕಿದ್ದಂತೆಯೂ ಅವರು ಸ್ನಾನಮಾಡಿಕೊಂಡು ಬಂದು ತಮ್ಮ ಪತ್ನಿಯರಿಗೆ 'ಏಳಿ ಬಹಳ ಹೊತ್ತಾಯಿತು' ! ಎಂದು ತಮಿಳಿನಲ್ಲಿ ಹೇಳಿದಂತೆಯೂ ಕನಸಾಯಿತು. ಇದನ್ನು ವೇದಾಂತ ಪ್ರವಚನಕಾಲಕ್ಕೆ ಹೇಳುತ್ತಲೂ ಪಾಠಕ್ಕೆ ಬಂದಿದ್ದವರು 'ನೀವು ಅವರನ್ನು ಹೋಗಿ ನೋಡಿಕೊಂಡು ಬರುವದು ಒಳ್ಳೆಯದೆಂದು' ಸೂಚಿಸಿದರು. ಆದರೆ ಏನೋ ಅಡಚಣೆಯಿಂದ ನಾನು ಕೂಡಲೆ ಹೊರಡಲಿಲ್ಲ ; ಎರಡು ಮೂರು ದಿನಗಳಾಗುವದರೊಳಗೆ ಅವರು ಎಲ್ಲರನ್ನು ಬಿಟ್ಟು ಪರಂಧಾಮಕ್ಕೆ ತೆರಳಿದರೆಂಬ ಸುದ್ದಿಯ ಕಾಗದವು ತಲುಪಿತು. ಕೂಡಲೆ ಬೆಂಗಳೂರಿಗೆ ಹೋಗಿಬಂದೆ. ಬಸವನಗುಡಿಯ ಕೃಷ್ಣರೋಡಿನ ಮನೆಯನ್ನು ಮಾರಿ ಬುಲ್‌ಟೆಂಪಲ್ ರಸ್ತೆಯಲ್ಲಿರುವ ಮನೆಯಲ್ಲಿ 1930 ರಿಂದ 1943ರವರೆಗೂ ವಾಸವಾಗಿದ್ದರು. ಪರಲೋಕಕ್ಕೆ ತೆರಳುವ ಕೆಲವೇ ದಿನಗಳ ಮುಂಚೆ ಇಂಥ ದಿವಸ ನಾನು ಮನೆಯನ್ನು ಬಿಟ್ಟುಕೊಡುವೆನೆಂಬ ವಾಗ್ದಾನವನ್ನು ಮಾಡಿ ಆ ಮನೆಯನ್ನು ಮಾರಿದರಂತೆ. ಆ ದಿನಕ್ಕೆ ಸರಿಯಾಗಿ ಅವರು ಈ ಲೋಕವನ್ನು ಬಿಟ್ಟು ತೆರಳಿದ್ದರು. ಅಯ್ಯರವರು ಈ ಲೋಕವನ್ನು ಬಿಟ್ಟದ್ದು ಚಿತ್ರಭಾನು ಸಂವತ್ಸರದ ಮಾಘ ಶುಕ್ಲ ತೃತೀಯ. ಅಂದಿನಿಂದ ಇಂದಿನವರೆಗೂ ಅವರ ಚರಿತ್ರೆಯನ್ನು (ವಿಶೇಷಾಂಕಗಳನ್ನು)

ಸಂಗ್ರಹಿಸಿರುವದು ನನ್ನಿಂದ ಆಗಿರುವದಿಲ್ಲ. ಅವರ **Science of Reality** (ಪರಮಾರ್ಥಶಾಸ್ತ್ರ) ಗ್ರಂಥವು ನನಗೆ ಎಷ್ಟೋ ಆಧಾರವಾಗಿದೆ. ನಾನು ಶಂಕರಭಾಷ್ಯಗಳ ಆಧಾರದ ಮೇಲೆ ಸ್ವತಂತ್ರವಾಗಿಯೇ ವಿಚಾರ ಮಾಡುವ ಪದ್ಧತಿಯನ್ನಿಟ್ಟುಕೊಂಡಿದ್ದೇನೆ. ಅವರು ಭಾಷ್ಯದಮೇಲೆ ಹೇಳುತ್ತಿದ್ದ ಕೆಲವು ಆಕ್ಷೇಪಗಳು ನನಗೆ ಒಪ್ಪಿಗೆಯಾಗಿಲ್ಲ. ಆದರೆ ಶಂಕರಭಾಷ್ಯವು ಯುಕ್ತ್ಯನುಭವಗಳಿಗೆ ಹೊಂದುಗೆಯಾಗಿದೆಯೆಂಬ ನಿರ್ಣಯವು ಅವರೊಡನೆ ಮಾಡಿದ ಸಂಭಾಷಣೆಯಿಂದಲೂ ಅವರ ಆ ಉತ್ತಮ ಗ್ರಂಥದ ಮತ್ತು ಬೇರೆ ಲೇಖನಗಳ ಪಠನದಿಂದಲೂ ನನ್ನ ಮನಸ್ಸಿಗೆ ಆಯಿತೆಂಬುದು ನಿಶ್ಚಯ. ತಮ್ಮ ಒಂದರೆಡು ಪುಟ್ಟ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದು ಪ್ರಚಾರಪಡಿಸಬೇಕೆಂದು ಅವರು ನನಗೆ ಸೂಚಿಸಿದ್ದರು; ಆ ಕೆಲಸವು ಇನ್ನೂ ನನ್ನಿಂದ ಆಗಿರುವದಿಲ್ಲ. ಅದಕ್ಕೆ ಶಕ್ತಿಯನ್ನೂ ಆಯಸ್ಸನ್ನೂ ಅನುಕೂಲವನ್ನೂ ಪರಮೇಶ್ವರನು ಅನುಗ್ರಹಿಸಬೇಕು. ಅ.ಪ್ರ ಪತ್ರಿಕೆಯಲ್ಲಿ 14ನೆಯ ಸಂಪುಟದಲ್ಲಿರುವ ದಿ॥ ಕೃ.ಸ್ವಾ ಅಯ್ಯರವರು ಎಂಬ ಲೇಖನದಿಂದ ಕೆಲವು ವಾಕ್ಯಗಳನ್ನು ಎತ್ತಿ ಬರೆದಿರುತ್ತೇನೆ. ಅಲ್ಲಿ ಕೊನೆಯಲ್ಲಿ ಬರೆದಿರುವ ಎರಡು ಪದ್ಯಗಳನ್ನು ಇಲ್ಲಿ ವಾಚಕರಿಗೆ ಸಮರ್ಪಿಸಿ ಅವರ ಮಂಗಲ ಪರಾಮರ್ಶವನ್ನು ಉಪಸಂಹರಿಸುವೆನು.

ವಿದ್ಯಾಮರ್ಥಂ ಚ ದಾರಾನ್ ಸುಕೃತಮಪಿ ಗೃಹಂ ಪುತ್ರಪೌತ್ರಾಭಿವೃದ್ಧಿಂ
ಸಂಪಾದ್ಯೈವಂ ಸ್ವಧರ್ಮಾಚರಣಮಥ ವಿಭೋರರ್ಚನಂ ಸಂವಿಧೇಯಮ್ ।

ದಾನಂ ದಾನ್ತಿರ್ದಯೈವಂ ನಿಜಪರಸಮತಾಬುದ್ಧಿರಪ್ಯೇವಮೇವಂ
ಸ್ವಾಚಾರೇಣೈವ ದೇಷ್ಟಾ ಬತ ಕಥಮಿಹ ನೋ ದೃಶ್ಯತಾಮೇತಿ ಕೃಷ್ಣಃ ॥೧॥

ಕಾವ್ಯನಾಟಕಸಂಗೀತತತ್ತ್ವಶಾಸ್ತ್ರಾಬ್ಧಿಚನ್ದ್ರಮಾಃ
ಸಂಸ್ಕೃತದ್ರಾವಿಡಾನ್ಧ್ರಾಙ್ಗ್ಲಭಾಷಾಭೂಷಣಭಾರತೀ ॥೨॥

ನಿತ್ಯಾನನ್ದಪ್ರದಾದ್ವೈತವೇದಾನ್ತಾಬ್ಜವಿಭಾವಸುಃ
ಕೃಷ್ಣಾರ್ಯೋ ವಿಷ್ಣುಪದವೀಂ ಪ್ರಾಪ್ತಃ ಕೃಷ್ಣ ಇವಾಪರಃ ॥೩॥

ಭಾವಾರ್ಥ : 1) ವಿದ್ಯೆಯನ್ನೂ ಅರ್ಥವನ್ನೂ ಹೆಂಡತಿ, ಪುಣ್ಯಕರ್ಮ, ಮನೆ, ಮಕ್ಕಳು, ಮೊಮ್ಮಕ್ಕಳು, ಅಭಿವೃದ್ಧಿ ಇವೆಲ್ಲವನ್ನೂ ಹೀಗೆ ಸಂಪಾದನೆ ಮಾಡಿ ಸ್ವಧರ್ಮಾಚರಣೆಯನ್ನು ಪರಮೇಶ್ವರ ಪೂಜೆಯಾಗಿ ಮಾಡಬೇಕು. ದಾನವೆಂದರೆ ಹೀಗೆ, ದಾಂತಿ ಎಂದರೆ ಹೀಗೆ, ದಯೆಂದರೆ ಹೀಗೆ, ತನ್ನವರಲ್ಲಿಯೂ ಮತ್ತೊಬ್ಬರಲ್ಲಿಯೂ ಸಮತ್ವಬುದ್ಧಿಯನ್ನಿಡುವದು, ಹೀಗೆ ಎಂದೀಪರಿಯಲ್ಲಿ ತನ್ನ

ಆಚಾರದಿಂದಲೇ ಉಪದೇಶಮಾಡುವ ಕೃಷ್ಣನು, ಅಯ್ಯೋ ! ನಮಗೆ ಇಲ್ಲಿ ಹೇಗೆ ದೃಶ್ಯನಾದಾನು ?

2) ಕಾವ್ಯ, ನಾಟಕ, ಸಂಗೀತ, ತತ್ತ್ವಶಾಸ್ತ್ರ- ಎಂಬ ಕಡಲಿಗೆ ಚಂದ್ರನೂ, ಸಂಸ್ಕೃತ, ತಮಿಳು, ತೆಲಗು, ಇಂಗ್ಲಿಷು ಭಾಷೆಗಳೆಂಬ ಅಲಂಕಾರಗಳಿಂದೊಪ್ಪುವ ಸರಸ್ವತಿಯೂ,

3) ನಿತ್ಯಾನಂದವನ್ನು ಕೊಡುವ ಅದ್ವೈತವೇದಾಂತ ಕಮಲವನ್ನರಳಿಸುವ ಸೂರ್ಯನೂ ಆದ ಕೃಷ್ಣಾರ್ಯನು ಮತ್ತೊಬ್ಬ ಕೃಷ್ಣನೋ ಎಂಬಂತೆ ವಿಷ್ಣುಪದವಿಯನ್ನೇರಿದನು.

## ವಿದ್ಯಾಲಯ :

ಅಧ್ಯಾತ್ಮಪ್ರಕಾಶಕಾರ್ಯಾಲಯವು ಅಧ್ಯಾತ್ಮವಿದ್ಯಾ ಪ್ರಚಾರಕ್ಕೆಂದು ಯೋಗ್ಯರಾದ ವಿದ್ವಾಂಸರನ್ನು ಸಜ್ಜುಗೊಳಿಸುವ ಉದ್ದೇಶದಿಂದ ಒಂದು ಪ್ರಕಟಣೆಯನ್ನು 1930ರಲ್ಲಿಯೇ ಹೊರಡಿಸಿದ ವಿಷಯಯವನ್ನು ಹಿಂದೆ ತಿಳಿಸಿರುತ್ತದೆ. 1939ರಲ್ಲಿ ಈ ವಿಷಯದ ವಿವರಣೆಯನ್ನು ಜುಲೈತಿಂಗಳಿನ ಪತ್ರಿಕೆಯಲ್ಲಿ ಈ ವಿಷಯದ ಎರಡನೆಯ ಪ್ರಕಟಣೆಯನ್ನು ಹೊರಡಿಸಿ ಅಭ್ಯಾಸದ ವಿವರವೇ ಮುಂತಾದದ್ದನ್ನು ವಿವರಿಸಲಾಯಿತು. ಹೈಕೋರ್ಟು ಜಡ್ಜ್ ನಾಗೇಶ್ವರಯ್ಯರ್, ವಿದ್ಯಾಇಲಾಖೆಯ ಸರ್ಕಲ್ ಇನಸ್ಪೆಕ್ಟರ್ ವೆಂಕಟರಾಮಯ್ಯ-ನವರು, ಮೈಸೂರು ಸಕಲ(ವಿಶ್ವ)ವಿದ್ಯಾನಿಲಯದ ರಿಜಿಸ್ಟ್ರಾರ್ ಸುಬ್ರಹ್ಮಣ್ಯ ಅಯ್ಯರ್, ಬೆಂಗಳೂರು ಶಂಕರವೇದಾಂತ ಪ್ರಧಾನಾಧ್ಯಾಪಕ ಪಂಡಿತರಾಜ ವೆಂಕಟೇಶಶಾಸ್ತ್ರಿಗಳು, ಮಿಮಾಂಸಾಕಂಠೀರವ ವೈದ್ಯನಾಥಶಾಸ್ತ್ರಿಗಳವರು ಮುಂತಾದವರ ಪ್ರೋತ್ಸಾಹದಿಂದ ಮತತ್ರಯ ಸಿದ್ಧಾಂತವನ್ನೂ, ಸುಪ್ರಸಿದ್ಧ ಮೂರು ಆಚಾರ್ಯರ ಜೀವನ ಚರಿತ್ರೆ, ಉಪದೇಶ, ಇವುಗಳನ್ನೂ ಉಪಾಸನಾದಿ ಸಾಧನಮರ್ಮಗಳನ್ನೂ ಕಲಿಸಿಕೊಡುವದಕ್ಕೆಂದು ಒಂದು ವಿದ್ಯಾಲಯವನ್ನು ಸ್ಥಾಪಿಸುವೆವೆಂದು ಈ ಪ್ರಕಟನೆಯಲ್ಲಿ ತಿಳಿಯಪಡಿಸಲಾಯಿತು. ಆದರೆ ವಿದ್ಯಾರ್ಥಿಗಳು ಯಾರೂ ಸಿಕ್ಕಲಿಲ್ಲ, ಹೊರಗಿನ ಜನರ ಸಹಾಯವೂ ದೊರಕಿರಲಿಲ್ಲ. **1944**ನೇ ಮೇ ತಿಂಗಳಲ್ಲಿ ನಂಜನಗೂಡಿನಿಂದ ಯಜ್ಞೇಶ್ವರಶಾಸ್ತ್ರಿಗಳೆಂಬವ-ರೊಬ್ಬರು ವಿದ್ಯಾರ್ಥಿಯಾಗಿ ಬಂದು ಸೇರಿದರು. ಅವರು ವೇದಾಧ್ಯಯನವನ್ನು ಮಾಡಿ ತಕ್ಕಮಟ್ಟಿಗೆ ಕಾವ್ಯವನ್ನು ಓದಿದ್ದರು, ವಿದ್ಯಾಲಯಕ್ಕೆ ನಿಧಿಯನ್ನು ಕೂಡಿಸುವ ಬಗ್ಗೆ ಆಗಲೆ ಪ್ರಯತ್ನವು ನಡೆದಿತ್ತು. ಹೆಚ್ಚಿನ ವಿದ್ಯಾರ್ಥಿಗಳು ಯಾರೂ ಬಾರದ್ದರಿಂದ ಜುಲೈ ತಿಂಗಳಿನಿಂದ ಕ್ರಮವಾಗಿ ಗೀತಾಭಾಷ್ಯವನ್ನು ಆತನೊಬ್ಬನಿಗಾಗಿಯೇ

ಪ್ರಾರಂಭಿಸಲಾಯಿತು. ಈಶಾವಾಸ್ಯೋಪನಿಷತ್, ಕೇನೋಪನಿಷತ್, ಕಠೋಪನಿಷತ್, ತೈತ್ತಿರೀಯೋಪನಿಷತ್, ನೈಷ್ಕರ್ಮ್ಯಸಿದ್ಧಿ - ಮುಂದುವರೆದವು.

## ಪುಸ್ತಕಭಂಡಾರ:

ಡಾ|| ಆರ್. ಶಾಮಶಾಸ್ತ್ರಿಗಳು , ನಂಜಪ್ಪಭಾಗವತರು, ಕೆಲವು ಸಂಸ್ಕೃತ ಮತ್ತು ಕನ್ನಡ ಪುಸ್ತಕಗಳನ್ನು ಭಂಡಾರಕ್ಕೆ ಕೊಟ್ಟರು. ರಿಟೈರ್ಡ್ ಸಂಸ್ಕೃತ ಕಾಲೇಜ್ ಪ್ರಿನ್ಸಿಪಾಲರಾದ ವೈ.ಚಂದ್ರಶೇಖರ ಶಾಸ್ತ್ರಿಗಳವರು ಕೆಲವು ಪುಸ್ತಕಗಳನ್ನು ಕೊಟ್ಟರು. ಕೆಲವು ಅತ್ಯವಶ್ಯಕವಾದ ಪುಸ್ತಕಗಳನ್ನು ಕೊಳ್ಳಲಾಯಿತು. ಪತ್ರಿಕೆಗೆ ವಿಮರ್ಶೆಗೆಂದು ಬಂದ ಹಲವು ಪುಸ್ತಕಗಳನ್ನು ಭಂಡಾರಕ್ಕೆ ಸೇರಿಸಿಕೊಂಡೆವು. ವಾಟರ್ ಆಪರೇಟರ್ ಕೃಷ್ಣಮೂರ್ತಿ ಮತ್ತು ಅವರ ಪತ್ನಿಯವರು ಸಹ ವಿರಾಮ ಕಾಲದಲ್ಲಿ ಬಂದು, ಪುಸ್ತಕಗಳ ಪಟ್ಟಿಯನ್ನು ಬರೆದು, ಒಂದು ರಿಜಿಸ್ಟರಿನಲ್ಲಿ ಬರೆಯುವದಕ್ಕೆ ಪ್ರಥಮ ಸಹಾಯವನ್ನು ಮಾಡಿದರು.

## ನವರಾತ್ರಿಯ ಅನುಷ್ಠಾನ:

ಶಂಕರಸಪ್ತಾಹ, ಗೀತಾಜಯಂತಿ, ಗೋ.ಮಹಾರಾಜರ ಪುಣ್ಯದಿನ ಇಷ್ಟು ಕ್ಲಪ್ತವಾಗಿ ಕಾರ್ಯಾಲಯಕ್ಕೆ ಅಂಗವಾಗಿ ನಿಯತಕಾಲದಲ್ಲಿ ಉತ್ಸವಗಳು ಈವರೆಗೂ ನಡೆಯುತ್ತಿದ್ದವು. 18-09-1944 ರಲ್ಲಿ ಮೊದಲನೆಯ ಶರನ್ನವರಾತ್ರಿಯ ಅನುಷ್ಠಾನವು ಪ್ರಾರಂಭವಾಯಿತು. ವಿ.ಶಾಸ್ತ್ರಿಗಳು ಮಾಂಡೂಕ್ಯ, ಬೃಹದಾರಣ್ಯಕ, ಛಾಂದೋಗ್ಯ ಉಪನಿಷತ್ತುಗಳನ್ನು, ಅನಂತ ಮೂರ್ತಿಶಾಸ್ತ್ರಿಗಳು ಬ್ರಹ್ಮಸೂತ್ರಗೀತೆ, ಐತರೇಯೋಪನಿಷತ್‌ಗಳನ್ನು, ನಾರಣಪ್ಪನವರು ರಾಮತಾರಕಮಂತ್ರಜಪವನ್ನು ಮಾಡಿದರು. ನಾನು ಈಶಾವಾಸ್ಯೋಪನಿಷತ್, ಕೇನೋಪನಿಷತ್,ಕಠೋಪನಿಷತ್, ಮುಂಡಕೋಪನಿಷತ್, ಪ್ರಶ್ನೋಪನಿಷತ್, ಐತರೇಯೋಪನಿಷತ್,ಸುಂದರಕಾಂಡ, ಸೂರ್ಯ-ನಮಸ್ಕಾರ (ಇವುಗಳನ್ನು ಮಾಡಿದೆನು).

## ಕಟ್ಟಡಕ್ಕೆ ನಿವೇಶನಗಳು:

ಕಾರ್ಯಾಲಯಕ್ಕೆ ಆಗಂತುಕರು ಬರುವದು ಹೆಚ್ಚಾದಂತೆಲ್ಲ ಅದಕ್ಕೆ ಸ್ವತಂತ್ರವಾದ ಕಟ್ಟಡವೊಂದು ಇರುವುದು ಅವಶ್ಯವೆಂಬುದು ಮನಸ್ಸಿಗೆ ಹೆಚ್ಚಾಗಿ ತಟ್ಟುತ್ತಾ ಬಂತು. ಯಜ್ಞೇಶ್ವರಶಾಸ್ತ್ರಿಗಳೂ ನಾನೂ ಬೇರೆ ಒಂದು ಬಾಡಿಗೆ ಮನೆಯಲ್ಲಿ ಒಂದುವರೆ ತಿಂಗಳುವರೆಗೆ ಇದ್ದೆವು. ಕಾರಣಾಂತರದಿಂದ ಮತ್ತೆ ನಮ್ಮ

ಮನೆಗೆ ಹಿಂತಿರುಗಬೇಕಾಯಿತು. ಅಲ್ಲಲ್ಲಿ ಸಂಚಾರಮಾಡಿ ವಿದ್ಯಾಲಯಕ್ಕೂ, ಕಟ್ಟಡಕ್ಕೂ, ಹಣವನ್ನು ಒದಗಿಸುವ ಪ್ರಯತ್ನವು ಅಷ್ಟೇನೂ ಸಫಲವಾಗಿರಲಿಲ್ಲ. ಎಲ್ಲಕ್ಕೂ ಮೊದಲು ಕಟ್ಟಡಕ್ಕೆ ನಿವೇಶನವು ಕೂಡ ದೊರಕಲಿಲ್ಲ. ಬೇರೆಬೇರೆ ಕಡೆಗಳಲ್ಲಿ ನಿವೇಶನವು ದೊರಕುವ ಸೂಚನೆಗಳು ತೋರಿದವು ; ಆದರೆ ನನ್ನ ಪ್ರಯತ್ನವು ಅಷ್ಟು ಮುಂದಕ್ಕೆ ಸಾಗಲಿಲ್ಲವೋ, ಮಹಾಜನರ ಸಹಾಯವೇ ಸಾಲದೆಹೋಯಿತೋ ಹೇಳಲಾರೆ. ಅಂತೂ ನಿವೇಶನವೇನೂ ಸಿಕ್ಕಲಿಲ್ಲ. ಆದ್ದರಿಂದ ಹೊಳೆನರಸೀಪುರದ ವಾಸವನ್ನೇ ಬಿಟ್ಟು ಮೈಸೂರಿನಲ್ಲಿದ್ದು ಕಾರ್ಯಾಲಯದ ಪ್ರಯತ್ನವನ್ನು ಮಾಡೋಣವೆ ? ಎನ್ನಿಸಿತು. ಅಲ್ಲಿ ವಿಚಾರಿಸುವಲ್ಲಿ ರಿಟೈರಾಗಲಿದ್ದ ಸ್ಯಾನಿಟರಿ ಇ॥ಅನಂತಯ್ಯನವರು ಒಂದು ಕಟ್ಟಡವು ತಮಗೆ ಶ್ರೀನಿವಾಸಪುರ ಎಕ್ಸ್‌ಟೆನ್‌ಷನ್‌ನಲ್ಲಿ ದೊರಕುವ ಸಂಭವವಿದೆಯೆಂದೂ ಅದನ್ನು ಬೇಕಾದರೆ ನನಗೆ ಕೊಡಿಸುವ ಪ್ರಯತ್ನ ಮಾಡುವೆನೆಂದೂ ಹೇಳಿದರು. ವಾಣಿವಿಲಾಸ ರೋಡ್‌ನಲ್ಲಿ ಮುದ್ರಣಾಲಯಕ್ಕೆ ತಕ್ಕ ಸ್ಥಳವನ್ನು ಬಾಡಿಗೆಗೆ ತೆಗೆದುಕೊಂಡು ಮೈಸೂರಿಗೆ ಹೋದರೆ ನಗರವಾದ್ದರಿಂದ ಜನಗಳ ಪ್ರೋತ್ಸಾಹವು ಸಿಕ್ಕಬಹುದು ; ಕಾರ್ಯಾಲಯದ ಪಾಠಪ್ರವಚನೋಪನ್ಯಾಸಗಳೇ ಮುಂತಾದ ಚಟುವಟಿಕೆಗಳಿಗೆ ಹೆಚ್ಚಿನ ಒತ್ತಾಸೆ ಸಿಕ್ಕಬಹುದು ಎಂದು ತೋರಿತು. ಹಾಗೇ ಮಾಡುವದು ಎಂದು ನಿರ್ಧರಿಸಿಕೊಂಡು ಮೈಸೂರಿನಿಂದ ಹೊಳೆನರಸೀಪುರಕ್ಕೆ ಬಂದೆನು. ಬಂದು ಒಂದೆರೆಡು ದಿನಗಳಮೇಲಿರಬಹುದು ಸಂತೇಬಾಚಳ್ಳಿ ಸುಬ್ಬರಾಯರು, ಪಿ.ಎನ್. ನರಸಿಂಹಯ್ಯನವರು, ರಾಮಸ್ವಾಮಯ್ಯನವರು, ನಂಜಪ್ಪಭಾಗವತರು - ಎಲ್ಲರೂ ಒಂದು ದಿನ ಸಾಯಂಕಾಲ ಸಂಚಾರಕ್ಕೆ ಹೊರಟಿದ್ದೆವು. ಹೊಳೆನರಸೀಪುರಕ್ಕೆ ಬಂದ ಕೆಲವು ದಿನಗಳಿಂದಲೂ ನಾವುಗಳು ಸಂಚಾರಕ್ಕೆ ಹೋಗುವಾಗ ಯಾವದಾದರೊಂದು ಅಧ್ಯಾತ್ಮ ವಿಚಾರವನ್ನು ಚರ್ಚಿಸುತ್ತಲೇ ಇರುತ್ತಿದ್ದೆವು. ನರಸಿಂಹಯ್ಯನವರು ಯಾವದಾದರೊಂದು ಗ್ರಂಥವನ್ನು ನಡೆಯುತ್ತಲೇ ಓದುತ್ತಿದ್ದದ್ದೊಂದು ಆಶ್ಚರ್ಯಕರವಾದ ಸಂಗತಿ. ''ಹೀಗೆ ಸತ್ಕಾಲಕ್ಷೇಪ ನಡೆಯುವದು ಇನ್ನುಮೇಲೆ ಇಲ್ಲ. ನಾನು ಯತ್ನವಿಲ್ಲದೇ ಹೊ.ನ. ಪುರವನ್ನು ಬಿಡಬೇಕಾಗಿದೆ'' ಎಂಬುದನ್ನು ಆ ಸಾಯಂಕಾಲ ಎಲ್ಲರಿಗೂ ತಿಳಿಸಿದೆನು. ಆ ವಿಷಯವನ್ನು ಕುರಿತು ನಾವು ಮಾತನಾಡುತ್ತಿರುವಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ನಮ್ಮಲ್ಲಿ ವಿಶೇಷವಾಗಿ ಬೆರೆಯದೇ ಇದ್ದ ಪ್ಲೀಡರ್ ಅರಕಲಗೂಡು ಶ್ರೀಕಂಠಯ್ಯನವರು ಅದೇ ದಾರಿಯಲ್ಲಿ ಸಂಚಾರಕ್ಕೆ ಹೊರಟಿದ್ದವರು ನಮ್ಮ ದಾರಿಗೆ ಬಂದರು. ಅವರು ನಮ್ಮಲ್ಲಿ ಮಾತುಕಥೆ ನಡೆಯುತ್ತಿದ್ದನ್ನು ಕೇಳಿ ''ಹೊ.ನ.ಪುರದಲ್ಲಿಯೇ ನಿಮಗೆ ಸ್ಥಲವು ಸಿಕ್ಕಿದರೆ ಆಗದೆ ?'' ಎಂದು ಕೇಳಿದರು.

ಆವರೆಗೆ ನಾನು ಮಾಡಿದ್ದ ಪ್ರಯತ್ನಗಳೆಲ್ಲ ವಿಫಲವಾದದ್ದನ್ನು ಅವರಿಗೆ ವಿವರವಾಗಿ ತಿಳಿಸಿದೆನು. ಅವರು ಹಾಗಾದರೆ ಇಲ್ಲೊಂದು ನಿವೇಶನವಿದೆ, ನಿಮಗೆ ಸರಿಹೋಗುವದಾದರೆ ನೋಡಿ ಎಂದು ಒಂದು ಸ್ಥಲವನ್ನು ತೋರಿಸಿದರು. ಅದು ರೈಲ್ವೇಸ್ಟೇಶನ್ನಿಗೆ ಸಮೀಪವಾಗಿತ್ತಾದರೂ ಹರಿಜನರ ಕೇರಿಗೆ ಬಹಳ ಹತ್ತಿರವಾಗಿತ್ತು. ವೇದಾಂತಿಗಳೆಂದರೆ ಜಾತಿನೀತಿಗಳ ಕಟ್ಟಿಲ್ಲದವರು ಎಂದು ತಿಳಿವಳಿಕೆಸಾಲದ ಸಾಮಾನ್ಯಜನರು ಆಡಿಕೊಳ್ಳುತ್ತಿರುವ ಮಾತಿಗೆ ವಿನಾಕಾರಣವಾಗಿ ನಾವು ಉದಾಹರಣೆಯಾಗಬಾರದೆಂಬ ಕಾರಣದಿಂದ, ಇದು ನಮಗೆ ಅಷ್ಟು ಅನುಕೂಲಿಸುವದಿಲ್ಲ ಎಂದೆನು. ಮುಂದಕ್ಕೆ ಸ್ವಲ್ಪ ದೂರ ಊರಕಡೆಗೆ ನಡೆದಮೇಲೆ ಶ್ರೀಕಂಠಯ್ಯನವರು ಎಡಗಡೆಗೆ ಇದ್ದ ಖಾಲಿನಿವೇಶನದ ಕಡೆಗೆ ಕೈತೋರಿಸಿ ಇಲ್ಲಿ ಸಿಕ್ಕಿದರೆ ಆಗಬಹುದೋ ? ಎಂದರು. ನಾನು, ಇಲ್ಲೇನೋ ಆಗಬಹುದು ; ಆದರೆ ನಮಗೆ ಕೊಡುವವರು ಯಾರು ?'' ಎಂದೆನು. ''ನೋಡೋಣ ! ಗುರುಗಳ ಅನುಗ್ರಹ ಹೇಗಾಗುತ್ತದೆಯೋ !'' ಎಂದರು. ನಂ.ಭಾಗವತರು ''ನಾಳೆ ಗುರುವಾರ ಆಗುತ್ತದೆ, ಕಾರ್ಯಾಲಯಕ್ಕೆ ಶ್ರೀಕಂಠಯ್ಯನವರಿಂದ ಉಪಕಾರವಾಗುವದಿದ್ದರೆ ಈ ದಿನ ಸ್ವಪ್ನದಲ್ಲೇಕೆ ಅವರಿಗೆ ಪ್ರೇರಣೆ ಕೊಡಬಾರದು ?'' ಎಂದು ಹುಸಿನಗೆಯಿಂದ ನುಡಿದರು. ಆದರೆ ಆಗಲೇ ಸದ್ಗುರುಗಳ ಅನುಜ್ಞೆ ಶ್ರೀಕಂಠಯ್ಯನವರಿಗೆ ಆಗಿಬಿಟ್ಟಿತ್ತೆಂದು ತೋರುತ್ತದೆ. ಮಾರನೆಯ ದಿನವೋ ಆ ಮಾರನೆಯ ದಿನವೋ ಅವರು ತಮ್ಮ ಎರಡು ನಿವೇಶನಗಳನ್ನು ರಿಜಿಸ್ಟರು ಮಾಡಿಸಿ ಕಾರ್ಯಾಲಯದಲ್ಲಿ ನಡೆಯುವ ಶಂಕರಸಪ್ತಾಹವೇ ಮುಂತಾದ ಅನುಷ್ಠಾನಗಳಿಗಾಗಿ ಅದನ್ನು ದಾನವಾಗಿ ಕೊಟ್ಟು, ದಾನಪತ್ರವನ್ನು ರಿಜಿಸ್ಟರು ಮಾಡಿಸಿ ನಮ್ಮ ಮನೆಗೆ ತಂದುಕೊಟ್ಟುಬಿಟ್ಟರು.

ಶ್ರೀಕಂಠಯ್ಯನವರು ಕಾರ್ಯಾಲಯಕ್ಕೆ ಇದುವರೆಗೆ ಸಂಬಂಧಿಸಿಕೊಂಡೇ ಇರಲಿಲ್ಲವೆಂದೂ ಆಗಲೇ ಹೇಳಿಟ್ಟಿರುತ್ತೇನೆ. 1942ನೇ ಫೆಬ್ರವರಿ ಸಂಚಿಕೆಯಿಂದ ಮೊದಲುಮಾಡಿ, ಆ ಕಟ್ಟಡದ ಅವಶ್ಯಕತೆಯನ್ನು ಆಗಾಗ್ಗೆ ಪತ್ರಿಕೆಯಲ್ಲಿ ಹಾಕುತ್ತಲೇ ಇದ್ದೆವು. ಶ್ರೀಕಂಠಯ್ಯನವರು ಒಂದೆರಡು ಸಲ ನರಸಪ್ಪನನ್ನು ''ಕಟ್ಟಡಕ್ಕೆ ಎಷ್ಟು ವಿಸ್ತೀರ್ಣದ ಸ್ಥಲಬೇಕು ?'' ಎಂದು ಕೇಳಿದ್ದರಂತೆ. ಆದರೆ ಅವರಿಗೆ ಸ್ವಂತವಾದ ನಿವೇಶನಗಳಿವೆ ಎಂಬುದಾಗಲೀ, ಅವರು ದಾನವಾಗಿ ನೆಲಗಟ್ಟನ್ನು ಮಾಡುವವ-ರಾಗಿದ್ದಾರೆಂದಾಗಲೀ ನನಗೆ ಮನವರಿಕೆಯಾಗುವ ಸಂಭವವೇ ಇರಲಿಲ್ಲ. ನಾನು ಹೊ.ನ.ಪುರಕ್ಕೆ ಬಂದ ಮೇಲೆ ಆದ ಸಪ್ತಾಹದಲ್ಲಾಗಲೀ ಇತರ ಚಟುವಟಿಕೆಗಳ-ಲ್ಲಾಗಲೀ ಅವರು ಈವರೆಗೆ ಸೇರಿರಲಿಲ್ಲ. ಆದ್ದರಿಂದ ''ನಮಗೆಷ್ಟು ಸ್ಥಲಬೇಕೆನ್ನುವದ-

ಕ್ಕಿಂತಲೂ ಅವರು ಎಷ್ಟು ಕೊಡುತ್ತಾರೋ ಕೊಡಲಿ ! ಏಕೆಂದರೆ ಕಾರ್ಯಾಲಯವು ಮತ್ಸ್ಯಾವತಾರದಂತೆ ಹಿಗ್ಗುತ್ತಲೇ ಇದೆ ; ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಷ್ಟು ನಾವು ಅಭಿವೃದ್ಧಿಯನ್ನು ತೋರಿಸುವದಕ್ಕೆ ಸಿದ್ಧರಾಗಿರುವೆವು'' ಎಂದು ಪರೋಕ್ಷವಾಗಿ ನುಡಿದು ಸುಮ್ಮನಾಗಿಬಿಟ್ಟಿದ್ದೆನು. ಆದರೆ ಈಶ್ವರನ ಸಂಕಲ್ಪವು ಮೊದಲೇ ನಿಯತವಾಗಿ ಬಿಟ್ಟಿತ್ತು. ಆದ್ದರಿಂದ ಮೇಲೆ ಹೇಳಿದಂತೆ ತಾನೇ ನಡೆದು ಹೋಯಿತು. ಶ್ರೀಕಂಠಯ್ಯನವರ ಅಣ್ಣಂದಿರು ಅಡ್ವೋಕೇಟ್ ಸೀತಾರಾಮಯ್ಯನವರು ಹೊಳೆನರಸೀಪುರದಲ್ಲಿ ನನ್ನನ್ನು ಮೊದಲು 1939 ರಲ್ಲಿ ಕಂಡರು.

ಆ ಮೊದಲು ಕಾರ್ಯಾಲಯದಲ್ಲಿ ಪ್ರಕಟವಾಗಿದ್ದ ಉಪದೇಶಸಾಹಸ್ರಿ (ಗದ್ಯ), ಮಾಂಡೂಕ್ಯದ ಆಗಮ, ವೈತಥ್ಯ, ಅದ್ವೈತ - ಪ್ರಕರಣಗಳನ್ನು ಪರೋಕ್ಷವಾಗಿ ಕೊಂಡು ಓದಿದ್ದರಂತೆ. 1934ರಿಂದಕೂಡಲಿ ಜಗದ್ಗುರುಗಳಾದ ಅಭಿನವ ವಾಲುಕೇಶ್ವರ ಸ್ವಾಮಿಗಳಲ್ಲಿ ಉಪನಿಷತ್ ಪಾಠಕ್ಕೆ ಹೋಗುತ್ತಿದ್ದರಂತೆ ; ಆ ಗುರುಗಳು ಬ್ರಹ್ಮೀಭೂತರಾದ ಬಳಿಕ ಕಾಶೀ ಮಹಾಯಾತ್ರೆಯನ್ನು ಮಾಡಿಕೊಂಡು ಬಂದಿದ್ದರು. ನಮ್ಮ ಮನೆಯಲ್ಲಿ ವೇದಾಂತಪಾಠ ನಡೆಯುತ್ತಿದ್ದದ್ದು ಶ್ರೀಕಂಠಯ್ಯನವರಿಂದ ತಿಳಿದಿರಬೇಕು. ನನ್ನನ್ನು ಕಂಡಾಗ ವೇದಾಂತವಿಚಾರ ವಿನಿಮಯವಾದ ಮೇಲೆ ತಾವು ಮೈಸೂರಿಗೇ ಬರಬೇಕು ಎಂದು ಕೇಳಿದರು. ''ನಿಮ್ಮೂರಿನಲ್ಲಿ ನಿಮ್ಮ ಮನೆಯ ಬೀದಿಯಲ್ಲಿಯೇ ವಿಠ್ಠಲಶಾಸ್ತ್ರಿಗಳೆಂಬುವರು ವೇದಾಂತಪಾಠ ಹೇಳುತ್ತಾರೆ ; ಅವರಿಗೆ ನಾನು ಕಾಗದದ ಮೂಲಕ ತಿಳಿಸುತ್ತೇನೆ'' - ಎಂದು ನಾನು ಹೇಳಿದೆ.ಆಗಿನಿಂದ ಅವರು ವಿಠ್ಠಲಶಾಸ್ತ್ರಿಗಳಿಂದಲೇ ವೇದಾಂತ ಶ್ರವಣವನ್ನು ಮಾಡುತ್ತಾ ಇರುತ್ತಾರೆ. ಅಂತೂ ಸೀತಾರಾಮಯ್ಯನವರು, ಶ್ರೀಕಂಠಯ್ಯನವರು - ಈ ಅಣ್ಣತಮ್ಮಂದಿರು ಇಬ್ಬರೂ ಒಬ್ಬರ ನಿಮಿತ್ತದಿಂದೊಬ್ಬರು ಅವರಿಬ್ಬರಿಗೂ ನನಗೂ ತಿಳಿಯದೆಯೆ ಕಾರ್ಯಾಲಯಕ್ಕೆ ಸಂಬಂಧಿಸಿಕೊಂಡರು. 1940-41ರಲ್ಲಿ ಶ್ರೀಸೀತಾರಾಮಯ್ಯನವರು ಒಂದೆರಡು ಸಲ ಹೊಳೆನರಸೀಪುರಕ್ಕೆ ಬಂದದ್ದು ನಾನು ನೋಡಿದ್ದೇನೆ. ಒಮ್ಮೆ ಅವರು ಬೆಳಗ್ಗೆ 10-30 ಘಂಟೆಗೆ ನಮ್ಮ ಮನೆಯಲ್ಲಿದ್ದ ಕಾರ್ಯಾಲಯಕ್ಕೆ ಬಂದರು. ಆಚಾರ್ಯರು ''ಅನ್ವಯವ್ಯತಿರೇಕ, ದೃಗ್ದೃಶ್ಯವಿವೇಕ, ಅವಸ್ಥಾತ್ರಯ'' - ಈ ಮೂರುಯುಕ್ತಿಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿರುವದಕ್ಕೆ ಕಾರಣವೇನು ? ಎಂದು ಕೇಳಿದರು. ಆ ವಿಷಯದಲ್ಲಿ ಮಾತನಾಡುತ್ತಾ ಆಡುತ್ತಾ ಸುಮಾರು ಮಧ್ಯಾಹ್ನದ ಮೇಲೆ ಒಂದು ಘಂಟೆಯವರೆಗೂ ಸಂಭಾಷಣೆ ನಡೆಯಿತು. ಸೀತಾರಾಮಯ್ಯನವರಿಗೆ ವೇದಾಂತ ವಿಚಾರದಲ್ಲಿ ಅಷ್ಟು ಅಭಿರುಚಿ. ಅವರು ಆವರೆಗೆ ಮೈಸೂರಲ್ಲಿ ನಡೆದಿದ್ದ ಮೂರು ಶಂಕರಸಪ್ತಾಹಗಳಲ್ಲಿಯೂ ಭಾಗವನ್ನು ವಹಿಸಿದ್ದರು.

ಪ್ರಕೃತ ಶ್ರೀಕಂಠಯ್ಯನವರು ನಮಗೆ ಮೇಲೆ ಹೇಳಿದಂತೆ ಎರಡು ನಿವೇಶನಗಳನ್ನು ದಾನಮಾಡಿದ್ದು 1942ನೆಯ ಅಕ್ಟೋಬರಿನಲ್ಲಿ. ನಂಜಪ್ಪಭಾಗವತರು ಅಕ್ಕಪಕ್ಕದಲ್ಲಿರುವ ನಿವೇಶನಗಳು ಯಾವದಾದರೂ ಸಿಕ್ಕುವದಾದರೆ ಕೊಳ್ಳುವದು ಅವಶ್ಯವೆಂದು ಸೂಚಿಸಿದಂತೆ ಹತ್ತಿರವಿರುವ ನಿವೇಶನಗಳು ಯಾರಿಗೆ ಸೇರಿವೆ ಎಂಬುದನ್ನು ಸ್ವಾಭಾವಿಕವಾಗಿ ಶ್ರೀಕಂಠಯ್ಯನವರನ್ನೇ ಕೇಳಿದೆ. "ನಿಮಗೆ ಇನ್ನೂ ಬೇಕೇನು ? ಹಾಗಾದರೆ ಪಕ್ಕದಲ್ಲಿರುವ ನನ್ನ ಇನ್ನೊಂದು ಸೈಟನ್ನು ಕೊಡುತ್ತೇನೆ" ಎಂದರು. ಅವರು ಮೂರನೆಯದೊಂದು ನಿವೇಶನವನ್ನು ಕೊಟ್ಟರು. ಇದಾದಮೇಲೆ ಹಾಸನದ ಎಚ್.ವಿ.ಅನಂತರಾಮಶೆಟ್ಟರು, ಹೊಳೆನರಸೀಪುರದ ಎಮ್.ಕೃಷ್ಣಶೆಟ್ಟರು, ಎಮ್. ರಂಗಪ್ಪಶೆಟ್ಟರು, ಪ್ಲೀಡರ್ ಕರಿಗಿರಿವಾಸನ್-ಇವರುಗಳು ತಮ್ಮತಮ್ಮನಿವೇಶನಗಳನ್ನು ತಮತಮಗೆ ತಗಲಿದಷ್ಟು ಮೊಬಲಗಿಗೇ ಶುದ್ಧಕ್ರಯಕ್ಕೆ ಕೊಟ್ಟರು. ಮುನಿಸಿಪಾಲಿಟಿಯಿಂದ 1943ರಲ್ಲಿ ಈ ನಿವೇಶನಗಳ ನಡುವೆಯಿದ್ದ ಕನ್ಸರ್ವೆನ್ಸಿ ಲೇನನ್ನು ಅಪ್‌ಸೆಟ್ ಪ್ರೈಸಿಗೆ ಕೊಳ್ಳಲಾಯಿತು. ಹೀಗೆ ಪಶ್ಚಿಮದಿಕ್ಕಿನ ಮೂಲೆಯಲ್ಲಿದ್ದ ಒಂದು ನಿವೇಶನದ ಹೊರತು ಮಿಕ್ಕಎಲ್ಲಾ ನಿವೇಶನಗಳೂ ಕಾರ್ಯಾಲಯಕ್ಕೆ ಸೇರಿದವು. ಕಾರ್ಯಾಲಯದ ಸುತ್ತಲೂ ರಸ್ತೆಗಳೇ ಇರುವಂತೆ ಒಂದು ಸ್ವತಂತ್ರ ಪ್ರದೇಶವಾಯಿತು.

## ಕಟ್ಟಡಕ್ಕೆ ಸಹಾಯದ್ರವ್ಯ ಯಾಚನೆ:

ಈಗ್ಗೆ ಕಾರ್ಯಾಲಯಕ್ಕೆ ಕಟ್ಟಡದ ನಿವೇಶನವು ದೊರೆತಂತಾಯಿತು. ಇನ್ನು ಕಟ್ಟಡಕ್ಕೆ ಹಣಬೇಕು. ಹೊರಗೆ ಹಣಶೇಖರಕ್ಕೆಂದು ಮಾಡಿದ ಮೊದಲನೆಯ ಪ್ರಯತ್ನವು ಆಗಲೇ ತಿಳಿಸಿರುತ್ತೇನೆ. ಈಗ ದ್ರವ್ಯಸಂಗ್ರಹವನ್ನು ಹೇಗೆ ಮಾಡಬೇಕೆಂಬುದೊಂದು ಒಗಟಾಯಿತು. ಈ ನಡುವೆ ನಮ್ಮ ಊರಿನಲ್ಲಿದ್ದ ನನ್ನ ಪಾಲಿನ ತೋಟ ಮತ್ತು ಗದ್ದೆ ಊರಲ್ಲಿ ಗುತ್ತಿಗೆಗೆ ಕೊಟ್ಟಿದ್ದದ್ದು ತುಂಬಾ ಹೀನಸ್ಥಿತಿಗೆ ಬಂತು. ಅದರ ಭಾಗದ ಕಂದಾಯವನ್ನು ನಾನು ಕೊಟ್ಟರೂ ಒಟ್ಟು ಖಾತೆಯಲ್ಲಿದ್ದದ್ದರಿಂದ ಮಿಕ್ಕ ಅಣ್ಣತಮ್ಮಂದಿರ ಪಾಲಿನ ಕಂದಾಯ ಕೊಡದೆ ಕಂದಾಯ ಬಾಕಿಗೆ ಹರಾಜಾಗುವ ಸಂದರ್ಭಗಳು ಇರುತ್ತಿದ್ದವು. ಗುತ್ತಿಗೆದಾರನು ಜಮೀನನ್ನು ಕೀಳುಸ್ಥಿತಿಗೆ ತಂದರೆ ತನಗೇ ಕೊಟ್ಟು ಬಿಡುವರೆಂಬ ಆಶೆಯಿಂದ ಬೇಕೆಂತಲೇ ಬೇರೆಬೇರೆ ಸಬೂಬುಗಳನ್ನು ಹೇಳುತ್ತಾ ಗುತ್ತಿಗೆ ಮೊಬಲಗನ್ನು ಕೊಡದೆ ಸತಾಯಿಸುತ್ತಿದ್ದನು. ಈ ಎಲ್ಲಾ ಕಷ್ಟಗಳನ್ನು ಪರಿಹರಿಸಿಕೊಳ್ಳುವದಕ್ಕೆ ನನ್ನ ಭಾಗದ ಜಮೀನನ್ನು ನಮ್ಮೂರ ಚನ್ನಕೇಶವ ದೇವರಿಗೆ ದಾನಕೊಟ್ಟುಬಿಟ್ಟರೆ ಅಲ್ಲಿರುವವರು

ಅದನ್ನು ಉತ್ತಮಸ್ಥಿತಿಗೆ ತಂದುಕೊಂಡಾರೆಂಬ ಯೋಜನೆಯೊಂದು ಹುಟ್ಟಿತು. ನರಸಪ್ಪನ ಮತ್ತು ಮನೆಯವರೆಲ್ಲರ ಅನುಮತಿಯನ್ನು ಪಡೆದು ಪಿತ್ರಾರ್ಜಿತವಾದರೂ ಆ ಭಾಗವನ್ನು ದಾನವಾಗಿ ಕೊಟ್ಟು, ಹೊಳೆನರಸೀಪುರ-ದಲ್ಲಿರುವ ಸ್ವಯಾರ್ಜಿತ ಭೂಮಿಯನ್ನು ಉಳಿಸಿಕೊಳ್ಳುವದೆಂದು ನಿಶ್ಚಯಿಸಿದ್ದೆನು. ಆದರೆ ವಿಠ್ಠಲಶಾಸ್ತ್ರಿಗಳವರು "ಊರಲ್ಲಿರುವ ದೇವಸ್ಥಾನದ ಪೂಜೆಯೂ ಸರಿಯಾಗಿ ನಡೆಯುತ್ತಿಲ್ಲ ; ಅಲ್ಲಿಯ ದೇವರಿಗೆ ಕೊಟ್ಟಮಾತ್ರದಿಂದ ಭೂಮಿಯೇನೂ ಊರ್ಜಿತ ಸ್ಥಿತಿಗೆ ಬರಲಾರದು. ಆದ್ದರಿಂದ ನೀವು ನಿಸ್ಪೃಹತೆಯಿಂದ ನಡೆಯಿಸಿಕೊಂಡಿರುವ ಕಾರ್ಯಾಲಯವನ್ನೇ ದೇವರೆಂತ ಭಾವಿಸಿ ಅದಕ್ಕೆ ಅದನ್ನು ಮಾರಿದ ಬೆಲೆಯನ್ನು ದಾನವಾಗಿ ಕೊಟ್ಟುಬಿಡುವದು ಒಳ್ಳೆಯದು" ಎಂಬ ಸೂಚನೆಯನ್ನಿತ್ತರು. ನನಗೆ ಅದೇ ಸರಿಯೆಂದು ತೋರಿತು. ಆದ್ದರಿಂದ "ಆ ನನ್ನ ಪಾಲನ್ನು ಮಾರಿಬಂದ ಹಣವನ್ನು ಮೊದಲು ಕಟ್ಟಡನಿಧಿಗೆ ಕೊಟ್ಟುಬಿಡುವೆನು. ಈಶ್ವರನ ಸಂಕಲ್ಪವಿದ್ದಂತೆ ಆಗಲಿ" ಎಂದುಕೊಂಡೆನು. ಪರಮೇಶ್ವರನ ಲೀಲೆ ಎಂಥ ಅಗಾಧವಾದದ್ದು ! ನಾನು ಮೊದಲು ಖರೀದಿಗೆ ಕೊಡುವೆನೆಂದಾಗ 500 ರೂ.ಮೇಲೆ ಯಾರೂ ಕೇಳದೇ ಇದ್ದದ್ದು ನನ್ನ ಗುತ್ತಿಗೆದಾರನೇ 1100 ರೂ.ಗೆ ಕೊಳ್ಳುವದಕ್ಕೆ ಒಪ್ಪುವಸ್ಥಿತಿಗೆ ಬಂತು. ಅಕ್ಟೋಬರ್‌ತಿಂಗಳಲ್ಲಿಯೇ ಅದು ರಿಜಿಸ್ಟರಾಯಿತು. ಕೆಲವು ಖರ್ಚುಗಳು ಕಳೆದು ನನ್ನ ಕೈಗೆ 1041 ರೂ.ಗಳು ಬಂದವು. 1943ನೇ ಏಪ್ರಿಲ್ ಏಳನೇ ತಾರೀಖಿನ ದಿನ ಕಟ್ಟಡದ ಕಾರ್ಯನಿರ್ವಾಹಕ ಸಮಿತಿಯೊಂದನ್ನು ಏರ್ಪಡಿಸಲಾಯಿತು. ಆ ತಿಂಗಳ ಅಧ್ಯಾತ್ಮಪ್ರಕಾಶ ಸಂಚಿಕೆಯಲ್ಲಿ ಜಮಾ ಖರ್ಚನ್ನು ಈರೀತಿ ಪ್ರಕಟಿಸಲಾಗಿದೆ.

ಶ್ರೀಯುತ ಅರಕಲಗೂಡು ಶ್ರೀಕಂಠಯ್ಯನವರ ದಾನ (ಮೂರು ನಿವೇಶನಗಳು)

| | |
|---|---|
| ಬ್ರಾ॥ಶ್ರೀ॥ ಸುಬ್ರಹ್ಮಣ್ಯಶರ್ಮರವರು ಕೊಟ್ಟದ್ದು | 1041-00ರೂ. |
| ಬ್ರಾ॥ಶ್ರೀ॥ ವಿಠ್ಠಲಶಾಸ್ತ್ರಿಗಳವರು ಕೊಟ್ಟದ್ದು | 50-00ರೂ. |
| ಬ್ರಾ॥ಶ್ರೀ॥ ಯಳ್ಳಂಬಳಸೆ ಪುರಾಣಿಕ ಸುಬ್ಬಾಭಟ್ಟರು ಕೊಟ್ಟದ್ದು | 20-00ರೂ. |
| ಬ್ರಾ॥ಶ್ರೀ॥ ಹೆಜ್ಜಾಜಿ ನಾರಾಯಣಶಾಸ್ತ್ರಿಗಳು ಕೊಟ್ಟದ್ದು | 1-00ರೂ. |
| ಶ್ರೀ ಜಿ.ಸೀತಾರಾಮಯ್ಯನವರು ಅಧ್ಯಾತ್ಮಸ್ಟೋರ್ಸ್ ಬೆಂಗಳೂರು. | 5-00ರೂ. |
| ಶ್ರೀ ಬಿ.ನಂಜುಂಡಯ್ಯನವರು ಕೊಟ್ಟದ್ದು | 50-00ರೂ. |
| ಅಂತೂ | 1167-00ರೂ. |
| 4 ನೆಲಗಟ್ಟುಗಳು ಮತ್ತು ಕನ್ಸರ್ವೆನ್ಸಿ ಕೊಂಡದ್ದಕ್ಕೆ ಖರ್ಚು | 357ರೂ. 15 ಆಣೆ |
| ಮಾರ್ಚ್ ತಿಂಗಳ ಆಖೈರಿನಲ್ಲಿ ಕೈಯ್ಯಲ್ಲಿರುವದು | **809ರೂ. 01 ಆಣೆ** |

ಕಟ್ಟಡದ ನಿಧಿಗೆ ಹಣವನ್ನು ಕೂಡಿಸುವುದು ಅತ್ಯವಶ್ಯಕವಾಗಿದ್ದದ್ದರಿಂದ ನೇರಾಗಿ ಕಟ್ಟಡಕ್ಕೆಂದೇ ಕೊಟ್ಟ ಹಣವನ್ನಲ್ಲದೇ ಅನಿರ್ದಿಷ್ಟವಾಗಿ ಬಂದ ಹಣಗಳನ್ನು ಕಟ್ಟಡಕ್ಕೆ ವಿನಿಯೋಗಿಸಬೇಕೆಂದು ಸಂಕಲ್ಪ ಮಾಡಿಕೊಂಡೆವು.

ಹೊಳೆನರಸೀಪುರದಲ್ಲಿಯೂ ಪರಸ್ಥಳಗಳಲ್ಲಿಯೂ ಕಟ್ಟಡಕ್ಕೆ ಹಣವನ್ನು ಶೇಖರಮಾಡುವದಕ್ಕೆ ಕಟ್ಟಡದ ಸಮಿತಿಯವರೂ, ನಾನು ಬಲವಾಗಿ ಪ್ರಯತ್ನವನ್ನು ಸಾಗಿಸಿದೆವು. ಇದರ ಫಲವಾಗಿ ಶಿವಮೊಗ್ಗ, ಮತ್ತೂರು, ಮೈಸೂರು, ಬೆಂಗಳೂರು, ನಂಜನಗೂಡು - ಈಕಡೆಗಳಲ್ಲಿ ತಕ್ಕಮಟ್ಟಿಗೆ ಹಣ ಒದಗಿತು. ಈಗ ಕಾರ್ಯಾಲಯದ ಕಟ್ಟಡಕ್ಕೆ ಕಬ್ಬಿಣದ ಗರ್ಡರುಗಳು ದೊರೆತದ್ದರಿಂದ ಮೈಸೂರಿನಲ್ಲಿ ಡಿ.ಸಿ. ಅನಂತರಾಮಯ್ಯನವರು (ನಂಜಪ್ಪಭಾಗವತರ ತಮ್ಮಂದಿರು) ಇವರ ಸಲಹೆಯ ಮೇಲೆ ಕಬ್ಬಿಣದ ಗರ್ಡರುಗಳನ್ನು ತರಿಸಲಾಯಿತು. ಕಾರ್ಯಾಲಯಕ್ಕೆ ಮೊಟ್ಟಮೊದಲು ಜಿಂಕುತಗಡಿನ ಕುಟೀರವೊಂದನ್ನು ಕಟ್ಟಿಸುವ ಏರ್ಪಾಡು ಮಾಡಲಾಯಿತು. ಮರದಸಾಮಾನು, ಸಿಮೆಂಟು ಮುಂತಾದವು ದೊರೆಯುವದು ಕಷ್ಟವಾದ್ದರಿಂದ ನಮಗೆ ಕಟ್ಟಡದ ಅನುಭವ ಸಾಲದೆ ಕೆಲಸದಲ್ಲಿ ಆದ ನಷ್ಟಗಳಿಂದಲೂ ಸ್ವಲ್ಪ ಹಣವು ಹೆಚ್ಚಾಗಿ ಖರ್ಚಾಯಿತು. ಕಟ್ಟಡವಾಗುವದು ತಡವಾಯಿತು. ಕಟ್ಟಡವೂ ಅಪೂರ್ಣಸ್ಥಿತಿಯಲ್ಲಿಯೇ ಸಿದ್ಧವಾಯಿತು.

**ಕಾರ್ಯಾಲಯದಲ್ಲಿ ಪುರಾಣ :** ವಿದ್ಯಾರ್ಥಿಗಳಿಗೆ ಪುರಾಣವನ್ನು ಹೇಳುವ ಪರಿಪಾಠಿಯನ್ನು ತೋರಿಸುವದಕ್ಕೋಸ್ಕರ ಅಧ್ಯಾತ್ಮರಾಮಾಯಣವನ್ನು ಪ್ರಾರಂಭಿಸಲಾಯಿತು.

# ಸಂಬಳ

| | | |
|---|---|---|
| ಎ.ವಿ. ಸ್ಕೂಲು, ಫೋರ್ಟ್, ಬೆಂಗಳೂರು | 40. ರೂ. | 18.8.17 ರಿಂದ 23.7.18 |
| ಡಿ॥ ನಾರ್ಮಲ್ ಸ್ಕೂಲು (ಟೆಂಪೊರೆರಿ) | 50 ರೂ. | 24.7.18 ರಿಂದ 3.11.20 |
| ಎ.ವಿ. ಸ್ಕೂಲು, ಮದ್ದಗಿರಿ, ಹೆ॥ ಮಾ॥ | 50 ರೂ. | 4.11.20 ರಿಂದ 18.8.21 |
| ಎಸ್.ಆರ್.ಎನ್.ರವರ ಎ.ವಿ. ಸ್ಕೂಲು ಬೆಂಗಳೂರು | ರೂ. 50 | 19.8.21 ರಿಂದ 28.1.22 |
| ಎ.ವಿ. ಸ್ಕೂಲು, ಬಸವನಗುಡಿ, ಹೆಮಾ। | ರೂ. 55 | 1.3.22 ರಿಂದ 21.6.22 |
| ಎ.ವಿ. ಸ್ಕೂಲು ಮದ್ದಗಿರಿ, ಹೆ॥ ಮಾ॥ | 55 ರೂ. | 22.6.22 ರಿಂದ 8.8.22 |
| ಎ.ವಿ. ಸ್ಕೂಲು ಚನ್ನಪಟ್ಣ ಹೆ॥ ಮಾ॥ | 55 ರೂ. | 10.8.22 ರಿಂದ 4.1.23 |
| ಶ್ರೀ ಚಾಮರಾಜೇಂದ್ರ ಸಂ॥ ಕಾಲೇಜ್ ಇಂಗ್ಲಿಷ್ ಮತ್ತು ಜನರಲ್ ಸಬ್ಜಕ್ಟ್ಸ್ (45-2-55) | 55 ರೂ. | 5.1.23 ರಿಂದ 30.11.25 |
| The Permanency against | 55 ರೂ. | 1.12.25 ರಿಂದ 26.10.26 |
| ವ್ಯಾಕರಣ ಪ್ರೊ. 50.5.55 ತರ್ಕ ಪ್ರೊ. | 55 ರೂ. | 27.10.26 ರಿಂದ 19.8.27 |
| ಮಿಡಲ್‌ಸ್ಕೂಲು ಫೋರ್ಟ್. ಅ.ಮಾ. | 50+5 ರೂ. | 20.8.27 ರಿಂದ 13.7.28 |
| ಮಿಡಲ್‌ಸ್ಕೂಲು ಫೋರ್ಟ್, ವಿಶ್ವೇಶ್ವರಪುರ, ಹೆ.ಮಾ. | | 14.7.28 ರಿಂದ 21.8.29 |
| ಮಿಡಲ್‌ಸ್ಕೂಲು, ಅ.ಮಾ. | | 22.8.29 ರಿಂದ 26.9.29 |
| ಮಿಡಲ್‌ಸ್ಕೂಲು, ಫೋರ್ಟ್, ಅ.ಮಾ. | | 27.9.29 ರಿಂದ 3.6.30 |
| ಮಿಡಲ್‌ಸ್ಕೂಲು, ಸುಲ್ತಾನ್‌ಪೇಟೆ, ಹೆ.ಮಾ. (Acting) | | 4.6.30 ರಿಂದ 8.6.30 |
| ಮಿಡಲ್‌ಸ್ಕೂಲು, ಫೋರ್ಟ್, ಅ.ಮಾ. | | 5.12.30 ರಿಂದ 8.6.34 |
| ಮಿಡಲ್‌ಸ್ಕೂಲು, ಹೆ.ಮಾ. (Incharge) | | 9.6.34 ರಿಂದ 23.7.34 |
| ಮಿಡಲ್‌ಸ್ಕೂಲು, ಅ.ಮಾ. | | 24.7.34 ರಿಂದ 4.11.35 |

## Leave Statement

21.7.20 ರಿಂದ 21.8.20, 1 ತಿಂಗಳು (Full Day)

25.5.21 ರಿಂದ 16.6.21, 21 ದಿನ (Half Day)

17.10.21 ರಿಂದ 27.10.21, 10 ದಿನ

30.1.22 ರಿಂದ 28.2.22, 1 ತಿಂಗಳು ಕಾಶಿ ?

5.7.22 ರಿಂದ 4.8.22, ಮದ್ದಗಿರಿಯಿಂದವಾಪಸ್ಸು

6.12.25 ರಿಂದ 12.12.25, 6 ದಿನ

1.2.26 ರಿಂದ 11.4.26 29.8.26 ರಿಂದ 27.9.26

6.10.30 ರಿಂದ 6.11.30 2.11.31 ರಿಂದ 2.12.31

ಹಿಂದೆ ಕೊಟ್ಟಿರುವ Service Listಗೆ ಸಪ್ಲಿಮೆಂಟ್ ಇದು. ಚಂದ್ರಶೇಖರಯ್ಯ Pension ಗಾಗಿ ತಯಾರು ಮಾಡಿದ್ದರ ನಕಲು.

(ಇಲ್ಲಿಗೆ ಸ್ವಾಮಿಗಳ ಹಸ್ತಪ್ರತಿ ಮುಗಿಯಿತು)

ಶ್ರೀಶ್ರೀಗಳವರ ಬರವಣಿಗೆ ಇಲ್ಲಿಗೇ ನಿಂತಿತೆಂದು ತೋರುತ್ತದೆ ; ಬರೆದದ್ದು ಸಾಕೆನಿಸಿತೋ, ಬರೆದ ಉತ್ಸಾಹ ಮಾಯವಾಯಿತೋ ತಿಳಿಯದು ; ಇಲ್ಲಿಂದ ಮುಂದೆ, ಅಪೂರ್ಣವಾದ ವಿಷಯವನ್ನು ಅವರ ಶಿಷ್ಯರು ಮುಂದುವರೆಸಿದರು ; 'ಸಂನ್ಯಾಸದ ನಂತರ ಮಹಾಸಮಾಧಿ'ಯವರೆಗೆ ಶ್ರೀಶ್ರೀಗಳವರ ಬಹಳ ಹಿಂದಿನ ಪರಿಚಿತರೂ, ಶಿಷ್ಯರೂ ಆಗಿದ್ದ ಶ್ರೀ ನಂಜಪ್ಪಭಾಗವತರು ಬರೆದರು, ಅಲ್ಲಿಂದಾಚಿನದು ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳದ್ದು ; ಶ್ರೀ ಭಾಗವತರು ಬರೆದದ್ದು ವಿಸ್ತಾರವಾಗಿದ್ದು, ಅಷ್ಟು ಬೇಡ ಎಂದು ಹೇಳಿ ಶ್ರೀಗಳವರೇ ಅದನ್ನು ಮೊಟಕು ಮಾಡಿದರು ; ಹಸ್ತಪ್ರತಿಯಲ್ಲಿ ಮಾತ್ರ ಹೆಚ್ಚು ವ್ಯತ್ಯಾಸ ಕಾಣದ ಮೋಡಿ ಕೈಬಹರವೇ ಇದ್ದು, ಶ್ರೀಶ್ರೀಗಳವರೇ ಬರೆದದ್ದೆನ್ನುವಂತೆ ತೋರುತ್ತಿತ್ತು ; ಆದರೆ ಈ ಭಾಗದ ಬರಹದ ಶೈಲಿ ಕಾಣುವಂತೆ ಬೇರೆಯೇ ಇರುವಂತಿದೆಯಾಗಿ, ಬರೆದವರು ಬೇರೆಯೇ ಎಂದು ಅನಿಸುತ್ತದೆ ; ಅದು ಶ್ರೀ ನಂಜಪ್ಪ ಭಾಗವತರದೇ ಒಕ್ಕಣೆ ; ಹೀಗಾದರೂ ಬರೆದಿರುವದನ್ನು ಶ್ರೀಗಳವರು ನೋಡಿದ್ದರು, ಅವರ ಸಮ್ಮತಿಯಿತ್ತು ಎಂದೂ ತಿಳಿದವರು ಹೇಳುತ್ತಾರೆ.

# 40. ವ್ಯಕ್ತಾವ್ಯಕ್ತ ಕಾರ್ಯಾಲಯ (1945-1946)

## (ಈ ಭಾಗವು ಶ್ರೀಶ್ರೀಗಳವರ ಶಿಷ್ಯರಿಂದ ಮುಂದುವರೆದದ್ದು)

**ಮಂಡೂಕ ಪ್ಲುತಿಃ :**

ಕಾರ್ಯಾಲಯದ ಹುಟ್ಟು, ಬೆಳವಣಿಗೆ, ಜನರ ಪ್ರೋತ್ಸಾಹ, ಜನರಿಗೆ ಅದರಿಂದಾಗುವ ಲಾಭ - ಇವುಗಳೆಲ್ಲವೂ ಯಾವದೋ ಒಂದು ನಿಯಮವನ್ನು ಅನುಸರಿಸಿ ಈಗ ವ್ಯಕ್ತವಾಗಿರುವದು, ಈಗ ಅವ್ಯಕ್ತವಾಗುವದು - ಹೀಗೆಯೇ ನಡೆಯುತ್ತಾ ಬಂದಿವೆ. ರಾಯರು - ವೈ.ಸುಬ್ಬರಾವ್ ಅಥವಾ ಯ.ಸುಬ್ರಹ್ಮಣ್ಯಶರ್ಮಾ ಎಂಬ ಹೆಸರಿನಿಂದ ಪ್ರಸಿದ್ಧರಾಗಿರುವ ವ್ಯಕ್ತಿ ವಿಶೇಷವನ್ನು, ರಾಯರು ಎಂದು ಕರೆಯುವದೇ ನಮಗೆ ಬಹುದಿನಗಳಿಂದಲೂ ರೂಢಿಯಾಗಿಬಿಟ್ಟಿದೆ. ಆದ್ದರಿಂದ ನಾನು ಆ ಹೆಸರಿನಿಂದಲೇ ಅವರನ್ನು ಪರಾಮರ್ಶ ಮಾಡುತ್ತಾ ಹೋಗುವೆನು. ರಾಯರು - ಹುಟ್ಟಿದ್ದು, ಬೆಳೆದದ್ದು, ವಿದ್ಯಾಭ್ಯಾಸ, ಸರಕಾರಿಯ ನೌಕರಿಯಲ್ಲಿದ್ದದ್ದು ಎಲ್ಲವೂ ಸಾಮಾನ್ಯಜನರ ಹುಟ್ಟು, ಬೆಳವಣಿಗೆಗಳನ್ನೇ ಹೋಲುತ್ತದೆ. ತಟ್ಟನೆ ನೋಡುವವರಿಗೆ ಅದರಲ್ಲಿ ಯಾವ ವಿಶೇಷವೂ ಕಾಣುವದಿಲ್ಲ, ಆದರೆ ಒಳಹೊಕ್ಕು ನೋಡುವವರಿಗೆ ಅದರೊಳಗೆ ಅಧ್ಯಾತ್ಮಪ್ರಕಾಶಕಾರ್ಯಾಲಯದ ಬೀಜವು ಹೇಗೋ ಬಿದ್ದು ಅವ್ಯಕ್ತವಾಗಿ ಮೇಲಕ್ಕೇಳುವದರ ಚಿಹ್ನೆಗಳು ಮೊದಲಿಂದಲೂ ಕಾಣುತ್ತವೆ. ಅವರು ಹುಡುಗರಾಗಿದ್ದಾಗ, ವಯಸ್ಕರಾದಾಗ, ಸಂಸಾರಿಗಳಾದಾಗ - ಎಲ್ಲೆಲ್ಲಿಯೂ ಲೌಕಿಕ ವ್ಯಾಪಾರಗಳಿಗೇನೂ ದಾರಿದ್ರ್ಯವಿರಲಿಲ್ಲ. ಆದರೆ ಅವುಗಳಲ್ಲೆಲ್ಲ, ದ್ರಾಕ್ಷಿಯಲ್ಲಿ ರಸವು ತುಂಬಿರುವದು ಹಿಸುಕಿ ನೋಡಿದ ಕೂಡಲೇ ಕಾಣುವಂತೆ ಅಧ್ಯಾತ್ಮದ ರಸವೇ ಕಾಣಬರುತ್ತದೆ. ಅವರು ಯಾವಕೆಲಸವನ್ನು ಮಾಡಿದರೂ ಪರಮೇಶ್ವರನು ಅವರಿಗೆ ಅಲ್ಲಲ್ಲಿ ಸದ್ಗ್ರಂಥ, ಸತ್ಸಂಗ, ಸತ್ವವಿರುವ ಸನ್ಮಿತ್ರರನ್ನು ಒದಗಿಸಿ ಕೊಟ್ಟಿರುತ್ತಾನೆ. ಕೆಲಕೆಲವು ವೇಳೆ ಅವರ ವಿಷಯದಲ್ಲಿ ಉದಾಸೀನ-ರಾಗಿರುವಂತೆ ಕಾಣುವವರೂ - ಉದಾಸೀನರೇಕೆ ? ಅವರಿಗೆ ವಿರುದ್ಧ-ವಾಗಿರುವವರಂತೆ ಕಾಣುವವರೂ ಅವರ ಕಾರ್ಯಕ್ಕೆ ಪ್ರೋತ್ಸಾಹಕರಾಗಿಯೇ ಪರಿಣಮಿಸಿರುತ್ತಾರೆ. ವಿಶೇಷವಾಗಿ ಇದು ಕಡೂರು, ಹೊಳಲುಕೆರೆ, ದಾವಣಗೆರೆ, ಬೆಂಗಳೂರು - ಇವುಗಳಲ್ಲಿ ಅವರು ಇದ್ದಾಗ ಆದ ಘಟನೆಗಳಿಂದ ಎದ್ದುಕಾಣುತ್ತದೆ. ಅವರ ಜೀವನದಲ್ಲಿ ಹುದಗಿದ್ದ ಆಧ್ಯಾತ್ಮಿಕ ಬೀಜವು ಮೊಳೆತು, ಚಿಗುರಿ, ಗಿಡವಾಗಿ, ಮರವಾಗಿ ಬೆಳೆದು, ಹೂ ಹಣ್ಣುಗಳನ್ನು ಬಿಡುವವರೆಗೂ ಮೆಲ್ಲಮೆಲ್ಲಗೆ

ಮುನ್ನಡೆಯುತ್ತಾ ಹೋಗಿದೆ. ಗಿಡವು ಒಂದು ಮರವಾಗಿ ಹೇಗೆ ಹಣ್ಣು ಬಿಟ್ಟಿತೆಂದು ಸ್ಫುಟವಾಗಿ ಇದ್ದರೂ ತಟ್ಟನೆ ನೋಡುವವರಿಗೆ ಗೊತ್ತಾಗುವದಿಲ್ಲ. ಆದರೆ ಅದರ ಬೆಳವಣಿಗೆಯೇನೋ ನಿಶ್ಚಿತವೇ. ಅದರಂತೆ ಕಾರ್ಯಾಲಯವು ಹೊಳೆನರಸೀಪುರಕ್ಕೆ ಬಂದಮೇಲೆ ಹುಲುಸಾಗಿ ಬೆಳೆಯುವ ಚಿಹ್ನೆಗಳನ್ನು ತೋರಿ, ತಟ್ಟನೆ ಅದರ ಬೆಳವಣಿಗೆಯೇ ನಿಂತಂತೆಯೂ ತೋರಿತು. ಇನ್ನು ಮುಂದೆ ಅದು ಹೇಗೆ ಬೆಳೆಯುವದೋ, ಎಲ್ಲಿ ಕವಲು ಒಡೆದುಕೊಳ್ಳಲಿರುವದೋ ಯಾರಿಗೂ ಹೇಳುವದಕ್ಕೆ ಬರುವ ಹಾಗಿರಲಿಲ್ಲ. ಕಪ್ಪೆಯು ನೀರಿನಲ್ಲಿ ಇಲ್ಲಿ ಮುಳುಗಿ ಮತ್ತೆ ಅಲ್ಲಿ ಏಳುವದನ್ನು ನಾವು ನೋಡಿದೇವಷ್ಟೆ ?. ಹಾಗೆಯೇ 1944ನೆಯ ಆಗಸ್ಟ್ ತಿಂಗಳಲ್ಲಿ ಅಧ್ಯಾತ್ಮಪ್ರಕಾಶ ಪತ್ರಿಕೆಯು ನಿಂತುಹೋಯಿತು. ಆ ಸಂಚಿಕೆಯಲ್ಲಿ ಅವರು ಬರೆದ ಸಂಪಾದಕರ ಬಿನ್ನಹದಲ್ಲಿ ಇದನ್ನು ಸ್ಫುಟಪಡಿಸಿರುತ್ತಾರೆ. ''ಮಾನ್ಯವಾಚಕರೆ, ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯು ಪರಮೇಶ್ವರನ ಕೃಪೆಯಿಂದ ತನ್ನ ಹದಿನೈದನೆಯ ಸಂಪುಟವನ್ನು ಮುಗಿಯಿಸಿತು. ಆದರೆ ಹದಿನಾರನೆಯ ಸಂಪುಟವು ಈಗಲೆ ಪ್ರಕಟವಾಗಬಾರದೆಂದು ಭಗವಚ್ಚಿತ್ತಕ್ಕೆ ತೋರಿರುತ್ತದೆ. ಪತ್ರಿಕೆಗೆ ಮುದ್ರಣದ ಸಹಾಯವು ಸ್ವಲ್ಪವೂ ಸಾಲದು. ಕಾರ್ಯಾಲಯದ ಕಟ್ಟಡದ ಅಪೂರ್ಣಸ್ಥಿತಿ, ಸಂಪಾದಕರ ದೇಹಾಲಸ್ಯ , ಮುಖ್ಯವಾಗಿ ಈ ಎರಡು ಕಾರಣಗಳಿಂದ ಬೇರೊಂದು ಕಡೆಯಲ್ಲಿ ಪತ್ರಿಕೆಯನ್ನು ಅಚ್ಚುಮಾಡುವದು ಆಗುವಂತಿಲ್ಲ. ಈ ದೃಷ್ಟಕಾರಣಗಳಿಂದಲೇ ಈಗ ಪತ್ರಿಕೆಯು ನಿಲ್ಲುತ್ತದೆ. ಆದರೆ ಪತ್ರಿಕೆಯು ತಮ್ಮ ಕಣ್ಣಿಗೆ ಗೋಚರಿಸುವ ಸಂಭವವೇ ಹೆಚ್ಚಾಗಿದೆ. ಕಾಲಸ್ಥಿತಿಯು ಸ್ವಲ್ಪ ಮಾರ್ಪಟ್ಟಕೂಡಲೆ ಕಾರ್ಯಾಲಯವು ತನ್ನದೇ ಆದ ಏರ್ಪಾಡುಗಳನ್ನು ಮಾಡಿಕೊಂಡು ಪತ್ರಿಕೆಯನ್ನು ಅವಶ್ಯವಾಗಿ ನಡೆಯಿಸುವದು. ಇದನ್ನು ಓದಿದವರಿಗೆ ಕಾರ್ಯಾಲಯದ ಕಟ್ಟಡವು ಎದ್ದೇ ಏಳುವದು, ಅಲ್ಲಿ ಕಾರ್ಯಕಲಾಪಗಳು ಮುಂದೆ ಆಗಿಯೇ ತೀರುವವು. ಜನರು ಸಹಾಯವನ್ನು ನೀಡದೆ ಇರುವದಿಲ್ಲ, ಕಾರ್ಯಾಲಯಕ್ಕೆ ಸ್ವತಂತ್ರವಾದ ಮುದ್ರಣಾಲಯವೂ ದೊರಕುವದು, ಪತ್ರಿಕೆಯು ಮೊದಲಿಗಿಂತಲೂ ಹೆಚ್ಚಿನ ಸಂಖ್ಯೆಯ ಗ್ರಾಹಕರನ್ನು ಸಂಗ್ರಹಿಸಿಕೊಂಡು ಜನೋಪಕಾರವನ್ನು ಮಾಡದೆ ಇರುವದಿಲ್ಲ- ಎಂಬುದಿಷ್ಟನ್ನು ಭಗವಂತನು ಅವರ ಮಾನಸಚಕ್ಷುಸ್ಸಿನ ಮುಂದೆ ಆಗಲೆ ಸುಳಿದಾಡಿಸಿರಬೇಕೆನ್ನಿಸುತ್ತದೆ ಅಲ್ಲವೆ ?.

## ಅನಿರೀಕ್ಷಿತ ಸಹಾಯ :

ಕಾರ್ಯಾಲಯದಲ್ಲಿ ನವರಾತ್ರಿಯ ಅನುಷ್ಠಾನವಾದದ್ದು 18.9.44 ರಿಂದ. ಆ ಅನುಷ್ಠಾನವು ಆದಷ್ಟು ಬೇಗನೆ ಫಲದಾಯಕವಾಗಬೇಕೆಂದು ಜಗದಂಬೆಯ

ಇಷ್ಟವಾಗಿತ್ತೆಂದು ತೋರುತ್ತದೆ. ಒಂದು ತಿಂಗಳು ಮುಗಿಯುವದರೊಳಗೇ 12.10.44 ರಲ್ಲಿ ನಂ. $A_2$ 171-41/44-45ನೆಯ ಪತ್ರವೊಂದು ಶ್ರೀ ಚಾಮುಂಡಾಂಬೆಯ ಕೃಪಾಕಟಾಕ್ಷಕ್ಕೆ ಪಾತ್ರವಾದ ಅರಮನೆಯಹುಜೂರು ಸೆಕ್ರೆಟರಿಯವರಿಂದ ಬಂದದ್ದನ್ನು ವಿಠ್ಠಲಶಾಸ್ತ್ರಿಗಳು ಕಳುಹಿಸಿಕೊಟ್ಟರು. ಕಾರ್ಯಾಲಯದಲ್ಲಿ ಆವರಗೆ ಪ್ರಕಟಿತವಾಗಿರುವ ಶಂಕರಾಚಾರ್ಯರ ಗ್ರಂಥಗಳ ಒಂದರ ಪ್ರತಿಯೊಂದಂದನ್ನೂ ಕಳುಹಿಸಿಕೊಡಬೇಕೆಂದು ಅದರಲ್ಲಿತ್ತು. ಎಲ್ಲಾ ಗ್ರಂಥಗಳ ಪ್ರತಿಗಳನ್ನು ಕಳುಹಿಸಿ 'ತಮಗೆ ಬೇಕಾದದ್ದನ್ನು ಇಟ್ಟುಕೊಂಡು ಬೇಡವಾದವನ್ನು ವಿಠ್ಠಲಶಾಸ್ತ್ರಿಗಳಿಗೆ ತಿರುಗಿ ಕಳುಹಿಸಿಕೊಡಬೇಕು' ಎಂತ ಕಾರ್ಯಾಲಯದವರು ಪ್ರತ್ಯುತ್ತರವನ್ನು ಬರೆದರು. ಕಾರ್ಯಾಲಯದ ಪರಿಚಯದ ಪತ್ರಿಕೆಯೊಂದನ್ನು ಜೊತೆಯಲ್ಲಿ ಕಳುಹಿಸಲಾಗಿತ್ತು. "ಈವರೆಗೆ ಗೌಡಪಾದಕಾರಿಕೆಯ ಶಂಕರರಭಾಷ್ಯಗಳನ್ನು, ಗೀತಾಭಾಷ್ಯವನ್ನು, ಸೂತ್ರಭಾಷ್ಯದ ಒಂದು ಭಾಗವನ್ನು, ಶಂಕರರ ಕೃತಿಗಳೆಂದು ಪ್ರಸಿದ್ಧವಾಗಿರುವ ಹನ್ನೊಂದು ಪ್ರಕರಣಗಳನ್ನು ಅನುವಾದ ಟಿಪ್ಪಣಿಗಳೊಡನೆ ಪ್ರಕಟಿಸಲಾಗಿದೆ. ಮಿಕ್ಕ ತತ್ತ್ವಶಾಸ್ತ್ರಗಳ ಗ್ರಂಥಗಳನ್ನು ಹೊರಕ್ಕೆ ತರುವದಕ್ಕೆ ಪ್ರಯತ್ನಿಸುವ ಮುನ್ನ ಶ್ರೀಶಂಕರರ ಎಲ್ಲಾ ಗ್ರಂಥಗಳನ್ನು ಪ್ರಕಟಿಸಬೇಕೆಂಬುದು ಕಾರ್ಯಾಲಯದ ಆಶೆ. ಇಂಥ ಗ್ರಂಥಗಳನ್ನು ಪ್ರಕಟಿಸುವದು ಸದ್ಯದ ಆರ್ಥಿಕ ಮತ್ತು ಇತರ ಸಂಕಷ್ಟಗಳ ನಿಮಿತ್ತದಿಂದ ಹಿಂದಕ್ಕೆ ಬಿದ್ದಿದೆ" ಎಂದು ಪತ್ರದಲ್ಲಿ ಬರೆಯಲಾಗಿತ್ತು. ಇದಾದ ಮೇಲೆ 20.10.44 ರಲ್ಲಿ ಹುಜೂರು ಸೆಕ್ರೆಟರಿಗಳು ಸಮ್ಮುಖ ಸಂಭಾಷಣೆಗೆಂದು ನಂ.1150-135/ನೆ ಸಂ. ಪತ್ರವೊಂದನ್ನು ಬರೆದರು. ಮೈಸೂರಲ್ಲಿ ರಾಯರ ಮತ್ತು ಹುಜೂರು ಸೆಕ್ರೆಟರಿ ರಾಮಯ್ಯನವರು ಇಬ್ಬರ ಪರಸ್ಪರ ಸಂಭಾಷಣೆಯ ಫಲವಾಗಿ ಪ್ಯಾಲೇಸ್ ಆಫೀಸಿನ ತಾ|| 24.7.45ನೆ ನಂ 15551/ ಪತ್ರದಲ್ಲಿ ಒಂದು ಕರಾರು ಆಯಿತು. ಸು.ಶರ್ಮರು ಶಂಕರಾಚಾರ್ಯರ ಭಾಷ್ಯಾದಿಗಳನ್ನು ಸಮೂಲವಾಗಿ ಕನ್ನಡಿಸಿ, ಹಿಂದೆ ಅಚ್ಚಾಗಿರುವ ಪುಸ್ತಕಗಳನ್ನು ಸಂಶೋಧನಪೂರ್ವಕವಾಗಿ ಸಂಸ್ಕರಣಮಾಡಿ ಟಿಪ್ಪಣ್ಯಾದಿಗಳೊಡನೆ ಅಚ್ಚು ಮಾಡಿಸಬೇಕೆಂದು ಪ್ರತಿಯೊಂದು ಗ್ರಂಥಕ್ಕೆ ಅರಮನೆಗೆ ಅವರು ಇಷ್ಟಪಟ್ಟ ಪ್ರಕಾರ ರೇಶ್ಮೆ ಕಿತ್ತಾನಾರು ಅಥವಾ ಪೂರಕ್ಯಾಲಿಕೊ, ಅರ್ಧಕ್ಯಾಲಿಕೊ ಬೈಂಡು ಮಾಡಿಸಿ ಇನ್ನೂರು ಪ್ರತಿಗಳನ್ನು ಕೊಡಬೇಕೆಂದೂ, ಪುಸ್ತಕದ ಹಕ್ಕು ಕಾರ್ಯಾಲಯಕ್ಕೆಂದೂ, ಪುಸ್ತಕಕ್ಕೆ ತಗಲುವ ಒಟ್ಟು ಖರ್ಚನ್ನು ಶ್ರೀಮನ್ಮಹಾರಾಜರವರ ಇಷ್ಟಾನುಸಾರ ಕೊಡತಕ್ಕದ್ದೆಂದೂ ನಿರ್ಣಯವಾಯಿತು.

ರಾಯರು ಸರ್ಕಾರದವರ ಅಥವಾ ಮಹಾರಾಜರುಗಳ ಸಹಾಯವನ್ನು ಕೋರುವ ಸ್ವಭಾವದವರಲ್ಲ, ಅವರು ಕಾರ್ಯಾಲಯಕ್ಕೆ ನೆರವು ಬೇಕೆಂದು

ಮಾಸಪತ್ರಿಕೆಯಲ್ಲಿ ಸಾಮಾನ್ಯವಾಗಿ ಪ್ರಕಟಿಸಿದ್ದು ಹೊರತು ಯಾರೊಬ್ಬರನ್ನೂ ವೈಯಕ್ತಿಕವಾಗಿ ಸಹಾಯ ಮಾಡಿರೆಂದು ಕೇಳಿದವರಲ್ಲ. ತತ್ತತ್ಕಾಲಕ್ಕೆ ಒದಗಿದಷ್ಟು ಜನರ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ಉಪಯೋಗಿಸಿಕೊಂಡು ಈವರೆಗೂ ಮುಂದುವರೆದಿದ್ದರು. ನಮ್ಮ ಕಾರ್ಯವನ್ನು ನಾವು ನಿಃಸ್ಪೃಹರಾಗಿ ಮಾಡಿಕೊಂಡು ಹೋಗುತ್ತಿದ್ದರೆ ಸಹಾಯವು ಹೇಗೋ ಯಾರಿಂದಲೋ ಅವಶ್ಯವಾಗಿ ಬಂದೊದಗುತ್ತದೆ ಎಂಬುದು ಅವರ ನಂಬಿಕೆ. ಅವರವರ ಪ್ರಯತ್ನಕ್ಕೆ ಅನುಗುಣವಾಗಿ ಬೇಕಾದ ಸಲಕರಣೆಗಳನ್ನು ಯಾವದಾದರೊಂದು ಸಂದರ್ಭವನ್ನು ನೆಪಮಾಡಿಕೊಂಡು ತನ್ಮೂಲಕ ಒದಗಿಸುವದು ಭಗವಂತನ ಲೀಲೆಯ ಲಕ್ಷಣವೆಂದೇ ಅವರ ನಂಬಿಕೆ. ಅರಮನೆಯಿಂದ ಈ ಅಪ್ರಾರ್ಥಿತವಾದ ಸಹಾಯವು ಅವರಿಗೆ ದೊರೆತ ಬಗೆ ಹೇಗೆ ? ಎಂಬುದನ್ನು ವಾಚಕರ ಕುತೂಹಲ ನಿವೃತ್ತಿಗಾಗಿ ಇಲ್ಲಿ ವಿವರಿಸುವದು ಅಪ್ರಕೃತವಾಗಲಾರದು.

ಮೈಸೂರುರಾಜ್ಯದ ಪ್ರಭುಪರಂಪರೆಯಲ್ಲಿ ವಿದ್ವಾಂಸರುಗಳಿಗೆ ಯಾವಾಗಲೂ ಆಶ್ರಯವು ಇದ್ದೇ ಇತ್ತು. ಆಳಿದ ಕೃಷ್ಣರಾಜಒಡೆಯರೂ ಮತತ್ರಯದ ಗುರುಮನೆಗಳಿಗೂ ಭಕ್ತಿಯಿಂದ ಸಲ್ಲಿಸಿದ ಸೇವೆಯು ಸರ್ವವಿದಿತವಾಗಿದೆ. ವಿಶೇಷವಾಗಿ ಕೂಡಲಿ ಜಗದ್ಗುರುಗಳೆನಿಸಿದ್ದ ಅಭಿನವವಾಲುಕೇಶ್ವರ ಸ್ವಾಮಿಗಳಿಗೆ, ಮೊದಲು ವಿರೂಪಾಕ್ಷಶಾಸ್ತ್ರಿಗಳೆಂಬ ಹೆಸರಿನಿಂದ ಪ್ರಖ್ಯಾತವಾದ ವಿದ್ವಾಂಸರಿಗೆ ಪೂರ್ವಾಶ್ರಮದಲ್ಲಿ ಅವರು ಶೃಂಗೇರಿಯಲ್ಲಿದ್ದಾಗ ವಿದ್ವದ್ವೇತನವನ್ನು ಕೊಡುತ್ತಿದ್ದದ್ದು, ಶಂಕರಮಠಕ್ಕೆ ಬಂದ ಮೇಲೆ ಮೈಸೂರಿಗೆ ಕರೆಯಿಸಿಕೊಂಡು ಸನ್ಮಾನ ಮಾಡುವದು, ಅರಮನೆಯ ಧರ್ಮಾಧಿಕಾರಿತ್ವವನ್ನು ಕೊಡುವದು ಮುಂತಾದ ರೀತಿಗಳಿಂದ ಸಂಭಾವಿಸಿದ್ದು, ಆಶ್ರಮಸ್ವೀಕಾರವಾದ ಮೇಲೆ ಅವರನ್ನು ಮೈಸೂರಿನಲ್ಲಿಯೇ ಅರಮನೆಯ ಖರ್ಚಿನಿಂದಲೇ ಇರಿಸಿಕೊಂಡು, ಅವರಲ್ಲಿ ಸತ್ಕಾಲಕ್ಷೇಪ ಮಾಡುತ್ತಿದ್ದದ್ದು, ಅವರು ಮಹಾಸಮಾಧಿಸ್ಥರಾಗುವವರೆಗೂ ಮಠದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದದ್ದು ಮೈಸೂರಿನ ಪ್ರದೇಶದವರಿಗೆಲ್ಲ ತಿಳಿದಿರುವ ವಿಷಯ. ಆಸ್ಥಾನವಿದ್ವಾಂಸರುಗಳನ್ನು ವಿಧವಿಧದಿಂದ ಸಂಭಾವಿಸು-ತ್ತಿರುವದು ಮೈಸೂರುರಾಜರ ಪಾಳಿಗೆಯಲ್ಲಿ ಆನುವಂಶಿಕವಾಗಿ ಬಂದಿರುತ್ತದೆ. ಶ್ರೀ ಕೃ.ರಾ.ಒಡೆಯರ ತರುವಾಯ ಪಟ್ಟಕ್ಕೇರಿದ ಜಯಚಾಮರಾಜೇಂದ್ರ ಒಡೆಯರವರೇನೂ ವಂಶಾನುಗತವಾದ ಯಶಃಪತಾಕೆಯನ್ನು ಮೇಲಕ್ಕೆತ್ತುತ್ತಲೇ ಬಂದಿದ್ದರು. ಭೂಮಂಡಲ ಯುದ್ಧಾದಿ ಕಾರಣಗಳಿಂದ ಜನರಿಗೆ ಉದ್ಯೋಗವಿಲ್ಲದೆ ಜೀವನೋಪಾಯಕ್ಕೆ ಏನಾದರೂ ಕಲ್ಪಿಸಬೇಕೆಂಬುದು ಪ್ರಭುಗಳವರ ಲಕ್ಷ್ಯದಲ್ಲಿತ್ತು. ಗ್ರಂಥರಚನೆಯಲ್ಲಿ ನಿಪುಣರಾದ ವಿದ್ವಾಂಸರುಗಳಿಗೂ, ಮುದ್ರಾಯಂತ್ರಗಳಿಗೂ

ಉದ್ಯೋಗವು ದೊರಕುವ ಸದ್ಯಃಫಲವೇ ಅಲ್ಲದೆ ಪ್ರಜಾಸಾಮಾನ್ಯಕ್ಕೆ ಸಂಸ್ಕೃತವಾಙ್ಮಯದಲ್ಲಿ ಅಡಗಿರುವ ಸನಾತನಾರ್ಯ ಸಂಸ್ಕೃತಿ ಪ್ರಧಾನವಾದ ಗ್ರಂಥಗಳ ಪರಿಚಯವೂ ಆಗಲೆಂದು ಬೇರೆಬೇರೆಯ ವಿದ್ವಾಂಸರುಗಳಿಂದ ಅಷ್ಟಾದಶಪುರಾಣಗಳನ್ನು ಬರೆಯಿಸಿ, ಅರಮನೆಯ ಇಲಾಖೆಯಿಂದ ಪ್ರಕಟಿಸುವ ಏರ್ಪಾಡುಗಳನ್ನು ಮಾಡಿದರು. ಆ ಕಾಲಕ್ಕೆ ಹುಜೂರು ಸೆಕ್ರೆಟರಿಗಳಾಗಿದ್ದವರು ಟಿ. ರಾಮಯ್ಯನವರು. ಅವರ ಮಾವಂದಿರಾದ ದಿ॥ ಸರ್ಕಲ್ ಇನಸ್ಪೆಕ್ಟರು ಡಿ. ವೆಂಕಟರಾಮಯ್ಯನವರು ಪದ್ಮಪಾದರ ಪಂಚಪಾದಿಕೆಯನ್ನು ಇಂಗ್ಲೀಷಿಗೆ ಪರಿವರ್ತನೆ ಮಾಡಿದ್ದನ್ನು ಶ್ರೀಮನ್ಮಹಾರಾಜರವರಿಗೆ ಒಂದು ಪ್ರತಿ ಅರ್ಪಣೆಮಾಡಲಾಗಿ, ಮಹಾಪ್ರಭುಗಳವರು 'ಇಂಥ ಪುಸ್ತಕಗಳು ಕನ್ನಡಕ್ಕೆ ಬಂದರೆ ಚೆನ್ನಾಗಿದ್ದೀತು' ಎಂದರಂತೆ. ವೆಂಕಟರಾಮಯ್ಯನವರು ತಮ್ಮ ಅಳಿಯಂದಿರಿಗೆ ಈ ವಿಷಯವನ್ನು ತಿಳಿಸಿ, ವೇದಾಂತಭಾಷ್ಯಗಳನ್ನು, ಪುರಾಣಗಳನ್ನು ಸಮೂಲವಾಗಿ ಕನ್ನಡಿಸಿ ಪ್ರಚುರಪಡಿಸಿದರೆ ಜನಗಳಿಗೆ ಉಪಕಾರವಾದೀತೆಂದು ಸೂಚಿಸಿದರು. ಸೆಕ್ರೆಟರಿಗಳು ಅದನ್ನು ಮಹಾರಾಜರಲ್ಲಿ ಪ್ರಸ್ತಾಪಿಸಲಾಗಿ ಅವರು ಸಂತೋಷದಿಂದ 'ಕೂಡಲೇ ಏರ್ಪಾಡುಮಾಡಿರಿ' ಎಂದರಂತೆ. ರಾಮಯ್ಯನವರು ಈ ಕೆಲಸವನ್ನು ಯಾರಿಗೆ ಕೊಟ್ಟರೆ ಆದೀತೆಂದು ಅಲ್ಲಲ್ಲಿ ವಿಚಾರಿಸಿದ್ದರಲ್ಲಿ ಪ್ರೊ. ಹಿರಿಯಣ್ಣನವರು ರಾಯರು ಆಗಲೆ ಭಾಷಾಂತರಿಸಿದ್ದ ಆಗಮಪ್ರಕರಣಸಹಿತ ಮಾಂಡೂಕ್ಯೋಪನಿಷತ್ತನ್ನು ತೋರಿಸಿ (ರಾಯರು ತಿರುಮಕೂಡಲು ನರಸೀಪುರಕ್ಕೆ ಸಪ್ತಾಹಕ್ಕೆಂದು ಹೋಗುವಾಗಲೋ ಅಲ್ಲಿಂದ ಬರುವಾಗಲೋ ಚಿದಂಬರಯ್ಯನವರ ಸೂಚನೆಯಂತೆ ಮಾಂಡೂಕ್ಯದ ಒಂದು ಪ್ರತಿಯನ್ನು ಹಿರಿಯಣ್ಣನವರಿಗೆ ಕೊಟ್ಟಿದ್ದರಂತೆ) 'ವೈ.ಸುಬ್ಬರಾಯರು ಈ ಕೆಲಸವನ್ನು ತೆಗೆದುಕೊಳ್ಳುವದಕ್ಕೆ ಅರ್ಹರು, ಅವರ ವಿಳಾಸವನ್ನು ವಿಠ್ಠಲಶಾಸ್ತ್ರಿಗಳಿಂದ ತಿಳಿದುಕೊಳ್ಳಿ' ಎಂದರಂತೆ. ವಿಠ್ಠಲಶಾಸ್ತ್ರಿಗಳನ್ನು 'ನೀವು ಈ ಅನುವಾದವನ್ನು ಮಾಡುತ್ತೀರ ?' ಎಂದು ಕೇಳಿದ್ದಕ್ಕೆ ರಾಯರೇ ಇದನ್ನು ಮಾಡುವದಕ್ಕೆ ಅರ್ಹರಾದವರು. ಅವರು ತಮ್ಮ ಜೀವನವನ್ನೆಲ್ಲಾ ಇದಕ್ಕೆ ಮೀಸಲಾಗಿರಿಸಿಕೊಂಡಿದ್ದಾರೆ ಎಂದು ಹೊಗಳಿ ಹೇಳಿದ್ದಲ್ಲದೆ ಮುಂದೆ ಹುಜೂರು ಸೆಕ್ರೆಟರಿಯವರಿಗೂ ರಾಯರಿಗೂ ಪರಸ್ಪರ ಸಮಾಗಮವನ್ನು ಏರ್ಪಡಿಸಿ ಮೇಲೆ ಈಗ ಹೇಳಿರುವ ಕರಾರನ್ನು ಮಾಡಿಸಿದರು. ಸೆಕ್ರೆಟರಿ ರಾಮಯ್ಯನವರು ಸರ್ವಸಮ್ಮತವಾಗಿ ರಾಯರನ್ನು ಆರಿಸಿಕೊಂಡರು. ರಾಯರು ಈ ಕೆಲಸವನ್ನೆಲ್ಲಾ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆಂದೇ ಮಾಡುತ್ತಿರುವದಾಗಿ ಹೇಳಿದಾಗ ಅವರಿಗೆ ಬಹಳ ಸಂತೋಷವಾಯಿತು. ಪುಸ್ತಕಗಳ ಕಾಪಿರೈಟ್ (ಹಕ್ಕನ್ನು) ಕಾರ್ಯಾಲಯಕ್ಕೇ ಸೇರಬೇಕೆಂಬುದನ್ನು ಒಪ್ಪಿ ಮಿಕ್ಕ ಗ್ರಂಥಗಳನ್ನು

ಇನ್ನೂರು ಪ್ರತಿಗಳು ಮಾತ್ರವೇ ಮಾಡುವ ಪದ್ಧತಿ ಇತ್ತಾದರೂ ಕಾರ್ಯಾಲಯದ ಗ್ರಂಥಗಳನ್ನು ಒಂದೊಂದು ಸಾವಿರ ಮಾಡಿ ಅರಮನೆಗೆ ಇನ್ನೂರು ಮಾತ್ರ ಕೊಟ್ಟು ಉಳಿದದ್ದನ್ನು ರಾಯರಿಗೇ ಕೊಡಬೇಕೆಂದು ಏರ್ಪಾಟು ಮಾಡಿಕೊಟ್ಟರು. ಒಟ್ಟು ಗ್ರಂಥಕ್ಕೆ ತಗಲಿದ ಕಾಗದ, ಮುದ್ರಣ - ಮುಂತಾದ ಎಲ್ಲಾ ಖರ್ಚನ್ನು ಮಹಾಪ್ರಭುಗಳು ಒಪ್ಪಿಕೊಳ್ಳುವಂತೆ ಏರ್ಪಡಿಸಿದರು. ಚಿದಂಬರಯ್ಯನವರು, ಹಿರಿಯಣ್ಣನವರು, ಡಿ. ವೆಂಕಟರಾಮಯ್ಯನವರು, ಹುಜೂರು ಸೆಕ್ರೆಟರಿಗಳು, ಶ್ರೀ ಜಯಚಾಮರಾಜೇಂದ್ರ ಒಡೆಯರವರು ಇವರುಗಳನ್ನು ಬಗೆಬಗೆಯ ರತ್ನಗಳಂತೆ ಪೋಣಿಸಿ ಶ್ರೀ ಶಂಕರಭಗವತ್ಪಾದರ ಅಮೋಘ ಗ್ರಂಥಗಳನ್ನು ಹೊರಕ್ಕೆ ತರುವದಕ್ಕೆ ಅನುಕೂಲವಾಗಿ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯನ್ನು ಏರ್ಪಡಿಸುವ ಉದಾರಬುದ್ಧಿಯನ್ನು ಮಹಾಪ್ರಭುಗಳಿಗೆ ಇತ್ತ ಆ ಕರುಣಾಳುವಾದ ಭಗವಂತನ ಅಘಟಿತಘಟನಾಸಾಮರ್ಥ್ಯವನ್ನು, ಲೀಲೆಯನ್ನು ಎಷ್ಟೆಂದು ಕೊಂಡಾಡುವದು ?

## ಕಾರ್ಯಾಲಯದ ಇತಿಹಾಸದ ಲೇಖನ :

ಅಧ್ಯಾತ್ಮಪ್ರಕಾಶ ಪತ್ರಿಕೆಯು ತಟ್ಟನೆ ನಿಂತಂತೆ ಆಗಿ ಮುಂದೆ ಯಾವ ಪ್ರಕಟನೆಯೂ ಸದ್ಯಕ್ಕೆ ಆಗುವದಿಲ್ಲವೆಂದು ಕಂಡು ಬಂದ ಕೂಡಲೆ ರಾಯರು ಇದುವರೆಗೆ ಆದ ಕಾರ್ಯಾಲಯದ ಘಟನಾವಳಿಯನ್ನು ಬರೆದಿಡಬೇಕೆಂದು ಮನಸ್ಸು ಮಾಡಿದರು. ಕಾರ್ಯಾಲಯದ ಹುಟ್ಟಿಗೂ ಬೆಳವಣಿಗೆಗೂ ಅವರ ಹುಟ್ಟು ಬೆಳವಣಿಗೆಗಳೇ ತಾಯಿ ಬೇರು, ಮತ್ತು ಸುತ್ತುವರಿಯಬೇರುಗಳು. ಆದ್ದರಿಂದ ತಮ್ಮ ಜೀವನಚರಿತ್ರೆಯನ್ನು ಕಾರ್ಯಾಲಯದ ಇತಿಹಾಸಕ್ಕೆ ಭೂಮಿಕೆಯಾಗಿ ಬರೆಯಲೇಬೇಕಾಯಿತು. ರಾಯರ ಚರಿತ್ರೆಯಲ್ಲಿ ಸತ್ಸಂಗ, ಸದ್ಗ್ರಂಥರಚನ, ಸತ್ಕ್ಷೇತ್ರಸಂಚಾರ - ಮುಂತಾದ ಸಾತ್ವಿಕ ಘಟನೆಗಳು ತುಂಬಿ ತುಳುಕಾಡುವದರಿಂದ ಅ.ಪ್ರ.ಕಾರ್ಯಾಲಯದ ಕ್ರಮಬದ್ಧ ಇತಿಹಾಸವನ್ನು ಓದುವ ಮುನ್ನ ಅವರ ಚರಿತ್ರೆಯನ್ನು ಓದುವ ವಾಚಕರಿಗೆ ಲಾಭದಾಯಕವೇ ಆಗಿರುತ್ತದೆಂಬುದರಲ್ಲಿ ಸಂದೇಹವಿಲ್ಲ. ಹೀಗೆ ಇತಿಹಾಸದ ಲೇಖನವೇನೋ ಸಮೂಲವಾಗಿ ಪ್ರಾರಂಭವಾಯಿತು. ಆದರೂ ಜೀವನದ ನಿಜವಾದ ವೃತ್ತಗಳು ಮುಗಿಯುವದರ ಮುಂಚಿತವಾಗಿಯೆ ಅವುಗಳನ್ನು ಕಥೆಯ ರೂಪದಲ್ಲಿ ಜೋಡಿಸುವದಾದರೂ ಹೇಗೆ ? ರಾಯರು ಮುಗಿಯಿತೆಂದು ತಿಳಿದಿದ್ದ ಕಾರ್ಯಾಲಯದ ವೃತ್ತಾಂತವು ನಿಜವಾಗಿ ಇನ್ನೂ ಅರ್ಧಪಾಲು ಕೂಡಾ

ಸಾಗಿರಲಿಲ್ಲ. ಆದ್ದರಿಂದ ಕಥಾಲೇಖನವು ಸದ್ಯಕ್ಕೆ ಅವಶ್ಯವಿಲ್ಲವೆಂದು ಭಗವಂತನ ಚಿತ್ತಕ್ಕೆ ಬಂದಿರಬೇಕು. ಆದ್ದರಿಂದ ಅವರ ಟಿಪ್ಪಣಿಗಳು ಅಲ್ಲಿಗೇ ನಿಲ್ಲಬೇಕಾಯಿತು. ಇನ್ನು ಮುಂದೆ ಮಾಡಬೇಕಾಗಿರುವ ಮಹಾಕಾರ್ಯಭಾಗಕ್ಕೆ ರಾಯರು ಸೊಂಟವನ್ನು ಕಟ್ಟಿ ನಿಲ್ಲಬೇಕಾಯಿತು.

## ಉಪಸ್ಥಿತವಾಗಿದ್ದ ಕೆಲಸ:

ಈಗ ಮುಂದೆ ಬಂದುನಿಂತ ಕಾರ್ಯವೇನೂ ಸಾಮಾನ್ಯ ಪರಿಮಾಣದ್ದಾಗಿರಲಿಲ್ಲ. ಮೊಟ್ಟಮೊದಲನೆಯ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಗೆ ಪುಸ್ತಕಗಳನ್ನು ಅಚ್ಚಿಗೆ ಸಿದ್ಧಗೊಳಿಸಬೇಕು. ವಿದ್ಯಾಲಯದ ವಿದ್ಯಾರ್ಥಿಗಳಿಗೆ ಬೇರೆಬೇರೆಯ ಅಂತಸ್ತಿನ ಭಾಷ್ಯಪ್ರವಚನಗಳನ್ನು ಮಾಡಬೇಕು, ಈವರೆಗೆ ನಡೆಯುತ್ತಿದ್ದ ಅಧ್ಯಾತ್ಮರಾಮಾಯಣದ ಪುರಾಣವನ್ನು ಜನರಿಗೆ ಹೇಳಬೇಕು, ಕಾರ್ಯಾಲಯದ ಕಟ್ಟಡವನ್ನು ನಿರ್ಮಾಣಮಾಡಿಸಬೇಕು, ಅದಕ್ಕೆ ಧನಸಹಾಯವನ್ನು ಸುಧಾರಿಸಬೇಕು, ವಿದ್ಯಾಲಯಕ್ಕೆ ನಿಧಿಯನ್ನು ಕೂಡಿಹಾಕಬೇಕು. ನಿಯತವಾಗಿ ಪ್ರತಿ ಭಾನುವಾರವೂ ಆಗುತ್ತಿದ್ದ ಉಪನ್ಯಾಸಗಳನ್ನು ಮಾಡಬೇಕು. ಇಷ್ಟು ಕಾರ್ಯಾಗಳನ್ನು ನಡೆಯಿಸುವದಕ್ಕೆ ಒಬ್ಬರೇ ಆಗಬೇಕು! ಆದರೆ ಭಗವಂತನನ್ನು ನಂಬಿದವರು ಎದೆಗುಂದಬೇಕಾದದ್ದೇನು ಇರುವದಿಲ್ಲ. ಕೆಲಸಗಳು ಬಂದೊದಗುವದರೊಳಗೆ ಅದನ್ನು ಮಾಡುವ ಶಕ್ತಿಯನ್ನು ಆ ಕರುಣಾನಿಧಿಯು ದಯಪಾಲಿಸಿಯೇ ಇರುತ್ತಾನೆ. ರಾಯರಿಗೂ ಆ ದಯಾಘನನು ಹಾಗೆಯೇ ಶಕ್ತಿಯನ್ನೂ ಮನಸ್ಥೈರ್ಯವನ್ನೂ ಕೊಟ್ಟನು.

## ಅಧ್ಯಾತ್ಮಕುಟೀರ:

ಅಧ್ಯಾತ್ಮಕುಟೀರವನ್ನು ಕಟ್ಟುವದಕ್ಕೆ ಮೊದಲುಮಾಡಿದ್ದು 1944ನೆಯ ನವೆಂಬರಿನಲ್ಲಿ. ಅದರ ನಿರ್ಮಾಣಕ್ಕೆ ಅನೇಕ ಪ್ರತಿಬಂಧಗಳು ಬಂದವು. ಹಣದ ತೊಂದರೆ, ಕೆಲಸಗಾರರ ಅಭಾವ, ಕಂಟ್ರಾಕ್ಟರುಗಳ ಅಸಹಕಾರ ಅಥವಾ ಮೋಸ, ಕಟ್ಟಡದ ನಿರ್ಮಾಣಕ್ಕೆ ಬೇಕಾದ ಅನುಭವವು ಸಾಲದೇ ಇರುವದು, ಇತರೆ ಕೆಲಸಗಳ ಒತ್ತಡ, ಇಷ್ಟನ್ನು ಎದುರಿಸಿಕೊಂಡು ಆಗಾಗ್ಗೆ ಆದ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾ, ಹಾಗೂ ಹೀಗೂ 1945ನೆಯ ಮಾರ್ಚಿಗೆ ಜಿಂಕುಷೀಟಿನ ಕುಟೀರವು ಸಿದ್ಧವಾಯಿತು. ಅದು ಅರ್ಧಮರ್ಧಸಿದ್ಧವಾದಂದಿನಿಂದ ರಾಯರು ಅಲ್ಲಿಯೇ ಹೋಗಿ, ಮಲಗುವದಕ್ಕೆ ಪ್ರಾರಂಭಿಸಿದರು. ಕ್ರಮವರಿತು ಕುಟೀರಪ್ರವೇಶವಾದ-ಮೇಲೂ ಎಷ್ಟೋ ಕೆಲಸಗಳು ಆಗುವದು ಉಳಿದಿತ್ತು.

## ಜಯಚಾಮರಾಜೇಂದ್ರ ಗ್ರಂಥಮಾಲೆ:

1945-46 ಈ ಎರಡು ವರ್ಷಗಳಲ್ಲಿ ಹೊರಕ್ಕೆ ಬಂದ ಮುಖ್ಯಗ್ರಂಥಗಳೆಂದರೆ, ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯ ನಾಲ್ಕು ಸಂಪುಟಗಳು. ಈ ರತ್ನಮಾಲೆಗೆ ಮೊದಲನೆಯ ಸಂಪುಟದಲ್ಲಿ ಈಶ, ಕೇನ, ಕಠ ಈ ಮೂರು ಉಪನಿಷದ್ಭಾಷ್ಯಗಳನ್ನು ಸೇರಿಸಲಾಯಿತು. ಇವು ಆಗಲೇ ಒಂದು ಸಲ ಅಚ್ಚಾಗಿದ್ದಾದರೂ, ಎರಡನೆಯ ಸಂಸ್ಕರಣಕ್ಕೆ ಮೂಲಭಾಷ್ಯದ ಪಾಠಾಂತರಗಳನ್ನು ಶೋಧಿಸಿ, ಸಂಸ್ಕೃತ ಭಾಷೆಯ ಕನ್ನಡ ಲಿಪಿಯಲ್ಲಿ ಭಾಷ್ಯವನ್ನು ಕೊಟ್ಟದ್ದು. ಕೆಳಗೆ ಕನ್ನಡದ ಅರ್ಥವನ್ನು ಹಾಕಿ ಅಡಿಯಲ್ಲಿ ಪರಿಷ್ಕರಿಸಿದ ಟಿಪ್ಪಣಿಗಳನ್ನು, ಕೊನೆಯಲ್ಲಿ ಗ್ರಂಥದ ಸಾರ, ಭಾಷ್ಯಭಾಗಗಳ ಪರಾಮರ್ಶದೊಂದಿಗೆ ಕ್ಲಿಷ್ಟಪದಗಳ ಅರ್ಥದ ಶಬ್ದಾನುಕ್ರಮಣಿಕೆಯನ್ನು ಕೊಟ್ಟು, ವಿಚಾರಪ್ರಚೋದಕವಾದ ಹೊಸ ಪೀಠಿಕೆಯನ್ನು ಬರೆದದ್ದು ವಿಶೇಷವು. ಕೇನೋಪನಿಷತ್ತಿನ ವಾಕ್ಯಭಾಷ್ಯವನ್ನು ಸಂಪೂರ್ಣವಾಗಿ ಕೊಟ್ಟು, ಪೀಠಿಕೆಯಲ್ಲಿ ಪದವಾಕ್ಯಭಾಷ್ಯಗಳನ್ನು, ತುಲನಾತ್ಮಕದೃಷ್ಟಿಯ ವಿಮರ್ಶೆಯನ್ನು ಹೊಸದಾಗಿಯೇ ಈ ಸಂಸ್ಕರಣಕ್ಕೆ ಬರೆಯಲಾಯಿತು. ಇದೇ ಮಾದರಿಯಲ್ಲಿ ಐತರೇಯ, ತೈತ್ತಿರೀಯ ಭಾಷ್ಯಗಳನ್ನು ಒಂದು ಸಂಪುಟವಾಗಿ, ಮುಂಡಕ, ಪ್ರಶ್ನ, ಮಾಂಡೂಕ್ಯಗಳನ್ನು ಒಂದು ಸಂಪುಟವಾಗಿ, ಅಂತೂ ಮೂರು ಸಂಪುಟಗಳಲ್ಲಿ ಎಂಟು ಉಪನಿಷತ್ತುಗಳನ್ನು, ಭಗವದ್ಗೀತಾಭಾಷ್ಯದ ಮೊದಲನೆಯ ಎಂಟು ಅಧ್ಯಾಯಗಳ ಒಂದು ಸಂಪುಟವನ್ನು ಈ ಎರಡು ವರ್ಷಗಳಲ್ಲಿ ಹೊರಕ್ಕೆ ತರಲಾಯಿತು. ಈ ಗ್ರಂಥಮಾಲೆಯಲ್ಲಿ ಸಂಸ್ಕೃತದ ಮೂಲ-ಭಾಷ್ಯವನ್ನು ಭಾಗಭಾಗಗಳಾಗಿ ವಿಂಗಡಿಸಿ ತಲೆಬರಹಗಳನ್ನು ಕೊಟ್ಟಿರುವದರಿಂದ ಕನ್ನಡಭಾಷಾಂತರವು ಬೇಕಿಲ್ಲದವರಿಗೆ ಕೂಡ ಭಾಷ್ಯದ ರಚನೆಯ ಅನುಕ್ರಮವೇನೆಂಬುದು ಸುಸ್ಪಷ್ಟವಾಗಿ ತಿಳಿಯುವದಕ್ಕೆ ಸಹಾಯ ಸಾಮಗ್ರಿಯು ಮೊದಲನೆಯಬಾರಿಗೆ ದೊರೆತಂತೆ ಆಯಿತು. ಮರಾಠಿ, ಹಿಂದಿ ಈ ಭಾಷೆಗಳಲ್ಲಿಯೂ ಭಾಷ್ಯದಮೂಲವು ದೊರೆಯುತ್ತಿದೆಯಾದರೂ, ಅಲ್ಲಿ ಹೀಗೆ ಭಾಷ್ಯವನ್ನು ವಿಷಯಾನುಗುಣವಾಗಿ ವಿಂಗಡಿಸಿರುವದಿಲ್ಲ, ಉಪಲಬ್ಧವಾಗಿರುವ ಮುಖ್ಯ ಪಾಠಭೇದಗಳೆಲ್ಲವನ್ನು ಕೊಟ್ಟು, ಅವುಗಳೊಳಗೆ ಯಾವ ಪಾಠವು ಏತಕ್ಕೆ ಹೆಚ್ಚು ಆದರಣೀಯವಾದದ್ದು ಎಂಬುದನ್ನು ವಿವೇಚನೆಮಾಡಿರುವದಿಲ್ಲ, ಇಂಗ್ಲೀಷಿನಲ್ಲಿಯೂ, ತೆಲಗು, ಮರಾಠಿ, ಹಿಂದಿ ಮುಂತಾದ ಕೆಲವು ದೇಶ ಭಾಷೆಗಳಲ್ಲಿಯೂ ಭಾಷ್ಯಗಳ ಅನುವಾದವೂ ದೊರಕುತ್ತದೆ. ಆದರೆ ಆ ಅನುವಾದಗಳಲ್ಲಿ ಆನಂದಗಿರಿ, ರತ್ನಪ್ರಭಾಟೀಕೆ, ಭಾಮತಿ - ಮುಂತಾದವುಗಳನ್ನು

ಅನುಸರಿಸುತ್ತದೆಯೇ ಹೊರತು, ಆ ವ್ಯಾಖ್ಯಾನಗಳಲ್ಲಿ ಕಂಡುಬರುವ ಮತಭೇದಗಳನ್ನು ಮನಸ್ಸಿಗೆ ತಂದುಕೊಂಡು ಓದುಗರಿಗೆ ಆ ಭೇದಕ್ಕೆ ಕಾರಣ ವೇನೆಂಬುದಾಗಲೀ, ಭಾಷ್ಯಕಾರರಿಗೆ ಯಾವ ಅರ್ಥವು ಸಂಮತವೆಂಬುದನ್ನಾಗಲೀ ವಿಮರ್ಶಿಸಿ ಅನುವಾದಮಾಡಿಲ್ಲ. ಪ್ರಕೃತ ಭಾಷ್ಯಾನುವಾದಗಳಲ್ಲಿ ರಾಯರು ಅಲ್ಲಲ್ಲಿಗೇ ಕೊಟ್ಟಿರುವ ಅಡಿಯಟಿಪ್ಪಣಿಗಳಲ್ಲಿ ಭಾಷ್ಯದ ಶುದ್ಧಪಾಠವನ್ನು ತೋರಿಸಿ ಕೊಟ್ಟಿರುವದರ ಜೊತೆಗೆ ಈ ಭಾಷ್ಯಕ್ಕೆ ಇದೇ ಅರ್ಥವೇಕೆಂಬುದಕ್ಕೆ ಇನ್ನೊಂದು ಕಡೆಯಲ್ಲಿ ಇದೇ ಉಪನಿಷದ್ಭಾಷ್ಯದಲ್ಲಿ ಅಥವಾ ಮತ್ತೊಂದು ಭಾಷ್ಯದಲ್ಲಿ ಆಚಾರ್ಯರು ಕೊಟ್ಟಿರುವ ಸಮಾನಪ್ರಕರಣದ ವಾಕ್ಯಗಳನ್ನು ಆಧಾರವಾಗಿ ಕೊಟ್ಟಿರುತ್ತದೆ. ಇದರಿಂದ ಭಾಷ್ಯಕಾರರ ಅಭಿಪ್ರಾಯವನ್ನು ಭಾಷ್ಯಕಾರರ ಮಾತುಗಳಿಂದಲೇ ವಿವರಿಸಿದಂತಾಗುವದಲ್ಲದೆ, ತುಲನಾತ್ಮಕ ದೃಷ್ಟಿಯಿಂದ ಭಾಷ್ಯಗಳನ್ನು ಪರಿಶೀಲಿಸಬೇಕೆಂಬವರಿಗೂ ಸಹಾಯವು ದೊರಕಿದಂತಾಯಿತು. ಈ ಭಾಷ್ಯಪ್ರಕಟಣೆಗಳಿಂದಾದ ಇನ್ನೊಂದು ಪರಮಪ್ರಯೋಜನವೇನೆಂದರೆ ಕಾರ್ಯಾಲಯದ ಮೊಟ್ಟಮೊದಲನೆಯ ಉದ್ಗ್ರಂಥವಾದ ಮೂಲಾವಿದ್ಯಾ ನಿರಾಸವು ವಾದಗ್ರಂಥವಾಗಿದ್ದ ಕಾರಣದಿಂದ ರಾಯರು ಸಂಪ್ರದಾಯ ವಿರುದ್ಧವಾಗಿ ಯಾವದೋ ಹೊಸ ಉಪದೇಶಗಳನ್ನು ಪ್ರಚಾರಕ್ಕೆ ತರುತ್ತಿದ್ದಾರೆ ಎಂಬ ಅಪಪ್ರಥೆ (ಅಪಕೀರ್ತಿ) ಬಂದುಬಿಟ್ಟಿತ್ತು. ಆ ಕಾರ್ಮೋಡವು ಚದುರುವದಕ್ಕೆ ಈ ಭಾಷ್ಯಗಳು ಬಿರುಗಾಳಿಯಂತಾದವು. ಏಕೆಂದರೆ ಟಿಪ್ಪಣಿಯಲ್ಲಿ ಯಾವಯಾವ ಸಂದರ್ಭಗಳಲ್ಲಿ ವ್ಯಾಖ್ಯಾನಕಾರರು ಹೇಗೆಹೇಗೆ ಅನವಶ್ಯವಾಗಿ ಮೂಲ ವಾಕ್ಯಗಳನ್ನು ತಿರಿಚಿ ಮೂಲಾವಿದ್ಯಾವಾದಕ್ಕೆ ಹೊಂದುವಂತೆ ಅರ್ಥಮಾಡುವದಕ್ಕೆ ತಿಣುಕಿರುತ್ತಾ-ರೆಂಬುದು ಅಲ್ಲಲ್ಲಿಯೇ ಟಿಪ್ಪಣಿಗಳಲ್ಲಿ ವಿಶದಪಡಿಸಿರುತ್ತದೆ. ಇದರ ಜೊತೆಗೆ, ಪ್ರತಿಯೊಂದು ಭಾಷ್ಯದ ಪೀಠಿಕೆಯಲ್ಲಿಯೂ ಮೂಲಭಾಷ್ಯದ ವಿಶೇಷಾಂಶಗಳನ್ನು, ವ್ಯಾಖ್ಯಾನಕಾರರುಗಳು ಹಿಡಿದಿರುವ ತಪ್ಪುಹಾದಿಯನ್ನೂ ಯಾವಸಂಶಯಕ್ಕೂ ಅವಕಾಶವಿಲ್ಲದಂತೆ ಚರ್ಚಿಸಿ ಓದುಗರ ಮುಂದೆ ಇಟ್ಟಿರುತ್ತದೆ. ಒಟ್ಟಿನಲ್ಲಿ ಹೇಳಿದರೆ ಇಂಥ ಭಾಷ್ಯಾನುವಾದಗಳು ಇಡಿಯ ಭೂಮಂಡಲದಲ್ಲಿ ಯಾವ ಭಾಷೆಯಲ್ಲೂ ಹೀಗೆ ಎಲ್ಲಾ ಬಗೆಯಿಂದ ಚಿತ್ತಾಕರ್ಷಕವಾಗಿ ಬುದ್ಧಿಗೆ ಸಂತೃಪ್ತಿಯನ್ನುಂಟುಮಾಡಿರುವ ಅನುವಾದಗಳು ಆಗಿರುವದೇ ಇಲ್ಲ. ಹೀಗೆನ್ನುವದು ಕೆಚ್ಚೆದೆಯ ಮಾತೆಂದು ಯಾರಿಗಾದರೂ ತೋರುವದು ಸ್ವಾಭಾವಿಕವಾಗಿದೆ, ಆದರೆ ಗುಣವನ್ನು ಹೇಳುವಾಗ ಮತ್ಸರವಿಲ್ಲದೆ ಹೇಳುವದು ವಿಮರ್ಶಕರ ಕರ್ತವ್ಯವಷ್ಟೆ. ಇಂಥ ಭಾಷ್ಯಾನುವಾದಗಳಿಗೆ ಆಶ್ರಯವನ್ನು

ಕೊಟ್ಟದ್ದು ನಮ್ಮ ಮೈಸೂರು ಮಹಾಪ್ರಭುಗಳ ಯಶೋಪತಾಕೆಯನ್ನು ಎತ್ತಿ ಹಿಡಿದಂತೆ ಆಯಿತು. ಅವು ಕನ್ನಡದಲ್ಲಿಯೇ ಮೊಟ್ಟಮೊದಲು ಬಂದಿರುವದು ನಮ್ಮ ನಾಡಿಗೆ ಒಂದು ಹೆಮ್ಮೆಯ ವಿಷಯವಾಯಿತು.

## ಪತ್ರಿಕೆಯ ಪುನರುತ್ಥಾನ :

ಅಧ್ಯಾತ್ಮಪ್ರಕಾಶ ಪತ್ರಿಕೆಯ ಪ್ರಕಟಣೆಯು ಮೂರನೆಯ ಸಲಕ್ಕೆ ನಿಂತದ್ದು ಸೆಪ್ಟೆಂಬರ್ 1946ರರಿಂದ ಮತ್ತೆ ಹುರುಪಿನಿಂದ ಪ್ರಾರಂಭವಾಯಿತು. ಈಗ ಅದನ್ನು ಪ್ರಸಾರಮಾಡುವದಕ್ಕೆ ಹೊಳೆನರಸೀಪುರದಲ್ಲಿ ಪ್ಲೀಡರುಗಳಾದ ಅ. ಶ್ರೀಕಂಠಯ್ಯನವರು, ಆರ್. ರಾಮಸ್ವಾಮಯ್ಯನವರು ಮತ್ತು ಪಿ.ಎನ್. ನರಸಿಂಹಯ್ಯನವರು, ಹೊರಗೆ ವಿ.ಶಾಸ್ತ್ರಿಗಳು, ಮುನಿಸ್ವಾಮಿರಾಯರು ಮೊದಲಾದವರು ಸೊಂಟಕಟ್ಟಿಕೊಂಡು ನಿಂತರು. ಜ.ಚಾ.ಗ್ರಂಥರತ್ನಮಾಲೆಯನ್ನು ಅಚ್ಚುಮಾಡಿಸುವದಕ್ಕೆ ಮೈಸೂರಿಗೆ ಹೋಗಲೇಬೇಕಾಗಿದ್ದದ್ದರಿಂದ ಪತ್ರಿಕೆಯನ್ನು ಮೈಸೂರಿನ ಶಾರದಾ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಮುದ್ರಿಸುವ ಏರ್ಪಾಡು ಮಾಡಲಾಯಿತು. ಲೇಖನಗಳು ಹೊಸ ನಮೂನೆಯಲ್ಲಿದ್ದವು. ಅದರಲ್ಲಿ ತಿಂಗಳಿಗೊಮ್ಮೆ, ಒಂದೊಂದು 'ಸಂಪಾದಕರ ಸಂದೇಶವೂ', ಇತರ ಸಣ್ಣಸಣ್ಣ ಲೇಖನಗಳು ಇರುತ್ತಿದ್ದವು. ರಾಯರು ಕುಟೀರದಲ್ಲಿ ಪ್ರತಿ ಭಾನುವಾರವೂ ಮಾಡುತ್ತಿದ್ದ ಭಗವದ್ಗೀತೆಯ ಉಪನ್ಯಾಸಗಳೂ ಓದುಗರ ಮನಸ್ಸನ್ನು ಸೆಳೆಯುವಂತೆ ಇದ್ದವು. ಆದ್ದರಿಂದ ತಕ್ಕಮಟ್ಟಿನ ಸಂಖ್ಯೆಯಲ್ಲಿ ಚಂದಾದಾರರು ದೊರಕಿದರು. ಪತ್ರಿಕೆಯು ಮತ್ತೊಮ್ಮೆ ಚೇತರಿಸಿಕೊಂಡು ಗರಿಕಟ್ಟಿಕೊಂಡಿತು.

## ಕಟ್ಟಡದ ಬೆಳವಣಿಗೆ :

ಪತ್ರಿಕೆಯ ಹದಿನಾರನೆಯ ಸಂಪುಟವು ಹೊರಕ್ಕೆ ಬರುವಷ್ಟರೊಳಗೆ ಅಧ್ಯಾತ್ಮ ಕುಟೀರವು ಪೂರ್ತಿಯಾಗಿತ್ತು. ಅದರ ಜೊತೆಗೆ ಒಂದು ಸ್ನಾನಗೃಹ, ಅಡಿಗೆಯ ಮನೆ ಮತ್ತು ಉಗ್ರಾಣ ಇವುಗಳುಳ್ಳ ಒಂದು ಮಂಗಳೂರು ಹೆಂಚಿನ ಸಣ್ಣ ಕಟ್ಟಡವೊಂದು ಸಿದ್ಧವಾಗಿತ್ತು. ಕುಟೀರಕ್ಕೆ ಪಾರ್ಥಿವ ಸಂ॥ ಅಧಿಕ ಚೈತ್ರ(1945ನೆಯ ಮಾರ್ಚಿ 15) ಗುರುವಾರ ಇಳಿದುಕೊಂಡಿದ್ದಾಯಿತು. ಹೆಂಚಿನ ಮನೆಯಲ್ಲಿ ಹೋಮಾದಿಗಳನ್ನು ಮಾಡಿ ಅದೇ ವರ್ಷ ಮಾರ್ಗಶಿರ ಬಹುಳ 12 (ಡಿಸೆಂಬರ್ 31)ನೇ ದಿನ ಉಪಯೋಗಿಸಿಕೊಂಡೆವು. ಕಟ್ಟಡ ನಿಧಿಗೆ ಸ್ಥಳಪರಸ್ಥಳಗಳ ಜನರು ಸ್ವಲ್ಪಸ್ವಲ್ಪವಾಗಿ ಸಹಾಯ ಮಾಡುತ್ತಲೇ ಇದ್ದರು.

## ಬಾವಿ :

ಕಟ್ಟಡದಲ್ಲಿರುವವರ ಮತ್ತು ಹೊರಗಿನಿಂದ ಬರುವವರ ಉಪಯೋಗಕ್ಕೆ ಅನುಕೂಲಿಸಲೆಂದು ಒಂದು ಬಾವಿಯನ್ನು ತೆಗೆಯಿಸಲಾಯಿತು. ಕಾರ್ಯಾಲಯಕ್ಕೆ ನಲ್ಲಿ ಇರಬೇಕೆ, ಬಾವಿಯೂ ಬೇಕೆ ಎಂಬ ವಿಷಯಕ್ಕೆ ಜಿಜ್ಞಾಸೆ ನಡೆಯುತ್ತಿತ್ತು. ರಾಯರ ಮನಸ್ಸಿನಲ್ಲಿ ಬಾವಿ ಇರಬೇಕೆಂದೇ ಇತ್ತು. ಎಡತೊರೆಯ ದೇವಸ್ಥಾನದಲ್ಲಿ ಏಕಾಂತ ಮಾಡಿಕೊಂಡಿದ್ದ ಚಂದಗಾಲು ಕಾವೇರಮ್ಮನವರು ಬಾವಿಯನ್ನು ತೆಗೆಯಿಸುವದಾದರೆ ಕೈಯಲ್ಲಾದ ಸಹಾಯವನ್ನು ಮಾಡುವದಾಗಿ ಸೂಚಿಸಿದ್ದರು. ಕೃಷ್ಣರಾಜನಗರದಲ್ಲಿ ಹೊಸದಾಗಿ ಬಾವಿಯನ್ನು ಸುಲಭವಾಗಿ ತೆಗೆಯಿಸುತ್ತಿದ್ದಾರೆ ಎಂಬ ಸುದ್ದಿ ಬಂದು ಅಲ್ಲಿ ವಿಚಾರಿಸಲಾಗಿ ನಾವು ತೆಗೆಯಿಸಿರುವದು ದೊಡ್ಡ ಪ್ರಮಾಣದ ಬಾವಿ, ಅದಕ್ಕೆ ಅಲ್ಲಿಯ ದರಗಳು ಹೊಂದಲಾರವು ಎಂದು ಗೊತ್ತಾಯಿತು. ಹೇಗೆ ಆಗಲಿ ಒಂದು ಬಾವಿಯು ಕಾರ್ಯಾಲಯಕ್ಕೆ ಅತ್ಯವಶ್ಯವೆಂದು ರಾಯರ ಅಭಿಪ್ರಾಯವಿದ್ದದ್ದರಿಂದ, ಏಪ್ರಿಲ್ 24ರಲ್ಲಿ ಎಂದರೆ, ಕಾರ್ಯಾಲಯಕ್ಕೆ ಇಳಿದುಕೊಂಡ ಒಂದು ತಿಂಗಳಿಗೆ ಬಾವಿಯ ಕೆಲಸಕ್ಕೆ ಪ್ರಾರಂಭಿಸಲಾಯಿತು. ಆಗ್ಗೆ ಹೊ.ನ.ಪುರದಲ್ಲಿದ್ದ ಭೂಗರ್ಭಶಾಸ್ತ್ರದ ಇಲಾಖೆಯ ನೌಕರರೊಬ್ಬರು ಮತ್ತು ಪಿ.ಡಬ್ಲ್ಯು.ಡಿ ಇಲಾಖೆಯ ಶ್ರೀನಿವಾಸರಾವ್ ಎಂಬವರೊಬ್ಬರು, ಈ ಇಬ್ಬರ ಸಲಹೆಯಿಂದ ಒಂದು ಸ್ಥಲವನ್ನು ನಿರ್ದೇಶಮಾಡಿಕೊಂಡು ಆರಂಭಿಸಿದೆವು. ಅ.ಪ್ರ.ದ ಹದಿನಾರನೆಯ ಸಂಪುಟದ ಮೊದಲನೆ ಸಂಚಿಕೆ ಮುಂಬರುವ ಹೊತ್ತಿಗೆ ಸೆಪ್ಟೆಂಬರ್ 1946ಕ್ಕೆ ಎರಡು ರಾಟೆಗಳ ಕಲ್ಲುಕಟ್ಟಡಬಾವಿಯು ಸಿದ್ಧವಾಗಿತ್ತು. ಅದಕ್ಕಾಗಿ ಶ್ರೀಮತಿ ಚಂದಗಾಲು ಕಾವೇರಮ್ಮನವರು ಆವರೆಗೆ 500ರೂ ಗಳವರೆಗೂ ಕೊಟ್ಟಿದ್ದರು. ಈಚೆಗೆ ಅವರು ಬಾವಿಗೆ ತಗಲಿದ ಖರ್ಚನ್ನೆಲ್ಲಾ ಪೂರ್ತಿಯಾಗಿ ವಹಿಸಿಕೊಂಡಿರುತ್ತಾರೆ.

## ವಿದ್ಯಾಲಯ :

ಕಟ್ಟಡಕ್ಕೆ ಇಳಿದುಕೊಂಡಂದಿನಿಂದ ವಿದ್ಯಾಲಯವನ್ನು ಕುಟೀರದಲ್ಲಿಯೇ ನಡೆಯಿಸಿದ್ದೆವು. ಸಾಹಿತ್ಯ ವೇದಾಂತವಿದ್ವಾನ್ ಬ್ರ॥ಶ್ರೀ॥ ಕೊಡೂರು ಕೃಷ್ಣಜೋಯಿಸರನ್ನು 13-08-45 ರಿಂದ ವಿದ್ಯಾಲಯಕ್ಕೆ ಉಪಾಧ್ಯಾಯರನ್ನಾಗಿ ನಿಯಮಿಸಿಕೊಳ್ಳಲಾಯಿತು. ರಾಯರು ಅವರ ಜೊತೆಗೆ ಪಾಠಪ್ರವಚನಗಳನ್ನು ಮಾಡುತ್ತಲೇ ಇದ್ದರು.

## ಪುರಾಣಶ್ರವಣ :

ಅಧ್ಯಾತ್ಮ ರಾಮಾಯಣ ಪುರಾಣವನ್ನು ಮುಗಿಯಿಸಿ, ಭಾಗವತ ಪುರಾಣವನ್ನು ಪ್ರಾರಂಭಿಸಲಾಯಿತು. ವಿದ್ವಾನ್ ಕೊ.ಕೃಷ್ಣ ಜೋಯಿಸರು ಪುರಾಣಶ್ರವಣವನ್ನು ಕೈಗೊಂಡಮೇಲೆ ಊರಿನ ಹಲವರು ಮಹನೀಯರು ಅದರ ಲಾಭವನ್ನು ಪಡೆದುಕೊಳ್ಳುವದಕ್ಕೆ ಮೊದಲು ಮಾಡಿದರು.

## ಉಪನ್ಯಾಸಗಳು :

ಅಧ್ಯಾತ್ಮ ಕುಟೀರದಲ್ಲಿ ಪ್ರತಿ ಭಾನುವಾರವೂ 5 ರಿಂದ 6 ಘಂಟೆಯವರೆಗೆ ಉಪನ್ಯಾಸಗಳು ತಪ್ಪದೇ ನಡೆದವು. 09-06-46ರಿಂದ ಭಗವದ್ಗೀತೆಯ ವಿಷಯದ ಉಪನ್ಯಾಸಗಳಾದವು. ಆ ಉಪನ್ಯಾಸಗಳನ್ನು ಪತ್ರಿಕೆಯಲ್ಲಿ ಸ್ವತಂತ್ರ ಪುಟಗಳಾಗಿ ಪ್ರಕಟಿಸಿ ಅವುಗಳ ತೆಗೆದಚ್ಚುಗಳನ್ನು ಭಾಗಭಾಗವಾಗಿ ಜನರಿಗೆ ಓದುವದಕ್ಕೆ ಕೊಡಲಾಯಿತು. ಹೀಗೆ ಭಗವದ್ಗೀತೋಪನ್ಯಾಸಗಳು ಹೊ.ನ.ಪುರದ ಶ್ರೋತೃಗಳಿಗೇ ಅಲ್ಲದೆ ಹೊರಗಿನ ವಾಚಕರುಗಳಿಗೂ ಪ್ರಯೋಜನಕಾರಿಯಾದವು. 1946ರಲ್ಲಿ ವಿಶೇಷ ಸಂದರ್ಭಗಳಲ್ಲಿ ಈ ಉಪನ್ಯಾಸಗಳಾದವು : 'ಭಗವದ್ಗೀತೆಯ ಹೆಚ್ಚುಗಾರಿಕೆ' (ವೈ.ಚಂದ್ರಶೇಖರ ಶಾಸ್ತ್ರಿಗಳು) 'ಉಪಾಕರ್ಮ', 'ಶ್ರೀಕೃಷ್ಣಾವತಾರ', 'ಗಣೇಶ' (ರಾಯರು) ನಮ್ಮ ಗುರುಗಳು (ನಂ. ಭಾಗವತರು) ನವರಾತ್ರೆಯ ಉಪನ್ಯಾಸಗಳನ್ನು ಪತ್ರಿಕೆಯಲ್ಲಿ ಅಚ್ಚುಪಡಿಸಲಾಗಿದೆ.

## ಅನುಷ್ಠಾನಗಳು :

ನವರಾತ್ರೆಯ ಅನುಷ್ಠಾನ ಆಶ್ವಿಜ ಶುದ್ಧ ಪಾಡ್ಯ (26-09-46) ದಿಂದ (5-10-46) ಶುದ್ಧ ದಶಮಿಯವರೆಗೆ ನಡೆಯಿತು. ಹಿಂದಿನ ಅನುಷ್ಠಾನದಂತೆ ಈಗಲೂ ಭಾಷ್ಯಪಾರಾಯಣ, ರಾಮಮಂತ್ರಾದಿಗಳ ಜಪ, ಸೂರ್ಯನಮಸ್ಕಾರ, ವೇದಪಾರಾಯಣ, ದೇವರಿಗೆ ಅಭಿಷೇಕ, ಪೂಜೆ, ಮಂಗಳಾರತಿ - ಮುಂತಾದವುಗಳನ್ನು ಏರ್ಪಡಿಸಲಾಗಿತ್ತು. ಸಂಜೆ 5 ರಿಂದ 6 ರವರೆಗೆ ಪ್ರತಿದಿನವೂ ಚತುರ್ಭುಜ ಪಟ್ಟಾಭಿರಾಮ ದೇವಸ್ಥಾನದಲ್ಲಿ ಉಪನ್ಯಾಸಗಳೂ, ಕೀರ್ತನೆಗಳೂ ಆದವು. 'ನವರಾತ್ರೆಯ ಮಹತ್ವ' (ರಾಯರು), 'ತುಲಾಧಾರನ (ಮಹಾಭಾರತದ ಮೋಕ್ಷಧರ್ಮಪರ್ವದಲ್ಲಿ ಜಾಜಲಿಯೆಂಬಾತನಿಗೆ ಮಾಡಿದ) ಉಪದೇಶ' (ನಂಜನಗೂಡು ಚನ್ನಕೇಶವಯ್ಯನವರು), 'ಅನುಷ್ಠಾನದ ತಿರುಳು' (ವಿಠ್ಠಲ-ಶಾಸ್ತ್ರಿಗಳು), ದುರ್ಗಾಶಕ್ತಿತತ್ತ್ವ (ವೈ. ಚಂದ್ರಶೇಖರ ಶಾಸ್ತ್ರಿಗಳು), 'ಗುರುಸ್ಮರಣೆ' (ನಂ.ಭಾಗವತರು), 'ಭಜನೆ' (ರಾಯರು), 'ಸತ್ಸಂಗ' (ಅನಂತಮೂರ್ತಿ

ಶಾಸ್ತ್ರಿಗಳು). ಮಾರ್ಗಶೀರ್ಷದಲ್ಲಿ ಗೀತಾಜಯಂತಿ, ಗೋಂದಾವಲೆ ಮಹಾರಾಜರವರ ಪುಣ್ಯದಿನ ಇವುಗಳ ಪ್ರಯುಕ್ತವಾದ ಅನುಷ್ಠಾನಗಳೂ ನಡೆದವು. ಡಿಸೆಂಬರ್ 12ರಲ್ಲಿ ಗೋಂದಾವಲೆ ಮಹಾರಾಜರ ಆರಾಧನೆ, ಬೆಳಿಗ್ಗೆ ಅಭಿಷೇಕ, ಪಾರಾಯಣ, ಭಜನೆಗಳು, ಸಾಯಂಕಾಲ ಚತುರ್ಭುಜ ಪಟ್ಟಾಭಿರಾಮ ದೇವಸ್ಥಾನದಲ್ಲಿ 'ಸದ್ಗುರುಮಹಿಮೆ'. 1946ರ ಡಿಸೆಂಬರ್ 4,5,6 ಈ ದಿನಾಂಕಗಳಲ್ಲಿ ಗೀತಾಜಯಂತಿಯ ಅನುಷ್ಠಾನವಾಯಿತು. ಪ್ರತಿದಿನವೂ ಗೀತಾಪಾರಾಯಣ ಮಂಗಳಾರತಿ ನಡೆಯುತ್ತಿತ್ತು. ಕೊನೆಯ ದಿನ ಗೀತೆಯ ಅಖಂಡ ಪಾರಾಯಣವಾಯಿತು. ಪ್ರತಿದಿನವೂ ಸಾಯಂಕಾಲ ಭಜನೆ, ಚ.ಪ.ದೇವಸ್ಥಾನದಲ್ಲಿ ಕೋ.ಕೃಷ್ಣಶಾಸ್ತ್ರಿಗಳು ಗೀತಾ 13-22ರ ವಿವರಣೆ, ವಿ.ಶಾಸ್ತ್ರಿಗಳು ಗೀತಾತಾತ್ಪರ್ಯನಿರ್ಣಯ, ಸುಬ್ರಹ್ಮಣ್ಯಶರ್ಮ ಗೀತಾಜಯಂತಿಯ ಅನುಷ್ಠಾನ, ನಂ.ಭಾಗವತರು ಭಕ್ತಿಯೋಗ ಹೀಗೆ ಉಪನ್ಯಾಸಗಳು ನಡೆದವು.

## ಪುಸ್ತಕ ಭಂಡಾರ :

ವೈ.ಚಂದ್ರಶೇಖರಶಾಸ್ತ್ರಿಗಳೂ, ಚನ್ನಕೇಶವಯ್ಯನವರೂ ಕೆಲವು ಪುಸ್ತಕಗಳನ್ನು ದಾನವಾಗಿತ್ತರು. ವೇದಾಂತ ದೇಶಿಕರಗ್ರಂಥಮಾಲೆ, ಶ್ರೀ ರಾಮಾನುಜಗ್ರಂಥಮಾಲೆ, ತತ್ತ್ವಮೈತ್ರಾಯಣಿ, ಕಾಠಕ, ತೈತ್ತಿರೀಯ ಸಂಹಿತೆಗಳು, ಬೃಹದಾರಣ್ಯಕ, ಶ್ವೇತಾಶ್ವತರೋಪನಿಷತ್ತುಗಳು, ಸಾಂಖ್ಯಕಾರಿಕ, ತತ್ತ್ವಕೌಮುದೀ, ಇವುಗಳನ್ನು ಕೊಳ್ಳಲಾಯಿತು.

## ಶಂಕರಸಪ್ತಾಹಗಳು :

ಪಾರ್ಥಿವ ಸಂವತ್ಸರದ (1945) ಸಪ್ತಾಹವು ಚಿಕ್ಕಮಗಳೂರಿನಲ್ಲಿ ಓಂಕಾರೇಶ್ವರ ದೇವಾಲಯದ ಅಂಗಳದಲ್ಲಿಯೂ, ವ್ಯಯ ಸಂವತ್ಸರದ (1946) ಸಪ್ತಾಹವು ಬೆಂಗಳೂರಿನಲ್ಲಿ ಬಸವನಗುಡಿಯ ಕರಣಿಕರ ಪಾಠಶಾಲೆಗಳಲ್ಲಿಯೂ ನಡೆದವು.

ಚಿಕ್ಕಮಗಳೂರಿನಲ್ಲಿ ನಡೆದ ಶಂಕರ ಸಪ್ತಾಹವು ಮುಖ್ಯವಾಗಿ ಕಾಫಿ ಪ್ಲಾಂಟರ್ ಮಂಜುನಾಥ ಅಯ್ಯರ್ ಬಿ.ಎ, ಇವರ ಪ್ರೋತ್ಸಾಹದಿಂದಲೇ ನಡೆಯಿತು. ಸುಪ್ರಸಿದ್ಧ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶ್ರೀಧರಸ್ವಾಮಿಗಳವರು ಸಂನಿಹಿತರಾಗಿದ್ದು ಉತ್ಸವವನ್ನು ಆಶೀರ್ವದಿಸಿದರು. ವಾಚಕರಿಗೆ ಆಗಲೆ ಪರಿಚಿತರಾಗಿರುವ ಅನಂತಮೂರ್ತಿಶಾಸ್ತ್ರಿಗಳು, ವಿಠ್ಠಲ ಶಾಸ್ತ್ರಿಗಳು, ಪಾಟಣಕರ್

ಚಂದ್ರಶೇಖರಭಟ್ಟರು, ನಂ.ಭಾಗವತರು, ರಾಮದಾಸರು ಇವರುಗಳಲ್ಲದೆ ಬ್ರ॥ ಶ್ರೀ॥ ವೇದಾಂತ ಮೀಮಾಂಸಾ ವಿದ್ವಾನ್, ಸಾಹಿತ್ಯ ಶಿರೋಮಣಿ, ವಿದ್ವಾನ್ ಶಂಕರಶಾಸ್ತ್ರಿಗಳು (ಬೇಲೂರು ಪಾಠಶಾಲೆ), ವೇದ ಪ್ರಯೋಗ ವಿದ್ವಾನ್ ಕೇಶವಮೂರ್ತಿಘನಪಾಠಿಗಳು (ಶಿವಮೊಗ್ಗ ವೇದಪಾಠಶಾಲೆ), ಬಿ.ರಾಮಭಟ್ಟರು (ಶೃಂಗೇರಿ ಪಾಠಶಾಲೆ) ಇವರುಗಳು ಸಹಕರಿಸಿದರು. ಶ್ರೀ ಶ್ರೀಧರಸ್ವಾಮಿಗಳು ಉಪದೇಶಮಾಡಿದರು. ಕಾಫಿ ಪ್ಲಾಂಟರ್ ಮಂಜುನಾಥ ಅಯ್ಯರ್‌ರವರು ಮತ್ತು ಚಿಕ್ಕಮಗಳೂರಿನ ಅವರ ಮಿತ್ರರುಗಳು ಬಂದ ಅತಿಥಿಗಳಿಗೆಲ್ಲ ಭೋಜನಾದಿಗಳಿಗೆ ಏರ್ಪಾಡುಮಾಡಿದ್ದರು. ವಿದ್ವಾಂಸರುಗಳಿಗೆ ಸಂಭಾವನೆಯನ್ನು ಕೊಟ್ಟು ಸತ್ಕರಿಸಿದರು. ಈ ಸಂದರ್ಭದಲ್ಲಿ ಕಾರ್ಯಾಲಯಕ್ಕೆ ಕೆಲವರು ಮಹಾಶಯರುಗಳು ಯಥೋಚಿತವಾಗಿ ಕಾಣಿಕೆಯನ್ನು ಕೊಟ್ಟರು. ಬೆಂಗಳೂರಿನಲ್ಲಿ ಶಂಕರಶಾಸ್ತ್ರಿಗಳು, ಕೊ.ಕೃಷ್ಣಜೋಯಿಸರು, ಗಣೇಶಶಾಸ್ತ್ರಿಗಳು ಈ ಮಹಾಶಯರುಗಳು ಸಹಕರಿಸಿದರು. ಚಿಕ್ಕಮಗಳೂರಿನಲ್ಲಿ ಆದ ರಾಯರ ಉಪನ್ಯಾಸಗಳು ಶ್ರೀ 'ಶಂಕರಾಚಾರ್ಯರ ಸಂದೇಶ', 'ಆನಂದ ಬ್ರಹ್ಮ', 'ಅಧಿಕಾರ', 'ಅದ್ವೈತವೂ ಭಾಷೆಯೂ'. ಹೀಗೆ ಬಿಡಿಬಿಡಿಯ ವಿಷಯಗಳನ್ನು ಕುರಿತು ಆದವು. ಆದರೆ ಬೆಂಗಳೂರಿನಲ್ಲಿ ಶಂಕರಯ್ಯಹಾಲ್‌ನಲ್ಲಿ ಆದ ಉಪನ್ಯಾಸಗಳು ಶಂಕರ ಭಗವತ್ಪಾದರ ಅದ್ವೈತಕ್ಕೂ ಮಿಕ್ಕ ಅದ್ವೈತಗಳಿಗೂ, ಶಂ.ಅದ್ವೈತಕ್ಕೂ ಇತರ ದರ್ಶನಗಳಿಗೂ ಇರುವ ಸಂಬಂಧವನ್ನು ಕುರಿತು ಸಂಬದ್ಧವಾಗಿ ನಡೆದವು. ಬೆಂಗಳೂರಿನ ಜನರು ರಾಯರ ಉಪನ್ಯಾಸಮಾಲೆಯನ್ನು ಕೇಳಿದ್ದು ಇದೇ ಮೊದಲು ಎನ್ನಬಹುದು. ಶ್ರೋತೃಗಳ ಸಂಖ್ಯೆಯು ದಿನದಿನಕ್ಕೂ ಹೆಚ್ಚುತ್ತಲಿತ್ತು.

### ಕೀರ್ತನೆಗಳು :

ಆಷಾಢ ಶು. ಏಕಾದಶಿಯಿಂದಲಾಗಿ ಪ್ರತಿ ಏಕಾದಶಿಯ ದಿನವೂ ಶ್ರೀ ನಂ. ಭಾಗವತರು ಹಲವು ಕೀರ್ತನೆಗಳನ್ನು ಮಾಡುತ್ತಿದ್ದರು . ಹಿಮ್ಮೇಳವೇನೂ ಇಲ್ಲದಿದ್ದರೂ ಭಕ್ತಿಪರವಾಗಿದ್ದ ಆ ಕೀರ್ತನೆಗಳು ಶ್ರೋತೃಗಳ ಹೃದಯಕ್ಕೆ ಮೆಚ್ಚಾಗಿದ್ದವು .

### ಪೂಜಾಮಂದಿರ :

ಈ ಕಾಲದಲ್ಲಿ ಕಾರ್ಯಾಲಯವು ಮತ್ತೊಂದು ದಿಕ್ಕಿನಲ್ಲಿ ಹೆಜ್ಜೆಯನ್ನು ಇಟ್ಟಿತು. ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ತಮ್ಮ ಜ್ಯೇಷ್ಠಪತ್ನೀ ಸಾವಿತ್ರಮ್ಮನವರ ಸ್ಮಾರಕವಾಗಿ 250 ರೂ. ಗಳನ್ನು ಕಳುಹಿಸಿ ಅದನ್ನು ಸೂಕ್ತ ಕಂಡಂತೆ

ಉಪಯೋಗಿಸಿಕೊಳ್ಳಬಹುದೆಂದು ತಿಳಿಸಿದರು. ಆ ಹಣವನ್ನು ಕಾರ್ಯಾಲಯಕ್ಕೆ ನಿರ್ಮಾಣವಾಗಬೇಕಾಗಿದ್ದ ಪೂಜಾಮಂದಿರ ನಿಧಿಗೆ ಬೀಜಧನವಾಗಿ ಉಪಯೋಗಿಸಿಕೊಳ್ಳಬಹುದೆಂದು ನಿಶ್ಚಯಿಸಲಾಯಿತು. ಕಾರ್ಯಾಲಯಕ್ಕೆ ಬರುವವರಿಗೆ ಪರಮೇಶ್ವರನದರ್ಶನ ಸೇವಾದಿಗಳ ಲಾಭವು ದೊರೆಯ ಬೇಕೆಂಬುದೇ ಇದರ ಉದ್ದೇಶವು.

## ಮಹಾಜನರ ಪ್ರೋತ್ಸಾಹ:

ಕಾರ್ಯಾಲಯವು ತನ್ನ ಕೆಲಸದಲ್ಲಿ ಹೆಚ್ಚಿನ ಆಸಕ್ತಿಯನ್ನು ಕಾರ್ಯರೂಪದಿಂದ ತೋರಿಸುವದಕ್ಕೆ ಬಂದಂತೆಲ್ಲ ಮಹಾಜನರ ಪ್ರೋತ್ಸಾಹವೂ ತಕ್ಕಷ್ಟು ದೊರೆಯುತ್ತಲೇ ಇತ್ತು, ಕಾರ್ಯಾಲಯದಲ್ಲಿ ಆಗಲೆ ಆಗುತ್ತಿದ್ದ ಅನುಷ್ಠಾನಗಳು, ಉತ್ಸವಗಳು, ಮುಂತಾದದ್ದಕ್ಕೆ ಮಹಾಜನರು ಹಂಚಿಕೊಂಡು ಯಥೋಚಿತ ಧನಸಹಾಯವನ್ನು ಮಾಡಿದ್ದಲ್ಲದೆ, ಪರಸ್ಥಳದಿಂದ ಬಂದ ವಿದ್ವಾಂಸರುಗಳಿಗೆ ಭೋಜನಾದಿಗಳಿಗೂ ಏರ್ಪಾಡುಮಾಡಿ ಪುಣ್ಯವನ್ನು ಗಳಿಸಿಕೊಂಡರು. ಇದರ ಜೊತೆಗೆ ಪ್ರಕಟನ ನಿಧಿ, ಕಟ್ಟಡದ ನಿಧಿ, ವಿದ್ಯಾಲಯದ ನಿಧಿ, ಪುಸ್ತಕಭಂಡಾರ, ಪತ್ರಿಕಾ ನಿಧಿ ಮುಂತಾದವುಗಳಿಗೆ ಸಹಾಯವನ್ನು ಮಾಡುತ್ತಾ ಬಂದರು. ಇವುಗಳನ್ನೆಲ್ಲ 'ನಿಧಿ' ಎಂದು ನಾವು ಕರೆದಿದ್ದರೂ ಆ ಹಣಗಳನ್ನು ಶೇಖರಿಸಿ ಯಾವ ಬ್ಯಾಂಕಿನಲ್ಲಿಯೂ ಇಡುತ್ತಿರಲಿಲ್ಲ, ಆಯಾ ಖಾತೆಗಳಿಗೆ ಆಗಾಗ್ಗೆ ಖರ್ಚುಮಾಡುತ್ತಲೇ ಇದ್ದೆವು. 1946 ನೆ ಸೆಪ್ಟೆಂಬರ್ ತಿಂಗಳಿನ ಅ.ಪ್ರ.ಸಂಚಿಕೆಯಲ್ಲಿ ಕೊಟ್ಟಿರುವ ಕಾರ್ಯಾಲಯದ ಪರಿಚಯದಲ್ಲಿ ಸೂಚಿತವಾಗಿರುವ ಮಹಾಶಯರ ಹೆಸರುಗಳಿಂದ ಮಹಾಜನರ ಸಹಾಯವನ್ನು ಸ್ವಲ್ಪಮಟ್ಟಿಗೆ ಊಹಿಸಕೊಳ್ಳಬಹುದು.

## ಆಶ್ರಯದಾತರುಗಳು:

1) ರಾಜಧರ್ಮಪ್ರಸಕ್ತ ಎ.ಆರ್. ನಾಗೇಶ್ವರಯ್ಯರ್ ಬಿ.ಎ. ಬಿ.ಎಲ್. ರಿ॥ ಹೈಕೋರ್ಟುಜಡ್ಜ್, ಬೆಂಗಳೂರು.
2) ಶ್ರೀಯುತರುಗಳಾದ ಬಿ. ನಂಜುಂಡಯ್ಯನವರು ಬಿ.ಎ. ಬಿ.ಎಲ್. ಅಡ್ವೋಕೇಟ್, ಬೆಂಗಳೂರು.
3) ಪಿ.ಎನ್. ನರಸಿಂಹಯ್ಯನವರು ಪ್ಲೀಡರ್, ಹೊಳೆನರಸೀಪುರ.
4) ಗರಡಿ ರಾಚಪ್ಪನವರು, ಬೆಂಗಳೂರು.
5) ಅರಕಲಗೂಡು ಶ್ರೀಕಂಠಯ್ಯನವರು.

6) ವೈ.ಎಸ್. ಹಿರಿಯಣ್ಣನವರು ಗೌರ್ನಮೆಂಟ್ ಕಂಟ್ರಾಕ್ಟರ್, ಬೆಂಗಳೂರು.
7) ಪಿ . ಎಸ್. ಸೂರ್ಯನಾರಣಪ್ಪನವರು, ಸರ್ವೆಯರ್, ಬೆಂಗಳೂರು.
8) ಎಚ್. ವಿ. ರಂಗರಾವ್, ಜಮೀನುದಾರರು, ಹೊಳಲ್ಕೆರೆ.
9) ಶ್ರೀ ದಿವಂಗತ ಆರ್.ಎಸ್. ಶ್ರೀನಿವಾಸಯ್ಯನವರು ಪ್ಲೀಡರ್, ಹೊಳೆನರಸೀಪುರ.

**ಮಹಾಪೋಷಕರುಗಳು :**

1) ಕೆ.ಶ್ರೀಕಂಠಯ್ಯನವರು, ಲೇಬರ್ ಸ್ಟಾಟಿಸ್ಟಿಕಲ್ ಆಫೀಸರ್ ಬಂ.ನಾ.ರೈಲ್ವೆ
2) ಆರ್. ರಾಮಸ್ವಾಮಯ್ಯನವರು, ಪ್ಲೀಡರ್,ಹೊಳೆನರಸೀಪುರ.
3) ದಿವಂಗತ ಕೆ. ನಾರಾಯಣಸ್ವಾಮಿ, ಬಿ.ಇ. ಅ॥ ಇಂಜಿನಿಯರ್

**ಪೋಷಕರುಗಳು :**

1) ಆಸ್ಥಾನ ಮಹಾವಿದ್ವಾನ್ ವೈ. ಚಂದ್ರಶೇಖರಶಾಸ್ತ್ರಿಗಳು, ಮೈಸೂರು.
2) ಆ.ವಿ. ಬ್ರ॥ಶ್ರೀ॥ಎನ್.ವಿ.ಶಾಸ್ತ್ರಿಗಳು ವೇದಾಂತ ಶಿರೋಮಣಿಗಳು.
3) ವೇ॥ ಡಿ. ನಂಜುಂಡಶಾಸ್ತ್ರಿಗಳು ದೊಡ್ಡಹೆಜ್ಜಾಜಿ, ದೊಡ್ಡಬಳ್ಳಾಪುರ
4) ಗುರುಮೂರ್ತಪ್ಪನವರು, ನಾಟಕಮಂಡಲಿ.
5) ಎಸ್.ವಿ. ವೆಂಕಟಸುಬ್ಬಯ್ಯನವರು,ಹರಪ್ಪನಹಳ್ಳಿ, ಬಳ್ಳಾರಿ
6) ಓಂಕಾರಪ್ಪ ವೀರಭದ್ರಪ್ಪ ಆರಳಿಕಟ್ಟಿ, ಇಲಕಲ್ಲು, ಬಿಜಾಪುರ.
7) ಶ್ರೀ ಗುರು ಶಂಕರಾಚಾರ್ಯ ಆಶ್ರಮ, ಮೂಡಲದಿಣ್ಣೆ, ರಾಯಚೂರು ಜಿಲ್ಲೆ.
8) ಎನ್.ವಿ. ಗಣಪತಿ ಎ.ಇ.ಇ. ಕನ್ಸಲ್‌ಟಿಂಗ್ ಇಂಜಿನಿಯರ್, ಮದರಾಸ್.
9) ಧರ್ಮಪಾಲಯ್ಯನವರು, ಮಂಗಳೂರು.
10) ಬಿ.ಹೆಚ್. ಮುನಿಸ್ವಾಮಿರಾವ್, ಬೆಂಗಳೂರು.
11) ಕೃಷ್ಣಗೌಡ ಹನುಮಂತಗೌಡ ಆದಪ್ಪಗೌಡರು, ಹುಲುಕೋಟಿ.
12) ಶ್ರೀಮತಿ ಸರೋಜಮ್ಮನವರು, ಹೊಳೆನರಸೀಪುರ.

ಈ ಪಟ್ಟಿಯಲ್ಲಿ 'ಮುಖ್ಯವಾಗಿ ಕಾರ್ಯಾಲಯದ ಪ್ರಕಟಣೆಗಳಿಗೆ ಅಥವಾ ಪತ್ರಿಕೆಗೆ ಪ್ರೋತ್ಸಾಹವನ್ನು ಕೊಟ್ಟವರು, ಪು.ಭಂಡಾರಕ್ಕೆ ಪುಸ್ತಕಗಳನ್ನು ಕೊಟ್ಟವರು,

ಕಾರ್ಯಾಲಯಕ್ಕೆ ನೆಲಗಟ್ಟನ್ನು ದಾನಮಾಡಿದವರು - ಇವರ ಹೆಸರುಗಳನ್ನು ಮಟ್ಟಿಗೆ ಸೇರಿಸಿರುತ್ತದೆ ಎಂದು ಬರೆದಿದೆ. ಆದ್ದರಿಂದ ಕಟ್ಟಡನಿಧಿ, ಬಾವಿ, ವಿದ್ಯಾನಿಧಿ ಮುಂತಾದವುಗಳಿಗೆ ದಾನ ಮಾಡಿದವರ ಹೆಸರುಗಳು ಇಲ್ಲಿ ಇರುವದಿಲ್ಲವೆಂಬುದು ಸ್ಪಷ್ಟವಾಗಿದೆ. ಪಟ್ಟಿಯಲ್ಲಿನ್ಯೂನಾತಿರಿಕ್ತಗಳು ಇವೆ. ಉದಾಹರಣೆಗೆ ಪುಸ್ತಕ ಭಂಡಾರಕ್ಕೆ ಉದಾರ ದಾನವನ್ನು ಮಾಡಿದ್ದ ಶ್ಯಾಮರಾವ್, ಕೂಡಲಿ ಸುಬ್ಬರಾವ್ ಮುಂತಾದ ಕೆಲವರ ಹೆಸರು ಇಲ್ಲಿಲ್ಲ. ಕಾರ್ಯಾಲಯದ ಲೆಕ್ಕವನ್ನು ವ್ಯವಸ್ಥೆಯಿಂದ ಇಡುವದು ಇನ್ನೂ ಕ್ರಮ ಪಟ್ಟಿರಲಿಲ್ಲವೆಂಬುದೇ ಇದಕ್ಕೆ ಕಾರಣ. ಈ ಕಾಲದಲ್ಲಿ ಆಗಿರುವ ಮಹಾಜನರ ಸಹಾಯವನ್ನು ಕಾರ್ಯಾಲಯದ ಪೂರ್ಣಾಭಿವೃದ್ಧಿಯನ್ನು ಇಷ್ಟರಲ್ಲಿಯೇ ವಾಚಕರಿಗೆ ತಿಳಿಯಪಡಿಸುವೆನು.

# 41 ಕಾರ್ಯಾಲಯದ ಹೂವು ಅರಳಿಕೊಂಡದ್ದು (1947-48)

## ಅಧ್ಯಾತ್ಮ ಕುಟೀರ ಬಂದಮೇಲೆ :

ಕಾರ್ಯಾಲಯವು ಕುಟೀರವನ್ನು ಪ್ರವೇಶಿಸುವ ಹೊತ್ತಿಗೆ ಆದಕ್ಕೆ ಜನರ ಸಹಾಯವೂ ಒದಗಿ ಬಂತು. ಹೊಣೆಗಾರಿಕೆಯೂ ಹೆಚ್ಚಿತು. ಎಷ್ಟೋ ವಿಷಯಗಳನ್ನು ಆಗಿಂದಾಗ್ಗೆ ಬರೆದಿರಲಿಲ್ಲವಾದ್ದರಿಂದ ಈಗ ನೆನಪಿನ ಮೇಲೆಯೇ ಭಾರ ಹಾಕಿ ದೊರೆತ ಕಷ್ಟವನ್ನು ತಿಳಿಸಬೇಕಾಗಿರುತ್ತದೆ. ಮುಖ್ಯವಾದ ವಿಕಾಸಗಳನ್ನು ಮಾತ್ರ ತಿಳಿಸುವದು ಸಾಧ್ಯ.

## ಶ್ರೀಮನ್ಮಹಾರಾಜರವರು ಕಾರ್ಯಾಲಯದ ಪರಿಪಾಲಕರು :

1947ನೆಯ ವರ್ಷದಲ್ಲಿ ನಡೆದ ಒಂದು ಸ್ಮರಣೀಯವಾದ ಘಟನೆಯೆಂದರೆ ಶ್ರೀಮನ್ಮಹಾರಾಜರಾದ ಜಯಚಾಮರಾಜೇಂದ್ರಒಡೆಯರ್ ಬಹದ್ದೂರವರು ತಮ್ಮನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದ ಪರಿಪಾಲಕರೆಂದು ಸಂಬೋಧಿಸಿ ನಮ್ಮ ಎಲ್ಲಾ ಪ್ರಕಟಣೆಗಳಲ್ಲಿಯೂ ಬಹಿರಂಗಪಡಿಸಲು ಅನುಮತಿಯನ್ನು ಕೊಟ್ಟದ್ದು. ಶ್ರೀಮನ್ಮಹಾರಾಜರವರು ಶ್ರೀಶಂಕರಾಚಾರ್ಯರವರ ಅಮೋಘವಾದ ಗ್ರಂಥಗಳನ್ನು ಪ್ರಕಾಶಪಡಿಸುವದಕ್ಕೆಂದು ದಯಪಾಲಿಸಿದ ಧನಸಹಾಯವು ಅತ್ಯಂತ ಉದಾರವೂ ಆಗಿರುವದರಿಂದ ಅವರನ್ನು ಹೀಗೆಂದು ಸಂಭೋಧಿಸಿ ಪ್ರಕಟಿಸಲು ಅನುಜ್ಞೆಯನ್ನು ಬೇಡಿದ ಪ್ರಕಾರ ಮಹಾಸ್ವಾಮಿಗಳು ಸಂಮತಿಸಿ ಕಾರ್ಯಾಲಯ-ಕ್ಕೊಂದು ಭೂಷಣವನ್ನು ತಂದುಕೊಟ್ಟರು.

## ಯ. ಸುಬ್ರಹ್ಮಣ್ಯಶರ್ಮರು, ಆಸ್ಥಾನ ವಿದ್ವಾನ್ :

ಮಹಾಪ್ರಭುಗಳು ಕಾರ್ಯಾಲಯದಂಥ ಧಾರ್ಮಿಕ ಸಂಸ್ಥೆಗೆ ಊರ್ಜಿತವಾಗುವ ಪ್ರೋತ್ಸಾಹವನ್ನು ಕೊಟ್ಟದ್ದಲ್ಲದೆ, ಸಂಸ್ಥೆಯ ಅಧ್ಯಕ್ಷರೂ ಜ.ಚಾ.ರಾ. ಗ್ರಂಥಮಾಲೆಯ ಸಂಪಾದಕರೂ ಆದ ಯ.ಸು.ಶರ್ಮರವರಿಗೆ ಆಸ್ಥಾನ ವಿದ್ವಾನ್ ಎಂದು 1946ನೆ ಆಗಸ್ಟಿನಿಂದ ಸಂಭಾವಿಸಿರುವದಾಗಿ ಹುಜೂರು ಸೆಕ್ರೆಟರಿಗಳ ನಂ. 440ನೆ 21-8-46ನೆ ದಿನಾಂಕದ ಪತ್ರವು ಬಂದಿತು. ರಾಯರು ಸ್ವಭಾವದಿಂದಲೆ ಯಾವ ಪದವಿಯನ್ನೂ ಸ್ವೀಕರಿಸುವ ಹಂಬಲಿನವರಲ್ಲ ; ಅವರು ವಿದ್ಯೆಯ ಮಹತ್ವವು ಪದವಿಯ ಕುಂದಣವಿಲ್ಲದೆಯೆ ಪ್ರಕಾಶವಾಗಬೇಕು ಎಂಬ

ಅಭಿಪ್ರಾಯದವರ ಪಂಗಡಕ್ಕೆ ಸೇರಿದವರು. ಆದ್ದರಿಂದ ಈ ವಾರ್ಧಕದಲ್ಲಿ ನನಗೆ ಯಾವ ಬಿರುದಾದರೂ ಏತಕ್ಕೆ ? ಇದನ್ನುಕೊಟ್ಟಿರುವ ಗೌರವವು ಮಹಾಸ್ವಾಮಿಗಳ ಅಭಿಮಾನಸೂಚಕವೆಂದು ಭಾವಿಸುತ್ತೇನೆ ; ಈ ಬಿರುದನ್ನು ಪ್ರಕಾಶಪಡಿಸಿಕೊಳ್ಳ-ಬೇಕಾದದ್ದೇನೂ ಇಲ್ಲ ಎಂದು ದೀರ್ಘಕಾಲದವರೆಗೆ ಗ್ರಂಥಗಳಲ್ಲಿ ಬಿರುದನ್ನು ಪ್ರಕಟಿಸಿಕೊಳ್ಳಲೇ ಇಲ್ಲ. ಆದರೆ ಈ ಬಹುಮಾನವನ್ನು ಅನಾದರದಿಂದ ಕಂಡರೆಂಬ ಭಾವನೆಯು ಪ್ರಭುವರ್ಯರಿಗೆ ಬರದೆ ಇರಲೆಂದು ಭಗವದ್ಗೀತೆಯ ಭಾಷ್ಯದ ಎರಡನೆಯ ಸಂಪುಟದಲ್ಲಿ ಮತ್ತು ಮುಂಡಕ, ಪ್ರಶ್ನ, ಮಾಂಡೂಕ್ಯಗಳ ಉಪನಿಷತ್ಸಂಪುಟ-3 (1947) ಇವುಗಳಲ್ಲಿ ಮಾತ್ರ ಆಸ್ಥಾನ ವಿದ್ವಾನ್ ಎಂಬ ಹೆಸರನ್ನು (ಬಿರುದನ್ನು) ಹಾಕಲು ಒಪ್ಪಿದರು. ಇದನ್ನು ಪತ್ರಿಕೆಯಲ್ಲಿ ಪ್ರಕಟಿಸಿಲ್ಲ. ಎಷ್ಟೋ ಜನರಿಗೆ ಈ ವಿಷಯವು ಗೊತ್ತಾಗಲೇ ಇಲ್ಲ.

## ವಿದ್ಯಾನಿಲಯಕ್ಕೆ ಹೊಸ ವಿದ್ಯಾರ್ಥಿ :

1947ನೆಯ ಮಾರ್ಚಿ ಮಾಹೆಯಲ್ಲಿ ವಿದ್ಯಾನಿಲಯಕ್ಕೆ ಬೇಲೂರು ಸಂಸ್ಕೃತಪಾಠಶಾಲೆಯಲ್ಲಿವ್ಯಾಸಂಗಮಾಡುತ್ತಿದ್ದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿ ಎಂಬ ವಿದ್ಯಾರ್ಥಿಯು ಬಂದು ಸೇರಿದನು. ಬಾಲ್ಯದಲ್ಲಿಯೇ ಉಪನೀತನಾಗಿ ಬೇಲೂರು ಸಂಸ್ಕೃತಪಾಠಶಾಲೆಯಲ್ಲಿ ನಾಟಕಾಂತಸಾಹಿತ್ಯದವರೆಗೆ ಸಂಸ್ಕೃತವನ್ನೂ ಹಾಗೂ ಯಜುರ್ವೇದದಲ್ಲಿ ಪೂರ್ವಪ್ರಯೋಗಾಂತವಾಗಿ ಕಾಲೋಚಿತ ವೇದಭಾಗವನ್ನೂ ಅಧ್ಯಯನಮಾಡಿದ್ದ ಈ ವಿದ್ಯಾರ್ಥಿಯನ್ನು ರಾಯರು ಆದರದಿಂದ ಬರಮಾಡಿಕೊಂಡು ತೈತ್ತಿರೀಯಉಪನಿಷದ್ಭಾಷ್ಯ ಪಾಠವನ್ನು ಪ್ರಾರಂಭಿಸಿಯೇ ಬಿಟ್ಟರು. ಆಗ್ಗೆ ರಾಯರ ಹಾಗೂ ಕಾರ್ಯಾಲಯದ ಸೇವೆಗಾಗಿ ಬಾಣಾವರದಿಂದ ಬಂದು ಹೊಳೆನರಸೀಪುರದಲ್ಲಿಯೇ ನೆಲೆಸಿದ್ದ ಅಗ್ರಹಾರದ ಶೇಷಮ್ಮನವರೆಂಬ ಮಹಿಳೆಯ ಪ್ರೋತ್ಸಾಹದಿಂದ ಈ ವಿದ್ಯಾರ್ಥಿಯು ಸಾಹಿತ್ಯ ವೇದಾಂತಗಳಲ್ಲಿ ವಿದ್ವಾಂಸನಾಗುವ ಇಚ್ಛೆಯಿಂದ ಬಂದುಸೇರಿದನು. ಮುಂದೆ ಸಾಹಿತ್ಯಾಧ್ಯಯನದ ಭಾಗವು ನಿಂತುಹೋಗಿ ವೇದಾಂತವನ್ನು ಮಾತ್ರವೇ ಓದುವ ಭಾಗ್ಯವು ಇವನದಾಯಿತು.

## ಕಟ್ಟಡದ ಅಭಿವೃದ್ಧಿ:

ಕಟ್ಟಡಕ್ಕೆ ಸ್ಥಳ, ಪರಸ್ಥಳಗಳ ಮಹಾಜನರಿಂದ ಹಣವನ್ನು ಕೂಡಿ ಹಾಕುವದಕ್ಕೆಂದು ಒಂದು ಕಟ್ಟಡದ "ಕಾರ್ಯಕಾರಿ ಸಮಿತಿ"ಯನ್ನು ಏರ್ಪಡಿಸಿ ಆದಕ್ಕೆ ಹದಿನಾರು ಜನ ಸದಸ್ಯರುಗಳನ್ನು ನಿಯಮಿಸಿಕೊಳ್ಳಲಾಯಿತು. ಕಟ್ಟಡಕ್ಕೆಂದು

5000/-ರೂ.ಗಳಿಗೆ ಕಡಿಮೆಯಿಲ್ಲದೆ ಕೊಟ್ಟವರನ್ನು ಮಹಾಶ್ರಯದಾತರೆಂದು **(Benefactor)** 2000ರೂ ಕಡಿಮೆಯಿಲ್ಲದೆ ಕೊಟ್ಟವರನ್ನು ಆಶ್ರಯದಾತರೆಂದೂ **(Patron)**, 1500 ರೂ.ಗೆ ಕಡಿಮೆಯಿಲ್ಲದೆ ಕೊಟ್ಟವರನ್ನು ಮಹಾಪೋಷಕ-ರೆಂದೂ **(Grand Donor)**, 750 ರೂ.ಗೆ ಕಡಿಮೆಯಿಲ್ಲದೆ ಕೊಟ್ಟವರನ್ನು ಪೋಷಕರೆಂದೂ **(Donor)**, 250 ರೂ.ಗೆ ಕಡಿಮೆಯಿಲ್ಲದೆ ಕೊಟ್ಟವರನ್ನು ಸಹಾಯಕ ಪೋಷಕರೆಂದೂ, 100 ರೂ.ಗೆ ಕಡಿಮೆಯಿಲ್ಲದೆ ಕೊಟ್ಟವರನ್ನು ಪ್ರೋತ್ಸಾಹಕರೆಂದು **(Well wisher)** ಪರಿಗಣಿಸಬೇಕೆಂದು ನಿರ್ಣಯವಾಯಿತು. ಒಂದೊಂದು ಸ್ವತಂತ್ರ ವಿಭಾಗವನ್ನು ಪೂರ್ಣವಾಗಿ ಕಟ್ಟಿಸುವವರ ಹೆಸರನ್ನು ಆಯಾಭಾಗದಲ್ಲಿ ಬರೆದಿಡುವದಲ್ಲದೆ ಮಹಾಶ್ರಯದಾತರು, ಆಶ್ರಯದಾತರು ಮತ್ತು ಮಹಾಪೋಷಕರು - ಇವರ ಹೆಸರುಗಳನ್ನು ಕಟ್ಟಡದಲ್ಲಿ ಭಾವಚಿತ್ರವೇ ಮುಂತಾದವುಗಳ ಮೂಲಕ ಶಾಶ್ವತಗೊಳಿಸುವ ವಿಷಯವನ್ನು ಪರ್ಯಾಲೋಚಿಸ-ಬೇಕೆಂದೂ ಸಮಿತಿಯವರು ನಿರ್ಣಯಿಸಿದರು.

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಗಳು ಜಿ.ಎಸ್.ಇ., ಜೆ.ಪಿ. 5000 ರೂ.ಗಳನ್ನು ಕಟ್ಟಡಕ್ಕೆ ದಾನ ಮಾಡುವದಾಗಿ ವಾಗ್ದಾನವಿತ್ತು 250 ರೂ.ಗಳನ್ನು ಮೊದಲನೆಯ ಕಂತಾಗಿ ಕೊಟ್ಟರು. ಅಡ್ವೋಕೇಟ್ ಬಿ. ನಂಜುಂಡಯ್ಯನವರು ವಿದ್ಯಾರ್ಥಿಗಳ ಕೊಠಡಿಗೆ 1000 ರೂ.ಗಳ ವಾಗ್ದಾನಮಾಡಿ 75 ರೂ.ಗಳನ್ನು ಕೊಟ್ಟರು ; ಈ ಮೊದಲೆ ಅವರು 85 ರೂಗಳನ್ನು ಕೊಟ್ಟಿದ್ದರು. ಬೆಂಗಳೂರಿನ ಭೈರಪ್ಪ ಹನುಮಂತಪ್ಪ ಇವರುಗಳು ವಿದ್ಯಾರ್ಥಿಗಳ ಕೊಟ್ಟಡಿಗೆ 1001 ರೂಗಳನ್ನು ಕೊಟ್ಟರು. ಇನ್ನು ಹಲವರು ಮಹನೀಯರು ಯಥೋಚಿತ ಸಹಾಯ ಮಾಡಿದರು. ಈ ಪ್ರೋತ್ಸಾಹಗಳಿಂದ ನಮಗೆ ಧೈರ್ಯ ಬಂತು. **23-02-47**ರಲ್ಲಿ ಮಹಾಜನರ ಸಮಕ್ಷದಲ್ಲಿ ಗುದ್ದಲಿಪೂಜೆಯನ್ನು ಮಾಡಲಾಯಿತು. ಅಡ್ವೋಕೇಟ್ ನಂಜುಂಡಯ್ಯನವರು ಮತ್ತು ಭೈರಪ್ಪ ಹನುಮಂತಪ್ಪ ಇವರುಗಳ ಧರ್ಮಸಹಾಯದಿಂದ ಎರಡು ವಿದ್ಯಾರ್ಥಿಗಳ ಕೊಟ್ಟಡಿಗಳನ್ನು ಕಟ್ಟಲಾಯಿತು. ಸಭಾಂಗಣದ ಕಟ್ಟಡವು ಬೇಸಮೆಂಟು ಪೂರೈಸಿ ಅದನ್ನು ಮುಂದುವರಿಸುವದಕ್ಕೆ ಪ್ರಯತ್ನವನ್ನು ಮಾಡಲಾಯಿತು.

### ಪೂಜಾಮಂದಿರ :

ಇದಕ್ಕೆ ಮೈಸೂರಿನ ಸಿಲ್ಕ್ ಫಿಲೇಚರ್ ಕಂಪೆನಿಯ ಮ್ಯಾನೇಜರ್ ಬಿ. ಕೃಷ್ಣಸ್ವಾಮಿಯವರು ಒಂದು ಸಾವಿರ ರೂಪಾಯಿಗಳ ವಾಗ್ದಾನಮಾಡಿ

ಇನ್ನೂರುಐವತ್ತು ರೂಪಾಯಿಗಳನ್ನು ಕೊಟ್ಟರು. ಹಲವರು ಮಹನೀಯರು ಯಥೋಚಿತ ಸಹಾಯವನ್ನು ಮಾಡಿದರು. ಕಟ್ಟಡವನ್ನು ಕಟ್ಟಿಸುವದಕ್ಕೆ ತಕ್ಕ ಏರ್ಪಾಡನ್ನು ಮಾಡಲಾಯಿತು.

## ಕಾರ್ಯಾಲಯಕ್ಕೆ ಮಹಿಳಾ ಭಕ್ತರ ಸೇವೆ :

ಎಡತೊರೆಯ ನರಸಿಂಹಸ್ವಾಮಿಯ ದೇವಾಲಯದಲ್ಲಿದ್ದುಕೊಂಡಿದ್ದ ಚಂದಗಾಲ ಕಾವೇರಮ್ಮನವರು ಕಾರ್ಯಾಲಯದಲ್ಲಿ ಬಾವಿತೋಡಿಸುವದಕ್ಕೆ ಮಾಡಿದ ಸೇವೆಯನ್ನು ಆಗಲೆ ಪರಾಮರ್ಶಿಸಿದ್ದಾಗಿದೆ. ಅವರು ಕೆಲವು ತಿಂಗಳುಗಳಾದ ಬಳಿಕ ಹೊ.ನ.ಪುರಕ್ಕೆ ಬಂದು ಬಲುಮಟ್ಟಿಗೆ ಕಾರ್ಯಾಲಯದಲ್ಲಿಯೇ ಇರುತ್ತಾ ಅನೇಕ ವಿಧಗಳಿಂದ ಸಹಾಯ ಮಾಡಿದರು. ಸುಬ್ಬಮ್ಮನವರೆಂಬವರು ಕಾರ್ಯಾಲಯವು ಹೊಸಕಟ್ಟಡಕ್ಕೆ ಬಂದ ಕೆಲವು ತಿಂಗಳುಗಳೊಳಗಾಗಿ ಬಂದು ಸೇರಿದವರು ರಾಯರಿಗೆ ಕಾರ್ಯಾಲಯದಲ್ಲಿಯೇ ಅಡಿಗೆ ಮಾಡಿಕೊಡುವದು, ಸ್ನಾನಕ್ಕೆ ನೀರು ಸಿದ್ಧಮಾಡಿಕೊಡುವದು ಮುಂತಾದ ರೀತಿಗಳಿಂದ ಸಹಾಯಮಾಡುತ್ತಿದ್ದರು. ಚಿಕ್ಕಮಗಳೂರಿನ ಸಪ್ತಾಹವಾದ ಮೇಲೆ ಅಗ್ರಹಾರದ ಶೇಷಮ್ಮನವರು ಬಂದು ಊರಿನಲ್ಲಿ ನಿಂತು, ಆಗಾಗ್ಗೆ ಕಾರ್ಯಾಲಯಕ್ಕೆ ಸಹಾಯ ಮಾಡಲು ಅನುವಾದರು. ಮೈಸೂರಿನಿಂದ ಬಂದ ಸಾಲಿಗ್ರಾಮದ ಕಾವೇರಮ್ಮನವರು ಆಗಂತುಕಗೃಹಕ್ಕೆ 400 ರೂ. ಕೊಟ್ಟರು. ಊರಲ್ಲಿ ಬಾಡಿಗೆಮನೆಯಲ್ಲಿದ್ದುಕೊಂಡು ಶೇಷಮ್ಮನವರಿಗೆ ಅವರು ಬೇರೆ ರೀತಿಯಿಂದ ಸಹಾಯಮಾಡುತ್ತಿದ್ದರು.

## ಶಂಕರಸಪ್ತಾಹಗಳು :

**1947**ರಲ್ಲಿ ಮಂಡ್ಯದಲ್ಲಿ ಸರ್ವಜಿತ್ ಸಂವತ್ಸರದ ಶಂಕರಸಪ್ತಾಹ-ವಾಯಿತು. ಅಲ್ಲಿ ವಿಠ್ಠಲಶಾಸ್ತ್ರಿಗಳು, ನಂಜನಗೂಡು ಚನ್ನಕೇಶವ ಶಾಸ್ತ್ರಿಗಳು ಅಧ್ಯಾತ್ಮವಿದ್ಯಾಲಯದ ಪಂಡಿತರು ಕೊಡೂರು ಕೃಷ್ಣಜೋಯಿಸರು, ಹಾನಗಲ್ಲು ಗಣೇಶಶಾಸ್ತ್ರಿಗಳು – ಇಷ್ಟುಜನ ವಿದ್ವಾಂಸರುಗಳು ಭಾಷ್ಯ ಪ್ರವಚನ, ಪುರಾಣಶ್ರವಣ ಇವಗಳನ್ನು ನಡೆಸುವದರಲ್ಲಿ ಸಹಕರಿಸಿದರು. ರಾಯರು ಎಲ್ಲಾ ಸಂದರ್ಭಗಳಲ್ಲಿಯೂ ಅನುವಾದ ಮಾಡಿದ್ದಲ್ಲದೆ ಸಾಯಂಕಾಲಕ್ಕೆ 'ಪೂರ್ಣಜ್ಞಾನ', 'ಸಮಷ್ಟಿವಿಚಾರಕ್ರಮ, 'ಸಾಕ್ಷಿ', 'ಅವಸ್ಥಾತ್ರಯ ವಿಚಾರ', 'ಆತ್ಮತತ್ತ್ವ ನಿರ್ಧಾರಣ', 'ಪರಮಾರ್ಥತತ್ತ್ವವನ್ನು ಮನಗಾಣುವದಕ್ಕೆ ಸಾಧನಗಳು' - ಎಂಬ ವಿಷಯದಲ್ಲಿ ಪ್ರವಚನ ಮಾಡಿದರು. **1948**ರಲ್ಲಿ (ಸರ್ವಧಾರಿ ಸಂವತ್ಸರದಲ್ಲಿ) ಹದಿನಂಟನೆ ಸಪ್ತಾಹವು

ಮೈಸೂರಿನಲ್ಲಿ 13-5-1948 ರಿಂದ 20-5-1948 ರವರೆಗೆ ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಾಲಯದಲ್ಲಿ ನಡೆಯಿತು. ಆ ಸಂದರ್ಭದಲ್ಲಿ ವಿಠ್ಠಲ ಶಾಸ್ತ್ರಿಗಳು, ಪಾಟಣಕರ ಚಂದ್ರಶೇಖರಶಾಸ್ತ್ರಿಗಳು, ಅನಂತಮೂರ್ತಿಶಾಸ್ತ್ರಿಗಳು, ಕೊ.ಕೃಷ್ಣಜೋಯಿಸರು, ಕೆ.ಪಿ.ಶಂಕರಶಾಸ್ತ್ರಿಗಳು, ಚನ್ನಕೇಶವಯ್ಯನವರು, ಚಿಕ್ಕನಾಯಕನಹಳ್ಳಿ ವೆಂಕಟೇಶಭಟ್ಟರು ಈ ವಿದ್ವಾಂಸರುಗಳೆಲ್ಲ ಪ್ರವಚನ, ಪುರಾಣಶ್ರವಣಗಳಲ್ಲಿ ಸಹಕರಿಸಿದರು. 15-5-48ನೇ ದಿನ ಮಧ್ಯಾಹ್ನವಾದಮೇಲೆ ಮಹಾರಾಜ ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಎಂ.ಕೃಷ್ಣಪ್ಪನವರು ಮಾಡಿರುವ ಗೀತೆಯ ಕನ್ನಡಾನುವಾದದ ಪದ್ಯಗಳಲ್ಲಿ ಹನ್ನೆರಡನೆಯ ಅಧ್ಯಾಯವನ್ನು ಅವರ ಶಿಷ್ಯನೊಬ್ಬನು ಕಾವ್ಯವಾಗಿ ಓದಿ ಸಭಿಕರನ್ನು ಸಂತೋಷಪಡಿಸಿದನು. ಕೊನೆಯದಿನ ನಂಜಪ್ಪಭಾಗವತರ ಕೀರ್ತನೆಯಾಯಿತು. ರಾಯರು ಈ ಸಪ್ತಾಹದಲ್ಲಿ ಶಂಕರಾಚಾರ್ಯರು ಮಾಡಿರುವ ಭಾಷ್ಯಗಳ ಅಸಾಧಾರಣ ಧರ್ಮಗಳನ್ನು ಕುರಿತು ಏಳುದಿನವೂ ಉಪನ್ಯಾಸ ಮಾಡಿದರು. 'ಉಪನಿಷತ್ತುಗಳ ಬೋಧನಪ್ರಕಾರ', 'ಶಾಂಕರಭಾಷ್ಯವೂ ಪ್ರಾಚೀನವ್ಯಕ್ತಿಗಳೂ', 'ಆಚಾರ್ಯರ ಉಪನಿಷದ್ಭಾಷ್ಯಕ್ರಮ', 'ಆಚಾರ್ಯರ ಮತದಲ್ಲಿ ವೇದಾಂತ ವಾಕ್ಯದಿಂದ ಅನುಭವವಾಗುವ ರೀತಿ', 'ಅದ್ವೈತವ್ಯಾಖ್ಯಾನದಲ್ಲಿ ಬರಬಹುದಾದ ಸಂಶಯಗಳ ಪರಿಹಾರ', 'ಆಚಾರ್ಯರು ಒಪ್ಪಿರುವ ಜ್ಞಾನಸಾಧನಗಳು' - ಎಂಬಿವು ಉಪನ್ಯಾಸದ ವಿಷಯಗಳು. ದ್ವಾದಶಿಯದಿನ ಎಂದಿನಂತೆ ಆಚಾರ್ಯರ ಗುಣ ಕಥನವಾಯಿತು. ಅದೇದಿನ ಸಾಯಂಕಾಲ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ವೇದಾಂತವೂ ವಿಶ್ವವ್ಯಾಪಕ ಧರ್ಮವೂ ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ವಿಶ್ವವ್ಯಾಪಕ ಧರ್ಮವು ಹೇಗಿರಬೇಕು ? ಅದರ ವಿಶೇಷಗಳು ವೇದಾಂತದಲ್ಲಿವೆ ಎಂಬುದು ಹೇಗೆ ? ಎಂಬುದನ್ನು ಸರ್ವಸಮ್ಮತವಾದ ರೀತಿಯಿಂದ ಪ್ರತಿಪಾದಿಸಿದರು.

## 42. ರಾಯರ ತುರೀಯಾಶ್ರಮಸ್ವೀಕಾರ

### ಸುಬ್ರಹ್ಮಣ್ಯ ಶರ್ಮರು ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಾಗುವ ಮುನ್ನದ ಸಿದ್ಧತೆ:

ರಾಯರು ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಿದ್ದು 1948ನೆಯ ವರ್ಷದ ಒಂದು ಮುಖ್ಯ ಘಟನೆಯೆನ್ನಬಹುದು. ಬಹುಕಾಲದಿಂದ ಅವರು ತುರೀಯಾಶ್ರಮ ಸ್ವೀಕಾರವನ್ನು ಮಾಡುವ ಇಚ್ಛೆಯನ್ನು ತೋರ್ಪಡಿಸಿಕೊಂಡು ಬಂದಿದ್ದರಾದರೂ ಕಾಲಕರ್ಮಸಂಯೋಗವಿಲ್ಲದೆ ಈವರೆಗೂ ಅದು ಹಿಂದಕ್ಕೆ ಬೀಳುತ್ತಲೇ ಇತ್ತು ; ಒಂದಲ್ಲ ಒಂದು ರೀತಿಯಲ್ಲಿ ಕೆಲಸಗಳು ನಡೆದು ಒಂದು ಹಂತದವರೆಗೆ ಕಾಯಬೇಕಾಗಿತ್ತು. ಈಗ ಕುಟೀರ ತಯಾರಾಗಿ, ಕಾರ್ಯಾಲಯ ನೆಲೆಯಾದ ಹಂತಕ್ಕೆ ಬಂದಿತ್ತು. ಈ ವರ್ಷದ ಚೈತ್ರ ಬಹುಳದಲ್ಲಿ ಇದ್ದಕ್ಕಿದ್ದ ಹಾಗೆಯೇ ರಾಯರು ಈ ವಿಷಯವನ್ನು ಇತ್ಯರ್ಥಮಾಡಿಕೊಂಡು ಬರುವದಕ್ಕೆ ಮತ್ತೂರಿಗೆ ಹೋಗಿಬರ ಬೇಕೆಂದು ಸಂಕಲ್ಪವನ್ನು ಮಾಡಿಬಿಟ್ಟರು. ಅಲ್ಲಿಹೋಗಿ ಜ್ಯೇಷ್ಠ ಶುದ್ಧ 3 (ತದಿಗೆ) ದಿನ ಆಶ್ರಮ ಸ್ವೀಕಾರಕ್ಕೆ ಮುಹೂರ್ತವನ್ನು ನಿಶ್ಚಯಿಸಲಾಯಿತು. 1948ನೇ ಮೇ 9 ಮತ್ತು 10 ಈ ತಾರೀಖುಗಳಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ವ್ಯವಸ್ಥೆಯನ್ನು ಚರ್ಚಿಸುವಬಗ್ಗೆ ಒಂದು ಸಭೆಯನ್ನು ಸೇರಿಸಲಾಯಿತು. ರಾಯರು ತಾವು ಸಂನ್ಯಾಸವನ್ನು ಸ್ವೀಕರಿಸುವದರಿಂದ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾಗಬೇಕಾಗಿರುವ ಸಂದರ್ಭವನ್ನು ವಿವರಿಸಿ ಕಾರ್ಯಾಲಯದ ವ್ಯವಸ್ಥೆಯಬಗ್ಗೆ ಮುಂದೆ ಅನುಸರಿಸ ಬೇಕಾಗಿರುವ ನಿಬಂಧನೆಗಳನ್ನು ಓದಿದರು. ಕಾರ್ಯಾಲಯಕ್ಕೆ ವೈ.ನರಸಪ್ಪನವರು, ಅರಕಲಗೂಡು ಶ್ರೀಕಂಠಯ್ಯನವರು, ಆರ್. ರಾಮಸ್ವಾಮಯ್ಯನವರು, ಪಿ.ಎನ್. ನರಸಿಂಹಯ್ಯನವರು, ಸಂತೆಬಾಚಳ್ಳಿ ಸುಬ್ಬರಾಯರು, ನಂಜಪ್ಪ ಭಾಗವತರು, ಆಸ್ಥಾನ ವಿದ್ವಾನ್ ವಿಠ್ಠಲಶಾಸ್ತ್ರಿಗಳು, ಪಂಡಿತ ಪ್ರವರ ಅನಂತಮೂರ್ತಿ ಶಾಸ್ತ್ರಿಗಳವರು, ಜನಾರ್ದನ ಶೆಟ್ಟರು ಈ ಒಂಬತ್ತು ಜನರು ಸೇರಿದ ಕಾರ್ಯಕಾರಿ ಸಮಿತಿಯಿರಬೇಕೆಂದೂ ಅವಶ್ಯವೆಂದು ಕಂಡರೆ ಮೂರಕ್ಕೆ ಹೆಚ್ಚಿಲ್ಲದೆ ಹೊಸ ಸಭಾಸದರನ್ನು ಸೇರಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಸದಸ್ಯರು-ಗಳೊಳಗೆ ರಾಯರ ಔರಸ ಪುತ್ರರಾದ ವೈ. ನರಸಪ್ಪನವರು ಅಧ್ಯಕ್ಷ (**Chairman**) ರಾಗಿರತಕ್ಕದ್ದೆಂದೂ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಉಪಾಧ್ಯಕ್ಷ (**Vice-Chairman**) ರಾಗಿರತಕ್ಕದ್ದೆಂದೂ ಶ್ರೀ ನಂಜಪ್ಪಭಾಗವತರು ಕಾರ್ಯದರ್ಶಿ (**Secretary**) ಗಳಾಗಿರತಕ್ಕದ್ದೆಂದೂ ತೀರ್ಮಾನಿಸಲಾಯಿತು. ವ್ಯವಹಾರ ದೃಷ್ಟಿಯಿಂದ ರಾಯರು ವಹಿಸಿದ್ದ ಎಲ್ಲಾ ಜವಾಬ್ದಾರಿಯನ್ನೂ ಶ್ರೀ ವೈ. ನರಸಪ್ಪನವರಿಗೆ ವಹಿಸಲಾಯಿತು.

ಮುಖ್ಯವಾಗಿ ಐವತ್ತು ರೂಪಾಯಿಗಳಿಗೆ ಕಡಿಮೆಯಿಲ್ಲದೇ ಕಾರ್ಯಾಲಯಕ್ಕೆ ಸಹಾಯ ಮಾಡಿರುವವರನ್ನು ಸಾಮಾನ್ಯಸದಸ್ಯರೆಂದು ಭಾವಿಸಿ, ಅವರ ಹೆಸರುಗಳನ್ನು ಒಂದು ರಿಜಿಸ್ಟರಿನಲ್ಲಿ ಬರೆದಿಡಬೇಕು. ಅವರಿಗೆಲ್ಲ ಕಾರ್ಯಾಲಯದ ಚಟುವಟಿಕೆಗಳ ವಿಷಯಗಳನ್ನು ತಿಳಿಸುತ್ತಾ ಬರಬೇಕು, ಕಾರ್ಯಾಲಯದ ಪರಿಪಾಲಕರಿಗೆ ವರ್ಷಕ್ಕೊಮ್ಮೆ ಸಂಗ್ರಹವಾಗಿ ವರದಿಮಾಡಬೇಕು. ವೈ.ನರಸಪ್ಪನವರು ಅಧ್ಯಕ್ಷರಾಗಿರಲಿ, ಮುದ್ರಣಾಲಯವೊಂದನ್ನು ಕಾರ್ಯಾಲಯಕ್ಕೆ ಇಟ್ಟುಕೊಳ್ಳ ಬೇಕು, ಕಟ್ಟಡವನ್ನು ಮುಂದುವರಿಸುವ ಪ್ರಯತ್ನವನ್ನು ಮಾಡಬೇಕು, ಅಧ್ಯಾತ್ಮ ವಿದ್ಯಾನಿಲಯಕ್ಕೆ ಹೆಚ್ಚಿನ ನಿಧಿಯನ್ನು ಸಂಗ್ರಹಿಸಬೇಕು, (ಸಾಧ್ಯವಾದರೆ ಒಂದು ಗದ್ದೆಯನ್ನು ವಿದ್ಯಾರ್ಥಿಗಳಿಗಾಗಿ ಕೊಳ್ಳಬೇಕು.) ಪೂಜಾಮಂದಿರವನ್ನು ಆದಷ್ಟು ಬೇಗನೆ ಕಟ್ಟಿಸಬೇಕು ಎಂಬ ಮುಂತಾದ ನಿಬಂಧನೆಗಳನ್ನು ರಾಯರುಗಳು ಸೇರಿಸಿರುತ್ತಾರೆ. ಈ ನಿಬಂಧನೆಗಳನ್ನು ಸರ್ವಧಾರಿ ಸಂವತ್ಸರದ ವೈಶಾಖದ ಸಂಚಿಕೆಯಲ್ಲಿ ಪೂರ್ಣವಾಗಿ ಪ್ರಕಟಿಸಲಾಗಿದೆ.

## ಸಂನ್ಯಾಸಿಯಾಗುವ ಇಚ್ಛೆ :

ಅಧ್ಯಾತ್ಮದಲ್ಲಿ ಬಹಳ ದೂರ ಪ್ರವೇಶಿಸಿದ್ದರೂ, ಸಂಸಾರ ನಿರ್ವಹಣೆಯ ಹೊಣೆಯಿಂದ ಕೆಲವು ವರ್ಷ, ಅನಂತರ ಕಾರ್ಯಾಲಯವನ್ನು ಸ್ಥಿರಗೊಳಿಸುವ ಪ್ರಯತ್ನದ ಹೊರೆ, ಡಿಸೆಂಬರ್ 1935ರಲ್ಲಿ ನಿವೃತ್ತಿಯ ಕಾಲಕ್ಕೆ ಬಂದ ಸಂನ್ಯಾಸದ ಇಚ್ಛೆಯನ್ನು ಕೆಲವು ವರ್ಷಗಳು ತಡೆದಿಟ್ಟಿದ್ದವು. ಆವನೀ ಮಠದ ಪೀಠಾಧಿಪತಿಯಾಗುವ ಅವಕಾಶ ಬಂದಾಗ, ಪುಟಿದೆದ್ದು ಬಂದ ಈ ಹಂಬಲ, ಬಂದ ಹಾಗೇ ಚಿವುಟಿಹೋಯಿತು.

ಅವರು ಶಾಂತ ಜೀವನ, ಮತ್ತು ತಮ್ಮ ಚಿಂತನೆಗಳಿಗೆ ಸ್ವತಂತ್ರ ವಿಚಾರಕ್ಕೆ ಅನುಕೂಲವಾದ ಶಾಂತಿ, ಒಂದು ಬಗೆಯ ತಪೋಜೀವನ ಬೇಕೆಂಬ ಆಸೆ ಈಗ ಬಲಿಯಿತು, ನಿವೃತ್ತಿಯ ಸಮಯದಲ್ಲಿ. ಋಷ್ಯಾಶ್ರಮಕ್ಕೆ ಸಮನಲ್ಲವಾದರೂ, ಅದೇ ರೀತಿಯ ನದೀತೀರವಾಸ ಮತ್ತು ಗದ್ದಲವಿಲ್ಲದ ಸಣ್ಣ ಊರು ಎಂಬ ಕಾರಣ, ನಿವೃತ್ತಿಯನಂತರ ನೆಮ್ಮದಿಯಿಂದ ನೆಲಸಿ ತಮ್ಮ ಜ್ಞಾನ ತಪಸ್ಸಿಗೆ, ಅಧ್ಯಯನ ಬರವಣಿಗೆ ಕಾರ್ಯಗಳಿಗೆ (ಅಧ್ಯಾತ್ಮಪ್ರಸಾರದ ನೆರವಿಗೆ ಬರುವಂತೆ), ವಿಹಿತವೆಂದು ಕಂಡುಬಂದ ಹೊಳೆನರಸೀಪುರವನ್ನು ಆರಿಸಿಕೊಂಡರು. ಅವರ ಇಚ್ಛೆಗೆ ತಕ್ಕಂತೆ ಊರೊಳಗೆ ನೆಲಸಲಿಚ್ಛಿಸದೆ, ಅದೃಷ್ಟವಶಾತ್ ದೊರಕಿದ ಊರ ಹೊರಗಿನ ಜಾಗಕ್ಕೆ ಬಂದರು. ಏನೂ ಇಲ್ಲದ ಕಲ್ಲು ಮುಳ್ಳಿನ ನೆಲವನ್ನು ಆಶ್ರಮದಂತೆ ಮಾಡಿ, ಕಾರ್ಯಾಲಯವನ್ನು ನೆಲೆ ಮಾಡುವ ಕೆಲಸ ಮುಗಿಸಿದರು. ವಿದ್ಯಾರ್ಥಿಗಳೂ ಬಂದ

ಮೇಲೆ, ಇನ್ನು ತಡಮಾಡಬಾರದು, ಇದೇ ಸಕಾಲ ಎಂದು ನಿರ್ಧರಿಸಿದರು.

ಹಾಗೆ, ಕೂಡಲೆ ಮತ್ತೂರಿಗೆ ಹೋಗಿ ಶಿಷ್ಯರೂ ಆಪ್ತರೂ ಆದ ವೇದ ಶಾಸ್ತ್ರಗಳಲ್ಲಿ ನಿಪುಣರಾದ ಶ್ರೀ ಸುಬ್ರಾಯಾವಧಾನಿಗಳಲ್ಲಿ ಸಂನ್ಯಾಸ ಸ್ವೀಕಾರಕ್ಕೆ ಲಗ್ನವನ್ನು ಗೊತ್ತುಮಾಡಿಕೊಂಡು ಬಂದರು. ಕೂಡಲೆ ಕಾರ್ಯಾಲಯದ ನಡೆಯ ರೀತಿಗೆ ನೀತಿನಿಬಂಧನೆಗಳನ್ನು ಬರೆದು ಒಂದು ತಿಂಗಳ ಮೊದಲೇ ಮಹಾಜನರಲ್ಲಿ ಪ್ರಸ್ತಾಪಿಸಿ ಅವರ ಒಪ್ಪಿಗೆ ಪಡೆದರು. ಶ್ರೀ ಸರ್ವಧಾರಿ ಸಂವತ್ಸರದ ಜೇಷ್ಠ ಶುಕ್ಲ ತೃತೀಯಾ **(10.6.1948)** ಸೋಮವಾರ ಪರಮಹಂಸ ಪರಿವ್ರಾಜಕರಾಗಲು ಸಿದ್ಧರಾದರು.

## ಏಷಣಾತ್ಯಾಗ:

ಈ ವೇಳೆಗೆ ಅವರು ಮನೆಯನ್ನು ಬಿಟ್ಟು ಕಾರ್ಯಾಲಯದ ಸ್ವಂತಕಟ್ಟಡಕ್ಕೆ ಬಂದೇಬಿಟ್ಟಿದ್ದರಾದ್ದರಿಂದ ಎಲ್ಲಾ ವಿಧದಿಂದಲೂ ಸಂನ್ಯಾಸಿಗಳಾಗಿಯೇ ಇದ್ದರು. ಆದರೆ ಬಿಳಿಬಟ್ಟೆಯನ್ನು ಬದಲಾಯಿಸಿ ಕಾಷಾಯವಸ್ತ್ರವನ್ನು ಧರಿಸುವದು ಮಾತ್ರ ಉಳಿದಿತ್ತೆಂದು ಹೇಳಬಹುದು. ಆ ಕಾಲಕ್ಕೆ ರಾಯರು ತಮ್ಮ ಸ್ವಂತ ಧನವನ್ನೆಲ್ಲ ಪುತ್ರನಿಗೆ ಒಪ್ಪಿಸಿದರು. ಹೆಣ್ಣುಮಕ್ಕಳಿಗೂ ಸ್ವಲ್ಪಸ್ವಲ್ಪ ದ್ರವ್ಯವನ್ನು ಕೊಟ್ಟರು. ಕಾರ್ಯಾಲಯದ ಆಸ್ತಿಪಾಸ್ತಿಗಳನ್ನು ಸಮಿತಿಯವರ ವಶಕ್ಕೆ ಒಪ್ಪಿಸಿದರು. ಸಂನ್ಯಾಸಸ್ವೀಕಾರದ ಖರ್ಚಿಗೆಂದು ಸ್ವಲ್ಪ ಹಣವನ್ನು ಇರಿಸಿದರು. ಹೀಗೆ ಎಲ್ಲವೂ ಸಿದ್ಧವಾದ ಮೇಲೆ ಕಡೆಯದಾಗಿ ತಾವು ರುಜುಮಾಡಬೇಕಾಗಿದ್ದ ಕಾಗದಪತ್ರಗಳನ್ನೆಲ್ಲ ಬರೆದು ರುಜು ಮಾಡಿ ಇನ್ನು ಮುಂದೆ ಯಾವ ಕಾಗದಪತ್ರಗಳಿಗೂ ರುಜುವನ್ನು ಮಾಡಬಾರದೆಂದು ಸಂಕಲ್ಪಿಸಿ ಸಂನ್ಯಾಸಕ್ಕೆ ಸಿದ್ಧರಾದರು. ತಮ್ಮ ಸ್ವಂತ ಉಪಯೋಗದ ಬಟ್ಟೆ ಬರೆಗಳನ್ನು ಶಿಷ್ಯರಿಗೆ ಹಂಚಿಬಿಟ್ಟರು. ವೇ|| ಎಸ್. ವಿಠಲಶಾಸ್ತ್ರಿಗಳವರಿಗೆ ತಮ್ಮ ಸುವರ್ಣದ ಪವಿತ್ರದ ಉಂಗುರವನ್ನು ಕೊಟ್ಟು ಕಾರ್ಯಾಲಯದ ಮುಖ್ಯವಾದ ನೈತಿಕ ಹಾಗೂ ಸಾಂಸ್ಕೃತಿಕ ಕಾರ್ಯಭಾರಗಳ ಜವಾಬ್ದಾರಿಯನ್ನು ವಹಿಸಿಬಿಟ್ಟರು.

## ಸಂನ್ಯಾಸದೀಕ್ಷಾವಿಧಿ:

ಗೊತ್ತಾಗಿದ್ದ ಕಾರ್ಯಕ್ರಮದಂತೆ ಮೂರುದಿನಗಳ ಮುಂಚೆಯೇ ಪೂರ್ವಾಂಗವಾದ ಕಾರ್ಯಗಳು ಪ್ರಾರಂಭವಾದವು. ಶಾಸ್ತ್ರೋಕ್ತವಿಧಿಗಳ ನಿರ್ವಹಣೆಗಾಗಿ ಮತ್ತೂರಿನಿಂದ ವೇದಮೂರ್ತಿಗಳೂ ಪುರೋಹಿತರೂ ದಯಮಾಡಿಸಿದ್ದರು. ಮೈಸೂರಿನಿಂದ ಆಸ್ಥಾನ ಮಹಾವಿದ್ವಾನ್ ವೇದರತ್ನಂ ಕೆ.

ವೆಂಕಟರಾಮಾವಧಾನಿಗಳೂ, ವೇ।। ಧಾಳಿ ನರಸಿಂಹಭಟ್ಟರೂ ದಯಮಾಡಿಸಿದರು. ವಿರಜಾಹೋಮ, ಪಿತೃಶ್ರಾದ್ಧಾದಿಗಳು, ಕೃಚ್ಛ್ರಾಚರಣ, ಪ್ರಾಯಶ್ಚಿತ್ತಾದಿಗಳು ಎಲ್ಲವೂ ನೆರವೇರಿದ ಬಳಿಕ ಜೇಷ್ಠ ಶುಕ್ಲ ತೃತೀಯಾದಿನ ಬೆಳಗ್ಗೆ 'ಪ್ರವ್ರಜೇದ್ ಗೃಹಾತ್' ಎಂಬ ವಿಧಿಯಂತೆ ಊರೊಳಗಿದ್ದ ತಮ್ಮ ಸ್ವಂತಮನೆಗೆ ಹೋಗಿ ಪುತ್ರಾದಿಗಳಿಗೆಲ್ಲ ತಿಳಿಸಿ ಅವರುಗಳ ಸಮ್ಮತಿಯನ್ನು ಪಡೆದು ಮನೆಯಿಂದ ಹೊರಟರು. ಆಗ ರಾಯರ ಕಿರಿಯ ಪುತ್ರಿಯಾದ ಸೌ।। ಸುಕನ್ಯಮ್ಮನೆಂಬುವಳೂ ರಾಯರ ಪುತ್ರ ಶ್ರೀ ವೈ।। ನರಸಪ್ಪನವರೂ ಭಾವೋದ್ವೇಗದಿಂದ ದುಃಖಪರವಶರಾದದ್ದು ಎಲ್ಲರನ್ನೂ ಕ್ಷಣಕಾಲ ಮುಗ್ಧರನ್ನಾಗಿ ಮಾಡಿತು. ರಾಯರು ಸ್ಥಿರಚಿತ್ತದಿಂದ ಗೃಹದಿಂದ ಹೊರಟು ಪವಿತ್ರ ಹೇಮಾವತೀ ತೀರವನ್ನು ಸೇರಿದರು. ಶಿಷ್ಯರುಗಳೆಲ್ಲರೂ ಹಿಂಬಾಲಿಸಿದರು. ಜಲಮಧ್ಯದಲ್ಲಿ ಶಿಖಾ ಯಜ್ಞೋಪವೀತಗಳನ್ನು ವಿಸರ್ಜಿಸಿ ಸರ್ವಭೂತಗಳಿಗೂ ಅಭಯಪ್ರದಾನ ಮಾಡಿದರು. ಅನಂತರ ಪ್ರೈಷೋಚ್ಚಾರಣೆಯನ್ನು ಮಾಡಿ ತಮ್ಮ ನರತ್ವವನ್ನು ಕಳಚಿಕೊಂಡು ಮೊದಲೇ ಹೊಂದಿದ್ದ ನಾರಾಯಣತ್ವವನ್ನು ಔಪಚಾರದಿಂದ ಪಡೆದು ಇಹಬಂಧನದಿಂದ ಮುಕ್ತರಾದರು. ಶಿಷ್ಯರುಗಳ ಪ್ರಾರ್ಥನೆಯಂತೆ ಲೋಕೋದ್ಧಾರಕ್ಕಾಗಿ ಪ್ರಾರಬ್ಧಕರ್ಮಪರ್ಯಂತವಾಗಿ ಇರುವ ಈ ಶರೀರವನ್ನು ನಿರಭಿಮಾನಿಗಳಾಗಿ ಧರಿಸಿಕೊಂಡಿರಲು ಒಪ್ಪಿ ಕಾಷಾಯ ವಸ್ತ್ರಾದಿಗಳನ್ನು ಸ್ವೀಕರಿಸಿ ಆಶ್ರಮಕ್ಕೆ ದಯಮಾಡಿಸಿದರು. ಹೀಗೆ ಸಂನ್ಯಾಸ ದೀಕ್ಷೆಯ ವಿಧಿಯು ಪೂರೈಸಿತು.

## ಯೋಗಪಟ್ಟ :

ಆಗ್ಗೆ ಮತ್ತೂರು ಕಡೆಯಿಂದ ದಯಮಾಡಿಸಿದ್ದ ಶ್ರೀಬೋಧಾನಂದೇಂದ್ರ ಸರಸ್ವತೀಸ್ವಾಮಿಗಳವರೆಂಬ ಯತಿವರ್ಯರು ಶ್ರೀಗಳವರಿಗೆ ಮಹಾವಾಕ್ಯೋಪ-ದೇಶಗಳನ್ನು ಅನುಗ್ರಹಮಾಡಿ "ಶ್ರೀಸಚ್ಚಿದಾನಂದೇಂದ್ರಸರಸ್ವತೀ" ಎಂಬ ಯೋಗ ಪಟ್ಟವನ್ನು ಅನುಗ್ರಹಿಸಿದರು. ಯತಿಧರ್ಮಗಳನ್ನೂ ಆಹ್ನಿಕಾದಿಗಳ ಕ್ರಮವನ್ನೂ ಉಪದೇಶಮಾಡಿ ಶ್ರೀಗಳವರನ್ನು ಶಾಂಕರಸಂಪ್ರದಾಯದ ಪವಿತ್ರಸಂನ್ಯಾಸಾಶ್ರಮಿ-ಗಳನ್ನಾಗಿ ಮಾಡಿ ಕೆಲವು ಕಾಲ ಇದ್ದು ಮುಂದೆ ಸ್ಥಳಾಂತರಕ್ಕೆ ದಯಮಾಡಿಸಿದರು.

## ಶ್ರೀಶ್ರೀಗಳವರ ತಪೋನಿಷ್ಠೆ:

ಮೊದಲಿನಿಂದಲೂ ವೇದಾಂತವಿಚಾರದ ಮನನನಿದಿಧ್ಯಾಸನಗಳಲ್ಲಿಯೇ ತತ್ಪರರಾಗಿದ್ದ ಶ್ರೀಗಳವರು ಈಗ ಮತ್ತಷ್ಟು ತಮ್ಮ ತಪಸ್ಸನ್ನು ಹೆಚ್ಚಿಸಿಕೊಂಡರು. ಆಚಾರಗಳಲ್ಲಿ ಶ್ರೀಗಳವರಿಗೆ ಬಹುಪ್ರೀತಿ. ಸ್ನಾನ, ಶೌಚಾಚಮನ, ಆಹಾರಾದಿ-

ನಿಯಮಗಳನ್ನು ಬಹುಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದರು. ಕೆಲವು ಕಾಲ ಮೌನದಶೆಯಲ್ಲಿ ಇರುತ್ತಿದ್ದರು. ಪ್ರಸ್ಥಾನತ್ರಯಭಾಷ್ಯಗಳ ಆವರ್ತನೆ, ಶಂಕರಾಚಾರ್ಯರು ಉಪದೇಶಿಸಿರುವ ಸಂನ್ಯಾಸದ ಆದರ್ಶವನ್ನು ಸಾಧಿಸುವದು- ಇವುಗಳೇ ಅವರ ಮುಖ್ಯ ಗುರಿಯಾಗಿತ್ತು. ಅನಂತರ ತಮ್ಮ ಲೋಕಸಂಗ್ರಹ ವ್ಯವಸ್ಥೆಯಂತೆ, ಹಾಗೂ ಶಿಷ್ಯರುಗಳ ಪ್ರಾರ್ಥನೆಯಂತೆ ವೇದಾಂತಗ್ರಂಥಪ್ರವಚನ, ಉಪನ್ಯಾಸ, ವೇದಾಂತಗ್ರಂಥಗಳ ರಚನೆ (ಬರವಣಿಗೆ) ಇವುಗಳನ್ನು ಮಹಾಜನಗಳ ಕಲ್ಯಾಣಕ್ಕಾಗಿಯೂ (ಕಾರ್ಯಾಲಯದ ಪುರೋಭಿವೃದ್ಧಿಗಾಗಿಯೂ) ಮಾಡಲು ಕೈಗೊಂಡರು. ಅತ್ಯಗತ್ಯವಾದ ಲೌಕಿಕವಿಚಾರಗಳಲ್ಲಿ ಕಾರ್ಯಾಲಯದ ಸಮಿತಿಯವರಿಗೆ ಸೂಕ್ತ ಸಲಹೆಗಳನ್ನು ಕೊಡಲೂ ಸಮ್ಮತಿಸಿದರು.

## ತಪಃ ಫಲ ಧಾರೆ :

ತಮ್ಮ ಜೀವಿತೋದ್ದೇಶಗಳಲ್ಲಿ ಪ್ರಮುಖವಾಗಿ ನಿಂತಿದ್ದ ವೇದಾಂತ ಪ್ರಸಾರದ ಕಾರ್ಯಕ್ಕಾಗಿ, ಇದೀಗಷ್ಟೇ (ಅಂದರೆ ಕಾರ್ಯಾಲಯ ಒಂದು ಕಡೆ ಸ್ಥಿರವಾಗಿ ನಿಂತು, ಅದರ ಪೂರ್ಣಾವಧಿಕೆಲಸ ಎಂಬುದು ಸಾಂಕೇತವಾಗಿ ಪ್ರಾರಂಭವಾದದ್ದು 1937ರಿಂದ, ವಾಸ್ತವವಾಗಿ 1945-46ರಿಂದ, ತಮ್ಮದೇ ಕುಟೀರಕ್ಕೆ ಬಂದ ಮೇಲೆಯೇ) ಸ್ಫುಟಸ್ವರೂಪವನ್ನು ತಳೆಯುತ್ತಿದ್ದ ಕಾರ್ಯಾಲಯಕ್ಕೊಂದು ಸಾಕಾರ, ಸದೃಢತೆಯನ್ನು ಕೊಡುವದು, ಮುಂದೆಯೂ ಅದು ತನ್ನ ಕಾರ್ಯವನ್ನು ಸುಮುಖವಾಗಿ ನಡೆಸುವಂತಹ ಶಕ್ತಿ ವಿಶೇಷವನ್ನು ನೀಡುವದು, ಇವೆರಡರಲ್ಲೂ ತಮ್ಮ ಮಹತ್ಪಾತ್ರವಿದೆಯೆಂಬ ಕಾರಣವೇ, ಶ್ರೀಗಳವರು ಈ ರೀತಿ ಕಾರ್ಯಾಲಯದ ಸಮಿತಿಯೊಡನೆ ಸಂಪರ್ಕವಿಟ್ಟುಕೊಳ್ಳಲು ಒಪ್ಪಿದ್ದು ವಿಹಿತವೂ, ಅವಶ್ಯಕವೂ ಆಗಿತ್ತು. ತಮ್ಮ ಜ್ಞಾನತಪಸ್ಸನ್ನು ಬಿಡುವಾಗಿ, ಬಿಡಿಯಾಗಿ ಯಥೇಚ್ಛವಾಗಿ ನಡೆಸಲು ಸಂನ್ಯಾಸ ಸ್ವೀಕಾರವು ಅನುವು ಮಾಡಿಕೊಟ್ಟರೂ, ಅದನ್ನೆಲ್ಲ ತಮ್ಮೊಬ್ಬರ ಆತ್ಮಕಲ್ಯಾಣ, ಆತ್ಮೋದ್ಧಾರಕ್ಕಾಗಿ ಮಾಡದೆ, ಲೋಕಕಲ್ಯಾಣವನ್ನು ಪ್ರವಚನ, ಪತ್ರಿಕೆ, ಗ್ರಂಥಗಳು, ಮತ್ತು ವಿದ್ಯಾನಿಲಯಗಳ ಮೂಲಕ ಸಾಧಿಸುವ ಅವರ ಅದಮ್ಯ ಬಯಕೆಯ ಪರಮೋಪಕಾರವೂ ಅವರ ಸಂನ್ಯಾಸಾಶ್ರಮದ ಭಾಗವೇ ಆಗಿತ್ತು. ಈ ರೀತಿ ಮುಂದಿನ 27 ವರ್ಷಗಳಲ್ಲಿ ಅವರ ದೇಹಪತನದವರೆಗೂ ಇಂತಹ ಮಹತ್ಕಾರ್ಯದ ಸಾಧನೆಯ ಸಂಕ್ಷಿಪ್ತ ವಿವರಣೆಯೇ ಈ ಮುಂದಿನ ಕಥೆ (ಭಾಗ 2).

**(ಇಲ್ಲಿಗೆ ಭಾಗ-1 ಮುಗಿಯಿತು)**



# ಶ್ರೀಶ್ರೀಗಳವರ (ಸ್ವಹಸ್ತ)
# ಬರವಣಿಗೆ

[illegible]

## ಮೂಲಾವಿದ್ಯಾನಿರಾಸ ಲೇಖನ ಪ್ರಾರಂಭ:

ಕೃಷ್ಣಸ್ವಾಮಿ ಅಯ್ಯರವರು ಪ್ರತಿದಿನವೂ ನನ್ನನ್ನು ಸಾಯಂಕಾಲ ಸಂಚಾರಕ್ಕೆ ಕರೆದುಕೊಂಡು ಹೋಗುವದು, ವೇದಾಂತವಿಚಾರವನ್ನು ಬಲಪಡಿಸುವದು, ವೇದಾಂತದಲ್ಲಿ ಆದರವಿರುವವರ ಸಂಪರ್ಕವನ್ನು ಕಲ್ಪಿಸಿಕೊಡುವದು - ಹೀಗೆ ಅಂತಃಕರಣ ಸಂಸ್ಕಾರಕ್ಕೆ ಹಲವು ಬಗೆಗಳಿಂದ ಕಾರಣರಾದರು. ತಮ್ಮ ಇಂಗ್ಲೀಷು ಉಪನ್ಯಾಸ ಪ್ರಬಂಧವನ್ನು ಅನುವಾದ ಮಾಡಿದ ನನ್ನ ಸಂಸ್ಕೃತ ಭಾಷೆಯು ಬಹಳ ಲಲಿತವಾಗಿಯೂ ಶಕ್ತಿಯುತವಾಗಿಯೂ ಕಂಡು ಬಂದದ್ದರಿಂದ ಮೂಲಾವಿದ್ಯಾಕುಠಾರ ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಬರೆಯಬೇಕೆಂದು ಒಂದು ದಿನ ನನಗೆ ಹೇಳಿದರು. ನನಗೆ ಮೂಲಾವಿದ್ಯೆ ಎಂದರೇನೆಂಬುದೇ ಆವರೆಗೆ ತಿಳಿದಿರಲಿಲ್ಲ. ಅವರು ಅದರ ವಿಷಯವನ್ನು ಸ್ವಲ್ಪಮಟ್ಟಿಗೆ ನನಗೆ ತಿಳಿಸಿಕೊಟ್ಟು ಅದು ಅಧ್ಯಾಸಕ್ಕೆ ಕಾರಣವಾಗಿರವದೆಂದೂ ಸುಷುಪ್ತಿಪ್ರಲಯಗಳಲ್ಲಿ ಬೀಜರೂಪದಿಂದ ಇದ್ದುಕೊಂಡಿರುವದೆಂದೂ ಜ್ಞಾನಿಗಳಲ್ಲಿಯೂ ಅದರ ಒಂದಂಶವು ಇದ್ದುಕೊಂಡಿರುವದೆಂದೂ ಈಗಿನ ವೇದಾಂತಿಗಳು ಹೇಳುತ್ತಿದ್ದಾರೆ. ಈ ಪ್ರಕಾರವು ಶಾಂಕರಸಿದ್ಧಾಂತಕ್ಕೆ ಅತ್ಯಂತ ವಿರುದ್ಧವಾಗಿರುವದರಿಂದಲೂ ಯುಕ್ತಿವಿರುದ್ಧವಾಗಿರುವದರಿಂದಲೂ ಇದನ್ನು ಕಡಿದುಹಾಕುವದಕ್ಕಾಗಿ ಮೂಲಾವಿದ್ಯಾಕುಠಾರ ಎಂಬ ಒಂದು ಗ್ರಂಥವನ್ನು ಬರೆಯುವದು ಅತ್ಯವಶ್ಯ ಎಂದು ಹೇಳಿದರು. ನಾನು 'ಹಾಗೆ ಯಾರು ಹೇಳುತ್ತಾರೆ ?' ಎಂದು ಕೇಳಲು ಅಯ್ಯರು 'ವೇದಾಂತ ವ್ಯಾಖ್ಯಾನಗಳಲ್ಲಿ ಹಾಗೆಂದು ಬರೆದಿದೆ ; ಈಗಿನ ವೇದಾಂತಿಗಳು, ಶಂಕರಮಠದಲ್ಲಿರುವ ವಿದ್ವಾಂಸರುಗಳೆಲ್ಲರೂ ಹಾಗೆಯೇ ಹೇಳುತ್ತಾರೆ' ಎಂದರು. ನನಗೆ ಅತ್ಯಾಶ್ಚರ್ಯವಾಯಿತು. ಶ್ರೀ ವಿರೂಪಾಕ್ಷಶಾಸ್ತ್ರಿಗಳವರು ನಮಗೆ ಭಾಷ್ಯಪಾಠವನ್ನು ಹೇಳುವಾಗ ಮೂಲಕ್ಕೆ ಅನುಗುಣವಾಗಿಯೇ ಹೇಳುತ್ತಿದ್ದದ್ದರಿಂದ ಪಾಠದಲ್ಲಿ ಅದರ ಸೊಲ್ಲೇ ಬಂದಿರಲಿಲ್ಲ. ನಾನು ವ್ಯಾಖ್ಯಾನವನ್ನು ಅನವಶ್ಯವಾಗಿ ನೋಡುವವನಲ್ಲವಾದ್ದರಿಂದ, ರತ್ನಪ್ರಭಾವ್ಯಾಖ್ಯಾನದಲ್ಲಿ ಅದು ಇದೆ ಎಂಬುದರ ಅರಿವೂ ನನಗೆ ಆಗಿರಲಿಲ್ಲ. ಆದ್ದರಿಂದ ನಮ್ಮ ಶಾಸ್ತ್ರಿಗಳು ಹೀಗೆ ಹೇಳುವದಿಲ್ಲ ಎಂದು ಸ್ಪಷ್ಟವಾಗಿ ಅವರಿಗೆ ಹೇಳಿಬಿಟ್ಟೆನು. ಅವರು ಮೊದಲು ನನಗೆ ಇದರ ನಿಶ್ಚಯವು ಆಗುವದು ಅವಶ್ಯಕವೆಂಬುದನ್ನು ಮನದಂದುಕೊಂಡು, ಒಂದು ದಿನ ಶಾಸ್ತ್ರಿಗಳ ಮನೆಗೆ ಕರೆದುಕೊಂಡು ಹೋಗಿ ವಿಷಯವನ್ನು ಪ್ರಸ್ತಾಪಿಸಿದರು. ಅದ್ವೈತಕ್ಕೆ ಪ್ರಮಾಣವೇನು ? ಎಂದು ಪ್ರಶ್ನಿಸಿದ್ದಕ್ಕೆ ಶಾಸ್ತ್ರಿಗಳು 'ಜೀವನ್ಮುಕ್ತರ ಅನುಭವವೇ ಪ್ರಮಾಣ' ಎಂದು ಉತ್ತರವನ್ನು ಕೊಟ್ಟರು. 'ಜೀವನ್ಮುಕ್ತರಿಗೆ ದ್ವೈತವು ಕಾಣಿಸುವದಿಲ್ಲವೆ ?' ಎಂದು ಕೇಳಿದ್ದಕ್ಕೆ ಸುಟ್ಟಬಟ್ಟೆಯಂತೆ ಬಾಧಿತಾನುವೃತ್ತಿಯಿಂದ ಅವರಿಗೆ ದ್ವೈತವು ಕಂಡರೂ ಅದು ಪ್ರಾರಬ್ಧಕರ್ಮವಿರುವವರೆಗೆ ಮಾತ್ರ ಇರುತ್ತದೆಯಾದ್ದರಿಂದ ಬಾಧಕವಿಲ್ಲ - ಎಂದು ಹೇಳಿದರು.

[illegible]

ಪ್ರಾರಬ್ಧಕರ್ಮವಾದರೂ ಏತಕ್ಕೆ ಉಳಿದುಕೊಂಡಿದೆ ? - ಎಂಬುದಕ್ಕೆ ಅವಿದ್ಯಾಲೇಶವೇ ಅದಕ್ಕೆ ಹೇತುವೆಂದು ನುಡಿದರು. ಸರ್ವಥಾ ಅದ್ವೈತ ಸ್ಥಿತಿಯು ಯಾವದು ? - ಎನ್ನಲು ವಿದೇಹ ಮುಕ್ತಿಯೇ ಎಂದರು. ಹೀಗೆ ಸ್ವಲ್ಪ ಹೆಚ್ಚುಕಡಿಮೆಯಾಗಿ ತಮ್ಮ ಹೇಳಿಕೆಗೆಲ್ಲ ಶಾಸ್ತ್ರಗಳಿಂದ ಸಾಕ್ಷ್ಯವನ್ನು ಹೇಳಿಸಿದ ತರುವಾಯ ನಾವಿಬ್ಬರೂ ಮನೆಗೆ ಬಂದೆವು. ನನಗೆ ಅತ್ಯಂತ ಆಶ್ಚರ್ಯವಾಯಿತು. ನಾನು ಇಷ್ಟುಕಾಲ ಉಪನಿಷದಾದಿ ಭಾಷ್ಯಗಳನ್ನು ಓದಿದ್ದರೂ ಈ ಅವಿದ್ಯೆಯ ಸೊಲ್ಲು ಎಲ್ಲಿಯೂ ಇಲ್ಲದಿದ್ದರೂ ಇವರು ಹೀಗೇಕೆ ಹೇಳುತ್ತಿದ್ದಾರೆ ? ಇದಕ್ಕೆ ಆಧಾರವು ಎಲ್ಲಿದೆ ? - ಎಂಬುದನ್ನು ಶೋಧಿಸಬೇಕೆಂಬ ಕುತೂಹಲವು ನನಗೆ ಉಂಟಾಯಿತು. ಅಯ್ಯರವರು ಅಧ್ಯಾಸಭಾಷ್ಯದ ರತ್ನಪ್ರಭಾವ್ಯಾಖ್ಯಾನವನ್ನು ನನಗೆ ತೋರಿಸಿದರು. ಆ ಮೇಲೆ ನನಗೆ ಭಾಷ್ಯವ್ಯಾಖ್ಯಾನಗಳಲ್ಲಿ ನನಗೆ ಇದು ಎಲ್ಲೆಲ್ಲಿಯೂ ಕಾಣುವದಕ್ಕೆ ಮೊದಲಾಯಿತು. ನನ್ನಲ್ಲಿ ಮೊದಲೇ ಇದ್ದ ಸವ್ಯಾಖ್ಯಬೃಹದಾರಣ್ಯಕಭಾಷ್ಯವನ್ನು ಈಗ ಮನಮುಟ್ಟಿ ಓದುವದಕ್ಕೆ ಪ್ರಾರಂಭ ಮಾಡಿದೆನು. ಅದರಲ್ಲಿ ವಿಶೇಷವಾಗಿ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬುದನ್ನು ಮತ್ತೆಮತ್ತೆ ಸಾರಿದೆ. ಅಲ್ಲಿ 'ಅಪಹತ-ಪಾಪ್ಮಾಭಯಂ ರೂಪಮ್' ಎಂಬುದಕ್ಕೆ 'ತತ್ರಾಭಯಮಿತಿ ಅವಿದ್ಯಾರಾಹಿತ್ಯಮುಚ್ಯತೇ। ಸಾ ಚ ಸುಷುಪ್ತೇ ಸ್ವರೂಪೇಣ ಸತ್ಯಪಿ ನಾಭಿವ್ಯಕ್ತಾ ಭಾತೀತಿ ದ್ರಷ್ಟವ್ಯಮ್' - (ಸುಷುಪ್ತಿಯಲ್ಲಿ ಅವಿದ್ಯೆಯಿದ್ದರೂ ಅಭಿವ್ಯಕ್ತವಾಗಿ ಕಾಣುವದಿಲ್ಲವೆಂದು ಇಟ್ಟುಕೊಳ್ಳಬೇಕು. ಪು. 599), 'ಅವಿದ್ಯಾಯಾ ಯದಾ ಪ್ರವಿವಿಕ್ತೋ ಭವತಿ' ಎಂಬ ಭಾಷ್ಯಕ್ಕೆ 'ಪ್ರವಿವಿಕ್ತತ್ವಂ ಕಾರ್ಯಕಾರಣಾವಿದ್ಯಾ ವಿರಹಿತತ್ವಮ್' (ವಿಂಗಡವಾಗಿರುವದೆಂದರೆ ಕಾರ್ಯಕಾರಣಾ-ವಿದ್ಯೆಗಳಿಲ್ಲದಿರುವದು, ಪು 608), 'ಅನ್ಯತ್ವಪ್ರತ್ಯುಪಸ್ಥಾಪಕಹೇತೋರವಿದ್ಯಾಯಾ ಅಭಾವಾತ್' ಎಂಬ ಭಾಷ್ಯಕ್ಕೆ 'ಯದ್ಯಪಿ ಸುಷುಪ್ತೇ । ಅವಿದ್ಯಾ ವಿದ್ಯತೇ ತಥಾಪಿ ಸಾಽನಭಿವ್ಯಕ್ತಾಸ್ತೀತ್ಯನರ್ಥಪರಿಹಾರೋಪಪತ್ತಿರಿತ್ಯರ್ಥಃ' (ಸುಷುಪ್ತಿಯಲ್ಲಿ ಅವಿದ್ಯೆ-ಯಿದ್ದರೂ ಅಭಿವ್ಯಕ್ತವಾಗಿಲ್ಲದ್ದರಿಂದ ಅನರ್ಥಪರಿಹಾರವಾಗಬಹುದಾಗಿದೆ ಎಂದರ್ಥ. ಪು. 609) 'ಅವಿದ್ಯಾಕಾಮಕರ್ಮವಿನಿರ್ಮುಕ್ತಮೇವ ಅಪಿತದ್ರೂಪಂ ಯತ್ಸುಷುಪ್ತೇ ಆತ್ಮನೋ ಗೃಹ್ಯತೇ ಪ್ರತ್ಯಕ್ಷತಃ' ಎಂಬ ಭಾಷ್ಯಕ್ಕೆ 'ಪ್ರತ್ಯಕ್ಷತಃ । ಸ್ವರೂಪಚೈತನ್ಯವಶಾ-ದ್ಯಥೋಕ್ತರೂಪಸ್ಯ ಸುಷುಪ್ತೇ ಗೃಹ್ಯಮಾಣತ್ವಮ್ ಉತ್ಥಿತಸ್ಯ ಪರಾಮರ್ಶಾದ-ವಧೇಯಮ್' (ಸುಷುಪ್ತಿಯಲ್ಲಿ ಪ್ರತ್ಯಕ್ಷವಾಗಿ ಗ್ರಹಿಸುತ್ತದೆ ಎಂದರೆ ಎಚ್ಚತ್ತಾದರೂ ಸ್ಮರಿಸುತ್ತಾರೆ ಎಂದರಿಯಬೇಕು, ಪು 611)

---

ಮೇಲೆ ಕೊಟ್ಟಿರುವ ಪುಟಸಂಖ್ಯೆಗಳು ಆನಂದಗಿರಿ ವ್ಯಾಖ್ಯಾನದ ಬೃಹದಾರಣ್ಯಕಭಾಷ್ಯದ್ದು.

[illegible]

ಹೀಗೆಲ್ಲ ಭಾಷ್ಯದಲ್ಲಿ ಸ್ಪಷ್ಟವಾಗಿರುವ ವಾಕ್ಯಗಳಿಗೆ ವ್ಯಾಖ್ಯಾನಕಾರರು ಹೇಗೋ ತಿರುಚಿ ಅರ್ಥ ಮಾಡಿರುವದು ಕಂಡುಬಂತು. ಇದೆಲ್ಲಾ ಗವಿಪುರದಲ್ಲಿದ್ದಾಗಲೇ ನಾನು ಕಂಡುಕೊಂಡದ್ದು; ಆಗಲೆ ಆ ವಾಕ್ಯಗಳಿಗೆಲ್ಲ ಹಸಿರುಪೆನ್ಸಿಲ್ಲು ಗುರುತುಮಾಡಿದೆನು. ಮಾರನೆಯದಿನವೇ ಅಯ್ಯರವರಿಗೆ ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬುದಕ್ಕೆ ಪ್ರತ್ಯಕ್ಷಭಾಷ್ಯವಚನಗಳಿವೆ ಎಂದು ಉತ್ಸಾಹಭರಿತವಾಗಿ ತಿಳಿಸಿದೆನು; ಆದರೆ ಆಗ ಅಲ್ಲಿ ಹೇಳಿರುವದು **ಮೂಲಾವಿದ್ಯಾ ವಿಷಯವಲ್ಲವೆಂಬುದೂ ಭಾಷ್ಯದಲ್ಲಿ ಮೂಲಾವಿದ್ಯೆಯ ವಿಚಾರವೇ ಇಲ್ಲವೆಂಬುದೂ** ಈಗ ಸ್ಪಷ್ಟವಾಯಿತು. ಈ ಸಮಯಕ್ಕೆ ಸರಿಯಾಗಿ ವೆಂಕಟೇಶಶಾಸ್ತ್ರಿಗಳಿಂದ ನನಗೆ ಪಂಚಪಾದಿಕಾವಿವರಣ **(Vizianagaram Series)** ಮತ್ತು ಅದ್ವೈತಸಿದ್ಧಿ ಸವ್ಯಾಖ್ಯಾನ (ನಿರ್ಣಯಸಾಗರ ಮುದ್ರಣಾಲಯದ್ದು) ಇವೆರಡೂ ದೊರೆತವು. ಪಂಚಪಾದಿಕೆಯನ್ನೂ ಅದರಲ್ಲಿಯೂ ವಿವರಣವನ್ನು ಓದಿದಹಾಗೆಲ್ಲ ಭಾಷ್ಯಕ್ಕಿಂತ ಬೇರೊಂದು ಪ್ರಕ್ರಿಯೆಯೇ ಅದರಲ್ಲಿ ಹೊಸದಾಗಿ ಹೊರಕ್ಕೆ ಬಂದಿದೆ ಎಂಬುದು ಸ್ಪಷ್ಟವಾಗುತ್ತಾ ಬಂತು. ಆದ್ದರಿಂದ ಹೊಸಹೊಸ ವಿಷಯಗಳನ್ನು ಒಂದು ನೋಟು ಬುಕ್ಕಿನಲ್ಲಿ ಬರೆದುಕೊಳ್ಳುವದು ; ಆಯಾ ದಿನದ ಸಾಯಂಕಾಲಕ್ಕೆ ಚರ್ಚಿಸುವದು ಹೀಗೆ ಮಾಡುತ್ತಾ ಕೊನೆಗೆ ಒಂದು ಗ್ರಂಥಕ್ಕೆ ಬೇಕಾದ ವಿಷಯಗಳನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡೆನು. ಅಯ್ಯರವರಲ್ಲಿ ಸಿಕ್ಕಿದ ಇಂಗ್ಲೀಷು ಟಿಪ್ಪಣಿಗಳ ವಿಷಯಗಳನ್ನು ಆಗಾಗ್ಗೆ ಗುರುತುಹಾಕಿಕೊಳ್ಳುತ್ತಾ ಬಂದೆನು. ಈ ವಿಷಯವನ್ನು ವಿಠ್ಠಲಶಾಸ್ತ್ರಿಗಳು, ವೆಂಕಟೇಶಶಾಸ್ತ್ರಿಗಳು - ಇಬ್ಬರಲ್ಲಿಯೂ ಚರ್ಚಿಸುತ್ತಿದ್ದೆನು. ವಿಠ್ಠಲಶಾಸ್ತ್ರಿಗಳೇ ಇಷ್ಟರೊಳಗೆ ಮೊದಲು ನಮ್ಮ ಪಂಗಡಕ್ಕೆ ಸೇರಿಕೊಂಡರು ; ವೆಂಕಟೇಶಶಾಸ್ತ್ರಿಗಳು ಸಂಪ್ರದಾಯದವರನ್ನೆಲ್ಲ ಇವರು ಹಳಿಯುತ್ತಾರೆ ಎಂದು ಮೊದಮೊದಲು ಕೋಪವನ್ನು ತೋರಿಸಿದರೂ ಬರುಬರುತ್ತಾ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸುತ್ತಾ ಬಂದರು. ಹೀಗೆಲ್ಲಾ ನಡೆದು 'ಮೂಲಾವಿದ್ಯಾನಿರಾಸ' ಎಂಬ ಗ್ರಂಥಕ್ಕೆ ತಳಹದಿ ಏರ್ಪಟ್ಟಿತು.


## ಯಳ್ಳಂಬಳಸೆಯಲ್ಲಿರುವ ದೇವರ ಸಾನಿಧ್ಯದಲ್ಲಿ



ವೇಣುಗೋಪಾಲ ಸ್ವಾಮಿ



ಚೆನ್ನಕೇಶವ ಸ್ವಾಮಿ



ಶ್ರೀ ಶ್ರೀಗಳವರು ದಿಗ್ವಿಜಯ ಶ್ರೀರಾಮ ದೇವರ ಸನ್ನಿಧಿಯಲ್ಲಿ



ದಕ್ಷಿಣಾಮೂರ್ತಿ



ಲಕ್ಷ್ಮೀನರಸಿಂಹ ಸ್ವಾಮಿ